# ಡಾ. ಎಂ. ಎಂ. ಕಲಬುರ್ಗಿ
# ಸಮಗ್ರ ಸಾಹಿತ್ಯ

ಸಂಪುಟ
೨೦

## ಕಾವ್ಯ ಸಾಹಿತ್ಯ : ಭಾಗ-೨



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

[illegible]

# ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

## ಸಂಪುಟ-೨೦ : ಕಾವ್ಯ ಸಾಹಿತ್ಯ : ಭಾಗ-೨

❖

• ಹರಿಹರನ ರಗಳೆಗಳು : ಭಾಗ-೨

❖

ಪ್ರಧಾನ ಸಂಪಾದಕರು

**ಡಾ. ವೀರಣ್ಣ ರಾಜೂರ**

ಧಾರವಾಡ

ಸಂಪಾದಕರು

**ಡಾ. ಗುರುಪಾದ ಮರಿಗುದ್ದಿ**

ಸಂಕೇಶ್ವರ

**ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

**COMPLETE WORK OF DR. M.M.KALBURGI**

**VOLUME - 20** : KAVYA SAHITYA BHAGA-II

Edited by : Dr. Gurupad Mariguddi, Sankeshawer

Published by : Dr. P.G. Halakatti Research Centre
B.L.D.E. Association, Vijayapur, Karnatak



First Edition : 2019
Pages : xlviii +644=692

Copies: 1000
Price Rs: 350/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Saraswatidevi Bhagawati, Dharwad.
Printer : **The PrintPoint,** No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

**ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ**

**ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೦-ಕಾವ್ಯ ಸಾಹಿತ್ಯ : ಭಾಗ-೨**

ಸಂಪಾದಕರು : ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೧೯
ಪುಟಗಳು: xlviii+೬೪೪=೬೯೨

ಪ್ರತಿಗಳು: ೧೦೦೦
ಬೆಲೆ ರೂ: ೩೫೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ

ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಮುದ್ರಣ: **ಪ್ರಿಂಟ್ ಪಾಯಿಂಟ್,** ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

# ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

## ಸಲಹಾ ಸಮಿತಿ

❖

ಗೌರವಾಧ್ಯಕ್ಷರು

**ಡಾ. ಎಂ. ಬಿ. ಪಾಟೀಲ,** ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

**ಶ್ರೀ ಜಿ. ಕೆ. ಪಾಟೀಲ,** ವಿಜಯಪುರ

ಕಾರ್ಯದರ್ಶಿಗಳು

**ಡಾ. ಎಂ. ಎಸ್. ಮದಭಾವಿ,** ವಿಜಯಪುರ

ಪ್ರಧಾನ ಸಂಪಾದಕರು

**ಡಾ. ವೀರಣ್ಣ ರಾಜೂರ,** ಧಾರವಾಡ

ಯೋಜನಾ ಸಂಯೋಜಕರು

**ಡಾ. ಕೃಷ್ಣ ಕೊಲ್ಹಾರಕುಲಕರ್ಣಿ,** ವಿಜಯಪುರ

❖

ಸಲಹಾ ಸದಸ್ಯರು

**ಡಾ. ಗುರುಲಿಂಗ ಕಾಪಸೆ,** ಧಾರವಾಡ

**ಶ್ರೀ ಶ್ರೀವಿಜಯ ಕಲಬುರ್ಗಿ,** ಧಾರವಾಡ

**ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು**

❖❖

## ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

### ಸಂಪಾದಕ ಸದಸ್ಯರು

❖



❖❖

*

# ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

## ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

**ಜೀವನ–ಸಾಧನೆ :**

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ವಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

**ಸಾಹಿತ್ಯ ರಾಶಿ :**

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

**ಸೃಜನ ಸಾಹಿತ್ಯ**

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

**ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :**

**ಶಾಸನ ಸಾಹಿತ್ಯ**

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

**ಶಾಸ್ತ್ರ ಸಾಹಿತ್ಯ**

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

**ಸಂಶೋಧನ ಸಾಹಿತ್ಯ**

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

**ಜಾನಪದ ಸಾಹಿತ್ಯ**

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

**ಲೇಖನ ಸಂಪುಟ**

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

**ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):**

**ಶಾಸನ ಸಾಹಿತ್ಯ**

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

**ದಾಖಲು ಸಾಹಿತ್ಯ**

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

**ವಚನ ಸಾಹಿತ್ಯ**

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

**ಕಾವ್ಯ ಸಾಹಿತ್ಯ**

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

**ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):**

**ಲೇಖನ ಸಂಗ್ರಹಗಳು :**

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

**ಜೀವನ ಚರಿತ್ರೆಗಳು**

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

**ಅಭಿನಂದನ ಗ್ರಂಥಗಳು**

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದು ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ

(ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

**ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :**

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

## I. ಸ್ವತಂತ್ರ ಕೃತಿ ಸಂಪುಟಗಳು

**ಸಂಪುಟ ೧ : ಶಾಸನ ಸಾಹಿತ್ಯ** **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

**ಸಂಪುಟ ೨ : ಶಾಸ್ತ್ರ ಸಾಹಿತ್ಯ** **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

**ಸಂಪುಟ ೩ : ಸಂಶೋಧನ ಸಾಹಿತ್ಯ** **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

**ಸಂಪುಟ : ೪ ಜನಪದ ಸಾಹಿತ್ಯ** **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ

೨. ಜನಪದ ಮಾರ್ಗ

**ಸಂಪುಟ : ೫ ಸೃಜನ ಸಾಹಿತ್ಯ** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

## II. ಸಂಪಾದಿತ ಕೃತಿ ಸಂಪುಟಗಳು

**ಸಂಪುಟ ೬ : ಶಾಸನ ಸಾಹಿತ್ಯ** **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

**ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧** **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

**ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨** **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

**ಸಂಪುಟ : ೯ ವಚನ ಸಾಹಿತ್ಯ : ಭಾಗ–೧** **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

**ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨** **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

**ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩** **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

**ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪** **–ಸಂ. ಡಾ. ವೀರಣ್ಣ ರಾಜೂರ**

೧. ವಚನ

**ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫** **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

**ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬** **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

**ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭** **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

**ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮** **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

**ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯** **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

**ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦** **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

**ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

**ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

**ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩** **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

**ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪** **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

**ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫** **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

**ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬** **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

**ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭** **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮಯ್ಯನ ಸಾಂಗತ್ಯ

**ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮** **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

**ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯** **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

**ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦** **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

**ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧** **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

**ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨** **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

**ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩** **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ
೧. ಅರಟಾಳ ರುದ್ರಗೌಡರ ಚರಿತ್ರೆ

## III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ
ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ
ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

## IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ

ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

**ಕೃತಜ್ಞತೆಗಳು :**

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ

ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ'(ಕನ್ನಡಾನುವಾದ) ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು

ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

## ಸಂಯೋಜಕರ ನುಡಿ

**ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಗುರುಪಾದ ಮರಿಗುದ್ದಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

# ಸಂಪಾದಕರ ನುಡಿ

## ಡಾ. ಗುರುಪಾದ ಮರಿಗುದ್ದಿ

೧

ಕನ್ನಡ ಗ್ರಂಥಸಂಪಾದನೆಗೆ ಡಾ. ಎಂ. ಎಂ. ಕಲಬುರ್ಗಿ ಅವರ ಕೊಡುಗೆ ಗಮನಾರ್ಹವಾಗಿದೆ. ಗ್ರಂಥಗಳ ಸಂಪಾದನೆ ಅವರಿಗೆ ತುಂಬ ಪ್ರಿಯವಾದುದರಿಂದ ಹಲವು ಮಹತ್ವದ ಗ್ರಂಥಗಳನ್ನು ಅವರು ಸಂಪಾದಿಸಿದರು. ಅದರೊಂದಿಗೆ ಗ್ರಂಥಸಂಪಾದನಾ ಶಾಸ್ತ್ರವನ್ನು ನಿಖರವಾಗಿ ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಮಾರ್ಗಸೂಚಿ ರೂಪಿಸಿದರು. ಅದಕ್ಕಾಗಿ ೧೯೭೨ ರಲ್ಲಿ 'ಗ್ರಂಥಸಂಪಾದನ ಶಾಸ್ತ್ರ' ಎಂಬ ಕೃತಿಯನ್ನು ಹೊರತಂದು ಮುಂದಿನ ಅಧ್ಯಯನಕ್ಕೆ ನಿರ್ದೇಶಕ ತತ್ವಗಳನ್ನು ನೀಡಿದರು. ಗ್ರಂಥಸಂಪಾದನೆಯಲ್ಲಿ ಅವರಿಗೆ ವಿಶೇಷ ಆಸಕ್ತಿ ಬೆಳೆಯಲು ಆ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಲು ಪ್ರೇರಣೆ ನೀಡಿದ ಐದು ಅಂಶಗಳನ್ನು ಡಾ. ಬಿ.ವ್ಹಿ. ಶಿರೂರ ಗುರುತಿಸುತ್ತಾರೆ.[೧] ಪ್ರಸಿದ್ಧ ಸಂಪಾದನಾ ತಜ್ಞರೆನಿಸಿದ್ದ ಡಾ. ಆರ್. ಸಿ. ಹಿರೇಮಠ ಅವರೊಂದಿಗಿನ ಸಂಪರ್ಕ, ವಚನಸಾಹಿತ್ಯ ವಿಭಾಗದಲ್ಲಿ ಸಂಶೋಧನಾ ಸಹಾಯಕರೆಂದು ದುಡಿದುದು, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅವರು ಸೇವೆಗೆ ಸೇರಿದುದು, ಹಸ್ತಪ್ರತಿ ಭಂಡಾರದ ಒಡನಾಟ, ಬಸವಪೀಠದ ನಿರ್ದೇಶಕರಾದುದು ಇದಕ್ಕೆ ಕಾರಣಗಳೆಂದು ಹೇಳಿರುವುದು ಸರಿಯಾಗಿದೆ.

ಡಾ. ಕಲಬುರ್ಗಿಯವರು ಹಲವು ಹತ್ತು ಬಗೆಯ ಕೃತಿಗಳನ್ನು ಸಂಪಾದಿಸಿ, ಗ್ರಂಥಸಂಪಾದನೆಗೆ ದೊಡ್ಡ ಮಾರ್ಗವನ್ನು ರೂಪಿಸಿದರು. ಶಾಸನ, ಹಳಗನ್ನಡ ನಡುಗನ್ನಡ ಕಾವ್ಯ, ಶಾಸ್ತ್ರ ಕೃತಿಗಳು, ವಚನ, ಇತಿಹಾಸ ಆಕರ ಕೃತಿಗಳು, ಜನಪದ ಕೃತಿಗಳು– ಹೀಗೆ ಹಲವು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಶಾಸನ, ಹಳಗನ್ನಡ, ನಡುಗನ್ನಡ, ಶಾಸ್ತ್ರಗಳಿಗೆ ಸಂಬಂಧಿಸಿದ ಐವತ್ತಕ್ಕೂ ಮಿಕ್ಕಿ ಗ್ರಂಥಗಳನ್ನವರು ಹೊರತಂದಿದ್ದು, ಅವು ಅಧ್ಯಯನದ ಶಿಸ್ತು, ಸಂಪಾದನಾ ವಿಧಿ ವಿಧಾನಗಳಿಗೆ ಮಾದರಿಯಾಗಿವೆ. ಮಲ್ಲಿನಾಥ ಪುರಾಣ ಸಂಗ್ರಹ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಬಸವಣ್ಣನವರ ಟೀಕಿನ ವಚನಗಳು, ಕೊಂಡಗುಳಿ ಕೇಶಿರಾಜನ ಕೃತಿಗಳು, ಬಸವಣ್ಣನವರ ವಚನಗಳು, ಕರ್ನಾಟಕದ ಕೈಫಿಯತ್ತುಗಳು, ಮಾನಸೋಲ್ಲಾಸ–ಇವು ಅದರಲ್ಲಿ ಮುಖ್ಯವಾಗಿವೆ. ವಿಚಾರ ಸಂಕಿರಣಗಳ

---

೧. ಗ್ರಂಥಸಂಪಾದನೆ : ಬಿ.ವ್ಹಿ. ಶಿರೂರ: ಮಹಾಮಾರ್ಗ: (ಸಂ) ಸದಾನಂದ ಕನವಳ್ಳಿ, ವೀರಣ್ಣ ರಾಜೂರ: ೧೯೯೮: ಪು–೮೩೯.

ಪ್ರಬಂಧಗಳನ್ನು, ಇತರ ಯೋಜನೆಯ ಕೃತಿಗಳನ್ನು, ಇತರರೊಂದಿಗೆ ಸೇರಿ ಹೊರತಂದ ಸಂಪಾದನಾ ಕೃತಿಗಳನ್ನು ಮತ್ತು ಆಧುನಿಕ ಸಂಪಾದನಾ ಕೃತಿಗಳನ್ನು ಗಮನಿಸಿದರೆ ಅವರು ನೂರಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿರುವುದು ವಿದಿತವಾಗುತ್ತದೆ.

ಅವರ ಸಂಪಾದನೆಯ ವೈವಿಧ್ಯತೆ ಮತ್ತು ಭಿನ್ನ ಮಾದರಿಗಳನ್ನು ಪರಿಚಯಿಸುವ ಹಲವು ಕೃತಿಗಳಲ್ಲಿ 'ಹರಿಹರನ ರಗಳೆಗಳು-ಜನಪ್ರಿಯ ಆವೃತ್ತಿ' ಕೂಡ ಒಂದು. ೧೯೯೯ರ ಹಂಪಿ ಉತ್ಸವದ ನೆನಪು ಎಂದು ಪ್ರಕಟವಾದ ಈ ಕೃತಿ, ಕನ್ನಡ ವಿಶ್ವವಿದ್ಯಾಲಯ ಹಂಪಿಯ ಪ್ರಸಾರಾಂಗದಿಂದ ಹೊರಬಂದು ನಿಜಕ್ಕೂ ಜನಪ್ರಿಯ-ಆವೃತ್ತಿಯಾಯಿತು. ಡಾ. ಕಲಬುರ್ಗಿ ಅವರಿಗೆ ಕೆಲವು ಕನ್ನಡ ಕವಿಗಳು ವಿಶೇಷವಾಗಿ ಪ್ರಿಯರಾಗಿದ್ದರು. ಪಂಪ ಕವಿಯ ಬಗ್ಗೆ ಅವರ ಒಲುಮೆ ಸುವ್ಯಕ್ತವಾಗಿಯೇ ಇತ್ತು. ಪಂಪಭಾರತ, ಆದಿಪುರಾಣಗಳ ಒಂದೊಂದು ಪದ್ಯ, ಒಂದೊಂದು ದೃಶ್ಯಗಳು ಅವರ ಪ್ರತಿಭಾ ಉಪನ್ಯಾಸ ವರ್ಣನೆಯಲ್ಲಿ ಜೀವದಾಳಿ ನಿಲ್ಲುತ್ತಿದ್ದವು. ಪಂಪನಂತೆ ಹರಿಹರ ಮಹಾಕವಿಯೂ ಅವರಿಗೆ ತುಂಬ ಪ್ರಿಯವಾದ, ವಿಶಿಷ್ಟವಾದ ಕವಿಯಾಗಿದ್ದನು. ಮಾರ್ಗ-೧ ಮತ್ತು ಮಾರ್ಗ-೨ ಸಂಪುಟಗಳಲ್ಲಿ ತಲಾ ಎರಡರಂತೆ ಒಟ್ಟು ನಾಲ್ಕು ಸಂಶೋಧನಾ ಲೇಖನಗಳನ್ನು ಹರಿಹರ ಕವಿಯ ಬಗ್ಗೆ ಅವರು ಬರೆದಿದ್ದಾರೆ. ಅವು ಇಂತಿವೆ:

೧. ಹರಿಹರನ ಸಾಹಿತ್ಯದಲ್ಲಿ ಹೋರಾಟದ ಧ್ವನಿಗಳು (ಮಾರ್ಗ-೧)

೨. ಬಸವರಾಜದೇವರ ರಗಳೆಯಲ್ಲಿ ಬಸವಮೌಲ್ಯ ಪ್ರತಿಪಾದನೆ(ಮಾರ್ಗ-೧)

೩. ಹರಿಹರನ ಹೆಸರಿನ ನಿಜರೂಪ (ಮಾರ್ಗ-೨)

೪. ಹರಿಹರನ ಹೆಸರು ಮರುಸಮರ್ಥನೆ(ಮಾರ್ಗ-೨)

ಹರಿಹರ ಕವಿಯ ಹೆಸರು ಹೇಗೆ ಬಂದಿರಬಹುದು ಎಂಬ ಜಿಜ್ಞಾಸೆ ಹಿರಿಯ ವಿದ್ವಾಂಸರನ್ನು ಕಾಡುತ್ತಿತ್ತು. ಹರಿ-ಹರ ಎಂಬ ಎರಡು ಮತಗಳ, ದೈವಗಳ ಸಾಮರಸ್ಯದ ಹೆಸರದು ಎಂದು ಬಹುಪಾಲು ಜನ ನಂಬಿದ್ದರು. ಆದರೆ ಡಾ. ಕಲಬುರ್ಗಿ ಅವರು ಅದು ಹರಿ-ಹರ ಸಮನ್ವಯದಿಂದ ಬಂದುದಲ್ಲ; ಕವಿಯ ಹೆಸರು ಹೆರೆಯಾಳ>ಹರಿಯಾಳ>ಹರಿಯಲ>ಹರಿಯರ>ಹರಿಹರ ಎಂದು ಆಗಿರಬೇಕು; ಅದು 'ಶಿವನ' ಹೆಸರೇ ಆಗಿದೆ ಎಂದು ತಿಳಿಸಿ, ಆಧಾರಗಳನ್ನು ನೀಡುತ್ತಾರೆ.[೨] ಕವಿಯ ಹೆಸರಿನ ವಿಚಾರದಲ್ಲಿ ಇದರಿಂದ ಹೊಸ ಆಯಾಮ ಲಭಿಸಿ, ಕವಿಯ ಮತನಿಷ್ಠೆ, ದೈವಿಕ ಸಮರ್ಪಣೆ, ಭಕ್ತಿಭಾವಗಳ ಬಗೆಗೆ ಸ್ಪಷ್ಟತೆ ಸಾಧ್ಯವಾಯಿತು.

ಹರಿಹರ ಕವಿಯ ಕಾಲ, ಮತ, ಕೃತಿಗಳು, ತಂದೆ ತಾಯಿ ಗುರು ವಿವರ, ರಾಘವಾಂಕ ಮತ್ತು ಇತರ ಕವಿಗಳ ಸಂಬಂಧ ಇತ್ಯಾದಿಗಳ ಬಗೆಗೆ ಈ ಹಿಂದೆ ವ್ಯಾಪಕವಾದ ಚರ್ಚೆಯಾಗಿತ್ತು. ಡಾ. ಕಲಬುರ್ಗಿಯವರು ಅದೇ ಚರ್ಚೆಯನ್ನು ಬೆಳೆಸಲು ಇಷ್ಟಪಡಲಿಲ್ಲ. ಅದಕ್ಕೆ ಬದಲಾಗಿ ಕಾವ್ಯ ಸತ್ವ, ಕವಿಯ ದೃಷ್ಟಿ ಕೋನಗಳ ಬಗೆಗೆ ಹೆಚ್ಚು ಆಸ್ಥೆ ವಹಿಸಿದರು. ಕೆ.ಜಿ. ಕುಂದಣಗಾರ, ಮಲ್ಲಾಬಾದಿ, ಸ.ಸ. ಮಾಳವಾಡರು ಈ ದಿಸೆಯಲ್ಲಿ ನಡೆಸಿದ್ದ ಅಧ್ಯಯನದ ಮುಂದುವರಿಕೆಯಾಗಿ ಅವರು

---

೨. ಮಾರ್ಗ ಸಂ-೨ : ಡಾ. ಎಂ. ಎಂ. ಕಲಬುರ್ಗಿ; ೨೦೧೦ (ಪ. ಮು) : ಪು.೪೪೦

ಅದನ್ನು ಕೈಕೊಂಡಿದ್ದಾರೆ. ಅವರ ಲೇಖನಗಳಿಂದ ಹರಿಹರ ಕವಿ ವಚನಕಾರರಿಂದ ಹೇಗೆ ಪ್ರಭಾವಿತಗೊಂಡು ಸಾಹಿತ್ಯದ ವಿಭಿನ್ನ ಮಾರ್ಗ ಕಂಡುಕೊಂಡನು ಎಂಬುದು ಸ್ಪಷ್ಟವಾಗುತ್ತದೆ."ಹರಿಹರನಿಗೆ ಈ ನಡೆ-ನುಡಿ ಸಾಮರಸ್ಯ ಧೋರಣೆ ಶರಣರಿಂದ ದತ್ತವಾಗಿ ಬಂದಂತೆ ಜೀವನ ಮೌಲ್ಯಗಳೂ ಶರಣರಿಂದಲೇ ದತ್ತವಾಗಿ ಬಂದಿವೆ...... ಈತ ಶರಣ ಸಿದ್ಧಾಂತಗಳನ್ನು ಸಾಹಿತ್ಯಕ್ಕೆ ವರ್ಗಾಯಿಸಿಕೊಂಡ ಪ್ರಥಮ ಕವಿಯಾಗಿ ತೋರುತ್ತಾನೆ; ಮಾರ್ಕ್ಸನ ವಿಚಾರಧಾರೆಯನ್ನು ಗಾರ್ಕಿ ಸಾಹಿತ್ಯಕ್ಕೆ ಪ್ರಥಮವಾಗಿ ತಿರುಗಿಸಿಕೊಂಡಂತೆ. ಇದರಿಂದ ಒಂದು ಹೊಸ ಮಾರ್ಗವೇ ಕನ್ನಡ ಸಾಹಿತ್ಯದಲ್ಲಿ ತೆರೆದುಕೊಂಡಿತು"[೩] ಎಂದಿರುವುದು ಅದನ್ನು ಸಮರ್ಥಿಸುತ್ತದೆ. ಹರಿಹರನಲ್ಲಿ ಸಮಾಜೋ-ಧಾರ್ಮಿಕ ಬದಲಾವಣೆಯ ಆಶಯವಿರುವುದನ್ನು ಹಳೆಯ ಮತ್ತು ಹೊಸ ಮೌಲ್ಯಗಳ ಸಂಘರ್ಷವಿರುವುದನ್ನು ಅವರು ಎತ್ತಿ ತೋರಿದ್ದಾರೆ.

ಹರಿಹರ ಕವಿಯ ಸಮಗ್ರ ರಗಳೆಗಳನ್ನು ಒಂದೆಡೆಗೆ ತರುವ ವಿಚಾರದೊಂದಿಗೆ, ಸುಲಭದಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಸಹೃದಯರ ಓದಿಗೆ ಸುಲಭವಾಗುವಂತೆ ತರಬೇಕೆಂಬ ಜನಪರ ಕಾಳಜಿಯಿಂದ ಅವರು ಜನಪ್ರಿಯ ಆವೃತ್ತಿಯನ್ನು ರೂಪಿಸಿದ್ದಾರೆ. ಇದಕ್ಕೆ ವಿಸ್ತೃತವಾದ ಪೀಠಿಕೆ ಬರೆದು ಕವಿ, ಕಾವ್ಯ, ಸಂಪಾದನಾ ಕ್ರಮಗಳ ಬಗೆಗೆ ವಿವರಿಸುತ್ತಾರೆ. ಕವಿಯನ್ನು ಕುರಿತಾಗಿ ಜೀವನಚರಿತ್ರೆ, ಹೊಸಯುಗದ ಹರಿಕಾರ ಎಂದು ಎರಡು ಉಪವಿಭಾಗಗಳಲ್ಲಿ ಪರಿಚಯ ಬಂದಿದೆ. ಆರಂಭದಲ್ಲಿ ಕವಿಯ ಮಹತ್ವ ಬಿಂಬಿಸುವ ಪ್ರಶಸ್ತಿವಾಕ್ಯಗಳು ಬಂದಿವೆ. "ಸಾಹಿತ್ಯ ಪ್ರಪಂಚದಲ್ಲಿ ಮಹಾಕವಿಗಳು ವಿರಳ. ಋಷಿ ಮಹಾಕವಿಗಳು ಅತಿವಿರಳ. ಈ ಅತಿ ವಿರಳರ ಶ್ರೇಣಿಗೆ ಸೇರಿದವನಾಗಿದ್ದಾನೆ ಹಂಪೆಯ ಹರಿಹರದೇವ....ಋಷಿಮಹಾಕವಿಯಾಗಿರುವ ಹರಿಹರ ಯುಗ ಪ್ರವರ್ತಕ ಕವಿಯೂ ಆಗಿರುವುದು ಒಂದು ವಿಶೇಷ. ಯುಗಪ್ರವರ್ತಕ ಕವಿಯ ಲಕ್ಷಣವೆಂದರೆ ಪರಂಪರೆಯಾಗಿ ಮುಂದುವರೆಯುವ ಯೋಗ್ಯತೆಯುಳ್ಳ ಒಂದು ಹೊಸ ಸಾಹಿತ್ಯ ಮಾರ್ಗವನ್ನು ಸ್ಥಾಪಿಸುವುದು."[೪] ಕವಿಯ ಶಕ್ತಿ-ಸಾಮರ್ಥ್ಯಗಳನ್ನು ಓದುಗರಿಗೆ ಸಶಕ್ತವಾಗಿ ನೀಡುವ ಪರಿ ಇದು. ಜೀವನ ಚರಿತ್ರೆ ಭಾಗದಲ್ಲಿ ಕವಿಯ ಬಗ್ಗೆ ಕನ್ನಡದಲ್ಲಿ ಈವರೆಗೆ ನಡೆದ ದೇಶ-ಕಾಲಾದಿ ಚರ್ಚೆಯ ಸಂಗ್ರಹ ವಿವರ ನೀಡಲಾಗಿದೆ. ಕಾವ್ಯ, ಶಾಸನಾದಿಗಳ ಪ್ರಮಾಣಗಳಿಂದ, ಕವಿಯ ಕುರಿತಾದ ದಂತಕತೆಗಳಿಂದ ಹಿಂದಿನ ವಿದ್ವಾಂಸರು ತಿಳಿಸಿದ, ಹದಿಮೂರನೆಯ ಶತಮಾನದ ಎರಡು, ಮೂರನೆಯ ದಶಕದಲ್ಲಿ ಕವಿ ಜೀವಿಸಿರಬಹುದೆಂದು ಇಲ್ಲಿಯೂ ಭಾವಿಸಲಾಗಿದೆ. ಈ ಬಗ್ಗೆ ಹೆಚ್ಚಿನ ವಾದ, ವಿವಾದಗಳಿಗೆ ಅವರು ಹೋಗುವುದಿಲ್ಲ. ಹಂಪೆಯ ಸನೀಹದಲ್ಲಿ ಹುಟ್ಟಿ ಬೆಳೆದ ಕವಿಗೆ, ಹಂಪೆ ಮುಂದೆ ಸಾಧನೆಗೆ ಆಶ್ರಯದಾಣವಾದುದನ್ನು ತಿಳಿಸುತ್ತ, ಹಂಪೆಯ ಮಾಯಿದೇವರಿಂದ ದೀಕ್ಷೆ ಪಡೆದಿರಬೇಕು ಎನ್ನುತ್ತಾರೆ. ಹರಿಹರನ ತಂದೆ ಮಹಾದೇವ, ತಾಯಿ ಶರ್ವಾಣಿ, ಸೋದರಿ ರುದ್ರಾಣಿ. ರುದ್ರಾಣಿಯ ಮಗ ರಾಘವಾಂಕ ಎಂಬುದು ಅವರಿಗೆ ಸಮ್ಮತವಿದೆ. ಕವಿಯು ಶೈವ ಮನೆತನದಲ್ಲಿ ಜನ್ಮ ತಾಳಿದ್ದನೆಂದು ಕೆಲವು ಸಂಶೋಧಕರು, ಕವಿಚರಿತೆಕಾರರು ಹೇಳಿರುವುದನ್ನು

---

೩. ಮಾರ್ಗ ಸಂ-೧ : ಡಾ. ಎಂ. ಎಂ. ಕಲಬುರ್ಗಿ;೨೦೧೦: ಪು.೫೦೩.

೪. ಹರಿಹರನ ರಗಳೆಗಳು-ಪೀಠಿಕೆ : ಡಾ. ಎಂ. ಎಂ. ಕಲಬುರ್ಗಿ : ೧೯೯೯: ಪು.vii

ಅವರು ಚಿಂತನೆಗೆ ಗುರಿಪಡಿಸುವರು. ಮೂಲತಃ ಕವಿಯು ಶುದ್ಧ ಶೈವನಾಗಿದ್ದು, ಮುಂದೆ ವೀರಶೈವನಾಗಿರಬೇಕು ಎಂದು ಅಭಿಮತಪಡುತ್ತಾರೆ.

ಹರಿಹರ ಕವಿಯನ್ನು ಹೊಸ ಯುಗದ ಹರಿಕಾರ ಎನ್ನುತ್ತ, ಅದಕ್ಕೆ ಕೆಲವು ಕಾರಣಗಳನ್ನು ನೀಡಿ ವಿವರಿಸುತ್ತಾರೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು:

೧. ಹರಿಹರ ಮೌಲ್ಯಗಳನ್ನು ಬದುಕಿ, ಅವುಗಳನ್ನು ಸಾಹಿತ್ಯಿಕವಾಗಿ ಬಿಂಬಿಸಿದ್ದಾನೆ.

೨. ರಾಜಸ್ತುತಿಗೆ ಬಳಕೆಯಾಗುತ್ತಿದ್ದ ಸಾಹಿತ್ಯವನ್ನು ಕವಿ ಶರಣರ ಚರಿತ್ರೆಗೆ, ಶಿವಲೀಲೆಗೆ ತಿರುಗಿಸಿದನು.

೩. ಬಸವಾದಿ ಶರಣರ ಚಳುವಳಿಯನ್ನು ಸಾಹಿತ್ಯದಲ್ಲಿ ಪ್ರಥಮ ಸಲ ದಾಖಲುಗೊಳಿಸಿದನು.

೪. ಆ ಮೂಲಕ ವೈದಿಕ ಮೌಲ್ಯಗಳನ್ನು ನಿರಾಕರಿಸಿ, ಶರಣರ ಮೌಲ್ಯಗಳನ್ನು ಪ್ರತಿಪಾದಿಸಿದನು.

೫. ಕಾವ್ಯಭಾಷೆಯಲ್ಲಿ 'ಕನ್ನಡ ಪ್ರಧಾನ ಸಂಸ್ಕೃತ ಪೂರಕ' ತತ್ವವನ್ನು ಅನುಸರಿಸಿದನು. ಇದರಿಂದ ದೇಶೀ ಪ್ರಧಾನ ಕಾವ್ಯ ಪರಂಪರೆ ಬೆಳೆಯಲು ಸಾಧ್ಯವಾಯಿತು.

೬. ಹಂಪೆಯ ಸಾಂಸ್ಕೃತಿಕ ಪುನರುತ್ಥಾನದಲ್ಲಿ ಅವನ ಸಾಹಿತ್ಯವು ಪ್ರಧಾನ ಪಾತ್ರ ವಹಿಸಿತು.

೭. ರಗಳೆಯ ವ್ಯಾಪಕ ಪ್ರಯೋಗದಿಂದ, ಕಾವ್ಯಧೋರಣೆಗಳಿಂದ ಹರಿಹರ ಮಾರ್ಗ ರೂಪಗೊಂಡಿತು. ರಗಳೆ ಆಧುನಿಕ ಕಾಲದ ಸರಳರಗಳೆಗೆ ಜನ್ಮ ನೀಡಿತು.

೮. ಹರಿಹರನೆಂದರೆ ಒಬ್ಬ ಕವಿಯಲ್ಲ; ಒಂದು ಕಾವ್ಯ ಪ್ರಕಾರ ಎನಿಸಿದೆ.

ಈ ಎಲ್ಲ ಅಂಶಗಳನ್ನು ಸಾಧಾರವಾಗಿ ವಿವರಿಸುತ್ತ, ಕವಿಯ ಮತ್ತು ರಗಳೆಗಳ ಒಟ್ಟು ಅನನ್ಯತೆಯನ್ನು ಪ್ರತಿಪಾದಿಸಿರುವುದು ಅಧ್ಯಯನಯೋಗ್ಯವಾಗಿದೆ. ಕವಿ ಕನ್ನಡ ಸಾಹಿತ್ಯಕ್ಕೆ ಹೊಸತನ ತುಂಬಿದ ಕವಿಯಾಗಿರುವುದರಿಂದ, ಕ್ರಾಂತದೃಷ್ಟಿಯಿಂದ ಆತ ನಿಜಕ್ಕೂ ಯುಗಪ್ರವರ್ತಕ ಎಂಬುದನ್ನು ಎತ್ತಿ ತೋರುತ್ತಾರೆ.

ಹರಿಹರ ಕವಿ ರಗಳೆಗಳನ್ನು ರಚಿಸಿದ ಕ್ರಮವನ್ನು ಆದ್ಯಂತವಾಗಿ ತಿಳಿಯಬಹುದೆ?, ಕೆಲವು ರಗಳೆಗಳ ಶೀರ್ಷಿಕೆಗಳು ಬೇರೆ ಬೇರೆ ಪ್ರತಿಗಳಲ್ಲಿ ಏಕೆ ಭಿನ್ನವಾಗಿವೆ? ಕವಿ ಬರೆದ ರಗಳೆಗಳ ಸಂಖ್ಯೆ ಎಷ್ಟು? ಎಂಬ ವಿಚಾರಗಳನ್ನು ಮುಂದೆ ಎರಡು ಉಪವಿಭಾಗಗಳಲ್ಲಿ ಅವರು ಚರ್ಚಿಸುತ್ತಾರೆ. ಬಹುಶಃ ಅರವತ್ತು ಮೂರು ಪುರಾತನರ ರಗಳೆಗಳಲ್ಲಿ 'ತಿರುನೀಲಕಂಠರ ರಗಳೆ' ಮೊದಲು ರಚನೆಗೊಂಡು ನಂತರ ಇತರ ರಗಳೆಗಳು ರಚನೆಯಾಗಿರಬಹುದು ಎನ್ನುತ್ತಾರೆ. ರಗಳೆಯ ಹಸ್ತಪ್ರತಿಗಳ ಬರವಣಿಗೆ, ಪ್ರತಿ ಮಾಡುವಿಕೆ, ಸೇರ್ಪಡೆ ಇತ್ಯಾದಿ ಐದು ಕಾರಣಗಳಿಂದ ಹರಿಹರನ ರಗಳೆಗಳು ಎಷ್ಟು ಎಂಬುದು ತೊಡಕಾಗಿ ಪರಿಣಮಿಸಿದೆ ಎನ್ನುವರು. ಹರಿಹರನು ರಚಿಸಿದ ಅರವತ್ತೂರು ಶಿವಭಕ್ತರ 'ಪುರಾತನರ ರಗಳೆಗಳು' ಭಾಗದಲ್ಲಿ ಉಪಲಬ್ದ ಅರವತ್ತು ರಗಳೆಗಳನ್ನು ಪೆರಿಯ ಪುರಾಣ ಆಧರಿಸಿ ಕ್ರಮವಾಗಿ ಹೊಂದಿಸಿ, ಸಂಯೋಜಿಸಿಕೊಡುವ ತಮ್ಮಯ ಕ್ರಮವನ್ನು ವ್ಯಕ್ತವಾಗಿ ಹೇಳಿದ್ದಾರೆ. ಎರಡನೆಯ ಭಾಗದ 'ಕನ್ನಡ ನಾಡಿನ ಶರಣರ ರಗಳೆ'ಗಳನ್ನು ಶರಣರ ಜೀವಿತದ ಅವಧಿ, ಕಾಲ ಗಮನಿಸಿ ತಾವು ಜೋಡಿಸಿದ್ದಾಗಿ ತಿಳಿಸಿರುವರು. ಕೊನೆಯ ಮೂರನೆಯ

ಭಾಗದಲ್ಲಿ ಇಪ್ಪತ್ತಾರು ರಗಳೆಗಳನ್ನು 'ಸಂಕೀರ್ಣ ರಗಳೆ'ಗಳು ಎಂದು ಜೋಡಿಸಿದ್ದಾರೆ. ಹರಿಹರ ಕವಿ ತಮಿಳುನಾಡಿನ ಪುರಾತನರ ರಗಳೆಗಳನ್ನು ಪೆರಿಯ ಪುರಾಣವನ್ನು ಆಧರಿಸಿ ಬರೆದಿದ್ದರೂ ಸ್ವತಃ ಕ್ಷೇತ್ರಕಾರ್ಯದಿಂದ, ವಿವೇಚನೆಯಿಂದ ಸ್ವಂತಿಕೆಯನ್ನು ಮೆರೆದಿರುವುದಾಗಿ ಅವರು ಗುರುತಿಸುವರು. ಕನ್ನಡ ನಾಡಿನ ಶರಣರ ರಗಳೆಗಳಿಗೆ, ವಚನಗಳನ್ನು ಆಧರಿಸಿದ್ದು, ತುಂಬ ಮಾಹಿತಿ ಪಡೆದುಕೊಂಡು, ಪ್ರವಾಸ ಕೈಕೊಂಡು ವಿವರ ಸಂಗ್ರಹಿಸಿದ್ದು ಐತಿಹಾಸಿಕ ಕೆಲಸವೆಂದು ಭಾವಿಸುವರು.

ಮುಂದೆ ಸಾಹಿತ್ಯಿಕ ಮೌಲ್ಯ ಮತ್ತು ಸಾಹಿತ್ಯೇತರ ಮೌಲ್ಯ ಎಂಬ ಎರಡು ಉಪವಿಭಾಗಗಳಲ್ಲಿ ರಗಳೆಗಳ ಮಹತ್ವವನ್ನು ಕಾಣಿಸಲು ಪ್ರಯತ್ನಿಸಿದ್ದಾರೆ. ಹರಿಹರ ವಚನಕಾರರ ತಾತ್ವಿಕತೆಯನ್ನು ತನ್ನ ಕಾವ್ಯ ಶರೀರಕ್ಕೆ ಶಕ್ತಿಯಾಗಿ ತುಂಬಿ ನೀಡುತ್ತಾನೆ ಮತ್ತು ಉತ್ಸಾಹಿತ ಪದಲಾಲಿತ್ಯದಲ್ಲಿ ನಿರೂಪಿಸುತ್ತಾನೆ ಎಂಬುದನ್ನು ಸಾಹಿತ್ಯದ ಮೌಲ್ಯವಾಗಿ ಗಮನಿಸಲಾಗಿದೆ. ರಗಳೆಗಳಲ್ಲಿಯ ಸಾಂಸ್ಕೃತಿಕ, ದಾರ್ಶನಿಕ ಅಂಶಗಳನ್ನು ಸಾಹಿತ್ಯೇತರ ಮೌಲ್ಯವೆಂದು ಸಂಪಾದಕರು ತಿಳಿಸುವರು. ಹಬ್ಬ, ವಿಧಿಕ್ರಿಯೆ, ಜಾತ್ರೆಗಳಂತಹ ಸಾಂದರ್ಭಿಕ ಆಚರಣೆಗಳನ್ನು, ವೃತ್ತಿ, ವೃತ್ತಿ ಆಚರಣೆ, ಸಂಗೀತ ಪರಿಕರ, ಆಹಾರ ಪಾನೀಯ ವಿವರಗಳನ್ನು ನಿರ್ದೇಶಿಸಿ ಇವುಗಳ ಅಭ್ಯಾಸವೇ ಒಂದು ಸ್ವತಂತ್ರ ಗ್ರಂಥವಾಗಬಹುದು ಎಂದಿದ್ದಾರೆ. ಅದರೊಂದಿಗೆ ಹರಿಹರನ ರಗಳೆಗಳು ಪ್ರತಿಪಾದಿಸುವ ವರ್ಗಭೇದ, ವರ್ಣಭೇದ, ಲಿಂಗಭೇದ ನಿರಸನ ಮೌಲ್ಯದತ್ತ ಗಮನ ಸೆಳೆದಿರುವರು. "ಹೀಗೆ ಹೊಸ ಮೌಲ್ಯಗಳು ರಗಳೆಗಳಲ್ಲಿ ಕಂಡುಬರುತ್ತಿದ್ದು, ಇವುಗಳ ಅನುಷ್ಠಾನಕ್ಕಾಗಿ ಹೋರಾಟ ಅನಿವಾರ್ಯವೇ ಸರಿ. ಆದುದರಿಂದ ಸಾಮಾನ್ಯವಾಗಿ ಎಲ್ಲ ರಗಳೆಗಳಲ್ಲಿ ಪಕ್ಷ, ಪ್ರತಿಪಕ್ಷಗಳು ನಿರ್ಮಾಣವಾಗಿ, ಒಂದು ಬಗೆಯ ಘರ್ಷಣೆಯ ಗದ್ದಲ ಉದ್ದಕ್ಕೂ ಕೇಳಿಸುತ್ತದೆ. ಇಂಥ ಸಂದರ್ಭಗಳು ಕಾರಣವಾಗಿ ಹರಿಹರನನ್ನು ಕನ್ನಡದ ಪ್ರಥಮ ಸಂಘರ್ಷ ಕವಿಯೆನ್ನಬೇಕಾಗುತ್ತದೆ. ಹರಿಹರನ ದರ್ಶನ ಭಕ್ತಿಕೇಂದ್ರಿತವಾದುದು. ಏಕದೇವ ಮೌಲ್ಯವನ್ನು ಎತ್ತಿ ಹಿಡಿಯುವುದು. ಆ ದೇವನು ಸಾಕಾರನೂ ನಿರಾಕಾರನೂ ಎಂದು ನಂಬುವುದು, ಜೀವ-ದೇವಗಳಲ್ಲಿ ಭಾವ ಸಂಗಮವನ್ನು ಅನುಭವಿಸುವುದು ಈ ಭಕ್ತಿಯ ಸ್ವರೂಪವಾಗಿದೆ"[೫] ಎಂದಿರುವುದು ಸಮಂಜಸವಾಗಿದೆ.

'ಹರಿಹರನ ರಗಳೆಗಳು' ಎಂಬ ಪ್ರಸ್ತುತ ಕೃತಿಯ ಸಂಪಾದನೆಯ ವಿಧಿವಿಧಾನ, ಪರಿಷ್ಕರಣೆ ಕುರಿತು ಕೊನೆಯಲ್ಲಿ ಕೆಲವು ಮಾತುಗಳನ್ನು ಅವರು ತಿಳಿಸಿದ್ದಾರೆ. ಡಾ. ಕಲಬುರ್ಗಿ ಅವರು ಈ ಹಿಂದೆ ಪ್ರಕಟವಾದ ಹಲವಾರು ಸಂಪಾದನೆಗಳನ್ನು ಸಂಕಲನಗಳನ್ನು ಗಮನಿಸಿದ್ದಾರೆ. ಟಿ. ಎಸ್. ವೆಂಕಣ್ಣಯ್ಯ ಅವರು ೧೯೩೦ ರಲ್ಲಿ ಹೊರತಂದ ಬಸವರಾಜದೇವರ ರಗಳೆಯ ಸಂಪಾದನೆಯ ಕೃತಿಯಿಂದ ಹಿಡಿದು ೧೯೭೭ ರಲ್ಲಿ ಹೊರಬಂದ ಕೊಟ್ಟೂರೇಶ್ವರ ಮಠ ಹೊಸಪೇಟೆಯ ವಿಮರ್ಶಾ ಪ್ರಕಟನೆವರೆಗಿನ ಹಲವು ಹತ್ತು ಸಂಪಾದನೆಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಅವರು ಮುಖ್ಯವಾಗಿ ಮೂರು ಮುದ್ರಿತ ಆಕರಗಳಿಂದ ಈ ಸಂಪಾದನೆಯ ಕೆಲಸ ಕೈಕೊಂಡಿದ್ದಾರೆ. ಅವು ಇಂತಿವೆ:

---

೫. ಹರಿಹರನ ರಗಳೆಗಳು-ಪೀಠಿಕೆ : ಡಾ. ಎಂ. ಎಂ. ಕಲಬುರ್ಗಿ : ೧೯೯೯: ಪು.xxi

೧. ಡಾ. ಫ.ಗು. ಹಳಕಟ್ಟಿಯವರ ಸಂಪಾದನೆ :

ಹಳಕಟ್ಟಿಯವರು ೧೯೩೩ ರಿಂದ ೧೯೪೦ ರ ಅವಧಿಯಲ್ಲಿ ಏಳು ಭಾಗಗಳಲ್ಲಿ ಹೊರತಂದ ೪೬ ರಗಳೆಗಳು ಒಂದನೆಯ ಆಕರವಾಗಿದೆ.

೨. ಪ್ರೊ. ಎಚ್. ದೇವೀರಪ್ಪ ಸಂಪಾದನೆ:

ದೇವೀರಪ್ಪನವರು ಪ್ರತ್ಯೇಕವಾಗಿ ಎರಡು ಕೃತಿಗಳಲ್ಲಿ ಹೊರ ತಂದ ೬೬ ರಗಳೆಗಳನ್ನು ಇನ್ನೊಂದು ಆಕರವಾಗಿ ಬಳಸಲಾಗಿದೆ.

೩. ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ.ಎಸ್. ಸುಂಕಾಪುರ ಅವರು ಮೂರು ಸಂಪುಟಗಳಲ್ಲಿ ೯೪ ರಗಳೆಗಳನ್ನು ಹೊರತಂದಿದ್ದಾರೆ. ಇವು ೧೯೭೩ ರಿಂದ ೧೯೭೬ ರ ಅವಧಿಯಲ್ಲಿ ಪ್ರಕಟವಾಗಿವೆ. ಈ ಸಂಪುಟಗಳನ್ನು ಆಕರವಾಗಿ ಸ್ವೀಕರಿಸಲಾಗಿದೆ.

ಮೇಲಿನ ಮೂರರಲ್ಲಿ ಡಾ. ಆರ್.ಸಿ. ಹಿರೇಮಠ ಮತ್ತು ಡಾ. ಎಂ.ಎಸ್. ಸುಂಕಾಪುರರ ಸಂಪಾದನೆಯ ಸಂಪುಟಗಳನ್ನು ಪ್ರಧಾನ ಆಕರವಾಗಿ ಇಟ್ಟುಕೊಂಡು ಇತರ ಎರಡು ಆಕರಗಳನ್ನು ಪೂರಕವಾಗಿ ಗ್ರಹಿಸಿ ಈ ಸಮಗ್ರ ಸಂಪುಟವನ್ನು ಸಿದ್ಧಪಡಿಸಿದ್ದಾರೆ.

ಸಂಪಾದನೆಯಲ್ಲಿ ಹೊಸ ಪಾಠಾಂತರಗಳನ್ನು ಅವರು ಗುರುತಿಸಲು ಹೋಗದೆ, ಮುಖ್ಯವಾದ ಪಾಠದೋಷಗಳನ್ನು ಮಾತ್ರ ಪರಿಷ್ಕರಿಸಿದ್ದಾರೆ. ಹಾಗೆ ಮಾಡುವಾಗ ಶಾಬ್ದಿಕ ಸಂಸ್ಕರಣ ಮತ್ತು ಸಾಂಸ್ಕೃತಿಕ ಸಂಸ್ಕರಣವೆಂದು ಎರಡು ಬಗೆಯಲ್ಲಿ ಪಾಠದೋಷಗಳನ್ನು ಸರಿಪಡಿಸಿದ್ದಾರೆ. ಆದರೆ ಶಾಬ್ದಿಕ ನೆಲೆಯಲ್ಲಿ ಅವರು ಬಂಡಿಯ ಮುಂದಂ ತಲೆಗರೆದು, ಭಕ್ತಜನ ಭೈತ್ರಂಗೆ ಅರಿವುತೆಲ್ಲರ ಎಂದು ಸಂಸ್ಕರಿಸಿದುದನ್ನು, ಸಾಂಸ್ಕೃತಿಕ ನೆಲೆಯಲ್ಲಿ ಕಂಬಳಿಯ ನಾಗಿದೇವ, ಒಂದು ಕರುವಂ ಹೊತ್ತುಕೊಂಡು ಎಂದು ಸಂಸ್ಕರಿಸಿದುದನ್ನು ಪುನರ್ ಪರಿಶೀಲಿಸಲು ಆಸ್ಪದವಿದೆ. ರಗಳೆಗಳು ಕೇವಲ ಭಾಷಾ ಸೃಷ್ಟಿಯಾಗಿರದೆ, ಸಂಸ್ಕೃತಿಯ ಸೃಷ್ಟಿಗಳಾಗಿವೆ ಎಂದು ಅವರು ಭಾವಿಸಿರುವುದು ಮಾತ್ರ ಸೂಕ್ತವಾಗಿದೆ. ಮೂರು ಕಾಂಡಗಳಾಗಿ ವಿಭಾಗಿಸಿ, ಮೊದಲ ಕಾಂಡಕ್ಕೆ ಇಲ್ಲಿ ತಮಿಳುನಾಡಿನ ಪುರಾತನರ ರಗಳೆಗಳು ಎಂದು ಹೆಸರಿಸಿ, ತಿರುನೀಲಕಂಠ ದೇವರ ರಗಳೆಯಿಂದ ನಂಬಿಯಣ್ಣನ ರಗಳೆಯವರೆಗೆ ೬೦ ರಗಳೆಗಳನ್ನು ನೀಡಿದ್ದಾರೆ. ಕಾಂಡ ಎರಡರಲ್ಲಿ ಕೇಶಿರಾಜ ದಣ್ಣಾಯಕರ ರಗಳೆಯಿಂದ, ಮಹಾದೇವಿಯಕ್ಕನ ರಗಳೆಯವರೆಗೆ ಇಪ್ಪತ್ತೆರಡು ರಗಳೆಗಳನ್ನು, ಕಾಂಡ ಮೂರರಲ್ಲಿ ಸಂಕೀರ್ಣ ರಗಳೆಗಳೆಂದು ದಕ್ಷಾಧ್ವರ ರಗಳೆಯಿಂದ, ಮಹಿಮಾ ರಗಳೆಯವರೆಗೆ ಇಪ್ಪತ್ತಾರು ರಗಳೆಗಳನ್ನು ಸಂಯೋಜನೆಗೊಳಿಸಿದ್ದಾರೆ.

ಹರಿಹರನ ೧೦೮ ರಗಳೆಗಳನ್ನು ಸಮಗ್ರ ಸಂಪುಟದಲ್ಲಿ ಪ್ರಸ್ತುತ ನೀಡಿದ್ದರೂ ಡಾ. ಕಲಬುರ್ಗಿ ಅವರಿಗೆ ಹರಿಹರನ ರಗಳೆಗಳ ಸಂಖ್ಯಾವಿಚಾರದ ವಾದ-ವಿವಾದ ಪರಿಹಾರಗೊಂಡಿತು ಎಂದೆನಿಸಲಿಲ್ಲ. ಅದರ ಕ್ಲಿಷ್ಟತೆ, ಹಿನ್ನೆಲೆಗಳು ಅವರಿಗೆ ಚೆನ್ನಾಗಿ ತಿಳಿದಿದ್ದವು. ೧೮೮೬ ರಿಂದಲೇ ಹರಿಹರ ಕವಿಯ ಕೃತಿಗಳ ಪ್ರಕಟನೆ ಆರಂಭವಾಗಿದ್ದರೂ, ರಗಳೆಗಳು ಆಗ ಪ್ರಕಟವಾಗಲಿಲ್ಲ. ೧೯೩೦ ರಲ್ಲಿ ಟಿ. ಎಸ್. ವೆಂಕಣ್ಣಯ್ಯ ಅವರು ನಾಲ್ಕು ಪ್ರತಿಗಳ ಸಹಾಯದಿಂದ ಬಸವರಾಜದೇವರ ರಗಳೆಯನ್ನು

ಮೊದಲು ಸಂಪಾದಿಸಿ ಹೊರತಂದು ರಗಳೆಗಳ ಪ್ರಕಟನೆಗೆ ಚಾಲನೆ ನೀಡಿದರು. ಅದಕ್ಕೆ ಬರೆದ ೩೪ ಪುಟಗಳ ಅಭ್ಯಾಸಪೂರ್ಣ ಪೀಠಿಕೆಯಲ್ಲಿ ಬಸವಣ್ಣನನ್ನು ಕೇಂದ್ರವಾಗಿಸಿ ವಿವರಣೆ ನೀಡಿದ್ದು, ಕೊನೆಯಲ್ಲಿ ವಿಮರ್ಶೆ, ಪಾಠಶೋಧನೆಯ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.[೬] ಚೆನ್ನಮಲ್ಲಿಕಾರ್ಜುನ ಮಾಸ್ತರರು ೧೯೩೧ ರಲ್ಲಿ ಕೊಡಗೂಸಿನ ರಗಳೆಯನ್ನು ಮುನ್ನುಡಿ, ಅರ್ಥಕೋಶ ಸಹಿತ ಪ್ರಕಟಿಸಿದರು. ಫ.ಗು. ಹಳಕಟ್ಟಿಯವರು ೧೯೩೨ ರಿಂದ ಶಿವಾನುಭವ ಪತ್ರಿಕೆಯಲ್ಲಿ ಒಂದೊಂದಾಗಿ ರಗಳೆಗಳನ್ನು ಪ್ರಕಟಿಸುತ್ತ ಬಂದರು. ಇವರ ಪ್ರಯತ್ನ-ಪರಿಶ್ರಮಗಳ ಫಲವಾಗಿ ರಗಳೆಗಳ ಬಗೆಗೆ ವಿದ್ವಾಂಸರಲ್ಲಿ, ಆಸಕ್ತರಲ್ಲಿ ತಿಳುವಳಿಕೆ ಮೂಡಿತು. ಹರಿಹರ ಕವಿಯ ಕೃತಿಗಳು, ರಗಳೆಗಳು, ವಸ್ತು, ಸಂಖ್ಯೆ, ಮೂಲ, ಪ್ರಭಾವ, ಭಾಷೆ-ಶೈಲಿಗಳ ಬಗೆಗೆ ದೊಡ್ಡ ಚರ್ಚೆ ಆರಂಭವಾಯಿತು.

೨

ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಚರ್ಚಿತವಾದ ಕವಿಗಳಲ್ಲಿ ಹರಿಹರ ಕವಿಯೂ ಒಬ್ಬನು. ಕವಿಯ ಕಾಲ, ದೇಶ, ಮತ, ಕೃತಿಗಳ ಬಗೆಗೆ ವಿದ್ವಾಂಸರಲ್ಲಿ ಸುದೀರ್ಘ ಚರ್ಚೆ ನಡೆದಿದೆ; ಕೆಲವಂಶಗಳಲ್ಲಿ ಏಕಮತವು ಸಾಧ್ಯವಾಗಿಲ್ಲ. ಹರಿಹರನ ಕೃತಿಗಳನ್ನು ಮೊದಲು ಸಂಪಾದಿಸಿ ಪ್ರಕಟಿಸಿದವರಲ್ಲಿ ಆರ್. ನರಸಿಂಹಾಚಾರ್ಯ, ಶಿ.ಶಿ. ಬಸವನಾಳ, ಶಿ.ಚ. ನಂದೀಮಠ, ಎಚ್.ದೇವೀರಪ್ಪ, ಆರ್.ಸಿ.ಹಿರೇಮಠ, ಎಂ.ಎಸ್. ಸುಂಕಾಪೂರ, ಎಸ್. ಶಿವಣ್ಣ ಮುಂತಾದ ವಿದ್ವಾಂಸರು ಪ್ರಮುಖರಾಗಿದ್ದಾರೆ. ಮೊದಮೊದಲು ಶತಕಗಳು, ಗಿರಿಜಾ ಕಲ್ಯಾಣ ಮಹಾಕಾವ್ಯ ಪ್ರಕಟಗೊಂಡಿವೆ. ಹಸಿರು ಘಟ್ಟ ಹೊನ್ನಪ್ಪ ಅವರು ೧೮೮೬ ರಲ್ಲಿ 'ಗಿರಿಜಾ ಕಲ್ಯಾಣ' ಪ್ರಕಟಿಸಿದ್ದಾರೆ. ನಂತರದಲ್ಲಿ ಒಂದೊಂದಾಗಿ, ಕೆಲವು ಸಲ ಹಲಕೆಲವು ರಗಳೆಗಳು ಕೂಡಿ ಹೊರಬರಲು ತೊಡಗಿದವು. ೧೯೩೦ ರಲ್ಲಿ ಟಿ.ಎಸ್. ವೆಂಕಣ್ಣಯ್ಯನವರು 'ಬಸವರಾಜದೇವರ ರಗಳೆ'ಯನ್ನು ನಾಲ್ಕು ತಾಡೋಲೆ ಪ್ರತಿಗಳ ಆಧಾರದಿಂದ ಸಂಪಾದಿಸಿದರು. ೧೯೩೧ ರಲ್ಲಿ ಚೆನ್ನಮಲ್ಲಿಕಾರ್ಜುನರು ಕೋಳೂರು ಕೊಡಗೂಸಿನ ರಗಳೆಯನ್ನು, ೧೯೪೨ ರಲ್ಲಿ ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯು ಕೆಲವು ರಗಳೆಗಳನ್ನು, ೧೯೪೩ ರಲ್ಲಿ ಬಿ. ಶಿವಮೂರ್ತಿಶಾಸ್ತ್ರಿಗಳು ವೀರಭದ್ರದೇವರ ರಗಳೆಯನ್ನು ಹೊರ ತಂದರು. ೧೯೪೬ ರಲ್ಲಿ ತೀ.ನಂ. ಶ್ರೀಕಂಠಯ್ಯನವರು 'ನಂಬಿಯಣ್ಣನ ರಗಳೆ'ಯನ್ನು ಐದು ಪ್ರತಿಗಳಿಂದ ಸಂಪಾದಿಸಿದರೂ, ಅದಕ್ಕೆ ಪೀಠಿಕೆಯನ್ನು ಬರೆಯಲಿಲ್ಲ. ೧೯೫೪ರಲ್ಲಿ ಸಿ. ಮಹಾದೇವಪ್ಪ 'ಮನುಚೋಳ ರಗಳೆ'ಯನ್ನು ಸಂಪಾದಿಸಿ ಪ್ರಕಟಿಸಿದರು. ಮಲ್ಲಾಬಾದಿ ವೀರಭದ್ರಪ್ಪ ಮತ್ತು ಮಲ್ಲಾಬಾದಿ ಚೆನ್ನಬಸಮ್ಮ ಅವರು ೧೯೫೭ ರಲ್ಲಿ 'ಮಲುಹಣದೇವ ಚರಿತೆ' ಸಂಪಾದಿಸಿ, ಐವತ್ತು ಪುಟಗಳ ಸುದೀರ್ಘ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದರು. ಅದರಲ್ಲಿ ಹರಿಹರ ನಡೆಸಿದ ದೇಶಪರ್ಯಟನೆ ಎಂಬ, ನಕ್ಷೆ ನೀಡಿದ್ದು[೭] ಕವಿಯು ಕ್ರಿ.ಶ. ೧೧೭೫ ರಿಂದ ೧೨೫೦ ರವರೆಗೆ ಜೀವಿಸಿದ್ದ ಎಂದಿದ್ದಾರೆ. ಕೊನೆಯಲ್ಲಿ ೩೯ ಪದ್ಯಗಳ 'ಮಲ್ಹಣಸ್ತೋತ್ರಂ' ಸಂಸ್ಕೃತದಲ್ಲಿದ್ದು, ಅದರ ತೆಲಗು, ಕನ್ನಡ ಭಾಷಾಂತರಗಳನ್ನೂ

೬. ನೋಡಿ, ಬಸವರಾಜದೇವರ ರಗಳೆ: ಟಿ.ಎಸ್. ವೆಂಕಣ್ಣಯ್ಯ : ದ್ವಿಮು. ೧೯೩೮ : ಪು.xxx.

೭. ಮಲ್ಲಾಬಾದಿಯವರ ನಕ್ಷೆಗೆ ಅಧಿಕೃತ ಆಧಾರವೇನಿಲ್ಲ (ಸಂ).

ನೀಡಿದ್ದಾರೆ. ೧೯೬೨ ರ ನಂತರದಲ್ಲಿ ಬಿಡಿ ರಗಳೆಗಳ ಪ್ರಕಟನೆ ಕಡಿಮೆಯಾಗುತ್ತ, ಮೂರು, ಐದು, ಎಂಟು, ಹತ್ತು......ಹೀಗೆ ಗುಂಪು ರಗಳೆಗಳನ್ನು ವಿದ್ವಾಂಸರು ಪ್ರಕಟಿಸುತ್ತ ಬಂದಿದ್ದಾರೆ. ಅದರಲ್ಲಿ ಮಲ್ಲಾಬಾದಿಯವರು, ಹಳಕಟ್ಟಿಯವರು, ಎಂ.ಎಸ್. ಸುಂಕಾಪುರ, ಎಂ. ಎಸ್. ಲಠ್ಠೆ..... ಮುಂತಾದವರು ಪ್ರಮುಖರು.

ಡಾ. ಎಂ. ಎಂ. ಕಲಬುರ್ಗಿಯವರಿಗಿಂತ ಮುಂಚೆ ರಗಳೆಗಳ ಸಮಗ್ರ ಸಂಪುಟ ಹೊರತರುವ ಪ್ರಯತ್ನಗಳು ನಡೆದಿದ್ದವು. ಹರಿಹರ ಕವಿಯ ರಗಳೆಗಳನ್ನು ಒಂದೊಂದಾಗಿ ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿದ ಫ.ಗು. ಹಳಕಟ್ಟಿ ಅವರು ನಂತರ ಅವುಗಳನ್ನು ಸಮಗ್ರವಾಗಿ ನೀಡಲು ಯತ್ನಿಸಿದರು. ಆದರೆ ಏಕಕಾಲದಲ್ಲಿ ಎಲ್ಲವನ್ನೂ ಮುದ್ರಣ ಮಾಡಿ ಪ್ರಕಟಿಸಲು ಸಾಧ್ಯವಾಗದೆ, ೧೯೩೨ ರಿಂದ ೧೯೪೨ರವರೆಗೆ ಎಂಟು ಭಾಗಗಳಲ್ಲಿ ಹೊರತಂದರು. ಆ ಕೃತಿಗಳ ಸ್ವರೂಪ ಹೀಗಿದೆ:

**೧. ಭಾಗ ಒಂದು :**

ಇದರಲ್ಲಿ ಏಳು ರಗಳೆಗಳಿದ್ದು, ೧೯೩೨ ರಲ್ಲಿ ಕೃತಿ ಪ್ರಕಟವಾಗಿದೆ. ೧. ಪುಷ್ಪಪರಗಳೆ ೨. ಲಿಂಗಾರ್ಚನೆಯ ರಗಳೆ ೩. ತಿರುನೀಲಕಂಠ ಮಹಾತ್ಮೆ ೪. ಕಣ್ಣಪ್ಪನ ಮಹಾತ್ಮೆ ೫. ಆನಾಯನಾರ ಭಕ್ತರ ಮಹಾತ್ಮೆ, ೬. ಚನ್ನಯ್ಯಗಳ ಮಹಾತ್ಮೆ ೭. ಇಳೆಯಾಂಡ ಗುಡಿಮಾರರ ಮಹಾತ್ಮೆ

**೨. ಭಾಗ ಎರಡು :**

ಇದರಲ್ಲಿ ಎರಡು ರಗಳೆಗಳು ಸೇರಿದ್ದು, ೧೯೩೩ ರಲ್ಲಿ ಇದು ಪ್ರಕಟವಾಗಿದೆ. ೧. ಪ್ರಭುದೇವರ ರಗಳೆ ೨. ರೇವಣಸಿದ್ಧೇಶ್ವರ ರಗಳೆ

**೩. ಭಾಗ ಮೂರು :**

ಇಲ್ಲಿಯೂ ಎರಡು ರಗಳೆಗಳಿದ್ದು, ಕೃತಿ ೧೯೩೩ ರಲ್ಲಿ ಪ್ರಕಟವಾಗಿದೆ. ೧. ಶಂಕರ ದಾಸಿಮಯ್ಯನ ರಗಳೆ ೨. ಆದಯ್ಯನ ರಗಳೆ

**೪. ಭಾಗ ನಾಲ್ಕು :**

ಬಹುಶಃ ೧೯೩೪ ರಲ್ಲಿ ಹೊರಬಂದ ಈ ಕೃತಿಯಲ್ಲಿ ಒಂಬತ್ತು ರಗಳೆಗಳನ್ನು ಸಂಪಾದಿಸಿ ಕೊಡಲಾಗಿದೆ. ೧. ಕಾರಿಕಾಲಮ್ಮೆ ೨. ರುದ್ರಪಶುಪತಿ ೩. ತಿರುನಾಳ್ವೊವರ್ ೪. ತಿರುಕುರುಂಪೆ ತೊಂಡರ್ ೫. ಅರಿವಾಳ್ತಾಂಡರ್ ೬. ಓಲಘಾಂಡಮೂರ್ತಿ ೭. ಮುರುಘರ್ ೮. ಅಯ್ಯಡಿಯರ್ ೯. ಮಾನಕಂಜರ ರಗಳೆಗಳು

**೫. ಭಾಗ ಐದು :**

೧೯೩೫ ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಆರು ರಗಳೆಗಳಿವೆ. ೧. ಬಾಣ ೨. ಉದ್ಭಟದೇವ ೩. ಹಳಾಯುಧ ೪. ಸಾಮವೇದಿ ೫. ಮಳೆಯರಾಜ ೬. ಓಹಿಲಯ್ಯರ ರಗಳೆಗಳು.

೬. ಭಾಗ ಆರು :

ಇದು ೧೯೩೭ ರಲ್ಲಿ ಪ್ರಕಟವಾಗಿದೆ; ಇದರಲ್ಲಿ ಆರು ರಗಳೆಗಳಿವೆ. ೧. ಏಕಾಂತರಾಮಿ ತಂದೆಗಳ ರಗಳೆ ೨. ವೈಜಕವ್ವೆ ರಗಳೆ ೩. ಕೆಂಭಾವಿ ಭೋಗಣ್ಣನ ರಗಳೆ ೪. ಕೇಶಿರಾಜ ದಣ್ಣಾಯಕರ ರಗಳೆ ೫. ಕುಂಬರ ಗುಂಡಯ್ಯನ ರಗಳೆ ೬. ಹಾವಿನಹಾಳ ಕಲ್ಲಿದೇವನ ರಗಳೆ.

೭. ಭಾಗ ಏಳು :

೧೯೪೦ ರಲ್ಲಿ ಹೊರಬಂದ ಈ ಕೃತಿಯಲ್ಲಿ ಒಂಬತ್ತು ರಗಳೆಗಳಿವೆ. ೧. ಅತಿಭಕ್ತನ ರಗಳೆ ೨. ಮಲುಹಣನ ರಗಳೆ ೩. ಭೃಂಗೀಶ್ವರನ ರಗಳೆ ೪. ಪ್ರಾರ್ಥನೆಯ ರಗಳೆ ೫. ಹಂಪೆಯ ರಗಳೆ ೬. ಪಂಪಾಕ್ಷೇತ್ರದ ರಗಳೆ ೭. ಸಂಸಾರ ವ್ಯಾಮೋಹ ನಿರಸನ ರಗಳೆ ೮. ಚಂಡೇಶ ಪಿಳ್ಳೆಯ ರಗಳೆ ೯. ಅಮರನೀತಿಯ ರಗಳೆ.

೮. ಭಾಗ ಎಂಟು :

ನಾಲ್ಕು ರಗಳೆಗಳಿರುವ ಈ ಕೃತಿ ೧೯೪೨ ರಲ್ಲಿ ಪ್ರಕಟವಾಗಿದೆ. ೧. ಬಾಹೂರ ಬೊಮ್ಮಯ್ಯನ ರಗಳೆ ೨. ತೆಲಗು ಜೊಮ್ಮಯ್ಯನ ರಗಳೆ ೩. ಶಿವಮಹಿಮಾ ರಗಳೆ ೪. ವೀರಭದ್ರದೇವರ ರಗಳೆ

ಈ ತೆರನಲ್ಲಿ ಫ.ಗು. ಹಳಕಟ್ಟಿಯವರು ನಿರಂತರವಾಗಿ ಹರಿಹರನ ರಗಳೆಗಳನ್ನು ಮೊದಲು ಪತ್ರಿಕೆಯಲ್ಲಿ, ನಂತರ ಪುಸ್ತಕರೂಪದಲ್ಲಿ ಪ್ರಕಟಿಸಿ ಒಟ್ಟು ೪೫ ರಗಳೆ ಹೊರತಂದರು. ಅವರು ಪ್ರತಿಯೊಂದು ಕೃತಿಗೂ ಪರಿಚಯ ಸ್ವರೂಪದ ಕೆಲವು ಮಾತುಗಳನ್ನು ಆರಂಭದಲ್ಲಿ ಬರೆದಿದ್ದರೂ, ವಿಸ್ತಾರವಾದ ಕವಿ, ಕೃತಿ ಪರಿಚಯ ಅಲ್ಲಿ ಬರುವುದಿಲ್ಲ. ಪಠ್ಯಭಾಗದಲ್ಲಿ ಹಸ್ತಪ್ರತಿಗಳ ವಿವರವನ್ನಾಗಲಿ, ಪಾಠಾಂತರವನ್ನಾಗಲಿ ನೀಡಿರುವುದಿಲ್ಲ. ಕೆಲವು ರಗಳೆಗಳಿಗೆ ಅವರು 'ಮಹಾತ್ಮೆ' ಎಂದು ಬಳಸಿದ್ದಾರೆ. ಚನ್ನಯ್ಯಗಳ ಮಹಾತ್ಮ್ಯ, ಸಾಮವೇದಿಗಳ ಮಹಾತ್ಮೆ, ಓಹಿಲಯ್ಯಗಳ 'ಮಹಾತ್ಮೆ' ಎಂದಿದ್ದು, ಇದು 'ರಗಳೆ'ಗೆ ಪರ್ಯಾಯವಾಗಿ ಕೆಲವು ಶೀರ್ಷಿಕೆಗಳಲ್ಲಿ ಕಾಣಿಸಿದೆ. ರಗಳೆಗಳನ್ನು ದ್ವಿಚರಣ ಘಟಕವಾಗಿ ಪರಿಗಣಿಸಿ ೧೦, ೨೦, ೩೦..... ಹೀಗೆ ಸಂಖ್ಯೆಗಳ ಉಲ್ಲೇಖವನ್ನವರು ಮಾಡುವುದಿಲ್ಲ. ಕೆಲವು ಸಲ ಒಂದೊಂದು, ಎರಡೆರಡು ಚರಣ ಲುಪ್ತವಾಗಿರುವುದು, ಆದಿಪ್ರಾಸ ನಿಯತಿ ತಪ್ಪಿರುವುದು ಕೂಡ ಉಂಟು. ಆದರೂ ಉಪಲಬ್ಧ ಮೂರು, ನಾಲ್ಕು ಪ್ರತಿಗಳಿಂದ ಹರಿಹರನ ಇಷ್ಟು ಪ್ರಮಾಣದ ರಗಳೆಗಳನ್ನು ಮೊದಲ ಸಲ ಹೊರತಂದ ಕೀರ್ತಿ ಫ.ಗು.ಹಳಕಟ್ಟಿ ಅವರಿಗೆ ಸಲ್ಲುತ್ತದೆ. ಮುಂದೆ ೧೯೬೮ ರಲ್ಲಿ ಸಮಾಜ ಪುಸ್ತಕಾಲಯ ಧಾರವಾಡ ಇವರು, ಹಳಕಟ್ಟಿಯವರ ಎಂಟೂ ಕೃತಿಗಳನ್ನು ಒಂದೇ ಸಂಪುಟವಾಗಿ ಹೊರತಂದಿದ್ದಾರೆ. ಇದಕ್ಕೆ ಕವಿ ವಿಚಾರ, ದೇಶ, ಮತ, ಕಾಲ ವಿವರ, ರಗಳೆ ಛಂದಸ್ಸು, ವಸ್ತು, ವಿಶೇಷಗಳು ಕುರಿತು ಸುದೀರ್ಘವಾದ ಕವಿ–ಕಾವ್ಯ ಪರಿಚಯವನ್ನು ಪ್ರೊ. ಬಿ.ವಿ. ಮಲ್ಲಾಪುರ ಬರೆದಿದ್ದಾರೆ.[೮]

---

೮. ಹರಿಹರನ ರಗಳೆಗಳು : (ಸಂ) ಫ.ಗು. ಹಳಕಟ್ಟಿ : ೧೯೬೮ : ಪು. ೧–೯೬

ಡಾ ಮಲ್ಲಾಪುರ ಅವರು ಸುಮಾರು ನೂರು ಪುಟಗಳ ಕವಿ–ಕಾವ್ಯ ಪರಿಚಯಕ್ಕಾಗಿ ಹಲವು ಪ್ರಾಚೀನ ಕವಿಗಳ ಕೃತಿಗಳನ್ನು, ಆಧುನಿಕ ವಿಮರ್ಶಕರ, ಸಂಪಾದಕರ ಕೃತಿಗಳನ್ನು ಅವರು ಅವಲೋಕಿಸಿದ್ದಾರೆ. "ಶಿವಶರಣರ ಕಥೆಗಳನ್ನು ಹೇಳುವುದಕ್ಕಾಗಿ, ಅವನು ಹಿಡಿದ ರಗಳೆಯ ಮಾರ್ಗವೂ ಕ್ರಾಂತಿಕಾರಕವಾದುದೇ. ಅದರಿಂದ ಕನ್ನಡ ಸಾಹಿತ್ಯದಲ್ಲಿ ಮುಂದೆ ಹೇಳಿಕೊಳ್ಳುವಂತಹ ಶ್ರೇಷ್ಠ ಕೃತಿಗಳು ರಗಳೆಯ ಛಂದಸ್ಸಿನಲ್ಲಿ ರಚಿತವಾಗದಿದ್ದರೂ, ಕನ್ನಡ ಛಂದದಲ್ಲಿ ಕೃತಿರಚನೆ ಮಾಡುವ ಧೈರ್ಯ ಕನ್ನಡ ಕವಿಗಳಲ್ಲುಂಟಾಯಿತೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು...... ಕವಿಯಾಗಿ ಸಾಹಿತ್ಯ ಕ್ಷೇತ್ರವನ್ನು ಉದ್ಧರಿಸಿದಂತೆ, ತನ್ನ ಕೃತಿಗಳ ಮೂಲಕ ಶಿವಸರ್ವೋತ್ತಮತೆಯನ್ನು ಸ್ಥಾಪಿಸಿ, ಒಂದು ದೃಷ್ಟಿಯಿಂದ ಮತಾಚಾರ್ಯನ ಕೆಲಸವನ್ನೂ ಮಾಡಿದ್ದಾನೆ."[೯] ಎಂದಿದ್ದಾರೆ. ಈ ಕೃತಿಯ ಕೊನೆಯಲ್ಲಿ ಮೇವುಂಡಿ ಮಲ್ಲಾರಿ ಅವರು ರಚಿಸಿದ ಶಬ್ದಕೋಶವಿದೆ; ಅದು ಸಂಪುಟದ ರಗಳೆಗಳನ್ನು ಅರಿಯುವಲ್ಲಿ ಸಹಾಯಕವಾಗಿದೆ. ಡಾ. ಮಲ್ಲಾಪುರ ಮತ್ತು ಮೇವುಂಡಿ ಮಲ್ಲಾರಿಯವರ ಶ್ರಮದಿಂದಾಗಿ ಆ ಕೃತಿಯು ಅರ್ಥಪೂರ್ಣವೂ, ಅಧ್ಯಯನಪೂರ್ಣವೂ ಆಗಿದೆ. ಮುಂದೆ ೧೯೪೨ ರಲ್ಲಿ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯು ಹರಿಹರ ಕವಿಯ ಎಲ್ಲಾ ರಗಳೆಗಳನ್ನು ಸಮಗ್ರ ಸಂಪುಟಗಳನ್ನಾಗಿ ಹೊರತರಲು ದೊಡ್ಡ ಯೋಜನೆಯನ್ನು ರೂಪಿಸಿತ್ತು. ಆದರೆ ಕಾರಣಾಂತರಗಳಿಂದ ಅದು ಕಾರ್ಯರೂಪಕ್ಕೆ ಬರಲಿಲ್ಲ.

೧೯೭೮ ರಲ್ಲಿ ಎಚ್. ದೇವೀರಪ್ಪ ಅವರು ಹರಿಹರನ ರಗಳೆಗಳನ್ನು ಪರಿಶೀಲಿಸಿ ಹರಿಹರ ಕೃತ ರಗಳೆಗಳು, ಹರಿಹರೇತರರ ರಗಳೆಗಳು ಎಂದು ವಿಭಾಗಿಸಿ ಎರಡನ್ನೂ ಬೇರೆ ಬೇರೆ ಕೃತಿಗಳಾಗಿ ಹೊರತಂದುದನ್ನು ಸಮಗ್ರ ರಗಳೆಗಳ ಪ್ರಕಟಣೆಯ ಇನ್ನೊಂದು ಪ್ರಯತ್ನವೆನ್ನಬೇಕು. ಹಸ್ತಪ್ರತಿಯ ಕೆಲವು ಕಟ್ಟುಗಳಲ್ಲಿ ಕಂಡುಬರುವ ೧೨೦ ರಗಳೆಗಳ ಪ್ರಸ್ತಾಪವನ್ನಾಗಲಿ, ಹಿರೇಮಲ್ಲೂರ ಈಶ್ವರನ್ ನಿರ್ಣಯಿಸಿದ ೧೦೬ ರಗಳೆಗಳ ವಿಚಾರವನ್ನಾಗಲಿ ಅವರು ಸಮ್ಮತಿಸುವುದಿಲ್ಲ. "ವಿರೂಪಾಕ್ಷ ಮುದ್ರೆ ಇದ್ದ ಮಾತ್ರಕ್ಕೆ ಆ ರಗಳೆ ಹರಿಹರ ಕೃತವೆಂದು ನಿರ್ಣಯಿಸುವಂತಿಲ್ಲ. ಪುರಾತನರ ರಗಳೆಗಳೆಲ್ಲವನ್ನೂ, ಕಥಾಗರ್ಭದ ಗದ್ಯವನ್ನು ನೆಚ್ಚಿ, ಹರಿಹರಕೃತವೆನ್ನುವಂತೆಯೂ ಇಲ್ಲ. ಆದುದರಿಂದ ಈ ಕವಿ ಯಾವ ಯಾವ ಕೃತಿಗಳನ್ನು ರಚಿಸಿದನೆಂಬುದನ್ನು ಕಂಡು ಹಿಡಿಯಲು ಬೇರೊಂದು ಮಾರ್ಗವನ್ನು ಹಿಡಿಯಬೇಕಾಗುತ್ತದೆ."[೧೦] ಎಂದು ಹೇಳಿ ಅಂತರ್ ಬಾಹ್ಯ ಪ್ರಮಾಣಗಳನ್ನು ಪರಿಶೀಲಿಸಿ ಕೇವಲ ಇಪ್ಪತ್ನಾಲ್ಕು ಮಾತ್ರ ಪುರಾತನರ ರಗಳೆಗಳು ಹರಿಹರಕೃತ ಎಂದು ನಿರ್ಣಯಿಸಿ, ಅವುಗಳನ್ನು ಮಾತ್ರ 'ಶರಣ ಚರಿತ ಮಾನಸಂ'ದಲ್ಲಿ ಸಂಪಾದಿಸಿ ಪೀಠಿಕೆ, ಅನುಬಂಧಗಳೊಂದಿಗೆ ನೀಡಿದ್ದಾರೆ. ಅವರು ಸಂಪಾದಿಸಿದ ಹರಿಹರನ ರಗಳೆಗಳಿವು:

೧. ತಿರುನೀಲಕಂಠರು ೨. ಇಹಪ್ಪಗೆಯಾಂಡರು ೩. ಇಳೆಯಾಂಡ ಗುಡಿಮಾರರು ೪. ಸೇದಿರಾಜರು ೫. ಮೆರೆಮಿಂಡದೇವರು ೬. ಅಮರನೀತಿಗಳು ೭. ಇರಿಭಕ್ತರು ೮. ಏಣಾದಿನಾಥರು ೯. ಕಣ್ಣಪ್ಪದೇವರು ೧೦. ಕೊಂಗುಲಿಯ ಕಲಿಯರು ೧೧. ಮಾನಕಂಜರು ೧೨. ಅರಿವಾಳ್ತಾಂಡರು

---

೯. ಹರಿಹರನ ರಗಳೆಗಳು : (ಸಂ) ಫ.ಗು. ಹಳಕಟ್ಟಿ : ೧೯೭೮ : ಪು. ೯೫.

೧೦. ಶರಣಚರಿತ ಮಾನಸಂ : (ಸಂ) ಎಚ್.ದೇವೀರಪ್ಪ: ಪೀಠಿಕೆ : ೧೯೭೮. ಪು. xvii

೧೩. ಆ ನಾಯನಾರರು ೧೪. ಒಲಘಾಂಡಮೂರ್ತಿಗಳು ೧೫. ನಮಃ ಶಿವಾಯ ಮುರುಘರು ೧೬. ರುದ್ರಪಶುಪತಿಗಳು ೧೭. ತಿರುನಾಳ್ ಪೋವರು ೧೮. ತಿರುಕುರುಪ್ಪೆಯ ತೊಂಡರು ೧೯. ಚಂಡೇಶ ಪಿಳ್ಳೆಗಳು ೨೦. ವಾಗೀಶದೇವರು ೨೧. ಕಾರಿಕಾಲಮ್ಮೆಯರು ೨೨. ಕಲಿಕಾಮದೇವರು ೨೩. ಮಾದಾರ ಚೆನ್ನಯ್ಯಗಳು ೨೪. ನಂಬಿಯಣ್ಣಗಳು. ಇದರೊಂದಿಗೆ ಅವರು ಓಹಿಲ, ಉದ್ಭಟ, ಹಲಾಯುಧ, ಸಾಮವೇದಿ, ಮಳೆಯರಾಜ, ಬಸವರಾಜದೇವರು, ಮಹಾದೇವಿಯಕ್ಕ ಇತ್ಯಾದಿ, ಮೂವತ್ತೇಳು ರಗಳೆಗಳನ್ನೂ ಹರಿಹರಕೃತವೆಂದು ನಿರ್ಣಯಿಸುತ್ತಾರೆ. ಅತಿಭಕ್ತನ ರಗಳೆ, ಕೃತಾಂತ, ಪೊಯ್ಯಡಿ, ಹೇರೂರು ಹೆಂಗೂಸು, ಕೋಳೂರು ಕೊಡಗೂಸು ಇತ್ಯಾದಿ ಐವತ್ತೂರು ರಗಳೆಗಳು ಹರಿಹರನಿಂದ ರಚಿತವಾಗಿಲ್ಲ ಎಂದು ವಿವರಿಸುತ್ತಾರೆ.[೧೧] ತಮಿಳುನಾಡಿನ ಪುರಾತನರ ೨೪ ಮತ್ತು ಇತರ ರಗಳೆಗಳು ಎಂದರೆ ಕನ್ನಡನಾಡಿನ ಮತ್ತು ಸಂಕೀರ್ಣವಾದ ೩೭ ರಗಳೆಗಳು ಹರಿಹರ ಕವಿಯ ರಚನೆಗಳೆಂದು ಅವರು ತೀರ್ಮಾನಿಸುತ್ತಾರೆ. ಒಟ್ಟಿನಲ್ಲಿ ಎಚ್. ದೇವೀರಪ್ಪ ಅವರು ಸಮಗ್ರವಾಗಿ ರಗಳೆಗಳನ್ನು ಹೊರತರುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ದೇವೀರಪ್ಪ ಅವರು ಹರಿಹರನ ಬರಹದ ಶೈಲಿ, ಕಥನಕ್ರಮ, ವಿವರಣಾ ರೀತಿಗಳನ್ನು ಅನುಸರಿಸಿ ಕೆಲವರು ಛಾಯಾ ರಗಳೆಗಳನ್ನು ರಚಿಸಿದ್ದಾರೆಂದು ಬಲವಾಗಿ ಪ್ರತಿಪಾದಿಸುವರು. ಹಾಗಾಗಿ ಹರಿಹರನ ಮೂಲ ರಗಳೆಗಳನ್ನು ಗುರುತಿಸಲು ತಮ್ಮದೇ ತೆರನಲ್ಲಿ ಪ್ರಯತ್ನಿಸಿರುವುದು ಗಮನಾರ್ಹವಾಗಿದೆ.

ಮುಂದೆ ಸಮಗ್ರವಾಗಿ ಮತ್ತು ಗ್ರಂಥಸಂಪಾದನಾಶಾಸ್ತ್ರದ ನಿರ್ದೇಶಕ ತತ್ವಗಳ ಅಡಿಯಲ್ಲಿ ಪುರಾತನರ ರಗಳೆಗಳನ್ನು ದೇವೀರಪ್ಪ ಅವರ ನಂತರದಲ್ಲಿ ಸರಿಯಾಗಿ ಸಂಪಾದಿಸಿಕೊಟ್ಟವರು ಡಾ. ಆರ್.ಸಿ. ಹಿರೇಮಠ ಅವರು. ೧೯೭೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಕನ್ನಡ ಅಧ್ಯಯನ ಪೀಠದ ಕನ್ನಡ ಕಾವ್ಯಮಾಲೆಯಲ್ಲಿ 'ಪುರಾತನರ ರಗಳೆ'ಹೆಸರಲ್ಲಿ ಇದು ಪ್ರಕಟವಾಗಿದೆ. ದೇವೀರಪ್ಪನವರು 'ಶರಣ ಚರಿತ ಮಾನಸಂ'ದಲ್ಲಿ ಹರಿಹರ ಬರೆದ ರಗಳೆಗಳನ್ನು ಗುರುತಿಸುವ ಕ್ರಮವನ್ನು ಇವರು ಗಮನಿಸಿ, ಉಲ್ಲೇಖಿಸಿ ಮೆಚ್ಚಿಕೊಂಡರೂ, ಅವರ ಸಂಖ್ಯಾನಿರ್ಣಯವನ್ನು ಒಪ್ಪುವುದಿಲ್ಲ. ಹಾಗಾಗಿ ತಮ್ಮದೇ ಕಾರಣಗಳನ್ನು ನೀಡಿ ಡಾ. ಹಿರೇಮಠರು ಎರಡು ತೀರ್ಮಾನಗಳಿಗೆ ಬರುತ್ತಾರೆ. ಮೊದಲನೆಯದು ಎಂದರೆ, ಕವಿ 'ಅರವತ್ತೂರು ಪುರಾತನರ ರಗಳೆ'ಗಳನ್ನು ಬರೆದಿದ್ದಾನೆ. ಆದರೆ ಕಾರಣಾಂತರಗಳಿಂದ ಈಗ ಎಲ್ಲವೂ ಲಭ್ಯವಿಲ್ಲ. ಎರಡನೆಯದಾಗಿ 'ಪುರಾತನರ ರಗಳೆ'ಗಳ ನಂತರದಲ್ಲಿ ಕವಿ 'ನೂತನ ಪುರಾತನ ರಗಳೆ'ಗಳನ್ನು ಬರೆದಿದ್ದಾನೆ.[೧೨] ಕೃತಿಗೆ ಬರೆದ ಪ್ರಸ್ತಾವನೆಯಲ್ಲಿ ಕವಿಯ ಜೀವನ ಚರಿತ್ರೆ, ಕಾಲವಿಚಾರ, ಹರಿಹರಕೃತ ರಗಳೆಗಳು, ಹರಿಹರ ಸುರಂಗ ಕವಿ ಕೃತಿಗಳ ತುಲನೆ ಮತ್ತು ಹರಿಹರನ ಶೈಲಿಗಳ ಬಗೆಗೆ ದೀರ್ಘವಾಗಿ ಚರ್ಚಿಸಿದ್ದಾರೆ. ಎರಡು ಅಚ್ಚಿನ ಪ್ರತಿ ಎರಡು ಕಾಗದದ ಪ್ರತಿ, ಮೂರು ತಾಳೆಗರಿ ಪ್ರತಿಗಳಿಂದ ಸಂಪಾದನೆ ಮಾಡಿ ೪೮ ಪುರಾತನರ ರಗಳೆಗಳನ್ನು ಇಲ್ಲಿ ನೀಡಿದ್ದಾರೆ.

---

೧೧. ಶರಣಚರಿತ ಮಾನಸಂ : (ಸಂ) ಎಚ್.ದೇವೀರಪ್ಪ: ಪೀಠಿಕೆ : ೧೯೬೮. ಪು. xxxi

೧೨. ಪುರಾತನರ ರಗಳೆಗಳು : (ಸಂ) ಡಾ. ಆರ್. ಸಿ. ಹಿರೇಮಠ : ೧೯೭೩. ಪ್ರಸ್ತಾವನೆ ಪು.xxii

೧. ತಿರುನೀಲಕಂಠರ ರಗಳೆ ೨. ಇಹಃಪಗೆಯಾಂಡರ ರಗಳೆ ೩. ಇಳೆಯಾಂಡ ಗುಡಿಮಾರರ ರಗಳೆ ೪. ಸೇದಿರಾಜನ ರಗಳೆ ೫. ಮೆರೆಮಿಂಡದೇವರ ರಗಳೆ ೬. ಅಮರನೀತಿಗಳ ರಗಳೆ ೭. ನಂಬಿಯಣ್ಣನ ರಗಳೆ ೮. ಇರಿಭಕ್ತಯ್ಯನ ರಗಳೆ ೯. ಏಣಾದಿನಾಥನ ರಗಳೆ ೧೦. ಕಣ್ಣಪ್ಪನ ರಗಳೆ ೧೧. ಕೊಂಗುಲಿಯ ಕಲಿಯಾರ ರಗಳೆ ೧೨. ಮಾನಕಂಜರ ರಗಳೆ ೧೩. ಅರಿವಾಳ್ತಾಂಡರ ರಗಳೆ ೧೪. ಆನಾಯನಾರರ ರಗಳೆ ೧೫. ಒಲಘಾಂಡಮೂರ್ತಿಗಳ ರಗಳೆ ೧೬. ನಮಃಶಿವಾಯ ಮುರುಘರ ರಗಳೆ ೧೭. ರುದ್ರಪಶುಪತಿಗಳ ರಗಳೆ ೧೮. ತಿರುನಾಳ್ಪೋವರ ರಗಳೆ ೧೯ ತಿರುಕುರುಂಪೆತೊಂಡರ ರಗಳೆ ೨೦ ತಂಡೇಶಪಿಳ್ಳೆಯರ ರಗಳೆ ೨೧. ವಾಗೀಶ್ವರದೇವರ ರಗಳೆ ೨೨. ಕುಲಚ್ಚೆರೆಯರ ರಗಳೆ ೨೩.ಕಾರಿಕಾಲಮ್ಮೆಯರ ರಗಳೆ ೨೪. ಕಲಿಕಾಮದೇವರ ರಗಳೆ ೨೫. ದಂಡೀಶಭಕ್ತರ ರಗಳೆ ೨೬. ಸೋಮಾಸಿಮಾರರ ರಗಳೆ ೨೭. ಚಿರುತೊಣೆಯಾಂಡರ ರಗಳೆ ೨೮. ನರಸಿಂಗಮೊನೆಯರ ರಗಳೆ ೨೯. ಅತಿಭಕ್ತನ ರಗಳೆ ೩೦. ಕಲಿಕಂಪರ ರಗಳೆ ೩೧. ಕಲಿಯನಾಯನಾರರ ರಗಳೆ ೩೨. ಅಯ್ಯಡಿಯರ ರಗಳೆ ೩೩. ಕಣಂಬುಲ್ಲರ ರಗಳೆ ೩೪. ಕಡವೂರ ಕಾರಿಯರ ರಗಳೆ ೩೫. ವಾಹಿಲ್ಯರ ರಗಳೆ ೩೬. ಮೊನೆಯಿಡುವರ ರಗಳೆ ೩೭. ಎಡೆಗೆಳೆಯರ ರಗಳೆ ೩೮. ಪೊಗಲ್ತೊಣೆಯಾಂಡರ ರಗಳೆ ೩೯. ಕೊಲ್ಪುಲಿಯಾಂಡರ ರಗಳೆ ೪೦. ಪೂಶಲಾರ ರಗಳೆ ೪೧. ಪಾಂಡ್ಯ ಮಹಾದೇವಿಯರ ರಗಳೆ ೪೨. ಕಳಚೆಂಗ ಪೆರುಮಾಳೆಯರ ರಗಳೆ ೪೩. ನೇಶನ್ನೈನಾರರ ರಗಳೆ ೪೪. ಕಳಚೆಂಗಚೋಳನ ರಗಳೆ ೪೫. ಗಣನಾಥನ ರಗಳೆ ೪೬. ಸಾಂಖ್ಯ ತೊಂಡರ ರಗಳೆ ೪೭. ಜಡೆಯನಯನಾರು ಯಸ್ಯಜ್ಞಾನಿದೇವಿಯರ ರಗಳೆ ೪೮. ತಿರುನೀಲಕಂಠಪಾಣರ ರಗಳೆ.

ಹರಿಹರನ ರಗಳೆಗಳ ಸಂಖ್ಯಾನಿರ್ಣಯ ತೊಡಕಿನದೆಂದು, ಅವನು ೧೨೦೦ ಕ್ರಿಶ. ದ ಆಚೀಚೆ ಬದುಕಿರಬಹುದೆಂದು ಅವರು ತಿಳಿಸಿದ್ದಾರೆ. ಸಂಪಾದಕರು ಹರಿಹರನ ಸಮಕಾಲೀನ ಮತ್ತು ನಂತರದ ಕವಿಗಳ ಕಾವ್ಯಗಳಿಂದ ಕವಿ, ಕೃತಿ ವಿಚಾರಗಳನ್ನು ವಿವರಿಸಿದ್ದಾರೆ. "ಹರಿಹರನಿಗೆ ಜೀವನವೇ ಒಂದು ಕಾವ್ಯವಾಗಿದೆ. ಲೋಕವೆ ಒಂದು ವಸ್ತುವಾಗಿದೆ. ನಯ, ಕುಸುರು, ಸನ್ನಿವೇಶಕ್ಕೆ ತುಂಬುವ ಜೀವಕಳೆ, ಜೀವನದ ಅನಂತ ಅನುಭವ, ಸೂಕ್ಷ್ಮ ನಿರೀಕ್ಷಣೆ, ಅಭಿವ್ಯಕ್ತಿ, ಉತ್ಸಾಹಗಳಿಂದ ಹರೀಶ್ವರನ ರಗಳೆಗಳು ಶಾಶ್ವತ ಕಾವ್ಯಗಳೆನಿಸಿವೆ".[೧೩] ಎಂದು ಅವರು ಪ್ರಸ್ತಾವನೆಯ ಕೊನೆಗೆ ಅಭಿಪ್ರಾಯ ಪಡುತ್ತಾರೆ.

ಹರಿಹರನ 'ನೂತನಪುರಾತನರ ರಗಳೆಗಳು' ಎಂಬುದನ್ನು ಡಾ. ಆರ್. ಸಿ. ಹಿರೇಮಠರ ಸಂಪುಟದ ಮುಂದುವರೆದ ಭಾಗವೆಂಬಂತೆ ೧೯೭೬ ರಲ್ಲಿ ಡಾ. ಎಂ. ಎಸ್. ಸುಂಕಾಪುರರು ಅದೇ ಮಾದರಿಯಲ್ಲಿ ಹೊರತಂದರು. ಹತ್ತೊಂಬತ್ತು ರಗಳೆಗಳನ್ನು ಸಂಶೋಧಿಸಿ, ಸಂಪಾದಿಸಿ ನೀಡಿರುವುದಾಗಿ ಹೇಳಿದ್ದರೂ, ಯಾವ ಪ್ರತಿಗಳನ್ನು ಆಧರಿಸಿದ್ದು ಎಂಬುದನ್ನು ಪ್ರಸ್ತಾವನೆಯಲ್ಲಿ ಉಲ್ಲೇಖಿಸಿಲ್ಲ. ಅಡಿಟಿಪ್ಪಣಿ, ಪಾಠಾಂತರಗಳನ್ನು ಗಮನಿಸಿದರೆ ಕಾಗದದ, ಮುದ್ರಿತ, ತಾಳೆಗರಿಯ ಆರು ಪ್ರತಿಗಳಿಂದ ಸಂಪಾದಿಸಿದ ಹಾಗಿದೆ. ಇವರು ಸಂಪಾದಿಸಿ ಹೊರತಂದ ರಗಳೆಗಳಿವು;

---

೧೩. ಪುರಾತನರ ರಗಳೆಗಳು : (ಸಂ) ಡಾ. ಆರ್. ಸಿ. ಹಿರೇಮಠ : ೧೯೭೩. ಪ್ರಸ್ತಾವನೆ ಪು.Lxiii

೧. ಪ್ರಭುದೇವರ ರಗಳೆ ೨. ಬಸವೇಶ್ವರದೇವರ ರಗಳೆ ೩. ಮಹಾದೇವಿಯಕ್ಕನ ರಗಳೆ ೪. ರೇವಣಸಿದ್ಧೇಶ್ವರನ ರಗಳೆ ೫. ಕೇಶಿರಾಜ ದಣ್ಣಾಯಕರ ರಗಳೆ ೬. ಕೋಳೂರ ಕೊಡಗೂಸಿನ ರಗಳೆ ೭. ನಿಂಬಿಯಕ್ಕನ ರಗಳೆ ೮. ವೈಜಕವ್ವೆಯ ರಗಳೆ ೯. ಶಂಕರದಾಸಿಮಯ್ಯನ ರಗಳೆ ೧೦. ಹೇರೂರ ಹೆಣ್ಣಿನ ರಗಳೆ ೧೧. ಮಾರುಡುಗೆಯ ನಾಚಿತಂದೆಯ ರಗಳೆ ೧೨. ಆದಯ್ಯನ ರಗಳೆ ೧೩. ಏಕಾಂತರಾಮಿತಂದೆಯ ರಗಳೆ ೧೪. ಕೋವೂರ ಬೊಮ್ಮತಂದೆಯ ರಗಳೆ ೧೫. ತೆಲುಗ ಜೊಮ್ಮಯ್ಯನ ರಗಳೆ ೧೬. ಬಾಹೂರ ಬೊಮ್ಮತಂದೆಯ ರಗಳೆ ೧೭. ಮುಸುಟೆಯ ಚೌಡಯ್ಯನ ರಗಳೆ ೧೮. ಸುರಿಗೆಯ ಚೌಡಯ್ಯನ ರಗಳೆ ೧೯. ಹಾವಿನಹಾಳ ಕಲ್ಲಯ್ಯನ ರಗಳೆ.

ಇದು ಮುಂದುವರಿದು, ಹರಿಹರನ ರಗಳೆಗಳೆಲ್ಲವನ್ನು ಒಂದೆಡೆಗೆ ಸಮಗ್ರವಾಗಿ ತಂದು, ಸಂಪಾದಿಸಿ, ಪ್ರಕಟಿಸಬೇಕು ಎಂಬ ಯೋಜನೆಯ ಭಾಗವೆಂಬಂತೆ ಮೂರನೆಯ ಸಂಪುಟವು 'ಮಹಾಕವಿ ಹಂಪೆಯ ಹರಿಹರದೇವಕೃತ ಶಿವಭಕ್ತಿ ಮಹಿಮಾ ರಗಳೆಗಳು' ಹೆಸರಿನಲ್ಲಿ ಪ್ರಕಟವಾಯಿತು. ೧೯೭೬ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಿಂದ ಇದು ಹೊರ ಬಂದಿದೆ. ಸಂಪಾದಕರಾದ ಡಾ. ಎಂ. ಎಸ್. ಸುಂಕಾಪುರರು ದಕ್ಷಾಧ್ವರ ರಗಳೆಯಿಂದ, ಪ್ರಾರ್ಥನಾ ರಗಳೆಯವರೆಗೆ ಇಪ್ಪತ್ತೆಂಟು ರಗಳೆಗಳನ್ನು ಇದರಲ್ಲಿ ಸಂಯೋಜಿಸಿದ್ದಾರೆ. ಇದರಲ್ಲಿ ಮೊದಲಿನ ಹದಿನಾಲ್ಕು ರಗಳೆಗಳನ್ನು ಶರಣರ ರಗಳೆಗಳು ಎಂದು, ನಂತರದ ಹದಿನಾಲ್ಕು ರಗಳೆಗಳನ್ನು ತಾತ್ವಿಕ ರಗಳೆಗಳು ಎಂದು ಎರಡು ಭಾಗವಾಗಿಸಿದ್ದಾರೆ. ಅವು ಇಂತಿವೆ:

**ಶರಣರ ರಗಳೆಗಳು :**

೧. ದಕ್ಷಾಧ್ವರ ರಗಳೆ ೨. ಭೃಂಗೀಶದೇವರ ರಗಳೆ ೩. ವರಕೃತಾಂತರ ರಗಳೆ ೪. ಓಹಿಲಯ್ಯನ ರಗಳೆ ೫. ಉದ್ಭಟಯ್ಯನ ರಗಳೆ ೬. ಮಲುಹಣನ ರಗಳೆ ೭. ಮಲೆಯರಾಜದೇವರ ರಗಳೆ ೮. ಸಾಮವೇದಿಗಳ ರಗಳೆ ೯. ಹಲಾಯುಧನ ರಗಳೆ ೧೦. ಬಾಣನ ರಗಳೆ ೧೧. ಚನ್ನಯ್ಯನ ರಗಳೆ ೧೨. ಗುಂಡಯ್ಯನ ರಗಳೆ ೧೩. ಭೋಗಣ್ಣನ ರಗಳೆ ೧೪. ಮನುಚೋಳನ ರಗಳೆ

**ತಾತ್ವಿಕ ರಗಳೆಗಳು :**

೧೫. ಬಸವಪವಾಡದ ರಗಳೆ ೧೬. ಸಂಸಾರವ್ಯಾಮೋಹ ನಿರಸನ ರಗಳೆ ೧೭. ಗುಣಸ್ತೋತ್ರದ ರಗಳೆ ೧೮. ವಿಭೂತಿಯ ರಗಳೆ ೧೯. ರುದ್ರಾಕ್ಷಿಯ ರಗಳೆ ೨೦. ಪಂಚಾಕ್ಷರಿಯ ರಗಳೆ ೨೧. ನಮಃಶಿವಾಯ ರಗಳೆ ೨೨. ಹಂಪೆಯ ರಗಳೆ ೨೩. ಜಯ ರಗಳೆ ೨೪. ಪುಷ್ಪರಗಳೆ ೨೫. ಲಿಂಗಾರ್ಚನೆಯ ರಗಳೆ ೨೬. ಪಂಪಾಕ್ಷೇತ್ರದ ರಗಳೆ ೨೭. ಮಹಿಮಾ ರಗಳೆ ೨೮. ಪ್ರಾರ್ಥನಾ ರಗಳೆ. ಶರಣರ ರಗಳೆಗಳಲ್ಲಿ ಕವಿ ಶಿವನ, ಶಿವಭಕ್ತರ ಶಕ್ತಿ ಸಾಮರ್ಥ್ಯಗಳನ್ನು ಮನದುಂಬಿ ಹೊಗಳಿರುವನೆಂದು, ತಾತ್ವಿಕ ರಗಳೆಗಳಲ್ಲಿ ಕವಿಯ ಆತ್ಮನಿವೇದನೆ, ಆತ್ಮ ಸಾಧನೆಗಳು ವ್ಯಕ್ತಗೊಂಡಿವೆ ಎಂದು ಸಂಪಾದಕರು ಗುರುತಿಸುತ್ತಾರೆ. ಸಂಪಾದನೆಯ ಬಗ್ಗೆ ಹೇಳುತ್ತ "ಹರಿಹರದೇವನ ರಗಳೆಗಳ ಕೈಬರಹದ ಪ್ರತಿಗಳು ಸಿಗುವುದೇ ಅಪರೂಪ. ಇದ್ದ ಒಂದೆರಡು ಪ್ರತಿಗಳ ಆಧಾರದಿಂದ ಈ ಕೃತಿಯನ್ನು ಪ್ರಕಟಿಸುವ ಸಾಹಸ ಮಾಡಿದ್ದೇವೆ. ಅಲ್ಲಲ್ಲಿ ಪ್ರತಿಗಳು ತ್ರುಟಿತವಾಗಿದ್ದರಿಂದ ಕೆಲವು

ಸಾಲು ಅಪೂರ್ಣವಾಗಿವೆ. ಕೆಲವು ಕಡೆ ದೋಷಗಳು ಉಳಿದಿವೆ.[೧೪] ಆದರೆ ಮಹತ್ವದ ವಿಚಾರವೆಂದರೆ ಹೆಚ್ಚು ಪ್ರತಿಗಳು ಲಭ್ಯವಾಗದಿದ್ದರೂ ಉಪಲಬ್ಧ ಪ್ರತಿಗಳನ್ನು ಆಧರಿಸಿ, ಇಷ್ಟು ರಗಳೆಗಳನ್ನು ಹೊರತಂದು ನಾಡಿನ ಜನರ ಗಮನ ಸೆಳೆದರು. ಅದೇ ತಾನೇ ರೂಪಗೊಳ್ಳುತ್ತಿದ್ದ ಗ್ರಂಥ ಸಂಪಾದನಾ ಶಾಸ್ತ್ರವನ್ನು ಗಮನಿಸಿ ಅವರ ಕೆಲಸ ಮಾಡಿದರು.

೩

ಡಾ. ಎಂ. ಎಂ. ಕಲಬುರ್ಗಿಯವರು ಸಮಗ್ರ ಹರಿಹರನ ಸಂಪುಟವನ್ನು ಪ್ರಕಟಿಸುವ ಪೂರ್ವದಲ್ಲಿ ಮೇಲೆ ಉಲ್ಲೇಖಿಸಿದ ಕೆಲವು ಪ್ರಯತ್ನಗಳು ನಡೆದಿದ್ದವು. ಹಳಕಟ್ಟಿ ಅವರಿಂದ ೧೯೩೨ ರಿಂದ ಸಮಗ್ರವಾಗಿ ಹೊರತರಲು ಮಾಡಿದ ಪ್ರಯತ್ನಗಳು, ವಿದ್ವಾಂಸರ, ಸಂಪಾದಕರ ಶ್ರಮ ಸಾಹಸಗಳು ೧೯೯೯ ರ ಡಾ. ಎಂ. ಎಂ. ಕಲಬುರ್ಗಿಯವರ ಸಮಗ್ರ ಸಂಪುಟ ಪ್ರಕಟನೆಯೊಂದಿಗೆ ಒಂದು ಹಂತಕ್ಕೆ ನಿಲುಗಡೆ ಪಡೆದಂತಾಗಿವೆ.

ಡಾ. ಹಳಕಟ್ಟಿಯವರು ಕೇವಲ ಹರಿಹರನ ರಗಳೆಗಳು ಎಂದು ಶಿವಾನುಭವ ಪತ್ರಿಕೆಯಲ್ಲಿಯೂ, ನಂತರ ಕೃತಿರೂಪದಲ್ಲಿಯೂ ಹೊರತಂದಿದ್ದರು. ಅದನ್ನು ೧೯೬೮ ರಲ್ಲಿ ಡಾ. ಬಿ.ವ್ಹಿ. ಮಲ್ಲಾಪುರರು ಏಕ ಸಂಪುಟವಾಗಿ ಹೊರತರುವಾಗ ಪುರಾತನರ ರಗಳೆಗಳು ಎಂದು, ನೂತನರ ರಗಳೆಗಳು, ಸಂಕೀರ್ಣ ರಗಳೆಗಳು ಎಂದು ಹೆಸರಿಸಿ, ವಿಂಗಡಿಸಿ ನೀಡಿದರು. ಅದೇ ವರ್ಷ ಹೊರಬಂದ ಎಚ್. ದೇವೀರಪ್ಪನವರ ಸಮಗ್ರ ರಗಳೆಗಳ ಕೃತಿಯ ಮೇಲೆ ಹಂಪೆಯ ಹರಿಹರದೇವರ 'ಶರಣ ಚರಿತ ಮಾನಸಂ' ಹೆಸರಿದೆಯೇ ಹೊರತು ರಗಳೆಗಳು ಎಂದುದಿಲ್ಲ. ಆದರೆ ಪೀಠಿಕೆಯ ವಿವರಣೆಯಲ್ಲಿ ಸಂಪಾದಕರು 'ಶರಣ ಚರಿತ ಮಾನಸಂ'ದಲ್ಲಿ ಹರಿಹರನ ಪುರಾತನರ ರಗಳೆಗಳಿವೆ ಎಂದಿದ್ದಾರೆ. ಎಂದರೆ ಸಂಪಾದಕರು ನೀಡಿದ ಹೆಸರು 'ಶರಣ ಚರಿತ ಮಾನಸಂ', ಹೊರತು ಕವಿ ನೀಡಿದುದಲ್ಲ. ಮುಂದೆ ೧೯೭೩ರಲ್ಲಿಯ ತಮ್ಮ ಸಂಪಾದನೆಗೆ ಡಾ. ಆರ್. ಸಿ. ಹಿರೇಮಠರು 'ಮಹಾಕವಿ ಹಂಪೆಯ ಹರಿಹರದೇವಕೃತ ಪುರಾತನರ ರಗಳೆಗಳು' ಎಂದಿದ್ದಾರೆ. ಡಾ. ಎಂ. ಎಸ್. ಸುಂಕಾಪುರರು ತಮ್ಮ ಸಂಪುಟಕ್ಕೆ 'ಮಹಾಕವಿ ಹಂಪೆಯ ಹರಿಹರದೇವಕೃತ ನೂತನ ಪುರಾತನರ ರಗಳೆಗಳು' ಎಂದು ಇನ್ನೊಂದು ಸಂಪುಟಕ್ಕೆ ಮಹಾಕವಿ 'ಹಂಪೆಯ ಹರಿಹರದೇವಕೃತ ಶಿವಭಕ್ತಿಮಹಿಮಾ ರಗಳೆಗಳು' ಎಂದು ಕರೆದಿದ್ದಾರೆ. ಡಾ. ಎಂ. ಎಂ. ಕಲಬುರ್ಗಿಯವರು ತಮ್ಮ ಸಂಪುಟಕ್ಕೆ ಕೇವಲ 'ಹರಿಹರನ ರಗಳೆಗಳು' ಎಂದು ಹೆಸರಿಸಿ, ಒಳಗೆ ಪರಿವಿಡಿಯಲ್ಲಿ ಕಾಂಡ–೧: ತಮಿಳುನಾಡಿನ ಪುರಾತನರ ರಗಳೆಗಳು, ಕಾಂಡ–೨: ಕನ್ನಡ ನಾಡಿನ ಶರಣರ ರಗಳೆಗಳು, ಕಾಂಡ–೩: ಸಂಕೀರ್ಣ ರಗಳೆಗಳು ಎಂದು ವಿಭಾಗಿಸಿದ್ದಾರೆ. ಇದು ರಗಳೆಯನ್ನು ಕೃತಿಯಾಗಿ ನೀಡುವಾಗ ಆಯಾ ಸಂಪಾದಕರು ಹೆಸರಿಸಿದ, ವಿಭಾಗಿಸಿದ ಕಾಲಕ್ರಮದ ಬದಲಾವಣೆಯ ವಿಚಾರವಾಗಿದೆ.

ಪುರಾತನರ ಇಲ್ಲವೆ ತಮಿಳು ಶಿವಭಕ್ತರ ಕಥಾನಕದ ರಗಳೆಗಳು ಈ ಎಲ್ಲ ಸಂಪಾದಕರಲ್ಲಿ ಏಕಪ್ರಕಾರವಾಗಿರದೆ, ಭಿನ್ನವಾದ ಸಂಖ್ಯೆಯಲ್ಲಿವೆ.

---

೧೪. ಶಿವಭಕ್ತಿ ಮಹಿಮಾ ರಗಳೆಗಳು : (ಸಂ) ಡಾ. ಎಂ. ಎಸ್. ಸುಂಕಾಪುರ : ೧೯೭೬. ಪು.೧೦.

೧. ಡಾ. ಫ.ಗು. ಹಳಕಟ್ಟಿ ಸಂಪಾದನೆ (ಡಾ. ಬಿ.ವ್ಹಿ. ಮಲ್ಲಾಪುರ) ೧೭ ರಗಳೆಗಳು

೨. ಶ್ರೀ ಎಚ್. ದೇವೀರಪ್ಪ ಸಂಪಾದನೆ ೨೪ ರಗಳೆಗಳು

೩. ಡಾ. ಆರ್.ಸಿ. ಹಿರೇಮಠ ಸಂಪಾದನೆ ೪೮ ರಗಳೆಗಳು

೪. ಡಾ. ಎಂ. ಎಂ. ಕಲಬುರ್ಗಿ ಸಂಪಾದನೆ ೬೦ ರಗಳೆಗಳು

ಅದರಂತೆ ನೂತನರ ರಗಳೆಗಳು ಹಳಕಟ್ಟಿಯವರಲ್ಲಿ ೨೦ ಸಂಪಾದಿತವಾಗಿದ್ದರೆ, ಡಾ. ಸುಂಕಾಪುರರಲ್ಲಿ ೧೯, ಡಾ. ಕಲಬುರ್ಗಿಯವರಲ್ಲಿ ೨೨ ಸಂಪಾದನೆಗೊಂಡು ಸಂಕಲಿತವಾಗಿವೆ. ಹಳಕಟ್ಟಿಯವರು ಒಂಬತ್ತು ಸಂಕೀರ್ಣ ರಗಳೆಗಳನ್ನು ಡಾ. ಸುಂಕಾಪುರರು ಇಪ್ಪತ್ತೆಂಟು ರಗಳೆಗಳನ್ನು ಡಾ. ಕಲಬುರ್ಗಿಯವರು ೨೬ ರಗಳೆಗಳನ್ನು ಮೂರನೆಯ ಭಾಗವಾಗಿ ನೀಡಿದ್ದಾರೆ. ಡಾ. ಸುಂಕಾಪುರರು ಮಾತ್ರ ಇವುಗಳನ್ನು 'ಶಿವಭಕ್ತಿಮಹಿಮಾ ರಗಳೆಗಳು' ಎಂದು ಹೆಸರಿಸುವರು.

ಡಾ. ಎಂ. ಎಂ. ಕಲಬುರ್ಗಿಯವರು ತಮಿಳುನಾಡಿನ ಪುರಾತನರ ರಗಳೆಗಳು ವಿಭಾಗದಲ್ಲಿ ಡಾ. ಆರ್.ಸಿ.ಹಿರೇಮಠರು 'ಪುರಾತನರ ರಗಳೆಗಳು' ಕೃತಿಯಲ್ಲಿ ಇರುವುದಕ್ಕಿಂತ ಹನ್ನೆರಡು ರಗಳೆಗಳನ್ನು ಹೆಚ್ಚುವರಿಯಾಗಿ ನೀಡಿದ್ದಾರೆ. ಅವು; ೧. ಪೆರುಮಳಲಿಯ ಕುರುಂಬರ ರಗಳೆ ೨. ಅಪ್ಪೂತಿ ಅಡಿಯರ ರಗಳೆ ೩. ತಿರುನೀಲನಕ್ಕರ ರಗಳೆ ೪. ನಮಿನಂದಿಯರ ರಗಳೆ ೫. ತಿರುಮೂಲ ದೇವರ ರಗಳೆ ೬. ಮೂರ್ಖನಾಯನಾರರ ರಗಳೆ ೭. ಸಿರಿಯಾಳನ ರಗಳೆ ೮. ಚೇರಮನಾಯನಾರರ ರಗಳೆ ೯. ವರಕೃತಾಂತರ ರಗಳೆ ೧೦. ಶಕ್ತಿನಾಯನಾರರ ರಗಳೆ ೧೧. ನಿಡುಮಾರದೇವರ ರಗಳೆ ೧೨. ಚಿರುತೊಣೆಯಾಂಡರ ರಗಳೆ. ಡಾ. ಕಲಬುರ್ಗಿಯವರು 'ಪೆರಿಯ ಪುರಾಣ'ದಲ್ಲಿ ಅರವತ್ತುಮೂರು ಭಕ್ತರ ಕಥಾನಕಗಳಿದ್ದು, ಹರಿಹರ ಕವಿಯೂ ಹಾಗೆ ಬರೆದಿರಬೇಕು ಎನ್ನುವರು. ಅವರು ಅರವತ್ತು ಪುರಾತನರ ರಗಳೆಗಳನ್ನು ನೀಡಿ, ತಿರುಜ್ಞಾನ ಸಂಬಂಧಿಗಳ ರಗಳೆ, ಪುಗಲ್ಚೋಳರ ರಗಳೆಗಳು ಎರಡು ಅಲಭ್ಯ ಎಂದಿದ್ದಾರೆ. ಜಡೆಯನಾಯನಾರ್–ಯಸ್ಯಜ್ಞಾನದೇವಿಯರ ರಗಳೆಯನ್ನು ಎರಡು ರಗಳೆ ಎಂದು ಭಾವಿಸಿದರೆ–ಒಟ್ಟು ೬೩ ಆಗುತ್ತವೆ ಎನ್ನುವರು.

ಈವರೆಗೆ ಸಂಪಾದನೆಗೊಂಡು ಪ್ರಕಟವಾಗಿದ್ದ ಕನ್ನಡ ನಾಡಿನ ಶರಣರ ರಗಳೆಗಳನ್ನು ಡಾ. ಕಲಬುರ್ಗಿಯವರು ಪುನರ್ ಪರಿಶೀಲಿಸಿದ್ದಾರೆ. ಡಾ. ಸುಂಕಾಪುರರ 'ಶಿವಭಕ್ತಿ ಮಹಿಮಾ ರಗಳೆಗಳಲ್ಲಿ' ಸೇರಿದ್ದ ಗುಂಡಯ್ಯನ ರಗಳೆ ಮತ್ತು ಭೋಗಣ್ಣನ ರಗಳೆಗಳನ್ನು ಅವರು ನೂತನರೆಂದು ಕನ್ನಡ ನಾಡಿನ ಶಿವಶರಣರೆಂದು ಗುರುತಿಸಿ ಇಲ್ಲಿ ಅಳವಡಿಸಿದ್ದಾರೆ. ಡಾ. ಸುಂಕಾಪುರ ಮತ್ತು ದೇವೀರಪ್ಪನವರಲ್ಲಿ ಇಲ್ಲದ 'ಅಮ್ಮವ್ವೆಯ ರಗಳೆ'ಯನ್ನೂ ಇದರಲ್ಲಿ ಸೇರಿಸಿದ್ದಾರೆ. ಮುಖ್ಯವಾಗಿ ಇಲ್ಲಿ ರಗಳೆಗಳನ್ನು ಶಿವಶರಣರ ಕಾಲವನ್ನು ಲಕ್ಷಿಸಿ ಅನುಕ್ರಮವಾಗಿ ತಾವೇ ಬೇರೊಂದು ತೆರನಲ್ಲಿ ಹೊಂದಿಸಿಕೊಟ್ಟಿದ್ದಾರೆ. ಉಳಿದವುಗಳನ್ನು ಸಂಕೀರ್ಣ ವಿಭಾಗದಲ್ಲಿ ನೀಡಿದ್ದಾರೆ. ಪಾಠಾಂತರ ಮತ್ತು ಅಡಿಸೂಚನೆಗಳನ್ನು ಕೈಬಿಟ್ಟು, ಸರ್ವಜನರು ಓದಬಲ್ಲಂತೆ ಎಲ್ಲಾ ರಗಳೆಗಳನ್ನು ಅವರು ಮೊದಲನೆಯ ಸಲ ಏಕಕಾಲಕ್ಕೆ ಸಂಪುಟವೊಂದರಲ್ಲಿ ನೀಡಿರುವುದು ವಿಶೇಷ. ಸಮಗ್ರ ಸಂಪುಟವಾಗಿ, ಜನಪ್ರಿಯ ಆವೃತ್ತಿಯಾಗಿ ಇದು ಪ್ರಥಮ ಪ್ರಯತ್ನವಾಗಿದೆ.

ಪ್ರಸ್ತುತ ಡಾ. ಕಲಬುರ್ಗಿಯವರ ಸಂಪುಟವು ಹೆಸರಿಗೆ ತಕ್ಕಂತೆ ಜನಪ್ರಿಯ ಆವೃತ್ತಿಯಾಗಿ ಸಹೃದಯರಿಗೆ ಪ್ರಿಯವಾಗಿದೆ. ತಿರುನಾಳ್ಪೋವ ರಗಳೆ, ವಾಗೀಶ್ವರದೇವರ ರಗಳೆ, ದಂಡೀಶಭಕ್ತರ ರಗಳೆ, ಕೊಲ್ಲುಲಿಯಾಂಡರ ರಗಳೆ, ಜಡೆಯನಾಯನಾರ-ಯಸ್ಯಜ್ಞಾನಿದೇವಿಯರ ರಗಳೆಗಳಲ್ಲಿ ಕೆಲವು ಚರಣಗಳು ಲುಪ್ತವಾಗಿರುವುದು, ಇತರ ಸಂಪಾದನೆಗಳೊಂದಿಗೆ ತೂಗಿನೋಡಿದಾಗ ಮತ್ತು ಕವಿಯ ದ್ವಿಚರಣ ಪ್ರಾಸತತ್ವ ಕಂಡಾಗ ಗಮನಕ್ಕೆ ಬಂದಿತು. ಜೊತೆಗೆ ನಮಿನಂದಿ, ನಂಬಿಯಣ್ಣನ ರಗಳೆಗಳ ಪಂಕ್ತಿ ಸಂಖ್ಯೆ ಕ್ರಮವಾಗಿ ಹತ್ತು ಹತ್ತು ಪಂಕ್ತಿಗಳಿಗೆ ಬರಬೇಕಾದಲ್ಲಿ ತುಸು ವ್ಯತ್ಯಾಸವಾಗಿರುವುದನ್ನು ಗುರುತಿಸಲಾಯಿತು. ಹಳಕಟ್ಟಿ, ದೇವೀರಪ್ಪ, ಆರ್.ಸಿ. ಹಿರೇಮಠ ಸಂಪಾದನೆಗಳಿಂದ ಮತ್ತು ಇತರರು ಸಂಪಾದಿಸಿದ ಬಿಡಿರಗಳೆಗಳ ಕೃತಿಗಳಿಂದ ಇದನ್ನು ಸರಿಪಡಿಸಲಾಗಿದೆ. ಉಳಿದುಕೊಂಡಿದ್ದ ಮುದ್ರಣ ದೋಷಗಳನ್ನು ಕೂಡ ತೆಗೆದುಹಾಕಲಾಗಿದೆ. ಡಾ. ಕಲಬುರ್ಗಿಯವರ ಪ್ರಸ್ತಾವನೆಯನ್ನು, ವಿಭಾಗಕ್ರಮವನ್ನು, ಅನುಕ್ರಮಣಿಕೆಯನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ.

* * *

ಈ ಸಂಪುಟವು 'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ; ಸಂಪುಟ-೨೦, ಕಾವ್ಯ ಸಾಹಿತ್ಯ ಭಾಗ-೨' ಎಂದು ಹೊರಬರುತ್ತಿದೆ. ಡಾ. ಕಲಬುರ್ಗಿಯವರ 'ಹರಿಹರನ ರಗಳೆಗಳು' ಕೃತಿಯನ್ನು ಪ್ರಸ್ತುತ ಯೋಜನೆಯಲ್ಲಿ ಎರಡು ಭಾಗಗಳಲ್ಲಿ ವಿಂಗಡಿಸಿ ಹೊರತರಲಾಗಿದೆ. ಕಾಂಡ-೨ ಮತ್ತು ೩ರಲ್ಲಿಯ ರಗಳೆಗಳನ್ನು ಪ್ರಸ್ತುತ ಸಂಪುಟದಲ್ಲಿ ಸೇರಿಸಲಾಗಿದೆ. ಕಾಂಡ-೧ರಲ್ಲಿಯ ಅರವತ್ತು ರಗಳೆಗಳು ಇದಕ್ಕೂ ಪೂರ್ವದ ಸಂಪುಟದಲ್ಲಿ ಸೇರಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯ ರಲ್ಲಿ ಪ್ರಕಟಿಸಿದ ಡಾ. ಕಲಬುರ್ಗಿ ಅವರ ಸಂಪಾದನೆಯ ಸಮಗ್ರ ಸಂಪುಟವು ಹಿರಿಯ ರಾಯಲ್ ಗಾತ್ರದಲ್ಲಿ ಪ್ರಕಟವಾಗಿದೆ. ಅಲ್ಲಿ ರಗಳೆಗಳ ಪಠ್ಯಭಾಗವು ಪ್ರತಿ ಪುಟದಲ್ಲಿ ಎರಡೆರಡು ಭಾಗ ವಿನ್ಯಾಸದಲ್ಲಿ ಬಂದಿದೆ. ಪ್ರಸ್ತುತ ಯೋಜನೆಯ ಸಂಪುಟಗಳ ಗಾತ್ರ ಭಿನ್ನವಾಗಿದೆ. ಒಂದು ಪುಟದಲ್ಲಿ ಒಂದು ವಿನ್ಯಾಸದಲ್ಲಿ ಪಠ್ಯವು ಆಳವಟ್ಟಿದೆ. ಇದು ಡಾ. ಆರ್.ಸಿ.ಹಿರೇಮಠ, ಡಾ. ಎಂ. ಎಸ್. ಸುಂಕಾಪುರರ ತೆರನಲ್ಲಿ ಬರುತ್ತದೆ. ಹಾಗಾಗಿ ಮೂಲ ಒಂದು ಸಂಪುಟದಲ್ಲಿ ಪಠ್ಯಭಾಗದ ಪುಟವ್ಯಾಪ್ತಿ ವಿಸ್ತಾರವಾಗಿ ಎರಡು ಸಂಪುಟಗಳಲ್ಲಿ ಹೊರಬರುವಂತಾಗಿದೆ.

ಇದರಲ್ಲಿ ಕಾಂಡ ಎರಡರಲ್ಲಿಯ ಇಪ್ಪತ್ತೆರಡು ರಗಳೆಗಳು, ಕಾಂಡ ಮೂರಲ್ಲಿಯ ಇಪ್ಪತ್ತಾರು ರಗಳೆಗಳು ಹೀಗೆ ಒಟ್ಟು ನಾಲ್ವತ್ತೆಂಟು ರಗಳೆಗಳು ಸೇರಿವೆ. ಹರಹರನಂತಹ ಮಹತ್ವದ ಕವಿಯ ರಗಳೆಗಳನ್ನು ಕನ್ನಡ ಖ್ಯಾತನಾಮ ಸಂಶೋಧಕರು, ಸಂಪಾದಕರು ಆಗಿದ್ದ ಡಾ. ಎಂ.ಎಂ. ಕಲಬುರ್ಗಿಯವರು ಪ್ರಕಟಿಸಿದ್ದರಷ್ಟೆ. ಅದನ್ನು ಪ್ರಸ್ತುತ ಯೋಜನೆಗಾಗಿ ನಾನು ಸಂಪಾದಿಸುತ್ತಿರುವುದು ಸಾರ್ಥಕ ಭಾವ ಮೂಡಿಸಿದೆ. ಇದನ್ನು ಸಂಪಾದಿಸುತ್ತಿರುವ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ಮಾಡಿದ ವಿದ್ವಾಂಸರಾದ ಡಾ. ವೀರಣ್ಣ ರಾಜೂರ ಅವರನ್ನು ನೆನೆಯುತ್ತೇನೆ. ಕಾರ್ಯದಲ್ಲಿ ಸಹಾಯ ಸಹಕಾರ ನೀಡಿದ ಬಿ.ಎಲ್.ಡಿ. ಇ. ಸಂಸ್ಥೆಯ ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ನಿರ್ದೇಶಕರಾದ ಡಾ. ಎಂ. ಎಸ್. ಮದಭಾವಿ ಅವರಿಗೂ, ಅವರ ಸಿಬ್ಬಂದಿಯವರಿಗೂ ಕೃತಜ್ಞತೆಗಳು.

❖❖

*

# ಪರಿವಿಡಿ

**ಕಾಂಡ–೨ : ಕನ್ನಡನಾಡಿನ ಶರಣರ ರಗಳೆಗಳು**

## ಕಾಂಡ–೩ : ಸಂಕೀರ್ಣ ರಗಳೆಗಳು



❖❖

ಹಂಪಿ ಉತ್ಸವ-೧೯೯೯ ನೆನಪು

# ಹರಿಹರನ ರಗಳೆಗಳು

ಜನಪ್ರಿಯ ಆವೃತ್ತಿ

ಸಂಪಾದಕ
ಡಾ. ಎಂ. ಎಂ. ಕಲಬುರ್ಗಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
೧೯೯೯

*

# ದೇಸಿಯೊಳ್ ಪುಗುವುದು

ಡಾ. ಎಂ. ಎಂ. ಕಲಬುರ್ಗಿ

ಕುಲಪತಿಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿಯೆನ್ನುವುದು ಸಮಾಜ ಸಮ್ಮತ ಜೀವನ ಪದ್ಧತಿಯಾಗಿದೆ. ಕನ್ನಡಿಗರ ಇಂತಹ ಜೀವನ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕು ಮಾಡಿದೆ. ಹಿಂದಿನದು ಕನ್ನಡ ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲೀಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲೀಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೆ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವುದು; ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರ ವಹಿಸಿ ತುಂಬಿಕೊಳ್ಳುವುದು. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ

ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗ್ರೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರಮಾಧ್ಯಮ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ 'ಪುಸ್ತಕಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಪ್ರಕಟಣೆಯಾಗಿದೆ, ಜನಪ್ರಿಯ ಆವೃತ್ತಿಯಾದ 'ಹರಿಹರನ ರಗಳೆಗಳು'.

ಅರಸರ ಆಸ್ಥಾನದಲ್ಲಿ ಹಳಗನ್ನಡ ಸಾಹಿತ್ಯ ವಿಜೃಂಭಿಸುತ್ತಿರುವಾಗ, ವಿರೂಪಾಕ್ಷನ ದೇವಸ್ಥಾನದಲ್ಲಿ ನಡುಗನ್ನಡ ಸಾಹಿತ್ಯಕ್ಕೆ ಪ್ರಾಣ ತುಂಬಿದವನು ಹರಿಹರ. ಭಕ್ತಿಭಾವ-ನಡುಗನ್ನಡ ಭಾಷೆಗಳ ದಾಂಪತ್ಯದಲ್ಲಿ ಆಕಾರ ಪಡೆದ ಇವನ ದಾರಿಯಲ್ಲಿ ಹೆಜ್ಜೆ ಹಾಕಿದ ರಾಘವಾಂಕ, ಚಾಮರಸ, ಕುಮಾರವ್ಯಾಸ ಮೊದಲಾದವರೆಲ್ಲ ಒಂದಲ್ಲ ಒಂದು ರೀತಿ ಹಂಪೆಗೆ ಸಂಬಂಧಿಸಿದವರು. ಹೀಗಾಗಿ 'ನಡುಗನ್ನಡ ಸಾಹಿತ್ಯ ಚರಿತ್ರೆ'ಯೆಂದರೆ 'ಹಂಪೆ ಪರಿಸರದ ಸಾಹಿತ್ಯ ಚರಿತ್ರೆ'ಯೇ ಆಗಿದೆ. ಈ ಚರಿತ್ರೆಯ ಆದಿಕವಿಯಾದ ಹಂಪೆಯ ಹರಿಹರನ ಸಮಗ್ರ ರಗಳೆಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವುದು ಅದರ ಕರ್ತವ್ಯವೆಂದು ಭಾವಿಸುತ್ತೇನೆ.

❖❖

*

## ಪೀಠಿಕೆ

"ಎನ್ನನರಿಯದ ಚೆಲುವ ಶಬ್ದ ಚೆಲುವೇ? ಗಿರಿಜೆ"

–ಅರಿವಾಳ್ತಾಂಡರ ರಗಳೆ

ಸಾಹಿತ್ಯ ಪ್ರಪಂಚದಲ್ಲಿ ಮಹಾಕವಿಗಳು ವಿರಳ, ಋಷಿಮಹಾಕವಿಗಳು ಅತಿವಿರಳ. ಈ 'ಅತಿವಿರಳ'ರ ಶ್ರೇಣಿಗೆ ಸೇರಿದವನಾಗಿದ್ದಾನೆ, ಹಂಪೆಯ ಹರಿಹರದೇವ.

ವಚನಕಾರರ ದೃಷ್ಟಿಯಲ್ಲಿ ಸಾಹಿತ್ಯ ಎರಡು ವಿಧ. ಒಂದು : ಕಾಯಸಾಹಿತ್ಯ, ಇನ್ನೊಂದು : ಆತ್ಮಸಾಹಿತ್ಯ. ಅವರ ಪ್ರಕಾರ 'ಕಾಯಸಾಹಿತ್ಯ ಎಲ್ಲರಿಗೂ ಉಂಟು, ಆತ್ಮಸಾಹಿತ್ಯ ಅಪೂರ್ವ.' ಇವುಗಳಲ್ಲಿ ಒಂದು, ಎಂಟೂ ಭಾವನೆಗಳನ್ನು ಉದ್ರೇಕಗೊಳಿಸುತ್ತದೆ, ಇನ್ನೊಂದು ಉದ್ರೇಕಗೊಳಿಸುತ್ತಲೇ ಅಂತಿಮವಾಗಿ ಉಪಶಮನಗೊಳಿಸುತ್ತದೆ. ಈ ಉದ್ರೇಕ ಪ್ರಕ್ರಿಯೆಯವ ಮಹಾಕವಿ. ಉದ್ರೇಕ, ಉಪಶಮನ ಪ್ರಕ್ರಿಯೆಯವ ಋಷಿಮಹಾಕವಿ.

ಋಷಿಮಹಾಕವಿಯಾಗಿರುವ ಹರಿಹರ ಯುಗಪ್ರವರ್ತಕ ಕವಿಯೂ ಆಗಿರುವುದು ಒಂದು ವಿಶೇಷ. ಯುಗಪ್ರವರ್ತಕ ಕವಿಯ ಲಕ್ಷಣವೆಂದರೆ ಪರಂಪರೆಯಾಗಿ ಮುಂದುವರಿಯುವ ಯೋಗ್ಯತೆಯುಳ್ಳ ಒಂದು ಹೊಸ ಸಾಹಿತ್ಯಮಾರ್ಗವನ್ನು ಸ್ಥಾಪಿಸುವುದು. ಪಂಪನದು ಹೊಸ ಮಾರ್ಗವೆಂದು ಹೇಳಬಹುದಾದರೂ ಹಾಗೆ ಹೇಳಲು ಅವಶ್ಯವಿರುವ ಆತನ ಪೂರ್ವದ ಸಾಹಿತ್ಯ ನಮ್ಮ ಕೈಗೆ ಉಳಿದುಬಂದಿಲ್ಲ. ಕುಮಾರವ್ಯಾಸ ಮಹಾಕವಿಯಾದರೂ ಯುಗಪ್ರವರ್ತಕ ಕವಿಯಲ್ಲವೆಂಬುದು ಎಲ್ಲರಿಗೂ ಗೊತ್ತು. ಹೀಗಾಗಿ ಹಿಂದುಮುಂದಿನ ಸಾಹಿತ್ಯಿಕ ಪುರಾವೆಗಳೊಂದಿಗೆ ಯುಗಪ್ರವರ್ತಕ ಕವಿಯೆಂದು ಹೇಳಬಹುದಾದ ಪ್ರಾಚೀನ ಕನ್ನಡಕವಿ ಹರಿಹರ ಒಬ್ಬನೇ. ಇದನ್ನು ಗಮನಿಸಿಯೇ 'ಹರಿಹರನ ಉದಿತೋದಿತ ಮಾರ್ಗ'ವೆಂದು ಷಡಕ್ಷರಿ ಕರೆದಿದ್ದು, ಈ ಮಾರ್ಗ ಮತ್ತೆ ತಿರುವು ಪಡೆದುದು ೨೦ನೆಯ ಶತಮಾನದಲ್ಲಿ. ಆದುದರಿಂದ ೭೦೦ ವರ್ಷಗಳ ಈ ಅಖಂಡ ಅವಧಿಯನ್ನು ಆಳಿದುದು ಹರಿಹರನ ಆಶಯವೆಂದೇ ಹೇಳಬೇಕು.

ನವೋದಯ ಸಂದರ್ಭದ ರಮ್ಯವಾದಿ ವಿಮರ್ಶಕರಿಗೆ ಸಹಜವಾಗಿಯೇ ಹರಿಹರ ಚಿತ್ರಿಸಿದ "ಧಾರ್ಮಿಕ ಭಕ್ತಿ" ತೀವ್ರವಾಗಿ ಮನಸೆಳೆಯಿತು. ಆದರೆ ಅವನ ಬರವಣಿಗೆಯ ಇನ್ನೊಂದು ಮುಖವಾದ "ಸಮಾಜೋಧಾರ್ಮಿಕ ಭಕ್ತಿ"ಯನ್ನು ಅವರು ಗಮನಿಸಲೇ ಇಲ್ಲ. ಮುಂದೆ ಬಂದ

ನವ್ಯ, ಬಂಡಾಯ ವಿಮರ್ಶಕರು ವಚನಸಾಹಿತ್ಯಕ್ಕೆ ಒಲವು ತೋರಿದ ಕಾರಣ, ಇವರಿಂದಲೂ ಹರಿಹರ ವಂಚಿತನಾದನು. ಈ ಕಡೆ ವೀರಶೈವರೂ ಶೈವನೆಂಬ ಶಾಶ್ವತ ಹಣೆಪಟ್ಟಿ ಹಚ್ಚಿ, ಅವನನ್ನು ಸಂಶಯದಿಂದಲೇ ನೋಡಿದರು. ಹೀಗೆ ವಿಮರ್ಶಕ ಸಮಾಜ, ವೀರಶೈವ ಸಮಾಜಗಳಿಂದ ವಂಚಿತನಾಗಿರುವ ಈ ಕವಿಗೆ ಇನ್ನು ಮೇಲಾದರೂ ನ್ಯಾಯ ಸಿಗಬೇಕಾಗಿದೆ.

**ಜೀವನಚರಿತ್ರೆ:**

ಹಂಪೆ ಕರ್ನಾಟಕದ ಮಹತ್ವಪೂರ್ಣ ಸಾಂಸ್ಕೃತಿಕ ನೆಲೆಗಳಲ್ಲಿ ಒಂದು. ಮೂಲತಃ ಇದು ಯಾರ ಒಡೆತನಕ್ಕೂ ಒಳಗಾಗದ ದೇವರ ಸಾಮ್ರಾಜ್ಯ. ಪೂರ್ವದಲ್ಲಿ ಕಿನ್ನರೇಶ್ವರ, ಪಶ್ಚಿಮದಲ್ಲಿ ಸೋಮೇಶ್ವರ, ಉತ್ತರದಲ್ಲಿ ವಾಣಿಭದ್ರೇಶ್ವರ, ದಕ್ಷಿಣದಲ್ಲಿ ಜಂಬುಕೇಶ್ವರ ವರೆಗೆ ವಿಸ್ತರಿಸಿದ್ದ ಈ ಸಾಮ್ರಾಜ್ಯದ ಪರ್ಯಾಯನಾಮ ವಿರೂಪಾಕ್ಷ. ಇಲ್ಲಿ ಕಾವ್ಯವನ್ನೇ ಬರೆಯಲಿ, ರಾಜ್ಯವನ್ನೇ ಆಳಲಿ ಅದರ ಅಧಿಕಾರ ವಿರೂಪಾಕ್ಷನದು. ಹೀಗಾಗಿ ತನ್ನ ಹೆಸರನ್ನು ಕೈಬಿಟ್ಟು ವಿರೂಪಾಕ್ಷನ ಹೆಸರಿನಲ್ಲಿ ಹರಿಹರ ರಗಳೆಗಳನ್ನು ಬರೆದ. ತಮ್ಮ ಹೆಸರನ್ನು ಕೈಬಿಟ್ಟು ವಿರೂಪಾಕ್ಷನ ಹೆಸರಿನಲ್ಲಿ ಸಂಗಮ ದೊರೆಗಳು ಸಾಮ್ರಾಜ್ಯವನ್ನಾಳಿದರು. ಇಲ್ಲಿ ಒಬ್ಬನಿಗೆ ವಿರೂಪಾಕ್ಷನೇ ಕವಿ – ನಾನು ಅವನ ಲಿಪಿಕಾರನೆಂಬ ಭಾವ, ಇನ್ನೊಬ್ಬರಿಗೆ ವಿರೂಪಾಕ್ಷನೇ ದೊರೆ – ನಾವು ಅವನ ಪ್ರತಿನಿಧಿಗಳೆಂಬ ಭಾವ ಮುಖ್ಯವಾಗಿದ್ದಿತು. ಹೀಗೆ ಇದು ಇತಿಹಾಸ ಕಾಲಘಟ್ಟದಲ್ಲಿ ಎರಡು ಸಲ "ಮಹತ್ವ" ಪಡೆಯಿತು. ಮೊದಲನೆಯ ಸಲ ೧೩ನೆಯ ಶತಮಾನದಲ್ಲಿ ಹರಿಹರ ರಾಘವಾಂಕರಿಂದ ಸಾಹಿತ್ಯಕ ಕೇಂದ್ರವಾಗಿ, ಎರಡನೆಯ ಸಲ ೧೪-೧೫ನೆಯ ಶತಮಾನಗಳಲ್ಲಿ ವಿಜಯನಗರ ಅರಸರಿಂದ ರಾಜಕೀಯ ಕೇಂದ್ರವಾಗಿ. ಈ ಎರಡೂ ಪ್ರಯೋಗಗಳ ಪ್ರೇರಣೆ ಶ್ರೀ ವಿರೂಪಾಕ್ಷ. ಈ ವಿರೂಪಾಕ್ಷನ ಪರಮಭಕ್ತ ಹರಿಹರದೇವ.

ಹರಿಹರದೇವ ೧೨ನೆಯ ಶತಮಾನದ ಕೊನೆಯಲ್ಲಿ ಬದುಕಿದ್ದ ಏಕಾಂತರಾಮಯ್ಯನನ್ನು ಕುರಿತು ರಗಳೆ ಬರೆದಿರುವುದು, ಹೊಯ್ಸಳರ ಆಸ್ಥಾನದಲ್ಲಿದ್ದೂ ಹಂಪೆಯಲ್ಲಿ ವಿರೂಪಾಕ್ಷನ ತೆರೆಗೆ ಆವರಿಸಿದ್ದ ಉರಿ ಆರಿಸಿದುದು, ಹರಿಹರ ಗ್ರಾಮದ ಹರಿಹರೇಶ್ವರ ದೇವಾಲಯದಲ್ಲಿ ಬ್ರಹ್ಮರಾಕ್ಷಸ ವಾಸವಾಗಿದ್ದ ಅವಧಿಯಲ್ಲಿ ಅರ್ಚನೆ-ಪೂಜೆ ನಿಂತುಹೋಗಿ ದಾನಶಾಸನಗಳು ಹುಟ್ಟದೇ ಇದ್ದುದು, ಹುಲಿಗೆರೆಯ ಪುರಾಣದ ಮಾಯಿದೇವ ಪಂಡಿತನ ಶಿಷ್ಯ ಶಿವರಾತ್ರಿಯ ಮಾಯಿದೇವನು ೧೨೮೫ರಲ್ಲಿ ಶಾಸನ ಬರೆಯಿಸಿದುದು, ಇತ್ಯಾದಿ ಆಧಾರಗಳನ್ನವಲಂಬಿಸಿ ಈತನ ಜೀವಿತಕಾಲವನ್ನು ೧೩ನೆಯ ಶತಮಾನದ ೨ ಮತ್ತು ೩ನೆಯ ಪಾದವೆಂದು ವಿದ್ವಾಂಸರು ನೀಡಿದ ನಿರ್ಣಯ ಒಪ್ಪತಕ್ಕುದಾಗಿದೆ.

ಹರಿಹರನನ್ನು ರೂಪಿಸಿದ್ದು ಹಂಪೆಯೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಈತ ಮೂಲತಃ ಹಂಪೆ ನಿವಾಸಿಯಾಗಿದ್ದು, ಹೊಯ್ಸಳರ ಹಳೆಬೀಡಿನಲ್ಲಿ ಕರಣಿಕನಾಗಿ, ಮರಳಿ ತನ್ನ ಹಂಪೆಗೆ ಬಂದವನೆಂದು ಈವರೆಗೆ ಎಲ್ಲರೂ ಭಾವಿಸಿದ್ದಾರೆ. ಆದರೆ ಹಳೆಬೀಡಿನಿಂದ ಬಂದ ಅವನಿಗೆ ವಿರೂಪಾಕ್ಷ ದೇವಾಲಯದ ಎಡಭಾಗದಲ್ಲಿರುವ ನಾಗನಾಥ ದೇವಾಲಯದ ಪುರೋಭಾಗದಲ್ಲಿ ವಸತಿ ಏರ್ಪಾಡು ಮಾಡಲಾಯಿತೆಂದು ರಾಘವಾಂಕ ಚಾರಿತ್ರ ಹೇಳುವುದರಿಂದ, ಹರಿಹರನಿಗೆ ಹಂಪೆಯಲ್ಲಿ ಮನೆಯಿರಲಿಲ್ಲವಾಗಿ, ಅವನು ಮೂಲತಃ ಹಂಪೆ ನಿವಾಸಿಯಲ್ಲವೆಂದು ಭಾವಿಸಬೇಕಾಗುತ್ತದೆ. ಈ ಅಂಶ ಈತನು ಬೇರೆ ಊರಿನವ, ಬಹುಶಃ ಹಳೆಬೀಡು ಸುತ್ತಲಿನವನಾಗಿದ್ದು,

ದ್ವಾರಸಮುದ್ರದ ರಾಜಧಾನಿ ಪ್ರಸಿದ್ಧಿ ಹಂಪೆಗೆ ವರ್ಗಾವಣೆಯಾಗುತ್ತಲಿದ್ದ ಕಾರಣವಾಗಿ ಮತ್ತು ಪ್ರಸಿದ್ಧ ದೈವತ ವಿರೂಪಾಕ್ಷನ ಸನ್ನಿಧಿ ಕಾರಣವಾಗಿ ಈತ ಹಂಪೆಗೆ ಬಂದಿರಬೇಕು; ಬಳಿಕ ಸ್ಥಳೀಯ ಗುರುಗಳಾದ ಹಂಪೆಯ ಮಾಯಿದೇವರಿಂದ ದೀಕ್ಷೆ ಪಡೆದಿರಬೇಕು. ಈ ಗುರುಗಳ ಹೆಸರಿನ ಹಿಂದೆ ಹಂಪೆ ಎಂಬ ಶಬ್ದ ತಪ್ಪದೇ ಬರುವುದರಿಂದ ಇವರು ಮಾತ್ರ ಮೂಲತಃ ಇಲ್ಲಿಯವರೇ ಆಗಿರಬಹುದು. ಹರಿಹರ ಹಂಪೆಯಲ್ಲಿದ್ದ ಕಾಲದಲ್ಲಿ ರಾಯಗೋಪುರ, ಬಿಷ್ಟಪ್ಪಯ್ಯನ ಗೋಪುರ, ಮುಖ್ಯದೇವಾಲಯಕ್ಕೆ ಹೊಂದಿಕೊಂಡಿರುವ ಕಲ್ಯಾಣ ಮಂಟಪಗಳಿರದೆ ಕೇವಲ ಗರ್ಭಗುಡಿ, ನಂದಿಮಂಟಪಗಳಿಂದ ಕೂಡಿದ ವಿರೂಪಾಕ್ಷ ದೇವಾಲಯವಿದ್ದಿತು. ಈ ಸರಳ ಆವರಣ ಈ ಸಹಜಭಕ್ತನನ್ನು ರೂಪಿಸಿತು.

ಹರಿಹರನ ತಂದೆ ಮಹಾದೇವ, ತಾಯಿ ಶರ್ವಾಣಿ, ಸೋದರಿ ರುದ್ರಾಣಿ. ಈ ರುದ್ರಾಣಿಯ ಮಗ ರಾಘವಾಂಕ. ಒಂದೇ ಊರಿನಲ್ಲಿ, ಒಂದೇ ಕುಟುಂಬದಲ್ಲಿ ಮಾವ ರಗಳೆ ಸಂಪ್ರದಾಯದ ಸಂಸ್ಥಾಪಕ, ಅಳಿಯ ಷಟ್ಪದಿ ಸಂಪ್ರದಾಯದ ಸಂಸ್ಥಾಪಕ. ಇದು ಸಾಹಿತ್ಯಲೋಕದ ಒಂದು ಪವಾಡವೇ ಸರಿ. ಎಲ್ಲರಿಗೂ ಗೊತ್ತಿರುವಂತೆ ಕನಸಿನಲ್ಲಿಯೂ ಅನ್ಯದೇವರನ್ನು ಹೊಗಳದ ವೀರವ್ರತ ಹರಿಹರನದು. ಅವರ ಕೌಟುಂಬಿಕ ಪರಂಪರೆ–ಪರಿಸರಗಳದು ನಿಷ್ಠುರ ಶಿವಭಕ್ತಿ. ಹೀಗಿರುವಾಗ ಇವನಿಗಿರುವ ಹರಿಹರ ಹೆಸರಿನಲ್ಲಿ ವಿಷ್ಣು–ಶಿವ ಸಮನ್ವಯದ ಹರಿ, ಹರ ಪದಗಳು ಸೇರಿಕೊಂಡಿರುವುದರ ಔಚಿತ್ಯವೇನು ? ಎನಿಸುತ್ತದೆ. ಬಹುಶಃ ಇದರ ಮೂಲರೂಪ ಬೇರೆ ಇದ್ದು, ಅನೇಕ ತಲೆಮಾರುಗಳಿಂದಲೂ ಅದು ಆ ಮನೆತನದಲ್ಲಿ ಉಚ್ಚಾರ ವ್ಯತ್ಯಾಸಗೊಳ್ಳುತ್ತ ಬಂದಿರಬೇಕು. ಇಂಥ ಸಂದರ್ಭದಲ್ಲಿ ಅದರ ರೂಪ ಮುಖ್ಯವೆನಿಸುವುದಿಲ್ಲ. ಇದು ಹಿರಿಯರ ಹೆಸರೆಂಬುದು ಮುಖ್ಯವೆನಿಸುತ್ತದೆ. ಈ ಕವಿ ಹುಟ್ಟುವ ಹೊತ್ತಿಗೆ ಅದು ತನ್ನ ಉಚ್ಚಾರ ವ್ಯತ್ಯಾಸಗೊಳಿಸಿಕೊಂಡು "ಹರಿಹರ" ರೂಪತಾಳಿದ್ದು, ಅದನ್ನೇ ಇವನಿಗೆ ಇಟ್ಟರೆಂದು ತೋರುತ್ತದೆ. ಹಾಗಾದರೆ ಈ ಅಂಕಿತನಾಮದ ಮೂಲರೂಪವೇನು ?

ಹರಿಹರನ ಸಮಕಾಲೀನನೂ, ಹಂಪೆ ಪರಿಸರದವನೂ ಆದ ಕುಮಾರರಾಮನ ತಾಯಿಯ ಹೆಸರು ದಾಖಲೆಗಳಲ್ಲಿ ಹರಿಹರದೇವಿ, ಹೆರೆಯಾಳದೇವಿ ರೂಪಗಳಲ್ಲಿ ಸಿಗುತ್ತದೆ. ಇದನ್ನು ನೆನೆದರೆ ಈ ಕವಿಯ ಹೆಸರು ಹೆರೆಯಾಳದೇವ ಇರಬಹುದೇ? ಎನಿಸುತ್ತದೆ. ಇದರ ಪ್ರಾಚೀನ ರೂಪ ಪೆರೆಯಾಳದೇವ. ಇದರ ಅರ್ಥ ಕೋರೆಚಂದ್ರನನ್ನು ಧರಿಸಿರುವ ದೇವ, ಶಿವ. ಪೆರೆಯಾಳದೇವ – ಹೆರೆಯಾಳದೇವ – ಹರಿಯಾಳದೇವ – ಹರಿಹರದೇವ ಎಂಬ ರೀತಿಯಲ್ಲಿ ಇದು ವ್ಯತ್ಯಾಸವಾಗುತ್ತ ಬಂದಿದೆಯೆಂದೂ ಈ ಕವಿಯ ಹೆಸರಿನ ಮೂಲರೂಪ ಪೆರೆಯಾಳದೇವನೆಂದೂ ಹೇಳಬೇಕಾಗುತ್ತದೆ. ಪ್ರಾಚೀನ ಶಾಸನಗಳಲ್ಲಿ ಇಂಥ ಪ್ರಯೋಗಗಳು ಸಾಮಾನ್ಯವೆಂದು ಬೇರೆ ಹೇಳಬೇಕಿಲ್ಲ. ಕಾವ್ಯಗಳಲ್ಲಿ ಇವನನ್ನು ಹರಿಪ, ಹರಿಗ, ಹರಿಯ, ಹರಿಯಣ್ಣ, ಹರಿಯಣ್ಣಪಂಡಿತ, ಹರಿಹರಶಿವಾಚಾರ್ಯ ಎಂದು ಮುಂತಾಗಿ ಕರೆಯಲಾಗಿದೆ.

ಹರಿಹರನ ಮತ ಒಂದಿಷ್ಟು ಚರ್ಚೆಯ ವಿಷಯವಾಗಿದೆ. ರಗಳೆಗಳಲ್ಲಿ ಪ್ರಸ್ತಾಪಿತವಾದ ಸ್ಥಾವರ ಲಿಂಗಪೂಜೆ, ಕಾಯಸಹಿತ ಕೈಲಾಸ ಪ್ರಯಾಣ, ವಿವಾಹ ಸಂದರ್ಭದ ವರ್ಣನೆ, ಜಾತಕರ್ಮಾದಿ ಪ್ರಸ್ತಾಪಗಳು ಅವನ ಅವೀರಶೈವತ್ವವನ್ನು ಸೂಚಿಸುತ್ತವೆ. ಅಲ್ಲಮನು ಶಾಪಹತನಾಗಿ ಮರ್ತ್ಯದಲ್ಲಿ ಅವತರಿಸಿದನೆಂಬುದನ್ನು ಶೂನ್ಯಸಂಪಾದನೆಕಾರರು ಖಂಡಿಸುವಲ್ಲಿ ಪರ್ಯಾಯವಾಗಿ ಹರಿಹರನನ್ನೇ

ಗಮನದಲ್ಲಿಟ್ಟುಕೊಂಡಂತಿದೆ. "ಕೋಣನ ಕೋಡಿನ ಮೇಲೆ......." ಎಂಬ ಅಲ್ಲಮನ ವಚನದ ಅರ್ಥವನ್ನು ಕುರಿತು ನಡೆದ ವಾದದಲ್ಲಿ ವೈಷ್ಣವ ಮುಕುಂದಪೆದ್ದಿ "ಹಂಪೆಯ ಹರಿಯಣ್ಣಪಂಡಿತರಗಳೆ"ಯ ಮೂಲಕ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು, ಆಗ ವೀರಶೈವ ಜಕ್ಕಣನು "ಶೈವಮತದ ಕವಿಗಳಿಗೆ ವೀರಶೈವ ಪ್ರಮಥರ ಮಹತ್ವ ತಿಳಿಯದು" ಎನ್ನುತ್ತ, ಹರಿಹರನು ವೀರಶೈವನಲ್ಲ ಶೈವನೆಂದು ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿ ವ್ಯಕ್ತವಾಗಿಯೇ ಹೇಳಿದ್ದಾನೆ. ಮುಂದುವರಿದು ಇಲ್ಲಿಯೇ "ಶುದ್ಧಶೈವ ಭಕ್ತಿನಿಷ್ಠೆಯಿಂದ ಹಂಪೆಯ ವಿರೂಪಾಕ್ಷನನ್ನು" ಹರಿಹರ ಅರ್ಚಿಸುತ್ತಿದ್ದನೆಂದು ಹೇಳಿರುವುದರಿಂದ, ಈತನು ಮೂಲತಃ ಶೈವರಲ್ಲಿ ಶುದ್ಧಶೈವನಾಗಿರಬೇಕು. ೧೩ನೆಯ ಶತಮಾನದ ಹೊತ್ತಿಗೆ ಶುದ್ಧಶೈವವು ವೀರಶೈವವಾಗುವುದರ ಜೊತೆ, ಇವನೂ ಸಹಜವಾಗಿಯೇ ವೀರಶೈವನಾಗಿರಬೇಕು.

ಹರಿಹರನ ಜೀವನ ಘಟನೆಗಳು ನಮಗೆ ಗೊತ್ತಾಗುವುದು ಹೊಯ್ಸಳರ ಆಸ್ಥಾನದಿಂದ ಆತನು ಬಿಡುಗಡೆ ಪಡೆಯುವಲ್ಲಿಂದ. ಈ ಆಸ್ಥಾನದಲ್ಲಿಯೇ ಇವನಿಗೆ ಮಂತ್ರಿ ಕೆರೆಯ ಪದ್ಮರಸನ ಸಂಪರ್ಕ ಸಾಧ್ಯವಾಗಿರಬೇಕು. ದೂರದ ಹಂಪೆಯ ವಿರೂಪಾಕ್ಷನ ತೆರೆಗೆ ಆವರಿಸಿದ್ದ ಉರಿಯನ್ನು ಆರಿಸುವ ಮೂಲಕ ಮಹಿಮಾಪುರಷನೆಂದು ಪ್ರಖ್ಯಾತನಾದ ಇವನನ್ನು ರಾಜನು ಗೌರವದಿಂದ ಬೀಳ್ಕೊಟ್ಟನೆಂದು ಅನೇಕ ಕಾವ್ಯಗಳು ಹೇಳುತ್ತವೆ. ಆದರೆ "ಪೋಗೆನೆ ಪೋಪ ಬಾರೆಲವೋ ಬಾರೆನೆ...." ಇವೇ ಮೊದಲಾದ ಕಟುಪದ್ಯಗಳಲ್ಲಿಯ ಪ್ರತಿಭಟನೆಯ ಉಗ್ರತೆಯು, ಈತನು ಕೊಂಡಗುಳಿ ಕೇಶಿರಾಜನಂತೆ ಆಸ್ಥಾನದಲ್ಲಿ ರಾಜನೊಂದಿಗೆ ಘರ್ಷಣೆಗಿಳಿದು, ಹೊರಬಂದಿರುವ ಸಾಧ್ಯತೆಯನ್ನು ಸೂಚಿಸುತ್ತದೆ. ಮುಂದೆ ಹರಿಹರನನ್ನು ವೈಭವೀಕರಿಸಲೆಂದು ಭಾರತೀಯ ಮನಸ್ಸು ತೆರೆಯ ಬೆಂಕಿಯನ್ನು ಆರಿಸಿದ, ಗೌರವ ಪಡೆದ ಘಟನೆಗಳನ್ನು ಸೃಷ್ಟಿಸಿರಬಹುದು. ಎರಡನೆಯದಾಗಿ ಈ ಹೊತ್ತಿಗಾಗಲೇ ಹಂಪೆ ಹೊಯ್ಸಳರಿಗೆ ಪರ್ಯಾಯ ರಾಜಧಾನಿಯೆಂಬ ಪಾತ್ರ ವಹಿಸುತ್ತಿದ್ದಿತು. ಹರಿಹರನು ಹಳೆಬೀಡಿನಿಂದ ಹಂಪೆಗೆ ಬರಲು ಇದೂ ಕಾರಣವಾಗಿರಬೇಕು. ಹಳೆಬೀಡಿನಿಂದ ಹೊರಟ ಈ ಕವಿ, ದಾರಿಯಲ್ಲಿ ಹರಿಹರ ಗ್ರಾಮದ ಹರಿಹರೇಶ್ವರ ದೇವಸ್ಥಾನದಲ್ಲಿ ೧೨ ವರ್ಷಗಳಿಂದಲೂ ಪೂಜೆ ಸ್ಥಗಿತಗೊಳ್ಳಲು ಕಾರಣವಾಗಿದ್ದ ಭೂತವನ್ನು ಅಲ್ಲಿಂದ ಓಡಿಸಿ, ಮತ್ತೆ ಪೂಜೆ ಆರಂಭವಾಗುವಂತೆ ಮಾಡಿದನೆಂಬ ಕಥೆಯಿದೆ. ಹರಿಹರನ ಮುಂದಿನ ಜೀವನ ಇಂಥ ಹತ್ತಾರು ದಂತಕಥೆಗಳನ್ನು ಸೃಷ್ಟಿಸಿಕೊಂಡಿದೆ. ಬಹುಶಃ ಇವನಿಗೆ ಸಂಬಂಧಿಸಿದಷ್ಟು ದಂತಕಥೆಗಳು ಕನ್ನಡದ ಯಾವ ಕವಿಯ ಹೆಸರಿನಲ್ಲಿಯೂ ಕೇಳಿಬರುವುದಿಲ್ಲವೆಂದೇ ಹೇಳಬಹುದು.

**ಹೊಸಯುಗದ ಹರಿಕಾರ:**

"ಮೌಲ್ಯ"ವನ್ನು ವೈಯಕ್ತಿಕವಾಗಿ ಬದುಕುವವರು, ಸಾಹಿತ್ಯಿಕವಾಗಿ ಬರೆಯುವವರು, ಸಾಮಾಜಿಕವಾಗಿ ಕಾರ್ಯಗತಗೊಳಿಸುವವರು ವಿರಳ. ಕನ್ನಡದಲ್ಲಿ ಬಸವಣ್ಣ ಮಾತ್ರ ಈ ಮೂರು ಅಂಶಗಳ ಸಮನ್ವಯನೆನಿಸಿದ್ದಾನೆ. ಹರಿಹರ ಮೌಲ್ಯವನ್ನು ವೈಯಕ್ತಿಕವಾಗಿ ಬದುಕಿ, ಸಾಹಿತ್ಯಿಕವಾಗಿ ಬರೆಯುವ ಎರಡು ಅಂಶಗಳ ಸಮನ್ವಯವೆನಿಸುತ್ತಾನೆ. ಮೌಲ್ಯವನ್ನು ಸಾಹಿತಿಯಾಗಿ ಮಾತ್ರ ಬರೆಯಬಲ್ಲ ಪಂಪ, ವ್ಯಕ್ತಿಯಾಗಿ ಬದುಕುವುದಿಲ್ಲ, ಸಾಮಾಜಿಕವಾಗಿ ಕಾರ್ಯಗತಗೊಳಿಸುವುದಿಲ್ಲ. ಹೀಗಾಗಿ "ಮೌಲ್ಯ" ವಿಷಯದಲ್ಲಿ ಹರಿಹರ ಬಸವಣ್ಣನಿಗಿಂತ ಕೆಳಗೆ, ಪಂಪನಿಗಿಂತ ಮೇಲೆ

ನಿಲ್ಲುತ್ತಾನೆ. ಇಂಥ ವ್ಯಕ್ತಿತ್ವದ ಹರಿಹರ ಸಾಹಿತ್ಯಿಕವಾಗಿ ಮಾಡಿದ ಪರಿವರ್ತನೆಗಳಿಗೆ ಹಲವು ಆಯಾಮಗಳಿವೆ: ಕಾವ್ಯದ ವಸ್ತು, ಭಾಷೆ, ಶೈಲಿ, ತಂತ್ರ, ಶಿಲ್ಪ ಮತ್ತು ಕಥಾವಿನ್ಯಾಸ.

ಕರ್ನಾಟಕದಲ್ಲಿ ಶಿವ-ವಿಷ್ಣು ಮೊದಲಾದ ಪುರಾಣದೇವತೆಗಳು, ರಾಮ-ಕೃಷ್ಣ ಮೊದಲಾದ ಪುರಾಣವ್ಯಕ್ತಿಗಳು ಕಾವ್ಯದ ವಸ್ತುವಾಗುತ್ತಿದ್ದುದು ತಪ್ಪಿ, ಚಾಲುಕ್ಯ ಅರಿಕೇಸರಿ, ರಾಷ್ಟ್ರಕೂಟ ಕೃಷ್ಣರಂಥ ರಾಜರು ವಸ್ತುವಾಗುವ ಸ್ಥಿತಿಗೆ ಸಾಹಿತ್ಯ ಇಳಿದಿದ್ದಿತು. ಅಂದರೆ ಕಾವ್ಯ ವ್ಯಕ್ತಿಸ್ತುತಿಯ ಉಪಕರಣವಾಗಿದ್ದಿತು. ಸಾಹಿತ್ಯಕ್ಕೆ ಅಂಟಿಕೊಂಡಿದ್ದ ಈ ಸೂತಕವನ್ನು ಧೈರ್ಯದಿಂದ ಪ್ರತಿಭಟಿಸಿದವ, ಕಾರ್ಯಗತಗೊಳಿಸಿದವ ಹರಿಹರ. ರಾಜಪ್ರಧಾನ ಕಾಲದಲ್ಲಿ, ಅದರಲ್ಲಿಯೂ ರಾಜನ ಆಸ್ಥಾನದಲ್ಲಿದ್ದು, ವ್ಯಕ್ತಿಮಟ್ಟದಲ್ಲಿ ಅದನ್ನು ತ್ಯಜಿಸಿದುದು - ಸಾಹಿತ್ಯಮಟ್ಟದಲ್ಲಿ ಅದನ್ನು ಬರೆದುದು - ಪಾತ್ರಗಳ ಮೂಲಕ ಅದನ್ನು ಪ್ರತಿಭಟಿಸಿದುದು ಹರಿಹರನ ಸ್ವತಂತ್ರ ಪ್ರಜ್ಞೆಗೆ ಸಾಕ್ಷಿಯೆನಿಸಿದೆ. ರಾಜಸ್ತುತಿಗೆ ದುರ್ಬಳಕೆಯಾಗುತ್ತಲಿದ್ದ ಸಾಹಿತ್ಯವನ್ನು ಶಿವಲೀಲೆಗೆ, ಶಿವಶರಣಚರಿತ್ರೆಗೆ ಈತ ತಿರುಗಿಸಿದ್ದು ದೊಡ್ಡ ಸಾಧನೆಯೆಂದೇ ಹೇಳಬೇಕು.

ಹರಿಹರ ಬರುವ ಹೊತ್ತಿಗೆ ವೈಷ್ಣವರು, ಅದಕ್ಕಿಂತ ಜೈನರು ತಮ್ಮ ತಮ್ಮ ಬರೆವಣಿಗೆಯಲ್ಲಿ ಶಿವನ ಪರಿಕಲ್ಪನೆಯನ್ನು ವಿಗ್ರಹಭಂಜನ ರೀತಿಯಲ್ಲಿ ವಿರೂಪಗೊಳಿಸಿದ್ದರು. ವಿಷ್ಣು, ವಿಷ್ಣುವಿನ ಅವತಾರವಾದ ರಾಜರ ಪ್ರತಿಷ್ಠೆ ಬೆಳೆದು ಕಾವ್ಯದಲ್ಲಿ ಶಿವ - ಶಿವಭಕ್ತರು ಎರಡನೆಯ ದರ್ಜೆಗೆ ತಳ್ಳಲ್ಪಟ್ಟಿದ್ದರು. ಸಾಹಿತ್ಯದಲ್ಲಿ ಈ ವಿಗ್ರಹವನ್ನು ಮತ್ತೆ ಕಟ್ಟಿಕೊಡಲು, ಕಳೆದುಕೊಂಡಿದ್ದ ಸ್ಥಾನವನ್ನು ಅದಕ್ಕೆ ಮತ್ತೆ ದೊರಕಿಸಿಕೊಡಲು ಮಾಡಿದ ಪ್ರಥಮಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಅವನು ಈ ಸಾಧನೆಗಾಗಿ ಸಾಧನ ಮಾಡಿಕೊಂಡುದು ಶಿವಭಕ್ತರನ್ನು. ತಮಿಳುನಾಡಿನಲ್ಲಿ ಜರುಗಿದ ಪುರಾತನರ ಚಳುವಳಿಯನ್ನು ಶೇಕ್ಕಿಳಾರ್ ಮೊದಲಾದವರು ಸಾಹಿತ್ಯದಲ್ಲಿ ದಾಖಲುಗೊಳಿಸಿದ್ದರು. ಇದನ್ನು ಕನ್ನಡಕ್ಕೆ ತರುವುದರ ಜೊತೆಗೆ, ಕರ್ನಾಟಕದಲ್ಲಿ ಜರುಗಿದ ಬಸವಾದಿಗಳ ಚಳುವಳಿಯನ್ನು ಸಾಹಿತ್ಯದಲ್ಲಿ ಪ್ರಥಮಸಲ ದಾಖಲುಗೊಳಿಸಿದವ ಹರಿಹರ. ಈ ಅರ್ಥದಲ್ಲಿ ಅವನು ಕರ್ನಾಟಕದ ಶೇಕ್ಕಿಳಾರ್.

ಶರಣರ ಚರಿತ್ರೆಯನ್ನು ದಾಖಲುಗೊಳಿಸುವದರ ಸಲುವಾಗಿ ಕೈಲಾಸದಿಂದ ಒಬ್ಬ ಗಣನನ್ನು ಹರಿಹರನ ರೂಪದಲ್ಲಿ ಶಿವನು ಮರ್ತ್ಯಕ್ಕೆ ಕಳಿಸಿದನೆಂಬ ಹೇಳಿಕೆ ಅಸ್ತಿತ್ವದಲ್ಲಿದೆ. ಇದನ್ನು ನೋಡಿದರೆ, ಕವಿ ಹರಿಹರನ ಜನನದ ಉದ್ದೇಶ ಶರಣರ ರಗಳೆ ಬರೆಯುವುದೇ ಆಗಿದೆಯೆಂದು ಸಮಕಾಲೀನರು ಭಾವಿಸಿದ್ದರೆನಿಸುತ್ತದೆ. ಹರಿಹರ ಈ ಕಾರ್ಯವನ್ನು ಪೂರೈಸದೆ ಹೋಗಿದ್ದರೆ ಕರ್ನಾಟಕದ ಬಹುಮುಖ್ಯ ಘಟ್ಟದ ವಿವರಗಳನ್ನೇ ಕಳೆದುಕೊಳ್ಳುತ್ತಿದ್ದೆವು. ಇದು ಮುಂದೆ ಸಿದ್ಧರಾಮ ಚಾರಿತ್ರ, ಶಿವತತ್ತ್ವ ಚಿಂತಾಮಣಿ ಇತ್ಯಾದಿ ಚಾರಿತ್ರಿಕ ಕಾವ್ಯ ಮತ್ತು ಕೋಶಗಳ ಒಂದು ಪರಂಪರೆಯನ್ನೇ ಹುಟ್ಟುಹಾಕಿತೆಂಬುದು, ಆಮೇಲಿನ ವೀರಶೈವ ಕವಿಗಳಿಗೆ ಆಕರಸಾಮಗ್ರಿಯಾಗಿ ಪರಿಣಮಿಸಿತೆಂಬುದು ಅಗತ್ಯ ಗಮನಿಸಬಹುದಾದ ಸಂಗತಿಯಾಗಿದೆ.

ಹೀಗೆ ಪುರಾತನರ, ಶರಣರ ಚರಿತ್ರೆಗಳನ್ನು ಕಾವ್ಯಗೊಳಿಸುವುದೆಂದರೆ ಅವರ ಮೌಲ್ಯಗಳನ್ನು ಕಾವ್ಯಗೊಳಿಸುವುದಾಗಿದೆ. ಈ ಕೆಲಸವನ್ನು ಸಾಧಿಸುವುದಕ್ಕಾಗಿ ಹರಿಹರ ವಚನಮೌಲ್ಯಗಳಾದ ವರ್ಗಭೇದ, ವರ್ಣಭೇದ, ಲಿಂಗಭೇದ ನಿರಾಕರಣೆಗಳಿಗೆ ತನ್ನ ಕೃತಿಗಳನ್ನು ನೆಲೆಯಾಗಿಸಿದನು. ವೈದಿಕರ ಈ ಭೇದಮೌಲ್ಯಗಳನ್ನು ಕೆಡಹುವ ರೀತಿ, ಶರಣರ ಅಭೇದಮೌಲ್ಯಗಳನ್ನು ಕಟ್ಟುವ ಬಗೆ ರಗಳೆಗಳಲ್ಲಿ ಅನನ್ಯ ರೀತಿಯಲ್ಲಿ ಮೂಡಿದೆ. ಸಾಲದುದಕ್ಕೆ ಬಸವರಾಜದೇವರ ರಗಳೆಯಲ್ಲಿ

ಬರುವ ಗೋವುಗಳ ಅಪಹರಣವನ್ನು ಯುದ್ಧಕ್ಕೆ ಬದಲು, ಕರುಗಳನ್ನು ಬಿಡಿಸುವ ಮೂಲಕ ಪ್ರತಿಕ್ರಿಯಿಸಿದುದು ವೈದಿಕ ಮೌಲ್ಯದ ನಿರಾಕರಣೆಯೇ ಆಗಿದೆ.

ಕಾವ್ಯಭಾಷೆಗೆ ಸಂಬಂಧಿಸಿದಂತೆಯೂ ಹರಿಹರನ ಕೊಡುಗೆ ಗಣ್ಯವಾದುದು. ಕೇಶಿರಾಜಾದಿಗಳು ರಳ-ಕುಳ-ಕ್ಷಳ ಪ್ರಯೋಗ ಮುನ್ನಿನಂತೆಯೇ ನಿರ್ದಿಷ್ಟವಾಗಿ ಮುನ್ನಡೆಯಬೇಕೆಂದು ವಾದಿಸುವಾಗ, ಅವನ ಸಮಕಾಲೀನನಾದ ಹರಿಹರ ಒಬ್ಬ ವಾಸ್ತವ ವೈಯಾಕರಣಿಯ ರೀತಿಯಲ್ಲಿ ನಿಂತು, ಆ ಧೋರಣೆಯನ್ನು ನಿರಾಕರಿಸಿದುದು ತುಂಬ ಸಕಾಲಿಕ, ಆರೋಗ್ಯಪೂರ್ಣ ವಿಚಾರವೆನಿಸಿದೆ. ಹೀಗೆ ಒಂದು ಕಡೆ ಕಾವ್ಯದಲ್ಲಿ ಮಾರ್ಗಭಾಷೆಯನ್ನು ನಿರಾಕರಿಸುತ್ತ, ಇನ್ನೊಂದು ಕಡೆ ಭಾಷಿಕ "ವಾಸ್ತವಸತ್ಯ"ವನ್ನು ಸ್ಥಾಪಿಸಿದ ಹರಿಹರನ ರೀತಿ ತುಂಬ ಶ್ಲಾಘನೀಯವೆನಿಸಿದೆ. ಈ ಸಂದರ್ಭದಲ್ಲಿ ಅವನು ಮಾಡಿದ ಇನ್ನೊಂದು ಉಪಕಾರವೆಂದರೆ ಎಲೆಮಿಡುಕು, ಲೆಂಕ, ವೇಳೆವಾಳಿ, ತಲೆಗೊಳ್ಳಿ, ಸಂಬಳಿಗೋಲು, ಕಟ್ಟುಂಗೂಳು, ಕೊಲ್ಲಾರ, ಬೂವ ಇವೇ ಮೊದಲಾದ ಬಳಕೆ ತಪ್ಪುತ್ತಲಿದ್ದ ಸಾವಿರ ಸಾವಿರ ಕನ್ನಡ ಪದಗಳನ್ನು ಮತ್ತೆ ಸಾಹಿತ್ಯದಲ್ಲಿ ಆಹ್ವಾನಿಸಿಕೊಂಡುದು. ಇದರಿಂದ "ಕನ್ನಡ ಪ್ರಧಾನ, ಸಂಸ್ಕೃತ ಪೂರಕ"ವೆಂಬ ಹೊಸ ಭಾಷಿಕ ಹದ ಕನ್ನಡದಲ್ಲಿ ಸಿದ್ಧವಾಯಿತು.

ಈ ಭಾಷಾಪ್ರಯೋಗ ಕನ್ನಡದಲ್ಲಿ ಹೊಸಶೈಲಿಗೆ ಹಾದಿಮಾಡಿಕೊಟ್ಟಿತು. ಆಡುಭಾಷೆಯಾಗಿದ್ದ ಕನ್ನಡ, ಬಹಳ ದಿನಗಳ ಹಿಂದೆಯೇ ತನ್ನ ಜಾಯಮಾನಕ್ಕೆ ಒಗ್ಗುವ ಲಿಖಿತ ಭಾಷೆಯನ್ನು ರೂಪಿಸಿಕೊಂಡು, ಸಣ್ಣ ಪ್ರಮಾಣದಲ್ಲಿಯಾದರೂ "ದೇಶೀ" ಕಾವ್ಯಶೈಲಿಯನ್ನು ಹುಟ್ಟುಹಾಕಿ, ಅದನ್ನು ಮುಂದುವರಿಸಿದ್ದಿತು. ಆಗ ಪ್ರೌಢ ಸಂಸ್ಕೃತಭಾಷೆಯ ಸಂಪರ್ಕ ಒದಗಿ "ಮಾರ್ಗ" ಕಾವ್ಯಶೈಲಿಯೊಂದು ಜೊತೆಜೊತೆಗೆ ಬೆಳೆದು ಬಂದಿತು. ಕಾಲ ಗತಿಸಿದಂತೆ ಸಂಸ್ಕೃತದ ಪ್ರವೇಶ ಅತಿರೇಕವನ್ನು ಮುಟ್ಟಿ, ಕನ್ನಡದ ಸೋಪಜ್ಞತೆ ಅಪಾಯದ ಸ್ಥಿತಿಯನ್ನು ತಲುಪಿದಾಗ ಕನ್ನಡಿಗರು "ಮಾರ್ಗ"ದ ವಿರುದ್ಧ "ದೇಶೀ" ಚಳುವಳಿಯನ್ನು ಕೈಗೆತ್ತಿಕೊಂಡರು. ಇದು ಎರಡು ಶೈಲಿಗಳ ಸಂಘರ್ಷ. ಈಗ ರಾಜಾಸ್ಥಾನದ ಕವಿರಾಜ ಮಾರ್ಗಕಾರ ಸಹಜವಾಗಿಯೇ ಕನ್ನಡಪ್ರಧಾನ ಹಳೆಯ ಶೈಲಿಗಿಂತ, ಸಂಸ್ಕೃತಮಿಶ್ರ ಹೊಸ ಶೈಲಿಯ ಪರವಾಗಿ ಮಾತನಾಡಿದ. ಮಹಾಕವಿ ಪಂಪ "ದೇಶಿ-ಮಾರ್ಗ"ಗಳ ಸಮನ್ವಯವನ್ನು ಬೆಂಬಲಿಸಿದನಾದರೂ, ಮುಂದೆ ಬಂದ ಕವಿಗಳ ಕೈಯಲ್ಲಿ ಕನ್ನಡ ವಿರಳ, ಸಂಸ್ಕೃತ ವಿಪುಲರೂಪದ ಕಾವ್ಯಶೈಲಿಯದೆ ಮೇಲುಗೈಯಾಯಿತು. ಹೀಗೆ ಹೊರಗಿನ ಸಂಸ್ಕೃತವು ಒಳಗಿನ ಕನ್ನಡದ ಮೇಲೆ ಸವಾರಿ ಮಾಡುತ್ತಲಿರುವಾಗ, ನಯಸೇನ ಆಂಡಯ್ಯನಂಥವರು ಇದನ್ನು ತಡೆಗಟ್ಟಲು ಮಾಡಿದ ಪ್ರಯತ್ನ ವ್ಯಕ್ತಿಮಟ್ಟದಲ್ಲಿ ಉಳಿಯಿತೇ ಹೊರತು, ಒಂದು ವ್ಯಾಪಕ ಪರಂಪರೆಯಾಗಿ ಮುಂದುವರಿಯಲಿಲ್ಲ. ಭಾಷಾಸತ್ಯವೆಂಬುದು ಅಭಿಮಾನದ ನೆಲೆಗಿಂತ ವಾಸ್ತವ ನೆಲೆಯಲ್ಲಿ ಕೃತಾರ್ಥವಾಗುವುದೆಂಬುದನ್ನು ಅರ್ಥಮಾಡಿಕೊಂಡ ಹರಿಹರನು, ನಯಸೇನ-ಆಂಡಯ್ಯ ಸೋತ ನೆಲೆಯಲ್ಲಿಯೇ ಗೆದ್ದ. ಆಂಧ್ರಪ್ರದೇಶದಲ್ಲಿ ನನ್ನಯಾದಿ ಬ್ರಾಹ್ಮಣರಿಂದ ಕಟ್ಟಲ್ಪಟ್ಟ ಸಂಸ್ಕೃತಪ್ರಧಾನ ಕಾವ್ಯಶೈಲಿಯ ಕೋಟೆ ಪಾಲ್ಕುರಿಕೆ ಸೋಮೇಶ್ವರಾದಿ ಶೈವರಿಂದ ಕೆಡವಲ್ಪಟ್ಟು, ದೇಶೀಪ್ರಧಾನ ಕಾವ್ಯಶೈಲಿಯ ಪರಂಪರೆ ಅಲ್ಲಿ ಕಣ್ಣು ತೆರೆಯಿತು. ಅದೇ ರೀತಿ ಕರ್ನಾಟಕದಲ್ಲಿ ಪಂಪಾದಿ ಜೈನಕವಿಗಳಿಂದ ಕಟ್ಟಲ್ಪಟ್ಟ ಸಂಸ್ಕೃತಪ್ರಧಾನ ಕಾವ್ಯಶೈಲಿಯ ಕೋಟೆ ಹರಿಹರಾದಿ ಶೈವರಿಂದ ಕೆಡವಲ್ಪಟ್ಟು, ದೇಶೀಪ್ರಧಾನ ಕಾವ್ಯಶೈಲಿ ಪರಂಪರೆಯು ಇಲ್ಲಿ ಕಣ್ಣು ತೆರೆದುದು ಆಶ್ಚರ್ಯಕರವೆನ್ನಬಹುದಾದ ಹೋಲಿಕೆಯಾಗಿದೆ. ಅಂದರೆ ಎರಡೂ ಪ್ರಾಂತಗಳಲ್ಲಿ ದ್ರಾವಿಡಭಾಷೆಗಳು ಆಕ್ರಮಣಕ್ಕೆ ತುತ್ತಾದಾಗ ಶೈವರೇ ಸಿಡಿದೆದ್ದುದು,

ಮೂಲೆಗುಂಪಾಗುತ್ತಲಿದ್ದ ಸ್ವದೇಶೀ ಪರಂಪರೆಯನ್ನು ತುಂಬು ಉತ್ಸಾಹದಿಂದ ಅವರೇ ಮತ್ತೆ ವೇದಿಕೆಯ ಮೇಲೆ ನಿಲ್ಲಿಸಿದುದು, ಅಗತ್ಯ ಗಮನಿಸಬೇಕಾದ ಅಂಶವಾಗಿದೆ.

ಹರಿಹರ ಹಂಪೆಯ ಕವಿ. ಸಂಗೀತ-ಸಾಹಿತ್ಯ ಕ್ಷೇತ್ರಗಳಲ್ಲಿ ದೇಶಿಗೆ ವಿಪತ್ತು ಸಂಭವಿಸಿದ ಸಂದರ್ಭಗಳಲ್ಲಿ ಇಲ್ಲಿಯ ಪ್ರಬುದ್ಧರು ಉದ್ದಕ್ಕೂ ಸಿಡಿದೆದ್ದು, ಮತ್ತೆ ಅದನ್ನು ಮೆರೆದುದು ಚಾರಿತ್ರಿಕ ಸತ್ಯವೆನಿಸಿದೆ. ಸಂಗೀತಕ್ಷೇತ್ರದಲ್ಲಿ ಮಾರ್ಗ ಅತಿಕ್ರಮಿಸಿದಾಗ, ವ್ಯಾಪಕ ಅಭ್ಯಾಸಮಾಡಿ, ದೇಶೀ ಸಂಗೀತವನ್ನು ಕುರಿತ "ಬೃಹದ್ದೇಶೀ" ಕೃತಿ ರಚಿಸಿದ ಮತಂಗ ಬಹುಶಃ ಹಂಪೆಯ ಮತಂಗಪರ್ವತ ನಿವಾಸಿ. ಮುಂದೆ ಸಾಹಿತ್ಯಕ್ಷೇತ್ರದಲ್ಲಿ ಮಾರ್ಗ ಒತ್ತಿಬಂದಾಗ ಸಮರ ಸಾರುತ್ತ ದೇಶಿಯನ್ನು ಎತ್ತಿನಿಲ್ಲಿಸಿ, ಅದನ್ನು ಪರಂಪರೆಯಾಗಿಸಿದ ಹರಿಹರದೇವ ಹಂಪೆಯ ನಿವಾಸಿ. ಬಳಿಕ ಪದ್ಯಸಾಹಿತ್ಯದಲ್ಲಿ ಛಂದೋಲಯವೇ ಎದ್ದು ಕೇಳಿಸಲು ಆರಂಭಿಸಿದಾಗ, ಅದಕ್ಕೆ ಕರ್ನಾಟಕ ಸಂಗೀತಲಯದ ಸ್ಪರ್ಶ ಕೊಟ್ಟ ಹರಿದಾಸರು ಹಂಪೆಯ ನಿವಾಸಿಗಳು. ಹೀಗೆ ಉದ್ದಕ್ಕೂ ದೇಶಿಯನ್ನು ರಕ್ಷಿಸಲು ಇಲ್ಲಿಯ ಜನ ಪ್ರಯೋಗ ರೂಪದ ಇಲ್ಲವೆ ಚಳುವಳಿ ರೂಪದ ಚಟುವಟಿಕೆಯಲ್ಲಿ ತೊಡಗಿರುವುದು ವಿಶೇಷ ಸಂಗತಿಯಾಗಿದೆ. ಇದೇ ಕಾಲಕ್ಕೆ ದೇಶೀ ಸೃಷ್ಟಿಯಾದ ವಚನಸಾಹಿತ್ಯ ನಾಶವಾಗಲಿರುವಾಗ, ಅದನ್ನು ಸಂಗ್ರಹ-ಸಂಕಲನ - ಸಂಪಾದನ ರೂಪದಲ್ಲಿ ಸಂರಕ್ಷಿಸಿ, "ಸಂಯೋಜನ ಸಾಹಿತ್ಯ" ಸೃಷ್ಟಿಗೆ ಶ್ರೀಕಾರ ಹಾಕಿದ, ರಕ್ಷಿಸಿದ ನೂರೊಂದು ವಿರಕ್ತರು ಹಂಪೆ ನಿವಾಸಿಗಳು. ಹೀಗೆ ಹಂಪೆಯ ಮಣ್ಣಿಗೂ ದೇಶೀ ಪ್ರಜ್ಞೆಗೂ ಒಂದು ಸಂಬಂಧವಿದೆ. ಹರಿಹರದೇವ ಈ ಸಂಬಂಧದ ಒಂದು ಮುಖ್ಯಪ್ರತಿಭೆ.

"ಕರಿಯಂಜುವುದು ಅಂಕುಶಕಯ್ಯಾ" ಎಂಬಂತೆ ಶರಣರು ದೇಶೀರಚನೆಯಾದ ವಚನವೆಂಬ ಸಣ್ಣ ಅಂಕುಶದಿಂದ, ಮಾರ್ಗರಚನೆಯಾದ ಚಂಪೂವೆಂಬ ದೊಡ್ಡ ಮದಕರಿಯನ್ನು ಅಂಜಿಸಿದರು. ಕರಿ ಘನ ಅಂಕುಶ ಕಿರಿದೆನ್ನಬಹುದೇ? ಎಂಬ ಸತ್ಯವನ್ನು ಅಭಿವ್ಯಕ್ತಿಯಲ್ಲಿಯೂ ತೋರಿಸಿಕೊಟ್ಟರು. ಆದುದರಿಂದ ಒಂದು ಅರ್ಥದಲ್ಲಿ ದೇಶೀ ಸಾಹಿತ್ಯವನ್ನು ಕನ್ನಡದಲ್ಲಿ ಸ್ಥಾಪಿಸಿದ ಯುಗಪ್ರವರ್ತಕ ಹರಿಹರನಲ್ಲ, ವಚನಕಾರರೆಂದು ಹೇಳಬಹುದಾದರೂ, ವಚನಕಾರರು ಪ್ರಜ್ಞಾಪೂರ್ವಕವಾಗಿ, ಕಾವ್ಯಬರೆಯಲು ಹೊರಟವರಲ್ಲ; ಕಾವ್ಯಸಂಪ್ರದಾಯ ಸ್ಥಾಪಿಸುವುದೂ ಅವರ ಉದ್ದೇಶವಾಗಿರಲಿಲ್ಲ. ಶರಣರು ಬರೆದುದು ಸಮಾಜ ಸುಧಾರಣೆಗಾಗಿ, ಈ ಬರವಣಿಗೆ ಆಕಾರ ಪಡೆದುದು ಸಾಹಿತ್ಯವಾಗಿ. ಹರಿಹರನ ಧೋರಣೆ ಇದರಿಂದ ಒಂದಿಷ್ಟು ಭಿನ್ನವಾಗಿದೆ. ಅವನು ಶರಣನಾಗಿ ಬರೆದವನಲ್ಲ, ಶರಣಕವಿಯಾಗಿ ಬರೆದವ. ಹೀಗಾಗಿ ಶುದ್ಧ ಸಾಹಿತ್ಯ ದೃಷ್ಟಿಯಿಂದ ಶರಣರಿಗಿಂತ ಹರಿಹರದೇವನನ್ನೇ ನಾವು ಯುಗಪ್ರವರ್ತಕನೆನ್ನಬೇಕಾಗುತ್ತದೆ. ಮುಂದೆ ಬಂದ ರಾಘವಾಂಕಾದಿಗಳು ಒಪ್ಪಿಕೊಂಡು ವಿಸ್ತರಿಸಿದುದು, ಮುನ್ನಡೆಸಿದುದು ಶರಣರ ಮಾರ್ಗವನ್ನಲ್ಲ, ಹರಿಹರನ ಮಾರ್ಗವನ್ನು ಎಂಬುದು ಇಲ್ಲಿ ನೆನೆಯಬೇಕಾದ ಸಂಗತಿಯಾಗಿದೆ. ಹೀಗಿದ್ದೂ ಹರಿಹರ ವಚನಕಾರರ ಆಶಯವನ್ನು, ಕೆಲವೊಮ್ಮೆ ಶೈಲಿ ವಿನ್ಯಾಸವನ್ನು ಕಾವ್ಯಪ್ರಜ್ಞೆಯಿಂದ ಮುನ್ನಡೆಸಿದನೆಂಬುದನ್ನು ಮರೆಯುವಂತಿಲ್ಲ.

ಹೀಗೆ ಕಾವ್ಯವಸ್ತು, ಕಾವ್ಯಭಾಷೆ ಮತ್ತು ಕಾವ್ಯಶೈಲಿಗಳಲ್ಲದೆ, ಕಾವ್ಯತಂತ್ರದ ವಿಷಯವಾಗಿಯೂ ಹರಿಹರ ತುಳಿದುದು ಹೊಚ್ಚಹೊಸ ಹಾದಿಯನ್ನು. ಕಾವ್ಯ ಒಂದು ಕಟ್ಟಡ. ಅದರ ರಚನೆ ಒಂದು ತಂತ್ರ. ಈವರೆಗೆ ಬೆಳೆದು ಬಂದಿದ್ದ ಚಂಪೂ, ವಚನ ತಂತ್ರಗಳಿಗೆ ಭಿನ್ನವಾದ 'ರಗಳೆತಂತ್ರ'ವನ್ನು ಕವಿ ಹರಿಹರ ತನ್ನ ದೇಶೀ ಪರಂಪರೆಯಲ್ಲಿಯೇ ಹುಡುಕಿದ. ಜನಸಮುದಾಯದಲ್ಲಿ ಹುಟ್ಟಿ,

ಅವರಲ್ಲಿ ಜೀವಂತವಾಗಿದ್ದ, ಪಂಪಾದಿಗಳಲ್ಲಿ "ಛಂದೋಪ್ರಕಾರ"ವಾಗಿದ್ದ ರಗಳೆ, ಹರಿಹರನ ಕೈಯಲ್ಲಿ "ಸಾಹಿತ್ಯ ಪ್ರಕಾರ"ವಾಗಿ ಮೈಮುರಿದು ಎದ್ದಿತು. ಲಲಿತ, ಮಂದಾನಿಲ, ಉತ್ಸಾಹ, ದ್ವಿಗುಣ ಉತ್ಸಾಹದ ಛಂದೋಚರಣಗಳನ್ನು ಸಿದ್ಧಪಡಿಸಿ, ಈ ಚೌಕಟ್ಟುಗಳಲ್ಲಿ ೫, ೪, ೩, ಮಾತ್ರೆಯ ಗಣಗಳ ಎಲ್ಲ ಸಾಧ್ಯತೆಗಳನ್ನು ಹದಗೊಳಿಸಿದ ರೀತಿ ವಿಶಿಷ್ಟವೆನಿಸಿದೆ. ಇದರಿಂದ ಸಂಭವಿಸಬಹುದಾಗಿದ್ದ ಗಣವಿನ್ಯಾಸ, ಭಾಷಾವಿನ್ಯಾಸಗಳ ಏಕತಾನತೆಯನ್ನೂ ಮುರಿದು ವೈವಿಧ್ಯಶೋಭೆಯನ್ನು ಸೃಷ್ಟಿಸಿದ. ರಗಳೆಯೆಂಬುದು ದ್ವಿಪದಿಗಳ ಶ್ರೇಣಿ. ಪ್ರತಿಯೊಂದು ದ್ವಿಪದಿ ಆದಿಪ್ರಾಸದಿಂದ ಆರಂಭವಾಗಿ ಅಂತ್ಯದಲ್ಲಿ ಒಂದೇ ಬಗೆಯ ಅಕ್ಷರಕ್ಕೆ ವಾಕ್ಯವಾಗಿ ನಿಂತುಬಿಡುತ್ತಿದ್ದರೂ, ಕೆಲವೊಮ್ಮೆ ಅದು ಎರಡನೆಯ ಸಾಲಿಗೂ ಮುಂದುವರಿಯುವ ಪ್ರಯೋಗವನ್ನು ತೋರಿಸಿಕೊಟ್ಟನು. ಸಾಲದುದಕ್ಕೆ ಮಧ್ಯಪ್ರಾಸವಿಟ್ಟು ಚರಣವನ್ನು ತುಂಡುಮಾಡುವ ದಾರಿ ತೋರಿದನು. ಒಟ್ಟಾರೆ ರಗಳೆಯೆನ್ನುವುದು ಕಟ್ಟಿ ಮುಗಿಸಿದ ಕೃತಿಯಲ್ಲ, ಎಲ್ಲಿ ಬೇಕೆಂದರಲ್ಲಿ ಹೊಸ ಚರಣಗಳನ್ನು ಸೇರಿಸಿ, ರೈಲು ಬೋಗಿಗಳಂತೆ ಬೆಳೆಸಬಹುದಾದ ಮುಕ್ತತೆ ಅದರ ಗುಣವಾಗಿದೆ. ಈ ಗುಣದಿಂದಾಗಿಯೇ ಹರಿಹರನ ರಗಳೆ ೨೦ನೆಯ ಶತಮಾನದಲ್ಲಿ ಸರಳರಗಳೆಯಾಗಿ, ಮಹಾಛಂದಸ್ಸಾಗಿ ಮೈಮುರಿಯುತ್ತ ಬಂದಿತು. ಅಂದರೆ ಚಂಪೂ, ಷಟ್ಪದಿ ಮೊದಲಾದ ಸಾಹಿತ್ಯಪ್ರಕಾರಗಳು ಒಂದು ಕಾಲಘಟ್ಟದಲ್ಲಿ ನಿಂತುಕೊಂಡು ಬಿಟ್ಟರೂ ವಚನದಂತೆ ರಗಳೆ ಸಾಹಿತ್ಯಕ್ಷೇತ್ರದಲ್ಲಿ ಇಂದಿಗೂ ದುಡಿಯುತ್ತಿರುವುದಕ್ಕೆ ಅದರ ಮುಕ್ತರಚನೆಯೇ ಕಾರಣವಾಗಿದೆ.

ಈ ಅಭಿವ್ಯಕ್ತಿ ತಂತ್ರದಂತೆ, ರಗಳೆಯ ಕೃತಿಶಿಲ್ಪದಲ್ಲಿಯೂ ಒಂದು ಕ್ರಮವನ್ನು ಹರಿಹರ ಪಾಲಿಸಿದ. ಆದಿ ಮತ್ತು ಅಂತ್ಯಗಳಲ್ಲಿ ತಪ್ಪದೇ 'ವಿರೂಪಾಕ್ಷ' ಮುದ್ರಿಕೆಯ ಕಂದವಿರಲೇಬೇಕು. ಮಧ್ಯದಲ್ಲಿ ಒಂದು ಸ್ಥಲ ರಗಳೆ ಇಲ್ಲವೆ ಹಲವು ಸ್ಥಲಗಳ ರಗಳೆ, ಕೆಲವೆಡೆ ಒಂದು ಸ್ಥಲ ರಗಳೆ, ಒಂದು ಸ್ಥಲ ಗದ್ಯ–ಈ ಮಿಶ್ರಣವನ್ನು ರೂಢಿಸಿದನು. ಬಹುಶಃ ರಗಳೆಗೆ ಮೂಲ ದಂಡಕ. ೫ ಮಾತ್ರೆಗಳ ಅಸ್ಪಷ್ಟ ಗದ್ಯ ನಡಿಗೆ ದಂಡಕದ ಲಕ್ಷಣ. ಇದನ್ನು ಇನ್ನೂ ಸ್ಪಷ್ಟಲಯಕ್ಕೆ ಅಳವಡಿಸಿ ರಗಳೆಯನ್ನು, ಇನ್ನು ಅಸ್ಪಷ್ಟಲಯಕ್ಕೆ ಅಳವಡಿಸಿ ಗದ್ಯವನ್ನು ಸೃಷ್ಟಿಸಿಕೊಂಡನು. ಇದರಿಂದ ಇವನ ರಗಳೆ ಮತ್ತು ಗದ್ಯಗಳ ಅಂತರ ಕಡಿಮೆಯಾಗಿ, ಓದುಗನಿಗೆ ಗದ್ಯದಿಂದ ರಗಳೆಗೆ ರಗಳೆಯಿಂದ ಗದ್ಯಕ್ಕೆ ಬಂದರೆ ಅಭಾಸವೆನಿಸುವುದಿಲ್ಲವೆಂದೇ ಹೇಳಬೇಕು. ಹೀಗೆ ರಗಳೆಯನ್ನು ಸಾಧನ ಮಾಡಿಕೊಂಡು ಅದರ ಎಲ್ಲ ಸಾಧ್ಯತೆಗಳನ್ನು ಸೂರೆಮಾಡಿದ ಕಾರಣ, ಅದನ್ನು ಯಾರೂ ಮುಂದುವರಿಸಲಿಲ್ಲವಾಗಿ, "ರಗಳೆಗೆ ಹರಿಹರನೇ ಆದಿ, ಹರಿಹರನೇ ಅಂತ್ಯ"ವೆನಿಸಿದ. ಆದುದರಿಂದ "ಹರಿಹರ ಕೇವಲ ಒಬ್ಬ ಕವಿಯಲ್ಲ, ಒಂದು ಕಾವ್ಯ ಪ್ರಕಾರ"ವೆಂದು ಹೇಳಬಹುದಾಗಿದೆ.

ಕಥಾವಿನ್ಯಾಸವನ್ನು ಕುರಿತು ಹೇಳುವುದಾದರೆ, ದೇವಲೋಕದ ಒಬ್ಬ ಗಣವರನು ಕೈಲಾಸದಲ್ಲಿ ಮಾಡಿದ ಸಣ್ಣ ತಪ್ಪನ್ನು ತಿದ್ದಿಕೊಂಡು ಬರಲು, ಶಿವನಿಂದ ಆದೇಶಿತನಾಗಿ ಮರ್ತ್ಯಕ್ಕೆ ಅವತರಿಸುತ್ತಾನೆ. ಈ ಕಾರಣವನ್ನು ಇಲ್ಲಿ ಕಾರ್ಯವಾಗಿಸಿ, ಕೊನೆಯಲ್ಲಿ ದೇವಲೋಕದಿಂದ ಬಂದ ವಿಮಾನವೇರಿ ಹೋಗಿ, ಮತ್ತೆ ಗಣವರನಾಗಿ ಕೈಲಾಸದಲ್ಲಿ ಸುಖಿಯಾಗಿರುತ್ತಾನೆ. ಇದು ಕಾಯಸಹಿತ ಕೈಲಾಸಕ್ಕೆ ಹೋಗುವ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ.

ಹೀಗೆ ವಸ್ತು, ಭಾಷೆ, ಶೈಲಿ, ಶಿಲ್ಪ, ತಂತ್ರ ಮತ್ತು ಕಥಾವಿನ್ಯಾಸ ದೃಷ್ಟಿಯಿಂದ ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ತುಂಬಿದ ಕಾರಣ ಯುಗಪುರುಷನೆನಿಸಿದ್ದಾನೆ, ಹರಿಹರ.

**ರಗಳೆಗಳ ನಾಮ-ರಚನಾಕ್ರಮ:**

ಹರಿಹರನು ಪೂರ್ವಯೋಜನೆಯಿಲ್ಲದೆ ರಗಳೆಯನ್ನು ಆಗಾಗ ಬಿಡಿ ಬಿಡಿಯಾಗಿ ಬರೆದನೇ? ಕೆಲವು ರಗಳೆಗಳನ್ನಾದರೂ ಬರೆಯಲು ಪೂರ್ವಯೋಜಿಸಿಕೊಂಡು ಅಖಂಡಕೃತಿಯನ್ನಾಗಿ ಬರೆದನೇ? ಅಖಂಡ ಕೃತಿಯನ್ನಾಗಿ ಬರೆದಿದ್ದರೆ ಅದರಲ್ಲಿ ಸೇರಿದ್ದ ರಗಳೆಗಳ ಕ್ರಮ ಯಾವುದು? ಈ ಅಖಂಡ ಕೃತಿಗೆ ಇಟ್ಟಿರಬಹುದಾದ ಹೆಸರಾವುದು ? ಈ ನಾಲ್ಕು ಪ್ರಶ್ನೆಗಳು ವಿದ್ವಾಂಸರನ್ನು ಉದ್ದಕ್ಕೂ ಕಾಡಿವೆ.

ಈಗ ಲಭ್ಯವಿರುವ ರಗಳೆ ಕಟ್ಟುಗಳಲ್ಲಿ ಈ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರವಿಲ್ಲ. ಅನ್ಯಕವಿಗಳ ಯಾವ ಕೃತಿಯಲ್ಲಿಯೂ ಈ ಬಗ್ಗೆ ಸೂಚನೆಗಳಿಲ್ಲ. "ಅರುವತ್ತುಮೂರು ಪುರಾತನ ಶಿವಶರಣ ಚರಿತ್ರೆ ಶೈವಪುರಾಣ", "ಪುರಾತನರ ಚರಿತ್ರೆ ಅರುವತ್ತುಮೂರು ಗಣಂಗಳ ರಗಳೆ", "ಪುರಾತನರ ಚರಿತ್ರೆ", "ಅರುವತ್ತುಮೂರು ರಗಳೆ, ಅಸಂಖ್ಯಾತ ರಗಳೆಯ ಪುಸ್ತಕಂ" ಎಂದು ಕೆಲವು ಹಸ್ತಪ್ರತಿಗಳಲ್ಲಿ ಹೇಳಿದ್ದು, ಲಿಪಿಕಾರರ ಈ ಬರೆವಣಿಗೆಯನ್ನು ಮೂಲ ಹೆಸರುಗಳೆಂದು ನಂಬುವಂತಿಲ್ಲ. ಇದನ್ನು ಬಿಟ್ಟರೂ ರಚನಾಕ್ರಮದ ಬಗ್ಗೆ ಒಂದು ಸಂಭವನೀಯ ನಿರ್ಣಯಕ್ಕೆ ಬರಬಹುದಾಗಿದೆ. ತಿರುನೀಲಕಂಠರ ರಗಳೆಯ ಆರಂಭದ ವೃತ್ತ-ಕಂದ ಪದ್ಯಗಳು ಕೆಲವು ಹಸ್ತಪ್ರತಿಗಳಲ್ಲಿ ಹೀಗಿವೆ:

ನೋಡೆಲೆ ಹಂಪೆಯ ಪ್ರಭುವಿನೊಳ್ ಸಲೆ ಸಂದರುವತ್ತುಮೂವರಂ
ಕೂಡೆ ಜಗಜ್ಜನಂ ಬಯಸಿ ಬಣ್ಣಿಸುತಿರ್ಪರುವತ್ತುಮೂವರಂ
ಪಾಡುತಲಾಡುತಂ ಪೊಗಳ್ವೆನುನ್ನತಿವೆತ್ತವರುವತ್ತುಮೂವರಂ
ಬೇಡಿತನೀವರಂ ಸುಕೃತಜೀವರನಪ್ರತಿಮ ಪ್ರಭಾವರಂ॥

ಧರೆಯರಿಯಲ್ ತನುವೆರಸಿಯೆ
ನೆರೆ ಸಂದರುವತ್ತು ಮೂವರೊಳ್ ಮೊದಲ ಮಹೇ।
ಶ್ವರರ ತಿರುನೀಲಕಂಠರ
ಚರಿತವನವನಧರಿಸು ಹಂಪೆಯ ವಿರೂಪಾಕ್ಷ॥

ಇದರಿಂದ ಹರಿಹರನು ೬೩ ಪುರಾತನರನ್ನು ಕುರಿತು ರಗಳೆ ಬರೆಯಲು ಪೂರ್ವಯೋಜಿಸಿದ್ದನೆಂದೂ, ಈ ಯೋಜನೆಯ ಅಂಗವಾಗಿ ಮೊದಲು ತಿರುನೀಲಕಂಠನ ರಗಳೆ ಬರೆದನೆಂದೂ ಸ್ಪಷ್ಟವಾಗುತ್ತದೆ. ಪುರಾತನರನ್ನು ಕುರಿತು ನಮಗೆ ಸಿಗುವ ಕಟ್ಟುಗಳಲ್ಲಿ ತಿರುನೀಲಕಂಠನ ರಗಳೆ ಮೊದಲಿಗೆ ಬರೆಯಲ್ಪಟ್ಟುದೂ ಇದನ್ನು ಪುಷ್ಟೀಕರಿಸುತ್ತದೆ. ಕೆಲವು ಪ್ರತಿಗಳಲ್ಲಿ ಪುರಾತನರ ರಗಳೆಗಳು ಮುಗಿಯುತ್ತಲೇ

ಪೆಂಪಿನ ಸೊಂಪಿನ ಸಂಪದ
ದಿಂ ಪರಮಪುರಾತನರ್ಕಳ ಸ್ತುತಿಯಿಸಿಯೊ।
ಳ್ಪಂ ಪಡೆದನಮಮ ಧರೆಯೊಳು
ಹಂಪೆಯ ಹರಿಹರನಪೂರ್ವ ಪುಣ್ಯನಗಣ್ಯಂ॥

ಎಂಬ ಪದ್ಯ ಬರುತ್ತಿದ್ದು, "ಪುರಾತನರ್ಕಳ" ಬರೆವಣಿಗೆ ಇಲ್ಲಿಗೆ ಮುಗಿಯಿತೆಂಬುದರ ಸೂಚನೆಯಿದಾಗಿದೆ. ಹೀಗೆ ಮುಗಿಯುತ್ತಲೇ ಅಲ್ಲಿ ಓಹಿಲಯ್ಯನ ರಗಳೆ ಆರಂಭವಾಗುತ್ತದೆ.

ಮದ್ರಾಸ್ ಪ್ರಾಚ್ಯಗ್ರಂಥಾಲಯದ ಡಿ ೭೪೫೫ನೆಯ ಪ್ರತಿಯ ೧೪೬ನೆಯ ಗರಿಯಲ್ಲಿ "ಅಸಂಖ್ಯಾತ ಗಣಂಗಳ ರಗಳೆಯ ಓಹಿಲಯ್ಯಗಳ ರಗಳೆ" ಎಂದು ಕಥೆ ಆರಂಭವಾಗುತ್ತದೆ. ಇದರಿಂದ ಅವನು ತನ್ನ ಮೊದಲನೆಯ ಭಾಗದ ರಗಳೆಗೆ 'ಪುರಾತನರ ರಗಳೆ' ಎಂದು, ಎರಡನೆಯ ಭಾಗದ ರಗಳೆಗೆ 'ಅಸಂಖ್ಯಾತರ ರಗಳೆ' ಎಂದು ಕರೆದಿರುವನೆಂದೂ, ಒಂದು ಸಂಕಲನವನ್ನು ತಿರುನೀಲಕಂಠನ ರಗಳೆಯಿಂದ, ಇನ್ನೊಂದು ಸಂಕಲನವನ್ನು ಓಹಿಲಯ್ಯನ ರಗಳೆಯಿಂದ ಆರಂಭಿಸಿದನೆಂದೂ ಹೇಳಬಹುದಾಗಿದೆ. ಹೀಗಿದ್ದೂ ಇದೇ ಅಂತಿಮ ನಿರ್ಣಯವೆನ್ನುವಂತಿಲ್ಲ.

ಇಲ್ಲಿ ಪ್ರಸ್ತಾಪಿಸಬೇಕಾದ ಇನ್ನೊಂದು ಅಂಶವೆಂದರೆ ಹರಿಹರನು ತನ್ನ ಬಿಡಿ ರಗಳೆಗಳಿಗೆ ಇಟ್ಟ ತಮಿಳು ಹೆಸರಿನ ಶೀರ್ಷಿಕೆಗಳು ಭಾಷಾಭೇದ ಕಾರಣವಾಗಿ ವಿಭಿನ್ನ ರೂಪಗಳಲ್ಲಿ (ಚಂಡೇಶ ಪಿಳ್ಳೆಯ ರಗಳೆ–ತಂಡೇಶ ಪಿಳ್ಳೆಯ ರಗಳೆ) ಸಿಗುತ್ತವೆ. ಕರ್ನಾಟಕದ ಶರಣರನ್ನು ಕುರಿತ ರಗಳೆ ಶೀರ್ಷಿಕೆಗಳಿಗೂ ಈ ಮಾತು ಅನ್ವಯಿಸುತ್ತದೆ. ಉದಾ: (ಬಸವರಾಜ ದೇವರ ರಗಳೆ–ಬಸವೇಶ್ವರ ದೇವರ ರಗಳೆ). ಸಾಲದುದಕ್ಕೆ "ಪಿಂಡೋತ್ಪತ್ತಿ ರಗಳೆ"ಯು "ಸಂಸಾರವ್ಯಾಮೋಹ ನಿರಸನ ರಗಳೆ" ಹೆಸರಿನಲ್ಲಿ, "ಗುಣಸ್ತೋತ್ರ ರಗಳೆ"ಯು "ಪ್ರಾರ್ಥನಾ ರಗಳೆ" ಹೆಸರಿನಲ್ಲಿ ಸಿಗುತ್ತವೆ. ಇಂಥಲ್ಲಿ ಕವಿ ಇಟ್ಟಿರಬಹುದಾದ ನಿಜನಾಮ ಯಾವುದೆಂಬುದೂ ಸಮಸ್ಯೆಯೆನಿಸುತ್ತದೆ.

**ರಗಳೆಗಳ ಕೃತಿಸಂಖ್ಯಾನಿರ್ಣಯ:**

"ಕೃತಿಸಂಖ್ಯಾನಿರ್ಣಯ" ಕನ್ನಡದ ಕೆಲವು ಕವಿಗಳ ವಿಷಯದಲ್ಲಿ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದ್ದು, ಇದಕ್ಕೆ ಪರಮಾವಧಿ ನಿದರ್ಶನ ಹರಿಹರ. ಗಿರಿಜಾಕಲ್ಯಾಣ, ಪಂಪಾಶತಕ, ರಕ್ಷಾಶತಕ, ಮುಡಿಗೆ ಅಷ್ಟಕ, ರಗಳೆಗಳು ಈತನ ಕೃತಿಗಳೆಂಬುದು ಎಲ್ಲರಿಗೂ ಗೊತ್ತು. ಶಿವಾಕ್ಷರ ಮಾಲಾಗದ್ಯ (ಅಕ್ಷರಮಾಲಾಗದ್ಯ, ಅಕ್ಷರಾಂಕನ ಗದ್ಯ), ಅರುವತ್ತುಮೂವರ ಕಥಾಗರ್ಭಗಳೂ ಇವನ ಕೃತಿಯಾಗಿರುವ ಸಾಧ್ಯತೆಯಿದೆ. ಇತ್ತೀಚೆಗೆ ಶ್ರೀ ಎಸ್. ಶಿವಣ್ಣ ಅವರು ವಿರೂಪಾಕ್ಷಾಷ್ಟಕ (ಬಸವಪಥ ೧೪–೬), ಹಂಪೆಯ ರಾಯನ ಶತಕ (ಬಸವಪಥ ೧೫–೪) ಹೆಸರಿನ ಸಣ್ಣ ಕೃತಿಗಳನ್ನು ಹರಿಹರನ ಹೆಸರಿನಲ್ಲಿ ಪ್ರಕಟಿಸಿದ್ದಾರೆ. 'ವಿರೂಪಾಕ್ಷಶತಕ' ಹೆಸರಿನ ಭಾಮಿನಿಷಟ್ಪದಿ ಕೃತಿ, 'ಗೋಲಗೇರಿ ಗೊಲ್ಲಾಳೇಶ್ವರ ಪುರಾಣ' ಹೆಸರಿನ ಅಂಶ ಛಂದಸ್ಸಿನ ಷಟ್ಪದಿಕೃತಿಗಳು ಈತನ ಹೆಸರಿನಲ್ಲಿ ಸಿಗುತ್ತಿದ್ದರೂ ಅನ್ಯಕೃತಿಗಳಾಗಿವೆ. ಹೀಗೆ, ಈ ಕವಿಯ ಕೃತಿಸಂಖ್ಯಾನಿರ್ಣಯ ಸಣ್ಣಸಮಸ್ಯೆಯಾಗಿ ಪರಿಣಮಿಸಿದೆ. ಆದರೆ ದೊಡ್ಡ ಸಮಸ್ಯೆಯಾಗಿ ಕಾಡುತ್ತಿರುವುದು ರಗಳೆಗಳ ಸಂಖ್ಯಾನಿರ್ಣಯ.

ಭಕ್ತಕವಿಗಳಾದ ಕುಮಾರವ್ಯಾಸ, ಚಾಮರಸರು ಕೃತಿಯ ಮೇಲೆ ತಮ್ಮ ಹೆಸರನ್ನು ಅಂಕಿತ ಮಾಡಿಲ್ಲ. ಈ ಪರಂಪರೆಗೆ ಕನ್ನಡದಲ್ಲಿ ಗಂಗೋತ್ರಿಯಾದವನು, ಭಕ್ತಕವಿ ಹರಿಹರ. ಬಸವೇಶ್ವರ ದೇವರ ರಗಳೆ, ಮಹಾದೇವಿಯಕ್ಕನ ರಗಳೆಗಳ ಕೊನೆಯಲ್ಲಿ, ತಿರುನೀಲಕಂಠರ ರಗಳೆ, ಓಹಿಲದೇವರ ರಗಳೆಗಳ ಆರಂಭದಲ್ಲಿ ತನ್ನ ಹೆಸರು ಹೇಳಿಕೊಂಡಿದ್ದರೂ ಈ ಭಾಗಗಳು ಪ್ರಕ್ಷಿಪ್ತವಾಗಿರುವ ಸಾಧ್ಯತೆಯಿದೆ. ಕೇವಲ ನಂಬಿಯಣ್ಣನ ರಗಳೆಯ ಅಂತ್ಯದಲ್ಲಿ ಮಾತ್ರ ಹೆಸರನ್ನು ಹೇಳಿಕೊಂಡಿದ್ದಾನೆ. ಇದನ್ನು ಅಪವಾದವೆಂದಿಟ್ಟುಕೊಂಡರೆ ಈತ ತುಂಬ ನಿರಪೇಕ್ಷಭಾವದಿಂದ ರಗಳೆಗಳನ್ನು ಬರೆದನೆನ್ನಬೇಕಾಗುತ್ತದೆ. ಹೀಗೆ ಹರಿಹರನ ರಚನೆಗಳು ಒಬ್ಬನ ಆಸ್ತಿಯಾಗಿ ಉಳಿಯದ ಕಾರಣ, ಸರ್ವಜ್ಞನ ವಚನಗಳಂತೆ ಅನ್ಯರೂ ಅವನ ಹೆಸರಿನಲ್ಲಿ ರಗಳೆ ಬರೆದರು. ಇದರಿಂದಾಗಿ ಹರಿಹರನ ರಗಳೆ 'ಕೃತಿ'ಯಾಗಿ ಉಳಿಯದೆ 'ಪರಂಪರೆ'ಯಾಗಿ ಬೆಳೆಯಿತು.

ಈವರೆಗೆ ಮದ್ರಾಸ್ ಓರಿಯಂಟಲ್ ರೀಸರ್ಚ್ ಲೈಬ್ರರಿ, ಮೈಸೂರಿನ ಓರಿಯಂಟಲ್ ಲೈಬ್ರರಿ (ಈಗ ಕನ್ನಡ ಅಧ್ಯಯನ ಸಂಸ್ಥೆ), ಧಾರವಾಡದ ಕನ್ನಡ ಅಧ್ಯಯನ ಪೀಠಗಳಂಥ ಶಿಕ್ಷಣ ಸಂಸ್ಥೆಗಳಲ್ಲಿ, ಹುಬ್ಬಳ್ಳಿಯ ಮೂರು ಸಾವಿರಮಠ, ಚಿತ್ರದುರ್ಗದ ಮುರುಘಾಮಠ, ಗದುಗಿನ ತೋಂಟದಾರ್ಯಮಠ, ಸಿರಿಗೆರೆಯ ತರಳಬಾಳು ಮಠ, ಗುರುಮಠಕಲ್ಲದ ಹಿರೇಮಠ, ಶಿವಯೋಗಮಂದಿರಗಳಂಥ ಧಾರ್ಮಿಕ ಕೇಂದ್ರಗಳಲ್ಲಿ, ಹಳಕಟ್ಟಿ, ಮಲ್ಲಾಬಾದಿ, ನಿಶಾನಿಮಠರಂಥ ಗಣ್ಯವ್ಯಕ್ತಿಗಳ ವಶದಲ್ಲಿ ಇರುವ ಕಟ್ಟುಗಳನ್ನು ವಿದ್ವಾಂಸರು ಅಧ್ಯಯನಕ್ಕೆ ಗುರಿಪಡಿಸುವುದರ ಮೂಲಕ, ಇವುಗಳಲ್ಲಿಯ ರಗಳೆಗಳ ಹೆಸರು, ಸಂಖ್ಯೆ ಇತ್ಯಾದಿಗಳನ್ನು ಬೆಳಕಿಗೆ ತಂದಿದ್ದಾರೆ. ಹೀಗಿದ್ದೂ ಈ "ಸಂಖ್ಯಾನಿರ್ಣಯ" ಸರ್ವಸಮ್ಮತವೆನಿಸಿದೆ, ಕಗ್ಗಂಟಾಗಿ ಉಳಿದಿದೆ. ಏಕೆಂದರೆ (೧) ಕಟ್ಟುಗಳ ಆರಂಭದಲ್ಲಿ "ಹರಿಹರನ ರಗಳೆ" ಎಂದು ಲಿಖಿಸಿ ಒಳಗೆ ಹರಿಹರನ ರಗಳೆಗಳೊಂದಿಗೆ ಮಿಕ್ಕವರ ರಗಳೆಗಳನ್ನೂ ಲಿಪಿಸಲಾಗಿದೆ. (೨) ಲಭ್ಯ ಕಟ್ಟುಗಳಲ್ಲಿ ರಗಳೆಗಳ ಸಂಖ್ಯೆ, ಅನುಕ್ರಮ ಒಂದೇ ರೀತಿಯಾಗಿಲ್ಲ (೩) ಕೆಲವೊಮ್ಮೆ ಒಂದು ರಗಳೆಗೆ ಬೇರೆ ಬೇರೆ ಕಟ್ಟುಗಳಲ್ಲಿ ಬೇರೆ ಬೇರೆ ಮುದ್ರಿಕೆಗಳಿವೆ (೪) ಕೆಲವೊಮ್ಮೆ ರಗಳೆಗೆ ಮುದ್ರಿಕೆಯೇ ಇಲ್ಲ (೫) 'ವಿರೂಪಾಕ್ಷ' ಮುದ್ರಿಕೆಯಲ್ಲಿ ಅನ್ಯರೂ ರಗಳೆ ಬರೆದು ಹರಿಹರನ ತಲೆಗೆ ಕಟ್ಟಿದ್ದಾರೆ. ಹೀಗಾಗಿ ಸಂಖ್ಯಾನಿರ್ಣಯ ತೀರ ಜಟಿಲವೆನಿಸಿದೆ. ಈ ವಿಷಯವಾಗಿ ವ್ಯಾಪಕ ಅಧ್ಯಯನ ನಡೆಸಿದವರು ಡಾ. ಕೆ. ಈಶ್ವರನ್ (೧೯೫೬), ಪ್ರೊ. ಎಚ್. ದೇವೀರಪ್ಪ (೧೯೬೮, ೧೯೭೩), ಡಾ. ಆರ್. ಸಿ. ಹಿರೇಮಠ – ಸುಂಕಾಪುರ (೧೯೭೫–೧೯೭೬) ಅವರು. ಡಾ. ಈಶ್ವರನ್ ಅವರು ಇದನ್ನು ಪಿಎಚ್.ಡಿ. ಅಧ್ಯಯನದ ವಸ್ತುವಾಗಿಸಿಕೊಂಡುದು ಈ ಸಮಸ್ಯೆಯ ವ್ಯಾಪ್ತಿ–ಜಟಿಲತೆಗಳಿಗೆ ಸಾಕ್ಷಿಯೆನಿಸಿದೆ. ಅದೇನೇ ಇದ್ದರೂ ಈ ಮೂವರೂ ಮೂರು ಭಿನ್ನ ಫಲಿತಾಂಶಗಳನ್ನು ಮಂಡಿಸಿದ್ದಾರೆ. ಇವರಲ್ಲಿ ಡಾ. ಈಶ್ವರನ್ ಅವರು ಒಟ್ಟು ೧೦೬ ರಗಳೆಗಳು ಹರಿಹರ ಕೃತವೆನ್ನುತ್ತಾರೆ. ಡಾ. ಆರ್. ಸಿ. ಹಿರೇಮಠ – ಸುಂಕಾಪುರ ಅವರು ಒಟ್ಟು ೯೪ ರಗಳೆಗಳನ್ನು ಹರಿಹರನ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ದೇವೀರಪ್ಪನವರು ಹರಿಹರ ಬರೆದ ತಮಿಳುನಾಡಿನ ಪುರಾತನರ ರಗಳೆಗಳು ೨೩, (ಮಾದಾರಚೆನ್ನಯ್ಯನ ರಗಳೆ ಸೇರಿ ೨೪), ತಮಿಳುನಾಡು ಮತ್ತು ಕರ್ನಾಟಕಗಳ ಶರಣರ ಹೆಸರಿನಲ್ಲಿ ಅನ್ಯರು ಬರೆದು ಹರಿಹರನ ತಲೆಗೆ ಕಟ್ಟಿದುವು ೪೨ ಎಂಬ ನಿರ್ಧಾರಕ್ಕೆ ಬಂದು, ಒಟ್ಟು ೬೬ ರಗಳೆಗಳನ್ನು ಪ್ರಕಟಿಸಿದ್ದಾರೆ. ದೇವೀರಪ್ಪನವರು ಕೃತಕವೆಂದು ಹೇಳುವ ರಗಳೆಗಳಲ್ಲಿ ಬಹಳಷ್ಟು ಕೃತಕವಲ್ಲವೆಂದು ಹಿರೇಮಠರು ವಾದಿಸುತ್ತಾರೆ. ಇದು ಜನಪ್ರಿಯ ಆವೃತ್ತಿಯಾಗಿರುವ ಕಾರಣ ಮತ್ತು ಈ ಬಗೆಯ ವಾದದಿಂದ ನೈಜ ರಚನೆಗಳೂ ಕೈಬಿಟ್ಟುಹೋಗದಿರಲೆಂಬ ಕಾರಣ, ನಾವು ಹರಿಹರನ ಹೆಸರಿನಲ್ಲಿ ಸಿಗುವ ನಿಜವೋ ಪ್ರಕ್ಷಿಪ್ತವೋ ಎಲ್ಲ ರಗಳೆಗಳನ್ನು ಸಂಗ್ರಹಿಸಿ, ಅವುಗಳನ್ನು ಮೂರು ಕಾಂಡಗಳಲ್ಲಿ ಹೀಗೆ ಹಂಚಿಹಾಕಿದ್ದೇವೆ. ಕಾಂಡ–ಒಂದು : ತಮಿಳುನಾಡಿನ ಪುರಾತನರ ರಗಳೆಗಳು, ಕಾಂಡ–ಎರಡು : ಕನ್ನಡನಾಡಿನ ಶರಣರ ರಗಳೆಗಳು, ಕಾಂಡ–ಮೂರು : ಸಂಕೀರ್ಣ ರಗಳೆಗಳು.

**ಕಾಂಡ–೧: ತಮಿಳುನಾಡಿನ ಪುರಾತನರ ರಗಳೆಗಳು:**

ತಮಿಳುನಾಡಿನ ಪುರಾತನರ ಸಂಖ್ಯೆ ೬೩. ಇವರಲ್ಲಿ ದಂಪತಿಗಳಾಗಿರುವ ಜಡೆಯ ನಾಯನಾರ್–ಯಸ್ಯಜ್ಞಾನಿದೇವಿಯರನ್ನು ಕುರಿತು ಒಂದೇ ರಗಳೆ ಬರೆದಿರುವುದರಿಂದ ನಾವು ಹರಿಹರನಿಂದ ೬೩ ಪುರಾತನರನ್ನು ಕುರಿತು ೬೨ ರಗಳೆಗಳನ್ನು ನಿರೀಕ್ಷಿಸಬೇಕಾಗುತ್ತದೆ.

ಪುರಾತನರನ್ನು ಕುರಿತು ೫೯ ರಗಳೆಗಳನ್ನು ಹರಿಹರ ಬರೆದಿರುವನೆಂದು ಡಾ. ಈಶ್ವರನ್ ಹೇಳುತ್ತಾರೆ. ೫೯ ರಗಳೆಗಳನ್ನು ಬರೆದ ಹರಿಹರ ಇನ್ನು ೩ ರಗಳೆ ಬರೆದು ೬೨ ಸಂಖ್ಯೆಯನ್ನು ಪೂರ್ಣ ಮಾಡದಿರುವುದು ಅಸಂಭವ. ಆದುದರಿಂದ ಈ ಸಂಖ್ಯಾಪೂರ್ತಿಗಾಗಿ ತಮಿಳು ಪುರಾತನರಲ್ಲಿ ಪರಿಗಣಿಸಲ್ಪಟ್ಟ ಮತ್ತು "ವಿರೂಪಾಕ್ಷ" ಮುದ್ರಿಕೆಯಲ್ಲಿ ಸಿಗುವ "ಚಿಲುಪುಲಿಯರ ರಗಳೆ"ಯನ್ನು ಹರಿಹರಕೃತವೆಂದು ನಾವು ಒಪ್ಪಿಕೊಂಡಿದ್ದೇವೆ. ಇದರಿಂದ ರಗಳೆಗಳ ಸಂಖ್ಯೆ ೫೯ ರಿಂದ ೬೦ಕ್ಕೆ ಏರುತ್ತದೆ. ತಮಿಳು ಪುರಾತನರಲ್ಲಿ ಇನ್ನೂ ಉಳಿಯುವ ಹೆಸರು ತಿರುಜ್ಞಾನ ಸಂಬಂಧಿ ಮತ್ತು ಪುಗಲ್ ಚೋಳ. ತಿರುಜ್ಞಾನ ಸಂಬಂಧಿಗಳ ಕಥೆ ಪೆರಿಯ ಪುರಾಣದಲ್ಲಿ ತುಂಬ ದೊಡ್ಡದು. ಹೀಗಿರುವಾಗ ಹರಿಹರ ಇವನನ್ನು ಕುರಿತು ರಗಳೆಯನ್ನು ಬರೆಯದಿರುವುದು ಹೇಗೆ? ಇದಲ್ಲದೆ ಹರಿಹರ ಕೃತವೆಂದು ಹೇಳಲಾಗುವ ೬೩ ಪುರಾತನರ ಕಥಾಗರ್ಭದಲ್ಲಿಯೂ ಇವನ ಪ್ರಸ್ತಾಪವಿದೆ.* ಹೀಗಿದ್ದೂ ಈತನ ರಗಳೆಯೂ ಸಿಗುತ್ತಿಲ್ಲ. ಚಿತ್ರದುರ್ಗ ಹಸ್ತಪ್ರತಿಯಲ್ಲಿ "ತಿರುಜ್ಞಾನಸಂಬಂಧಿ ರಗಳೆ" ಎಂಬ ಶೀರ್ಷಿಕೆ ಬರೆದು, ಆ ತಾಳೆಗರಿಯನ್ನು ತೆರವು ಇಡಲಾಗಿದೆ. ಬಹುಶಃ ಮುಂದೆ ಸಿಕ್ಕರೆ ಅದನ್ನು ಬರೆದುಕೊಳ್ಳುವ ವಿಚಾರವನ್ನು ಈ ಲಿಪಿಕಾರ ಮಾಡಿದಂತಿದೆ. ಕೊನೆಗೂ ಅದು ಅವನಿಗೆ ಸಿಕ್ಕಿಲ್ಲ, ನಮಗೂ ಸಿಕ್ಕಿಲ್ಲ. ಇನ್ನುಳಿದ ಪುಗಲ್‌ಚೋಳ ರಗಳೆ ಈಗಲೂ ಲಭ್ಯವಿಲ್ಲ. ಆದುದರಿಂದ ತಮಿಳುನಾಡಿನ ೬೩ ಪುರಾತನರನ್ನು ಕುರಿತು ಸಿಕ್ಕಬೇಕಾಗಿದ್ದ ೬೨ ರಗಳೆಗಳಲ್ಲಿ ೬೦ ರಗಳೆಗಳು ಮಾತ್ರ ನಮಗೆ ಸಿಕ್ಕಿದ್ದು, ಅವುಗಳ ಅನುಕ್ರಮಕ್ಕಾಗಿ ನಾವು ಪೆರಿಯಪುರಾಣವನ್ನು ಅವಲಂಬಿಸಿದ್ದೇವೆ. ಅವು ಹೀಗಿವೆ:

೧. ತಿರುನೀಲಕಂಠದೇವರ ರಗಳೆ
೨. ಇಹಃಪಗೆಯಾಂಡರ ರಗಳೆ
೩. ಇಳೆಯಾಂಡಗುಡಿಮಾರರ ರಗಳೆ
೪. ಸೇದಿರಾಜನ ರಗಳೆ
೫. ಮೆರೆಮಿಂಡದೇವರ ರಗಳೆ
೬. ಅಮರನೀತಿಗಳ ರಗಳೆ
೭. ಇರಿಭಕ್ತಯ್ಯನ ರಗಳೆ
೮. ಏನಾದಿನಾಥನ ರಗಳೆ
೯. ಕಣ್ಣಪ್ಪನ ರಗಳೆ
೧೦. ಕೊಂಗುಲಿಯ ಕಲಿಯಾರರ ರಗಳೆ
೧೧. ಮಾನಕಂಜರ ರಗಳೆ
೧೨. ಅರಿವಾಳ್ತಾಂಡರ ರಗಳೆ
೧೩. ಆನಾಯನಾರರ ರಗಳೆ
೧೪. ಒಲಘಾಂಡಮೂರ್ತಿಗಳ ರಗಳೆ
೧೫. ನಮಃಶಿವಾಯ ಮುರುಘರ ರಗಳೆ
೧೬. ರುದ್ರಪಶುಪತಿಗಳ ರಗಳೆ
೧೭. ತಿರುನಾಳ್ಪೋವರ ರಗಳೆ
೧೮. ತಿರುಕುರುಂಪೆತೊಂಡರ ರಗಳೆ
೧೯. ಚಂಡೇಶಪಿಳ್ಳೆಯರ ರಗಳೆ
೨೦. ವಾಗೀಶ್ವರದೇವರ ರಗಳೆ
೨೧. ಕುಲಚ್ಚೆರೆಯರ ರಗಳೆ
೨೨. ಪೆರುಮಳಲಿಯ ಕುರುಂಬರ ರಗಳೆ
೨೩. ಕಾರಿಕಾಲಮ್ಮೆಯರ ರಗಳೆ
೨೪. ಅಪ್ಪೂತಿ ಅಡಿಯರ ರಗಳೆ

---

* ಇಬ್ಬರು ಒಂದು ಕಥೆಯಲ್ಲಿ ಪ್ರಸ್ತಾಪವಾದುದು 'ಎಡೆಗಳೆಯರ ಕಥೆ'ಯಲ್ಲಿ ಎಂದು "ಅರುವತ್ತುಮೂವರ ಪುರಾತನರ ಕಥಾಗರ್ಭ"ದಲ್ಲಿ ಹೇಳಲಾಗಿದೆ.

೨೫. ತಿರುನೀಲನಕ್ಕರ ರಗಳೆ
(ತಿರುಜ್ಞಾನ ಸಂಬಂಧಿಗಳ ರಗಳೆ–ಅಲಭ್ಯ)
೨೭. ಕಲಿಕಾಮದೇವರ ರಗಳೆ
೨೯. ದಂಡೀಶಭಕ್ತರ ರಗಳೆ
೩೧. ಸೋಮಾಸಿಮಾರರ ರಗಳೆ
೩೩. ಚಿಲುಪುಲಿಯರ ರಗಳೆ
೩೫. ಚೇರಮನಾಯನಾರ ರಗಳೆ
೩೭. ವರಕೃತಾಂತರ ರಗಳೆ
೩೯. ಅತಿಭಕ್ತರ ರಗಳೆ
೪೧. ಕಲಿಯನಾಯನಾರ ರಗಳೆ
೪೩. ಅಯ್ಯಡಿಯರ ರಗಳೆ
೪೫. ಕಡವೂರಕಾರಿಯರ ರಗಳೆ
೪೭. ವಾಹಿಲ್ಯರ ರಗಳೆ
೪೯. ಕಳಚೆಂಗ ಪೆರುಮಾಳೆಯರ ರಗಳೆ
೫೧. ಚಿರುತೊಣೆಯಾಂಡರ ರಗಳೆ
೫೩. ಕೊಲ್ಲುಪುಲಿಯಾಂಡರ ರಗಳೆ
೫೫. ಪಾಂಡ್ಯಮಹಾದೇವಿಯರ ರಗಳೆ
೫೭. ಕಳಚೆಂಗ ಚೋಳನ ರಗಳೆ
೫೯. ಜಡೆಯನಾಯನಾರ್
(ಯಸ್ಯಜ್ಞಾನದೇವಿಯರ ರಗಳೆ)

೨೬. ನಮಿನಂದಿಯರ ರಗಳೆ
೨೮. ತಿರುಮೂಲದೇವರ ರಗಳೆ
೩೦. ಮೂರ್ಖನಾಯನಾರ ರಗಳೆ
೩೨. ಸಾಂಖ್ಯತೊಂಡರ ರಗಳೆ
೩೪. ಸಿರಿಯಾಳನ ರಗಳೆ
೩೬. ಗಣನಾಥನ ರಗಳೆ
(ಪಗಲ್ಚೋಳರ ರಗಳೆ–ಅಲಭ್ಯ)
೩೮. ನರಸಿಂಗಮೊನೆಯರ ರಗಳೆ
೪೦. ಕಲಿಕಂಪರ ರಗಳೆ
೪೨. ಶಕ್ತಿನಾಯನಾರನ ರಗಳೆ
೪೪. ಕಣಂಬುಲ್ಲರ ರಗಳೆ
೪೬. ನಿಡುಮಾರದೇವರ ರಗಳೆ
೪೮. ಮೊನೆಯಿಡುವರ ರಗಳೆ
೫೦. ಎಡೆಗಳೆಯರ ರಗಳೆ
೫೨. ಪೊಗಲ್ತೊಣೆಯಾಂಡರ ರಗಳೆ
೫೪. ಪೂಶಲಾರ ರಗಳೆ
೫೬. ನೇಶನ್ನೈನಾರರ ರಗಳೆ
೫೮. ತಿರುನೀಲಕಂಠಪಾಣರ ರಗಳೆ
೬೦. ನಂಬಿಯಣ್ಣನ ರಗಳೆ

ಹೀಗೆ ಈವರೆಗೆ ಲಭ್ಯವಾಗಿರುವ ಪುರಾತನರ ರಗಳೆಗಳು ೬೦. ಇವುಗಳಲ್ಲಿ ಹಳಕಟ್ಟಿಯವರು ೧೭ ರಗಳೆಗಳನ್ನು, ಹಿರೇಮಠ–ಸುಂಕಾಪುರ ಸೇರಿ ೪೯ ರಗಳೆಗಳನ್ನು ಪ್ರಕಟಿಸಿದ್ದಾರೆ. ಈಶ್ವರನ್ ಅವರು ಚಿಲುಪುಲಿಯ ಅವರನ್ನು ಕುರಿತ ರಗಳೆ ಹರಿಹರ ರಚಿತವಲ್ಲವೆನ್ನುತ್ತ ೫೯ ರಗಳೆಗಳನ್ನು ಒಪ್ಪಿಕೊಳ್ಳುತ್ತಾರೆ. ದೇವೀರಪ್ಪನವರು ಈ ಎಲ್ಲ ೬೦ ರಗಳೆಗಳನ್ನು ಪ್ರಕಟಿಸಿದ್ದು, ಇವುಗಳಲ್ಲಿ ೨೩ ಮಾತ್ರ ಹರಿಹರ ರಚನೆ ಎನ್ನುತ್ತ "ಶರಣಚರಿತ ಮಾನಸಂ" ಹೆಸರಿನ ಕೃತಿಯಲ್ಲಿ,[೧] ಮಿಕ್ಕ ೩೭

೧. ಅರುವತ್ತು ಮೂವರಲ್ಲಿ ಸೇರ್ಪಡೆಯಾಗದ 'ಮಾದಾರ ಚೆನ್ನಯ್ಯನ ರಗಳೆ'ಯನ್ನು ಇಲ್ಲಿ ಹೆಚ್ಚಿನದಾಗಿ ಅಚ್ಚಿಸಿದ್ದಾರೆ.

ಹರಿಹರನ ಹೆಸರಿನಲ್ಲಿ ಅನ್ಯರು ರಚಿಸಿದ ರಗಳೆಗಳೆನ್ನುತ್ತ "ಹರಿಹರೇತರಕೃತ ವಿರೂಪಾಕ್ಷಾಂಕಿತ ಶಿವಶರಣರ ಸಂಪುಟ" ಹೆಸರಿನ ಕೃತಿಯಲ್ಲಿ[೧] ಹೊರತಂದಿದ್ದಾರೆ.

**ಕಾಂಡ–೨: ಕನ್ನಡನಾಡಿನ ಶರಣರ ರಗಳೆಗಳು:**

ಪೆರಿಯ ಪುರಾಣವನ್ನಾಧರಿಸಿ ತಮಿಳುನಾಡಿನ ಪುರಾತನರ ರಗಳೆಗಳನ್ನು ಕ್ರಮವಾಗಿ ಜೋಡಿಸಿದ ನಮಗೆ ಕನ್ನಡ ನಾಡಿನ ಶರಣರ ರಗಳೆಗಳನ್ನು ಕ್ರಮಗೊಳಿಸಲು ಈ ಬಗೆಯ ಆಧಾರಗಳಿಲ್ಲ. ಆದುದರಿಂದ ಮೊದಲು ಶರಣರ, ಬಳಿಕ ಶರಣೆಯರ ರಗಳೆಗಳನ್ನು ಅವರು ಬಾಳಿದ ಕಾಲವನ್ನು ಸ್ಥೂಲವಾಗಿ ಗ್ರಹಿಸಿ ಹೀಗೆ ಜೋಡಿಸಿದ್ದೇವೆ:

೧. ಕೇಶಿರಾಜ ದಣ್ಣಾಯಕರ ರಗಳೆ
೨. ತೆಲುಗು ಜೊಮ್ಮಯ್ಯನ ರಗಳೆ
೩. ಬಾಹೂರ ಬೊಮ್ಮಿತಂದೆಯ ರಗಳೆ
೪. ಮಾರುಡಿಗೆ ನಾಚಿತಂದೆಯ ರಗಳೆ
೫. ಗುಂಡಯ್ಯನ ರಗಳೆ
೬. ಭೋಗಣ್ಣನ ರಗಳೆ
೭. ಶಂಕರದಾಸಿಮಯ್ಯನ ರಗಳೆ
೮. ರೇವಣ್ಣಸಿದ್ಧೇಶ್ವರನ ರಗಳೆ
೯. ಪ್ರಭುದೇವರ ರಗಳೆ
೧೦. ಬಸವೇಶ್ವರದೇವರ ರಗಳೆ
೧೧. ಕೋವೂರ ಬೊಮ್ಮಿತಂದೆಯ ರಗಳೆ
೧೨. ಮುಸುಟೆಯ ಚೌಡಯ್ಯನ ರಗಳೆ
೧೩. ಸುರಿಗೆಯ ಚೌಡಯ್ಯನ ರಗಳೆ
೧೪. ಆದಯ್ಯನ ರಗಳೆ
೧೫. ಏಕಾಂತರಾಮಿತಂದೆಯ ರಗಳೆ
೧೬. ಹಾವಿನಹಾಳ ಕಲ್ಲಯ್ಯನ ರಗಳೆ
೧೭. ಕೋಳೂರು ಕೊಡಗೂಸಿನ ರಗಳೆ
೧೮. ನಿಂಬಿಯಕ್ಕನ ರಗಳೆ
೧೯. ಅಮ್ಮವ್ವೆಯ ರಗಳೆ
೨೦. ವೈಜಕವ್ವೆಯರ ರಗಳೆ
೨೧. ಹೆರೂರ ಹೆಣ್ಣಿನ ರಗಳೆ
೨೨. ಮಹಾದೇವಿಯಕ್ಕನ ರಗಳೆ

ಇವುಗಳಲ್ಲಿ ಅಮ್ಮವ್ವೆ ಮತ್ತು ಹೇರೂರ ಹೆಣ್ಣಿನ ರಗಳೆಗಳನ್ನು ಪ್ರಕಟಿಸಿರುವ ದೇವೀರಪ್ಪನವರು "ವಿರೂಪಾಕ್ಷ" ಮುದ್ರಿಕೆಯಿದ್ದರೂ ಇವು ಹರಿಹರಕೃತವಲ್ಲವೆಂದು ವಾದಿಸುತ್ತಾರೆ.

**ಕಾಂಡ–೩: ಸಂಕೀರ್ಣ ರಗಳೆಗಳು:**

ಈ ವಿಭಾಗದಲ್ಲಿ ಮೊದಲು ದೇವಲೋಕಕ್ಕೆ ಸಂಬಂಧಿಸಿದ ೨ ರಗಳೆ, ಆಮೇಲೆ ಉತ್ತರ ಭಾರತದ ಶಿವಭಕ್ತರ ೭ ರಗಳೆ, ಇನ್ನೂ ಆಮೇಲೆ ತಮಿಳುನಾಡಿನ ಇತರ ಭಕ್ತರ ೪ ರಗಳೆ, ಕೊನೆಗೆ ಅಕಥಾತ್ಮಕ ೧೩ ರಗಳೆ, ಹೀಗೆ ಇಲ್ಲಿ ಒಟ್ಟು ೨೬ ರಗಳೆಗಳನ್ನು ಜೋಡಿಸಿದ್ದೇವೆ.

೧. ದಕ್ಷಾಧ್ವರ ರಗಳೆ
೨. ಭೃಂಗೀಶ್ವರ ರಗಳೆ
೩. ಓಹಿಲಯ್ಯನ ರಗಳೆ
೪. ಉದ್ಭಟಯ್ಯನ ರಗಳೆ

---

೧. ಪ್ರೊ. ದೇವೀರಪ್ಪನವರು ಹೇಳುವಂತೆ ಹರಿಹರನ ಹೆಸರಿನಲ್ಲಿ ಅನ್ಯರು ರಚಿಸಿದ 'ವಿರೂಪಾಕ್ಷ' ಅಂಕಿತದ ೩೭ ರಗಳೆಗಳ ಕ್ರಮಸಂಖ್ಯೆ ಮೇಲಿನ ಯಾದಿಯ ಪ್ರಕಾರ ಹೀಗಿದೆ: ೨೧, ೨೨, ೨೪, ೨೫, ೨೬, ೨೮, ೨೯, ೩೦, ೩೧, ೩೩, ೩೪, ೩೫, ೩೬, ೩೭, ೩೮, ೩೯, ೪೦, ೪೧, ೪೨, ೪೩, ೪೪, ೪೫, ೪೬, ೪೭, ೪೮, ೪೯, ೫೦, ೫೧, ೫೨, ೫೩, ೫೪, ೫೫, ೫೬, ೫೭, ೫೮, ೫೯.

೫. ಮಲಯರಾಜದೇವರ ರಗಳೆ
೬. ಬಾಣನ ರಗಳೆ
೭. ಹಲಯುಧನ ರಗಳೆ
೮. ಮಲುಹಣನ ರಗಳೆ
೯. ಸಾಮವೇದಿಯ ರಗಳೆ
೧೦. ಮಾದರ ಚೆನ್ನಯ್ಯನ ರಗಳೆ
೧೧. ಮನುಚೋಳನ ರಗಳೆ
೧೨. ಪೊಯ್ಯಡಿಯರ ರಗಳೆ
೧೩. ತಿಲ್ಲೆವೇಳಂದರನ ರಗಳೆ[೧]
೧೪. ಬಸವಪವಾಡ ರಗಳೆ
೧೫. ಸಂಸಾರವ್ಯಾಮೋಹ ನಿರಸನ ರಗಳೆ
೧೬. ಗಣಸ್ತೋತ್ರ ರಗಳೆ
೧೭. ವಿಭೂತಿಯ ರಗಳೆ
೧೮. ರುದ್ರಾಕ್ಷಿಯ ರಗಳೆ
೧೯. ಪಂಚಾಕ್ಷರಿಯ ರಗಳೆ
೨೦. ನಮಃಶಿವಾಯ ರಗಳೆ
೨೧. ಹಂಪೆಯರಸನ ರಗಳೆ
೨೨. ಜಯ ರಗಳೆ
೨೩. ಪುಷ್ಪ ರಗಳೆ
೨೪. ಲಿಂಗಾರ್ಚನೆಯ ರಗಳೆ
೨೫. ಪಂಪಾಕ್ಷೇತ್ರದ ರಗಳೆ
೨೬. ಮಹಿಮಾ ರಗಳೆ

ಇವುಗಳಲ್ಲಿ ಮನುಚೋಳ, ಪೊಯ್ಯಡಿ, ತಿಲ್ಲವೇಳಂದರ, ರಗಳೆಗಳು "ವಿರೂಪಾಕ್ಷ" ಮುದ್ರಿಕೆಯಿದ್ದರೂ ಹರಿಹರ ಕೃತವಲ್ಲವೆಂದು ಪ್ರೊ. ದೇವೀರಪ್ಪ ವಾದಿಸುತ್ತಾರೆ. ನಮ್ಮ ಪ್ರಕಾರ ಇವು ಮತ್ತು ಇನ್ನೂ ಕೆಲವು, ಬಹುಶಃ ಬಸವಪವಾಡ ರಗಳೆ ಹರಿಹರಕೃತವಾಗಿರಲಿಕ್ಕಿಲ್ಲ, ಒಟ್ಟಿನಲ್ಲಿ ತಮಿಳುನಾಡಿನ ಪುರಾತನರ ರಗಳೆ ೬೦, ಕನ್ನಡ ನಾಡಿನ ಶರಣರ ರಗಳೆ ೨೨, ಸಂಕೀರ್ಣ ರಗಳೆಗಳು ೨೬–ಹೀಗೆ ೧೦೮ ರಗಳೆಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಶ್ರೀ ದೇವೀರಪ್ಪನವರ ಮಾತನ್ನು ಉದ್ಧರಿಸಬಹುದಾಗಿದೆ : "ಹಂಪೆಯ ವಿರೂಪಾಕ್ಷ ಮುದ್ರಿಕೆಯುಳ್ಳ ಇನ್ನೂ ಕೆಲವು ರಗಳೆಗಳಿವೆ. ಯಸ್ಫೂತಿಯ ರಗಳೆ, ಅಯ್ಯಡಿಯರ ರಗಳೆ, ಕಲಿಚಿಟ್ಟತಂದೆಯ ರಗಳೆ, ರಾಸರಸಾಂಕನ ರಗಳೆ–ಇವು ಒಂದೇ ಒಂದು ಕಾಗದದ ಹಸ್ತಪ್ರತಿಯಲ್ಲಿವೆ. ಸೂರಸಾನಮ್ಮನ ರಗಳೆ ಎಂಬುದು ನನ್ನಲಿರುವ ಒಂದು ಓಲೆಯ ಪ್ರತಿಯಲ್ಲಿ ಮಾತ್ರ ಇದೆ. ಗುರುಭಕ್ತಾಂಡಾರಿಯ ರಗಳೆ ಅಸಮಗ್ರವಾಗಿದ್ದು, ಒಂದೇ ಒಂದು ಹಸ್ತಪ್ರತಿಯಲ್ಲಿದೆ. ನಗೆಯ ಮಾರಿತಂದೆಯ ರಗಳೆಯು ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಕೆ. ಎ. ೬೨ನೆಯ ಅಂಕದ ಕಾಗದದ ಪ್ರತಿಯಲ್ಲಿ ಮಾತ್ರ ದೊರೆಯುತ್ತದೆ. ಇವು ಅಚ್ಚುಮಾಡಿಸಲು ತಕ್ಕುವಾಗಿಲ್ಲ, ಹರಿಹರನ ತಲೆಗೆ ಕಟ್ಟಿರುವ ರಗಳೆಗಳು."[೨] ಇವುಗಳಿಗೆ ಹೆಚ್ಚಿನದಾಗಿ "ಚೋಳಿಯಕ್ಕನ ರಗಳೆ" ಗದುಗಿನ ತೋಂಟದಾರ್ಯಮಠದ ಕಟ್ಟಿನಲ್ಲಿ "ವಿರೂಪಾಕ್ಷ" ಅಂಕಿತದಿಂದ ದೊರೆಯುತ್ತದೆ. ಈ ಎಂಟೂ ರಗಳೆಗಳನ್ನು ಸಂಗ್ರಹಿಸಿ ಪ್ರಕಟಿಸುವುದು ಅವಶ್ಯವಿದೆ.

---

೧. "ವಿರೂಪಾಕ್ಷ" ಅಂಕಿತದಲ್ಲಿ ಈ ಹೆಸರಿನ ಇನ್ನೊಂದು ರಗಳೆ ಸಿಗುತ್ತದೆ. ನೋಡಿರಿ 'ಹಂಪೆಯ ಹರಿಹರದೇವನ ರಗಳೆಗಳು', ಭಾಗ–೨ ಸಂ. ಬಿ. ಸಿ. ಜವಳಿ, ಮಲ್ಲಾಬಾದಿ ವೀರಭದ್ರಪ್ಪ.

೨. "ಹರಿಹರೇತರಕೃತ ವಿರೂಪಾಕ್ಷಾಂಕಿತ ಶಿವಶರಣ ಸಂಪುಟ": ಪೀಠಿಕೆ ೧೨೨. ಇನ್ನಷ್ಟು ವಿವರಗಳಿಗೆ "ಶರಣಚರಿತ ಮಾನಸಂ"–ದೇವೀರಪ್ಪ. ಪೀಠಿಕೆ VII –ಅಟಿ, X ಮತ್ತು XXX-XXXI ನೋಡಿರಿ.

**ಮೂಲ ಆಕರ:**

ಕನ್ನಡಸಾಹಿತ್ಯ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ, ಮುಖ್ಯವಾಗಿ ಸಂಸ್ಕೃತ-ಕನ್ನಡವೆಂಬ ದ್ವಿಭಾಷಾ ಸಂದರ್ಭದಲ್ಲಿ ಬದುಕು ಮಾಡಿದೆ. ಹರಿಹರ ಬರುವ ವರೆಗೆ ಸಂಸ್ಕೃತಸಾಹಿತ್ಯ ಕನ್ನಡಕ್ಕೆ ಗಣಿಯೆನಿಸಿದ್ದಿತು. ಅಲ್ಲಿಯ ಕೃತಿಗಳನ್ನವಲಂಬಿಸಿ ಭಾಷಾಂತರ, ಸೃಜನಶೀಲ, ಭಾಷಾಂತರ, ರೂಪಾಂತರ ರೀತಿಯ ಕಾವ್ಯಗಳು ನಮ್ಮಲ್ಲಿ ಹುಟ್ಟಿಬಂದವು. ಹರಿಹರ, ಆರ್ಯಮೂಲದ ಸಂಸ್ಕೃತ ಆಕರಕ್ಕೆ ವಿದಾಯ ಹೇಳುವ ರೀತಿಯಲ್ಲಿ ಪುರಾತನರ ರಗಳೆಗಳಿಗಾಗಿ ದ್ರಾವಿಡಮೂಲದ ತಮಿಳು ಆಕರವನ್ನು, ಅಸಂಖ್ಯಾತರ ರಗಳೆಗಳಿಗಾಗಿ ಕನ್ನಡಮೂಲದ ವಚನ ಆಕರವನ್ನು ಅವಲಂಬಿಸಿದನು. ಮೂರನೆಯದಾಗಿ ಈ ಎರಡೂ ಬಗೆಯ ಕೃತಿಗಳಿಗಾಗಿ ಕ್ಷೇತ್ರಕಾರ್ಯವನ್ನೂ ಮಾಡಿದನು.

ಪುರಾತನರನ್ನು ಕುರಿತ ಪ್ರಾಚೀನ ತಮಿಳುಕೃತಿಗಳು ಸುಂದರಮೂರ್ತಿಯ (ನಂಬಿಯಣ್ಣ ೯ನೆಯ ಶತಮಾನ) "ತಿರುತ್ತೊಂಡತ್ತೊಗೈ" ಮತ್ತು ನಂಬಿಯಾಂಡಾರ್ ನಂಬಿಯ (೧೧ನೆಯ ಶತಮಾನ) "ತಿರುತ್ತೊಂಡರ್ ತಿರುವಂದಾದಿ." ಇವುಗಳನ್ನು ಆಧಾರವಾಗಿಟ್ಟುಕೊಂಡು ಹುಟ್ಟಿದ ಕೃತಿ ಶೇಕ್ಕಿಳಾರ್‌ನ "ಪೆರಿಯಪುರಾಣಂ." ಇವುಗಳಲ್ಲದೆ ಇವರನ್ನು ಕುರಿತು ಉಪಮನ್ಯುವಿನ ಭಕ್ತವಿಲಾಸ, ಅಗಸ್ತ್ಯರ "ಶಿವಭಕ್ತ ಮಹಾತ್ಮೆ" ಹೆಸರಿನ ಸಂಸ್ಕೃತ ಕೃತಿಗಳೂ ತಮಿಳುನಾಡಿನಲ್ಲಿ ಹುಟ್ಟಿವೆ. ಇವುಗಳಲ್ಲಿ ತಮಿಳಿನ ಮೂರೂ ಕೃತಿಗಳನ್ನು, ಕೊನೆಯಪಕ್ಷ ಪೆರಿಯ ಪುರಾಣವನ್ನು ಹರಿಹರ ಆಧರಿಸಿರುವನೆಂದು ವಿದ್ವಾಂಸರು ಹೇಳುತ್ತಾರೆ. ಇದನ್ನು ಕಥನಕ್ರಮ, ಘಟನೆ, ವಾಕ್ಯ-ಶಬ್ದಗಳ ಸಾಮ್ಯದಿಂದ ಇವರು ತೋರಿಸಿಕೊಟ್ಟಿದ್ದಾರೆ. ಸಾಲದುದಕ್ಕೆ ತಮಿಳು ತೇವಾರಂಗಳನ್ನೂ ಹರಿಹರ ಬಳಸಿಕೊಂಡಂತಿದೆ. ಹೀಗಿದ್ದೂ ಅನೇಕ ಕಡೆಗಳಲ್ಲಿ ಪುರಾತನರ ಚರಿತ್ರೆಯ ಕೆಲವು ಘಟನೆಗಳನ್ನು, ಅಲ್ಲಿಯ ಕೆಲವು ಅಂಕಿತನಾಮಗಳನ್ನು ಕೈಬಿಡುತ್ತಾನೆ, ಹರಿಹರ. ಇದಕ್ಕೆ ಕಾರಣ, ತಮಿಳು ನೆಲಕ್ಕೆ ನಿಷ್ಠವಾಗಿರುವ ಪುರಾತನರ ಕಥೆಗಳು ಆ ಸಂಬಂಧವನ್ನು ಕಳಚಿಕೊಂಡು, ಕನ್ನಡ ನೆಲಕ್ಕೆ ಹತ್ತಿರವಾಗಲಿ ಎಂಬ ಉದ್ದೇಶವಿರುವಂತಿದೆ.

ಪೆರಿಯ ಪುರಾಣವನ್ನು ಆಧಾರವಾಗಿಟ್ಟುಕೊಂಡು ತಮಿಳು ಪುರಾತನರ ರಗಳೆ ಬರೆದುದಕ್ಕಿಂತಲೂ ಹರಿಹರ ಮಾಡಿದ ದೊಡ್ಡ ಉಪಕಾರವೆಂದರೆ, ತಾನೇ ವಿಷಯವನ್ನು ಸಂಗ್ರಹಿಸಿ, ಕರ್ನಾಟಕದ ಅಸಂಖ್ಯಾತರ ರಗಳೆಗಳನ್ನು ಪ್ರಥಮ ಸಲ ಬರೆದುದು. ಈ ರಗಳೆಗಳನ್ನು ಬರೆಯುವಲ್ಲಿ ಅವನಿಗೆ ಶರಣರ ವಚನಸಾಹಿತ್ಯವೂ ನೆರವಾಗಿ ಬಂದಿದೆ. ವಚನಗಳಲ್ಲಿ ಕ್ವಚಿತ್ತಾಗಿ ಮಿಂಚುವ ಸಣ್ಣ ಘಟನೆಗಳನ್ನೇ ಆಧಾರವಾಗಿಟ್ಟುಕೊಂಡು ಒಂದು ದೊಡ್ಡ ಸನ್ನಿವೇಶವನ್ನು ಸೃಷ್ಟಿಸುತ್ತಾನೆ. ಉದಾ: ಬಸವಣ್ಣನವರ ಮನೆಯ ಆಕಳುಗಳನ್ನು ಕಳ್ಳರು ಸೆರೆ ಹಿಡಿದುದು. ಎರಡನೆಯದಾಗಿ ವಚನವಾಕ್ಯಗಳನ್ನು ಅಲ್ಪ ವ್ಯತ್ಯಾಸದೊಂದಿಗೆ ಬಳಸಿಕೊಂಡುದು.

ಹೀಗೆ ಪುರಾತನರ, ಅಸಂಖ್ಯಾತರ ರಗಳೆಗಳಿಗೆ ಲಿಖಿತ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡಿರುವ ಹರಿಹರ, ಪುರಾತನರ ಹೆಚ್ಚಿನ ಸಾಮಗ್ರಿಗಾಗಿ ಅವನು ತಮಿಳುನಾಡನ್ನು ಸಂದರ್ಶಿಸಿರುವ ಸಾಧ್ಯತೆಯಿದೆ. ಇದಕ್ಕಿಂತ, ಅಸಂಖ್ಯಾತರ ಚರಿತ್ರೆಗಳಿಗಾಗಿ ಅವನು ಕರ್ನಾಟಕದಲ್ಲಿ ಕ್ಷೇತ್ರಕಾರ್ಯವನ್ನು ಖಂಡಿತ ಮಾಡಿದ್ದಾನೆ. ಕೆಲವೊಮ್ಮೆ ದೂರದಿಂದ ಮಾಹಿತಿ ತರಿಸಿಕೊಂಡಿದ್ದಾನೆ. ಕರ್ನಾಟಕದಲ್ಲಿ ತನ್ನ ಸುತ್ತಲೂ ಪ್ರಚಾರದಲ್ಲಿದ್ದ ಸಂಗತಿಗಳನ್ನಂತೂ ಮೊದಲ

ಆಧಾರವಾಗಿಟ್ಟುಕೊಂಡಿದ್ದಾನೆ. ಏಕಾಂತರಾಮಯ್ಯನ ರಗಳೆಯಲ್ಲಿ ಅಬ್ಬಲೂರು, ಬ್ರಹ್ಮೇಶ್ವರ ದೇವಾಲಯ, ಅಗ್ಗವಣಿ ಹೊನ್ನಿತಂದೆ, ಅಗ್ಗಳೆಯ ದೇವರಸ (ಮೂರು ಜಾವಿದೇವ), ಹುಲಿಗೆರೆ ಸೋಮನಾಥ, ಅಣ್ಣಿಗೆರೆ ಅಮೃತನಾಥ, ಕೆಂಭಾವಿ ಭೋಗನಾಥ, ಕಪ್ಪಡಿಯ ಸಂಗಮೇಶ್ವರ, ನಾಗನಾಥ, ಸೊನ್ನಲಿಗೆ ಸಿದ್ಧರಾಮ, ಹಂಪೆಯ ವಿರೂಪಾಕ್ಷ ಇಷ್ಟೆಲ್ಲ ವ್ಯಕ್ತಿ, ಸ್ಥಳ, ದೇವತೆಗಳು ತೊಡಗಿಕೊಂಡಿರುವುದು ಹರಿಹರನ ಕ್ಷೇತ್ರಕಾರ್ಯದ ವ್ಯಾಪ್ತಿಯನ್ನು ಸಾರುತ್ತದೆ. ಹೀಗೆ, ಶರಣರ ಚರಿತ್ರೆಯ ಬರೆವಣಿಗೆ ತನ್ನ ಜನ್ಮಸಾರ್ಥಕ್ಯದ ಕಾರ್ಯವೆಂಬಂತೆ ಕಷ್ಟಪಟ್ಟು ಆಕರಗಳನ್ನು ಸಂಗ್ರಹಿಸಿದ್ದಾನೆ.

ಈ ಮೂಲಕ ತಮಿಳುನಾಡು, ಕರ್ನಾಟಕ, ಉತ್ತರ ಭಾರತಗಳ ಮುಖ್ಯ ಶೈವ ಪರಂಪರೆಯನ್ನು ಚಾರಿತ್ರಿಕಸಾಹಿತ್ಯ ಮಾಧ್ಯಮದಲ್ಲಿ ದಾಖಲೀಕರಿಸುವ ಪ್ರಯತ್ನ ಮಾಡಿದ್ದಾನೆ.

**ಸಾಹಿತ್ಯಿಕ ಮೌಲ್ಯ :**

"ಸಾಹಿತ್ಯಿಕ ಮೌಲ್ಯ"ವೆನ್ನುವುದು ಭಾಷಿಕ ಅಭಿವ್ಯಕ್ತಿಗೆ ಸಂಬಂಧಿಸಿದುದಾಗಿದೆ. ಇದು ಕವಿಯ ಕೈಯಲ್ಲಿ ಅನೇಕ ಬಗೆಗಳಲ್ಲಿ ಆಕಾರ ಪಡೆಯುತ್ತದೆ. ಹರಿಹರನಲ್ಲಿ ಈ ಆಕಾರವನ್ನು ನಿಯಂತ್ರಿಸುವುದು ವಚನಕಾರರ ಕಾವ್ಯಧರ್ಮ ಮತ್ತು ಕಾವ್ಯಕರ್ಮ.

ಸಾಹಿತ್ಯವನ್ನು ಚೆನ್ನಬಸವಣ್ಣ ಕಾಯಸಾಹಿತ್ಯ, ಆತ್ಮಸಾಹಿತ್ಯವೆಂದು ವರ್ಗೀಕರಿಸುತ್ತ, "ಕಾಯಸಾಹಿತ್ಯ ಎಲ್ಲರಿಗೂ ಉಂಟು, ಆತ್ಮಸಾಹಿತ್ಯ ಅಪೂರ್ವ" ಎನ್ನುತ್ತಾನೆ. ಪಂಪನ ವಿಕ್ರಮಾರ್ಜುನವಿಜಯ ಕಾಯಸಾಹಿತ್ಯ, ಆದಿಪುರಾಣ ಆತ್ಮಸಾಹಿತ್ಯ. ಒಂದು, ಎಂಟು ಭಾವಗಳನ್ನು ಉದ್ರೇಕಿಸಿ ಎಂಟು ರಸಗಳನ್ನು ಓದುಗನಲ್ಲಿ ಸೃಷ್ಟಿಸಿ "ಸಂತೋಷ"ವನ್ನುಂಟು ಮಾಡುತ್ತದೆ. ಇನ್ನೊಂದು, ಈ ಭಾವಗಳನ್ನು ಉದ್ರೇಕಿಸಿದರೂ ಕೊನೆಗೆ ಉಪಶಮನಗೊಳಿಸಿ ಶಾಂತರಸವನ್ನು ಓದುಗನಲ್ಲಿ ಸೃಷ್ಟಿಸಿ "ಆನಂದ"ವನ್ನುಂಟು ಮಾಡುತ್ತದೆ. ಇವುಗಳಲ್ಲಿ ಹರಿಹರನದು 'ಆತ್ಮಸಾಹಿತ್ಯ' ನಿಷ್ಠ ಕಾವ್ಯಧರ್ಮವಾಗಿದೆ. ಹೀಗಾಗಿ ಇವನ ಕಾವ್ಯ, ಭಾವಗಳನ್ನು ಉದ್ರೇಕಿಸಿದರೂ ಅಂತ್ಯದಲ್ಲಿ ಉಪಶಮನದ ಫಲ ನೀಡುತ್ತದೆ. ಇಲ್ಲೆಲ್ಲ ಲೌಕಿಕದ ಪ್ರತಿಪಾದನೆ ಎಷ್ಟೇ ಇಂಬುವಡೆದರೂ ಕೊನೆಗೆ ಪರಮಾರ್ಥವೇ ನಿಚಿತ ಪ್ರಯೋಜನವೆನಿಸುತ್ತದೆ. ಕಾಮಸುಖದಂಥ ಪ್ರಖರ ಭಾವವನ್ನು ಚಿತ್ರಿಸುವಲ್ಲಿಯೂ ಅಂತಿಮವಾಗಿ ಈತನ ಕಾವ್ಯ "ಶರಣಸತಿ ಲಿಂಗಪತಿ" ಪ್ರಜ್ಞೆಗೆ ಹೊರಳಿಬಿಡುತ್ತದೆ. ಇದಕ್ಕೆ "ಏರುಂ ಜವ್ವನಂ ಶಿವಪೂಜೆಗೆಂದರಳಲಿರ್ದ ಪರಿಮಳದ ಮೊಗ್ಗೆಯಂತಿರ್ಪುದು" ಎಂಬಂತೆ ಬಸವಣ್ಣನ ಹೊಸ ಯೌವನವಿರುವುದು, "ಬೇಟವಾ ಜಂಗಮಕೆ ಸುಖಪೂಜೆ ಲಿಂಗಕ್ಕೆ । ಮಾಟವಾ ಜಂಗಮಕೆ ಕೂಟವಾ ಲಿಂಗಕ್ಕೆ" ಎಂಬಂತೆ ನಿಂಬಿಯಕ್ಕ ಸುರತಕ್ರೀಡೆಯಲ್ಲಿರುವುದು, "ಶರಣತತಿ ನಿಬ್ಬಣಿಗರಾಗುತಿರೆ, ನದಿಯ ನುಣ್ದೆರೆ ಸರಿದು ನೋಟವೊಂದಾಗುತಿರೆ, ಕೈಗೊಡೆ ಶರಣಸತಿ ಲಿಂಗಪತಿಯೊಡನಂದು" ಎಂಬಂತೆ ನದಿಯಲ್ಲಿ ಬಿದ್ದ ಲಿಂಗವನ್ನು ಕೊಂಡಗುಳಿ ಕೇಶಿರಾಜ ಪಡೆಯುವುದು ಇತ್ಯಾದಿಗಳು ನಿದರ್ಶನವೆನಿಸಿವೆ. ಇಲ್ಲೆಲ್ಲ ಕಾವ್ಯಸಾಹಿತ್ಯದ ಶೃಂಗಾರ, ಆತ್ಮಸಾಹಿತ್ಯದ ಶೃಂಗಾರಕ್ಕೆ ತಿರುಗುವ ರೀತಿ ಮನೋಜ್ಞವಾಗಿದೆ. ಹೀಗೆ ಶೃಂಗಾರ ಪ್ರಸಂಗಗಳಿಗೆ ದೈವೀಛಾಯೆಯನ್ನು ತಂದುಕೊಡುವ ಈ ಕವಿ, ಸೂರ್ಯೋದಯವನ್ನು "ಅರುಣೋದಯಂ ಹರ ಕರುಣೋದಯವಾದಂತೆ" ಎಂದು, ಕಾವೇರಿಯನ್ನು "ಹರಿದಳಾ ದೇಶದೊಳು ಹರಭಕ್ತಿ ರಸದಂತೆ" ಎಂದು, ಉದ್ಭಟದೇವನ "ಕರಣಂಗಳ್ ಶಿವನುಪಕರಣಂಗಳ್" ಎಂದು ವರ್ಣಿಸಿದುದು ತೀರ ಸಹಜವೇ ಸರಿ. ಇಲ್ಲೆಲ್ಲ ಅನುಭವವನ್ನು

ಶಿವಾನುಭವಕ್ಕೆ ಪಲ್ಲಟಿಸುವ ಕಾವ್ಯಧರ್ಮದ ರೀತಿ, ವಚನಗಳನ್ನು ಬಿಟ್ಟರೆ ಕನ್ನಡ ಸಾಹಿತ್ಯದಲ್ಲಿಯೇ ತುಂಬ ಹೊಸದು. ಎಂಥ ದಿವ್ಯ ಅನುಭವವನ್ನು ವಾಕ್ಯದಲ್ಲಿ ಹಿಡಿದಿಡುವುದಕ್ಕೆ "ಸಾಕಾರದೊಳ್ ಭಕ್ತಸನ್ನಿಹಿತನೇ, ನಿರಾಕಾರದೊಳ್ ವ್ಯೋಮಾತೀತನೇ" ಎಂಬಂಥ ನಿದರ್ಶನಗಳು ಇವನಲ್ಲಿ ಮತ್ತೆಮತ್ತೆ ಸಿಗುತ್ತವೆ.

ಮೇಲೆ ಹೇಳಿದ ಪಾರಮಾರ್ಥಿಕ ಸಂದರ್ಭಗಳಂತೆ ಲೌಕಿಕ ಸನ್ನಿವೇಶಗಳೂ ಹರಿಹರನಲ್ಲಿ ಸೊಗಸಾಗಿ ಮೂಡಿವೆ: "ನೀರ ಕೊಡನಂ ಹೊತ್ತು । ಹೊಸ ಹರೆಯಮಂ ಹೊತ್ತು" ನಿಂತ ನಿಂಬವ್ವೆಯ ರೀತಿ, "ನಡು ನಡೆ ನುಡಿಗಳ್ ಕಿರಿದಾಗುತ್ತಿರೆ । ಮುಡಿ ಮೊಲೆ ಜಘನಂ ಪಿರಿದಾಗುತ್ತಿರೆ" ಯೌವನಕ್ಕೆ ಬಂದ ಪದ್ಮಾವತಿಯ ಬೆಳವಣಿಗೆ, ಅಕ್ಕಮಹಾದೇವಿಯ ರಗಳೆಯಲ್ಲಿ "ನೋಡಿದಂ ಕೌಶಿಕನೃಪಂ ನಿಂದು ನಾರಿಯಂ । ತೀಡಿದಂ ಪುಷ್ಪಚಾಪಂ ಬಿಲ್ಲ ನಾರಿಯಂ" ಎಂದು ಬಿಡಿಸಿದ ಕೌಶಿಕನ ಚಿತ್ರ ಮುಂದುವರಿದು, "ಬಾಳೆ ಬಾಳಂತಾಗೆ ಕುಮುದಂ ಕುಮುದಮಾಗೆ । ಈಳೆ ಈಳಿಗೆಯಾಗೆ ತಿಂಗಳಿಂಗಳವಾಗೆ । ಬಿಸಜಮದು (ಬಿ)ಸಮಾಗೆ । ಕೊಳನು ಕೊಳುಗುಳಮಾಗೆ" ಎಂದು ಪೂರ್ಣಗೊಂಡ ಬಗೆ, ಲೌಕಿಕ ಕವಿತ್ವದ ಉನ್ನತ ಮಾದರಿಯೆನಿಸಿವೆ.

ಹೀಗೆ ವ್ಯಕ್ತಗೊಳ್ಳುವ ಹರಿಹರನ ಕಾವ್ಯಕರ್ಮ ಭಾವಗೀತನಿಷ್ಠವಾದುದು. ಈ ಭಾವಗೀತ ಕಲಾಸಿದ್ಧಿಯ ಎಲ್ಲ ಸಾಧ್ಯತೆಗಳನ್ನು ಅವನ ರಗಳೆಯಲ್ಲಿ, ಅದಕ್ಕಿಂತ ಅವನ ಗದ್ಯದಲ್ಲಿ ಕಾಣಬಹುದು. ರಗಳೆಗೆ ಬಂದರೆ,

"ಆಹ ಕೇತಕಿ ನಿನ್ನ ಪರಿಮಳದ ಪರಿ ಬೇರೆ
ಪರಿಮಳಂ ಸುಳಿಗೊಂಡು ಬೆಳೆದು ಕವಲಿರಿಯಿತೋ
ಉರವಣಿಸಿ ಬೆಳೆದ ಪರಿಮಳಕೆ ಗರಿ ಮೂಡಿತೋ"
"ಎಲೆಲೆ ಮೃದುವಿನ ಮೃದುವೆ ನೀನೇಕೆ ಬಲ್ಪೇಕೆ
ಎಲೆಲೆ ಬೆಳಗಿನ ಬೆಳಕೆ ನೀನೇಕೆ ತಮವೇಕೆ"
"ನಡ ನಡಂ ನಡುಗಿ ಚಳಿ ಮಗನೆ ಚಳಿ ಚಳಿ ಮಗನೆ
ಹರಣಮಂ ಹತ್ತಿತ್ತು ಶೀತವುಹುಹೆಲೆ ಮಗನೆ"
"ಮನವನಪ್ಪದವರ್ಗೆ ತನುವಾಲಿಂಗನವಗಲ್ಕೆ"
"ಹೊಳೆವ ಚಂದ್ರಿಕೆಗೆ ಕಿವಿ ಕಾಲ್ ಮೊಗಂ ಮೂಡಿತೋ"

ಇಲ್ಲಿಯ ಅಭಿವ್ಯಕ್ತಿ ಪ್ರಾಚೀನ ಕನ್ನಡಸಾಹಿತ್ಯದಲ್ಲಿಯೇ ಹೊಸ ಬಗೆಯದು. ಭಾಷೆಯನ್ನು ಹೆಚ್ಚು ಗ್ರಾಂಥಿಕಗೊಳಿಸದೆ ಅಂದರೆ ಕೃತಕಗೊಳಿಸದೆ, ಅಗತ್ಯವೆನಿಸಿದಲ್ಲಿ ಮಾತ್ರ ಏಣುಗಳನ್ನು ಮುರಿದು, ಓದುಗರ ಮನಕ್ಕೆ ಹತ್ತಿರವಾಗುವಂತೆ ಅದನ್ನು ಬಳಸುತ್ತಾನೆ. ಜೊತೆಗೆ ಭಾಷೆಯ ನಾದಗುಣವನ್ನೂ ಉಳಿಸಿಕೊಳ್ಳುತ್ತಾನೆ. ಇವುಗಳಿಂದಾಗಿ ಭಾವನಿಷ್ಠತೆ, ಗೇಯನಿಷ್ಠತೆಗಳು ಈತನ ರಚನೆಯಲ್ಲಿ ಸಂಗಮಿಸಿ ಪ್ರವಹಿಸುತ್ತವೆ.

ಹರಿಹರನ ಸಾಹಿತ್ಯದ ಇನ್ನೊಂದು ಲಕ್ಷಣ, ಉತ್ಸಾಹ. ವಿರಹ ಕಾರಣವಾಗಿ ಪರವೆನಾಚಿಗೆ "ಅಶೋಕೆ ಸಶೋಕೆ, ಮಾಮರಂ ತೋಮರಂ, ಬೆಳ್ದಿಂಗಳು ಬಿಳಿಯಿಂಗಳಂ, ಕೊಳಂ ಕೊಳುಗಳಂ, ಶಶಿ, ಬಿಸಿ, ಲತೆ, ಅಸಿಲತೆ, ಸಂಪಗೆ ಪಗೆ" ಎನಿಸಿದವು. ಇಂಥ ಶಬ್ದವಿಲಾಸವನ್ನು, ಪದೋತ್ಸಾಹವನ್ನು

ಹರಿಹರನಲ್ಲಿ ಮಾತ್ರ ಕಾಣುತ್ತೇವೆ. ನಯಸೇನನಲ್ಲಿ ಈ ಅಂಶವಿದ್ದರೂ ಅಲ್ಲಿ ನಯಗಾರಿಕೆ ಕಡಿಮೆ. ಅದು ಕಾಯಸಾಹಿತ್ಯಕ್ಕೆ ನಿಲ್ಲುವುದೇ ಹೊರತು, ಆತ್ಮಸಾಹಿತ್ಯಕ್ಕೆ ವಿಸ್ತರಿಸಿಕೊಳ್ಳುವುದಿಲ್ಲ.

ಹರಹರ ಎಷ್ಟೇ ವಿಸ್ತಾರಕ್ಕೆ ಹಿಗ್ಗಿದರೂ ಅವನ ಶೈಲಿ ವಚನಶೈಲಿಯಿಂದ ದೀಪ್ತವಾಗಿರುತ್ತದೆ, ನಿಯಂತ್ರಿಸಲ್ಪಡುತ್ತದೆ.

ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ

ಎಂಬ ವಚನವು ವಾಕ್ಯ ಪ್ರಮಾಣ, ಆದ್ಯಂತ ಪ್ರಾಸಪದಗಳ ಪುನರುಕ್ತಿ, ಪೂರ್ವಾರ್ಧ–ಉತ್ತರಾರ್ಧಗಳ ಸಮತೋಲನಗಳಿಂದಾಗಿ ರಗಳೆಯನ್ನೇ ನೆನಪಿಸುತ್ತದೆ. ಇದಕ್ಕಿಂತ ಮುಖ್ಯವಾಗಿ ಕನ್ನಡ ಮಾರ್ಗಸಾಹಿತ್ಯ ಕೆಲವೊಮ್ಮೆ ಪೂರ್ವಸಿದ್ಧ ಸಂಸ್ಕೃತ ಅವತರಣಿಕೆಗಳನ್ನು ಬಳಸಿಕೊಂಡರೆ, ಇದನ್ನು ನಿರಾಕರಿಸುವ ರೀತಿಯಲ್ಲಿ ಹರಿಹರ ಅನೇಕ ಸಲ ಪೂರ್ವಸಿದ್ಧ ಕನ್ನಡ ವಚನಗಳನ್ನೇ ಮುರಿದು ರಗಳೆಯಾಗಿಸಿದುದಕ್ಕೆ ಉದಾಹರಣೆಗಳು ಸಿಗುತ್ತವೆ. ಇನ್ನೂ ಮುಂದುವರಿದು ಹೇಳುವುದಾದರೆ ಪುರಾತನರ ರಗಳೆಗಳಲ್ಲಿ ತಮಿಳು ಭಾಷೆಯ ಛಾಯೆಯಿದ್ದರೆ, ಅಸಂಖ್ಯಾತರ ರಗಳೆಗಳಲ್ಲಿ ಕನ್ನಡ ವಚನಭಾಷೆಯ ಛಾಯೆ ದಟ್ಟವಾಗಿದೆ. ಕೆಲವೊಮ್ಮೆ ವಚನಭಾಷೆಯನ್ನೇ ಹೀಗೆ ಅವತರಿಸಿಕೊಳ್ಳುತ್ತಾನೆ:

"ಬೆಳಗಿಂಗೆ ಕತ್ತಲೆಯ ಕೂಟವುಂಟೇ ಮರುಳೆ
ತಿಳಿವಿಗಜ್ಞಾನದೊಳು ಸಂಗವುಂಟೇ ಮರುಳೆ"
"ಶರಣ ವದನ ದರ್ಪಣಂಗೆ ಮುಕುರಮಂ ಸಮಂತು ತೋರಿ"
"ಭಕ್ತನೊಡನೊಡನೆ ಬಡಿವಡೆದೆ ನಾನೆಲೆ ಮಗನೆ"
"ಆಲಿಕಲ್ಲಾಲಿಕಲ್ಲಂ ತಾಗಿದಂತಾಗೆ
ಹಾಲೊಳಗೆ ಹಾಲಂ ಕರಂ ಬೆರಸಿದಂತಾಗೆ"

ಇಂಥ ಉದಾಹರಣೆಗಳಲ್ಲಿ ಹರಿಹರ ವಚನಕಾರರ ಸಾಹಿತ್ಯಿಕ ವಾರಸುದಾರನಾಗಿ ಕಾಣುತ್ತಾನೆ. ಕೆಲವೊಮ್ಮೆ ನಾವು ಓದುವುದು ವಚನವನ್ನೋ ರಗಳೆಯನ್ನೋ ಎಂಬುದು ಗೊತ್ತಾಗದಂತೆ ಈ ಪ್ರಯೋಗ ಸಿದ್ಧಿಪಡೆದಿದೆ.

**ಸಾಹಿತ್ಯೇತರ ಮೌಲ್ಯ:**

ಉತ್ತಮ ರಚನೆಗೆ ಸಾಹಿತ್ಯಿಕ ಮತ್ತು ಸಾಹಿತ್ಯೇತರವೆಂಬ ಎರಡು ಮುಖ್ಯ ಆಯಾಮಗಳಿರುತ್ತವೆ. ಇವುಗಳಲ್ಲಿ ಸಾಹಿತ್ಯೇತರವೆನ್ನುವುದು ಸಾಂಸ್ಕೃತಿಕ, ದಾರ್ಶನಿಕವೆಂಬ ಎರಡು ಅಂಶಗಳನ್ನೊಳಗೊಂಡಿರುತ್ತದೆ. ಸಾಂಸ್ಕೃತಿಕವೆನ್ನುವುದು ಆ ಕಾಲದ 'ಸಾಮಾಜಿಕ ಆಚರಣೆ' ಮತ್ತು 'ಸಾಮಾಜಿಕ ಮೌಲ್ಯ'ಗಳನ್ನೊಳಗೊಂಡಿರುತ್ತದೆ. ಹರಿಹರನ ರಗಳೆಗಳಲ್ಲಿ ಇವೆಲ್ಲ ತುಂಬ ದಟ್ಟವಾಗಿ ಮೂಡಿನಿಂತಿವೆ.

ಹರಿಹರನ ರಗಳೆಗಳು ಒಬ್ಬ ದೇವ ಇಲ್ಲವೆ ಒಬ್ಬ ರಾಜನನ್ನು ಕುರಿತು ಬರೆದುವಲ್ಲ. ಒಬ್ಬ ವ್ಯಕ್ತಿಯನ್ನು ಕುರಿತು ಬರೆದುವೂ ಅಲ್ಲ. ಪುರುಷ–ಸ್ತ್ರೀ, ರಾಜ–ಪ್ರಜೆ, ಸ್ಪೃಶ್ಯ–ಅಸ್ಪೃಶ್ಯ, ಗುರು–ಶಿಷ್ಯ, ವಿರಕ್ತ–ಅನುರಕ್ತ ಹೀಗೆ ವೈವಿಧ್ಯಪೂರ್ಣ ವ್ಯಕ್ತಿಗಳ, ವೈಯಕ್ತಿಕ–ಸಾಮಾಜಿಕ ದೈವಿಕಜೀವನವನ್ನು ಕುರಿತು ಬರೆದುವು. ಪುರಾತನರಲ್ಲಿ "ಬ್ರಾಹ್ಮಣ, ಕಂಬಾರ, ಅಗಸ, ಮೀನುಗಾರ, ಗಾಣಿಗ, ಹೊಲಗೂಲಿ, ತುರುಕಾರ, ಕ್ಷತ್ರಿಯ, ವೈಶ್ಯ, ಮಾದಿಗ, ಬೇಡ ಮತ್ತು ಸ್ತ್ರೀ ಹೀಗೆ ಎಲ್ಲ ಜಾತಿಯವರು, ಎಲ್ಲ ವರ್ಗದವರು, ಎಲ್ಲ ಕಸಬಿನವರು, ಸ್ತ್ರೀಯರೂ ಇದ್ದಾರೆ, ಕವಿಗಳಿದ್ದಾರೆ. ಅನುಭಾವಿಗಳು, ಸಂಗೀತಗಾರರು, ಗಮಕಿಗಳು ಇದ್ದಾರೆ. ಸನ್ಯಾಸಿಗಳಿದ್ದಾರೆ, ಸಂಸಾರಿಗಳೂ ಇದ್ದಾರೆ."[೧] ಇವರು ತಮಿಳುನಾಡಿನವರಾದರೂ ಬರೆದ ಹರಿಹರ ಕನ್ನಡಿಗನಾದುದರಿಂದ ಇವರ ಕಥೆಗಳಿಗೂ ಕನ್ನಡ ಮನಸಿನ ಸಂಸ್ಪರ್ಶವಿದೆ. ಹೀಗಾಗಿ ಕನ್ನಡಿಗರ ವೈವಿಧ್ಯಮಯ ಜನಜೀವನ ರಗಳೆ ಮಾಧ್ಯಮದಲ್ಲಿ ಕಲೆಯಾಗಿ ಅರಳಿದೆ.

ಸಾಮಾಜಿಕ ಆಚರಣೆಯನ್ನು ಕುರಿತು ಹೇಳುವುದಾದರೆ ಇಲ್ಲಿ ಜಾತಕರ್ಮ, ವಿವಾಹಕರ್ಮಗಳಂಥ ವಿಶಿಷ್ಟ ಆಚರಣೆ, ಪುಷ್ಪಮಾಲಾಬಂಧ, ಓಕುಳಿ, ವೈಹಾಳಿ, ಉಪ್ಪಾರತಿ ಎತ್ತುವಿಕೆ, ಕಪಾಲಮೋಕ್ಷ, ಪಂಚಭಕ್ಷ, ಕೇಳಿಕೆ, ಗಣಪರ್ವ, ಉಳ್ಳಿಪರ್ವ, ಮದುವೆ ಚತುರ್ಥಿ, ಪಸಾಯ–ಚಡಾಯ, ಕೊಟ್ಟಣಗಳಂಥ ಸಾದಂರ್ಭಿಕ ಆಚರಣೆ, ದಿಟ್ಟವಾರಿ, ಸಂಬೋಳಿ, ದಿವ್ಯ, ದೇವರಿಗಾಗಿ ನಡೆಸುವ ಕುರುಳು–ಬೆರಳು–ಮುಡುಹು–ಮುಂದಲೆ ಸಮರ್ಪಣವ್ರತ, ಕಂಕಣ ಕಟ್ಟುವುದು, ಗಣಸಮಿತಿ, ನಂದಿಮೊಗವಾಡ, ಜೋಳವಾಳಿ, ವೇಳೆವಾಳಿ, ಪಾದಪೆಂಡೆಗಳಂಥ ಸಾಂಸ್ಕೃತಿಕ ಆಚರಣೆಗಳು, ಹರಿವಾಣದವರು, ಮಾಸಾಳ್ಗಳು, ಅಂಕರು, ಲೆಂಕರು, ತೊತ್ತುಗಳು, ಮನ್ನೆಯರು, ಪ್ರಭುವೃತ್ತಿ, ಸೇವಕಾವೃತ್ತಿಕಾರರು, ಬಾವನ್ನವೀರರು, ಛತ್ತೀಸ ಕುಲದ ರಾಜಪುತ್ರರು, ಬಾರಸಂಕಲೆಯವರು, ಗಣಕರು, ಕರಣಿಕರು, ಲೆಕ್ಕಿಗರು ಮೊದಲಾದ ವೃತ್ತಿಯವರು, ಮೈಲಾರ, ಬಾದುಮಯ್ಯ, ಭೈರವ, ಸಪ್ತಮಾತೃಕೆ, ವೀದಿವಿಟಕೇಶ್ವರ, ಕೊತ್ತಲದ ಮಾರಿ–ಮಸಣಿಗಳಂಥ ಕ್ಷುದ್ರದೇವತೆಗಳು, ಕಲುಮಟ, ಹುಲುಮಠ, ಆರವೆ, ತಟಾಕ, ಸತ್ರ, ಮಹಾಮನೆ, ಓಲಗ, ಕರಣಶಾಲೆ, ಶಿವಪುರ, ಹಿರಿಯಕೇರಿ, ಅಗ್ರಹಾರಗಳಂಥ ನೆಲೆಗಳು, ಹೆಗಲಮಿಳಿ, ಕೈಯಕಂಕರಿ, ದಂಡಿಗೆ, ಹರಿಗೋಲು, ನಂದಿಯುಂಡಿಗೆ, ಅಯ್ದೆದಾಳಿ, ಕೊಲ್ಲಾರಬಂಡಿ, ಗಳಿಗೆ ಬಟ್ಟಲು, ಭಾಷಾಪತ್ರ, ಕಕ್ಷಪುಟ, ಶಿವಭಾರಗಳಂಥ ವಸ್ತು ಉಪಕರಣಗಳು, ಶಂಖ, ಘಂಟೆ, ನಿಸ್ಸಾಳ, ಪಟಹ, ತಾಳ, ಡಿಂಡಿಮ, ಕೌಸಾಳ, ಮುರಜ, ಕಹಳೆ, ಆವುಜ, ಕೊಳಲು, ಕರಡೆ, ಗಿರುಗಟೆ, ಕಿನ್ನರಿ, ವೀಣೆ, ಘಟ ಮೊದಲಾದ ವಾದ್ಯಗಳು, ಆಡುವಗಣರಿ, ಆಡುವ ಕಥನ, ಪ್ರಸಂಗ, ಪಾತ್ರಗಳಂಥ ಅಭಿನಯ ಕಲೆಗಳು, ಚಿಟ್ಟುಮುರಿಯಾಟ, ಕೋಡಂಗಿಯಾಟಗಳಂಥ ಆಟಗಳು, ಕಳವೆಯೋಗರ, ಹಾಲುಂಡೆ, ಹಾಲಲವುಗೆ, ಮಂಡಗೆ, ಗಾರಿಗೆ, ಹೂರಿಗೆ, ಸೇವಗೆ, ಸರವಳಿಗೆ, ಹೂಸಣಂಬ, ಪರಡಿಯ ಪಾಯಸ, ಹಾಲಮಂಡಗೆ, ತರಗ, ಇಡ್ಡಲಿಗೆ, ಬೀಸುವೂರಿಗೆ, ಅಣ್ಣೆವಾಲ ಪಾಯಸಗಳಂಥ ಉಣಿಸು–ತಿನಿಸುಗಳು ರಗಳೆಗಳಲ್ಲಿ ರಾಶಿರಾಶಿಯಾಗಿ ಕಂಡುಬರುತ್ತವೆ. ಕವಿ ಅಗತ್ಯವಿರುವಲ್ಲಿ ಇವುಗಳನ್ನು ಎರಕ ಹೊಯ್ದಿದ್ದು, ಇವುಗಳ ಅಭ್ಯಾಸವೇ ಒಂದು ಸ್ವತಂತ್ರ

---

೧. ಹರಿಹರೇತರ ಕೃತ ವಿರೂಪಾಕ್ಷಾಂಕಿತ ಶಿವಶರಣ ಸಂಪುಟ–ಎಚ್. ದೇವೀರಪ್ಪ, ಪೀಠಿಕೆ, ೧೧೫.

ಗ್ರಂಥವಾಗಬಹುದಾಗಿದೆ. ಕೇವಲ ದನಗಾಹಿಯ ವೇಷಭೂಷಣಗಳಿಗೆ ಸೀಮಿತಗೊಳಿಸಿದರೆ, ಹರಿಹರ ಕೊಡುವ ಕೆಳಗಿನ ವಿವರಗಳು ಕಲ್ಪಿತವಲ್ಲ, ತುಂಬ ವಾಸ್ತವವೆನಿಸುತ್ತವೆ.

ಹೆಗಲ ಕಂಬಳಿ ಕೈಯ ಕಲ್ಲಿಯೋಗರದಿಂದೆ

.....................................................

ಪಿಡಿದ ಗೋವಳಿಗೋಲ ಮಾಲೆಗಳ ಹಾಹೆಯಿಂ
ತೊಡರ ಬಾವುಲಿಯೊಳಗೆ ಜವಿ ಹಲವು ದಂಡೆಯಿಂ
ಗರುಗುಂಜಿಯಿಂ ಸವೆದ ದಂಡೆ ಮಂಡೆಯೊಳೊಪ್ಪೆ
ಕರಮೆಸೆವ ಚೆನ್ನಗುಳ್ಳೆಯ ಚೀರದಿಂದೊಪ್ಪೆ
ಕಿವಿಯಲಿಕ್ಕಿದ ಬಳಹದೋಲೆ ಹಳದಿಯ ಉಡಿಗೆ
ಸವೆಯದೂದುವ ಕೊಳಲು ಮೈಯ ತವರದ ತೊಡಿಗೆ

ಪ್ರಾಸಂಗಿಕವಾಗಿ ಕೊಡುವ ಇಂಥ ನೂರಾರು ವಿವರಗಳು ಈ ಕಾಲದ ಜೀವನದೃಶ್ಯವನ್ನು ಬಿಚ್ಚಿ ತೋರಿಸುತ್ತವೆ. ಇದೇ ರೀತಿ ಬ್ರಾಹ್ಮಣ, ಬೇಡ, ಸೂಳೆ, ಶೂದ್ರ ಇತ್ಯಾದಿ ಜನವರ್ಗದ ವೇಷಭೂಷಣಗಳನ್ನು ಇಲ್ಲಿ ಕಾಣಬಹುದಾಗಿದೆ. ಕೃಷಿ, ವಾಣಿಜ್ಯ, ಯುದ್ಧ, ನ್ಯಾಯಪದ್ಧತಿ ಇತ್ಯಾದಿಗಳ ಚಿತ್ರಣಕ್ಕೂ ಇಲ್ಲಿ ಕೊರತೆಯಿಲ್ಲ.

ಹರಿಹರನ ರಗಳೆಗಳಲ್ಲಿ ನಾವು ಈ ಮೊದಲಿನಕ್ಕಿಂತ ಭಿನ್ನವಾದ "ಮೌಲ್ಯ"ಗಳನ್ನು ಎದುರು ನೋಡುತ್ತೇವೆ. ಇವುಗಳಲ್ಲಿ ಮುಖ್ಯವಾದುದು ವೀರಕ್ಕೆ ಪ್ರತಿಯಾಗಿ ಸ್ಥಾಪಿಸಿದ ಭಕ್ತಿಯನ್ನು. ಕೇವಲ ಧಾರ್ಮಿಕ ಭಕ್ತಿಯಾಗಿ ಉಳಿಯದೆ, ಸಮಾಜೋಧಾರ್ಮಿಕ ಭಕ್ತಿಯ ನೆಲೆಗೂ ಇಳಿದ ಕಾರಣ, ಇದು ಆವೇಶ ಪ್ರತಿಭಟನೆ ಇತ್ಯಾದಿ ರೂಪಗಳಲ್ಲಿ ಬಿಚ್ಚಿಕೊಂಡಿದೆ. ಧಾರ್ಮಿಕ ಭಕ್ತಿಮೌಲ್ಯಕ್ಕೆ ಅನೇಕ ರಗಳೆಗಳಲ್ಲಿ ಬರುವ ಪೂಜೆ, ದೀಕ್ಷೆ ಇತ್ಯಾದಿ ಪ್ರಸಂಗಗಳನ್ನು ಉದಾಹರಿಸಬಹುದು. ಸಮಾಜೋಧಾರ್ಮಿಕ ಭಕ್ತಿ ನೆಲೆಗೆ ಇಳಿದಲ್ಲೆಲ್ಲ ವರ್ಗಭೇದ, ವರ್ಣಭೇದ, ಲಿಂಗಭೇದ ಸಂಸ್ಕೃತಿಗಳ ವಿರುದ್ಧ ಎತ್ತಿದ ದನಿ ಇಲ್ಲಿ ಎದ್ದು ಕೇಳಿಸುತ್ತದೆ.

ಬಸವರಾಜದೇವರ ರಗಳೆ, ಕೊಂಡಗುಳಿ ಕೇಶಿರಾಜನ ರಗಳೆ, ಬಾಹೂರ ಬೊಮ್ಮಯ್ಯನ ರಗಳೆ, ತೆಲುಗು ಜೊಮ್ಮಯ್ಯನ ರಗಳೆಗಳು ವರ್ಗವ್ಯವಸ್ಥೆಯನ್ನು ತುಂಬ ಸಶಬ್ದವಾಗಿ ಪ್ರಶ್ನಿಸುತ್ತವೆ. ಪೆರ್ಮಾಡಿರಾಯನನ್ನು ಕೇಶಿರಾಜ ಪ್ರಶ್ನಿಸುವ ರೀತಿ ಏಕಮುಖಿಯಾಗಿದ್ದರೆ, ಬಿಜ್ಜಳನನ್ನು ಬಸವಣ್ಣ ಪ್ರಶ್ನಿಸುವ ರೀತಿ ಬಹುಮುಖಿಯಾಗಿದೆ. ಭಾಂಡಾರದ ಒಡೆಯ ರಾಜನಲ್ಲ–ಪ್ರಜೆಗಳು; ಅವರು ರಾಜನಿಗಿಂತ ಮುಖ್ಯರು–ಇತ್ಯಾದಿ ತತ್ವಗಳು ಬಸವರಾಜದೇವರ ರಗಳೆಗಳಲ್ಲಿ ಉದ್ದಕ್ಕೂ ಬಿತ್ತರಿಸಲ್ಪಟ್ಟಿವೆ. ಬಸವ ಸಂವಿಧಾನ–ಬಿಜ್ಜಳ ಸಂವಿಧಾನಗಳ ಮುಖಾಮುಖಿ ಸಂಘರ್ಷಗಳಲ್ಲಿ ಬಸವಣ್ಣನೊಳಗೆ ಹರಿಹರನೇ ನಿಂತು ಮಾತನಾಡುವನೆನಿಸುತ್ತದೆ. ಅಂದರೆ ಪಾತ್ರಗಳು ರಾಜನನ್ನು ವಿರೋಧಿಸುವಲ್ಲಿ, ಹರಿಹರನು ರಾಜತ್ವವನ್ನು ನಿರಾಕರಿಸಿದ ಸಿಟ್ಟೂ ಸೇರಿ, ಸಂದರ್ಭದ ಪರಿಣಾಮ ಇಮ್ಮಡಿಗೊಳ್ಳುತ್ತದೆ.

ವರ್ಣಭೇದ ನಿರಾಕರಣೆ ಮಾದರ ಚೆನ್ನಯ್ಯ, ತಿರುನಾಳ್ಪೋವ, ಸಾಮವೇದಿ ರಗಳೆಗಳಲ್ಲಿ ಸೌಮ್ಯ ನೆಲೆಯಲ್ಲಿ, ಹಾವಿನಹಾಳ ಕಲ್ಲಯ್ಯನ ರಗಳೆಯಲ್ಲಿ ವೈಯಕ್ತಿಕ ಸಂಘರ್ಷದ ನೆಲೆಯಲ್ಲಿ ಜರುಗಿದರೆ, ಬಸವರಾಜದೇವರ ರಗಳೆಯಲ್ಲಿ ಸಾಮಾಜಿಕ ಸಂಘರ್ಷರೂಪದಲ್ಲಿ ವ್ಯಾಪ್ತಗೊಂಡಿದೆ. ಬಸವರಾಜದೇವರ ರಗಳೆಯಲ್ಲಿ ಸಂಬೋಳಿ ನಾಗಿದೇವ ಪ್ರಸಂಗ, ಕೇತಕಿಪುಷ್ಪ ಪ್ರಸಂಗಗಳು

ತುಂಬ ಅರ್ಥಪೂರ್ಣವೆನಿಸಿವೆ. ಹಾವಿನಹಾಳ ಕಲ್ಲಯ್ಯನ ಮಗಳು ಬ್ರಾಹ್ಮಣ ಮುಟ್ಟಿ ಮೈಲಿಗೆಯಾಯಿತೆಂದು ನೀರು ತುಂಬಿದ ಮಣ್ಣಿನ ಕೊಡವನ್ನು ಒಡೆದು ಹಾಕಿದುದು, ನಾಯಿಯಿಂದ ವೇದ ಓದಿಸಿದುದು, ಸಾಮವೇದಿಯ ನೆರಳಿನಿಂದ ಮೈಲಿಗೆಯಾಗುವುದೆಂದು ತಾನು ಬೇಯಿಸುತ್ತಿದ್ದ ಮಾಂಸದ ಮೇಲೆ ಶ್ವಪಚಯ್ಯ ಕೆರಹು ಮುಚ್ಚುವುದು, ಚೋಳ ಚಕ್ರವರ್ತಿ ಮಾದರಚೆನ್ನಯ್ಯನ ಗುಡಿಸಲಿಗೆ ಹೋಗಿ ನಮಸ್ಕರಿಸುವುದು, ಕೆಂಬಾವಿ ಭೋಗಣ್ಣ ಅನಾಮಿಕನನ್ನು ಮನೆಯಲ್ಲಿ ಸತ್ಕರಿಸಿ ಅರಸನ ಮುನಿಸಕ್ಕೆ ಗುರಿಯಾಗಿ ಊರು ಬಿಡುವುದು ಇತ್ಯಾದಿಗಳು ಅಸ್ಪೃಶ್ಯತೆಯ ನಿರಾಕರಣೆಗೆ ನಿದರ್ಶನವೆನಿಸಿವೆ. ಬ್ರಾಹ್ಮಣರು ಹೊಲೆಯ, ಹೊಲಗೇರಿ ಶಬ್ದ ಬಳಸಿದರೆ, ಶಿವಭಕ್ತರು ಹಿರಿಯಕುಲ, ಹಿರಿಯಕೇರಿ ಪದ ಬಳಸುವುದು ರಗಳೆಯಲ್ಲಿ ಪದೇ ಪದೇ ಕಂಡುಬರುತ್ತದೆ. ಇಷ್ಟೇ ಏಕೆ ಹೊಲೆಯರನ್ನು ಕಥಾನಾಯಕರನ್ನಾಗಿ ಮಾಡಿಕೊಂಡುದೇ ಈ ರಗಳೆಗಳ ಮೊದಲ ಮಹತ್ವದ ಸಾಧನೆಯಾಗಿದೆ.

ಶರಣ ಚಳುವಳಿಯಲ್ಲಿ ರೂಪಗೊಂಡ ಸ್ವತಂತ್ರ ಹೆಣ್ಣು, ರಗಳೆಗಳಲ್ಲಿ ಸೊಗಸಾಗಿ ಮೂಡಿಬಂದಿದ್ದಾಳೆ. ಆಕೆಯನ್ನು ಕಥಾನಾಯಕಿಯನ್ನಾಗಿಸುದುದೇ ರಗಳೆಗಳ ಮೊದಲ ವಿಜಯವೆನಿಸಿದೆ. ವೈಜಕವ್ವೆ, ಪಾಂಡ್ಯಮಹಾದೇವಿ, ಹೇರೂರು ಹೆಂಗೂಸು, ಕಾರಿಕಾಲಮ್ಮೆ, ಮಹಾದೇವಿಯಕ್ಕ ಮೊದಲಾದವರು ಸ್ತ್ರೀಗೂ ಪುರುಷನಷ್ಟೇ ಆತ್ಮೋದ್ಧಾರದ ಅವಕಾಶವಿದೆಯೆಂದು ನಂಬಿದವರಾಗಿದ್ದಾರೆ. ಇಂಥ ಅವಕಾಶಕ್ಕೆ ಅಡ್ಡಿಯನ್ನುಂಟುಮಾಡಿದ ಭವಿ ಗಂಡನನ್ನೇ ಕೆಲವರು ತೊರೆದವರಾಗಿದ್ದಾರೆ.

ಹೀಗೆ ವರ್ಗ, ವರ್ಣ, ಲಿಂಗಭೇದ ನೀತಿಯನ್ನು ನಿರಾಕರಿಸಿ ಜೀವಪರವಾಗಿ ತುಡಿಯುವ ಇಲ್ಲಿಯ ಪಾತ್ರಗಳು "ನಿಮ್ಮೊಳಂ ಸಂಗನೊಳವಿಭೇದಂ" ಅಂದರೆ ಪ್ರಜೆಗಳಿಗೂ ಪರಶಿವನಿಗೂ ಭೇದವಿಲ್ಲವೆಂಬುದು ಉಸಿರಾಡಿಸುತ್ತವೆ. ಬಸವರಾಜದೇವರ ರಗಳೆಯಲ್ಲಿ ಬರುವ "ಜಂಗಮ ವೇಳೆ" ಎಂಬ ಪದ ರಾಜನಿಗೆ ವೇಳೆವಾಳಿಯಾಗುವುದಕ್ಕೆ ಪ್ರತಿಯಾಗಿ, ಪ್ರಜೆಗೆ ವೇಳೆವಾಳಿಯಾಗಬೇಕೆಂಬ ಹೊಸ ಮೌಲ್ಯವನ್ನು ಪ್ರತಿಪಾದಿಸುತ್ತದೆ.

ಧರ್ಮ ಕೆಟ್ಟು ಕರ್ಮವಾದಾಗ "ಸತ್ಯದ ಸೋಗು" ಸಮಾಜದಲ್ಲಿ ಅಸ್ತಿತ್ವಕ್ಕೆ ಬರುತ್ತದೆ. ಇಂಥ ಕರ್ಮದ ನಿರಾಕರಣೆ ರಗಳೆಗಳಲ್ಲಿ ಉದ್ದಕ್ಕೂ ಎದ್ದು ಕಾಣುತ್ತದೆ. ಬಸವರಾಜದೇರ ರಗಳೆಯಲ್ಲಿ "ಶಿವಭಕ್ತಿಯುಂ ಕರ್ಮಮಂ ಎಂದುಂ ಒಂದಾಗಿರವು" ಎಂಬ ಸೂತ್ರರೂಪದ ಮಾತನ್ನು ಇಲ್ಲಿ ನೆನೆಯಬಹುದು. ಕಣ್ಣಪ್ಪನ ರಗಳೆಯಲ್ಲಿ ಭಕ್ತಿ-ಕರ್ಮಗಳ ಸಂಘರ್ಷ, ಭಕ್ತಿಯ ಮೇಲುಗೈಗಳನ್ನು ಗಮನಿಸಬಹುದು.

ಹೀಗೆ ಹೊಸ ಮೌಲ್ಯಗಳು ರಗಳೆಗಳಲ್ಲಿ ಕಂಡುಬರುತ್ತಿದ್ದು, ಇವುಗಳ ಅನುಷ್ಠಾನಕ್ಕಾಗಿ ಹೋರಾಟ ಅನಿವಾರ್ಯವೇ ಸರಿ. ಆದುದರಿಂದ ಸಾಮಾನ್ಯವಾಗಿ ಎಲ್ಲ ರಗಳೆಗಳಲ್ಲಿ ಪಕ್ಷ-ಪ್ರತಿಪಕ್ಷಗಳು ನಿರ್ಮಾಣವಾಗಿ, ಒಂದು ಬಗೆಯ ಘರ್ಷಣೆಯ ಗದ್ದಲ ಉದ್ದಕ್ಕೂ ಕೇಳಿಸುತ್ತದೆ. ಇಂಥ ಸಂದರ್ಭಗಳು ಕಾರಣವಾಗಿ ಹರಿಹರನನ್ನು ಕನ್ನಡದ ಪ್ರಥಮ ಸಂಘರ್ಷ ಕವಿಯೆನ್ನಬೇಕಾಗುತ್ತದೆ.

ಹರಿಹರನ ದರ್ಶನ ಭಕ್ತಿಕೇಂದ್ರಿತವಾದುದು. ಏಕದೇವ ಮೌಲ್ಯವನ್ನು ಎತ್ತಿ ಹಿಡಿಯುವುದು, ಆ ದೇವನು ಸಾಕಾರನೂ ನಿರಾಕಾರನೂ ಎಂದು ನಂಬುವುದು, ಜೀವ-ದೇವಗಳಲ್ಲಿ

ಭಾವಸಂಗಮವನ್ನು ಅನುಭವಿಸುವುದು, ಈ ಭಕ್ತಿಯ ಸ್ವರೂಪವಾಗಿದೆ. ಹೀಗಾಗಿ ಕಾಮದಂಥ ಉತ್ಕಟಭಾವವೂ ಇವನಲ್ಲಿ ನಿಷ್ಕಾಮಕ್ಕೆ ತಿರುಗುತ್ತದೆ. ಲೋಕಾನುಭವಗಳೆಲ್ಲ ಕೊನೆಯಲ್ಲಿ ಶಿವಾನುಭವಕ್ಕೆ ಹೊರಳುತ್ತದೆ. ಶಿವನನ್ನು "ನಿರಾಕಾರದೊಳ್ ವ್ಯೋಮಾತೀತನೇ, ಸಾಕಾರದೊಳ್ ಭಕ್ತಸನ್ನಿಹಿತನೇ" ಎಂದು ಹೇಳುವ ಅವನ ದರ್ಶನಕ್ಕೆ ನೂರಾರು ನಿದರ್ಶನಗಳು ಸಿಗುತ್ತವೆ.

**ಪರಿಷ್ಕರಣ:**

ಹರಿಹರನ ರಗಳೆಗಳಲ್ಲಿ ಮೊದಲು ಪ್ರಕಟವಾದುದು ಬಸವರಾಜದೇವರ ರಗಳೆ. ಟಿ. ಎಸ್. ವೆಂಕಣ್ಣಯ್ಯ ಅವರಿಂದ ೧೯೩೦ರಲ್ಲಿ ಬೆಳಕು ಕಂಡಿತು. ಚೆನ್ನಮಲ್ಲಿಕಾರ್ಜುನರು ೧೯೩೩ರಲ್ಲಿ ಮಹಾದೇವಿಯಕ್ಕನ ರಗಳೆಯನ್ನು, ೧೯೪೨ರಲ್ಲಿ 'ಹರಿಹರನ ಮೂರು ರಗಳೆ'ಗಳನ್ನು ಪ್ರಕಟಿಸಿದರು. ೧೯೩೩-೪೦ರ ಅವಧಿಯಲ್ಲಿ ಹಳಕಟ್ಟಿಯವರು 'ಹರಿಹರನ ರಗಳೆಗಳು' ಹೆಸರಿನಲ್ಲಿ ೭ ಸಂಪುಟಗಳನ್ನು (ಒಟ್ಟು ರಗಳೆ ೪೬) ಹೊರತಂದರು. ೧೯೪೩ರಲ್ಲಿ ಬಿ. ಶಿವಮೂರ್ತಿಶಾಸ್ತ್ರಿಗಳು ವೀರಭದ್ರದೇವರ ರಗಳೆ (ದಕ್ಷಾಧ್ವರ ರಗಳೆ)ಯನ್ನು, ೧೯೪೬ರಲ್ಲಿ ತೀನಂಶ್ರೀ ಅವರು ನಂಬಿಯಣ್ಣನ ರಗಳೆಯನ್ನು ಪ್ರಕಟಿಸಿದರು. ಹೀಗೆ ಹರಿಹರನ ರಗಳೆಗಳ ಹರಹು ಈ ಹೊತ್ತಿಗೆ ಜನರ ಗಮನ ಸೆಳೆಯಿತು.

ಈ ಮಧ್ಯೆ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಘ ೧೯೪೨ರಲ್ಲಿ "ಮಹಾಕವಿ ಹಂಪೆಯ ಹರಿಹರದೇವನ ಸಮಗ್ರ ಗ್ರಂಥ" ಪ್ರಕಟಿಸಲು, ಪ್ರೊ. ಎಚ್. ದೇವೀರಪ್ಪ, ಡಾ. ಹಿರೇಮಲ್ಲೂರು ಈಶ್ವರನ್ ಸೇರಿ ೧೯೬೦ರ ಸುಮಾರಿಗೆ ಹರಿಹರನ ಸಮಗ್ರ ರಗಳೆ ಪ್ರಕಟಿಸಲು ಮಾಡಿದ ಸಂಕಲ್ಪ ಈಡೇರಲಿಲ್ಲ.

ಈ ಎಲ್ಲ ಪ್ರಯತ್ನಗಳ ನಡುವೆ ಡಾ. ಹಿರೇಮಲ್ಲೂರು ಈಶ್ವರನ್ ಅವರು "ಹರಿಹರನ ಕೃತಿಗಳು : ಒಂದು ಸಂಖ್ಯಾನಿರ್ಣಯ" ಹೆಸರಿನಲ್ಲಿ ಪಿಎಚ್.ಡಿ. ಅಧ್ಯಯನ ಪೂರೈಸಿದುದು (೧೯೫೪) ಅಗತ್ಯ ಗಮನಿಸಬೇಕಾದ ಪ್ರಯತ್ನ. ಪ್ರೊ. ಎಚ್. ದೇವೀರಪ್ಪ ಅವರು "ಶರಣ ಚರಿತಮಾನಸಂ" ಕೃತಿಯಲ್ಲಿ (೧೯೬೮) ಪುರಾತನರ ೨೪ ರಗಳೆ ಮತ್ತು "ಹರಿಹರೇತರ ಕೃತ ವಿರೂಪಾಕ್ಷಾಂಕಿತ ಶಿವಶರಣರ ಸಂಪುಟ" ಕೃತಿಯಲ್ಲಿ (೧೯೭೩) ತಮಿಳುನಾಡು, ಕನ್ನಡನಾಡುಗಳ ಶರಣರ ೪೨ ರಗಳೆ, ಹೀಗೆ ೬೬ ರಗಳೆಗಳನ್ನು ಪ್ರೊ. ಬಿ. ಸಿ. ಜವಳಿ ಮತ್ತು ಶ್ರೀ ಮಲ್ಲಾಬಾದಿ ವೀರಭದ್ರಪ್ಪ ಅವರು ಹಂಪೆಯ ಹರಿಹರ ದೇವನ ರಗಳೆಗಳು ಭಾಗ-೧ (೧೯೫೮), ಭಾಗ-೨ (೧೯೬೯) ಸೇರಿ ೨೮ ರಗಳೆಗಳನ್ನು, ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ ಅವರು ಪುರಾತನರ ರಗಳೆ, ನೂತನರ ರಗಳೆ, ಶಿವಭಕ್ತಿಮಹಿಮಾ ರಗಳೆ – ಹೀಗೆ ೩ ಸಂಪುಟಗಳಲ್ಲಿ (೧೯೭೩-೧೯೭೬) ೯೪ ರಗಳೆಗಳನ್ನು, ಹೊಸಪೇಟೆಯ ಕೊಟ್ಟೂರೇಶ್ವರ ಮಠದ ಮೂಲಕ ವಿದ್ವಾಂಸರು ಆರು ಸಂಪುಟಗಳಲ್ಲಿ (೧೯೮೧-೮೪) ೩೩ ರಗಳೆಗಳನ್ನು ಪ್ರಕಟಿಸಿದರು. ಈ ಸುದೀರ್ಘ ಇತಿಹಾಸದಲ್ಲಿ ಡಾ. ಹಳಕಟ್ಟಿ, ಪ್ರೊ. ದೇವೀರಪ್ಪ, ಪ್ರೊ. ಆರ್. ಸಿ. ಹಿರೇಮಠ – ಡಾ. ಎಂ. ಎಸ್. ಸುಂಕಾಪುರ ಮಾಡಿದುವು ಮಾತ್ರ ರಗಳೆಗಳ ಸಮಗ್ರ ಸಂಪಾದನೆಯ ಮೂರು ಮುಖ್ಯ ಪ್ರಯತ್ನವೆನಿಸಿವೆ. ಇಲ್ಲಿ ಒಬ್ಬರು ಇನ್ನೊಬ್ಬರಿಗೆ ಉಪಕೃತರಾಗುತ್ತ, ಈ ಕಾರ್ಯದ ವಿಸ್ತಾರವನ್ನು ತೋರಿಸುತ್ತಲೇ ಬಂದಿದ್ದಾರೆ. ಹೀಗಿದ್ದೂ ಈ ಆವೃತ್ತಿಯನ್ನು ಪ್ರಕಟಿಸುವಲ್ಲಿ ನಮ್ಮ ಕಣ್ಣುಮುಂದಿನ

ಉದ್ದೇಶಗಳು ಇವು : ೧. ವಿದ್ವಾಂಸರ ಈ ಮೂರು ಭಾಗಶಃ ಪ್ರಯತ್ನಗಳೆನಿಸಿದ್ದವು. ಈ ಎಲ್ಲ ಪ್ರಯತ್ನಗಳನ್ನು ಏಕಗೊಳಿಸುವುದು, ಸರಿಯಾಗಿ ವರ್ಗೀಕರಿಸುವುದು, ೨. ಇಪ್ಪತ್ತೈದು ವರ್ಷಗಳ ಹಿಂದೆ ಪ್ರಕಟವಾದ ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ ಅವರ ಆವೃತ್ತಿಗಳು ಪೇಟೆಯಲ್ಲಿ ಸಿಗುತ್ತಿರಲಿಲ್ಲ. ಈ ಕೊರತೆಗಳನ್ನು ತುಂಬಿಕೊಡುವುದು. ಇದಕ್ಕಿಂತ ಪಾಠಾಂತರ – ಅಡಿಟಿಪ್ಪಣಿಗಳ ಗೊಂದಲವಿಲ್ಲದ, ಸುಲಭ ವಾಚನಯೋಗ್ಯ ಸಮಗ್ರಸಂಪುಟವೊಂದು ಓದುಗರಿಗೆ ಲಭ್ಯವಾಗುವಂತೆ ಮಾಡುವುದು. ೩. ಕವಿ ಹರಿಹರನ ಬಳಿಕ ೭೦೦ ವರ್ಷಗಳ ಅವಧಿಯಲ್ಲಿ ಅವನ ರಗಳೆಗಳು ಪಾಠಾಂತರದ ದಾಳಿಗೆ ಗುರಿಯಾಗುತ್ತ ಬಂದಿವೆ. ಮಾತ್ರಾ ಛಂದಸ್ಸಿನ ರಚನೆ, ನಡುಗನ್ನಡ ಸರಳಭಾಷೆ, ಹರಿಹರನ ಬರೆವಣಿಗೆಯ ಜನಪ್ರಿಯತೆ, ಲಿಪಿಕಾರ–ಸಹೃದಯರ ಅಜ್ಞಾನ, ಅನವಧಾನ, ಅನ್ಯಥಾಜ್ಞಾನ ಕಾರಣವಾಗಿ ಪಾಠಾಂತರಕ್ರಿಯೆ ದೊಡ್ಡ ಪ್ರಮಾಣದಲ್ಲಿ ಜರುಗಿದೆ. ಗದ್ಯದಲ್ಲಿ ಅದು ಇನ್ನೂ ವರ್ಧಿಸಿದೆ. ಅದು ಸಾಲದೆಂಬಂತೆ ಆಧುನಿಕ ಸಂಪಾದಕರು ಮಾರ್ಗಸಾಹಿತ್ಯ ಸಂಪಾದನಸೂತ್ರಗಳನ್ನು ದೇಶೀಸಾಹಿತ್ಯ ಸಂಪಾದನೆಗೂ ಅನ್ವಯಿಸಿ ಹಲವು ಹಸ್ತಪ್ರತಿಗಳಿಂದ ತಮಗೆ ಸರಿಕಂಡ ಪಾಠಗಳನ್ನು ಎತ್ತಿಕೊಂಡು, ಈವರೆಗೆ ಮಿಶ್ರಪಾಠದ ಆವೃತಿಗಳನ್ನು ಹೊರತಂದರು. ಹೀಗಾಗಿ ಪ್ರಾಚೀನ ಲಿಪಿಕಾರರಿಗಿಂತ ಆಧುನಿಕ ಸಂಪಾದಕರಿಂದ ದೇಶೀ ಕೃತಿಗಳಿಗೆ ಹೆಚ್ಚು ಅನ್ಯಾಯವಾಯಿತೆಂದೇ ಹೇಳಬೇಕು. ಇವರು ಹೀಗೆ ಮಾಡದೆ ಎಲ್ಲ ಹಸ್ತಪ್ರತಿಗಳನ್ನು ಅಭ್ಯಸಿಸಿ, ಅವುಗಳಲ್ಲಿ ಮೂಲಕ್ಕೆ ಹತ್ತಿರವೆನಿಸುವ ಒಂದು ಪ್ರತಿಯನ್ನು ಮಾತ್ರ ಅವಲಂಬಿಸಿ, ಅದರ ಭಾಷಾದೋಷಗಳನ್ನು ನಿವಾರಿಸಿ, ತೀರ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಬೇರೆ ಪ್ರತಿಗಳ ನೆರವು ಪಡೆದು, ಕೃತಿ ಸಂಪಾದನೆಯನ್ನು ಪೂರೈಸಬೇಕಿತ್ತು. ಹೀಗೆ ಮಾಡಿದ್ದರೆ ಒಂದು ಪ್ರತಿಯಾದರೂ ತಕ್ಕ ಮಟ್ಟಿಗೆ ಶುದ್ಧ ಉಳಿಯುತ್ತಿತ್ತು. ಇದನ್ನು ಬಿಟ್ಟು ಹೆಚ್ಚು ಹಸ್ತಪ್ರತಿಗಳನ್ನು ಕಲೆಹಾಕಿ ತಮ್ಮ ಆವೃತ್ತಿಯನ್ನು ಹೆಚ್ಚು ಮಿಶ್ರಪಾಠೀಯವಾಗಿಸಿದರು.

ಇಂಥ ಸಂದರ್ಭದಲ್ಲಿ ಗಜಗಾತ್ರದ ಪ್ರಸ್ತುತ ಸಂಪುಟವನ್ನು ಮೇಲೆ ಹೇಳಿದಂತೆ ಸಂಪಾದಿಸುವುದು ಒಬ್ಬ ವ್ಯಕ್ತಿಗೆ ಮೀರಿದ ಕೆಲಸ. ಇದು ಅನೇಕ ಜನ ಸಂಶೋಧನ ಸಹಾಯಕರನ್ನು ಅಪೇಕ್ಷಿಸುತ್ತದೆ. ಈ ಸೌಲಭ್ಯದ ಕೊರತೆ ಕಾರಣವಾಗಿ, ಈವರೆಗೆ ಪ್ರಕಟವಾದ ಎಲ್ಲ ಆವೃತ್ತಿಗಳನ್ನು ಗಮನಿಸಿ, ಅವುಗಳ ಅಡಿಯಲ್ಲಿ ಸಂಗ್ರಹಿಸಲ್ಪಟ್ಟ ಪಾಠಗಳ ಬಲದಿಂದ ಒಂದು ತಕ್ಕಮಟ್ಟಿನ ಶುದ್ಧಪ್ರತಿಯನ್ನು (ಮೂಲಪ್ರತಿಯನ್ನಲ್ಲ) ಇಲ್ಲಿ ರೂಪಿಸಲಾಗಿದೆ. ಅಂದರೆ ಇದು ಜನಪ್ರಿಯ ಆವೃತ್ತಿಯೆಂಬ ಕಾರಣದಿಂದ ಎದ್ದು ಕಾಣುವ ಪಾಠದೋಷಗಳನ್ನು ಮಾತ್ರ ಪರಿಷ್ಕರಿಸುವುದು ನಮಗೆ ಅನಿವಾರ್ಯವೆನಿಸಿತು. ಈ ಸಂದರ್ಭದಲ್ಲಿ ನಾವು ಆ ಕಾಲದ ಶಾಬ್ದಿಕ ನೆಲೆಯಲ್ಲಿ ಮಾತ್ರ ನಿಲ್ಲದೆ ಸಾಂಸ್ಕೃತಿಕ ನೆಲೆಯಲ್ಲಿಯೂ ನಿಂತು, ಈ ಸಂಸ್ಕರಣಕಾರ್ಯವನ್ನು ನಿರ್ವಹಿಸಿದ್ದೇವೆ. ಇಲ್ಲಿ ಕೆಲವು ಉದಾಹರಣೆಗಳನ್ನು ನೋಡಬಹುದು:

**ಶಾಬ್ದಿಕ ಸಂಸ್ಕರಣ**

ಕಾಲಾಳ ತೊತ್ತಳಿಗಳಲ್ಲಲ್ಲಿ – ಕಾಲಾಳ [ಕೊ]ತ್ತಳಿಗಳಲ್ಲಲ್ಲಿ

ಬಂಡಿಯ ಮುಂದಂ – ಬಂಡಿಯ [ಮುಂಕಣಿಯಂ]

| | | |
|---|---|---|
| ಶಿವಭಕ್ತಿಯನಾರಂಭಿಸಿ | – | ಶಿವಭಕ್ತಿಯನಾರಂ[ಬಿ]ಸಿ |
| ಒರಳಕ್ಕಿ ಪೊಯ್ದಲ್ಲಿ | – | ಒರಳಕ್ಕಿ [ಮಿದಿವಲ್ಲಿ] |
| ಕೀಳಾದಿಯೊಳಿರ್ದು | – | ಕೀ[ಳಿಲಿನೊ]ಳಿರ್ದು |
| ಪೊಡವಿಯಂ ಸೀಳುತುಂ | – | ಪೊಡವಿಯಂ [ಹಿಳಿಯು]ತಂ |
| ವಿಸಟಂ ಬರುತುಂ | – | ವಿಸಟಂಬ[ರಿಯು]ತೆ |
| ಭಾವಜ ಬಳಕೆಯ | – | ಭಾವಜ ಬ[ಯ್ಕೆ]ಯ |
| ಅಳಿ ತುಳುಂಕದ | – | ಅಳಿ ತು[ಡುಂ]ಕದ |
| ದುರಿತ ಕುಲಂಗಳನುರೆ ಸೋಮಯ್ಯ | – | ದುರಿತ ಕುಲಂಗಳನುರೆ ಸೋ[ವ]ಯ್ಯಂ |
| ಪುರ್ಬುಂ ನೆಗಪುತ್ತುಂ | – | ಪುರ್ಬುಂ [ಕೆತ್ತುತಂ] |
| ತಲೆಗರೆದು | – | ತಲೆ[ಗುತ್ತಿ] |
| ಬಿಸುಗಣ್ಣತೊಡೆಯ | – | ಬಿಸುಗಣ್ಣ ತೊ[ಡಂಬೆ]ಯಂ |
| ಪೊರೆದಿರ್ದುವುನ್ನತವಾಗೆ | – | ಪೊರೆದಿ[ರ್ದುವುಂ ತಾ]ವಾಗೆ |
| ಭಕ್ತಜನ ಭೈತ್ರಂಗೆ | – | ಭಕ್ತಜನ [ಚೈತ್ರಂಗೆ |
| ಈ ಮಾತಿನೊಳೆ ಬಿತ್ತ | – | [ಏ ಮಾತೊ ಮೊಳೆವಿತ್ತು] |
| ಅರಿವುತೆಲ್ಲರ್ | – | ಅ[ರುಹ]ತೆಲ್ಲರ್ |
| ಧೀವರ | – | [ದೀ]ವರ |
| ಮುಗಿಲೇರಿ | – | [ಮ]ಗಿಲೇರಿ |
| ಬೆಳೆದಂತೆ ಲಕ್ತಕತ | – | ಬೆಳೆದಂ[ತ]ಲಕ್ತಕದ |
| ರಂಜನೆವಡೆದನುಂಬೆಳಗನುಗುಳ್ವ | – | ರಂಜನೆವಡೆದ, [ನುಣ್ಬೆ]ಳಗನುಗುಳ್ವ |

**ಸಾಂಸ್ಕೃತಿಕ ಸಂಸ್ಕರಣ**

| | | |
|---|---|---|
| ಕಂಬಳಿಯ ನಾಗಿದೇವ | – | [ಸಂಬೋಳಿ] ನಾಗಿದೇವ |
| ಸಿಂಹ ಸೂತ್ರಿಕಂ | – | ಸಿಂಹ [ಶೂದ್ರಿ]ಕಂ |
| ಬೆಂಬಯ್ಯಲಂ | – | [ಪೆಂಬು]ಯ್ಯಲಂ |
| ಮಾಸಕಚ್ಚೆಯ ಚೋಹ | – | ಮಾಸಕ[ಬ್ಬೆ]ಯ ಚೋಹ |
| ಕಾಳಾಪುರುಷ | – | [ತು]ಳಾಪುರುಷ |
| ಅರ್ಧಕಪೋಲಿತ | – | [ಆರ್ದ್ರ] ಕಪೋಲಿತ |
| ಬಿಟ್ಟೆ ಜನ್ನಿಗೆಯೇರ | – | ಬಿಟ್ಟೆ ಜನ್ನಿಗೆ[ಯರ] |
| ಒಂದು ಕರುವಂ ಹೊತ್ತುಕೊಂಡು | – | ಒಂದು ಕರು [ಹೆಗಲ ಸಂಬಳಿಗೋಲ] |

| | |
|---|---|
| ವಿಧಿವಿಟಂಕೇಶ್ವರಂ | – [ವೀದಿವಿಟ]ಕೇಶ್ವರಂ* |
| ಜಂಗಮದ ವಾಳೆ | – ಜಂಗಮದ [ವೇಳೆ] |
| ಸುಯ್ಯಲ್ಗುಡುತ್ತಂ | – [ಪು]ಯ್ಯಲ್ಗುಡುತ್ತಂ |
| ಗೆಜ್ಜೆಗಾಲು | – [ಗುಜ್ಜ]ಗಾಲು |
| ನನೆಯಂಬಂ ನೇಯವೇರಿಸುವ | – ನನೆಯಂ[ಬಿಂ ನೆಯ್ಯೇ]ರಿಸುವ |
| ಮನ್ಮಥತೀರ್ಥ | – [ಮನ್ಮುಖ]ತೀರ್ಥ |
| ಹೆಂಬೇರ ಮಲಗನಂ | – ಹೆಂಬೇರ [ಮೈಲುಗನ] |

ಹೀಗೆ ಅನೇಕ ಕಡೆಗಳಲ್ಲಿ ಪಾಠ ಸರಿಪಡಿಸಲಾಗಿದೆ. ರಗಳೆ ಕೇವಲ ಭಾಷಾಸೃಷ್ಟಿಯಲ್ಲ, ಸಂಸ್ಕೃತಿಯ ಸೃಷ್ಟಿ. ಇದನ್ನು ಸಂಸ್ಕರಿಸುವಾಗ ಆ ಕಾಲದ ಭಾಷೆಯ ಜೊತೆ ಅಂದಿನ ಸಂಸ್ಕೃತಿಯ ತಿಳಿವಳಿಕೆಯೂ ಸಂಪಾದಕನಿಗೆ ಅಗತ್ಯವೆಂದು ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ ದೇಶೀ ಶೋಧ ಮತ್ತು ಪ್ರಸಾರ. ಹರಿಹರ ಕನ್ನಡದಲ್ಲಿ ದೇಶೀ ಹಾದಿಯನ್ನು ತೆರೆದ ಧೀಮಂತ ಕವಿ, ತನ್ನ ಪೂರ್ವದ ಸಾಹಿತ್ಯಲೋಕವನ್ನು ರಗಳೆ ಮಾಧ್ಯಮದಿಂದ ಪ್ರತಿಭಟಿಸುತ್ತಲೇ ವರ್ಗಭೇದ, ವರ್ಣಭೇದ, ಲಿಂಗಭೇದ ನಿರಾಕರಣೆಯ ಧ್ವನಿಯೆತ್ತಿದ ಈ ಕವಿಯ ಅಧ್ಯಯನ ಕಲ್ಯಾಣದ ಶರಣರ ಅಧ್ಯಯನವೇ ಆಗಿದೆ. ಕರ್ನಾಟಕದ ಮನಸ್ಸಿನ ಅಧ್ಯಯನವೇ ಆಗಿದೆ. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಹರಿಹರನ ರಗಳೆಗಳ "ಸಮಗ್ರಕೃತಿ"ಯನ್ನು ಈ ವಿಶ್ವವಿದ್ಯಾಲಯ ಹೊರತರುತ್ತಲಿದೆ.

**ಕೃತಜ್ಞತೆ**

"ಹಂಪಿ ಉತ್ಸವ" ಕನ್ನಡ ನಾಡಿನ ಬಹುದೊಡ್ಡ ಸಾಂಸ್ಕೃತಿಕ ಹಬ್ಬ. ೧೯೯೮ರಲ್ಲಿ ಜರುಗಿದ ಈ ಹಬ್ಬದ ಅಂಗವಾಗಿ ಮತಂಗನ "ಬೃಹದ್ದೇಶಿ" ಕೃತಿಯನ್ನು ಪ್ರಕಟಿಸಿದ ಕನ್ನಡ ವಿಶ್ವವಿದ್ಯಾಲಯ, ೧೯೯೯ರ "ಹಂಪಿ ಉತ್ಸವ"ದಲ್ಲಿ "ಹರಿಹರನ ಸಮಗ್ರ ರಗಳೆ"ಗಳನ್ನು ಪ್ರಕಟಿಸುತ್ತಿದೆ. ಈ ಪ್ರಕಟನೆಗೆ ಸರಕಾರದಿಂದ ಆರ್ಥಿಕ ನೆರವು ಒಂದು ಪರಂಪರೆಯಾಗಿ ಮುಂದುವರಿಯುವಂತೆ ವ್ಯವಸ್ಥೆ ಮಾಡಿದ ಈ ಉತ್ಸವದ ರೂವಾರಿಗಳೂ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಾಜಿ ಸಚಿವರಾದ ಮಾನ್ಯ ಶ್ರೀ. ಎಂ. ಪಿ. ಪ್ರಕಾಶ್ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ಸಚಿವೆ ಮಾನ್ಯ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರಿಗೆ ಕೃತಜ್ಞರಾಗಿದ್ದೇವೆ.

ಈ ಸಂಸ್ಕೃತಿ ಪ್ರೀತಿಯನ್ನು ಪ್ರಸ್ತುತ ವರ್ಷವೂ ಮುಂದುವರಿಸಿ ಆರ್ಥಿಕ ನೆರವು ನೀಡಿದ ಕನ್ನಡ ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರಾದ ಶ್ರೀಮತಿ ರಾಣಿ ಸತೀಶ್ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ವಿಷಯದಲ್ಲಿ ಸಹಕರಿಸಿದ ಪ್ರಧಾನ ಕಾರ್ಯದರ್ಶಿ ಶ್ರೀ. ಅ. ರಾ. ಚಂದ್ರಹಾಸ ಗುಪ್ತ, ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ ಅವರಿಗೆ ನಾವು ಋಣಿಯಾಗಿದ್ದೇವೆ. ಉತ್ತಮೋತ್ತಮ ಪ್ರಕಟನೆಗಳಿಗೆ ಹೆಸರಾಗಿರುವ ಕನ್ನಡ ವಿಶ್ವವಿದ್ಯಾಲಯ ತನ್ನ ಪರಿಸರದ ಸೃಷ್ಟಿಯಾದ

---

* ಇದರ ಮೂಲರೂಪ 'ಬೀದಿವೆಡಂಗೇಶ್ವರಂ'

ಈ ಮಹಾಸಂಪುಟದ ಪ್ರಕಟನೆಗಾಗಿ ನೀಡಿದ ಅವಕಾಶವನ್ನು, ಪ್ರಕಟನ ಸಮಿತಿ ಸದಸ್ಯರು ತೋರಿದ ಪ್ರೀತಿಯನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಈ ವರೆಗೆ ಹರಿಹರನನ್ನು ಕುರಿತು ವಿದ್ವಾಂಸರು ಪೂರೈಸಿದ ಎಲ್ಲ ಅಧ್ಯಯನಗಳನ್ನು ಇಲ್ಲಿ ಬಳಸಿಕೊಂಡಿದ್ದೇವೆ. ಅದರಲ್ಲಿಯೂ ಡಾ. ಫ. ಗು. ಹಳಕಟ್ಟಿ, ಡಾ. ಎಚ್. ದೇವೀರಪ್ಪ, ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ ಅವರ ಪರಿಷ್ಕರಣಗಳಿಗೆ ನಾವು ವಿಶೇಷ ಋಣಿಯಾಗಿದ್ದೇವೆ. ಪರಿಷ್ಕರಣ, ಪ್ರಕಟನ ಸಂದರ್ಭಗಳಲ್ಲಿ ಕುಲಸಚಿವರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ವ್ಯಕ್ತಪಡಿಸುತ್ತ ಬಂದ ಮೆಚ್ಚುಗೆಗೆ, ಈ ಸಂಪುಟವನ್ನು ಪ್ರಕಟಿಸುವಲ್ಲಿ ನನಗಿಂತ ಹೆಚ್ಚು ಉತ್ಸಾಹ ತೋರಿದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎ. ವಿ. ನಾವಡ ಅವರ ನಿರಂತರ ಶ್ರಮಕ್ಕೆ, ಸಂಪುಟ ಸಂಯೋಜನೆಯಲ್ಲಿ ನೆರವಾದ ಡಾ. ಮೃತ್ಯುಂಜಯ ರುಮಾಲೆಯವರ ವಿದ್ಯಾವ್ಯಸನಕ್ಕೆ, ಅಂದವಾಗಿ ಮುದ್ರಿಸಿದ ಬೆಂಗಳೂರಿನ ಲಕ್ಷ್ಮಿ ಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕಕುಮಾರ ಅವರ ಔದಾರ್ಯಕ್ಕೆ, ಋಣಿಯಾಗಿದ್ದೇವೆ.

❖❖

# ಕನ್ನಡನಾಡಿನ ಶರಣರ ರಗಳೆಗಳು

# ೧. ಕೇಶಿರಾಜ ದಣ್ಣಾಯಕರ ರಗಳೆ

## ಸ್ಥಲ ೧

ತುರುಗಿದ ಹೊಸ ಕೆಂಜೆಡೆಗಳ
ಮಿರುಗುವ ಶಶಿಕಳೆಯ ಹಂಪೆಯ ವಿರೂಪಾಕ್ಷಂ।
ಕರಿಗೊರಲಂ ಬಿಸುಗಣ್ಣಂ
ಮೆರೆದಂ ವಿಭು ಕೇಶಿರಾಜ ದಣ್ಣಾಯಕರಂ॥

ಉತ್ತರ ದಿಶಾಭಾಗದೊಳಗೊಂದು ಶಿವಪುರಂ
ಬಿತ್ತರಿಸಲೆನ್ನಳವೆ ಮಿಗೆ ರಂಜಿಪುದು ಕರಂ
ಭಕ್ತಿಯನೊಳಗುಮಾಡಿಕೊಂಡ ಗುಳಿಯಂತೆಸೆದು
ಯುಕ್ತಮೆನೆ ಕೊಂಡಗುಳಿಯೆಂಬ ಪೆಸರಿಂದೆಸೆದು
ಇರ್ಪ ಪುರದೊಳಗೊರ್ವ ಸದ್ಭಕ್ತನೊಪ್ಪುವಂ
ಸರ್ಪಭೂಷಣನ ಭಕ್ತಿಯ ಭರವನಪ್ಪುವಂ
ತನ್ನ ನಾಮಂ ಕೇಶಿರಾಜನೆಂಬುದು ದಿಟಂ
ತನ್ನ ಶಿವಭಕ್ತಿಯುರವಣೆ ಧರಣಿಗುತ್ಕಟಂ
ಶ್ರೀವಿರೂಪಾಕ್ಷದೇವರ್ ತಮಗೆ ಗುರುವಾಗಿ
ಭಾವಿಸುತ್ತಿರ್ಪನವರಂಘ್ರಿಯಂ ದೃಢವಾಗಿ
ಪ್ರಾಣನಾಥಂ ತನಗೆ ಸೋಮನಾಥಂ ನೋಡ
ಜಾಣರತು ನಿಜವೊರತು ಬಿಡದರ್ಚಿಪಂ ನೋಡ
ಬಹುಕಳಾವಿಲಸಿತ[ನ]ಪರಿಜ್ಞಾನಮಾನಸಂ
ಬಹುಳ ನೀತಿಜ್ಞಾನನುಪಕಾರ್ಯವಾ[ನ]ಸಂ
ಬುದ್ಧಿವಂತಂ ಸುರಾಸುರ ಗುರುಗಳಳವಲ್ಲ
ಶುದ್ಧಿಯಿಂದಗ್ನಿಜಲವಾಯುಗಳ ಪವಣಲ್ಲ

ಇಂತಪ್ಪ ಕೇಶಿರಾಜಯ್ಯಂಗಳೊಪ್ಪದೊಳ್
ಕಂತುಹರನಂ ಹೊಗಳಲನುವಾಗಿ ಚಿತ್ತದೊಳ್
ಪುಳಕಂಗಳೊಡನೊಡನೆ ಬೆಮರ ಬಿಂದುಗಳೊಗೆಯೆ
ಮೊಳೆವ ಗದುಗದದೊಡನೆ ಕಂಪನಂ ಮಿಗೆ ನೆಗೆಯೆ
ಆನಂದ ಜಲದೊಡನೆ ಅಟ್ಟಹಾಸಂ ನಿಮಿರೆ
ಏನೆಂಬೆನುಬ್ಬರದ ಭಕ್ತಿ ಚಿತ್ತಮನಡರೆ
ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ
ಅಚ್ಚರಿ ಮಿಗಲ್ಕೆ ಪೇಳ್ವಂ ಶಿವಾನಾಥಂಗೆ
ಪಂಚಾಕ್ಷರಾನುಬಂಧಂ ಛಂದವನುವಾಗೆ
ಪಂಚಮುಖನಾಮದಭಿಧಾನ ಬುದ್ಧಿಯದಾಗೆ
ಶಿವವಾಕ್ಯ ಶಬ್ದಶುದ್ಧಿವ್ಯಾಕರಣಮಾಗೆ
ಶಿವಭಕ್ತಿ ವೃತ್ತಕ್ಕಲಂಕಾರದಂತಾಗೆ
ಪದ್ಯಂಗಳಂ ಶಿವಂಗನುದಿನಂ ಪೇಳುತಂ
ಚೋದ್ಯವೆನೆ ಶಂಕರಸ್ತೋತ್ರದೊಳೆ ಬಾಳುತಂ
ಇರಲಿತ್ತಲತ್ತಲಾ ಕಲ್ಯಾಣಪುರದೊಳಗೆ
ಧರಣೀಶ ಪೆರ್ಮಾಡಿರಾಯನೋಲಗದೊಳಗೆ
ಹರುಷದಿಂ ಸಿಂಹಾಸನಾರೂಢನಾಗಿರ್ದು
ಪರಿಪರಿಯ ಮಂತ್ರಿಗಳ ಮೊಗವನೀಕ್ಷಿಸುತಿರ್ದು
ತನ್ನಯ ಮನಕ್ಕೇರುವವರೊರ್ವರಿಲ್ಲದಿರೆ
ತನ್ನ ಚಿತ್ತಕ್ಕೆ ತಕ್ಕನುಕೂಲರಿಲ್ಲದಿರೆ
ಬಂದನೋಲಗದೊಳಗೆ ಪಿರಿಯರ ಮೊಗಂ ನೋಡಿ
ಬಂದ ಬಂದಗ್ರಹಾರದ ವಿಪ್ರರಂ ನೋಡಿ
ನಿಮ್ಮೂರ್ಗಳೊಳ್ಬುದ್ಧಿವಂತರಪ್ಪವರೊಳರೆ
ಸುಮ್ಮಾನಿಗಳ್ಕೋವಿದರ್ನೀತಿವಿದರೊಳರೆ
ಎನೆ ಕೊಂಡಗೂಳಿಯ ಮಹಾಜನಂಗಳು ಕೇಳ್ದು
ಮನವೊಸೆದು ನುಡಿದರತ್ಯುತ್ಸಾಹಮಂ ತಾಳ್ದು
ದೇವ ಎಮ್ಮಯ ಪುರದೊಳೊರ್ವ ಸಜ್ಜನರುಂಟು
ಭಾವಜ್ಞರತಿನಿಯತರನುಪಮಾಸ್ಪದರುಂಟು
ಅವರ ನಾಮಂ ಕೇಶಿರಾಜನೆಂಬುದು ಧರೆಗೆ
ಅವರ ಶೀಲಂ ವಿಚಿತ್ರಂ ಸೊಗಯಿಪುದು ನಿಮಗೆ

ಎನೆ ನೃಪಂ ಚಾರರಂ ಕಳುಹಿಯವರಂ ಕರೆಸಿ
ಮನವೊಲ್ದು ಹರುಷದಿಂದುಚ್ಚಾಸನದೊಳಿರಿಸಿ

ನವರತ್ನಖಚಿತ ನವ್ಯಾಭರಣಮಂ ತೊಡಿಸಿ
ನವದುಕೂಲ ಪ್ರಕರಮಂ ಪೊದೆಯಿಸುತ್ತುಡಿಸಿ
ಸಮಗದ್ದುಗೆಯನಿತ್ತು ಚಮರ ಸೀಗುರಿಯಿತ್ತು
ವಿಮಳತರವೆನಿಪ ಧವಳಚ್ಛತ್ರಮುಮನಿತ್ತು
ಹಿರಿಯ ಪ್ರಧಾನಿಕೆಯನೊಲ್ಮೆಯಿಂದಂ ಕುಡಲು
ಪುರದೊಳಗೆ ಹೊಸತೆನಿಸುವರಮನೆಯನಿಂಬಿಡಲು
ಅಲ್ಲಿ ಹೊಕ್ಕರ್ಕೇಶಿರಾಜದಣ್ಣಾಯಕರು
ಸಲ್ಲೀಲೆಯಿಂದೆ ಪರಸಲ್ಕೆ ಗಣನಾಯಕರು
ಗುಡಿಗಟ್ಟಿ ತೋರಣಂಗಟ್ಟಿ ಪಟ್ಟಣದೊಳಗೆ
ಮೃಡಭಕ್ತರೆಲ್ಲರುಂ ಹಿಗ್ಗುತಿರೆ ಮನದೊಳಗೆ

ಅರಸ ಪೆರ್ಮಾಡಿರಾಯಂ ಸಂತಸಂ ಮಿಕ್ಕು
ಧರಣೀತಳದ ಸಂಪದಂ ತನ್ನ ಕಯ್ಯೊಕ್ಕು
ಮಂತ್ರಕ್ಕೆ ನೆರೆ ಕೇಶಿರಾಜದಣ್ಣಾಯಕರು
ತಂತ್ರಕ್ಕೆ ಮಿಗೆ ಕೇಶಿರಾಜದಣ್ಣಾಯಕರು
ಆಳೋಚನೆಗೆ ಕೇಶಿರಾಜದಣ್ಣಾಯಕರು
ಊಳಿಗಕ್ಕಂ ಕೇಶಿರಾಜದಣ್ಣಾಯಕರು
ಮಾತಿಗೆಲ್ಲಂ ಕೇಶಿರಾಜದಣ್ಣಾಯಕರು
ನೀತಿಗೆಲ್ಲಂ ಕೇಶಿರಾಜದಣ್ಣಾಯಕರು
ತಾವಾಗಿ ಪೆರ್ಮಾಡಿರಾಯನೊಲವಿಂದಿರಲು
ಭೂವಧೂಧವನಾಗಿ ನಿಶ್ಚಿಂತಮಿರುತಿರಲು
ಸಂಪದಂ ಮಿಗೆ ಕೇಶಿರಾಜದಣ್ಣಾಯಕರು
ಸೊಂಪೇರಿ ಶರಣರಂ ನೋಡಿ ದಣ್ಣಾಯಕರು
ಚಂದನಂ ಕುಂಕುಮಂ ಕಸ್ತೂರಿ ಶರಣರ್ಗೆ
ಸಾಂದುಕರ್ಪುರವಗಿಲ ಪರಿಮಳಂ ಶರಣರ್ಗೆ
ನವದುಕೂಲಂ ನವ್ಯ ವಾಹನಂ ಶರಣರ್ಗೆ
ನವ ನವ ಪ್ರೇಮಮುಂ ಕಾಮಮುಂ ಶರಣರ್ಗೆ
ನಟಿಯಿಸುವ ನರ್ತನಂ ನಾದಮುಂ ಶರಣರ್ಗೆ
ಕಟಕ ಮಕುಟಾದಿ ಕೇಯೂರಮುಂ ಶರಣರ್ಗೆ
ನೆನಹು ಶರಣರ ಮೇಲೆ ನಿಷ್ಠೆ ಶರಣರ ಮೇಲೆ
ಮುನಿಸು ಶರಣ ಮೇಲೆ ತಿಳಿವು ಶರಣರ ಮೇಲೆ
ಶರಣರೊಡತಣ ಸುಖಂ ಶರಣರೊಡತಣ ಲೀಲೆ
ಗುರುತರಸ್ನೇಹದಾತುರತೆ ಶರಣರ ಮೇಲೆ

ಕುಡಿಗೊಂಡು ಕೊರ್ಬುತಿರಲಿರಲೊಂದು ದೇವಸದೊಳು
ಎಡೆಗೊಂಡು ಶಿವಗೋಷ್ಠಿವುರ್ಬುತಿರೆ ಚಂದದೊಳು
ಹಾಡುವ ಪುರಾತನರ ಗೀತದೊಳ್ಕರಗುತಂ
ಕೂಡೆ ಜಂಗಮದ ಚರಣಕ್ಕೆರಗಿ ನೆರೆವುತಂ
ಶಿವನ ಪದ್ಯವನೋದಿ ಮಿಗೆ ಬೀಗಿ ಬಿರಿವುತಂ
ಭವನ ಶರಣಾವಳಿಯ ಸಂಗದೊಳ್ಕರಗುತಂ
ಪುಳಕಾವಳಿಗಳಡರಲಾಹಾ ಎನುತ್ತಲ್ಲಿ
ಬೆಳೆವ ಪರಮಾನಂದದೊಳಗೆ ಹೆಚ್ಚುತ್ತಲ್ಲಿ
ಪಸಿವು ತೃಷೆ ನಿದ್ರೆ ನುಡಿ ನೋಟಂಗಳಂ ಮರೆದು
ದೆಸೆ ವಾಯುವಾಗಸಂ ಧರೆಯೆಂಬುದಂ ಮರೆದು
ಅರಸನೋಲಗ ರಾಜಕಾರ್ಯಂಗಳಂ ಮರೆದು
ನೆರೆವೊರೆ ಕೆಲಂ ಬಲಂ ಹಿಂದುಮುಂದಂ ಮರೆದು
ಗಳಿಗೆ ಜಾವಂ ದಿವಂ ರಾತ್ರಿಗಳನುಂ ಮರೆದು
ಒಳಗು ಹೊರಗತ್ತಿತ್ತಲೆಂದೆಂಬುದಂ ಮರೆದು
ಶರಣ ಸಂಗೀತಗೋಷ್ಠಿಯೊಳೇನುವರಿಯದಿರೆ
ಉರವಣಿಪ ಸಂಗದಿಂದನ್ಯಮಂ ನೆನೆಯದಿರೆ

ಆ ಸಮಯದೊಳ್ಬಂದರರಸಾಳ್ಗಳಂತಲ್ಲಿ
ಭಾಸುರದೆ ಪೆರ್ಮಾಡಿರಾಯಂ ಕಳುಪಲಲ್ಲಿ
ಬಂದು ದಣ್ಣಾಯಕರೆ ಬನ್ನಿರೇ ಕರೆದಪರು
ಸಂದಣಿಪ ರಾಜಕಾರ್ಯಕ್ಕರಸುತಿರ್ದಪರು
ಎನಲದಂ ಕೇಳದಾ ಸಂಗದಿಂದಿರುತಮಿರೆ
ತನು ತೀವಿ ಪುಳಕಿಸುತೆ ಶರಣರೊಡನೊಪ್ಪುತಿರೆ
ಮತ್ತೆ ಮತ್ತರಸಾಳ್ಗಳುರವಣಿಸುತಂ ಬಂದು
ಎತ್ತಿದಾಗ್ರಹದಿಂದೆ ಬರವೇಳುತಂ ನಿಂದು
ಇರಲಲ್ಲಿ ಶರಣರೊಡತಣಗೋಷ್ಠಿ ನೆರೆ ಕಿಡಲು
ಉರವಣಿಪ ಸಂಗಸುಖಲತೆಯ ಕುಡಿ ನಡೆಗಿಡಲು
ತಲೆಗೊಡಹಿ ಸಿಡಿಮಿಡಿಗೊಳುತ್ತೆ ಸುರ್ರನೆ ಸುಯ್ದು
ನೆಲೆಗೊಂಡ ಸುಖವಳಿಯೆ ಬಯ್ದು ನೆಲವಂ ಹೊಯ್ದು
ಮುಗ್ಧಂ ಶರಣವಿಯೋಗದಿನೊಳಗೆ ಬೇವುತಂ
ದಗ್ಧಾಂತರಂಗನೊಡನೊಡನುರಿಯೆ ನೋವುತಂ
ಸಂಗಸುಖವಳಿದು ಹರಣಂಗಳೆವ ತೆರನಾಗೆ
ಅಂಗಯಿಸಿ ನುಡಿದನಾ ಶರಣಸಭೆ ಬೆರಗಾಗೆ

ಸಿರಿಯ ಸಂಗಂ ಶರಣಸಂಗಕ್ಕೆ ಪಗೆಯಾಯ್ತು
ನರನೋಲಗದ ಪರಾಧೀನವಿರಿದಂತಾಯ್ತು
ಅಯ್ಯಯ್ಯ ಸೋಮನಾಥಯ್ಯ ಕರುಣಿಪುದೆನಗೆ
ಅಯ್ಯಲಾ ಶರಣಸಂಗವ ಕರುಣಿಸುವುದೆನಗೆ
ದೇವ ಕಲ್ಯಾಣದಧಿದೈವ ತ್ರಿಪುರಾಂತಕಾ
ದೇವ ಮನ್ಮಥದರ್ಪಮಥನದುರಿತಾಂತಕಾ
ಸಿರಿ ಹಾರಿಹೋಗೆ ನಿಮಗರ್ಚನೆಯ ಮಾಡುವೆಂ
ಶರಣತತಿ ಪುರಜನರು ಮೆಚ್ಚೆ ಕೊಂಡಾಡುವೆಂ
ಎನುತಲ್ಲಿ ಪರಸಿಕೊಳುತಂ ಸುಯ್ದು ನಿಂದಿರ್ದು
ಮನದೊಳಗೆ ಕುಕ್ಕಳಂಗುದಿದು ಬಳಲುತ್ತಿರ್ದು
ಸೇವಕಾಪರಿಕರಾವಯವ ಸಂಪದನಾಗಿ
ಭಾವಿಸಲು ಸೋಮನಾಥ ಸ್ನೇಹಸಂಯೋಗಿ

ಬರುತಿರ್ದನರಮನೆಗೆ ದಣ್ಣಾಯಕಂ ನಡೆದು
ಅರಸ ಪೆರ್ಮಾಡಿರಾಯಂ ಕೇಳ್ದು ಮಿಗೆ ಮುಳಿದು
ಕೆಲಬಲದೊಳಿರ್ದ ವಿಪ್ರರ ವದನಮಂ ನೋಡೆ
ಒಲಿದು ವಿಪ್ರರ್ನಿಂದಿಸಲ್ತೊಡಗಿದರ್ಕೂಡೆ
ದೇವ ಚಿತ್ತೈಸುವುದು ನಿಮ್ಮ ದಣ್ಣಾಯಕರು
ಭಾವಿಸುವಡಿನ್ನೊಮ್ಮೆಯುಂ ವಿಷ್ಣುನಿಂದಕರು
ಶರಭರೂಪಿಂ ವೀರಭದ್ರದೇವರ್ಕೊಂದು
ನರಸಿಂಹಕೇಶರಂಗಳನುಮೆಯ ಮುಡಿಗಂದು
ತಂದಿತ್ತನೆಂಬ ಕಥನವನಾಡಲಾಗದೆನೆ
ನಿಂದು ಕಟಕಿಯನಾಡಿದರ್ನಿಮ್ಮ ಮುಂದಿದನೆ
ಆಗದಾಗದು ಮುಡಿಗೆ ಯೋಗ್ಯವಲ್ಲೆಂದೆನುತೆ
ಆಗಲಂಬಿಕೆಯ ಕೆರ್ಪಿಂಗೆನಲ್ಕೇಳೆನುತೆ
ಕಟಕಿಗಳನಾಡುತಿರ್ಪಂದಮಂ ಮರೆದಿರೇ
ದಿಟದಿಂದೆ ನಿಮ್ಮುಮಂ ಬಗೆಯನವಧರಿಸಿರೇ
ದೇವ ಗುರುಪಾದಮುದ್ರಿಕೆಯುಂಟು ಕರದೊಳಗೆ
ದೇವ ನಿಮಗೆಂದುವುಂ ಪೊಡಮಡಂ ಮನದೊಳಗೆ
ಆವುಂಗುರಕ್ಕೆ ಪೊಡವಡುತಿರ್ಪನರಿಯಿರೇ
ದೇವ ನಿಮಗೆಂದು ಕೈಕೊಂಬುದನ್ನರಿಯಿರೇ
ನಿಮ್ಮನೋಲ್ಯೈಸಿರ್ದು ನಿಮಗೆ ಗರ್ವಿಸುತಿರ್ಪ
ಎಮ್ಮನಾರ್ಬಲ್ಲರೀ ಧರೆಗುತ್ಕಟದ ದರ್ಪ

ಎಂದು ನಿಂದಿಸುತಿರಲು ದಣ್ಣಾಯಕರ್ಬಂದ
ರಿಂದುಧರನತುಳ ಕೀರ್ತಿಯ ಮಾಳ್ಕೆಯಿಂ ನಿಂದ
ರಲ್ಲಿ ನಿಂದಿರೆ ಕಂಡು ಕರೆದು ಗದ್ದುಗೆಗೊಟ್ಟು
ಮೆಲ್ಲನುಪಚಾರಮಂ ಮನದೊಳಗೆ ಮುಂದಿಟ್ಟು
ಮಾತು ಮಾತಿಂ ಸರಸದಂತುಂಗುರಂದೆಗೆದು
ನೂತನವಿದೆಂದು ನೋಳ್ಪಂತೆ ಮನದೊಳ್ಮನಿದು
ತನ್ನಂಗುಲಿಯೊಳುಂಗುರವನಿಕ್ಕಿಕೊಳುತಲ್ಲಿ
ಮನ್ನಿಸುತ್ತವರೊಡನೆ ಮಾತಾಡುತಂತಲ್ಲಿ
ಪೊಡವಡಲ್ಮನ್ನಿಸುವೆನೆಂದು ಮನದೊಳಗೆನುತೆ
ಪೊಡವಡದಡೀಗಳೇ ದಂಡಿಸುವೆನೆಂದೆನುತೆ
ಮನೆಗೆ ಬಿಜಯಂಗೆಯ್ವಿರೇ ದಂಡನಾಯಕರೆ
ಎನಲೆದ್ದು ಪೊಡವಡದೆ ಗಳಗಳನೆ ಪೋಗುತಿರೆ
ಮುನಿದು ಕರೆ ಕರೆ ಎಂದು ಚಾರರಿಂ ಕರೆಯಿಸುತೆ
ಕೊನೆಮೀಸೆ ಕೆತ್ತೆ ಕಣ್ಕೆಂಪೇರಿ ಕೋಪಿಸುತೆ
ಕಂಡಿರೇ ಎನ್ನಿಂದವೀ ಸಂಪದಂಬಡೆದು
ಅಂಡಲೆವ ದಾರಿದ್ರ್ಯವೆಲ್ಲವಂ ನೆರೆ ತೊಡೆದು
ಎನಗೆ ಪೊಡವಡದುದಾಸೀನವಂ ಮಾಳ್ಪರೇ
ಮನವಾರೆ ಎಮ್ಮುವಂ ಲಘುಮಾಡಿ ನೋಳ್ಪರೇ
ಸಿರಿ ಹಾರುಗೆಂದೆಂಬ ಬೇಸರೇನಿಂತಿಲ್ಲಿ
ಸಿರಿ ನಿಮಗೆ ಹೊರೆಯಾದಡೆಮಗಿರ್ಕೆ ತಾನಿಲ್ಲಿ
ದಿಟದಿಂದೆ ಒಲ್ಲಿರೇ ಸಂಪದವನೆಂದೆನಲ
ಕಟಕಟಾಯೆನ್ನಲ್ಲಿ ತಪ್ಪಿಲ್ಲವೆಂದೆನಲು

ಲಿಂಗಾಭಿಮಾನಿ ಲಿಂಗೈಕ್ಯನಿಷ್ಠಿಂ ಕೇಳ್ದು
ಸಂಗಸುಖಸಾರಾಯ ಶರಣಚಿತ್ತಂ ಕೇಳ್ದು
ನರಪರಂ ಸುರಪರಂ ಲೆಕ್ಕಿಸದ ಕಲಿ ಕೇಳ್ದು
ಹರಿ ಬೊಮ್ಮ ಪದವಿಯಂ ತೃಣವೆಂಬ ಕಲಿ ಕೇಳ್ದು
ಶಿವಭಕ್ತಿ ಸಿರಿಯುಳ್ಳ ಪುಣ್ಯಾಧಿಕಂ ಕೇಳ್ದು
ಶಿವನ ಸಾಮರ್ಥ್ಯನಿಧಿ ದಣ್ಣಾಯಕರ್ಕೇಳ್ದು
ಕೇಳರಸ ನಿನ್ನ ಸಿರಿ ನಿನಗಿಕ್ಕೆ ನಿನಗಿಕ್ಕೆ
ಶೂಲಿಯಣುಗರ ಸಂಗಸಂಪದವದೆನಗಿಕ್ಕೆ
ಒಲ್ಲೆನೊಲ್ಲೆಂ ತೆಗೆಯಿದೇಕೆ ಬೇಡೆಂದೆನುತೆ
ಒಲ್ಲೆನೊಲ್ಲೆಂ ಭಕುತಿ ಸಿರಿಗೆ ಸರಿಯಿಲ್ಲೆನುತೆ

ಕಂಕಣಂ ಮುದ್ರಿಕೆಯನುಚ್ಚಿ ಬೀಸಾಡುತ್ತೆ
ಶಂಕಿಸದೆ ಕೇಯೂರಮಂ ತೆಗೆದು ನೀಡುತ್ತೆ
ಹಾರಮಂ ಕರ್ಣಪೂರಮನೊಲಿದು ಕಳೆವುತ್ತೆ
ಹೀರಾವಳಿಯುಮನುತ್ತರಿಗೆಯಂ ತೆಗೆವುತ್ತೆ
ಹೊಳೆವ ನವ್ಯಾಭರಣವೆಲ್ಲಮಂ ನೆರೆ ತೆಗೆದು
ಪಳಿಯ ಬೀರಣೆ ಕುಪ್ಪಸಂಗಳಂ ಮಿಗೆ ಕಳೆದು
ಹೊನ್ನ ಕರಡಿಗೆ ಸೆಜ್ಜೆ ನಿನ್ನವೆಂದವಗಿತ್ತು
ಚೆನ್ನವಸ್ತ್ರಂಗಳಂ ನಿನ್ನ ಸೊಮ್ಮೆಂದಿತ್ತು
ಅಂಗೈಯ ಸೆಜ್ಜೆಯೊಳು ಸೋಮನಾಥನನಿರಿಸಿ
ಮುಂಗಯ್ಯ ನಾಗವೇದಿಕೆಗೆ ಬಿಜಯಂಗೈಸಿ
ಆಸೆಗೆಡೆಗುಡದೆ ತನ್ನಯ ವಸ್ತ್ರಮಂ ಬಿಟ್ಟು
ಆಶಾಂಬರನ ಸುತಂ ಕೇಶಾಂಬರವನುಟ್ಟು
ಸೇವಕಾವೃತ್ತಿಯಂ ಮನದ ಕಾಲಿಂದೊದೆದು
ದೇವ ಸೋಮಯ್ಯನಂ ಚಿತ್ತಹಸ್ತದಿ ಹಿಡಿದು
ಹೊರವಟ್ಟನುನ್ನತೈಶ್ವರ್ಯನಿಧಿ ನಿಷ್ಠೆಯೊಳು
ಹೊರವಟ್ಟನಳ್ತಿಯಿಂ ನಿಸ್ಪೃಹದ ಬಟ್ಟೆಯೊಳು
ಹೊರವಟ್ಟನಲ್ಲಿ ವೈರಾಗ್ಯ ಸಂಪದವರಂ
ಹೊರವಟ್ಟನಮ್ಮಮ್ಮ ಭವತಿಮಿರಭಾಸ್ಕರಂ
ಇಂತು ಕೇಶವರಾಜದಣ್ಣಾಯಕರ್ ತೆರಳೆ
ಸಂತತಂ ನೃಪತಿ ಬೆರಗಾಗುತ್ತಮಿರೆ ತೆರಳೆ

## ಸ್ಥಲ ೨

ಸಿರಿಯಂ ಲೆಕ್ಕಿಸದಾಧಿಪತ್ಯಮನದಂ ಕೈಕೊಳ್ಳದಾಶ್ಚರ್ಯದಿಂ
ವರ ವೈರಾಗ್ಯ ವಿಭೂಷಣಂ ಶರಣಸಂಗಪ್ರಾಜ್ಯ ರಾಜ್ಯಸ್ಥನಾ
ದರದಿಂ ಶಂಕರನಂ ಶಶಾಂಕಧರನಂ ಸರ್ವಜ್ಞನಂ ಶಂಭುವಂ
ಕರದೊಳ್ನೆಮ್ಮಿಸಿ ಕೇಶಿರಾಜಮಹಿಮಂ ಬಂದಂ ಮಹೋತ್ಸಾಹದಿಂ॥

ಇಂತು ಪೊರಮಟ್ಟು ವೀರಭಕ್ತಿಗೊಡಂಬಟ್ಟು ಏಕನಿಷ್ಠೆಯಂ ಮುಂದಿಟ್ಟು ಸಾಹಿತ್ಯಸಾರ್ವಭೌಮಂ ಸುಕೃತಕುಲಸೇವ್ಯಂ ಪುಳಕಾವಳಿಗಳ ಸರ್ವಾಂಗಂ ಸುಖಜಲಭರಿತ ವಿಲೋಚನಂ ಕೇಶಾಂಬರಪರಿವಾಸನಂ ತೃಣೀಕೃತ ಜಗತ್ರಯಂ ಕರತಳ ಸಿಂಹಾಸನ ಸುಖಾಸೀನ ಸೋಮನಾಥನುಮಾಗಿಂದು ಧರನನುಜ್ಜಣಿಯಿಂದೊಂದೆ ಮೆಯ್ಯೊಳ್ಬಿಜಯಂಗೈಯ್ದರೆಂಬ ವೈರಾಗ್ಯವಾರ್ತೆಯಂ ನಿಜಮಂದಿರದೊಳಗಿರ್ದ ಪರಮಭಕ್ತೆ ಪರಿವೃತಾಗುಣಭೂಷಣೆಯಪ್ಪ ಗಂಗಾದೇವಿಯರ್ಕೇಳ್ದು ಪೆರ್ಮಾಡಿರಾಯನ ಸೊಮ್ಮಪ್ಪ ಕಟಕ ಮಕುಟ ಕೇಯೂರಾದಿ ಸರ್ವಾಭರಣಂ ಮೊದಲಾದ ಸಕಲ ವಸ್ತುವಂ ಭಂಡಾರಮಂ

ವಜ್ರಮಾಣಿಕ್ಯ ಮೌಕ್ತಿಕಾದಿ ರತ್ನಂಗಳುಮಂ ಕಾಪಿನವರ್ಗೊಪ್ಪಿಸಿ ಕೊಟ್ಟು ನೇತ್ರಮನುಟ್ಟು ಭಸಿತಮನಿಟ್ಟು ಕರಕಮಲಸ್ಥಿತ ಶಿವಲಿಂಗ ಸಂಪನ್ನೆಯಾಗಿ ನಿಳಯಮಂ ಪೊರಮಟ್ಟು ರತ್ನದೊಡನೆ ಕಾಂತಿ, ಚಂದ್ರನೊಡನೆ ಬೆಳ್ದಿಂಗಳು, ತರಣಿಯೊಡನೆ ಕಿರಣಂಗಳೇಕನಿಷ್ಠೆಯೊಡನೆ ಶಿವಭಕ್ತಿ ಬರ್ಪಂತೆ ದಣ್ಣಾಯಕರೊನೊಡನೆ ಅರಸಿ ಗಂಗಾದೇವಿಯರ್ಬರುತಿರೆ,

ತವರಾಜದ ಸವಿಯನುಂಡವಂ ಹಗಿನವನೊಲ್ಲದಂತೆ, ಕಲ್ಪತರುವಂ ಸಾರ್ದವಂ ಮುಳ್ಳುಮರನಂ ಬಗೆಯದಂತೆ, ಸುರಭಿ ದೊರೆಕೊಂಡವಂ ಪಯವನೆಳಸದಂತೆ, ಶಿವಭಕ್ತಿ ವೈರಾಗ್ಯಂ ದೊರೆಕೊಂಡ ದಣ್ಣಾಯಕರು ಸಂಸಾರಾಲ್ಪಸಂಕಲ್ಪಸುಖವನೊಲ್ಲದೆ ಕಲ್ಯಾಣಮಂ ಪೊರಮಟ್ಟು ಬರುತ್ತಮಾ ಪಟ್ಟಣಕ್ಕೊಂದು ಯೋಜನಾಂತರದೊಳು ಕೃತಯುಗದ ಧರ್ಮಂ ಗುಳೆಯಂದೆಗೆದಿರ್ಪಂತೆ, ಪುಣ್ಯವೊಬ್ಬುಳಿಗೊಂಡಂತೆ ಸಂಸಾರಮಂ ಸೋಂಕದ ಮೀಸಲಭಕ್ತಿ ಒಸರಿಸಿದಂತಿರ್ದ ಬಿದಿರಕಾಯದ ವಂಶವರ್ಧನನೆಂಬ ಸದುಭಕ್ತನ ಶಿವಪುರದ ಮುಂದೆ ನಡೆತಪ್ಪಾಗಳು,

ದಣ್ಣಾಯಕರ ನಿರ್ಲೇಪನಾಗಮನಮಂ ಮಹಾಮಹೇಶ್ವರನಪ್ಪ ವಂಶವರ್ಧನಂ ಕಂಡಿದಿರೆಳ್ದು ಬಂದು, ಪದತಳಕ್ಕೆರಗಿ ನಿಜಭಕ್ತಿಯಿಂ ಬಿಜಯಂಗೈಸಿ ತಂದು, ಶಿವಭಕ್ತಿ ಗುಡುಸಿದಂತಿರ್ದ ತನ್ನ ಗುಡಿಸಿಲ ಮುಂದಣ ಸಹಕಾರದ ತಣ್ಣೆಳಲ ಹೊಸ ಹಸಲೆಯ ಮೇಲೆ ಬಾಲವೇಣುವಿರಚಿತ ಮೃದುತರಾಸನಮನಿತ್ತು, ಚರಣಮಂ ತೊಳೆದು ಪಾದೋದಕಮಂ ತಳೆದು ಕೇಶಾಂಬರಮಂ ಬಿಡಿಸಿ ಧವಳದುಕೂಲಮನುಡಿಸಿ ಗಂಗಾದೇವಿಯರನೊಳಯಿಂಕೆ ಬಿಜಯಂಗೆಯ್ಸಿ ಪ್ರೇಮದಿಂ ಸೋಮನಾಥಂಗೆ ಬೋನಮಂ ಸವೆವುದೆಂದು ತಮ್ಮರಸಿಯರಿಗೆ ಪೇಳುತ್ತೊಡನೊಡನೆ ಬಿಡಲಾರದೆ ಪಟ್ಟಣದಿಂ ಸಾಲ್ಗೊಂಡು ಬಂದ ಭಕ್ತಜನಮಂ ಕೆಲಬಲದೊಳಿರಿಸುತಂ ತಾ ಬಂದು ದಣ್ಣಾಯಕರ ಪದತಳದ ಕೆಳಗೆ ವಂಶವರ್ಧನಂ ಕುಳ್ಳಿರ್ದು ದೇವದೇವಾ, ಸೇವೆಯನಡಂಗಿಸಿ, ಸಂಸಾರಮಂ ಹಿಂಗಿಸಿ, ಭವಿಗಳಂ ಭಂಗಿಸಿ, ಆಸೆಯನುಲ್ಲಂಘಿಸಿ, ನಿರ್ಲೇಪತೆಯನೊಳಕೊಂಡು ನಿಸ್ಪೃಹತೆಯ ಕೆಳೆಗೊಂಡು ನಿಃಪ್ರಪಂಚಮನೆಡೆಗೊಂಡು ಶಿವಸಾಮ್ರಾಜ್ಯಕ್ಕನುಕೂಲಮಪ್ಪ ಶಿವಭಕ್ತಿಶ್ರೀಯನಿಂಬುಗೊಂಡು ಬಿಜಯಂಗೆಯ್ದೆನ್ನಂ ಕೃತಾರ್ಥನಂ ಮಾಡಿದಿರೆಂದು ಬಿನ್ನೈಸಿದ ವಂಶವರ್ಧನನಂ ಕಾರುಣ್ಯಕಟಾಕ್ಷದಿಂ ನೋಡಿ, ಮಾತು ಮಾತಿಂ ಪುರಾತನರ ಗೀತದ ಮೇಲೆ ಶಿವಗೋಷ್ಠಿಯಂಕುರಿಸೆ ನಿರ್ಮತ್ಸರಂ ನಿಮಿರ್ದು ನಿರಸೂಯೆ ಬೆಳೆದು ಶಾಂತಿ ಪಲ್ಲವಿಸಿ ಸತ್ಯಂ ಪೂತು ಪರಿಣಾಮಂ ಫಲಿತಮಾದ ಸಮಸುಖಸಂಗದೊಳ್ಗಿಲ್ಲಕ್ಕೆ ಹಾರದೆ ತರ್ಕಕ್ಕೆ ತಲೆಯಿಕ್ಕದೆ ವಾಸಿಗೆ ಘಾಸಿಯಾಗದೆ ಮತ್ಸರಕ್ಕೆ ಮಲೆಯದೆ ಗೀತಕ್ಕೊಮ್ಮೆ ಹೊಡವಡುತೆ ಉಘೆಯಕ್ಕೊಮ್ಮೆಯುಬ್ಬುತೆ ಅಂತರಿಗೊಮ್ಮೆಯಾಲಿಂಗಿಸುತೆ ಭೋಗಕ್ಕಾನಂದಾಶ್ರುಗಳುಂ ಸೂಸುತ್ತಿರೆ ಭಕ್ತಿಭರಂ ಮಂದೈಸಿದ ಸಂಗದಿಂ ಮುಂದುಗೆಟ್ಟು ಮೇರೆಗೊಟ್ಟೋರಂತೆ ಹಾರಯಿಸಿ ಹಬ್ಬಿ ಬೆಳೆದು ಬಿಬ್ಬನೆ ಬಿರಿದಬ್ಬರಿಸಿ ಶಿವಮರುಳ್ಗೊಂಡು, ಜೇನಸೋನೆಯೊಳ್ನಿಂದಂತೆ ಸವಿಯ ಶರಧಿಯೊಳ್ನಾಂದಂತೆ, ಅಮೃತದ ಮಳೆಯೊಳ್ನೆನೆ ದಂತಿರುಳ್ಪಗಲನರಿಯದೆ ನಿದ್ರೆ ಪಸಿವಂ ಮರೆದು ತಮ್ಮಿಷ್ಟಲಿಂಗಕ್ಕಾನಂದರಸದ ಮಜ್ಜನಂ ಪುಳಕದ ಪೂಜೆ ನಿಜಶ್ವಾಸಮೆ ಪರಿಮಳದ ಧೂಪಂ ಗೀತದಾರತಿ ಗೋಷ್ಠಿಯಾರೋಗಣೆಯಾಗಿ ಶೂಲಿಯನುಭವದಿಂದೇಳು ದೆವಸಮೀ ತೆರದಿಂ ಶಿವಭಕ್ತಿ ಸುಖಪ್ರಸಂಗ ಪ್ರಸಾದ ಸಂತುಷ್ಟರಾಗಿಪ್ಪಲ್ಲಿ,

ಹರಭಕ್ತಿಯಂ ಶಿವಜ್ಞಾನಾಂಗನೆಯೆಚ್ಚರಿಸಲ್ಬಪ್ಪಂತೆ ಗಂಗಾದೇವಿಯರ್ಬಂದು, ದೇವ ದೇವಾ ಸೋಮನಾಥಂಗೇಳುದಿನಂ ಶರಣಸಂಗಸುಖಮುಖಾರೋಗಣೆಯಾಗಿರ್ದುದಿನ್ನೆಮಗೆಲ್ಲರರಿವಂತೆ ಆರೋಗಿಸಲ್ಪ್ರಸಾದಮಂ ಕರುಣಿಸವೇಳ್ಕುಮೆಂದೆಚ್ಚರಿಸಿದ ಸಮಯಮೆ ಲಿಂಗಸಮಯಮಾಗೆ

ದಣ್ಣಾಯಕರೆಚ್ಚತ್ತಾಹಾ ಸಿರಿಯಂ ಹಾಗಿಸಿ ಭವಿಗಳಂ ಮೀರಿಸಿ ಸತ್ಯಶರಣರಂ ತೋರಿಸಿ ಸಂಗಸುಖಲತೆಯಂ ಬೇರೂರಿಸಿ ಕರುಣಿಸಿದಾ ಕಂತುಮದಹರಣ ಸೌರಾಷ್ಟ್ರದೊಡೆಯ ಸೋಮಯ್ಯತಂದೆ ಸೋಮನಾಥಾ ಸೊಡ್ಡಳ ಪ್ರಭುವೆ ಎಂದೆಂದು ಸವಿನುಡಿಗಳಿಂ ಬಣ್ಣಿಸಿ, ಕರೆಕರೆದು ಕರಸ್ಥಲದ ಲಿಂಗಮನುರಸ್ಥಲದೊಳಪ್ಪಿ ಕಂಠದೊಳೊತ್ತಿ ಕಪೋಳದೊಳೊತ್ತಿ ಕಣ್ಗಳೊಳೊತ್ತಿ ಭಾಳದೊಳೊತ್ತಿ ಕೆಲಬಲದ ಸತ್ಯಮಾಹೇಶ್ವರರ ಮೊಗಮಂ ನೇಹದಿಂ ನೋಡಿ ತೂಗಾಡಿ ತುಳುಂಕದೆ ತಿಳಿದು ತೀವಿದಗ್ಘವಣಿಯ ತಂಪಂ ಮಜ್ಜನಕ್ಕೆರೆದು ನವಪುಷ್ಪದ ಪರಿಮಳನಂ ಸೂಡಿ ಧೂಪದ ಕಂಪನಿತ್ತಾರತಿಯ ಬೆಳಗನೆತ್ತಿಯಮೃತಾನ್ನದ ಸವಿಯನೂಡಿ ಚಂದನದಿಂಪಂ ನೀಡಿ ವೀಳೆಯದ ಸೊಗಸಂ ಕೂಡಿ ಸತ್ಯಪ್ರಸಾದಮಂ ಸಾದರದಿಂ ಕೈಕೊಂಡು ಪ್ರಸಾದ ತಾಂಬೂಲಮುಖನಾಗಿ ಪರಕೆಯಂ ಕೈಗೂಡಿ ತ್ರಿಪುರಾಂತಕದೇವರ್ಗರ್ಚನೆಯುದ್ಯೋಗಮಂ ನೆನೆವಲ್ಲಿಂ ಮುನ್ನಂ ತನತನಗೆ ತಂದಾರಾಧಿಸಿದ ಪೊಂಗಳಿಗೆ ಮೇರೆಯಿಲ್ಲದಿರೆ ಸರ್ವವಸ್ತುಸನ್ನಿಧಾನಸಂಪನ್ನನಾಗಿ ಮಾಹೇಶ್ವರಕೋಟಿಗೆ ಮನ್ನಣೆಸಹಿತಾರೋಗಣೆಯಿತ್ತು ವಂಶವರ್ಧನನ ಪುರಂ ಮೊದಲಾಗಿ ತ್ರಿಪುರಾಂತಕದೇವರ ರಂಗಮಂಟಪಂಬರವರ್ಚನೆಯ ಮಂಟಪವಂ ನಿಮಿರ್ಚಿ, ನಡುವೆ ಕಟ್ಟಿದ ಮೇಲ್ಕಟ್ಟಿನ ಹೊಕ್ಕುಳಪುಲ್ಲಿಯ ತೊಂಗಲ್ಗ[ಳ]ದಿ ಕಥಾಯಿಯ ಕಡೆಗಟ್ಟಿನ, ಪಚ್ಚೆಯ ಪಂಜ್ತಿಯ ಮೇಘವರ್ಣದ ವೀಥಿಯ ಹಂಸಾವಳಿಯ ಚೌಕದ ಲತಾವಳಿಯ ವಿಳಾಸದ ಸರ್ವರೂವಾರದ ಚಂದ್ರಿಕಾಮಂಟಪದೊಳು ಸಾಲ್ಗೊಂಡ ಗಣಕುಲಂ ಲಾವಂಚದ ಕಿರ್ಗಟ್ಟಂ ನೆಮ್ಮಿನಿಂದು, ಪಿಡಿದೆಳೆಯಡಕೆಯ ಸಸಿಗಳ, ಹೊದರ ಹೊಂಬಾಳೆಯ, ಬಹಳ ಸಹಕಾರಪಲ್ಲವಂಗಳ, ಈಳೆಯ ಹಣ್ಣ ತೆಕ್ಕೆಯ ಬಾಳೆಯ ಹಣ್ಣಿನಿಕ್ಕೆಯ ಮಾದುಫಲದ ಮಂತಣದ ನಾಳಿಕೇರದ ನೆರವಿಗಳ ಸರ್ವಫಲವಸ್ತು ಸಂತಾನಮಂ ಮಂಗಳದ್ರವ್ಯ ಸಂಕೀರ್ಣಮಾದ ಮೇಲ್ಕಟ್ಟಿನ ತಳದೊಳಾವುಜದ ಸಂಭ್ರಮದ ಮದ್ದಲೆಯ ಮಸಕದ ಕರಡೆಯ ಕಡುಪಿನ ಕೌಸಾಳದುರವಣೆಯ ತಾಳದ ತವಕದ ಮೇಳವಣೆಯ ಗಿರುಗಟೆಯ ಗಾಡದ ಬೊಂಬುಳಿಯ ಭರವಸದ ಕೊಂಬಿನ ಕೋಳಾಹಳದ ಸತ್ಯಶರಣರ ನಿತ್ಯಕೇಳಿಕೆಯ ಹಿಂದೆ, ತೊಟ್ಟ ರುದ್ರಾಕ್ಷಿಯ ವಜ್ರಾಂಗಿಯ, ಕದಂಬ ಕುಸುಮದೊಳ್ ಹೊರೆವಂತೆ ಬಂದುಗೆಯ ಬಾಸಿಗದ, ಸಣ್ಣನನೆಯ ಸಂಪಗೆಯ ಜೊಂಪದ, ದಾಡಿಮಬೀಜದ ಕರ್ಣಾಭರಣದ, ಮಲ್ಲಿಗೆಯ ನನೆಯ ಹಾರದ, ಮೊಲ್ಲೆಯ ಮುಗುಳಕಂಕಣದ, ಮರುಗದ ಬಾಹುಪೂರಯದ, ದ್ರಾಕ್ಷೆಯ ಮುದ್ರಿಕೆಯ, ತಾವರೆಯ ನೂಲದುಕೂಲದ, ಹೊಂಬಾಳೆಯ ಚಾಮರದ, ಮುಡಿವಾಳದ ಸೀಗುರಿಯ, ದವನದ ಧವಳಚ್ಛತ್ರದ ಶಿವನರ್ಚನೆಯ ಹರಿವರಿಯ ಶರಣರ ಶಿವತಿಂಥಿಣಿಯ ಭಾರವಣೆಯ ಮೇಲೆ ಮೆಲ್ಲಮೆಲ್ಲನೆ ನರ್ತನದ ನಟಣೆ ಮೈಸಂದು ಕೈವೀಸಿ ನಡೆದುಬರೆ, ನಡುವಣ ಕೇಳಿಕೆಯ ಮಹಾಧ್ವನಿ ದೆಸೆಯಂ ಸುತ್ತಿ, ನಭವಂ ಮುತ್ತಿ ಭೋರೆಂದೋರಂತೆ ಮಸಗೆ ಭವಿಶ್ರೀಯಂ ಹಾರಿಸಿ ಭಕ್ತಿಶ್ರೀಯನೊಳಕೊಂಡು ಕೇಶಿರಾಜ ದಣ್ಣಾಯಕರ ಶಿವಾರ್ಚನೆ ಹರಿಬ್ರಹ್ಮಾದಿಗಳ ಪದವಿಯಂ ರೋಡಾಡುತ್ತಂ ಬರೆ,

ಬಪ್ಪ ಸಂಭ್ರಮಮಂ ಕಂಡು ಕೇಳ್ದುಮಿದೆಲ್ಲಿಯಾನಂದಮಿದೆಲ್ಲಿಯದ್ಭುತದ ಮಹಿಮೆಯೆಂದು ಪೆರ್ಮಾಡಿರಾಯನುಪ್ಪರಿಗೆಯಿಂದಿಳಿದಾನೆಯ ಮೇಲಿರಲಮ್ಮದೆ ವಾರುವನನೊಲ್ಲದೆ ಪರಿಮಿತ ಪರಿವಾರನಾಗಿ ಒಂದೆ ಮೈಯ್ಯೊಳ್ಕಾಲ್ನಡೆಯೊಳ್ ಬಂದು ದಣ್ಣಾಯಕರಿರವಂ ಕಂಡು, ನೋಡಲಮ್ಮದೆ ಕಣ್ಮುಚ್ಚಿ ಮೆಯ್ಯಿಕ್ಕಿ ನಿಂದು ಕಿಂಕರಭಾವದಿಂದೊಂದೆಸೆಯ ಜಂಪದ ಕಡೆಯಂ ಪಿಡಿದುಬರೆ ಅರ್ಚನೆಯ ಮಹೋತ್ಸಾಹದೊಳ್ಪೆರ್ಮಾಡಿರಾಯನನಾರೆಂದರಿಯದೆ ನಡೆದುಬಂದು, ತ್ರಿಪುರಾಂತಕದೇವರ್ಗೆ ಪರಕೆಯಂ

ಕೊಟ್ಟು ತಿರುಗಿ ಬಪ್ಪಾಗಳ್ನಡನಡಂ ನಡುಗಿ ತನಗಂಜಿ ಪೆರ್ಮಾಡಿರಾಯಂ ಮೈಯಿಕ್ಕಿ ಪಟ್ಟಿರ್ದಿರಲೀತನಾರೆಂದು ಕೇಳಲೊಡಂ ದೇವ ದೇವಾ ಭೂಮಂಡಲವನೇಕಚ್ಛತ್ರದಿಂದಾಳ್ವ ನಮ್ಮ ಕಲ್ಯಾಣದರಸಂ ಪೆರ್ಮಾಡಿರಾಯನೆಂದು ಬಿನ್ನೈಸಲೇಳ್ಳೆಯೇಳೆಂದು ಬೆಸಸಲೆದ್ದು ನಿಂದಿರ್ದು ಕೈಮುಗಿದು ಭಯಭಕ್ತಿಯಿಂ ದೇವದೇವಾ, ನಿಮ್ಮಡಿಗಳ ಸಾಮರ್ಥ್ಯಮನರಿಯದೆ ಇನಿತುಂ ದಿನ ಓಲಯಿಸಿಕೊಂಡುದಲ್ಲದೆಯುಂ ಪಟ್ಟಣದಿಂ ಬಿಜಯಂಗೆಯ್ಯಲ್ವೇಳ್ದ ಕೋಪಾಂಧಂಗೆ ಕಾಮಾನಳದಗ್ಧಂಗೆ ಲೋಭಚಿತ್ತಂಗೆ ದುರ್ಮೋಹಿಗೆ ದುರ್ಗುಣಿಗೆ ದುರಾಚಾರಿಗೈಶ್ವರ್ಯತಮಃಪಟಲಂ ಕವಿದ ದರ್ದುರ ದುಶ್ಶೀಲಂಗೆ ದೋಷಿಗೆ ಪಿರಿಯನರಿಯದ ನರಕಜೀವಿಗೆ ಪೂಜ್ಯರನರಿಯದ ಪುಣ್ಯಹೀನಂಗೆ ಕರುಣಿಸಿ ನಿಮ್ಮಡಿದಳರಮನೆಯೆ ಮಹಾಮನೆಯಾಗಿ ಎನ್ನ ಭಂಡಾರವೆ ನಿಮ್ಮದಾಗಿ ಭಕ್ತರ್ಗಾರಾಧಿಸಿ ನಿಶ್ಚಿಂತ ನಿರುಪಮ ಶಿವಗೋಷ್ಠಿಯಿಂ ಬಿಜಯಂಗೆಯ್ದೆನ್ನಂ ಕೃತಾರ್ಥನಂ ಮಾಳ್ಪುದೆಂದು ಮತ್ತೆ ಮತ್ತೆ ಸೈಗೆಡೆದು ಚರಣಮಂ ಪಿಡಿದು ಬಿಡದಿರ್ದ ಪೆರ್ಮಾಡಿರಾಯಂಗೆ ಸದ್ಭಕ್ತರ ವಚನದಿಂ ಕರುಣಿಸಿಯರ್ಚನೆಯ ಜಂಪದ ಮಾಹೇಶ್ವರರ ಕೇಳಿಕೆಯ ಸಂಭ್ರಮಮಂ ಬೆರೆಸಿ ತಿರುಗಿ ಕಲ್ಯಾಣಮಂ ಪೊಕ್ಕು ನಿಜನಿಕೇತನ ಪ್ರವೇಶರಾಗಿ ಪೆರ್ಮಾಡಿರಾಯನಾರಾಧಿಸಿದ ಸರ್ವಾಭರಣ ರತ್ನಭಂಡಾರಮಂ ಕೈಕೊಂಡಾತನರಮನೆಗೆ ಬೀಳ್ಕೊಟ್ಟು, ಬಂದ ಶರಣರ್ಗೆ ಮನಂದಣಿಯಲಾರಾಧಿಸಿ ವಂಶವರ್ಧನಂಗುಡಕೊಟ್ಟು ಮನಂ ತೀವೆ ಸಮಸ್ತ ವಸ್ತುವನಿತ್ತು ಅವರಂ ಕಳುಪಿ, ಪುರಾತನಗೀತ ಗದ್ಯಪದ್ಯಜನಿತ ಭಕ್ತಿರಸಾಮೃತಸ್ವಾದಂ ತಾತ್ಪರ್ಯ ಹೃದಯ ಕಮಳಕರ್ಣಿಕಾ ಮಧ್ಯಸುಖಾಸೀನ ಸೋಮನಾಥನುಮಾಗಿ ಪುರಜನಕ್ಕೆ ಕರುಣಿಸುತಂ ಶರಣರ್ಗಾರಾಧಿಸುತ್ತಂ ಪೆರ್ಮಾಡಿರಾಯನಿಂದೋಲೈಸುಕೊಳುತ್ತಂ ಕೇಶಿರಾಜ ದಣ್ಣಾಯಕರು ಕಲ್ಯಾಣದೊಳಿರೆಯಿರೆ–

## ಸ್ಥಲ ೩

ಶರಣವ್ರಾತನಿವಾತನಿಶ್ಚಲ ಶಿವಾನಂದ ಪ್ರಸಂಗೋದ್ಭವ
ಸ್ಫುರಿತಪ್ರೋಲ್ಲಸಿತಾಂತರಂಗ ಸುಖಭಾವೋಜ್ಜೀವರಾಜೀವಭಾ
ಸ್ಕರನುದ್ಯೋದಿತ ಸೋಮನಾಥಚರಣಾಂಭೋಜಾತ ಸೌಗಂಧಭಾ
ಸುರಭೃಂಗಂ ಪ್ರಭು ಕೇಶಿರಾಜವಿಭುವೊಪ್ಪಿರ್ದಂ ಮಹೋತ್ಸಾಹದಿಂ ॥

ಇಂತು ಸುಖದಿಂದಿರ್ದ ದಣ್ಣಾಯಕರ್ ನಲಿದು
ಸಂತತಂ ಸೋಮನಾಥನ ಕರುಣಮಂ ತಳೆದು
ಜೊಮ್ಮಣ್ಣನೇಕನಿಷ್ಠೆಯ ಛಲದ ಬಲುಪುಮಂ
ಜೊಮ್ಮಣ್ಣನುನ್ನತ ಶಿವಪ್ರಭಾ ವಿಭವಮಂ
ಕೇಳ್ದು ಪರಮಾನಂದ ಸುಖದಿಂದಲುಬ್ಬುತ್ತೆ
ಬಾಳ್ದು ಶರಣರ ನಡುವೆ ನಲಿದು ಕೊಂಡಾಡುತ್ತೆ
ಜೊಮ್ಮಣ್ಣನೆಮ್ಮಣ್ಣನಂ ಹೋಗಿ ನೋಡುವೆಂ
ಅಮ್ಮಮ್ಮ ಶಿವಭಕ್ತಿರಸದೊಳೋಲಾಡುವೆಂ
ಎಂದು ಶರಣರ ಸಂಕುಳಂ ಬೆರೆಸಿ ಪೊರಮಟ್ಟು
ಇಂದುಧರನಾಜ್ಞೆಯಂ ಮನದ ಮೊದಲೊಳಗಿಟ್ಟು

ನಡೆತಂದು ಜೊಮ್ಮಣ್ಣನಿರ್ಪ ಪುರವಂ ಪೊಕ್ಕು
ಕಡು ನೇಹವೆಡೆಗೊಂಡು ಸಂತಸಂ ಕೈಮಿಕ್ಕು
ಬಂದು ಭಕ್ತಾಲಯವನೊಪ್ಪದಿಂದಂ ಪೊಗುತೆ
ನಿಂದು ಜೊಮ್ಮಣ್ಣನೆಲ್ಲಿಗೆ ಹೋದನೆಂದೆನುತೆ
ಶಿವನ ಮದದಾನೆ ಜೊಮ್ಮಣ್ಣನೆಲ್ಲಿಗೆ ಹೋದ
ನವನಿಗೆ ಶಿವಾಕಾರವಾದನೆಲ್ಲಿಗೆ ಹೋದ
ನೆನುತೊಳಗೆ ಪೊಗುತೆ ಪಿಸಿತಾವಳಿಯಿರಲ್ಕಂಡು
ಮನದೊಳಗೆ ಕೊಕ್ಕರಿಸಿ ಹೇಸಿ ಹೇಯಂಗೊಂಡು
ತಿರುಗಿ ಬಂದಾವೂರ ದೇವಾಲಯದೊಳಿರಲು
ಕರೆಯಬಾರದ ತೆರದೆ ಹರನರ್ಚನೆಯೊಳಿರಲು

ಬಂದನಲ್ಲಿಗೆ ಜೊಮ್ಮತಂದೆ ಭರದಿಂ ನಡೆದು
ಸಂದಣಿಸಿಕೊಂಡೊರ್ಬರೊರ್ಬರಿಗೆ ಕೈಮುಗಿದು
ಬನ್ನಿರೇ ಎನ್ನಯ ಮಹಾಮನೆಗೆ ನೀವೆಂದು
ಎನ್ನ ಪುಣ್ಯದ ಫಲಂ ಲೇಸಾದುದಿಂದೆಂದು
ಕರೆಯಲನುವಾಗಿರ್ದುದಿದೆ ಸಾಲ್ವುದೆನಲಿಲ್ಲ
ಪುರಹರಂ ಜೊಮ್ಮಣ್ಣನಿಚ್ಛೆಯೊಳ್ನಿಲಲಲ್ಲಿ
ಸೋಮನಾಥಂ ಮನಂ ನೋಡಿದಡೆ ಬೆರಗಾಗಿ
ಭೂಮಿಗತಿಕೌತುಕವಿದೆಂದೆನುತೆ ತಲೆದೂಗಿ
ಜೊಮ್ಮಣ್ಣನನುಮತಿಯೊಳಭವನಂ ಕೈಕೊಂಡು
ಸುಮ್ಮಾನದಿಂದವರ ಮನೆಗೆ ಬೆಂಬಳಿಗೊಂಡು
ಬಂದು ತಮ್ಮಿಚ್ಛೆಯಿಂದಾರೋಗಿಸಲ್ಕಿಕ್ಕಿ
ಇಂದುಶೇಖರನ ಪ್ರಸಾದದಿಂ ಮನವುಕ್ಕಿ
ಶಿವಗೋಷ್ಠಿಯೊಳಗಿರ್ದು ಪರಮ ಸುಖಮಂದಾಳ್ದು
ಶಿವದಿಡುವ ಮೃಗಸಂಕುಳದ ಹುಯ್ಯಲಂ ಕೇಳ್ದು
ಶಿವನ ಸ್ವತಂತ್ರಿಕೆಗೆ ದಣ್ಣಾಯಕರ್ಮೆಚ್ಚೆ
ಶಿವಭಕ್ತ ಜೊಮ್ಮಣ್ಣನಿರವಿಂಗೆ ಮೈವೆಚ್ಚೆ
ತಿರುಗಿದರ್ ಕಲ್ಯಾಣಪುರದತ್ತ ರಾಗದಿಂ
ಹರಭಕ್ತರೊಡನೆ ಬರುತಿರೆ ಮಹೋತ್ಸಾಹದಿಂ
ಕಳುಪುತ್ತೆ ಬಂದ ಜೊಮ್ಮಣ್ಣನಂ ನಿಲಿಸುತಂ
ಅಳವಲ್ಲದಕ್ಕರಿಂ ಮಿಕ್ಕು ಕೊಂಡಾಡುತಂ
ನಡೆತಂದರೊಲವಿಂದೆ ಶಿವಭಕ್ತರುತ್ಸವಿಸೆ
ಎಡೆಗೆಯ್ದು ಹರಪುರದ ಶರಣತತಿ ಹಾರೈಸೆ

ಪೊರಮಟ್ಟು ಬೆಟ್ಟ ಘಟ್ಟಂಗಳಂ ದಾಂಟುತಿರೆ
ಕೆರೆತೊರೆ ಬನಂಗಳಂ ನೋಡುತಂ ಬರುತಮಿರೆ

ನರಲೋಕದಿರವಿಂಗೆ ತಾನಡ್ಡವಾದಂತೆ
ಅರಸನಲ್ಲಿಗೆ ಪೋಗಲೀಯೆ ನಾನೆಂಬಂತೆ
ಮುಂದೊಂದು ನದಿಯಡ್ಡವಾಯ್ದು ಭೋರೆಂದೊಪ್ಪೆ
ಛಂದ ಛಂದದ ಪುಳಿನ ಸಂತತಿಗಳಿಂದೊಪ್ಪೆ
ತಡಿವಿಡಿದು ನಡೆತಪ್ಪ ರಾಜಹಂಸಗಳಿಂ
ಬಿಡದೆ ದುಮ್ಮಿರಿವುತಿಪ್ಪನಿಮಿಷಕುಳಂಗಳಿಂ
ಕೆಲಬಲದೊಳಿರ್ಪಿರ್ಪ ಚಮರೀ ಸಮೂಹದಿಂ
ನೆಲೆಗೊಂಡು ಬೆಳೆವ ಸುಮನಸವಿಪ್ರಘೋಷದಿಂ
ದೇವನದಿಯಂತಿರ್ದ ನದಿಯನೊಲವಿಂ ಕಂಡು
ಭಾವಿಸಲ್ಕಲ್ಲಿ ರಮಣೀಯತೆಯನೊಳಕೊಂಡು
ಮೆರೆವಶೋಕೆಗಳ ಮಾವಿನ ತಳದ ನೆಳಲೊಳಗೆ
ಹೆರೆಸೂಡಿದನನರ್ಚಿಸಲ್ಕೆಂದು ಮನದೊಳಗೆ
ನೆನೆವುತುಚ್ಚಾಸನವನಿಳಿದು ದಣ್ಣಾಯಕರು
ಮನಸಿಜಾರಿಗೆ ಸಲ್ವ ಪೂಜೆಯ ಶಿವಾರ್ಚಕರು
ಬಂದು ಪುಳಿನಸ್ಥಳದ ಮೇಲೆ ತಳಿರಂ ಹಾಸಿ
ನಿಂದು ನಲವಿಂದೆ ಹೊಸ ಕುಸುಮದೆಸಳಂ ಹಾಸಿ
ಸೋಮನಾಥಂಗೆ ನದಿಯಗ್ಘವಣಿಯಂ ಕೊಟ್ಟು
ಕಾಮಹರನಂ ನೋಡಿ ಹರುಷಮಂ ಮುಂದಿಟ್ಟು
ತಳಿರ ಸಿಂಹಾಸನದ ಮೇಲೆ ಬಿಜಯಂಗೆಯ್ಸಿ
ಹೊಳೆವ ಗಂಧಾಕ್ಷತೆಗಳಿಂದೊಲಿದಲಂಕರಿಸಿ
ದಾಸಣದ ಹೂವಿಂದೆ ಹೊಸ ಪೂಜೆಯಂ ಮಾಡಿ
ಭಾಸುರಮೆನಲ್ಕೆ ಮನದುತ್ಸವಮನೊಡಗೂಡಿ
ಪಂಚಮುಖನಂ ಚಿತ್ತದೊಳ್ನೆರೆವುತಿರಲಲ್ಲಿ
ಪಂಚಾಕ್ಷರೀಜಪವನೆಣಿಸುತ್ತವಿರಲಲ್ಲಿ

ಗಗನದೊಳ್ದೂರದಳವಿಯೊಳೆ ಗರುಡಂ ಕಂಡು
ಅಗಲದನುರಾಗವೇರಿರ್ದುದಂ ಬಗೆಗೊಂಡು
ತನ್ನೊಡೆಯನೆನಿಪ ಹರಿ ಕಣ್ಣೇರಿಸಿದನಲ್ಲಿ
ಮನ್ನಣೆಯೊಳಭವನಿಂ ಚಕ್ರಂಬಡೆದನಲ್ಲಿ
ಆನಂತೆ ಲಿಂಗಾರ್ಚನಂ ಮಾಳ್ಪೆನೆಂದೊಲಿದು

ನಾನಾ ಸುಖದೊಳಿರ್ಪೆನೀ ಮಾಯೆಯಂ ಗೆಲಿದು
ಖಗತತ್ವಮಂ ಬಿಟ್ಟು ಯಂತ್ರವಾಹಕನಲ್ಲಿ
ಅಘಹರನ ಕಾರುಣ್ಯಮಂ ಪಡೆವೆನೆನುತಲ್ಲಿ
ಹರಿಯಜರ ಪದವಿಗೆಳಸುತ್ತಿಳಿದು ಬರ್ಪಂತೆ
ಗರುಡನಿಳಿದುದು ಗಗನದಿಂದೊಲಿದು ತಾನಿಂತೆ
ಬಂದು ಮುಖಸೆಜ್ಜೆಯೊಳೆ ನಾಲಗೆಯ ಹಾಸಿನೊಳ್
ನಿಂದೊಯ್ಯನವಧರಿಸಿಕೊಂಡು ತಾನೊಲ್ಮೆಯೊಳ್
ಅಂಬರಸ್ಥಲಕೆ ನೆಗವುತ್ತಮಿರ್ಪನಿತಕ್ಕೆ
ನಂಬಿ ಗರುಡಂ ಕೊಂಡು ಪೋಗುತಿರ್ಪನಿತಕ್ಕೆ
ನದಿಯಿಂದೆ ಗಂಗೆ ಪೊರಮಟ್ಟಲ್ಲಿ ನಡೆನೋಡಿ
ಸದಮಲ ಶಿವಾರ್ಚಕ ವಿಹಂಗಪತಿಯಂ ಬೇಡಿ
ವಲ್ಲಭನನಾಲಿಂಗಿಸುವೆನೊಮ್ಮೆ ಕೊಡು ಮಗನೆ
ಸಲ್ಲಿತ ವಿಮಳಲಿಂಗವನೆನಗೆ ಬಿಡು ಮಗನೆ
ಎಂಬ ಮಾತಂ ಕೇಳ್ದ ತೆರದೆ ನದಿಯಂ ನೋಡಿ
ತ್ರ್ಯಂಬಕಂ ತನ್ನ ವಶವಲ್ಲದಿರೆ ತಾಂ ನೀಡಿ
ಭರದಿಂದೆ ನದಿಯ ನಡುವಿಂಗೆ ಬಿಜಯಂಗೆಯ್ಸಿ
ಗರುಡನೊಲವಿಂ ನೆಗೆದನಾಗಸಕೆ ಹಾರೈಸಿ

ಬಿಡೆ ಶಿವಂ ಗಂಗೆಯಾಲಿಂಗನದೊಳೊಡಗೂಡೆ
ಎಡಬಲದ ಮಾಹೇಶ್ವರರ್ಭೀತಿಯೊಳ್ಕೂಡೆ
ಕಂಡು ದಣ್ಣಾಯಕರು ಭೋಂಕನೆ ಕಠಾರಿಯಂ
ಕೊಂಡು ಕುಬುಬೆನುತಮಿರೆ ನಿಷ್ಠೆಗುಪಕಾರಿಯಂ
ನೋಡಿ ಶರಣರ್ಪರಿದು ಬಂದು ಕೈಯಂ ಪಿಡಿದು
ಬೇಡ ಬೇಡೆಲೆಲೆ ಹಿರಿಯಾಣೆಯೆನುತಂ ಜಡಿದು
ಶೈವಧರ್ಮದ ವಿಚಾರಕ್ಕೆ ತಾನೆಡೆಯುಂಟು
ಮೈವಳಿಯೊಳೆಮ್ಮೆಂದುದಂ ಕೇಳೆ ಲೇಸುಂಟು
ಸೋಮನಾಥಂ ನದಿಯೊಳಿರ್ದಪಂ ನಾವರಿಯೆ
ಈ ಮಾತು ಸಂದೇಹವಿಲ್ಲವಿದು ನೀವರಿಯೆ
ಆವೆಲ್ಲರುಂ ಪೊಕ್ಕು ನೋಡಿಯರಸಿದ ಬಳಿಕ
ತೀವಿರ್ದ ನದಿಯಂ ಕಲಂಕಿ ನೋಡಿದ ಬಳಿಕ
ನೀವೆಂದುದಂ ಮಾಳ್ಪುದುಚಿತವೆಂದೆನುತಮಿರೆ
ಆವೆಲ್ಲರುಂ ಸಹಾಯಂ ನಿಮಗೆನುತ್ತಮಿರೆ
ನುಡಿದನಪ್ರತಿಮನಮ್ಮಮ್ಮ ಕೇಶವರಾಜ

ಎಡೆಗುಡದ ಛಲಿ ಕಲಿ ಶಿವಾಚಾರ ಕುಲರಾಜ
ಇನ್ನೊಂದನವಧರಿಸಿರೇ ಎನ್ನ ಭಾಷೆಯಂ
ಪನ್ನಗಾಭರಣನೊಡಗೂಡುವ ನಿರಾಸೆಯಂ
ನೀವೆಲ್ಲರಾಯಾಸಗೊಂಬುದೆನಗದು ಬೇಡ
ದೇವರೊಲವಿಂ ಮೆಚ್ಚಲಿಂತು ಮಾಳ್ಪೆಂ ನೋಡ
ಒಂದು ಹರುಗೋಲನಾನೀ ತಡಿಯೊಳಿಕ್ಕುವೆಂ
ಮುಂದೆಯಾ ತಡಿಗೆ ಭರದಿಂ ದಾಳಿಯಿಕ್ಕುವೆಂ
ನಡುವೆ ಬಾರದೆ ನಿಲಲು ಬೇಡಿಕೊಂಬೆಂ ಬಳಿಕ
ಪೊಡವಿಗತ್ಯದ್ಭುತಂ ಮಾಡಿತೋರ್ಪೆಂ ಬಳಿಕ

ಎಂದೊಡಂಬಡಿಸಿ ಹರುಗೋಲ ಹತ್ತಿರೆ ಬಂದು
ಸಂದಣಿಸಿ ನುಡಿದನಾ ಸೋಮನಾಥಂಗಂದು
ಮತ್ತೊಂದು ಧ್ಯೇಯವುಂಟೆಂಬುದಂ ಬಗೆದಡಂ
ಮತ್ತೊಂದು ಸಮಯವುಂಟೆಂದು ನಾಂ ನುಡಿದಡಂ
ಎನ್ನ ಸತಿಯಲ್ಲದನ್ಯಕ್ಕೆಳಸಿ ನಿಂದಡಂ
ನಿನ್ನವರ್ಗಳಲ್ಲದನ್ಯರ್ಗಿನಿತನಿತ್ತಡಂ
ನುಡಿವಲ್ಲಿ ಸತ್ಯವಲ್ಲದೆ ಬೇರೆ ನುಡಿದಡಂ
ನಡೆವಲ್ಲಿ ನಾಂ ದುರಾಚಾರದೊಳು ನಡೆದಡಂ
ಮನಸಿನೊಳ್ನೀನಲ್ಲದಿತರವಂ ನೆನೆದಡಂ
ಕನಸಿನೊಳ್ನೀನಲ್ಲದನ್ಯನಂ ಕಂಡಡಂ
ಇದು ದಿಬ್ಯವೆಂದೆನುತೆ ಹರುಗೋಲನೇರಿದಂ
ಅದಿರದಳ್ಕದ ಶಿವವ್ರತಿ ಕರಂ ಮೀರಿದಂ
ನಿರ್ಮಳಂ ನಿಶ್ಚಳಂ ವೀರಕಳೆಯೇರಿದಂ
ನಿರ್ಮಳಂ ನಿರುಪಮಂ ನಿಷ್ಠೆಯಂ ಹೇರಿದಂ
ಭವಜಳಧಿಯಂ ದಾಂಟುವಂತೆ ಪೋಗುತ್ತಮಿರೆ
ಶಿವನೇಕನಿಷ್ಠೆ ನಡೆವಂತೆ ನಡೆವುತ್ತಮಿರೆ
ನಡುವೆ ನಿಂದೆಲೆ ಸೋಮನಾಥ ಬಾರೈ ಬಾರ
ಮೃಡ ಭರ್ಗ ಭೀಮ ಭಾಳಾಕ್ಷ ಬಾರೈ ಬಾರ
ಎನ್ನ ನವನಿಧಿಯೆ ಬಳಲಿಸದೆ ಬಾರೆಲೆ ತಂದೆ
ಎನ್ನ ಸುಖನಿಧಿಯೆ ಕಾಡದೆ ಕರುಣಿಸೆಲೆ ತಂದೆ
ಚಂದ್ರಧರ ಮದನಹರ ನಿನ್ನ ಮೊಗಮಂ ತೋರ
ಇಂದ್ರಾದಿ ಸುರನಿಕರವಂದ್ಯ ಪದಮಂ ತೋರ
ತೋರದಿರ್ದಡೆ ನಿಲುವನಲ್ಲೆಂದು ನಿಶ್ಚೈಸಿ

ಮೀರಿರ್ದ ನುಡಿ ಶಿವನ ಕಿವಿಗೊಳ್ಮೆಯ್ಸಿ
ಕೇಳ್ದು ಸದ್ಯೋಜಾತನಿರಬಾರದೆಂದಲ್ಲಿ
ತಾಳ್ದು ಕಾರುಣ್ಯಮಂ ಮೇಲೆ ನೆಗೆವುತ್ತಲ್ಲಿ
ಭಕ್ತನೊಲವಿನ ಹರಣವೊಲಿದು ನೆಗೆತಪ್ಪಂತೆ
ಭಕ್ತಿರಸದಿಂ ಮುಕ್ತಿಪದವೊಗೆದು ಬರ್ಪಂತೆ
ಹಸಿಯ ಬೆಳ್ದಿಂಗಳಂ ಕರೆವುತಂ ಮೆರೆವುತಂ
ಎಸೆವ ರವಿಕಿರಣಮಂ ಬೆಳಗುತಂ ತೊಳಗುತಂ
ಜನನವರ್ಜಿತನಲ್ಲಿ ಹುಟ್ಟಿನೊಳ್ತೋರುತಿರೆ
ಮನಸಿಜಹರಂ ಕರುಣಮಂ ದೆಸೆಗೆ ಬೀರುತಿರೆ

ಕಂಡಾಗಳನುಕೂಲ ಮಾಹೇಶ್ವರರ್ಕೂಡೆ
ಕೊಂಡಾಡಿ ಗುಡಿಗಟ್ಟಿ ಹರುಷದಿಂ ಕುಣಿದಾಡೆ
ದಣ್ಣಾಯಕರ್ಕಂಡಿದೇನೆಂಬ ಪರಿ ದೇವ
ಬಣ್ಣವಣ್ಣಿಗೆಯ ಪೂಜೆಯನುಳಿದೆ ಎಲೆದೇವ
ಗಂಧವಕ್ಷತೆ ಪೂಗಳಂ ಬಿಟ್ಟು ಬರ್ಪರೇ
ಬಂಧುರ ಶ್ರೀಯನುಳಿದೊರ್ವರ್ರೈತರ್ಪರೇ
ಎಂದಲ್ಲಿ ಶರಣಸತಿ ಮುಳಿದು ಹುರುಡಿಸುವಂತೆ
ಅಂದು ಶಿವನ ಸ್ನೇಹಮಂ ಘನಂ ಮಾಳ್ಪಂತೆ
ಶರಣರೆಲ್ಲಂ ನೋಡಿ ಕೌತುಕಂಬಡುತಮಿರೆ
ಪರಿಜನವಿದೇನಿದೇನೆಂದು ನೋಡುತ್ತಮಿರೆ
ಮತ್ತೆ ಬಿಜಯಂಗೈಸಿದಂ ಸೋಮನಾಥನಂ
ಉತ್ತಮ ಸ್ನೇಹವರ ಗಣನಾಥಯೂಥನಂ
ನೋಡ ಬಿಜಯಂಗೈಸಿ ವೀರನಾರುತ್ತಮಿರೆ
ನೀಡಾಗದಂತಲ್ಲಿ ಬರವನೆಳಸುತ್ತಮಿರೆ
ಭಕ್ತನ ಪರಿಚ್ಛೇದದತಿ ಭಾಷೆಗಂಜುತಂ
ಭಕ್ತಿಸುಲಭಂ ತನ್ನ ಮನದೊಳಗೆ ಪೆರ್ಚುತಂ
ಏಕನಿಷ್ಠೆಗೆ ಮೆಚ್ಚಿ ದಾಸಣದ ಪೂವೆರಸಿ
ಲೋಕೈಕನಾಥನಕ್ಷತೆ ಗಂಧಕುಳವೆರಸಿ
ಶಂಕರಂ ಭೋಂಕನನುರಾಗವೇರುತ್ತಲ್ಲಿ
ಮುಂಕಣಿಯ ದಣ್ಣಾಯಕರ ಕರದೊಳಿರಲಲ್ಲಿ
ನಳನಳಿಸಿ ಬೆಳಬೆಳಪ ಧವಳಾಂಗನಂ ಕಂಡು
ಎಳೆದಿಂಗಳೆಸೆವ ಜಡೆಗಳ ನೀರನಂ ಕಂಡು
ಪಾರಿಜಾತ ಪ್ರಸೂನಾಮೋದನಂ ಕಂಡು

ಮಾರಾರಿಯಂ ಕಂಡು ಕಾರಣಿಕನಂ ಕಂಡು
ತಣಿದು ತೂಗಾಡುತಂ ಮಿಗೆ ಕುಳಿರ್ಕೋಡುತಂ
ಎಣೆಯಗಲವೊಪ್ಪುತಂ ಹರುಷದಿಂದಪ್ಪುತಂ
ಮುದದಿಂದೆ ಶರಣತತಿ ನಿಬ್ಬಣಿಗರಾಗುತಿರೆ
ನದಿಯ ನುಣ್ದೆರೆ ಸರಿದು ನೋಟವೊಂದಾಗುತಿರೆ
ಕೈಗೂಡೆ ಶರಣಸತಿ ಲಿಂಗಪತಿಯೊಡನಂದು
ಸೈಗೆಡೆದು ಶರಣರೆಲ್ಲುತ್ಸವಿಸುತಿರಲಂದು
ಕರೆವ ಹೂಮಳೆಯೊಳಗೆ ಹೊಯ್ವ ದುಂದುಭಿಯೊಳಗೆ
ಮೆರೆವ ಬಿರುದಿನ ಕಹಳೆಗಳ ಘನಧ್ವನಿಯೊಳಗೆ
ಬಂದ ಪುಷ್ಪಕವನೀಕ್ಷಿಸುತೆ ದಣ್ಣಾಯಕರು
ನಿಂದು ಹಾರೈಸುತಂ ಸದುಭಕ್ತಿವಾಹಕರು
ಶರಣರೆಲ್ಲುಘೆ ಚಾಂಗು ಬೊಲ್ಲೆಂದು ಪೊಗಳುತಿರೆ
ಧರಣೀಜನಂ ಜಯ ಜಯೆಂದು ಪೊಡಮಡುತಮಿರೆ
ಹೊಸ ವಿಮಾನವನೇರಿ ನೆಗೆದನಾಕಾಶಕ್ಕೆ
ದಶಭುಜ ತ್ರಿಣಯನನ ಸುಖತರ ನಿವಾಸಕ್ಕೆ
ಬಂದು ನಂದೀಶ್ವರನ ಬಾಗಿಲೊಳಗಂ ಪೊಕ್ಕು
ಇಂದುಧರನಂ ಕಂಡು ಭಕ್ತಿಭರದಿಂ ಮಿಕ್ಕು
ಪದ್ಯಂಗಳೋದುತಂ ಮೆಯ್ಯಿಕ್ಕಿ ನಿಂದಿರಲು
ಚೋದ್ಯಕ್ಕೆ ಚೋದ್ಯವೆನಲೀಶ್ವರನ ಮುಂದಿರಲು
ಕಂಡು ಸರ್ವೇಶ್ವರಂ ನಂದೀಶನಂ ಕರೆದು
ಅಂಡಲೆವ ಮಾಯೆಯಂ ಗೆಲಿದು ಬರವಿಂತರಿದು
ಸಿರಿಯನೊಲ್ಲದೆ ಹರಸಿಕೊಂಡರೇನಿಂತುಂಟೆ
ಪರಮ ಭಕ್ತಿಶ್ರೀಯನೆಡೆಗೊಂಡರಿಂತುಂಟೆ
ಅಮ್ಮಮ್ಮ ನೋಡಲಂಜದೆ ನಿಂದರಿಂತುಂಟೆ
ಸುಮ್ಮಾನವೇರಿ ಮತ್ತೊಮ್ಮೆ ಬರಿಸಿದರುಂಟೆ
ಎಂದು ನಂದೀಶಂಗೆ ಹೇಳುತಂ ಹಿಗ್ಗುತಂ
ಬಂದ ಗಣಸಂಕುಳಕೆ ತೋರಿ ಮನವೊಗ್ಗುತಂ
ಕೇಶಿರಾಜಯ್ಯಂಗೆ ಗಣಪದವಿಯಂ ಕೊಟ್ಟು
ಭಾಸುರಸ್ನೇಹಮಂ ಮನದೊಳಗೆ ಮುಂದಿಟ್ಟು
ಅಮರಗಣ ಹೃತ್ಕಮಳ ವಿಮಳರವಿಯೊಪ್ಪಿದಂ
ಕುಮುದಸಖ ಕಮಳಸಖ ಶಿಖಿನಯನನೊಪ್ಪಿದಂ
ನಾಗಕುಂಡಲನಾಗಮಾತರ್ಕ್ಯನೊಪ್ಪಿದಂ
ನಾಗಾಜಿನಾಂಬರ ಮಹಾಕಾಯನೊಪ್ಪಿದಂ

ತ್ರಿಣಯನಂ ಗಣಕುಲಂ ಫಣಿಕಟಕನೊಪ್ಪಿದಂ
ಅಣಿಮಾದಿಸಿದ್ಧಿಗುಣಗಣಸೇವ್ಯನೊಪ್ಪಿದಂ
ಗರ್ವಿತ ನೃಸಿಂಹ ಚರ್ಮಾವರಣನೊಪ್ಪಿದಂ
ಪರ್ವತಾಧೀಶತನಯಾರ್ಧಾಂಗನೊಪ್ಪಿದಂ
ಪಂಪಾಮುಖಾಬ್ಜವಿಕಸನ ತರಣಿಯೊಪ್ಪಿದಂ
ಹಂಪೆಯ ವಿರೂಪಾಕ್ಷನನವರತಮೊಪ್ಪಿದಂ ೨೦೮-೪೦೪

ತುರುಗಿದ ಕೆಂಜೆಡೆಯರಸಂ
ಕರೆಗೊರಲಂ ಕೇಶಿರಾಜ ದಣ್ಣಾಯಕರಂ।
ಮೆರೆದಂ ಭಕ್ತಿಯನೆಮಗುಮೆ
ಯೆರೆಯಂ ಕರುಣಿಪುದು ಹಂಪೆಯ ವಿರೂಪಾಕ್ಷಂ॥

❖❖

# ೨. ತೆಲುಗು ಜೊಮ್ಮಯ್ಯನ ರಗಳೆ

## ಸ್ಥಲ ೧

ಗಿರಿಜಾವಲ್ಲಭನಂಬರ
ಪುರಮಥನಂ ದೇವ ಹಂಪೆಯ ವಿರೂಪಾಕ್ಷಂ।
ಕರುಣಂ ಮಿಗೆ ಮೆರೆದಂ ಸಾ
ದರದಿಂದಂ ತೆಲುಗು ಜೊಮ್ಮತಂದೆಯನಿಳೆಯೊಳ್ ॥

ಧರೆಗೆಸೆವ ಕಲ್ಯಾಣವೆಂಬ ಪಟ್ಟಣದೊಳಗೆ
ಹರಭಕ್ತನೊರ್ವನಿರ್ಪಂ ಭಕ್ತಿ ತೊಳತೊಳಗೆ
ನಾಮಂ ತೆಲುಗು ಜೊಮ್ಮತಂದೆಯೆಂದೊಪ್ಪಿರಲು
ಭೀಮನಾಥಂಗತಿ ಪ್ರೇಮಕರನಾಗಿರಲು
ಮನ್ನೆಯಂ ಸಾವಂತಪತಿ ಭಕ್ತಿಭೂಷಣಂ
ಅನ್ನೆಯಂ ಹೊದ್ದಬಾರದ ಸುಖನಿವೇಷಣಂ
ಏಕನಿಷ್ಠಂ ಶಿವನನಲ್ಲದೊಲ್ಲದ ಮಾನಿ
ಲೌಕಿಕವನೆಳ್ಳನಿತನನುಕರಿಸದಭಿಮಾನಿ
ಸತ್ಯನಚಲಂ ಮಹೋತ್ಸಾಹಿ ಕಲಿ ನಿಃಕಾಮಿ
ನಿತ್ಯ ಲಿಂಗಾರ್ಚನಾನಿರತನಭವಪ್ರೇಮಿ
ನಿಂದೆಯಂ ಸೈರಿಸದನಿಂದ್ಯತರ ಗುರುಮೂರ್ತಿ
ಇಂದುಧರನ ಪ್ರತಾಪಾರಂಭ ವರಕೀರ್ತಿ
ಉರಿಯಂತೆ ಸಿಡಿಲಂತೆ ಶಿವದೂಷಕಾವಳಿಗೆ
ಸಿರಿಯಂತೆ ಸುಖದಂತೆ ಹರನ ಶರಣಾವಳಿಗೆ
ಭವಿಗಳಂ ಪುಳುವಿಂದೆ ಕಷ್ಟಮಾಗಿಯೆ ಕಂಡು
ಶಿವಭಕ್ತರಂ ಬಂಧು ಬಳಗವೆಂದೇ ಕಂಡು

ಇಂತಿರಲ್ ಭೀಮನಾಥಂ ಕನಸಿನೊಳ್ಬಂದು
ಸಂತಸಂ ಮಿಗೆ ಜಂಗಮಾಕಾರದಿಂ ನಿಂದು
ಎಲೆ ಮಗನೆ ಜೊಮ್ಮಯ್ಯ ನಿನಗೊಂದನರುಪುವೆಂ
ನಲವಿಂದೆ ಸೂಕ್ಷ್ಮಧರ್ಮನೊಲಿದು ತಿಳುಪುವೆಂ
ಈ ಪಟ್ಟಣದ ಕೆಲದ ಹತ್ತು ಯೋಜನದೊಳಗೆ
ಶಾಪಹತರಾಗಿ ಮೃಗವಾಗಿ ಕಾನನದೊಳಗೆ
ಕಾರಣಿಕ ಋಷಿಯರಿರ್ದಪರವರನಟ್ಟುವುದು
ಆರೈದು ಮೃಗದ ಜನನದ ಬೇಂಟೆಯಾಡುವುದು
ಮಾಯೆಯಂ ಕಳೆದು ಕೈಲಾಸಕ್ಕೆ ಕಳುಪುವುದು
ಕಾಯಮಂ ಪೊತ್ತಿರ್ಪ ಭಾರಮುಮನಿಳಿಪುವುದು
ಎಂದು ಕರುಣಿಸಿ ಹರಂ ಶಿವಲಿಂಗದೊಳ್ಪೊಗಲು
ಅಂದು ಜೊಮ್ಮಯ್ಯಂಗೆ ಪುಳಕಂಗಳಗೆ ಮಿಗಲು
ಏಳ್ದು ಕಣ್ದೆರೆದು ಹರುಷಂ ಮಿಕ್ಕು ಹಾರೈಸಿ
ಬಾಳ್ದು ಶಿವನಂ ಕಂಡು ಸುಖದೊಳಗೆ ಪೂರೈಸಿ
ಹರನಾಜ್ಞೆಯಿಂ ಮೃಗದ ಬೇಂಟೆಯಾಡುತಿರ್ದು
ಪರಮ ಋಷಿಯರ ಕರ್ಮವಂ ಮಾಣಿಸುತ್ತಿರ್ದು
ಭಕ್ತರ್ಗೆ ಮಾಡಲಿಲ್ಲೆಂದುಮ್ಮಳಂ ಪುಟ್ಟಿ
ಯುಕ್ತಿಯಿಂ ಸೇವಕಾವೃತ್ತಿಗೆ ಮನಂಮುಟ್ಟಿ
ಬಂದು ಪೆರ್ಮಾಡಿರಾಯನನಳ್ಕರಿಂ ಕಂಡು
ಒಂದು ತಿಂಗಳ್ಗೆ ಸಾವಿರ ಹೊನ್ನನೆಡೆಗೊಂಡು
ಶರಣರ್ಗೆ ಮಾಡುತಂ ಭಕ್ತಿಯಂ ಸೂಡುತಂ
ಪರಮಹರುಷಂ ಮಿಕ್ಕು ಸುಖದೊಳೋಲಾಡುತಂ
ಜೋಳವಾಳಿಯೊಳಿರ್ಪನಾ ಧರಾನಾಥಂಗೆ
ವೇಳೆವಾಳಿನೊಳಿರ್ಪನಾ ಭೀಮನಾಥಂಗೆ
ಪೆರ್ಮಾಡಿರಾಯಂಗೆ ಹೊಡವಡಂ ಲೆಕ್ಕಿಸಂ
ಅಮ್ಮಮ್ಮ ಶಂಕರಧ್ಯಾನೈಕಮಾನಸಂ
ಓಲೈಸಬಂದಡೆಂದುಂ ಮರೆದು ಕುಳ್ಳಿರಂ
ಆಲೋಕಿಸಂ ದಿಟಂ ಕೈಕೊಳ್ಳನೊಬ್ಬರಂ
ಪುರುಷಸಿಂಹವನಾಳ್ವ ಮಾತಂಗಪತಿಯಂತೆ
ಅರಸ ಹೆಮ್ಮಾಡಿರಾಯಂ ಭೀತಿಯಿಂದಿಂತೆ
ಪೋಗೆನಲ್ಕಮ್ಮನವರಂ ನೋಡಿ ನಡುಗುವಂ
ಬೇಗದಿಂದಂ ಕರೆಯಿಸಲ್ಕಮ್ಮನಂಜುವಂ
ತನ್ನಿಚ್ಛೆಯೊಳ್ಬಂದು ತನ್ನಿಚ್ಛೆಯೊಳ್ಪೋಗಿ

ಮನ್ನಣೆಯ ಶಿವನ ತೇಜದ ಕಣಿಯ ಕರುವಾಗಿ
ಇರಲಿತ್ತ ಪೆರ್ಮಾಡಿರಾಯನೊಲುಮೆಯ ಕಾಂತೆ
ಪರಮ ಶಿವಲಿಂಗಾರ್ಚನಾನಿರತೆ ಗುಣಿ ಶಾಂತೆ
ತನಗೆ ಲಕುಮಾದೇವಿಯೆಂಬ ಪೆಸರೊಪ್ಪಿರ್ದು
ಮನಸಿಜಾರಿಯನಕ್ಕರಿಂದರ್ಚಸುತ್ತಿರ್ದು
ಜೊಮ್ಮಯ್ಯನೇಕನಿಷ್ಠೆಯ ಚಲದ ಬಲುಪುಮಂ
ಜೊಮ್ಮಣ್ಣನೆಸೆವ ಶಿವಭಕ್ತಿಯುತ್ಸಾಹಮಂ
ಪುರಹರನ ಪರಮ ಪ್ರತಾಪದುರವಣೆಯುಮಂ
ಹರನ ತೇಜಂ ನೆಲಸಿ ನಿಂದ ಸಂದಣಿಯುಮಂ
ಕೇಳ್ದು ಸಂತೋಷದಿಂ ಪರಮ ಹರುಷಂಗಳಂ
ತಾಳ್ದು ಹೊಸ ಹೊಸ ಪರಿಯ ವಸ್ತ್ರ ಸಂತತಿಗಳಂ
ಚಂದನಂ ಕರ್ಪೂರವಗುರು ಧೂಪಂಗಳಂ
ಮಂದೈಸಿ ಕಂಪಿಡುವ ಸಾದು ಕತ್ತುರಿಗಳಂ
ಅಂದಂದು ಬಂದೆಸೆವ ಪೊಚ್ಚ ಪೊಸ ಪೂಗಳಂ
ಇಂದುಧರನಣುಗಂಗೆ ಪರಿಪರಿಯ ಪೂಗಳಂ
ಕಳುಪುತಿರೆ ಕೈಕೊಂಡು ಜೊಮ್ಮಣ್ಣನಳ್ತಿಯಿಂ
ಪುಳಕಿಸುತೆ ಪೊಡಮಡುತೆ ಶಿವಭಕ್ತಿಗೊಲ್ಮೆಯಿಂ
ಶಿವಸೋದರದ ತೆರದೆ ಬಂಧುಕೃತ್ಯದೊಳಿರಲು
ಶಿವನನರ್ಚಿಸುತೆ ಕೆಲವುಂ ದೆವಸಮಿರುತಿರಲು
ಇರ್ದು ಜೊಮ್ಮಯ್ಯಂಗಳೊಂದುದಿನ ಉದಯದೊಳು
ಸಾರ್ದು ವದನಕ್ಷಾಲನಂ ಮಾಡಿ ನಿಲಯದೊಳು
ಆಗಮಸ್ಥಾನದೊಳ್ ಭಸಿತಮಂ ತೀವಿಟ್ಟು
ರಾಗದಿಂ ರುದ್ರಾಕ್ಷಿಗಳನಳವಡಲ್ತೊಟ್ಟು
ಸೆಜ್ಜೆಯರಮನೆಯೊಳೊಪ್ಪುಳ್ವ ಭೀಮನಾಥನಂ
ಸಜ್ಜನಪ್ರೇಮಿ ತನ್ನಯ ಪ್ರಾಣನಾಥನಂ
ಬಾರಯ್ಯ ಬಾರೆನ್ನ ಭಕ್ತಜನದುನ್ನತಿಯೆ
ಬಾರಯ್ಯ ಬಾರರಸ ಬಾರೆನ್ನ ಗತಿಮತಿಯೆ
ಬಾರ ನಂಬಿದರೊಲವೆ ಬಾರ ಶರಣರ ಬಲವೆ
ಬಾರ ಪುಣ್ಯದ ಫಲವೆ ಬಾರ ಮುಕ್ತಿಯ ನಿಲವೆ
ಎಂದಿಂತು ಬೋಳೈಸಿ ಕರೆದು ಬಿಜಯಂಗೆಯ್ಸಿ
ಮಂದೈಪ ಹರುಷದಿಂದೊಲಿದಂದು ಹಾರೈಸಿ
ಚಂದದಿಂ ಪಾಡುತಂ ಮಜ್ಜನಕ್ಕೆರೆದೆರೆದು
ಚಂದನವನಿತ್ತಿತ್ತು ನೋಡಿ ಸುಖದೊಳ್ನೆನೆದು

ಪುಳಕಿಸುತೆ ಸಿಂಹಾಸನಕ್ಕೆ ಬಿಜಯಂಗೆಯ್ದಿ
ಎಳಸುವಚ್ಚರಲ್ಗಳಂ ಸಿರಿಮುಡಿಗೆ ಕೆಯ್ಗೊಳಿಸಿ
ನವಧೂಪ ಧೂಮದಿಂದೊಸರ್ವ ಪರಿಮಳವಿತ್ತು
ನವಕಾಂತಿಗಳನೇಳಿಪಾರತಿಗಳಂ ಪೊತ್ತು
ಕಂಪಿಡುವ ವೀಳೆಯಮನಾರೋಗಿಸಲ್ಕೊಟ್ಟು
ಸೊಂಪೇರಿ ಶಿವನೇಕನಿಷ್ಠೆಯಂ ಮುಂದಿಟ್ಟು
ಪಾದೋದಕಪ್ರಸಾದದ ತಂಬುಲಂಗೊಂಡು
ಸಾದರಂ ಭೀಮನಾಥನ ಕೃಪೆಯನೆಡೆಗೊಂಡು

ಇಂತುದಯ ಸಮಯದೊಳು ನಿತ್ಯನೇಮಂ ಮಾಡಿ
ಕಂತು ಮದಮರ್ದನನ ತೇಜಮಂ ನೆರೆ ಸೂಡಿ
ಬಂದ ಭಕ್ತರ ಮನೋರಥವನೊಲಿದೀವುತಂ
ವಂದಿಸುತ್ತವರ ನಲ್ವರಕೆಗಳನಾನುತಂ
ಮನೆಯಿಂದೆ ಪೊರಮಡುತ್ತುನ್ನತಾಸನವೇರಿ
ಘನಮಹಿಮೆಯಂ ಮನದೊಳೆಡೆಗೊಂಡು ನಲವೇರಿ
ನಡೆತರುತ್ತರಮನೆಯ ಮುಂದೆ ಭರದಿಂದಿಳಿದು
ಮೃಡನೆ ಶರಣೆಂದೆನುತೆ ಬಾಗಿಲ್ಗಳಂ ಕಳಿದು
ಪಡಿಯರರು ತಮತಮಗೆ ನಿಂದು ಕೈಮುಗಿವುತಿರೆ
ಎಡಬಲದ ರಾಜಪುತ್ರಾಳಿ ನಡನಡುಗುತಿರೆ
ನಡೆತಂದನಾ ವಿಭೂತಿಯ ವೀರನಮ್ಮಮ್ಮ
ನಡೆತಂದನಲ್ಲಿ ಸುರಗಿಯ ಸುಭಟನಮ್ಮಮ್ಮ
ಬರುತಿರಲ್ಮುಂದೊಂದು ಪಿರಿಯ ಮಾಳಿಗೆಯೊಳಗೆ
ಅರಸನಾ ವಿಷ್ಣುವಂ ಪೂಜಿಸುತ್ತಿರಲೊಳಗೆ
ಪೊರಗೆ ನಿಂದಿರ್ದನಾ ಜೊಮ್ಮಣ್ಣನತಿಬಳಂ
ತೆರಹಿಲ್ಲದಚ್ಚಗಲಿ ನೆರೆ ಮನದ ನಿಶ್ಚಳಂ
ನಿಂದಿರಲ್ಕೆಲದೊಳೊರ್ವಂ ಪುರಾಣಿಕನಲ್ಲಿ
ಸಂದಣಿಸಿ ವೈಷ್ಣವ ಪುರಾಣವೋದುತ್ತಲ್ಲಿ
ಕಟ್ಟುಕಪುರಾಣಮಂ ದಿಟ್ಟತನದಿಂ ಪಿಡಿದು
ಕೆಟ್ಟ ಮಿಟ್ಟೆಯ ಭಂಡನೆನಿಪ ಪಾರ್ವಂ ಪಿಡಿದು
ಆಕಾಶಗಂಗೆ ಮುನ್ನುಳ್ಳುದುದನಟಮಟಿಸಿ
ಲೋಕಾಯತಂ ಹುಸಿಯನುಚ್ಚರಿಸಲಳವಡಿಸಿ
ವಿಷ್ಣುಪದವೆಂಬ ಗಗನದ ನಾಮವಲ್ಲಿರ್ದು
ವಿಷ್ಣುಪದಿಯಾದಳೆಂಬರ್ಥಮುಮನರಿದಿರ್ದು

ವಂಚಿಸಿ ಶಿವದ್ರೋಹಿ ಕಾಳ್ಗೆಡೆವುತಿರಲಲ್ಲಿ
ಪಂಚಮುಖನಿಂದೆಯಂ ಮಾಡತ್ತಮಿರಲಲ್ಲಿ
ಕೇಳ್ದು ಜೊಮ್ಮಣ್ಣನೆಂತೆಂತದೆಂತಿನ್ನೊಮ್ಮೆ
ಆಳ್ದನೇ ಧರಯಿಸಿದನಿದನಾಡಲಾನಮ್ಮೆ
ಎಲೆಲೆಲೆ ಶಿವದ್ರೋಹಿ ಇಂತು ಪುಸಿ ನುಡಿವರೆ
ಎಲೆ ಪಾಪಿ ಪಾಪಿ ಪಾತಕ ಇಂತು ಬಗುಳ್ವರೆ
ಎನುತವಲಗಿಂ ಧೊಪ್ಪನಿರಿದನಾ ದ್ರೋಹಿಯಂ
ತನುವನಿರ್ಮೆಯ್ಗಾಗಣೆ ನರಕಿಯಂ ಬಾಹಿಯಂ
ಇರಿದು ಭೋಂಕನೆ ಸೆಳೆಯೆ ಬಿಳ್ದನಾ ವಿದ್ರೂಪಿ
ಒರಗಿ ನೆಲನಂ ಕಾರುತಿರ್ದನಾ ಕಡು ಪಾಪಿ
ಬಲುಗರಂ ಹೊಡೆದಂತೆ ಬೆರೆತನಾ ಪಾತಕಂ
ಹಲುಗಚ್ಚಿ ಹೆಣನಾದನಂದಾತ್ಮಘಾತುಕಂ

ಅಂತಾ ಶಿವದ್ರೋಹಿಯಂ ತೀರ್ಚಿ ಪೊರಮಟ್ಟು
ಕಂತುಮದಮರ್ದನನ ತೇಜಮಂ ಮುಂದಿಟ್ಟು
ಶಿವನಿಂತು ಕೇಳಿಸಿದನೇ ತನ್ನ ನಿಂದೆಯಂ
ಅವನದಲ್ಲಲ್ಲಿ ತಪ್ಪಾ ಬಪ್ಪುದನ್ನೆಯಂ
ಎನುತೆ ಘೂರ್ಣಿಸುತೆ ನಿಜನಿಳಯಕ್ಕೆ ನಡೆತಂದು
ಮನಸಿಜಾರಿಯ ಶರಣರಂ ಕರೆಯಿಸುತ್ತಂದು
ಎಲ್ಲರಂ ನೆರಪಿ ಗಣತಿಂತಿಣಿಗೆ ಮೈಯಿಕ್ಕಿ
ಎಲ್ಲಾ ಗಣಂಗಳಂ ಬಲವಂದು ಮೈಯಿಕ್ಕಿ
ನಿಂದಿರ್ದು ಕೈಮುಗಿದು ಕಣ್ಣನೀರ್ಕಡಲಾಗೆ
ಸಂದಣಿಪ ದುಃಖವಿರ್ಮಡಿಸಿ ನೂರ್ಮಡಿಯಾಗೆ
ಬಿನ್ನೈಸಿದಂ ಜೊಮ್ಮತಂದೆಯನುರಾಗದಿಂ
ಬಿನ್ನೈಸಿದಂ ನಿಂದೆಗೇಳ್ದ ಕಡುಗೋಪದಿಂ
ಅವಧರಿಪುದಾನಿಂದು ಮಾಡಿದಪರಾಧಮಂ
ಕಿವಿಯಿಂದಲಿಂದಾದ ಗುರುತರನಿರೋಧಮಂ
ಶಿವನಿಂದೆಯಂ ಕೇಳ್ದ ಪಾಪಿಗೆನಗೆಂತಯ್ಯ
ಭವಿಯನೋಲೈಸಿದಪರಾಧಿಗೆನಗೆಂತಯ್ಯ
ಹರನಿಂದೆಯಂ ಕೇಳಲೇಕೋಲಗಿಸಲೇಕೆ
ಹರಭಕ್ತರಲ್ಲದರ ಸಂಗವಿನ್ನೆನಗೇಕೆ
ನಿಂದಿಸಿದ ವಿಪ್ರನಂ ಕೊಂದೆನೆನಗೆಯ್ದದದು
ಇಂದವನ ವಂಶಮಮಂ ನಟ್ಟು ಹರಗುವೆನೆಂದು

ಪೇಳಿರೇ ಇದಕೆ ಪರಿಹಾರಮಂ ಭಕ್ತರಿರ
ಆಳಲೀಯದೆ ಬೇಗವೆತ್ತಿರೇ ಭಕ್ತರಿರ
ಎಂದು ಬಿನ್ನೈಸೆ ಭಕ್ತರ್ಬಂದು ತರ್ಕೈಸಿ
ಇಂದುಧರನಾಜ್ಞೆ ನಿಮಗುಂಟೆಂದು ಹಾರೈಸಿ
ಪಾಪಿಯಂ ಪರಿಹರಿಸಿದಪ್ರತಿಮ ಜೊಮ್ಮಯ್ಯ
ಪಾಪಕರನಂ ದ್ರೋಹಿಯಂ ತೀರ್ಚಿದೆಮ್ಮಯ್ಯ
ಶಿವನಿಂದೆಗೆಯ್ದನಂ ಕೊಂದೆ ಇನ್ನೇನಯ್ಯ
ಶಿವಭಕ್ತ ನಿನಗೊಂದು ತಪ್ಪುಂಟೆ ಜೊಮ್ಮಯ್ಯ

ಎಂದು ಬೆಸಸಿದ ಭಕ್ತರಾಜ್ಞೆಯಂ ಕೈಕೊಂಡು
ಬಂದಭಕ್ತಾಳಿಯಂ ಭಯದಿಂದೆ ಬಲಗೊಂಡು
ಗಣಪರ್ವದಿಂ ಕೇಳ್ದ ನಿಂದೆಯಂ ನೀಗುತಂ
ತಣಿವಂತೆ ಶರಣತತಿಗಿತ್ತು ಸುಖಿಯಾಗುತಂ
ಭೀಮನಾಥನೊಳಚಲಿತ ಪ್ರಸಾದಂಬಡೆದು
ಸೋಮಧರನಂಪ್ರಿಯಂ ನಿಷ್ಠೆಯಿಂ ಬಲ್ಪಿಡಿದು
ಶರಣಸಂಗಂ ತನಗೆ ಪಿರಿದು ತುಷ್ಟಿಯನೀಯೆ
ನಿರುಪಮಾನಂದಸುಖಜಲಧಿ ತೆರೆ ಮೇಲ್ವಾಯೆ
ಪನ್ನಗಾಭರಣನಣುಗಂ ಭಕ್ತಿಸುಖದೊಳಿರೆ
ತನ್ನ ನಿಳಯದೊಳೆ ಜೊಮ್ಮಣ್ಣನೊಪ್ಪಿರೆಯಿರೆ ೧೬೪

## ಸ್ಥಲ ೨

ಹರನಿಂದೆಗೆಯ್ದನಂ ಸಂ
ಹರಿಸಿ ಹರಜ್ಞಾನಿ ಹರನ ತೇಜೋಭರಣಂ।
ಹರನಣುಗಂ ಹರನಾಜ್ಞಾ
ಧರನಚಲಂ ಜೊಮ್ಮತಂದೆಯಿರ್ಪವರಸದೊಳ್ ॥

ಇಂತು ಹರನಿಂದೆಗೆಯ್ದ ಶಿವದ್ರೋಹಿಯಂ ತೀರ್ಚಿ ಏಕನಿಷ್ಠೆಯನಮರ್ಚಿ ಹರತೇಜಮಂ ನಿಮಿರ್ಚಿ ಪುಸಿನುಡಿಯಂ ಕೆಲಕ್ಕೆ ಸಾರ್ಚಿ ಪಾಪವನಗಲ್ಚಿ ಸೇವಕಾವೃತ್ತಿಯಂ ಬಿದಿರ್ಚಿ ಸದ್ಭಕ್ತಿಯನಲರ್ಚಿ ಹರನೊಲವಂ ತೊಡರ್ಚಿ ಪರಿಚ್ಛೇದಮನೊಡರ್ಚಿ ನಿರ್ಮಳ ಶೀಲಂ ಕರ್ಮವಿಧ್ವಂಸಂ ಜೊಮ್ಮತಂದೆ ಸತ್ಯಶರಣರ ನಡುವೆ ನಿತ್ಯನಾಗಿರಲಿತ್ತಲ್,

ಪೆರ್ಮಾಡಿರಾಯಂ ಪುರಾಣಭಟ್ಟಂಗೆ ನಾಲಗೆ ಪಗೆಯಾದುದಂ ಪುಸಿನುಡಿ ವಿಷವಾದುದಂ ಶಿವನಿಂದೆಯೇ ಕೊಂದುದನರಿಯದೆ ಪರಿಚಾರಕರಂ ಕರೆದು ಪಾರ್ವನೇಕೆ ಪುರಾಣ ಮನುಸುರದಿರ್ದಪನೆಂದು ಕೇಳಲೊರ್ವರುಂ ಪೇಳಲಮ್ಮದೆ ಸುಮ್ಮನಿರೆ ಮತ್ತೆ ಮತ್ತಾಗ್ರಹಿಸಿ ಕೇಳೆ

ಜೊಮ್ಮತಂದೆಗಳ್ಕೊಂದರೆಂದು ಪೇಳಲ್ಕಂಜಿ ಕೈಸನ್ನೆಯಿಂ ಬಾಯಿಸನ್ನೆಯಿಂ ತೋರ್ಪಾಗಳು ತಾನರ್ಚಿಸುವ ವಿಷ್ಣುಪ್ರತಿಮೆ ತನ್ನ ದೆಸೆಯಿಂದಾದ ಶಿವನಿಂದೆಯುಂ ಕೇಳ್ದು ಕಣ್ಣನೀರುಕ್ಕುತ್ತಿರಲದಂ ಕಂಡಿದೇನುತ್ಪಾತವೆಂದರಸಂ ಭೋಂಕನೆ ಪೊರಮಟ್ಟು ನಡೆತರುತ್ತೆ ಮುಂದೆ ಕಾಳ್ಪುರಾಣವೊಂದೆಸೆ ತಾನೊಂದೆಸೆಯಾಗಿ ಕುಪ್ಪಳಿಸಿ ಸತ್ತಿರ್ದ ನಿತ್ಯನರಕಿಯಂ ಕಂಡು ಮುಖದ ಕಾಯ್ಪಿಂ ಕಂಗಳ ಖಾತಿಯಿಂ ಮನದ ಕೌತಕದಿಂ ಚಿತ್ತದ ನಿರೋಧದಿಂ ತಲೆದೂಗುತ್ತೆ ಪೆರ್ಮಾಡಿರಾಯ ಸಿಂಹಾಸನಾರೂಢನುಂ ಕೋಪಾರೂಢನುಮಾಗಿ ಶೋಭಿತ ಮಕುಟವರ್ಧನನುಂ ಪರಿವೃತ ರಾಜಪುತ್ರನುಂ ಪರಿವೇಷ್ಟಿತ ಮಂತ್ರಿವರ್ಗನುಂ ಆಶೀರ್ವಾದ ವಿಪ್ರನಿಕಾಯನುಂ, ಪ್ರಣುತ ಪರಿಜನನುಂ ಸಚಿವ ಸಾವಂತ ಮಂಡಲಿಕನಿಕರಂ ಕವಿ ಗಮಕಿ ವಾದಿ ವಾಗ್ಮಿಕ ವಾಹಕ ಗಜಾರೋಹಕ ಸರಸಗಾಯಕ ಭಾವಚಿತ್ರಕ ಪುಣ್ಯಪಾಠಕ ನವ್ಯನರ್ತಕ ನರ್ತಕೀಪ್ರಯುತಂ ಬಹಳ ಗೊಂದಣಾಸ್ಥಾನನಾಗಿ ಕೆಂಪಡರ್ದ ಕಂಗಳಿಂ ಕೆತ್ತುವ ಮೀಸೆಯಿಂ ಚಿತ್ತದ ಕ್ಷೋಭೆಯಿಂ ಮನದ ಕಡುಗೋಪದಿಂ ಚಾಳೂಕ್ಯಚಕ್ರೇಶ್ವರಂ ಕಲಿಯುಗರಾವಣಂ ಪೆರ್ಮಾಡಿರಾಯಂ ಜೊಮ್ಮಣ್ಣನಂ ಕರೆಯೆನಲ್ಕತ್ತೆ ಮತ್ತೆ ಪಡಿಯರರಂ ಕಳುಪುತ್ತಿರಲಿತ್ತಲು,

ಶಿವಲಿಂಗಸಂಪನ್ನೆ ಜಂಗಮಸ್ನೇಹಿ ಲಿಂಗಾರ್ಚನಾನಿರತೆ ಪೆರ್ಮಾಡಿರಾಯನರಸಿ ಸತ್ಯಭಕ್ತೆ ಲಕುಮಾದೇವಿ ಶಿವನಿಂದಾಕರ ವಿಪ್ರವಧೆ ನಿಮಿತ್ತವರಸಂ ಜೊಮ್ಮಣ್ಣಂಗೆ ಮುನಿದು ಕರೆಯಲ್ಕಳುಪಿ ಕುಪಿತನಾಗಿರ್ದಪನೆಂಬ ಕಠಿಣವಾರ್ತೆಯಂ ಕರ್ಣಪರಂಪರೆಯಿಂ ಕೇಳ್ದು, ಹರಹರ ಹರನೇ ಬಲ್ಲಂ ಶಿವಭಕ್ತಂಗಳಿವಿಲ್ಲದ ಭಿನ್ನಾಪಮಾನವಾಗಲಾಗದು ಮುನ್ನೆಂದು ಪೊಡವಡದ ಜೊಮ್ಮಣ್ಣನಿಂದು ಪೊಡಮಡೆ ತನಗೆ ಪೊಡಮಟ್ಟನೆಂದರಸಂ ಮನ್ನಿಸುವನೆಂಬ ಬಗೆಯಿಂ ತನ್ನ ಪ್ರಾಣಲಿಂಗವಂ ಸಿಂಗರಿಸಿ ಮಾಣಿಕ್ಯದ ಸಿಂಹಾಸನವೆರಸರಸನರಿಯದಂತೆ ಶಿವಭಕ್ತೆಯರು ಸಹಿತೆ ಲಕುಮಾದೇವಿ ಪಿಡಿದಿರ್ಪ ಸಮಯದೊಳಿತ್ತಲ್ಮುಂದೆ ಬರ್ಪರಸಾಳ್ಗಳಿಂ ಹಿಂದೆ ಬರ್ಪ ಪುರಜನದಿಂ ಕೆಲಬಲದೊಳ್ಬರುತ್ತಿರ್ಪ ಭಕ್ತನಿಕರದ ನಡುವೆ ವಿಭೂತಿಯ ಕಾಂತಿ ನಳನಳಿಸೆ ರುದ್ರಾಕ್ಷಿಯ ಉಲಿಪು ಫಲಫಲಿಸೆ ಕಯ್ಯಲಗಿನ ಬೆಳಗು ಬಳ್ಳಿವರಿಯೆ ಕಲಿಯುಗ ವೀರಭದ್ರಂ ಪರಮಪರಿಚ್ಛೇದಿ ಪರವಾದಿಕೋಳಾಹಳಂ ಶಿವದೂಷಕತಮೋರ್ಕಂ ಜೊಮ್ಮತಂದೆ ಒರೆಯುರ್ಚಿದ ತ್ರಿಶೂಲದಂತೊಡರ್ಚಿದ ಭಾಳಲೋಚನದಂತೆ ಘುಳುಘುಳಿಸುತಂ ನಡೆತಂದು ಸಭಾನಿಳಯಮಂ ಪೊಗುತರುತಂ ಮೇಲಂ ನೋಡಿ ತೊಳತೊಳಪ ಲಿಂಗಮಂ ಘಳಿಲನೆ ಕಂಡು, ನಿಜಭಕ್ತಿಯ ಭರದಿಂ ಪೊಡಮಡಲ್ ಕೈಯೆತ್ತುತ್ತೊಲ್ಲದೆ ನಿಂದು, ಭವಿಯ ಪಿಂದಿರಲೇಕೆ ಪೊಡಮಡಿಸಿಕೊಳಲೊಲಿವಡೆ ಕೆಲಕ್ಕೆ ಬಿಜಯಂಗೈಯೆಂದೆತ್ತಿದ ಹಸ್ತ ಮತ್ತೊಂದೆಸೆಗೆ ಸನ್ನೆದೋರೆ, ಶಿವಲಿಂಗಂ ಸಿಂಹಾಸನಮಂ ಬಿಟ್ಟು ಭಕ್ತನ ಕೈಯೊಡನೆ ಸರ್ರನೆ ತಿರುಗಿ ಸರಿಸಕ್ಕೆ ಬಂದು ಕೆಲಸಾರ್ದು ಗಗನಾಸನಮಂ ಕೈಕೊಂಡಿರೆ, ಬಳಿಕಂ ಪೊಡಮಟ್ಟು ಸಂತಸಂಬಟ್ಟು ದೇವ ದೇವಾ ಸುಕುಮಾರಲಿಂಗ ಸರ್ವಾಭಿಮಾನಿ ಬಿಸಿಲು ಗಾಳಿಯೊಳಿರ್ಪರೇ ಸಜ್ಜೆಗೆ ಬಿಜಯಂಗೈಯ್ವುದೆಂದು ಬಿನ್ನಯಿಸಿ ಬಿಜಯಂಗೈಸಿ, ನಿರ್ಮಳಚಿತ್ತಂ ಜೊಮ್ಮಣ್ಣಂ ಸಭೆಯಂ ಲೆಕ್ಕಿಸದೆ ನಿಂದಿರ್ದಿರವನರಸಂ ನೋಡಿ ಮೊದಲೊಳೆ ವಿಷ್ಣುಪ್ರತಿಮೆ ಕಣ್ಣನೀರಿಕ್ಕಿದ ತಾತ್ಪರ್ಯವಂ ನೋಡಿ ನೋಡಿ, ಶಿವಲಿಂಗವಂ ಕೈಸನ್ನೆಗೆ ಬರಿಸಿದ ಸಾಮರ್ಥ್ಯಮಂ ಬಿಜಯಂಗೈಸಿದ ಸ್ನೇಹಮಂ ನಿಂದ ನಿಲವಂ ಬಗೆಯದ ಬಲ್ಪುಮಂ ಲೆಕ್ಕಿಸದ ಸಗರ್ವತೆಯಂ ಕೈಕೊಳ್ಳದ ಕಡುನಿಷ್ಠೆಯಂ ಕಂಡು, ಭೂಪಂಗೆ ಕೋಪವಳಿದು ನಂಬುಗೆ ಬೆಳೆದು ಭೀತಿಯುದ್ಭವಿಸಿ,

ಏನಯ್ಯಾ ಜೊಮ್ಮಣ್ಣ, ನಿರಪರಾಧಿ ಪುರಾಣಭಟ್ಟನಂ ಕೊಂದುದಕೆ ಕಾರಣವೇನೆನೆ, ಕೇಳರಸ ನಿನಗೆ ವಿಚಾರವಿಲ್ಲ, ಪುರಾಣಭಟ್ಟನಂ ಕೊಲ್ಲೆ, ಶಿವನಿಂದೆಯಂ ಮಾಡಿ ಪುಸಿನುಡಿದ ದೋಷಿಯಂ ಕೊಂದೆನಿನ್ನುಂ ತಣಿಯೆಂ ತಣಿಯೆನೆಂದು ಘೂರ್ಮಿಸುವ ಜೊಮ್ಮಣ್ಣನಂ ಪೆರ್ಮಾಡಿರಾಯಂ ಕಂಡೀ ಭಕ್ತನಂ ಪರೀಕ್ಷಿಸಿ ನೋಳ್ಪೆನೆಂದಿನ್ನು ಪ್ರತ್ಯಕ್ಷಂಗಂಡಡೆ ಬಿಡುವೆನಲ್ಲದೊಡೆ ದಂಡಿಸುವೆನೆಂದು ನೆನೆದೆಲೆ ಜೊಮ್ಮಯ್ಯಾ ಪುರಾಣಭಟ್ಟಂ ಪುಸಿನುಡಿದುದಕ್ಕೆ ಪ್ರಮಾಣಂ ಮಾಡುವುದು ಪುಸಿಯೆಂತಪ್ಪುದು ಆರ್ಷೇಯಮಪ್ಪ ಪುರಾಣದೊಳಿರ್ದ ವಚನವನೋದಲಸತ್ಯಮೆಂದುದಕ್ಕೆ ಪ್ರತ್ಯಕ್ಷಮೇನಾಟಳಿಕತನಗಳನೆ ಮ್ಮೊಳ್ಮಾಡಲಾಗದು, ಸದ್ಭಕ್ತಿಯುಳ್ಳಡೆ ತೋರ್ಪುದೆಂದು ಪೆರ್ಮಾಡಿರಾಯಂ ನುಡಿಯೆ, ಜೊಮ್ಮಣ್ಣಂ ಕೇಳ್ದು, ನಸುನಗುತ್ತೆಲೆಲೆ ಮರುಳರಸಾ ಹರಭಕ್ತರೊಳಸತ್ಯವುಂಟೆ ಈ ಹರದೂಷಕಂ ನರಕಕ್ಕಿಳಿಯಲ್ಪುಸಿನುಡಿಯಿತಕ್ಕಿದೆ ಪ್ರತ್ಯಕ್ಷವೀಗಳಾ ಹೆಣನಂ ಮುಸುಂಕಿಟ್ಟು ತೆಗೆಯಲ್ಪುಳುವಿನ ರಾಶಿಯಾಗದಿರ್ದಡವನಲ್ಲಾನಪರಾಧಿ ಎನ್ನ ಶಿಕ್ಷಿಪುದೆನಲರಸನೊಡಂಬಟ್ಟು ಜೊಮ್ಮಣ್ಣಂದೆ ಕೈಗೊಟ್ಟು ಗಳಗಳನೆ ನಡೆತಂದು, ಎಲೆ ಭಕ್ತ ನೀಂ ತೋರ್ಪುದಂ ತೋರಾಯೆನಲ್ಪರಮ ನಿಷ್ಠಾನಿಧಿ ಓಸರಿಸದ ಭಾಷೆವಂತಂ ಹಿಮ್ಮೆಟ್ಟಚಲಿತಂ ಜೊಮ್ಮಯ್ಯಂ ನಿಂದಲಗಂ ಕಿಳ್ತೆಲೆ ದೇವಾ ಭೀಮನಾಥಾ ನಿನಗೆ ಕಟ್ಟಿದೊರೆಯವಧಾರವಧಾರೆನ್ನ ಬಿನ್ನಪಮಂ ಪರಸಮಯ ದ್ವೇಷದಿಂದಿರಿದಡಂ ಭಕ್ತನೆಂಬ ಗರ್ವದಿಂ ಭವಿಯಂ ಕೊಂದಡಂ ಪೇಳ್ದ ಪುರಾಣವಪ್ಪುದಲ್ಲೆಂಬ ಸಂದೇಹದಿಂ ಮಡಿಹಿದಡಂ ನಿನ್ನ ಮೇಲೆ ಸ್ನೇಹವಿಲ್ಲದನ್ಯಾಯದಿಂ ಪ್ರಾಣಿಯ ನೋಯಿಸಿದಡಂ ನೀನೆ ಸಾಕ್ಷಿ, ಇದೆ ದಿಬ್ಯವೆಂದು ಭಾಷೆಗೊಡುತ್ತಂ ಬಂದು ದೂಷಕನ ಹೆಣನಂ ಕಾಣಲಾಗದೆಂಬಂತೆ ಭೋಂಕನೆ ಪಚ್ಚಡದಿಂ ಮುಚ್ಚಿ ಮುಂಕಣಿಸಿ ತೆಗೆಯಲಮ್ಮಮ್ಮ ನಿಂದಕನವಯವಂ ಕಲಸಿ, ಪುಸಿಯ ಪುಂಜಂ ಬಳಸಿ ಬೆಳೆದಂತೆ ನಿಂದೆಯ ಗುಡ್ಡೆ ನಿಮಿರ್ದಂತೆ ಪಾಪದ ಬೀಜವೊಬ್ಬುಳಿಸಿದಂತೆ ದೋಷದ ಹುತ್ತು ನೆಗೆದಂತೆ ಪುಳುವಿನ ರಾಸಿ ಲಿವಿಲಿವಿಸುತ್ತಿರಲರಸಂ ಕಂಡು ಜೊಮ್ಮಣ್ಣನ ಪದತಳಕ್ಕೆರಗಿ ನಿಮ್ಮಂ ಪರೀಕ್ಷಿಸಿದ ಕರ್ಮಿಗೆ ಕರುಣಿಪುದೆಂದು ಪೆರ್ಮಾಡಿರಾಯಂ ನಿಂದು ಕೈಮುಗಿದು, ನಿಶ್ಚಲಭಕ್ತನಂ ಭದ್ರಾಸನದ ಮೇಲಿರಿಸಿ ಚರಣಯುಗಳಕೀರ್ಛಾಸಿರ ಹೊಂಗಳಂ ಕಾಣ್ಕೆಯಿತ್ತು ಕೊಂಡಾಡುತ್ತಿರ್ಪ ಸಮಯದೊಳು,

ಸದ್ಭಕ್ತಿ ಸಂಪನ್ನೆ ಲಕುಮಾದೇವಿಯಾರಾಧಿಸಿ ಕಳುಹಿದ ಹೊನ್ನ [ಪೊ]ಟ್ಟಣವಂ ಹಾರೈಸಿ ಕಂಡು ರನ್ನದೊಡಿಗೆಗಳಂ ಹರುಷದಿಂ ತೊಟ್ಟು ದಿವ್ಯವಸ್ತ್ರಮುಮನುಟ್ಟು ಹೊದ್ದು ಸಿಂಹಾಸನದೊಳೊಪ್ಪುತ್ತಿಪ್ಪ ನಿಸ್ಸೀಮನಂ ಕಂಡರಸನೇಳ್ದು ಕೈಮುಗಿದು, ದೇವ ದೇವಾ ಮುನ್ನರಿಯದೋಲೈಸಿಕೊಂಡ ತಪ್ಪಂ ಮನ್ನಿಸಿ ಕರುಣದಿಂ ನೋಳ್ಪುದೆಂದು ಬಿನ್ನೈಸಿ, ಈ ಕಲ್ಯಾಣಕ್ಕೆ ಯೋಜನಾಂತರದೊಳೊಂದು ಸಂವತ್ಸರಕ್ಕೆ ಪನ್ನಿಚ್ಛಾಸಿರ ಹೊನ್ನನಿಕ್ಕುವ ಪಟ್ಟಣಮಂ ಶಿವಪುರಮಂ ಮಾಡಿ ಮಹಮನೆಯಂ ವಿಸ್ತರಿಸಿ ಲೀಲೆಯಿಂದಿಪ್ಪುದೆಂದಾನೆ ಕುದುರೆ ಸೇನೆ ಪದಾತಿಬಲಂ ಸತ್ಯಶರಣರ ಕೇಳಿಕೆ ಸಹಿತಾ ಪುರಕ್ಕೆ ಬಿಜಯಂಗೆಯ್ಸಿ ಪೆರ್ಮಾಡಿರಾಯಂ ಬೀಳ್ಕೊಂಡು ಕಲ್ಯಾಣಕ್ಕೆ ಪೋಗಲಿತ್ತಲು,

ಶಿವಪುರದೊಳಗೆ ಸಕಳ ಭಕ್ತರ ಸರ್ವಸುಕೃತ ಸೂರೆಕಾರನೇಕ ನಿಷ್ಠಾಲಂಕೃತಸರ್ವಾಂಗ ಶರೀರನನ್ಯಸಮಯ ಪನ್ನಗ ಮೇಘವಹ್ನಿ ಪರದೈವ ಧಾರಾಧರ ಮಹಾಬಲಂ ದುರ್ಜನಗಿರಿ ನಿಕರವಜ್ರಾಘಾತಂ ವೈಷ್ಣವಾರಣ್ಯ ಪ್ರಳಯಾಗ್ನಿ ಬೊಮ್ಮನ ತಲೆವಿಡಿದನ ಹೆಮ್ಮೆಯ ಮಗಂ ಜೊಮ್ಮತಂದೆ ಪುಸಿಪುರಾಣಮಂ ಪೇಳ್ದ ವಿಪ್ರನಂ ತೀರ್ಚಿ ಪ್ರತ್ಯಕ್ಷಮಂ ತೋರಿದನೆಂಬಗಣ್ಯ ಪುಣ್ಯಕೀರ್ತಿ ಧರಣಿಯಂ

ಪರ್ವಿಕೊರ್ವಿ ಪಲ್ಲವಿಸಿ ಬೆಳೆಯೆ, ಭೀಮನಾಥನಾಜ್ಞೆಯಂ ಪೊತ್ತು ಬೇಟೆಯ ನೆವದಿಂ ಕಾರಣಿಕ ಮೃಗಂಗಳ ಭವದ ಭಾರವನಿಳಿಪುತ್ತಂ ಬಂದ ಜಂಗಮದಳ್ತಿಯಂ ಸಲಿಸುತ್ತಂ, ಬೇಡಿದ ಭಕ್ತರ್ಗಿಲ್ಲೆನ್ನದೀವುತಂ, ಪಾಡುವ ಶರಣರ್ಗೆ ಮುಯ್ಯಾನುತ್ತಂ ಶಿವಗೋಷ್ಠಿಯೊಳ್ಬೆಳೆವುತ್ತಂ ಶಿವಪೂಜೆಯೊಳುರ್ವಿ ಕೊರ್ವುತ್ತಂ ಶಿವಶೀಲಶರಣ ಸಂತಾನಭರಿತವಪ್ಪ ಶಿವಪುರದೊಳು ಶೈವಸುಖಸಂಕಥಾವಿನೋದದಿಂ ತೆಲುಗ ಜೊಮ್ಮಣ್ಣತಂದೆಗಳೊಪ್ಪುತ್ತಮಿರೆಯಿರೆ–

## ಸ್ಥಲ ೩

ಸಮಶೀಲಪ್ರಭವಪ್ರಮೋದಶರಣವ್ರಾತಂ ಸದಾರಂಜಿಸ
ಲ್ವಿಮಳಜ್ಞಾನ ನಿಧಾನನಪ್ರತಿಮನುರ್ವೀವಂದ್ಯನಾಶ್ಚರ್ಯವಿ
ಭ್ರಮಯುಕ್ತಂ ಶುಚಿ ಭೀಮನಾಥ ಚರಣಾಂಭೋಜಾತಭೃಂಗಂ ದಯಾ
ರಮಣೀನಾಥನುದಾರ ವೀರನೆಸೆದಂ ಜೊಮ್ಮಣ್ಣನಾಸ್ಥಾನದೊಳ್ ॥

ಇಂತು ಶಿವಪುರದೊಳಪ್ರತಿಮ ಸುಖದಿಂದಿರ್ದು
ಕಂತುಮದಮರ್ದನನ ಪದಯುಗಳಮಂ ಸಾರ್ದು
ಭೀಮನಾಥನ ಕರುಣಿ ಬೇಂಟೆಗೆಂದೆಂದಲ್ಲಿ
ಕಾಮಹರನಣುಗ ನೋಡುತ್ತಿವಿಸುತಂತಲ್ಲಿ
ಮೃಗಯಾವಿನೋದ ಪರಿಕರವೆರಸಿ ನಡೆತಂದು
ಸೊಗಯಿಸುವ ಸಮಶೀಲ ಶರಣರೊಳಗೆಯ್ತಂದು
ವನದೊಳಗೆ ಸುಳಿವ ಕಾರಣಿಕ ಮೃಗವೃಂದಮಂ
ತನತನಗೆ ಪರಿತಂದು ನೀರ್ಗೆಂದು ಬಂದವಂ
ಎಳೆವುಲ್ಗಳಂ ಮೇದು ಕೊಣಕಿಡುವ ಪುಲ್ಲೆಯಂ
ತಿಳಿನೀರ್ಗಳಂ ಕುಡಿದು ನಲಿದಾಡುವೆರಳೆಯಂ
ಮರಿಗಳಂ ಕೋಡಮೊನೆಯಿಂದೆ ತುರಿಸುತ್ತಿಪ್ಪ
ಒರೆವ ಮುಂಬದನೊಸರೆ ಹೊಸನಸೆಗೆ ನಲಿತಪ್ಪ
ಕಣ್ಮುಚ್ಚಿ ಕಿವಿಯೆಳಲೆ ತನು ಕರಗುತಿರೆ ನೆರೆವ
ಉಣ್ಮಿ ಪೊಣ್ಮುವ ಪುಳಕದಿಂದೆ ಬಿಬ್ಬನೆ ಬಿರಿವ
ಮೃಗದ ಪೋವಳಿ ಪಜ್ಜೆಯರಸಿ ಮರುಗುತ್ತಿರ್ಪ
ಮೃಗವೊಂದರೊಂದರೊಳ್ ಪೊರ್ದು ಪೆಣಗುತ್ತಿರ್ಪ

ಪುಲ್ಲೆ ಎರಳೆಗಳ ಹಿಂಡಂ ಹರುಷದಿಂ ಕಂಡು
ಅಲ್ಲಿ ಜೊಮ್ಮಣ್ಣನಾ ಕಾರಣಿಕರಂ ಕಂಡು
ರುದ್ರಾಕ್ಷಿ ಮಾಲೆಗಳನುರದೆ ಚಾಚಿಯೆಕೊಳುತೆ
ರುದ್ರನೇ ಬೆಸಸಿತೆನ್ನಲ್ಲಿ ತಪ್ಪಿಲ್ಲೆನುತೆ

ಬೆಲ್ಲವತ್ತದ ಬಿಲ್ಲನಳವಡಲ್ಪಿಡಿಕೈಸಿ
ಬಿಲ್ಲೊಳೆಸೆವರ್ಧನಾರಿಯನೊಪ್ಪೆ ಮೇಳೈಸಿ
ಕಣಗಿಲೆಯ ಕೋಲ ತುದಿಯೊಳ್ಪೊಳೆವಲಗು ಮೆರೆಯೆ
ಎಣೆಗೂಡಿ ಪೊಗರೊಳಗೆ ಪಂಚಾಕ್ಷರಿಗಳೊಗೆಯೆ
ದಿವ್ಯ ಸರವಂ ಕೊಂಡು ತಿರುವಾಯ್ಗಳೊಳಗಿಟ್ಟು
ನವ್ಯಭಕ್ತಂ ಮುನಿದು ನಿಮಿರ್ದು ನೀಡಡಿಯಿಟ್ಟು
ಮುಟ್ಟಿ ದೃಢಬಂಧಂ ಧನುರ್ದಂಡದೊಳಗೆ ಸಲೆ
ದೃಷ್ಟಿಯಂಬಿನ ಕೊನೆಯ ಮೊನೆಯೊಳೆಚ್ಚತ್ತು ನಿಲೆ
ಕಾರಣಿಕಮೃಗಶರೀರವನಲ್ಲಿ ಲಕ್ಷಿಸುತೆ
ಆರೈದು ಶರದ ಮೃಗದೆಡೆಯಂ ವಿವೇಕಿಸುತೆ
ಘಳಿಲನೆಚ್ಚಂ ಜೊಮ್ಮತಂದೆ ಮೃಗವಳುಕುತಿರೆ
ಅಳವಡೆ ಸರಂ ಶಿರಂಗೊಂಡುರ್ಚಿ ಪಾರುತಿರೆ
ತೊಡುವುದುಂ ನಡುವುದಂ ಕಾಣಲಾಗುತ್ತಮಿರೆ
ಬಿಡುವುದುಂ ಪೋಪುದದನೀಕ್ಷಿಸಲ್ಬಾರದಿರೆ
ಮೃಗಶರೀರಂ ನೊಂದು ಬಿದ್ದುದೀ ಧರೆಯೊಳಗೆ
ನೆಗೆವುದು ವಿಮಾನದಿಂ ಜೀವವಂಬರದೊಳಗೆ
ಭಕ್ತಬಾಣಂ ತಾಗಿ ಮುಕ್ತಿ ಬಂದೆಡೆಗೊಂಡು
ಯುಕ್ತಿಕೊಳ್ಳದ ಭಕ್ತಿ ಮುಕ್ತಿಯೊಳ್ನೆಲೆಗೊಂಡು
ವೈರಾಗ್ಯ ಶಸ್ತ್ರವಂತೆಸುತಮಿರಲಂತಲ್ಲಿ
ತಾರಾದ್ರಿಗೆಯ್ದುವವು ಮೃಗಜೀವವಂತಲ್ಲಿ
ಬಾಣವಾ ನಿರ್ವಾಣಪದವಿಯಂ ಕೊಡುತಮಿರೆ
ಜಾಣನೆಸುತಿರ್ದನಾ ಋಷಿಜನಂ ಪರಸುತಿರೆ
ಕಾರಣಿಕರಲ್ಲದ ಮೃಗಂ ಸುಳಿಯಲವನೆಸಂ
ಮಾರಹರನರಿಪಿದ ಮೃಗಗಳಲ್ಲದವನೆಸಂ

ಇಂತು ಬೇಂಟೆಯನಾಡಿ ಘನಸುಖವನೊಳಕೊಂಡು
ಸಂತಸುಖದಿಂ ತಿರುಗಿ ಪುರದತ್ತ ನಡೆಗೊಂಡು
ಬಂದು ಶಿವಲಿಂಗಾರ್ಚನಂಗೈದು ಪದುಳಮಿರೆ
ಸಂದಣಿಪ ಬೇಂಟೆಯಂ ನಿಚ್ಚಲಾಡುತ್ತಮಿರೆ
ಜೊಮ್ಮಣ್ಣನೇಕನಿಷ್ಠೆಯ ಭಕ್ತಿಯಂ ಕೇಳ್ದು
ಜೊಮ್ಮಣ್ಣನಾಡುತಿರ್ಪಾ ಬೇಂಟೆಯಂ ಕೇಳ್ದು
ಕೊಂಡಗೂಳಿಯ ಕೇಶಿರಾಜದಣ್ಣಾಯಕರು
ಪುಂಡರೀಕಾಜಿನನ ತನುಮನೋದ್ರಾವಕರು

ಎಲ್ಲವುಂ ಲೇಸಾಯ್ತು ಬೇಂಟೆಯೊಂದೇ ಪೊಲ್ಲ
ಅಲ್ಲಿ ಮಾಣಿಪೆನಭವಭಕ್ತಂಗಿದಲ್ಲಲ್ಲ
ಎಂದು ತಮ್ಮೂರಿಂದೆ ಪೊರಮಟ್ಟು ನಡೆತಂದು
ಸಂದಣಿಪ ಭಕ್ತಸಂಕುಳದಿಂದವೆಯ್ತಂದು
ಜೊಮ್ಮಣ್ಣನಿರ್ಪ ಶಿವಪುರವನೊಲವಿಂ ಪೊಕ್ಕು
ಸುಮ್ಮಾನದಿಂದೆ ಪೊಗಳುತ್ತಂ ಮನಂ ಮಿಕ್ಕು
ಅವರ ನಿಳಯದ ಮುಂದೆ ಉನ್ನತಾಸನವಿಳಿದು
ಶಿವಭಕ್ತರೊಡನೆ ಪರಮಾನಂದಮಂ ತಳೆದು
ಬಂದೊಳಗೆ ಪೊಗುತೆ ಜೊಮ್ಮಣ್ಣನೆಲ್ಲಿಗೆ ಹೋದ
ಇಂದುಧರನ ಪ್ರತಾಪಾಗ್ನಿಯೆಲ್ಲಿದೆ ಹೋದ
ಎನುತಲ್ಲಿ ಪಿಸಿತಮಾಲೆಗಳಿಪ್ಪುದಂ ಕಂಡು
ಮನವಳಿದು ಹೇಸಿ ತಿರುಗಿದನುಮ್ಮಳಂಗೊಂಡು
ಶಿವಭಕ್ತರಂ ದೂರದಿಂದೆ ಕೇಳ್ವುದೆ ಲೇಸು
ಪವಣಿಸಲ್ಕಮ್ಮಳವೆ ಪೊಗಳುತಿರ್ಪುದು ಲೇಸು

ಎನುತೆ ಬಂದಾ ಪುರದ ಶಿವನಿಳಯದೊಳ್ಪೊಕ್ಕು
ಅನುನಯದೊಳುಪಕರಣವೆಲ್ಲಮುಮನಿಂಬಿಟ್ಟು
ಸುರುಚಿರಸ್ಥಾನದೊಳು ಸಿಂಹಾಸನವನಿಕ್ಕಿ
ಹರುಷದಿಂ ಮೇಲೆ ಮೃದುವಪ್ಪ ಗದ್ದುಗೆಯಿಕ್ಕಿ
ಕಾಮಹರನಂ ಭೀಮನಂ ಕುಲಸ್ವಾಮಿಯಂ
ವ್ಯೋಮಕೇಶನನಭವನುನ್ನತಪ್ರೇಮಿಯಂ
ಸೋಮನಾಥನನಳ್ಕರಿಂದೆ ಬಿಜಯಂಗೆಯ್ಸಿ
ವಾಮಾರ್ಧನಾರಿಯಂ ನಲಿದು ಬಿಜಯಂಗೆಯ್ಸಿ
ದೇವಾರ್ಚನೆಗೆ ಕೇಶಿರಾಜದಣ್ಣಾಯಕರು
ಭಾವಿಸುತ್ತಿರಲಲ್ಲಿ ಹರನ ಗಣನಾಯಕರು
ಇತ್ತಲಾ ಬೊಮ್ಮಣ್ಣನೊಲಿದು ಬೇಂಟೆಯನಾಡಿ
ಹತ್ತೆಂಟು ಮೃಗಶರೀರಂಗಳಂ ನೆರೆ ಕೂಡಿ
ಬಂದು ಪುರಮಂ ಪೊಕ್ಕು ನಿಳಯಕ್ಕೆ ನಡೆತಂದು
ಬಂದರುಂಟೇ ಶಿವನ ಭಕ್ತರರಸುತಲಿಂದು
ಬಂದು ತಮ್ಮರಸಿಯರನೆಂದಿನಂದದಿ ಕೇಳೆ
ಅಂದಲ್ಲಿ ಶಿವಭಕ್ತೆ ಪೇಳ್ದಳುತ್ಸವವೇಳೆ
ಶರಣಸಂತತಿವೆರಸಿ ಪಿರಿಯರೊರ್ವರ್ಬಂದು
ಹರುಷದಿಂ ನಿಳಯದೊಳಯಿಂಕೆ ಮಿಗೆ ಪುಗುತಂದು

ಇಂತಿವಂ ಕಂಡು ನೆರೆ ಹೇಸುತಂ ತಿರುಗಿದರು
ಮುಂತೆ ಪುರದೊಳಗಣ ಶಿವಾಲಯದೊಳೊದಗಿದರು

ಎನೆ ಕೇಳ್ದು ಜೊಮ್ಮಣ್ಣನತಿ ಹರುಷಮನನಾಗಿ
ಅನುನಯದೆ ನಡೆತಂದನಾನಂದತನುವಾಗಿ
ನಡೆತರುತೆ ನಡೆತರುತ್ತೋರೊರ್ವರಂ ಕಂಡು
ಮೃಡನ ಶರಣರ್ಪರಮ ಸುಖದೊಳಪ್ಪಿಯೆಕೊಂಡು
ಇಪ್ಪಲ್ಲಿ ನುಡಿದನಾ ಜೊಮ್ಮಣ್ಣನೊಲ್ಮೆಯಿಂ
ಸರ್ಪಭೂಷಣನ ತೇಜಾಭರಣನಳ್ತಿಯಿಂ
ಎನ್ನ ಮನೆಯಿರ್ದಂತೆ ಇಲ್ಲಿ ನೀವಿರ್ಪಿರೆ
ಉನ್ನತಾನಂದಮಯ ನೀವಿಂತು ಬರ್ಪಿರೆ
ಬಂದು ಕರುಣಿಪುದೆಂದು ನೆರೆ ಬೇಡಿಕೊಳುತಮಿರೆ
ತಂದೆ ಬಿಜಯಂಗೈಯ್ವುದೆಂದು ಕರೆವುತ್ತಮಿರೆ
ಅಂದು ದಣ್ಣಾಯಕರು ಗಸಣಿಗೊಳುತಂತಲ್ಲಿ
ನೊಂದು ಸಮಶೀಲವಲ್ಲದೆ ನುಡಿದರಂತಲ್ಲಿ
ಸೋಮಯ್ಯನೊಲ್ದು ಸಿಂಹಾಸನಮನೆಡೆಗೊಂಡು
ಸೋಮಧರನಾ ಪರಮಪೂಜೆಗಳನೊಳಕೊಂಡು
ಇರ್ದಪನಿದಕ್ಕೇನ ಮಾಡುವಂ ಪೇಳಿರೇ
ಇರ್ದ ಪರಿಯಳವಡಿಕೆಯಾಯ್ತಿಲ್ಲಿ ನೋಡಿರೇ
ಎನೆ ಜೊಮ್ಮತಂದೆಗಳು ಪೊಸೆದ ಹೂವಿನ ತೆರದೆ
ತನುಕರಗಿ ಮನದೊಳಗೆ ನಟ್ಟಯಿಸಿ ತಾನುರದೆ
ಸೋಮಯ್ಯನಳವಡಿಕೆಯಾದಡಿರ್ದಂತಿರ್ಕೆ
ಸೋಮನಾಥಂ ಸಿಂಹಪೀಠಮನಗಲದಿರ್ಕೆ

ಎಂದೆನುತೆ ಪೋಗಲಾ ಜೊಮ್ಮತಂದೆಗಳತ್ತ
ಪಿಂದೆ ದಣ್ಣಾಯಕರು ಪರಿಣಾಮದಿಂದಿತ್ತ
ಇರೆ ಜೊಮ್ಮತಂದೆಗಳ ನೋವನರುಪಲ್ಕೆಂದು
ಚರಿತದಿಂ ತನುಗುಣವ ತೋರುವೆನಿರಲ್ಕೆಂದು
ಅಲ್ಲಿ ಕೇಶವರಾಜದಣ್ಣಾಯಕರ್ನಿಂದು
ಸಲ್ಲೀಲೆಯಿಂ ದೂರ ಪೊರಗಣ್ಗೆ ಬರಲಂದು
ಸೋಮನಾಥಂಗೆ ಸದ್ಭಕ್ತರಂ ಕಾಪಿಟ್ಟು
ನಾಮಮಂ ನಾಲಗೆಯ ತುದಿಯೊಳಗೆ ಸೈತಿಟ್ಟು
ಬಂದನೀಶ್ವರ ಭಕ್ತರೊಡನೊಡನೆ ನಡೆದು ಬರೆ

ಬಂದೂರ ಪೊರಗೆ ಕೆರೆಯೇರಿಯೇರುತ್ತಮಿರೆ
ಪಚ್ಚೆಯ ರಸದ ತೊರೆಗಳಂತಿರ್ಪ ಗದ್ದೆಯಂ
ಅಚ್ಚರಿಯ ಫಳವಿತತಿ ಹೆಚ್ಚಿದ ವನಾಳಿಯಂ
ತೀವಿದ ಕೊಳಂಗಳಂ ಕಮಳಷಂಡಂಗಳಂ
ಭಾವಕದೊಳಡಿಯಿಡುವ ಹಂಸಮಿಥುನಂಗಳಂ
ವನದೊಳಗೆ ನೆರೆವ ವಿದ್ಯಾಧರಿಯರಿಕ್ಕೆಯಂ
ತನತನಗೆ ಬರುತಿರ್ಪ ಖಗಮೃಗದ ತೆಕ್ಕೆಯಂ
ಮೃಗಜೀವಮಂ ಕೊಂಡು ಪೋಪ ಗಣನಿಕರಮಂ
ಗಗನದೊಳ್ಮಿಗೆ ನೆಗೆವ ಪುಷ್ಪಕಪ್ರಕರಮಂ
ಕೂಡೆ ಕೌತುಕವಾಗೆ ದಣ್ಣಾಯಕರ್ ಕಂಡು
ನೋಡಿ ತಲೆದೂಗಿ ಮನದೊಳ್ವಿಸ್ಮಯಂಗೊಂಡು
ತಿರುಗಿ ಮತ್ತೊಮ್ಮೆ ನೋಡಲ್ಕೇನುಮಿಲ್ಲದಿರೆ
ಪಿರಿದಪ್ಪ ಕೌತುಕಂ ಚಿತ್ತದೊಳ್ತೋರುತಿರೆ
ಕನಸುಗಂಡೆಚ್ಚತ್ತ ತೆರದೆ ಬೆರಗಾಗುತಂ
ಮನಸಿನೊಳಗದ್ಭುತವಿದೆಂದು ಮಾತಾಡುತಂ
ತಿರುಗಿ ಬಂದಾ ಪುರದ ಶಿವನಿಳಯಮಂ ಪೊಕ್ಕು
ಹರಹರ ನಮಃಶಿವಾಯೆನುತಂ ಮನಂ ಮಿಕ್ಕು
ಕುಳ್ಳಿರ್ದು ಶಿವಪೂಜೆಯಂ ಮಾಡಲೆಂದಲ್ಲಿ
ಬಳ್ಳಿವರಿದಡರ್ವ ನೋಟದೊಳೆ ನೋಡುತ್ತಲ್ಲಿ
ಮಜ್ಜನಕ್ಕೆರೆಯಲೆಂದಾ ಸೋಮನಾಥನಂ
ಸಜ್ಜನ ಸ್ನೇಹದಿಂ ಪಾರ್ವತೀನಾಥನಂ
ಕರಕೆ ಬಿಜಯಂಗೈಸಲೆಂದು ಕೈಯಂ ನೀಡೆ
ಹರನಲ್ಲಿ ಜೊಮ್ಮಣ್ಣನಿರಿಸಿದಂತಿರೆ ನೋಡೆ
ದಣ್ಣಾಯಕರ ಮನದ ಹೇಸಿಕೆಗಳೆಯಲೆಂದು
ಅಣ್ಣ ಜೊಮ್ಮಣ್ಣನಂ ಮೆರೆದು ತೋರುವೆನೆಂದು
ಗದ್ದುಗೆಯ ಮೇಲಿಂದಲತ್ತಿತ್ತ ಚಲಿಸದಿರೆ
ಇದ್ದಿದ್ದಿದೇನಾಯ್ತೆನುತ್ತೆ ನೋಡುತ್ತಮಿರೆ

ಮತ್ತೊಮ್ಮೆ ಕರೆಯಲೆಂದೊಲಿದು ಬಂದಂ ನೋಡ
ಉತ್ತಮಂ ಜೊಮ್ಮಣ್ಣತಂದೆ ಭರದಿಂ ನೋಡ
ಬಂದು ನೊಂದೇಕಿರ್ದಪಿರಿ ಮನೆಗೆ ಬನ್ನಿರೇ
ಇಂದೆನ್ನನಿಂತು ನೋಯಿಸಲೇಕೆ ಬನ್ನಿರೇ
ಎನಲಲ್ಲಿ ದಣ್ಣಾಯಕರ್ಕಂಡು ಸಿಗ್ಗಾಗಿ

ಮನದೊಳಗೆ ಸೋಮನಾಥನ ಪರಿಗೆ ಬೆರಗಾಗಿ
ಭಕ್ತರೊಳ್ಛಲವೇಕೆ ಭಕ್ತರೋಳ್ಪೆವವೇಕೆ
ಭಕ್ತರೊಳ್ದುರಭಿಮಾನದ ವಾಸಿ ತಾನೇಕೆ
ಎನುತವಾ ದಣ್ಣಾಯಕರ್ನುಡಿದಿರಂತಲ್ಲಿ
ಮನಸಿಜಹರಂ ನೀವಿರೆಂದಿರಿಸಿದಂತಲ್ಲಿ
ಇರ್ದಪಂ ಸೋಮನಾಥಂ ಚಲಿಸನೆತ್ತಲುಂ
ಸಾರ್ದ ಸಿಂಹಾಸನದಿನೆಲೆಮಿಡುಕನೆತ್ತಲುಂ
ಸೋಮನಾಥಂ ಬರಲ್ಬಂದಪ್ಪೆವಾವೆನಲು
ಭೀಮನಾಥನ ಕೂಡೆ ಆರೋಗಿಸಲ್ಕೆನಲು
ಇರವೇಳ್ದಡಿರ್ದ ದೇವಂ ಸೋಮನಾಥವಿಭು
ಬರವೇಳ್ದು ಬಿನ್ನೈಸೆ ಬಾರದಿರ್ಪನೆ ಶಂಭು
ಎಂತೆಂತೆನುತ್ತಲಗನಾಯತಂಗೊಳುತಿರಲು
ಮುಂತೆ ದಣ್ಣಾಯಕರ ಕೈಗೆ ಲಿಂಗಂ ಬರಲು
ಓತು ಜೊಮ್ಮಣ್ಣನಂ ತೆಗೆದಪ್ಪಿ ಬಿಗಿದಪ್ಪಿ
ಕೌತುಕದ ಮೇಲೆ ಕೌತುಕವಡಸಿ ಮತ್ತಪ್ಪಿ
ಒಡನೊಡನೆ ನಡೆತಂದು ನಿಜನಿಳಯಮಂ ಪೊಕ್ಕು
ಎಡೆಮಾಡಿದೆಡೆಗಳೊಳೆ ಲಿಂಗಾರ್ಚನೆಗೆ ಮಿಕ್ಕು
ಮಜ್ಜನಂ ಪೂಜೆ ಧೂಪಾರತಿಗಳಂ ಕೊಟ್ಟು
ಪಜ್ಜಳಿಪ ಲಿಂಗಕ್ಕೆ ನೇಹಮಂ ಮುಂದಿಟ್ಟು
ಜೊಮ್ಮಣ್ಣನರಸಿ ಪರಿಯಾಣಕ್ಕೆ ಬಡಿಸುತಿರೆ
ಸುಮ್ಮಾನವುಡುಗಿ ದಣ್ಣಾಯರರ್ನಡುಗುತಿರೆ
ಸೋಮನಾಥನನೊಮ್ಮೆ ಬಡಿಸುತಿರ್ಪರನೊಮ್ಮೆ
ಭೀಮನಾಥನನೊಮ್ಮೆ ಜೊಮ್ಮಣ್ಣನುಮನೊಮ್ಮೆ
ನೋಡುತಂ ದಣ್ಣಾಯಕರ್ಕೊರಗಿ ಕರಗುತಂ
ಬಾಡುತಂ ನುಡಿಯಮ್ಮದೆ ಕಂದಿ ಕುಂದುತಂ

ಇರೆ ಜೊಮ್ಮತಂದೆಯೆಲ್ಲವನರಿದು ನಸುನಗುತೆ
ಹರುಷದಿಂ ದಣ್ಣಾಯಕರ ಮೊಗವನೀಕ್ಷಿಸುತೆ
ಆರೋಗಿಸಲ್ಕಿಕ್ಕಿ ಇರೆ ಸುಮ್ಮನಿರೆ ಕಂಡು
ಮಾರಾರಿಯಣುಗನವರಂಜುವಿರವಂ ಕಂಡು
ಎಲೆ ಸೋಮನಾಥ ದಣ್ಣಾಯಕರ ಮನದಂತೆ
ಪಲಲವಂ ಪಕ್ವಾನ್ನತತಿಗಳಂ ಮಾಡಿಂತೆ
ಎನಲಲ್ಲಿ ಬೀಸುಬೂರಿಗೆ ಗಾರಿಗೆಗಳಾಗೆ

ತನಿವಾಲ ಸಣ್ಣಸೇವಗೆಯ ಪಾಯಸವಾಗೆ
ತೊಳಗುವಿಡ್ಡಲಿಗೆ ಮಂಡಗೆಗಳಾಗುತ್ತಮಿರೆ
ಕಳವೆಯೋಗರ ಪತ್ರಫಳಶಾಕವಾಗುತಿರೆ
ಕಂಡು ದಣ್ಣಾಯಕರು ಹಿಗ್ಗಿ ಹಾರೈಸುತಂ
ಹಿಂಡೇಳ್ವ ಪುಳಕದಿಂದಾರೈಸಲಿಕ್ಕುತ್ತಂ
ಸಂಗಡಂ ಲಿಂಗಪ್ರಸಾದಮಂ ಕೈಕೊಂಡು
ಹಿಂಗದಾನಂದ ಸುಖಮಂ ಮನದೊಳೆಡೆಗೊಂಡು
ಶಿವರಾತ್ರೆಯಂ ಮಾಡಿ ಸಂಗಸುಖದಿಂದಮಿರೆ
ದಿವಸಕರನುದಯಮಾದಡಮರಿಯದಿರುತಮಿರೆ
ಶರಣಸಂಗದೆ ನಡುವಗಲ್ವರಂ ಕುಳ್ಳಿರ್ದು
ಇರೆ ಪುರಾತರ ಗೀತಗೋಷ್ಠಿಯೊಳೆ ಕುಳ್ಳಿರ್ದು
ಬೇಂಟೆ ಬೇಡೆಂದು ದಣ್ಣಾಯಪಕರ್ಪೇಳುತಿರೆ
ಬೇಂಟೆಯೊಂದಂ ಮಾಣ್ಬುದಿನ್ನೆಂದು ನುಡಿವುತಿರೆ

ಇತ್ತಲಾ ವನದ ಕಾರಣಿಕ ಮೃಗತತಿ ನೆರೆದು
ಪೊತ್ತು ಪೋಯ್ತೇಕೆ ಬಾರಂ ಭಕ್ತನೆಂದರಿದು
ಬಂದುಳಿದ ಮೃಗನಿಕರವೊಂದಾಗಿ ನೋಡುತಂ
ನಿಂದು ತಮ್ಮೊಳಗುಮ್ಮಳಂ ಪುಟ್ಟಿ ಬಾಡುತಂ
ಜೊಮ್ಮಣ್ಣನೇಕೆ ಬಾರಂ ಸುಕೃತವಲ್ಲಭಂ
ಎಮ್ಮೆಲ್ಲ ಜನ್ಮಮಂ ನೀಗುವಂ ದುರ್ಲಭಂ
ಎಂದಾಪುರದ ಸುತ್ತಲುಂ ನೆರೆದು ನಿಂದಿರ್ದು
ಸಂದಣಿಸಿ ಕೊರಲೆತ್ತಿ ಊರ್ಧ್ವಮುಖವಾಗಿರ್ದು
ದೇವಲೋಕಂ ತಪ್ಪಿತೆಮಗೆ ಶಿವಧೋ ಎಂದು
ಭೂವಳಯದೊಳಗೆ ನೊಂದಪೆವು ಶಿವಧೋ ಎಂದು
ಜೊಮ್ಮಣ್ಣನಂ ಕರುಣಿಸುವುದು ಶಿವಧೋ ಎಂದು
ಉಮ್ಮಳಿಸಿ ಸುತ್ತಲುಂ ನೆರೆದು ಶಿವಧೋ ಎಂದು
ಪುರದ ನಾಲ್ದೆಸೆಯೊಳಂ ಗೋಳಿಡುತ್ತಿರಲಿಲ್ಲ
ನೆರೆದ ಮೃಗಸಂಕುಳಂ ಮೊರೆಯಿಡುತ್ತಿರಲಲ್ಲಿ
ಅಬ್ಬರವಿದೇನೆಂದು ದಣ್ಣಾಯಕರ್ಕೇಳೆ
ಉಬ್ಬರಂ ಮೃಗದ ಪುಯ್ಯಲ ವಿಚಾರಿಸೆ ನಾಳೆ
ದೇವ ನೀನೆಂದಂತೆ ಒಂದೇ ದಿನದ ಬೇಂಟೆ
ಭೂವಳಯದೊಳಗಿಂತು ಪರಮ ಸುಖವಿನ್ನುಂಟೆ
ಕಾರಣಿಕಮೃಗವೆಲ್ಲ ತೀರ್ದವೆಂದೆನುತಮಿರೆ

ಮಾರಾರಿಯಲ್ಲಿಗೆಯ್ದುವೆವೆಂದು ಪೇಳುತಿರೆ
ಬೆರಗಾಗಿ ದಣ್ಣಾಯಕರ್ಕಣ್ಗಳಂ ಮುಚ್ಚಿ
ನೆರೆ ಕೌತುಕಂಗೊಂಡು ಶಿವನ ಮಹಿಮೆಗೆ ಮೆಚ್ಚಿ
ಅಸಮಾಕ್ಷ ನೀ ಒಲಿಯೆ ಪಾಪವೇ ಪುಣ್ಯವದು
ಒಸೆದು ನೀನೊಲಿದಂಗನೀತಿಯೇ ನೀತಿಯದು
ಅಃಕಾರ್ಯವೇ ಕಾರ್ಯವಕ್ರಮಂ ಕ್ರಮವೆಂದು
ದುಃಕುಲಂ ಸತ್ಕುಲವಧರ್ಮವೇ ಧರ್ಮವದು

ಎಂದು ಪದ್ಯವನೋದಿ ಹಾರೈಸಿ ಹಿಗ್ಗುತಿರೆ
ಇಂದುಧರನಾಜ್ಞೆಗತಿ ಕೌತುಕಂಬಡುತಮಿರೆ
ನೋಡಿ ದಣ್ಣಾಯಕರನವರೂರ್ಗೆ ಕಳುಪುತಂ
ಕೂಡೆ ಸಮಶೀಲ ಗಣಸಂತತಿಗೆ ಪೇಳುತಂ
ಪೊರಮಟ್ಟ ಜೊಮ್ಮಣ್ಣನಲ್ಲಿ ಬೇಂಟೆಗೆ ನಲಿದು
ಕರಿಗೊರಲನಾಜ್ಞೆಯಂ ಹೊತ್ತು ಭವನಂ ನೆನೆದು
ನಡೆತಂದು ವನದೊಳಗೆ ಪೊಕ್ಕು ನಲವಿಂದಂದು
ಮೃಡ ಭೀಮನಾಥ ಕರುಣಿಸು ಸಾಲ್ವುದೆನಗೆಂದು
ತನ್ನ ಬರವಂ ಪಾರುತಿಪ್ಪ ಮೃಗನಿಚಯಮಂ
ತನ್ನ ಬಾಣಂಗಳಿಂದೆಚ್ಚನಾ ಕಾಯಮಂ
ಎಸಲಲ್ಲಿ ಮೃಗವೆಲ್ಲ ಬೀಳ್ವವವನಿಯ ಮೇಲೆ
ಪೊಸ ಪುಷ್ಪವೃಷ್ಟಿ ಸುರಿತಂದುದಾತನ ಮೇಲೆ
ದುಂದುಭಿಸ್ವನ ಉಣ್ಮಿದವು ಗಗನತಳದಲ್ಲಿ
ಬಂದುದೊಂದನುಪಮದ ಪುಷ್ಪಕಂ ನಭದಲ್ಲಿ
ಬಂದ ಪುಷ್ಪಕವನಾ ಜೊಮ್ಮಣ್ಣನೇರಿದಂ
ನಿಂದ ಶರಣರ್ನೋಡೆ ಗಗನಕ್ಕೆ ಪಾರಿದಂ
ಮೃಗಕುಲದ ಪುಷ್ಪಕಂ ಬೆರಸಿ ನೆಗೆದಂ ನೋಡೆ
ಜಗವೆಲ್ಲ ಬೆರಗಾಗೆ ಪೋಗುತಿರ್ದಂ ನೋಡೆ

ಬಂದು ನಂದೀಶ್ವರನ ಬಾಗಿಲೊಳಗಂ ಪೊಕ್ಕು
ಇಂದುಧರನಂ ಕಂಡು ಭಕ್ತಿಸುಖದಿಂ ಮಿಕ್ಕು
ದೇವ ಮೃಗವೇಷದ ಋಷಿಯರೆಲ್ಲರಂ ತಂದೆ
ಆವ ಪರಿಯಧಿಕರ್ಗೆ ಕರುಣಿಸುವುದೆಲೆ ತಂದೆ
ಎಂದು ಮೈಯಿಕ್ಕಿ ಪಟ್ಟಿರ್ದ ಜೊಮ್ಮಣ್ಣನಂ
ಇಂದುಧರನಳ್ಕರಿಂ ನೋಡಿ ಜೊಮ್ಮಣ್ಣನಂ

ಪಿಡಿದಪ್ಪಿ ತೆಗೆದಪ್ಪಿ ನೇಹದಿಂ ಮುಂಡಾಡಿ
ನುಡಿದು ನಂದೀಶಂಗೆ ಬೆಸಸುತಂ ಕೊಂಡಾಡಿ
ಎನ್ನ ನಿಂದೆಗೆ ಕೋಪಿಸುತೆ ಕೊಂದರಿಂತುಂಟೆ
ಎನ್ನ ಭಕ್ತರ್ಗೆಯಾನಲ್ಲದಿನ್ನೊಂದುಂಟೆ
ಭಾಪುರೇ ಜೊಮ್ಮಣ್ಣ ದೇವುರೆ ಜೊಮ್ಮಣ್ಣ
ಭಾಪು ಮಝು ಭಾಪೆನ್ನ ಭಕ್ತನಿಧಿ ಜೊಮ್ಮಣ್ಣ

ಎಂದು ಜೊಮ್ಮಣ್ಣಂಗೆ ಗಣಪದವಿಯಂ ಕೊಟ್ಟು
ಬಂದು ಋಷಿವೃಂದಮಂ ರುದ್ರಲೋಕದೊಳಿಟ್ಟು
ಹೊಸ ಜಡೆಯ ಶಶಿಕಳೆಯ ವಿಷಕಂಠನೊಪ್ಪಿಗಂ
ಬಿಸುಗಣ್ಣ ಮಿಸುಪ ನವಭಸಿತಾಂಗನೊಪ್ಪಿದಂ
ಬ್ರಹ್ಮ ಪಂಚಮಶಿರಃಸ್ಥಿತ ಹಸ್ತನೊಪ್ಪಿದಂ
ಬ್ರಹ್ಮಾಂಡ ಫಳಭರಿತ ಕಲ್ಪಕುಜನೊಪ್ಪಿದಂ
ಆಹಾ ಮಹಾಮಹಾ ಘನತೇಜನೊಪ್ಪಿದಂ
ಆಹಾಹ ಹಂಪೆಯ ವಿರೂಪಾಕ್ಷನೊಪ್ಪಿದಂ ೨೫೬–೪೨೦

ಅಮ್ಮಮ್ಮ ಶಂಕರಂ ಗಿರೀ
ಶಂ ಮದ್ಗುರು ಕೃಪೆಯೊಳೀಗೆ ಸದ್ಭಕ್ತಿಯನೆ।
ಲ್ದೆಮ್ಮೊಳ್ಚಂದ್ರಾಭರಣಂ
ಜೊಮ್ಮಣ್ಣನ ಕಂದನೆಂದು ಹಂಪೆಯದೇವಂ॥

❖❖

# ೩. ಬಾಹೂರ ಬೊಮ್ಮಿತಂದೆಯ ರಗಳೆ

## ಸ್ಥಲ ೧

ಸಾಹಸನಿಧಿಯೆನಿಸುವ ವೃಷ
ವಾಹಂ ಫಣಿರಾಜಕಂಕಣಂ ರಾಜಧರಂ ।
ಬಾಹೂರ ಬೊಮ್ಮಿತಂದೆಯ
ನಾಹಾ ಮೆರೆದಂ ಪುರಾರಿ ಹಂಪೆಯ ದೇವಂ॥

ಶ್ರೀ ಮೇರುವಿಂಗೆ ದಕ್ಷಿಣದಿಶಾಭಾಗದೊಳು
ಭೂಮಿಗೆ ವಿಚಿತ್ರವೆಂದೆನಿಪುದತಿ ರಾಗದೊಳು
ಹೆಸರು ಕಲ್ಯಾಣಪುರವಾ ಪುರಪ್ರಾಂತದೊಳು
ಎಸೆವುದಂತೊಂದು ಯೋಜನದ ಪ್ರಮಾಣದೊಳು
ಶಿವನ ತೋಳ್ತೊಡೆಯ ಪೆಸರಿಟ್ಟರಂದೊಪ್ಪದೊಳು
ಭುವನದೊಳು ಬಾಹೂರೆನಿಪ್ಪೊಂದು ನಾಮದೊಳು
ಒಪ್ಪುವಾ ಪುರದೊಳೊರ್ವಂ ಶರಣನಿರುತಿರ್ಪ
ಅಪ್ರತಿಮನತುಳಬಳನಭವನಾಜ್ಞೆಯೊಳಿರ್ಪ
ಆತನ ಪೆಸರ್ಬೊಮ್ಮಿತಂದೆಯೆಂಬುದು ಜಗಕೆ
ನೂತನಂ ತನ್ನ ಚಾರಿತ್ರವೀ ಕಲಿಯುಗಕೆ
ನೇಮಸ್ಥನುತ್ತಮ ಸ್ನೇಹಿ ಪರಮಧ್ಯಾನಿ
ಕಾಮಹರನಚಲಭಕ್ತಿಯ ಭಾವದಭಿಮಾನಿ
ಅರ್ಥಪಂ ಅತಿಕರುಣಿ ನಿರ್ಮಳಂ ನಿಶ್ಚಳಂ
ಸ್ವಾರ್ಥವೆನಿಸುವ ಶಿವನ ಭಕ್ತಿಭರದುಜ್ವಳಂ
ಮಾಹೇಶ್ವರರ್ಬಂದಡಿದಿರಾಗಿ ಮೈಯಿಕ್ಕಿ
ಆಹಾಯೆನುತ್ತೆದ್ದು ಗಣಪದಕೆ ಮೈಯಿಕ್ಕಿ
ನಿಂದು ಕೈಮುಗಿದೆನ್ನ ಪುಣ್ಯಮೈಯ್ತಂದುದೆ

ಇಂದುಧರನತುಳಸುಖವೊಲಿದು ಕವಿತಂದುದೆ
ಎನ್ನ ಭಾಗ್ಯದ ಬೆಳಸು ವಿಪುಳ ಫಲವಾದುದೆ
ಎನ್ನ ಹೆಂಪಿನ ಹೆಚ್ಚು ಸುಧೆಯುಮಿದಿರಾದುದೆ
ಶಿವನ ಸಂತತಿ ಕರುಣದಿಂದೆ ನಡೆತಂದುದೆ
ಶಿವನ ಬಳಗಂ ಭಕ್ತಿಯಂ ಕುಡಲ್ಬಂದುದೆ
ಎಂದು ಬಿಜಯಂಗೈಸಿ ತಂದು ಮಿಗೆ ಸಡಗರಿಸಿ
ಸಂದಣಿಪ ಹರುಷದಿಂದುಚ್ಚಾಸನದೊಳಿರಿಸಿ
ಪುಳಕತತಿ ಪೊಣ್ಮುತಿರೆ ಚರಣಂಗಳಂ ತೊಳೆದು
ನಲಿದು ಪಾದೋದಕಂಗಳನೊಲುಮೆಯಿಂ ತಳೆದು
ಭಾಳದೊಳಗೊಲಿದೊತ್ತಿ ಕಂಠದೊಳು ನಲಿದೊತ್ತಿ
ಮೇಲೆನಿಪ ಉತ್ತಮಾಂಗದೊಳು ಉರದೊಳಗೊತ್ತಿ
ಆನಂದದಿಂದವಾರೋಗಿಸಲ್ಕಿಕ್ಕುತಂ
ನಾನಾ ಸುಖಂಗಳಂ ತರದಿಂದೆ ಸಾರ್ಚುತಂ
ಹೊನ್ನ ರನ್ನದ ತೊಡವು ನವ್ಯ ವಸ್ತ್ರವನಿತ್ತು
ಮನ್ನಿಸುತ್ತವರಂಘ್ರಿಯುಮನರ್ತಿಯೊಳು ಹೊತ್ತು
ಕಳುಪುವಂ ಶರಣತತಿ ಪರಸುತಿರೆ ರಾಗದಿಂ
ಇಳಿಪುವಂ ಸಂಸಾರ ಭಾರಮಂ ಬೇಗದಿಂ

ಇಂತಪ್ಪ ಬಾಹೂರ ಬೊಮ್ಮಿತಂದೆಗೆ ಕರಂ
ಕಂತು ಮದಮರ್ದನನ ನೇಮವುಂಟತಿಭರಂ
ಮಿಗೆ ಪೋಪನಲ್ಲಿಯುಂ ಸೋಮವಾರದೊಳತ್ತ
ಬಗೆ ಮಿಗಲು ಕಲ್ಯಾಣಪುರದ ಪುರಹರನತ್ತ
ಒಲವಿಂದೆ ತ್ರಿಪುರಾಂತಕಪ್ರಭುವನೀಕ್ಷಿಸುತೆ
ಕಲಿಮಲಿನ ಕುಲವನಂದಂದಿಗೆ ಶೋಷಿಸುತೆ
ಇದು ನಿಯಮವಾಗಿಪ್ಪುದಾ ಪರಮಭಕ್ತಂಗೆ
ಸದಮಳ ಸದಾಶಿವ ಶಿವಾರ್ಚನಾಯುಕ್ತಂಗೆ
ಇರಲೊಂದು ಸೋಮವಾರದೊಳಂದು ಪೊರಮಟ್ಟು
ಪುರಹರಧ್ಯಾನಮಂ ಮನದೊಳಗೆ ಮೊದಲಿಟ್ಟು
ಬಾಹೂರನೊಪ್ಪದಿಂ ಕಳೆದು ಮಿಗೆ ನಡೆಗೊಂಡು
ಸಾಹಸಾಭರಣನತಿ ನಿಷ್ಠೆಯಂ ಕೆಳೆಗೊಂಡು
ಮೇಲೆ ಝುಲ್ಲರಿ ನೆಗೆಯಲುನ್ನತಾಸನವೇರಿ
ಕಾಲಾಳ್ತುರಂಗಕುಲವೊಡನೆ ಬರುತಿರೆ ಮೀರಿ

ಬರುತಿರ್ದನಪ್ರತಿಮ ಶಿವಭಕ್ತಿಭೂಷಣಂ
ಬರುತಿರ್ದನಮ್ಮಮ್ಮ ಸಂಸಾರಶೋಷಣಂ
ಬಂದು ಕಲ್ಯಾಣಪುರಮಂ ರಾಗದಿಂ ಪೊಕ್ಕು
ಸಂದ ಪುರವೀಥಿಯಂ ನೋಡುತೆ ಮನಂ ಮಿಕ್ಕು
ಬರುತಿರಲು ಮುಂದೊಂದು ಬಿಳಿಯ ಜೋಳದ ರಾಸಿ
ನರರ ಜೀವನವ ರಂಜಿಸುತಿರ್ಪ ಹೊಸ ರಾಸಿ
ಇರಲದಂ ಮುಂದುಗೊಂಡೊರ್ವನಾ ವ್ಯವಹಾರಿ
ಕರೆವುತಂ ಮಾರುಗೊಂಬುವರನತ್ಯುಪಕಾರಿ
ಎಲೆಲೆ ಶಂಕರಗಂಡನಂ ಕೊಳ್ಳಿರೇ ಎನುತೆ
ಸಲೆ ಬರ್ದುಕಿರೇಯಮೃತಮಯ ಧಾನ್ಯವೆಂದೆನುತೆ
ಇಪ್ಪಲ್ಲಿ ಬೊಮ್ಮಿತಂದೆಗಳದಂ ನೋಡುತಂ
ಬಪ್ಪಲ್ಲಿಯೊರ್ವ ಸವಣಂ ಕಟಕಿಯಾಡುತಂ
ಜೋಳದ ಪೆಸರು ಶಂಕರನ ನಾಮವೆಂದಾಯ್ತು
ಆಳಿಗೊಂಬರನರಿಯರಕಟ ಶಂಕರನಾಯ್ತು
ಇದಕೆ ಪ್ರತ್ಯಕ್ಷವಂ ತೋರಬಲ್ಲವರುಂಟೆ
ಅಧಿಕರೀ ಜೋಳಮುಮನೋ ಎನಿಸುವವರುಂಟೆ
ಎಂಬ ನುಡಿಗೇಳ್ದು ಭೋಂಕನೆ ದಂಡಿಗೆಯನಿಳಿದು
ಅಂಬಕತ್ರಯನ ಸುತನತಿ ಕೋಪಮಂ ತಳೆದು
ಎಂತಾರುಹತಗುನ್ನಿ ಬಗುಳುತಿರ್ದಪೆಯೆನುತೆ
ಮುಂತಿರ್ದ ಭಕ್ತಾಳಿಗವಧರಿಪುದೆಂದೆನುತೆ
ಪುರಜನಂಗಳು ನೆರೆದು ನೋಡುತ್ತವಿರಲಲ್ಲಿ
ಪರಸಮಯಿಗಳು ಸರಿಯಲನುಮಾಡುತಿರಲಲ್ಲಿ
ಮರೆದು ನುಡಿದಾರುಹತನೆದೆ ಬಿಕ್ಕಿಬಿರಿವುತಿರೆ
ಹೆರೆಸೂಡಿದನ ಭಕ್ತರೆಲ್ಲ ಮೈವೆಚ್ಚುತಿರೆ
ರಾಸಿಯಂ ಬಲವಂದು ಭಾಷೆಗೊಡುತಂ ನಿಂದು
ಸೂಸದಚ್ಚರಿವಿನೊಳಗಿಂಗೆ ಶಿವನಂ ತಂದು
ಪರಮ ಗುರುವೇ ಶಂಕರಾ ಶಂಕರಾ ಎಂದು
ಕರೆಯೆ ಜೋಳದ ರಾಸಿಯೊಳಗಣಿಂದಂತೊಂದು
ಪ್ರಣವಮಯವೆಂಬುದಂ ಧರೆಗೆ ಕೇಳಿಸುವಂತೆ
ತ್ರಿಣಯನಂ ಭಕ್ತರೆಂದುದನುದ್ಧರಿಸುವಂತೆ
ಹರುಷದಿಂದೋ ಎಂಬ ದನಿ ಮೂವಡಿಸಿ ಮೀರೆ
ನೆರೆದ ನೆರವಿಗೆ ಶರಣರಲ್ಲಿ ನಂಬುಗೆಯೇರೆ

ಇರಲಮ್ಮದೋಡಿದಂ ಸವಣನೆಂಬುವನಂದು
ಶರಣರೆಲ್ಲಕ್ಕರಿಂ ಕೊಂಡಾಡುತಂ ಬಂದು
ಕಲ್ಯಾಣಪುರದೊಳಗೆ ಭರದಿಂದೆ ಮೆರೆಯಿಸುತೆ
ಕಲ್ಯಾಣಪುರುಷನಂ ಪರಸುತಂ ರಾಗಿಸುತೆ
ಇರ್ದ ಗಣತತಿವೆರಸಿ ಹರುಷದಿಂ ನಡೆತಂದು
ಸಾರ್ದು ಶಿವನಿಳಯಮಂ ಪ್ರೇಮದಿಂ ಪೊಗುತಂದು
ತ್ರಿಪುರಾಂತಕಪ್ರಭುವನಾನಂದದಿಂ ಕಂಡು
ಕಪಟರಹಿತಂ ನಿತ್ಯ ನೇಮಕ್ಕೆ ನೆಲೆಗೊಂಡು
ಶಿವಭಕ್ತಿ ತನ್ನಂ ಬಲಂಗೊಂಡು ಬಲವಂದು
ಶಿವನಿಷ್ಠೆ ಕೈಯಿಕ್ಕಿ ಮೈಯಿಕ್ಕುತಂ ನಿಂದು
ಆಗಮಸ್ಥಾನದೊಳು ಭಸಿತಮಂ ತೀವಿಟ್ಟು
ರಾಗದಿಂ ರುದ್ರಾಕ್ಷಿಗಳನಳವಡಲ್ತೊಟ್ಟು
ಆನಂದ ಜಲದೊಡನೆ ದರುಶನಂ ಮಾಡುತಂ
ನಾನಾ ಪುಳಕದೊಡನೆ ಪರುಶನಂ ಮಾಡುತಂ
ನೆರೆಕೃತಾರ್ಥತೆಯೊಡನೆ ಪಾದೋದಕಂಗೊಂಡು
ಹೆರೆಸೂಡಿದವನ ಪ್ರಸಾದಮಂ ಕೈಕೊಂಡು
ತಾಳಮಂ ಕೊಂಡು ನಾದಪ್ರಿಯನ ನೆರೆ ಪಾಡಿ
ಆಳಾಪದಿಂ ಪುರಾತನ ಗೀತವಂ ಪಾಡಿ
ನಿಂದಿರ್ದು ಕೈಮುಗಿದು ನೋಡಿ ಬಿನ್ನೈಸುತಂ
ಇಂದುಧರನಾಜ್ಞೆಯಂ ನಿಂದು ಬಿನ್ನೈಸುತಂ
ದೇವ ನೀಂ ನೆನೆಯಿಸಲು ನೆನೆವೆನೆಲೆ ಶಂಕರಾ
ದೇವ ನೀಂ ನುಡಿಯಿಸಲು ನುಡಿವೆನೆಲೆ ಶಶಿಧರಾ
ದೇವ ನೀಂ ನಡೆಯಿಸಲು ನಡೆವುತಿರ್ಪೆಂ ಶಿವನೆ
ದೇವ ನೀವೆಂತಿರಿಸಿದಂತಿರ್ಪೆನೆಲೆ ಭವನೆ
ದೇವ ನೀನಾಡಿಸುತ್ತಿರ್ಪ ಜಂತ್ರದ ರೂಪು
ದೇವ ಎನಗಾವಗಂ ನಿಮ್ಮ ಕರುಣದ ಕಾಪು
ಎಂದು ಬಿನ್ನಯಿಸುತಂ ಭರ್ಗನಂ ಬೀಳ್ಕೊಂಡು
ಇಂದುಧರನಲ್ಲಿ ಕಾರುಣ್ಯಮಂ ಕೆಳೆಗೊಂಡು
ತಿರುಗಿದಂ ಬಾಹೂರದೆಸೆಗೆ ಕಟ್ಟಭಿಮಾನಿ
ಹರನ ಪುರಹರನ ಶಶಿಧರನ ಪರಮಧ್ಯಾನಿ
ಶರಣತತಿಯೊಡನೊಡನೆ ಗುಡಿಗಟ್ಟಿ ಬರುತಮಿರೆ
ಪರದೈವಸಂತಾನತಿಮಿರ ಭಾಸ್ಕರನೆಂದು

ಪರಸಮಯ ವಿಪಿನಕುಲದಾವ ಪಾವಕನೆಂದು
ಬಿರುದೆತ್ತಿ ಕಹಳೆಗಳು ದೆಸೆದೆಸೆಗೆ ಕರೆವುತಿರೆ
ಬಂದು ಬಾಹೂರನತಿ ಸಂಭ್ರಮದೊಳಂ ಪೊಕ್ಕು
ಸಂದಣಿಪ ಗಣಪದದ ರಜದಿಂ ಮನಂ ಮಿಕ್ಕು
ಶರಣರಂ ನೋಡುತಂ ನಲಿದು ಕೊಂಡಾಡುತಂ
ಹರುಷದಿಂ ಮಾಡುತಂ ಶಿವನೊಳೋಲಾಡುತಂ
ಪುಳಕಮಂ ಹೇರುತಂ ಪರಮಸುಖವೇರುತಂ
ತೃಪ್ತಿಯಂ ಬೀರುತಂ ಕರುಣಮಂ ತೋರುತಂ
ಶರಣತತಿ ಹಾರೈಸೆ ಶಿವಭಕ್ತಿ ತೇರೈಸೆ
ಪರಮಸುಖ ಕೋರೈಸೆ ಹರಭಕ್ತಿ ಪೂರಯಿಸೆ
ಎಸೆದಿರ್ದನಮ್ಮಮ್ಮ ಬಾಹೂರ ಬೊಮ್ಮಯ್ಯ
ಅಸಮನಯನನ ಸುತಂ ಬಾಹೂರ ಬೊಮ್ಮಯ್ಯ
ಅರರೆ ಕಲಿ ಬಾಹೂರ ಬೊಮ್ಮಯ್ಯನೆಮ್ಮಯ್ಯ
ಶರಣಜನ ಸಂತೋಷಿ ಬಾಹೂರ ಬೊಮ್ಮಯ್ಯ
ಇಂತು ಸುಖದಿಂದೆ ಬಾಹೂರೊಳೊಪ್ಪುತ್ತಮಿರೆ
ಸಂತತಂ ಶರಣತತಿ ಹೊಗಳುತ್ತಮಿರುತಮಿರೆ

## ಸ್ಥಲ ೨

ಜೋಳಂ ಶಂಕರನೆಂದಡೋ ಎನಿಸಿದ್ಯೆ ಬಾಹೂರ ಬೊಮ್ಮಯ್ಯ ಭೂ
ಪಾಲೋದ್ಯದ್ವಿಪ ಸಿಂಹವೆಂದೆನಿಸಿದ್ಯೆ ಬಾಹೂರ ಬೊಮ್ಮಯ್ಯ ನೀಂ
ತ್ರೈಲೋಕಕ್ಕಧಿಕತ್ವನೆಂದೆನಿಸಿದ್ಯೆ ಬಾಹೂರ ಬೊಮ್ಮಯ್ಯ ಕೇಳ್
ಭಾಳಾಕ್ಷಂಗೆ ಭುಜಾಸಿಯೆಂದೆನಿಸಿದ್ಯೆ ಬಾಹೂರ ಬೊಮ್ಮಯ್ಯನೇ ॥

ಎಂದು ಕೊಂಡಾಡುತಿಪ್ಪ ಮಾಹೇಶ್ವರರ ನಡುವೆ ಬಾಹೂರ ಬೊಮ್ಮಯ್ಯಂ ಸಾಹಸಾಭರಣಂ ಗಂಗಾಧರನ ಗಾಂಭೀರ್ಯದಂತೆ ರಾಜಶೇಖರನ ತೇಜದಂತೆ ಕಪರ್ದಿಯ ಕೀರ್ತಿಯಂತೆ ಕಾಮಹರನ ಕಾಯ್ಪಿನಂತೆ ಪುರಹರನ ಪ್ರತಾಪದಂತೆ ಕಾಲಹರನ ಲೀಲೆಯಂತೆ ಪಂಚಮುಖನ ಪ್ರಪಂಚದಂತೆ ಕುಳ್ಳಿರ್ದು, ಬೇರ್ವರಿವ ಭಕ್ತಿಗೆಡೆಗೊಟ್ಟು ಅಂಕುರಿಪ ಶಿವಜ್ಞಾನಕ್ಕೆ ಮನಂಗೊಟ್ಟು ಪಲ್ಲವಿಪ ಸ್ನೇಹಕ್ಕಿಂಬಾಗಿ ಬಳ್ಳಿವರಿವ ನಿಷ್ಠೆಗಡರ್ಪಾಗಿ ಪುಣ್ಯದ ಪುಂಜದಂತೆ ಜಂಗಮಪ್ರಕರದ ಸಂಗಸುಖಂ ಹಿಂಗದ ಲಿಂಗಸ್ನೇಹಿ ಮಂಗಳಾತ್ಮಕಂ, ಸತ್ಯಶರಣರ ಸೂಳ್ನುಡಿ ಕಿವಿಯ ಸವಿ, ರೂಪು ಕಂಗಳ ಕೌತುಕಂ, ಸೋಂಕು ತನುಪುಳಕಂಗಳು, ಪ್ರಸಾದಪರಿಮಳಂ ಘ್ರಾಣೋತ್ಸಾಹಂ, ಶಿವಸ್ತೋತ್ರಂ ನಾಲಗೆಯ ರಾಜ್ಯಂ, ಘನಮೂರ್ತಿ ಮನೋಹರಮಾಗಿ ಸಾತ್ವಿಕ ಭಕ್ತಿರಸತರಂಗಿಣೀಸಮಾವಗಾಹ ಚಿತ್ತನುಂ ಪ್ರಭೂತ ಪ್ರಮೋದ ಪ್ರತಾಪಗಾತ್ರನಾಗಿ ಕೆಲವು ದಿನವೊಲವಿಂದಿಪ್ಪಲ್ಲಿ ಪನ್ನಗಧರನಿನ್ನುಂ ಮರೆದಪೆಂ ಬನ್ನಿಮೆಂದು ಕರೆವಂತತ್ಯಾದರದಿಂ ಸೋಮವಾರಂ ಬರೆ ಸುಪ್ರಭಾತ ಸಮಯದೊಳೆದ್ದು ಭಸ್ಮೋದ್ಧೂಳಿತಾವಯವನುಂ

ರುದ್ರಾಕ್ಷಿಮಾಲಾಲಿಂಗಿತಸರ್ವಾಂಗನುಂ ಧವಳಾಂಬರ ಪರಿವಸನನುಂ ನಿರ್ಮಲೋತ್ತರೀಯ ವಿಶೇಷನುಂ ಭೂಷಿತನವ್ಯಾಭರಣನುಂ ಹಸ್ತಪ್ರಬದ್ಧತಾಳಯುಗಳನುಂ ಅವಯವಾಭ್ಯಾಸಾಲಿಂಗಿತ ಸರ್ವಾಂಗನುಂ ಉಭಯಪಕ್ಷ ವಿಲಸಿತ ಪದಾತಿ ಬಲನುಂ ಪರಿವೃತ ಶಿವಭಕ್ತ ಪ್ರಕರನುಂ ತ್ರಿಪುರಾಂತಕ ಶ್ರೀಪಾದಪದ್ಮಾವಲೋಕನಾಸಕ್ತ ಚಿತ್ತನುಮಾಗಿ, ಗಜಾಸುರ ವಿಜಯಕ್ಕೆ ಪೊರಮಡುವ ರುದ್ರನಂತೆ ಬಾಹೂರಂ ಪೊರಮಟ್ಟು ಕಿರಿದಂತರಮಂ ನಡೆತಂದು,

ಕಲ್ಯಾಣಮಂ ಪೊಕ್ಕು ರಾಜವೀಧಿಯೊಳ್ನಡೆತಪ್ಪಾಗಳು ಮುಂದೆ ಪೆರ್ಮಾಡಿರಾಯನ ಪಟ್ಟದಾನೆ ಸಂಚಿತ, ತಿಲಕಿತ, [ಆರ್ದ್ರ]ಕಪೋಳಿತ, ಅತಿವರ್ತಿತ, ಅಧೋನಿಬಂಧಿನಿ, ಗಂಧಚಾರಿಣಿ, ಕ್ರೋಧಿನಿ ಎಂಬ ಸಪ್ತಾವಸ್ಥೆಯ ಮದದಿಂ ಮುಂದುಗಾಣದೆ ಕರ್ಣತಟದಿಂದೊರೆತೊಗುವ ಮದಗಂಧಕ್ಕೆಳಸಿ ಬಂದಳಿಕುಳಂ ಕರಿಮುರಿಯೋಗಿ ಬೀಳಲಗ್ರಪಲ್ಲವದಿಂ ಪೊಯ್ದುಕೊಳುತ್ತಂ, ಮದಜಲವನುಗುಳ್ವ ಕಡು ಸುಯಿಲ ಬಳಿವಿಡಿದು ಪಸರಿಸಿ ಪೊರಮಟ್ಟ ಶೀಕರಾನೀಕಂ ವಡಬಾನಳನ ವಿಸ್ಫುಲಿಂಗಕುಲದಂತೆ ಸೋಂಕಿದುದೆಲ್ಲವಂ ಭುಗಿಲನುರುಪೆ ಪುಷ್ಕರಾಗ್ರದಿಂ ಫೂತ್ಕರಿಸುತಂ, ಕೈಕೊಂಡ ರೂಪಂ ಕೋಡೊಳಿಟ್ಟೀ ತೆರದೊಳರೆವೆನೆಂಬುದಂ ತೋರ್ಪಂತೆ ಕೊಂಬಿನ ಮೊನೆಯೊಳ್ಚರಿಕಯ್ಯಂ ಹೇರಿ ತೂಗಾಡುತಂ, ತನ್ನ ನೆಳಲಂ ಪ್ರತಿದಂತಿಯೆಂದು ಕರುತ್ತೆರಗಿ ನಾಡೆ ನೀಡಿ ನಟ್ಟ ದಾಡೆಯಿಂ ಬೆಟ್ಟದ ತೋರ ಪೆಟ್ಟಿಗಳನೆತ್ತಿ ನಿಟ್ಟಿಸಿ ನೋಡುತ್ತಂ, ಕಾಲೊಳು ಬಂಧಿಸಿದ ಮಾಲೆಯ ನಿಗಳಂಗಳಂ ಘಲಘಲಿಸಿ ಜಾರಿ ಸೆಳದುಣ್ಮಿಪೊಣ್ಮಿಘುಣ್ಮಿ ಘಳಿಲೆಂದು ಕಂಪಿಸಿ ನಿಟ್ಟಡಿಗೊಂಡು ಪರಿದುಬಂದು, ಪಿರಿಯ ಕರುಮಾಡವುಂ ಮದದ ಬೆಂಕಿಯಿಂ ಪೊತ್ತಿ ಪೊಗೆಯೆ, ತೀಂತೆಗಾರದೆ ತೇದುಕೊಳುತ್ತಂ, ಮನ್ನಣೆಯ ಮಂದೆವಾಳಕ್ಕೆ ಮುಂಡಿಯಿಟ್ಟು ದನಿದೋರುವ ಜೋದನಂ ಬರಲಿತ್ತು ಭೋಂಕನೆ ಪಿಡಿದು ಹಸ್ತದೊಳೆತ್ತಿ ಪ್ರತಿಮಾನದೊಳ್ದೊಪ್ಪುದಿಪ್ಪನೆ ಪೊಯ್ದಿಟ್ಟಣಿಸಿ ಕೋಡಕೊನೆಯೊಳೊಟ್ಟಿಕೊಳುತ್ತಂ, ಅಡ್ಡಂ ನಿಲುತಂ ವಿಸಟಂಬರಿವುತ್ತಂ, ತೋರಿ ತಪ್ಪುತವ್ವಳಿಸಿ ನಿಲುತಂ, ಮಸಗಿ ಮೊರೆವುತ್ತಂ, ಸುತ್ತಿ ಕೆಕ್ಕಳಿಸುತಂ, ಪೊತ್ತಿ ಪೊಗೆವುತಂ ಉರಿವರಿವುತಮೃತಮಥನ ಕಾಳಕೂಟಂ ಕುಂಜರಪತಿಯ ರೂಪುಗೊಂಡಂತೆ ಉರವಣಿಸಿ ಬಪ್ಪ ಸಿಂಧುರದ ಮುಂದೆ ಮಂದಿಗೊಡುವ ಡೌಡೆಕಾರರುಂ ಚೂಣಿಯ ಪಡಿಯರರ್ತೊಲಗು ತೊಲಗು ಮಾರಿಯ ಮೂರಿ ಸಾರುಸಾರೆಂದಿಟ್ಟಣಿಸಿ ಮುಟ್ಟಿ ಬಂದ ಕಳಕಳಮಂ ಕಟ್ಟಿದಿರೊಳ್ಕೇಳ್ದು,

ಅಮ್ಮಮ್ಮ ಮಾರಿಯ ಕೂರಸಿ ದಿ[ಟ್ಟಿ] ಮೂರನ ಕಟ್ಟಿದಲಗು ಪಶುಪತಿಯ ಪಾಶುಪತಾಸ್ತ್ರವೆಂದೆನಿಪ ಬಾಹೂರ ಬೊಮ್ಮಯ್ಯಂ ಸಿಂಹವಿಕ್ರಮಂ ಗಜಾಸುರಾಂತಕನ ಕುವರಂ ಕೆಲಬಲದ ಮಾಹೇಶ್ವರರನಂಜದಿರಂಜದಿರೆಂದೊಂದೆರಡಡಿಯನಿದಿರಾಗಿ ನಡೆದು ಜಡಿದು ನುಡಿದು ಸಡಿಫಡ ಸಾವವನ ಮನೆಯಾನೆಗೆ ಶಾಶ್ವತನ ಮನೆಯಾನೆ ತೊಲಗುವುದಲ್ಲಂ, ತೆಗೆ ತೆಗೆ ನಿಲ್ಲು ನಿಲ್ಲಿತ್ತಿತ್ತ ಬಾರಿದಿರೆನ್ನಾಣೆಯೆಂದೆತ್ತಿದ ಹಸ್ತನಿವಾರಣೆಯಿಂದಂ ಹೂಂಕರಿಸೆ, ನಡೆತಪ್ಪ ಮದದಾನೆ ಭೋಂಕನೆ ನಿಂದು ತಾಳವಟ್ಟಮಂ ತೂಗದೊಡಲನೊಲೆಯದೆ ಅಗ್ರಪಲ್ಲವಮನಲುಗದೆ ಸುಂಡಿಲಂ ಭಂಡಾರಿಸಿ ಕೀಲಿಸಿದಂತೆ ಕರುವಿಟ್ಟಂತೆ ಕಂಡರಿಸಿದಂತೆ ನಟ್ಟುನಿಂದಡಾರೆಕಾರರಿರಿದಡಂ ಮಾವಂತರಾರ್ದಡಂ ನೆರೆದ ನೆರವಿ ಬೊಬ್ಬಿಟ್ಟಡಂ ಮಣ್ಣಾನೆಯಂತೆ ಮಿಡುಕದಿರೆ ಕಂಡು, ಭಯಂಗೊಂಡು ನೋಡುತಿಪ್ಪ ಪಸಾಯಿತರ್ ಪರಿದು ಬಂದರಸಂಗೆ ಮೈಯಿಕ್ಕಿ ನಿಂದೆಲೆ ದೇವಾ, ನಮ್ಮ ಪಟ್ಟದಾನೆ ಮದಂಗೊಂಡು ಸೂರ್ಯವೀಧಿಯೊಳಟ್ಟುತ್ತಂ ತುಳಿವುತ್ತಂ ಬಪ್ಪಲ್ಲಿ ಬಾಹೂರ ಬೊಮ್ಮಯ್ಯನೆಂಬ ಹರಭಕ್ತಂ ತೊಲಗದಂಜದ್ಯೆತಂದು ಸಾವನಾನೆಗೆ ಶಾಶ್ವತನಾನೆವೋಸರಿಸುವುದಲ್ಲಂ, ನಿಲ್ಲೆಂದಾಜ್ಞಾಪಿಸೆ

ಮತ್ತಗಜವತ್ತಲಿತ್ತಂ ಮಿಸುಕದೆ ನಿಂದಿರ್ಪುದೆಂದು ಬಿನ್ನವಿಸಿದ ಬಿನ್ನಪದೊಡನೆ ಪೆರ್ಮಾಡಿರಾಯ ನಿರ್ದಪರಿಯೊಳೆದ್ದು ಕಾಲ್ನಡೆಯೊಳೆಯ್ತಂದು ಮುಂದಿರ್ದಾನೆಯುಮಂ ಕಟ್ಟಿದಿರೊಳಿರ್ದ ಬೊಮ್ಮಯ್ಯಗಳುಮಂ ಕಂಡೆಲೆ ಭಕ್ತಾ, ನೀಂ ಶಾಶ್ವತನ ಮನೆಯಾನೆಯಾದಡದೇಂ ಎನ್ನಾನೆಯೊಡನೆ ಕೈಯಿಕ್ಕಿ ಗೆಲವುದುಚಿತವಲ್ಲದೆ ಮಂತ್ರದಿಂ ಮಾಯದಿಂ ಗತಿಸ್ತಂಭವಂ ಮಾಡೆ ಕುಟಿಲವೆನಿಸುವುದಲ್ಲದೆ ಪರಾಕ್ರಮವಲ್ಲೆಂದು ನುಡಿದ ಭೂಪತಿಯ ಮೊಗಮಂ ನೋಡಿ ಮುಗುಳ್ನಗೆಯ ನಗುತಂ ಧೈರ್ಯನಿಧಿ ಮಾಯಾಮದಹರಣನೆನಿಪ ಬಾಹೂರ ಬೊಮ್ಮಯ್ಯನರಸನಂ ನೋಡಿ ನುಡಿದಂ–

ಕೇಳೆಲೆ ಶರಣರ ಪುರಳನರಿಯದರಸು ಮರುಳೆ, ಗಣನಾಥರ ಮುಂದಿಂದ್ರನೈರಾವತವಭ್ರಚ್ಛಾಯೆ, ಅಗ್ನಿಯ ಪುಂಡರೀಕಂ ನೀರೊಳಗಣ ತಾವರೆ, ಯಮನ ವಾಹನಂ ಮನೆವಾಗಿಲ ಗುಜ್ಜಂ, ನೈರುತಿಯ ಕುಮುದಂ ನೀಲೋತ್ಪಲಂ, ವರುಣನಂಜನಂ ಕಣ್ಣಕಾಡಿಗೆ, ಪವನನ ಪುಷ್ಪದತ್ತಂ ಕೈಯ ಪೂಮಾಲೆ, ಕುಬೇರನ ಸಾರ್ವಭೌಮಂ ಮಣ್ಣಾನೆ, ಧನದಮಿತ್ರನ ಸುಪ್ರತೀಕಂ ಸ್ಥಾಣುವಶವರ್ತಿ ಎನಿಪ ಕಟ್ಟುಬ್ಬಟೆಯ ತೇಜದ ಘನಮುಹಿಮರ ತೇಜವಪ್ಪೆನ್ನೊಡನೆ ನಿನ್ನಾನೆ ಕೈಯಿಕ್ಕುಪುದುಂಟುಂಟದೇಕೆ ಮಾಣ್ಬುದೆಂದಾಕ್ಷೇಪಿಸುತ್ತಂ, ತನ್ನ ಕೈಯೊಳು ಸಿಂಗದ ಕಂಗಳಂತಿರ್ದ ತಾಳಮಂ ತೆಗೆದಿವನೆತ್ತಿದಡೆ ನಿನ್ನಾನೆಗೆ ಗೆಲವೆಂದು ಧರೆಯ ಮೇಲಿರಿಸಿ ಕರಿಯ ಬಂಧನಮಂ ಬಿಟ್ಟು ಕರೆಯಲೊಡಂ ಮತ್ತಗಜವೆಯ್ತಂದು ತುಡುಂಕುವಾಗಳು ತಾಳದ ರಜ್ಜು ಪಾತಾಳಕ್ಕೆ ಬೇರೂರೆ ಸಿಂಗದ ಕಂಗಳಂತೊಪ್ಪುವ ತಾಳಮನೆತ್ತಲಾರದೆ ತಾಳವಟ್ಟಂ ಮೇಲಾಗಿ ಘೀಳಿಟ್ಟು ಕೋಡೂರಿ ಕೆಡೆದು ಧರಣಿಯಲ್ಲಿ ಉರುಳ್ದು ಹರಣಂಗಳೆಯೆ, ಹರಭಕ್ತನ ಸಾಮರ್ಥ್ಯವಂ ಕಂಡು ಪೆರ್ಮಾಡಿರಾಯಂಗೆ ಭೀತಿಪುಟ್ಟಿ ಅದ್ಭುತ ತಲೆದೋರಿ ಕೌತುಕಮುದಯಿಸಿ ಆಶ್ಚರ್ಯಂ ಮಿಕ್ಕು ಸತ್ಯಶರಣನ ಚರಣದೊಳ್ದೊಪ್ಪನೆ ಬಿದ್ದು, ದೇವ ದೇವಾ ಮಾತರಿಯದ ಮೂರ್ಖಂಗೆ ಭಕ್ತಿಯರಿಯದ ಯುಕ್ತಿಹೀನಂಗೆ ನಿಸ್ಸೀಮರನರಿಯದ ನಿರ್ದೈವಂಗೆ ಸಿರಿಮರುಳ್ವತ್ತಿದ ನಿರ್ಭಾಗ್ಯಂಗೆ ಎನಗೆ ಕರುಣಿಪುದೆಂದು ಕಾರ್ಪಣ್ಯಮುಖನಾಗಿರ್ದ ಧರಣೀಶನಂ ಶರಣರನುಮತಿಯಿಂ ಕರುಣಿಸಿ ನೋಡಿ, ಸತ್ತಾನೆಗೆ ಆಯುಮನಿತ್ತು ತಾಳಮಂ ತನ್ನತ್ತ ಕರೆದುಕೊಂಡು ಶಶಿಧರನ ಬಿಸುಗಣ್ಣಂ ಅಭವನ ವಿಭವಂ ರುದ್ರನ ಭದ್ರಗಜಂ ಶಂಕರನಂಕದ ಕೇಸರಿಯೆನಿಪ ಬಾಹೂರ ಬೊಮ್ಮಯ್ಯನಂ ಪೆರ್ಮಾಡಿರಾಯನೋಲಯಿಸಿ ಬರೆ, ಪುರಜನಂ ಕೈಯೆತ್ತೆ ಶರಣರ್ಪರಕೆಗಳನೀಡೆ ಪರಸಮಯಂ ಪರಿದೋಡೆ ರಭಸದಿಂ ನಡೆತಂದು ಕಪಟರಹಿತಂ ತ್ರಿಪುರಾಂತಕನಂ ನಲಿದು ಬವಲಂದು ಚಿತ್ತಂಗೊಂಡು ಕಂಡು ಮನಂ ಮುಟ್ಟಿ ಭಾವಂ ಬಲಿದು ಪಾದೋದಕಂಗೊಂಡು ಪುಣ್ಯಂ ಪರಿಮಳಿಸಿ ಪ್ರಸಾದಮಂ ಧರಿಸಿ ನಿತ್ಯನೇಮಂ ಮಾಡಿ ಸತ್ಯಸೇವ್ಯನಂ ಬೀಳ್ಕೊಂಡು ಕಲ್ಯಾಣಪುರಮಂ ಪೊರಮಟ್ಟು ಪೆರ್ಮಾಡಿರಾಯನಂ ಮರಳಿ ಕಳುಪಿ ಬಾಹೂರತ್ತಲಭಿಮುಖನಾಗಿ, ಪದಾತಿಬಲಂ ಪಡಸಲಿಸೆ ನಿಸ್ಸಾಳಧ್ವನಿಯುಣ್ಮೆ ಕಹಳಾರವಂ ಪೊಣ್ಮೆ ಕಡುನಿಷ್ಠೆ ಕೈಗಣ್ಮೆ ಮನಂ ಮಿಕ್ಕು ಬಾಹೂರಂ ಪೊಕ್ಕು ಪರಮಸುಖದಿಂದಿರೆ, ಬೊಮ್ಮಯ್ಯತಂದೆಗಳು ಜೋಳವಂ ಶಂಕರನೆಂದಡೋಯೆನಿಸಿ ಪೆರ್ಮಾಡಿರಾಯಂ ಪಟ್ಟದಾನೆಗೆ ತೊಲಗದೆ ಕರಿಗೆ ಹರಣಂಗೊಟ್ಟನೆಂಬ ಪುಣ್ಯಕೀರ್ತಿ ಜಗಮಂ ಶರಣರನಿದಿರ್ಗೊಂಡು ಅತ್ಯಾದರದಿಂ ಮಿಗಿಲನಾರಾಧಿಸಿ ಬಾಹೂರ ಮೇರೆದಪ್ಪಿದಂತೆ ಕವಿತರೆ ಕಂಡು ಹರುಷಂಗೊಂಡು ಬಂದ ಶರಣರನಿದಿರ್ಗೊಂಡು ಅತ್ಯಾದರದಿಂ ಮಿಗಿಲನಾರಾಧಿಸಿ ಬಾಹೂರ ಬೊಮ್ಮಯ್ಯಂ ಶಿವಭಕ್ತ ಪ್ರೇಮಾವಲೋಕನ ನವ್ಯಕೋಶಹೃತ್ಕಮಳ ಸಂಸ್ಪರ್ಶಶಿವಾಸನ್ನೋತ್ಪನ್ನ ಸುಖಜಲಭರಿತಾಕ್ಷಿಪುಟಗದ್ಗ ದಾಯಮಾನ ಶಿಥಿಲಾಕ್ಷರವಚೋವಿಲಾಸ ಪುಳಕಾಭರಣನಿಧಿ ಸರ್ವಾಂಗನಾಗುತ್ತಮಿರೆಯಿರೆ,

## ಸ್ಥಲ ೩

ಗಿರಿಜಾವಲ್ಲಭನಕ್ಕರಿಂ ಕರೆದಪಂ ಕೈಲಾಸಶೈಲಕ್ಕೆ ನೀ
ನಿರದೇಳೆಂದರುಪಲ್ಕೆ ಬಪ್ಪ ತೆರದಿಂ ಸೂರ್ಯೋದಯಂ ತಾಂ ಬರ
ಲ್ಪರದೈವಾಭ್ರಮಹಾಬಲಂ ಬಲಯುತಂ ಬಾಪೂರ ಬೊಮ್ಮಯ್ಯನಾ
ದರದಿಂದಂ ನಲವೇರಿ ಮೀರಿ ಪೊರಮಟ್ಟಂ ಶೈವಸಾರೋದಯಂ ॥

ಇಂತು ಪೊರಮಟ್ಟು ಶಿವಭಕ್ತರೊಳ್ನುಡಿವುತಂ
ಕಂತು ಮದಮರ್ದನನ ಕರುಣಮಂ ಪಡೆವುತಂ
ಪಾಡುವ ಪುರಾತನರ ಗೀತದೊಳು ಬಾಳುತಂ
ಆಡುವ ಗಣರಿಗಳೊಡನೊಡನೆ ಪುಟವೇಳುತಂ
ಶರಣರಂ ಸೋಂಕಿ ಪುಳಕಿತಗಾತ್ರನಾಗುತಂ
ಪರಮ ಸುಖಸಂಪತ್ತಿಯಿಂ ತೇಗಿ ಬೀಗುತಂ
ನಡೆತಂದು ಕಲ್ಯಾಣಪುರದ ಹೊರವನದೊಳಗೆ
ಮೃಡನ ಸುತನಾನಂದದಿಂ ಬರುತ್ತಿರೆ ತೊಳಗೆ
ರವಿಯಸ್ತಗಿರಿಯ ಮೇಲತಿ ನಿರ್ಮಳಾಂಗದಿಂ
ತವತವಗೆ ಕಿರಣತತಿ ಉಡುಗುತಿರೆ ತವಕದಿಂ
ಆಗಳಾ ಮನದೊಳಗೆ ಮುಗಿವ ನಳಿನಂಗಳಂ
ರಾಗದಿಂದಲರ್ವ ನವಕುಮುದ ಷಂಡಂಗಳಂ
ಸೊಗಯಿಸುವ ಗಗನಮನಡರ್ವ ಕೊಳರ್ವಕ್ಕಿಯಂ
ಅಗಲದಂತೊಪ್ಪುವ ಚಕೋರಕುಲದಿಕ್ಕೆಯಂ
ಉದಯಿಸುವ ಪೂರ್ಣಶಶಿಬಿಂಬ ಸಂಪತ್ತಿಯಂ
ಒದವಿ ತೀವುವ ಚಂದ್ರಿಕಾ ಮಧುರವೃತ್ತಿಯಂ
ನೋಡುತಂ ಕಲ್ಯಾಣಪುರವನೊಲವಿಂ ಪೊಕ್ಕು
ನೋಡಿ ನೀಡಿರ್ದ ಪುರವೀಧಿಗೆ ಮನಂ ಮಿಕ್ಕು

ಬರುತಿರ್ದನಿತ್ತಲತ್ತಲು ಶಿವಾಲಯದೊಳಗೆ
ಅರರೆ ತ್ರಿಪುರಾಂತಕ ಪ್ರಭುವಿನೋಲಗದೊಳಗೆ
ಶಿವಭಕ್ತ ಸಂತಾನವಿರಲಂದು ದೆಸೆಯಲ್ಲಿ
ಕವಿ ಗಮಕಿ ವಾದಿ ವಾಗ್ಮಿಗಳೊಂದು ದೆಸೆಯಲ್ಲಿ
ಸರಸ ಗಾಯಕರ ಪಜ್ತಿಗಳೊಂದು ದೆಸೆಯಲ್ಲಿ
ನೆರೆದರಸು ಮಕ್ಕಳೋಲಗವೊಂದು ದೆಸೆಯಲ್ಲಿ
ಮುಗ್ಧೆ ಮಧ್ಯಮೆ ಪ್ರಗಲ್ಭೆಯರೊಪ್ಪಿ ಕುಳ್ಳಿರಲು
ಸಿದ್ಧ ಸಾಹಿತ್ಯ ಜನವಲ್ಲಲ್ಲಿ ಕುಳ್ಳಿರಲು

ಬಲ್ಲಿದರ್ವ್ಯವಹಾರಿಗಳ ತಂಡವಿರಲಲ್ಲಿ
ಎಲ್ಲಾ ಜನಂ ನೆರೆದು ತಿಂಥಿಣಿಸುತಿರಲಲ್ಲಿ
ಹೆಸರ ಕಲ್ಯಾಣದೇವಿಯರಂತೆ ಒಪ್ಪುತಿರೆ
ಎಸೆಯಲಾಕೆಯ ಮನೋವಲ್ಲಭಂ ನೋಡುತಿರೆ
ಸತ್ಯಸುಖಮಯನಪ್ಪ ಶಿವಭಕ್ತನಾಕೆಯೊಳು
ಅತ್ಯಂತ ಮೋಹದಿಂ ಮನಹಿಂಗದಾಕೆಯೊಳು
ನೆಲಸಿರ್ಪ ನೇಹದಿಂ ನೋಡುತಿರಲರ್ತಿಯೊಳು
ನಲವಿಂದಲಖಿಳಜನ ನೋಡುತಿರಲೊಪ್ಪಿದಳು
ನೀರ್ತೆಗೆದ ರತ್ನಾಕರದ ಕಾಂತಿಯೆಂತಂತೆ
ಮಾರ್ತೊಳಪ ಚಂದ್ರಮಂಡಲದ ಕಳೆಯೆಂತಂತೆ
ಇರ್ದೋಲಗದ ರಂಗಮಂಟಪದ ಮಧ್ಯದೊಳು
ಸಾರ್ದು ಸಂಗೀತತಂತ್ರಂ ಬೆಳೆವ ಸಮಯದೊಳು
ನೀಳಪಟವೆಸೆವ ಜವನಿಕೆ ನಡುವೆ ನೆಲೆ ನಿಲಲು
ತಾಳದೊಳು ಪದಗತಿಗಳುಗ್ಘಡಣೆಯೆಸೆದಿರಲು
ದೇವ ಚಿತ್ತೈಸೆಂಬ ಕೈವಾರವೆಸೆವುತಿರೆ
ಆವುಜದ ನುಣ್ಪಿನ ಠಣತ್ಕಾರ ಉಣ್ಮುತಿರೆ
ಮೃದು ಮೃದಂಗದ ಧಿಮಿ ಧಿಮಿ ಪ್ರಣಾದಂ ಮಸಗೆ
ಒದವಿ ಕರಡೆಯ ಕಟಕರ್ರೆಂಬ ರವವೆಸಗೆ
ಕಹಳಾರಮಂ ತಾರಮಧುರ ಮಂದ್ರವನುಗುಳೆ
ಬಹುವಿಧದ ಗತಿಗೆ ಕೌಸಾಳ ಝುಲ್ಲೆನಲುಗುಳೆ
ಸುಗತಿಗಳ ನಡುವೆ ಪುಷ್ಪಾಂಜಳಿಯ ನೀಡುತಿರೆ
ಬಗೆ ಮಿಗಲು ಹರನೋಲಗಂ ಬಳಸಿ ನೋಡುತಿರೆ
ತೊಲತೊಲಗು ತೊಲಗೆಂಬ ದನಿ ಪುಟ್ಟಿದುದು ನಡುವೆ
ಕೆಲಸಾರು ಸಾರೆಂಬ ರವ ಪುಟ್ಟಿದುದು ನಡುವೆ
ಬಾಹೂರ ಬೊಮ್ಮಯ್ಯನೀ ಬಂದನೆಂದೆಂಬ
ಸಾಹಸಾಭರಣನೀ ಬಂದಪಂ ಸಾರೆಂಬ
ಉರವಣೆಯ ಪಡಿಯರರು ಮುಂದೆ ಬರುತಿರೆ ಕಂಡು
ಪಿರಿದು ರಭಸಂಗಳಾಗಲ್ಕೆ ಬೆಬ್ಬಳಿಗೊಂಡು
ಗಿಳಿ ತುಂಬಿ ಕೋಗಿಲೆಯ ಹಿಂಡು ಕೆದರಿದ ತೆರದೆ
ಕಳಹಂಸೆ ಕೇಕಿ ಕೋಕಾಳಿ ಹೆದರಿದ ತೆರದೆ
ತಾಳಧರರೊಂದೆಸೆಗೆಯಾವುಜಿಗರೊಂದೆಸೆಗೆ
ಮೇಳದವರೊಂದೆಸೆಗೆ ಮದ್ದಳಿಗರೊಂದೆಸೆಗೆ
ಕರಡೆಕಾರರ್ಕಹಳೆಕಾರರಂತೊಂದೆಸೆಗೆ

ನೆರೆದ ಸಂಗೀತದವರೆಲ್ಲರುಂ ಒಂದೆಸೆಗೆ
ಎಲ್ಲಾ ಜನಂ ಹೆದರಿ ಚಲ್ಲೆ ತಾನೆಯ್ತಂದು
ಸಲ್ಲೀಲೆಯಿಂದ ಶಂಕರನನಪ್ಪುತೆ ನಿಂದು
ಪಾದೋದಕ ಪ್ರಸಾದಂಗಳಂ ಕೈಕೊಂಡು
ಆದರಂ ಮಿಗೆ ಶೈವ ಸಂಪದಮನೊಳಕೊಂಡು
ಬರುತಲ್ಲಿ ಭೋಗಮಂಟಪದೊಳಗೆ ನಿಲುತಲ್ಲಿ
ಹರನ ಮುಂದಣ ಪಾತ್ರವೇಕಾಡದೆನಲಲ್ಲಿ
ಕೇಳುತಂ ಸುಖಪ್ರಿಯಂ ಸುಖವಳಿದು ನೆರೆನೊಂದು
ಆಳನಟ್ಟಳಲಿಂದೆ ಮುಳಿದು ನುಡಿದನದಂದು

ಎಲೆ ಭಕ್ತ ಶಿವಭಕ್ತಜನದ ಸುಖಮಂ ಕೆಡಿಸಿ
ನೆಲೆಗೊಂಡ ನೃತ್ಯಮಂ ನೋಳ್ಪ ಭರಮಂ ಬಿಡಿಸಿ
ಓಲಗದ ಸುಖಲತೆಯನುಡಿದು ಕುಡಿಯಂ ಕೊಯ್ದು
ಆಲೋಕಿಸುವ ಜನದ ಕಂಗೆ ಕಸವಂ ಹೊಯ್ದು
ಇನ್ನಾಡವೇಳ್ದಡಂ ಪಾತ್ರವೇಕಾಡುವುದು
ಮುನ್ನಿನೊಪ್ಪುವ ನೃತ್ಯವೇಕೆ ಹಸನಾದಪುದು
ಹೊಸೆದ ಹೂ ನವಪರಿಮಳಂಗೊಡಲ್ಬಲ್ಲುದೇ
ಬಿಸಿಲ ನೆಯ್ದಿಲು ವಿಕಾಸವನೆಯ್ದ, ಬಲ್ಲುದೆ
ಇಂತು ಸುಖಮಂ ಕೆಡಿಸಿ ನೀಂ ಮಾಡಿತೇನಿಲ್ಲಿ
ಕಂತುಹರನಲ್ಲಿ ಪಡೆದರ್ಥವೇನಂತಿಲ್ಲಿ
ಎನೆ ಕೇಳ್ದು ಬಾಹೂರ ಬೊಮ್ಮಿತಂದೆಗಳಂದು
ಮನದೊಳಗೆ ಸುಯ್ದು ಭಕ್ತನನೀಕ್ಷಿಸುತೆ ನಿಂದು
ದೇವ ಎನ್ನಂ ದೂರೆ ತೋರವೇಳ್ಪುದೆ ನಿಮಗೆ
ದೇವ ಬೆಸಸುವುದು ಬೆಸಸುವುದಂಜಲೇಕೆನಗೆ
ಎಂದಡೆ ಸುಖಪ್ರಿಯಂ ಬೊಮ್ಮಯ್ಯನಂ ನೋಡಿ
ನಿಂದು ಮಾತಾಡಿದಂ ಕಟಕಿಗಳನುರೆ ಕೂಡಿ
ಬಗೆನೆಚ್ಚಿ ಜೋಳಮಂ ನುಡಿಯಿಸಿದೆನೆಂದೆಂಬ
ಜಗದೀಶನಾನೆಯಂ ಗಂಡುಗೆಡಿಸಿದೆನೆಂಬ
ಗರ್ವವೆಮ್ಮೊಡನೇಕೆ ಬಾಹೂರ ಬೊಮ್ಮಯ್ಯ
ಉರ್ವಿ ನೀಂ ಮಾಡುವಡೆ ಪೇಳ್ದಪೆಂ ಕೇಳಯ್ಯ
ಎನುತೆ ತನ್ನಯ ಕೈಯೊಳರ್ತಿಯಿಂ ಪಿಡಿದಿರ್ದ
ಮನಸಿಜ ಕೈಯಿಂದೆ ಸೆಳೆದುಕೊಂಡಂತಿರ್ದ
ಇಕ್ಷುದಂಡಮನಲ್ಲಿ ಹರುಷದಿಂದಂ ನೋಡಿ

ತ್ರ್ಯಕ್ಷನಣುಗನೆನಿಪ್ಪ ಬೊಮ್ಮಯ್ಯನಂ ನೋಡಿ
ಈ ಕಬ್ಬನೀ ನಂದಿಗಾರೈಸಿಕೊಡೆ ಬಳಿಕ
ಈ ಕೇಳಿಕೆಯನಳಿದ ಮುಳಿಸು ತೀರ್ಗುಂ ಬಳಿಕ
ನಿನ್ನ ಸಾಮರ್ಥ್ಯಮಂ ನೋಡುವೆಂ ನಾನೆಂದು
ನಿನ್ನುಬ್ಬಟೆಯ ಭಕ್ತಿಯಂ ಕಾಣ್ಬೆ ನಾನೆಂದು
ಎನಲಿಕ್ಷುದಂಡಮಂ ಕಳೆದುಕೊಂಡಂ ಧೀರ
ಅನುಮಾನವಿಲ್ಲದಪ್ರತಿಮನುನ್ನತ ವೀರ
ಅಲ್ಲಿ ನಂದಿಯ ಮುಂದೆ ಕುಳ್ಳಿರುತ್ತಮ್ಮಮ್ಮ
ಬಲ್ಲಿದಂ ಭಾಷೆಗೊಡುತಿರ್ದನೊಲ್ದಮ್ಮಮ್ಮ
ಒಂದು ಕಬ್ಬೆಯ್ದುವುದೆ ನಂದೀಶದೇವಂಗೆ
ಮಂದರಂ ಕೈಲಾಸ ಮೇರುಸಮ ಕಾಯಂಗೆ
ಇಲ್ಲಿ ಕಲ್ಯಾಣದ ಬಹಿರ್ವನದೊಳಗೆ ಬೆಳೆದ
ಎಲ್ಲಾ ರಸಪ್ರಸರ ಮಧುರತೆಗಳಂ ತಳೆದ
ಕಬ್ಬನಿತುಮಂ ತರಿಸಲಾರೈಸಲಿಕ್ಕುವೆಂ
ಉರ್ಬಿ ಸಭೆ ಬೆರಗಾಗಲೆಮ್ಮೊಡನೆ ನಡೆಸುವೆಂ
ಈ ಊರ ಕೆರೆಯಗ್ಘಣಿಯನೊಲಿದು ಕುಡಿಯಿಸುವೆಂ
ದೇವಾಲಯಮುಮಂ ಪ್ರದಕ್ಷಣಂ ನಡೆಯಿಸುವೆಂ
ಮುಂತೆ ಹಳೆಯಂತೆ ಹರನಿಳಯದೊಳು ಕುಳ್ಳಿರಿಪೆ
ಇಂತಿದಂ ಜಗವೆಲ್ಲ ನೋಡುತಿರೆ ಮಾಡಿದಪೆ
ಮಾಡದಡೆ ಮರ್ತ್ಯದೊಳಗಿಹೆನೆಂಬ ಮಾತಿಲ್ಲ
ಮಾಡುವೆಂ ಮಾಡುವೆಂ ಮಾಡುವೆಂ ಪುಸಿಯಿಲ್ಲ
ಅವಧರಿಪುದೀಶ್ವರನ ಭಕ್ತಾಳಿ ಭಾಷೆಯಂ
ಶಿವನೊಲಿದು ಕರುಣಿಸುವ ಸಾಮರ್ಥ್ಯರಾಸಿಯಂ

ಎಂದು ನುಡಿವುತ್ತಮಿರೆ ತಮ ತಮಗೆ ಪರಿತಂದು
ಬಂದು ಪಟ್ಟಣದ ಪೊರವೊಳಲ ಬನದೊಳು ನಲಿದು
ಪೊಂಗೊಟ್ಟು ಕಬ್ಬನಿತುಮಂ ಕೇಣಿಯಂ ಕೊಂಡು
ಅಂಗವಿಸಿ ಅಡಕ ತೊಡಗಿತ್ತಲ್ಲಿ ಸಾಲ್ಗೊಂಡು
ಬರಲಲ್ಲಿ ಹರನ ರಾಜಾಂಗಣದೊಳಗೆ ನೋಡೆ
ತರದಿಂದೆ ಸಣ್ಣ ದಟ್ಟಿಗಳ ಹಾಸುತೆ ಕೂಡೆ
ತೊಳಗುವ ದಣಿಂಬಂಗಳಂ ಮೇಗೆ ಮಿಗೆ ಹಾಸಿ
ಅಳಿಗಳರಸುವ ಸುಪ್ರಸೂನ ಕುಲಮಂ ಹಾಸಿ
ಇಕ್ಷುದಂಡದ ಮೊದಲು ತುದಿಗಳಂ ಕಳೆವುತಂ

ಪ್ರಕ್ಷಾಲನಂ ಮಾಡಿ ತಂದು ತಂದಿಳಿಪುತಂ
ಇರಲೊಂದೆರಳ್ಬಟ್ಟದಂತೆ ಕಬ್ಬುಗಳೊಟ್ಟೆ
ಅರುಣೋದಯಂ ಬಂದು ಪೂರ್ವಾದ್ರಿಯಂ ಮುಟ್ಟೆ
ನಂದೀಶ್ವರಂ ಕಬ್ಬನಾರೈಸುವಂದಮಂ
ಇಂದು ನೋಡುವೆನಿಳೆಗೆ ಪೊಸತೆನಿಪ ಚಂದಮಂ
ಎಂಬಂತೆ ರವಿಯುದವಾಗುತಿರೆ ಬೆಳಗುತಂ
ಇಂಬಿನಿಂ ಬಾಹೂರ ಬೊಮ್ಮಯ್ಯನುಬ್ಬುತಂ
ತ್ರಿಪುರಾಂತಕಪ್ರಭುವಿನಲ್ಲಿ ನೇಮಂ ಮಾಡಿ
ವಿಪುಳತರಕಾರುಣ್ಯನಿಧಿ ಶಂಭುವಂ ನೋಡಿ
ದೇವ ನಿಶ್ಚಿಂತ ಸಜ್ಜನ ಜನಾಧೀನವೇ
ದೇವ ನಿಜಪದ ಭಕ್ತಿಯುಕ್ತರಾಧೀನನೇ
ದೇವ ಶಿವಯೋಗಿಗಳ ಮಾನಸ ಧ್ಯಾನವೇ
ದೇವ ಸದ್ಭಕ್ತ ಕುಲಹೃತ್ಕಮಲಭಾನುವೇ
ದೇವ ನಿರ್ಗುಣತತ್ವ ಸಗುಣಸ್ವರೂಪನೇ
ದೇವ ಭೀಕರತರ ಪಿನಾಕೈಕಚಾಪನೇ
ದೇವ ತ್ರಿಶೂಲ ಡಮರುಗವಿಮಲಹಸ್ತನೇ
ದೇವ ಭಕ್ತ್ಯಾವರಣ ಶರಣಕರಣಸ್ಥನೇ
ದೇವ ಪುಣ್ಯಪ್ರಕರಸೇವಿತ ಪದಾಬ್ಜನೇ
ದೇವ ಮೌಳಿನ್ಯಸ್ತ ವಿಸ್ತರಪದಾಬ್ಜನೇ
ದೇವ ವೃಷಭೇಂದ್ರಂಗೆ ಕರುಣೆಸೆಲೆ ಶಂಕರಾ
ದೇವ ನಂದೀಶಂಗೆ ಬೆಸಸೆಲೆ ಕೃಪಾಕರಾ
ಎಂದು ಬಿನ್ನೈಸುತಿರೆ ಶಿವನ ಸಿರಿಮುಡಿಯಿಂದ
ಒಂದರಲ್ಸರಿಯೆ ಕಾಣುತ್ತೆ ಸಂತಸದಿಂದೆ
ಪರಿತಂದು ಪಾದೋದಕ ಪ್ರಸಾದಂಗೊಂಡು
ತಿರುಗಿ ವೃಷಭೇಂದ್ರನಲ್ಲಿಗೆ ಬಂದು ಕೈಕೊಂಡು
ಇದೆ ರುದ್ರನಾದೇಶವವಧರಿಸು ನಂದೀಶ
ಇದೆ ಶಿವನ ಕಾರುಣ್ಯವೇಳಯ್ಯ ನಂದೀಶ
ಸಕಲಮಂ ರಕ್ಷಿಸುವ ಶಿವಧರ್ಮಮೂರ್ತಿಯೆ
ಮಕರಧ್ವಜಾರಿಯ ಮಹಾ ಪುಣ್ಯಕೀರ್ತಿಯೆ
ಶಂಕರನ ದೃಷ್ಟಿವಾರಿಯ ನೇಮದಚಲಿತನೆ
ಶಂಕರನ ತೊಡೆಮಡಕ್ಕಳವಡುವ ಸನ್ನುತನೆ
ಅಸಮನಯನನ ಸರ್ವಸಾಮರ್ಥ್ಯ ಸನ್ನಿಭನೆ
ಮುಸುಟೆಯ ಚವುಂಡರಾಯನ ಮನೋವಲ್ಲಭನೆ

ಬಾರಯ್ಯ ನಂದೀಶ ಬಾರಯ್ಯ ವೃಷಭೇಂದ್ರ
ಬಾರಯ್ಯ ಪುಣ್ಯಮಯ ಬಾರ ನಿರ್ಮಳಚಂದ್ರ
ಎಂಬ ನುಡಿ ವೃಷಭರಾಜನ ಚಿತ್ತದೊಳ್ಬೆರಸೆ
ತ್ರ್ಯಂಬಕಧ್ಯಾನಮುಮಮೊತ್ತರಿಸಿಯಂಕುರಿಸೆ
ಎಳಲ್ವ ಕಿವಿಗಳನೆತ್ತಿ ದನಿಯನಾರೈಯ್ವುತಂ
ಹೊಳೆವ ಶಿವಲಿಂಗಮಂ ನೋಡಿ ಹಾರೈಸುತಂ
ಕೆಲಕೊಮ್ಮೆ ಬಲಕೊಮ್ಮೆ ವದನಮಂ ತಿರುಪುತಂ
ನಲವಿಂದೆ ಶಂಕರಂಗಾನತನುಮಾಗುತಂ
ಸರಸರನೆ ಹಿಂಬರಕನೆಯ್ತಂದು ಬೇಗದಿಂ
ಪೊರಮಡಲ್ಕನುವಾಗುತಂ ನಿಂದು ರಾಗದಿಂ
ಇಳೆ ನೋಯದಂತೆ ಮುಂಗಾಲ್ಗಳಂ ಮಡಿದೂರಿ
ಹೊಳೆವಪರ ಭಾಗಮಂ ಸಂಗನತ್ತಲು ತೋರಿ
ಬಾಗಿಲಂ ಕಳಿದು ಬೆಳೆದಂ ನೋಡಲಮ್ಮಮ್ಮ
ಮೇಗೆ ತಾರಾಪಥಂ ಮೀರುತಿರಲಮ್ಮಮ್ಮ
ಹೊಳೆವ ಚಂದ್ರಿಕೆಗೆ ಕಿವಿಕಾಲ್ಮೊಗಂ ಮೂಡಿತೋ
ಕಲಧೌತಗಿರಿ ಬಸವನಂದದೊಳು ಮೂಡಿತೋ
ಸಕಲ ಲೋಕದ ಸುಕೃತನಿಧಿ ಸೀಮೆಗೊಂಡುದೊ
ಅಕಳಂಕ ಶಿವಕೀರ್ತಿ ಮೂರ್ತಿಯಂ ತಳೆದುದೊ
ಎಂಬಂತೆ ನಿಂದ ನಂದಿಯ ಮೂರ್ತಿಯಂ ಕಂಡು
ಅಂಬರವದಿಂಬಲ್ಲೆನಿಪ್ಪ ರೂಪಂ ಕಂಡು
ಬಾಹೂರ ಬೊಮ್ಮಯ್ಯನಕ್ಕರಿಂ ಮೈಯಿಕ್ಕಿ
ಸಾಹಸಾಭರಣನಾನಂದದಿಂ ಮೈಯಿಕ್ಕಿ
ಅತಿಶಯದ ಘನಮೂರ್ತಿಯಂ ತಳೆದಡೆಂತಯ್ಯ
ಶ್ರುತಿತತಿಗಳೆಯ್ದದಂತಿರ್ದಡೆನಗೆಂತಯ್ಯ
ಎನ್ನ ಕಣ್ಣುಂ ಮನಂ ನೋಡಿ ನೆನೆವಂದದಿಂ
ಎನ್ನ ಚಿತ್ತಂ ಧರಿಯಿಸಿರಲಾರ್ಪ ಚಂದದಿಂ
ಕರುಣಿಸಲು ವೇಳ್ಪುದೆಲೆ ಸಕಲ ಧರ್ಮಾರವಣ
ಹರನ ಚರಣಾಲೋಕನ ಪ್ರೇಮತರಕರಣ
ಎನಲೆಲ್ಲರಾಲೋಕಿಪ ಪ್ರಕಾರದೊಳಿರಲು
ಘನಮೂರ್ತಿಯಂ ಮಾಣ್ದು ಸೂಕ್ಷ್ಮತನುವಿನೊಳಿರಲು
ಕಂಡು ಬಾಹೂರ ಬೊಮ್ಮಯ್ಯನಾಹಾ ಎಂದು
ತಂಡ ತಂಡದ ಪುಳಕದಿಂಡೆ ಮೂಡಲು ಬಂದು
ವರ ಚರಣಮಂ ಪತ್ತಿ ಹಾರೈಪ ಶರಣರಂ

ಖುರಮುಖವನಪ್ಪಿ ಪುಳಕಿಸುತಿಪ್ಪ ಶರಣರಂ
ವಾಲದಂಡದ ನೆಳಲೊಳಣಿಯರದೊಳಿರ್ಪರಂ
ಲಾಲಾಜಲಂಗಳಿಂ ನಾಂದು ಸುಖಮಿರ್ಪರಂ
ಕರ್ಣಪಲ್ಲವದ ನೆಳಲೊಳು ಕುಣಿವುತಿರ್ಪರಂ
ಪೂರ್ಣ ಮಧುರಶ್ವಾಸದಿಂ ತಣಿವುತಿರ್ಪರಂ
ನಿರ್ಮಲ ಕಕುತ್ಸ್ಥಾನಮಂ ನೋಡಿ ಪೊಗಳ್ವರಂ
ಕೂರ್ಮೆಯಿಂ ವದನಮಂ ಮುಂಡಾಡುತಿರ್ಪರಂ
ನೋಡೆ ಭಕ್ತಾಳಿ[ಯಿಂ] ಹೇರಿ ನಿಂದಂತಿರಲು
ಕೂಡೆ ಶರಣರ್ಕಾತ ಕಲ್ಪಕುಜದಂತಿರಲು
ಕುಣಿವುತಂ ಬಾಹೂರ ಬೊಮ್ಮಯ್ಯನೆಯ್ತಂದು
ತ್ರಿಣಯನನ ವಾಹನಕೆ ಮೈಯಿಕ್ಕುತಂ ನಿಂದು
ದೇವ ಆರೈಸುವುದು ಇಕ್ಷುದಂಡಂಗಳಂ
ದೇವ ಕೈಕೊಂಬುದೀ ಸವಿಯ ತಂಡಂಗಳಂ
ಎನಲಲ್ಲಿ ನಂದೀಶ್ವರಂ ಸುಮ್ಮನಿರುತಿರಲು
ಮನದೊಳಗೆ ಶಿವಲಿಂಗಮಂ ಭಾವಿಸುತ್ತಿರಲು
ಅರಿದೆನರಿದೆಂ ದೇವ ನಿನ್ನ ವೃತ್ತಾಂತಮಂ
ಅರಿದೆನಭವಪ್ರಸಾದಾಸಕ್ತ ಚಿತ್ತಮಂ
ಎನುತಿಕ್ಷುವೆಲ್ಲವಂ ಲಿಂಗಾರ್ಪಿತಂ ಮಾಡೆ
ಜನವೆಲ್ಲ ಕೌತುಕವಿದೆಂದು ಭರದಿಂ ನೋಡೆ
ಬಳಿಕ ಕೈಕೊಂಡನಾ ನೆರೆದ ಕಬ್ಬೆಲ್ಲವಂ
ಇಳೆ ಬಣ್ಣಿಸುತ್ತಮಿರೆ ಇಕ್ಷುಗಳನೆಲ್ಲವಂ
ಉಶ್ವಾಸದೊಲು ಮಾಯವಾಯ್ತು ಕಬ್ಬಿನ ರಾಸಿ
ನಿಶ್ವಾಸದೊಳು ತೆರಳುತಿರ್ದುದಾ ವಾರಾಸಿ

ಆಗಳಾ ಭಕ್ತರೆಲ್ಲರು ಕುಣಿದು ಕೊಂಡಾಡೆ
ಮೇಗೆ ದೇವರ್ಕಳೆಲ್ಲಂ ಕೂಡಿ ನಲಿದಾಡೆ
ದೇವ ಪಾಯವಧಾರು ಧರೆ ಬರ್ದುಂಕುವ ತೆರದೆ
ದೇವ ಉಪ್ಪರ ಉಡುಪ್ರತತಿ ಉದಿರದ ತೆರದೆ
ಎಂದು ಬೋಳೈಸುತಂ ಮುಂದೆ ಭಕ್ತಂ ನಡೆಯೆ
ಹಿಂದೆ ಬಸವಂ ಭಕ್ತನೊಡನೆ ನಲವಿಂ ನಡೆಯೆ
ಬಸವನೊಡನೊಡನೆ ಶಿವಭಕ್ತಸಂತತಿ ನಡೆಯೆ
ಎಸೆವ ಭಕ್ತಕ ಹಿಂದೆ ಪುರಜನಂಗಳು ನಡೆಯೆ

ಸುರರುತ್ಸವಂಬಡೆಯೆ ಪರದೈವದೆದೆಯೊಡೆಯೆ
ಪರಸಮಯಿಗಳ್ಕೆಡೆಯೆ ಶರಣರ್ ಸುಖಂಬಡೆಯೆ
ನಡೆದನಣುಗಂ ತಟಾಕದ ತಡಿಗೆ ಒಲುಮೆಯಿಂ
ಮೃಡವಾಹನಂ ಬಂದು ಮೊಗವಿಕ್ಕೆ ನಲ್ಮೆಯಿಂ
ದೇವ ನೀಂ ಕೈಕೊಂಬಡಂಬುಧಿಗಳೆಯ್ದುವವೆ
ದೇವ ನಿಮ್ಮುಸುರನಾನುವ ದೇವಕುಲಮೊಳವೆ
ಕೆರೆಯುಳಿದು ಜಲವಳಿವ ತೆರದಿಂದೆ ಕೈಕೊಂಡು
ಮೆರೆವುದೆನ್ನಯ ಭಾಷೆಯಂ ಸ್ವಾಮಿ ಬಗೆಗೊಂಡು
ಎನುತವಿರಲಘ್ಘಣಿಯನಾರೈಸಿ ತಿರುಗಿದಂ
ಮನಸಿಜಾರಿಯ ಭಕ್ತನೊಡನೊಡನೆ ಒದಗಿದಂ
ಬಂದು ಶಿವನಿಳಯಮಂ ಬಲವರಿಸಿ ಬರಲಲ್ಲಿ
ತಂದು ಶಿವ ರಂಗಮಂಟಪದೊಳಿರಿಸುತ್ತಲ್ಲಿ
ದೇವ ಮೆರೆಯಿಸಿತಕ್ಕೆ ಕುರುಹುವೇಳ್ವುದು ತಂದೆ
ದೇವ ಸುಮ್ಮುಖವನೋಸರಿಸಿಪ್ಪುದೆಲೆ ತಂದೆ
ಎನುತಡ್ಡವಾಗಿರಿಸೆ ಬಾಹೂರ ಬೊಮ್ಮಯ್ಯ
ಅನಘನಪ್ರತಿಮನಾ ಬಾಹೂರ ಬೊಮ್ಮಯ್ಯ
ಆಗಳು ಸುಖಪ್ರಿಯನ ವದನಮಂ ನೆರೆ ನೋಡೆ
ರಾಗದಿಂದಂ ಭಕ್ತಸಂಕುಳಂ ಕೊಂಡಾಡೆ
ಪೆರ್ಮಾಡಿರಾಯನತಿ ಕೌತುಕಂಬಡುತಮಿರೆ
ಕೂರ್ಮೆಯಿಂ ಶರಣತತಿ ಗುಡಿಗಟ್ಟಿ ಕುಣಿವುತಿರೆ

ಪೂಮಳೆಗಳೊಳಗೆ ದುಂದುಭಿ ಕುಳಧ್ವನಿಯೊಳಗೆ
ಏಮಾತೊ ಬಿರಿದೆತ್ತಿ ಕರೆವ ಕಹಳೆಗಳೊಳಗೆ
ಬಂದ ಪುಷ್ಪಕವನಾನಂದದಿಂದೇರುತಂ
ಇಂದುಧರ ಶರಣೆನುತೆ ಗಗನದೊಳು ಮೀರುತಂ
ಬಂದು ನಂದೀಶ್ವರನ ಬಾಗಿಲೊಳು ನಲ್ಮೆಯಿಂ
ನಿಂದು ಪುಷ್ಪಕವನಿಳಿದಂತಲ್ಲಿ ಕೂರ್ಮೆಯಿಂ
ಸದಮಳ ಶಶಿಪ್ರಭೆಯನಿಳಿಕೆಯ್ವ ಚರಣಕ್ಕೆ
ಉದಯಾರ್ಕಬಿಂಬಮಂ ಕರೆವ ಪದಪದ್ಮಕ್ಕೆ
ಹರಿಯರಸಿ ಕಾಣಲಾರದ ಪಾದಯುಗಳಕ್ಕೆ
ಶರಣತತಿ ಪರುಶನಂ ಮಾಳ್ಪಂಘ್ರಿಯುಗಳಕ್ಕೆ
ಮುನಿಗಳು ಮನಂ ಬಯಸಿ ಬಾಯೊರೆವ ಚರಣಕ್ಕೆ

ಮನುಗಳಂತರ್ಧಾನದೊಳು ನೆನೆವ ಚರಣಕ್ಕೆ
ನಿತ್ಯನ ನಿರಾಶ್ರಯನ ಅನುಪಮನ ಪಾದಕ್ಕೆ
ಅತ್ಯತಿಷ್ಠದ್ದಶಾಂಗುಲನ ಪದಪದ್ಮಕ್ಕೆ
ಮೆಯ್ಯಿಕ್ಕಿ ಸೈಗೆಡೆಯೆ ಬಾಹೂರ ಬೊಮ್ಮಯ್ಯ
ಒಯ್ಯನೆತ್ತಿದನು ಹರಿಕಮಲಜರ ಮುತ್ತಯ್ಯ
ಎತ್ತಿ ಮೂರ್ಧ್ನಿಘ್ರಾಣಮಂ ಮಾಡಿ ಶಂಕರಂ
ಮತ್ತಲ್ಲಿ ನಂದೀಶನಂ ನೋಡಿ ಶಶಿಧರಂ
ಕೇಳು ನಂದೀಶ ಇಂತಪ್ಪ ಭಕ್ತರುಮುಂಟೆ
ಜೋಳಮಂ ಧರಣಿಯೊಳಗೋಯೆನಿಸಿದವರುಂಟೆ
ಮದದಾನೆಯಂ ನಿಲಿಸಿ ಕೊಂದು ನೋಡಿದರುಂಟೆ
ಮದವಳಿಯೆ ಮತ್ತೆ ಹರಣಂಗೊಟ್ಟರಿಂತುಂಟೆ
ಬಸವನಂ ಕಬ್ಬಿಂದೆ ತುಷ್ಟಿವಡಿಸಿದರುಂಟೆ
ಎಸೆಯಲಘ್ಘವಣಿಯಿಂದೆ ಬಲವರಿಸಿದವರುಂಟೆ
ಭಾಪುರೇ ಮದ್ಭಕ್ತ ಬಾಹೂರ ಬೊಮ್ಮಯ್ಯ
ಭಾಪು ಮಝುಬಾಪೂರೇ ಬಾಹೂರ ಬೊಮ್ಮಯ್ಯ
ಎಂದು ಕೊಂಡಾಡುತಂ ಗಣಪದವನೊಲಿದಿತ್ತು
ಮುಂದಿರ್ದ ಪಾರ್ವತಿಗೆ ತೋರಿ ಸುಖಮಂ ಪೊತ್ತು
ನತಜನಸುಧಾವರುಷ ಹರುಷಮಯನೊಪ್ಪಿದಂ
ಶ್ರುತಿಮಸ್ತಕನ್ಯಸ್ತ ಚರಣತಳನೊಪ್ಪಿದಂ
ಜಲಶಯನ ನಯನ ಮಂಡಿತಪಾದನೊಪ್ಪಿದಂ
ಜಲಜಭವ ಪಂಚಮ ಶಿರೋಹಸ್ತನೊಪ್ಪಿದಂ
ಸ್ಮರಕಾಲಪುರ ಜಲಂಧರ ಮಥನನೊಪ್ಪಿದಂ
ಪರಮಗುರು ಹಂಪೆಯ ವಿರೂಪಾಕ್ಷನೊಪ್ಪಿದಂ ೨೭೪–೪೦೬

ಬಾಹೂರ ಬೊಮ್ಮಿತಂದೆಯ
ನಾಹಾ ನೆರೆ ಮೆರೆದ ಶಂಭು ನಿಜಭಕ್ತಿಯನು ।
ತ್ಸಾಹದೊಳೆಮಗೀಗೆ ನತ
ವ್ಯೂಹ ದಯಾವಾರ್ಧಿ ಹಂಪೆಯ ವಿರೂಪಾಕ್ಷಂ ॥

❖❖

# ೪. ಮಾರುಡಿಗೆ ನಾಚಿತಂದೆಯ ರಗಳೆ

## ಸ್ಥಲ ೧

ಪುರಹರನಿಂದುಶೇಖರನನಂಗಹರಂ ಗಿರಿಜಾವರಂ ಸದಾ
ವರಮುಖನುಗ್ರನಂತಕಹರಂ ಕರುಣಾಕರನೀಶ್ವರಂ ಮಹೇ
ಶ್ವರನನಘಂ ಕಪಾಲಿ ಶರಣಾಳಿಯೊಳೊಪ್ಪುವ ನಾಚಿತಂದೆಯಂ
ಧರಣಿಗೆ ಸಂತತಂ ಮೆರೆದನಿಂಪಿನ ಹೆಂಪಿನ ಹಂಪೆಯೀಶ್ವರಂ॥

ಉತ್ತರದಿಶಾಭಾಗದೊಳಗೊಂದು ಪಟ್ಟಣಂ
ಉತ್ತಮರನೆಂದುವರಿಯದೆ ಎಸೆವ ಪಟ್ಟಣಂ
ಮದದಿಂದಲಿಪ್ಪುದಾ ಮಾರುಡಿಗೆಯೆಂಬ ಪುರ
ಅದರ ಪಡುವಲು ಹತ್ತು ಯೋಜನದೊಳೊಂದು ಪುರ
ಇಪ್ಪುದಾ ಪುರದ ನಾಮಂ ಕೇಳು ಶಿವಪುರಂ
ಸರ್ಪಭೂಷಣನ ಶರಣಾಳಿಗೆ ಪರಸ್ಪರಂ
ಆ ಪುರದೊಳಿರ್ಪನೊರ್ವಂ ಭಕ್ತನುಜ್ವಳಂ
ಭೂಪರಂ ಭವಿಗಳಂ ಲೆಕ್ಕಿಸದ ನಿಶ್ಚಳಂ
ತಿಲಕಾಯಕಮನಲ್ಲಿ ನಡೆಯಿಪಂ ಸಂತತಂ
ತಿಲದನಿತು ಸಂಸಾರಮಂ ಹೊದ್ದದಚಲಿತಂ
ನಾಚಿತಂದೆಗಳೆಂಬ ನಾಮಮಂ ಕೈಕೊಂಡು
ಭೂಚರರ ಶೀಲಮಂ ಸೋಂಕದೆ ಮನಂಗೊಂಡು
ಮಲ್ಲಿಕಾರ್ಜುನನನರ್ಚಿಪ ವೀರವಿನ್ನೊಳವೆ
ಎಲ್ಲ ತೆರದಿಂ ಬಯ[ಸಿ] ಬಣ್ಣಿಸುವಡೆನ್ನಳವೆ

ಉದಯ ಸಮಯದೊಳು ಮುಖಪ್ರಕ್ಷಾಲನಂ ಮಾಡಿ
ಸದಮಲಂ ಭಸಿತವಿಟ್ಟಾನಂದದಿಂ ಕೂಡಿ

ಗಳಗಳನೆ ದೇವಾರ್ಚನ ಸ್ಥಲಕ್ಕೈತಂದು
ಘುಳು ಘುಳಿಸಿ ಕುಳ್ಳಿರ್ದು ಲಿಂಗದರ್ಚನೆಗೆಂದು
ಕಕ್ಷೈದೊಳಗೆಸೆದಿರ್ದ ಗುರು ಮಲ್ಲಿನಾಥನಂ
ತ್ರ್ಯಕ್ಷನಂ ವೀರಭದ್ರಾದಿ ಗಣಯೂಥನಂ
ಗರಳಧರನಂ ಗಜಾಜಿನ ಭಸಿತಕಾಯನಂ
ಶರಣರಿಚ್ಛೆಯ ಸಲಿಸುತಿರ್ಪ ನಿರ್ಮಾಯನಂ
ಪುರಕಾಲ ಘನವಿಪಿನ ಪವನಸಖರೂಪಂ
ಸ್ಮರಕುಂಭಿ ಕುಂಭ ನಿರ್ಭಿನ್ನ ಪಂಚಾಸ್ಯನಂ
ವೀರದಿಂ ನೇಹದಿಂ ಬಲ್ಪಿನಿಂದಂ ಕರೆಯೆ
ಆರುತ್ತ ಬೊಬ್ಬಿಡುತ್ತುತ್ಸಾಹದಿಂ ಕರೆಯೆ
ಇರಲಮ್ಮದಲ್ಲಿ ಕರತಳಕೆ ಬಂದಭವನಂ
ಸುರನಾಥನಾಥನಂ ವಿದ್ಯಗಣಯೂಥನಂ
ನೋಡಿ ಪುಳಕಿಸಿ ಮಜ್ಜನಕ್ಕೆರೆದು ಮನಗೊಂಡು
ನಾಡೆಯಗ್ಗಿಸುತೆ ವೀರಾಳಾಪಮಂ ಕೊಂಡು
ಇಂಧುದರನಂ ಮಲ್ಲಿನಾಥನಂ ಪೊಗಳುತಂ
ಮಂದೈಪ ಚಂದನದ ಪರಿಮಳವನೀವುತಂ
ರಕ್ತಕರವೀರದಿಂ ದಾಸಣದಿನರ್ಚಿಸುತೆ
ಯುಕ್ತಿ ಪೊದ್ದದ ವೀರಭಕ್ತಿಯಿಂದಗ್ಗಿಸುತೆ
ಚಾಮರವನಿಕ್ಕುತ್ತೆ ಧೂಪಮಂ ಬೀಸುತಂ
ಆ ಮಹಾಮಹಿಮಂಗೆ ಆರತಿಯನೆತ್ತುತಂ
ದೇವಾನ್ನ ದಿವ್ಯಾನ್ನ ಅಮೃತಾನ್ನವನಿತ್ತು
ದೇವಂಗೆ ಕರ್ಪುರದ ವೀಳೆಯಂಗಳನಿತ್ತು
ದರ್ಪಣಮನಿತ್ತು ಸೀಗುರಿ ಚಾಮರವ ಬೀಸಿ
ಸರ್ಪಭೂಷಣನತ್ತ ಕರಣಮಂ ಕೈಗೊಳಿಸಿ
ಆರಾಧಿಸುತ್ತೊಪ್ಪುವಸಿಫಳಕಮಂ ಕೊಂಡು
ವೀರನವಧಾರೆನುತ್ತಕ್ಕರಿಂ ಕೈಕೊಂಡು
ಕೀಲಿಸಿದ ಗೆಜ್ಜೆಗಳು ಘಲಘಲಕು ಘಲಕೆನಲು
ಮೇಲೆ ಶಿವಘಂಟೆಗಳು ಡಂ ಢಣಲ್ ಢಣಕೆನಲು
ಉರವಣಿಸಿ ಥಟ ಥಟ ಭುಜಾಸ್ಫಾಳನಂಗೊಟ್ಟು
ತಿರುಗಿ ತರಹರಿಸಿ ಫಿರ್ರೆನಿಸಿ ಲಂಘನೆಗೊಟ್ಟು
ಬಾಳೆನ್ನ ಗುರುವೆ ಅವಧಾರು ಅವಧಾರೆಂದು
ಬಾಳೆನ್ನ ಮಲ್ಲಯ್ಯ ಚಿತ್ತೈಸು ನೀನೆಂದು

ಇಂತು ಬತ್ತೀಸಾಯುಧದಿ ಶ್ರವಂದೋರುತಂ
ಮುಂತೆ ಶಿವಲಿಂಗಕ್ಕೆ ಮೈಯಿಕ್ಕಿ ಹೆಚ್ಚುತಂ
ಅಂಬೇ ಮಹಾಲಿಂಗ ಶರಣಾಗು ಶರಣಾಗು
ಶಂಭುವೇ ಕರುಣದಿಂ ಶರಣಾಗು ಶರಣಾಗು
ಎಂದು ಬೆರಲಂ ಕಚ್ಚಿ ಪಲುಗಿರಿದು ಮೈಗರೆದು
ನಿಂದು ಕಾರ್ಪಣ್ಯಮಂ ತೋರಿ ಸುಖದೊಳ್ ನೆಗೆದು
ಲಿಂಗಪ್ರಸಾದಮಂ ಸಾದರದಿ ಕೈಕೊಂಡು
ಅಂಗೈಸಿ ಹರನ ಕರುಣಮನೊಚ್ಚತಂಗೊಂಡು
ಸುಖದಿಂದಲಿರ್ಪನಾ ನಾಚಿತಂದೆಗಳಲ್ಲಿ
ನಿಖಿಳ ಭೋಗಮನೀಶ್ವರಂಗರ್ಪಿಸುತ್ತಲ್ಲಿ
ಅವರ ನೇಮಂಗಳಂ ಬಣ್ಣಿಸುವಡೆನಗರಿದು
ಶಿವನೆ ಬಲ್ಲಂ ಮನುಜರಳವಲ್ಲವತಿ ಪಿರಿದು
ಲಿಂಗಪ್ರಸಾದವದು ಮೀರೆ ತಾಂ ಮೀರುವಂ
ಲಿಂಗಕ್ಕೆ ಕೈಲಾಸದೊಳು ಛಲಂದೋರುವಂ
ಏಕಪತ್ನೀವ್ರತ ಪರಾಂಗನೆಯರಂ ನೋಡ
ಏಕನಿಷ್ಠಂ ಚಾಗಿ ಪರದೈವಮಂ ನೋಡ
ಒಮ್ಮೆ ಸೀತಡೆ ದೇಹಗುಣವೆಂದು ಸೈರಿಪಂ
ಇಮ್ಮೆ ಸೀತಡೆ ತನ್ನ ಶಿವನೊಡನೆ ಸೇರಿಪಂ
ಮಿಗೆ ಪೊಸತು ಸರ್ವರೋಗಕ್ಕೆ ನೆರೆ ಕಟ್ಟಿದೊರೆ
ಜಗದೊಳಗೆ ಕೌತುಕ ಚರಿತ್ರವೇನೆಂಬೆನುರೆ
ತುರಿಸಬಾರದು ಸುಟ್ಟಿಸಲು ಬಾರದಮ್ಮಮ್ಮ
ನೆರೆ ಕಲಿಯ ನೇಮವಘಟಿತ ಘಟಿತವಮ್ಮಮ್ಮ
ಮಾರಿ ಮಸಣಿಗಳಲ್ಲಿ ಸುಳಿಯಲ್ಲಮ್ಮವು ನೋಡ
ವೀರಬೊಮ್ಮುಗ ಗಿಮ್ಮುಗನ ಮಾತು ತೆಗೆ ಬೇಡ
ಲೆಕ್ಕಿಸಂ ಮರೆದು ನೆನೆಯಂ ಕಿರಿಯ ದೇವರಂ
ಮುಕ್ಕಣ್ಣನಲ್ಲದೊಲ್ಲಂ ಹುಟ್ಟಿ ಸಾವರಂ
ನಿಸ್ಸೀಮನಪ್ರತಿಮನತುಳಬಳನತಿ ಮಾನಿ
ನಿಶ್ಶಬ್ದನತ್ಯುಗ್ರನಧಿಕನೀಶಧ್ಯಾನಿ
ಇಂತೆನಿಪ ಶೈವಕೀರ್ತಿಗೆ ತಾನೆ ನೆಲೆಯಾಗಿ
ಸಂತತಂ ನಾಚಿತಂದೆಗಳಿರಲು ಸುಖಿಯಾಗಿ

ಒಂದು ದೆವಸಂ ಮುಂ[ದು] ಜಾವದೊಳು ಶಂಕರಂ
ಬಂದನೊಲವಿಂ ಕನಸಿನೊಳು ಚಂದ್ರಶೇಖರಂ

ಮಾಸಿರ್ದ ಕಿರುಜಡೆಯ ಕದಡೆದ್ದ ಸುರನದಿಯ
ದೂಸರಂಗೊಂಡು ಕಂದಿದ ಕಿರಿಯ ಶಶಿಕಳೆಯ
ಸೊಪ್ಪಾದ ಕುಂಡಲದ ನಸು ಕರಗಿದಾನನದ
ಇಪ್ಪಾರಿ ಬಣ್ಣವೋಡಿರ್ದಧರ ಮಂಡಲದ
ಬಾಡಿದುರಗಾಭರಣದೊಳಸುಗಿದ ಪುಲಿದೊವಲ
ನೋಡ ಗಜಚರ್ಮವುಂ ಬಳಲಿ ಜಾರುವ ಹೆಗಲ
ಸಿಂಗರಂ ದುಮ್ಮನವನರುಪುತಿರೆ ನಡೆತಂದು
ಅಂಗಲತೆ ಸುಮ್ಮಾನವುಡುಗಿ ನಿಲೆ ನಡೆತಂದು
ನಾಚಿತಂದೆಯ ಮನದ ಕೊನೆಯ ಮೊನೆಯೊಳು ನಿಂದು
ಚಾಚಿದಂ ಸೆರೆ ಬಿಗಿವುತಲ್ಲಿ ನುಡಿಗಳನಂದು

ಸುಮ್ಮನೇಕಿರ್ದಪ್ಪೆ ಎನ್ನಣುಗ ನಾಚಯ್ಯ
ನಮ್ಮ ಭಕ್ತಂ ನೊಂದನಗ್ಗಳಂ ಕೇಳಯ್ಯ
ಎಲೆ ಮಗನೆ ಮಾರುಡಿಗೆಯೆಂಬ ಪಟ್ಟಣದಲ್ಲಿ
ಛಲಭಕ್ತನೊಬ್ಬನರಿಯದೆ ಪೊಕ್ಕಡಂತಲ್ಲಿ
ಜೈನರೆಲ್ಲಂ ಬಡಿದರ್ರೈ ಎನ್ನ ಭಕ್ತನಂ
ಮಾನನಿಧಿಯಭಿಮಾನಮಂ ಕೊಂಡರಾತನಂ
ಭಕ್ತನೊಡನೊಡನೆ ಬಡಿವಡೆದೆ ನಾನೆಲೆ ಮಗನೆ
ಭಕ್ತನೊಡನೊಡನೆ ನೊಂದೆಂ ನೊಂದೆನೆಲೆ ಮಗನೆ
ನೋಡಯ್ಯ ಮಗನೆ ಎನ್ನಯ ಮೈಯ ಬಾಸುಳಂ
ನೋಡಯ್ಯ ಬಲುಪಳಿದು ನೆರೆ ನೊಂದೆನಗ್ಗಳಂ
ಭಕ್ತನ ನಿರೋಧದಿಂ ಮೈನೊಂದುದೈ ಎನ್ನ
ಭಕ್ತನಳಲಗ್ಗಳಂ ನೋಯಿಸಿತ್ತೈ ಎನ್ನ
ಭಕ್ತರಿಂತಾಗೆ ಸೈರಿಸುವರೇ ನಾಚಯ್ಯ
ಭಕ್ತರ ನಿರೋಧಮಂ ತ್ವರಿತದಿಂ ತೀರ್ಚಯ್ಯ
ಎನಗೆನ್ನ ಭಕ್ತರೇ ಬಂಧುಬಳಗಂ ನೋಡ
ಎನಗೆನ್ನ ಭಕ್ತರೇ ಆಪ್ತವರ್ಗಂ ನೋಡ
ಎನ್ನ ಕಣ್ಣೆನ್ನ ಮತಿ ಎನ್ನ ಗತಿ ಭಕ್ತರೇ
ಎನ್ನಾಯುವುಂ ಎನ್ನ ಪುಣ್ಯಫಲ ಭಕ್ತರೇ
ಅವರ ನೋವೆನ್ನನೋವವರ ಸುಖವೆನ್ನ ಸುಖ
ಅವರ ಮನವೆನ್ನ ಮನವವರ ಮುಖವೆನ್ನ ಮುಖ
ಏಳಯ್ಯ ವೀರಭಕ್ತಿಯ ವೀರ ನಾಚಯ್ಯ
ಬಾಳಯ್ಯ ಭಕ್ತಿರಸನಿಧಿಯೊಳಗೆ ನಾಚಯ್ಯ

ಮಾರುಡಿಗೆಯಂ ಹೊಕ್ಕು ಸುಟ್ಟು ಸೂರೆಯ ಹೊಯ್ದು
ವೀರ ಶಿವಲಿಂಗಮಂ ನಿಲಿಸಯ್ಯ ನೀನೊಲಿದು
ಅಂದು ನೊಂದಾ ಭಕ್ತನೆನ್ನೊಡನೆ ನಡೆತಂದು
ಇಂದು ನಿಮ್ಮೂರ ಕೆರೆಯೇರಿಯೊಳಗಂ [ಬಂ]ದು
ವಟವೃಕ್ಷದಲ್ಲಿ ಕುಳ್ಳಿರ್ದಯ್ದನೆಲೆ ಮಗನೆ
ದಿಟದಿಂದಲೆನ್ನನರುಸುತ್ತೈದನೆಲೆ ಮಗನೆ
ನಾನಾಗಿ ನೀ ಹೋಗಿ ದುಃಖಮಂ ಮಾಣಿಸೈ
ಏನಾಗಿಯುಂ ಭಕ್ತಿಯಾಯತಿಯ ಕಾಣಿಸೈ
ಎಂದು ಬೆಸಸುತ್ತೆ ಬಿಜಯಂಗೈಯ್ಯೆ ಶಂಕರಂ
ಸಂದಣಿಸಿತರುಣೋದಯಂ ತೋರುತತಿಕರಂ
ನಿದ್ರೆಯಿಂದೆದ್ದು ಭಯದಿಂ ನಾಚಿತಂದೆಗಳು
ರುದ್ರನರುಪಿದ ಕನಸನೆಣಿಸುತಂ ಚಿಂತೆಯೊಳು
ಮನಮನಡರುತ್ತಮಿರೆ ಮುಖಮಜ್ಜನಕ್ಕೆರೆದು
ತನಿನೇಹದಿಂದೆ ಹೊಸ ಹೊಸ ಪೂಜೆಯಂ ಮೆರೆದು
ನಿತ್ಯ ನೇಮಮಂ ಮಾಡಿ ಸುಕೃತ ಸಂಪದನಾಗಿ
ಸತ್ಯಪ್ರಸಾದ ತಾಂಬೂಲಸುಖಮುಖನಾಗಿ
ತನ್ನ ಶಿವಸೋದರಂಗಳನೆಲ್ಲರಂ ಬರಿಸಿ
ಮನ್ನಿಸುತ್ತವರವರನನುವರಿದು ಕುಳ್ಳಿರಿಸಿ
ಹೋದಿರುಳು ಕಂಡ ಕನಸಂ ನೆನೆದು ಪೇಳುತಂ
ಆದರಂ ಮಿಕ್ಕು ತನ್ನೊಳಗೆ ಮಾತಾಡುತಂ
ಶಿವನಾವುದಂ ಮಾಳ್ಪನಂತದಕ್ಕರಿದುಂಟೆ
ಶಿವನೆಂತು ಮಾಡಿದಪನೆಂದರಿವರಿನ್ನುಂಟೆ
ನಡೆಯಿರೇ ಹರನರುಪಿದಾತನಂ ನೋಡುವಂ
ನಡೆಯಿರಲ್ಲಿಗೆ ಬಳಿಕ ತಕ್ಕುದಂ ಮಾಡುವಂ

ಎನುತಲ್ಲಿ ವೀರಶರಣರ್ನೆರೆದು ಪೊರಮಟ್ಟು
ಮನದೊಳಗೆ ಕೌತುಕದ ಕಾರ್ಯಮಂ ಮುಂತಿಟ್ಟು
ಬರೆ ಕೇಳಲಾದುದಾ ಶೋಕವೇರಿಯ ಮೇಲೆ
ಶರಣನನುತಾಪದಳಲುಂ ಪುಟ್ಟಿದುದು ಮೇಲೆ
ಅಯ್ಯೋ ಮಹಾಶಿವನೆ ನೀನಿಂತು ಮಾಳ್ಪರೆ
ಅಯ್ಯೋ ಮಹಾಶಿವನೆ ಮುಳಿಸಿಂದೆ ಮಾಳ್ಪರೆ
ಅಭಿಮಾನದೊಡೆಯನೇ ಸುಮ್ಮನೇಕಿರ್ದಪೈ
ಅಭವಾ ಕೃಪಾಕರಾ ಸುಮ್ಮನೇಕಿರ್ದಪೈ

ಭಕ್ತರಭಿಮಾನವದು ನಿನ್ನದಲ್ಲಾ ತಂದೆ
ಭಕ್ತರ ನಿರೋಧವಂ ಸೈರಿಸುವರೇ ತಂದೆ
ಭಸಿತವೇ ನೀನಾದಡಂ ಕೇಳು ಪುಯ್ಯಲಂ
ಎಸೆವ ರುದ್ರಾಕ್ಷಿಗಳಿರಾ ಕೇಳಿ ಪುಯ್ಯಲಂ
ಎಲೆಲೆ ಪಂಚಾಕ್ಷರೀ ತಾಯೆಯೆಲ್ಲಿಗೆ ಹೋದೆ
ಎಲೆ ವೀರಭದ್ರಯ್ಯ ನೀನೇಕೆ ಇಂತಾದೆ
ಎಲೆ ಶಿವಾಚಾರವೇ ಪಿಡಿದೆತ್ತಿಕೊಳ್ಳೆನ್ನ
ಎಲೆ ಶಿವನ ಭಕ್ತಿಯೆ ಉದ್ಧರಿಸು ನೀನೆನ್ನ
ಅಮರಗಣಮುಖ್ಯರಿರಮರ್ತ್ಯಗಣಮುಖ್ಯರಿರ
ನಿಮನಿಮಗೆ ಕಾಯ್ದುಕೊಳ್ಳಿರೆ ವೀರಶರಣರಿರ
ಒಡೆಯರಿಲ್ಲದ ದೇಶಿಗನನರಸಿಕೊಳ್ಳಿರೆ
ಮೃಡಕರುಣವೆಯ್ದಿಸದ ಪಾಪಿಯಂ ನೋಡಿರೆ

ಎಂದಲ್ಲಿ ಧಾರುಣಿಗೆ ಕರುಣವಪ್ಪಂದದಿಂ
ನಿಂದ ಗಿರಿತರುಗಳಿಗೆ ಶೋಕವಪ್ಪಂದದಿಂ
ಕೇಳ್ದ ಮೃಗಪಕ್ಷಿಗಳ ಕಣ್ಣನೀರ್ಪರಿವಂತೆ
ಕೇಳ್ದ ಮರ್ತ್ಯರ ಹೃದಯವಿರ್ಭಾಗವಪ್ಪಂತೆ
ಒಟ್ಟು ಒರಲುತ್ತಿಪ್ಪ ಶಿವಭಕ್ತನಂ ಕಂಡು
ಕೆಟ್ಟೆವೆನುತೆಲ್ಲರುಂ ಕಡು ಶೋಕವೆಡೆಗೊಂಡು
ಎಡಹುತಂ ತಾಗುತಂ ಪರಿತಂದು ಸೆರೆಬಿಗಿದು
ಗುಡುಗುಡನೆ ಕಣ್ಣನೀರ್ಕರೆಯ[ಲುಮ]ಳುತ್ತಗಿದು
ಶರಣನಂ ತಕ್ಕೈಸಿ ಗೋಳಿಡುತ್ತಿಪ್ಪಲ್ಲಿ
ಹರಣವೊಡೆಯಲು ಬಿಕ್ಕಿ ಬಿರಿದು ಶೋಕಿಸುವಲ್ಲಿ
ಶಶಿಧರಂ ಬಂದವರೊಳೊರ್ವ ಜಂಗಮವಾಗಿ
ಬಿಸುಸುಯ್ದು ಸುಮ್ಮಾನವುಡುಗಿ ಶೋಕಿತನಾಗಿ
ಎಲ್ಲರಂ ಕೊರಲಪ್ಪಿಯಪ್ಪಿ ತಾನಳುತಮಿರೆ
ಮಲ್ಲಳಿಗೊಳುತ್ತಮೊಡನೊಡನೊಟ್ಟಿ ಒರಲುತಿರೆ
ಅನಿಬರಂ ನಾಚಿತಂದೆಗಳಲ್ಲಿ ಸಂತೈಸಿ
ಮನದೊಳಗೆ ಮಲಮಲಂ ಮರುಗಿ ಮೈ ಹೇಡಯಿಸಿ
ಕುಳ್ಳಿರ್ದ ಭಕ್ತರಂ ನೋಡಿ ನೆರೆ ಕರಗುತಂ
ತಳ್ಳಂಕದಿಂ ಕೌತುಕಂ ಪುಟ್ಟಿ ಕೊರಗುತಂ
ಮೂಗಿನೇರಿಂ ಸುರಿವ ರಕ್ತವಂ ತೊಡೆವುತಂ
ರಾಗವಳಿವುತ್ತುಕ್ಕಿ ಬಿಕ್ಕಿಬಿರಿದೊಡೆವುತಂ

ಎತ್ತಿಕೊಂಡಾ ಭಕ್ತನಂ ಪುರಕ್ಕೊಡಗೊಂಡು
ಮುತ್ತಿಕೊಂಡೆಲ್ಲರು ಮಹಮನೆಗೆ ನಡೆಗೊಂಡು
ಮೆಲ್ಲನಿಳಿಪುತ್ತಂ ಸುಖಾಸನಗೊಳೊಳಗಿರಿಸಿ
ಅಲ್ಲಿ ಬೆಸಗೊಂಡರಾ ಭಕ್ತನಂ ಚೇತರಿಸಿ
ಏನಯ್ಯ ಏನಾದುದೆಂತು ಬಂದುದು ತಂದೆ
ನಾನಾ ನಿರೋಧವೇಕಾಯ್ತು ಹೇಳೈ ತಂದೆ
ಬೆಂದೆವಾವುರಿದೆವಾವಿಂತಿರಲ್ಬಪ್ಪುದೆ
ನಿಂದ ನೆಲನುರಿದಪುದು ಪೇಳೆನಲ್ಬಪ್ಪುದೆ
ಎಂದಿಂತು ಭಕ್ತರುಮ್ಮಳಿಸಿ ಕೇಳುತ್ತಮಿರೆ
ಇಂದುಧರನಗ್ರಗಣ್ಯರ್ಕಳುಂ ಕೇಳುತಿರೆ

## ಸ್ಥಲ ೨

ಅಮರರ್ ಕೈಮುಗಿದೋಲಗಿಪ್ಪ ಮುನಿಗಳ್ ಸೇವಿಪ್ಪ ದೇವೇಂದ್ರನಾ
ಕ್ರಮದಿಂದಂ ಸ್ತುತಿಯಿಪ್ಪ ಶಂಭು ಕರದೊಳ್ಕಾರುಣ್ಯದಿಂದೊಪ್ಪಿರ
ಲ್ಕೆಮಗಿಂತೀ ತೆರನೀ ನಿರೋಧದೊದವಿರ್ದ್ಯೆ ವರ್ಣವೀದುಷ್ಪ ವಿ
ಭ್ರಮವೀ ದುಸ್ಥಿತಿಯೀಯಪಾಯದೊದವೀ ನಿರ್ಭೇದವೀ ನಿಗ್ರಹಂ ॥

ಎಂದು ನಾಚಿತಂದೆಗಳು ಮೊದಲಾದ ಸಕಲ ಭಕ್ತವೀರಾಭರಣರ್ಭಾಳಲೋಚನನ ದಾಳಿಕಾರರ್ಕೇಳಲೊಡಂ ಶೂಲಿಯಣುಗಂ ಪೇಳಲುದ್ಯತನಾಗುತ್ತಂ, ಹಿಂದಾದ ಭಂಗಮಂ ನೆನೆದು ಕಿರಿದಿನಿಂ ಪೇಳ್ವೆನೆನಗೆ ಪುರಹರನೊಡ್ಡಿದ ಪರಿಭವಮಂ. ಭಕ್ತಿ ತೊತ್ತಾಗಿ ಬಣಜಿಗರ ಕಾಯಕದೊಳಿರುತ್ತಮಿರ್ದೊಂದು ದಿವಸಂ ಪಲವೂರ್ಗಳೊಳು ಬಣಜಿಸಿ ಬರುತ್ತಲಸಮಯವಾಗೆ ಮುಗಿಲುಂ ಮಿಂಚುಂ ಮೊಳಗುಂ ಮಳೆಯುಂ ಗಾಳಿಯುಂ ಕತ್ತಲೆಯುಂ ಮುತ್ತಿ ಕವಿದಡಂತಾರಡಿಗೊಂಬ ಮಾರುಡಿಗೆಯೆಂಬ ಪುರಮಂ ಪೊಕ್ಕು ಕೇರಿ ಕೇರಿಗಳೊಳು ತಿರುಗಿ ಬಸದಿಗಳಂ ಬತ್ತಲೆ ಬೊಂಬೆಗಳಂ ಕಂಡು, ಕಂಗೆಟ್ಟು ಶಿವಾಲಯಮಂ ಶಿವಭಕ್ತರಂ ಕಾಣದೆ ಮುಂದುಗೆಟ್ಟು ಬಂದೊರ್ವ ಹಾಳು ಜೈನನ ಕೀ[ಳಿಲಿನೊ]ಳಿರ್ದು ನಿತ್ಯನೇಮವಂ ಮಾಡುತಿಪ್ಪಲ್ಲಿ ನರಕಕ್ಕೆ ಮುಂಚುವ ನಾಣಿಲಿಗಳಪ್ಪ ಜೈನರ ಜಂಗುಳಿಯೊಳು ಕೆಲಬರ್ಬಂದಗ್ಗವಣಿಯಂ ಚೆಲ್ಲಿ, ಹೂವಂ ಕೆದರಿ, ದೀಪ್ತಿಯಂ ಕೆಡಿಸೆ, ನೊಂದು ಬೆಂದು ಬೇಗೆವರಿವ ಚಿತ್ತದಿಂ ಭುಗಿಲನೆರ್ದು ಧಗಿಲನುರಿದು ಶಿವದಿಟ್ಟು ಮೊರೆಯಿಟ್ಟೆಲ್ಲರನರೆಯಟ್ಟಿ, ಮರಳಿ ಓಡುವಾಗಳು,

ಕಡು ಮುಳಿದ ಪರಸಮಯಿಗಳು ಘುಡು ಘುಡಿಸಿ ಬಂದು ಮುಕ್ಕುರಿಕ್ಕಿ ತಕ್ಕುಗೆಡಿಸಿ ಭೋಂಕನೇ ಕೆಡಹಿ ಗಂಟಲಂ ಮೆಟ್ಟಿ ಸಾ[ಯಿ]ಸದೆ ಮೂಗಿನೇರಂ ಮಾಡಿ ಅಭಿಮಾನಂ ಗೆಡಿಸಿ ಬಿಡಲೊಡಂ, ಮಧ್ಯರಾತ್ರಿಯೊಳ್ಕಿರಿದುಬೇಗವೆನ್ನನಾನರಿಯದೆ ಸುಮ್ಮಾನವುಡುಗಿ, ಜೊಮ್ಮಿಟ್ಟು ಬೆರಗಾಗಿ ಹಮ್ಮೈಸಿ ಹರಣಂಗಳೆವ ನಿರೋಧದಿಂದಿರ್ದು ಎಂತಕ್ಕೆ ಎಚ್ಚತ್ತು, ಪಶುಪತಿಯಂ ನೆನೆದು, ದೆಸೆದೆಸೆಗೆ ಬಾಯಂ ಬಿಟ್ಟು, ದಡದಡಿಸುತ್ತೆದ್ದು ಡೆಂಡಣಿಸಿ ಬಿರ್ದು, ಬೀಳುತ್ತೆರ್ದು, ತರಹರಿಸಿ ನಿಂದು, ಮುಖದೇರಿಂ

ಸುರಿವ ನೆತ್ತರು ಕರಸ್ಥಳದ ಲಿಂಗದ ಮೇಲೆ ಸುರಿಯೆ, ಬಿಸುಸುಯ್ದು ಸೈರಿಸಿ ಕಣ್ಣನೀರ್ಕರೆಯೆ, ಬಾಯಮೊರೆ ಬೆಳೆಯೆ, ದೇಸಿಗತನಂ ನೆಲೆಯಾಗಿ, ದೈನ್ಯಂ ದಾರಿದೆಗೆದು, ದುಃಖವಡರಿಸಿ, ಕಾರ್ಪಣ್ಯಂ ಕೈಮಿಗೆ, ಅಳಲುರಿ ಒಳಗಂ ಸುತ್ತೆ, ಕಂಗೆಟ್ಟು ಮನಂಗೆಟ್ಟ ಬುದ್ಧಿಗೆಟ್ಟು ಮಹಾಕಾಳದೊಳು ಮುಂಗಾಣದೆಡಹುತ್ತಂ ತಾಗುತ್ತಂ ನಡುವಂ ಸುತ್ತಲಿಲ್ಲದೆ, ಬತ್ತಲೆ ನಡೆದು ಸೇಡುಗೊಳುತ್ತಂ, ಮಾರಿಯ ಮೂರಿಯಂ ಪೊರಮಡುವಂತೆ ಮಾರುಡಿಗೆಯಂ ಪೊರಮಟ್ಟು, ಕಲ್ಲೆನ್ನದೆ ಮುಳ್ಳೆನ್ನದೆ ಚಳಿಯೆನ್ನದೆ ಬಿರುಗಾಳಿಯೊಳ್ ಮಿಂಚಿನೊಳ್ ಮೊಳಗಿನೊಳ್ ಸಿಡಿಲೊಳ್ ಕಾರ್ಗತ್ತಲೆಯೊಳ್ ಕಾಳ್ಪೊನಲಿನೊಳ್ ಕೋಡುಗಲ್ಲನೆಡಹಿ, ಮುಳ್ಳುಮೆಳೆಯಂ ಪಿಡಿದು, ಕೆಸರೊಳ್ ಜಾರಿ ಒಲೆದು ಕೈಯೂರಿ ತರಹರಿಸಿ ನಿಂದು, ಮೆಲ್ಲ ಮೆಲ್ಲನೆ ಬಂದೊಂದು ಹುತ್ತು ಬೆಳೆದ ಮೆಳೆಯ ತಳದೊಳ್ ಕುಳ್ಳಿರ್ದು, ಬಳ್ಳಿವರಿವ ದುಃಖಂ ಮೈಯಕ್ಕಿ, ಮನದೊಳ್ ಮೀರಿ ಪರಿಚ್ಛೇದಿಸಿ, ಹರಗೆ ಮುನಿದು ದಾಕ್ಷಿಣ್ಯದಿಂ ಕಳಿದು ಉಪಚಾರವನುಳಿದು, ಕೈಯೆತ್ತಿ ಕಂಪಿಸಿ, ಮೈಯಾರೆ ಮರುಗಿ, ಬಸುರಂ ಹೊಸೆದು, ನೆಲನಂ ಹೊಯ್ದು, ಶಿವನೆ ಭವನೆ ಶಂಭುವೆ ಶಂಕರಾ ಶಶಿಧರಾ ಬಾರಯ್ಯಾ ಬಾರರಸಾ ಬಾರಭವಾ ಬಾರೆಂದೆನುತ್ತೆನುತ್ತೆ ಬಾಯಾರಿ ಬಳಲ್ದು, ಬಸಿರೂರಿ ಮೂರ್ಛಿಸಿ , ಮರೆದಿಪ್ಪಲ್ಲಿ ಕನಸಿನೊಳು ಶಿವಂ ಬಂದುದ ನಾಚಿತಂದೆಗಳ ಪುರಕ್ಕೆ ನಡೆ ಮಗನೆ, ನಡೆ ಕಂದಾ ನಿನ್ನ ಮನೋರಥಮಂ ಮಾಳ್ಪೆನೆಂದೆನ್ನನೆತ್ತಿ ತಂದು ನಿಮ್ಮೂರ ತಟಾಕದ ತೀರದ ವಟವೃಕ್ಷದ ತಳದೊಳ್ ಕುಳ್ಳಿರಿಸಲ್ ಅರುಣೋದಯದೊಡನೆ ಕಂದೆರೆದು ಮನಸಿಜಹರನಂ ಕಾಣದೆ ಮಾಣದೆ ಮರುಗು ಮರುಗುತ್ತಿರ್ದೆನಿದೆನ್ನ ವೃತ್ತಾಂತವಿದೆನ್ನಭಿಮಾನದ ಕೇಡಿದೆನ್ನ ನಿರ್ಭಾಗ್ಯತೆ ಇದೆನ್ನ ಶಿವಾಚಾರದ ಹಾನಿ ಇದೆನ್ನ ಪಾಪದ ಫಲಂ ಇದೆನ್ನ ದುಸ್ಸಂಗತಿಯಿದೆಂದು ಪೇಳುತ್ತೆ ಪೇಳಲಾರದೆ ಘುಡುಘುಡಿಸಿ ಕನಲ್ದ ಭಕ್ತನಂ ಕಂಡೆಲ್ಲರುಂ ಮರುಗಿ, ಮೆಲ್ಲನೆ ಸಂತೈಸಲೊಡಂ ನಾಚಿತಂದೆಗಳು ಶಿವಸೋದರಂಗಳ ಮುಖಮಂ ನೋಡಿ ಶಿವಭಕ್ತನ ನಿರೋಧವಿಮ್ಮೈಗಂಡು ಶೈವಭಂಗಕ್ಕೆ ಸೈರಿಸಲಾರದೆ, ಘುಡುಘುಡಿಸಿ ಕನಲ್ದು ನಡಿಘಡೆಡೆ ಕೆರಳ್ದು, ಕೆಂಪಡರ್ದ ಕಂಗಳಿಂ, ಕೆತ್ತುವ ಮೀಸೆಯಂ, ಗಂಟಿಕ್ಕಿದ ಪುರ್ಬಿನಿಂ, ಗಜರಿ ಗರ್ಜಿಸಿ ಮೀರಿ ನುಡಿದಂ

ಮಾರುಡಿಗೆಯಂ ಪೊಕ್ಕು ಜೈನರನೊಕ್ಕಲಿಕ್ಕಿ ಬತ್ತಲೆಯ ಬೊಂಬೆಗಳಂ ಬರಿಕೆಯ್ದು, ಪರಸಮಯಮಂ ನಿರ್ಧೂಮಮಂ ಮಾಡಿ, ಪರದೈವಮಂ ಹೊಸೆದು ಬಿಸುಟು ಹುಡಿಗಟ್ಟಿ ಸಲ್ಲೀಲೆಯಿಂ ಮಲ್ಲಿನಾಥನಂ ಪ್ರತಿಷ್ಠೆಗೆಯ್ವೆನಿದು ಸತ್ಯ ಸತ್ಯಮೀ ಭಾಷೆಯಂ ನೆಲನದಿರಿದಡಂ ಕುಲಗಿರಿ ಸಂಚರಿಸಿದಡಂ ಸಪ್ತಸಮುದ್ರಂಗಳೊಂದಾದಡಂ ಹರಿಬ್ರಹ್ಮಾದಿಗಳಡ್ಡ ಬಿದ್ದಡಂ ಮಾಡುವೆಂ ಮಾಡುವೆಂದು ಭಾಷೆಯಂ ಕೊಟ್ಟು, ಕಂಕಣಮಂ ಕಟ್ಟಿ, ಬಾಹಾಸ್ಫಾಳನಂಗೆಯ್ದು, ಮಲ್ಲಿಕಾರ್ಜುನನಂ ಮೂದಲಿಸಿ, ನಿಸ್ಸಂಶಯಂ ಮನಮನಡರಿ, ನಿಶ್ಚಯದೊಳು ಬುದ್ಧಿಯಡರಿ, ಆಚಾರದೊಳಹಂಕಾರಂ ಪುಗೆ, ಏಕಚಿತ್ತದೊಳ್ ಅಚ್ಚೊತ್ತು ಸತ್ಯವಚನಂ ಸಫಲಮಾಗಿ ಕೈಕೊಂಡು, ನೊಂದ ಭಕ್ತನಂ ಬೋಳೈಸಿ ಸಂತವಿಟ್ಟು, ಸಂಗಡದೊಳ್ ಲಿಂಗಾರ್ಚನಂಗೆಯ್ದು ಪ್ರಸಾದತುಷ್ಟಹೃದಯರಾಗಿ, ತಮ್ಮೊಳೊಂದನುಮ್ಮಹದಿಂದಾಳೋಚನಂಗೆಯ್ದು, ಮದುವೆಯೆಂದೊಂದು ಸಂಭ್ರಮಮಂ ಮುದದಿಂದೊಡರ್ಚಿ, ದಂಡೆ ತೊಂಡಿಲು ಸುವಾಸಿನಿಯ[ರಂ] ಕೊಲ್ಲಾರ ಬಂಡಿಯೊಳ್ಕುಳ್ಳಿರಿಸಿ, ಮತ್ತೆ ಕೆಲ ಬಂಡಿಯೊಳ್ ವಸ್ತುಕಾರಮಂ ತೀವಿ, ವೀರಭಕ್ತಿ ಪಲ್ಲವಿಸಿದಂತಿರ್ದ ತಳಿರ ಬಂಡಿಯೊಳ್ ಹೊಸಮದುವಣಿಗನೆನಿಪ ಶಿವಲಿಂಗಮಂ ಬಿಜಯಂಗೆಯ್ಸಿ, ಕೆಲಬಲದೊಳ್ ಕಾಹಿನಾಳ್ಗಳಂ ನಿಯಾಮಿಸಿ, ತನ್ನೊಡನೆ ಕಂಕಣಂಗಟ್ಟಿದ ಶಿವಸೋದರಂಗಳ್ ಸಹಿತ ಪದಿನಾಲ್ವರುಂ ತಳಿರ ಬಂಡಿಯನೇರಿ, ಪುರತ್ರಯ ದಹನಕ್ಕೆ ಪುರಹರನ ರಥಂ ನಡೆವಂತೆ ಪಲವೆಡೆಗೆಯ್ದು,

ನಡೆತಂದಸ್ತಮಿಸಲಿರ್ದ ಮಾರುಡಿಗೆಯ ಊರಮುಂದೆ ಅಸ್ತಮಾಗೆ, ಪೊಗಲುಮಿರಲುಮ[ರಿ]ಯದಂತೆ ನಿಂದಿರ್ದ ಸಮಯದೊಳಾವೂರ ಜೈನರ್ಕಂಡು, ಪುರದೊಳಯಿಂಕೊಡಗೊಂಡು ಪೋಗಲೊಲಿದು, ಹಿರಿಯ ಜಿನಾಲಯದ ಹೊರಗೆ ಬಂಡಿಗಳಂ ಬಿಟ್ಟು, ಕೂಡೆಬಂದ ಮನುಷ್ಯರುಮಂ ಸುವಾಸಿನಿಯರುಮಂ ಏನಾನುಮೊಂದು ನೆವದಿಂ ಮರಳಿ ಕಳುಪಿ, ಮಧ್ಯರಾತ್ರಿಯೊಳ್ ಮದನಹರನ ಮತ್ತಗಜಂ, ತ್ರಿಪುರಹರನ ಮೂರನೆಯ ಕಣ್ಣು, ಅಹಿಕಂಕಣನ ಬಹಳ ಶಕ್ತಿಗಳೆನಿಪ ವೀರಮಾಹೇಶ್ವರರ್ ಬಂದೆಳಸಿ ನಿಂದು, ತಳಿರ ಬಂಡಿಯೊಳಿರ್ದ ಅಪ್ರತಿಮ ಶಿವಲಿಂಗಮಂ ದೃಢತರಮಾಗಿ ಪಿಡಿದು, ಬಸದಿಯ ಮಗಿಲನಡರ್ದೇರಿ ಒಳಗಂ ಪೊಕ್ಕು, ಕತ್ತಲೆಯಂ ಪರಿಹರಿಸಿ ಬೆಳಗಂ ನಿರೀಕ್ಷಿಸುವಂತೆ, ಅಜ್ಞಾನಮಂ ಪಿಂಗಿಸಿ ಶಿವಜ್ಞಾನಮಂ ನಿಲಿಸುವಂತೆ, ದರಿದ್ರಮಂ ಬಿಸುಟು ಪರಮೈಶ್ವರ್ಯಮಂ ಪೆಚ್ಚಿಸುವಂತೆ, ಪಾಪಮಂ ತೆಗೆದು ಪುಣ್ಯಮಂ ಸೇರಿಸುವಂತೆ, ಅನಿತ್ಯಮಂ ನೂಂಕಿ ನಿತ್ಯಮನೊಡರ್ಚುವಂತೆ, ಜಿನಪ್ರತಿಮೆಯಂ ಕಿತ್ತು ಬಿಸುಟು ಮಲ್ಲಿಕಾರ್ಜುನನಂ ಪ್ರತಿಷ್ಠೆಯಂ ಮಾಡಿ, ಪುಷ್ಪವೃಷ್ಟಿಯ ನಡುವೊಪ್ಪಿರೆ,

ವೀರಭಕ್ತರಾರುಹತರಂ ಪಡಲ್ವಡಿಪ್ಪುದಂ ನೋಡಲ್ಬರ್ಪಂತೆ ಮಾರ್ತಂಡಂ ಪೂರ್ವಪರ್ವತಸ್ಥಿರ ನಾಗಲರುಣೋದಯದೊಳೆಂದಿನಂದದಿಂ ಬಸದಿಯ ಬಳಗಮಂ ಪೂಜಿಸಲೆಂದು ಪಂಡಿತಂ ಬಂದು, ಕದವಂ ತೆಗೆಯಲೊಡನೆ ಹೊಗೆಯ ಜವನಿಕೆ ತೆಗೆದ ಕಾಲಾಗ್ನಿಯಂತೆ, ಮುಗಿಲಮರೆ ಹಿಂಗಿದ ಸಿಡಿಲ ಗಡಣದಂತೆ, ಕತ್ತಲೆ ಪರಿದಾದಿತ್ಯನಂತೆ, ಹೆರೆಗಳೆದು ಘುಡುಘಡಿಸುವ ಫಣಿಪತಿಗಳಂತೆ, ನೀರ್ದೆಗೆದ ವಾರ್ಧಿಯ ವಡಬಾನಳನಂತೆ, ಗವಸಣಿಗೆದೆಗೆದ ತ್ರಿಶೂಲದಂತಿರ್ದ ನಿಸ್ಸೀಮರಂ ಕಂಡು, ಪಂಡಿತಂ ಖಂಡಿತನಾಗಿ ಮೂರ್ಛೆಯೋಗೆಚ್ಚತ್ತು ಬೆಚ್ಚು ಬೆಗಡುಗೊಂಡು, ಚೆಚ್ಚರದಿಂ ತಲೆದಡವಿಗೊಳುತ್ತೋಡಿ ಹೋಗಿ, ಜೈನರ ಜಂಗುಳಿಯ ರುಷಿಯರ ಹಸರದ ಬತ್ತಲೆಗರ ಮೊತ್ತದ ಕಂತಿಯರ ಮಂತಣದ ಪಂಡಿತರ ತಂಡದ ಮುಂದೆ ದೊಪ್ಪನೆ ಬಿರ್ದು, ಗಡಗಡನೆ ಪೊರಳ್ದು ಕಣ್ಣನೀರಿಕ್ಕಿ ಕಂದಿ ಕುಂದಿ ನಮ್ಮ ಸಮಯಕ್ಕಾದ ಭಂಗಮನದೇನೆಂದು ಬಿನ್ನೈಪೆಂ, ವಿಜಯಪಾರ್ಶ್ವನಾಥನಂ ಮೂಗನರಿದು ಕಿತ್ತು ಬಿಸುಟ್ಟು, ಶಿವಲಿಂಗಮಂ ಬಿಜಯಂಗೆಯ್ಸಿ, ವೀರಭಕ್ತರ್ ಬಸದಿಯೊಳಗೆ ಹೊಸ ಪರಿಯೊಳಿರ್ದಪರಾಕಸ್ಮಿಕಂ ಏಕಸುರದಿರ್ದಪ್ಪಿರಯ್ಯೋ ಅರುಹ ಸಮಯವಡಗಿದುದು ಸವಣಗುಲಂ ನಿವಳಿವಟ್ಟಮಾದುದು ಇನ್ನೇನೆಂಬ ನುಡಿಯ ದನಿಯಂ ಕೇಳ್ದು ದಡಿಗ ಜೈನರ್ ಸಿಡಿಮಿಡಿಗೊಂಡು ಕೆರಳ್ದು ಕಿಡಿಕಿಡಿಯಾಗೆ, ಅಹಿಂಸಾ ಪರಮೋಧರ್ಮವೆಂಬ ತಮ್ಮ ದರುಶನಕ್ಕೆ ತಾವೆ ಕೊಡಲಿಯಂ ಕೊಂಬಂತೆಲ್ಲರುಂ ಸಕಳಾಯುಧಂಗಳಂ ಕೊಂಡು, ತುರಗ ಕುಲಮಂ ಸಮಕಟ್ಟಿ, ಸಹಸ್ರಸಂಖ್ಯೆಯ ಪದಾತಿಬಲಂ ಬೆರಸಿ, ಬಸದಿಯಂ ಸುತ್ತಿ ಮುತ್ತುತ್ತಲಿರೆಯಿರೆ,

## ಸ್ಥಲ ೩

ಇನನಂ ಸಾರ್ದ ತಮಂಧದಂತೆ ಪವಿಯಂ ಮುತ್ತಿರ್ದ ಗೋತ್ರಂಗಳಂ
ತೆನಿಸುತ್ತಾರ್ಕ್ಷ್ಯನನೆಯ್ದೆ ಮೂದಲಿಸುವಾ ಸರ್ಪಂಗಳಂತಿರ್ದ ದು
ರ್ಜನಸಂದೋಹಮೆನಿಪ್ಪ ಜೈನವಡೆಯಂ ಕಂಡಾರ್ದು ಬೊಬ್ಬಿಟ್ಟು ಶ
ರ್ವನ ಕೂರಾಳ್ಗಳನೂನಸೂಯ ಭಟಕೋಪಾಟೋಪಮಂ ತಾಳ್ದಿದರ್ ॥

ಇಂತು ಕೋಪಾಟೋಪವಾಗುತ್ತವೈತಂದು
ಚಿಂತಿಸದೆ ಲೆಕ್ಕಿಸದೆ ಬಗೆಯದೊಲವಿಂ ನಿಂದು
ನಾಚಿತಂದೆಯನಲ್ಲಿ ಲಿಂಗಕ್ಕೆ ಕಾಪಿಟ್ಟು
ಆಚಾರದೊಡೆಯರ್ ಬು ಬು ಬುಯೆನುತೆ ಪೊರಮಟ್ಟು
ಮಸಗಿ ಗರ್ಜಿಸಿ ಗಜರಿ ಘುಳ ಘುಳಿಸಿ ಘೂರ್ಮಿಸುತೆ
ಎಸಗಿ ಬೊಬ್ಬಿಟ್ಟು ಕಟ್ಟೆಟ್ಟಣಿಸಿ ಧಟ್ಟಿಸುತೆ
ಆರುತ್ತ ನಡೆವುತಿರೆ ಹಿಮ್ಮೆಟ್ಟದಲ್ಲಿ ಸಲೆ
ವೀರಭದ್ರಂ ಬೆಂಬಲಕ್ಕೆ ಬಲವಾಗಿ ನಿಲೆ
ಉರವಣಿಸಿ ತೊಡಗಿದರ್ ಜೈನವಡೆ ಬೆರಗಾಗಿ
ಅರುಹಬಲವಿದಿರಾಗಿ ನೂಕಿತ್ತು ಸೈತಾಗಿ
ತೊಡಗಿತ್ತು ಕಾಳೆಗಂ ಘುಡಘುಡಿಸಿ ಪುರದಲ್ಲಿ
ನಡುವೆ ಜೈನರನುರದೆ ಮುರಿದಿಕ್ಕಿ ತರಿದಲ್ಲಿ
ಉರವಣಿಸಿ ಕೊಲುತೆ ಬಲುಪಿಂದೆಯ್ದಿ ಬರಲಲ್ಲಿ
ಪರಿಭವಿಸಿ ಕೆಲಬರಂ ತಳ್ತಿರಿದು ಕೊಲುತಲ್ಲಿ
ಅಬ್ಬರಿಸಿ ಕೆಲಬರಂ ಬಿಡೆ ನೋಡಿ ಕೆಲಬರಂ
ಬೊಬ್ಬಿಟ್ಟು ಕೆಲಬರಂ ಪಿಡಿದೊರಸಿ ಕೆಲಬರಂ
ನಡೆನಡೆದು ತರಿತರಿದು ಬಿಡಲೆಳೆದು ಮೆದೆಯೊಟ್ಟಿ
ಕಡುಮುಳಿದು ಸೆಳೆದೊಕ್ಕಲಿಕ್ಕಿ ನೆರೆ ಹುಡಿಗುಟ್ಟಿ
ಸವಣವಡೆಯೆಲ್ಲವಂ ನಿವಳಿವಟ್ಟಂ ಮಾಡಿ
ತವೆ ಜೈನರೆಲ್ಲರಂ ತತ್ಪುರದೊಳಗೂಡಿ
ಆರುಹತರಂ ತವಿಸಿ ಗೆಲ್ದು ವೀರದೊಳತ್ತ
ತೇರಸರ್ ನಡೆದರಾ ಕೈಲಾಸಪುರದತ್ತ

ನಡೆಯಲ್ಕೆ ನಾಚಿತಂದೆಗಳಲ್ಲಿ ಕಾಣುತಂ
ಕಡು ನೊಂದು ಮಲ್ಲಿನಾಥಂಗೆ ಬಿನ್ನೈಸುತಂ
ದೇವ ಆನಿರ್ದಂತೆ ತೇರಸರನೊಯ್ವರೇ
ದೇವ ಹಿಂದುಳಿದೆ ಎನ್ನಂ ಕಳುಪದಿರ್ಪರೇ
ಗೆಲ್ಲವಂ ಕೊಂಡರಾ ತೇರಸರು ಛಲದಿಂದೆ
ಇಲ್ಲಿ ಮರುಳಾಗಿರ್ದೆನಜ್ಞಾನದಿಂ ಪಿಂದೆ
ಇರಲಾರೆನಿರಲಾರೆನೆಂದು ದೂರುತ್ತಮಿರೆ
ಕರವಾಳನೆತ್ತಿ ಕೊರಳಿಂಗೆ ಮೋಹಿಸುತಮಿರೆ
ಹೋ ಹೋ ಮಗನೆ ನಾಚಿತಂದೆ ಬೇಡೇನಯ್ಯಾ
ಆಹಾ ವಿಚಾರವಿಲ್ಲದ ವೀರವೇಕಯ್ಯಾ

ಎನ್ನನೊಬ್ಬನನಿರಿಸಿ ಪೋಗಲ್ಕೆ ಬಗೆವರೇ
ಎನ್ನ ಸರ್ವಾಭಿಮಾನವೆ ಇದಂ ಬಗೆವರೇ
ಮುನ್ನ ನೋಡುವುದುಂಟು ಪಲವು ವೀರಂ ನೀನು
ಎನ್ನ ಮರೆದುರವಣಿಸಲಾಗದಯ್ಯಾ ನೀನು
ಬೇಡೆಂದು ಖಡ್ಗವಂ ತೆಗೆದು ಬೀಸಾಡುತಿರೆ
ನೋಡಿ ಶಂಕರನಿಂದು ಕರುಣದಿಂದಿಳಿಪುತಿರೆ

ಅತ್ತಲೀ ವಾರ್ತೆಯಂ ಶರಣತಂಡಂ ಕೇಳ್ದು
ಚಿತ್ತದೊಳ್ ಘುಡಘುಡಿಸಿ ಕಡುಗೋಪಮಂ ತಾಳ್ದು
ಬರುತಿರ್ದರಲ್ಲಿ ವಿಷಧರನ ಘನ ಗಣಕುಲಂ
ಉರವಣಿಸಿ ಕೆಲಬಲದ ಶಿವಪುರದ ಗಣಕುಲಂ
ಎತ್ತಿದ ವೃಷಧ್ವಜಂ ಗಗನದೊಳ್ಕುಣಿ ಕುಣಿಯೆ
ಸುತ್ತಿ ಕೇಳಿಸುವ ನಾದಂ ದಿಗಂತಂ ಪರಿಯೆ
ವೀರರುಂ ಶಾಂತರುಂ ನೇಮಸಂಪನ್ನರುಂ
ಧೀರರುಂ ಕಲಿವೀರ ವೀರಭದ್ರೇಶರುಂ
ಜಡೆಗಳಿಂ ಮಕುಟದಿಂ ಮುಂಡಧಾರಿಗಳಿಂದೆ
ಪೊಡವಿಗತಿಶಯದ ತುರುಬಿನ ತಪಸ್ವಿಗಳಿಂದೆ
ಉರವಣಿಸಿ ಬಂದು ಮಾರುಡಿಗೆಯಂ ಪುಗುತಮಿರೆ
ಪರಿಪರಿಯ ಸೌರಂಭದಿಂದೆ ಸಂಭ್ರಮಿಸುತಮಿರೆ
ಕಂಡಲ್ಲಿ ನಾಚಿತಂದೆಗಳುಬ್ಬುತಿದಿರ್ವಂದು
ಹಿಂಡೆದ್ದ ಪುಳಕದಿಂ ಮೈಯಿಕ್ಕುತಂ ನಿಂದು
ಬಂದ ಗಣಸಂತತಿಗೆ ಪೂರ್ವವೃತ್ತಾಂತಮಂ
ಅಂದು ಪೇಳುತ್ತಮಿರೆ ಶಿವಲೀಲೆಯಂದಮಂ
ಕೇಳ್ದರುಬ್ಬೆದ್ದಾಡಿದರ್ ತಣಿದರೊಲವಿಂದೆ
ತಾಳ್ದರತಿ ಪರಮಹರುಷಂಗಳಂ ಸುಖದಿಂದೆ
ನಂಬಿದರು ನಚ್ಚಿದರು ವಿಭು ನಾಚಿತಂದೆಯಂ
ಇಂಬಿನಿಂದಪ್ಪಿದರು ಭಕ್ತಸಂತೋಷಿಯಂ

ಶರಣರೊಳು ನೀನೆ ಕಲಿ ನೀನೆ ಛಲಿ ನಾಚಯ್ಯ
ಶರಣರಭಿಮಾನಕ್ಕೆ ನೀನೆ ಗತಿ ನಾಚಯ್ಯ
ಭಕ್ತರ ಮಹಾಬಂಧು ಸುಖಸಿಂಧು ನಾಚಯ್ಯ
ಭಕ್ತರ ಬಲಂ ಭಕ್ತಕುಲದೊಲವು ನೀನಯ್ಯ
ಎಂಬೀ ಪೊಗಳ್ತೆಯಿಂದರ್ಚಿಸುತೆ ಶರಣೆನುತೆ

ಅಂಬಕತ್ರಯನೊಲಿದಡರಿದಾವುದೆಂದೆನುತೆ
ಗಣಸಂಕುಳಂ ಬೆರಸಿ ಪುರದೊಳಗೆ ನಡೆನಡೆದು
ಅಣಕಿಸುತೆ ಬತ್ತಲೆಯ ಬೊಂಬೆಗಳನೊಡೆದೊಡೆದು
ಅಲ್ಲಲ್ಲಿ ಲಿಂಗಪ್ರತಿಷ್ಠೆಯಂ ಮಾಡುತಂ
ಸಲ್ಲೀಲೆಯಿಂದೆ ಕುಣಿಕುಣಿದು ಕೊಂಡಾಡುತಂ

ಆ ದೇಶದೊಳಗಣೇಳ್ನೂರು ಬಸದಿಯೊಳಿರ್ಪ
ಸಾದರಂ ಸವಣರೆಲ್ಲಂ ಪೊಡಮಡುತ್ತಿರ್ಪ
ಬತ್ತಲೆಯ ಬೊಂಬೆಗಳನೊಡೆಗುಟ್ಟಿ ಕಳೆವುತಂ
ಮತ್ತಲ್ಲಿ ಲಿಂಗಪ್ರತಿಷ್ಠೆಯಂ ಮಾಡುತಂ
ಮಾರುಡಿಗೆಯಂ ಶಿವಪುರಂ ಮಾಡಿ ನಲಿವುತಂ
ಮೂರುಂ ಜಗಕ್ಕೆ ವಿಖ್ಯಾತಿಯಂ ತೋರುತಂ
ಶಿವನ ಭಕ್ತರ ಚರಣಕಮಲದೊಳು ಬೀಳುತಂ
ಶಿವನ ಭಕ್ತರ ಕರುಣದಿಂದೆ ಮಿಗೆ ಹಿಗ್ಗುತಂ
ಸಿಂಗಿದೇವಂ ಬಂದಡುಪದೇಶವೀವುತಂ
ಹಿಂಗದಾತನ ವೀರಕಳೆಗೆ ನಲಿದಾಡುತಂ
ಸಕಳ ನೇಮಂಗಳಂ ಕೃಪೆಯೊಳಾತಂಗಿತ್ತು
ಸಕಳ ರೋಗಂಗಳಿಗೆ ನೆರೆ ಕಟ್ಟಿದೊರೆಯಾಯ್ತು
ಸರ್ವಪ್ರಸಾದಮಂ ಶರಣರರಿಯಲ್ಕೊಟ್ಟು
ಸರ್ವಕಾರುಣ್ಯಮಂ ಚಿತ್ತದೊಳಗಿಂಬಿಟ್ಟು
ಮಾರುಡಿಗೆಯೊಳು ನಾಚಿತಂದೆ ಸುಖದಿಂದಿರ್ದು
ಮೂರುಕಣ್ಣರಸನನುಗರ ಸಂಗದೊಳಗಿರ್ದು
ಭಕ್ತರ್ಗೆ ಬೇಡದುದನರ್ತಿಯಿಂದೀವುತಂ
ಭಕ್ತರಂ ಭಾವದೊಳಗಿರಿಸಿ ನಲಿವೋದುತಂ
ನಿಚ್ಚಂ ಪುರಾತನರ ಗೀತದೊಳ್ ಬಾಳುತಂ
ಮಚ್ಚು ಮದವೇರಿ ಬೇರೂರಿ ಪಲ್ಲವಿಸುತಂ
ಶರಣಸಂಗಂ ತಣಿದು ತಳಿತು ಕುಡಿ ನಿಮಿರುತಂ
ಶರಣರಂ ನಡೆನೋಡಿ ಪದಯುಗಕ್ಕಮರುತಂ
ಪುಳಕದಿಂ ಪರ್ಬುತಂ ಗದುಗದದೊಳುರ್ಬುತಂ
ಕಳೆಯೇರಿ ಕೊರ್ಬುತಂ ಕಂಪನದೊಳಾಳುತಂ
ಶಿವಲಿಂಗಮಂ ನೋಡಿ ಲಲ್ಲೆಗರೆವುತೆ ಬೇಡಿ
ತವೆ ಕರಣದೊಳ್ ಕೂಡಿ ಆನಂದದಿಂದಾಡಿ
ಜನನಮಂ ಲೆಕ್ಕಿಸದೆ ಮಾಯೆಯಂ ಲೆಕ್ಕಿಸದೆ

ಮನಮುಮಂ ಸೊಕ್ಕಿಸದೆ ಕಾಮದೊಳು ಸಿಕ್ಕಿಸದೆ
ಪರಿಣಾಮವಿಡಿದಂತೆ ಪರಮ ಸುಖವಡೆದಂತೆ
ತರತರದ ನವನಿಧಿಯ ನಡುವೆ ಕುಳ್ಳಿರ್ದಂತೆ
ಚಿಂತಾಮಣಿಯ ತೊಡುಗೆಯಂ ತೊಟ್ಟು ನಿಂದಂತೆ
ಸಂತತಂ ಸುರಭಿ ಹಯನಾದ ಸಂತಸದಂತೆ
ಪರುಷವಂ ಪರುಷದಿಂ ಮಲಗಿ ಕೊಂಡಿರ್ದಂತೆ
ಸುರತರುವಿನಾರವೆಯ ನೆಳಲೊಳಗೆ ನಿಂದಂತೆ
ಶರಣರೊಳಗನುಪಮ ಸುಖಾನಂದದೊಳಗಿರ್ದು
ಭರದಿಂದೆ ತೇರಸರನುರೆ ನೆನೆದು ನಿಂದಿರ್ದು
ದೇವ ತೇರಸರನಿನ್ನೆಂತಗಲ್ದಿಪ್ಪೆನೈ
ದೇವ ಮರ್ತ್ಯದೊಳಗಿಂತಿರ್ದು ಮರುಳಪ್ಪೆನೈ
ಹರುಷದೊಳನುಜ್ಞೆಯಂ ಕರುಣಿಪುದು ನೀವೆನುತೆ
ಶರಣರಂ ಸತ್ಯರಂ ನಿತ್ಯರಂ ಬೀಳ್ಕೊಳುತೆ
ಪರಮ ಶೈವಾಗಮಾಚಾರ್ಯರಂ ಬೀಳ್ಕೊಳುತೆ
ಭರದಿಂದಲೈತಂದು ಭಕ್ತರಂ ಬೀಳ್ಕೊಳುತೆ
ವೀರರಂ ಧೀರರಂ ಶೂರರಂ ಬೀಳ್ಕೊಳುತೆ
ಮಾರಮಥನನ ಬಿರುದಿನದಟರಂ ಬೀಳ್ಕೊಳುತೆ

ಇರೆ ಬಂದುದೊಂದು ಪುಷ್ಪಕವಲ್ಲಿ ರಾಗದಿಂ
ಸುರಿದ ಹೂಮಳೆಯೊಳಗೆ ನೆರೆ ನಭೋಭಾಗದಿಂ
ಬಂದ ಪುಷ್ಪಕಮನಾ ನಾಚಿತಂದೆಗಳೇರಿ
ಸಂದಣಿಸಿ ಧರೆ ಪೊಗಳೆ ಗಗನಮಂ ಮಿಕ್ಕೇರಿ
ಶರಣರೆಲ್ಲುಘೆ ಚಾಂಗು ಬೊಲ್ಲೆನುತೆ ಗುಡಿಗಟ್ಟಿ
ಪರಸಮಯಿಗಳ ಮನಂ ಘನ ಚಿಂತೆಯಂ ಮುಟ್ಟಿ
ಬಂದು ಕೈಲಾಸಪುರದ್ವಾರಂಗಳಂ ಪೊಕ್ಕು
ಮುಂದೆಸೆವ ಪುಳಕದಿಂ ಬರುತಂ ಮನಂ ಮಿಕ್ಕು
ಶ್ರುತಿಗಳ ಶಿರೋಮಣಿಗೆ ಯತಿಗಳ ಮಹಾನಿಧಿಗೆ
ವ್ರತಿಗಳ ನಿವಾಸಕ್ಕೆ ನತನಿಕರವಾರುಧಿಗೆ
ಶ್ರುತಿ ನಿಲುಕಲಾರದ ಪರಾಪರಾನಂದಕ್ಕೆ
ಮತಿಗಳೈದದ ಪರಂಜ್ಯೋತಿ ಸ್ವರೂಪಕ್ಕೆ
ಜಡೆಗಳ ಬೆಡಂಗಂಗೆ ಶಶಿಕಳೆಯ ಚೆಲುವಂಗೆ
ಹೆಡೆಗಳಹಿಕರ್ಣಂಗೆ ನೆನೆವವರ್ಗೊಲಿವಂಗೆ
ಭಸಿತದಪ್ರತಿಮಂಗೆ ಗಜಚರ್ಮದರಸಂಗೆ

ಮಿಸುಪ ಪುಲಿದೊವಲ ಪುಣ್ಯಪ್ರಕರ ಸೇವ್ಯಂಗೆ
ಶರ್ವಂಗೆ ಶಾಶ್ವತಂಗಚಲಿತಂಗಭವಂಗೆ
ಸರ್ವಜ್ಞನೆನಿಪ ಹಂಪೆಯ ವಿರೂಪಾಕ್ಷಂಗೆ
ಮೈಯಿಕ್ಕಿ ನಾಚಿತಂದೆಗಳಿರಲು ಕಾಣುತಂ
ಕೈಯಿಂದೆ ತಕ್ಕೈಸಿ ಪಿಡಿದಭವನೋವುತಂ
ತಕ್ಕಯಿಸಿ ಪುಳಕಿಸುತೆ ಸಂತಸುಖಮಂ ತಳೆದು
ಮಿಕ್ಕ ಸುಖದಿಂದೆ ಹೊರೆಯೇರಿ ಹಿಗ್ಗುತೆ ಬೆಳೆದು

ನೋಡಯ್ಯ ನಂದೀಶ ಕಲಿ ನಾಚಿತಂದೆಯಂ
ನಾಡೆ ಧರಣೀತಳಕೆ ಮೆರೆದ ಕಡು ನಿಷ್ಠೆಯಂ
ಶಿವಭಕ್ತರಭಿಮಾನಮಂ ಕಾಯ್ದರಿಂತುಂಟೆ
ಶಿವಸಮಯಮಂ ಧರೆಯೊಳುದ್ಧರಿಸಿದವರುಂಟೆ
ಪರಸಮಯಮಂ ಧುರದೊಳೊಕ್ಕಲಿಕ್ಕಿದರುಂಟೆ
ಅರುಹನ ಪ್ರತಿಮೆಯಂ ಕಿತ್ತು ಬಿಸುಟುವರುಂಟೆ
ಭಾಪುರೇ ನಾಚಯ್ಯ ಭಾಪು ಭಕ್ತರ ನಿಧಿಯೆ
ಭಾಪು ಮಝು ಭಾಪೆನ್ನ ಚೆನ್ನ ಶರಣರ ಸುಧೆಯೆ
ಎಂದಲ್ಲಿ ಗಣಪದವಿಯಂ ಕೊಟ್ಟು ರಾಗದಿಂ
ಇಂದುಧರನಲ್ಲಿ ಹರುಷದೊಳಿರ್ದು ಕರುಣದಿಂ
ದುರಿತಹರನೊಪ್ಪಿದಂ ತ್ರಿಪುರಾರಿಯೊಪ್ಪಿದಂ
ಸ್ಮರಿವೈರಿಯೊಪ್ಪಿದಂ ಕಾಲಾರಿಯೊಪ್ಪಿದಂ
ವಿಭುವೊಪ್ಪಿದಂ ಇಭಾನನಜನಕನೊಪ್ಪಿದಂ
ಪ್ರಭುವೊಪ್ಪಿದಂ ಪ್ರಭಾಕರನಯನನೊಪ್ಪಿದಂ
ಶಿವನೊಪ್ಪಿದಂ ಸದಾಶಿವರೂಪನೊಪ್ಪಿದಂ
ಭವನೊಪ್ಪಿದಂ ಭವಾನೀವರದನೊಪ್ಪಿದಂ
ತರುಣ ಶಶಿಕಿರಣಮಂಡಿತ ಮೌಲಿಯೊಪ್ಪಿದಂ
ಗುರುಮೂರ್ತಿ ಹಂಪೆಯ ವಿರೂಪಾಕ್ಷನೊಪ್ಪಿದಂ ೧೫೨-೨೨೮

ಮೃಡನತಿ ಕರುಣದೊಳಂ ಮಾ
ರುಡಿಗೆಯ ಕಲಿ ನಾಚಿತಂದೆಯಾಳಿವನೆಂದುಂ ।
ಕಡುಗೂರ್ತು ಭಕ್ತಿಯಂ ತಾಂ
ಕೊಡುಗೆಮಗೊಲವಿಂದೆ ಹಂಪೆಯ ವಿರೂಪಾಕ್ಷಂ ॥

❖❖

# ೫. ಗುಂಡಯ್ಯನ ರಗಳೆ

ಅಂಡಲೆವ ಮಾಯೆಯಂ ಬೆಂ
ಕೊಂಡನನಂತರ್ಮುಖೈಕ ಪೂಜೆಯನೊಲವಿಂ ।
ಕಂಡನನಿಳಿಯೊಳ್ಕುಂಬರ
ಗುಂಡನನುರೆ ಮೆರೆದ ನಮ್ಮ ಹಂಪೆಯ ರಾಯಂ ॥

ಎಂತೆನಲುತ್ತರಭಾಗದೊಳಿರ್ಪುದು
ಸಂತತ ಬಲ್ಲುಕೆಪುರವೆನಿಸಿರ್ಪುದು
ಅಲ್ಲಿರ್ಪಂ ಶಶಿಮೌಳಿಯ ಶರಣಂ
ಸಲ್ಲಲಿತಂ ಮಾಯಾನಿರುಹರಣಂ
ಘಟಕಾಯಕವಾಯತವಾಗಿರ್ಪುದು
ನಿಟಿಲಾಕ್ಷನ ನಟನೆಗೆ ನಲಿವಪ್ಪುದು
ನಾಮಂ ಕುಂಬರ ಗುಂಡನೆನಿಪ್ಪುದು
ಸೋಮಧರನ ಕಿವಿಗಿನಿದಾಗಿರ್ಪುದು
ನೇಮಸ್ಥಂ ನೇಮಸ್ಥಂ ಶಿವ ಶಿವ
ಭೂಮಿಯೊಳುತ್ತಮ ಭಕ್ತಂ ಶಿವಶಿವ
ಮಾಡುವ ಕಾಯಕವದನೇನೆಂಬೆಂ
ನೋಡುವಡೆನಗರಿದಿನ್ನೆಂತೆಂಬೆಂ

ಆಧಾರವೆಯಾಧಾರಮದಾಗಿರೆ
ವೇಧೆಯೆ ಚಕ್ರದ ಮೊಳೆ ತಾನಾಗಿರೆ
ಮಿಗೆ ಷಟ್ಚಕ್ರಮೆ ಚಕ್ರಮದಾಗಿರೆ
ಸೊಗಯಿಪ ನಾಭಿಯೆ ನಾಭಿಯದಾಗಿರೆ
ಕನಸಿನ ಕಾಯಂ ಮೃತ್ತಿಕೆಯಾಗಿರೆ
ನೆನಹಂ ಚಟೆದಾರಂಗಳವಾಗಿರೆ

ನಿಷ್ಠೆಯೆ ಪಿಡಿವುರುದಂಡಮದಾಗಿರೆ
ಮುಟ್ಟಿ ತಿರುಗುವುದು ಜೀವನಮಾಗಿರೆ
ಮಾಡುವ ಭಕ್ತಿ ಕಟಾಹಮದಾಗಲು
ಕೂಡಿದ ಕರಣದೆ ಮರ್ದಿಸುತಾಗಲು
ಮಿಗೆ ಶೋಷಣದಾತಪದಿಂದಾರಿಸಿ
ಬಗೆ ಮಿಗಲುದರಾಗ್ನಿಗಳಿಂ ದಾಹಿಸಿ
ಆನಂದಜಲಪ್ಲಾವನಮಾಗಿರೆ
ನಾನಾ ಭಕ್ತಿ ಕಟಾಹಮದಾಗಿರೆ
ಶಿವಕಾರುಣ್ಯಾಂಬುಗಳಿಂ ತೀವುತೆ
ಶಿವಭಕ್ತರ್ಗಾನಂದದೊಳೀವುತೆ

ಇಂತೊಳಗಣ ಘಟಕಾಯಕವೊಪ್ಪಲು
ಸಂತತ ಹೊರಗಣ ಮಾಟಮದೊಪ್ಪಲು
ಕುಂಬರನೆನಿಸಿರ್ಪಂ ಗುಂಡಯ್ಯಂ
ತ್ರ್ಯಂಬಕನಾಜ್ಞೆಯನೊಳಕೊಂಡಯ್ಯಂ
ಆಗಿರುತೊಂದೆವಸಂ ನಡೆತಂದಂ
ನಾಗಭರಣನಾಲಯಕೈತಂದಂ
ಶಿವನಿರ್ದಂ ಪೊಸ ಪೊಸ ಪೂಜೆಗಳಿಂ
ಭವನಿರ್ದಂ ಸಿಂಗರದೋಜೆಗಳಿಂ
ಶಿವಪೂಜೆಯನಚ್ಚರಿ ಮಿಗೆ ನೋಡುತೆ
ಭವಪೂಜೆಯನಕ್ಷಿಗಳಿಂ ಸವಿವುತೆ
ಪೂಜೆಗಳಕ್ಷಿಗಳೊಳ್ಬರೆದಂತಿರೆ
ಪೂಜೆಗಳಂತಸ್ಥಲದೊಳಗೆರಗಿರೆ
ನೋಡುತೆ ನೋಡುತೆ ನೋಡುತ್ತಿರ್ದಂ
ನೋಡಿದ ನೋಟದೊಳೆವೆ ಮರೆದಿರ್ದಂ
ಕಿರಿದುಂ ಪೊತ್ತಂತಿರುತಂ ಮೆಲ್ಲನೆ
ಕರೆಗೊರಲನ ಹತ್ತಿರೆ ಸಾರ್ದೊಯ್ಯನೆ
ಜಳಪೂರಿತ ಲೋಚನದಿಂ ನೋಡುತೆ
ಪುಳಕಿಸುತಂ ಪರಿಸನಮಂ ಮಾಡುತೆ
ಪಾದೋದಕಮಂ ಪ್ರಿಯದಿಂ ಕೊಳುತಂ
ಆದರದಿಂ ಕರುಣಮನೊಳಕೊಳುತಂ
ಪೊಡಮಡುತೊಯ್ಯನೆ ಪೊಡಮಡುವಾಗಳು
ಮೃಡನಂ ಬೀಳ್ಕೊಂಡೆಯ್ತಪ್ಪಾಗಳು

ಮನದೊಳ್ಕಣ್ಣೊಳ್ ಪೂಜಾಭಾವಂ
ನೆನಹಿನಲೊಪ್ಪುವ ಶಂಕರ ಭಾವಂ
ಬಿಡದಿರೆ ತನ್ನಯ ಮನೆಗೆಯ್ತಂದಂ
ಕಡುನಿಷ್ಠೆಯ ಭರದಿಂದೈತಂದಂ
ಊಟಂ ನಿದ್ರೆಗೆ ಮನವಿಲ್ಲಿಲ್ಲಂ
ನೋಟಂ ನುಡಿಗೆಡೆಯಿಲ್ಲೆಡೆಯಿಲ್ಲಂ
ಶಿವಪೂಜೆಯ ಕರಡಿಗೆಯಂತಿರ್ದಂ
ಶಿವಪೂಜೆಯ ಗವಸಣಿಗೆಯೊಲಿರ್ದಂ

ಇರುತೊಂದೇ ಸೊಗಯಿಸುತಿರೆ ನೋಡುತೆ
ಚರಿತದೆ ಘಟಕಾಯಕಮಂ ಮಾಡುತೆ
ಪಿಡಿಗುಂಡಂ ತಳದೊಳಗಳವಡಿಸುತೆ
ಎಡಗೈಯಂ ಪೊಸಕೊಂಡನೊಳಗಿರಿಸುತೆ
ಕಲುವಲಗೆಯನಂತಳವಡೆ ಪಿಡಿವುತೆ
ಚೆಲುವೆನಿಸುವ ಪೊಸಘಟಮಂ ಮಾಡುತೆ
ಬಾರಿಸುವಿಚ್ಛೆಗೆ ತನುವಲ್ಲಾಡಲು
ಸೇರಿಸುತೊಳಗಣ ಲಿಂಗಮದಾಡಲು
ಹೆಚ್ಚಿದನುಬ್ಬಿದನುತ್ತಮ ಭಕ್ತಂ
ಮಚ್ಚಿದನಾಡಿಸುವದನಾ ಭಕ್ತಂ
ಅಂತಃಸ್ಥಲದೊಳ್ಕಂಡಂ ಗುಂಡಂ
ಸಂತೋಷವನೊಳಕೊಂಡಂ ಗುಂಡಂ
ಇರುಳೆಲ್ಲಂ ನಿಲ್ಲದೆ ಬಾರಿಸುತಿರೆ
ಕರಣದೊಳಗೆ ಹರನೊಲಿದಾಡುತ್ತಿರೆ
ಮತ್ತಂ ಮತ್ತಂ ಹಿಂಗದೆ ಪೊಂಗುತೆ
ಸುತ್ತಂ ಸುಳಿವುತ್ತುರ್ಬುತೆ ಕೊರ್ಬುತೆ
ಬಾರಿಪ ಕೈ ಮುಚ್ಚಿದ ಕಣ್ಣೊಪ್ಪಿರೆ
ತೀರದ ಪುಳಕಂ ಮೈಯ್ಯೊಳ್ಳಿರೆ
ನೆನೆದಂದಂ ಮಡಕೆಗಳಾಗುತ್ತಿರೆ
ಮನದಂದದೆ ಶಿವನೊಳಗಾಡುತ್ತಿರೆ
ಒಳಗಣ ಶಿವನಾಟಕ್ಕೆಡೆಮಾಡುತೆ
ಬೆಳಗಪ್ಪನ್ನಂ ಬಾರಿಸಿ ನೋಡುತೆ
ಇದು ನೇಮಂ ಇದು ನೇಮವೆನುತ್ತಂ

ಮುದದಿಂದಾಡಿಸುತಿರ್ಪನೆನುತ್ತಂ
ಶಿವನಾಟದ ಸವಿಗಂಡಂ ಗುಂಡಂ
ಭವನಂ ನೆರೆ ಬೆಂಕೊಂಡಂ ಗುಂಡಂ
ಉದಯದ ನೇಮಕೆ ಮತ್ತೈತಂದಂ
ಸದಮಳ ಹೃತ್ಕಮಳಂ ನಡೆತಂದಂ
ಬಂದು ಶಿವಾಲಯದೊಳಗಂ ಪೊಗುತಿರೆ
ಇಂದುಧರಂ ಬೇರಂದದೊಳಿರುತಿರೆ
ಪರಮಂ ಮುನ್ನಿನ ಪೂಜೆಯದಲ್ಲದೆ
ಇರೆ ಹೊಸಪೂಜೆ ಮನಂಗೊಂಬಂದವೆ
ಆ ಪೂಜೆಯನೆಡೆಗೊಂಡಂ ಮನದೊಳು
ತಾಪತ್ರಯರಹಿತಂ ಸನ್ಮನದೊಳು
ನೇಮಂ ಮಾಡಿಯೆ ತಿರುಗಿದನಾಗಳು
ಸೋಮಧರನನೊಳಗಿರಿಸುತ್ತಾಗಳು

ಬಂದೆಂದಿನ ತೆರದಿಂ ಮಾಡುತ್ತಿರೆ
ಸಂದೊಪ್ಪುವ ಘಟಕಾಯದಿಂದಿರೆ
ನೇಮದ ಪೂಜೆಗಳೊಳಗಳವಡುತಿರೆ
ಕಾಮಹರಂ ನಲಿ ನಲಿದಾಡುತ್ತಿರೆ
ತಟಪಟ ತಂದಣ ದಿಂಧಿಮಿಕೆನಿಸುವ
ತಟಕಂ ದಟ ಧಿಕ್ಕಟ ತಟಕೆನಿಸುವ
ಹಲಗೆಯ ಶಬ್ದಂ ಕರಡೆಯ ಶಬ್ದಂ
ಹಲಗೆಯ ಶಬ್ದಂ ಮುರಜದ ಶಬ್ದಂ
ಮಡಕೆಯ ದನಿಯಾವುಜದ ಸುನಾದಂ
ಮಡಕೆಯ ದನಿ ಪೊಸ ಕಹಳೆಯ ನಾದಂ
ತಾಳಂ ಕೌಸಾಳದ ಹೊಸನಾದಂ
ಶೂಲಿಗೆ ಮೇಳವಣೆಯ ಮೃದುನಾದಂ
ತಾನಾಗಿರೆ ಮಧುರತೆಯಂ ಬೀರುತೆ
ನಾನಾವಿಧ ನವಗತಿಯಂ ತೋರುತೆ
ಹೊರಗಲ್ಲಾಡಲು ಶಿವನೊಳಗಾಡಲು
ತೆರಹಿಲ್ಲದ ಪುಳಕಂಗಳ್ಮೂಡಲು
ಬಂದರನರಿಯದೆ ಹೋದರನರಿಯದೆ
ನಿಂದರನರಿಯದೆ ನೆರೆದರನರಿಯದೆ

ಊಟವನರಿಯದೆ ನಿದ್ರೆಯನರಿಯದೆ
ನೋಟವನರಿಯದೆ ನೆನೆವುದನರಿಯವೆ
ತೂಗಾಡುತೆ ಮಡಕೆಗಳಂ ಬಾರಿಸಿ
ಜೋಗಂಬೋಗುತ್ತಂ ನೆರೆ ಬಾರಿಸಿ
ಅಡ್ಡಂ ತಿಗಟಂಬರಿವುತೆ ಬಾರಿಸಿ
ಅಡ್ಡಂ ಬಿತ್ತರಿಸುತ್ತಂ ಬಾರಿಸಿ
ಕುಣಿವುತೆ ಕೂಗುತೆ ನಲವಿಂ ಬಾರಿಸಿ
ಮಣಿವುತೆ ತಣಿವುತೆ ಮುದದಿಂ ಬಾರಿಸಿ
ಒಳಗಣ ಶಿವನಂ ನೆರೆ ಸಾಗಿಸುತಂ
ಬೆಳಗುವ ಬೆಳಗಂ ನೆರೆ ಜೋಗಿಸುತಂ
ನೃತ್ಯದ ನೆಲೆಯೊಳ್ಮನವೆರಗುತ್ತಂ
ಸತ್ಯದ ಸುಖದೊಳ್ಮುಳುಗಾಡುತ್ತಂ
ಬಾರಿಸಿ ಬಾರಿಸಿ ನಿಲುತಂ ನಿಲುತಂ
ಸೇರಿದ ಸುಖದೊಳ್ಸಲುತಂ ಸಲುತಂ
ಪಲವುಂ ದಿವಸಂ ಸಲೆ ಬಾರಿಸುತಿರೆ
ಒಲವಿಂ ಸರ್ವೇಶನನಾಡಿಸುತಿರೆ
ನಂಬಿದ ಭಕ್ತನನರಿಯದುದೆಲ್ಲಂ
ಕುಂಬರನೆಂದಿಪ್ಪುದು ಜಗವೆಲ್ಲಂ
ಇರುತೊಂದೆವಸಂ ಘಟಕಾಯಕದೊಳು
ಪರಮನನಾಡಿಸುತಿರ್ಪವಸರದೊಳು
ತನ್ನಂ ಮರೆದೊಲವಿಂ ಬಾರಿಸುತಿರೆ
ಭಿನ್ನಂದೊರೆದಾ ಸುಖಿ ಬಾರಿಸುತಿರೆ
ಬಾರಿಪ ದನಿಗೀಶಂ ಹಾರೈಸುತೆ
ಕಾರುಣ್ಯಾಂಬುಧಿ ತನ್ನಂ ಮರೆವುತೆ
ಕೈಳಾಸದೊಳೆಸೆವೊಡ್ಡೋಲಗದೊಳು
ಶೈಳಜೆ ಕೆಲದೊಳಗಿಪ್ಪವಸರದೊಳು
ಗುಂಡನ ಹೃದಯವಿದೆಂದೇ ಬಗೆವುತೆ
ತಂಡದ ಸುರರೋಲಗಮಂ ಮರೆವುತೆ
ಶಿವಪದದಂದುಗೆ ಘಲಘಲಕೆಂದೆನೆ
ನವ ಕಟಕಧ್ವನಿ ಝುಂ ಝುಣಕೆಂದೆನೆ
ಮರ್ತ್ಯದ ಧನಿ ಕೈಲಾಸದ ನೃತ್ಯಂ
ಸತ್ಯದ ಧನಿ ಶಿವಲೋಕದ ನೃತ್ಯಂ
ದೇವನ ಭಕ್ತನೊಳೆಡೆದೆರಹಿಲ್ಲದೆ
ತಾವರೆ ನಾಳದ ನೂಲಿರ್ಪಂದದೆ

ಮಸಗುತ್ತಿರೆಯಿರೆ ಗಿರಿಸುತೆ ಕಾಣುತೆ
ಹೊಸಪರಿ ಕರುಣಿಪುದೆನುತಂ ಕೇಳುತೆ
ಇರೆ ಭೋಂಕನೆ ಶಿವನೆಚ್ಚತ್ತೆಂದಂ
ಹರುಷಂ ಮಿಗೆ ಗಿರಿಜೆಗೆ ತಾನೆಂದಂ
ಗುಂಡನ ಹೃದಯದೊಳಾಡುತ್ತಿರ್ದೆಂ
ತಂಡದ ಸುಖದೊಳ್ಮೂಡುತ್ತಿರ್ದೆಂ
ಇರುತಂ ಸ್ಥಾನದ ಭೇದಮನರಿಯದೆ
ಸುರನರಲೋಕದ ವಿವರಣೆಯರಿಯದೆ
ಅಲ್ಲಿಯುಮಿಲ್ಲಿಯು ಮೂಡುತ್ತಿರ್ದೆಂ
ಸಲ್ಲೀಲೆಯೊಳೆನ್ನಂ ಮರೆದಿರ್ದೆಂ
ಎಂದು ಬೆಸಸೆ ಗಿರಿಸುತೆ ಬೆರಗಾದಳು
ಇಂದುಧರಂಗೊಲವಿಂ ತಾನೆಂದಳು
ನಿಮ್ಮುವನಾಡಿಪ ಭಕ್ತನದಾವಂ
ನಿಮ್ಮಂ ಮೆಚ್ಚಿಪ ಶರಣನದಾವಂ
ದೇವಾ ಎನಗಿದು ಕೌತುಕವೆಂದೆನೆ
ದೇವಾ ಮರ್ತ್ಯದೊಳಿಂತಿದು ಪೊಸತೆನೆ
ನಡೆ ತೋರಿದಪೆಂ ಭಕ್ತನ ನಿಲವಂ
ಎಡೆಗೊಂಡೆನ್ನಯ ನಾಟ್ಯದ ಫಲವಂ

ಎಂದಿರ್ವರುವೊಂದಾಗಿ ಬರುತ್ತಂ
ಬಂದೀ ಮರ್ತ್ಯದೊಳವತರಿಸುತ್ತಂ
ಗಗನದೊಳಂಬಿಕೆಯಂ ಸ್ಥೈತಿರಿಸುತೆ
ಜಗದೀಶಂ ಸುಖಮಂ ಹಾರೈಸುತೆ
ಗುಂಡನ ನಿಳಯದ ಮುಂದಂ ನಿಂದಿರೆ
ಗುಂಡಯ್ಯಂ ಸುಖದಿಂ ಬಾರಿಸುತಿರೆ
ಒಳಗಣ ಸುಖದಿಂ ಹೊರಗಲ್ಲಾಡದೆ
ಪುಳಕಿಸುತಂ ಬಾರಿಸುತಂ ಮಾಣದೆ
ಕಂಡಭವಂ ಕಡುನಿಷ್ಠೆಗೆ ಮೆಚ್ಚುತೆ
ಗುಂಡಯ್ಯನನೆಚ್ಚರಿಸಲ್ಬಗೆವುತೆ
ಒಳಗಾಡುವ ಲಿಂಗವನಾಕರುಷಿಸಿ
ಒಳಗಣ ಲಿಂಗವ ಶಿವನೊಳ್ ಮೇಳಿಸಿ
ಲಿಂಗದೊಡನೆ ಕಣ್ದೆರೆದಂ ಗುಂಡಂ
ಹಿಂಗದೆ ಹೊರಗಣ ಶಿವನಂ ಕಂಡಂ

ಕೊಬ್ಬಿದನುಬ್ಬಿದನುಲಿದಾಳೆರ್ದಂ
ಸರ್ಬಸುಖಂಗಳ್ಸಲೆಬರುತಿರ್ದಂ
ಕುಣಿದಾಡುತೆ ಮಡಕೆಗಳಂ ಬಾರಿಸಿ
ಕುಣಿದಾಡುತೆ ಕುಡಿಕೆಗಳಂ ಬಾರಿಸಿ
ಶಿವನಂ ಸುತ್ತಿಬರುತ್ತಂ ಬಾರಿಸಿ
ಭವನಂ ಬಲವಂದೊಲವಿಂ ಬಾರಿಸಿ
ಕುಣಿವುತೆ ಕೊರಲೆತ್ತುತೆ ನೆರೆ ತೂಗುತೆ
ಮಣಿವುತೆ ತೂಗಾಡುತೆ ಸುಖಿಯಾಗುತೆ
ಕೊಂಕುತೆ ಬಂಕುತೆ ಹಾರೈಸುತ್ತಂ
ಬಿಂಕಂಬೆತ್ತುಬುಬೆಂದಾಡುತ್ತಂ
ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ
ಸುಖದಾಟಂ ತನ್ನಂ ಬೆಂಬತ್ತಲು
ಸುಖಮುಖದಿಂದಂ ಮನಮಂ ಸುತ್ತಲು
ಒಳಗಾಡಿದೆನಿನಿತುಂ ದಿನವೆನುತುಂ
ಇಳೆಯರಿಯಲ್ಪೊರಗಾಡುವೆನೆನುತುಂ
ದಶಭುಜಮಂ ದಿಗುತಟದೊಳು ಪಸರಿಸಿ
ಎಸೆವ ಕರಂಗಳನೆತ್ತಂ ನೆಮ್ಮಿಸಿ
ಒಂದು ಪದಂ ಪಾತಾಳವನೊತ್ತಲು
ಒಂದು ಪದಂ ಬ್ರಹ್ಮಾಂಡವನೆತ್ತಲು
ಜಡೆಗಳ್ ಬೆಂಬಳಿವಿಡಿದಾಡುತ್ತಿರೆ
ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ
ತಡಿಯೊಳ್ ಶಶಿಕಳೆಯಲ್ಲಾಡುತ್ತಿರೆ
ಕಡು ಚೆಲ್ವಳಕಂ ಕುಣಿದಾಡುತ್ತಿರೆ
ಮಿಸುಗುವ ಡಮರುಗ ಢಂಢಂಢಣಲೆನೆ
ಘಸುಳದ ಹರಿಯವತಾರಂ ತಿರ್ರನೆ
ತಿರುಗುತ್ತಿರೆಯಹಿಗಳು ಹೆಡೆಯೆತ್ತಲು
ಕರಿ ತೊವಲುಂ ನಭವಂ ಬೋಹರಿಸಲು
ಸರಸಿಜಭವನ ಶಿರಂ ಬೊಬ್ಬಿಡುತಿರೆ
ಸುರರ ಶಿರೋಮಾಲೆಗಳುಲಿವುತ್ತಿರೆ
ಪೊಂಗೆಜ್ಜೆಗಳ ರವಂ ಘಲ ಘಲಕೆನೆ
ತೊಂಗಲ ಘಂಟೆ ಢಣಂ ಢಂ ಢಣಲೆನೆ
ಆಡಿದನಾಡಿದನಾಹಾ ಶಂಕರ

ನಾಡಿದನಾ ಗುಂಡನ ಮುಂದೀಶ್ವರ
ನಾಗಳ್ ಸುರಲೋಕದ ವಾದ್ಯಂ ಬರೆ
ಬೇಗದಿ ತುಂಬುರರುಗ್ಘಡಿಸುತ್ತಿರೆ
ಮೃಡನವನೊಲ್ಲದೆ ಬೇಡೆಂದೆನುತಿರೆ
ಮಡಕೆಯ ವಾದ್ಯಂ ಸಾಲ್ಗೆಂದೆನುತಿರೆ
ಶಿವನಂ ಕಂಡ ಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಇರ್ವರನೀಕ್ಷಿಸಿ ಗಣತತಿ ಕುಣಿಯಲು
ಸರ್ವ ಸ್ಥಾವರ ಜಂಗಮವಾಡಲು
ಮಡಕೆಯ ಶಬ್ದಕ್ಕಾಡುತ್ತಿರ್ದಂ
ಮೃಡನಖಿಳಂ ಬೆರಸಾಡುತ್ತಿರ್ದಂ
ನಾನಾ ಮುಖದಾನಂದಂ ಪುಟ್ಟಲು
ನಾನಾ ರವವಂಬರಮಂ ಮುಟ್ಟಲು
ಗಿರಿಸುತೆ ಕಂಡತಿ ಚೋದ್ಯವೆನುತ್ತಂ
ನರಲೋಕಂ ಕೆಡಲಾಗದೆನುತ್ತಂ
ಮೀರಿದಡರಿದೀಶನ ಪರಿಯೆನುತಂ
ಮೀರಿದ ಮುನ್ನಂ ಮಾಣಿಪೆನೆನುತಂ
ದೇವ ಸದಾಶಿವ ಶಾಂತಪ್ರಭುವೆ
ದೇವ ಸುಧಾಕರಧರ ಮನುವಿಭುವೆ

ದೇವ ಕೃಪಾಕರ ಶಂಕರ ಶಂಕರ
ದೇವನತಜ್ಜನ ವರದಾಭಯಕರ
ಕರುಣಿಸನಂತ ವಿಭೂಷವಿಭೂಷಿತ
ಕರುಣಾಕರ ಸಜ್ಜನವರಪೋಷಿತ
ಕರುಣಿಸು ಶೂಲಧರ ಪ್ರತಿಶೂನ್ಯನೆ
ಕರುಣಿಸು ಶಿವಭಕ್ತಾಳಿಗನನ್ಯನೆ
ಭರ್ಗನೆ ಭೀಮನೆ ಭಾಳೇಕ್ಷಣನೆ
ದುರ್ಗತ್ರಯಕಾನನ ಹುತವಹನೆ
ಕರುಣಿಸೆನುತ್ತಂ ಗಿರಿಸುತೆ ಹೊಗಳಲು
ಕರುಣಾರವವಂಬಿಕೆಯೊಳ್ ನೆಗಳಲು
ಕೇಳುತೆ ಮೆಲ್ಲನೆ ನಾಟ್ಯವನುಡುಗುತೆ
ಶೈಲಜೆಯಿಚ್ಛೆಗೆ ಸಮತೆಗೆ ಸೇರುತೆ
ಆಡುವ ಗಣಕುಲಮಂ ಸೈತಿರಿಸುತೆ

ನೋಡುವ ಪಾರ್ವತಿಗಭಯವನೀವುತೆ
ಕುಣಿದಾಡುವ ಗುಂಡಯ್ಯನನೀಕ್ಷಿಸಿ
ತ್ರಿಣಯ ಸದಾನಂದದೊಳಾಲಿಂಗಿಸಿ
ಬಂದು ವಿಮೂರ್ಧ್ನಿಘ್ರಾಣಂ ಮಾಡುತೆ
ಇಂದುಧರಂ ಸಂತೋಷದೊಳಾಡುತೆ
ಭುಜಗಾಭರಣಂ ಕರುಣಂ ಮಾಡುತೆ
ಅಜಶಿರಕರ ಸಂತೋಷಂ ಮಾಡುತೆ
ಜಲಪೂರಿತ ಲೋಚನದಿಂ ನೋಡುತೆ
ನಳನಳಿಪಂಗದಿ ಬಿಗಿ ಬಿಗಿದಪ್ಪುತೆ
ಹೊಸ ಪುಷ್ಪಕದೊಳು ಹರುಷದೊಳೇರಿಸೆ
ಪಶುಪತಿ ದೇವಗಣಾಳಿಗೆ ತೋರಿಸೆ

ತರದಿಂ ಸೂಸುವ ಹೊಸ ಹೂಮಳೆಯೊಳ್
ನೆರೆದು ವಿರಾಜಿಪ ಮುರಜದ ದನಿಯೊಳ್
ನೆಗೆದಂ ಗಗನತಳಕ್ಕೆ ಮಹೇಶಂ
ಬಗೆಮಿಗೆ ನಡೆತಂದಂ ಗಿರಿಜೇಶಂ
ನಲವಿಂ ಕಲಧೌತಾದ್ರಿಯೊಳೊಪ್ಪುವ
ನಿಳಯದೊಳನುಪಮ ಕಾಂತಿಯೊಳೊಪ್ಪುವ
ಭದ್ರಾಸನಮಂ ಮೇಳೈಸುತ್ತಂ
ರುದ್ರಂ ಗುಂಡಯ್ಯನನೋವುತ್ತಂ
ಜಗವೆಲ್ಲವನೊಲಿದಾಡಿಸುವೆನ್ನಂ
ಸೊಗಯಿಪ ತನ್ನ ಸುನಾದಕ್ಕೆನ್ನಂ
ಮಡಕೆಯ ದನಿಗಾಡಿಸಿದವರುಂಟೆ
ಪೊಡವಿಯೊಳಿಂತಪ್ಪುನ್ನತರುಂಟೆ
ಎಂದನವರತಂ ಕೊಂಡಾಡುತ್ತಂ
ಇಂದುಧರಂ ನೆರೆ ಮುಂಡಾಡುತ್ತಂ
ಗಣಪದಮಂ ಗುಂಡಯ್ಯಂಗೀವುತೆ
ಗಣಸಂಕುಳದೊಳು ಸುಖದಿಂದೋವುತೆ
ಹರನೊಪ್ಪಿದ ಪುರಹರನೊಪ್ಪಿರ್ದಂ
ಗಿರಿಜಾಪತಿಯೊಪ್ಪಿದನೊಪ್ಪಿರ್ದಂ
ಭಕ್ತರ ಭಾಗ್ಯದ ನಿಧಿಯೊಪ್ಪಿರ್ದಂ
ಭಕ್ತರ ಕಣ್ಣುಂ ಗತಿಯೊಪ್ಪಿರ್ದಂ
ಶರಣರ ಸಂಗದ ಸುಖಿಯೊಪ್ಪಿರ್ದಂ

ಹರಿಯಜರರಿಯದ ಶಿವನೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ ೨೭೮

ಖಂಡಶಶಿಮೌಳಿ ಕುಂಬರ
ಗುಂಡರ ಸುತನೆಂದು ಭಕ್ತಿಯಂ ಕುಡುಗೆನಗು ।
ದ್ದಂಡತರ ದಂಡಧರ ಹರ
ಮಂಡಿತನಯನಂ ಪುರಾರಿ ಹಂಪೆಯ ರಾಯಂ ॥

❖❖

# ೬. ಭೋಗಣ್ಣನ ರಗಳೆ

ಅಂಬಿಕೆಯರಸಂ ನಾಟ್ಯಾ
ಡಂಬರಮುಖನೆಮ್ಮ ಹಂಪೆಯ ವಿರೂಪಾಕ್ಷಂ ।
ಸಾಂಬಂ ಧಾರುಣಿ ಪೊಗಳಲು
ಕೆಂಬಾವಿಯ ಭೋಗತಂದೆಯಂ ನೆರೆ ಮೆರೆದಂ ॥

ವಸುಧಾತಳಕ್ಕೆ ರಂಜಿಪುದೊಂದು ಶಿವಪುರಂ
ಕುಸುಮಶರ ಪುರಕಾಲಹರನ ನಚ್ಚಿನ ಪುರಂ
ಹರಭಕ್ತಿರಾಗರಸಕೂಪವೆಂಬಂತಿರಲು
ಧರೆಗೆ ಕೆಂಬಾವಿಯೆಂಬಾ ನಾಮವೊಪ್ಪಿರಲು
ಅಲ್ಲಿರ್ಪನೊರ್ವ ಭಕ್ತಂ ಜಂಗಮಪ್ರೇಮಿ
ಸಲ್ಲಲಿತನುತ್ತಮಂ ನಿರ್ದೋಷಿ ನಿಷ್ಕಾಮಿ
ತನ್ನ ಪೆಸರಾ ಪುರಕೆ ಭೋಗಣ್ಣನೆಂದೆಸೆದು
ತನ್ನ ಶಿವಭಕ್ತಿ ಹರಚರಣಕ್ಕೆ ಕುಡಿವರಿದು
ಪಲ್ಲವಿಸಿ ಪೂತು ಫಲವಾಗುತಿರಲೊಪ್ಪುವಂ
ಎಲ್ಲ ತೆರದಿಂ ಶಿವನ ಪದಯುಗಮನಪ್ಪುವಂ
ಶಿವಭಕ್ತರೊಳಗೆ ಜಾತಿಯ ವಿಚಾರಿಪುದಿಲ್ಲ
ಶಿವಭಕ್ತರೊಳಗೆ ಭೇದವ ಕಲ್ಪಿಸುವುದಿಲ್ಲ
ಹರಭಕ್ತರೊಳಗೆ ಜಾಣ್ನುಡಿಯರನರಸುವುದಿಲ್ಲ
ಹರಭಕ್ತರೊಳಗಧಿಕ ವಿದ್ಯವರಸುವುದಿಲ್ಲ
ವೇಷವಿರ್ದಲ್ಲಿ ಗಿರಿಜೇಶನಿರ್ದಪನೆಂದು
ವೇಷವಿರ್ದಲ್ಲಿ ಸರ್ವೇಶನಿರ್ದಪನೆಂದು
ಭಕ್ತರಂ ಕೊಂಡಾಡುತಿರ್ಪನಾನಂದದಿಂ
ಭಕ್ತರ್ಗೆ ಬೆಸಕೆಯ್ಯುತಿರ್ಪನುತ್ಸಾಹದಿಂ

ಇಂತು ಪಲವುಂ ಕಾಲವಿರುತಿಪ್ಪ ಸಮಯದೊಳು
ಸಂತತಂ ಶಿವಭಕ್ತಿ ಸಂದಣಿಪ ಛಂದದೊಳು
ಒಂದು ದೇವಸಂ ಭೋಗತಂದೆಗಳು ಸುಖಮಿರಲು
ಇಂದುಧರನೊಂದು ವೇಷಂಬೊತ್ತು ಬರುತಿರಲು
ಹೆಗಲ ಮಿಳಿ ಕೈಯ ಕಂಕರಿಗೋಲಿನೀಶ್ವರಂ
ಸೊಗಯಿಪ ವಿಭೂತಿ ರುದ್ರಾಕ್ಷಿಯ ಕೃಪಾಕರಂ
ಹಿರಿಯ ವೇಷಂಗೊಂಡು ಮನೆಯ ಮುಂದಂ ಸುಳಿಯೆ
ಶರಣನ ಮನಂ ನೋಡಲೆಂದು ಮುದದಿಂ ಸುಳಿಯೆ
ಬಂದು ಭೋಗಣ್ಣನೊಲವಿಂದೆ ನೆರೆ ಸೈಗೆಡೆದು
ಮಂದ್ಯೆಸಿ ಪುಳಕಂಗಳೊಪ್ಪೆ ಪದಮಂ ಪಿಡಿದು
ಕೆಲಬಲದ ಮನೆಯ ವಿಪ್ರರು ನೆರೆದು ನೋಡುತಿರೆ
ಉಲಿದೆಳ್ದು ತಮತಮಗೆ ಕೌತುಕಂಬಡುತಮಿರೆ
ಕಯ್ಗೊಟ್ಟು ಹರುಷದಿಂದಂ ಮನೆಗೆ ನಡೆತಂದು
ಮೆಯ್ಗರೆದು ಕುಗ್ಗಿ ಭಯಭಕ್ತಿಯಿಂದಂ ನಿಂದು
ಉನ್ನತಾಸನಮನಿತ್ತಾನಂದಮಂ ತಳೆದು
ಪನ್ನಗಾಭರಣನ ಪದದ್ವಯಮುಮಂ ತೊಳೆದು
ಪಾದೋದಕಂಗಳಂ ಕಣ್ಗಳೊಳಗೊತ್ತುತಂ
ಆದರಂ ಮಿಗೆ ತನ್ನ ಹೃದಯದೊಳ್ ಸಾರ್ಚುತಂ
ದೇವಾರ್ಚನೆಯ ಮಾಡಲಾರೋಗಣೆಗೆ ಕೊಟ್ಟು
ಭಾವಿಸುತ್ತೆರಗಿ ಭಯಭಕ್ತಿಯಂ ಮುಂದಿಟ್ಟು
ಅವರ ಪ್ರಸಾದಮಂ ಸಾದರಂ ಕೈಕೊಂಡು
ಶಿವಭಕ್ತಿಯೊಳಗೆ ನೆರೆ ಸಂತಸಮನೊಳಕೊಂಡು

ಇರಲಿತ್ತಲೂರ ಮಟ್ಟೆಯ ಮರುಳ್ಗಳ್ ನೆರೆದು
ಸ್ಮರವಿರೋಧಿಯನರಿಯದಜ್ಞರೆಲ್ಲರ್ನೆರೆದು
ಸಡಗರಂ ಮಿಗೆ ಚಂದಿಮರಸನಲ್ಲಿಗೆ ಬಂದು
ಕಡುಮೂರ್ಖರೆಲ್ಲರುಂ ಸಂಭ್ರಮಿಸುತಂ ನಿಂದು
ಕೇಳರಸ ನಿಮ್ಮೂರೊಳಿರವಾಗದೆಮಗೆಲ್ಲ
ಊಳಿಗಂ ಪಿರಿದರಸ ನಿಮ್ಮಾಜ್ಞೆಯಿನಿತಿಲ್ಲ
ನಿಮ್ಮೂರ ಭೋಗಣ್ಣನೆಂಬ ಭಕ್ತಂ ಮೀರಿ
ತಮ್ಮ ಭಕ್ತಾಚಾರವೆಗ್ಗಳಂ ತಲೆಗೇರಿ
ಹೊಲೆಗಲಸಿ ನೆಲೆಗೆಟ್ಟು ಛಲವುಡುಗಿ ಕುಲವಳಿದು

ಹೊಲೆಯನೆನ್ನದೆ ಹಿರಿಯ ಭಕ್ತನೆಂದರಿದರಿದು
ತಂದಿಂತು ಮನೆಯೊಳಗೆ ಗೋಜಾಗತಂ ಮಾಡಿ
ಸಂದ ವಿಪ್ರರ ಕರ್ಮವೆಲ್ಲಮಂ ಪುಸಿಮಾಡಿ
ಹೊಲೆಯನಂ ಮುಂದಿಟ್ಟುಕೊಂಡೈದನೆಲೆಯರಸ
ಕುಲವೆಲ್ಲ ನಿರ್ಮೂಲವಾದುದಿಂದೆಲೆಯರಸ
ಆತನಂ ಕರೆಯಿಪುದು ಪೊರಮಡಿಪುದಲ್ಲದಡೆ
ಆತನಿರಲಾವೆಲ್ಲ ಪೋದಪ್ಪೆವಲ್ಲದಡೆ

ಎನೆ ಚಂದಿಮರಸನಾ ಜಡರ ಮಾತಂ ಕೇಳ್ದು
ಮನದೊಳಗೆ ಮುನಿವುತಂ ಕಡುಗೋಪಮಂ ತಾಳ್ದು
ಚಾರರಂ ಕಳುಪಿ ಭೋಗಣ್ಣನಂ ಕರೆಯಿಸಲು
ಮಾರಾರಿಯಣುಗನೆಯ್ತಂದಲ್ಲಿ ರಂಜಿಸಲು
ಬೆಳಬೆಳಪ ಭಸಿತದಿಂ ತೊಳಪ ಸುಲಿಪಲ್ಗಳಿಂ
ನಳನಳಿಪ ಕಾಂತಿಯಿಂ ಥಳಥಳಿಪ ಕಣ್ಗಳಿಂ
ಲೆಕ್ಕಿಸದೆ ಕೈಕೊಳ್ಳದಕ್ಕರಿಂ ಬಂದಿರಲು
ಮುಕ್ಕಣ್ಣನವತಾರವೆಂಬಂತೆ ನಿಂದಿರಲು
ಏನಯ್ಯ ಪುರದೊಳಗಕೃತ್ಯವಂ ಮಾಳ್ಪರೆ
ಏನಾದಡಂ ಹೊಲೆಯರಂ ಹೊಗಿಸಿ ಬಾಳ್ವರೆ
ಮನೆಯೊಳಗನಾಮಿಕನ ಪೊಗಿಸುವರೆ ಭೋಗಣ್ಣ
ಮನವಾರೆ ನಿಮ್ಮದಾಚಾರವೇ ಭೋಗಣ್ಣ

ಎನೆ ಹೊಲೆಯರಂ ಹೊಗಿಸಿತಿಲ್ಲ ಮನೆಯೊಳಗರಸ
ನಿನಗೆ ತಿಳಿವಿಲ್ಲ ತಿಳಿವಿಲ್ಲದಡೆ ಕೇಳರಸ
ನಾರಣಕ್ರಮಿತರಂ ಪೊಗಿಸಿದೆನೆ ಮನೆಯೊಳಗೆ
ಸೂರಿಭಟ್ಟರನೊಯ್ದು ಪೊಗಿಸಿದೆನೆ ಮನೆಯೊಳಗೆ
ಕೃಷ್ಣ ಪೆದ್ದಿಗಳನೊಮ್ಮೆಯು ಕರೆದು ಬಲ್ಲೆನೆ
ವಿಷ್ಣುಭಟ್ಟರನೊಮ್ಮೆಯುಂ ಸೋಂಕಿ ಬಲ್ಲೆನೆ
ಶಿವನನರಿಯದ ಹೊಲೆಯರಂ ಹೊಗಿಸೆ ಕೇಳರಸ
ಶಿವಭಕ್ತನಂ ಹೊಗಿಸಿದೆಂ ತಪ್ಪೆ ಹೇಳರಸ
ಎಂದ ಮಾತಂ ಕೇಳ್ದು ವಿಪ್ರರುಂ ಹೊಲೆಯರೆ
ಛಂದವಾಯಿತು ಮಟ್ಟಿಯಿಟ್ಟರುಂ ಹೊಲೆಯರೆ
ಇಂತಪ್ಪ ಸಿತಗರೆಮ್ಮೂರೊಳಗಿರಲ್ಬೇಡ

ಇಂತಪ್ಪರಂ ಕಂಡಡಂಜುವೆವಿರಲ್ಬೇಡ
ಹೋಗೆಂದು ಚಂದಿಮರಸಂ ಜರೆದು ನುಡಿವುತಿರೆ
ಭೋಗಣ್ಣನಂ ಲಿಂಗವಂತನಂ ಜಡಿವುತಿರೆ
ಕಡುಮಾನಿ ಶಾಂತನಂ ನುಡಿಯಲ್ಭರಂಗೊಂಡು
ತಡವಿಲ್ಲದೂರಿಂದೆ ಪೊರಮಟ್ಟ ನಡೆಗೊಂಡು
ಒಂದಡಿಯನಿಡೆ ಪುರದ ಲಿಂಗವೊಡನುಬ್ಬಿದವು
ಮುಂದಕಡಿಯಿಡೆ ಪುರದ ಲಿಂಗವೊಡನೆಳಸಿದವು
ನಡೆಯೆ ನಡೆದವು ಪುರದ ಶಿವಲಿಂಗವೊಂದಾಗಿ
ಒಡನೊಡನೆ ಭೋಗಣ್ಣನೆಡಬಲದೊಳೊಂದಾಗಿ
ಅವನಿ ಸೋಂಕದ ತೆರದೆ ವಾಯು ಮೆಯ್ಯಾಂತುಬರೆ
ತವತವಗೆ ತರುನಿಕರವೆಲ್ಲ ನೆಳಲಾಗಿ ಬರೆ
ತರುಫಳದಿನೊಸರ್ವರಸ ಶೀತಮಜ್ಜನವಾಗೆ
ಮರದಿಂದಲುದಿರ್ದ ಹೂಪತ್ರೆ ಪೂಜೆಗಳಾಗೆ
ಎಳಸುತಿರೆ ಲಿಂಗತತಿಗಳು ನಡೆದವೀ ತೆರದಿ
ಇಳೆಯೊಳುರುಳ್ದವು ಲಿಂಗ ಕಾಶಿಗೆಯ್ದುವ ತೆರದಿ
ಜಂಗಮವು ಲಿಂಗಕ್ಕೆ ಲಿಂಗವಾ ಜಂಗಮಕೆ
ಲಿಂಗ ಜಂಗಮವೆಂಬವವಿಭೇದವೀ ಜಗಕೆ
ಎಂಬಂತೆ ಭೋಗಣ್ಣನೊಡನೊಡನೆ ಬರುತಮಿರೆ
ಕೆಂಬಾವಿಯೊಳಗುಳ್ಳ ಶಿವಲಿಂಗವೆಯ್ದಿ ಬರೆ
ಒಂದು ಲಿಂಗದ ಬಳಿಯೊಳೊಂದು ತರು ನೆಳಲಾಗೆ
ಬಂದುದಾ ಲಿಂಗದಾರವೆಯೆಂಬ ಚೆಲ್ವಾಗೆ
ಸತ್ಯಶರಣಂ ಲಿಂಗಕುಳದೊಳಗೆ ಬರುತಿರ್ದ
ನಿತ್ಯ ಲಿಂಗಾರ್ಚನೆಗೆ ಬಾಣನೆಂಬಂತಿರ್ದ
ಭಕ್ತಿಯ ಫಳಂಗಳಂ ಸೇವಿಸುವ ಮಾಳ್ಕೆಯಿಂ
ಯುಕ್ತಿಯುಂಡೆಗಳ ಪವಣಿಸುತಿರ್ಪ ಮಾಳ್ಕೆಯಿಂ
ಶಿವಲಿಂಗಕುಳಮುಮಂ ಭೋಗಣ್ಣನೀಕ್ಷಿಸುತೆ
ತವೆ ಮರುಗಿ ದೂರಿಸುತೆ ಕಂಪಿಸುತೆ ಚಿಂತಿಸುತೆ
ದೇವಿಯರನಗಲಿ ಇಂತೆನ್ನೊಡನೆ ಬರ್ಪರೇ
ದೇವಿಯಾಲಿಂಗನಮನುಳಿದು ನಡೆತರ್ಪರೇ
ಚಳಿಗಾಳಿ ಬಿಸಿಲಿವಂ ನೋಡದೆಯ್ತಪ್ಪರೇ
ಇಳೆಗೆ ಪೊಸತಿಂಗೆ ಪೊಸತಂ ಮಾಡಿ ನೋಳ್ಪರೇ
ಎಂದು ಶಿವಲಿಂಗಂಗಳಂ ಸಂತವಿಡುತಿರಲು

ಛಂದದಿಂ ಶಿವಭಕ್ತಿ ಸಂದಣಿಸುತಿರುತಿರಲು
ಬಲದ ಲಿಂಗಂಗಳಂ ಬಲದ ಕರದಿಂದಪ್ಪಿ
ಕೆಲದ ಲಿಂಗಂಗಳಂ ಕೆಲದ ಕರದಿಂದಪ್ಪಿ
ಹಿಂದಿರ್ದ ಲಿಂಗಂಗಳಂ ಬೆನ್ನೊಳೊಲಿದಪ್ಪಿ
ಮುಂದಿರ್ದ ಲಿಂಗಮನುರಸ್ಥಲದೊಳಂದಪ್ಪಿ
ಆಲೋಕನದೊಳಿರ್ದವಂ ಕಂಗಳಿಂದಪ್ಪಿ
ಮೇಲಿರ್ದ ಲಿಂಗಗಳನುತ್ತಮಾಂಗದೊಳಪ್ಪಿ
ಸುತ್ತಿರ್ದ ಲಿಂಗಮಂ ಸುಳಿಸುಳಿದು ತಕ್ಕೈಸಿ
ಮುತ್ತಿರ್ದ ಲಿಂಗಮಂ ಮುರಿಮುರಿದು ತಕ್ಕೈಸಿ
ಭಾಳದೊಳಗೊತ್ತುತಂ ಕಣ್ಗಳೊಳಗೊತ್ತುತಂ
ತೋಳೊಳಂ ತಾಳುತೆ ಕಪೋಳದೊಳಗೊತ್ತುತಂ
ಎಲೆಯುದಿರಿ ಬಿಸಿಲಾಗೆ ಮೈಯೊಡ್ಡಿ ನೆಳಲಾಗೆ
ನಲಿನಲಿದು ತಳಿರ್ಗಳಿಂ ತಳಿವಿಡಿದ ತೆರನಾಗೆ
ಸುಜನ ಜನವಂದ್ಯ ಭೋಗಣ್ಣನತಿ ಹರುಷದಿಂ
ತ್ರಿಜಗದೇಕೈಕಲಿಂಗಗಳನನುರಾಗದಿಂ
ಪೂಜೆಗೆಯ್ವುತೆ ಭಕುತಿಯಾನಂದವೇಷದಿಂ
ಮಾಜಹರ ನರ್ಚನೆಯ ಮಾಡೆ ಸಂತೋಷದಿಂ
ಇಂತು ಶಿವಲಿಂಗವಂ ಸಂತವಿಡುತಂತಿರಲು
ಸಂತತಂ ಶಿವಭಕ್ತಿ ಬೋಳೈಯ್ಸುತಿರುತಿರಲು

ಇತ್ತಲಾ ಕೆಂಬಾವಿಯೊಳಗೆ ವಿಪ್ರರ್ ನೆರೆದು
ಸುತ್ತಲುಂ ನೇಮಮಂ ಮಾಡಲೆಂದೆಯ್ತಂದು
ಶಿವನಿಳಯದೊಳಗೆ ಬರಿ ಪೀಠಂಗಳಿರೆ ಕಂಡು
ಶಿವ ಶಿವ ಎನುತ್ತೆ ಮನದೊಳು ಕೌತುಕಂಗೊಂಡು
ಚಂದಿಮರಸನ ಸಮೀಪಕ್ಕೆಲ್ಲರುಂ ಬಂದು
ನಿಂದು ಪೇಳುತ್ತಮಿರ್ದರ್ ಕೌತುಕವನಂದು
ದೇವಾಲಯಂಗಳೊಳ್ ಬರಿಯ ಪೀಠಂಗಳವೆ
ಭೂವಳಯದೊಳಗೆ ಇದರಿಂದ ಕೌತುಕಮೊಳವೆ
ಭೋಗಣ್ಣನೊಡನೆ ಹೋದವು ಲಿಂಗಕುಳವೆಲ್ಲ
ರಾಗದಿಂದೊಡನೊಕ್ಕಲಾದವಳ್ತಿಯೊಳೆಲ್ಲ
ಕರೆದು ಬಿಜಯಂಗೈಸಿ ತಪ್ಪುದಾ ಭಕ್ತನಂ
ಹರನ ಪುರಹರನ ಘನಸಾಮರ್ಥ್ಯಯುಕ್ತನಂ

ಧರೆಯೊಳಗೆ ಕಟ್ಟಧಿಕ ಶಿವಲಿಂಗವಂತನಂ
ಹರಿಯಜರ್ಗರಿದೆನಿಪ ಘನಲಿಂಗವಂತನಂ
ಸಕಲ ಲಿಂಗದ ನಡುವೆ ಬಾಳ್ವ ಭೋಗಣ್ಣನಂ
ನಿಖಿಳ ಋಷಿಗಳ್ಬೇಳ್ಪ ಪುಣ್ಯಾಗ್ರಗಣ್ಯನಂ
ತಾರದಿರ್ದಡೆ ಧರಣಿಯೊರ್ಗುಡಿಪುದೆಲೆಯರಸ
ತಾರದಡೆ ವಾರಾಶಿ ಮೇರೆದಪ್ಪುವುದರಸ

ಎಂದು ನುಡಿಯಲ್ ಚಂದಿಮರಸನಾಗಂ ಕೇಳ್ದು
ಮಂದಮತಿಯಾದೆನೆನುತಂ ಚಿಂತೆಯಂ ತಾಳ್ದು
ಪರಿಜನಂ ಪುರಜನಂ ಶರಣಸಂತತಿವೆರಸಿ
ವರ ನಾರಿಯರ ಕಳಸ ಕನ್ನಡಿ ತಳಿರ್ವೆರಸಿ
ಮುರಜದಾವುಜದ ಗಿರುಗಟೆಯ ಕೇಳಿಕೆವೆರಸಿ
ಕರಡೆ ಕೌಸಾಳ ಶಂಖಪ್ರನಾದಂ ಬೆರಸಿ
ಎತ್ತಿದ ವೃಷಧ್ವಜಂ ನಭದೊಳಾಡುತ್ತಮಿರೆ
ಸುತ್ತಿ ಕೇಳಿಸುವ ನಾದಂ ಕೊರ್ವಿಪರ್ವುತಿರೆ
ಪೊರಮಟ್ಟುದಲ್ಲಲ್ಲಿ ಸಂಭ್ರಮಂ ಕೈಗಣ್ಮೆ
ಮೆರೆವ ನಾನಾವಾದ್ಯರಭಸಂಗಳುಂ ಪೊಣ್ಮೆ
ನಡೆದುದಾ ಗಿರಿಪತಿಯ ಮನೆಯ ನಿಬ್ಬಣದಂತೆ
ನಡೆದುದಾ ಶಿವಲಿಂಗಯಾತ್ರಾ ನಿಕರದಂತೆ
ಬರುತಿರ್ದು ದೂರದೊಳು ಭೋಗಣ್ಣನಂ ಕಂಡು
ಪರಮ ಶಿವಲಿಂಗಂಗಳೊಳಗಿರ್ಪನಂ ಕಂಡು
ಶಿವಲಿಂಗಸಾಮ್ರಾಜ್ಯಪರಮಸುಖಿಯಂ ಕಂಡು
ಶಿವಲಿಂಗ ಸಂಸಾರಲೋಲುಪ್ತನಂ ಕಂಡು
ಭಕ್ತಿಸುಖದೊಳ್ಬೆರಸಿ ನೆಲಸಿರ್ಪನಂ ಕಂಡು
ಮುಕ್ತಿಯಂ ಮುಂಡಾಡುತೊಸೆದಿರ್ದನಂ ಕಂಡು
ಭವಕುಳಂಗಳನೇಳಿಸುತ್ತಿರ್ಪನಂ ಕಂಡು
ಶಿವನನೊಚ್ಚತವಾಗಿ ಕೈಕೊಂಡನಂ ಕಂಡು
ತೆರಹಿಲ್ಲದಿರ್ಪ ಲಿಂಗದ ಬೀಡನೀಕ್ಷಿಸುತೆ
ಹೊರಗೆ ನಿಂದಿರ್ದು ದೂರದೊಳೆಲ್ಲ ಶಿವದಿಡುತೆ
ಶಿವನನರಿಯದ ಪಾತಕರ್ಗೆ ಕರುಣಿಪುದಯ್ಯ
ಭವನನರಿಯದ ಭಾಗ್ಯಹೀನರಿಗೆ ದಮ್ಮಯ್ಯ
ಕರುಣಿಸುವುದೆಮಗೆ ಕಾರುಣ್ಯನಿಧಿ ಭೋಗಣ್ಣ
ನರಕದೊಳೆ ಬೀಳ್ವವರನೆತ್ತುವುದು ಭೋಗಣ್ಣ

ಮುಂದರಿಯದಜ್ಞರ್ಗೆ ಬುದ್ಧಿಗೊಡು ಭೋಗಣ್ಣ
ಸಂದಣಿಸಿದೆಮ್ಮೆಮ್ಮ ಮಾಯಮಂ ನೀಗಣ್ಣ
ಅನುಪಮೈಶ್ವರಿಯ ಶಿವಲಿಂಗನಿಧಿ ಭೋಗಣ್ಣ
ಘನ ಘನ ಮಹಾಲಿಂಗ ಸಂಗನಿಧಿ ಭೋಗಣ್ಣ

ಎಂದು ಬಾಯಳಿವ ಕಿಂಕುರ್ವಾಣಮಮಂ ಕೇಳ್ದು
ಇಂದುಧರನಣುಗನತಿ ಕಾರುಣ್ಯಮಂ ತಾಳ್ದು
ದೇವರಂ ದೇವಿಯರನೊಂದುಮಾಡುವೆನೆನುತೆ
ದೇವಿಯರನಿಂತಗಲ್ದಿರಲಾಗದೆಂದೆನುತೆ
ತಿರುಗಿದಂ ಶಿವಲಿಂಗಸಹಿತವಾ ಭೋಗಣ್ಣ
ಉರಮಣಿಸಿ ಬರುತಿರ್ದನಳ್ಕರಿಂ ಭೋಗಣ್ಣ
ಎನಗೆ ತನಗೆಂಬಂತೆ ಮುಂಚಿದವು ಶಿವಲಿಂಗ
ಅನುರಾಗದಿಂದೆ ಸಂಭ್ರಮಿಸಿದವು ಶಿವಲಿಂಗ
ಅಲ್ಲಿ ಭಕ್ತಂ ಬಂದನೆಂಬ ಸಂತೋಷದಿಂ
ಅಲ್ಲಲ್ಲಿ ಪರಿಪರಿಯಲಾನಂದವೇಶದಿಂ
ಭರದೊಳರಿಯದೆ ನಿಜಸ್ಥಾನಂಗಳಂ ಮರೆದು
ಪರಮ ಸುಖವೇರುತುರವಣಿಸುತಂ ಹೊಳೆಹೊಳೆದು
ಭೋಗಣ್ಣನಂ ಮೆರೆಯಿತಕ್ಕೆ ಕುರುಹೆಂಬಂತೆ
ರಾಗದಿಂದಂ ಸ್ಥಾನಪಲ್ಲಟಮುಮಾದಂತೆ
ಪಿರಿಯ ಪೀಠಂಗಳೊಳ್ಕಿರಿಯ ಲಿಂಗಂಗಳಿರೆ
ನೆರೆದು ಕಿರಿಯವರಲ್ಲಿ ಪಿರಿಯ ಲಿಂಗಂಗಳಿರೆ
ಶರಣಸಂಕುಳದ ಕೇಳಿಕೆಯ ವಾದ್ಯಂ ಮೆರೆಯೆ
ಶರಣನ ಮನದೊಳಿರ್ದ ಮುನಿಸೆಂಬ ತೆರೆ ಸರಿಯೆ
ಆನಂದಜಲವೆ ಕೈನೀರಾಗಿ ಸುರಿವುತಿರೆ
ನಾನಾ ಶಿವೋತ್ಸಾಹವಕ್ಕರಿಂ ಪೆಚ್ಚುತಿರೆ
ಶಿವಶಕ್ತಿ ವೈವಾಹವಾದುದಾ ಪುರದೊಳಗೆ
ಶಿವಭಕ್ತಿಸಂಪದಂ ಬೆಳೆದುದಾ ಪುರದೊಳಗೆ

ಆಗಳೆರಗಿದವು ಹೂವಿನ ಮಳೆಗಳಂತಲ್ಲಿ
ರಾಗದಿಂ ದುಂದುಭಿಧ್ವಾನವುಣ್ಮಿದವಲ್ಲಿ
ಬಂದುದೊಂದತಿಶಯದ ಪುಷ್ಪಕಂ ನಭದಿಂದೆ
ಸಂದಣಿಪ ನವರತ್ನಖಚಿತವಿಭ್ರಮದಿಂದೆ
ಆ ವಿಮಾನದ ನಡುವೆ ಭೋಗಣ್ಣನೊಪ್ಪಿದಂ

ಭೂವಳಯದೊಳೆ ಚೋದ್ಯವೆನೆ ಶರಣನೊಪ್ಪಿದಂ
ಅಂದು ನಂಬದ ಪಾರ್ವಕುಲವೆಲ್ಲ ನೋಡುತಿರೆ
ಚಂದಿಮರಸಂ ನೋಡಿ ಕೌತುಕಂಬಡುತಮಿರೆ
ನಿಂದು ಭಕ್ತರ್ ಮಸಗಿ ಕೈಯೆತ್ತಿ ಕುಣಿವುತಿರೆ
ಧಂಧ ಧಂದದ ವಾದ್ಯ ಮೇಳೈಸಿ ಪೆರ್ಚುತಿರೆ
ನಡೆದುದಾ ಪುಷ್ಪಕಂ ಗಗನವಳಯಕ್ಕಾಗಿ
ನಡೆದುದತ್ತತ್ತಲಾ ದೇವಲೋಕಕ್ಕಾಗಿ
ಬಂದು ನಂದೀಶ್ವರನ ಬಾಗಿಲೊಳು ನಲವಿಂದ
ನಿಂದು ಪುಷ್ಪಕದಿಂದಲಿಳಿದು ಸಂತಸದಿಂದ
ಅಯ್ದೆ ಮೈಯಿಕ್ಕುತುಂ ಹರನೋಲಗಕ್ಕೆ ಬರೆ
ಅಯ್ದು ಮುಖನಾನಂದದಿಂದೆ ನೋಡುತ್ತಮಿರೆ
ಮೈಯಿಕ್ಕಿ ಮೈಯಿಕ್ಕಿ ಸುಖಮಿಡಿದು ಪೊಡಮಟ್ಟು
ಕೈಯೆತ್ತಿ ಕೈಯೆತ್ತಿ ನಿಂದಿರ್ದು ಪೊಡಮಟ್ಟು
ಪಟ್ಟಿರ್ದ ಭೋಗಣ್ಣನಂ ಕಂಡು ಶಂಕರಂ
ನಿಷ್ಠೆವಂತನ ನೋಡಿ ನೋಡಿ ಶಶಿಶೇಖರಂ
ತನಿನೇಹದಿಂದಪ್ಪಿ ಮನದಕ್ಕರೆಡೆಗೊಂಡು
ಮನಸಿಜಹರಂ ನೋಡಿ ಕರುಣಸುಧೆಯೆಡೆಗೊಂಡು
ಶಿವಭಕ್ತರಿಂತು ನಂಬಿದರುಂಟೆ ನಂದೀಶ
ಶಿವಲಿಂಗಸೊಬಗರಿನ್ನಿಂತುಂಟೆ ನಂದೀಶ
ಎಂದು ಕೊಂಡಾಡುತಂ ಸಾರೂಪ್ಯಪದವಿತ್ತು
ನಿಂದಿರ್ದ ಗಣಕುಲದ ಭರಭಾರಮಂ ಪೊತ್ತು
ನತಸುರಾಸುರರಾಜಚರಣನಿಂತೊಪ್ಪಿದಂ
ಅತಿಶಯದ ಸಾಮರ್ಥ್ಯಸೇವ್ಯಪದನೊಪ್ಪಿದಂ
ನಂಬಿರ್ದ ಶರಣರೊಡನೊಕ್ಕಲಿಂತೊಪ್ಪಿದಂ
ಅಂಬರಸ್ಥಲ ಕೇಶಪಾದನಿಂತೊಪ್ಪಿದಂ
ಸುರರಾಜರಾಜರಾಜಾಭರಣನೊಪ್ಪಿದಂ
ಹರಿಕಾಲ ಮನ್ಮಥ ಪುರಾರಿಯಿಂತೊಪ್ಪಿದಂ
ಘುಳು ಘುಳಿಪ ಥಳಥಳಿಪ ಸಾರಮುಖನೊಪ್ಪಿದಂ
ನಳನಳಿಪ ತೊಳಪ ಜಡೆಗಳ ನೀರನೊಪ್ಪಿದಂ
ದೇವಗತಿ ದೇವಮತಿ ದೇವಪತಿಯೊಪ್ಪಿದಂ
ದೇವ ಹಂಪೆಯ ವಿರುಪಾಕ್ಷನಿಂತೊಪ್ಪಿದಂ

ಶ್ರೀ ಗೌರೀವಲ್ಲಭನೆಮ
ಗೀಗೆ ಸದಾ ತನ್ನ ಚರಣಭಕ್ತಿಯ ನಲವಿಂ ।
ರಾಗಂ ಮಿಗೆ ಕೆಂಬಾವಿಯ
ಭೋಗಣ್ಣನ ಕಂದನೆಂದು ಹಂಪೆಯ ದೇವಂ ॥

❖❖

# ೭. ಶಂಕರದಾಸಿಮಯ್ಯನ ರಗಳೆ

## ಸ್ಥಲ ೧

ಅಪ್ರತಿಮ ಪ್ರಭಾಪ್ರಭುವಜಾಂಡಕುಳಪ್ರಭು ಸರ್ವದೇವರಾ
ಜಪ್ರಭು ನಿರ್ಮಳಪ್ರಭು ನಿರಾವರಣಪ್ರಭು ಕೇಳಿ ಭಾಳನೇ
ತ್ರಪ್ರಭು ಹಂಪೆಯಾಳ್ದನೊಲವಿಂ ಮಿಗೆ ಶಂಕರದಾಸಿಮಯ್ಯನಂ
ವಿಪ್ರಕುಲಾರ್ಕನಂ ಮೆರೆದನಾನತಜಂಗಮ ಮಂಗಳಾಸ್ಪದಂ ॥

ಶ್ರೀ ಮೇದಿನೀತಳದೊಳೊಪ್ಪುಗು ನಿರಂತರಂ
ಪ್ರೇಮದಿಂ ಕಂದಶಿಲೆಯೆಂಬ ನಾಮದ ಪುರಂ
ಅಲ್ಲಿರ್ಪನೊರ್ವ ವಿಪ್ರಂ ಸದಾಚಾರದಿಂ
ಸಲ್ಲಲಿತ ಶೈವಧರ್ಮದ ಮಾರ್ಗನಿಯತದಿಂ
ಗೋವಿಂದದೇವನೆಂಬುದು ತನಗೆ ಪೆಸರಾಗೆ
ಭಾವಿಸುವಡುಮ್ಮವ್ವೆಯೆಂಬ ಸತಿ ತನಗಾಗೆ
ಸಂತಸುಖವಿರ್ದಿರ್ದು ವೈರಾಗ್ಯವೆಡೆಗೊಂಡು
ಚಿಂತಿಸಿದನಲ್ಲಿ ಸಂಸಾರವನೆ ನೆರೆ ಕಂಡು
ವಾರಣಾಸಿಗೆ ಪೋಪೆನೆಂದು ಮನದೊಳು ನೆನೆದು
ಸಾರವತ್ಯಂತ ಸುಖವನೆ ಪಡೆವೆನೆಂದೊಸೆದು
ಭರದಿಂ ಪ್ರಯಾಣೋಚಿತ ಪ್ರಕರಧರನಾಗಿ
ನೆರೆ ಪುಣ್ಯಪಥದತ್ತ ವಿಭ್ರಮಕ್ರಮನಾಗಿ
ನಡೆತಂದು ತಮ್ಮೂರ್ಗೆ ಗಾವುದದೊಳೊಪ್ಪಿರ್ಪ
ಜಡೆಯ ಶಂಕರದೇವನೊಲಿದು ತಾ ನೆಲಸಿರ್ಪ
ನವಿಲೆಯೊಳು ಪದಪಿಂದೆ [ಪ್ರ]ಸ್ಥಾನಮಂ ಮಾಡಿ
ಶಿವನಿಳಯಮಂ ಪೊಕ್ಕನೊಲವಿಂದದಂ ನೋಡಿ
ರಂಗಮಂಟಪದೊಳಗೆ ಬಂದು ಕುಳ್ಳಿರ್ದಿರಲು
ಗಂಗಾಧರಂಗೆ ಪೊಡಮಟ್ಟು ಕುಳ್ಳಿರ್ದಿರಲು

ಶಿವಮಜ್ಜನಕ್ಕೆ ತಪ್ಪಘ್ಗಣಿಯ ಸಂಭ್ರಮಂ
ನವ ಪರಿಮಳಂಬೆತ್ತ ಕುಸುಮಕುಳ ವಿಭ್ರಮಂ
ಮಜ್ಜನಕ್ಕೆರೆವ ಶಿವಭಕ್ತ ಸಂತಾನದಿಂ
ಸಜ್ಜನಸ್ಥಾನದೊಳು ನಡೆಸುವತಿನೇಮದಿಂ
ಪನಿನೀರ ಚಂದನದ ಪರಮ ಸೌರಭ್ಯದಿಂ
ಮನಸಿಜಾರಿಗೆ ಮೆರೆವ ಪೂಜೆಯಾನಂದದಿಂ
ಅಗರು ಗುಗ್ಗುಳ ಚಂದನದ ಪರಮಳಂಗಳಿಂ
ಮಿಗೆ ತೊಳಗಿ ಥಳ ಥಳಿಸಿ ಬೆಳಗುವಾರತಿಗಳಿಂ
ಪರಮನಾರೋಗಣೆಯ ವಿಭವ ವಿಸ್ತಾರದಿಂ
ಪರಿಪರಿಯಲೆಸೆವ ಶೈವಾಗಮವಿತಾನದಿಂ
ಸೊಗಸು ಮೆರೆಯಲು ಪುರಾಣ ಪ್ರಸಂಗಂಗಳಿಂ
ಬಗೆವುಗಲು ಕೇಳಿಸುವ ಗೀತವಾದ್ಯಂಗಳಿಂ
ರಸ ಭಾವಗತಿಗಳಿಂದೆಸೆವ ನೃತ್ಯಂಗಳಿಂ
ಹೊಸ ಹೊಸ ಸುಧಾವರ್ಷಮಂ ಸುರಿವ ಸ್ತುತಿಗಳಿಂ
ಭೇರಿ ದುಂದುಭಿ ಶಂಖ ಕಹಳಾರವಂಗಳಿಂ
ಹಾರೈಸಿ ನರ್ತಿಸುವ ಶರಣ ಸಂತತಿಗಳಿಂ

ಇಂತೆಸೆವ ಪರಮನುತ್ಸಾಹ ಸಂಕುಳವಲ್ಲಿ
ಕಂತುಮದವೈರಿಯ ನಿರಂತ ಸಂಪದವಲ್ಲಿ
ತನ್ನಯ ಮನಕ್ಕೆ ಸುಖಮಂ ಕೊಡುತ್ತಿರಲಂದು
ಇನ್ನೇಕೆ ವಾರಣಾಸಿಗೆ ಪಯಣವೆನಗೆಂದು
ಇಲ್ಲಿರ್ಪೆನಿಲ್ಲಿರ್ಪೆನಿನ್ನಗಲೆನಿನ್ನಗಲೆ
ಒಲ್ಲೆನಿನ್ನೆಲ್ಲಿಗಂ ಹೋಗೆನಾನಿಂತು ಸಲೆ
ಎಂದು ತಮ್ಮೊರ್ಗೆ ಭರದಿಂ ಮರಳಿ ನಡೆತಂದು
ಸಂದಣಿಪ ಮೋಹದಿಂ ನಿಚ್ಚ ನಿಚ್ಚಂ ಬಂದು
ಜಡೆಯ ಶಂಕರದೇವರಂ ದರುಶನಂ ಮಾಡಿ
ಎಡೆಗೊಂಡ ಭಕ್ತಿಯಿಂ ಕಿವಿವಿಡಿದು ಕುಣಿದಾಡಿ
ಕಂಪಿಸುತೆ ಪುಳಕಿಸುತೆ ಕೊಬ್ಬುತ್ತೆ ಕೊನರುತ್ತೆ
ಸೊಂಪೇರಿ ಬೆಮರುತ್ತೆ ಝೊಂಪಿಸುತೆ ಕರಗುತ್ತೆ
ಮುನಿ ಮುನಿದು ಜಿನಿಜಿನಿಗಿ ತೊನೆ ತೊನೆದು ತೂಗಾಡಿ
ಮನವಳಿದು ಮದವುಡುಗಿ ಮುದವೊದವಿ ಮರೆದಾಡಿ
ಮಿಗೆ ನಚ್ಚು ಮೈವೆಚ್ಚಿ ಮರುಗಿ ಬೆರಲಂ ಕಚ್ಚಿ
ಬಗೆ ತಿಳಿದು ಬಲುಪಳಿದು ಸುಖವುಣ್ಮಿ ಕಣ್ಮುಚ್ಚಿ

ಭಕ್ತಿ ಸುಖಮಂ ತನ್ನ ಮನದಣಿಯಲನುಭವಿಸಿ
ಯುಕ್ತಿ ಹೊದ್ದದ ನೇಹದೊಳಗೆ ಅಚ್ಚರಿ ಸೂಸಿ
ಮೈಯಿಕ್ಕಿ ಪೊಡಮಟ್ಟು ಕಾರುಣ್ಯಮಂ ತೋರಿ
ಕೈಯೆತ್ತಿ ಕೈಯೆತ್ತಿ ನಡೆದು ಲಲ್ಲೆಯ ಬೀರಿ
ಎನಗೆ ವಾರಾಣಸಿಯುಮಮರನದಿಯುಂ ನೀನೆ
ಎನಗೆ ದಿವ್ಯಕ್ಷೇತ್ರ ಮಂತ್ರ ತಂತ್ರಂ ನೀನೆ
ಎನಗೆ ನಿತ್ಯಾವಾಸಮುಂ ದೇಶಮುಂ ನೀನೆ
ಎನಗೆ ಪುಣ್ಯಪ್ರಕರಮುಂ ಸುಕರಮುಂ ನೀನೆ
ಎನಗೆ ನಿರ್ಮಳಕರುಣಮುಂ ಹರಣಮುಂ ನೀನೆ
ಎನಗೆ ನಿಷ್ಕಳರಾಗಮುಂ ಭೋಗಮುಂ ನೀನೆ
ಎನಗೆ ನಿರ್ಮಳಸ್ಥಾನಮುಂ ಮಾನಮುಂ ನೀನೆ
ಎನಗೆ ಪರಮಜ್ಞಾನ ಧ್ಯಾನಮಂತ್ರಂ ನೀನೆ
ಎನಗೆ ಮಿತ್ರಾನಂದಕರ್ತನೆನಿಪಂ ನೀನೆ
ಎನಗೆ ನಿಶ್ಚಲ ನಿತ್ಯಮುಂ ಸತ್ಯಮುಂ ನೀನೆ

ಎಂದು ಸ್ತುತಿಗೆಯ್ದು ನೂತನ ಸುಖಮನೊಳಕೊಳುತೆ
ಇಂದುಧರನಲ್ಲಿ ಭಕ್ತಿಯ ಭರವನೆಡೆಗೊಳುತೆ
ಇಂತನುದಿನಂ ತನ್ನ ಪುರದಿಂದೆ ನಡೆತಂದು
ಸಂತತಂ ಶಿವನ ಭಕ್ತಿಗೆ ಮಿಗೆ ಮನಂ ಸಂದು
ಪಗಲೆನ್ನದಿರುಳೆನ್ನದೊಲವಿಂ ನಿರಂತರಂ
ಮಿಗೆ ಗಾಳಿ ಮಳೆ ಶೀತವಾತಪದೊಳಂ ಕರಂ
ಬಂದು ಬಂದಭವನಂ ನಿಚ್ಚಲೋಲೈಸುತಿರೆ
ಇಂದುಧರನಂ ಮರೆಯದನುದಿನಂ ನೆನೆವುತಿರೆ
ಜಡೆಯ ಶಂಕರದೇವರಲ್ಲಿ ಕರುಣಿಸಿ ನೋಡಿ
ಪೊಡವಿಗೀಭಕ್ತನಂ ಮರೆಯಲೆಂದನುಮಾಡಿ
ಒಂದು ದೇವಸಂ ಕನಸಿನೊಳಗೆ ದಯೆಯಿಂ ಬಂದು
ಇಂದುಕಳೆ ಜಡೆ ಪುಲಿದೊವಲು ಭಸಿತದಿಂ ನಿಂದು
ಎಲೆ ಮಗನೆ ಚಳಿ ಮಳೆಯೊಳೆಡೆಯಾಡಲೇಕಯ್ಯ
ನಲವಿನಿಂದಲು ನೀನು ನಮ್ಮೂರ್ಗೆ ಬಾರಯ್ಯ
ಬಂದಡುಪದೇಶಮಂ ಮಾಡಿ ಕರುಣಿಪೆನೆಂದು
ಇಂದುಧರನೊಲಿದು ಬೆಸಸಲ್ಕೆ ಕರುಣದೊಳಂದು
ಎಚ್ಚತ್ತು ಮೆಲ್ಲನಂತಂತು ಪುಳಕದೊಳಾಳ್ದು

ಬೆಚ್ಚಂತಿರಿರ್ದು ಮೂರ್ತಿಯನಳ್ಕರಿಂ ತಾಳ್ದು
ಕನಸಿನ ಸುಖದ ಜೊಮ್ಮುಮನಸಿನೊಡನಂಕುರಿಸಿ
ಕನಸು ನನಸೆಂಬ ವಿವರಣೆ ಮನಕ್ಕರಿದೆನಿಸಿ
ಮೆಲ್ಲಮೆಲ್ಲನೆ ತಿಳಿದುನೋಡಿ ಮನದೊಳಗರಿದು
ಸಲ್ಲೀಲೆಯಿಂ ಶಿವಂ ಕರುಣಿಸಿದನೆಂದರಿದು
ಎನ್ನೊಡೆಯನೊಲವಿಂದೆ ಬರಲೆಂದು ಬೆಸಸಿದಂ
ಎನ್ನಾಳ್ದನತಿಕರುಣದಿಂದೆ ಕೃಪೆ ಮಾಡಿದಂ

ಎಂದಲ್ಲಿ ಸತಿವೆರಸಿ ಪೊರಮಟ್ಟು ನಡೆಗೊಂಡು
ಬಂದಂ ಮಯೂರಪುರದಲ್ಲಿ ಚಿತ್ತಂಗೊಂಡು
ಜಡೆಯ ಶಂಕರದೇವರಂ ಕಂಡು ಪೊಡಮಟ್ಟು
ಕಡುನೇಹಮಂ ತನ್ನ ಮನದ ಮೊನೆಯೊಳಗಿಟ್ಟು
ನವಿಲೆಯೊಳು ಶಿವಪಾದ ಸಂಗಸುಖದಿಂದಮಿರೆ
ತವಿಲರಿಯದಚ್ಚ ಶಿವಭಕ್ತಿ ಭರದಿಂದೆ ಬರೆ
ಒಂದು ದೆವಸಂ ನೇಮವಂ ಮಾಡುತಿರ್ಪಲ್ಲಿ
ಇಂದುಧರನಿಂತೆಂದನೊಲಿದು ಕರುಣದೊಳಲ್ಲಿ
ನಾಳೆ ಉಪದೇಶಮಂ ಮಾಡಿದಪೆನೆಲೆ ಮಗನೆ
ನಾಳೆ ನೆರೆ ಶುದ್ಧಾಂಗನಾಗಿರ್ಪುದೆಲೆ ಮಗನೆ
ಎಂದು ಕುರಣಿಸೆ [ದೇವ ಏವರಿಯೊಳೆಂತೊಲಿವೆ]
ಒಂದು ಪರಿಯಿಂದೊಲಿವೆ ನಿನ್ನಿಷ್ಟದಿಂದೊಲಿವೆ
ಅಭವ ಕರುಣಿಸಿತಕ್ಕೆ ಕುರುಹುಪೇಳ್ವುದು ದೇವ
ವಿಭುವೆ ಬಿನ್ನೈಸಿದೆಂ ಸಲಿಸವೇಳ್ವುದು ದೇವ
ದೇವ ಕರುಣಿಸಿತಕ್ಕೆ ನೊಸಲ ಕಣ್ಣಂ ಕೊಟ್ಟು
ದೇವ ಕರತಳವನೆನ್ನುತ್ತಮಾಂಗದೊಳಿಟ್ಟು
ಅಪ್ರತಿಮಗುರುವೆ ಸುರತರುವೆ ಕರುಣಿಪುದೆನಗೆ
ಸುಪ್ರಸಿದ್ಧ ಪ್ರಭುವೆ ವಿಭುವೆ ಕರುಣಿಪುದೆನಗೆ
ಸಕಲ ದೇವಾಭರಣನಿಕರ ಕರುಣಿಪುದೆನಗೆ
ಅಕಳಂಕ ಶಶಿಕಳಾಕಿರಣ ಕರುಣಿಪುದೆನಗೆ
ಮೃಡ ಭರ್ಗ ಭೀಮ ಭಾಳಾಕ್ಷ ಕರುಣಿಪುದೆನಗೆ
ಜಡೆಯ ಶಂಕರದೇವ ಗುರುವೆ ಕರುಣಿಪುದೆನಗೆ

ಎನೆ ಕೇಳ್ದು ಶಶಿಧರಂ ಕರುಣಿಸಿದೆನೆಂದನಲು
ಮನವಾರೆ ನೊಸಲ ಕಣ್ಣಿತ್ತೆ ನಿನಗೆಂದೆನಲು

ಕೇಳುತಂ ಪುಟವೇಳುತಂ ಕೊಬ್ಬಿ ಹೆಚ್ಚುತಂ
ಬಾಳುತಂ ಬಲುಪೇರುತಂ ನಚ್ಚಿ ಹೆಚ್ಚುತಂ
ಬೀಗುತಂ ಬಿಕ್ಕುತಂ ತೇಗುತಂ ತೂಗುತಂ
ರಾಗವಿರ್ಮಡಿಸಿ ನಲಿದೊಗ್ಗುತಂ ಹಿಗ್ಗುತಂ
ನಡೆತಂದು ಮರುದೆವಸದುದಯ ಸಮಯದೊಳೆದ್ದು
ಕಡುಗೂರ್ತು ನಿರ್ಮಳಸ್ನಾನಸುಖಮಂ ತಾಳ್ದು
ಭಸಿತಮಂ ತೀವಿಟ್ಟು ಧವಳ ವಸ್ತ್ರವನುಟ್ಟು
ಎಸೆವ ರುದ್ರಾಕ್ಷಮಾಲೆಗಳನಳವಡೆ ತೊಟ್ಟು
ಸುಲಿಪಲ್ಲ ಬೆಳಗು ಬೆಳುದಿಂಗಳಂ ಬೀರುತಿರೆ
ನೆಲೆಗೊಂಡ ದೇಹರುಚಿ ಸುರಚಿರಂ ಸೂಸುತಿರೆ
ನಡೆದುಬಂದಾ ಶಿವಾಲಯದ ಶಿವಮಂಟಪದಿ
ಜಡೆಯ ಶಂಕರದೇವನಿರ್ಪ ಗರ್ಭಗೃಹದಿ
ನಿಂದು ಕುಳ್ಳಿರ್ದು ಕಡುನಿಷ್ಠೆಯಿಂ ಕೈಮುಗಿದು
ಸಂದಣಿಸಿ ಮೈಯೊಳಗೆ ಪುಳಕಂಗಳುಂ ನೆಗೆದು
ಲಿಂಗದಿಂ ನಡೆತಂದನಾ ಜಡೆಯ ಶಂಕರಂ
ಅಂಗರುಚಿ ಕಣ್ಗೆ ಸವಿಯಂ ಕರೆಯಲೀಶ್ವರಂ
ಪಿಂಗಳಜಟಾಭರದ ಗಂಗೆ ಮಧ್ಯದೊಳೆಸೆಯೆ
ತುಂಗತಟದಲ್ಲಿ ಮರಿದಿಂಗಳೊಪ್ಪಂಬಡೆಯೆ
ಭಾಳಾಕ್ಷ ಫಣಿಕುಂಡಲಂ ಪಂಚವದನದಿಂ
ನೀಲಗಳವೀರೈದು ಭುಜವಜಕಪಾಲದಿಂ
ಕರಿಚರ್ಮವಹಿಕಟಕ ಡಮರುಗತ್ರಿಶೂಲದಿಂ
ಸುರಶಿರೋಮಾಲೆ ಪುಲಿದೊವಲೊಪ್ಪೆ ರಾಗದಿಂ

ಶಂಕರಂ ಬಂದು ಶರಣನನಳ್ಕರಿಂ ನೋಡಿ
ಬಿಂಕದಿಂ ಸ್ನೇಹರಸದೊಳಗೆ ಪೊಕ್ಕೋಲಾಡಿ
ಮೇಲೆ ದುಂದುಭಿ ಮೊಳಗೆ ಹೂಮಳೆಗಳೊತ್ತರಿಸೆ
ಭೂಲಲನೆ ಗುಡಿಗಟ್ಟೆ ದೇವಗಣತತಿ ಪರಸೆ
ನಿತ್ಯಗುರು ಶಾಂತಗುರು ಸಕಲಲೋಕೈಕ ಗುರು
ಸತ್ಯಗುರು ನಿಜದ ಗುರು ಉತ್ತಮದ ಪರಮಗುರು
ದುರಿತಕುಳಮಂ ನಿವಾರಿಸುವತುಳ ಹಸ್ತಮಂ
ಶರಣ ಸಂತತಿಗಭಯವೀವ ಘನಹಸ್ತಮಂ
ಉದಯಾರ್ಕರುಚಿಗೆ ಮಿಗೆ ಮೆರೆವ ಕರಕಮಳಮಂ
ಸದಮಳ ಶಶಿಪ್ರಭೆಯನೀವ ಹಸ್ತಾಗ್ರಮಂ

ಕುಳ್ಳಿರ್ದು ನಿಜಶರಣನುತ್ತಮಾಂಗದೊಳಿಟ್ಟು
ಬಳ್ಳಿವರಿದಡ್ಡೈಪ ನೇಹಮಂ ಮುಂದಿಟ್ಟು
ತನ್ನುವಂ ಭಕ್ತಿಯಂ ಪಂಚಾಕ್ಷರಿಯನರುಪಿ
ಉನ್ನತಜ್ಞಾನಮಂ ತನ್ನ ಮನದೊಳಗರುಪಿ
ಪರಮನಂದುಪದೇಶಮುಮನಳ್ಕರಿಂ ಮಾಡಿ
ಶರಣನಂತಃಸ್ಥಳ[ದಿ] ಸಾಮರ್ಥ್ಯಮಂ ಕೂಡಿ
ಅಸಮನಯನಂ ಸಕಲ ಕಾರುಣ್ಯಮಂ ನೀಡಿ
ನೊಸಲೊಳಂ ನೊಸಲಿಟ್ಟು ಭರದಿಂದೆ ಮುಂಡಾಡಿ
ನೊಸಲಸಂಗದ ದೃಷ್ಟಿ ಗರ್ಭಿಣಿಯೊಲಾಗುತಿರೆ
ನೊಸಲ ಕಣ್ಣೊಂದು ಕಣ್ಣಂ ಪಡೆದು ಕೊಡುತಮಿರೆ
ನೊಸಲ ಕಣ್ಣಜ್ಯೋತ್ತೆ ನೊಸಲಕಣ್ಣಾಗುತಿರೆ
ಹೊಸ ಭಕ್ತಿ ಶಿವಭಕ್ತಿಭಾವದೊಳು ನೆಲಸುತಿರೆ
ಕಣ್ಣ ಕರ್ಪುಂ ನೊಸಲ ಕಣ್ಗೆ ಕಪ್ಪಾಗುತಿರೆ
ಕಣ್ಣಪ್ಪನಿತ್ತ ಕಣ್ಣಲ್ಲಿ ಸರಿಯಾಗುತಿರೆ
ಜ್ಯೋತಿಯಿಂ ಜ್ಯೋತಿಯಂ ಹೊತ್ತಿಸಿದ ತೆರನಾಗೆ
ಮಾತಿಂಗೆ ತೆರಹಿಲ್ಲ ಭಾವವೆರಡೊಂದಾಗೆ
ಮುಂಡಾ[ಡೆ] ಮುಕುರ ಮುಕುರವ ನೋಡಿದಾತಂಗೆ
ಕೊಂಡಾಡೆ ತಾನೆ ತನ್ನಂ ನೋಡಿದಂತಾಗೆ
ಆತ್ಮವೈಪುತ್ರನಾಮಾಸೀತ್ ಎಂಬಂತೆ
ಸ್ವಾತ್ಮಿಸಲು ನೊಸಲಿಂದೆ ನೊಸಲಕಣ್ಣೆಂಬಂತೆ
ದೇವಂಗೆ ಭಕ್ತನೆಣೆ ಭಕ್ತಂಗೆ ದೇವನೆಣೆ
ದೇವಂಗೆ ಭಕ್ತಂಗೆ ಸದುಭಕ್ತಿ ತಾನೆ ಹೊಣೆ
ಎಂಬಂತೆ ಉಪದೇಶಮಂ ಪಡೆದು ನಿಸ್ತರಂ
ತ್ರ್ಯಂಬಕನ ಭಾವವೊಳವಿಡಿದುತ್ತರೋತ್ತರಂ
ಜ್ಞಾನಾಗ್ನಿ ಕಂದೆರೆದ ತೆರದೊಳಿರ್ದಂ ಕರಂ
ಧ್ಯಾನದೊಳಹೊಕ್ಕು ಬೆಳಗಿರ್ದನಾನಂತರಂ

ಅಸಮಾಕ್ಷನಿತ್ತುದಂ ನೋಡಿ ನೋಡುವೆನೆಂದು
ಬಿಸುಗಣ್ಣ ಪಡಿಸಣವನರಿದು ನೋಡುವೆನೆಂದು
ಸಿಡಿಲೆರಕೆಯಂತಿರ್ಪ ಎವೆಯನೊಯ್ಯನೆ ತೆಗೆಯೆ
ಘುಡುಘುಡಿಪ ಘುಳುಘುಳಿಪ ಜ್ವಾಲೆ ಭುಗಿಲನೆ ನೆಗೆಯೆ
ವಿಷ್ಣುವಿನ ಪ್ರತಿಮೆ ಸೆಡೆ ಸೆಡೆದು ಸಿಕ್ಕನೆ ಸೀಳೆ
ವಿಷ್ಣುವಿನ ರೂಪೊಡೆದು ಕೆಡೆದು ಧರಣಿಗೆ ಬೀಳೆ

ಭಾವಿಪಡಜಪ್ರತಿಮೆ ಬಿರಿದು ಜಗ್ಗನೆ ಜರಿಯೆ
ಮೂವತ್ತು ಮೂದೇವರ್ಯೆದೆ ಬಿಕ್ಕನೆ ಬಿರಿಯೆ
ವರ ಸಪ್ತಮಾತೃಕೆಯರುರಿದು ಮಣ್ಣೊಳು ಬೀಳೆ
ನೆರೆದಷ್ಟ ವಸುಗಳೆಲ್ಲಂ ದಳದಳನೆ ಹೋಳೆ
ನೊಸಲೊಳಗೆ ಪುಟ್ಟಿ ನೆರೆ ಕಡುಗೋಪದೊಳು ಬೆಳೆದು
ಪಸರಿಪ ಪ್ರತಿಮೆಗಳ ಬಾಯ್ವೆಣ್ಣೆಯಂ ತಳೆದು
ಉರಿವರಿಯೆ ನಡೆಗಲಿತು ಭುಗಿಲೆಂದು ನುಡಿಗಲಿಯೆ
ಪುರವುರಿಯೆ ನೋಡಿದನ ಚಾರಿತ್ರಮದು ನಲಿಯೆ
ಸುತ್ತಣ ಪ್ರತಿಮಾದಿಗಳು ಹೇಳ ಹೆಸರಿಲ್ಲ
ಎತ್ತಲುಂ ನೋಡುವಡೆ ಭಾವಿಪಡೆ ರೂಹಿಲ್ಲ
ದಿರೆ ಲೀಲೆ ಮಿಕ್ಕು ಹೊರಗಂ ನೋಡಲನುಮಾಡೆ
ಹರನೆಯ್ದಿ ಬಂದು ಹೋ ಹೋ ಮಗನೆ ನೀಂ ನೋಡೆ
ದೇವರಿರೆ ಮಿಕ್ಕು ಹೊರಗಂ ನೋಡುವರೆ ಮತ್ತೆ
ಭಾವಿಪಡೆ ಪರದೈವವಂ ನೋಡುವರೆ ಮತ್ತೆ
ಪುರವುರಿದು ಜಗವುರಿದು ಧರೆವುರಿವುದೆಲೆ ಮಗನೆ
ನರರೊಬ್ಬರುಳಿಯದಂತಪ್ಪುದಿನ್ನೆಲೆ ಮಗನೆ
ಬೇಡಯ್ಯ ಬೇಡೆಂದು ಘುಡು ಘುಡಿಪ ಭಾಳಕ್ಕೆ
ನೋಡಿ ಶಿವನಂದು ನಂದಿಯ ಮೊಗವಡವನಿಕ್ಕೆ
ಗವಸಣಿಗೆಗವಿದ ಕಾಲಾಗ್ನಿಯಂದದೊಳಿರ್ದು
ಶಿವನ ಮುಂದಪ್ರತಿಹತ ಪ್ರಭಾವದೊಳಿರ್ದು
ಕೋಪಮಂ ಮೆಲ್ಲನೊಳಗೊಳಗೆ ಸ್ಯೆರಿಸಿಕೊಂಡು
ಆ ಪರಮ ನಿರುಪಮಂ ಶಾಂತತೆಯನೊಳಕೊಂಡು
ದೇವ ಎನಗೊಂದು ನಾಮವನಿಡುವುದೆಲೆ ತಂದೆ
ಗೋವಿಂದನೆಂಬ ನಾಮವನಾರೆನೆಲೆ ತಂದೆ
ಎನಗೆ ಎನ್ನಯ ಸತಿಗದೊಂದು ಪೆಸರು ಕೊಟ್ಟು
ತನಿನೇಹದಿಂ ನಿಮ್ಮ ಕರುಣಮಂ ಮುಂದಿಟ್ಟು
ಕರುಣಿಸುವುದೆನೆ ಹರಂ ಮಗನನಪ್ಪುತ್ತಲ್ಲಿ
ಸುರಿವಶ್ರುಜಲದಿಂದೆ ನೆನೆದು ನೋಡುತ್ತಲ್ಲಿ
ಎನ್ನಂತೆಯೆನ್ನ ಹೆಸರಾಗಿ ಜಗದೊಳು ಮೆರೆದು
ಉನ್ನತ ವಿಲೋಚನ[ದ] ಸಾಮರ್ಥ್ಯಮುಮನರಿದು
ಧರೆಗೆ ಶಂಕರದಾಸಿಮಯ್ಯನಾಗಿರು ಮಗನೆ
ತರುಣಿ ಶಿವದಾಸಿಯಾಗಿಕ್ಕೆ [ಇ]ನ್ನೆಲೆ ಮಗನೆ

ಎಂದು ಕರುಣಿಸಿಕೊಟ್ಟು ಲಿಂಗದೊಳ್ಪುಗಲಲ್ಲಿ
ಇಂದುಧರನಾಜ್ಞೆಯಂ ಕೈಕೊಂಡು ನಿಂದಲ್ಲಿ
ಉಗ್ರನಸಮಗ್ರ ಪ್ರತಾಪರೂಪಿನ ತೆರದೆ
ಉಗ್ರಲೋಚನನ ಪುರಹರನ ಕೀರ್ತಿಯ ತೆರದೆ
ಹೊಸಮಸೆ ತ್ರಿಶೂಲಕ್ಕೆ ನೊಸಲ ಕಣ್ಣಾದಂತೆ
ಅಸಮ ಸಾಹಸಕೆ ಕರಚಣವೊಲಿದೊಗೆದಂತೆ
ಸಿಡಿಲಸಂಗಡಕೆ ಬರಸಿಡಿಲೊಡಂಬಟ್ಟಂತೆ
ಮೃಡನ ಸಾಮರ್ಥ್ಯಕ್ಕೆ ಕಂದೆರವೆಯಾದಂತೆ
ತರಣಿಬಿಂಬದ ಹಿಂಡು ನೊಸಲ ಮರೆವೊಕ್ಕಂತೆ
ಉರಿವಗ್ನಿ ಹೆರೆನೊಸಲ ಹಸೆಯೇರಿ ನಿಂದಂತೆ
ವಡವಾಗ್ನಿ ದಾವಾಗ್ನಿ ಸಂಗಡಂಗೊಂಡಂತೆ
ಕಡುಹಿನಿಂ ಕಾಲಾಗ್ನಿ ಹಣೆಗೊಂಡು ನಿಂದಂತೆ
ಮುಗಿಲ ಮರೆಯೊಳು ಮೇಘಪಾವಕಂ ನಿಂದಂತೆ
ಬಗೆಯಲರುವಿನ ಮರೆಯ ನಿಜದ ಬೆಳಗಿಪ್ಪಂತೆ
ಮೆರೆವ ನಂದಿಯ ಮೊಗವಡದ ಮರೆಯ ಕಣ್ಣೊಪ್ಪೆ
ಕರೆಗೊರಲನಾಜ್ಞೆ ಮುಸುಕಿದ ನೊಸಲಕಣ್ಣೊಪ್ಪೆ
ಇಂತು ಶಂಕರದಾಸಿಮಯ್ಯನೊಪ್ಪುತ್ತಮಿರೆ
ಸಂತತ ಮಯೂರಪುರದರಸನೊಪ್ಪುತ್ತಮಿರೆ

## ಸ್ಥಲ ೨

ಸದಮಳ ಸೂರ್ಯನಂತೆ ಬಿಸುಗಣ್ಣಿನ ಕೋಪದ ಪುಂಜದಂತೆ ಕಾ
ಹೊದವಿದ ತೇಜದಂತೆ ಒರೆಯುರ್ಚಿದ ಶೂಲಿಯ ಖಡ್ಗದಂತೆ ರೌ
ದ್ರದ ನಿಜರೂಪಿನಂದದೆ ಭಯಂಕರ ಶಂಕರದಾಸಿಮಯ್ಯನೊ
ಪ್ಪಿದನತಿ ಭೀಕರಂ ನತಕೃಪಾಕರನುದ್ಧ ತಮೋದಿವಾಕರಂ ॥

ಇಂತೊಪ್ಪಿರೆ ಜಡೆಯ ಶಂಕರನ ಕಂಡು ಭಕ್ತ್ಯಮೃತವನುಂಡು ಪ್ರತಾಪಮಂ ಕೊಂಡು ನೊಸಲಕಣ್ಣಂ ಪಡೆದು ಪ್ರತಿಮಾದಿಗಳನೊಡೆದು ಪರಸಮಯದ ಗರ್ವವನುಡಿದು ದುರಿತಕುಲಮಂ ಜಡಿದು ಭವವೃಕ್ಷಮಂ ಕಡಿದು ಪುಣ್ಯಪರಿಮಳಮಂ ಮುಡಿದು ನಂದಿಯ ಮೊಗವಡವಂ ಪಡೆದು ಉತ್ತಮಾಂಗದ ಶಿವಲಿಂಗದ ಸೊಬಗಂ ಮಕುಟದ ಮನೋಹರಂ ಜಡೆಗಳ ಬೆಡಂಗಂ ಭಾಳಲೋಚನದ ಭಯಂಕರಂ ಮೊಗವಡದ ಮಹಿಮಂ ರುದ್ರಾಕ್ಷೆಯ ಭದ್ರಗುಣಂ ವಿಭೂತಿಯ ಸುಭಗಂ ಕಂಥೆಯ ಕಮನೀಯಂ ಕೋಪದ ಕಾಪಾಲಿ ಉಗ್ರದ ಭರ್ಗಂ ಸಾಮರ್ಥ್ಯದ ಭೀಮಂ ತೇಜದ ರಾಜಶೇಖರಂ ಅಭಿಮಾನದಭವಂ ಸತ್ವದ ಸಾರ್ವಭೌಮಂ ಸಾಹಿತ್ಯಭೂಷಣನೆನಿಪ ಶಂಕರದಾಸಿಮಯ್ಯಂ ಶಂಕರಾನುಗ್ರಹ ನಿಃಶಂಕಂ ಶೈವಪ್ರತಾಪತೇಜ ಪ್ರಭಾಕರಕಿರಣಾವರಣನಾಗಿ ರಂಗಮಂಟಪದೊಳು ಬಿಜಯಂಗೆಯ್ದಿರೆ,

ಮಯೂರಪುರಜನವುಂ ಪರಮಭಕ್ತರುಂ ಹರಕರುಣವಾದುದನರಿದು, ಭಾಳಲೋಚನಮುಮಂ ಪಡೆದುದಂ ಕಂಡು, ಪ್ರತಿಮೆಗಳೊಡೆದುದಂ ಪರೀಕ್ಷಿಸಿ, ಲಲಾಟಪರಿಧಾನ ವೃಷಭಮುದ್ರೆಯ ನಡೆನೋಡಿ, ಕೌತುಕಂಗೊಂಡು ಆಶ್ಚರ್ಯದೊಳಾಳ್ದು ಸೈಗೆಡೆದು ಬಿಳ್ದು ಕೈಗಳಂ ಮುಗಿದು ಕೊಂಡಾಡಿ ಶೂಲಿಯ ಗಣಂಗಳು ಕೇಳಿಕೆ ಸಹಿತ ಎದಿರ್ಗೊಂಡು ಪುರದೊಳು ಮೆರಸಿ ನಿಜನಿಳಯದೊಳು ಬಿಜಯಂಗೈಸುತಿರಲೆಲ್ಲರುಂ ಧನಮಂ ಧ್ಯಾನಮಂ ದುಕೂಲಂಗಳಂ ತಂದಾರಾಧಿಸಲು, ಇವೆಲ್ಲವನೊಲ್ಲೆಂ ಯಾಯಾವರಂ ತಕ್ಕುದಾದುದಂ ತಂದು ಜಡೆಯ ಶಂಕರಗಿತ್ತು ಪ್ರಸಾದಮಂ ಕೊಂಡು ಸುಖದೊಳಿರ್ಪೆಂ, ಪರರರ್ಥಮಂ ಹೊದ್ದುವ ಹಿರಿಯತನಂ ಬೇಡ. ಆರಾಧಿಸಿಕೊಂಬ ಭಾರಕ್ಕಾನಾರೆನೆಂದೊಲ್ಲೆನೆಂದು ಧೈರ್ಯನಿಧಿ ಮಾಯಾಮದಹರಂ ಪರದೈವಧೂಮಕೇತು ಸದ್ಭಕ್ತಿಸಂಪನ್ನಂ ನಿತ್ಯತೃಪ್ತಂ ಭಕ್ತಿಯಂ ಬೀರದೆ ಶಿವನೊಲವಂ ತೋರದೆ ಸಂಸಾರಮಂ ನಟಿಯಿಸಲೆಂದು ಒಂದೊಂದು ಮನೆಯೊಳು ಧಾನ್ಯಮಂ [ತರಲ್] ದೈನ್ಯದಿಂದೂರ ಪುಗೆ, ಕೇಳ್ದಾ ಮನೆಯವರು ಜೋಳವಿಲ್ಲದೆ ಶಂಕರಗಂಡಂ ಪಿರಿದಯ್ಯಾ ಪಿರಿದೆಂದು ನುಡಿಯೆ, ಜೋಳದ ಪೆಸರು ಶಂಕರಗಂಡನ ಪೆಸರೆ? ಮುನ್ನರಿಯೆನಿನ್ನೊಲ್ಲೆನೊಲ್ಲೆಂ, ಶಂಕರ ಪೆಸರ್ಗೆ ಶರಣೆಂಬುದಲ್ಲದಿಂತು ಮಾಡಲಾಗದೆಂದು ಭಯಭಕ್ತಿ ಭರಿತಂ ಶಿವನಿಷ್ಠಂ ಶಿವಸ್ನೇಹಿ ಶಂಕರನಾಮದಶಾವಸ್ಥಂ ನಡನಡುಗಿ, ಜಡೆಯ ಶಂಕರನಲ್ಲಿಗೆ ನಡೆತಂದು, ಎಲೆ ದೇವಾ, ಚಂದ್ರಧರಾ, ಸಕಲ ಸಸ್ಯಾಧಿಪತಿಯೆ, ಜೋಳದ ಪೆಸರುಂ ನಿನ್ನ ಪೆಸರಾಗಿರ್ದಪುದು. ಎನಗರಿದೆಂದು ವೇಳೆವಾಳಿಯವಂ, ಜೋಳವಾಳಿಯವನಲ್ಲಲ್ಲ, ದೇವಾ ಇಂದು ಮೊದಲ್ಗೊಂಡು ಧಾನ್ಯಮಂ ತಪ್ಪುದು ಶೂನ್ಯಂ, ಪನ್ನಗಾಭರಣ, ನೀನೊಲಿದಂತೆನ್ನಂ ಸಲಹೆಂದು ಬಿನ್ನವಿಸಿದ ತನ್ನಣುಗನ ನಿಷ್ಠೆಗೆ ಲೋಕೈಕನಾಥಂ ಸಾಕಾರಸುಧಾವರ್ಷಂ ಹರುಷ ಪುಳಕಿತವಾಗಿ, ಎಲೆ ಮಗನೆ ನಿಃಶಂಕ ಶಂಕರದಾಸಿಮಯ್ಯ, ನೀನೊಲ್ಲದೋಗರಂ ತಾಂ ನನಗೇಕೆ? ನಿನ್ನ ಮನಕ್ಕೆ ಸುಖವಾಗಿಪ್ಪ ಲೌಕಿಕ ವಿರೋಧವಪ್ಪ ಲೋಯಿಸರದ ಹಳುಕುಮಂ ಜೀರ್ಣಚೂರ್ಣಮುಮಂ ಗುಂಜಾಸುಬೀಜಮನೊಂದು ಗೂಡಿ ಅರೆದು ನಮಗಿತ್ತಿತ್ತು ಅಂದಂದಿಗೆ ಪ್ರಸಾದಮಂ ಕೈಕೊಂಡು ನಿತ್ಯತೃಪ್ತತೆನೊಳಕೊಂಡು ಪ್ರಸಾದ ಪಥ್ಯಹೃದಯನಾಗಿಪ್ಪುದೆಂದು ಯಾಯಾವರಕ್ಕೆ ಶಿವಾಲಯದೊಳು ಪಟ್ಟಿರ್ದ ವಕ್ರಪಾದನೆಂಬ ಛಾತ್ರನಂ ಕರುಣಿಸಿ ಕೊಡಲೊಡಂ, ಶಂಕರದಾಸಿಮಯ್ಯಂ ನೆನೆದ ಬಯಕೆ ಮನದಿಂಬುಗೊಂಡು ಗುಂಜಾದಿತ್ರಯವಿಷ[ತ್ರ]ಯಾನಿಯುಕ್ತ ಶಂಕರಾರ್ಪಿತ ಪ್ರಸಾದಜೀವಿಯಾಗಿ ಸುಖತೃಪ್ತಿಯಿಂ ತೇಗಿ ಪರಿಣಾಮದಿಂ ಬೀಗಿ ಭಕ್ತಿಯ ಭರದಿಂ ಬಾಗಿ ಸಾತ್ವಿಕರಸದಿಂ ತೂಗಿ, ಜಡೆಯ ಶಂಕರನಿಂ ಶಂಕರದಾಸಿಮಯ್ಯಂ ನೊಸಲಕಣ್ಣಂ ಪಡೆದನೆಂಬ ಪ್ರತಾಪಕೀರ್ತಿ ಲೋಕಪ್ರಸಿದ್ಧಮಾಗೆ, ಮಯೂರಪುರವರಾಧೀಶ್ವರನಂ ಕುಸುಮಶರಭಸಿತೋದ್ಧೂಳಿತ ಗಾತ್ರನಂ ಅಮೃತಮಥನೋದ್ಭೂತ ವಿಷಮವಿಷಧರನಂ ಅಂಧಕಾಸುರ ತಿಮಿರಮಾರ್ತಂಡನಂ ಜಲಂಧರಾಸುರ ಕುಜಕುಠಾರನಂ ದಂಡಧರ ಗರ್ವಪರ್ವತಕುಲಿಶನಂ ಶರಣಜನ ಸುಲಭ ಸಂಕಾಶನಂ ಜಡೆಯ ಶಂಕರನಂ ಶರಣಾಗತ ಶರಣನೆನಿಪ್ಪ ಶಂಕರದಾಸಿಮಯ್ಯಂ ಹರಪ್ರತಾಪರೂಪ[ಂ] ನವಿಲೆಯೊಳು ಸಕಳಸುಖದಿಂದಿರುತ್ತಿರುತ್ತಿರಲು,

ಮುದನೂರೊಳು ಜೇಡರದಾಸಿಮಯ್ಯಂ ರಾಮನಾಥ ಪ್ರಸಾದ ಸಗರ್ವ ಹೃದಯಂ ಶಿವನಿಂ ತವನಿಧಿಯಂ ಪಡೆದೊಂದುದಿವಸಂ ಶಿವನಂತೆ ಕೊಡುವರು ಎನ್ನಂತೆ ಪಡೆವರಿಲ್ಲೆಂಬ ಗರ್ವಂ ತನ್ನ ಮನದೊಳು ಹೊಳೆಯೆ, ಮನಸಿಜಹರನರಿದೀತನ ಗರ್ವಮಂ ತನ್ನಿಂದಧಿಕನಂ ಕೊಂಡೊಯ್ದು

ತೋರ್ಪೆನೆಂದು ಶಿವಂ ಸರ್ವಜ್ಞಂ ನಿಜಭಕ್ತಪ್ರಣಯಕಲಹಲೀಲಾಲೋಲಚಿತ್ತಂ ಕನಸಿನೊಳ್ ಬಂದೆಲೆ ಮಗನೆ, ಶಂಕರದಾಸಿಮಯ್ಯಾ, ನೀನೊಂದೆಡೆಯೊಳಿರದೆ ಸೇವ್ಯ ಶಿವಪುರಂಗಳಂ ಪೊಕ್ಕು ದಿವ್ಯಸ್ಥಾನಮಂ ಕಂಡು ಸಭ್ಯಭಕ್ತಜನಂಗಳಂ ನೋಡಿ ಸಾಮರ್ಥ್ಯಮಂ ತೋರಿ ಪ್ರತಾಪಮಂ ಬೀರಿ ಮಾಯೆಯಂ ಮೀರಿ ಮರಳ್ದು ಬಪ್ಪುದೆಂದು ಬೆಸಸಿ ಭುಜಗಾಭರಣ ಗಜಚರ್ಮಧರಂ ನಿಜನಿಳಯಕ್ಕೆ ಬಿಜಯಂಗೆಯ್ಯಲೆಚ್ಚತ್ತು ಕವಿತಪ್ಪಾನಂದಾಶ್ರು ಜಲಂಗಳುಮನೇಳ್ತಪ್ಪ ಪುಳಕಂಗಳುಮನೆಂತಕ್ಕೆ ಸಂತೈಸಿಕೊಳುತ್ತಂ ಜಡೆಯ ಶಂಕರದೇವರಂ ಬೀಳ್ಕೊಂಡು ಶಿವದಾಸಿಗಳಂ ಹಿಂದಿಕ್ಕಿಕೊಂಡು ಗುಂಜಾದಿವಿಷ[ತ್ರ]ಯಾಶಿಲೆಯಂ ವಕ್ರಪಾದನ ಶಿರದೊಳಿಟ್ಟು ನವಿಲೆಯಂ ಪೊರಮಟ್ಟು, ಒಡನೆ ಬಪ್ಪ ಹರಭಕ್ತರುಮಂ ಪುರಜನಂಗಳುಮಂ ಮರಳಿ ಕಳುಪಿ, ಪರದೈವ ಪ್ರತಿಶೋಷಣಂ ಪುರಹರ ಪ್ರತಾಪಭೂಷಣಂ ನಿಟಿಲತಟಘಟಿತ ಘುಳು ಘುಳಿತಸ[ಮು]ಗ್ರನಯನ ಗರ್ಭೀಕೃತ ವೃಷಭರಾಜಮುಖಮುದ್ರಾವಿಲಸಿತ ಲಲಾಟಪಟ್ಟಂ ಗಜಚರ್ಮ ಪ್ರತಿಚ್ಛಂದ ವಿರಾಜಮಾನ, ನಿರುಪಮ ಪುಣ್ಯಗುಣರಚಿತಂ ಸೋಮಸಾಮರ್ಥ್ಯಕಥಾಭ್ಯಾಸ ಸ್ವಚ್ಛಂದಚಕಿತಂ ಅಪ್ರತಿಮಪ್ರಭಾವ ಭೂವಳಯ ಪ್ರಸಿದ್ಧಂ ಸತ್ಯಸದಾಶಿವಭಕ್ತಂ ಶೈವತೇಜೋಭಿಮಾನಂ ದಕ್ಷಾಧ್ಯಕ್ಷಂ ಕ್ಷುದ್ರದೈವ ವಿದ್ರಾವಣಂ ದುರ್ದೈವ ಧೂಮಕೇತು ಉಪಜೀವಿತದೈವ ತಮಸ್ತಪನಂ ದುರು[ಳ]ದೈವವಾರಣಸಿಂಹಂ ದುಷ್ಟದೈವನಿಷ್ಠುರಾನಲಂ ದುರ್ಜನದೈವ ವಜ್ರಪಾತಂ ದರ್ಪಿತದೈವದಾವಾಗ್ನಿ ದೈನ್ಯದೈವಕೃಪಾಮೇರು ಪರಸಮಯ ಭಯಂಕರಂ ನಿಃಶಂಕದೈವಪ್ರತಾಪಮುಖನೆನಿಪ ಶಂಕರದಾಸಿಮಯ್ಯಂ ಪಶ್ಚಿಮಾಭಿಮುಖನಾಗಿ ನಡೆತರುತಂ, ನೋಡಿದರ್ಗೆ ನವ್ಯಸಂಪದಮನೀವುತಂ ನುಡಿಸಿದರ್ಗೆ ಧರಣೀಶ್ವರತ್ವಮಂ ಕರುಣಿಸುತಂ, ಮೆಟ್ಟಿದ ಪ್ರಾಣಿಗಳಂ ಸಗ್ಗಕ್ಕೆ ಕಳುಪುತ್ತಂ ಮುಟ್ಟಿದರಂ ಮುಕ್ತಿಪಥಕ್ಕೆ ಸಲಿಸುತ್ತಂ, ಕೆಲವೆಡೆಗೆ[ಯ್ದಿ], ಪಲವೂರ್ಗಳಂ. ಕಳಿದು ದಾಸನ ಮನದ ಗರ್ವಮಂ ಸಡಿಲ್ಚಿ ತವನಿಧಿಯಂ ಪೆಚ್ಚಿಸಲೆಂದು ಶಿವಭಕ್ತಿಭೂಷಣರೆನಿಪ ಪುರಾತನರ ವೃದ್ಧಾಚಾರ ಭಕ್ತಿರಸಂ ಮಡುಗಟ್ಟಿದಂತಿರ್ದ ಮುದನೂರಂ ಪೊಗುತಪ್ಪಾಗಳು, ಮಾಗಧ ಮಾಳವ ವಂಗ ಕಳಿಂಗ ಗೌಳ ಲಾಳ ತಿಗುಳ ತೆಲುಂಗ ಗುರ್ಜರ ಹಮ್ಮೀರ ಕರ್ನಾಟ ಕಲ್ಯಾಣಂ ಮೊದಲಾದ ನಾನಾ ದೇಶಂಗಳಿಗೆ ಪಿಡಿದುಪೋಪ ಹಿಂಡುಗೊಟ್ಟಿಗೆ[ಯ] ತಂಡಂಗಳ, ತಲೆಯೊರೆಯ ಜನಂಗಳ, ಭಂಡಿಗಳೊತ್ತೊತ್ತೆಯ, ದಾಸಂಗೀಶನಿತ್ತ ತವನಿಧಿಯ ಸಂಭ್ರಮದ ಸಂದಣಿಗೆ ಸಂತೋಷಂಬಡುತ್ತಂ ಮುದನೂರಂ ಪೊಕ್ಕು, ರಾಮನಾಥನಂ ಕಂಡು ಹರುಷಂಗೊಂಡು ಶಿವಾಲಯದ ಹತ್ತಿರೆ ಬಿಡಾರಮಂ ಬಿಟ್ಟು ಶಂಕರದಾಸಿಮಯ್ಯಂ ವಿಪಥಪರಿಶ್ರಮನಾಗುತ್ತಿರಲಲ್ಲಿಗೆ ಕರ್ಣಪರಂಪರೆಯಿಂದರಿದು ಜೇಡರದಾಸಿಮಯ್ಯಂ ಬಂದು ಮೆಯ್ಯಿಕ್ಕಿ ನಿಂದು ಕೈಮುಗಿದು ರವಿಯ ಹತ್ತಿರೆ ಚಂದ್ರಮಂ ಕುಳ್ಳಿರ್ಪಂತೆ ಕೆಲದೊಳು ಕುಳ್ಳಿರ್ದು, ಭಾಳನಯನ ಜನಿತ ಶಿವಕಾರುಣ್ಯಗೋಷ್ಠಿವಿದಿತ ವೃತ್ತಾಂತ ಹರುಷಹೃದಯನಾಗುತ್ತೆ ಕಿರಿದುಂ ಬೇಗಮಿಪ್ಪ ಸಮಯದೊಳು ಶಿವದಾಸಿಗಳಿದ್ದಲೆ ಮಗನೆ ಧಾನ್ಯಕ್ಕೆ ಪೋಗೆಂದು ವಕ್ರಪಾದಂಗೆ ಪೇಳುತ್ತಮಿರಲಾ ಮಾತಂ ಕೇಳ್ದು ಜೇಡರದಾಸಿಯಮ್ಯಂ ಶಿವಕಾರುಣ್ಯ ಸಗರ್ವಹೃದಯಂ ತವನಿಧಿಯುಂಟೆಂಬ ಗರ್ವದಿಂ ಮುಂದುಗಾಣದೆ ಮೇಲನರಿಯದೆ ಶಿವಭಕ್ತರು ಪಿರಿಯರ್ಗೆ ಪಿರಿಯರುಂಟೆಂದರಿಯದೆ ವಿಚಾರಿಸದೆ ಶೀತಕರಂಗೆ ತಂಪನೀವಂತೆ ಭಾಸ್ಕರಂಗೆ ಬೆಳಗಂ ಕೊಡುವಂತೆ ಅಗ್ನಿಗೆ ಉಷ್ಣತೆಯಂ ಕೊಡುವೆಂಬಂತೆ ನಿಂದಿರ್ದು ಕೈಮುಗಿದು ದೇವಾ, ದೇವರೋಗರಕ್ಕೆ ಧಾನ್ಯಮಂ ಪುಗಲೇಕೆ ಎನ್ನ ಮನೆಯೊಳು ಸುಕುಮಾರಕ ಧಾನ್ಯಮುಂಟು, ಇಲ್ಲಿ ನೀವಿರ್ಪನ್ನೆವರಂ

ಧಾನ್ಯಕ್ಕೆ ಪೋಗಲಾಗದಾವ ನಿರೋಧಂ ಬೇಡ. ಹತ್ತಿಪ್ಪತ್ತು ಸಾವಿರ ನೆಲ್ಲ ಹೇರಂ ಕಳುಹುವೆಂ, ಅವಂ ಕೈಕೊಂಬುದೆಂದು ಸ್ವಾಧೀನತೆ ಮಿಕ್ಕ ಸ್ನೇಹರಸದೊಡನೆ ಸಂಪನ್ನತೆಗೂಡಿ ಬಿನ್ನಪಂಗೆಯ್ಯೆ,

ಶಂಕರಧ್ಯಾನಮನಿನಿತು ಬೇಗಂ ಮಾಣ್ದು, ಅಂಕುರಿಸಿದಾಕ್ಷೇಪದ ಮೇಲೆ ಪಲ್ಲವಿಸಿದ ನಸುಗೋಪಂ ಬೆರಸಿ ಮುಗುಳ್ನಗೆ ಮೊಗದೊಳಲರೆ ನೋಡಿ ನುಡಿದನಕ್ಕಕ್ಕು ಬಡಭಕ್ತರ್ಗೆಲೆಲೆ ನೆಲ್ಲೆಲ್ಲಿ ಬರ್ಪುದು? ವಿರಿಂಚಿಯಂ ಶಿರಮಂ ಚಿವುಂಟಿ ಪಿಡಿದು, ಮೃತ್ಯುವಿನ ಮನೆಯಂ ಮುತ್ತಿ, ವಿಶ್ವಕ್ಸೇನನನಿರಿದೆತ್ತಿ, ಹರಿಯಭಾಳದರುಣಜಲಮಂ ಭಿಕ್ಷಾಪಾತ್ರೆಯೊಳ್ತೀವಿ ತಿರಿದಾಡಿದನ ಮಕ್ಕಳ್ಗೆ ಸಿರಿಯೆಲ್ಲಿಯದೆಲೆ ದಾಸ? ನೀಂ ಕುಡುವವಂ ನಾಂ ಕೊಳುವವನುಂಟುಂಟೆಂದು ನಸುಗಟಕಿಯನಾಡುತ್ತೆಳ್ದು ಬಂದು, ಬಿಡಾರದ ಮನೆಯ ಮುಂದೊಪ್ಪುವ ತಿಪ್ಪೆಯನಾತನಿಂ ತೆಗಸಿ ಪೊನ್ನ ಕಡವರಂಗಳಂ ತೋರಿಸಿ ನಿನಗೆ ಬೇಳ್ಪನಿತಂ ಕೊಳ್ಳುಕೊಳ್ಳಲೆ ದಾಸ, ಕೊಳ್ಳೆನುತೆ ನಿನ್ನ ನಾಲ್ವೆರಲ್ ನೆಲ್ಲ ಗೊಟ್ಟಿಗೆ ತಕ್ಕ ಮುರಕವಲ್ಲ, ತವನಿಧಿಯಂ ಕೊಟ್ಟ ದೇವಂ ತಾನೆ ಕೊಂಡಂ, ನೀಂ ಪೋಗು ಪೋಗೆಂದು ಶಂಕರದಾಸಿಮಯ್ಯಂ ಸಾಮರ್ಥ್ಯದ ನಿಧಿ ಬಿಸುಗಣ್ಣಿನ ಭೀಕರಂ ಜಡಿದು ನುಡಿಯೆ,

ಜೇಡರದಾಸಿಮಯ್ಯಂಗೆ ಭೀತಿ ಬಲಿದು ಬೆರಗು ರೂಪುಗೊಂಡು ಕೌತುಕಂ ಪುಟ್ಟಿ ಜಾತಭಯಂ ಜಕ್ಕುಲಿಸಿ, ಕಂದಿದ ರವಿಯಂತೆ ಕೊರಗಿದ ಲತೆಯಂತೆ ಕಳೆಯೋಡಿದ ಚಂದ್ರನಂತೆ, ಮರುಳಂತೆ ಮರೆದು, ಶೂನ್ಯಹೃದಯನಾಗಿ ನಿಂದಿರಲಮ್ಮದೆ ಮೆಲ್ಲಮೆಲ್ಲಮೆ ನಿಜನಿಳಯದತ್ತ ಬರುತ್ತಿರ್ದ ದಾಸನಂ ದುಗ್ಗಳವ್ವೆ ಕಂಡು ಇದೇನಿದೇನು ಒಳಗೆ ತವನಿಧಿ ತವಿಲಾಯಿತ್ತು, ಪೊರಗೆ ಭಕ್ತಿರಸಂ ಬರಿದಾಯಿತ್ತು, ಮುಖದ ನಯಂ ಹಾರಿತ್ತು, ಕಂಗಳ ಕಾಂತಿ ಜಾರಿತ್ತು, ಸತ್ಯಶರಣರ ಕೂಡೆ ಉತ್ತರವ ಕೊಟ್ಟಿರಕ್ಕೆ ಅಲ್ಲದಡಿನಿತಾಗದೆಂದು ನುಡಿಯೆ, ದಾಸಂ ಕೇಳ್ದು, ಶಿವಭಕ್ತಿ ಸಂಪನ್ನೆ ಅಗ್ಗಳದ ದುಗ್ಗಳೆ ನೀನೆಂದಂತೆ ಶಂಕರದಾಸಿಮಯ್ಯಂಗಳೊಡನುತ್ತರಂ ಗೊಟ್ಟು ಅವರ ನಸುಗೋಪದಿಂದಿಂತಾದುದೆಂದು ಪೇಳಲೊಡಂ ದುಗ್ಗಳವ್ವೆ ಕೇಳ್ದು ಕಿವಿಯಂ ಮುಚ್ಚಿಕೊಳುತ್ತೆ, ಶಿವ ಶಿವಾ ಕಾಲಾಗ್ನಿಯಂ ಕೆಣಕುವರೆ? ನೊಸಲ ಕಣ್ಣ ಮುಸುಕಂ ತೆಗೆವರೆ? ಶಿವತೇಜೋಭರಣನೊಳು ಸಲುಗೆಯಂ ಮಾಳ್ಪರೆ? ನಮ್ಮ ಭಕ್ತಿಯೆನಿತು, ನಾವೆನಿತರವರು, ರಾಮನಾಥನಾವ ಹೊತ್ತು ಏನಂ ಮಾಡಿದಪನೆಂದು ಆರರಿವರು? ಇಂತಿದಲ್ಲಲ್ಲ, ನಡೆಯೆಂದು ಸದುಭಕ್ತಿಗೂಡಿ ಶಾಂತಿಭೂಷಣೆ ಶಿವೈಕ್ಯನಿಷ್ಠಾನಿಧಿ ಮೆಲ್ಲಮೆಲ್ಲನಲ್ಲಿಂ ತೊಡಗಿ ಮೈಯಿಕ್ಕುತಂ ಬಂದು, ಚಿತ್ತದ ಭಯಮುಂ ಮನದ ಲಲ್ಲೆಯುಂ ಮುಖದ ಕಾರ್ಪಣ್ಯಮುಂ ದೃಷ್ಟಿಯ ದೈನ್ಯತೆಯುಂ ಸುರಿವ ಕಣ್ಣನೀರುಂ ಬೆರಸಿ ಶಂಕರದಾಸಿಮಯ್ಯಗಳ ಚರಣದೊಳೆ ದೊಪ್ಪನೆ ಬೀಳ್ದು, ದೇವಾ, ಶಿಶುವಿನೊಳು ನೀತಿಯುಂಟೆ? ಪಶುವಿನೊಳು ಬುದ್ಧಿಯುಂತೆ? ಮತಿಹೀನರೊಳು ಮನ್ನಣೆಯುಂಟೆ ವಾಗ್ವಂಚಕರಲ್ಲಿ ಒಳುನುಡಿಯುಂಟೆ? ದೀನರೊಳು ದಾಕ್ಷಿಣ್ಯವುಂಟೆ? ಕ್ಷೀಣರೊಳು ಜಾಣುಂಟೆ ಭಕ್ತಿಯಿಲ್ಲದೆಡೆಯೊಳು ಭಯವುಂಟೆ?ಎಮ್ಮೊಳು ಗುಣಮಂ ನೋಡುವರೆ? ತೊತ್ತಿರೊಳು ತಪ್ಪನರಸುವುದೆ? ಲ ಸತಿಯಪರಾಧಮಂ ಪತಿ ಪರೀಕ್ಷಿಸುವುದೆ? ಧೈರ್ಯಮೂರ್ತಿ, ಶಾಂತಮೂರ್ತಿ, ಶಾಶ್ವತಮೂರ್ತಿ, ಶೈವಪ್ರತಾಪಚಕ್ರವರ್ತಿ, ಸಾಮರ್ಥ್ಯಭೂಷಣ, ಶಾಂತರೂಪ, ಭಕ್ತಜನಬಾಂಧವ, ಕೃಪಾಸಮುದ್ರ, ಶಿವಾರ್ಚನಸಂಪನ್ನ, ಕರುಣಿಸು ಕರುಣಿಸೆಂದು ಮತ್ತೆಮತ್ತೆ ಸೈಗೆಡೆದು ಬೀಳುವ ದುಗ್ಗಳೆಯಂ ಶಿವಭಕ್ತಿರಸಭರಿತಂ ಕಿಂಕುರ್ವಾಣಭಕ್ತಿರಸದೊಳಗೆ ದಾಸನ ಮೇಲಣ ಮುಳಿಸುಂ ಮುಳುಗಿ ಹೋಗೆ, ಕರುಣಿಸಿ ಕರೆದು ಶಿರದ ಮೇಲೆ ಕೈಯನಿಟ್ಟು ಪ್ರೇಮದಿಂ ಹಿಗ್ಗಿ ರಾಮನಾಥಂ ಕೊಟ್ಟ ಅಪಾರ ತವನಿಧಿಯು ಸೋರುವಾಯಿಂ ಬಪ್ಪುದಿಂದು ಮೊದಲಾಗಿ ಮೇಲುಬಾಯಿಂದುಕ್ಕಿ ಬರಲೆಂದು

ವರವಂ ಕೊಟ್ಟವರಿಬ್ಬರಂ ಕಳುಪೆ, ನಿಜನಿಳಯಕ್ಕೆ ಬಂದು ಉಕ್ಕಿ ನೆಗೆವ ತವನಿಧಿಯಂ ಕಂಡು, ದಾಸ ದುಗ್ಗಳೆಗಳಿಗೆ ತವನಿಧಿ ಪದಿರ್ಮಡಿಸಿ ಭಕ್ತಿ ನೂರ್ಮಡಿಸಿ ಭಾಗ್ಯ ಸಾಸಿರ್ಮಡಿಸಿ ನಡೆತಂದು ನಿತ್ಯಸುಖದೊಳೋಲೈಸುತ್ತಿರೆ,

ಶಂಕರದಾಸಿಮಯ್ಯಂ ಸದ್ಭಕ್ತ ನಿಕಾಯಪರಿವೃತನುಂ ಪುರಜನ ಸೇವ್ಯನುಂ ಪರಿಜನ ದಯಾರಕ್ಷಣನುಂ ಹೃದಯಕಮಳಕರ್ಣಿಕಾಮಧ್ಯಸುಖಾಸೀನ ಶುಭಕರ ಶಂಕರನುಮಾಗಿ ಗವಸಣಿಗೆ ಗವಿಸಿದ ಪಾಶುಪತಾಸ್ತ್ರದಂತೆ ಮುದ್ರಿಸಿದ ರುದ್ರನ ತ್ರಿಶೂಲದಂತೆ ಮೊಗವಡದ ಮಹಿಮಂ ಕಂಥೆಯ ಕಾಲಾಗ್ನಿ ಸದುಮಳನಿಳಯಂ ಮುದನೂರೊಳಿರ್ದನತ್ತಲು,

ಜಯಸಿಂಹರಾಯನಿರ್ಪ ಕಲ್ಯಾಣದೊಳಗೆ ಮಟ್ಟಿಯ ಮರುಳ್ಗಳುಂ ದರ್ಭೆಯ ನಿರ್ಭಾಗ್ಯರುಂ, ವೇದದ ವಾದಿಗಳುಂ ಶಾಸ್ತ್ರದ ಸಗರ್ವರುಂ ತರ್ಕದ ತಾಮಸರುಂ ಕೊಂಡೆಯರುಂ ಕೆಂಗೊಡೆಯ ವಿಡಂಗರುಂ ಯಜ್ಞದಜ್ಞರುಂ ತಿಲಪಾತ್ರೆಯ ಕಲಿಗಳುಂ ಗೋದಾನದ ಸಾಧಕರುಂ ಮಹಿಷೀದಾನ ಸಾಹಸಿಗರುಂ [ತುಳಾ]ಪುರುಷ ದಾಳಿಕಾರರುಮೆನಿಪ ದಾನದ ಯಾಚಕರೆಲ್ಲಂ ನೆರೆದು ಬಂದು ಅರಸಂಗೆ ಆಶೀರ್ವಾದಮಂ ಕೊಟ್ಟು, ಎಲೆ ದೇವಾ, ನವಿಲೆಯೊಳಗೊಬ್ಬಂ ಶಂಕರದಾಸಿಮಯ್ಯಂ ಗಳೆಂಬವರು ನೊಸಲಕಣ್ಣಂ ಪಡೆದು, ಪ್ರತಿಮಾದಿಗಳನೊಡೆದೆನೆಂಬ ಭೀಕರಬಿರುದಿನ ಅತ್ಯಾಸುರಂ ಮಾಡಿಕೊಂಡಿಪ್ಪ ಭಕ್ತರುಗಳುಂ ಬಂದು ಮೂದನೂರಲ್ಲಿರ್ಪರವರಂ ನಮ್ಮೂರ ತಮ್ಮಡಿಗಳಿಂ ಕರೆಯಿಸಿ, ಹಿರಣ್ಯಕಶಿಪು ಮಥನನಪ್ಪ ಘುಳುಘಳಿಸಿ ಬಾಯ್ದೆರೆದಿಪ್ಪ ಕೇಸರಿ, ಗಜರಿ ಗರ್ಜಿಸುವ ನರಸಿಂಹಮೂರ್ತಿಯಂ ನೊಸಲಕಣ್ಣಿಂ ನೋಡಿಸಿ, ಭಕ್ತರು ನುಡಿವ ಪೆರ್ಬುಸಿಯ ಘಟಿತಮಂ ನೋಡಲಕ್ಕುಮೆನೆ,

ಅರಸಂ ಕೇಳ್ದಾ ಮಾತಿಂಗೆ ಬಳ್ಳುಗಳ ಗೀತಕ್ಕೆ ನರಿ ಮಚ್ಚುವಂತೆ ಜಯಸಿಂಹರಾಯ ನೊಡಂಬಟ್ಟು ಮೆಚ್ಚಿ ತಲೆದೂಗಿ ಸತ್ಯಶರಣನ ಸಾಮರ್ಥ್ಯವನರಿಯದ ಸ್ವಾಮಿವಂಚಕರೆಲ್ಲಂ ನೆರೆದು ಆ ಪಟ್ಟಣದ ತ್ರಿಪುರಾಂತಕದೇವರ ಸ್ಥಾನಿಕರೆಲ್ಲರಂ ಕರೆದು, ನೀವಿಂತು ಪೋಗಿ ಮುದನೂರೊಳಿರ್ದ ಶಂಕರದಾಸಿಮಯ್ಯಂಗಳನೊಡಗೊಂಡು ಬನ್ನಿ ಎಂದರಸಂ ಪೇಳೆ, ಶರಣ ಸಂತತಿ ನೆರೆದು ಪೊರಮಟ್ಟು ಮುದುನೂರ್ಗೆ ಬಂದು ಸತ್ಯಶರಣನಂ ಕಂಡು ದೇವಾ ದೇವಾ, ಕಲ್ಯಾಣದ ತ್ರಿಪುರಾಂತದೇವರು ಮೊದಲಾದ ಮಹಾಸ್ಥಾನಂಗಳಂ ಕಂಡು ಶಿವಭಕ್ತರಂ ನೋಡಲು ಬಿಜಯಂಗೆಯ್ವುದೆಂದು ಭರದಿಂ ಪೇಳಲೊಡಂ ಒಡಂಬಟ್ಟು, ಶರಣಸಂತತಿಸಹಿತಂ ಶಂಕದಾಸಿಮಯ್ಯಂ ನರಸಿಂಹೋಪಸಂಹಾರಕ್ಕೆ ಪೊರಮಡುವ ಶರಭದೇವರಂತೆ ಪೊರಮಟ್ಟು ನಡೆದುಬಂದು ಕಲ್ಯಾಣಮಂ ಪೊಗುತಪ್ಪಾಗಳು, ಹಸ್ತ್ಯಶ್ವರಥಪದಾತಿ ಧವಲಛತ್ರಚಾಮರ ಕಳಸ ಕನ್ನಡಿಗಳಿಂ ಜಯಸಿಂಹರಾಯನಿದಿರ್ಗೊಳಲು ಪಟ್ಟಣಮುಮಂ ಪೊಕ್ಕು, ಶಿವಭಕ್ತಿನಿಳಯದೊಳು ಬಿಜಯಂಗೆಯ್ದು ಶರಣಕುಳ ಸಂಭಾಷಿತ ಶಿವಪುರಾಣ ಪುರಾತನಗೀತಗೋಷ್ಠಿ ಸುಖಭರಿತ ಸರೋವರ ಜನಿತ ವಿಹಸಿತ ಹೃದಯ ಕಮಲನಾಗುತ್ತೊಂದೆರಡು ದಿನವಿರಲಲ್ಲಿಗೆ,

ಜಯಸಿಂಹರಾಯಂ ಕ್ಷುದ್ರ ಮಂತ್ರಾಳೋಚನೆಯಿಂ ಪ್ರಧಾನಿಗಳಂ ಕೂಡಿಕೊಂಡು ಬಂದು ಶಂಕರದಾಸಿಮಯ್ಯಂಗಳಿಗೆ ಕೈಯಂ ಮುಗಿದು, ದೇವಾ, ಶಿವಸ್ಥಾನಂಗಳಂ ನೋಡಲು ಬಿಜಯಂಗೆಯ್ವುದೆಂದು ತಾನೆದ್ದು ಕೈಗೊಟ್ಟು ನಡೆದು ಪಲವುಂ ಮಹಾಲಿಂಗಂಗಳಂ ಭರದಿಂ ತೋರುತ್ತಂ ಬಪ್ಪಾಗಳು, ಮುಂದೆ ಸುವರ್ಣ ಖಚಿತಮಾಗಿ ಕೋಳಿಯ ಗೂಡಿನಿಂ ಚೆಲುವ[ದೆ]ಂಬಂತೆಯಿರ್ದ

ವಿಷ್ಣುಗೃಹದಲ್ಲಿ ನಿಂದು, ದೇವರ ದೇವಾ, ಕಳಾಸಾನಿಧ್ಯಮಾದ ನರಸಿಂಹ ಪ್ರತಿಮೆಯಂ ನಿಮ್ಮ ನೊಸಲಕಣ್ಣಿಂ ನೋಡಲು ಘನ ಪ್ರತಿಷ್ಠೆಯಾದಪುದು. ನೋಡಿ ಕರುಣಿಸಬೇಹುದೆನೆ, ಶಂಕರದಾಸಿಮಯ್ಯಂಗಳರಿದು ಅಯ್ಯೋ ಶರಭದೇವರ ಕಯ್ಯೊಳು ನುಚ್ಚು ನೂರಾದವನನಡಿಗಡಿಗೆ ಕಾಡಲೇಕೆ? ನೋಡಿದಡೆ ಪ್ರತಿಮೆಗಳಿವಕ್ಕು ನಿಮಗಂ ನಿರೋಧಂ ಬಕ್ಕು, ಬೇಡ ಬೇಡಕಟಾ, ಪ್ರಾಣಿಗಳ ಮನವಂ ನೋಯಿಸಲೇಕೆ? ಅಯ್ಯೋ, ಬೇಡೆಂದು ನೋಡಲೊಲ್ಲದೆ, ನಿಲೆ, ಮತ್ತೆ ಮತ್ತೆ ಮೈಯಿಕ್ಕಿ ಪಟ್ಟಿರ್ದಲೆ ದೇವಾ, ನಿಮ್ಮಡಿಗಳು ನೋಡಿದಡಳಿವುಂಟೆ ಸುಪ್ರತಿಷ್ಠಿತಮಕ್ಕೆಂದಾಕ್ಷೇಪದಿಂ ಪರಿಹಾಸಮನಾಡೆ, ಕೇಳ್ದಾ ಕಟಕಿಗೆ ಸೈರಿಸದೆ ಕಡು ಮಾನಿ ಚಿತ್ತದೊಳ್ಘೂರ್ಮಿಸಿ ಅಹಂಕರದೊಳು ಸಡಗರಿಸಿ, ಬುದ್ಧಿಯೊಳು ಬಲಿದು ಮನದೊಳು ಮುನಿದು ಕೋಪದೊಳು ಕೊಸರಿ ಅದ್ಭುತದೊಳಂಕುರಿಸಿ ರೌದ್ರದೊಳು ರೂಢಿಸಿ ಭಯಾನಕದೊಳು ವಿಭಾಡಿಸಿ ಗಂಭೀರದೊಳು ಘುಳುಘುಳಿಸಿ ವೀರದೊಳು ಗಜರಿ ವಿಕ್ರಮದೊಳು ಗರ್ಜಿಸಿ, ಬರಸಿಡಿಲ ಗವಸಣಿಗೆದೆಗೆದಂತೆ, ಕಡೆಗಾಲದ ಕಿಚ್ಚಿನ ಮುಚ್ಚುಳಂ ತೆಗೆದಂತೆ ನಂದಿಯ ಮೊಗವಡಮನೊಯ್ಯನೋಸರಿಸಿ ನೋಡಲೊಡಂ, ಬಿಸುಗಣ್ಣೊಳಗೊಳಗೆ ಸುಳಿದು ಥಳಥಳಿಸಿ ಪೊಳೆದು ಥಳಿಲೆಂದೆವೆರೆದು ಭುಗಿಲೆಂದು ಉರುಪಿ ಧಗಿಲೆಂದು ದಹಿಸಿ ಭೋಂಕನೆ ನೆಗೆದು ಮುಂಕಣಿಸಿ ಪರಿದು ನರಸಿಂಹ ಪ್ರತಿಮೆಯಂ ನೆರೆದುರುಪುವಾಗಳು, ಕೇಸರಂ ಘರಿಘರಿಲೆನೆ ಉರಿದು ತೆರೆದ ಬಾಯಿ ಹರಿ ಹಂಚಾಗೆ ಕೋರೆದಾಡೆ ನೆರೆ ಬಿರಿದು, ನಿಡುನಾಲಗೆ ಸಿಕ್ಕನೆ ಸೀಳ್ದು, ಬಿಡುಗಂಗಳು ಒದರಿ ಹಾರೆ, ಮೃಗವದನಂ ಭುಗಿಲೆಂದು, ನಖದ ಕೈ ನೆರೆ ಸೀದು ಕರಿಮುರಿಯೋಗೆ, ಸರ್ವಾಂಗಂಗಳರಲ್ದು, ಥರಥರನೆ ಬಿಚ್ಚಿ ಬೇರಾಗಿ ಕಳಲ್ದು, ಅರಗಿನ ರೂಪನುರಿಯ ಕೊನೆ ಹೊತ್ತಿದಂತಾಗೆ, ಬಾದುಮಯ್ಯನಂ ಬರಸಿಡಿಲು ಹೊಡೆದಂತಾಗೆ, ನರಸಿಂಹ ಪ್ರತಿಮೆ ಧರೆಯ ಮೇಲುದುರೆ ಜಯಸಿಂಹರಾಯನುಂ ವೈಷ್ಣವರುಂ ವಾದಿಗಳುಂ ಉರಿದು ಮೊಗಹುಗೆಟ್ಟುದಂ ಕಂಡು ಮೊರೆಯಿಟ್ಟು ಹಲ್ಲಂ ತೆರೆದು ಹುಲ್ಲಂ ಕಚ್ಚಿ, ದೇವಾ ರುದ್ರಾವತಾರನೆಂದರಿಯೆವು, ಮರೆದು ಮರುಳಾದ ಸರ್ವಾಪರಾಧಿಗಳಂ ಕಾಯ್ದು, ದೇವಾ ಉಗ್ರಲೋಚನಮಂ ಮುಚ್ಚು ಮುಚ್ಚೆಂದು ಚರಣದೊಳು ಸೈಗೆಡೆದು ಪಟ್ಟಿರ್ದದರುವ ಮಾತರಿಯದ ಮೊಗಮೋಟರ ಮೇಲರಿಯದ ಬಾಲಕರ ಕಿಂಕುರ್ವಾಣದ ಕಿಂಕರರಂ ಶಂಕರದಾಸಿಮಯ್ಯ ಕರುಣಿಸಿ ನೋಡಿ, ನಂದಿಯ ಮೊಗವಡಮಂ ಮುಸುಂಕಿ ಜಯಸಿಂಹರಾಯಂಗಭಯಮಂ ಕೊಟ್ಟು ನಿಜನಿಳಯಮಂ ಪೊಕ್ಕು, ಪುರಹರನ ಪ್ರತಾಪರೂಪಂ ನಾರಸಿಂಹಪ್ರತಿಮಾವಿಭಾಡನುಂ ಸಾಮರ್ಥ್ಯ ನರಲೋಕ ವೀರಭದ್ರಂ ಪರ[ದೈವ] ಪ್ರಭಂಜನನುಂ ನಿಸ್ಸೀಮ ಶಂಕರಜ್ಞಾನ ಪ್ರಭಾವಿಳಸಿತ ಘುಳು ಘುಳಿತ ಭಯಂಕರಾಭೀಳ ಭಾಳಾಂಬಕ ಸತ್ಯನಿಳಯಂ ಶರಣರೊಡಗೂಡಿ ಶಂಕರಾರೋಹಣ ಮ[ನಸ್ತ]ರಂಗ ಸಮುಲ್ಲಸಿತ ಹೃತ್ಕಮಳ ಕಲ್ಯಾಣದೊಳಿರೆಯಿರೆ–

## ಸ್ಥಲ ೩

ಅರಿಯದೆ ಮೇಘವಹ್ನಿಗಿದಿರಾದ ನರಂಗೆ ಹುತಾಶನಾರ್ಚಿಗಂ
ತರಗೆಲೆಯಾಗುತಿ[ರ್ದ]ನೆನುತಂ ಸಲೆ ಶಂಕರದಾಸಿಮಯ್ಯನಂ
ಮೆರೆದ ಮಹೇಶನಂ ನಿಟಿಲಲೋಚನನಂ ಶಿವತತ್ವರೂಪನಂ
ಮರೆಯದೆ ನಿಚ್ಚಲೋಲಯಿಸುತೊಪ್ಪಿದನಾ ಜಯಸಿಂಹ ಭೂಭುಜಂ ॥

ಇಂತು ಜಯಸಿಂಹ ನೃಪನೋಲೈಸುತಿರಲಲ್ಲಿ
ಮುಂತೆ ಶಂಕರದಾಸಿಮಯ್ಯನೊಪ್ಪುತ್ತಲ್ಲಿ
ನೆನೆದನಾ ಜಡೆಯ ಶಂಕರದೇವರಂಘ್ರಿಯಂ
ನೆನೆವರಭಿಮತವೀವ ಕಾರುಣ್ಯವಾರ್ಧಿಯಂ
ನೆನೆದು ಪೊರಮಟ್ಟನಾ ಶಿವಭಕ್ತರೊಡನೆವರೆ
ಮನಮೊಸೆದ ಜಯಸಿಂಹರಾಯನೋಲೈಸಿ ಬರೆ
ಬಂದರಸನಂ ಶರಣಸಂದೋಹಮಂ ಕಳುಪಿ
ಸಂದಣಿಪ ಪರದೈವ ಕುಲದ ಗರ್ವವನಿಳುಪಿ
ಶಿವದಾಸಿಗಳು ಹಿಂದೆ ಹಿಂದೆ ನಡೆತರುತಿರಲು
ಶಿವನಿತ್ತ ವಕ್ರಪಾದಂ ಪೆರಗೆ ಬರುತಿರಲು
ಶೈವಾಂಬುವಾರ್ಧಿವರ್ಧನ ವಿಮಲ ಚಂದ್ರಮಂ
ಶೈವಕುಲಗಗನ ಧವಳಿತ ದಿನಪ ವಿಭ್ರಮಂ
ವೃಷಭೇಂದ್ರ ಮುದ್ರಿತ ಲಲಾಟೇಕ್ಷಣಾಂಕಿತಂ
ದಶದಿಗಂತ ಪ್ರಸಿದ್ಧ ಪ್ರತಾಪಾನ್ವಿತಂ
ಗುರುತರ ಶಿವಜ್ಞಾನ ಸಂಪನ್ನಮಾನಸಂ
ವರ ಭಾಳನಯನ ಕಂಥಾವಳಯ ವಾಸಂ
ಹರಭಕ್ತಿ ಭೂಷಣಂ ಪರಸಮಯ ಭೀಷಣಂ
ನರಹರಿ ಪ್ರತಿಮಾಮದ ಪ್ರಕರ ಶೋಷಣಂ
ನಡೆತಂದನಮ್ಮಮ್ಮ ನೆರೆ ಮನದ ನಿಶ್ಚಳಂ
ನಡೆತಂದನೆಲೆಲೆ ಪರಸಮಯ ಕೋಳಾಹಳಂ
ಬರುತಂ ಬಳಲ್ದು ಹೆಂಬೇರ ಹೊರಗೆಸೆದಿರ್ಪ
ನರರು ಕೊಂಡಾಡುವಾ ಮೈಲಾರನೊಪ್ಪಿರ್ಪ
ಮಾಳಿಗೆಯ ನೆಲದ ಪಾಸಿನ ಮೇಲೆ ಕುಳ್ಳಿರಲು
ಮೈಳುಗನನೆಡಹುತಂ ತಾಗುತಂ ಕುಳ್ಳಿರಲು
ಸುಟ್ಟುರುಹದಿಂತೆನ್ನನೆಡಹಿದಂ ಬರ್ದುಕಿದೆಂ
ದಿಟ್ಟಿಮೂರರ ಮಹಿಮನಂಘ್ರಿಯಂ ಸೋಂಕಿದೆಂ
ಎಂದಾಗಳಾ ಪ್ರತಿಮೆ ಬದುಕಿದೆನೆನುತ್ತಮಿರೆ
ನಿಂದವರ ಕರುಣಮಂ ಹಾರುತ್ತೆ ನಡುಗುತಿರೆ
ಅಂದು ಶಂಕರದಾಸಿಮಯ್ಯನೊಪ್ಪುತ್ತಿರಲು
ಹಿಂದೆ ನಲವಿಂ ವಕ್ರಪಾದ ಕುಳ್ಳಿರ್ದಿರಲು
ಬಂದಳೊರ್ಬಳು ಮುಂದೆ ದಂಡಿಗೆಯ ಪನ್ನಗದ
ಸಂದಣಿಪ ವಿಟರ ಮಿತ್ರರ ಸತಿಯರೊತ್ತರದ
ಹೆಂಬೇರ ಪಟ್ಟಣದ ಸೊಬಗಿನಗ್ಗದ ವನಿತೆ

ಇಂಬಿನಿಂ ಪೆಸರ ಮೈಳಾದೇವಿ ಭಾವಿಸುತೆ
ಸಂದಣಿಪ ಹರುಷದಿಂದಂದಣಮನಿಳಿತರುತೆ
ಬಂದೊಳಗೆ ಪೊಗಲಮ್ಮದಲ್ಲಿ ಪೊರಗಂ ನಿಲುತೆ
ಮುಂದೆ ಶಂಕರದಾಸಿಮಯ್ಯನಿರುತಿರೆ ಕಂಡು
ಎಂದಳಾ ಸತಿಯವರ್ಗೆ ನೀವಿವಂ ಕೈಕೊಂಡು
ಹೂವ ವೀಳೆಯವನಿದನೇರಿಸಿರೆ ಮೈಳಯಗೆ
ಕೈವಾರಮಾಡಿರೇ ವರವೀವ ಮೈಳಯಗೆ

ಎನುತೆ ವೀಳಯಮುಮಂ ಪಚ್ಚೆಗರ್ಪುರಗಳಂ
ಮೊನೆಯರಳಮಲ್ಲಿಗೆಯ ಸಂಪಗೆಯ ನನೆಗಳಂ
ಚಂದನದ ಸೌಗಂಧ ಮಂದೈಸಿ ಕಂಪಿಡುವ
ಗಂಧದಿಂದಂದು ಮಿಗೆ ಮೆರೆವುತಿಹ ಪರಿಮಳವ
ನೀಡಿದಳು ಹರವೇಷವೆಂದರಿಯದಾತಂಗೆ
ನೀಡಿದಳು ಶಿವಗೆ ಶಂಕರದಾಸಿಯಮ್ಮಂಗೆ
ಕುಡಲೀಸಿಕೊಂಡವಂ ಶಂಕರಗರ್ಪಿಸುತೆ
ಮೃಡನ ಪ್ರಸಾದಮಂ ಲೀಲೆಯಿಂ ಕೈಕೊಳುತೆ
ಗಂಧಮಂ ಕಕ್ಷ ವಕ್ಷಂಗಳೊಳು ಪೂಸುತಂ
ಬಂಧುರ ಪ್ರಸವಮಂ ಮಕುಟದೊಳು ಸೂಡುತಂ
ವೀಳಯಮನಲ್ಲಿ ನಲವಿಂದೆ ಕೈಕೊಳುತಮಿರೆ
ಮೈಳಯಗೆ ಕೊಡದೆ ತಾನೇ ಭೋಗಿಸುತ್ತಮಿರೆ
ಕಂಡದಂ ರಮಣಿ ಮಿಗೆ ಕೋಪಿಸುತೆ ತಾಪಿಸುತೆ
ಕೊಂಡಿರಿಂತಿದನು ಮೈಲಾರಂಗೆ ನೇಮಿಸುತೆ
ಎಲೆಯಯ್ಯ ಮೈಳಯಗೆ ಕುಡದೆ ನೀಂ ಕೊಂಬರೆ
ಒಲವಿಂದೆ ಹೂದಂಬುಲಮನೀಯದಿಪ್ಪರೆ
ಎಂದು ಮೈಳಾದೇವಿ ನಿಂದಾಗ ಸಖಿಯರುಂ
ನೊಂದು ಮನವಳಿದು ಮೈಳಯಗಂಜುತೆಲ್ಲರುಂ
ಸಾರಿ ಮೈಲಾರನತ್ಯುಗ್ರನೆಂದೆನುತಮಿರೆ
ಮೀರಿ ಶಂಕರದಾಸಿಮಯ್ಯನಂ ನುಡಿವುತಿರೆ
ನಸುನಗುತವಲ್ಲಿರ್ದ ಭವಿಗಳಂ ನೆರೆ ನೋಡಿ
ಒಸೆದು ಕಾರುಣ್ಯದಿಂ ಪ್ರತಿಮೆಯಂ ನೆರೆ ನೋಡಿ
ಹಿಡಿಯೆಲವೊ ಮೈಲಾರ ತಂಬುಲವನೆನುತಲ್ಲಿ
ಕೊಡಿ ಎನುತೆ ನಡುಗಿ ಮೈಯಿಕ್ಕುತಂ ಬಿಳ್ದಲ್ಲಿ
ಕೈಯೊಡ್ಡಿ ತಂಬುಲವ ಕೊಂಡು ಕಿರಿದಂ ಮೆಲಿದು
ಮೈಯೊಳಗೆ ಪೂಸಿಕೊಂಡಾನಂದದಿಂ ನಲಿದು

ನಿಂದಿರಲು ಬಂದವರು ಹೆದರಿ ಬೆಬ್ಬಳಿಯೋಗಿ
ಮುಂದುಗೆಟ್ಟರಿವುಗೆಟ್ಟತಿಭಯಾನ[ತ]ರಾಗಿ
ಎಡಹುತಂ ತಾಗುತಂ ನಡೆತಂದು ಪರಿತಂದು
ಕಡು ಭೀತಿಯಿಂ ಪುರದ ಜನಕೆ ಹೇಳುತ್ತಂದು
ಏನೆಂದು ಪೇಳ್ವೆನಿದನೀ ಧರೆಗೆ ಪೊಸತಾಯ್ತು
ಏನೆಂದು ನುಡಿದಪೆನು ಕಂಗೆ ಕೌತುಕವಾಯ್ತು
ನಮ್ಮ ಮೈಲಾರದೇವಂಗೀಗಳಿಂತೊರ್ವ
ತಮ್ಮಡಿ ಬರುತ್ತಿರ್ದು ಕುಳ್ಳಿರ್ದನತಿಗರ್ವ
ದಿಂದ ತನ್ನಯ ಬಾಯ ತಂಬುಲವನಿಕ್ಕಿದಂ
ಕುಂದಿತ್ತು ಮೈಳುಗೆಯ ಸಾಮರ್ಥ್ಯಸಂಪದಂ
ಮೈಲಾರನೆಲ್ಲರೆಂಜಿಲ ತಿಂಬ ತೆರನಾಯ್ತು
ಮೈಲಾರನೊಳಗದು ಸಣಂಬೆಂಬುದಿಂದಾಯ್ತು
ಇನ್ನೇಕೆ ಮೈಳುಗೆಯನೊಪ್ಪಿ ಸಲೆ ಪೂಜಿಪುದು
ಇನ್ನೇಕೆ ಹಾಳಾದ ಮಾಳಚಿಯ ರಂಜಿಪುದು

ಎನೆ ಕೇಳ್ದು ಹೆಂಬೇರ ಜನವೆಲ್ಲ ನಡೆತಂದು
ತನತನಗೆ ಚೋದ್ಯಮಂ ನೋಡಲೆಂದೈತಂದು
ಅರರೆ ಶಂಕರದಾಸಿಮಯ್ಯನೊಲಿದೊಲವಿಂದೆ
ಇರದೆ ಪೋಗಲುವೇಳ್ಕುವೆಂದಾಗ ಮನದಂದೆ
ಅಲ್ಲಿಂದೆ ಪೋಗಲೆಂದಾಗಲುದ್ಯೋಗಿಸುತೆ
ಮೆಲ್ಲನೇಳುತ್ತೆ ಹರನಂ ನೆನೆದು ರಾಗಿಸುತೆ
ಕೊಡೆವಿಡಿದು ಬಾರೆಂದು ಕರುಣದಿಂ ಬೆಸಸುತಿರೆ
ನಡೆತರುತೆ ವಕ್ರಪಾದಂಗೆ ಬೆಸಸುತ್ತಮಿರೆ
ತನಗೆ ಬೆಸಸಿದನೆಂದು ಮೈಲಾರನೊಲಿದೆಳ್ದು
ಮನದೊಳಗೆ ಬದುಕಿದೆನೆನುತ್ತೆ ಸುಖಮಂ ತಾಳ್ದು
ನಡೆದು ಶಂಕರದಾಸಿಯ್ಯಂಗಳೊಡನೊಡನೆ
ಕಡು ಭಕ್ತ ಮೈಲಾರ ಕೊಡೆವಿಡಿದು ಬರಲೊಡನೆ
ಲೋಕವರ್ಚಿಸುವ ಮೈಳುಗೆ ಕೊಡೆವಿಡಿದು ನಡೆಯೆ
ಆಕಸ್ಮಿಕಂ ತಾನೆನುತ್ತೆಲ್ಲರುಂ ನುಡಿಯೆ
ಆ ಪೋದನಾ ಪೋದನಕಟಕಟ ಮೈಲಾರ
ಆ ಪಿಡಿದನಾ ಕೊಡೆಯನಯ್ಯಯ್ಯ ಮೈಲಾರ
ಎಂದಲ್ಲಿ ಜನವೆಲ್ಲ ಬಾಯಳಿದು ಬರುತಮಿರೆ
ನೊಂದು ಮೈಗುಂದಿ ಮಿಗೆ ಮರುಗಿ ಮೊರೆಯಿಡುತಮಿರೆ

ಪರಸಮಯಿಗಳ್ಳುಸಿಯೆ ಪರದೈವವಲ್ಲಾಡೆ
ನೆರೆದ ಜನವೆಲ್ಲವದುಭುತದೊಳಂ ಮುಳುಗಾಡೆ
ನಡೆತಂದನಪ್ರತಿಮಲ್ಲಿ ಕಿರಿದಂತರಂ
ಕೊಡೆಯ ನೆಳಲೊಳಗೆ ಮೃಡಮೂರ್ತಿ ಬರುತಂ ಕರಂ
ಮೈಲಾರನಂ ಬಿಡುವುದೆಮಗೆ ಶಶಿಶೇಖರಾ
ಮೈಲಾರನಂ ಕೊಡುವುದೆಮಗೆ ಕರುಣಾಕರಾ
ಎಂಬ ಕಿಂಕುರ್ವಾಣದವರಂ ಮನಂಗೊಂಡು
ಬೆಂಬಳಿಯಲ್ಯೆತಪ್ಪ ಜನದ ಬರವಂ ಕಂಡು
ತಿರುಗಿ ಮೈಲಾರನಂ ನೋಡಿ ನೀನೇಂ ಬಂದೆ
ಪುರಜನಂ ಮರುಗುತಿರಲೇಕೆ ಮೈಳುಗ ಬಂದೆ
ಕೊಡು ಕೊಡೆಯನಾ ವಕ್ರಪಾದಂಗೆನುತ್ತಮಿರೆ
ಬಿಡಲಾರದಲ್ಲಿ ಮೈಳುಗೆ ನುಡಿದನೊಪ್ಪುತಿರೆ
ದೇವ ಈ ಕೊಡೆಯೆನಗೆ ತೊಡವೆನಗೆ ಶಂಕರಾ
ದೇವ ಈ ಕೊಡೆಯ ನಾಂ ಕೊಡೆ ಬಿಡೆಂ ಶಶಿಧರಾ
ಕೊಡೆವಿಡಿದು ಪೊಡವಿಯೊಳು ರಂಜಿಸುವೆನೆಲೆ ದೇವ
ಕೊಡೆಯಿರಲು ಭೂತಳಂ ಬೆಸಕೆಯ್ವುದೆಲೆ ದೇವ
ಕಡು ಕರುಣದಿಂ ನೋಡಿ ಕೊಡೆವಿಡಿದು ನಿಲ್ಲೆಂದು
ಪೊಡವಿಗೀ ಕೊಡೆಯಿಂದೆ ಪೆಸರಕ್ಕು ನಿನಗೆಂದು
ಕೊಡೆಯ ಮೈಲಾರನಾಗಿಯೆ ನಿಂದನಂತಲ್ಲಿ
ನಡೆತಂದ ಜನಮೆಲ್ಲ ಕೌತುಕಂಬಡಲಲ್ಲಿ
ಇಂತು ಮೈಲಾರನಂ ಕೊಡೆಸಹಿತ ನಿಲಿಸುತಂ
ಅಂತಕಾಂತಕನ ಸುತನತಿ ಮುದದೊಳೊಪ್ಪುತಂ

ತಿರುಗಿ ಕಿರಿದಂತರಂ ನಡೆತರುತ್ತಿಪ್ಪಲ್ಲಿ
ಉರವಣಿಸಿ ಭೈರವನು ಸಂಭ್ರಮದೊಳಿರಲಲ್ಲಿ
ಹಿಡಿದ ಡಮರುಗದ ಕಡುವೊಯ್ಲ ಸಂಭ್ರಮಗಳಿಂ
ನಡೆದು ತೂಳಂ ಬಂದು ತಿರುಗುತಿರ್ಪರ್ಗಳಿಂ
ತಲೆಗೆದರಿ ಅಲಗಿನಿಂದಿರಿದುಕೊಳುರ್ಪರಿಂ
ನೆಲಕೆ ನಿಂದಿರ್ದು ಮಾಮಸಕದಿಂ ಕುಣಿವರಿಂ
ಎಸೆದಿರ್ಪ ಭೈರವನ ನೆರವಿಯಂ ನೆರೆ ಕಂಡು
ಅಸದಳದ ಶಿವಬಾರವಲ್ಲಿಪ್ಪುದಂ ಕಂಡು
ಶಿವಬಾರವೇಕೆ ತ್ರಿಶೂಲ ತಾ ನಿಮಗೇಕೆ
ಶಿವನ ಭಕ್ತರ್ಗಲ್ಲದನ್ಯರ್ಗೆ ತಾನೇಕೆ

ಎಂಬ ನುಡಿಯಿಂ ಮುನ್ನ ಜನದ ಎದೆ ಝಲ್ಲೆನಲು
ಇಂಬರಿದು ಭೈರವಂ ಪರಿತಂದು ಭೋಂಕೆನಲು
ಶಿವಬಾರಮಂ ಪೊತ್ತು ಪದತಳಕ್ಕೆರಗುತಿರೆ
ಶಿವಮೂರ್ತಿ ನೀನೆ ಕರುಣಿಪುದೆನಗೆನುತ್ತಮಿರೆ
ಕರುಣದಿಂ ಭೈರವಂಗಿತ್ತು ಶಿವಬಾರಮಂ
ಧರೆ ಪೊಗಳುತಿರೆ ಕೊಟ್ಟ ಕಿಂಕರಾಕಾರಮಂ

ತಿರುಗಿದಂ ನವಿಲೆಯತ್ತಲು ಶಂಕರಧ್ಯಾನಿ
ಬರುತಿರ್ದನತುಬಳನಮ್ಮಮ್ಮ ಕಡು ಮಾನಿ
ಶಿವನಲ್ಲಿ ನೊಸಲ ಕಣ್ಣಂ ಪಡೆದ ಸಂಪದಂ
ತವನಿಧಿಯನೊಳಕೊಂಡು ಕೊಟ್ಟ ಮಹಿಮಾಸ್ಪದಂ
ಉಗ್ರನರಸಿಂಹನಂ ಭಂಜಿಸಿದ ಭೀಕರಂ
ಉಗ್ರಲೋಚನದ ಭಾಳಸ್ಥಳ ಭಯಂಕರಂ
ಹೆಂಬೇರ [ಮೈಲುಗನ] ಕೊಡೆವಿಡಿಸಿದುನ್ನತಂ
ಬೆಂಬಿದ್ದ ಭೈರವನನುದ್ಧರಿಸಿದೂರ್ಜಿತಂ
ಪರದೈವ ಸಂತಾನ ಘನಪವನವಿಸ್ತರಂ
ಪರಸಮಯ ತಿಮಿರಕುಲಕಮನೀಯ ಭಾಸ್ಕರಂ
ಅರರೆ ಷಡುದರುಶನದ ಗರ್ವ ಸರ್ವಸ್ವಹಂ
ನರರ ದುರಿತೌಘಕಾನನ ದಾವದರ್ಪಹಂ
ಆಹ ನಂದಿಯ ಮೊಗವಡದ ಮಹಿಮನೈತರಲು
ಸಾಹಸಾಭರಣನೊಲಿದೂರ ಹತ್ತಿರೆ ಬರಲು
ಕಂಡಿದಿರುಗೊಂಡರಾ ನವಿಲೆಯ ಮಹಾಗಣಂ
ಚಂಡಕರ ದಂಡಧರ ಹರನ ನಚ್ಚಿನ ಗಣಂ
ಸಿಡಿಲನ್ನಿದಿರ್ಗೊಳುವ ಪೂರ್ವಾದ್ರಿಯಂದದಿಂ
ಕಡುಗಾಯ್ವ ಬಿಸುಗಣ್ಣನಿದಿರ್ಗೊಳುವ ನೊಸಲಂತೆ
ದಿನಕರನನಿದಿರ್ಗೊಳುವ ಪೂರ್ವಾದ್ರಿಯಂದದಿಂ
ಅನುಪಮನನಿದಿರ್ಗೊಳುವರೆಲ್ಲರಾನಂದಮಂ
ಇದಿರುಗೊಳೆ ಬಂದು ಶಂಕರದೇವರಂ ಕಂಡು
ಸದಮಳನನೀಶ್ವರನನಪ್ರತಿಮನಂ ಕಂಡು
ನಳನಳಿಪ ಕೆಂಜೆಡೆಯ ಕಮನೀಯನಂ ಕಂಡು
ತೊಳತೊಳಪ ಸುಲಿಪಲ್ಲ ಸತ್ಯಮಯನಂ ಕಂಡು
ಸುರನದಿಯ ಶಶಿಕಲೆಯ ಸುಖನಿಳಯನಂ ಕಂಡು
ಉರಗಕುಂಡಲದ ಮಂಡಿತ ಕರ್ಣನಂ ಕಂಡು

ಉಲಿವ ಶಿರಮಾಲೆ ಪುಲಿದೊವಲಭವನಂ ಕಂಡು
ಬಲುಹೆಂಬ ಬೊಮ್ಮತಲೆಯಂದಾಳ್ದನಂ ಕಂಡು
ಕಲಿ ದುಃಕೃತಾಶೇಷ ಘನ ಪವನನಂ ಕಂಡು
ಜಲಶಯನ ನಯನ ಪೂಜಿತ ಪಾದನಂ ಕಂಡು
ಭೀಮನಂ ಭರ್ಗನಂ ಭಾಳಾಕ್ಷನಂ ಕಂಡು
ಸೋಮನಂ ಕಾಮಹರನಂ ಪ್ರೇಮಿಯಂ ಕಂಡು
ಪರಮಗುರುವಂ ಶರಣಕಲ್ಪತರುವಂ ಕಂಡು
ವರಭಾನುವಂ ಭಕ್ತಸುರಧೇನುವಂ ಕಂಡು
ಶರಣ ಸಂತುಷ್ಟನಂ ಪರಿತುಷ್ಟನಂ ಕಂಡು
ಪುರಮಥನನಂ ಪುರಾತನನುಮಂ ಸಲೆ ಕಂಡು
ಮೃಡನಂ ಮಹಾಮಹಿಮನಂ ಶಂಭುವಂ ಕಂಡು
ಜಡೆಯ ಶಂಕರದೇವರಂ ಹರುಷದಿಂ ಕಂಡು
ಬಿಗಿದಪ್ಪಿ ತೆಗೆದಪ್ಪಿ ಕಟ್ಟಳ್ಕರಿಂದಪ್ಪಿ
ಅಗಿವತಿ ಸ್ನೇಹರಸದಿಂದಗಲದಂತಪ್ಪಿ
ಮುಂಡಾಡಿ ಮುಂಡಾಡಿ ತರ್ಕೈಸಿ ಕುಣಿದಾಡಿ
ಕೊಂಡಾಡಿ ಕೊಂಡಾಡಿ ಭಕ್ತಿಯಿಂ ಮಣಿದಾಡಿ
ಹೋದ ಬಂದಾದ ವೃತ್ತಾಂತಮಂ ಬಿನ್ನೈಸಿ
ಸಾದರಂ ಮಿಗೆ ಲಲ್ಲೆಗರೆದು ನೆರೆ ಬೋಳೈಸಿ
ಗುಂಜಾದಿ ನವ ವಿಷಕ್ರಿಯೆಗಳಂ ಮೇಳೈಸಿ
ರಂಜಿಸಲು ಶಂಕರಂಗಿತ್ತಿತ್ತು ಹಾರೈಸಿ
ಸತ್ಯಪ್ರಸಾದಮಂ ಮನವಾರೆ ಕೈಕೊಂಡು
ನಿತ್ಯನಾನಂದದಿಂ ಶಂಭುವಂ ಬೀಳ್ಕೊಂಡು
ನಡೆತಂದು ನಿಜನಿಳಯಮಂ ಪೊಕ್ಕು ರಾಗದಿಂ
ಜಡೆಯ ಶಂಕರನ ಚರಣಧ್ಯಾನ ಯೋಗದಿಂ

ಇರುತವಿರಲಂದಾಗ ವಕ್ರಪಾದಂ ಪೋಗಿ
ಪುರದೊಳಗೆ ಧಾನ್ಯಕ್ಕೆ ಪೊಗುತಮಿರೆ ಪಿರಿದಾಗಿ
ತಂದ ಧಾನ್ಯಂ ಪೆರ್ಚ್ಚಿ ರಾಶಿಯಾಗಿರೆ ಕಂಡು
ನಿಂದು ಶಂಕರದಾಸಿಮಯ್ಯಂ ಮನಂಗೊಂಡು
ಗಣಪರ್ವವಂ ಮಾಡಲೆಂದು ಮನದೊಳು ಬಗೆದು
ತ್ರಿಣಯನಂ ವಕ್ರಪಾದನನಳ್ಕರಿಂ ಕರೆದು
ಸುರಿದಿರ್ದ ಧ್ಯಾನಮಂ ಕೊಟ್ಟಣವನಿಕ್ಕಿಸೆನೆ
ಇರದೆ ಶಂಕರಪುರದ ಮನೆಗಳೊಳು ಸುರಿವುದೆನೆ

ಕರಮೊಳ್ಳಿತೆಂದಲ್ಲಿ ವಕ್ರಪಾದಂ ಬಂದು
ಪುರದೊಳೊಂದೊಕ್ಕಲಮನೆಗೆ ಬತ್ತಮಂ ತಂದು
ಸುರಿಯಲ್ಕಿದೇನೆನಲು ಕೊಟ್ಟಣವ ಮಿದಿವುದೆನೆ
ಅರಿದಿದಂ ಎಲೆ ಮಾರಿಕವ್ವೆ ತಾ ಮಿದಿವಳೆನೆ

ಕೇಳ್ದಲ್ಲಿ ವಕ್ರಪಾದಂ ತಿರುಗಿ ಪರಿತಂದು
ಆಳ್ದ ಅವಧಾರೆಂದು ಮೈಯಿಕ್ಕುತಂ ನಿಂದು
ಒಂದು ಮನೆಯೊಳಗೆ ಬತ್ತವನೆಯ್ದೆ ಸುರಿವಲ್ಲಿ
ಎಂದಳೊಕ್ಕಲಿತಿಯೊಬ್ಬಳು ನೊಂದು ತಾನಲ್ಲಿ
ಮಿದಿಯಲಾರೆಂ ಮಾರಿಕವ್ವೆ ಮಿದಿಯಲ್ಕೆಂದು
ಒದರಿ ನುಡಿದಳು ದೇವ ಬತ್ತವಂ ಕಂಡಿಂದು

ಎಂದಡಾಹಾ ಕೇಳ ಬುದ್ಧಿಗೊಟ್ಟಳು ಮಗನೆ
ತಂದು ಧಾನ್ಯಮನೆಲ್ಲಮಂ ಬೇಗದಿಂ ಮಗನೆ
ಊರ ಹೊರಗಣ ಮಾರಿ ಮಸಣಿಗಳ ಮಾಳಿಗೆಗೆ
ಆರೈದು ಧಾನ್ಯಮಂ ರಾಸಿ ಮಾಡುವುದು ಮಿಗೆ
ಒಳ್ಳಿತಾದುದು ವಕ್ರಪಾದ ಹೋಗೆಂದೆನಲು
ಒಳ್ಳಿತನೆ ಧಾನ್ಯಮಂ ರಾಸಿ ಮಾಡೆಂದೆನಲು
ನಡೆದುದೆಲೆ ಹೆಡಿಗೆಯಿಂ ಭಂಡಿಯಿಂದಂ ನೋಡ
ಎಡೆಬಿಡದೆ ಪುರಜನಂ ಹಾದಿಗೊಂಡುದು ನೋಡ
ಮಾರಿಮಸಣಿಗಳ ಮಾಳಿಗೆಯ ಮುಂದಿರೆ ಕಂಡು
ಧಾರುಣಿಗೆ ರಂಜಿಸುವ ಬೆಟ್ಟದಂತಿರೆ ಕಂಡು
ನಡೆತಂದು ಮಾರಿಮಸಣಿಯರೇಳ್ದು ಭರದಿಂದೆ
ಕಡು ಭೀತಿಯೆಡೆಗೊಂಡು ಬಂದು ಭರವಶದಿಂದೆ
ಅಕ್ಕಿಯಾಗದಡೆ ಹೊಡೆದುರುಪಿ ಕಳೆವನು ನಾಳೆ
ಮುಕ್ಕಣ್ಣನವತಾರವರಿದರಿದು ನೀಂ ಕೇಳೆ
ನರಸಿಂಹನಂ ನೊಸಲಕಣ್ಣಿಂದೆ ಸೀಳಿದಂ
ಮರುಳೆ ಶಂಕರದಾಸ ಧರೆಗೆಲ್ಲ ಬಲ್ಲಿದಂ

ಎಂದಿಬ್ಬರುಂ ಮರುಳ ತಂಡಂಗಳಂ ಕರೆದು
ಬಂದು ಪುರದೊನಕೆ ಮೊರಗಳನೆಲ್ಲವಂ ತಂದು
ಮಾರಿ ಮಸಣಿಗಳೊನಕೆವಿಡಿದು ಬೂತಂ ಸಹಿತ
ಮಾರಾರಿಯಣುಗನಂ ಪಾಡುತಕ್ಕರು ಸಹಿತೆ

ಮಿದಿದರಾ ರಾತ್ರಿಯೊಳು ಧರೆ ಪೊಳಗುವಂದದಿಂ
ಮಿದಿದರೆಲ್ಲಾ ಭೂತಮುಂ ಕೂಡಿ ಚಂದದಿಂ
ಅಕ್ಕಿಯಂ ನುಚ್ಚು ತೌಡಂ ಕೇರುತಂ ಬೇರೆ
ಲೆಕ್ಕದಿಂ ರಾಸಿ ಮಾಡುತ್ತೆ ನಲವಿಂ ಬೇರೆ
ಇರಿಸೆ ಶಂಕರದಾಸಿಮಯ್ಯನತ್ತಲು ನೋಡಿ
ತರಣಿಯುದಯಿಸೆ ಶರಣಪರ್ವವಾಗಲು ಬೇಡಿ
ನೊಸಲಕಣ್ಣರಸನಾನಂದದಿಂ ಬರುತಮಿರೆ
ಅಸಮಪ್ರತಾಪನಿಧಿ ಕರುಣದಿಂ ಬರುತಮಿರೆ
ಮುಂದೊಸೆದು ಮಾರಿ ಮಸಣಿಗಳಿರ್ದರಂತಲ್ಲಿ
ಒಂದೊಂದು ಮೊರನಿಂದೆ ಕೇರುತಂತವರಲ್ಲಿ
ನರೆ ಮಂಡೆ ಬಿಚ್ಚೋಲೆ ನಸುಮಾಸಿದುಡಿಗೆಯಿಂ
ತೆರೆಗೊಂಡ ಮೈಯ ನುಣ್ಣರಿಸಿನದ ಗಾಡಿಯಿಂ
ಮೊಗದೊಳಂ ದಾಡೆಯೊಳು ಪತ್ತಿರ್ದ ತೌಡಿನಿಂ
ಸೊಗಯಿಸಿರೆ ತೊತ್ತಿರುಗಳಂತೆ ಮಿಗೆ ಚೆಲ್ವಿನಿಂ
ಇರ್ದುದು ಶಂಕರದಾಸಿಮಯ್ಯನಂ ನಡೆನೋಡಿ
ಸಾರ್ದು ಭಯಭಕ್ತಿಯಿಂ ಸೈಗೆಡೆದು ಕೊಂಡಾಡಿ
ನಿಂದಿರ್ದು ಹೆರಸಾರಿ ಕೈಮುಗಿದು ಪೊಡಮಟ್ಟು
ಇಂದುಧರ ಬೆಸನೆಲ್ಲವಾದುದಂ ಮುಂದಿಟ್ಟು
ನೋಡು ದೇವಾ ಅಕ್ಕಿಯಿವು ನುಚ್ಚು ತೌಡೆಂದು
ಕೂಡೆ ತೋರುತ್ತಮಿರೆ ಲೇಸು ಮಾಡಿದಿರೆಂದು
ಕರುಣಿಸುತವಕ್ಕಿಯಂ ಶಿವನಿಳಯದೊಳಗಿರಿಸಿ
ಬರೆ ನುಚ್ಚನಾ ಮಾರೆ ಮಸಣಿಯರಿಗಪ್ಪಯಿಸಿ

ಒಂದು ಗಣಪರ್ವವನಗುರ್ವಿಂದೆ ಮಾಡುತಂ
ನಿಂದು ಶರಣಾವಳಿಗೆ ತೃಪ್ತಿಯಂ ಮಾಡುತಂ
ಭಕ್ತಿಯಂ ಮಾಡಿ ಮೈವೆಚ್ಚುತಂ ಹೆಚ್ಚುತಂ
ಭಕ್ತರಂ ನೋಡಿ ನೆರೆ ಮಚ್ಚುತಂ ನಚ್ಚುತಂ
ತಾರಕಾಳಿಯ ನಡುವೆ ಪೂರ್ಣೇಂದುವಿಪ್ಪಂತೆ
ಚಾರುತರ ಗಿರಿಗಳೊಳು ಮೇರು ಗಿರಿಯಿಪ್ಪಂತೆ
ಸುರುಚಿರ ನವಗ್ರಹದ ನಡುವೆ ರವಿಯಿಪ್ಪಂತೆ
ವರ ಭೂರುಹಂಗೊಳು ಕಲ್ಪಕುಜವಿಪ್ಪಂತೆ
ನವರತ್ನದೊಳಗೆ ಚಿಂತಾರತ್ನವಿಪ್ಪಂತೆ
ನವಧೇನುಗಳ ನಡುವೆ ಸುರಧೇನುವಿಪ್ಪಂತೆ

ನಡುವೆ ಶಂಕರದಾಸಿಮಯ್ಯಂಗಳೊಪ್ಪುತಿರೆ
ಮೃಡಮೂರ್ತಿಯಾಗಿ ಸಲೆ ನೆಲೆ ಭುವನಕೊಪ್ಪುತಿರೆ

ಇಂತು ಶರಣರ ನಡುವೆ ಅನವರತವೊಪ್ಪುತಂ
ಕಂತು ಮದಮರ್ದನನ ಭಾವಮುಮನಪ್ಪುತಂ
ಇರಲಲ್ಲಿ ಶಿವದಾಸಿಗಳಿಗೆ ಗರ್ಭಂ ಮೂಡೆ
ಪರಮಶೈವಜ್ಞಾನದುರುಳಿ ಬಲಿಯಿತು ಕೂಡೆ
ಹೊರೆಗ ಲಾವಣ್ಯರಸವಂಗದೊಳಗೋಲಾಡೆ
ಮೆರೆವ ಗರ್ಭದ ಪಕ್ವಸೂಚನೆ ಕರಂ ಮೂಡೆ
ಹೊಳೆಯೆ ಮುಖಮಂಡಲಂ ಬೆಳೆಯೆ ನವಕುಂತಳಂ
ಎಳಲುತಿರೆ ಮುಡಿ ಕರಂ ಕಡು ಮುಗುದೆಯಪ್ಪಳಂ
ಕತ್ತಲಿಸೆ ಮೊಲೆಮೊಗಂ ಬಿತ್ತರಿಸೆ ನವಬಾಸೆ
ಒತ್ತರಿಸೆ ಬಟ್ಟನಡು ತ್ರಿವಳಿ ತಾಂ ಕಡು ಸೂಸೆ
ಹೊಕ್ಕುಳೆದ್ದಗ್ಗಲಿಸೆ ಹೆಜ್ಜೆ ಹಂಸೆಗೆ ಸೋಲೆ
ಮಿಕ್ಕು ಲಾವಣ್ಯರಸವಂಗಲತೆಯಂಬೋಲೆ

ನವಮಾಸಮಾದುದಾ ಶಿವದಾಸಿಗಳಿಗಲ್ಲಿ
ಅವಯವಂಗಳು ಸಡಿಲಿದುತ್ಸಹವನುಗುವಲ್ಲಿ
ಪುಟ್ಟಿದಂ ಕಂದಂ ಶಿವಜ್ಞಾನಕಂದಮೆನೆ
ಮೆಟ್ಟಿದಂ ಮಾಯೆಯಂ ತನಗೆ ನಿತ್ಯತ್ವಮೆನೆ
ಆಗಳಾ ಕಂದನಂ ಕಂಡು ಮಿಗೆ ನಸುನಗುತೆ
ರಾಗದಿಂ ಜಡೆಯ ಶಂಕರದೇವರೊಳು ಪೊಗುತೆ
ಕಂದನಂ ನೆರೆ ನೋಡಿ ಜಾತಕರ್ಮಂ ಮಾಡಿ
ಸಂದ ಸದ್ಯೋಜಾತನೆಂಬ ಹೆಸರಂ ಕೂಡಿ
ಜಡೆಯ ಶಂಕರದೇವರ ಪ್ರಸಾದವನಿಕ್ಕಿ
ಒಡನೆ ಶಿವಭಕ್ತಿಯಂ ಬಾಯಿವೆಣ್ಣೆಯನಿಕ್ಕಿ
ಸಲಹುತಿರೆ ನೆರೆ ನೆರೆದನೇಳು ಸಂವತ್ಸರಂ
ನೆಲಸಲ್ಕೆ ಗರ್ಭಾಷ್ಟಕಂ ದ್ವಿಜಾಗಮ ಕರಂ
ಕಂಡು ಶಂಕರದಾಸಿಮಯ್ಯನತಿಮಹಿಮೆಯಿಂ
ಖಂಡೇಂದು ಮೌಳಿಯಲ್ಲಿಗೆ ಬಂದನೊಲ್ಮೆಯಿಂ
ಸಕಲ ಮಾಹೇಶ್ವರಪ್ರಕರಮಂ ಕರೆಯಿಸುತೆ
ಅಕಳಂಕಚಿತ್ತನಾನಂದಮಂ ಧರಿಯಿಸುತೆ
ಜಡೆಯ ಶಂಕರನ ಸನ್ನಿಧಿಯಲ್ಲಿ ಹರುಷದಿಂ

ಮೃಡನ ಕಾರುಣ್ಯಮಂ ಪಡೆದುವನುರಾಗದಿಂ
ರಂಗಮಂಟಪವೆ ಉಪನಯನ ಮಂಟಪವಾಗೆ
ಜಂಗಮ ಪ್ರಕರಂಗಳೇ ದ್ವಿಜರಿಗೆಣೆಯಾಗೆ
ಉಪನಯನವಾಯ್ತು ಸದ್ಯೋಜಾತದೇವಂಗೆ
ಉಪದೇಶವಾಯ್ತು ತಂದೆಯ ಕೈಯಲಾತಂಗೆ

ಅಂತಾಗ ಪುತ್ರನಂ ಶಿವಭಕ್ತನಂ ಮಾಡಿ
ಸಂತತಂ ಗಣತತಿಯನಾನಂದದಿಂ ನೋಡಿ
ಮಾರಿ ಮಸಣಿಗಳಿಂದೆ ಕೊಟ್ಟಣಂಗುಟ್ಟಿಸುತೆ
ಮಾರಾರಿ ಮೆಚ್ಚೆ ಗಣಪರ್ವವಂ ಮಾಡುತ್ತೆ
ಬಂದ ಶರಣರ್ಗೆ ಪುತ್ರನನಪ್ಪಯಿಸಿಕೊಟ್ಟು
ಇಂದುಶೇಖರನ ಶ್ರೀಪದಕೆ ನಂಬುಗೆಯಿಟ್ಟು
ಜಡೆಯ ಶಂಕರನನನುದಿನವರ್ಚಿಸುವುದೆಂದು
ಅಂದು ಸದ್ಯೋಜಾತದೇವಂಗೆ ಕಲಿಸುತಂ
ಬಂದ ಗಣಸಂಕುಳಕೆ ಬಿನ್ನಪಂ ಮಾಡುತಂ
ನರಲೋಕದೊಳಗಿರವು ಸಾಲ್ಗೆನಗೆ ಕರುಣಿಪುದು
ಹರನೊಳಗೆ ಪುಗುವುದಕನುಜ್ಞೆಯಂ ಬೆಸಸುವುದು

ಎಂದಲ್ಲಿ ಜಂಗಮದನುಜ್ಞೆಯಂ ಕೈಕೊಂಡು
ಬಂದನಾನಂದದಿಂ ಪುಳಕಮಂ ಕೈಕೊಂಡು
ನಡೆತಂದು ಜಡೆಯ ಶಂಕರದೇವರಂ ಕಂಡು
ಮೃಡನೊಳಗೆ ಪುಗುವ ಕಡು ದೃಢಮಂ ಮನಂಗೊಂಡು
ದೇವ ಶಂಕರ ಚಂದ್ರಧರ ಕೃಪಾವಾರ್ಧಿಯೆ
ದೇವ ಗಂಗಾತರಂಗಾವೃತ ಕಪರ್ದಿಯೆ
ದೇವ ಸಂಸಾರವಾರಾಸಿ ವಡಬಾನಲಾ
ದೇವ ಮಾಯಾಬೃಹದರಣ್ಯದಾವಾನಲಾ
ದೇವ ಹರಿಯಜರರಿಯದಾದ್ಯಂತರಹಿತನೆ
ದೇವ ಪೂಜಿಸುವ ಸದ್ಭಕ್ತ ಸಂಪನ್ನನೆ
ದೇವ ನಂಬಿದ ಸತ್ಯ ಶರಣಕರುಣಾಕರಾ
ದೇವ ಎಡೆಗುಡುವುದೆನಗತಿ ಜಡೆಯ ಶಂಕರಾ
ಭಕ್ತರಂ ಗರ್ಭದೊಳಗಿರಿಸಲೆ ಕೃಪಾಕರಾ
ಭಕ್ತರಂ ಕರುಣದಿಂ ರಕ್ಷಿಸು ದಯಾಕರಾ
ಎನುತೆ ಪುಳಕಿಸುತೆ ಕಂಪಿಸುತೆ ನಸುಬೆಮರುತ್ತೆ

ತನಿನೇಹಮುಣ್ಮುತಿರೆ ತೊನೆದು ತಲ್ಲಣಿಸುತ್ತೆ
ತೆಗೆ ಪಂಚವಕ್ತ್ರಮನೆನುತ್ತೆ ಹತ್ತಿರೆ ಸಾರೆ
ಸೊಗಯಿಸುವ ಶಂಕರಂ ತೆರಹುಗುಡೆ ಮನವಾರೆ
ಬೀಜದೊಳಗಂಕುರಂ ಪೊಗುತಿಪ್ಪ ಮಾಳ್ಕೆಯಿಂ
ತೇಜಮಂ ಕಾಂತಿ ಬಗಿದೊಳಪುಗುವ ಮಾಳ್ಕೆಯಿಂ
ಬಿಟ್ಟ ಹಮ್ಮುವ ಜೀವನುಂ ಪರಮನಪ್ಪಂತೆ
ನೆಟ್ಟನಾ ಜ್ಯೋತಿ ಪರಮಜ್ಯೋತಿಯಪ್ಪಂತೆ
ಕೊಡನುದಕವಾ ಮಹಾಜಲದೊಳು ಬೆರಸುವಂತೆ
ಜಡೆಯ ಶಂಕರದೇವರೊಳು ಪೊಕ್ಕನೊಲಿದಂತೆ

ಆಗಳೆರಗಿದವು ಹೂವಿನ ಮಳೆ ಜಗಂ ಹೊಗಳೆ
ರಾಗದಿಂ ದುಂದುಭಿಧ್ವನಿ ಗಗನದೊಳ್ನೆಗಳೆ
ನೆಗೆದುದು ವಿಮಾನವಾಕಾಶದೊಳ್ಬೆಳಗುತಂ
ಬಗೆ ಮಿಗಲು ಕೈಲಾಸದತ್ತತ್ತ ತೊಳಗುತಂ
ಬಂದು ರಜತಾದ್ರಿಯಂ ಪೊಕ್ಕು ಶಿವನಂ ಕಂಡು
ನಿಂದು ಮೈಯಿಕ್ಕಿ ಕಡುನಿಷ್ಠೆಯಂ ಕೈಕೊಂಡು
ಇರ್ದ ಶಂಕರದಾಸಿಮಯ್ಯನಂ ನಡೆನೋಡಿ
ಸಾರ್ದ ಪುಳಕಂಗಳಿಂ ತೆಗೆದಪ್ಪಿ ಕೈಗೂಡಿ
ಕೇಳು ನಂದೀಶ ಇಂತಪ್ಪ ಭೀಕರರುಂಟೆ
ಭಾಳಲೋಚನವನೆಮ್ಮಿಂದೆ ಪಡೆದವರುಂಟೆ
ಹರಿಯಜ ಪ್ರತಿಮೆಗಳನುರುಪಿ ಕಳೆದವರುಂಟೆ
ಧರೆಯೊಳೆನ್ನಾಜ್ಞೆಯಂ ಕೊಂಡು ಕೊನೆದವರುಂಟೆ
ಮಾರಿಯಿಂ ಕೊಟ್ಟಣಂಗುಟ್ಟಸಿದರಿಂತುಂಟೆ
ವೀರ ಮೈಲಾರನಂ ಕೊಡಿವಿಡಿಸಿದವರುಂಟೆ
ಭಾಪು ಶಂಕರದಾಸ ದೇವು ಶಂಕರದಾಸ
ಭಾಪು ಮಝುಭಾಪೆನ್ನ ವೀರ ಶಂಕರದಾಸ

ಎಂದು ಕೊಂಡಾಡುತಂ ಗಣಕುಲಕೆ ತೋರುತಂ
ಇಂದುಮುಖಿ ಪಾರ್ವತಿಗೆ ಬೆಸಸಿ ಕೊಂಡಾಡುತಂ
ಹರುಷದಿಂದಂ ನೋಡಿ ಸಾರೂಪ್ಯ ಪದವಿತ್ತು
ಕರುಣದಿಂದಂ ಕಂಡು ನಿತ್ಯ ತೃಪ್ತಿಯನಿತ್ತು
ಭಾವಜ ಶರೀರವನ ದಾವಮುಖನೊಪ್ಪಿದಂ
ದೇವ ಪರಿವೃತದಕ್ಷಯಜ್ಞ ಹರನೊಪ್ಪಿದಂ

ನಿರುಪಾಧಿಕಾನಂತಕಾಂತಿಯಿಂತೊಪ್ಪಿದಂ
ಪರಮ ಶುಭತರಕಾಂತಿ ವರದನಿಂತೊಪ್ಪಿದಂ
ಬೊಬ್ಬಿಡುವ ಸುರರ ತಲೆಗಳ ಭೀಮನೊಪ್ಪಿದಂ
ಅಬ್ಬರಿಸುವಜಕಪಾಲದ ಶೂಲಿಯೊಪ್ಪಿದಂ
ಅಮೃತಮಥನೋದ್ಭೂತ ಗರಳಧರನೊಪ್ಪಿದಂ
ಅಮರ ಕುಲಮಕುಟಮಣಿಖಚಿತಪದನೊಪ್ಪಿದಂ
ಸುರುಚಿರ ಬ್ರಹ್ಮಾಂಡಭರಿತಜನನೊಪ್ಪಿದಂ
ಗಿರಿಜೆಯಪ್ಪಿನ ಪುಳಕಭರಿತಾಂಗನೊಪ್ಪಿದಂ
ಸುರ ನಿಕರಸೇವಿತ ಪದಾಂಭೋಜನೊಪ್ಪಿದಂ
ಗುರುಮೂರ್ತಿ ಹಂಪೆಯ ವಿರೂಪಾಕ್ಷನೊಪ್ಪಿದಂ ೩೬೦-೫೮೬

ಮುದದಿಂ ಶಂಕರದಾಸಿಮಯ್ಯವಿಭುವಿಂಗಾಶ್ಚರ್ಯದಿಂದಿತ್ತು ಭಾ
ಳದ ಕಣ್ಣಂ ಜಗದೊಳ್ಪ್ರತಾಪ ಶಿವಭಕ್ತಿಜ್ಞಾನವೈರಾಗ್ಯಸಂ
ಪದದಿಂ ಶೌರ್ಯದೊಳಾವಗಂ ಮೆರೆದ ಗೌರೀವಲ್ಲಭಂ ಭಕ್ತಿಸಂ
ಪದಮಂ ಕೂರ್ತೆಮಗೀಗೆ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ॥

❖❖

# ೮. ರೇವಣಸಿದ್ಧೇಶ್ವರನ ರಗಳೆ

## ಸ್ಥಲ ೧

ತ್ರಿಣಯನನಪ್ರತಿಮನ ಕಾ
ರಣಿಕನನೊಲ್ದೆಮ್ಮ ಹಂಪೆಯ ವಿರೂಪಾಕ್ಷಂ
ಗುಣರಹಿತಂ ಮೆರೆದಂ ರೇ
ವಣಸಿದ್ಧನನಂಬುನಿಧಿಪರೀತಾವನಿಯೊಳ್ ॥

ಶ್ರೀ ರಜತಗಿರಿಯ ಸಭೆಯೊಳು ಚಂದ್ರಶೇಖರಂ
ಕಾರುಣ್ಯನಿಧಿ ಹಂಪೆಯರಸನೊಪ್ಪಿರೆ ಕರಂ
ನಂದೀಶ ವೀರಭದ್ರಾದಿ ಗಣತತಿಯೊಪ್ಪೆ
ಸಂದಣಿಸಿ ದಾರುಕಂ ರೇಣುಕಾದಿಗಳೊಪ್ಪೆ
ದೇವ ಗಂಧರ್ವ ಕಿನ್ನರ ಗರುಡಗಣವೆಸೆಯೆ
ಆವಗಂ ಸುರಪತಿ ಸುರಾಸುರ ವಿಸರವೆಸೆಯೆ
ಆ ಸಮಯದೊಳ್ ಶಂಭು ಸಂತಸದೊಳೋಲಾಡಿ
ಭಾಸುರವೆನಿಪ್ಪ ರೇಣುಕನ ಮೊಗಮಂ ನೋಡಿ
ಕರುಣದಿಂ ಬಾಯ ತಂಬುಲವನೀಯಲ್ಕೆಂದು
ಕರೆಯೆ ಭಯಭಕ್ತಿಯಿಂ ದೇವ ಬರ್ದುಕಿದೆನೆಂದು
ಸಡಗರಿಸುತಂ ದಾರುಕನನಲ್ಲಿ ದಾಂಟಿ ಬರೆ
ಮೃಡನೀಕ್ಷಿಸುತ್ತಂ ಪ್ರಸಾದಮುಮನೀವುತಿರೆ
ದಾರುಕಂ ದುಮ್ಮನವನೊಳಕೊಂಡು ತಲೆವಾಗೆ
ಮಾರಾರಿ ಬೆಸಸುತಿರ್ದಂ ಸುರರ್ಬೆರಗಾಗೆ
ದಾರುಕನನಿಂತು ದಾಂಟುವರೆ ರೇಣುಕ ನಿನಗೆ
ಧಾರುಣಿಯೊಳೊಗೆವ ಜಡಜನ್ಮವಾದುದು ನಿನಗೆ

ಎನೆ ರೇಣುಕಂ ಬೆರ್ಚಿ ಕೈಗಳಂ ಮುಗಿವುತಂ
ಮನಸಿಜಹರಂಗೆ ಬಿನ್ನೈಸಿದಂ ನಡುಗುತಂ
ದೇವ ಜಡಯೋನಿಯೊಳ್ಬರಲಾರ್ಪೆನೇ ತಂದೆ
ಆವಗಂ ಸಂಸೃತಿಯೊಳಿರಲಾರ್ಪೆನೇ ತಂದೆ
ಶಂಭುವೇ ಶಂಕರನೆ ಶಶಿಧರನೆ ಕರುಣಿಪುದು
ಜಂಬಮರ್ದನಮಕುಟಲಸಿತಪದ ಕರುಣಿಪುದು
ಎಂದು ಬಿನ್ನಯಿಸಲರಿದೀಶ್ವರಂ ನಸುನಗುತೆ
ಎಂದನಾ ರೇಣುಕಂಗಕ್ಕರಿಂ ಕರುಣಿಸುತೆ
ಎನ್ನ ಪ್ರಸಾದಕ್ಕೆ ತಪ್ಪುದದು ತಪ್ಪಲ್ಲ
ಮನ್ನಿಸದೆ ದಾರುಕನನಿಂತು ದಾಂಟಿದೆ ಪೊಲ್ಲ
ಇದರಿಂದೆ ಸುಖದುಃಖಮಂ ಧರಣಿಯೊಳೆ ಪೊತ್ತು
ಸದಮಳವೆನಿಪ್ಪ ಲಿಂಗದೊಳೆ ಜನನಂಬೆತ್ತು
ಸುಖದುಃಖಮಲ್ಲಿ ಸಾಮರ್ಥ್ಯಕರಮಾಗುತಿರೆ
ಸುಖದೊಳಿದ್ದಿಲ್ಲಿಗೆಯ್ತಪ್ಪುದೆಂದೆನುತಮಿರೆ
ರೇಣುಕಂ ಕೈಮುಗಿದು ಬೆಸಸಿತಂ ಕೈಕೊಂಡು
ವಾಣೀಶಮಸ್ತಕ ಕರಾಬ್ಜನಂ ಬೀಳ್ಕೊಂಡು
ಬಂದು ಧರೆಯೊಳಗೆ ಪುಟ್ಟಿದ ಪರಿಯನರುಪುವೆಂ
ಇಂದುಜೂಟಂ ಪ್ರೇರಿಸಿದ ತೆರದೆ ತಿಳುಪುವೆಂ

ಎಂತೆಂದಡಂಬುಧಿಪರೀತ ವಸುಮತಿಯೊಳಗೆ
ಸಂತತಂ ರಂಜಿಪುದು ಶಿವಭಕ್ತಿ ತೊಳತೊಳಗೆ
ಕೊಲ್ಲಿಪಾಕಿಯೆನಿಪ್ಪ ಪೆಸರೆಸೆವ ಶಿವಪುರಂ
ಬಳ್ಳಿವರಿದೀಶ್ವರನ ಭಕ್ತಿ ಪರ್ವಿದ ಪುರಂ
ಅಲ್ಲಿ ಬಂದೊಲಿದು ನೆಲಸಿರ್ಪನಹಿಭೂಷಣಂ
ಎಲ್ಲಾ ಮಹೇಶ್ವರರ ಭವಬಂಧ ಶೋಷಣಂ
ಅಮೃತಮಯನನುಪಮಂ ಸೋಮನಾಥಂ ನೋಡ
ಅಮೃತದೀಧಿತಿ ಕಲಾಕಲಿತ ಚೂಡಂ ನೋಡ

ಆ ಸೋಮನಾಥನ ಶಿವಾಲಯದ ನಡುವೊಮ್ಮೆ
ಭಾಸುರದ ಶಿವಭಕ್ತಕೋಟಿ ಕುಳ್ಳಿರೆ ಪೆರ್ಮೆ
ವಡೆದ ಕವಿ ಗಮಕಿ ವಾದಿಗಳ ತಂಡಂ ಮೆರೆಯೆ
ನಡುವೆ ಸದಮಳ ಶಾಂತ[ರಾ] ಮೊತ್ತದಿಂದೆಸೆಯೆ
ನೆರೆ ಮುಗ್ಧೆಯರ ವಿದಗ್ಧೆಯರ ತಿಂಥಿಣಿಯೊಪ್ಪೆ

ಮೆರೆವ ಬಹುವಿಧ ಕಳಾವಿದರ ಪಙ್ತಿಗಳೊಪ್ಪೆ
ಓಲಗಿಸುತಂ ನಲಿದು ಕುಳ್ಳಿರ್ದ ಸಮಯದೊಳು
ಲೀಲೆ ಕೈಮಿಗೆ ರಂಗಮಂಟಪದ ಮಧ್ಯದೊಳು
ಹಿಡಿದ ಜವನಿಕೆ ಸರಿಯೆ ಸಕಳವಾದ್ಯಂ ನೆಗಳೆ
ನಡುವೆ ನೃತ್ಯದ ಲಲನೆಯಾಡುತಿರ್ದಳ್ಪೊಗಳೆ
ಆಗಳೊಗೆದುದು ಮಹಾಲಿಂಗದಿಂ ಘನರವಂ
ರಾಗದಿಂದಿರ್ದ ಸಭೆ ನಡುಗುತ್ತಮಿರೆ ಕರಂ
ನೆಲ ಮೊಳಗಿದಂದದಿಂ ಮೇಘಗರ್ಜನೆಯಂತೆ
ಸಲೆ ಲಿಂಗದೊಳಗಣಿಂ ಪೊಣ್ಮುತ್ತಲಿರಲಿಂತೆ
ಪುಟ್ಟುತಿರ್ದಂ ಸಿದ್ಧ ರೇಣುಕಯ್ಯಂ ನೋಡ
ನಿಷ್ಠೆ ಮಿಗೆ ಸಿದ್ಧರೇವಣನಾಮದಿಂ ನೋಡ

ಅದೆ ಕಂಥೆಯದೆ ವದನವದೆ ವಜ್ರಕುಂಡಲಂ
ಅದೆ ವಕ್ಷವದೆ ಹಸ್ತವದೆ ಹಿಡಿದ ಲಾಕುಳಂ
ಅದೆ ಕೋವಣಂ ನೋಡೆನುತ್ತಮಿರಲುದಿಸಿದಂ
ಸದಮಳವೆನಿಪ್ಪ ಶಿವಲಿಂಗದಿಂ ಪುಟ್ಟಿದಂ
ಲೋಕಮಂ ಪಾವನಂ ಮಾಡುವುದ್ಯೋಗದಿಂ
ಆಕಸ್ಮಿಕಂಗಳಂ ತೋರುವನುರಾಗದಿಂ
ಭಸಿತದಿಂ ನೊಸಲಕಣ್ಣಂ ಮುಸುಂಕಿಟ್ಟಲ್ಲಿ
ಎಸೆವೆರಳ್ಕಂಗಳಿಂ ಬೆಳ ಬೆಳಗುತಂತಲ್ಲಿ
ಜ್ಯೋತಿಯಿಂದಂ ಜ್ಯೋತಿಯೊಗೆದ ತೆರದಂತಾಗೆ
ಓತು ಪುಟ್ಟಿದನಯೋನಿಜನಿಳೆಗೆ ಪೊಸತಾಗೆ
ಕಾರಣಿಕ ಸಿದ್ಧನಂ ನೋಡಲಮ್ಮದೆ ಕರಂ
ಓರಂತೆ ಮೈಯಿಕ್ಕುತಿದುರ್ದದಾ ಪರಿಕರಂ
ಕೈಮುಗಿದು ಜನವೆಲ್ಲ ನಡನಡನೆ ನಡುಗುತಿರೆ
ಆ ಮಹಾಸಿದ್ಧನಿರವಿಂಗೆ ಬೆರಗಾಗುತಿರೆ
ಮಿಗೆ ನೋಡೆ ನೋಡೆ ನಡೆತಂದಂ ನಭಸ್ಥಲಕೆ
ಬಗೆಗೊಂಡು ಬಂದನಾ ದಕ್ಷಿಣದಿಶಾವರಕೆ
ಬಂದಗಸತ್ಯನ ಕೂಡೆ ಶಿವಭಕ್ತಿಗೋಷ್ಠಿಯೊಳು
ನಿಂದು ಪುಳಕಿಸುತೆ ಪೊರಮಟ್ಟು ಕಡು ನಿಷ್ಠೆಯೊಳು
ಸೇತುವಿನ ರಾಮನಾಥನನೊಲ್ಮೆಯಿಂ ಕಂಡು
ಆತುರದೊಳಪ್ಪಿ ಹಾರೈಸಿ ಹರುಷಂಗೊಂಡು
ಆರುವರಿಯದ ತೆರದೆ ನೆರೆ ಕಂಥೆಯಂ ಪೊದೆದು

ಊರೂರ ಪೊರಗೊಳಗೆ ಮರುಳಂದದಿಂ ಸುಳಿದು
ಪಿಣ್ಣಾಕನೊಲ್ಮೆಯಿಂ ಮೆಲುತಿಪ್ಪ ದೂಸರಿಂ
ಪಿಣ್ಣಾಕದೇವನೆಂಬಾ ನಾಮವಳ್ಕರಿಂ
ಚೋಳದೇಶದೊಳೆಲ್ಲ ಸಂದಿರೆ ನಿರಂತರಂ
ಶೂಲಿಯಣುಗಂ ಲೋಕವಂ ನಗುತ್ತಿರೆ ಕರಂ
ಲೋಕಕ್ಕೆ ತಾಂ ಮರುಳು ತನಗೆ ಲೋಕಂ ಮರುಳು
ಲೋಕದೊಳ್ಸುಜನರ್ಗೆ ಶಿವನ ತತ್ವದ ಪುರುಳು
ತಾನಾಗಿ ಸುಳಿವುತಿರ್ದಂ ಸಿದ್ಧರೇವಣಂ
ನಾನಾ ವಿಧದ ಮಹಿಮೆಗಳನರಿವ ಕಾರಣಂ
ತಿಲದ ತೈಲದ ತೆರದೆ ಕಾಷ್ಟದಗ್ನಿಯ ತೆರದೆ
ಜಲದ ಜಲಜದ ತೆರದೆ ಕುಸುಮಗಂಧದ ತೆರದೆ
ಧೈರ್ಯದೊಳ್ಧರೆಯಂತೆ ತಂಪಿನೊಳ್ಶಶಿಯಂತೆ
ಶೌರ್ಯದೊಳ್ ರವಿಯಂತೆ ಉಷ್ಣದೊಳ್ ಶಿಖಿಯಂತೆ
ಭರಿತದೊಳ್ ನಭದಂತೆ ಸೋಂಕಿನೊಳನಿಲನಂತೆ
ಚರಿತದೊಳ್ಭುವನಪಾವನ ದೇವನದಿಯಂತೆ
ಪೊರ್ದಿಯುಂ ಪೊರ್ದನೀ ಜಗದ ಸಂಸಾರಮಂ
ಸಾರ್ದು ಸಾರಂ ನೋಡ ಭವಕುಲದ ಭಾರಮಂ

ಇಂತು ನಿರ್ಲೇಪಚಾರಿತ್ರದಿಂ ಸುಳಿವುತಂ
ಸಂತತಂ ತನ್ನನರಿದವರಘವನಿಳಿಪುತಂ
ದ್ರವಿಡದೇಶದ ಶಿವಪುರಂಗಳಂ ನೋಡುತಂ
ಶಿವಲಿಂಗಸಂತತಿಗಳಂ ಪೂಜೆಗೆಯ್ವುತಂ
ಪೊನ್ನಂಬಲವನೆಯ್ದಿ ನಾಟ್ಯರೂಪಂ ಕಂಡು
ಪನ್ನಗಾಭರಣನಾಟ್ಯಕ್ಕೆ ಹರುಷಂಗೊಂಡು
ನಡೆದು ಕಾಂಚೀಪುರದೊಳೇಕಾಮ್ರನಾಥನಂ
ಕಡುನಿಷ್ಠೆಯಿಂ ಕಂಡು ಪಾರ್ವತೀನಾಥನಂ
ಅಲ್ಲಿ ಶಿವನಿಳಯದೊಳು ಮರುಳಂತೆ ಸುಳಿವುತಂ
ಬಲ್ಲ ಶಿವಭಕ್ತರ್ಗೆ ಶಿವನಂತೆ ಪೊಳೆವುತಂ
ದೇವಲೋಕದ ಕರಿಯ ಮಲ್ಲಿಗೆಯ ಹೂವಿಂದೆ
ಆವಗಂ ನಾಗಲೋಕದ ಕುಸುಮ ಕುಲದಿಂದೆ
ಏಕಾಮ್ರನಾಥನಂ ನಲ್ಮೆಯಿಂ ಪೂಜಿಸುತೆ
ಲೋಕೈಕಬಂಧುವಂ ಪೂಜಿಸಿ ವಿರಾಜಿಸುತೆ

ಆ ಪುರಕೆ ಪಿಣ್ಣಾಕನೆಂಬ ನಾಮಂ ಸಂದು
ಪಾಪಹರನಲ್ಲಿ ಕೆಲವುಂ ದಿವಸವಿರಲಂದು

ಅಲ್ಲಿ ವೈಷ್ಣವನೆನಿಸುವೊರ್ವ ಚೋಳಂ ಬಂದು
ಎಲ್ಲ ತೆರದಿಂದೆ ವಿಷ್ಣುಪ್ರತಿಮೆಯಂ ತಂದು
ಇದು ಬಗೆವೊಡೊಮ್ಮೆಯುಂ ಬಾಯ್ದೆರೆದು ನುಡಿವಂತೆ
ಸದಮಳಂ ಹರಿಕಳಾಸಾನ್ನಿಧ್ಯವಪ್ಪಂತೆ
ವಿಷ್ಣುಪ್ರತಿಷ್ಠೆಯಂ ಮಾಡಬಲ್ಲವರ್ಗಳಂ
ವೈಷ್ಣವ ಪ್ರತತಿಯೊಳ್ಪಿರಿಯರಪ್ಪವರ್ಗಳಂ
ಅರಸುತಾ ದೇಶದೊಳ್ಪಡೆಯದೆ ಮೊಗಂಬಾಡಿ
ಅರಕೆಯಂ ಮಾಳ್ಪರಿಲ್ಲದೆ ಚಿತ್ತವಲ್ಲಾಡಿ
ಎಯ್ದೆ ಮಿಕ್ಕನುತಾಪದಿಂದೆ ಚಿತ್ತಂ ಸೆಡೆದು
ಸುಯ್ದು ಸುಮ್ಮಾನವುಡುಗುತ್ತೆ ಚೋಳಂ ನೆನೆದು
ಮೃಡನ ಮರೆವೊಕ್ಕಲ್ಲದೇ ಕಾರ್ಯವಾಗದಿದು
ಮೃಡಭಕ್ತರಿಂದಲ್ಲದಾರೊಳಂ ತೀರದಿದು
ಎಂದು ನಡೆದೇಕಾಮ್ರನಾಥನಲ್ಲಿಗೆ ಬಂದು
ಇಂದುಧರ ಪಾಪಹರ ಪುಣ್ಯವರ ಶರಣೆಂದು
ಪಂಚಾಮೃತಾಭಿಷೇಕಂಗಳನಲಂಕರಿಸಿ
ಪಂಚವದನಂಗೆ ಪೊಸ ಪೂಜೆಗಳನಳವಡಿಸಿ
ದೇವಾನ್ನ ದಿವ್ಯಾನ್ನದಾರೋಗಣೆಯನಿತ್ತು
ದೇವಂಗೆ ಹೊನ್ನರನ್ನದ ತೊಡಿಗೆಗಳನಿತ್ತು
ಮಕರತೋರಣ ಸುವರ್ಣದ ತೋರಣವನೆತ್ತಿ
ಸುಕರವೆನಿಸುವ ಮೌಕ್ತಿಕದ ತೋರಣವನೆತ್ತಿ
ಶಿವಭಕ್ತ ಸಂಕುಳಕ್ಕಾರಾಧನೆಯನಿತ್ತು
ಶಿವನ ನೆನಹಂ ತನ್ನ ಮನದಮೊನೆಯೊಳೆ ಹೊತ್ತು
ಸರ್ವಜ್ಞನೆನಿಪನಂ ಕರುಣಿಸುವುದೆಲೆ ದೇವ
ಸರ್ವಸಾಮರ್ಥ್ಯವುಳ್ಳಧಿಕನಂ ಕೊಡು ದೇವ

ಎನುತಂ ಶುಚಿರ್ಭೂತನಾಗಿ ಮಿಗೆ ಪಟ್ಟಿದಿರೆ
ಮನದೊಳಗೆ ಸಹಜ ಸಾಮರ್ಥ್ಯನಂ ನೆನೆವುತಿರೆ
ಕನಸಿನೊಳಗೇಕಾಮ್ರನಾಥನೊಲವಿಂ ಬಂದು
ನೆನೆವ ಚೋಳನ ಮನದ ಮೊನೆಯ ಕೊನೆಯೊಳ್ನಿಂದು

ತಿಣ್ಣವಲ್ಲಂ ಕಜ್ಜವಿಂತಿದಕ್ಕಿನಿತೇಕೆ
ಪಿಣ್ಣಾಕದೇವನಿಂದಪ್ಪುದುಮ್ಮಳವೇಕೆ
ಎಂದಲ್ಲಿ ಬೆಸಸಿ ಬಿಜಯಂಗೆಯ್ಯೆ ರಾಗದಿಂ
ಹಿಂದೆ ಅರುಣೋದಯಂದೋರೆ ಕಡುವೇಗದಿಂ
ನಿದ್ರೆಯಿಂದೆಚ್ಚತ್ತು ಚೋಳಂ ಮನದೊಳರಿದು
ರುದ್ರಂಗೆ ಭಯಭಕ್ತಿಯಿಂದೆರಗಿ ಕೈಮುಗಿದು
ತಿರುಗಿ ತನ್ನರಮನೆಯನಾನಂದದಿಂ ಪೊಕ್ಕು
ಹರನ ಕರುಣಕ್ಕೆ ಹಾರೈಸುತೆ ಮನಂ ಮಿಕ್ಕು
ಕಂಚಿಯೊಳು ಪಿಣ್ಣಾಕದೇವರೆಂಬವರುಂಟೆ
ಪಂಚಮುಖನರುಹಿದಂ ನೋಡಿ ಪುರದೊಳಗುಂಟೆ
ಎನೆ ದೇವ ಪಿಣ್ಣಾಕನೆಂಬನೊರ್ವಂ ಮರುಳ
ತನ ತನಗೆ ಪುರದ ಗುಂಡುಗಳುರುಳ್ವ ನೆರೆ ಮರುಳ
ಉಂಟೆಂದಡಾತನೇ ಪಿರಿಯಂ ಕರೆಯಿಮೆನಲು
ಟೆಂಟಣಿಸುತೆಲ್ಲರುಂ ಪೋಗಿ ಕರೆಪದೆವೆನಲು
ಬರವೇಳ್ದಪರು ಚೋಳರಾಯನೆಲೆ ಪಿಣ್ಣಾಕ
ಕರುಣ ನಿಮಗೆಮ್ಮ ರಾಯಂ ಕೇಳು ಪಿಣ್ಣಾಕ
ಆನೇಕೆ ಚೋಳನೇಕೆತ್ತಳ ವಿನೋದವಿದು
ಆನೊರ್ವ ಭಿಕ್ಷುಕಂ ನೃಪಸಂಗವೆತ್ತಣದು
ಬಾರೆನೆಂತುಂ ಬಾರೆನೆನೆ ಮಗುಳೆ ಪರಿತಂದು
ಬಾರನಾವರ್ತದಿಂ ದೇವ ಬೆಸಸೆನಗೆಂದು
ನುಡಿಯೆ ಬಲ್ಪಿಂ ಕೊಂಡುಬರ್ಪುದೆಂದೆನುತಮಿರೆ
ನಡೆತಂದು ಬಲ್ಲಾಳ್ಗಳೆಲ್ಲರುಂ ಕರೆವುತಿರೆ
ಒಲ್ಲೆನೆಂದಡೆ ಜಡಿದು ಕೈವಿಡಿದು ಬರಸೆಳೆಯೆ
ಅಲ್ಲಿ ನಸುನಗುತೆ ಸಿದ್ಧಂ ನೋಡಿದಂ ಕಳಿಯೆ
ನೋಡೆ ಹಸ್ತಸ್ತಂಭ ನೋಡೆ ಜಿಹ್ವಾಸ್ತಂಭ
ಆಡಂಬರಂ ನಿಂದು ನೋಡೆ ಪಾದಸ್ತಂಭ
ಆಗೆ ಚೋಳಂ ಕೇಳ್ದು ನಡನಡನೆ ನಡುಗುತಂ
ರಾಗದಿಂದಲ್ಲಿಂದೆ ಮೈಯ್ಯಿಕ್ಕಿ ಹೊಗಳುತಂ
ಬಂದು ಪದದೊಳ್ಬಿದ್ದ ಚೋಳನೃಪನಂ ಕಂಡು
ಇಂದುಧರನರುಪಿದನೆ ಏಳೆಂದು ಕೈಕೊಂಡು
ಎತ್ತಿ ವಿಷ್ಣುಗೃಹಕ್ಕಾಗಿ ಬರುತೊಪ್ಪಿದಂ
ಕರ್ತು ಚೋಳಂ ಕೈಗುಡುತ್ತೆ ಬರಲೊಪ್ಪಿದಂ
ಸೋಮಧರ ಮಹಿಮಾಸಮಾನಶೈವಾರ್ಚಕಂ

ಸಾಮರ್ಥ್ಯ ಕಂಥಾವಲೀ ವಿಲಯಪಾವಕಂ
ಲಾಕುಳದ ಲಾಕ್ಷಣಿಕನಮ್ಮಮ್ಮ ಬರುತಿರ್ದ
ಆಕಸ್ಮಿಕಂ ಮರುಳನಂತು ನಡೆತರುತಿರ್ದ
ಇಂತು ವಿಷ್ಣುಗೃಹದ ಕಾಣ್ಕೆಗೊಲವಿಂ ಬಂದು
ಅಂತಲ್ಲಿ ಚೋಳಸಹಿತಿರ್ಬರೇ ನಿಂದಂದು

ಎಲೆ ಚೋಳ ಹೇಸದಿರ್ನೋಡುತಿರು ನೀನೆನುತೆ
ಎಲೆಲೆ ಹೇಸಿದಡೆ ನುಡಿಯಿಲ್ಲಂ ಪ್ರತಿಮೆಗೆನುತೆ
ಬಗೆದು ಸಿದ್ಧರದೇವನಾ ಪ್ರತಿಮೆಯಂ ನೋಡಿ
ಮಿಗೆ ತನ್ನ ಪುಲ್ಲಿಂಗದತ್ತ ಕೈಯ್ಯಂ ನೀಡಿ
ತೆಗೆದು ತನ್ನಯ ವೀರ್ಯಮಂ ಮೂರ್ಧ್ನಿಯೊಳಗೊತ್ತೆ
ಬಗೆಯದಾ ಪ್ರತಿಮೆಯ ಶಿರೋಮಧ್ಯದೊಳಗೊತ್ತೆ
ಚೋಳಂ ಮೊಗಂ ನೋಡಿ ಹೇಸಿ ತಲೆಯಂ ಬಾಗೆ
ಚೋಳ ಹೇಸಿದೆ ನುಡಿಯದೀ ಪ್ರತಿಮೆ ಸಹಿತಾಗೆ
ಎಂದೊಮ್ಮೆ ನುಡಿಯಿಸುತೆ ಚೋಳಂಗೆ ಬೀಳ್ಕೊಟ್ಟು
ನಿಂದಿರೆಂದೆನುತೆ ಮರುಳಾಳಂಗೆ ಮೈಗೊಟ್ಟು
ಅರುಳಾಳ ಪೆರುಮಾಳೆಯೆಂಬ ನಾಮವನಿತ್ತು
ತಿರುಗಿದಂ ಬಡಗದೇಶಕ್ಕೆ ಜಸವಂ ಹೊತ್ತು
ಇಂತುತ್ತರಾಭಿಮುಖವಾಗಿ ನಡೆತರುತಮಿರೆ
ಸಂತತಂ ಸಿದ್ಧರೇವಣತಂದೆ ಬರುತಮಿರೆ

## ಸ್ಥಲ ೨

ಶಿವಲಿಂಗೋದ್ಭವನಾಗಿ ಚೋಳನರಪಕ್ಷೋಣೀತಳಕ್ಕೆಯ್ದಿ ಬಂ
ದವಿಚಾರಂ ಕವಿದಂತೆ ತಾಳ್ದು ಜಡವೇಷಾಕಾರಮಂ ಕಂಚಿಯೊಳ್
ತವೆ ವಿಷ್ಣುಪ್ರತಿಮಾಪ್ರತಿಷ್ಠೆಗೆ ಮನಂಗೊಟ್ಟಕ್ಕರಿಂದಂ ಮರ
ಳ್ದು ವಿಲಾಸಂ ಮಿಗೆ ಸಿದ್ಧರೇವಣಶಿವಂ ಸಾರ್ದುತ್ತರಪ್ರಾಂತಮಂ ॥

ಇಂತು ದಕ್ಷಿಣದೇಶಮಂ ಪೊಕ್ಕು ಚೋಳಂಗೆ ಪ್ರತ್ಯಕ್ಷಮಂ ತೋರಿ, ಕಂಥೆಯ ಕಮನೀಯರೂಪಂ, ವಜ್ರಕುಂಡಲದ ವಜ್ರಧರಂ, ಲಾಕುಳದ ಲೋಕೈಕಬಂಧು, ಮೆಟ್ಟಿದ ಹಾವುಗೆಯ ಕಟ್ಟಧಿಕಂ, ಕೋವಣದ ಭಾವಕಂ, ಭಾವಜರಿಪುವೆನಿಪ ರೇವಣಸಿದ್ಧಂ ಸಿದ್ಧಕುಲಚಕ್ರವರ್ತಿ ತಿರುಗಿ ಬಂದುತ್ತರದಿಶಾಭಾಗದ ಮಾಸನೂರ ಪೊರಗಿರ್ಪ ಶಿವಾಲಯದೊಳ್ ತರಹರಿಸಿ ಸಂಧ್ಯಾಸಮಯದೊಳು ರಂಗಮಂಟಪದ ನಡುವೆ ಸಾಧುವೇಷದಿಂ ಕುಳ್ಳಿರ್ಪುದುಂ, ಅಲ್ಲಿಯ ಪೂಜಾರಿ ಕಂಡೆಲೆಯಯ್ಯಾ, ಎಲೆ ಸಿದ್ಧಾ, ಇಲ್ಲಿ ಏಕಿರ್ದಪೆಯೀ ಶಿವಾಲಯದ ಮುಂದಣ ವೃಕ್ಷದ್ವಯದೊಳಿರ್ಪ ಕಾರಣಿಕಂಗಳಪ್ಪ ತಗುಣಿಗಳೆರಡರಿಂದಿಲ್ಲಿ

ಪಟ್ಟಿರ್ದ ದೇಶಾಂತ್ರಿಗಳ್ ಪಲಂಬರ್ ಮಡಿದರಿಲ್ಲಿರದಿರೆಂದು ಪೇಳುತ್ತವಾತನಿರಲಮ್ಮದೆ ಪುರಕ್ಕೆ ಪೋದನಿತ್ತಲ್ ನಿರುಪಮಸಿದ್ಧಂ ದಯಾಮೇರು ತ್ರಿಭುವನಬಾಂಧವನಂ ತ್ರಿಕಾಲದರ್ಶಿ ತನ್ನ ಮನದೊಳ್ನೆನೆದು ನೋಡಿ, ರಾಕ್ಷಸಮಿಥುನಂ ಶಾಪಹತರಾಗಿರ್ಪುದನರಿದವಂದಿರ ದೆಸೆಯಿಂದಪ್ಪ ಪ್ರಾಣಿವಧೆಯಂ ಮಾಣಿಸುವೆಂ, ಜಗದ್ಧಿತಾರ್ಥಮಾಗಿಂತಿವಂ ತೀರ್ಚುವೆನೆಂದು ವಿಚಾರಿಸುತ್ತಿರೆಯಿರೆ–

ನಟ್ಟಿರುಳ್ ತಗುಣಿಗಳೆರಡುಂ ಮರದಿಂ ಗಳಗಳನಿಳಿದು ಬಂದು ಪರಮಶಿವಯೋಗಿಯಿರವಂ ಕಂಡು, ಭಯಂಗೊಂಡು ತಿರುಗಿ ಬಂದು ಮರನನೇರುವಾಗಳಪ್ರತಿಮಸಿದ್ಧಂ ಸಿದ್ಧರೇವಣತಂದೆ ಭೋಂಕನೆ ಕಂಡ ನೊಸಲ ಕಣ್ಗಿಚ್ಚಿಗೆ ಬೆಸನನೀಯೆ ಬಿಸುಗಣ್ಣ ಬೆಂಕಿಯಿಂ ಮರಂಗಳೆರಡುಂ ಕರಿಮುರಿಯಾಗಿ ಘರಿಘರಿಲನುರಿದು ಭಸ್ಮಾವಶೇಷವಾಗಿ, ತುಗಣಿಗಳೆರಡುಂ ಮಿಗೆ ಬೆಂದು ಮೂಗೂರಿ ಕೆಡೆದು ಕಾಹೇರಿ ಕರಗಿ ಕುದಿದುಕ್ಕಿ ತಕ್ಕಳಿಯ ಮುಕ್ಕುರಿಕ್ಕಿ ಗುಂಡುಗಳಾಗಿರೆ ರಕ್ಕಸರ ಬಲ್ಪಿಂಗೆ ಬೆಕ್ಕಸಂಬಟ್ಟು ಮುಕ್ಕಣ್ಣಸಿದ್ಧನರುಣೋದಯದೊಳೆರಡು ಗುಂಡಂ ಕರದೊಳ್ಪಿಡಿತಂದು ಮಾಸನೂರ ಕಮ್ಮರನ ಕೈಯೊಳ್ಕುಡಲವಂ ಕಂಡು ಭೀತ ಚೇತಸನಾಗೆ ತಲೆಯೊಳ್ಕೈಯಿಟ್ಟಂಜದಿರೆಂದಭಯಮಂ ಕೊಟ್ಟುದಿ ಪೆಣ್ಗುಂಡನೊಂದು ಕಟಾರಿಯಂ ಮಾಡಿಸಿ, ಗಂಡುಗುಂಡಂ ಕಾಸಿದಡಂ ಕರಗಿಸಿದಡಂ ಬಡಿದಡಂ ನಿವುರದಿರೆಯಾ ಮನೆಯ ಮುಂದೊರ್ವಂ ಪಿಡಿದ ಪೊಸ ಮಾಂಸವಂ ಕಂಡದಕ್ಕೆ ನಿಲ್ಲದೆ ನಿವುರುವುದಂ ಕಂಡು ಕಾಲಹರನಣುಗನಾ ಪಿಸಿತಮಂ ತೋರಿ ತೋರಿ ನಿಗುರ್ಚಿಸುತ್ತಲಗಂ ಮಾಡಿಸಿ, ಪಿಡಿದು ನೋಡೆ ತನ್ನ ಕೈಯೊಳಿರ್ದುಂ ತನಗೆ ಪಲ್ಮೊರೆವ ಸುರಗಿಯಂ ಕಂಡು ಬೆರಗಾಗುತ್ತಿತ್ತೆಂದಂ

ಕೈವಿಟ್ಟೆನಾದಡೆ ಈ ಅಲಗು ಜಗವನಂಡಲೆಗುಮೆಂದಾ ಮಾಸನೂರ ಮುಂದೆ ಪರಿವ ನದಿಯ ನಡುವಣ ಪೆರ್ಮಡುವಿನೊಳಾವಗಂ ತೋರ್ಪಂತೆ ಮೊನೆ ಕೆಳಗಾಗಿರಿಸುತ್ತಿನ್ನೆಲ್ಲಿಗಂ ಮಿಸುಕದಾರ್ಗಂ ಚಲಿಸದಿಲ್ಲಿಯೆ ನಿಲ್ಲೆಂದು ನಿಯಾಮಿಸಿ, ಸಾಮರ್ಥ್ಯಭೂಷಣಂ ಮನುಗಳ ಮನೆದೈವಂ ಮುನಿಗಳ ಮೂರ್ತಿಜ್ಯೋತಿ ಸಿದ್ಧರ ಸಿದ್ಧರಸನೆನಿಪ ರೇವಣಸಿದ್ಧಂ ಜಯಂತಿಗೆ ನೆಗೆದು, ಪುರಮಂ ಪೊಕ್ಕರಮನೆಯ ಸಭಾನಿಳಯಾಗ್ರದೊಳ್ನಿಂದಿರೆ,

ವಿಕ್ರಮಾದಿತ್ಯಂ ಕಂಡಿದಿರೆದ್ದು ಬಂದು ಪೊಡಮಟ್ಟು ಪ್ರೇಮದಿಂ ಕಯ್ಗೊಟ್ಟು ತಂದು ಸಿಂಹಾಸನದೊಳ್ಬಿಜಯಂಗೆಯ್ಸಿ ಶ್ರೀಪದಮಂ ತೊಳೆದು ಪಾದೋದಕಮಂ ತಳೆದು ಕೈಮುಗಿದು, ದೇವರ್ಬಿಜಯಂಗೆಯ್ದು ಬರ್ದುಂಕಿಸಲ್ಬಂದ ಕಾರಣವೇನೆಂದು ಬಿನ್ನೈಸೆ, ರೇವಣಸಿದ್ಧಂ ತನ್ನ ಕೈಯ ಕಠಾರಿಯಂ ತೋರಿಸುತಿಂತಿದುಡುವಡೆ ದಿವ್ಯವಸ್ತ್ರಂ, ತೊಡುವಡೆ ನವ್ಯಾಭರಣಂ, ಉಂಬಡಮೃತಾನ್ನಂ, ಏರುವಡೆ ವಾಹನಂ, ಕೂಡುವಡೆ ದೇವಾಂಗನೆ, ಕಾದುವಡೆ ನಿಶಿತಾಯುಧಮಪ್ಪುದಿಂತಿದಂ ಕುಡಲ್ಬಂದೆವೆನುತಾ ಕಠಾರಿಯಂ ಕರುಣಿಸಿಕೊಟ್ಟಲ್ಲಿಂ ನೆಗೆದು ಕಲ್ಯಾಣದ ತೆಲ್ಲಿಗ ಕಲ್ಲಿಸೆಟ್ಟಿಯ ಗಾಣದ ಕೊಟ್ಟಿಗೆಗೆ ಬಂದು, ಮುಗಿಲ ಮರೆಯ ಸೂರ್ಯನಂತೆ ಮಾಸಿದ ಪರುಷದಂತೆ ಗವಸಣಿಗೆಯಿಕ್ಕಿದ ಬೆಳಗಿನಂತೆ ಮುಸುಕಿರ್ದ ಸಾಮರ್ಥ್ಯದಂತೆ ಮೈಗರೆದ ಶಿವಜ್ಞಾನದಂತೆ ಅಜ್ಞಾನಿಗಳ ನೋಟಕ್ಕುದಾಸೀನಮಪ್ಪ ಪೊರವೇಷದ ಹರಿಗಂತೆಯರುವೆಗೌಪೀನ ಮೈಯ ಮಣಕಿನ ಪ್ರವಾಸಿಕ ದೇಶಿಕ ವೇಷಂ ಪ್ರಭೂತಮಾಗೆ ನಿಂದಿರ್ದ ಸಿದ್ಧನನರಿಯದೆ, ತನಗಂ ತನ್ನ ಸತಿಗಂ ಗಾಣವಾಡುವೆತ್ತಿಗಂ ಒಂದೊಂದೆ ಕಣ್ಣಾದ ಕಲ್ಲಿಸೆಟ್ಟಿ ಕಂಡೆಲೆಯಯ್ಯಾ ಗಾಣದೆತ್ತಂ ಪೊಡೆದಡೆ ಹಿಂಡಿಯಂ ಮೆಲಲಿಕ್ಕುವೆಂ ನಡೆಯೆಂದು ನುಡಿಯಲವನಂ ಕೃತಾರ್ಥನಂ ಮಾಡುವುದ್ಯೋಗದಿಂದೊಡಂಬಟ್ಟು, ಗಾಣದ ಕತ್ತರಿಯ ಕೇಣದೊಳೇರಿ ಜನನದ ಬಳಿವಿಡಿದು ಸಕಲಭುವನವೀ ತೆರದೊಳ್ತಿರುಗುವುದೆಂಬುದಂ ತೋರುವಂತೆತ್ತಂ ಪೊಡೆದು, ಗಾಣಮಂ ತಿರುಗಿಸುತ್ತೀ ತೆರದಿಂ ಕೆಲವು ದಿನಮಿರೆ,

ಮಂಗಳಸೇವ್ಯನ ಸಂಗದಿಂ ಕಲ್ಲಿಸೆಟ್ಟಿಯ ದರಿದ್ರಂ ಹರಿದು ಹಾರೆ ಸಂಪದವೇರಿ ಸುಖಿಯಾಗಿರ್ದೊಂದು ದಿನಂ ರಾತ್ರಿಯೊಳ್ತಮಗೀ ಹಿಂಡಿಯ ಮರುಳನ ಬರವಿಂ ಲೇಸುಗಳೊದವಿತ್ತೀತಂ ಕಾರಣಿಕನಾಗದೆ ಮಾಣನೆಂದು ಹೆಂಡತಿಯೊಡನೆ ನುಡಿವುತ್ತಿರೆ, ಭೋಂಕನೆ ತನ್ನ ಕೆಟ್ಟ ಕಣ್ಬಂದಿರೆ, ಕೌತುಕದಿಂ ತನ್ನ ಸತಿಯ ಮೊಗಮಂ ನೋಡಲಾಕೆಯ ಕಣ್ಬಂದಿರೆ, ಬೆರಗಾಗಿ ಪೊರಗಣೆತ್ತಂ ನೋಳ್ಪೆನೆಂದು ಬಪ್ಪಾಗಳೆತ್ತಿನ ಕಣ್ಬಂದಿರಲಾ ಅಚಳಿತ ಸಿದ್ಧರೇವಣದೇವನೆತ್ತಂ ನೋಯಿಸಲೇಕೆಂದದಂ ಬಿಟ್ಟು, ಗಾಣದ ಕೊಟ್ಟಿಗೆಯ ಧವಳಾರದ ಕತ್ತರಿವಲಗೆಯ ಸಿರಿಮಂಚದ ಮೇಲೆಣ್ಣೆ ಬತ್ತಿಯ ಹಂಗಿಲ್ಲದ ಬೆಳಗಿನೊಳು ದಿವ್ಯಾಂಗನೆಯರಿಂ ಪದತಳಮನೊತ್ತಿಸಿಕೊಳುತ್ತಿದ್ದ ನಿತ್ಯನಿಳಯನಂ ಕಂಡು ಕಲ್ಲಿಸೆಟ್ಟಿ ಕೌತುಕಂಬಟ್ಟು ನೋಡಲಮ್ಮದೆ ಮೈಯಿಕ್ಕಿ ಬಿಳ್ದು, ದೇವ ದೇವ ಕರುಣಾಕರಮೂರ್ತಿ ಕರುಣಿಪುದೆಂದು ಚರಣಮಂ ಪಿಡಿದು ಕಿಂಕರನಾಗಿರ್ದ ತಿಲಘಾತಕನನೆತ್ತಿ ಮಸ್ತಕದೊಳು ಹಸ್ತಮನಿಟ್ಟು ತೆಲ್ಲಿಗಂಗೆ ತವನಿಧಿಯಂ ಕೊಟ್ಟರಿದನರಿದನಿನ್ನಿರಲಾಗದೆಂದು ಮಂಗಳವಾಡಕ್ಕೆ ಬಂದು, ಪುರದ ರಾಜವೀಧಿಯೊಳ್ನಡೆ ತಪ್ಪಾಗಳು,

ಧನದೊಳ್ಬಡವೆ ರೂಪು ಗುಣದೊಳ್ಸಿರಿವಂತೆಯಪ್ಪೊರ್ವಳ್ಮಾಯಿದೇವಿಯೆಂಬ ಪಣ್ಯಾಂಗನೆಯಂ ಕಂಡಲ್ಲಿ ನಿಂದವರ ಮನೆಯ [ಕೀಳಿಲಿನೊಳ್] ಬಳಲ್ದಂತೆ ಕುಳ್ಳಿರಲಾ ಸೂಳೆ ಕಂಡೆಲೆಯಯ್ಯಾ ಅಯ್ಯೋ ಅಕಟಾ ಎಲೆ ಮರುಳಯ್ಯಾ ಎಲೆಯರೆಮರುಳಾ, ಅನ್ನವನುಣಲ್ಪಡೆಯದೆ ಬಿಮ್ಮನಿಪ್ಪುದರಿಂದೆಮ್ಮ ಮನೆಗೊಮ್ಮಿಮ್ಮೆ ಕಂಬಿಯಗ್ಘವಣಿಯಂ ತಂದೆಮಗುಳ್ಳಂಬಳಕಮನುಂಡು ಸುಖಿಯಾಗಿಪ್ಪುದೆನಲಾ ಮಾತಂ ಕೈಕೊಂಡಂತವರ ಮನೆಯೊಳ್ ಶಿವನ ಬೆಸದವನಾಗಿ ಕೆಲವು ದಿನಮಿರುತಿರಲಿತ್ತಲ್,

ಮುನ್ನ ಲಂಕೆಯೊಳು ರಾವಣನು ರಾಮನ ಸರಳಿಂದಳಿವಲ್ಲಿ ವಿಭೀಷಣನಂ ಕರೆದೊಂಬತ್ತು ಕೋಟಿ ಶಿವಲಿಂಗ ಪ್ರತಿಷ್ಠೆಯಂ ಮಾಳ್ಪೆನೆಂದು ಕೈಕೊಂಡ ನೇಮಕ್ಕಿಂದಿಂಗರುಕೋಟಿಯಳವಟ್ಟವಿನ್ನಾ ಮೂರು ಕೋಟಿ ಶಿವಲಿಂಗಮಂ ಬಿಜಯಂಗೆಯ್ಸಿ ಎನ್ನ ಮೋಕ್ಷಪದಕ್ಕೆ ಸಲಿಸುವುದೆಂದು ಬೇಡಿಕೊಳುತಿರ್ಪ ಸಮಯದೊಳ್ವಿಭೀಷಣಂ ಪಚ್ಚಪಸಿಯಚ್ಚವೈಷ್ಣವನಪ್ಪ ಕಾರಣದಿಂ ರಾವಣಂಗಿಂತೆಂದಂ, ಲಿಂಗಪ್ರತಿಷ್ಠೆಯತ್ಯಂತರಿದದರಿಂ ಸುಲಭಮಪ್ಪ ನಾರಾಯಣ ಪ್ರತಿಷ್ಠೆಯನೊಂಬತ್ತು ಕೋಟಿಯಂ ಮಾಡಲಕ್ಕುಮೆನೆ, ರಾವಣಂ ಮರಣಾವಸ್ಥೆಯಾದಡಂ ಮುಗುಳ್ನಗೆ ನಗುತ್ತಂ ಕೇಳೆಲೆ ಮರುಳತಮ್ಮಾ, ನಿನ್ನ ನಚ್ಚಿನ ನಾರಾಯಣಂ ದಶಾವತಾರವಾದ ದೋಷಪರಿಹಾರಕ್ಕೆ ಮೊದಲೊಳಿಲ್ಲಿ ಮತ್ಸ್ಯಕೇಶ್ವರಲಿಂಗಪ್ರತಿಷ್ಠೆಯಂ ಮಾಡಿದನದು ಹಿಂದಣ ಮಾತಂತಿರ್ಕೆ, ಇಂದೀಗಳ್ಸಹಸ್ರವೇಧಿಯಪ್ಪೆನ್ನಂ ಕೊಂದ ಬ್ರಹ್ಮೇತಿಯಂ ಲಂಕೆಯಿಂ ಗಂಧಮಾದನ ಪರ್ವತ ಕಡೆಯಾಗಿ ರಾಮಂ ಶಿವಲಿಂಗಪ್ರತಿಷ್ಠೆಯಂ ಮಾಡಿದಲ್ಲದೆ ತಾನೆ ಕಳೆದುಕೊಳಲಾರ. ನಾರಾಯಣನ ಹೆಸರ ರೂಹಿಂದೊಂದು ಗತಿಯುಂಟೆಂದು ನುಡಿವ ನಿನ್ನೊಡನೇನೆಂದಪೆನಾ ಮಾತಂ ಬಿಟ್ಟು ಕಳೆವುದು, ಮೂರುಕೋಟಿ ಶಿವಲಿಂಗಪ್ರತಿಷ್ಠೆಯಂ ಮಾಳ್ಪುದೆಂದು ರಾವಣನಂದು ನಾಕಲೋಕಕ್ಕೆ ನೆಗೆವುತಂ, ನಂಬುಗೆಗೊಂಡ ಪುಣ್ಯವಚನಮಂ ವಿಭೀಷಣಂ ನೆನೆದು ನೋಡುತ್ತಂ, ನೂರಾರಲ್ಲ, ಮೂರುಕೋಟಿ ಶಿವಲಿಂಗ ಪ್ರತಿಷ್ಠೆಗಾಚಾರ್ಯರನರಿದರಸಿ ತಪ್ಪುದರಿದರಿದಿದಕ್ಕೆಂತು ಮಾಳ್ಪೆನೆಂದು ನಡೆತಂದು ಮತ್ಸ್ಯಕೇಶ್ವರಲಿಂಗೋಪಾಸ್ಥೆಯಂ ಮಾಡೆ, ದೇವರ್ಕರುಣಿಸಿ ಬಂದು ಉತ್ತಭಾಗದೊಳೆಮ್ಮ ಮಗನಧಿಗತಪರಮಾರ್ಥಂ ರೇವಣಸಿದ್ಧನಿರ್ದಪನಾತಂಗೆ ಕುಂಡಲಂ ಕಂಥೆ ಕೌಪು ಲಾಕುಳಂ ಮೆಟ್ಟಿದ ಹಾವುಗೆಗಳ್ನೆಟ್ಟನೆ ಕುರುಪದಲ್ಲದೆಯುಂ ಎಮ್ಮಾತನೆಲ್ಲಿರ್ದನಲ್ಲಿ ಸುವೃಷ್ಟಿ ಸುಫಲ ಸುಸಂಪದಂ ತಪ್ಪದೀ ತೆರದೊಳರಿದಾತನ[ನ]ರಸಿ ತಪ್ಪುದೆಂದು ವಿಭೀಷಣಂಗೆ ಬೆಸಸೆ ಹಸಾದವೆಂದು ಲಂಕೆಯಂ ಪೊರಮಟ್ಟು ತಾಂ ಕಾಮರೂಪಿಯಪ್ಪುದರಿಂ ದ್ರವಿಡ ಚೇರ

ಕೇರಳ ತುಳುವ ಮಲೆಯಾಳ ಮಾಳವ ತೆಲುಂಗ ಕೊಂಕಣ ಕರ್ಣಾಟ ಕಾಶ್ಮೀರ ಕಳಿಂಗ ವಂಗ ಬಂಗಾಳ ಲಾಳ ಗೌಳ ಗುರ್ಜರ ದೇಶಂಗಳಾದಿಯಾದ ದೇಶಗಳಂ ಪೊಕ್ಕು ಅವರವರ ವೇಷದಿಂದರಸುತ್ತಂ ಬಂದೆಲ್ಲಿಯುಮಾ ಕುರುಪಂ ಕಾಣದೆ ಬರೆವರೆ,

ಮುಂದೆ ವಿಪುಳಫಳಮಾದ ಮಂಗಳವಾಡದ ಭೂಮಿಯ ಸೊಂಪು ಸಂಪದಮಂ ಕಂಡಲ್ಲಿರದೆ ಮಾಣನಾವದೇಶದೊಳೀ ಸಿರಿಯಿಲ್ಲೆನುತವಾ ಪಟ್ಟಣದ ಪೊರವೊಳಲ ಕೆರೆಯ ತಡಿಯಣ ವಟವೃಕ್ಷದ ನೆಳಲೊಳ್ ವಿರೂಪಾಕ್ಷಸಿದ್ಧನೆಂಬ ಪೆಸರಂ ಕೈಕೊಂಡು ಕುಳ್ಳಿರಲಲ್ಲಿಗೆ ರೇವಣಸಿದ್ಧಂ ಗುಪ್ತವೇಷಧರಂ ಪುರಮಂ ಪೊರಮಟ್ಟೊಂದೆರಳ್ಬೊಮ್ಮಾಂಡದೊಳ್ಜೀವರಾಶಿಯಂ ತೀವುವಂತೆ ಕಂಬಿಯ ಕೊಂಡಂಗಳಂ ತೀವುತ್ತಿರೆ, ವಿಭೀಷಣನಹಿಭೂಷಣಂ ಬೆಸಸಿದ ಕುರುಹಂ ಕಂಡು ಬರ್ದುಂಕಿದೆನೆನುತ್ತಂ ಹಿಂದೆ ಹಿಂದೆ ಕಾಣ್ಬಳತೆಯೊಳ್ಬಂದು, ಮನೆಯನರಿದು ಮಾಯಿದೇವಿಯಗೊರ್ತ್ತೆಗೊಟ್ಟಂದಿನ ಮಧ್ಯರಾತ್ರಿಯೊಳೆಳ್ದು ವಿರೂಪಾಕ್ಷಸಿದ್ಧಂ ರೇವಣತಂದೆಯಿರವಂ ನೋಳ್ಪೆನೆಂದು ಕದವಂ ತೆಗೆದು ಪೊರಗಂ ನೋಡೆ, ಮುಂದಣ ಜಾವದೊಳಗೆ ಧ್ಯಾನದೊಳಗೆ ನಿರುಪಾಧಿಕಜ್ಯೋತಿ ಥಳಥಳಿಸಿ ಬಿಸಿಲ ಬೆಳಗು ಬೆಳ್ದಿಂಗಳ ತಂಪಂ ಕರೆದಪುದೆನಿಸುವ ತಂಬೆಳಗಿನೊಳು ಲಕ್ಷ್ಮೀ ಸರಸ್ವತಿ ಶಚಿಗಳ ಕೈಯಲಿ ಪದತಳಂಗಳ ನೊತ್ತಿಸಿಕೊಳುತಿರ್ದ ನಿಜಸಿದ್ಧನಂ ಕಂಡು ವಿರೂಪಾಕ್ಷಸಿದ್ಧಂ ಮೈಯಿಕ್ಕೆ, ರೇವಣತಂದೆಯರಿದು ನಸುನಗುತ್ತಂ, ನೀ ನಿನ್ನ ವಿಭೀಷಣರೂಪಂ ಬಿಟ್ಟು ಭೀಷಣರೂಪಂ ಕೈಕೊಂಡೀಲೋಕ್ಕೇನ್ಬಂದೆಯೆಂದು ಬೆಸಗೊಳಲ್ದೇವದೇವ ಲಂಕೆಯೊಳ್ ತ್ರಿಕೋಟಿಶಿವಲಿಂಗ ಪ್ರತಿಷ್ಠೆಗೆ ಸಕಳಾಚಾರ್ಯರಪ್ಪ ನಿಮ್ಮನರಿದರಸಿ ಬಂದೆನೆಂದು ಬಿನ್ನೈಸುತ್ತಿರ್ಪ ಸಮಯದೊಳರುಣೋದಯಮಾಗಲಿದೆಲ್ಲಮಂ ಕಂಡು ಮಾಯಿದೇವಿ ಬಂದು, ಪದತಳದೊಳ್ಬಿದ್ದು ನಿಮ್ಮ ನಿಲವನರಿಯದೆ ಬೆಸಕೆಯ್ಸಿಕೊಂಡ ಕರ್ಮಜೀವಿಗೆ ಸರ್ವಾಪರಾಧಿಗೆ ಕರುಣಿಪುದೆನೆ, ಕೃಪೆಯಿಂ ನೋಡಿ ವಿಭೂತಿಯನೆರಡೆಡೆಯೊಳಿಡಿಸಿ ಒಂದಂ ಮುಟ್ಟೆ ಶಿವಲಿಂಗವಾಗೆ, ಮತ್ತೊಂದಂ ಸೋಂಕೆ ಹೊನ್ನ ರಾಶಿಯಾಗಲೀ ಹೊನ್ನಂ ಕೊಂಡೀ ಶಿವಲಿಂಗವನಾರಾಧಿಸಿ ಸುಖದೊಳಿರೆಂದು ಕರುಣಿಸಿ ಕೊಟ್ಟು, ತಲೆಯೊಳ್ಕಯ್ಯಿಟ್ಟು ವಿಭೀಷಣ ಸಹಿತಂ ಲಂಕೆಗೆ ನೆಗೆದು ಸಮುದ್ರ ಮಧ್ಯದ ಮತ್ಸ್ಯಕೇಶ್ವರನ ಸಮಕ್ಷಮದೊಳ್ ಮಾಡಿತೇ ಮುಹೂರ್ತಮಾಗೆ ಮೂರು ಕೋಟಿ ಶಿವಲಿಂಗಪ್ರತಿಷ್ಠೆಯಂ ಮಾಡಿ, ಮಜ್ಜನ ಪೂಜೆಯಾರೋಗಣೆ [ನೀರಾ]ಜನಾದಿಗಳಂ ಕುಂದಲಾಗದೆಂದು ವಿಭೀಷಣಂಗೆ ನಿಯಾಮಿಸಿ, ಆತಂಗೆ ಬೀಳ್ಕೊಟ್ಟು ರೇವಣಸಿದ್ಧಂ ದುರಿತಕುಲವಿರುದ್ಧಂ ಶಿವಧ್ಯಾನಪ್ರಬುದ್ಧಂ ಲೋಕಪ್ರಸಿದ್ಧಂ ಸಮಗ್ರತರತೇಜೋವಿಲಸಿತಂ ಜಲಧಿಯಂ ಪೀರ್ದು ತಣಿಯದೆ ನಭದ ನದಿಗೆ ಧೀಂಕಿಡುವ ವಡಬಾಲನಂತೆ ಸಮುದ್ರದ ಲಂಕೆಯಿಂ ಭೋಂಕನೇ ಗಗನತಳಕ್ಕೆ ನೆಗೆದನಂತುಮಲ್ಲದೆಯುಂ–

## ಸ್ಥಲ ೩

ಪದೆದು ಮರುನ್ನದೀತಟದ ತಾವರೆವೂಗಳನೆತ್ತಿ ಪಾರಿಜಾ
ತದ ಕುಸುಮಂಗಳಂ ತಿರಿದು ಕಾಶಿಯೊಳೊಪ್ಪುವ ವಿಶ್ವನಾಥನಂ
ಸದಮಳ ಹೇಮಕೂಟಪತಿಯಂ ಸಿರಿಪರ್ವತ ಮಲ್ಲಿನಾಥನಂ
ಪದಪಿನೊಳಷ್ಪಷಷ್ಟಿ ಶಿವಲಿಂಗವನರ್ಚಿಸುತಿರ್ದನಳ್ಕರಿಂ ॥

ಅಂತಿರ್ದು ಮತ್ತೆ ಮಂಗಳವಾಡಮಂ ಪೊಕ್ಕು
ಸಂತತಂ ಬಿಜ್ಜಳನ ಸಭೆಯೊಳ್ಮನಂ ಮಿಕ್ಕು
ಪಾಣಿಪಾತ್ರೆಯನಾಂತು ನಿಂದಿರ್ಪ ಸಮಯದೊಳು
ಜಾಣನಲ್ಲದ ನೃಪತಿ ಪರಿಕಿಸುವ ಚಿತ್ತದೊಳು
ಕುದಿವೋಗರವನಿಕ್ಕಿಸಲ್ನಗುತೆ ಕೈಕೊಂಡು
ಸದಮಳಂ ಕಂಭದೊಳ್ಕೈದೊಡೆಯಲುರಿ ಕೊಂಡು
ಅರಮನೆಯ ಮನೆಯೊಳಗುರಿ ಭುಗಿಲು ಭುಗಿಲಿಡಲು
ತರತರದ ಉಪ್ಪರಿಗೆಯೊಳಗೆ ಉರಿ ಘರಿಲೆನಲು
ಓಲಗದ ಮನೆವುರಿಯಲಾನೆಸಾಲೆಗಳುರಿಯೆ
ಮೇಲೆನಿಪ ತುರಗನಿಳಯಂ ಪಟ್ಟಣಮದುರಿಯೆ
ಕಂಡು ಬಿಜ್ಜಳನಲ್ಲಿ ನಡುಗಿ ಚರಣಕ್ಕೆರಗೆ
ತಂಡದುರಿ ನಿಂದು ತಂಪಿನ ಸೋನೆ ಮಳೆ ಮಸಗೆ
ಬೆರಗಾಗಿ ಬಿಜ್ಜಳಂ ನೀವೆನಗೆ ಕರುಣಿಪುದು
ಕರೆಗೊರಲನವತಾರ ಸುಖದೊಳಾರೋಗಿಪುದು

ಎಂದಡಾವೊಬ್ಬರುಂಬವರಲ್ಲ ಕೇಳರಸ
ಇಂದು ನಿನ್ನಯ ಕಟಕವೆಲ್ಲವುಂ ಸಹಿತರಸ
ಆರೋಗಿಸುವೆನೆನಲ್ದೇವ ನಾನಾರ್ಪೆನೇ
ಈ ರಾಜಕಟಕಕ್ಕೆ ಮೊಗಸಲಾನಾರ್ಪೆನೇ
ಆರೆನೆನೆ ನೀನಂಜಲೇಕೆ ಬಿಜ್ಜಳ ಕೇಳ
ಸಾರಿಸೆನುತೆಲ್ಲಕ್ಕೆ ದೇವರಿರ್ದಪರೇಳ
ಎಂದೈದು ಮಾನಕ್ಕಿಯಯ್ದು ಸೊಲ್ಲಿಗೆ ತುಪ್ಪ
ದಿಂದೆ ಕಟಕಮನೂಡುತಿರ್ದನಿಂತರಿದಪ್ಪ
ಸಿದ್ಧನಾ ಕಟಕಮಂ ಕರುಣದಿಂದಂ ತಣಿಪಿ
ಉದ್ಧತನೆನಿಪ್ಪ ಬಿಜ್ಜಳನ ಗರ್ವವನಿಳಿಪಿ

ಅಲ್ಲಿಂದೆ ನೆಗೆದನಾ ಕೊಲ್ಲಾಪುರಕ್ಕಾಗಿ
ಬಲ್ಲಿದಂ ಸಕಳಸಾಮರ್ಥ್ಯ ಭೂಷಣಯೋಗಿ
ಬಂದು ದಿವ್ಯಾಪುರದ ಬಾಗಿಲೊಲು ಪುಗುವಲ್ಲಿ
ಸಂದ ರೇವಣಸಿದ್ಧನೆಂದರಿಯದವರಲ್ಲಿ
ಏಕೆ ಪೊಕ್ಕಪೆ ಸಿದ್ಧ ಸಾಮರ್ಥ್ಯಯುತರುಂಟು
ಏಕೆ ಕೆಟ್ಟಪೆ ಬರ್ದುಕಿ ಪೋಗು ಬಲ್ಲಿದರುಂಟು

ಎನುತಂ ಗತಿಸ್ತಂಭವಂ ಮಾಡೆ ಮೀರುತಂ
ತನತನಗೆ ಪುರಜನಕೆ ಕೌತುಕಮನೀವುತಂ
ನೆರೆ ಗತಿಸ್ತಂಭಮಂ ಮಾಡಿದರ್ನಡೆಗಿಡಲು
ಉರೆ ಜಿಹ್ವೆಯಂ ಕಟ್ಟಿದವರೆಲ್ಲ ನುಡಿಗಿಡಲು
ಏನಂ ತನಗೆ ಮಾಡಲದುವೆ ತಮತಮಗಾಗೆ
ನಾನಾವಿಧದ ಕ್ಷುದ್ರ ವಿದ್ಯೆ ತಾಗದೆ ಹೋಗೆ
ನಸುನಗುತೆ ನಡೆದು ಗೋರಕ್ಷಕನ ನಿಳಯದೊಳು
ಎಸೆವ ದಿವ್ಯಾನಿಕರವೋಲ್ಯೆಪ ನಿಳಯದೊಳು
ಬಂದಲ್ಲಿ ಪಾಣಿಪಾತ್ರೆಯೊನೊಪ್ಪದಿಂ ಬೇಡೆ
ಅಂದು ಗೋರಖನಾಥನಲ್ಲಿ ಕಟಕಿಯನಾಡೆ
ದೇವ ಶಿವಸಿದ್ಧನೀತಂ ಭೀತಿಯಾದಪುದು
ಭಾವಿಸುವಡೀ ನಿಲವು ದನುಜ ಮನುಜರ್ಗರಿದು

ಎನುತಲ್ಲಿ ಹಿರಿಯ ಲಕ್ಕಾದೇವಿ ನುಡಿವುತಿರೆ
ಮನದೊಳಗೆ ಗೋರಖಂ ಲೆಕ್ಕಿಸದೆ ನಗುತಮಿರೆ
ಚಿಕ್ಕ ಲಕ್ಕಾದೇವಿ ಪಾಣಿಪಾತ್ರೆಗೆ ತಂದು
ಇಕ್ಕಿದಳು ನಸುನಗುತೆ ಹೊಸ ಕಠಾರಿಯನಂದು
ಇಕ್ಕೆ ರೇವಣಸಿದ್ಧ ತನ್ನ ಬಿಸುಗಣ್ಣಿಂದೆ
ಮಿಕ್ಕು ನೋಡಿದಡೆ ಲೋಹಂ ಕರಗಿ ಭರದಿಂದೆ
ನೋಡಿ ಕೈಕೊಂಡನಾ ಲೋಹರಸ ಭಿಕ್ಷಮಂ
ಮೂಡಿತ್ತು ತಾನೊಡೆದು ಗೋರಖನ ವಕ್ಷಮಂ
ಕುಳ್ಳಿರ್ದನುರದೊಳಗೆ ಮೂಡಿದ ಕಟಾರಿಯಂ
ತಳ್ಳಂಕದಿಂದ ನೋಡುತ್ತೆ ಮಾರಾರಿಯಂ
ಹಿರಿಯ ಲಕ್ಕಾದೇವಿ ಗಳಗಳನೆ ನಡೆತಂದು
ಚರಿತದಿಂ ಮಹಲಕ್ಷ್ಮಿಗರುಪೆ ಭರದಿಂದಂದು
ಉತ್ತಮಾಂಗಸ್ಥಲದ ಶಿವಲಿಂಗಸಂಪನ್ನೆ
ಉತ್ತಮ ಶಿವಾಚಾರನಿಧಿ ಲೋಕದೊಳು ಚೆನ್ನೆ
ನಡೆತಂದು ಸಿದ್ಧರೇವಣಯತಿಗೆ ಶರಣೆಂದು
ನಡನಡನೆ ನಡುಗಿ ಕರುಣಿಪುದು ಕರುಣಿಪುದೆಂದು
ಮುಂದರಿವರೇ ಹಸುಳೆಗಳು ಸಿದ್ಧಕುಲಪತಿಯೆ
ಇಂದು ಕರುಣಿಸುವುದೆನಗಾಗಿ ಸಿದ್ಧರ ಗತಿಯೆ
ಎಂದಡಾ ಪಾಲ್ಗಡಲ ಮಗಳ ಮಾತಂ ಸಲಿಸಿ

ಅಂದುಗುಳ್ದನಾ ಲೋಹರಸವನದನೋಕರಿಸಿ
ಉಗುಳಲ್ಕತಾರಂ ಕಳಲ್ಚಿ ಬಿದ್ದುದು ನೋಡ
ಮಿಗೆ ಕೌತುಕಂಬಟ್ಟರಾ ದಿವ್ಯರುಂ ನೋಡ

ಇಂತು ಕೊಲ್ಲಾಪುರದೊಳತಿ ಮಹಿಮೆಯಂ ತೋರಿ
ಮುಂತೆ ಪುರಜನೆಲ್ಲ ನೋಡುತ್ತಮಿರೆ ಮೀರಿ
ನೆಗೆದನಾಕಾಶಕ್ಕೆ ಸಿದ್ಧರೇವಣನಂದು
ಬಗೆ ಮಿಗಲು ವಾರಣಾಸಿಯೊಳೆ ನಿಂದಂ ಬಂದು
ಇರಲತ್ತಲಿತ್ತ ಮಂಗಳವಾಡದೊಳಗಿರ್ಪ
ನರಪ ಬಿಜ್ಜಳರಾಯನೋಲಗದೊಳೆಸೆದಿರ್ಪ
ಸಮಯದೊಳ್ಮಾತುಮಾತಿಂ ಮಾಸನೂರಲ್ಲಿ
ವಿಮಳ ನದಿಯೊಳಗೆ ತೋರ್ಪುದು ಸುರಗಿ ತಾನಲ್ಲಿ
ಆರಿಂಗಸಾಧ್ಯವದು ತೆಗೆಯಬಾರದು ದೇವ
ಆರ ಸಾಮರ್ಥ್ಯಮುಂ ಕೊಳ್ಳದಿನ್ನೆಲೆ ದೇವ
ಎಂದಡಾ ಸುರಗಿಯಂ ತೆಗೆಯಬಲ್ಲವರುಂಟೆ
ಇಂದೆನ್ನ ಕೈಸಾರ್ದಡೆನಗೆ ತೀರದುದುಂಟೆ
ಎನುತಲ್ಲಿ ಪತ್ತುಂ ಸಹಸ್ರ ಹೊನ್ನಂ ಕಟ್ಟಿ
ಮನವೊಲಿದು ನೆರೆ ಕಳುಪುತಿರ್ದನಾರ್ತಂ ಮುಟ್ಟಿ
ಕಳುಪೆ ಬಂದರಸುತ್ತೆ ದೇಶ ದೇಶದೊಳೆಲ್ಲ
ತೊಳಲುತ್ತೆ ಬರೆ ಬಂದನತಿಕುಹಕಮಂ ಬಲ್ಲ
ಖರ್ಪರನೆನಿಪ್ಪ ಬಹುಕೇತನದ ಕಲಿ ಜೋಗಿ
ಒಪ್ಪುವ ಸಹಸ್ರ ಯೋಗಿಣಿಯರ್ಗೆ ಪತಿಯಾಗಿ
ಬಂದು ಬಿಜ್ಜಳ ಕೇಳ ಸುರಗಿಯಂ ತೆಗೆದಪೆಂ
ಒಂದುಂಟುಮಾಡುವುದು ನಿನಗದಂ ಪೇಳ್ದಪೆಂ
ಕನ್ನಿಕೆಯರಂ ಪನ್ನೆರಡು ಸಾವಿರವನಿಕ್ಕೆ
ಚೆನ್ನ ಸುರಗಿಯನಿಂತು ತೆಗದಪೆಂ ನಿಮಿಷಕ್ಕೆ
ಎನಲೊಡಂಬಟ್ಟು ಬಿಜ್ಜಳನಲ್ಲಿ ಮರುಳಾಗಿ
ಮನವಾರೆ ಖರ್ಪರನ ಕುಹಕಕ್ಕೆ ವಶವಾಗಿ
ನಾಡೊಳಗೆ ನೋಡಿ ಕನ್ನಿಕೆಯರಂ ನೆರಪಿದಂ
ಬೀಡಿನೊಳಗಣ ಕುಮಾರಿಯರನೆಳತರಿಸಿದಂ
ನಾಡೆಲ್ಲ ಕಣ್ಣನೀರಿಂದೆ ಕಟ್ಟನೆ ಕರಗೆ
ಬೀಡೆಲ್ಲ ಗೋಳಿಟ್ಟು ಮೊರೆಯಿಟ್ಟು ನೆರೆ ಕೊರಗೆ

ತಂದೆತಾಯ್ಗಳು ಮೊರೆಯಿಡುತ್ತಮಿರೆ ತರಿಸಿದಂ
ನಿಂದ ಬಂಧುಗಳೆಲ್ಲ ಪುಯ್ಯಲಿಡೆ ತರಿಸಿದಂ
ಪನ್ನೆರಡು ಸಾವಿರಕ್ಕೊಬ್ಬಳೆ ಕೊರತೆಯಾಗೆ
ಮನ್ನಿಸದೆ ಕೂಡಿದಂ ಭೂತಳಂ ಬೆರಗಾಗೆ
ಇನ್ನೊಬ್ಬಳೇ ಕೊರತೆ ಎಂತು ಮಾಡುವೆನೆಂದು
ತನ್ನ ಪುರದೊಳಗೆ ಶೋಧಿಸುತೆ ಬರವರಲಂದು
ಅಲ್ಲಿ ರೇವಣಸಿದ್ಧನಣುಗಿ ತಾನೆನಿಸಿರ್ದ
ಸಲ್ಲಲಿತ ಮಾಯಿದೇವಿಯ ಪುತ್ರಿಯಾಗಿರ್ದ
ಚೆನ್ನ ರೇವಣದೇವಿಯಂ ಬಂದು ನೆರೆ ಪಿಡಿಯೆ
ಮನ್ನಿಸದೆ ಎಳೆದರಾ ಹಸುಳೆ ನೆರೆ ಬಾಯಳಿಯೆ
ಎನ್ನನೆಳೆದೊಯ್ವುತೀದರೆಯೆಂದಳೆಲೆ ತಾಯೆ
ಕನ್ನೆ ಬಾಯಂ ಬಿಡುತ್ತಲ್ಲಿ ತಾಯಂ ಕರೆಯೆ
ಜನನಿ ಬಸುರಂ ಪೊಸೆದುಕೊಂಡಿದೆಲ್ಲಿಯ ಮಾರಿ
ನಿನಗೆ ಬಂದುದೆ ಮಾಸನೂರ ಸುರಗಿಯ ಬಾರಿ

ಎಂದೊಟ್ಟಿ ಒರಲುತ್ತವಿನ್ನಾರ್ಗೆ ಪೇಳ್ದಪೆಂ
ಸಂದ ಭೂಪಂ ತಾನೆ ಪಿಡಿಯಲಾರ್ಗೆಂದಪೆಂ
ಗುರುವಿಂಗೆ ದೂರುವೆಂ ತಾನಾದುದಕ್ಕೆಂದು
ಕರೆವುತಿರ್ದಳ್ ಜಗನ್ಮಯರೂಪನಂ ನಿಂದು
ಕೆಯ್ಯೆತ್ತಿ ಕಣ್ಣೀರ ಹೊನಲಿಂದೆ ನನೆವುತ್ತೆ
ಸುಯ್ಯೊಡನೆ ಶೋಕರವವಂಬರವನಡರುತ್ತೆ
ಇರೆ ಕರೆದಳೆನ್ನಯ್ಯ ಎನ್ನ ರೇವಣಸಿದ್ಧ
ಕರುಣಿಯೆಂಬರೆಲಯ್ಯ ನಿನ್ನನಚಲಿತ ಸಿದ್ಧ
ನಿನಗೊಪ್ಪಿಸದೆ ಸುರಗಿಗೊಪ್ಪಿಸುವ ತೆರನಾಯ್ತು
ನಿನಗೆ ಹೆಸರಾದ ಹಸುಳೆಗೆ ಸುರಗಿಗೆರೆಯಾಯ್ತು
ಅಯ್ಯಲಾ ಗುರುವೆ ಸದ್ಗುರುವೆ ಕರುಣಿಸು ಗುರುವೆ
ಹುಯ್ಯಲಂ ಕೇಳೆನ್ನ ಇಹಪರದ ಸುರತರುವೆ
ಎನ್ನ ಕಂಗಳ ಸಿರಿಯೆ ನಿನ್ನ ಪದಮಂ ತೋರ
ಎನ್ನ ಪುಣ್ಯದ ಪುರುಳೆ ನಿನ್ನಂಘ್ರಿಯಂ ತೋರ
ಎಂಬ ರವವಡರ್ದು ವಾರಾಣಸಿಯ ತೀವಿತ್ತು
ಇಂಬಿನಿಂ ಘನಸಿದ್ಧಪತಿಯ ಕಿವಿದಾಗಿತ್ತು
ಕಿವಿದಾಗಲನುಕಂಪದಿಂದೆ ನೆರೆ ಬೆಚ್ಚುತಂ
ಶಿವ ಶಿವ ಮಹಾದೇವ ಏನೆಂಬೆನದ್ಭುತಂ

ಬಂದು ಮಂಗಳವಾಡದೊಳಗಿಳಿಪಿದಂತಿರ್ದು
ಇಂದುಮುಖಿ ಮಾಯಿದೇವಿಯ ಮುಂದೆ ನಿಂದಿರ್ದು

ಇರೆ ಕಂಡು ಕಂಡು ಮತ್ತಳಲಗ್ಗಳಂ ಪುಟ್ಟಿ
ಹರಮೂರ್ತಿಯೆನಿಪ ಸಿದ್ಧನ ಪಾದದೊಳಗೊಟ್ಟಿ
ಒರಲುತಂ ತಂದೆ ರೇವಣದೇವಿಯಂ ಕೊಂಡ
ರುರದೆಯಳಲೆಳದೊಯ್ದು ಸುರಗಿಗಿಕ್ಕಲ್ಕೊಂಡ
ರೆಂತು ಮಾಡುವೆನೆನುತ್ತಿರ್ಪ್ಪಳಂ ಸಂತೈಸಿ
ಸಂತತಂ ಮಾಯಿದೇವಿಯನಲ್ಲಿ ಬೋಳೈಸಿ
ನಿನ್ನ ಮಗಳೊಬ್ಬಳಲ್ಲೆಲ್ಲರಂ ಬಿಡಿಸುವೆಂ
ಎನ್ನ ಪರಿಯಂ ನೋಡು ನೋಡು ಹೊಸತೆನಿಸುವೆಂ
ಎಂದು ಬಿಜ್ಜಳನ ಸಭೆಗೆಯ್ತಂದನಾ ಸಿದ್ಧ
ಇಂದುಧರ ನಿಜಯೋಗಿ ನಿಂದನನುಪಮಸಿದ್ಧ
ಇರೆ ಕಂಡು ಬಿಜ್ಜಳಂ ಶಿವಸಿದ್ಧನೆಂದರಿದು
ಚರಿತದಿಂದಿದಿರೆಳ್ದು ಚರಣದೊಳ್ಬಿಳ್ದೊಸೆದು
ಭದ್ರಾಸನದೊಳಿರಿಸಿ ಚರಣ ತಳಮಂ ತೊಳೆದು
ಸದ್ರೂಪಿನಿಂದೆ ಪಾದೋದಕಮನುರೆ ತಳೆದು
ಕೈಮುಗಿದು ನಿಂದಿರ್ದು ದೇವ ಬೆಸನಾವುದೆನೆ
ಮೈಮೆಯಿಂ ನುಡಿದನಾ ಸಿದ್ಧನಿದು ತಪ್ಪದೆನೆ
ಏಕೆ ಮರುಳಾದೆ ಖರ್ಪರನ ನುಡಿಗೆಲೊ ಭೂಪ
ಲೋಕದೊಳ್ಕನ್ನಿಕೆಯರಂ ಕೊಲ್ವುದತಿ ಪಾಪ
ಆವನುಂ ತರಬರ್ಪುದೇ ಸುರಗಿಯುಜ್ವಳಂ
ಸ್ತ್ರೀವಧೆಯುಮಪಕೀರ್ತಿಯುಂ ಸಾರ್ವುದಗ್ಗಳಂ
ಬಿಡು ಬಿಡೆಂದಾ ಕುಮಾರಿಯರೆಲ್ಲರಂ ಬಿಡಿಸಿ
ನಡೆ ನಿನಗೆ ಸುರಗಿದೋರುವೆನೆಂದೊಡಂಬಡಿಸಿ
ಪೊರಮಟ್ಟನಪ್ರತಿಮಸಿದ್ಧನಾ ಪುರದಿಂದೆ
ನೆರೆ ಪೊಗಳುತಿರೆ ಭುವನ ಜನವೆಲ್ಲ ಮುದದಿಂದೆ
ಹಿಂದೆ ಬಿಜ್ಜಳನೃಪಂ ಮುಂದೆ ರೇವಣಸಿದ್ಧ
ಅಂದು ಬರುತಿರ್ದನಮ್ಮಮ್ಮ ನಿರ್ಮಳಸಿದ್ಧ
ನೊಡನೆ ಗಜತುರಗಂ ಪದಾತಿಬಲವೆಯ್ದಿ ಬರೆ
ಪೊಡೆವ ನಿಸ್ಸಾಳರವವಂಬರವನಡರುತಿರೆ
ನಡೆತರುತ್ತಂ ಮಾಸನೂರ ಮುಂದಂ ನಿಂದು
ಪೊಡವಿ ಭಾಪೆನುತಮಿರೆ ಗಜದಿಂದಲಿಳಿತಂದು

ಒಂದೊಂದು ಹರುಗೋಲನೊರ್ಬೊರ್ಬರೇರುತಂ
ಅಂದು ರೇವಣಸಿದ್ಧನುಂ ನೃಪನುವೇರುತಂ
ನದಿಯೊಳಗೆ ಸುರಗಿಯಿರ್ದಲ್ಲಿಗೆ ನಡೆದು ಬಂದು
ಅದಿರದಳ್ಕದೆ ಸಿದ್ಧನಾನಂದದಿಂದಂದು
ಅಲಗಿನಾಯುಧದೊಳಗೆ ಕೈಯಿಕ್ಕಿ ಬರಸೆಳೆಯೆ
ಉಲಿದು ಪಲ್ಮೊರೆದು ಗರ್ಜಿಸುತಲಗು ಮಿಗೆ ಹೊಳೆಯೆ
ಕಂಡಾ ನೃಪತಿ ನೋಡು ನೋಡೆಂದು ತೆಗೆವುತಿರೆ
ಕಂಡು ಪಿಡಿಯಲ್ಕೆಂದು ನೃಪತಿ ಕೈನೀಡುತಿರೆ
ಐದು ಪೆಡೆಗಳನುಳ್ಳ ಹಾವಾಗಿ ಭುಸ್ಸೆನಲು
ಮೈದೆಗೆದು ವಿಷದ ಸೆಕೆತಾಗಿ ತನು ಝುಮ್ಮೆನಲು
ಬಿಜ್ಜಳಂ ಹರುಗೋಲಮೇಲೆ ನೆರೆ ಹಮ್ಮೈಸೆ
ಸಜ್ಜನಂ ಸಿದ್ಧರೇವಣನಲ್ಲಿ ಸಂತೈಸೆ
ಏಳುತಲಗಂ ಕಂಡು ಬಿಡು ದೇವ ಬಿಡು ದೇವ
ಆಳವುಳ್ಳಲ್ಲಿರಿಸು ಬೇಗವಿರಿಸೆಲೆ ದೇವ

ಎನೆ ನಗುತೆ ಸಿದ್ಧನಾ ಸುರಗಿಯಂ ಮತ್ತಿರಿಸಿ
ಬಿನದದಿಂ ಬಿಜ್ಜಳಂಬೆರಸಿ ತಡಿಗವತರಿಸಿ
ಗಜಮಸ್ತಕವನೇರಿ ನಗರಿಗಭಿಮುಖವಾಗಿ
ಬಜಿಯಿಸುವ ಪುರಜನದ ಪರಕೆಗಾನತನಾಗಿ
ಬಂದು ಬಿಜ್ಜಳನರಮನೆಯನೊಪ್ಪದಿಂ ಪೊಕ್ಕು
ನಿಂದು ರೇವಣಸಿದ್ಧ ತಂದೆಗೆ ಮನಂ ಮಿಕ್ಕು
ತನ್ನ ಮಗಳಂ ವಿಭವದಿಂ ಮದುವೆಯಂ ಮಾಡಿ
ಉನ್ನತನೆನಿಪ್ಪ ರೇವಣಸಿದ್ಧನೊಳ್ಕೂಡಿ
ಆನೆಯಂ ಕುದುರೆಯಂ ಬಳುವಳಿಯನೊಲಿದೀಯೆ
ನಾನಾ ಪದಾತಿಯಂ ಸುಖಮುಖದೊಳೊಲಿದೀಯೆ
ಸಿದ್ಧಕುಲಶೇಖರಂ ಸಂಪದದೊಳೊಪ್ಪಿದಂ
ಸಿದ್ಧರೇವಣತಂದೆ ಜಗವರಿಯಲೊಪ್ಪಿದಂ ೧೮೨–೩೭೪

## ಸ್ಥಲ ೪

ನಿರುಪಮಸಿದ್ಧನಪ್ರತಿಮಸಿದ್ಧನಚಿಂತಿತಸಿದ್ಧನುತ್ತಮಾ
ವರಣ ಶರೀರ ಸಿದ್ಧನತಿಕಾರಣಸಿದ್ಧನಶೇಷಮಮಂ ಸಮು
ದ್ಧರಿಸುವ ಸಿದ್ಧನಾತ್ಮ ನಿಜಸಿದ್ಧನನೂನ ಪರಾಪರೈಕ ವಿ
ಸ್ತರತರ ಸಿದ್ಧನೊಪ್ಪಿದನಿಳಾತಳದೊಳ್ ಸಲೆ ಸಿದ್ಧರೇವಣಂ ॥

ಇಂತೊಪ್ಪಿ ಕಂತುಹರರೂಪಂ ಶಿವಲಿಂಗನಿಷ್ಠಂ ಮಂಗಳವಾಡದೊಳ್ ಕೆಲವುದಿನಂ ರಾಜ್ಯಸುಖದೊಳಿರ್ದು ಸಿದ್ಧಕುಲಕಮಳ ಕಮನೀಯಭಾಸ್ಕರನೆನಿಪ ರೇವಣಸಿದ್ಧಂ ಪುರಮಂ ಪೊರಮಟ್ಟು ಬಿಜ್ಜಳನಂ ಬೀಳ್ಕೊಟ್ಟು ದಕ್ಷಿಣಾಭಿಮುಖನಾಗಿ, ಕರಿಘಟೆಗಳುರವಣಿಸೆ ತುರಗಚಯಂ ಒತ್ತರಿಸೆ ಪದಾತಿಕುಲಂ ಪಡಿಸಲಿಸೆ ನಿಸ್ಸಾಳಧ್ವನಿಯುಣ್ಮೆ ಕಹಳಾರವಂ ಪೊಣ್ಮೆ ಪಲವನೆಡೆಗೆಯ್ದು ಸಕಲಜನಕ್ಕೆ ಸುಖವನೀವುತಂ ನಡೆತಂದು, ಮನಂ ಮಿಕ್ಕು ಚೋಳದೇಶಮಂ ಪೊಕ್ಕು ರಾಜೇಂದ್ರಚೋಳನಂ ಕಾಣಿಸಿಕೊಂಡು ಕರುಣಮನಿತ್ತು ವಿವಿಧ ವಿಸ್ತರಮಪ್ಪ ಘನನಿಳಯದ ಸಿಂಹವಿಷ್ಟರಕ್ಕೆ ಬಿಜಯಂಗೈಯ್ದು ಚೋಳಕುಮಾರಿಯಂ ವಿವಾಹಮಾಗಿ, ಚೋಳ ಮಹಾರಾಜನಿಂ ಪೊಡವಡಿಸಿಕೊಳುತಂ ಶಿವಭಕ್ತರಿಂ ವಂದಿಸಿಕೊಳುತಂ ಆ ದೇಶದ ಪಲವು ಶಿವಪುರಂಗಳಂ ನೋಡುತಂ ತಿರುಗಿ ಪೊರಮಟ್ಟು ಚೋಳಂ ಕೊಟ್ಟ ಬಳುವಳಿಯ ಚತುರಂಗ ಬಲಂವೆರಸಿ ತಿರುಗಿ, ಚೇರ ಮಲೆಯಾಳ ಗೌಳ ಗುರ್ಜರ ನೇಪಾಳಂ ಮೊದಲಾದ ದೇಶಂಗಳಂ ಪೊಕ್ಕಲ್ಲಲ್ಲಿಯ ರಾಜಪುತ್ರಿಯರಂ ಪರಿಣಯನಪೂರ್ವಕಂ ಸ್ವೀಕರಿಸಿ, ತಟಾಕಂಗಳಂ ಕಟ್ಟಿಸುತ್ತಂ ಶಿವನಿಳಯಂಗಳನೆತ್ತಿಸುತ್ತಂ ಆರವೆಗಳನಿಕ್ಕಿಸುತ್ತಂ ಶಿವಪುರಂಗಳ ಮಾಡಿಸುತ್ತಂ ಸತ್ರಂಗಳಂ ನಿರ್ಮಿಸುತ್ತಂ, ಕುರುಡರ್ಗೆ ಕಣ್ಗಳಂ ಹೆಳವರ್ಗೆ ಕಾಲ್ಗಳಂ ಬಂಜೆಯರ್ಗೆ ಮಕ್ಕಳಂ ಕೆಟ್ಟರಸುಮಕ್ಕಳ್ಗೆ ರಾಜ್ಯಮಂ ಕಂಡಕಂಡ ಬಡವರ್ಗೆ ಸಂಪದಂಗಳನೀವುತಿಂತಿವು ಮೊದಲಾದ ಪುಣ್ಯಲೀಲೆ ಗಳಲನಂಕರಿಸುತ್ತಂ, ಜಗದ್ಧಿತಾರ್ಥಮೂರ್ತಿ ಮಂಗಳವಾಡಕ್ಕೆ ಮರಳಿ ಬಪ್ಪಾಗಳು,

ಸಿದ್ಧಸಮಯ ಚಕೋರಚಂದ್ರಿಕಾಯಮಾನನೆಂಬ ಸಿದ್ಧಕುಲಚಾತಕಸುಧಾವರುಷನೆಂಬ ಪರಸಮಯಕುಮುದಕಮಳಸಖನೆಂಬ ಶಿವಭಕ್ತವನವಸಂತನೆಂಬ ಸಾಮರ್ಥ್ಯಸಾಗರನೆಂಬ ಶಿವಲಿಂಗಸಂಪನ್ನನೆಂಬ ಶಿವಪೂಜಾರಾಜನೆಂಬ ಶಿವಯೋಗೀಲಲಾಮನೆಂಬ ತನ್ನ ಬಿರುದಾವಳಿಯ ಕಹಳಾರವಂ ದಿಕ್ತಟಕ್ಕೆ ಧೀಂಕಿಡೆ ಸರ್ವಸಂಭ್ರಮದಿಂ ಪುರಮಂ ಪೊಗುತ್ತಿಪ್ಪಾಗಳ್ ಮಂಗಳವಾಡದೊಳ್ಗುಡಿಗಟ್ಟಿ ಸಕಳ ಪರಿಜನದಿಂ ಬಿಜ್ಜಳರಾಯನಿದಿರ್ಗೊಂಡು ಮೆಯ್ಯಿಕ್ಕಿ ಕಾಣಿಕೆಯನಿತ್ತು ಕೈಮುಗಿದು ನಿಂದಿರೆ, ಪರಸತ್ತುಂ ವಿಭೂತಿಯಂ ಕರುಣಿಸಿ ಕೊಟ್ಟರಮನೆಗೆ ಬಿಜಯಂಗೆಯ್ದು ಸಿಂಹಾಸನಾರೂಢನಾಗಿ ಬಹಿರ್ಭಾವದ ಮಾಯಾಸುಖದುಃಖ ಸಂಭ್ರಮಂ ಶರೀರಕ್ಕಾಗುತ್ತಿರೆ ನೋಡುತಂ, ನಿರ್ಲೇಪಸಾಕ್ಷಿಯಾಗಿ ಪರಮ ಶಿವಸಿದ್ಧನಾಗುತ್ತನೇಕ ಕಾಲದೊಳುರಗಲೋಕದೊಳಂ ನರಲೋಕದೊಳಂ ಸುರಲೋಕದೊಳಂ ಸುಖದೊಳಿರ್ಪ ಜಗದ್ಭರಿತನಪ್ಪ ಸಿದ್ಧರೇವಣದೇವಂ ನೋಡಿದುದೆ ಜಗತ್ಪಾವನಂ ಮುಟ್ಟಿದುದೆ ಪರುಷಂ ಮೆಟ್ಟಿದುದೆ ದಿವ್ಯಕ್ಷೇತ್ರಂ ನಡೆದುದೆ ಪುಣ್ಯಮಾರ್ಗಂ ನುಡಿದುದೆ ಪರಮತತ್ವಂ ಇರ್ದುದೆ ದೇವಸಭೆ ಸಾರ್ದುದೆ ಸುರತರುವೆನಿಪ್ಪ ನಿರ್ಮಳಕೀರ್ತಿಯಂ ಪಡೆದು ಶೈವಪ್ರತಾಪಸಿದ್ಧನನವರತ ಧರ್ಮತತ್ಪರಂ ಸಂತಸದೊಳಿರ್ದೊಂದುದಿನಂ ಸಕ್ರೀಲ್ಲೀಲಾಲೋಲಹೃದಯಂ ಮಂಗಳವಾಡದ ಪೊರವೊಳಲ ನಂದನವನವಂ ನಿರೀಕ್ಷಿಸುತ್ತೆ ಬರುತ್ತೊಂದು ನಿರುಪಮವಹ ತಟಾಕಸ್ಥಲವಂ ಕಂಡಲ್ಲಿ ಸಕಲ ಪ್ರಾಣಿಗಳ್ಗೆ ಹಿತಕರಮಪ್ಪ ತಟಾಕಮಂ ನಿರ್ಮಿಸಲ್ವೇಳ್ಕುಮೆಂದಪ್ರತಿಹತಧರ್ಮಮೂರ್ತಿ ನೆನೆದು ನೋಡಿ, ತನ್ನ ಕೆಲಬಲದೊಳಿರ್ದ ಕಲುಗುಂಡುಗಳಂ ಮುಟ್ಟೆ ಪೊನ್ನುಂ ರನ್ನಮುಮಾಗೆ, ಪುರಜನಮಂ ಬರಿಸಿ ಕನಕಮನಿತ್ತು ತಟಾಕನಖನನ ಪ್ರಾರಂಭ ಕರ್ತೃತ್ವಂ ತಮ್ಮದಪ್ಪ ಕಾರಣದಿಂ ವಾರಣಚರ್ಮವಸನ ತನುಜಂ ರೇವಣಸಿದ್ಧಂ ಭೂಮಿಯಂ ಸೋದಿಸಿ ಧರ್ಮವಂ ಬಿತ್ತುವಂತೆ ಗುದ್ದಲಿಯಂ

ಪಿಡಿದಗೆಯತೊಡಗಲ್ಪೆಂಡಿರೆಲ್ಲಂ ಪುಣ್ಯದ ಸಿವುಡಂ ಹೊತ್ತು ಪಾಪವಂ ಹೊರಸೂಸವಂತೆ ಮಣ್ಣು ಹೊತ್ತು ಸೂಸುವ ಪದದೊಳು ವಾಸಿಗೆ ಗಾಸಿಯಪ್ಪ ಚೋಳನ ಕುಮಾರಿ ತನ್ನ ಸೌಕುಮಾರ್ಯಮಂ ನಟಿಯಿಸುತೊಲ್ಲದೆ ಮೂರುದಿಂಗಳ ಗರ್ಭದ ನೀರೆ ನಿಂದು, ದೇವ ದೇವಾ ಚೋಳರಾಜೇಂದ್ರನ ಬಸುರೊಳ್ಬಂದು ದಿವ್ಯಜ್ಞಾನಿಗಳಪ್ಪ ನಿಮ್ಮಡಿಗಳರಸಿಯಾಗಿಯುಮಿಂತಪ್ಪ ನಿರೋಧಕ್ಕೆ ಪಕ್ಕಾಗಲಾರೆನೆಂಬ ನುಡಿಯುಂ ಕೇಳ್ದು ನಸುನಗುತ್ತಯ್ಯೋ, ಹಿಂದೆ ಮಾಡಿದ ಪುಣ್ಯದ ಫಲಮಿಂದಿನ ಸುಕುಮಾರತೆಯನಿತ್ತುದಿಂದಿನ ಪುಣ್ಯವೇನಂ ಮಾಡದು, ನೀನಾರದಡೆಮ್ಮೊಡವೆಯನೆಮಗೆ ಕೊಟ್ಟು ಪೋಗೆಂದು ನುಡಿಯೆ, ಕುಡಲುಂ ಬಿಡಲುಮರಿಯದಿರ್ಪ ಮುಗ್ಧೆಯಂ ಕಂಡು ಕರುಣಿಸಿ ಸಾಮರ್ಥ್ಯಶರಭಂ ಸಕಲಜೀವಂಗಳುತ್ಪತ್ಯಕರ್ತುವಪ್ಪ ರೇವಣಸಿದ್ಧಂ ತನ್ನ ಕರತಳದಿಂದಾ ಲಲನೆಯ ಪಣ್ಯೋದರಮನೊಯ್ಯನೆ ತಡವೆ ಪುಣ್ಯದುರುಳಿ ಬೀಳ್ವಂತೆ ಬಾಲಕಿಯ ಗರ್ಭ ಭೋಂಕನೆ ಬೀಳೆ ಮುಂಕಣಿಸಿ ತೆಗೆದು ಶಂಕರನಂ ನೆನೆದು, ಸಾರಹೃದಯಂ ಮಾರಾರಿಯಣುಗನೇರಿಯ ಮೇಲಣ ನಿವಾಸಸ್ಥಲದೊಳಾದರದಿಂದಿರಿಸಿ ಭಸಿತಮಂ ಕಾಪಿಟ್ಟು ಶಿವಧ್ಯಾನದಿಂ ಮುಸುಂಕಿ ಜ್ಞಾನನಿಧಾನಮಂ ಚಿತ್ತಭೂಮಿಯೊಳ್ಬಯಿತಿಡುವಂತೆ ಬಯಿತಿಡೆ, ತಾಯ ಗರ್ಭದಿಂ ನೂರ್ಮಡಿ ರಕ್ಷೆಯಾಗಿರೆ, ರೇವಣಸಿದ್ಧಂ ಚೋಳಪುತ್ರಿಯಂ ದಕ್ಷಿಣ ದೇಶಕ್ಕೆ ಕಳುಪಿಯಾ ಜ್ಞಾನನಿಧಿ ಮಹಿಮಾಂಬುರಾಶಿ ಧರ್ಮಧ್ವಜಂ ದಯಾಮೇರು ಸತ್ಯಭೂಷಣನನುನಯದಿಂದಾರನೆಯ ಮಾಸಕ್ಕೆ ತಟಾಕಕರ್ಮಂ ಸಂಪೂರ್ಣಮಾಗೆ ತತ್ತಟಾಕವೇಳಾಗ್ರದೊಳಿರಿಸಿದ ಬಾಲಗರ್ಭಕ್ಕೆ ನವಮಾಸಂ ತೀವಿತೆಂಬುದನರಿದು ರೇವಣಸಿದ್ಧಂ ಪುತ್ರೋತ್ಸಾಹಕ್ಕನುಕೂಲವೆನಿಪ ಮೃದು ಮೃದಂಗ ಮಂಗಳ ಕಳಸ ದರ್ಪಣದಾರತಿಯ ಸುವಾಸಿನೀ ಜನಂಬೆರಸು ಪಟ್ಟಣಮಂ ಪೊರಮಟ್ಟು ಬಂದು, ಕೆರೆಯೇರಿಯ ಮೇಲೆ ಮುನ್ನಿರಿಸಿದ ಮುಚ್ಚುಳಂ ತೆಗೆಯೆ, ಭಕ್ತಿಭೂಮಿಯೊಳ್ ಜ್ಞಾನರಸದಿಂ ತೊಯ್ದು ಬೀಗಿ ಬಿರಿದ ಶಿವಕಳಾಬೀಜದಿಂ ನಳನಳಿಸಿ ಬೆಳೆದ ಶಿವಜ್ಞಾನಾಂಕುರದಂತೆ ತೊಳತೊಳಪ ಬಾಲಕನಂ ಕೈಲೆಡೆಗೊಟ್ಟ ಭೂದೇವಿಯ ಕೈಯೊಳೀಸಿಕೊಂಬಂದದಿಂ ತೆಗೆದುಕೊಂಡು ಕೃಪೆಯಿಂ ನೋಡಿ ಮೋಹದಿಂ ಮುಂಡಾಡಿ ಮೂರ್ಧ್ನಿಘ್ರಾಣಮಂ ಮಾಡಿ ತಾಯಗರ್ಭದಿಂ ಬಪ್ಪ ನೋವನರಿಯದೆ ದುಃಖಮಂ ನೀಗಿ ಹುಟ್ಟಿದವನಾಗಿ ರುದ್ರಮುನಿದೇವರೆಂಬ ನಾಮಕರಣಂ ಮಾಡಿ, ಪುರಕ್ಕೆ ತಂದು ತಮ್ಮ ರಸಿಯರೊಳೊರ್ವ ಪುಣ್ಯವತಿಯ ಕೈಯೊಳ್ಕುಡೆ, ಬಾಲಚಂದ್ರನಂ ಗಗನಾಂಗನೆ ಸಲುಹುವಂತೆ ತರುಣ ತರಣಿಯಂ ಪೂರ್ವದಿಶಾಂಗನೆ ಬೆಳಯಿಪಂತೆ ಸಾಗಿಸುತ್ತಿರಲೆಂಟನೆಯ ವರುಷದೊಳ್ಮಗನಂ ನೋಡಿ ಮಿಗೆ ಸಂತಸಂಬಟ್ಟು ಶೈವೋಪದೇಶಮಂ ತಾನೆ ಕರುಣಿಸಿ ಕೃಪೆಯಿಂ ನಿರೀಕ್ಷಿಸಿ ರುದ್ರಮುನಿದೇವರಿಗೆ ಪರಶಿವಸ್ವರೂಪಜ್ಞಾನಬೋಧೆಯಂ ಬೆಸಸುತ್ತಂ ಶಿವಯೋಗ- ಸಂಪನ್ನನೆನಿಪ್ಪ ರೇವಣಸಿದ್ಧಂ ಮಂಗಳವಾಡದೊಳಿರ್ದನಂತುಮಲ್ಲದೆಯುಂ-

## ಸ್ಥಲ ೫

ನಯದಿಂದಂ ಪ್ರಿಯದಿಂದ ರುದ್ರಮುನಿದೇವಂಗಳ್ಕರಿಂ ಶೈವದೀ
ಕ್ಷೆಯನಿತ್ತಾನತವೃಂದಮೋಕ್ಷದನನೂನೈಶ್ವರ್ಯ ಸಂಯುಕ್ತನ
ದ್ವಯಸಿದ್ಧಂ ಶಿವಭಾವಸಿದ್ಧನವನೀಶಂ ಪೂಜ್ಯಸಿದ್ಧಂ ನಿರಾ
ಶ್ರಯಸಿದ್ಧಂ ವಿಭು ಸಿದ್ಧರೇವಣಶಿವಂ ಸಂದಿರ್ದನಾ ಸ್ಥಾನದೊಳ್ ॥

ಅಂತಿರ್ದು ಮತ್ತೆ ದಿಗ್ದೇಶಾಂತರಕ್ಕೆಂದು
ಸಂತತಂ ಪೊರಮಟ್ಟನತುಳಬಳಯುತನಂದು
ಕರಿತುರಗ ಕಾಲಾಳು ರಥನಿಕರವೊಡನೆ ಬರೆ
ಧರೆ ನಡುಗೆ ನಿಸ್ಸಾಳರವವುಣ್ಮಿ ಪೊಣ್ಮುತಿರೆ
ನಡೆತಂದು ವಂಗಂ ಕಳಿಂಗ ದೇಶಂಗಳೊಳು
ನಡೆತಂದು ಗೌಳ ಮಾಳವ ತೆಲುಗ ದೇಶದೊಳು
ಸಕಳ ದೇಶಂಗಳೊಳು ಸುಖದಂತೆ ಸುಳಿವುತಂ
ಸುಕರವೆನೆ ಮೂಜಗಕೆ ಸಖನಂತೆ ಸುಳಿವುತಂ
ಶಶಿಯಂತೆ ಸಿರಿಯಂತೆ ಸುಧೆಯಂತೆ ಸುಳಿವುತಂ
ಎಸೆವ ಸುರಧೇನು ಸುರಕುಜದಂತೆ ಸುಳಿವುತಂ
ವರಸುಕೃತದಂತೆ ಸತ್ಯದ ತೆರದೆ ಸುಳಿವುತಂ
ಉರು ಶಾಂತಿಯಂತೆ ನಿತ್ಯದ ತೆರದೆ ಸುಳಿವುತಂ
ಧರೆಯೊಳಗನಂತ ದೃಷ್ಟಾಂತಮಂ ತೋರುತಂ
ಹರುಷದಿಂ ಪಲವು ಸಾಮರ್ಥ್ಯಮಂ ಬೀರುತಂ

ಬರುತಿರ್ದನತ್ತಲಾ ಸಿದ್ಧರೇವಣ ತಂದೆ
ಧರಣಿಯೊಳಗಿತ್ತಲೊರ್ವಂ ಶರಣನೊಲವಿಂದೆ
ಎಸೆವ ಹಾವಿನಹಾಳೆನಿಪ್ಪಗ್ರಹಾರದೊಳು
ಹೆಸರೆಸೆವ ಕಲ್ಲಯ್ಯನೆಂದೆಂಬ ನಾಮದೊಳು
ಆವೂರ ಕಲಿದೇವರಲ್ಲಿ ಸಲೆ ಮಚ್ಚಾಗಿ
ಭಾವದಿಂದರ್ಚಿಸುತ್ತಿರ್ಪನುನ್ನತವಾಗಿ

ಇರ್ದು ಪರಮ ಸ್ನೇಹವಂಕುರಿಸಿ ಕೊರ್ವುತಂ
ಸಾರ್ದು ಶಿವಚರಣದೊಳ್ ಪಲ್ಲವಿಸಲುರ್ಬುತಂ
ಶ್ರೀಗುರುಪದಂಗಳಂ ಬಯಸಿರ್ಪ ಸಮಯದೊಳು
ರಾಗದಿಂ ನೆನೆವುತಂ ಪಾರ್ದಿರ್ಪ ಸಮಯದೊಳು
ಈ ಬಂದನತಿಬಳಂ ಸಿದ್ಧರೇವಣನೆಂಬ
ಈ ಬಂದನಮ್ಮಮ್ಮ ಸಿದ್ಧಕುಲಪತಿಯೆಂಬ
ಕಹಳೆಗಳ ದನಿ ಬಂದು ಕಲ್ಲಯ್ಯನೊಳು ಪುಗಲು
ಬಹುವಿಧದ ಪುಳಕತತಿ ತನ್ನ ಮೈಯೊಳ್ನಿಲಲು
ಮಾಯೆಯಂ ಪಿಂಗಿ ಶಿವಪುರಕೆ ಧೀಂಕಿಡುವಂತೆ
ಆಯತಿಕೆಯಿಂದ ಭವಜಲವನುತ್ತರಿಪಂತೆ

ಗಳಗಳನೆ ಪರಿದು ರೇವಣಸಿದ್ಧನಂಘ್ರಿಯಂ
ತೊಳತೊಳಪ ಸದ್ಗತಿಯ ತೋರುತಿರ್ಪಂಘ್ರಿಯಂ
ಬಿಗಿಯಪ್ಪಿದಾನಂದ ಜಲದಿಂದೆ ತೊಳೆವುತಿರೆ
ತೆಗೆದಪ್ಪಿ ಪುಳಕಂಗಳಿಂದ ಪೊದೆಸುತ್ತಮಿರೆ
ಏಳಯ್ಯ ಕಲ್ಲಯ್ಯ ನಿನಗೆ ಲೇಸಕ್ಕುಮೆನೆ
ಏಳಯ್ಯ ನಿನ್ನಯ ಮನೋರಥವನೀವೆನೆನೆ
ಏಳ್ದು ಕೈಮುಗಿದಿರ್ದ ಕಲ್ಲಯ್ಯನಂ ಕಂಡು
ತಾಳ್ದು ಕಾರುಣ್ಯಮಂ ಭಕ್ತಿಗೆ ಮನಂಗೊಂಡು
ರುದ್ರಮುನಿದೇವರಿಂ ಕರುಣಮಂ ಮಾಡಿಸುತೆ
ರುದ್ರನಣುಗಂ ಶೈವದೀಕ್ಷೆಯಂ ನೀಡಿಸುತೆ

ಕಲ್ಲಯ್ಯನಂ ತತ್ಪುರಕ್ಕೆ ಕರುಣಿಸಿ ಕಳುಪಿ
ಎಲ್ಲ ತೆರದಿಂದೆ ಭವಬಂಧನಂಗಳನಿಳುಪಿ
ತನ್ನ ಮನದೊಳು ಸಿದ್ಧರೇವಣಂ ನಡೆನೋಡಿ
ಪನ್ನಗಾಭರಣನಿತ್ತಾಜ್ಞೆ ನೆರೆ ಕೈಗೂಡಿ
ಅರಿತೇಳುನೂರರಿಯದೇಳ್ನೂರು ವತ್ಸರಂ
ನೆರೆ ಸಂದುದಿನ್ನಿಳೆಯೊಳಿರಲಾಗದೀಶ್ವರಂ
ಕೊಟ್ಟುದಾಯ್ತೆಂದೆನುತೆ ಚಿಂತಿಸುತೆ ಬರವರಲು
ನಿಷ್ಠೆಯಿಂ ಸಿದ್ಧರೇವಣ ತಂದೆ ಬರವರಲು
ಸಂದ ಸೊನ್ನಲಿಗೆಯಿಂದೊಲಿದು ಚಾಮಲದೇವಿ
ಮುಂದೆ ಮೈಯಿಕ್ಕುತಂ ಬಂದು ಗುರುಪದಭಾವಿ
ತನ್ನ ಗುರುವಂ ಕಂಡು ಚೆನ್ನ ಗುರುವಂ ಕಂಡು
ಉನ್ನತ ಶಿವಜ್ಞಾನಕಲ್ಪತರುವಂ ಕಂಡು
ಕೃತಕೃತ್ಯೆಯಾಗುತಂ ಕೈಮುಗಿದು ನಿಂದಿರಲು
ಅತಿಶಯ ಜ್ಞಾನಸಿದ್ಧನ ಮುಂದೆ ನಿಂದಿರಲು
ಕಂಡು ಕರುಣಮನಾಕೆಗೀವುತ್ತೆ ಓವುತ್ತೆ
ಅಂಡಲೆವ ಮಾಯೆಯಂ ಸೋವುತ್ತೆ ಕಾವುತ್ತೆ
ಆನೆಯಿಂದಿಳಿದನಾ ಸಿದ್ಧರೇವಣ ತಂದೆ
ಸೇನೆಯಂ ಪಿಂತೆ ನಿಲಹೇಳುತ್ತೆ ತಾಂ ಮುಂದೆ
ಹೊನ್ನ ಹಾವುಗೆಗಳಂ ಮೆಟ್ಟಲಮ್ಮದೆ ಕಳೆದು
ತನ್ನ ಮನದೊಳಗೆ ಭಯಭಕ್ತಿರಸಮಂ ತಳೆದು
ಚರಣದಿಂ ನಡೆಯೆ ಚಾಮಲದೇವಿ ಕಾಣುತಂ

ಧರಣಿಗಿದು ಪೊಸತೆನುತೆ ಕೌತುಮನಾಳುತಂ
ದೇವ ಏನೆಂಬಪರಿ ಕರುಣಿಸುವುದಿದನೆನಗೆ
ದೇವ ದಿವ್ಯಾಂಘ್ರಿಯಿಂ ನಡೆವುದದ್ಭುತವೆನಗೆ

ಎನೆ ಕೇಳ ಮಗಳೆ ಶಿವಲಿಂಗವಾದಪವಿಲ್ಲಿ
ಘನಮಹಿಮೆಯುಳ್ಳ ಶಿವಭೋಗವಾದಪವಿಲ್ಲಿ
ಇಲ್ಲಿ ಮೊರಡಿಯ ಮುದ್ದಗೌಡನರ್ಧಾಂಗಿಯೊಳು
ಸಲ್ಲಲಿತ ಸುಗ್ಗವ್ವೆಯೆಂಬ ಕಾರಣಿಕೆಯೊಳು
ಕಾರಣಿಕ ಸಿದ್ಧನುದಯಿಸುವನೊರ್ವಂ ಕೇಳ
ಮಾರಾರಿಯಂ ಬಯಸಿ ಬಾಯೊರೆವ ವಿಭು ಕೇಳ
ಆತನಂ ನಾನೆಂದು ಬೆಸಕೈದು ಬದುಕುವುದು
ಆತನ ಯಶೋವಲ್ಲಿ ಮೂಜಗಕೆ ಪರ್ಬುವುದು
ಎಂದೊಲಿದು ನಡೆತಂದು ಮುದ್ದಗೌಡನ ಮನೆಗೆ
ನಿಂದು ಭಿಕ್ಷವನಾಂತು ಕೈಕೊಂಡು ಕೃಪೆ ಬೆಳಗೆ
ಸುಗ್ಗಗೌಡಿಯ ಮೆರೆವ ಪುಣ್ಯೋದರವನಲ್ಲಿ
ಅಗ್ಗಿಸುತ್ತಂ ಮುಟ್ಟಿ ಭಸಿತಮನಿಡುತ್ತಲ್ಲಿ
ಸೇನೆಯಂ ರುದ್ರಮುನಿ ದೇವರಂ ನೋಡುತಂ
ಮಾನಿ ಚಾಮಲದೇವಿಗಾಗಳಪ್ಪೈಸುತಂ
ನೆಗೆದನಾಕಾಶಕ್ಕೆ ಶಶಿಬಿಂಬದಂದದಿಂ
ನೆಗೆದನಂಬರತಳಕೆ ಶಾಂತ ರವಿಯಂದದಿಂ

ನೆಗದನಷ್ಟಾಷಷ್ಟಿ ತೀರ್ಥಕ್ಷೇತ್ರಂ ಪೊಕ್ಕು
ಸೊಗಯಿಸುವ ಲಿಂಗಂಗಳಂ ಕಂಡು ಮನಮಿಕ್ಕು
ಸರ್ವ ಶಿವಲಿಂಗವಂ ಬೀಳ್ಕೊಳುತ್ತಂ ಬಂದು
ಸರ್ವ ಶಿವಭಕ್ತರ್ಗೆ ಸುಖವನೀವುತೆ ಬಂದು
ಗಗನದಲಿ ನಡೆತಂದನಾ ಕೊಲ್ಲಿಪಾಕಕ್ಕೆ
ಬಗೆವರಘವಂ ಕೆಡಿಪ ಪುಣ್ಯ ಸುಸ್ಥಾನಕ್ಕೆ
ಬಂದು ಶಿವಪುರದ ಶಿವನಿಳಯದೊಳಗಂ ಪೊಕ್ಕು
ಇಂದುಧರನಂ ನೋಡಿ ಪುಳಕತತಿಯಿಂ ಮಿಕ್ಕು
ನೆನೆವರ ನಿಧಾನವೆನಿಸುವ ಸೋಮನಾಥನಂ
ಅನುಪಮ ವಿಳಾಸ ಜಳನಿಧಿ ಸೋಮನಾಥನಂ
ಶರಣ ಸಂಕುಳ ಕಲ್ಪತರು ಸೋಮನಾಥನಂ
ಪರಮ ಶಿವಭಕ್ತಕುಲಗುರು ಸೋಮನಾಥನಂ

ಹೊಗಳುತ್ತೆ ಹೊಂಗುತ್ತೆ ಬಂದು ಹತ್ತಿರೆ ಸಾರ್ದು
ಸೊಗಯಿಸುವ ಶಿವಲಿಂಗಮೂರ್ತಿಗೆ ಮನಂ ಸಾರ್ದು
ಹುಟ್ಟಿಸಿದ ತಾಯ್ತಂದೆ ಬಟ್ಟೆಗುಡುವುದು ದೇವ
ದಿಟ್ಟಿ ಮೂರರ ನಿಧಿಯೆ ಬಟ್ಟೆಗುಡುವುದು ದೇವ
ಶರಣರ ಮನೋರಥವೆ ತೆರಹುಗುಡು ನೀನೆನಗೆ
ಪರಮಭಕ್ತರ ಬಲವೆ ತೆರಹುಗುಡು ನೀನೆನಗೆ
ಕರುಣಿಸಿದ ತೆರದೆ ಧರೆಯೊಳ್ಬಂದೆನೆಲೆ ದೇವ
ಹರ ಕೃಪಾಕರ ಕಾಲಹರ ಕರುಣಿಸೆಲೆ ದೇವ

ಎನೆ ಸೋಮನಾಥನೊಯ್ಯನೆ ತೆರನನಾದರಿಸೆ
ಮನವಾರೆ ಶರಣಂಗೆ ಕರುಣಮಂ ಚಿತ್ತವಿಸೆ
ಹೂವಿನೊಳ್ಪರಿಮಳಂ ಬೀಜದೊಳಗಂಕುರಂ
ಓವಿ ಪಲ್ಲವವೊಪ್ಪುವಂಕುರದೊಳುತ್ತರಂ
ಅಂಕುರಂ ಬೀಜದೊಳ್ಪೊಗುವಂದದಿಂ ಪೊಕ್ಕು
ಶಂಕರನ ನಿಜಲಿಂಗದೊಳಗೆ ಭಾವಂ ಮಿಕ್ಕು
ಒಳ್ಳಿತೆನೆ ತನ್ನನಾ ಲಿಂಗದೊಳಗೋವಿದಂ
ಕೊಲ್ಲಿಪಾಕದ ಸೋಮನಾಥನೊಳ್ತೀವಿದಂ
ಶಿವಲಿಂಗದೊಳಗೆ ಪೊಕ್ಕಂ ಸಿದ್ಧರೇವಣಂ
ಶಿವನ ಸದ್ಭಕ್ತಿ ಪರ್ವಿದ ಸುಖದ ಕಾರಣಂ

ಆಗಳೆರಗಿದವು ಪುಷ್ಪಾಸಾರವಂತಲ್ಲಿ
ಮೇಗೆ ಮೊಳಗಿದವು ದುಂದುಭಿವೃಂದವಲ್ಲಲ್ಲಿ
ನೆಗೆದುದು ವಿಮಾನವಾ ಪುರಜನಂ ಬೆರಗಾಗೆ
ಗಗನದೊಳ್ಪೋಗುತಮಿರ್ದುದುನ್ನತಮಾಗೆ
ಹೋಗಿ ನಂದೀಶ್ವರನ ಬಾಗಿಲೊಳಗಂ ನಿಂದು
ನಾಗಭೂಷಣನ ಕೈಲಾಸದೊಳ್ಪೊಗುತಂದು
ಸಿದ್ಧರೇವಣನೊಲಿದು ದೇವಂಗೆ ಮೈಯಿಕ್ಕೆ
ಉದ್ಧರಿಸುತೀಶ್ವರಂ ಶಿರದೊಳಗೆ ಕೈಯಿಕ್ಕೆ
ಪುಳಕಿಸುವ ಭಕ್ತನಂ ಕಂಡು ಕರುಣಾಕರಂ
ಅಳವಲ್ಲದಕ್ಕರಿಂ ನೋಡಿ ಶಶಿಶೇಖರಂ
ಮುನ್ನಿನಂದದೊಳೆ ಗಣಪದವಿಯಂ ಸಲಿಸುತ್ತೆ
ಉನ್ನತಿಯ ರೇಣುಕನೆನಿಪ ನಾಮವೀವುತ್ತೆ
ಆವನುಂ ಪೊಗಳ್ವುದಕ್ಕಧಿಕತರನೊಪ್ಪಿದಂ

ದೇವ ದೇವರ ದೇವ ದೇವಪತಿಯೊಪ್ಪಿದಂ
ಸಕಲ ಚೆಲ್ವಿಂಗೆ ಚೆಲ್ವಾದ ಗುರುವೊಪ್ಪಿದಂ
ಸಕಲ ಬಲ್ಪಿಂಗೆ ಬಲ್ಪಾದ ಹರನೊಪ್ಪಿದಂ
ಸಕಲ ಲೇಸಿಂಗೆ ಲೇಸಾದ ಶಿವನೊಪ್ಪಿದಂ
ಸಕಲ ಗುರುಗಳ್ಗೆ ಗುರುವಾದ ಭವನೊಪ್ಪಿದಂ
ಪಂಪಾಪುರಾಂಬೋಧಿ ಪೂರ್ಣೇಂದುವೊಪ್ಪಿದಂ
ಪಂಪಾಪುರಾಧಿಪ ವಿರೂಪಾಕ್ಷನೊಪ್ಪಿದಂ ೧೩೦-೫೦೪

ಅಣಿಯರದಿಂ ನಿಜಭಕ್ತಿಯ
ಗಣಮಂ ತಾನೆನ್ನೊಳೀಗೆ ಶಾಂತಂ ಶರ್ವಂ
ತ್ರಿಣಯನನೊಲವಿಂದಂ ರೇ
ವಣಸಿದ್ಧನ ಕಂದನೆಂದು ಹಂಪೆಯರಾಯಂ ॥

❖❖

# ೯. ಪ್ರಭುದೇವರ ರಗಳೆ

ದೇವ ಶಿವಶರಣಹೃತ್ಕಮ
ಲಾವಾಸಂ ಸಕಲದೇವಸೇವ್ಯಂ ನೀಲ ।
ಗ್ರೀವಂ ಮೆಚ್ಚಿದನಲ್ಲಮ
ದೇವನನೊಲವಿಂದೆ ಹಂಪೆಯವಿರೂಪಾಕ್ಷಂ ॥

ಶ್ರೀಗಣನಿಕಾಯದಿಂದೊಪ್ಪೆ ಕೈಲಾಸದೊಳ್
ಭೋಗನಿಧಿ ಹಂಪೆಯ ವಿರೂಪಾಕ್ಷನೊಪ್ಪದೊಳ್
ಹರುಷದಿಂದೋಲಗಂಗೊಟ್ಟು ಕುಳ್ಳಿರೆ ಬಂದು
ಶರಣರೊಳಗೊರ್ವ ನಿರ್ಮಾಯನೆಂಬಂ ಸಂದು
ಸುರಸತಿಯರೊಳಗೊರ್ವಳಂ ನೋಡಲಳುಪಿಂದೆ
ಹರನವರನೀಕ್ಷಿಸುತ್ತಂ ದಯಾಪರದಿಂದೆ
ನೀವಿರ್ವರುಂ ಪೋಗಿ ವಸುಮತಿಯೊಳಗೆ ಪುಟ್ಟಿ
ಕಾವಂಗೆ ವಶವಾದ ಸಕಲಸುಖಮಂ ಮುಟ್ಟಿ
ಹರುಷದಿಂದಿರ್ದಿರದೆ ಬರ್ಪುದೆಂದೊಸೆದಿತ್ತ
ಹರನ ಬೆಸದಿಂದಿರ್ವರುಂ ನಲಿದು ಬರಲಿತ್ತ

ನರಲೋಕದೊಳಗೆ ಭೂಮಿಗೆ ತೊಡವಿದೆಂದೆನಿಪ
ಶರಣಸಂಕುಳಕೆ ಬಿಂಕಂಬಡೆದ ತವರೆನಿಪ
ಸೂತ್ರಿಸಿದ ಹೊಸ ಸೋಮಸೂರ್ಯವೀಧಿಗಳೆಸೆವ
ನೇತ್ರತ್ರಯನ ಚಾರುಭವನದಿಂದಂ ಮೆರೆವ
ಹರನ ಪ್ರಸಾದ ಪಾದೋದಕದೊಳೇ ಬಾಳ್ವ
ಪುರಹರನ ಶರಣರಿಂದಂ ಸಂಪದಮನಾಳ್ವ
ಶಿವನ ಸದ್ಭಕ್ತಿಯಲ್ಲಿಯೆ ಸಫಲವೆಂದೆನಿಪ
ಭವನೊಲಿದು ನೆಲಸಿರ್ಪ ಸೆಜ್ಜೆ ತಾನೆಂದೆನಿಪ

ಬಳ್ಳಿಗಾವಿಯೆನಿಪ್ಪ ಪುರವರಂ ರಂಜಿಪುದು
ಪಲ್ಲವಿಪ ಶರಣಸಂಕುಳದಿಂ ವಿರಾಜಿಪುದು
ವಲ್ಲೀಪುರದ ನಾಗವಾಸಾಧಿಪತಿಯಪ್ಪ
ಸಲ್ಲಲಿತ ನಾಯಕನ ಸತಿಯ ಬಸುರೊಳ್ಪರ್ಪ
ನೆವದಿಂದೆ ನಿರ್ಮಾಯನಿರ್ದನಾ ಬಸುರೊಳಗೆ
ನವಯೌವನದ ಗರ್ಭವಾಗಲುದಯಿಸಿತೊಳಗೆ
ಹೊರಗೆ ಸಾರಿದುದವಯವಂ ಗರ್ಭಚಿಹ್ನಮಂ
ತುರುಗಿದುದು ಲಾವಣ್ಯವೊಪ್ಪವಿಡಿದಂಗಮಂ
ಪೊಕ್ಕುಳುಣ್ಮುತ್ತಮಿರೆ
ಮಿಕ್ಕು ಕಿಳ್ಪೊಡೆಯಲರೆ
ತಿವಳಿ ಬಸುರಿಂ ಹಾರೆ
ನವಬಾಸೆ ಮೈದೋರೆ
ನಡು ಬಟ್ಟನಾಗಿ ನಿಲೆ
ಕುಡಿಗಪ್ಪನಾಳೆ ಮೊಲೆ
ನಳಿತೋಳು ನಯವೇರೆ
ತೊಳಗಿ ಕಂಠಂ ಮೀರೆ
ಮೊಗಮಲರ್ದು ಸೊಂಪಾಗೆ
ಮಿಗಿ ಮಾತು ತೆಳ್ಪಾಗೆ
ಕುಂತಳಂ ಕವಲಾಗೆ
ಸಂತಸಂ ಪಿರಿದಾಗೆ
ನಡೆ ಮೆಲುಪಿನೊಳ್ನೆರೆಯೆ
ತೊಡೆ ಥಾಳದೊಳ್ಪೊರೆಯೆ
ನವಮಾಸವಾದುದಾಕೆಗೆ ಚೆಲ್ವು ಮಿಗಿಲಾಗೆ
ನವ ಕುಮಾರಕನುದಯವಾಗಲುದ್ಯತನಾಗೆ
ಅನುವಾಗೆ ಶುಭದಿನ ಮುಹೂರ್ತಂಗಳೈತಂದು
ಜನಿಯಿಸುವ ಸಮಯಂ ಪಾರ್ದಿರುತ್ತಿರಲಂದು
ವಾಸವಾಶಾಂತರದೊಳಗರ್ಕನುದಯಿಸುವಂತೆ
ಭಾಸುರದ ಪಾಲ್ಗಡಲೊಳಿಂದು ಜನಿಯಿಸುವಂತೆ
ವಸುಧೆಯೊಳು ಸುರಕುಜದ ಸಸಿ ಪುಟ್ಟುವಂದದಿಂ
ಶಿಶುವೆನಿಸಿ ಪುಟ್ಟಿದಂ ನಿರ್ಮಾಯನೊಪ್ಪದಿಂ

ಆಗಳನುರಾಗದಿಂದುಮೆ ಶಿವರ್ ಪರಸುತಿರೆ
ನಾಗವಾಸಾಧಿಪತಿಯಕ್ಕರಿಂ ನಲಿವುತಿರೆ

ಮಂಗಳವೆ ರೂಪುಗೊಂಡಂದದಿಂ ಶಿಶು ಮೆರೆಯೆ
ಲಿಂಗದಂಘ್ರಿಯೊಳೆ ನೋಟಂ ಮುಟ್ಟಿ ಕಣ್ದೆರೆಯೆ
ಅಭವರೂಪಂಗೆಸೆವ ಜಾತಕರ್ಮಂ ಮಾಡಿ
ಶುಭಲಗ್ನವೆಂದಾ ಮುಹೂರ್ತಿಕರ್ ಕೊಂಡಾಡಿ
ಗೊಗ್ಗೇಶ್ವರ ಪ್ರಸಾದದ ಬೆಣ್ಣೆಯಂ ತಂದು
ಹಿಗ್ಗುತ್ತಲಿಕ್ಕಿದರ್ ಜನನಿ ಮೆಲ್ಲೈ ಎಂದು
ನಾಮಕರಣಂ ಜಗಕ್ಕಲ್ಲಯ್ಯನೆಂದಾಗೆ
ಭೂಮಿಗದು ನಿರ್ಮಾಯನೆಂಬ ಪೆಸರಂತಾಗೆ
ತೊಟ್ಟಿಲೊಳ್ ಕೈಗಳೊಳು ಹೃತ್ಕಮಳದೊಳ್ ಬೆಳೆದು
ದಟ್ಟಡಿಯಿಡುತ್ತೆ ಪರಿದಾಡುತ್ತೆ ಬೆಳೆಬೆಳೆದು
ಬೆಳೆದನಾತಂ ಶಿವಪದಕ್ಕೆ ಹೊಸ ತೊಡವೆನಿಸಿ
ಬೆಳೆದನಾತಂ ಭಕ್ತಿ ವಾರಿಧಿಗೆ ವಿಧುವೆನಿಸಿ

ಇಂತು ಬೆಳೆಯಲ್ ಬೆಳೆದುದಾತನೊಡನೇ ವಿದ್ಯೆ
ಸಂತತಂ ಸೊಗಯಿಪ ಮೃದಂಗದ ಮಹಾವಿದ್ಯೆ
ಆ ವಿದ್ಯೆದೊಡನೆ ಯೌವನವೆಸೆದು ಬೆಳೆವುತಿರೆ
ಕಾವಂಗೆ ಸಿಂಗರದ ಹುರಡು ಹುಟ್ಟುತ್ತಮಿರೆ
ನನೆಗಣೆಯಬಿಲ್ಲ ಹಂಗಿಲ್ಲದಂಗಜನೆನಿಪ
ವನಿತೆಯರ ಮನವನಿಕ್ಕುಳಿಗೊಳ್ವನಿವನೆನಿಪ
ಹರಯದೊಳ್ಗಿರಿಜೇಶನಂ ಕೇಳಿಸಲ್ಕೆಂದು
ಹರುಷದಿಂ ಗೊಗ್ಗೇಶ್ವರಾಲಯಕ್ಕೈತಂದು
ಒಡನೆಯೆ ಮೃದಂಗಮುಮನಿತ್ತರದೊಳಂ ನಿಲಿಸಿ
ನಡುವೆ ಸಿಂಗರಿಸಿ ರಂಗಂಬೊಕ್ಕು ಮೇಳೈಸಿ
ಅತಿರಸಾಮೃತ ಕಾಂತಿಯುತ ಸುಖಾಸ್ಪದಮೆಂಬ
ನುತಗತಿ ನವೀನಗತಿ ಸರಸಗತಿಯೆಂದೆಂಬ
ನುಣ್ಗತಿ ಸುಗಂಭೀರಗತಿ ಸಾಂದ್ರಗತಿಯೆಂಬ
ಜಾಣ್ಗತಿ ಮಧುರಗತಿ ಮನೋಹರಗತಿಗಳೆಂಬ
ಸುಗತಿ ಶರ್ವಂಗೆ ಕರ್ಣಾಭರಣಮಾಗುತಿರೆ
ಬಗೆಗೆ ಪರಮಾನಂದ ರಸದ ತೆರೆ ಮಸಗುಗುತಿರೆ
ನಂದಿ ಮಹಾಕಾಳರಂ ಮರೆವುತಿರೆ ಶಂಕರಂ
ಸಂದಕ ಮುರಜದ ಗತಿಗೆ ಮೆಚ್ಚುತಿರಲೀಶ್ವರಂ

ಇಂತು ಕೇಳಿಸುತಮಿರಲಲ್ಲಮಂ ನಲಿದತ್ತ
ಕಂತುಹರವರದಿಂದೆ ಸುರಕಾಂತೆಯೊಲಿದಿತ್ತ

ಆ ಪುರದ ಧನದತ್ತನಬಲೆಯುದರದೆ ಪುಟ್ಟಿ
ರೂಪಿನೊಳ್ ರತಿ ಸರಸ್ವತಿಗುಪ್ಪರಂಗಟ್ಟಿ
ಹೆಸರೆಸೆವ ಕಾಮಲತೆಯೆಂದೆಂಬ ನಾಮದಿಂ
ಒಸೆದು ಸೌಭಾಗ್ಯಲತೆ ಕುಡಿಯಿಡಲು ಪ್ರೇಮದಿಂ
ಶಶಿಕಿರಣದಂತೆ ಬೆಳೆದಳ್ ಬೆಳೆದಳಮ್ಮಮ್ಮ
ಕುಸುಮಶರದಂತೆ ನೆರೆದಳ್ ನೆರೆದಳಮ್ಮಮ್ಮ
ರತಿಗಿತಿಯ ರಂಭೆಗಿಂಭೆಯ ಮಾತು ಬೇಡಿಲ್ಲಿ
ಮತಿಗಿತಿಯ ಹೊಗಳ್ವಗಿಗಳ್ವಾಸೆಗಳ್ಪುಗವಿಲ್ಲಿ
ಈ ತೆರದೊಳೆಸೆವ ಸೊಬಗಿನ ರೂಪನೊಳಕೊಂಡು
ಭೂತೇಶವಂದನೆಗೆ ನೇಮವಂ ಕೈಕೊಂಡು
ಮದನಶರವಿಕ್ಷುಧನುವಿಂದೆ ಪೊರಮಡುವಂತೆ
ಪಡೆದು ಸುವಿಟರ ಮೇಲೆ ದಾಳಿ ಪೊರಮಡುವಂತೆ
ಶಿವನ ಭವನಕ್ಕೆ ಪೊರಮಟ್ಟಳಾ ಕಾಮಲತೆ
ಭವನ ಭಕ್ತಿಯೊಳೆ ರಾಜಿಸುವ ಲಾವಣ್ಯಲತೆ
ಇಕ್ಕೆಲದೊಳಬಲೆಯರ ಮುಸುಗು ಮಸಗುತ್ತಮಿರೆ
ಪಕ್ಕದೊಳ್ ನಡೆವ ಸತಿಯರು ಸಂದಣಿಸುತಮಿರೆ
ಮುಸುಕಿನೊಳು ಸಿಲ್ಕಿ ನಿಲುವ ಭ್ರಮರವಲ್ಲಲ್ಲಿ
ನಸುನೋಟದೊಳ್ನಿಲ್ವ ನೆಮ್ಮುವರ್ಕೆಲರಲ್ಲಿ
ನೇವುರದ ನುಣ್ದನಿಯೊಳೆಳಲುತಿರ್ಪರ್ಕೆಲರು
ಭಾವುಕದ ಬಲೆಯೊಳಗೆ ಸಿಲ್ಕಿ ನಿಲುವರ್ಕೆಲರು

ಇಂತು ವಿಟರಂ ಗೋರಿಗೊಳಿಸುತ್ತೆ ನಡೆತಂದು
ಸಂತಸಂ ಮಿಗೆ ಶಂಭುವಿನ ನಿಳಯಕೆಯ್ತಂದು
ಒಳಪೊಕ್ಕು ಶಿವಲಿಂಗದರುಶನಮುಮಂ ಮಾಡಿ
ಬಳಸಿ ಕೈಯೆತ್ತಿ ಪೊಡಮಡುತಳ್ಕರಿಂ ನೋಡಿ
ತಿರುಗಿ ಬರುತಿರಲಮಮ ರಂಗಮಂಟಪದಲ್ಲಿ
ಹರವರಿಯ ಮುರಜಗತಿಗಳ್ ಪೊಣ್ಮುತಿರಲಲಿ
ಪಾದರಿಯ ಹೂದುರುಂಬಿನ ನೀರನೊಪ್ಪಿದಂ
ಕೇದಗೆಯ ಕಿರಿಯೆಸಳ ಕಿರುಮಿಂಡನೊಪ್ಪಿದಂ
ಕತ್ತುರಿಯ ತಿಲಕದ ಕುಮಾರನಿಂತೊಪ್ಪಿದಂ
ಮುತ್ತಿನೇಕಾವಳಿಯ ಮುಗುದನಿಂತೊಪ್ಪಿದಂ
ಹೊಳೆವ ಬೆಳತಿಗೆಗಂಗಳೆಳೆಯನೊಪ್ಪುತ್ತಿರಲು
ತೊಳಪ ಕರ್ಣಾಭರಣದರಸನೊಪ್ಪುತ್ತಿರಲು

ಸವಿಗೊಡುವ ಸುಗತಿಗಳ ಸೊಬಗನಿಂತೊಪ್ಪಿರಲು
ಭವನನೋಲೈಸುತ್ತೆ ಹರುಷದಿಂದಿರುತಿರಲು
ನಿಂದಂತೆ ನಿಂದಳಲ್ಲಮನ ನಿಲವಂ ಕಂಡು
ಸಂದಳಾ ಹೊಸರೂಪು ರೇಖೆಗೆ ಮನಂಗೊಂಡು
ನೋಡುತಿರೆ ಬಾರಿಸುತೆ ಕೆಲಬಲಕೆ ಸಾರುತ್ತೆ
ನೋಡಿ ಭೋಂಕೆನಲಲ್ಲಮಂ ತಿರುಗಿ ಕಾಣುತ್ತೆ
ಹರಹರ ಮರೆದನಲ್ಲಿ ಸುಗತಿಯಂ ಮುರಜಮಂ
ಹರಹರ ಮರೆದನಲ್ಲಿ ಶಿವನುಮಂ ತನ್ನುಮಂ
ಕಂಟಕಿತವಾದನೆರಡುಂ ದಿಟ್ಟಿ ಮೈದೋರಿ
ಗಂಟೆಕ್ಕಿದವು ನೋಟವೆವೆಯ ಕಾಹಂ ಮೀರಿ
ಇಕ್ಕಿದೆರಡುಂ ಕೈಗಳಿಕ್ಕಿದಂದದೊಳಿರಲು
ಎಕ್ಕವಣಿಗರ ಮೇಲೆ ಜೋಲ್ದು ಮೂರ್ಛೆಗೆ ಸಲಲು
ಸಡಿಲಿಸಿದರೊಯ್ಯನೆ ಮೃದಂಗಮುಮನತ್ತಿತ್ತ
ಒಡಗೊಂಡು ಹೋಗಲುದ್ಯೋಗಮನರಾಗುತ್ತ

ಇರೆ ಕಾಮಲತೆಯ ಸಖಿಯರು ನಡನಡಂ ನಡುಗಿ
ಪರಿ ಬೇರೆ ಕೊಂಡಿಯ್ಯಬಾರದೆನುತಂ ಕೊರಗಿ
ತೆಗೆಯಬಾರದು ಬಾರದೆಲೆಲೆ ಹರಣದ ಹರಿವು
ಬಗೆಗಗೋಚರವಿಲ್ಲಿ ಕೊಳ್ಳದೆಲೆ ನಿಮ್ಮರಿವು
ಕೊಂಡುನಡೆ ಇಬ್ಬರನು ಒಂದು ಸೆಜ್ಜೆಯ ಮನೆಗೆ
ಕಂಡೆವಿಲ್ಲಿನಿತಪ್ಪ ನೇಹಮಂ ಪೊಸತೆಮಗೆ
ಎನುತೆ ಸತಿಯರ್ ಜವಳಿ ಜಂತ್ರಮಂ ತಪ್ಪಂತೆ
ತನತನಗೆ ಬೆರಗಾಗಿ ಗುಜುಗುಜುಗೊಳುತ್ತಿಂತೆ
ಸಂದಣಿಸಿ ಕಾಮಲತೆಯರಮನೆಯೊಳಗೆ ಪೊಕ್ಕು
ತಂದು ಸೆಜ್ಜೆಯ ಮನೆಗೆ ಕೌತುಕಂ ಕೈಮಿಕ್ಕು
ಸಿರಿಮಂಚದೊಳಗಿರ್ವರುಮನೊಲಿದು ಕುಳ್ಳಿರಿಸಿ
ಸರಿದರೆಲ್ಲಾ ಮಾನಿನಿಯರೊಯ್ಯನೋಸರಿಸಿ
ಅರರೆ ಸುರತದ ಸುಖದ ತಡೆವಿಟ್ಟ ತವಕಿಗರು
ತರತರದ ಹರುಷದಿಂ ಕಣ್ದೆರೆದ ಪುಳಕಿತರು
ಹೊರೆವ ಹೊಸಸುಖದ ಸುಗ್ಗಿಯನೇನನೆಂದಪೆಂ
ನೆರೆವ ನೇಹದ ಸುಖದ ಪೆಂಪನೇನೆಂದಪೆಂ
ಪರಿಮಿತದ ಮೋಡಿಮೋಡಿಯೊಳನುಭವಂ ನಿಮಿರೆ
ಪರಿಪರಿಯ ಹೊಸಸುಖದ ಸವಿಗಳರಳುತ್ತಮಿರೆ

ಆಲಿಂಗನದೊಳಿರ್ವರೊರ್ವರಾಗುತ್ತಮಿರೆ
ಸೋಲದ ಸೊಗಸು ಮನಮನೋಲಾಡಿಸುತ್ತಮಿರೆ
ಕಣ್ಗಳರೆಮುಗಿವುತಿರೆ ಕರಣತತಿ ಕರಗುತಿರೆ
ನುಣ್ಗೊರಲ್ ನುಡಿವುತಿರೆ ನುಡಿ ಮರುಳ್ಗೊಳುತಮಿರೆ
ಕದಪು ಬೆಮರುತ್ತಮಿರೆ ಮೆಯ್ಯೆಲ್ಲ ಕೆತ್ತುತಿರೆ
ತೊದಳೊತ್ತರಿಸುತಮಿರೆ ಸುಯ್ ನೀಳ್ದು ಸೂಸುತಿರೆ
ಪುಳಕವಿರ್ಮ್ಯಗಡರೆ ನಲಿವು ದಳವೇರುತಿರೆ
ನಳನಳಿಸಿ ಬೆಳೆವ ಸುಖವಲ್ಲಿ ಪಲ್ಲವಿಸುತಿರೆ
ಕಡೆಮೊದಲ್ನಡುವಿಲ್ಲದೆಳ್ತರದ ಕಾಮಿಗಳು
ತಡವು ತವಕದೊಳದ್ದ ನವ ನವ ಪ್ರೇಮಿಗಳು
ಪಲಕೆಲವು ವತ್ಸರಂ ನಿಮಿಷವಾಗುತ್ತಮಿರೆ
ತೊಲಗದಲುಗದ ಸಲುಗೆ ಸವಿಗಳಂ ಸಲಹುತಿರೆ
ಇರ್ದರಿರ್ವರುವಮಮ ಸಮಕಳೆಗಳೊಡಗೂಡಿ
ಸಾರ್ದ ಹರವರಿಯ ಹರುಷದ ಶರಧಿಯೊಳ್ಕೂಡಿ
ಮುಟ್ಟಿದ ಸುಖಕ್ಕೆ ಕುರುಳಂ ಬೆರಲನೀವುತಂ
ಕಟ್ಟಕ್ಕರಿಂದಲುರವಂ ಮುಡುಹನೀವುತಂ
ತನು ಧನಂ ಮನಮುಮಂ ಕಾಮಲತೆಗೀವುತಂ
ನೆನೆದುದಂ ಬಯಸಿತಂ ಕಾಮಲತೆಗೀವುತಂ
ಚಲ್ಲಮಂ ಗೆಲ್ಲಮಂ ಕಾಮಲತೆಗೀವುತಂ
ಬಲ್ಲುದಂ ಕಂಡುದಂ ಕಾಮಲತೆಗೀವುತಂ

ಇಂತು ಪಲವುಂ ಕಾಲ ತೊಲಗದಗಲದೆ ಇರ್ದು
ಕಂತು ಮದಹರಣನಿತ್ತಾಜ್ಞೆ ಹತ್ತಿರೆ ಸಾರ್ದು
ಕಾಮಲತೆಯಂ ಬಂದು ಪತ್ತಿತು ಮಹಾಜ್ವರಂ
ಸೋಮಕಳೆಯಂ ರಾಹು ತಡುಕುವಂತಿರೆ ಕರಂ
ಜ್ವರದ ಪರಿತಾಪದಿಂದವಯವಂ ಸೀಳುತಂ
ತರುಣಿ ಸೈರಿಸಲಾರದೇಳುತಂ ಬೀಳುತಂ
ಈ ವಸುಧೆಯೊಳಗಣ ಸುಖಂ ತನಗೆ ಸಾಕೆಂದು
ದೇವಲೋಕಕ್ಕೆ ನಡೆದಳು ಕಾಮಲತೆಯಂದು
ಆಗಳಾ ಜನನಿ ಜನಕರ್ ಮರುಗಿ ಮೊರೆಯಿಡಲು
ಸಾಗಿಪ ಸಖೀಜನಂ ಹರಣಗಳೆವುತ್ತಿರಲು
ಸಂದ ಬಾಂಧವಸಂಕುಳಂ ಮರುಗಿ ಬಾಯ್ಬಿಡಲು
ನಿಂದವರ್ ನೆರದವರ್ ಕಣ್ಣ ನೀರಿಡುತಿರಲು

ಆ ರಣರಣಕದೊಳಲ್ಲಮನನೇಂನೆಂದಪೆಂ
ಸಾರಸರ್ವಸ್ವವರತನನೇನನೆಂದಪೆಂ
ಬರೆದಂತೆ ಕಂಡರಸಿದಂತೆ ಕರುವಿಟ್ಟಂತೆ
ಮರುಳಂತೆ ಮರೆದಿರ್ದರಂತೆ ಮರವಟ್ಟಂತೆ
ಉರವಣೆಯ ದುಃಖದೊಳಗಾಳುತುಂ ಮುಳುಗುತುಂ
ಪರಿಪರಿಯ ವಿರಹಾಗ್ನಿಯಿಂದುರಿದು ಬೇವುತುಂ
ಇರ್ದಲ್ಲಮನನೆಲ್ಲರೆಂತಕ್ಕೆ ಸಂತೈಸಿ
ಸಾರ್ದು ಕೈಗೊಟ್ಟೆತ್ತಿ ನಲ್ಮೆಯಿಂ ಬೋಳೈಸಿ
ತಂದರಾತನನವರ ಜನನಿ ಪಿತರಿದ್ದೆಡೆಗೆ
ಕಂದನಿರವಂ ಕಂಡವರ್ ಮರುಗಿ ಬೆರಗಾಗೆ
ನಿಂದನಲ್ಲಮನೊಳಗೊಳಗಳಲ್ದು ಬಳಲುತಂ
ಸಂದ ನೇಹದ ಸದ್ಗುಣಂಗಳಂ ನೆನೆವುತಂ
ಕಾಮಲತೆ ಮತ್ತೆ ಮನಮಂ ಸುತ್ತಲಲ್ಲಮಂ
ಕಾಮಲತೆ ಕಾಮಲತೆಯೆನುತಿರ್ದನಲ್ಲಮಂ

ಮರುಗಿ ಮನವುಕ್ಕಿ ಖೇದಂಗಳಿಂ ಪರಿತಂದು
ಪುರದ ಹೊರಗಣ ಕಣಿಗಿಲೆ ತೋಟಕೆಯ್ತಂದು
ಕುಳ್ಳಿರ್ದು ಚಿಂತೆಯೊಳಗಾಳುತಂ ಮುಳುಗುತಂ
ತಳ್ಳಂಕದಿಂದೆ ನೆಲನಂ ನೋಡಿ ಸುಯ್ಯುತಂ
ತಲೆವಾಗಿ ಕಣ್ಣ ನೀರ್ಗರೆಯೆ ಚಿಂತಿಸುತಂದು
ನೆಲನಂ ಬರೆಯೆ ಬರೆವ ಹಜ್ಜೆಯೊಳಗಂತೊಂದು
ಮಿನುಮಿನುಗಿ ಹೊಳೆಹೊಳೆದು ನಸುವೆಳಗು ತೋರುತಂ
ತನಗೆ ಕೌತುಕವೇರೆ ತಳತಳಿಸಿ ಮೀರುತಂ
ಹರ ಹರ ಶಿವಜ್ಞಾನದಂಕುರಂದೋರ್ಪಂತೆ
ಪರಮಮುಕ್ತ್ಯಂಗನೆಯ ಕಳಶಕುಚತೋರ್ಪಂತೆ
ಹೊನ್ನ ಕಳಸಂ ತೋರಲತಿ ಕೌತುಕಂಬಟ್ಟು
ತನ್ನಲಾರ್ಪನಿತನಗೆದಗೆಯಲಾರದೆ ಬಿಟ್ಟು
ಪರಿದುಬಂದಾ ಪುರದ ನೃಪತಿಗರುಪಲ್ಕೇಳ್ದು
ಚರಿತದಿಂದಿದು ಚಿತ್ರವಿದು ಚಿತ್ರವೆನುತೇಳ್ದು
ಪಟ್ಟದಾನೆಯ ಬೆಂಗೆವಾಯ್ದು ನಡೆತರುತಿರಲು
ಪಟ್ಟಣದ ಹೊರವಳಲನೀಕ್ಷಿಸುತೆ ಬರುತಿರಲು
ಕಳಶವಿರ್ದಾ ಶಿವಾಲಯದ ಸೀಮೆಗೆ ಗಜಂ
ಚಲಿಸದಡಿಯಿಡದಿರಂಕುಶವಿಕ್ಕಿ ಭೂಭುಜಂ

ಇದು ಚೋದ್ಯವೆಂದು ಗಜದಿಂದಿಳಿದು ನಡೆತಂದು
ಸದಮಳನೆನಿಪ್ಪಲ್ಲಮನ ಕೈವಿಡಿದು ಬಂದು
ಕಂಡಿದದ್ಭುತವೆನುತೆ ಪರಿಜನಕೆ ಕೈವೀಸೆ
ಕಂಡುದೆಲ್ಲಗೆಯ ತೊಡಗಿತು ಮಣ್ಣು ಹೊರಸೂಸೆ
ಕೋಟಿ ಗುದ್ದಲಿಗಳಿಕ್ಕಿದವು ಕೆಲಬಲದಲ್ಲಿ
ನೋಟಕಚ್ಚರಿಯೆನಲ್ಕಗೆಯತೊಡಗಿದುದಲ್ಲಿ
ಕಳಶ ಕೆಳಗಣ ಸಿಂಹಶೂದ್ರಿಕಂ ಮಂಟಪದ
ವಳಯದಿರ್ಕೆಲದ ವೃಷಭಾಂಕಿತ ಶಿವಾಲಯದ
ತುದಿಯಿಂ ಮೊದಲ್ವರಂ ನಿಮಿಷಕ್ಕೆ ಬಿಡಿಸಿದರು
ಮುದದಿಂ ನೃಪಂ ಸಂತಸಂಬಡಲ್ ತೀರ್ಚಿದರು
ಆಗಲರಸಂ ಹರುಷದಿಂದೊಲಿದು ಬಲವಂದು
ರಾಗದಿಂ ದೇವಾಲಯದ ಬಾಗಿಲೊಳ್ನಿಂದು
ಕದಮಂ ತೆರೆದು ನೋಡಲಾರ್ಪ ಧೀರರುಮುಂಟೆ
ಹೆದರದಿದರೊಳಗನಾರಯ್ಯಲಾರ್ಪವರುಂಟೆ
ಎನಲೊಬ್ಬರುಂ ನುಡಿಯದುಸಿರದಿರ್ದುದ ಕಂಡು
ಮನದೊಳಲ್ಲಮನತಿ ವಿರಕ್ತಿಯಂ ಕೈಕೊಂಡು
ಬೆರಲಿಲ್ಲ ಕಿವಿಯಿಲ್ಲ ಮುಡುಹು ಮುಂದಲೆಯಿಲ್ಲ
ಉರವಿಲ್ಲ ಮೂಗಿಲ್ಲ ಸತಿ ಕಾಮಲತೆಯಿಲ್ಲ
ಇನ್ನೇಕೆ ದೇಹದಭಿಲಾಷೆ ಚಿಃ ತೆಗೆಯೆಂದು
ತನ್ನ ಮನದೊಳಗೆ ನಿಶ್ಚಯಿಸಿ ಭರದಿಂ ಬಂದು
ಬೆಸಸು ಬೆಸಸಾನೆ ಪೊಕ್ಕಪೆನೆಂದು ನುಡಿವುತಿರೆ
ಪೊಸತು ಪೊಸತೆಂದರಸನಂದು ಬೆರಗಾಗುತಿರೆ
ಪರಿಜನಂ ಪುರಜನವಿದರಿದರಿದೆನುತ್ತಮಿರೆ
ಪಿರಿಯರಿರ್ದಲ್ಲಮಂ ಕಾರಣಿಕನೆನುತಮಿರೆ
ಭಸಿತಮಂ ಮನವಾರೆಯುದ್ಧೂಳಿಸಿಯೆ ಕೊಂಡು
ಶಶಿಧರನೆ ಶರಣೆನುತೆ ಕಡುನಿಷ್ಠೆ ಕೈಕೊಂಡು
ನೂಂಕಿ ನಿಮಿರ್ದಲ್ಲಾಡಿ ಒಂದು ಕದವಂ ತೆರೆದು
ಭೋಂಕನೊಳಗಂ ಪೊಕ್ಕು ನರಲೋಕಮಂ ಮರೆದು
ಬಗೆ ಬೇರೆ ಪೊಸತಾಗಿ ಗಳಗಳನೆ ನಡೆತಂದು
ಪೊಗುತಂ ಮಹಾಲಿಂಗದಂಘ್ರಿಗೆ ನಮಿಸುತಂದು
ಕೆಲನನೀಕ್ಷಿಸಲನಿಮಿಷಯ್ಯಂಗಳೊಪ್ಪಿರಲು
ತೊಲಗದಲುಗದ ಲಿಂಗ ನಿಜಸಿದ್ಧನೊಪ್ಪಿರಲು
ಬತ್ತಿಯಿಲ್ಲೆಣ್ಣೆಯಿಲ್ಲದ ದೀಪ್ತಿ ಬೆಳಬೆಳಗೆ

ಸುತ್ತಲುಂ ಶಿವಕಳೆಯ ತಂಬೆಳಗು ತೊಳತೊಳಗೆ
ತಿಳಿದ ನಿರ್ಮಳಜಳದ ಘನದ ಬೆಳಗೆಂತಂತೆ
ಬೆಳಗುಗಳ ಬಳಗದೊಳಗಿರ್ದ ಪರಿಯೆಂತಂತೆ
ಕೀಲಿಸಿದ ಪದ್ಮಾಸನಂ ಪುಲಿದೊವಲ್ತನುವ
ನಾಲಿಂಗಿಸಿದ ಭಸಿತವಮಳ ಸೂತ್ರಂ ಮೆರೆವ
ಬೆಳಪ ಕಣ್ಸುಲಿಪಲ್ಲು ಹೊಳೆವ ಮುಖಮಂಡಲಂ
ಇಳಿದ ಜೆಡೆ ರುದ್ರಾಕ್ಷಿಮಾಲೆ ಫಣಿಕುಂಡಲಂ
ಕೆಯ್ಯ ಶಿವಲಿಂಗದೊಳು ನಟ್ಟ ನೋಟಂ ಮೆರೆಯೆ
ಮೆಯ್ಯ ಕೋಮಳತೆ ನಳನಳಿಸಿ ನಯಮಂ ಕರೆಯೆ
ಮಿಗೆ ಬಳ್ಳಿವರಿದಿರ್ದ ಪದನಖಂ ಲತೆಯಾಗೆ
ಸೊಗಯಿಸುವ ಹಸ್ತರಾಗಂ ಸುಪಲ್ಲವವಾಗೆ
ಅರಳ್ದ ನಯನದ್ವಯಂ ವಿಕಸಿತ ಕುಸುಮವಾಗೆ
ಕರತಳದ ಶಿವಲಿಂಗವಂದಮೃತ ಫಳವಾಗೆ
ಕಲ್ಪತರುವಿನ ತೆರದೊಳಿರ್ದನಾ ಶಿವಯೋಗಿ
ಕಲ್ಪನೆಯ ವಶವಲ್ಲದಪ್ರತಿಮ ಶಿವಯೋಗಿ
ಕಣ್ಣಲ್ಲಿ ಜೀವಮಂ ಪಿಡಿದಿರ್ದ ಮಾಳ್ಕೆಯಿಂ
ತಿಣ್ಣವೆನೆ ಲಿಂಗಮಂ ಪಿಡದಿರ್ದನೊಲ್ಮೆಯಿಂ

ಇರೆ ಮಹಾ ಗುರುವನಲ್ಲಮದೇವನೀಕ್ಷಿಸುತೆ
ಹರುಷದಿಂ ಸಾತ್ವಿಕರಸಂ ಪುಟ್ಟಿ ಕಂಪಿಸುತೆ
ಸನ್ನಿಧಿಯ ಗುಣ ಶಿವಜ್ಞಾನಮಂ ಪುಟ್ಟಿಸಲು
ತನ್ನೊಳಗೆ ಶಿವನ ತತ್ವಂ ಘನವನೆಯ್ದಿಸಲು
ಹೊಗಳಲ್ಕೆ ತೊಡಗದಿಂ ಸಿದ್ಧಶಿವಯೋಗಿಯಂ
ಮಿಗೆ ಮೋಕ್ಷಲಕ್ಷ್ಮಿಯೊಡಗೂಡಿರ್ದ ಭೋಗಿಯಂ
ದೇವ ನಿರ್ಮಳ ನಿತ್ಯ ನಿರುಪಮ ಮಹಾಯೋಗಿ
ದೇವ ನಿರ್ಮಳ ನಿಜಾನಂದಕರ ಶಿವಯೋಗಿ
ಶಿವನನೊಚ್ಚತವಾಗಿ ಕೈಕೊಂಡ ದೃಢಯೋಗಿ
ಭವನ ಮೂರ್ತಿಗೆ ಸೋಲ್ತು ಕಣ್ಣಿಟ್ಟಚಲಯೋಗಿ
ನೋಟದೊಳು ಲಿಂಗವಂ ಸೆರೆಗೆಯ್ದು ಶಿವಯೋಗಿ
ಕೂಟದೊಳು ಕಣ್ಣೆ ತನುವಾದ ಬೆಳಗಿನ ಯೋಗಿ
ಮದನನಂ ಮರ್ದಿಸಿಯೆ ಸಂದಿರ್ದಭವಯೋಗಿ
ಹೃದಯದೊಳು ಭಕ್ತಿಯಂ ತಳೆದಿರ್ದ ಶಿವಯೋಗಿ

ಎಂದು ಪೊಗಳುತ್ತೆ ಕೈಯೆತ್ತಿ ನಿಲಲಲ್ಲಮಂ
ಸಂದ ಶಿವಯೋಗಿ ಹಿಗ್ಗುತ್ತವರಿದೆಲ್ಲಮಂ
ಮನದೊಳಗೆ ಕಾರಣಿಕನಿವನೆಂದು ನಿಶ್ಚಯಿಸಿ
ತನಗೆ ತನುವಿನ ತೊಡಕು ಸಾಕೆಂದು ನಿಶ್ಚೈಸಿ
ಗಳಿಲನಲ್ಲಮ ತನ್ನ ಕೈಯೊಡ್ಡಲಾಕ್ಷಣದೆ
ಇಳುಪಿದಂತಾಯ್ತು ಶಿವಲಿಂಗಂ ನಿರೀಕ್ಷಣದೆ
ನೋಟದಿಂದಂಗಯ್ಯೊಳಿಕ್ಕಿದಂ ಲಿಂಗಮಂ
ಕೂಟದಚ್ಚಳಿಹದಸುವೆರಸಿ ಶಿವಲಿಂಗಮಂ
ಲಿಂಗದೊಡನೇ ಬೆರಸಿ ಹೋದುದಾತನ ಜೀವ
ಅಂಗಂ ಮಲಂಗಿದುದು ಭಿತ್ತಿಯಂ ಬರಿ ಭಾವ
ಆಗಳಲ್ಲಮನವಯವಂ ಲಿಂಗಸೋಂಕಿಂದೆ
ರಾಗದಿಂದಂಕುರಿಸಿ ನಳನಳಿಸಿ ಚೆಲ್ವಿಂದೆ
ಪೊರಮಟ್ಟನಲ್ಲಮಂ ಗೊಗ್ಗೇಶ್ವರಂ ಮೆಚ್ಚೆ
ಬೆರಗಾಗಿ ನೋಡಲಮ್ಮದೆ ನೃಪಂ ಕಣ್ಮುಚ್ಚೆ
ಹೋಗುತಿರ್ದಂ ಲಿಂಗವೆತ್ತೆತ್ತಲೊಯ್ದತ್ತ
ಆಗುತಿರ್ದುದು ಕೌತುಕಂ ಪುರಜನಕ್ಕಿತ್ತ
ನೋಡಿದೆತ್ತಣ ಕಾಮಲತೆಯೆತ್ತಣಲ್ಲಮಂ
ಕೂಡಿದುದು ಪುಣ್ಯಫಲವಿಂತಿವಂಗೆಲ್ಲಮಂ
ಎತ್ತಣದು ಕಳಸವೆತ್ತಣ ಶಿವಾಲಯವಿವಂ
ಎತ್ತಣದು ಶಿವ ಶಿವಜ್ಞಾನಸುಖದನುಭವಂ
ಇದ್ದಿದ್ದು ಬಲ್ಗರಂ ಹೊಡೆದುದಿವನಂ ನೋಡ
ಹೊದ್ದದಂತಾಯ್ತು ಸಂಸಾರಮಿವನಂ ನೋಡ
ಕಾಮಲತೆಗೊಲಿದಿರ್ದನೆಂಬುದದು ಪುಸಿ ನೋಡ
ಪ್ರೇಮವದು ಶಿವಲಿಂಗಪೂಜೆಯೆ ದಿಟಂ ನೋಡ
ಅಲ್ಲದಂ[ದಿ]ಂದಿವಂಗೀ ಪದಂ ಸಾರ್ವುದೇ
ಬಲ್ಲಿತೆನಿಸಿದ ಶಿವನ ಭಕ್ತಿಯೊಳಸಾರ್ವುದೇ
ಅಂಗೈಯೊಳಮೃತಫಳಮಂ ಪಡೆದನಲ್ಲಮಂ
ಲಿಂಗದ ನಿಜವನೊಚ್ಚತಂಗೊಂಡನಲ್ಲಮಂ
ಸಾಧನಚತುಷ್ಟಯದ ಹಂಗಿಲ್ಲದಲ್ಲಮಂ
ಬೋಧೆಯಕ್ಕರವರಿದು ನಿಜವಾದನಲ್ಲಮಂ
ಪೊರೆದ ಮಾಯೆಗೆ ಪುಸಿಕನಾದನಿಂತಲ್ಲಮಂ
ಬೆರಸಿದ ಗುಣತ್ರಯಕೆ ಬೇರಾದನಲ್ಲಮಂ
ದೇಹಾದಿ ಕರಣಮಂ ಮೀರಿರ್ದನಲ್ಲಮಂ

ಮೋಹವರತುದು ತಾನುತಾನಾದನಲ್ಲಮಂ
ಕರತಳಾಮಳಕವಾದುದು ತತ್ವವೀತಂಗೆ
ಪರಮ ಶಿವಯೋಗಿಗಳ ನಿಜವಾದುದೀತಂಗೆ
ಶಶಿರವಿಗಳಂತೆ ಬೆಳಬೆಳಗುತಿರ್ದಂ ನೋಡ
ಉಸುರಲಿಲ್ಲದ ಪರಬ್ರಹ್ಮವಾದಂ ನೋಡ
ಮುಡಿ ಬಿಚ್ಚಿದುದನರಿಯ ನುಡಿಸುತಿರ್ದುದನರಿಯ
ಒಡನೆ ಬರ್ಪರನರಿಯನಡವಿಯೂರೆಂದರಿಯ
ನಾಳಿಗೊಂಬರನರಿಯ ಹೊಗಳ್ವರಂ ಮುನ್ನರಿಯ
ನಾಳೊಡೆಯನೆಂದರಿಯನೇಳು ಜಗವೆಂದರಿಯ
ಆಹ ಪರಮಜ್ಞಾನದರಿವಿನೆಚ್ಚರ ಮರವೆ
ಆಹ ಹುಸಿ ಜಗ ದಿಟಂ ಹುಸಿ ಬೆರಸದಚ್ಚರಿವೆ

ಎಂದು ಪುರಜನವಿತ್ತ ಕೌತುಕಂ ಬಡುತಮಿರೆ
ಬಂದನಲ್ಲಮನರಣ್ಯಂ ಹೆಚ್ಚಿ ಹಿಗ್ಗುತಿರೆ
ಎಲೆಲೆ ಶಿವಲಿಂಗದೃಢನೀ ಬಂದನೀ ಬಂದ
ನೆಲೆಲೆ ನಿರ್ಮಳಸಿದ್ಧನೀ ಬಂದನೀ ಬಂದ
ಎಂಬಂತೆ ಕೋಗಿಲೆಗಳಲ್ಲಿ ಕರೆವುತ್ತಮಿರೆ
ಇಂಬಿನಿಂದರಗಿಳಿಗಳಡಿಗಡಿಗೆ ನುಡಿವುತಿರೆ
ನಡೆದುದೇ ಬಟ್ಟೆಯಾದುದು ಶಿವನ ಮದಕರಿಗೆ
ನುಡಿದುದೇ ವೇದವಾದುದು ಲಿಂಗವಂತಂಗೆ
ಮುಟ್ಟಿದ ಮರಂ ಮನುಜರಾಗಿ ನಡೆವವು ಕೆಲವು
ಮೆಟ್ಟಿದ ಪ್ರಾಣಿ ಸಗ್ಗಕ್ಕೆ ಸಲುವವು ಕೆಲವು
ಮರನೊಡನೆ ನೆಳಲಾಗಿ ಬರುತಮಿರ್ಪವು ನೋಡ
ಗಿರಿ ಕೆಲಕೆ ಸಾರ್ದು ಸೈವಟ್ಟೆಗೊಡುವವು ನೋಡ
ಹುಲಿ ಹುಲ್ಲೆ ಫಣಿ ನಕುಲ ಸಿಂಗವಾನೆಗಳಲ್ಲಿ
ಕುಲವೈರವಂ ಬಿಟ್ಟು ನಿಂದು ನೋಡುವವರಲ್ಲಿ
ಇಂತು ನೋಡುತ್ತಮಿರಲಲ್ಲಮಂ ಬರುತಿರಲು
ಕಂತು ಹರನವತಾರನೆಂಬಂತೆ ನಡೆತರಲು
ಕರತಳದ ಸಿಂಹಾಸನದಲಿರ್ದ ಲಿಂಗಕ್ಕೆ
ಚರಿತದಿಂ ವನದೇವತೆಯರೆಯ್ದೆ ಮೈಯಿಕ್ಕೆ
ನುತಚೂತವೆಳೆದಳಿರ ಹೀಲಿದಳೆವಿಡಿದು ಬರೆ
ಲತೆ ಪುಷ್ಪಮಂಜರಿಯ ಚಾಮರವನಿಕ್ಕುತಿರೆ

ಶಿವಲಿಂಗರಾಜ್ಯಸುಖದೊಳಗಿರ್ದನಲ್ಲಮಂ
ಭವನ ಕರುಣಾಲೋಕನದೊಳಿರ್ದನಲ್ಲಮಂ

ಇರುತೆ ಲಿಂಗಕ್ಕೆ ನೋಟದೊಳೆ ಮಜ್ಜನಕೆರೆದು
ಅರಲ್ದಕ್ಷಿಯೆಂಬ ಹೂವಿಂದೆ ಪೂಜೆಯ ಮೆರೆದು
ನರುಸುಯ್ಯ ಕಂಪಿಂದೆ ನವಧೂಪಮಂ ಕೊಟ್ಟು
ನೆರೆ ಮನದ ಬೆಳಗಿನಾರತಿಯೆತ್ತಿ ಪೊಡಮಟ್ಟು
ನಿಟ್ಟೆಯಿಂದ ನೇಹಮುಮನಾರೋಗಿಸಲ್ಕೊಟ್ಟು
ಕಟ್ಟಳ್ಕರಚಲಿತಾನಂದಮಂ ಮುಂದಿಟ್ಟು
ಸಕಳ ಸುಖಮಂ ಕಣ್ಗಳಿಂದೆ ಕೈಗೂಡುತಂ
ಸಕಳ ಭೋಗಂಗಳಂ ನೋಟದಿಂ ನೀಡುತಂ
ತರುನಿಕಾಯದ ಕೋಟರಂಗಳೊಳಗಲ್ಲಮಂ
ಗಿರಿಕುಲದ ಗಹ್ವರಂಗಳೊಳೆಲ್ಲವಲ್ಲಮಂ
ನೆರೆದ ನಿರ್ಮಳದ ಪುಳಿನ ಸ್ಥಳದೊಳಲ್ಲಮಂ
ವರ ವಾಹಿನೀಕುಳದ ಕೂಲದೊಳಗಲ್ಲಮಂ
ಚಂದ್ರಕಾಂತದ ಶಿಲೆಯ ತಂಪಿನೊಳಗಲ್ಲಮಂ
ಇಂದ್ರನೀಲದ ಮಣಿ ಶಿಲಾತಳದೊಳಲ್ಲಮಂ
ಪರಿಮಳದ ಚಂದನದ ತರುಗಳೊಳಗಲ್ಲಮಂ
ಕುರವಕದೊಳೋಯರದ ಕುಟ್ಮಳದೊಳಲ್ಲಮಂ
ಸಂಪಗೆಯ ಬಿ[ರಿ]ಮುಗುಳ ಪೂವಸೆಯೊಳಲ್ಲಮಂ
ಸೊಂಪೆಸೆವ ಕೆಂದಳಿರ ತಾಣದೊಳಗಲ್ಲಮಂ
ಮಾಮರದ ಮಾಧವಿಯ ಮಂಟಪದೊಳಲ್ಲಮಂ
ತಾವರೆಯ ತಣ್ಣೆಳಲ ತಂಪಿನೊಳಗಲ್ಲಮಂ
ಮಲ್ಲಿಗೆಯ ಮಾಲತಿಯ ಹೊದರಿನೊಳಗಲ್ಲಮಂ
ಮೊಲ್ಲೆಯಿರವಂತಿಗೆಯ ಮೊತ್ತದೊಳಗಲ್ಲಮಂ
ಮರದೊಳಗನಂತದಿನವಿರುತಿರ್ಪನಲ್ಲಮಂ
ಗಿರಿಗಳೊಳನೇಕ ಮಾಸವನಿರ್ಪನಲ್ಲಮಂ
ನದಿಯೊಳಗೆ ನೂರುವತ್ಸರವಿರ್ಪನಲ್ಲಮಂ
ಹೊದರೊಳಗೆ ಸಿಲುಕಿನಿಂದಿರುತಿರ್ಪನಲ್ಲಮಂ
ಶಿವನನೀಕ್ಷಿಸುತೆಲ್ಲವಂ ಕಾಣ್ಬನಲ್ಲಮಂ
ಭವನನೀಕ್ಷಿಸುತೆಲ್ಲರೊಳಗಿರ್ಪನಲ್ಲಮಂ
ಎಲ್ಲಿರ್ದನಲ್ಲಿಯೆ ವಸಂತಮಾಸಂ ನೋಡ
ಎಲ್ಲಿರ್ದನಲ್ಲಿ ದಿವ್ಯಕ್ಷೇತ್ರಮುಂ ನೋಡ

ಇಂತು ಶಿವಲಿಂಗವೆಂತಿರಿಸಿದಂದದೊಳಿರುತೆ
ಸಂತತಂ ಶಶಿಧರಂ ಬರಿಸಿದಂದದೆ ಬರುತೆ

ಬರುತೆ ಬಸವಣ್ಣನಂ ಕಂಡು ಮಾತಾಡುತಂ
ಹರನ ನಿಲವಿನ ಪರಿಯನೊಲ್ಮೆಯಿಂ ತೋರುತಂ
ನಡೆತಂದು ಚೆನ್ನ ಸೊನ್ನಲಿಗೆ ಪುರಕೈತಂದು
ಮೃಡಮೂರ್ತಿ ಸಿದ್ಧರಾಮನ ಸಾರ್ಗೆ ನಡೆತಂದು
ಕಲಿಯುಗಂ ಪೊಲ್ಲೆಂದು ಬುದ್ಧಿಯಂ ಪೇಳುತಂ
ಸಲೆ ಗೊಪೆಗೆ ನಡುವುದೆಂದೊಲುಮೆಯಂ ತೋರುತಂ
ಶ್ರೀಪರ್ವತಾಭಿಮುಖನಾದನಲ್ಲಮದೇವ
ಆ ಪರ್ವತಂ ಮುಟ್ಟೆ ಬಂದನಲ್ಲಮದೇವ
ಅದರೊಳಗೆ ಕೈಕಾಲ್ಗಳುಳ್ಳ ಸರ್ಪಂಗಳಂ
ಮುದದಿಂದೆ ಮಾತಾಡುತಿರ್ಪ ವೃಕ್ಷಂಗಳಂ
ನಡೆವ ಗಿಡಗಳನಷ್ಟವದನದ ಮೃಗಂಗಳಂ
ಅಡಿಗಡಿಗುರಿವುತಿರ್ಪ ದಿವ್ಯೌಷಧಂಗಳಂ
ಪಾಡುವ ಲತಾವಳಿಗಳಂ ಸುಳಿವ ಕಲ್ಗಳಂ
ನೋಡುವಚಲಂಗಳನೆರಂಕೆಯ ಗಜಂಗಳಂ
ನಗುವ ಪೆರ್ಮರನ ನೋಡುವ ಪಲವು ಗುಹೆಗಳಂ
ಬಗೆದುದಂ ಕುಡುತಿರ್ಪ ಚೂತ ವೃಕ್ಷಂಗಳಂ
ಇವು ಮೊದಲನೇಕಾದ್ಭುತಂಗಳಂ ನೋಡುತಂ
ಶಿವಶಿವಯೆನುತ್ತೆ ಕೌತುಕಮ ನೆರೆ ತಾಳುತಂ
ಕದಳೀವನದ ಬಟ್ಟೆಗೊಂಡನಲ್ಲಮದೇವ
ಅದಿರದ ಮಹಾಮಹಿಮ ಸಿದ್ಧನಲ್ಲಮದೇವ

ಅಲ್ಲಿ ಬರುತಿರೆ ಭೈರವಂ ಕಂಡು ಕೈಮುಗಿದು
ಅಲ್ಲಮಂ ಕಾರಣಿಕನೆಂದು ಮನದೊಳಗರಿದು
ತೋರಿದಂ ಶಿವನಲ್ಲಿಗೊಯ್ವ ಸೈವಟ್ಟೆಯಂ
ಮೀರಿ ಬರುತಿರಲಲ್ಲಮಯ್ಯನತಿನಿಷ್ಠೆಯಿಂ
ಮುರಿದಿರ್ದ ಹಾವುಗಳ ಬಳ್ಳಿಯಂ ದಾಂಟುತಂ
ಘರಿಘರಿಲನರಿವ ಬಾಳೆಗಳನಲ್ಲಾಡುತಂ
ನೆರೆದಿರ್ದ ವಿಷಕನ್ನಿಕೆಯರುಮಂ ಸೋಂಕುತಂ
ಪರಿವ ನಂಜಿನ ಗಾಳಿಗೆಳಸಿ ಮೈಯೊಡ್ಡುತಂ
ಉರಿಯ ಹಳ್ಳಂಗಳಂ ಹರುಷದಿಂ ದಾಂಟುತಂ

ಉರವಣಿಪ ಭೂತವೇತಾಳರಂ ನಿಲಿಸುತಂ
ನಿಂದಲ್ಲಿ ತಪವಿರ್ದ ಹನುಮನಂ ನೋಡುತಂ
ಬಂದೊಡ್ಡಿದಾಯುಧಂಗಳ ಮೆಟ್ಟಿ ನಡೆವುತಂ
ಮಾನಿಸರ ಮೋರೆಯಾನೆಯ ದೇಹದವರ್ಗಳಂ
ನಾನಾವಿಧದ ಕೈಯ ಕಣ್ಣ ಕಾಲವರ್ಗಳಂ
ಗಾವುದಗಲದ ನೀಳದೊಂದೊಂದಿರುಂಪೆಯಂ
ಸಾವಿಲ್ಲದಿರ್ಪ ಸಿದ್ಧರ ಚೆಲ್ವ ಮೂರ್ತಿಯಂ
ನೋಡುತ್ತೆ ಹರಿವ ಕೆಂಡದ ತೊರೆಯನುತ್ತರಿಸಿ
ಕೂಡೆಯರಳಿರ್ದ ವಿಷಪುಷ್ಪಮಂ ವಾಸನಿಸಿ
ಪೇಳೆ ಪವಣಿಲ್ಲದದ್ಭುತಗಳಂ ಕಾಣುತಂ
ಕೇಳಬಾರದ ಭಯಾನಕಮುಮಂ ಕಾಣುತಂ
ಪೊಸತೆನುತ್ತಲ್ಲಮಪ್ರಭು ನಡೆದು ಬರುತಮಿರೆ
ಅಸಮಾಕ್ಷನವತಾರವೆಂಬಂತೆ ನಡೆವುತಿರೆ

ಇಂತು ಬರುತಿರೆ ಕಾಣಲಾಯ್ತು ಕೈಲಾಸವದು
ಶಾಂತಾರ್ಕಕೋಟಿಕಿರಣಂಗಳಂ ಬೆಳಗುತದು
ಸಸಿಯ ತಾಯ್ವನೆಯಂತಿರಿರ್ದುದಾ ರಜತಗಿರಿ
ಪೆಸರ ದೇವರ ಪುಣ್ಯದಂತಿರ್ದುದಭವಗಿರಿ
ಆ ಗಿರಿಗೆ ಸಾಲ್ಗೊಂಡ ಸುರರ ಸಂದಣಿಯೊಳಗೆ
ನಾಗೇಂದ್ರರಮರೇಂದ್ರ ದೇವತಿಂತಿಣಿಯೊಳಗೆ
ಕಿನ್ನರರ ಖೇಚರರ ಸಿದ್ಧರೊತ್ತೊತ್ತೆಯೊಳು
ಪನ್ನಗರ ಗಂಧರ್ವಕುಲದ ನಡುವಳ್ತಿಯೊಳು
ಹರನೋಲಗದ ಹಿರಿಯ ಬಾಗಿಲ್ಗೆ ನಡೆತಂದು
ಹರಿಯಜ ಸುರಾವಳಿಯ ಸಂದಣಿಯೊಳಂ ನಿಂದು
ಬರುತಿರಲ್ದೂರದಿಂದಲ್ಲಯ್ಯನಂ ಕಂಡು
ಹರನಿತ್ತಬಾಯಿತ್ತ ಬಾಯೆನುತೆ ಕೈಕೊಂಡು
ಕರೆಯೆ ಲಿಂಗದ ನೋಟವಚ್ಚಳಿಯದೆಯ್ತಂದು
ಹರುಷದಿಂ ಹರ ಸಭಾಭವನದ ನಡುವೆ ನಿಂದು
ಮೈಯಿಕ್ಕಲೆಂದಲ್ಲಮಂ ಕೊಂಕಿ ಬಾಗುತಿರೆ
ಕೈಯ ಲಿಂಗಂ ಸಹಿತವಾಗದೆಂದೆನುತಮಿರೆ
ಹರನ ಚರಣಕ್ಕೆರಗಿ ಕುಳ್ಳಿರ್ದನಲ್ಲಮಂ
ಪರಮೇಶ್ವರಂ ಕೌತುಕಂಬಡುತ್ತೆಲ್ಲಮಂ
ಕೇಳ್ದು ನೆರೆ ಹೋದ ಬಂದಾದ ವೃತ್ತಾಂತಮಂ

ತಾಳ್ದು ಮನದೊಳಗಳ್ಕರಿಂದೆ ಸಂತೋಷಮಂ
ಮುನ್ನಿನಂದದೊಳೆ ನಿರ್ಮಾಯವೆಸರೊಳಗಿರಿಸೆ
ಮನ್ನಿಸುತ್ತಲ್ಲಿ ಗಣಪದವಿಯೊಳ್ ಸ್ಥೈರಿಸೆ
ಶಿವನ ಸಾರೂಪ್ಯದಿಂದೊಪ್ಪಿರ್ದನಲ್ಲಮಂ
ಭವನ ಸುಪ್ರಭೆಯೊಳಗೆ ಸಂದಿರ್ದನಲ್ಲಮಂ
ಪರಮ ತತ್ವಾಕಾರನಾಗಿರ್ದನಲ್ಲಮಂ
ನಿರುಪಾಧಿಕಜ್ಯೋತಿಯಾಗಿರ್ದನಲ್ಲಮಂ ೪೪೦
ಇಂತು ಭಕ್ತರ ಪುಣ್ಯಲೀಲೆಯಂ ನೋಡುತಂ
ಸಂತತಂ ನತಜನವನೊಲ್ದು ಕೊಂಡಾಡುತಂ
ಕಾಮಕಾನನದವಾನಳರೂಪನೊಪ್ಪಿದಂ
ಸೋಮಸೂರ್ಯಾಗ್ನಿ ನೇತ್ರತ್ರಯನು ಒಪ್ಪಿದಂ
ಗಿರಿಜಾಮುಖಾಬ್ಜ ಭಾಸ್ಕರರೂಪನೊಪ್ಪಿದಂ
ಗುರುಮೂರ್ತಿ ಹಂಪೆಯ ವಿರೂಪಾಕ್ಷನೊಪ್ಪಿದಂ ೪೪೬

ಧರೆ ಬೆರಗಾಗಲ್ ಸುರಕುಲ
ವರಿದರಿದೆನಲಲ್ಲಮಯ್ಯನಂ ಮೆರೆದ ಮಹೇ ।
ಶ್ವರನೊಲ್ದು ಭಕ್ತಿಯಂ ಸಾ
ದರದಿಂದೆನಗೀವುತಿರ್ಕೆ ಹಂಪೆಯ ರಾಯಂ ॥

❖❖

# ೧೦. ಬಸವೇಶ್ವರದೇವರ ರಗಳೆ

## ಸ್ಥಲ ೧

ಶ್ರೀಮದ್ಬ್ರಹ್ಮಾಚ್ಯುತೇಂದ್ರಾಸುರಗುರು ಸುಮನೋಮೌಲಿವಿನ್ಯಸ್ತಪಾದಂ
ಹೇಮಾಗಾಗಾರಾನೀಶಂ ಮುನಿಜನಹೃದಯಾಂಭೋಜವಾಸಂ ಭವಾನೀ
ವಾಮಾಂಗಾಲಿಂಗನಾ ಭಾಸುರನಿಧಿ ಮೆರೆದಂ ಭೂಮಿಯೊಳ್ ಚಂದ್ರಚೂಡಂ
ಪ್ರೇಮಂ ಕೈಮಿಕ್ಕು ಪಂಪಾಪುರಪತಿ ಬಸವಂಗೊಲ್ದು ಸಂತೋಷದಿಂದಂ ॥

ಶ್ರೀ ಮೇರುಮಧ್ಯದೊಳಗೊಪ್ಪುತೆ ವಿಳಾಸದಿಂ
ಪ್ರೇಮದಿಂ ಹಂಪೆಯ ವಿರೂಪಾಕ್ಷನೊಪ್ಪದಿಂ
ಅಪ್ರತಿಮನಾನಂದಮೂರ್ತಿಯೊಪ್ಪುತ್ತಿರಲು
ಸರ್ಪಭೂಷಣನೊಪ್ಪದಿಂದೊಪ್ಪಿ ಕುಳ್ಳಿರಲು
ಕೆಂಜೆಡೆಯ ಚಂದ್ರಕಳೆಯರಸನೊಪ್ಪುತ್ತಿರಲು
ರಂಜಿಸುವ ಪುಲಿಚರ್ಮದಭವನೊಪ್ಪುತ್ತಿರಲು

ಆತನ ವಿಳಾಸವದನೇನೆಂಬೆನೆಸೆದಿರಲು
ನೂತನಂ ವಿಳಾಸದಿಂ ಗಿರಿಜೆ ವಾಮದೊಳಿರಲು
ಇಂತು ಸರ್ವೇಶ್ವರಂ ಹರುಷದಿಂದೊಪ್ಪಿರಲು
ಶಾಂತಾರ್ಕಕೋಟಿಪ್ರಭಾ ಪುಂಜನೆಸೆದಿರಲು
ಸಿರಿಸರಸ್ವತಿಯರಂದೊಲಿದು ಚಾಮರವಿಕ್ಕೆ
ಅರರೆ ಇಂದ್ರಾಣಿಯರು ನಲಿದು ಸೀಗುರಿಯಿಕ್ಕೆ
ರುದ್ರಕನ್ನೆಯರೊಲಿದು ಸಿಂಗರಿಸಿ ಕುಳ್ಳಿರಲು
ಉದ್ದಂಡನುಂ ವೀರಭದ್ರನುಂ ಕುಳ್ಳಿರಲು
ಗಣಪನುಂ ಸ್ವಾಮಿಯುಂ ಕೆಲಬಲದೊಳೊಪ್ಪಿರಲು
ಗಣನಿಕರ ಘುಳುಘುಳಿಸುತುವರವಣಿಸಿ ಕುಳ್ಳಿರಲು

ಬೊಮ್ಮಾದಿ ನಿಚಯವಂತೊಂದೆಸೆಯೊಳೊಪ್ಪಿರಲು
ಅಮ್ಮಮ್ಮ ಹರಿನಿಕರ ಹರುಷದಿಂದೊಪ್ಪಿರಲು
ಮನುಗಳುಂ ಮುನಿಗಳುಂ ಸಿದ್ಧವಿದ್ಯಾದಿಗಳು
ಅನುಪಮನ ಕೆಲಬಲದೊಳೊಪ್ಪಿ ತೋರುತ್ತಿರಲು
ವೃಷಭಮುಖ ಹರುಷದಿಂದೊಪ್ಪಿ ಕುಳ್ಳಿರುತಿರಲು
ವೃಷಭರಾಜಂ ಹರುಷದಿಂದಿಪ್ಪ ಸಮಯದೊಳು

ಮುಂತೆ ಕಿನ್ನರರು ನವರಸದಿ ಪಾಡಲ್ಕಾಗ
ನಂತರಂ ಭೃಂಗೀಶ ನರ್ತನಕೆ ನಿಂದಾಗ
ಪೊಸಪರಿಯ ಗತಿಗಳಂ ನಟಿಸಿ ತೋರುತ್ತಮಿರೆ
ಅಸಮಾಕ್ಷ ಕರುಣದಿಂ ನೋಡಿ ನಸುನಗುತಮಿರೆ
ಕಂಪುಳ್ಳ ಸಂಪಗೆಯ ಪೂಗಳಂ ತಿರಿತಂದು
ಪೆಂಪಿನಿಂ ಶಶಿಧರನ ಸಿರಿಮುಡಿಗೆ ಬೇಕೆಂದು
ತಂದೊರ್ವ ಮಾಲೆಗಾರಂ ಭರದಿ ಕೊಡಲಲ್ಲಿ
ಮುಂದಿರ್ದ ವೃಷಭಮುಖನಂ ಕರೆವುತಿರಲಲ್ಲಿ
ಹರುಷದಿಂದೆಯ್ತಂದು ಕೈಮುಗಿದು ನಿಂದಿರಲು
ಹರನ ಕೃಪೆಯಾಯ್ತೆಂದೆನುತೆ ಪುಳಕಿಸುತ್ತಿಲು
ನೀನೀ ಪ್ರಸಾದಮಂ ಶರಣತತಿಗೀಯೆನುತೆ
ಮಾನನಿಧಿ ವೃಷಭಮುಖಗಂದೀಯೆ ಪುಳಕಿಸುತೆ
ಮುಂದೆ ಪರಮೋತ್ಸಾಹದಿಂದುಕ್ಕಿ ಮೈಯಿಕ್ಕಿ
ಇಂದುಮೌಳಿಯ ಕೃಪೆಗೆ ಮತ್ತೊಮ್ಮೆ ಮೈಯಿಕ್ಕಿ
ಕುಣಿವುತಂ ಕುಕಿಲಿರುವುತಂ ಕೊರ್ವಿ ಪರ್ವುತಂ
ತ್ರಿಣಯನನ ಬೆಸನ ನಾಂ ಪಡೆದೆನೆಂದುರ್ವುತಂ
ಪರವಶೀಭೂತವಾಗುತ್ತೆ ಮರಹಂ ಹೊತ್ತು
ಹರುಷದಿಂ ದೇವಿಯರ್ಗಿತ್ತು ಗಣಪತಿಗಿತ್ತು
ಬಿರುದ ಗಣನಿವಹಕ್ಕೆ ಹರಿಯಜಸುರರ್ಗಿತ್ತು
ವರ ಮುನಿಜನಕ್ಕೆ ಮನುನಿವಹಕ್ಕೆ ನಲಿದಿತ್ತು
ಶಿವಪುತ್ರನಂ ಸ್ಕಂದದೇವನಂ ಮರೆವುತಂ
ತವೆ ಸಭೆಯೊಳಿರ್ದರ್ಗೆ ವೃಷಭಮುಖನೀವುತಂ
ಎಲ್ಲರ್ಗೆ ಕೊಟ್ಟೆನೆಂದಭವಂಗೆ ಬಿನ್ನೈಸೆ
ಅಲ್ಲಿ ಎನಗೀಯನೆಂದಾ ಸ್ವಾಮಿ ಬಿನ್ನೈಸೆ
ಕೊಟ್ಟೆನೆಂದಾ ವೃಷಭಮುಖನಲ್ಲಿ ನುಡಿವುತಿರೆ
ಕೊಟ್ಟುದಿಲ್ಲೆನಗೆ ಪುಸಿ ಮಾತದೇಕೆನುತಮಿರೆ

ಎನೆ ವೃಷಭಮುಖನಲ್ಲಿ ಕೊಟ್ಟೆನೆರಡಿಲ್ಲಯ್ಯ
ನಿನಗೆ ಕೊಡದಿರ್ಪನೇ ಕೇಳು ಕೇಳೆನ್ನಯ್ಯ

ಎಂದಡೆ ಕುಮಾರಕಂ ತಂದೆಯ ಮೊಗಂ ನೋಡಿ
ಒಂದುವಂ ನುಡಿಯಲರಿಯದೆ ನೋಡುತಿರೆ ಬಾಡಿ
ಮಗನ ಕರುಣಾಸ್ಯಮಂ ಚಂದ್ರಚೂಡಂ ಕಂಡು
ನಗುತೆತ್ತಿ ತಕ್ಕೈಸುತಂ ನಿರೋಧಂಗೊಂಡು
ಕಂಡಯ್ಯ ವೃಷಭಮುಖ ದೇವಿಯರು ನೋಡುತಿರೆ
ತಂಡತಂಡದ ಗಣೇಶಪ್ರತತಿ ನೋಡುತಿರೆ
ಹರಿಯಜರು ಸುರಪ ಸುರರಾಜರ ಸಮಕ್ಷಮದೊಳು
ಅರವರಿಸದೀ ಸಭೆಯೊಳೆನ್ನಯ ಸಮಕ್ಷಮದೊಳು
ಹುಸಿನುಡಿವರೇ ಕೊಡದೆ ಎನ್ನಯ ಕುಮಾರಂಗೆ
ಎಸೆವ ನಿಜಭಕ್ತಿಭೂಷಣನೆನಿಪ ವೀರಂಗೆ
ಎಮಗೆ ಕೊಡದಿರ್ದಡಂ ಸೈರಿಸುವೆವಾವಯ್ಯ
ವಿಮಲ ಶಿಶುವಿಂಗೆ ಹುಸಿ ನುಡಿಯೆ ಸೈರಿಸೆವಯ್ಯ
ಇದರಿಂದವೊಂದು ಜನನಂ ನಿನಗೆ ದೊರಕಿತ್ತು
ಮುದದಿಂದೆ ಹೋಗಯ್ಯ ಜನನವಂ ನೀ ಹೊತ್ತು
ಧರಣಿಯೊಳು ವೃಷಭಮುಖ ಹುಟ್ಟೆಂದು ಬೆಸಸುತಿರೆ
ಕೊರಗಿ ಕಳೆಗುಂದಿ ಬಿನ್ನೈಸಿದಂ ಕೇಳುತಿರೆ
ಇಂದುಧರ ಚಿತ್ತೈಸೆನುತ್ತಂದು ಕೈಮುಗಿದು
ತಂದೆ ಶರಣಾಗು ಶರಣೆನಗೆ ಹುಟ್ಟಲ್ಕರಿದು
ಕಾಮಾರಿ ಷಡುವರ್ಗದುಬ್ಬರಂ ಧರೆಯಲ್ಲಿ
ಸೋಮಧರ ತಾಪತ್ರಯದ ಬೇಗೆ ಪಿರಿದಲ್ಲಿ
ಹುಸಿ ದಂಬು ಹಿಂಸೆ ಮೂರ್ಖತೆಯುಂಟು ಧರೆಯೊಳಗೆ
ವಶವಲ್ಲದಾಲೀಢವನ್ಯಾಯವಿಳೆಯೊಳಗೆ
ಅಲ್ಲಿ ಜನಿಯಿಸಿ ಬಳಿಕ್ಕೆಂದು ಬಪ್ಪೆಂ ದೇವ
ಎಲ್ಲ ತೆರದಿಂ ನಿಮಗೆ ದೂರವಪ್ಪೆಂ ದೇವಂ
ಕರುಣಿಪುದು ಜಲಶನಯನನಯನಚರಣಾಭರಣ
ಶರಣಸಂಘಾತ ಸಂಸಾರಭಯನಿರುಹರಣ

ಎನೆ ಶಿವಂ ನಸುನಗುತ್ತಂಜಬೇಡಲೆ ಮಗನೆ
ನಿನಗೆ ಹಿತನಾಗಿ ಸಖನಾಗಿ ಬಪ್ಪೆಂ ಮಗನೆ
ಇಲ್ಲಿ ಪ್ರಸಾದಮಂ ಕುಡದಿರ್ದ ಬಳಿವಿಡಿದು

ಅಲ್ಲಿ ಪ್ರಸಾದಮಂ ವಾದಿನಿಂದಂ ಪಡೆದು
ಗಣಸಮಕ್ಷಮದ ಪುಸಿಗೆ ಶರಣರ್ಗೆ ಮಾಡುತ್ತೆ
ಅಣಿಯರದೊಳೆನ್ನ ಭಕ್ತಿಯನಿಳೆಗೆ ಕೂಡುತ್ತೆ
ಎನ್ನ ಪ್ರಸಾದಸಾಮರ್ಥ್ಯಮಂ ತೋರುತಂ
ಮನ್ನಣೆಯೊಳಿಲ್ಲಿಗೆಯ್ತಪ್ಪುದಿದು ನಿರ್ಮಿತಂ
ವೃಷಭಮುಖ ವೃಷಭನಾಮಂ ಪೆಸರ್ನಿನಗಾಗೆ
ವೃಷಭೇಂದ್ರನಲ್ಲಿ ನಿನಗಿಹಪರಕೆ ಗುರುವಾಗೆ
ಮೆರೆದಪಂ ಹೋಗಯ್ಯ ಹೋಗೆಂದು ಬೆಸಸುತಿರೆ
ಕರೆಗೊರಲನಕ್ಕರಿಂ ಕರುಣದಿಂ ಕಳುಪುತಿರೆ
ವೃಷಭಮುಖನಲ್ಲಿ ಹರನಾಜ್ಞೆಯಂ ಕೈಕೊಂಡು
ವೃಷಭರಾಜನ ಕರುಣಮುಮನೊಚ್ಚತಂಗೊಂಡು
ಶರಣರಂ ಬಲವಂದನುಜ್ಞೆಯಂ ಕೈಕೊಂಡು
ಕರುಣಮಂ ತೋರುತೆ ಕುಮಾರನಂ ಬೀಳ್ಕೊಂಡು

ಬಂದು ಭೂಲೋಕದೊಳು ಕೀರ್ತಿಯಂ ಪಡೆದಿರ್ಪ
ಸಂದಣಿಪ ವಿಪ್ರಸಂತಾನದಿಂದಿಡಿದಿರ್ಪ
ಶಿವಪುರಾಣಾಗಮಕುಳಂಗಳಿಂದೆಸೆದಿರ್ಪ
ಶಿವಶಾಸ್ತ್ರ ಘೋಷ ಸಂಗೀತದಿಂದಿಡಿದಿರ್ಪ
ಅಗ್ರಹಾರಂ ಬಾಗೆವಾಡಿಯೊಳಗೆಸೆದಿರ್ಪ
ಅಗ್ರೇಶ್ವರಂ ಕಮ್ಮೆಕುಲದಿಂದೆ ಮೆರೆದಿರ್ಪ
ವಿಪ್ರನಿರ್ಪಂ ಮಾದಿರಾಜನಾತನ ಸತಿಯು
ಅಪ್ರತಿಮ ಮಾದಾಂಬೆಯೆಂದೆಂಬ ಗುಣವತಿಯು
ಅತಿಮಾನಿಯತಿಜ್ಞಾನಿಯೆಂದೆನಿಪ್ಪಾ ಸತಿಯ
ಪತಿಭಕ್ತೆಯುದರದೊಳು ಪುಗಲಲ್ಲಿ ಗುಣವತಿಯ
ನಡೆ ತಳುವಿ ತಳ್ಕಿಕ್ಕಿ ಮಂದ ಭಾವಂಗಳಿಂ
ನುಡಿ ಬಳಲ್ದೊಪ್ಪುತಿರೆ ಮೆಲ್ಪಿನ ಗುಣಂಗಳಿಂ
ಊರುದಂಡಂ ರಂಭೆಗಳ ಸೊಬಗನಿಳಿಪುತಿರೆ
ಮಾರನ ದೊಣೆಯನಿಳಿಸಿ ಕಣೆಕಾಲ್ಗಳೊಪ್ಪುತಿರೆ
ತ್ರಿವಳಿ ಮೈಗರೆಯೆ ಹೊಕ್ಕುಳ ಗುಬ್ಬು ಹೊರಸೂಸೆ
ನವನೀಳಕಾಂತಿಯಿಂದಿದಿರೇರುತಿರೆ ಬಾಸೆ
ನಡು ಹೊಂಗಿ ಕಿಳ್ಪೊಡೆಯದೊಪ್ಪದಿಂ ಹಿಗ್ಗುತಿರೆ
ಮೃಡನ ಭಕ್ತನ ಪುಣ್ಯಸತಿಯುದರವೊಪ್ಪುತಿರೆ

ಕಮಳಮುಕುಳಂಗಳೊಳು ಭೃಂಗಂಗಳಿಪ್ಪಂತೆ
ಅಮರ್ದು ಕಪ್ಪೇರೆ ಕುಚಯುಗಳ ಚೂಚಕವಿಂತೆ
ಕಕ್ಷಪುಟದಲ್ಲಿ ಕತ್ತುರಿಯ ಹೊಗರೆತ್ತುತಿರೆ
ಅಕ್ಷಿಗಳು ಕರುಣರಸಮಂ ಹೊತ್ತು ಬಳಲುತಿರೆ
ಕುಂತಳಂ ಕೊರ್ವಿಂ ಕವಲ್ತು ಕುಡಿ ನಿಮಿರುತಿರೆ
ಅಂತರಂಗದ ಗರ್ಭವೊಡನೊಡನೆ ಬೆಳೆವುತಿರೆ
ಅಂಗಲತೆ ನಯವೇರಿ ಬೇರೊಂದು ಚೆಲುವಾಗೆ
ಮಂಗಳಾನನವಲರ್ದ ರಾಜೀವದಂತಾಗೆ

ಇಂತು ನವಮಾಸವಾಕೆಯೊಳಾಗೆ ಸನ್ನುತಂ
ಅಂತಸ್ಥಳದೆ ಪುಣ್ಯಶಿಶು ತೊಳಗಿ ಹೊಳೆವುತಂ
ಮುಕುರದೊಳು ಮಾರ್ಪೊಳೆವ ಚಂದ್ರಮಂಡಲದಂತೆ
ಸುಕರಾಂಬುವೊಳು ಪೊಳೆವ ಹಂಸಶಾಬಕದಂತೆ
ಪೊಳೆದು ಥಳಥಳಿಸುತಂ ಪೊರಮಡಲ್ಬಗೆಗೊಂಡು
ಇಳೆಗೆ ಶಿವಭಕ್ತಿಯಂ ತೀವಲ್ಮನಂಗೊಂಡು
ಚಿಪ್ಪಿನೊಳ್ ಮುತ್ತು ಕಾಸಾರದೊಳ್ ಪಂಕಜಂ
ಅಪ್ಪಿನಿಂ ತಣ್ಬು ಮಲಯಾದ್ರಿಯಿಂ ಮಲಯಜಂ
ಕೇತಕೀಕುಸುಮದಿಂ ರುಚಿರತರ ಪರಿಮಳಂ
ಶೀತಕರನಿಂ ಸಾಂದ್ರತರ ಕೌಮುದೋಜ್ವಳಂ
ಪುಟ್ಟುವಂತಿರೆ ಪುಟ್ಟಿದಂ ಶಿವನ ಶಿಶುವಲ್ಲಿ
ಮೆಟ್ಟಿದಂ ಸಂಸಾರಸುಖದ ಲೀಲೆಯನಲ್ಲಿ
ಸುಮುಹೂರ್ತವೇ ಗಂಡುರೂಪಾದ ತೆರನಾಗೆ
ಅಮಮ ಕಾರಣಿಕಶಿಶು ಜನಿಯಿಸಿದನನುವಾಗೆ

ಆಗಳಾ ಪುತ್ರಂಗೆ ಜಾತಕರ್ಮವ ಮಾಡಿ
ರಾಗದಿಂ ಬಸವನೆಂಬಭಿಧಾನಮಂ ಮಾಡಿ
ಹರನಿತ್ತ ಪೆಸರೆ ವಂಶಾವಳಿಯ ಪೆಸರಾಗೆ
ಧರೆಯ ಭಕ್ತಾಳಿಗನಿಮಿತ್ತ ಉತ್ಸವವಾಗೆ
ಲಿಂಗಮಂ ತೋರೆ ಕಂದೆರೆದು ಸುಖಿಯಾಗುತಂ
ಲಿಂಗಪ್ರಸಾದಮಂ ಕೊಂಡು ಹೊರೆಯೇರುತಂ
ಮಾತೆಯ ಮನೋರಾಜ್ಯ ಪಿತನ ಕಂಗಳ ಸೊಂಪು
ಆತುರದಿ ಪಾಡುತ್ತಲಿಹರ ಜೋಗುಳದಿಂಪು

ದಿಟ್ಟಿ ತೀವಲು ನೋಳ್ಪ ಜನಕೆ ತಾನಭಿಮುಖಂ
ಮುಟ್ಟುವರ ಮುದ್ದು ಮುದ್ದಾಡಿಪರ ನಿಜಸುಖಂ
ಸೋಗಿಲ ಸುಧಾಕಿರಣವಂಗಯ್ಯ ಮಾಣಿಕಂ
ಸಾಗಿಪರ ಪರಬೊಮ್ಮವರ್ತಿಪರ ಕೌತುಕಂ
ನೋಡುವರ ನಯನಸುಧೆ ಸೋಂಕುವರ ಪುಳಕತತಿ
ಬೇಡುವರನರ್ಘ್ಯವಪ್ಪುವರ ಪುಣ್ಯದ ಸುಗತಿ
ಅರಳೆಲೆಯ ಸುಮ್ಮಾನಿ ಸುಳಿಗುರುಳ್ಗಳಭಿಮಾನಿ
ಗುರುತರ ಶಿವಧ್ಯಾನಿ ಮುದ್ದುನಗೆಗಳ ದಾನಿ
ಅಲರ್ಗಂಗಳಮರ್ದುಗಂ ತೊದಳ್ನುಡಿಯ ತವಕಿಗಂ
ನಲಿವ ಮಾಗಾಯ ನವನರ್ತನದ ಹಸನಿಗಂ ೧೫೦
ಬಳೆದೋಳ ಭಾಗ್ಯನಿಧಿ ಪುಲಿಯುಗುರ ಸುಲಭಿಗಂ
ನಳನಳಿಪ ಲಾವಣ್ಯದಿಂದೆಸೆವ ಬಣ್ಣಿಗಂ
ಹೆರೆನೊಸಲ ನಾಯಕಂ ಶಿಶುವೇಷದುನ್ನತಂ
ಮೆರೆದಿರ್ಪ ಬಾಯ್ದೆರೆಯ ರದನಾವಲೀ ನುತಂ
ಉಡೆವಣಿಯ ತೊಡವು ಘಲಘಲಿಸುವಂದುಗೆಯಾನೆ
ಮೃಡನ ಸುತನುಂ ದ್ವಿಜತನೂಜನೆಂದುಂ ತಾನೆ
ತಾನಾಗಿ ಬಾಲಲೀಲೆಯ ಬಸವನೊಪ್ಪಿದಂ
ನಾನಾ ವಿನೋದನಿಧಿ ಬಸವಣ್ಣನೊಪ್ಪಿದಂ ೧೫೮

ಬಸವಂ ಪರಸಮಯಕ್ಕು
ಬ್ಬಸವಂ ಮಾಡುತೆ ಸಮಸ್ತ ಶರಣಾವಳಿಗಂ
ಬಸವಂ ಮಾಡುವೆನುತವೆ
ಬಸವಂ ನಲಿಯಲ್ ಸಮಂತು ಬೆಳೆವುತ್ತಿರ್ದಂ ॥

## ಸ್ಥಲ ೨

ಸುರಕುಜದಂಕುರಂ ಶಶಿಕಳಾಕಿರಣಂ ತರುಣಾರ್ಕಮಂಡಲಂ
ಸುರಭಿಯ ಶೀಲವೆಂತವರವೋಲ್ನಯದಿಂ ಸುಕುಮಾರವೃತ್ತಿಯಿಂ
ದುರುತರ ತೇಜದಿಂ ಸುಕೃತಮೂರ್ತಿಯಿನೊಪ್ಪಿದನೀ ಧರಿತ್ರಿಯೊಳ್
ವರಶಿಶುವಾಗಿ ರಾಜಿಸಿದನಿಂತೊಲವಿಂ ಬಸವಣ್ಣನಾಯಕಂ ॥

ಇಂತು ಶುದ್ಧಾಂಗನಾಗಿ ಸುಖಿಯಾಗಿ ಧಾರುಣಿಗೆ ಕಾರಣಿಕನಪ್ಪ ಬಸವಂ ಸಂಗಸುಖದಿಂದಿರ್ಪಲ್ಲಿ, ನೆಲದಲಿ ಮೂಡಿದ ಸ್ವಯಂಭುಲಿಂಗಕ್ಕೆ ನೆಲಂ ತಾಯಾಗಲರಿಯದೆಂಬಂತೆ ಹರನ ಬೆಸನಂ ಹೊತ್ತು ಕಾರಣದಿಂ ಮರ್ತ್ಯಲೋಕದೊಳ್ಪುಟ್ಟಿದ ಗಣೇಶ್ವರನಪ್ಪ ಬಸವರಾಜಂಗೆ ತಾಯ್ತಂದೆಗಳಿಲ್ಲೆಂಬುದನರಿಪುವಂತೆ ಶಿವಭಕ್ತನುಮಂ ಶಿವಭಕ್ತೆಯುಮಂ ಶಿವನಾಜ್ಞೆಯಿಂ ಕೈಲಾಸಕ್ಕೆ

ಕೊಂಡೊಯ್ಯೆ, ಬಸವರಾಜಂ ಪುಸಿಯ ತಾಯ್ತಂದೆಗಳ್ಪೋದುದಂ ಕಂಡಾದರಂ ಮಿಕ್ಕು ಸಂಸಾರದ ಭಾರವಿಳಿದು ನಲಿನಲಿದಾಡಿ ಶಿವಭಕ್ತಿ ಮುತ್ತಂತಿರ್ದ ಮುತ್ತಬ್ಬೆಯ ಪಕ್ಕದೊಳು ಶಿವಪ್ರಸಾದ ಸಂತುಷ್ಟಪುಷ್ಟಹೃದಯನಾಗಿ ನಾಲ್ಕೆರಡು ವರ್ಷಂ ಸುಖದೊಳಿರೆ, ಭಸಿತಕ್ಕೆ ಬಣ್ಣವೇರುವಂತೆ ರುದ್ರಾಕ್ಷಿಗೆ ಸೌಂದರ್ಯಂ ಸಾರುವಂತೆ ಪಂಚಾಕ್ಷರಿಯ ಮಂತ್ರಕ್ಕೆ ಸಾಮರ್ಥ್ಯಂ ಪೊದ್ದುವಂತೆ ಶಿವಲಿಂಗಮಂ ನವಪೂಜೆಯಡರ್ವಂತೆ ಪದಿನಾರು ವತ್ಸರದೊಡನೆ ನಯಯೌವನಂ ಸಾರ್ದ ಬಸವರಾಜನ ರೂಪು ಸೌಂದರಿಯವೆಂತೆಂದಡೆ,

ಶಿವಪ್ರಸಾದಮಂ ಪೊತ್ತು ನಿತ್ತರಿಪಂ ತಾನೂರ್ಬನೆಂಬುದಂ ತೋರ್ಪಂತೆ ಮಲ್ಲಿಗೆ ಮೊಲ್ಲೆ, ಜಾಜಿ ಕೇತಕಿ ಮೊದಲಾದ ಕುಸುಮಕುಲಮನಾಂತು ಮೆರೆವ ಬಟ್ಟದುರುಂಬಿನ, ಮತ್ತಂ, ಗಂಗೆಯಂ ಪೊತ್ತ ಹರನೊಳ್ಪುರುಡಿಸಿ ಶಿರೋಮಧ್ಯದೊಳಿರಿಸಿದ ಕುಂತಳಕಾಳಿಂದೀನದಿ ಪೊರಸೂಸುಗುಮೆಂದು ಮೇಲಿಕ್ಕಿದ ರುದ್ರಾಕ್ಷಿಯ ಶಿರೋಮಾಲೆಯೆಂಬ ಸುತ್ತೇರಿಯಿಂದೊಸರ್ದ ಕಾಳಿಮ ಜಲಕಣಂಗಳಂತೆ ನೊಸಲೊಳು ಕುಣಿವ ನೀಳಾಳಕಂಗಳ, ಮತ್ತಂ ನೊಸಲಕಣ್ಣರಸನಿಪ್ಪ ರಾಜಧಾನಿಯೆಂಬ ಭಸಿತಸ್ಥಳದ ಭಾಳದೇಶದ ಸೀಮಾರೇಖೆಯಂತೊಪ್ಪುವ ಭ್ರೂಲತೆಗಳ, ಅದಲ್ಲದೆಯುಂ ಜಂಗಮಕೀರ್ತ್ಯವತಂಸಮಾಗೆ ವರ್ಣನೆಗತ್ಯಗ್ಗಳಮಾದ ಕರ್ಣಪಾಲಿಕೆಗಳ, ಮತ್ತಂ ಶರಣರ ಮೂರ್ತಿಯ ಕಣ್ಣಮಣಿಯೆನಿಪ ಲೋಚನಯುಗಳ[ದ] ಪ್ರಸಾದ ಪರಿಮಳಮಂ ಘ್ರಾಣಕ್ಕೆ ನಡೆಯಿಸುವ ಸಂಪಗೆಯ ಮುಗುಳ ನಾವೆಯಂತೊಪ್ಪುವ ನಾಸಿಕದ, ಕಂಠಮಾಲೆಯಿಂ ಮೆರೆವ ಸೌಂದರ ಗ್ರೀವದ, ಮತ್ತಂ ಭಾಳಸ್ಥಲದ ರುಚಿಯಿತ್ತಟದಿನುದಿರ್ದ ಭಸಿತರಾಸಿಗಳಂತೆಸೆವ ಭುಜಮಂಡಲಗಳ, ಶಿವಪೂಜಾನುಕುಸುಮಿತ ಲತೆಯಂತೊಪ್ಪುವ ನಳಿತೋಳ್ಗಳ, ಶರಣಚರಣಾಲಿಂಗಕ್ಕೆಡೆಗೊಟ್ಟು ಮೆರೆವ ಪೇರುರದ, ಪಂಚಾಕ್ಷರಿಯಿಮ್ಮಡಿಸಿದಂತಿರ್ಪ ಹಸ್ತಾಂಗುಲಿಗಳ, ಪ್ರಸಾದಸ್ಥಲವೆನಿಸಿದ ಪುರ್ಣ್ಯೋದರದ, ಮತ್ತಂ ಪ್ರದಕ್ಷಿಣಕ್ಕೆ ಬಾಲಕಂ ನಲಿನಲಿದಾಡುವ ಗಿಲಿಗಿಲಿಗಂಭಂಗಳಪ್ಪುರುದಂಡಂಗಳ, ಶರಣಪಥ ಕ್ಕಡಿಯಿಡಲ್ಬಯಸುವಂತೆ ಶಿವನಂ ಬಲಗೊಳಲಿರ್ದ ಪದತಳಂಗಳ, ಇಂತೊಪ್ಪುವ ರೂಪು ಸೌಂದರ್ಯದಿಂ ಶಿವಪೂಜೆಗೆ ನವಯೌವನಮಾದಂತೆ ಮೆರೆವ ಷೋಡಶಪ್ರಾಯಂ ಪ್ರಜ್ವಳಮೂರ್ತಿಯೆನಿಸಿದ ಬಸವರಾಜಂ, ಕಾರಣಿಕ ಪುರುಷಂ, ಶಿವಭಕ್ತಿಸನ್ಮಾರ್ಗಚರಿತಂ ನೆನೆದು ನೋಡಿ,

ಜನನದ ಬಳಿವಿಡಿದೆಂತಕ್ಕೆ ಬಂದ ಜವ್ವನಂ ಶಿವಪೂಜೆಯಲ್ಲಿ ಸವೆಯವೇಳ್ಕುಮಿಂತಲ್ಲಲ್ಲಿ ಶಿವಭಕ್ತಿಯುಂ ಕರ್ಮವುಂ ಎಂದುಮೊಂದಾಗಿರದೆಂದೊಲ್ಲದೆ, ಪರಮವೈರಾಗ್ಯಯುಕ್ತಂ ಶಿವಲಿಂಗಾರ್ಚನಾಸಕ್ತಚಿತ್ತಂ ಕರ್ಮಲತೆಯಂತಿರ್ದ ಜನ್ನಿವಾರವಂ ಕಳೆದು ಬಿಸುಟು, ಪೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪರಿದು ಬಿಸುಟು, ನವ್ಯ ದುಕೂಲಮಂ ತೆಗೆದುಟ್ಟು ದಿವ್ಯವಸ್ತ್ರಮಂ ಪೊದೆದು, ಮನೆ ನೆಳಲಂ ನೆನೆಯದೆ, ಅರ್ಥಮಂ ಲೆಕ್ಕಿಸದೆ, ವೃತ್ತಿಯಂ ವಿಚಾರಿಸದೆ, ಬಂಧುಗಳಂ ಬಗೆಯದೆ, ಪುರಜನಮಂ ಪರಿಕಿಸದೆ, ಹರಭಕ್ತಿಯೊಳಾತುರದಿಂ ಬಾಗವಾಡಿಯಿಂ ಪೊರಮಟ್ಟು ಪೂರ್ವದಿಶಾಭಿಮುಖನಾಗಿ ಕಿರಿದಂತರಂ ನಡೆದುಬಂದು,

ಮಲಪ್ರಹರಿ ಕೃಷ್ಣವೇಣಿಗಳ ಸಂಗಸುಖಮಂ ಪಿಂಗದಾ ಕೂಡಲಸಂಗಮೇಶ್ವರನಿರ್ಪ ಕಪ್ಪಡಿಯ ಸಂಗಮಮಂ ಪೊಕ್ಕು ಕೇರಿಕೇರಿಯೊಳು ನಡೆತಪ್ಪಾಗಲು, ಶಂಕರಾಲಯಮಂ ಭೋಂಕನೆ ಕಂಡು, ಪೂರ್ವಸ್ಮರಣೆ ಕೈಗೂಡಿ ಕಣ್ ಬಂದಂತೆ. ಉಸಿರ್ ಬಂದಂತೆ ಪರಿತಂದು ರಂಗಮಂಟಪದೊಳು ದೊಪ್ಪನೆ ಬಿದ್ದೆಂತಕ್ಕೆದ್ದು ನಿಂದು ದೇವ ದೇವಾ, ಅನಾಥನಾಥ, ಅನಿಮಿತ್ತಬಂಧುವೆ, ತಾಯ್ತಂದೆ,

ಬಂಧುಬಳಗವೆ, ಕುಲವೆ, ಬಲವೆ, ಛಲವೆ, ತವರೆ, ಕಣ್ಣೆ, ಗತಿಯೆ, ಮತಿಯೆ, ಪುಣ್ಯವೆ, ಪ್ರಾಣವೆ, ಕಾವುದು ಕಾವುದೆಂಬೆ ಎನುತ್ತೆನುತ್ತೆ ಅನುತಾಪವೊಳಗೇರಿ, ಭವದ ಬೇಗೆ ಬೆಂಬತ್ತಿ, ಕರಣಂ ಕಾಹೇರಿ, ಹರಣಂ ಕುಕ್ಕುಳಂಗುದಿದು, ಗದುಗದವಿಂಗಿ, ಕಣ್ಗಳಂ ಮುಚ್ಚಿ ಸೆರೆಬಿಗಿದು ದಡದಡಿಸಿ ದೊಪ್ಪನೆ ಬಿದ್ದು, ಸಂಗ ಶರಣೆನುತೆ ಮತ್ತೆ ಮತ್ತೆ ಮೂರ್ಛಿಸೆ, ಕಂಡು ಹರಂ ಕರುಣದಿಂ ನೋಡಿ ಬಸವನ ಚಿತ್ತದೊಳ್ಪೊಕ್ಕು ಅಂಜದಿರಂಜದಿರ್ಮಗನೆ ಭವದ ಮಾಲೆಯ ಹೊದ್ದಲೀಯದೆ ಸಲಹಿದಪೆಂ, ನೆಲಂ ಮೆಚ್ಚೆ ಮೆರೆದಪನೆಂದು ಬೆಸಸಿ ನಿಜಲಿಂಗಕ್ಕೆ ಬಿಜಯಂಗೈಯ್ವುದುಂ.

ಶಿವನ ದಯೆಗೆ ಚಿತ್ತವಂಕಿರಿಸಿ, ಬುದ್ಧಿ ಪಲ್ಲವಿಸಿ, ಮನಂ ಮುಗುಳೊತ್ತಿ ಕುಳ್ಳಿರ್ದ ಬಸವರಾಜನಂ ಸಂಗಮೇಶ್ವದೇವರ ಪಾದಮೂಲ ಪರಿಗ್ರಹವೆನಿಸಿ ಬಳಿದೊತ್ತಾಗಿ ಬಂದ ಸ್ಥಾನಪತಿಯೆನಿಪ್ಪ ಈಶಾನ್ಯಗುರುಗಳ್ಕಂಡೀತಂ ಕಾರಣಿಕನಾಲೆವೇಳ್ಕುಮೆಂದು ಹತ್ತೆಸಾರ್ದು ಎಲೆ ಭಕ್ತ, ನೀನೆಲ್ಲಿಗಂ ಪೋಗಬೇಡ, ಆವುದಂ ಚಿಂತೆಬೇಡ, ಸಂಗಮೇಶ್ವರಂಗೆ ಹೊಸ ಪುಷ್ಪಮಂ ತಿಳಿಯಗ್ಘವಣಿಯಂ ತಂದು ಓಜೆಯಿಂ ಪೂಜೆಗೆಯ್ದು ಪ್ರಸಾದಕಾಯನಾಗಿ ಸುಖದೊಳಿರ್ಪುದೆನಲಾ ಮಾತಂ ಕೈಕೊಂಡು ಸಂಗನಬಸವಂ ಬಸವದೇವಂ ಕಪ್ಪಡಿಯ ಸಂಗಮದೊಳು ಕೂಡಲಸಂಗಮೇಶ್ವರದೇವರ ಶ್ರೀಪಾದಕಮಲ ಮಕರಂದಮಧುಕರಾಯಮಾನನಾಗಿರ್ದನಂತುಮಲ್ಲದೆಯುಂ,

## ಸ್ಥಲ ೩

ಬಸವಂ ಜನ್ಮದುರಾಸೆಯಂ ಕಳೆದು ಕರ್ಮಾರಂಭಮಂ ನೀಗಿ ಸಂ
ತಸದಿಂದಂ ಪೊರಮಟ್ಟು ಬಂದು ಘನ ನಿರ್ಮಾಯ ಪ್ರಕಾಶೋಜ್ವಳ
ಪ್ರಸರಪ್ರಸ್ಫುರಿತಪ್ರಮೋದಚರಿತ ಶ್ರೀ ಸಂಗಪಾದಾಬ್ಜವಾ
ಸ ಸುಪೂಜಾರಸಮಗ್ನಚಿತ್ತನೆನಿಸಿರ್ದಂ ಸತ್ಯಸಾರೋದಯಂ ॥

ಇಂತು ಕಪ್ಪಡಿಸಂಗಮದೊಳಿರ್ದು ರಾಗದಿಂ
ಸಂತತಂ ಶಶಿಧರನನರ್ಚಿಪುದ್ಯೋಗದಿಂ
ಬಸವಂ ಪ್ರಭಾತಸಮಯಕ್ಕೆ ಮುನ್ನವೆಯೇಳ್ದು
ಒಸೆದು ಭಸಿತೋದ್ಧೂಳನಂ ಮಾಡುತವೆ ಬಾಳ್ದು
ಸಂಗಂಗೆ ಸಾಷ್ಟಾಂಗದಿಂದಲ್ಲಿ ಪೊಡಮಟ್ಟು
ಪಿಂಗದೀಶಂಗೆ ಭಯಭಕ್ತಿಯಂ ಮುಂದಿಟ್ಟು
ತಳ್ಕೈಸಿ ಮುಂಡಾಡಿ ಪುಳಕಿಸುತೆ ಕಂಪಿಸುತೆ
ಬೀಳ್ಕೊಂಡನಳ್ಕರಿಂ ಲಾಲಿಸುತ್ತಾಲಿಸುತೆ
ಬಂದಗ್ಘವಣಿಯ ಕಂಬಿಗೆ ನಲಿದು ಮೈಯಿಕ್ಕಿ
ನಿಂದೆತ್ತಿ ಸಂಗ ಶರಣೆನುತೆ ಹೆಗಲೊಳಗಿಕ್ಕಿ
ತುದಿ ಕಂಬಿಯೊಳು ಕರಂಡಗೆಯನೊಲಿದಳವಡಿಸಿ
ಸದಮಳಂ ನಡೆದನಭವನನೊಳಗೊಡಂಬಡಿಸಿ
ನಡೆತರುತೆ ದೂರದೊಳು ಪೂದೋಂಟಮಮಂ ಕಂಡು

ಪೊಡಮಟ್ಟು ಕುಣಿಕುಣಿದು ಸಂತಸಮನೆಡೆಗೊಂಡು
ಪರಿಮಳಂ ತೀಡಿದಡೆ ಸಂಗಂಗೆನುತ್ತಲ್ಲಿ
ಚರಿತದಿಂ ಮುಖವಾಸಮಂ ರಂಜಿಸುತ್ತಲ್ಲಿ

ತೋಂಟಮಂ ಪೊಕ್ಕು ಕಂಬಿಯನೊಳ್ಳಿತರೊಳಿರಿಸಿ
ಎಂಟುಮಡಿ ಹಿಗ್ಗಿ ಹೊರೆಯೇರುತಂ ಸಡಗರಿಸಿ
ಅಳಿಯೆರಗದನಿಲವಲುಗದ ರವಿಕರಂ ಪುಗದ
ಸುಳಿಗೊಂಡು ದಳವೇರಿ ಹಸುರಳಿದು ಬೆಳುಪುಳಿದ
ಸುರುಚಿರಮೆನಿಪ್ಪ ಮೀಸಲಮೊಗ್ಗೆಯಂ ಕೊಂಡು
ಇರವಂತಿಯೊಳ್ಮೆರೆವ ಬಿರಿಮುಗುಳ್ಗಳಂ ಕೊಂಡು
ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು
ಹೆಂಪೆಸೆವ ಹೊಂಗೇದಗೆಯ ಪೂಗಳಂ ಕೊಂಡು
ಅದೆ ಮಲ್ಲಿಕಾ ಕುಟ್ಮಳಂ ಸಂಗಗೆಂದೆನುತೆ
ಅದೆ ಮಾಲತೀವಿತತಿ ಸಂಪಗೆಯು ನಿನಗೆನುತೆ
ಜಾದಿಯರಳಂ ಕೊಂಡು ಮೊಲ್ಲೆಯರಳಂ ಕೊಂಡು
ಸೋದಿಸಿದ ಪರಿಮಳದ ಪಡ್ಡಗಳಿಗಳಂ ಕೊಂಡು
ಮರುಗದೆಲೆಯಂ ಕೊಂಡು ಸುರಹೊನ್ನೆಯಂ ಕೊಂಡು
ಸರಸಿರುಹಮಂ ಕೊಂಡು ಸೇವಂತಿಯಂ ಕೊಂಡು
ಬದುಕಿದೆಂ ಬದುಕಿದೆನೆನುತ್ತೆ ನದಿಗೆಯ್ತಂದು
ಸದಮಳ ಶಿವೈಕ್ಯಚಿತ್ತಂ ಹರುಷದಿಂ ನಿಂದು
ಸೋದಿಸಿದ ಶೀತೋದಕಂಗಳಂ ತೀವುತಂ
ಆದರಂ ಮಿಗೆ ಸಪುರದಿಂದೆ ಬಾಸಣಿಸುತಂ
ಸಹಜಸುಮ್ಮಾನಿ ಸುಖದಿಂದಂ ಬರುತ್ತಿರ್ದ
ಇಹ ಪರದ ಪುಣ್ಯಪುರುಷಂ ನಡೆದು ಬರುತಿರ್ದ
ಅತ್ತಿತ್ತ ಚಲಿಸದಚಲಂ ನಡೆದು ಬರುತಿರ್ದ
ಉತ್ತಮೋತ್ತಮ ಭಕ್ತಿಯುಕ್ತನೆಳ್ತರುತಿರ್ದ

ಒಲವಿಂದೆ ನಡೆತಂದು ಶಿವನಿಳಯಮಂ ಪೊಕ್ಕು
ನಲಿನಲಿದು ನೇಹವಂಕುರಿಸುತಿರೆ ಕೈಮಿಕ್ಕು
ಲಿಂಗ ಶರಣೆನುತಗ್ಘವಣಿಯನೊಲವಿಂದಿಳಿಪಿ
ಸಂಗಮೇಶ್ವರನ ಹತ್ತಿರೆ ಹದುಳದಿಂದಿಳಿಪಿ
ಬರವನೆಳೆಸಿರ್ದಯ್ಯ ದೇವ ತಳುವಿದೆನೆಂದು
ಉರವಣಿಸಿ ಬರುತಿರ್ದೆ ತಂದೆ ಮುಳಿಯದಿರೆಂದು

ಎನ್ನಯ್ಯ ಎನ್ನರಸ ಎನ್ನ ಬಂಧುವೆಯೆನುತೆ
ಎನ್ನ ಕಣ್ಣಿಂ ಗತಿಯೆ ಮತಿಯೆ ಕರುಣಿಪುದೆನುತೆ
ಅಲ್ಲಿ ಕತ್ತುರಿಯ ಶ್ರೀಗಂಧಗಳಿಂ ಪೊರೆದ
ಸಲ್ಲಲಿತದಿರವಂತಿ ಸಂಪಗೆಗಳಿಂ ಪೊರೆದ
ನುತ ಸೀತಳಂಗಳಂ ಪೊಂಗಳಸದೊಳು ತೀವಿ
ಅತಿಶಯಾನಂದಾಶ್ರುವಂ ಕಂಗಳೊಳು ತೀವಿ
ಕೊಂಡಾಡಿ ಕೊಂಡಾಡಿ ಮಜ್ಜನಕ್ಕೆರೆವುತಂ
ಮುಂಡಾಡಿ ಮುಂಡಾಡಿ ನೊಸಲೊಳಚ್ಚೊತ್ತುತಂ
ಚಂದ್ರಚೂಡಂಗೆ ಸಿರಿಗಂಧಮನಲಂಕರಿಸಿ
ಸಾಂದ್ರಸೌರಭ್ಯಮಯ ಪುಷ್ಪದಿಂ ಸಿಂಗರಿಸಿ
ಪೂಜೆಯಂ ನೋಡಿ ಮೆಚ್ಚದೆ ಪೂಜೆಯಂ ಮಾಡಿ
ಓಜಗೆಟ್ಟರುಹುಗೆಟ್ಟತಿ ಲಲ್ಲೆಯಂ ಮಾಡಿ
ನಯನಂಗಳೊಳು ಪೂಜೆ ಬರೆದಂತೆ ನೋಡುತಂ
ಭಯಭಕ್ತಿಯಿಂ ಪೂಜೆ ಮೆರೆವಂತೆ ಮಾಡುತಂ
ಚಿತ್ತದೊಳು ಪೂಜೆಯಚ್ಚೊತ್ತಿದಂತರ್ಚಿಸುತೆ
ಚಿತ್ತದೊಳು ಪೂಜೆ ಪುಟ್ಟಿರ್ದಂತೆಯೀಕ್ಷಿಸುತೆ
ಧೂಪ ಧೂಮದ ತಿರುಳ ಪರಿಮಳವನೊಲಿದಿತ್ತು
ದೀಪದೊಳು ಕಂಬೆಳಗನೆತ್ತಿ ಸುಖಮಂ ಪೊತ್ತು
ರನ್ನದಡ್ಡಣಿಗೆಗಳ ಮೇಲೆ ಬೆಳಗಂ ಕರೆವ
ಹೊನ್ನ ಪರಿಯಾಣಗೊಳಗಮೃತಾನ್ನಮಂ ಮೆರೆವ
ನವಘೃತಂ ನವಶಾಕ ಪಾಕಂಗಳಂ ಬಡಿಸಿ
ನವ ಮಧುರ ರಸವೊಸರ್ವ ಪಕ್ವಾನ್ನಮಂ ಬಡಿಸಿ
ನಡುವೆ ಜವನಿಕೆವಿಡಿದು ಪೊರಗೆ ಕೈಮುಗಿದಿರ್ದು
ಕಡು ಲಜ್ಜೆಯಿಂ ಭೀತಿಯಿಂ ಭಕುತಿಯಿಂದಿರ್ದು
ದೇವ ಚೆನ್ನನ ನಿಧಿಯೆ ಆರೋಗಿಸೆಲೆ ಸಂಗ
ದೇವ ಚೋಳನ ಸುಧೆಯ ಆರೋಗಿಸೆಲೆ ಸಂಗ
ಆರೋಗಿಸಯ್ಯ ನಿಜಲಿಂಗ ಸಂಗಮದೇವ
ಆರೋಗಿಸೈ ಉಮಾರ್ಧಾಂಗ ಸಂಗಮದೇವ
ಎನ್ನ ಸುಖನಿಧಿಯೆ ಗುಣನಿಧಿಯೆ ಕೂಡಲಸಂಗ
ಎನ್ನ ಭುಜಬಲವೆ ಮನದೊಲವೆ ಕೂಡಲಸಂಗ
ಎಂದು ಕೊಂಡಾಡುತ್ತವಾರೈಸಲರ್ಪಿಸುತೆ
ಬಂದು ಜವನಿಕೆಯೊಳಗೆ ನಿಂದು ಮನಮಿಕ್ಕುತ್ತೆ
ಮೃದುಮೃದಂಗಂ ಬಹಳ ಕಹಳಾರವದ ನಡುವೆ

ಪದೆದು ಪೊಣ್ಮುವ ಶಂಖಭೇರೀರವದ ನಡುವೆ
ತಿಳಿದಗ್ಘವಣಿಯಿತ್ತು ಕೈಘಟ್ಟಿಯುಮನಿತ್ತು
ಬಳಸಿ ಕಂಪಿಡುವ ಕರ್ಪುರದ ವೀಳೆಯವಿತ್ತು
ಮಂಗಳಾರತಿಯೆತ್ತಿ ಚಮರ ಸೀಗುರಿಯಿಕ್ಕಿ
ಅಂಗಜ ಹರಂಗೆ ಮುಕುರಂದೋರಿ ಮೈಯಿಕ್ಕಿ
ನಿಂದಿರ್ದು ಕೈಮುಗಿದು ನೋಡಿ ಕಂಗಳು ತೊರೆಯೆ
ಸಂದಣಿಸಿ ಮೈಯೊಳಗೆ ರೋಮಾಂಚತತಿ ನೆಗೆಯೆ

ಗುರುಸಂಗ ಶಿವಲಿಂಗ ಸತ್ಯಶರಣನ ಸಂಗ
ವರ ಸಂಗಲಿಂಗ ಶರಣಾಗು ಬಸವನ ಸಂಗ
ಕರುಣರಸನಿಧಿ ಘನತರಂಗ ಸಂಗಮದೇವ
ಗಿರಿಸುತೆಯಸಮಸುಖಾಲಿಂಗ ಸಂಗಮದೇವ
ಸುಕುಮಾರ ಶಶಿಕಲಾಚೂಡ ಕೂಡಲಸಂಗ
ಸಕಲ ನಿರ್ಮಾಯಿಕ ಕ್ರೀಡ ಕೂಡಲಸಂಗ
ನಿತ್ಯ ನಿರ್ಮಳನೆ ನಿಃಕಳನೆ ಕೂಡಲಸಂಗ
ನಿತ್ಯನಿರ್ಭಯನೆ ನಿರುಪಮನೆ ಕೂಡಲಸಂಗ
ಪೊಗಳ್ವ ವೇದಾಳಿಗತಿ ಗೂಢ ಕೂಡಲಸಂಗ
ಸೊಗಯಿಸುವ ಘನವೃಷಾರೂಢ ಕೂಡಲಸಂಗ
ಎನ್ನನತಿಕರುಣದಿಂ ನೋಡು ಕೂಡಲಸಂಗ
ಎನ್ನ ಮನದಕ್ಕರೊಳು ಕೂಡು ಕೂಡಲಸಂಗ
ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ
ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ

ಎಂದು ತುತಿಗೆಯ್ವುತಂ ಸ್ನೇಹರಸದೊಳ್ ಕೂಡಿ
ಇಂದುಧರನೊಳು ಸಲುಗೆಯಿಂ ಭಕ್ತಿಯಂ ಬೇಡಿ
ನಿಂದು ಭೀತಿಯ ತೋರಿ ತೊದಲಿಂದೆ ನುಡಿವುತಂ
ಸಂದ ಗದುಗದುಕೆಯಿಂದಾನಂದವೇರುತಂ
ಪುಟವೆದ್ದು ಹೊಂಗುತಂ ದಳವೇರಿ ಹಿಗ್ಗುತಂ
ನಟ್ಟಿರ್ಪ ನೋಟದಿಂದೋಜೆಯಂ ಮೀರುತಂ
ಭವದಿಂದೆ ಹಿಂಗುತಂ ನೆನಹಿಂದೆ ಹಿಗ್ಗುತಂ
ಬೆವರುತಂ ಬಿಕ್ಕುತಂ ತೇಗುತಂ ತೂಗುತಂ
ಕ್ರಮವಳಿದು ಸುಳಿದು ಸುಖಿಯಾಗುತಂ ಬೀಗುತಂ
ನಮಿಸುತಂ ಕಂಪಿಸುತೆ ಮನವೊಲಿದು ಪೊಗಳುತಂ

ಪುಳಕಂಗಳಿದಿರೇರೆ ಸುಖಜಲಂ ಕಣ್ತೀವೆ
ಬೆಳೆವ ಗದುಗದವಲರೆ ಭಕ್ತಿಚಿತ್ತಮನೋವೆ
ಕಂಪಿಸುತೆ ನಡೆಯುಡುಗೆ ಮನವಕ್ಕರಿಂ ಕರಗೆ
ಜೊಂಪಿಸುತೆ ತನು ಜೋಲೆ ಸಾತ್ವಿಕರಸಂ ಮಸಗೆ
ಮಣಿಮಣಿದು ತಕ್ಕೈಸಿ ಮಿಕ್ಕು ಮಲೆಮಲೆದಾಡಿ
ತಣಿತಣಿದು ತಕ್ಕೈಸಿ ಮಿಕ್ಕು ಮಲೆಮಲೆದಾಡಿ
ಆಡುತಾಡುತ್ತಲ್ಲಿ ಪೊಗಳ್ವುದಂ ನೆರೆ ಮರೆದು
ನೋಡಿ ನೋಡುತ್ತಲ್ಲಿ ನೋಟಮಂ ಮಿಗೆ ಮರೆದು
ಕಣ್ಮುಚ್ಚಿ ಗದುಗದಿಸಿ ಜೋಲ್ದು ಜೊಂಪಿಸಿ ಬಿದ್ದು
ಉಣ್ಮುವ ಶಿವಾನಂದರಸದ ಹೊನಲೊಳಗದ್ದು
ಈಸಾಡಿ ಗಂಗಾಧರನ ಚರಣಮಂ ಪಿಡಿದು
ಲೇಸಾಗಿ ಚಿತ್ತದೊಳು ಸಂಗನಂ ನೆರೆ ಪಿಡಿದು
ಮನದೊಳಚ್ಚೊತ್ತಿ ಸುಖಮೂರ್ಛೆಯೊಳು ಸಂದಿರ್ದು
ಘನಸುಖದೊಳೆರಡಿಲ್ಲದೊಂದಲ್ಲದಿರುತಿರ್ದು
ನೆನೆದು ಚೇತರಿಸಿ ಮೆಲ್ಲನೆ ಮೆಲ್ಲನೆಚ್ಚತ್ತು
ಅನುಪಮ ಶಿವೈಕ್ಯ ಸುಖಮುಖ ತೃಪ್ತಿಯಂ ಪೊತ್ತು
ಕಣ್ದೆರೆದು ಕುಳ್ಳಿರ್ದು ಸಂಗನಂ ನಡೆನೋಡಿ
ನುಣ್ದನಿಯೊಳರ್ಚನೆಯ ನೇಹಮಂ ಮಾತಾಡಿ
ಪಾದೋದಕ ಪ್ರಸಾದಂಗಳಂ ಕೈಕೊಂಡು
ಸಾದರಂ ಸಂಗನೊಲುಮೆಯನೊಚ್ಚತಂಗೊಂಡು

ದಿನದಿನಕೆ ಘಳಿಗೆ ಘಳಿಗೆಗೆ ಭಕ್ತಿ ಮಿಗಿಲಾಗೆ
ಅನುದಿನಂ ನೇಹವಿಮ್ಮಡಿಸಿ ನೂರ್ಮಡಿಯಾಗೆ
ಸಂಗ ನಾಮಂಗಳಂ ಪುರಜನಕೆ ಕಲಿಸುತಂ
ಸಂಗಶರಣೆಂದವರ ಪದತಳಕ್ಕೆರಗುತಂ
ನಡೆವಲ್ಲಿ ನುಡಿವಲ್ಲಿ ಸಂಗಶರಣೆಂದೆನುತೆ
ಉಡುವಲ್ಲಿ ಉಂಬಲ್ಲಿ ಸಂಗಶರಣೆಂದೆನುತೆ
ಕೊಡುವಲ್ಲಿ ಕೊಂಬಲ್ಲಿ ಸಂಗ ಶರಣೆಂದೆನುತೆ
ತೊಡುವಲ್ಲಿ ಪೊದೆವಲ್ಲಿ ಸಂಗ ಶರಣೆಂದೆನುತೆ
ಸಂಗ ನಾಮದೊಳಚ್ಚುವಿಡಿದು ಬೆಳೆವಂತಿರ್ದು
ಅಂಗವನಿತುಂ ಸಂಗನಂತರದೊಳೊಲಿದಿರ್ದು
ಪೂಗೊಯ್ವ ನಿಮಿಷವದು ಕಲ್ಪಕೋಟಿಗಳಾಗೆ
ರಾಗದಿಂದರ್ಚಿಸುವ ಕಲ್ಪಂ ನಿಮಿಷಮಾಗೆ

ಕೊಡುವರ್ಘ್ಯವಣಿಧಾರೆ ಮರೆಯಾಗೆ ಹೆದರುತಂ
ನಡುವೆ ಹೂವಡ್ಡಮಿರೆ ನಡುಗಿ ಕೆಲಸಾರ್ಚುತಂ
ಪೂಜಿಸುವ ಕೈ ಸಡಿಲಲಮರ್ದಪ್ಪಿ ಕರಗುತಂ
ರಾಜಭೂಷಣನನಡಿಗಡಿಗಪ್ಪಿ ನೆರೆವುತಂ
ನೋಟವಕ್ರತೆಯೆಂದು ಮೈಯಿಕ್ಕಲಂಜುತಂ
ಕೂಟಕ್ಕೆ ಪಗೆಯೆಂದು ಮುಟ್ಟಿ ಬಿಡುತಲಂಜುತಂ
ಪುಳಕಕ್ಕೆ ಪುರುಡಿಸುತೆ ಸೋಂಕಿ ಸುಖಿಯಾಗುತಂ
ಇಳಿವಶ್ರುಜಲಕೆ ಪುರುಡಿಸುತೆ ನಡೆ ನೋಡುತಂ
ಗದ್ಗದವನೊಪ್ಪಿರಿಸಿ ಪೊಗಳಲಟಮಟಿಸುವಂ
ಉದ್ಗತಾನಂದಮಂ ನೂಂಕಿ ನೆನೆದುಬ್ಬುವಂ ೧೫೦
ಶಿವಪೂಜೆಯೊಳಗೆ ಪುಟ್ಟಿದ ಸುಧಾರಕನಂತೆ
ಭವಪೂಜೆ ಬಲಿದು ಪುರುಷಾಕಾರವಾದಂತೆ
ಲಿಂಗ ಜಂಗಮವೊ ಮೇಣ್ ಜಂಗಮವೆ ಲಿಂಗವೋ
ಲಿಂಗ ಜಂಗಮವೆರಡು ಇಳೆಯೊಳು ವಿಭೇದವೋ
ಎಂಬಂತೆ ಸಾತ್ವಿಕಪ್ರಭು ಪೂಜಿಸುತ್ತಮಿರೆ
ಅಂಬಕತ್ರಯನ ಪುತ್ರಂ ಪೂಜಿಸುತ್ತಮಿರೆ
ಬಸವಣ್ಣನಪ್ರತಿಮನೊಲಿದು ಪೂಜಿಸುತ್ತಮಿರೆ
ಬಸವರಾಜಂ ಮಚ್ಚಿ ಪೂಜಿಸುತ್ತಿರೆಯಿರೆ ೧೫೮-೨೧೬

## ಸ್ಥಲ ೪

ಸಂಗಂ ಬಸವನೊ ಬಸವಂ
ಸಂಗನೊ ತಮ್ಮಿರ್ಬರೊರ್ಬರಂತೊರ್ಬರೊ ಮೇಣ್ ।
ಸಂಗಂ ಬಸವನೊ ಬಸವಂ
ಸಂಗನೊಯೆನಿಪೊಂದಾಭೇದಭಾವದೊಳಿರ್ದರ್॥

ಇಂತು ಸಕಲ ದೇವವಲ್ಲಭನಪ್ಪ ಸರ್ಪಾಭರಣನಂ ದರ್ಪಕಧ್ವಂಸಿಯಂ ಕೂರ್ಪರ ಕುಲದೈವಮಂ ನೋಳ್ಪರ ಕಣ್ಣಮಣಿಯಂ ಬೇಳ್ಪರ ಭಾಗ್ಯನಿಧಿಯಂ ಚಿಂತಿಸುವರ ಚಿಂತಾರತ್ನವೆನಿಪ ಸಂಗಮೇಶ್ವರನ ಕಪ್ಪಡಿಯ ಸಂಗಮದೊಳೊಪ್ಪದಿಂದರ್ಚಿಸುತ್ತಮಿಪ್ಪ ಸಮಯದೊಳೊಂದು ದೆವಸಂ ಬಸವರಾಜಂ ಸಂಧ್ಯಾಸಮಯದವರಸ ಸೌರಭಸಂಯುಕ್ತ ಶೀತಳಸಲಿಲ ನೂತನ ಮಲಯಜ ನವ್ಯಪ್ರಸೂನ ನಾನಾ ವಿಧ ಪೂಜಾಸಮರ್ಪಿತ ಷಡುರಸಾಯನನೈವೇದಿತ ಸರ್ವಾಂಗಶರೀರ ಪ್ರಣತನಾಗಿ ಸಂಗಪ್ರಸಾದಮಂ ಸಾದರಂ ಕೈಕೊಂಡು ರಂಗಮಂಟಪದೊಳು ಸಂಗಮಧ್ಯಾನ ನಿದ್ರಾಮುದ್ರೆಯೊಳಿಪ್ಪಲ್ಲಿ,

ಕನಸಿನೊಳು ಬೆಳೆದು ಕವಲಿರಿದು ನೀಳ್ದ ಪ್ರವಾಳಜಾಳದಂತೆ ಬೆಂಬಳಿವಿಡಿದಿಳಿದ ಕೆಂಜೆಡೆಗಳಿಂ ಸುತ್ತಿದ ಜಟಾಬಂಧದೊಳಗಣ ಸುರನದಿಯೆಂಬ ಸರಸಿಯ ತಟದೊಳಗಿರ್ದ ಬಿಸಕಂದದಂಕುರಂತಿರ್ದ ಚಂದ್ರಕಳೆಯಿಂ, ವಿದ್ಯುಲ್ಲತಾಗರ್ಭೀಕೃತ ಶಾರದಾಭ್ರವಿಭ್ರಮದಂತೆ ಭಸಿತಂ ಮುಸುಂಕಿದ ಬಿಸುಗಣ್ಣಿಂ ಮೆರೆವ ಲಲಾಟಪಟ್ಟದಿಂ, ಸಿಂಗರದ ತವರ್ಮನೆಯಂತಿರ್ದ ಮುಖಮಂಡಲದಿಂ, ನಯಮಂ ಕರೆವ ನಾಗಕುಂಡಲದಿಂ, ಹರನೊಳ್ ನೆರೆಯಲ್ಬಂದ ಕಾಳಿಂದೀನದಿ ಸುರನದಿಗೆ ಸೋಲ್ತಿಳಿದಂತಿರ್ದ ಕೊರಳಗರಳದಿಂ, ಕಲ್ಪಕುಜದ ಶಾಖೆಗಳಂತಿರ್ದ ದಶಭುಜಂಗಳ ತೋಳ್ದುರುಗಲಿಂ, ವೇದಂಗಳ್ ತನ್ನಂ ಕಾಣದಂತೆ ಮುಸುಂಕಿದ ಮಾಯಾಪಟಲವೆನಿಪ ಗಜಚರ್ಮದಿಂ ಎಳೆವಿಸಿಲ ಬೆಳಗಂ ತರುಣತರಣಿಗೆ ಕಡಂಗೊಡುವ ಪ್ರಭಾದುಕೂಲದಿಂತಿರ್ದ ಪುಲಿದೊವಲಿಂದೊಪ್ಪೆ, ಪಶುಪತಿ ಬಸವನ ಮನದ ಮೊನೆಯೊಳೊಪ್ಪಿ ಮೂರ್ತಿಗೊಂಡು, ಎಲೆ ಮಗನೆ, ಬಸವ, ಬಸವಣ್ಣಾ, ಬಸವಿದೇವಾ, ನಿನ್ನಂ ಮಹೀತಳದೊಳು ಮೆರೆದಪೆವು, ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗೆಂಬ ನುಡಿಯೊಡನೆ ಕನಸಿನ ಮಾತು ಮನವನಿಮ್ಮೈಗಂಡು ನಿದ್ರೆ ತಿಳಿದು ಕಣ್ದೆರೆದು ಕೆಲಬಲನಂ ನೋಡಿ ಬೆಚ್ಚಿ ಬೆಗಡುಗೊಂಡನುತಾಪವೇರಿ ವಿರಹಂ ಪೊಮ್ಮಿ ಕಂಗೆಟ್ಟಗಲಲಾರದೆ ರಂಗಮಂಟಪದ ಕಂಭಮಂ ಘಳಿಲನೆ ಹಾಯ್ದು, ದೇವ ದೇವಾ ಸಂಗಾ ಕಂಡ್ಯೆ ಕೆಟ್ಟೆ ಕೆಟ್ಟೆಂ, ತೊಟ್ಟನಿಂತು ಕಣ್ಣು ನೋಡದೆ ಪುಣ್ಣು ನೋಡದೆ ಹೋಗೆಂಬರೆ, ಗಗನದಿಂದಿಳಿವಂಗಾಧಾರಮಾಗುತ್ತೆ ತಪ್ಪುವರೆ, ನರಕದೊಳಾಳಲೀಯದೆ ಚಂಡಿಕೆವಿಡಿದುದ್ದರಿಸಲೆಂದಾಳ್ಗೊಂಡ ಗುರುವೆ, ಪರಮಬಂಧುವೆ, ಪ್ರಾಣವೆ, ಬೆಳ್ದಿಂಗಳೇಕೆ ಬಿಸುಪೇಕೆ, ಅಮೃತವೇಕೆ ವಿಷವೇಕೆ, ಬೆಳಗೇಕೆ ತಮಗೇಕೆ, ನೀನೇಕೆ ಈ ನುಡಿಯೇಕೆ; ಪೊದ್ದಿದರಂ ಪೋಗೆಂಬರೆ, ಸಾರ್ದರಂ ಸೈರಿಸೆಂಬರೆ, ನಂಬಿದರ ಗೋಣಂ ಕೊಯ್ವರೆ, ಶಿಶುವನಿರಿವರೆ, ಪಶುವಂ ಕೊಲುವರೆ, ಎನ್ನಂ ಬಿಡುವರೆ, ಕರುಣಿ ಕರುಣಿ, ಕರುಣಂ ಲೇಸಾಯ್ತು, ಅರ್ಚಿಸಿತಕ್ಕೆ ಫಲವಾಯ್ತು, ಇನ್ನೇನು ಇನ್ನೇನು ಎಂದೊಟ್ಟವೊರಲಿ ಪರಿತಂದು ಸಂಗನಂ ತಕ್ಕೈಸಿ, ಪಳವಿಸಿ ಪಲುಂಬಿ ಗೋಳಿಟ್ಟು ಆಲಿಟ್ಟು ಶಿವದಿಟ್ಟು ಮೊರೆಯಿಟ್ಟು ಮೂರ್ಛಿಸುತೆಂತಕ್ಕೆ ಎಚ್ಚತ್ತು, ಮೆಲ್ಲಮೆಲ್ಲನಾಲಿಂಗಮಂ ಸಡಿಲ್ಚಿ ನಡೆತಂದು,

ಮನವಲ್ಲದ ಮನದೊಳಗ್ಘವಣಿ ಹೂಗಳಂ ಬೇಗಂ ತಂದೆಂತಂತೆ ಪೂಜೆಗೆಯ್ದಾರೋಗಣೆಯಿತ್ತು, ಮೋಹದ ಮುನಿಸು ಮನದೊಳ್ತೀವಿ ಪ್ರಣಯಕಲಹಂ ಬಲಿದು ಪ್ರಸಾದಮನೊಲ್ಲದೆ ಬಸವಂ ಮುಸುಂಕಿಟ್ಟು ಪಶುಪತಿಯ ಪದದ ಕೆಳಗೆ ನಿರ್ವೇದದಿಂ ಪಟ್ಟಿರ್ದಿರೆ, ರಾತ್ರೆಯೊಳು ನೇತ್ರತ್ರಯಂ ಭಕ್ತನಿರವಂ ನೋಡಿ ಕೊರಗಿ ಮೋಹದ ಮಹಿಮೆ[ಗೆ] ಮರವಟ್ಟು, ಭಕ್ತಿಯ ಭರಕ್ಕೆ ಕೌತುಕಂಗೊಂಡಗಲಲಾರದ ಮಗಂಗೆ ಮಿಗೆ ಕರುಣಿಸಿ ಮತ್ತೆ ಕನಸಿನೊಳ್ಬಂದು ಎಲೆ ಮಗನೆ ಎಲೆ ಕಂದ, ಎಲೆ ಬಸವ, ನಿನ್ನನಗಲಿ ನಾನಿರಲಾರೆ, ನಿನಗಿನಿತು ನಿರೋಧವೇಕೆ, ಬೇಡಯ್ಯ ಬೇಡೆನ್ನರಸ, ಬೇಡೆನ್ನ ಭಕ್ತಿನಿಧಿಯೆ, ನಿನ್ನೊಡನೊಡನೆ ಬಿಡದೆ ಬಪ್ಪೆಂ, ನಾಳೆ ಮಧ್ಯಾಹ್ನದೊಳ್ ಶುದ್ಧಾಂಗನಾಗಿ ಬಂದು ನಂದಿಕೇಶ್ವರನ ಮುಂದೆ ಬಂದೆನ್ನ ನೆನೆವುತ್ತಂ ಕುಳ್ಳಿರೆ, ವೃಷಭನ ಮುಖಾಂತರದಿಂದಾವೆ ಬಂದಪೆವಾತಂ ನಿನಗೆ ಸದ್ಗುರುವಲ್ಲಿಂ ಬಳಿಕಂ ಎಮ್ಮನರ್ಚಿಸುತ್ತೆ ಭಕ್ತರ ಬಂಧುವಾಗಿ, ಶರಣರ ಪರುಷದ ಕಣಿಯಾಗಿ, ನಿತ್ಯಸುಖಿಯಾಗಿ, ಪರಸಮಯದ ಗರ್ವಮಂ ನಿಲಿಸಿ, ಭಕ್ತರುಂ ಗೆಲಿಸಿ, ಪ್ರತ್ಯಕ್ಷಂಗಳಂ ತೋರಿ, ಲೌಕಿಕಧರ್ಮಮಂ ಮೀರಿ, ಕಡುನಿಷ್ಠೆಯಂ ಹೇರಿ, ಪರಮಸುಖದಿಂದಿಪ್ಪುದೆಂದು ಬೆಸಸಿ, ಬಿಜಯಂಗೆಯ್ಯೆ,

ಹರಕರುಣೋದಯಮಾದಂತರುಣೋದಯಮಾಗೆ, ನಿದ್ರೆ ತಿಳಿದೆದ್ದು ಪುಳಕಂಗಳಂ ಸಂತೈಸಿಕೊಂಡಾನಂದಾಶ್ರುಗಳಂ ಮುಂದುಗೊಳಿಸಿ, ಸಂತಸಮಂ ಸೈತಿಟ್ಟು, ಪರಿಕಿಸಿನೋಡಿ ಹರನ ಕರುಣಕ್ಕೆ ಹಾರೈಸಿ, ಭಕ್ತಿಭರದಿಂ ಭಾರೈಸಿ, ಮನದ ಮೊನೆಯಂ ಕೋರೈಸಿ, ಬುದ್ಧಿಯೊಳಗಂ ಸಾರೈಸಿ, ಅಹಂಕಾರಮಂ ತೇರೈಸಿ, ಚಿತ್ತದೊಳ್ಪೂರೈಸಿ, ಭೋಂಕನೆದ್ದು ಸಂಗಂಗೆ ಪೊಡಮಟ್ಟು ತದನುಜ್ಞೆಯಂ ಕೈಕೊಂಡು, ಪುಣ್ಯದ ಬಿತ್ತಂ ಬೆಳಗುವಂತೆ ದಂತಪಙ್ತಿಯಂ ಕಾಂತಿಯಿಟ್ಟು, ಏಕನಿಷ್ಠೆಯ ವಜ್ರಾಂಗಿಯಂ ತೊಡುವಂತೆ ಭಸಿತೋದ್ಧೂಳನಂ ಮಾಡಿ, ಸುಕೃತಮನಪ್ಪುವಂತೆ ಧವಳವಸ್ತ್ರಮನುಟ್ಟು ಪೊದೆದು, ಪುಣ್ಯದ ಫಲಂಗಳನಲಂಕರಿಸಿಕೊಂಬಂತೆ ರುದ್ರಾಕ್ಷೆಗಳಂ ತೊಟ್ಟು, ಸಂಗಮೇಶ್ವರಂಗೆ ಮಜ್ಜನ ಪೂಜೆಯಾರೋಗಣೆಗಳನೇಕಚಿತ್ತದೊಳ್ಕೈಗೊಳಿಸಿ ಪೊಡವಂಟು ನಡೆತಂದು,

ರಂಗಮಂಟಪದೊಳ್ಕುಳ್ಳಿರ್ದು, ದೃಷ್ಟಿವಾರಿಯ ದೃಢಚಿತ್ತಂಗೆ ಕರ್ಣದ್ವಯದ ಕಮನೀಯಂಗೆ ಶೃಂಗಯುಗಳದಭಂಗಂಗೆ, ಕಕುದ್ವಳಯದ ಪ್ರಕೃತಿರಹಿತಂಗೆ ವಾಳದಂಡದ ಬೋಳೆಯಂಗೆ ಬಸವಣ್ಣಂ ಮೈಯಿಕ್ಕಿ ಕುಳ್ಳಿರ್ದು, ಸುಲಿಪಲ್ಲ ಬೆಳಗುಂ ಕಣ್ಗಳ ಕಾಂತಿಯುಂ ಮುಖದ ಕಾಂತಿಯ ಪೊಳಪುಂ ದುಕೂಲದ ಧವಳಮರೀಚಿಯುಂ ಭಸಿತದ ಪ್ರಭೆಯುಂ ದಟ್ಟಯಿಸಿ ಮೆರೆಯೆ, ಮುಸುಂಕಿ ಗಂಗೆಯೊಳಗವಗಾಹಮಿರ್ಪ ಪುಣ್ಯಪುರುಷನಂತೊಪ್ಪಿ, ಹೃದಯಕಮಲಮಧ್ಯಸ್ಥಿತ ಸಂಗಮೇಶ್ವರ ಧ್ಯಾನಾರೂಢನಾಗಿರ್ಪ ಸಮಯದೊಳು, ಪಶುಪತಿ ವೃಷಭೇಂದ್ರಂಗೆ ಮನದೊಳು ಸೂಚಿಸೆ, ಹಸಾದವೆಂದು ನಂದಿಕೇಶ್ವರಂ ಸಂಗಮೇಶ್ವರಲಿಂಗಮಂ ನೆನೆಯೆ, ಧ್ಯಾನಂ ಬಲಿದು ಶಿವಲಿಂಗ ಮೂರ್ತಿಗೊಂಡು. ನಂದಿಯ ಹೃದಯಕಮಲವನೊತ್ತರಿಸಿ ಪೊರಮಟ್ಟು ಸದ್ಯೋಜಾತಮುಖಮಂ ಮುಂತಿಟ್ಟೊಳಗೊಳಗೆ ಗಳಗಳನೆ ನಡೆದು ಬರೆ, ಧರ್ಮಮುಖಮರಳ್ವಂತೆ ಮುಕ್ತಿಯ ಸೆಜ್ಜೆದೆಗೆವಂತೆ ವೃಷಭನ ಮುಖಂ ವಿಕಾಸಮನೆಯ್ದೆ, ಜಿಹ್ವೆ ಸಿಂಹಾಸನಗೊಂಡು ನಂದಿಯ ಮುಖದಿಂದೊಗೆತಪ್ಪ ದಿವ್ಯಲಿಂಗಮಂ ಸಂಗನಬಸವಂ ಸ್ನೇಹರಸಭರಿತಸಾತ್ವಿಕದೃಷ್ಟಿಯಿಂದಾಲಿಂಗಿಸುವಂತೆ ನೋಡಿ ನೋಡಿ, ಮನದೊಳೋವಿ ಹೃತ್ಕಮಲದೊಳು ಬೆಳೆದ ಲಿಂಗಕ್ಕೆ ಕರಕಮಲವನಾಂತು, ನಂದಿಯ ನಾಲಗೆಯ ತುದಿಗಂ ತನ್ನ ಕರಪಲ್ಲವಕ್ಕಂ ಸಂದಿಲ್ಲದಂತೆ ಕಯ್ಯೊಡ್ಡಿರೆ, ವೃಷಭರಾಜಂ ಪಶುಪತಿಯನುಜ್ಞೆಯೊಡನೆ ಬಸವರಾಜನ ಹಸ್ತದೊಳು ಸಂಗಮೇಶ್ವರಲಿಂಗಮಂ ಬಿಜಯಂಗೆಯ್ಸಿ ಕೊಟ್ಟು, ಮೃದುಮೃದಂಗಂ ಪಟಹ ಕಹಳಾನಿನಾದ ಸುಮನಸವೃಷ್ಟಿಗಳ ನಡುವೆ ಸುಪುತ್ರನಂ ನಿಜಜನಕಂ ಮೂರ್ಧ್ನಿಘ್ರಾಣಮಂ ಮಾಡುವಂತೆ ವೃಷಭರಾಜಂ ಮುಖಮಂಡಲಮಂ ಬಸವನ ಮಸ್ತಕದೊಳಿಟ್ಟು, ಪಂಚಾಕ್ಷರಿಯ ಸಂಚವನರುಪಿ, ಅಮೃತಮಯಲೋಳಾಜಳ ದೊಳಭಿಷೇಕಮನಲಂಕರಿಸಿ, ಸತ್ಯೋಪದೇಶಮಂ ಶಾಂತಮಯಂಗೆ ಮಾಡಿ, ನೇಹದಿಂ ನೋಡಿ, ಕಾರುಣ್ಯಮಂ ನೀಡಿ, ಸಾಮರ್ಥ್ಯಮಂ ಕೂಡಿ, ನಂದೀಶ್ವರಂ ಸಂಗಮೇಶ್ವರಂಗೆರಗಿ, ಮುನ್ನಿನಂತೆ ಶಿವಲಿಂಗ ಪ್ರಸಾದ ನಿರಂತರಾವಲೋಕನಾಗಿರೆ,

ಸಂಗನಬಸವಂ ಬಸವಿದೇವಂ ಸದ್ಗುರೂಪದೇಶಲಭ್ಯಮಾನ ಕರಕಮಲಸ್ಥಿತ ಶಿವಲಿಂಗೋತ್ಪನ್ನ ಹರುಷಪುಳಕ ಶರೀರ ಸುಖಜಳ ಬಿಂದು ಸಂದಪ್ಪನಯನ ಪುಷ್ಪಸಂಯುತ ಶೈವಸಾಮ್ರಾಜ್ಯಪೂಜ್ಯನಾಗಿ, ರಂಗಮಂಟಪಂ ವಿವಾಹಮಂಟಪಮಾಗೆ, ಪರಿವಾರದೇವರುಂ ನಿಬ್ಬಣಿಗರಾಗೆ, ಕರಣಂಗಳೆ ಸುವಾಸಿನಿಯರಾಗೆ, ಸಕಳೇಂದ್ರಿಯಂಗಳಾರತಿಯೆತ್ತೆ, ಭಕ್ತಿರಸಂ ಕೈಧಾರೆಯಾಗಿ, ಗುರುಕಾರುಣ್ಯ ಮುಹೂರ್ತಕ್ಕೆ, ಜನನ ಮರಣಗಳೆಂಬ ಸಖಿಯರ್ಪಿಡಿದ ಸಂಸಾರದ ತೆರೆ ಸರಿಯೆ, ನಂದಿಯ ಮುಖದ ಮದವಣಿಗನಂ ಕಂಡು, ನಿಷ್ಠೆನೇಹಂಗಳ ಜೀರಗೆ ಬೆಲ್ಲಮಂ ತಳಿದು, ಪ್ರಾಣೇಶ್ವರನಂ

ಪರಮ ಪ್ರೀತಿಯೊಳಪ್ಪಿಕೊಂಡು ಸಂಗಂ ಪತಿಯಾಗಿ, ಬಸವಂ ಸತಿಯಾಗಿ, ಪಂಚಾಕ್ಷರಿಯೆ ಗತಿಯಾಗಿ, ಸದ್ಭಕ್ತಿಯೆ ಮತಿಯಾಗಿ, ಸಂಗನಬಸವಂ ಗುರುಲಿಂಗ ಶ್ರೀಚರಣ ನಖಮಯೂಖಚಂದ್ರಿಕಾ ಚಕೋರಾಯಮಾನಂ ಶೈವಾನುರಾಗ ಸಂಪತ್ಸುಖತರಂಗಿಣೀ ನಿಮಗ್ನಚಿತ್ತಂ ಮಾಯಾನಿರುಹರಣಂ ನಿರಾವರಣ ನಿರ್ಮಳ ನಿಜಾನಂದ ನಿರುಪಾಧಿಕ ಜ್ಯೋತಿರ್ಲಿಂಗ ಹರುಷಪುಳಕಶರೀರನಾಗುತ್ತಂ ಕಪ್ಪಡಿಯ ಸಂಗಮದೊಳಿರೆಯಿರೆ,

### ಸ್ಥಲ ೫

ಬಸವ ಮನೋರಥಂ ನಿನಗೆ ಸಂದುದು ನಿನ್ನನಗಲ್ವುದಿಲ್ಲ ಕೇಳ್
ವಸುಮತಿಗೆಯ್ದೆ ಪೂಣ್ದು ಮೆರೆದಪ್ಪೆವು ಮಂಗಳವಾಡದಲ್ಲಿ ಚಿಂ
ತಿಸಿದೆ ಸಮಸ್ತ ಜಂಗಮಕೆ ಮಾಡುತೆ ಬಿಜ್ಜಳರಾಯನಿಂದೆ ವಂ
ದಿಸಿಕೊಳುತಿಪ್ಪುದೆಂದು ಬಸವಂಗುಸುರ್ದಂ ಗುರು ಸಂಗಮೇಶ್ವರಂ ॥

ಇಂತು ಬೆಸಸುತ್ತಮಿರೆ ಬಸವರಾಜಂ ಕೇಳ್ದು
ಅಂತಸ್ಥದೊಳು ವಿರಹಚಿಂತೆಯಂ ಮಿಗೆ ತಾಳ್ದು
ಸಲೆ ಮತ್ತೆ ಮತ್ತೆ ಪೋಗೆಂದಪಂ ಸಂಗಮಂ
ನಲಿದು ಪೂಜಿಸಲೀಯನಕ್ಕಟಾ ಸಂಗಮಂ
ಆದಡಂ ಪೋಗಿನೋಡುವೆನೆಂದು ಬಗೆಗೊಂಡು
ಆದರಂ ಕುಂದುತ್ತೆ ಚಿಂತೆಯಂ ಕೈಕೊಂಡು
ಶಿವಭಕ್ತಸಂತತಿಗೆ ಬೆಸಕೈವುಪಾಯಮಂ
ಶಿವಭಕ್ತಿ ನೆಲೆಗೊಳ್ವ ಸಮಸುಖಸಹಾಯಮಂ
ನೆನೆದು ತನ್ನೊಳಗೊಳಗೆ ತಿಳಿದಂ ಶಿವಧ್ಯಾನಿ
ಅನುಪಮ ಶಿವೈಕ್ಯ ಸಮ್ಯಕ್‌ಜ್ಞಾನಿ ಕಡು ಮಾನಿ
ಅಕ್ಷರಜ್ಞಾನಮುಂಟುದನೆಯ್ದೆ ಮಾರುವೆಂ
ತ್ರ್ಯಕ್ಷನಣುಗರ್ಗಾದ ಹೊಂಗಳಂ ಬೀರುವೆಂ
ಅವರ ಪ್ರಸಾದಮಂ ನಲವಿಂದೆ ತಾಳುವೆಂ
ಅವರ ಕಾರುಣ್ಯರಸ ಜಲದೊಳೋಲಾಡುವೆಂ

ಎಂದಲ್ಲಿ ಗಣಕ ಕಾಯಕಮಂ ಮನಂಗೊಂಡು
ನಿಂದದಕ್ಕನುಕೂಲ ವೇಷಮಂ ಕೈಕೊಂಡು
ಸಂಗಂಗೆ ಬಿನ್ನೈಸಲೆಂದು ಹತ್ತಿರೆ ಬಂದು
ಹಿಂಗಲಾರದೆ ಶೋಕಜಲಬಿಂದುವಿಂ ಮಿಂದು
ಸೆರೆ ಬಿಗಿದು ಗದುಗದಿಸಿ ಬಿಕ್ಕುತಂ ಬೀಳುತ್ತೆ
ಹೊರಳುತಳುತತ್ತತ್ತು ಬಿಡದೊರಲುತೊರಲುತ್ತೆ

ನಿಂದಿರುತ್ತಲೆ ಸಂಗ ಹೋಗಿಬಂದಪೆನಯ್ಯ
ತಂದೆ ನಿನ್ನಂ ನಂಬಿ ನಚ್ಚಿ ಹೋದಪೆನಯ್ಯ
ಅಗಲಲಾರೆಂ ದೇವ ದೇವ ಕರುಣಿಪುದೆನುತೆ
ಬಗೆವೆಚ್ಚಿ ತನು ಹೆಚ್ಚಿ ನಟ್ಟಂತೆ ನಿಂದಿರುತೆ
ಮುಂದಿರ್ದ ಬಸವನಂ ಕಂಡು ಸಂಗಂ ಮರುಗಿ
ಬಂದಪ್ಪಿ ಕಣ್ಣನೀರಂ ತೊಡೆದು ಮಿಗೆ ಮರುಗಿ
ಬೇಡೆನ್ನ ಕಂದ ನಿನ್ನೊಡನೆ ಬಪ್ಪೆಂ ಬಸವ
ನೋಡು ನಿನ್ನಾಣೆ ನಿನ್ನಾಣೆ ಬಪ್ಪೆಂ ಬಸವ
ಆನೀಗಲಿರಲಾರ್ಪೆನೇ ಬಸವ ಬಸವಣ್ಣ
ನೀನಿಂತು ಅಳುತಿರ್ಪಡೆನಗರಿದು ಬಸವಣ್ಣ
ಕಂದ ಬೇಡಯ್ಯ ಬೇಡಯ್ಯ ನೇಹದ ನಿಧಿಯೆ
ಹಿಂದುಗೊಂಡೇ ಬಪ್ಪೆನೆನ್ನ ಸುಕೃತದ ಸುಧೆಯ
ನೆನೆಯೆ ಮುಂದಿರ್ದಪೆಂ ಕರೆದಡೋಯೆಂದಪೆಂ
ಮನದೊಳಗೆ ಕರದೊಳಗೆ ತನುವಿನೊಳಗಿರ್ದಪೆಂ
ನಿಂದಲ್ಲಿ ಬಂದಪೆಂ ನಡೆದಲ್ಲಿ ನುಡಿದಪೆಂ
ಬಂದಲ್ಲಿ ನಿಂದಪೆಂ ನಡೆದಲ್ಲಿ ನುಡಿದಪೆಂ
ಬಿಟ್ಟುದಂ ಬಿಟ್ಟಪೆಂ ಪಿಡಿದುದಂ ಪಿಡಿದಪೆಂ
ನಟ್ಟುದಂ ನಟ್ಟಪೆಂ ಕೀಳ್ದುದಂ ಕೀಳ್ದಪೆಂ
ಆಡಿದುದನಾಡುವೆಂ ನೋಡಿತಂ ಕೂಡುವೆಂ
ಮಾಡಿತಂ ಮಾಡುವೆಂ ಕೂಡಿತಂ ಕೂಡುವೆಂ
ನಡೆಯಯ್ಯ ನಡೆ ಮಗನೆ ನಡೆ ಕಂದ ಬಸವಣ್ಣ
ಪೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ

ಎಂದಲ್ಲಿ ಕರುಣಿಸಿದ ಮಾತು ಸಂಬಳವಾಗಿ
ಬಂದನೆಂತೆಂತಕ್ಕೆ ಅಗಲಲಾರದೆ ರಾಗಿ
ಸಂಗಮನ ಕರುಣವೇ ತನಗೆ ಬೆಂಬಲವಾಗಿ
ಸಂಗಮಧ್ಯಾನವೇ ತನಗೆ ಸಂಗಡವಾಗಿ
ಸಂಗನಾಡಿದ ಮಾತನಾಡಿ ಹಾರೈಸುತಂ
ಸಂಗನಿದ್ದಂದಮಂ ನೆನೆದು ನೆರೆ ಹಿಗ್ಗುತಂ
ನಡೆವಾಯಸವನರಿಯದಾನಂದದಿಂ ಮಿಕ್ಕು
ಮೃಡನೆ ಶರಣೆನುತೆ ಮಂಗಳವಾಡಮಂ ಪೊಕ್ಕು
ಪಟ್ಟಣದ ಕೇರಿಕೇರಿಗಳೊಳಗೆ ನಡೆವುತಂ
ಇಟ್ಟಣಿಪ ಸಂಪದಕೆ ಸಂತಸಂಬಡೆವುತಂ

ಬಂದು ಬಿಜ್ಜಳರಾಯನರಮನೆಗೆ ನೆಡವುತಂ
ಸಂದಣಿಪ ರಾಜಪುತ್ರಾಳಿಯಂ ನೋಡುತಂ
ಮತ್ತಗಜಘಟೆ ತುರಂಗಾಳಿಯನೆ ನೋಡುತಂ
ಒತ್ತರಿಪ ವೀರಭಟರೊಪ್ಪವಂ ಕಾಣುತಂ
ಭಾವರಸಪೂರಿತ ಕವೀಂದ್ರರಂ ನೋಡುತಂ
ನೇವುರದ ನುಣ್ದನಿಯ ಸತಿಯರಂ ನೋಡುತಂ
ಕುಪ್ಪಸದ ಬೀರಣೆಯ ಬಿನ್ನಣದ ಹಸರಿಗಂ
ಟೊಪ್ಪಿಗೆಯ ಹೊರವೇಷದಿಹಪರದ ಲೆಕ್ಕಿಗಂ
ನಡೆನಡೆದು ಕರಣಶಾಲೆಗೆ ಬಂದು ಕುಳ್ಳಿರ್ದು
ಸಡಗರಿಸಿ ಬರೆವ ಗಣಕರನೀಕ್ಷಿಸುತ್ತಿರ್ದು
ಕರಣಸಂಪ್ರತಿಯ ಸಂಪದದ ಗಣಕರ್ಕಳಂ
ಎರೆವ ಲಂಚವನೀವ ದಂಡನಾಥರ್ಕಳಂ
ಲೆಕ್ಕಕ್ಕೆ ಬಂದಿರ್ಪ ರಾಜಪುತ್ರರ್ಕಳಂ
ಮಿಕ್ಕು ಝುಂಕಿಪ ಸಲುಗೆಯಾಳ್ಗಳೊಪ್ಪಂಗಳಂ
ನೋಡುತಂ ಬೆರಗಾಗುತಲ್ಲಿ ಬಸವಣ್ಣನಿರೆ
ಕೂಡೆ ಲೆಕ್ಕದ ಸಂಭ್ರಮಂ ಸಿರಿಯನುಗುಳುತಿರೆ

ಬಂದನಲ್ಲಿಗೆ ಮೆರೆವ ಭಂಡಾರಿ ರಾಗದಿಂ
ಸಂದಣಿಸಿ ಲೆಕ್ಕಮಂ ನೋಡುವುದ್ಯೋಗದಿಂ
ಕಮ್ಮೆಕುಲಪತಿಯೆನಿಪ ಸಿದ್ಧದಂಡಾಧಿಪಂ
ಸುಮ್ಮಾನಿ ಶಿವಭಕ್ತನಚಲಿತ ಗುಣಾಧಿಪಂ
ಕುಳ್ಳಿರ್ದು ತನ್ನ ಲೆಕ್ಕಂಗಳಂ ಕೇಳುತಿರೆ
ಒಳ್ಳಿತೆನೆ ಗಣಕರ್ಕಳೆಲ್ಲರುಂ ನೋಡುತಿರೆ
ಆಯದೋಳ್ಬಿಯಮಂ ಕಳೆದು ನಿಲವಂ ಕಂಡು
ಆಯತಿಯೊಳೆಲ್ಲರುಂ ಪೇಳಲ್ಮನಂಗೊಂಡು
ಅಯ್ದು ಕೋಟಿಯ ಮೇಲೆ ಲಕ್ಕವೈವತ್ತೆಂದು
ಎಯ್ದೆ ಗಣಕರ್ತಪ್ಪಿ ಪೇಳೆ ಭರದಿಂದಂದು
ತಪ್ಪುದದನರಿದನಾ ಬಸವರಾಜಂ ನೋಡ
ಒಪ್ಪುವ ಗಣೇಶ್ವರರ ಗಣಕಾಧಿಪಂ ನೋಡ
ಭಂಡಾರಿಗಂ ಸ್ಥಿತವನೊಲಿದೊಡಂಬಡಿಸುತಿರೆ
ತಂಡತಂಡದ ಗಣಕತತಿ ತಪ್ಪದೆನುತಮಿರೆ
ಕಂಡು ಬಸವಂ ಭಕ್ತನೊಡವೆ ಕೆಡಲಾಗದಿದು
ಕಂಡುದಂ ಪೇಳ್ವೆನಯ್ಯಾ ಎನುತ್ತಂ ನೆನೆದು

ಸಿದ್ಧದಂಡಾಧಿಪನನಲ್ಲಿ ಬಸವಂ ನೋಡಿ
ಬುದ್ಧಿ ನಿಮಗಿಲ್ಲ ತಪ್ಪಿದುದು ಲೆಕ್ಕಂ ನೋಡಿ
ಎಂದು ಮತ್ತೊಮ್ಮೆ ನೋಡಿಸುತಲಿಪ್ಪನಿತಕ್ಕೆ
ಸಂದಾಯಮಂ ಬೀಯದೊಳಗೆ ಕಳೆವನಿತಕ್ಕೆ
ಅಯ್ದುಕೋಟಿ ಸ್ಥಿತವನೊಳಗೆ ಗಣಕರ್ಕಂಡು
ಎಯ್ದೆ ಬಸವಣ್ಣನುಮನೀಕ್ಷಿಸುತೆ ಮನಗೊಂಡು
ಭಂಡಾರಿಯುಂ ಗಣಕರುಂ  ಮತ್ತೆ ಮಿಗೆ ನೋಡಿ
ಕೊಂಡಾಡಿ ಬೆರಗಾಗಿ ಕೌತುಕದೊಳೋಲಾಡಿ
ಹರೆಯವಿದು ಲೆಕ್ಕವಿದು ಹರನ ಕಾರುಣ್ಯವಿದು
ಶರಣ ಕಾರಣಿಕನೀತಂ ನಿಮ್ಮ ಭಾಗ್ಯವಿದು
ಎಮಗೆ ತಮಗೆಂದು ಬಸವನನೆಲ್ಲರುಂ ಬೇಡಿ
ನಿಮಗಲ್ಲವೆನುತೆ ಭಂಡಾರಿಗಂ ತಾಂ ಕೂಡಿ
ಕೊಂಡೊಯ್ದು ಬಿಜ್ಜಳನನಲ್ಲಿ ಕಾಣಿಸಿ ದೇವ
ಕಂಡೆವಿಲ್ಲಿಂತಪ್ಪ ಮತಿಯನಿಂತೆಲೆ ದೇವ
ಲಕ್ಕವೈವತ್ತನಿಂತೆನಗಾಗು ಮಾಡಿದಂ
ಲೆಕ್ಕದೊಳು ಪಡಿಯಿಲ್ಲ ಮತಿಯುಳ್ಳ ಕೋವಿದಂ
ಎನ್ನ ಭಂಡಾರಕ್ಕೆ ಬರೆಯಿಸುವೆನೀತನಂ
ಉನ್ನತಜ್ಞಾನಯುತ ಗಣಕವಿಖ್ಯಾತನಂ
ಎಂದು ಉಡಕೊಡಿಸಿ ಜೀವಿತವನಾಗಳೆ ಮಾಡಿ
ಒಂದು ವರುಷಕ್ಕೆ ನೂರೊಂದು ಹೊನ್ನಂ ಬೇಡಿ
ಕೊಡಿಸಿ ಭಂಡಾರಿ ತನ್ನರಮನೆಗೆ ಕೊಂಡೊಯ್ದು
ಕಡು ಮೋಹದಿಂದೆ ಹೊಗಳುತ್ತೆ ಮನ್ನಣೆಗೆಯ್ದು

ಕುಲವೊಂದೆ ಕುಲವಾಗೆ ಗೋತ್ರವಂತನುವಾಗೆ
ನೆಲೆ ವಿಚಾರಿಸೆ ತನ್ನ ಸಂಬಂಧವೊಂದಾಗೆ
ಸಿದ್ಧದಂಡಾಧಿಪಂ ಹೆಚ್ಚುತಂ ಹಿಗ್ಗುತಂ
ಸಿದ್ಧಿಯಾಯ್ತೆನಗಖಿಳ ಪದವಿಯೆಂದುಬ್ಬುತಂ
ಪತಿಯುಂ ಪಿತಂ ಸುತಂ ಬಸವಣ್ಣ ನೀನೆನಗೆ
ಗತಿಮತಿ ಮಹಾಭಕ್ತಿ ಬಸವಣ್ಣ ನೀನೆನಗೆ
ಬದುಕಿದೆಂ ಬದುಕಿದೆನೆನುತ್ತೆ ಹಾರೈಸುತಿರೆ
ಮುದದಿಂದೆ ಬಂದುದೆನ್ನಯ ಪುಣ್ಯವೆನುತಮಿರೆ
ತನ್ನ ಧನಧಾನ್ಯಕ್ಕೆ ಬಸವನೇ ಪತಿಯಾಗಿ
ತನ್ನ ಸಂಪದಕೆಲ್ಲ ಬಸವನೇ ಗತಿಯಾಗಿ

ಬಿಜ್ಜಳಕ್ಷಿತಿಪತಿಪನರಮನೆಗೆ ಸಿರಿ ಕರುವಾಗಿ
ಸಜ್ಜನಂ ಬಸವವಾಕ್ಯವೆ ದೈವಕೃತಿಯಾಗಿ
ರತ್ನರಾಶಿಗಳೆಮ್ಮ ಬಸವಿದೇವನ ಮುಂದೆ
ನೂತ್ನ ವಸ್ತುಗಳೆಮ್ಮ ಬಸವಿದೇವನ ಮುಂದೆ
ಪಟ್ಟಾವಳಿಗಳೆಮ್ಮ ಬಸವಿದೇವನ ಮುಂದೆ
ಪಟ್ಟಣಂಗಳ ಸಲುಗೆ ಬಸವಿದೇವನ ಮುಂದೆ
ಹೊನ್ನ ಹೊಸ ರಾಸಿಗಳ ಬೆಟ್ಟವಾತನ ಮುಂದೆ
ಚೆನ್ನ ಮಿಸುನಿಯ ಘಟ್ಟಿಯೊಟ್ಟಿಲಾತನ ಮುಂದೆ
ಸರ್ವಾಯುಮುಂ ನಮ್ಮ ಬಸವಿದೇವನ ವಶಂ
ಸರ್ವವ್ಯಯಂ ನಮ್ಮ ಬಸವರಾಜನ ವಶಂ
ಗೌಳ ದೇಶದ ಹೊನ್ನರಾಸಿ ಬಸವನ ಮುಖಂ
ಚೋಳದೇಶದ ಭೂಷಣಾಳಿ ಬಸವನ ಮುಖಂ
ಬಂಗಾಳ ಲಾಳದೇಶದ ಪಾವುಡಂಗಳುಂ
ವಂಗಂ ಕಳಿಂಗದೇಶದ ಮಹಾನಿಧಿಗಳುಂ
ಚೇರ ಕೇರಳ ಪಾಂಡ್ಯ ಪಲ್ಲವದ ಪಾವುಡಂ
ಧಾರುಣಿಯೊಳುಳ್ಳರಸುಗಳ ಮಹಾಪಾವುಡಂ
ಬಸವ ಬರವಂ ಪಾರ್ದು ನಿಂದಿರ್ಪರಂತಲ್ಲಿ
ಬಸವರಾಜಂ ಬಂದಡೊಪ್ಪಿಸುವರಂತಲ್ಲಿ
ಇಂತಪ್ಪ ಸಂಪದಪ್ರಕಟರದೊಳು ಸುಖಮಿರ್ದು
ಚಿಂತಿಸಿದನಾ ವಸ್ತುಗಳ ನಡುವೆಕುಳ್ಳಿರ್ದು
ಅಯ್ಯಲಾ ಇಂತಪ್ಪನರ್ಘ್ಯಮಂ ಭಕ್ತರ್ಗೆ
ಕಯ್ಯಾರೆ ಕುಡಲಿಲ್ಲ ಪರಶಿವನ ಭಕ್ತರ್ಗೆ
ಎಂದೋ ಮಹೇಶರ್ಗೆ ಸೇರಿಸುವೆನಿಂತಿದಂ
ಎಂದೋ ಸುಚಿತ್ತವಾರಾಧಿಸುವೆನಿಂತಿದಂ
ಕಾಕಭೋಜನವಾಗಿ ಹೋಗುತಿರ್ದಪುದಕಟ
ಲೋಕಾಯತರ್ಗೆ ಸಾರುತ್ತಲಿರ್ದಪುದಕಟ
ದೇವ ಸಂಗಯ್ಯ ಸಲಿಸೆನ್ನ ಮನದರ್ಥಿಯಂ
ದೇವ ಭಕ್ತರ್ಗೀವ ಪುಣ್ಯಮಯಭಕ್ತಿಯಂ
ಎಂದನುದಿನಂ ಮನದೊಳನುತಾಪವಾಗುತಿರೆ
ಇಂದುಧರನಲ್ಲಿ ಸುಖಮಂ ಬೇಡಿ ಬಯಸುತಿರೆ
ಬಂದುದಾ ಸಚಿವ ಸಿದ್ಧಂಗೆ ಸ್ವರ್ಗದ ದಾಳಿ
ನಿಂದು ದೇಹವನಲೆದುದಲ್ಲಿ ರೋಗದ ಕೇಳಿ
ರೋಗದಿಂ ಪತ್ತೆಂಟು ದೆವಸಕಸುವರೆಯಾಗಿ
ಬೇಗದಿಂ ರಜತಗಿರಿಗೆಯ್ದಿದಂ ಸುಖಿಯಾಗಿ

ಎಯ್ದೆ ಬಸವಂ ಕಂಡು ಬಿಜ್ಜಳಾದೇಶದಿಂ
ಒಯ್ದು ಸಂಸ್ಕರಿಸಿ ನಡೆತಂದನುದ್ವೇಗದಿಂ
ಬಂದು ಬಿಜ್ಜಳಭೂಭುಜನ ಸಭಾಮಧ್ಯದೊಳು
ನಿಂದು ನುಡಿದಂ ಬಸವನಲ್ಲಿ ನಿರ್ವೇದದೊಳು
ಸಿದ್ಧದಂಡಾಧಿಪಂ ಹೊಂದಿದನಪುತ್ರಕಂ
ಬುದ್ಧಿಗೊಡುವುದು ಬಾಳ್ಕೆಗೆಂತು ಸೋಪಾಧಿಕಂ
ಎನೆ ಬಿಜ್ಜಳಂ ನುಡಿದನಲ್ಲಿ ಸಭೆ ಪೊಗಳುತಿರೆ
ಘನಮಹಿಮನೊಡನುಸುರ್ದನೋಲಗಂ ಕೇಳುತಿರೆ
ಸರ್ವ ಭಂಡಾರವೆಲ್ಲಂ ನಿನಗೆ ಬಸವಣ್ಣ
ಉರ್ವರೆಯ ಧನವೆಲ್ಲವುಂ ನಿನಗೆ ಬಸವಣ್ಣ
ಎನ್ನ ರಾಜ್ಯದ ಶಿಕ್ಷೆ ರಕ್ಷೆ ನಿನ್ನದು ಬಸವ
ಎನ್ನ ತೇಜೋಭಿಮಾನಂ ನಿನ್ನದೆಲೆ ಬಸವ
ನಿನ್ನಂದರಿನ್ನುಂಟೆ ಭಂಡಾರಿ ಬಸವಣ್ಣ
ನಿನ್ನ ಸರಿದೊರೆಯುಂಟೆ ಭಂಡಾರಿ ಬಸವಣ್ಣ
ನಿನ್ನ ಬರವಿಂದೆ ಭಂಡಾರವೊದಗಿತು ಬಸವನ
ನಿನ್ನ ಬರವಿಂದೆ ಪ್ರತಾಪವೊದಗಿತು ಬಸವ
ದೇಶಕ್ಕೆಯುಂ ನೀನೆ ಪಟ್ಟಣಕ್ಕಂ ನೀನೆ
ಕೋಶಕ್ಕೆಯುಂ ನೀನೆ ಸಂಪದಕ್ಕಂ ನೀನೆ
ಆತನಾಳ್ಕುದುರೆ ಸಂವರಣೆ ನಿನ್ನದು ಬಸವ
ಆತನ ಸಮಸ್ತವಿತ್ತಂ ನಿನ್ನದೆಲೆ ಬಸವ

ಎಂದು ಪಟ್ಟಾವಳಿಯನುಡುಗೊರೆಯನೊಲಿದಿತ್ತು
ತಂದೊಂದು ಪಟ್ಟೆಯ ಬಾಳ್ಕೆಗೆಂದೊಲಿದಿತ್ತು
ಪಟ್ಟದಾನೆಯ ಮೇಲೆ ಬಸವನಂ ಕುಳ್ಳಿರಿಸಿ
ಇಟ್ಟಣಿಪ ಕಟಕಮಕುಟಾಳಿಯಿಂ ಸಿಂಗರಿಸಿ
ಸಂದಣಿಸಿ ಕೆಲಬಲದ ಬೆಳುಗೊಡೆಗಳೊತ್ತರಿಸೆ
ಹಿಂದೆ ನಿಸ್ಸಾಳಭೇರೀರವಂ ಸಂದಣಿಸೆ
ಮುಂದೆ ಕಹಳಾರವಂ ಬಿರುದೆತ್ತಿ ಕರೆವುತಿರೆ
ವಂದಿಗಳ್ ಗಾಯಕರ್ ಮಂಗಳಂ ಪಾಡುತಿರೆ
ಪುರದ ಕೇರಿಗಳೊಳಗೆ ಹರುಷದಿಂ ಮೆರೆವುತಿರೆ
ತರತರದ ರಾಜವೀಧಿಗಳೊಳಗೆ ಮೆರೆವುತಿರೆ
ತಿರುಗಿ ತನ್ನರಮನೆಯನಾನಂದದಿಂ ಪೊಕ್ಕು
ಪರಮಸುಖದಿಂ ಬಸವರಾಜಂ ಮನಂ ಮಿಕ್ಕು

ನಲವಿಂದೆ ಹರಭಕ್ತರಂ ಕರೆಯಿಸುತ್ತಮಿರೆ
ಒಲವಿಂದೆ ಚರಣಸರಸಿಜವನಪ್ಪುತ್ತಮಿರೆ
ಆರಾಧನೆಯನಿತ್ತವರ ಹರಕೆಯಂ ಹೊತ್ತು
ಮಾರಾರಿ ಶರಣೆನುತೆ ಪರಮ ಸುಖಮಂ ಹೊತ್ತು
ಶರಣ ಚರಣಾಲಿಂಗನಾಸಕ್ತನೊಪ್ಪಿದಂ
ಹರಭಕ್ತಕುಲಕಲ್ಪತರುರೂಪನೊಪ್ಪಿದಂ
ಬಸವಿದೇವಂ ಸಕಳ ಸಂಪದದೊಳೊಪ್ಪಿದಂ
ಬಸವಣ್ಣದಂಡನಾಥಂ ಸುಖದೊಳೊಪ್ಪಿದಂ ೧೯೦-೫೦೬

## ಸ್ಥಲ ೬

ಬಸವಂ ಸಂಗ ವರಪ್ರಸಾದಮುಖನಾಗುತ್ತೆಯ್ದೆ ಬಂದಾದ ಸಂ
ತಸದಿಂ ಮಂಗಳವಾಡದೊಳ್ ಕನಕ ಭಂಡಾರಾಜ್ಞೆಯಂ ದಂಡನಾ
ಥ ಸಮಗ್ರ ಪ್ರಭುವೃತ್ತಿಯಂ ಸಕಳ ಸಂಪದ್ವೈಭವಾಭಾರ್ಯದೊಂ
ದೆಸೆವಂ ಬಿಜ್ಜಳರಾಯನಿಂದೆ ಪಡೆದಂ ದಂಡೇಶ ದಿಕ್ಕುಂಜರಂ॥

ಇಂತು ಪಡೆದು ಸಂಗನಬಸವಂ ಕೆಲವು ದಿನಂಗಳಂ ಕಳೆದು ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಿದೇವಿಯರೊಡತಣ ವಿವಾಹ ಸಂಪದದಿಂ ಸಂತಸುಖಮಿರ್ದೊಂದು ದೆವಸಂ ಪ್ರಭಾತ ಸಮಯ ಸಮುಚಿತ ಪ್ರಕ್ಷಾಳನ ಕರಚರಣ ವದನಸರೋರುಹಂ ವಿಭೂತಿ ರುದ್ರಾಕ್ಷದುಕೂ[ಲಾಲಂ]ಕೃತ ಸರ್ವಾಂಗಂ ಸಂಗಮೇಶ್ವರ ಶ್ರೀ ಪಾದದರ್ಶನಸ್ಪರ್ಶನ ನಿತ್ಯನೇಮ ಸಂಪನ್ನನಾಗಿ ಬಿಜ್ಜಳನರಮನೆಗೆ ಪೊರಮಟ್ಟು ನಡೆತಪ್ಪಾಗಳು, ದಂಡಿಗೆಯ ಧವಳಚ್ಛತ್ರದ ಕೆಲಬಲದೊಳು ನೆಲನನುಗ್ಘಡಿಸುವಂಗರಕ್ಷಕರ ಶಿಷ್ಟರ ಸೇವ್ಯರ ಪಸಾಯಿತರ ಸಂದಣಿಯ ನಡುವೆ ಸಾರೆಂಬರಸಾಳ್ಗಳ, ತೊಲಗೆಂಬ ಪಡಿಯರರ, ಮುಂಗುಡಿಯ ಕುರುಳಕೊಂತದ ವೀರವೃಂದದ ಕೋಳಾಹಳಂಬೆರಸಿ ಬಂದರಮನೆಯಂ ಪೊಕ್ಕು ತನತನಗೆ ಪೊಡಮಡುವ ರಾಜಪುತ್ರ ದಂಡನಾಥ ಮಂಡಳಿಕರ್ಗಭಯಮನೀವುತ್ತ ಒಡ್ಡೋಲಗದ ನಡುವೆ ರಭಸದಿಂ [ಬರ್ಪ] ಬಸವರಾಜನ ಶಿವಕಲಾಪರಿಪೂರ್ಣತೇಜ ಪ್ರತಾಪರೂಪಿಂಗೆ ಬಿಜ್ಜಳಂ ಮನದೊಳೆರಗುತ್ತಿರೆ, ತಂದಿಕ್ಕಿದ ಸಮ ಗದ್ದುಗೆಯ ಮೇಲೆ ನೃಪನನುಪಚರಿಸುತಂ ಸಂಗನಬಸವಂ ಬಸವಿದೇವಂ ಪ್ರಸನ್ನದಂಡನಾಥಂ ಗಂಭೀರಶಿರೋಮಣಿ ವಿಲಾಸದಿಂ ಕುಳ್ಳಿರೆ,

ಬಿಜ್ಜಳಭೂಪನಿಕ್ಕೆಲದೊಳಿಕ್ಕುವ ಸೀಗುರಿಯ, ಬೀಸುವ ಚಾಮರದ, ವಿಳಾಸಿನಿಯರ ಕಂಕಣದ ಝುಣಝುಣತ್ಕಾರದ ಸವಿದನಿಗಳಿಗೆ ಕಿವಿಗೊಡುತ್ತಿತ್ತೆರದೊಳೊತ್ತರದಿಂ ಕುಳ್ಳಿರ್ದ ಛತ್ತೀಸ ಕುಲದ ರಾಜಪುತ್ರರ್ಕಳ ಸಚಿವರ ದಂಡನಾಥರ ಮಂಡಳೇಶ್ವರರ ಮಹಾಸಾವಂತರ ಬಿರುದವಾಹಕರ ರಾಯರಾವುತರ ಗಜಾರೋಹಕರ ಮಾವಂತರ ಮನ್ನಣೆಯ ಭಾಷೆಯಾಳ್ಗಳ ದೃಷ್ಟಿವಾರಿಯ ಧೀರರ ಪಾಠಕರ ಗಣಿಕೆಯರ ವೀರರ ಹರಿವಾಣದಾಯದ ಲೆಂಕರ ಬಿಂಕಂಕಕಾರರ ಮಾಸಾಳ್ಗಳ ಬಾರಸಂಕಲೆಯ ತೊಡರ ತೋಟಿಯ ಕಠಾರಾಯಿತರ ಬಾಣಾಯಿತರ ಮಲ್ಲಜಟ್ಟಿಗಳ ಕವಿಗಳ ಗಮಕಿಗಳ ವಾದಿಗಳ ವಾಗ್ಮಿಗಳ ಮುಗ್ಧೆಯರ ವಿದಗ್ಧೆಯರ ಪ್ರೌಢೆಯರ ಮಧ್ಯಮನಾಯಕಿಯರ ಗಾಯಕರ ಚಿತ್ರಕರ

ನರ್ತಕರ ವರ್ತಕರ ಮೊತ್ತದೊತ್ತರದ ತಿಂಥಿಣಿಯನೊತ್ತರಿಸಿ ಇಟ್ಟಣಿಸಿದ ಕಟ್ಟಣಕದಾಸ್ಥಾನದೊಳು, ಮಾಳವ ಮಾತಂ ಮಾಣು, ಗೌಳ ತೆರಹುಗುಡು, ಲಾಳ ಮೈಯಿಕ್ಕು, ಗುರ್ಜರ ಬಿನ್ನವಿಸು, ನೇಪಾಳ ಕುಳ್ಳಿರು, ಕಳಿಂಗ ಸಂತಮಿರು, ಬಂಗಾಳ ಹೋಹೋ, ಎಂದು ಮಕುಟವರ್ಧನರಂ ಕಟ್ಟಿಗೆಯೆತ್ತಿ ಮಟ್ಟವಿರಿಸುವ ವೇತ್ರಹಸ್ತರಾಕ್ರಮಣೆಯ ನಡುವೆ ದಂಡನಾಥ ತ್ರಿಣೇತ್ರನೆನಿಪ ಬಸವರಾಜಂ ಸಕಳ ದೇಶಾಧಿಪತಿಗಳ್ಕಳುಹಿದ ವಿಳಾಸಿನಿಯರೊಡನೆ ಬಂದ ಪಾವುಡಂಗಳಂ ಕನಕ ರತ್ನಾಭರಣಜಾಳ ಮನೊಪ್ಪುಗೊಂಡು, ಭಂಡಾರಕ್ಕೆ ತೆಗೆಯಿಸುತ್ತಂ, ರಾಜಪುತ್ರರ್ಗೆ ಪಸಾಯಮಮಂ ಕೊಡಿಸುತ್ತಂ, ವೀರಭಟರ್ಗೆ ಚಡಾಯಮಮಂ ಮಾಡಿಸುತ್ತಂ, ಮಕುಟವರ್ಧನರಂ ಕಾಣಿಸುತ್ತಂ, ಬಂದ ಚಾರರ್ಗೆ ಬೀಳ್ಕೊಡಿಸುತ್ತಂ ಸುಖದೊಳಿಪ್ಪಲ್ಲಿ, ಮಧ್ಯಂದಿನ ಸಮಯ ಸಮುದಿತ ಡಿಂಡಿಮ ಧ್ವಾನಂ ನೆಗಳೆ ಪೇರೋಲಗಮಂ ಪರೆಯವೇಳ್ದೆಲ್ಲರಂ ಕಳುಪಿ ಬಿಜ್ಜಳರಾಯನೊಡನಾಪ್ತ ವಚನರಚಿತ ಮಂತ್ರಾಲೋಚನೆಯಿಂದಿನಿತು ಬೇಗಮಿರ್ದರ ಮನೆಯಂ ಪೊರಮಟ್ಟು ತನ್ನ ಮಹಾಮನೆಗೆ ಬಪ್ಪಲ್ಲಿ,

ತನತನಗೆ ಶಿವಕಾರುಣ್ಯ ಶೈವಸಾಮ್ರಾಜ್ಯಸಂಪದಂ ಕೈಸಾರ್ಗುದೆಂಬುತ್ಸವಮಂ ಕೇಳ್ದು, ದೇಶದೇಶದ ಪತ್ತೆಂಟುಗಾವುದದ ಮಾಹೇಶ್ವರರ್ಕರುಣಿಸಿ ಬಂದು ಮುಂದೆ ನೆರೆದಿರೆ, ಭೋಂಕನೆ ಕಂಡು ದಂಡಿಗೆಯಿಂದಿಳಿದು ಬರ್ದುಕಿದೆಂ ಬರ್ದುಕಿದೆನೆಂದು ಮೈಯಿಕ್ಕಿ ನಿಂದು, ಕೈಯಂ ಮುಗಿದು ಕಿಂಕುರ್ವಾಣನೇತ್ರನುಂ ದೈನ್ಯವದನನುಂ ಕಾರ್ಪಣ್ಯಕಾಯನುಮಾಗಿ ನಿಲ್ಲದೆಯ್ತಂದೆಲ್ಲರಂ ನಿಜನಿಳಯಮಧ್ಯಸ್ಥಿತ ಭದ್ರಾಸನಂಗಳೊಳು ಬಿಜಯಂಗೆಯ್ಸಿ ಚರಣಂಗಳಂ ತೊಳೆದು, ಪಾದೋದಕಮಂ ತಳೆದು, ಸಂಗಡದೊಳು ಲಿಂಗಾರ್ಚನೆಯಂ ಮಾಡಿ ಪ್ರಸಾದಭರಿತಪ್ರಮೋದಹೃದಯನಾಗುತಂ ಅಂದಿನ ದಿನದಲವರಂ ಪಿಂಗಲಾರದೆ ಪುರಾತನಗೀತಗೋಷ್ಠಿರಸತರಂಗಿಣಿಯೊಳು ಬೆಳಗಪ್ಪನ್ನವೀಸಾಡಿ ಪರಿಣಾಮದ ತಡಿಗೆ ಸಾರ್ದು, ಬಸವರಾಜಂ ಸದ್ಭಕ್ತಿಯುಕ್ತಂ ನಿಂದಿರ್ದು, "ದೇವ ದೇವಾ ಶಿವರಾತ್ರಿಯ ಸುಖಮಂ ಸವಿಗಂಡೆಂ ಬಿಡಲಾರೆನಾರೆಂ, ಇಂದಿನ ತೆರದೊಳೆಂದೆಂದಿಗಂ ಕುಂದದೆ ನಿಚ್ಚಂ ಶಿವರಾತ್ರಿಯಂ ಮಾಳ್ಪೆನೆಂಬ ನೇಮವಂ ಕೈಕೊಂಡೆಂ ಕೈಕೊಂಡೆಂ" ಎಂದು ಸಂಗನ ಶರಣರ ಸಮಕ್ಷಮದೊಳು ಸತ್ಯವಚನಾಲಂಕೃನೇಮಸಂಪನ್ನನಾಗಿ, ಕೂಡಲಸಂಗ ಲಿಂಗಾರ್ಚನಾ ನಿತ್ಯ ಶಿವರಾತ್ರಿವ್ರತ ಸತ್ಯಶರಣಸಮಾರಾಧನತಾತ್ಪರ್ಯಚಿತ್ತಂ ಬಿಜ್ಜಳಭೂಪ ಸೀಮೋಪಚರ್ಯ ಕಾರ್ಯಭರನಪ್ಪ ಬಸವರಾಜನೋಲಗಿಸುತ್ತಿಪ್ಪಲ್ಲಿ,

ಒಂದುದಿನಂ ಒಡ್ಡೋಲಗದೊಳೆಡ್ಡಮಾಗಿ ನೃಪನ ಕೆಲದ ಗದ್ದುಗೆಯ ಮೇಲೆ ಬಸವರಾಜನಿರೆ, ಪಿಂತಣ ಮೈಯೊಳು ಬಿಜ್ಜಳನ ಗುರುವಪ್ಪ ನಾರಣಭಟ್ಟನೊಡನೆ ಮಂಚ್ಯಣಕ್ರಮಿತಂ ಕೂಚಿಗಂ ಪೋಚಿಪೆದ್ದಿಗಂ ಮೊದಲಾದ ವೇದಜಡರ್ಬಸವನಿರವಿಂಗ ಸೂಯಂಗೊಳುತ್ತೆ ಕುಳ್ಳಿರೆ, ಮಕುಟಕೋಟಿವರ್ಧನರಿಂದಿಡಿದಿಡಿದಿರ್ಪ ಸಭಾಮಧ್ಯ ಸಿಂಹವಿಷ್ಟರಪ್ರತಿಷ್ಠನಾಗಿ ಕಲಿಯುಗರಾವಣಂ ಪರನೃಪಾಳಗರ್ವಪರ್ವತಕುಲಿಶಂ ಅರಿಪಜ್ಜಿ ಪನ್ನಗವೈನತೇಯನೆನಿಪ ಬಿಜ್ಜಳಭೂಪನೊಪ್ಪಿಪ್ಪ ಸಮಯದೊಳೊರ್ವ ಮಾಲೆಗಾರಂ ಲೀಲೆಯಿಂ ತನ್ನ ಕೈಯಂ ಸುತ್ತಿ ಕೈವಾರಿಸುತ್ತೆ ಮುತ್ತಿಮುಸುಕುವ ಮಧುಕರನಿಕರಂ ಬೆರಸು ತಂದೊಂದು ಸುವರ್ಣ ಕೇತಕೀಕುಸುಮಮನರಸನ ಕೈಗೆ ನೀಡೆ, ಈ ಹೊಸ ಕುಸುಮವೆಲ್ಲಿಯದೆನುತ್ತರಸಂ ತೆಗೆದುಕೊಂಡ ಸೌರಭದ ಮುದ್ರೆಯನೊಡೆವಂತೆ ಹೂವಂ ಬಿಚ್ಚುತೊಳಗಣ ಪರಿಮಳದ ತೆನೆಯ ಮಗ್ಗುಲೊಳೊಗ್ಗಿ ಬೆಳದ ಸಣ್ಣನಪ್ಪ ನುಣ್ಣೆಸಳನೊಂದಂ ತೆಗೆದು ಬಸವರಾಜನ ಕೈಯೊಳ್ಕುಡೆ ಲೇಸೆನುತ್ತೀಸಿಕೊಂಡು, ತನ್ನ ಕಕ್ಷಪುಟದೊಳಗಣ ರನ್ನದ ಸೆಜ್ಜೆಯಂ

ತೆಗೆದು, ಒಳಗಣ ಸಂಗಮೇಶ್ವರಲಿಂಗಕ್ಕೆ ಕೊಟ್ಟು ಹಿಂಗದಿರ್ಪಲ್ಲಿ ಶೈವಾಗಮಂಗಳೊಳು ಕೇತಕೀಕುಸುಮಂ ಭೂತೇಶ್ವರಂಗೇರಿಸಲಾಗದೆಂಬುದುಂಟದಂ ಮಾಣ್ದಾಗಮಮಂ ಮೀರಿ ದಂಡನಾಯಕರ್ ಕೊಡುವುದರಿದೆಂದು ಕಟಕಿಯಿಂ ಪೇಳ್ದು ನಾರಣಭಟ್ಟಂ ಪೊದ್ದಿ ನುಡಿಯೆ,

ಬಸವರಾಜಂ ಕೇಳ್ದು ನಸುನಗುತ್ತೆಲೆ ಎಲೆ ಮರುಳು ವಿಪ್ರಾ, ಎಲೆ ದ್ವಿಜಾಧಮಾ, ಎಲೆ ಕರ್ಮದ ಕಡುಜಡನೆ ಕೇಳ್ಕೇಳು, "ದೇವಂ ಭಕ್ತರ್ ಕೊಟ್ಟಡೆ ಕೈಕೊಳ್ವಂ ಎಂದು ನುಡಿದ ಮಾತಿಗೆ ಗಡಗಡನೆ ನಡುಗಿ ಬಿಜ್ಜಳನೃಪಂ ಬಸವನ ಮೊಗಮಂ ನೋಡಿ, ದೇವರ್ ಕೈಕೊಂಬರೆಂಬುದಕ್ಕೆ ಕುರುಹೇನೆಂದು" ಕೇಳಲೊಡಂ, "ದೇವದೇವಾ ಅಮ್ಮಮ್ಮ ಪರಮಸಯ ಮೇಘಮಹಾಬಲಂ ದುರ್ಜನಗಿರಿವಜ್ರಘಾತಂ ಭಕ್ತಕುಲಚಕ್ಷುವೆನಿಪ ಬಸವರಾಜಂ ತನ್ನ ಕೆಲಬಲದ ಸಹಸ್ರಮಾಹೇಶ್ವರರಂ ಕಕ್ಷಪುಟದ ಸಜ್ಜೆಗಳನುಪ್ಪರಿಸೆ ಸರ್ವಶಿವಲಿಂಗಂಗಳ ಉತ್ತಮಾಂಗದೊಳಂ ಮಂಗಳವಾಡದ ಮಹಾಶಿವಲಿಂಗದಂಘ್ರಿಗಳೊಳಂ ಬಸವಣ್ಣಂ ಕೊಟ್ಟ ಕೇತಕೀ ದಳಸದೃಶಮಪ್ಪ ಸಣ್ಣೆಸಳ್ಗಳು ತಿಣ್ಣಮಾಗಿ ತೀವಿರೆ ಬಿಜ್ಜಳಂ ಕಂಡು ದಣ್ಣಾಯಕರ ಪದತಳಕ್ಕೆರಗಿ ತಪ್ಪುದಂಡಕ್ಕೆ ಪನ್ನಿಚ್ಛಾಸಿರ ಹೊನ್ನಂ ಕೊಟ್ಟಂದುಮೊದಲಾಗಿ ತನ್ನರಮನೆಯ ಭಂಡಾರಿಗಳೆಂಬುದಂ ಮರೆದು ಸಂಗಮೇಶ್ವರದೇವನೆಂದೇ ಕಂಡು ಕೊಂಡಾಡುತಂ ಸಂತಸುಖದಿಂ ಪಲಕೆಲವು ದಿವಸವೀ ತೆರದೊಳಿರೆ,

ಭಂಡಾರಿಬಸವಂ ದಂಡನಾಥತ್ರಿಣೇತ್ರಂ ಬಿಜ್ಜಳರಾಯನ ಕಟಕದೊಳು ಸಜ್ಜನಸ್ನೇಹದಿಂ ಶರಣರ್ಗೆರಡಿಲ್ಲದೆ ಬೆಸಕೆಯ್ಯುತ್ತಿರ್ದಪನೆಂಬ ಸುಕೃತಾಲಂಕೃತ ಸರ್ವವಚನವಾರ್ತಾವಿಶೇಷಂ ಜಗದ್ಭರಿತಮಾಗೆ ಕೇಳ್ದು, ಸಕಲ ದೇಶದ ಶರಣಾಳಿ ಕರುಣದಿಂ ಹರಭಕ್ತಿಸರೋನಿಧಿ ತೆರೆಮಸಗಿ ಮೀರಿಬಪ್ಪಂತೆ ಮಂಗಳವಾಡದ ನಾಲ್ಕುಂ ದೆಸೆಯೊಳು ಮೃದುಮೃದಂಗ ಪಟಹ ಶಂಖ ಭೇರಿರವಂಗಳೊಡನೆ ಎತ್ತಿದ ವೃಷಭಧ್ವಜಂಗಳ ಸತ್ಯಶರಣರ ಕೇಳಿಕೆ ಸಹಿತಂ ಸಂದಣಿಸಿ ನಡೆತಂದ ಮಹಾಮಾಹೇಶ್ವರಕುಲಮನತಿಸ್ನೇಹದಿಂದತಿ ಭಯದಿಂದತಿ ಹರುಷದಿಂದತಿ ಭಕ್ತಿಯಿಂದತಿಶಯ ಮಾಗಿದಿರ್ಗೊಂಡು, ಭಾಪು ಭಾಗ್ಯವೆ ನರಜನ್ಮದೊಳು ಬಂದು ಗುರುಕರುಣಮಂ ಪೊತ್ತು ಹರಕಿಂಕರನಾಗಿ ಶರಣರ ಬರವಂ ಪಡೆದೆಂ ಎಂದುಬ್ಬಿ ಕೊಬ್ಬಿ ಮುಗುಳೊತ್ತಿ ಬಿರಿಬಿರಿದರಳ್ದು ಸಕಲ ಶರಣರಂ ನಿಜನಿಳಯದೊಳು ಬಿಜಯಂಗೆಯ್ಸಿ ಸೈಗೆಡೆದು ನಿಂದು ಕೈಗಳಂ ಮುಗಿದು, "ದೇವ ದೇವಾ ನಿಮ್ಮಂ ಕಂಡವನಾವ ಲೋಕಕ್ಕೆ ಕಣ್ಣಾಗಲ ನಿಮ್ಮಡಿಗಳ ಕೆರ್ಪಂ ಪಿಡಿದವನ ಚರಣವಾರ ಮಕುಟದೊಳು ಬೀಳದು? ದೇವಾ, ನಿಮ್ಮನಾರಾಧಿಸಿದ ಮನುಜನ ಕೈ ಆರ ಕೈಯಂ ಕೀಳ್ಮಾಡದು? ದೇವಾ, ನಿಮ್ಮ ಪದಪದ್ಮರಾಗಮಂ ತಾಳ್ದನ ಭುಜಂ ಆರ ಭೂಮಿಯಂ ಧರಿಯಿಸದು? ದೇವಾ, ನಿಮಗೆ ತೊತ್ತಾದಂಗೆ ತೊತ್ತಾಗದ ಲಕ್ಷ್ಮಿಯಾವಳು? ನಿಮ್ಮಂ ಸ್ತುತಿಗೆಯ್ದ ನಾಲಗೆಗೆ ಮರುಳಾಗದ ಸರಸ್ವತಿಯಾವಳು? ದೇವಾ, ನಿಮ್ಮಂ ಸಿಂಗರಿಸಿದಂಗಾಳಾಗದ ಚೆಲುವಾವುದು? ದೇವಾ, ನಿಮ್ಮಂ ಪೊಗಳಲೆನ್ನಳವಲ್ಲಂ; ದೇವಾ ನಿಮ್ಮೊಳಂ ಸಂಗನೊಳವಿಭೇದಂ, ನಿಮ್ಮಂ ನೆನೆವುದೆ ಶಿವಚಿಂತೆ, ನೋಡುವುದೆ ದರುಶನಂ, ಮುಟ್ಟುವುದೆ ಸ್ಪರುಶನಂ, ನೀವೇ ಗತಿ ನೀವೆ ಮತಿ ನೀವೆ ಪ್ರಾಣಂ" ಎನುತೊಮ್ಮೊಮ್ಮೆ ಬೆಮರುತಾನಂದಜಲಮಂ ಸೂಸುತಂ ನಡೆಗೆಟ್ಟು ಕುಳ್ಳಿರುತಂ ಗದುಗದಿಸುತಂ ಕಳೆಯೇರುತಂ ಕರಗುತಂ ಕಂಪಿಸುತಂ ಪುಳಕಿಸುತಂ ಸುಖಿಸುತಂ ಶಿವಭಕ್ತಿಸಾರ್ವಭೌಮಂ ಜಂಗಮಪ್ರಾಣಿ ಸಂಗನಬಸವಂ ಶರಣರ ಸಮೀಪಕ್ಕಿದಿರ್ವಂದು ಹರುಷದಿಂ ಪರಮಸುಖಿಯಾಗಿರ್ದನಂತುಮಲ್ಲದೆ–

## ಸ್ಥಲ ೭

ಶರಣಸರೋಜಸಂಕುಳಸಹಸ್ರಕರಂ ಶರಣಾಬ್ಧಿಚಂದ್ರಮಂ
ಶರಣಸಮಾಜಚಾತಕಸುಧಾವರುಷಂ ಶರಣಾದ್ರಿಶಾಸನಂ
ಶರಣಮಯೂರ ಮೇಘನಿನದಂ ಮಝುರೇ ಶರಣೈಕಬಾಂಧವಂ
ಶರಣಸುಖಾಕರಂ ಶರಣಸನ್ನಿಹಿತಂ ಬಸವಣ್ಣನೊಪ್ಪಿದಂ॥

ಇಂತು ಶರಣರ ಮುಂದೆ ಬಸವಣ್ಣನೊಪ್ಪಿರ್ದು
ಸಂತ ಮಾಹೇಶ್ವರರ ಘನಕರುಣವೊದಗಿರ್ದು
ಎಸೆವ ಪನ್ನಿಚ್ಛಾಸಿರೊಡೆಯರಂ ನೋಡುತಂ
ಬಸವಣ್ಣನಲ್ಲಿ ತಮ್ಮರಸಿಯರ ಕರೆವುತಂ
ಬೋನಮಂ ಸವೆವುದೊಡೆಯರ್ಗೆಂದು ಪೇಳುತಿರೆ
ನಾನಾವಿಧಾನ್ನರಸ ಪಕ್ವಾನ್ನವಾಗುತಿರೆ
ಕರಮೊಪ್ಪೆ ಸಮೆದ ಓಗರದ ರಾಸಿಗಳಲ್ಲಿ
ಹರಿವರಿಯ ಮಂಡಗೆಗಳೊಟ್ಟಿಲುಗಳಲ್ಲಲ್ಲಿ
ಗಾರಿಗೆಯ ಅಳಸುಗಳ ಕುತ್ತರಿಗಳಲ್ಲಲ್ಲಿ
ಹೂರಿಗೆಯ ಲಡ್ಡುಗೆಯ ಬೆಟ್ಟಂಗಳಲ್ಲಲ್ಲಿ
ಹಾಲುಂಡೆ ಘೃತಪೂರದಾಲಯವದಲ್ಲಲ್ಲಿ
ಹಾಲೋಗರೊಡೆ ಸಣ್ಣ ಸೇವಗೆಗಳಲ್ಲಲ್ಲಿ
ಸರವಳಿಗೆ ಸಣ್ಣ ಸರವಳಿಗೆ ಮಣಿ ಸರವಳಿಗೆ
ವರ ಮಧುರ ಹೂಸಣಂಬಂ ಸಮೆದವಂತೊಳಗೆ
ಮೇಲೋಗರದ ಹಿರಿಯ ರಾಸಿ ಮಸಗಿದವಲ್ಲಿ
ಹಾಲುತುಪ್ಪದ ಕೋಟಿ ಕೊಪ್ಪರಿಗೆಯಂತಲ್ಲಿ

ಸಮೆದು ಶಿವಲಿಂಗಕ್ಕೆ ಕಂಪಿಡುತ್ತಿರೆ ಕಂಡು
ಅಮಮ ಭಕ್ತೈಕನಿಧಿ ಬಸವಂ ಮನಂಗೊಂಡು
ಶರಣರ ಪದಂಗಳಂ ಹರುಷದಿಂ ತೊಳೆವುತಂ
ಕರಮೊಸೆದು ಪಾದೋದಕಂಗಳಂ ತಳೆವುತಂ
ಬದುಕಿದೆನೆನುತ್ತಲರ್ಚನೆಗೆ ಎಡೆಮಾಡುತಂ
ಸದಮಲರನಲ್ಲಲ್ಲಿ ಭಕ್ತಿಯಂ ಬೇಡುತಂ
ಬೇರೆ ಬೇರಗ್ಘವಣಿ ಬೇರೆ ಪುಷ್ಪದ ಪಂತಿ
ಬೇರಲ್ಲಿ ಬೇರೆ ಶಿವಸಿಂಹಾಸನದ ಕಾಂತಿ
ಒಪ್ಪೆ ತರದಿಂದೆ ಸಿಂಹಾಸನಂಗಳನಿಕ್ಕಿ
ತಪ್ಪದೆಲ್ಲರ್ಗೆ ತರತರದಿಂದ ಮೈಯಿಕ್ಕಿ

ಪಲ್ಗಿರಿದು ತಗ್ಗಿ ತಲೆಗೆರೆದು ಬೆರಲಂ ಕಚ್ಚಿ
ಕಾಲ್ಗೆರಗಿ ಕುಗ್ಗಿ ಕಿಂಕರತೆಯಿಂ ನೆರೆ ಹೆಚ್ಚಿ
ಕೈಗೊಟ್ಟು ತಂದು ಬಿಜಯಂಗೆಯ್ಸಿ ಕುಳ್ಳಿರಿಸಿ
ಮೈಗರೆದು ಹರುಷದಿಂ ನಲವಿಂದೆ ಹಾರೈಸಿ
ಎಡೆಮಾಡಿದೆಡೆಗಳೊಳು ಭಕ್ತಿಯಿಂ ಕುಳ್ಳಿರಿಸಿ
ಮೃಡಪೂಜೆಯುತ್ಸಾಹವಲ್ಲಲ್ಲಿ ಸಡಗರಿಸಿ
ಬೆಲ್ಲವತ್ತದ ಪತ್ರೆಯಂ ನೀಡು ನೀಡೆಂಬ
ಮಲ್ಲಿಗೆಯನಿಲ್ಲಿ ತಾ ಸುರಗಿಯಂ ಸುರಿಯೆಂಬ
ಮರುಗಮಂ ತಂದಿರಿಸಿರೆಮ್ಮ ದೇವರಿಗೆಂಬ
ಬಿರಿಮುಗುಳ್ಗಳಿರವಂತಿಯಂ ಮೆಲ್ಲನಿಳುಪೆಂಬ
ಆಗಮವದೇಕೆ ಕೇತಕಿಯ ನಮಗೀಯೆಂಬ
ರಾಗದಿಂ ರಾಜಿಸುವೆಸಳ್ಗಳಂ ತೋರೆಂಬ
ಸಂಪಗೆಯ ಕುಸುಮಮಂ ತಂದು ಸೈತಿರಿಸೆಂಬ
ಕಂಪುಳ್ಳ ಸೇವಂತಿಯಂ ತಂದು ತುರುಗೆಂಬ
ಜಾದಿಯಂ ಮೊಲ್ಲೆಯಂ ಬೆರಸಿ ನೀಡೆಮಗೆಂಬ
ಹೂದುರುಗಲೇಕೆ ಪಡ್ಡಳಿಯನೆಮಗೀಯೆಂಬ
ಅಳಿಗಳೆರಗಿದ ಹೂವ ನಾವೊಲ್ಲೆವೆಂದೆಂಬ
ಕಳೆ ರವಿಕರಂ ಮುಟ್ಟಿದರಳ್ಗಳಿವು ಬೇಡೆಂಬ
ಭಸಿತಮಂ ಮೈಯೊಳೊಲಿದುದ್ಧೂಳಿಸೆಂದೆಂಬ
ಎಸೆವಂತಲಂಕರಿಸು ರುದ್ರಾಕ್ಷಿಗಳನೆಂಬ
ತಣ್ಣಿತಪ್ಪಗ್ಗಣಿಗಳಂ ಸೋದಿಸೆಂದೆಂಬ
ಸಣ್ಣೀರಮಪ್ಪ ಸಿರಿಗಂಧಮಂ ಬೆರಸೆಂಬ
ಹಿಮಜಲಕೆ ಸಂಪಗೆಯ ಮುಗುಳ್ಗಳಂ ಕೂಡೆಂಬ
ವಿಮಳವಪ್ಪಗ್ಘಣಿಯನೊಲಿದು ಬಾಸಣಿಸೆಂಬ
ಬಾವನ್ನವೇ ಸಾಲ್ವುದೆಮ್ಮ ದೇವರಿಗೆಂಬ
ಆವಗಂ ಬೇಳ್ಪ ಪಚ್ಚೆಯನೀವುದೆಮಗೆಂಬ
ನಂದಿವರ್ತಿಯನೊಲಿವನೆಮ್ಮ ಶಂಕರನೆಂಬ
ಮಂದೈಪ ಕಂಪೆ ಸಾಲ್ವುದು ಶಶಿಧರಂಗೆಂಬ
ಧೂಪಮಂ ತಮ್ಮ ದೇವಂಗೆ ಮುನ್ನೀಯೆಂಬ
ದೀಪಮಂ ಬಳಿಕೆತ್ತಿರೇ ದಶಭುಜಂಗೆಂಬ

ಶರಣರಂ ನೋಡುತಂ ಹರುಷದಿಂ ಹಿಗ್ಗುತಂ
ಪರಿಪರಿಯ ಹೊಸಪರಿಯ ಪುಳಕದಿಂದರಳುತಂ

ಬಸವರಾಜಂ ನೋಡಿ ಬದುಕಿದೆನೆನುತ್ತಲ್ಲಿ
ಬಸವಿದೇವಂ ಕಂಡು ಹೆಚ್ಚಿ ಬಾಳುತ್ತಲ್ಲಿ
ಜಲಚರಂ ಸೋಂಕದಗ್ಗವಣಿ ಬೇಕೆಂದಡಂ
ಸಲೆ ವತ್ಸನುಣ್ಣದ ಪಯಂ ನೇಮವೆಂದಡಂ
ದೇವಲೋಕದ ಕಮಲವೆಮಗೆ ಬೇಕೆಂದಡಂ
ದೇವಲೋಕದ ಮರುಗಮಂ ಕುಡುವುದೆಂದಡಂ
ಕರಿಯ ಮಲ್ಲಿಗೆಯನೆಮ್ಮೀಶ್ವರಂಗೆಂದಡಂ
ಕರವೀರದರಳೆಮಗೆ ನೇಮ ತಾನೆಂದಡಂ
ಕಾಮದಹನದ ವಿಭೂತಿಯ ನೇಮವೆಂದಡಂ
ಹೇಮದಕ್ಷತೆ ನೇವವೆಮಗೆ ಸಲಿಸೆಂದಡಂ
ಆರತಿಗೆ ಪಚ್ಚ ಕರ್ಪುರವನೀಯೆಂದಡಂ
ವಾರಿಜದ ತಂತುವಿನ ಬತ್ತಿ ಬೇಕೆಂದಡಂ
ಏಕಮುಖರುದ್ರಾಕ್ಷ ಜಪಕೆ ಬೇಕೆಂದಡಂ
ಕೈಕೊಳಿಸುವಡೆ ರನ್ನದಿಂಡೆ ಬೇಕೆಂದಡಂ
ಗಜಮಸ್ತಕದ ಮುತ್ತು ರಂಗವಲಿಗೆಂದಡಂ
ಭುಜಗನ ಫಣಾಮಣಿ ನಿವಾಳಿ ಬೇಕೆಂದಡಂ
ಕೋಡಿದನೆ ಕೊಂಕಿದನೆ ಬೆದರಿದನೆ ಬೆಚ್ಚಿದನೆ
ಬಾಡಿದನೆ ಬಳ್ಕಿದನೆ ಕಂದಿದನೆ ಕುಂದಿದನೆ
ಸಂಗನಂ ನೆನೆದು ಸುಖದಿಂದಲೀವುತ್ತಿರ್ದ
ಅಂಗಜಾರಿಯ ಕರುಣದಿಂದಲೀವುತ್ತಿರ್ದ
ಇಲ್ಲೆನ್ನದಪ್ರತಿಮ ಬಸವನೀವುತಿರ್ದ
ಎಲ್ಲಾ ಗಣಂಗಳ್ಗೆ ಚಲದೊಳೀವುತ್ತಿರ್ದ

ಈ ತೆರದೊಳೀವುತಿರೆ ಶರಣತತಿ ಹೆಚ್ಚುತಂ
ಓತುಕೊಂಡಾಡುತಂ ಹಾಡುತಂ ಹರಸುತಂ
ಹೊಸ ಹೊಸ ಪರಿಯ ಪಿರಿಯ ನೇಮದಚಲರ್ಕೆಲರು
ಕುಸುಮಮಂ ಕೊಡದೆ ಪರಿಮಳವನೀವರ್ಕೆಲರು
ಮಜ್ಜನಕ್ಕೆರೆವುತಂ ಕರಗುತಿರ್ಪರ್ ಕೆಲರು
ಉಜ್ಜಳಿಪ ಲಿಂಗಮಂ ನೋಡುತಿರ್ಪರ್ ಕೆಲರು
ಪೂಜೆಯಂ ಮಾಡಿ ಪುಟವೆದ್ದಾಡುವರ್ ಕೆಲರು
ಪೂಜಿಸುತೆ ಕಂಪಿಸುತೆ ಕೈಮರೆವವರ್ ಕೆಲರು
ಹೂವನೀಕ್ಷಿಸುತೆ ಹೊರೆಯೇರುತಿರ್ಪರ್ಕೆಲರು
ದೇವನಂ ನೋಡಿ ದಳವೇರುತಿರ್ಪರ್ಕೆಲರು

ಶಿವಲಿಂಗಮಂ ಮುಟ್ಟಿ ಮುಟ್ಟಿ ಮೆರೆವರ್ಕೆಲರು
ತವಕದಿಂ ಸ್ತುತಿಯಿಸುತೆ ಗದುಗದಿಸುವರ್ಕೆಲರು
ಹಾಡಲೆಂದನುಗೆಯ್ದು ನೋಡುತಿರ್ಪರ್ಕೆಲರು
ನೋಡಲೆಂದನುಗೆಯ್ದು ಹಾಡುತಿರ್ಪರ್ಕೆಲರು
ಆಡುತಾಡುತೆ ಮೀರಿ ಮಸಗಿ ಕುಣಿವರ್ಕೆಲರು
ನೋಡಿ ನೋಡುತ್ತಲೆವೆಯಿಕ್ಕದಿರ್ಪರ್ಕೆಲರು
ಶಿವ ಶಬ್ದಮಂ ಕೇಳ್ದು ಪುಳಕಿಸುವವರ್ಕೆಲರು
ಶಿವನೊಡನೆ ಮುನಿಮುನಿದು ಜಿನುಗುರ್ತಿಪರ್ಕೆಲರು
ಧೂಪಮಂ ಮರೆದಾರತಿಯನೆತ್ತುವರ್ಕೆಲರು
ದೀಪಮಂ ಧೂಪಮೆಂದರ್ಚಿಸುವವರ್ಕೆಲರು

ಇಂತು ಶಿವಲಿಂಗಪೂಜಾಸಂಭ್ರಮಂ ನೆಗಳೆ
ಸಂತತಂ ಬಸವರಾಜಂ ಹಿಗ್ಗುತಂ ಹೊಗಳೆ
ಆಗಳೊಗೆದವು ಘಂಟೆಗಳ ಢಣ ಢಣತ್ಕಾರ
ಆಗಳುಣ್ಮಿದವು ಕೌಸಾಳದ ಫಣತ್ಕಾರ
ಅಲ್ಲಿ ಮುರಜದ ಮದದ ಕಹಳೆಗಳ ಧ್ವನಿಯೊಳಗೆ
ಅಲ್ಲಿಯಾವುಜದ ಶಂಖದ ಘನಧ್ವನಿಯೊಳಗೆ
ಭಕ್ತಿಸ್ವಯಂವರದ ಪುಣ್ಯವೀಥಿಯ ತೆರದೆ
ಮುಕ್ತಿಸ್ವಯಂವರದ ಶಿವಯೋಗಗಳ ತೆರದೆ
ಇರೆ ಬೇರೆ ಬೇರೆ ಪರಿಪರಿಯ ಪರಿಯಾಣದಿಂ
ಸರಸ ಪಕ್ವಾನ್ನ ಘೃತಮಂ ಬಡಿಸಿ ರಾಗದಿಂ
ನವ ಸುಧಾಕಿರಣಚಯವೆನಿಸುವೋಗರವಿಕ್ಕಿ
ಸವಿಗೆ ಸವಿಯೆನಿಪ ಮೇಲೋಗರಂಗಳನಿಕ್ಕಿ
ರಾಗದಿಂದಣ್ಣೆವಾಲ್ ಸಕ್ಕರೆಗಳಂ ಬಡಿಸಿ
ಬೇಗದಿಂ ಕೆನೆಮೊಸರು ಮಜ್ಜಿಗೆಗಳಂ ಬಡಿಸಿ
ಚಂದ್ರಮಂಡಲದೊಳಮೃತವನಿಕ್ಕಿ ಕೊಡುವಂತೆ
ಸಾಂದ್ರರುಚಿಗೊಡುವ ಪರಿಯಾಣಂಗಳುಮನಿಂತೆ
ನೀಡುತಿರೆ ಪರಿಚಾರಕಪ್ರಕರವಲ್ಲಲ್ಲಿ
ಕೂಡೆ ಶರಣವ್ರಜಂ ಹಾರಯಿಸಲಲ್ಲಲ್ಲಿ

ಬಸವರಾಜಂ ನಲಿದು ಪುಷ್ಪಾಂಜಳಿಯನೀಯೆ
ಎಸೆಯೆ ಶಿವಭಕ್ತಕುಲವೆಲ್ಲ ಪರಕೆಯನೀಯೆ
ಆರೈಸಲಿಕ್ಕಿದರುಘೇ ಚಾಂಗು ಬೊಲ್ಲೆಂದು

ಮಾರಾರಿಯಂ ಶಂಭುವಂ ಬಣ್ಣಿಸುತ್ತಂದು
ತವತವಗೆ ನೇಮದಿಂದರ್ಪಿಸಲ್ತೊಡಗಿದರು
ಶಿವಲಿಂಗಮೂರ್ತಿಯಂ ಬೋಳೈಸತೊಡಗಿದರು
ಹಾಲುಂಡೆ ಮೃದುವಾದವೆಲೆ ಲಿಂಗ ಕೊಳ್ಳೆನುತೆ
ಹಾಲನಾರೈಸು ಮತ್ತಾವುದುಂ ಬೇಡೆನುತೆ
ದೇವ ಬೀಸುಂಬೂರಿಗೆಯನೊಮ್ಮೆ ಸವಿಯಯ್ಯ
ದೇವ ಪರಡಿಯ ಪಾಯಸವನುಣ್ಣು ದಮ್ಮಯ್ಯ
ದೇವ ಮೆಲ್ಲನೆ ಬಳಲ್ದಿರಿ ತಂದೆಯೆಂದೆನುತೆ
ದೇವ ಇನ್ನೊಂದೆ ತುತ್ತೆನ್ನಾಣೆ ಕೊಳ್ಳೆನುತೆ
ಕೊಟ್ಟ ಪಕ್ವಾನ್ನಮಂ ಮೆಲಲೊಲ್ಲೇಯೇಕೆಂಬ
ದಿಟ್ಟಿಯಾಯ್ತೆಲೆ ಉಪ್ಪಾರತಿಯನೆತ್ತೆಂಬ
ಪಸಿದನೈ ಶಿವಲಿಂಗನುಣಲಾರನೆಂದೆಂಬ
ಮೊಸರೋಗರವೆ ಸಾಲ್ವಿದೆಮ್ಮ ದೇವಂಗೆಂಬ
ಕೆನೆಮೊಸರು ನಿನಗರ್ತಿ ದಮ್ಮಯ್ಯ ಕೊಳ್ಳಯ್ಯ
ಮನವಾರೆ ಪೇಳ ನಿನ್ನಿಚ್ಚೆಯಂ ಪೇಳಯ್ಯ
ಒಂದೆ ಮೇಲೋಗರವನೊಮ್ಮೆ ಸವಿನೋಡೆನುತೆ
ಮಂದಗಿವೆ ಮಜ್ಜಿಗೆಯನವಧರಿಸು ಶಿವಯೆನುತೆ
ಎನ್ನರಸ ಮೊಸರೋಗರೆಲ್ಲವಂ ನೀ ಕೊಳ್ಳ
ಚೆನ್ನನ ಮಹಾನಿಧಿಯೆ ಕರುಣದಿಂ ಕೈಕೊಳ್ಳ

ಎಂದೆಂದು ತೂಪಿರಿದು ಭಸಿತದಿಂ ಕಾಪಿಟ್ಟು
ಸಂದಣಿಪ ಭಯಭಕ್ತಿಯಂ ಮನದ ಮುಂದಿಟ್ಟು
ಆರೈಸಲಿಕ್ಕುವ ಶರಣರಿಚ್ಛೆಗವತರಿಸಿ
ಕಾರುಣ್ಯನಿಧಿ ಗಿರಿಜೆ ದೇವಗಣತತಿವೆರಸಿ
ಉಂಡನೆಲ್ಲರ್ಗಿಷ್ಟವರನಾಗಿ ಶಂಕರಂ
ತಂಡತಂಡದ ಕರುಣದಿಂ ಚಂದ್ರಶೇಖರಂ
ಆಗಳೊಲವಿಂ ಹಸ್ತಪ್ರಕ್ಷಾಲನಂ ಮಾಡಿ
ರಾಗದಿಂ ಚಂದನದ ಕೈಘಟ್ಟಿಯಂ ನೀಡಿ
ಕತ್ತುರಿಯ ಕರ್ಪುರದ ವೀಳೆಯಂಗಳನಿತ್ತು
ಬಿತ್ತರಿಪ ಚಮರ ಸೀಗುರಿ ದರ್ಪಣವನಿತ್ತು
ಬಿಜಯಂಗೆಯಿಸಿಕೊಂಡು ನಿಜಲಿಂಗಮೂರ್ತಿಯಂ
ವಿಜಯರಲ್ಲಲ್ಲಿ ಪ್ರಸಾದಸುಖದರ್ತಿಯಂ
ತೊಡಗಿದರು ತಮತಮಗೆ ಕೂಡೆ ಶರಣೆಂದೆನುತೆ

ಮೃಡನ ಪ್ರಸಾದಕ್ಕೆ ಹರುಷದಿಂ ಪೊಡಮಡುತೆ
ಏನೆಂಬೆನವರ ಸದ್ಭಕ್ತಿಯಾನಂದಮಂ
ನಾನಾ ವಿಧದೊಳಿಪ್ಪ ಗಣನಿವಹದಂದಮಂ
ಸವಿಸವಿದು ರುಚಿಯನರ್ಪಿಸುತಿರ್ಪವರ್ಕೆಲರು
ಸವಿಸವಿದು ಬಸವನಂ ಹರಸುತಿರ್ಪರ್ಕೆಲರು
ಭಕ್ತಿಪ್ರಸಾದಮಂ ಕೊಳುತಿರ್ಪವರ್ಕೆಲರು
ಭಕ್ತರ್ಗೆ ಮರೆದಿಕ್ಕಲಮ್ಮದಿರ್ಪರ್ಕೆಲರು
ಹರಿಹರಿದು ತುತ್ತಿಟ್ಟು ಕುಣಿವುತಿರ್ಪರ್ಕೆಲರು
ಶರಣರಂ ನೋಡಿ ಬೆರಗಾಗುತಿರ್ಪರ್ಕೆಲರು
ತುಪ್ಪಮಂ ಸುರಿಸುರಿದು ಬಸವಣ್ಣ ಬಾಳೆಂದು
ಒಪ್ಪಿ ಹಾಲಂ ಸವಿದು ಬಸವಣ್ಣ ಶರಣೆಂದು
ಸರಸ ಪಕ್ವಾನ್ನಮಂ ಸವಿದೆನಗೆ ತನಗೆಂಬ
ಅರರೆ ಹಾಲುಂಡೆಯಂ ತವಕದಿಂ ಸುರಿಯೆಂಬ
ಪರಿಣಾಮದಿಂ ತೇಗಿ ಬಸವನಂ ಹರಸುತಂ
ಪರವಶೀಭೂತರಾಗುತೆ ಸುಖದೊಳೊಪ್ಪುತಂ
ಲಿಂಗಪ್ರಸಾದಿಗಳು ಶರಣಪ್ರಸಾದಿಗಳು
ಸಂಗಪ್ರಸಾದಿಗಳು ಶಬ್ದಪ್ರಸಾದಿಗಳು
ಗೀತಪ್ರಸಾದಿಗಳು ನೋಟಪ್ರಸಾದಿಗಳು
ಮಾತೇನೊ ಶರಣದರುಶನದ ಪ್ರಸಾದಿಗಳು
ವೀರಪ್ರಸಾದಿಗಳು ಶಾಂತಪ್ರಸಾದಿಗಳು
ಸೌರ ಪ್ರಸಾದಿಗಳು ಧೀರ ಪ್ರಸಾದಿಗಳು
ಅಚ್ಚ ಪ್ರಸಾದಿಗಳು ನಿಚ್ಚ ಪ್ರಸಾದಿಗಳು
ನಿಚ್ಚಟದ ಸುಖಮುಖದ ಸರ್ವಪ್ರಸಾದಿಗಳು
ಎಸೆವ ಪ್ರಸಾದದಿಂ ಪುರ್ಣ್ಯೋದರಂ ತಣಿಯೆ
ಬಸವನ ನೆನಹಿನಿಂದೆ ಎಲ್ಲರ ಮನಂ ತಣಿಯೆ
ಬಸವನಾಲೋಕದಿಂ ಲೋಚನಂಗಳ್ತಣಿಯೆ
ಬಸವನ ಸ್ತುತಿಗಳಿಂ ನಾಲಗೆಗಳುಂ ತಣಿಯೆ
ಬಸವ ಪರುಶನದಿಂದಮೆಲ್ಲರಂಗಂ ತಣಿಯೆ
ಸಕಲ ಗಣವೃಂದಂ ಪ್ರಸಾದದೋಕುಳಿಯಾಡೆ
ಸಕಲಗಣ ಸಂಕುಳಂ ತಣಿವಿನೋಕುಳಿಯಾಡೆ
ಅಲ್ಲಿ ಬಸವಣ್ಣನಂ ಶರಣತತಿ ಪರಸುತಿರೆ
ಎಲ್ಲ ತೆರದಿಂ ಬಸವನಂ ಪೊಗಳುತಿರೆಯಿರೆ ೧೮೬–೬೯೨

## ಸ್ಥಲ ೮

ಬಸವನ ನೀತಿ ನೀತಿ ಬಸವಣ್ಣನ ನಿರ್ಮಳ ರೂಪು ರೂಪು ಕೇಳ್
ಬಸವನ ಗಾಡಿ ಗಾಡಿ ಬಸವಣ್ಣನ ಹೆಂಪಿನ ಕೀರ್ತಿ ಕೀರ್ತಿ ಮಾಣ್
ಬಸವನ ಬುದ್ಧಿ ಬುದ್ಧಿ ಬಸವಣ್ಣನ ಪುಣ್ಯದ ಲೀಲೆ ಲೀಲೆ ಹೋ
ಬಸವನ ರಕ್ಷೆ ರಕ್ಷೆ ಬಸವಣ್ಣನ ಶಿಕ್ಷೆಯ ಶಿಕ್ಷೆ ಲೋಕದೊಳ್॥

ಬಸವನ ಪೆರ್ಮೆ ಪೆರ್ಮೆ ಬಸವಣ್ಣನ ನಚ್ಚಿನ ಕೂರ್ಮೆ ಕೂರ್ಮೆ ಕೇಳ್
ಬಸವನ ಸೀಮೆ ಸೀಮೆ ಬಸವಣ್ಣನ ಶೀತಳ ಶಾಂತಿ ಶಾಂತಿ ಮಾಣ್
ಬಸವನ ಜಾಣು ಜಾಣ್ ಬಸವಿದೇವನ ಭಾವದ ಕಾಣ್ಕೆ ಕಾಣ್ಕೆ ಹೋ
ಬಸವ ಯುಕ್ತಿ ಯುಕ್ತಿ ಬಸವಣ್ಣನ ಭಕ್ತಿಯೆ ಭಕ್ತಿ ಲೋಕದೊಳ್ ॥

ಎಂದಿಂತು ಪೊಗಳೆ ಶರಣರ
ಮುಂದೆ ಮನಗುಂದಿ ಕಂದಿ ಕೈಮುಗಿದು ಕರಂ ।
ನೊಂದು ಶಿವಭಕ್ತಿಯ ರಸ
ದಿಂದಂ ನೆರೆ ತಗ್ಗಿ ಕುಗ್ಗಿ ನುಡಿದಂ ಬಸವಂ ॥

ದೇವರ್ ನೀವೇ ಪ್ರಾಣಂ
ನೀವೇ ಕಣ್ ನೀವೆ ಮಾತೆ ನೀವೇ ಜನಕಂ ।
ನೀವೇ ಗತಿ ನೀವೇ ಮತಿ
ನೀವೇ ಪತಿ ನೀವೇ ಗುರುವೆನಗೆ ಬೇರುಂಟೇ ॥

ಮಾಣದೆ ಪಾದವೆ ತೊಟ್ಟಿಲು
ರೇಣುವೆ ಬಾಯ್ವೆಣ್ಣೆ ನಖರುಚಿಯೆ ಮೊಲೆವಾಲ್ ।
ತ್ರಾಣವೆ ನಿಮ್ಮಯ ಕರುಣಂ
ಕ್ಷೋಣಿಯೊಳೆನಗಾಗೆ ಬಸವನಾದೆಂ ಬಳಿಕಂ ॥

ಶರಣರ ಬಂಟರ ಬಂಟಂ
ಶರಣರ ಕಿಂಕರರ ಕಿಂಕರರ ಕಿಂಕರ ನಾಂ ।
ಶರಣರ ಲೆಂಕರ ಲೆಂಕಂ
ಶರಣರ ತೊತ್ತೆನಗೆ ಬೇರೆ ಗತಿಮತಿಯುಂಟೇ॥

ಎಂದು ಶರಣಸಂಕುಳಕ್ಕೆ ಸಾತ್ವಿಕ ಭಯಭಕ್ತಿಭರಿತ ಕಿಂಕುರ್ವಾಣವಾಕ್ಯಮಂಡಿತವದನ ಮಂಡಳನಾಗಿ, ದಂಡನಾಥಚೂಡಾಮಣಿ ಭಕ್ತಕುಲತಿಲಕಂ ಸತ್ಯಸಾಮ್ರಾಜ್ಯಸಾರ್ವಭೌಮಂ ಸದ್ಭಕ್ತಿಸೂರೆಕಾರಂ ಮುಕ್ತಿದಳವುಳಕಾರನೆನಿಪ ಬಸವರಾಜಂ ಭಕ್ತರಂ ಕಂಡು ಕಡು ನೇಹವೆಡೆಗೊಂಡು, ನಡೆತಂದೆಲ್ಲರ್ಗೆ ಬೇರೆ ಬೇರೆ ದಿವ್ಯಚಂದನವನುದ್ವರ್ತನಂಗೆಯ್ದು, ಮೃಗಮದವನಲಂಪಿಕ್ಕಿ ಸಾದಿನ ಕಂಪಂ ಕಕ್ಷಪುಟದೊಳ್ಕೈಗೊಳಿಸಿ, ಭಸಿತದೊಳ್ಬೆರಸಿದ ಕತ್ತುರಿಯ ಸಾರಮಂ ನೊಸಲೊಳು ಮೇಳೈಸಿ, ಪರಿಮಳದಲರ್ಗಳಂ ಸಿರಿ ಮುಡಿಗೆ ಸಿಂಗರಿಸಿ, ನೋಡಿ ನೋಡಿ ಕಂಗಳಿಂದಪ್ಪಿ, ಮನದ ನೊಸಲೊಳ್ಮುಂಡಾಡಿ, ತಣಿವಿಲ್ಲದ ತವಕಂ ಪೊಣ್ಮೆ, ಸತ್ವಗುಣಂ ಮತ್ತಂ ವೆಗ್ಗಳಮಾಗೆ, ಮಿಕ್ಕು

ಮೀರಿ ಬಿಜ್ಜಳನ ಭಂಡಾರದ ಚೀನಿ ಮಹಾಚೀನಿ ದೇವಾಂಗ ಲತಾವಳಿ ಹಂಸಾವಳಿ ಗಜಾವಳಿ ಮೊದಲಾದ ಪಟ್ಟಾವಳಿಯ ದಿಂಡುಗಳಂ ತರಿಸಿ ಚೆಂದದೊಳಿರಿಸಿ ತರತರದಿಂ ಬಿಡಿಸಿ ಪರಿಪರಿಯ ದಿವ್ಯವಸ್ತ್ರಂಗಳಂ ತೆಗೆದು ಪಿಡಿದು, ಶರಣರ ಮೈಯೊಳು ಬುರುಬುರನೆ ನೆಗೆಗದೆಯೇಳ್ವ ಪುಳಕದ ಸಾಲ್ಗೆ ದಿಟ್ಟಿಯಾದಪುದೆಂದು ಗವಸಣಿಗೆಯಿಕ್ಕುವಂತೆ ಮೈತೀವಿ ಪೊದೆಯಿಸಿ, ದಿಗಂಬರನ ಶರಣರ್ಗುಡಗೊಟ್ಟು, ಸಿಂಗರದತ್ತ ಮನಂ ಸೆಳೆದಾಭರಣಂಗಳ ಪೆಟ್ಟಿಗೆಯಂ ತರಿಸಿ, ರತ್ನಮಂಜುಳಿಕೆಯ ಮುಚ್ಚುಳಂ ತೆಗೆದು, ಮಾಣಿಕದ ಕರ್ಣಾವತಂಸಮಂ ಕಿವಿಗಳಿಗಳವಡಿಸಿ, ಮುತ್ತಿನ ಹಾರಮಂ ಪೇರುರಕ್ಕೆ ಸಾರ್ಚಿ, ಬಾಹುಪೂರಯಮಂ ತೋಳ್ಗೆ ಕೆಯ್ಗೊಳಿಸಿ, ಕಂಕಣಮಂ ತಿರುಪಿನೂಂಕಿ, ಮುದ್ರಿಕೆಗಳಂ ಭದ್ರಾಂಗುಲಿಗಿತ್ತು, ಆರಾಧನೆಗೆ ಚಿತ್ತವುರಣಿಸಿ, ಜಾಳಿಗೆಗಳಂ ತರಿಸಿ, ಮುದ್ರೆಗಳನೊಡೆದು ಕುಡಿತೆವೊಂಗಳಂ ಮೃಡಭಕ್ತ ಮೆಲ್ಲಡಿಗಳೊಳ್ಸುರಿಸುರಿದು, ಕಣ್ತೀವಿ ನೋಡಿ, ಮೈತೀವಿ ಮುಟ್ಟಿ, ನಾಲಗೆ ತೀವಿ ಹೊಗಳಿ, ಮನಂ ತೀವಿ ನೆನೆದು, ಬುದ್ಧಿತೀವಿ ಬೆಚ್ಚಹಂಕಾರಂ ತೀವಿ ಪೆಚ್ಚಿ, ಚಿತ್ತಂ ತೀವಿ ಅಚ್ಚೊತ್ತಿ ಮತ್ತೆ ಮತ್ತೆ ಇತ್ತು ತಣಿಯದೆ ಪುಣ್ಯದ ಲೋಭಿ, ಭಕ್ತರ ಬಾಕುಳಿ, ಶರಣರ ಸೂರೆ, ಸಜ್ಜನರ ಸಲೆಮಾರು, ಶರಣರಸಂಗದ ಶಾಶ್ವತನೆನಿಪ ಬಸವರಾಜಂ ಲಿಂಗಜಂಗಮ ಪ್ರಸಾದ ಹೃದಯನಾಗಿ, ಶರಣರೊಳು ಸದ್‌ಗೋಷ್ಠಿಯಿಂದಿರ್ದು ಮತ್ತಮಿಂತೆಂದಂ–

ದೇವ ದೇವಾ, ನಿಮ್ಮರ್ಥಮಂ ನಿಮಗೆ ತೊತ್ತುಗೆಲಸಂ ಮಾಡಿ ಬೇಡಿತಂ ನೀಡುವ ಕಿಂಕರನೆಂದು ನೀವೆ ಕೊಂಡು ಕೊನೆದಾಡಿಸುವ ನಿಮ್ಮ ಕಣ್ಣಮೊದಲ ಕಪ್ಪಡದ ಹಾಹೆಯಾನೊಂದು ರೂಪಲ್ಲಂ; ನುಡಿವುದೆಲ್ಲ ಪುಸಿ, ನಡೆವುದೆಲ್ಲಂ ತಪ್ಪು, ನೇಮವರಿಯದ ನೀರಸಂ, ಪೂಜೆಯರಿಯದ ಪುಣ್ಯದೂರಂ, ಹಾಡಲರಿಯದ ಹಸುಳೆಯಪ್ಪೆನ್ನೊಳು ಲೇಸನರಸದೆ, ತಪ್ಪಂ ನೋಡದೆ, ಕರುಣಿಪುದೆಂದು ಬಿನ್ನವಿಸಿದ ಬಸವಂಗೆ ಮೆಚ್ಚಿ ಮಾಹೇಶ್ವರಕುಲಂ ಭೋರನೆ ಪರಸಿ ಹಾರೈಸಿ ಹೆಚ್ಚಿ ಹಿಗ್ಗಿ ತಣಿದು ಕುಣಿದು ಮಚ್ಚಿ ಮನಂ ತೀವಿದಾನಂದದಿಂ ಮಿಕ್ಕು ಮೀರಿ,

ಎಲೆ ಬಸವಾ, ಬಸವಣ್ಣಾ, ಬಸವಯ್ಯಾ, ಬಸವರಸಾ, ಬಸವರಾಜಾ, ಬಸವಿದೇವಾ ಕೇಳಯ್ಯಾ, ನಿಮ್ಮ ನೇಮವಿದಾರ್ಗುಂಟು. ಗುರುಲಿಂಗದೊಳೆರಡಿಲ್ಲದಿರ್ಪೆ, ಶರಣರಂ ಸಂಗನೆಂದೆ ಕಾಣ್ಬೆ, ಬಂದ ಭಕ್ತರನತ್ಯಾದರಿಪೆ, ಬಪ್ಪ ಭಕ್ತರಂ ಹರುಷದೊಳಿದಿರ್ಗೊಂಬೆ, ಬೇಡಿದ ಶರಣರ್ಗಿಲೆನ್ನದೀವೆ, ಬೇಡಲೊಲ್ಲದವರ್ಗೆ ಮಿಗಿಲಾಗಿ ಆರಾಧಿಪೆ, ಜಾಗ್ರಸ್ವಪ್ನಸುಷುಪ್ತಿ ಯವಸ್ಥಾತ್ರಯಂಗಳೊಳು ಶರಣರಂ ಸಂಗನೆಂದಲ್ಲದೆ ಕಾಣೆ, ನಿಚ್ಚ ಶಿವರಾತ್ರಿಯಚ್ಚರಿಯಿಂ ಮಾಳ್ಪೆ, ಜಂಗಮಪ್ರಾಣಿಯಾಗಿರ್ಪೆ, ಶಿವಲಿಂಗಾರ್ಪಿತವಲ್ಲದುದನಾಘ್ರಾಣಿಸೆ, ನೋಡೆ ನುಡಿಯೆ ಮುಟ್ಟೆ ಕೇಳೆ, ಶಿವಸಮಯವನುದ್ಧರಿಸುವೆ, ಪರಸಮಯಮಂ ಗೆಲುವೆ, ಲಿಂಗದಲ್ಲಿ ಕಠಿಣಮಂ ಕೇಳೆ, ಜಂಗಮದಲ್ಲಿ ಜಾತಿಯನರಸೆ, ಪ್ರಸಾದದಲ್ಲಿ ಅಪವಿತ್ರತೆಯನರಿಯೆ, ಪರಾಂಗನೆಯರಂ ಹೆತ್ತ ತಾಯಿಗಳೆಂಬೆ, ಪರದ್ರವ್ಯವಂ ಕಿಲ್ಬಿಷಮೆಂದು ಮುಟ್ಟೆ, ನಡೆದು ತಪ್ಪೆ, ನುಡಿದು ಹುಸಿಯೆ, ಹಿಡಿದು ಬಿಡೆ, ಬಿಟ್ಟು ಹಿಡಿಯೆ, ಕೊಟ್ಟು ನೆನೆಯೆ, ನಟ್ಟು ಕೀಳೆ, ಮುಟ್ಟಿ ಪೆರಪಿಂಗೆ, ಕೂಡಿ ತಪ್ಪೆ, ನೋಡಿ ನಿರಾಕರಿಸೆ, ನೆನೆದು ಮರೆಯೆ, ಮನದೊಳೋವರಿಯಿಲ್ಲ, ಬುದ್ಧಿಯೊಳು ಸಂಚವಿಲ್ಲ, ಅಹಂಕಾರದೊಳು ಗರ್ವವಿಲ್ಲ, ಚಿತ್ತದೊಳು ಹೊರೆಯಿಲ್ಲ, ಕಾಮವಿಲ್ಲ ಕೋಪದ ಮಾತೇಕೆ, ಲೋಭದ ಗಾಳಿ ತೀಡದು, ಮೋಹಕ್ಕೆ ತೆರಹಿಲ್ಲ, ಮದದ ಸೊಗಡು ಹೊದ್ದದು, ಮತ್ಸರಕ್ಕಿಂಬಿಲ್ಲ. ಬಸವರಾಜಾ, ನಿನ್ನ ಗುಣಂಗಳಂ ಬಣ್ಣಿಸಲೆಮ್ಮಳವಲ್ಲ; ಈಶನ ಮೀಸಲಪ್ಪ ಭಕ್ತ ನಿನಗೆಣೆಯಿಲ್ಲ, ಪಡಿಯಿಲ್ಲ ಪಾಸಟಿ ಯಾವಂ?

ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಬಿಸಿ, ಸಾಮರ್ಥ್ಯಮಮಂ ಬಿತ್ತಿ, ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವಾ, ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇರಿತೆಂದಡಿಗಡಿಗೆ ಮೆಚ್ಚಿ, ತೂಗಾಡುವ ಗಣಂಗಳ ಚರಣಂಗಳಂ ಬಿಗಿಯಪ್ಪಿ, ಬಸವರಾಜಂ ಹೊಗಳ್ತೆಗೆ ತಲ್ಲಣಿಸಿ ತಗ್ಗಿ ಮಲ್ಲಳಿಗೊಂಡಾಗಳಾಗಳಿನ ಸಂಗತಿಗೆ ಹೊಸಹೊಸ ಗೀತಮಂ ಕೇಳಿಸುತ್ತಿರ್ಪ ಸಮಯದೊಳು,

ನೆರೆದು ಕುಳ್ಳಿರ್ದ ಮಹಾಮಹಿಮರು ಶಿವಭಕ್ತಿಗೆ ನವಯೌವನವಾದಂತೆ, ಅರ್ಚನೆಗರಳಲಿರ್ದ ಪರಿಮಳದ ಮೊಗ್ಗೆಯಂತೆ, ಶಿವಜ್ಞಾನಕ್ಕೆ ಸೊಬಗಾದಂತೆ, ಉನ್ಮತ್ತಪಂಚವಿಂಶತಿ ಪ್ರಾಯಂ ಕವಿದು ನಿಶ್ಚಳ ಮನಸ್ವೇಚ್ಛಾಮಹೇಶ್ವರರು ಸುಖಮುಖ ಸೌಕುಮಾರ್ಯದ ಪೂಜಾರತಿಗೆ ಗೌರೀರಮಣಂ ಪ್ರೇರಿಸಿದ ಮನದೊಡನೆದ್ದು ಬಸವರಾಜನ ಮಹಮನೆಯಂ ಪೊರಮಟ್ಟು, ಹೊದ್ದ ದೇವಾಂಗದಿಂದುಟ್ಟ ಪಟ್ಟಾವಳಿಯಿಂ ತೊಟ್ಟ ದಿವ್ಯಾಭರಣದಿಂ ರುದ್ರಲೋಕದ ರಾಜಪುತ್ರರಂತೆ, ಕೈಲಾಸದ ಕಮನೀಯರಂತೆ, ರಜತಗಿರಿಯ ವಿಜಯರಂತೆ, ಮೇರುವಿನ ಧೀರರಂತೆ, ಮಹಾದೇವನ ಮಕುಟವರ್ಧನರು, ಮದನಹರನ ಮದಕರಿಗಳು, ಶಿವನ ಸಿಂಹಂಗಳು, ಹರನ ಶರಭಂಗಳು, ನರಲೋಕ ದೇವೇಂದ್ರರು ನೆರೆದು ಪರಿದು ಬಿಜ್ಜಳನ ಪುರದ ಪಲವು ರಾಜವೀಥಿಗೊಳೊಳು ಸುಳಿತಪ್ಪಾಗಲು, ಪುರಜನಮುಂ ಪರಸಮಯಿಗಳುಂ ನೆರೆದ ನೆರವಿಯಂ ಕೌತುಕಮನಾಳ್ದು ನೋಡುತಂ ಬರೆವರೆ,

ಬಿಜ್ಜಳನ ಗುರುವಪ್ಪ ನಾರಣಕ್ರಮಿತಂ ಸೌರಿಭಟ್ಟಂ ವಿಷ್ಣುಪೆದ್ದಿಗಳು ಮೊದಲಾದ ವೈಷ್ಣವರೆಲ್ಲಂ ಕಂಡು ಕಡು ಅಸೂಯೆಯೊಳು ನಡೆದಹಂಕಾರದೊಳುಬ್ಬಿ, ಮಚ್ಚರದೊಳು ಬಿರಿದು, ಹರಭಕ್ತರ ಸಂಪದಮಂ ನೋಡಲಾರದೆ ಬಿಸುಸುಯ್ದು, ಸೈರಿಸಲಾರದೆ ಕುದಿದು, ಕೋಟಲೆಗೊಂಡು ಅನುತಾಪದೊಳುರಿದು ಮನಂ ಕರಿಮುರಿವೋಗಿ, ಬುದ್ಧಿ ಬರಿದಾಗಿ ನಿಲಲಾರದೆ ಗಳಗಳನೆ ಪರಿತಂದು, ಎಲೆ ಎಲೆ ಮರುಳರಸಾ, ಪುರದೊಳು ಸುಳಿವ ಶಿವಭಕ್ತರ ಸಿರಿಯನೇನಂ ಬಿನ್ನವಿಪೆವು? ನಿನ್ನ ಭಂಡಾರದೊಳು ನೀನಿಕ್ಕಲಮ್ಮದ ಪದಕಂ ಶರಣರ ಪೇರುರದೊಳು, ನೀಂ ಮುಟ್ಟಲಂಜುವ ತೋರಹಾರಂ ಭಕ್ತರ ಕೊರಳೊಳು, ನೀಂ ಕೈಕೊಳಿಸಲಮ್ಮದ ವಜ್ರಕಂಕಣಂ ಶರಣರ ಕರದೊಳು, ನೀಂ ನೋಡಲಮ್ಮದ ರತ್ನಮುದ್ರಿಕೆಗಳು ಶರಣರ ಕರಾಂಗುಲಿಯೊಳು, ನೀಂ ತೊಡಲುಹಮ್ಮದಾರಾಧಿಪ ದಿವ್ಯಾಭರಣಂ ಶರಣರ ಮೈಯೊಳು, ನೀನುಡಲಮ್ಮದೆ ಪೊಡಮಡುವ ದಿವ್ಯವಸ್ತ್ರಂ ಶರಣರಂಗಗಳೊಳು, ನೀಂ ಪೂಸಲಮ್ಮದ ಯಕ್ಷ ಕರ್ದಮಂ ಭಕ್ತರ ಕಕ್ಷ ವಕ್ಷಂಗಳೊಳು, ನೀನೇರಲಮ್ಮದ ದಿವ್ಯವಾಹನಂ ಭಕ್ತರಾಘೆಯೊಳು ಕಾಣಲ್ಬಂದಪವು; ಬಸವಂಗೆ ಮರುಳಾದೆ, ಭಂಡಾರಂ ಸೂರೆವೋದುದು, ರಾಜ್ಯದೆಳ್ತರಂ ಭಕ್ತರ್ಗೆ ಬರಿದಾಯ್ತು, ಭಕ್ತರುರವಣೆ ಪಿರಿದಾಯ್ತು, ಭಕ್ತರ ತೇಜಂ ಬಲುಹಾಯ್ತು, ಅದಲ್ಲದೆಯುಂ ವಿಷ್ಣುವಂ ಬೈವರೆಂದಡೆ ವೈಷ್ಣವರಂ ಕಂಡರಾರು ಲ ಬ್ರಹ್ಮನಂ ಬಗೆಯರೆಂದಡೆ ಬಾಹ್ಮರಂ ಬಲ್ಲರಾರು? ಜಿನನಂ ಕಿತ್ತು ಬಿಸುಡುವರೆಂದಡೆ ಜೈನರ ಸುದ್ದಿಯೆಲ್ಲಿಯದು? ಬೊಮ್ಮರಂ ಬೇಳ್ಮಾಡುವರೆಂದಡೆ ಸ್ವಾಮಿಗಳಂ ಸರಕು ಮಾಡುವರಾರು? ಇಂತು ಷಡುದರುಶನಂ ಕೀಳಾದುದು, ಮೃಡದರುಶನಂ ಮೇಲಾದುದಿದಂ ದಿಟಂ ವಿಚಾರಿಸದೆ, ಕ್ಷತ್ರಿಯ ಧರ್ಮಮಂ ಕೆಡಿಸುವರೆ? ಈ ರಾಜ್ಯವನುದಾಸೀನಂ ಮಾಳ್ಪರೆ ಆಗಲಿ. ಇದಂ ಸೈರಿಸುವೆಯಪ್ಪಡೆಮಗೆಲ್ಲಂ ಬೀಳ್ಕೊಟ್ಟು ನೀನುಂ ಬಸವನುಂ ಸುಖದೊಳಿಪ್ಪುದೆನಲು,

ಎಲ್ಲಾ ಕರಣಾದಿಗಳಂ ಕರೆಯಿಸಿ, ಭಂಡಾರದ ಲೆಕ್ಕಮಂ ನೋಡಿ, ಸ್ಥಿತಮಂ ಬಸವಣ್ಣನ ಕೈಯೊಳು ಕೊಂಡುಬಿಡುವುದೆಂದು ಕಾಗೆಯಂತರಿಚಿ, ಗೂಗೆಯಂತೆ ಪಲುಂಬಿ, ಕತ್ತೆಯಂತೊರಲಿ, ಕೋಡಗದಂತೆ ಪಲುಗಿರಿದು, ನರಿಗಳಂತೂಳಿ ಕಾಳ್ಗೆಡೆವ ಕರ್ಮಿಗಳ ಮಾತಿಂಗುಮ್ಮಳಿಸಿ, ನಿರ್ದೈವರ ಬೋಧೆ ನೆಲೆಗೊಂಡು, ಚಿತ್ತಂ ಕಲಂಕಿ, ಬಿಜ್ಜಳಂ ಮರುಳಾಗಿ ಕರಣಿಕರಂ ಕರೆಯಿಸಿ, ಬಸವರಾಜನನೊಡಗೊಂಡು ಬಪ್ಪುದೆಂದು ಚಾರರಂ ಕಳುಪಲವರೊಡನೆ ವಿಭೂತಿಯ ಸುಭಟ, ರುದ್ರಾಕ್ಷಿಯ ರುದ್ರಂ, ಪಂಚಾಕ್ಷರಿಯ ಪಂಚಮುಖನೆನಿಪ ಬಸವರಾಜಂ ಬಪ್ಪ ಸಮಯದೊಳು, ಕತ್ತಲೆಯ ಕೊಬ್ಬು ಸೂರ್ಯನ ಮುಂದಣರುಣೋದಯ ಪರಿಯಂತರೆಂಬಂತೆ ಹಿಂದೆ ಗಳಹಿದ ಮಂ[ದಿವಾ]ಳದ ಮಂದಿ ಮುಂದುಗೆಟ್ಟಲ್ಲಲ್ಲಿ ನಡುಗುತಿರೆ ಬಂದು, ಸಮಗದ್ದುಗೆಯೊಳು ಸಂಗನಬಸವಂ ಬಸವಿದೇವಂ ದಂಡನಾಥ ಚೂಡಾಮಣಿ ಕುಳ್ಳಿರ್ಪುದುಂ,

ಬಿಜ್ಜಳಭೂಪಂ ಮೆಲ್ಲಮೆಲ್ಲನೆ ಮಾತು ಮಾತಿಂದೆ ಲೆಕ್ಕದ ಮಾತಂ ತೆಗೆದು, ಕರಣಿಕರಂ ಝುಂಕಿಸಿ, ಭಂಡಾರದ ಆಯ ಬೀಯಮಂ ನೋಡೆ, ಬಸವನ ಮೇಲೆ ಪದಿನೆಂಟುಕೋಟಿ ದ್ರವ್ಯಂ ಸ್ಥಿತಮಾಗೆ, ಬಿಜ್ಜಳಂ ಮರುಗಿ ದಣ್ಣಾಯಕರ ಮೊಗಮಂ ನೋಡುತಾಕ್ಷೇಪದಿಂ ಕೈಮುಗಿದು, ನಿಮ್ಮ ನಂಬಿ ಭಂಡಾರಮಂ ಕೊಟ್ಟಡೆನ್ನನಿಂತು ಕೆಡಿಸುವರೆ? ಶಿವಭಕ್ತರ್ಗಿತ್ತು ರಾಜ್ಯಮಂ ನೀರೊಳದ್ದುವರೆ? ಹಲವು ಮಾತೇನು, ನಿಂದ ಹೊನ್ನಿಗೆ ನಿರ್ಣಯಮಂ ಕೊಡುವುದೆಂದು ನಿರೋಧದಿಂ ನುಡಿಯೆ, ಬಸವಂ ಕೇಳ್ದು ಪರಸಮಯಿಗಳ ನುಡಿಯೆಮ್ಮರಸನಂ ಮರುಳ್ಮಾಡಿತ್ತೆಂದು ಮನದೊಳರಿದು, ಕೇಳೆಲೆ ಸಜ್ಜನರನರಿಯದ ಬಿಜ್ಜಳಭೂಪಾ, ಉದಧಿ ನದಿಯ ನೀರಂ ಸೀವುದೆ? ಭಾಸ್ಕರಂ ಕನ್ನಡಿಯ ಬೆಳಗಂ ಪಾರ್ವನೆ? ಶಿವಭಕ್ತರ್ ನಿನ್ನೊಡವೆಗಾಸೆಮಾಳ್ಪರೆ? ತಮ್ಮೊಡವೆಯಂ ತಾವೆ ಕೊಂಡರ್, ನಡೆನಡೆಯೆಂದರಸನುಂ ಪಸಮಯಿಸಗಳುಂ ಕರಣಂಗಳುಂ ಬೆರಸಿ ಭಂಡಾರದ ಮನೆಗೆ ಬಂದು, ಮುದ್ರಿಸಿದ ಪೆಟ್ಟಿಗೆಯ ಕೋಟಾನುಕೋಟಿಯಂ ತೆಗೆದು ಲೆಕ್ಕಿಸಿ ನೋಳ್ಪಾಗಳು,

ನಿಲವಿನ ಪದಿನೆಂಟು ಕೋಟಿಗೆ ಛತ್ತೀಸಕೋಟಿ ಬಾಹತ್ತರ ಕೋಟಿಗಳಿಂ ಮಿಗಿಲೆನಿಸಿದಿಮ್ಮಡಿ ಪದಿರ್ಮಡಿ ನೂರ್ಮಡಿ ಸಾಸಿರ್ಮಡಿ ಲಕ್ಷಮಡಿ ಕೋಟಿಮಡಿಯಾಗಿ ಪೆರ್ಚುತ್ತಿರೆ, ಗಣಕರು ಲೆಕ್ಕಿಸಲಾರದೆ ಬೆರಗಾಗೆ ಪರಸಮಯಿಗಳ ಮೋಗಂ ಬೆಳ್ಪೇರೆ, ಬಿಜ್ಜಳನ ಮೊಗಂ ಲಜ್ಜೆಯೇರೆ, ಶರಣರ ಮೊಗಂಗಳು ಹರುಷವೇರೆ, ಭೂಪನ ಮೊಗಮಂ ನೋಡಿ ಜಡಿದು ನುಡಿದು, ಕೇಳೆಲೆ ನಿನಗೊಂದರ್ಥವೆಂದು, ನೀನೊಂದು ರೂಪೆಂದು ಮುಂದರಿಯದೆ, ಮರುಳ್ಗೆಡುವರೆ ಲ ಮುಗ್ಧಭೂಪಾ, ಕೇಳ್ಳೆ, ಸರ್ವಬ್ರಹ್ಮಾಂಡಸಾರ್ವಭೌಮನೆನಿಪ ಶ್ರೀ ಸಂಗಮೇಶ್ವರಲಿಂಗದಂಘ್ರಿಯಂ ಮಹಾಪದವಿಗಳು ಬಯಸಿ ಬಂದು ಬಿಡದೋಲಯಿಸುತಿಪ್ಪಲ್ಲಿ ಸಂಪದದೊಳೆಳ್ಳಿನಿತಂ ಕುಡೆ ಕುಬೇರನಾದಂ, ಕಾಂತಿಯೊಳೆಳ್ಳನಿತನೀಯೆ ಭಾಸ್ಕರನಾದಂ, ವೀರದೊಳು ಲವಲೇಶವನೀಯೆ ವೀರಭದ್ರನಾದಂ, ಚೆಲುವಿನೊಳಿನಿತುಂ ಸಿಡಿಯೆ ಕಾಮನಾದಂ, ನಿತ್ಯದ ಕಡೆಸೆರಂಗಿನ ಸೋಂಕಂ ಕುಡೆ ಲೋಮಜ ನಾದನೆಂದಡೆ ನೀನೆತ್ತಣ ಪರಮಾಣು? ಕ್ಷುದ್ರಜಂತು, ಶಿವನ ಮನೆಯ ತೊತ್ತಿನ ಮನೆಯ ತೊತ್ತಪ್ಪ ಮಾಯೆಯಾಡಿಸುವ ಮಣ್ಣರೂಪು, ಕಪ್ಪಡದ ಹಾಹೆ, ಕಲ್ಲ ಜಂತ್ರ, ಹುಲ್ಲ ಬೊಂಬೆ, ತೆಗೆ ತೆಗೆ, ಸಡಿಫಡ ಶರಣರ ಮುಂದೆ ನೀನಾರೆಂದು ಬಸವರಾಜಂ ರುದ್ರಾವತಾರನಾಸ್ಫೋಟಿಸೆ, ಬಿಜ್ಜಳಂ ಧರೆಗಿಳಿದು ಜೀವನ್ಮೃತನಾಗಿ ಬಸವನ ಚರಣದೊಳ್ ದೊಪ್ಪನೆ ಬಿದ್ದು, ಮುಂದರಿಯದ ಮೂರ್ಖಂಗೆ, ಶರಣರನರಿಯದ ಸರ್ವಾಪರಾಧಿಗೆ, ಕರುಣಿಸುವುದೆಂದು ಪನ್ನಿಚ್ಛಾಸಿರಲಕ್ಷವಸ್ತುವಂ ಚರಣದ

ಮೇಲೆ ಸುರಿದು, ದಣ್ಣಾಯಕರಿಂ ಮನ್ನಣೆ ಪಡೆದವರಂ ಮಹಮನೆಗೆ ಬಿಜಯಂಗೆಯ್ಸಿ ಬೀಳ್ಕೊಂಡು ಬಿಜ್ಜಳಭೂಪಂ ವಿಸ್ಮಿತಚಿತ್ತಂ ಕೌತುಕಹೃದಯನುವಾಗಿ ಅದ್ಭುತ ರಸದೊಳಾಳುತ್ತೆ, ತನ್ನರಮನೆಯೊಳಿದ್ದನಿತ್ತಲು ಬಸವರಾಜನಂ ರಾಜಶೇಖರ ಚರಣ ಸರಸಿರುಹಮಕರಂದ ಮಧುಕರಾಯಮಾನನಂ ಜಂಗಮಪ್ರಾಣಿಯಂ ಶರಣ ಪರಿಸ್ತೋಮಮಂ ತಮ್ಮ ನಡುವಿಟ್ಟುಕೊಂಡು ಬಸವನ ಸತ್ಯಗುಣಮಂ ಸಾಮರ್ಥ್ಯಮಂ ತೇಜದುನ್ನತಿಯಂ ದಾನದತಿಶಯಮಂ ಬಣ್ಣಿಸುತ್ತಮಿರೆಯಿರೆ,

## ಸ್ಥಲ ೯

ಎಲೆ ಬಸವ ನಿನ್ನ ದಾನೋ
ಜ್ವಲಜಲಧಾರೆಗಳೊಳದ್ದು ಮೈಗರೆದು ಕರಂ ।
ಬಲವಳಿದು ಕುಂದಿ ಸೆಡೆದ
ರ್ಬಲಿ ಶಿಬಿ ಜೀಮೂತವಾಹನಂ ಕರ್ಣರ್ಕಳ್॥

ಗುರುಬಸವ ನಿನ್ನ ಕೋಡಿಂ
ಸುರಭಿ ಕರಂ ಮೂಗುವಟ್ಟುದದು ಕಲ್ಲಾಯ್ತಾ ।
ಪರುಷಂ ಮರನಾದುದು ಸುರ
ತರು ಚಿಂತೆಗೆ ಸಾರ್ದುದಮಮ ಚಿಂತಾರತ್ನಂ॥

ಶಿವಸೇವೆಯನುರು ಶಿವನನು
ಭವಶಕ್ತಿಯನರಿವ ಬಸವವಿಭು ನಿನ್ನನುವಂ ।
ಶಿವನರಿವಂ ಭವನರಿವಂ
ಶಿವನ ಗಣಾಧೀಶರರಿವರರಿವವರೊಳರೇ ॥

ಎಂದು ಗಣಸಂತಾನವೊಲಿದು ಕೊಂಡಾಡುತಿರೆ
ನಿಂದು ಬಸವಣ್ಣನಂ ನೇಹದಿಂ ಪರಸುತಿರೆ
ಬಸವರಾಜಂ ಕೇಳಿ ಕೈಮುಗಿದು ಕೊರಗುತಂ
ಶಿಶುವನಿಂತಗ್ಗಿಸುವರೇ ಎಂದು ಕರಗುತಂ
ಇಪ್ಪಾಗಳಲ್ಲಿ ಬಸವನ ಬಲದ ಕಣ್ ಕೆತ್ತೆ
ಕೂರ್ಪರ ದಕ್ಷಿಣ ಭುಜಂ ಭರದಿಂದೆ ಮಿಗೆ ಕೆತ್ತೆ
ಇಂದೆನ್ನ ಮನೆಗೆ ಶರಣರ ಬರವು ನಿಶ್ಚಯಂ
ಇಂದೆನ್ನ ಭಕ್ತಿ ಫಲವಾಯ್ತು ನಿಸ್ಸಂಶಯಂ

ಎನುತಮಿರೆ ಬರುತಿರ್ದುದಮ್ಮಮ್ಮ ಗಣಕುಲಂ
ಮನಸಿಜಸ್ತಂಭೇರಮೋಗ್ರಸಿಂಹನ ಬಲಂ ೧೦

ಬರೆ ದೂರದಿಂ ನೋಡಿ ಬಸವರಾಜಂ ಕಂಡು
ಶರಣರ್ಗೆ ಕೈನೀಡಿ ತೋರಿದ ಮನಂಗೊಂಡು
ಈ ಬಂದುದಿದೆ ಚೋಳದೇಶದ ಮಹಾಗಣಂ
ಆ ಬಂದುದಿದೆ ಪಾಂಡ್ಯ ಕೇರಳದಿಶಾ ಗಣಂ
ಇದು ಗೌಳದೇಶದ ಗಣಾವಳಿಯ ಸಂಭ್ರಮಂ
ಅದು ಮಾಳವದ ಮಹಾಗಣಕುಲದ ವಿಭ್ರಮಂ
ಇದು ವಂಗ ಬಂಗಾಳ ಲಾಳದೇಶದ ಗಣಂ
ಇದು ಕಳಿಂಗಂ ಮಹಾರಾಷ್ಟ್ರದೇಶದ ಗಣಂ
ಇದು ತುಳುವ ಮಲೆಯಾಳದೇಶಗಣದೊತ್ತೊತ್ತಿ
ಇದು ತೆಲುಗ ತಿಗುಳ ಬರ್ಬರದ ಗಣಸಂಪತ್ತಿ
ಇತ್ತಲಿದೆ ಸಿಂಹಳದ್ವೀಪದ ಗಣವ್ರಾತ
ಇತ್ತಲಿದೆ ಕಾಶ್ಮೀರ ದೇಶದ ಶರಣಜಾತ
ಎಂದೆಂದು ತೋರುತ್ತವಾರುತ್ತ ಬೊಬ್ಬಿಡುತೆ
ಮಂದ್ಯೆಪ ಪುಳಕದಿಂ ಕಳೆಯೇರಿ ಕೂಗಿಡುತೆ
ಒಲಿದೊಲಿದು ಮಲೆಮಲೆದು ನಲಿನಲಿದು ಕೆಲೆಕೆಲೆದು
ಉಲಿದು ನಾಲ್ಕುಂ ದೆಸೆಗೆ ಕೊಣಕಿಟ್ಟು ಕುಕಿಲಿರಿದು
ಹಬ್ಬಿ ಹಾರೈಸಿ ತೇರೈಸಿ ತೆಕ್ಕನೆ ತೀವಿ
ಉಬ್ಬಿ ಪುಟವೆದ್ದು ನೆರೆಕೊರ್ಬಿ ಗರ್ಬಿಸುತೋವಿ
ಸಂತೈಸಿಕೊಳಲಾರದಲ್ಲಿ ಪರಿಪರಿದಾಡಿ
ಮುಂತೆ ಬಾಹಾಸ್ಫಾಳನಂಗೆಯ್ದು ಕುಣಿದಾಡಿ

ಬಸವನಿರೆ ಕಂಡು ಗಣಸಂಕುಳಂ ಮುಂಡಾಡಿ
ಹೊಸಪರಿಯ ಕೌತುಕದ ಪರಕೆಯಿಂ ಕೊಂಡಾಡಿ
ಭಕ್ತರ ಬಳಲ್ಕೆ ಕಂಡಾಗಳೇ ನೆರೆ ಹೋಯ್ತು
ಭಕ್ತ ಬಸವಣ್ಣನಂ ಮುಟ್ಟೆ ಮಿಗೆ ತಣಿವಾಯ್ತು
ಆಗಳಾ ಬಸವನೆಲ್ಲರ್ಗೆ ಗದ್ದುಗೆಯಿತ್ತು
ರಾಗದಿಂ ಕೈಮುಗಿದು ಕಿಂಕರತೆಯಂ ಹೊತ್ತು
ಶರಣನಿಕರದ ಪದಪ್ರಕ್ಷಾಲನಂ ಮಾಡಿ
ಹರುಷದಿಂ ಚರಣಜಲಮಂ ಕರುಣದೊಳು ಕೂಡಿ
ಎಲ್ಲರ್ಗೆ ಬೇರೆ ಸಿಂಹಾನವನೊಲಿದೀವ
ಎಲ್ಲರ್ಗೆ ಬಸವನರ್ಘ್ಯಣಿಗಳಂ ತಾನೀವ
ಸಮಯದೊಳಗಲ್ಲಿ ಕೆಲಬರ್ದಂಭಕರ್ಬಂದು
ಅಮರ್ದು ಬಸವಣ್ಣನಂ ಬಂದಿವಿಡಿಯಲ್ಕೆಂದು

ಬರುಮನದ ಹೊರ ವಿಭೂತಿಯನಲ್ಲಿ ತೀವಿಟ್ಟು
ತುರುಗಿ ಮೈಯೊಳಗೆ ರುದ್ರಾಕ್ಷಿಗಳ ನೆರೆತೊಟ್ಟು
ವೃಂತಫಲಮಂ ಸಮಂತಂದು ಕಕ್ಷದೊಳಿರಿಸಿ
ಅಂತವರ್ಗೆ ಬಸವ ಹೂವಗ್ಘಣಿಯ ತಂದಿರಿಸಿ
ಪಿಡಿದುಕೊಂಡಿರೆ ಕಂಡು ಬೆಬ್ಬಳಿಸಿ ನೋಡುತಂ
ನಡುಗುತೊಬ್ಬೊಬ್ಬರ ಮೊಗಂಗಳಂ ನೋಡುತಂ
ಸಂಚಳಿಸುತಿರೆ ಮಿಕ್ಕು ಮೀರಿ ತಮ್ಮೆಲ್ಲರಂ
ಮುಂಚೆ ಬಸವನ ಭಕ್ತಿ ಬಂದಿವಿಡಿಯಲ್ಕರಂ
ಬೇಳಾಗುತಿರೆ ಬಸವನರಿದಿದೇನೆಲೆ ದೇವ
ಆಳೊಡನೆ ಸರಸಮೇನೆಲೆಲೆ ಸಂಗಮದೇವ
ಅಂಜುವರೆ ದೇವ ಸೆಜ್ಜೆಯನು ಉಪ್ಪರಿಸಿಮೆನೆ
ಅಂಜದಳುಕದೆ ಬಸವನಲ್ಲಿ ಕರುಣಿಸುವುದೆನೆ
ಬಸವಭಾವಂ ಬಲಿದು ಮುನ್ನವೇ ಸೆಜ್ಜೆಯೊಳು
ಎಸೆವ ಲಿಂಗಂಗಳಾಗುತ್ತಮಿರೆ ನಿಷ್ಠೆಯೊಳು
ತೊಟ್ಟು ಪಿಂಡಿಗೆಯಾಗೆ ಫಲವೆ ಲಿಂಗವದಾಗೆ
ಇಟ್ಟಣಿಪ ಚಂದ್ರಕಾಂತದ ಕಾಂತಿ ನೆಲೆಯಾಗೆ
ನೋಡೆ ವೇಧಾದೀಕ್ಷೆಯಾದುದಾ ಡಂಬರಿಗೆ
ನೋಡೆ ಬಸವನ ಕರುಣವೊದಗಿತ್ತು ಮೂರ್ಖರಿಗೆ
ಮುನಿಪುಂಗವರ್ ಬಸವಕರುಣಮಂ ಪಡೆವರೇ
ಮನುಕುಲಂಗಳ್ ಬಸವದೀಕ್ಷೆಯಂ ಪಡೆವರೇ
ಬಂದಿ ಶಿವಬಂದಿ ಸಂಬಂಧಿಯಾದುದು ನಿಮಗೆ
ಬಂದಿಯಂ ಹರಭಕ್ತಿ ಬಂದಿವಿಡಿದುದು ಧರೆಗೆ
ಎನುತೆ ಗಣನಾಯಕರ್ಕೌತುಕಂಬಡುತಮಿರೆ
ತನತನಗೆ ತಲೆದೂಗಿ ಬೆರಗಾಗಿ ನೋಡುತಿರೆ
ಭವಿತನಂ ತೊಲಗಿ ಸದ್ಭಕ್ತಿಯಿಂಬಾಗಿಯಿರೆ
ಶಿವಕರುಣದಿಂ ಜನನಮರಣಮಂ ನೀಗುತಿರೆ
ಇಂತು ಬದನೆಯ ಕಾಯಿ ಲಿಂಗವಾಗೊಪ್ಪುತಿರೆ
ಸಂತತಂ ಬಂದಿಕಾರರು ಭಕ್ತರಾಗುತಿರೆ

ಇರೆ ಮಜ್ಜನಕ್ಕೆರೆಯಿರೇ ಸಂಗಮಂಗೆಂದು
ಹರನ ಕರುಣಂಬಡೆದು ಸುಮ್ಮನಿರಬೇಡೆಂದು
ಅಂದಿಂದ ಬಸವನಾ ಹೆಸರ ಫಲಮಂ ಮುಟ್ಟ
ಎಂದುವುಂ ದಂಬಕರ ಹೋದ ದೆಸೆಯಂ ಮೆಟ್ಟ

ಆಗಳಾ ಭಕ್ತತತಿ ಬಸವನಂ ನಡೆ ನೋಡಿ
ರಾಗದಿಂದಪ್ಪಿ ಮತ್ತಪ್ಪಿ ತಣಿಯದೆ ನೋಡಿ
ನೀನೊಲಿದು ನೋಡಿತೇ ಶಿವಲಿಂಗವೆಲೆ ಬಸವ
ನೀನೊಲಿದು ಸೋಂಕಿದವನೇ ಭಕ್ತನೆಲೆ ಬಸವ
ನಿನ್ನ ಮನದಿಂದೆ ಚಿಂತಾಮಣಿಯದಾಯಿತ್ತು
ನಿನ್ನ ಕರವಂ ಕಂಡು ಕಲ್ಪತರುವಾಯಿತ್ತು
ನಿನ್ನ ಪದರಜದಿಂದೆ ಪರುಷವದು ಹುಟ್ಟಿತ್ತು
ನಿನ್ನ ಶೀಲಂಗಂಡು ಸುರಭಿ ಹಯನಾಯಿತ್ತು
ಚಾಗಿಗಳ ನಡುವೆ ಕಡುಚಾಗಿ ಸಂಗನಬಸವ
ಭೋಗಿಗಳ ನಡುವೆ ಮಿಗೆ ಭೋಗಿ ಸಂಗನಬಸವ
ಚೆಲುವ ಸಂಗನಬಸವ ಒಲಿವ ಸಂಗನಬಸವ
ಗೆಲುವ ಸಂಗನಬಸವ ಸೋಲ್ವ ಸಂಗನಬಸವ
ಕಾವ ಸಂಗನಬಸವ ಈವ ಸಂಗನಬಸವ
ದೇವ ಸಂಗನಬಸವ ತುಂಬಿ ತುಳುಕದ ಬಸವ
ತಾಗಿ ಮರಳದ ಬಸವ ಬೀಗಿ ಬೆದರದ ಬಸವ
ಬಾಗಿ ಬಳುಕದ ಬಸವ ನೀಗಿ ನೆನೆಯದ ಬಸವ

ಎಂದು ಶಿವಶರಣ ಸಂಜಾತ ಹೊಗಳುತ್ತಂದು
ಅಂದು ಕುಗುಗುಗುನುಕೂ ಎಂದು ಕೂಗುತ್ತಮಿರೆ
ಸಂದಣಿಸುತೆಲ್ಲರ್ಗಳೇನೆಂಬನಿತರೊಳಗೆ
ಸಂದ ಪುಯ್ಯಲ್ಪುಟ್ಟಿದೇನೆಂಬ ನುಡಿಯೊಳಗೆ
ಹೆಗಲ ಕಂಬಳಿ ಕೈಯ ಕಲ್ಲಿಯೋಗರದಿಂದೆ
ಮೊಗ ಬೆಮರೆ ತೇಕುತ್ತೆ ಪರಿತಂದು ಕಡುಪಿಂದೆ
ಪಿಡಿದ ಗೋವಳಿಗೋಲ ಮಾಲೆಗಳ ಹಾಹೆಯಿಂ
ತೊಡರ ಬಾವುಲಿಯೊಳಗೆ ಜವಿ ಹಲವು ದಂಡೆಯಿಂ
ಗುರುಗುಂಜಿಯಿಂ ಸಮೆದ ದಂಡೆ ಮಂಡೆಯೊಳೊಪ್ಪೆ
ಕರಮೆಸೆವ ಚೆನ್ನ ಗುಳ್ಳೆಯ ಚೀರದಿಂದೊಪ್ಪೆ
ಕಿವಿಯಲಿಕ್ಕಿದ ಬಳಹದೋಲೆ ಹಳದಿಯ ಉಡಿಗೆ
ಸವೆಯದೂದುವ ಕೊಳಲು ಮೈಯ ತವರದ ತೊಡಿಗೆ
ಎಸೆವುತಿರೆ ಬಂದು ಮಹಮನೆಯ ಗೋವಳನಲ್ಲಿ
ದೆಸೆ ದೆಸೆಗೆ ಕಂಪಿಸುತೆ ಕಂ[ಟ]ಣಿಸುತಂತಲ್ಲಿ
ನಿಂದು ಬಸವಂಗೆ ಬಿನ್ನೈಸಿದಂ ತಾನಂದು

ಇಂದು ಭಕ್ತರ ವೇಷದಿಂದೆ ಕಳ್ಳರ್ಬಂದು
ಕೀಲಾರಮಂ ಕೊಂಡು ಪೋದರಿಂದೆಲೆ ದೇವ
ಮೇಲಪ್ಪ ಗೋಕುಲವನೆಯ್ದೆ ಕೊಂಡರ್ದೇವ
ಎನೆ ಮರುಳುಗೋವಳಾ ಭಕ್ತರೇಂ ಕಳ್ಳರೆ
ನಿನಗೇನೊ ತಮ್ಮೊಡವೆಯಂ ಕಾವೆ ಕೊಳ್ಳರೆ
ಶಿವವೇಷಮುಂ ಕಳವುವೊಂದೆಡೆಯೊಳಿರ್ಪುದೆ
ಶಿವಭಕ್ತರಲ್ಲದಾರುಂ ಕೊಳಲ್ಬರ್ಪುದೆ
ಸಂಗನೇ ಕೊಡುವವಂ ಸಂಗನೇ ಕೊಂಬವಂ
ಸಂಗನೇ ಉಂಬವಂ ಸಂಗನೆ ಉಡುವವಂ
ತಾಯ್ಗಳುಮ್ಮಳಿಸಲಾಗದು ಕರುಗಳಂ ಬಿಡಿರೆ
ಬೇಗ ಮೊಲೆ ತೊರೆದು ಮರುಗುವವು ಕರುವಂ ಬಿಡಿರೆ
ಮಕ್ಕಳುಗಳವ್ವೆಗಳು ನೋಯಲಾಗದು ಬಿಡಿರೆ
ಮಿಕ್ಕು ನೆನಹಿಂ ಮಲಮಲಂ ಮರುಗುವವು ಬಿಡಿರೆ
ಎಲೆಲೆ ತಾಯ್ಗರುಗೂಡಿರೇ ಬೇಗದೊಳು ಬಿಟ್ಟು
ಎಲೆಲೆಯಗಲ್ದಿರಲಾರ್ಪವೇ ಮಕ್ಕಳಂ ಬಿಟ್ಟು

ಎಂದು ಕರುಗಳನಲ್ಲಿ ಬಿಡಿಸುತೆ ದಯಾಪರಂ
ಹೆಂದದಾನಂದಾಶ್ರುಜಲಪೂರ್ಣನಿರ್ಭರಂ
ಶರಣರೊಡನೊಲುಮೆಯಿಂ ಲಿಂಗಾರ್ಚನಂಗೆಯ್ದು
ತರತರದೊಳವರನಾರಾಧಿಸುತೆ ಬೆಸಕೆಯ್ದು
ಹರುಷದಿಂ ಮೃಡನ ಪ್ರಸಾದವಂ ಕೈಕೊಂಡು
ಪರಮಸುಖಿಯಾಗಿ ಶರಣರ ನೇಹವೆಡೆಗೊಂಡು
ಶರಣರೆಲ್ಲಂ ಸ್ವೇಚ್ಛೆಗಾನಂದದಿಂ ಪೋಗೆ
ವರಭಕ್ತ ಬಸವಂಗೆ ನಸುನಿದ್ರೆಗೆಡೆಯಾಗೆ
ಸೆಜ್ಜೆವನೆಯೊಳಗೆ ಮೃದುವೆನಿಪ ತಳ್ಪದ ಮೇಲೆ
ಸಜ್ಜನಂ ನೆಲಸಿ ತೂಕಡಿಕೆ ಮನಮಂ ಜೋಲೆ
ಜಂಗಮಸಮಾಧಿ ತನಗೆಂಬಂತೆ ಕಣ್ಮುಚ್ಚೆ
ಲಿಂಗದಂಘ್ರಿಯ ಸೋಂಕನಂಗುಲಿ ಕರಂ ನಚ್ಚೆ
ಉಸಿರಲ್ಲಿ ಶರಣಾರ್ಥಿಯೆಂದೆಂದು ಸುಳಿವುತಿರೆ
ಅಸುವಿನೊಳು ಸಂಗನುಂ ಶರಣರುಂ ನೆಲಸುತಿರೆ
ನಿದ್ರೆಯೊಳಗಿರ್ದನಾ ಬಸವನನುರಾಗದಿಂ
ಚಿದ್ರೂಪದಿಂ ಶಿವನನರ್ಚಿಪುದ್ಯೋಗದಿಂ

ಇರೆ ದೂರ ದೇಶಾಂತಕಪ್ರವಾಸದೊಳಂದು
ಶರಣರೈತಂದರಾ ಬಸವದರುಶನಕೆಂದು
ಬಂದು ಬಾಗಿಲೊಳಿರ್ದ ಪಡಿಯರರನಾದರಿಸೆ
ಸಂದ ನಿದ್ರೆಯೊಲಿರ್ದನೆಂದವರು ಬಿನ್ನೈಸೆ
ಸಮಯವಿಲ್ಲೆನಲಮ್ಮೆನಿರ್ದ ಪರಿಯಿದು ದೇವ
ಸಮಯವಂ ಬಸವನಂ ನೀವೇ ಬಲ್ಲಿರಿ ದೇವ
ಕರುಣಿಸುವುದೆನೆ ನೊಂದು ತಿರುಗಿದರ್ ಕೈಯೊಡನೆ
ತಿರುಗೆ ತಿರುಗಿದುದು ಬಸವನ ಜೀವವವರೊಡನೆ
ಶರಣಾರ್ಥಿ ಎಂಬ ನುಡಿ ಶರಣರೊಳು ಸೇರಿತ್ತು
ಪುರದೊಳಗೆ ನಡೆಯೆ ಬಳಿಬಳಿಯಾಗಿ ನಡೆಯಿತ್ತು
ಮತ್ತಲ್ಲಿ ಬಸವರಾಜನ ಸತಿಯರೆಯ್ತಂದು
ಹೊತ್ತು ಹೋಯಿತ್ತೇಳಿರೇ ಶಿವಾರ್ಚನೆಗೆಂದು
ತೊಡೆವೊಯ್ದು ಮೆಲ್ಲನೆಬ್ಬಿಸೆ ಸುಮ್ಮನಿರುತಮಿರೆ
ನಿಡು ಮುಸುಕನೋಸರಿಸೆ ದೇಹದುಸಿರಿಲ್ಲದಿರೆ
ಕಟ್ಟು ಗುಡಿಯಂ ಸಂಗನೊಳಗೆ ಸಂದಂ ಬಸವ
ನಿಷ್ಠೆಕ ಭಕ್ತರ್ಗೆ ಪೇಳದೊಲವಿಂ ಬಸವ

ಎನೆ ಮನೆಯೊಳಿರ್ದ ಶಿವಭಕ್ತರೆಲ್ಲೈತಂದು
ತನತನಗೆ ಬಸವನಂ ಮುಟ್ಟಿ ನೋಡುತ್ತಂದು
ಇರ್ದವರೊಳೊರ್ಬ ಭಕ್ತಂಗೆ ಸರ್ವೇಶ್ವರಂ
ಸಾರ್ದು ದಯೆಯಿಂ ಸೂಚಿಸುತ್ತಮಿರೆ ಶಶಿಧರಂ
ಅರಿದು ಶರಣರು ಹೋ ವಿಚಾರವುಂಟೆಂದಲ್ಲಿ
ಹೊರಗೆ ಬಾಗಿಲ್ಗಾಹಿಯಂ ಕರೆಯಿಸುತ್ತಲ್ಲಿ
ಶಿವಭಕ್ತರರಸಿ ಹೋದವರುಂಟೆ ಬಸವನಂ
ಭವನ ಶರಣರು ಹರಣವಾಗಿರ್ದ ಬಸವನಂ
ಎಂದರುಂಟುಂಟು ಭಕ್ತರ್ಬಂದರೆಲೆ ದೇವ
ಬಂದಲ್ಲಿ ಸಮಯವಿಲ್ಲೆನೆ ಹೋದರೆಲೆ ದೇವ
ಎಂಬ ನುಡಿಗೇಳ್ದು ತಪ್ಪದು ಬಸವನಿರ್ದಪಂ
ಅಂಬಕತ್ರಯನುಣುಗರೊಡನೆ ಹೋಗಿರ್ದಪಂ
ಅಂತವರ್ಬರೆ ಬಂದಪಂ ಬಸವನೆಂದೆನುತೆ
ಮುಂತೆ ಪರಿದರು ಕೇರಿಗೇರಿಗಿದು ಹೊಸತೆನುತೆ
ಬಸವನ ಪ್ರಾಣವಂ ಪರಿದರಸುವಂದದಿಂ
ಬಸವನಸುವಂ ಪುರದೊಳಾರೈವ ಛಂದದಿಂ

ಬಂದು ಕಂಡರು ಪುರಕೆ ಪೊಚ್ಚ ಪೊಸ ಭಕ್ತರಂ
ನಿಂದು ಕಂಡರು ಬಸವನ ಪ್ರಾಣಯುಕ್ತರಂ
ಅಲ್ಲಿ ಕಾಣುತ್ತೆ ಬರಲಿಲ್ಲಿ ಚೇತನವಾಯ್ತು
ಅಲ್ಲಿ ನಡೆತರುತವಿರಲಿಲ್ಲಿ ಉಸಿರುಂಟಾಯ್ತು
ಅಲ್ಲಿ ಬಾಗಿಲಿಗೆ ಬರಲಿಲ್ಲಿ ಮೈಮುರಿದೆದ್ದು
ಮೆಲ್ಲನೈತಂದು ಮುಟ್ಟಿದಡೆ ಕಣ್ದೆರೆದೆದ್ದು
ಜಂಗಮಪ್ರಾಣಿ ಶಿವಭಕ್ತಿ ಕಣ್ದೆರೆವಂತೆ
ಸಂಗಮೇಶ್ವರನ ಕಡುನಿಷ್ಠೆ ಕಣ್ದೆರೆವಂತೆ
ಇರೆ ಶರಣರೆಲ್ಲ ಬೆರಗಾಗಿ ಕೌತುಕವೇರಿ
ಧರೆಗೆ ಪೊಸತೆಂದೆನುತೆ ನುಡಿದರಾಗಳು ಮೀರಿ
ಎಲೆ ಬಸವರಾಜ ಶರಣರು ಪೋಗೆ ಪೋಪರೇ
ನೆಲದೊಳಿದು ಚೋದ್ಯವಿಂತುಸಿರಿಲ್ಲದಿರ್ಪರೆ

ಎನೆ ಬಂಜೆ ಬೇನೆಯರಿಯದವೊಲ್ನುಡಿಯಲುಂಟೆ
ಎನಗೆಯಾಯುಂ ಶ್ರೀಯುಮೊಡೆಯರೇ ಬೇರುಂಟೆ
ಶರಣತತಿ ಪೋಪುದೇ ಎನ್ನ ಹರಣದ ಹೋಗು
ಶರಣರ ಬರವೆ ಎನ್ನ ಹರಣದ ಬರವಿನಾಗು
ಎಂದು ಹಾಡುತ್ತವಾ ಭಕ್ತರಂ ಬಿಗಿಯಪ್ಪಿ
ನಿಂದು ನೆರೆ ತನ್ನ ಹರಣಂಗಳಂ ಬಿಗಿಯಪ್ಪಿ
ತಂದು ದೇವಾರ್ಚನೆಯ ಮನೆಯೊಳಗೆ ಕುಳ್ಳಿರಿಸಿ
ಸಂದ ಪನ್ನಿಚ್ಛಾಸಿರೊಡೆಯರಂ ನೈತಿರಿಸಿ
ನಡುವೆ ಸಂಗಮದೇವರರ್ಚನೆಗೆ ತಾವಿರ್ದು
ಎಡಬಲದ ಶರಣರಂ ನೋಡಿ ಪುಳಕಿಸುತಿರ್ದು
ಕೋಡಗ್ಘವಣಿ ಪುಷ್ಪ ಧೂಪ ದೀಪಂಗಳಂ
ಕೋಡೆಯಾರೋಗಣೆಗೆ ದಿವ್ಯಾನ್ನತತಿಗಳಂ
ಕೊಟ್ಟು ಸುಖದಿಂದೆ ಪ್ರಸಾದಮಂ ಕೈಕೊಂಡು
ಕಟ್ಟಧಿಕರೆನಿಪ ಶರಣರ ಕರುಣಮಂ ಕೊಂಡು
ನೆನೆನೆನೆದು ಪುಳಕಿಸುತೆ ಗೀತಮಂ ಪಾಡುತಂ
ಮುನಿದು ಸಂಗಂಗೆ ಪೊಸಗೀತಮಂ ಪಾಡುತಂ
ಮೂದಲಿಸಿ ಪಾಡುತಂ ಮುದ್ದಿಸುತೆ ಪಾಡುತಂ
ಆದರಿಸಿ ಪಾಡುತಂ ಮೇರೆಗೆಡೆ ಪಾಡುತಂ
ಗೀತಂಗಳೊಳಗೇಕನಿಷ್ಠೆ ಹೊಳೆಹೊಳೆವುತಿರೆ
ಗೀತಂಗಳೊಳಗಭವಭಕ್ತಿ ಬೆಳೆಬೆಳೆವುತಿರೆ

ಗೀತದೊಳು ಸಂಗನಾಧಿಕ್ಯವೊಪ್ಪುತ್ತಮಿರೆ
ಗೀತದೊಳು ಶರಣರ ಸಮಗ್ರವೇ ಜಿಗಿಲುತಿರೆ
ಗೀತದೊಳು ಪರದೈವ ಶೋಷಣಂ ತೋರುತಿರೆ
ಗೀತದೊಳು ಪರಸಮಯ ಭೀಷಣಂ ಪೊಣ್ಮುತಿರೆ
ಗೀತಂ ಶಿವಂಗೆ ಕರ್ಣಾಭರಣವಾಗುತಿರೆ
ಗೀತವೀಶನ ದಯಾಕರುಷಣವದಾಗುತಿರೆ
ಹಾಡುತಂ ಶರಣರೊಳು ಬಸವಣ್ಣನೊಪ್ಪಿದಂ
ಆಡುತಂ ಭಕ್ತನಿಧಿ ಬಸವಣ್ಣನೊಪ್ಪಿದಂ
ಅಮಮ ದಂಡಾಧಿಪಕಿರೀಟಪದನೊಪ್ಪಿದಂ
ಅಮಮ ಛಲಿನಾಯಕರ ದೇವನಿಂತೊಪ್ಪಿದಂ ೨೧೦-೯೦೨

## ಸ್ಥಲ ೧೦

ಬಸವನ ಗೀತವಂಬುಧಿಪರೀತ ಧರಾತಳದಲ್ಲಿ ಸಂದುದೆಂ
ದುಸಿರ್ವುದಿದಾವುದೊಂದರಿದು ಪನ್ನಗಲೋಕದ ದಾರವಟ್ಟದೊಳ್।
ದೆಸೆಗಳ ಭಿತ್ತಿಯೊಳ್ ದಿಗಿಭದಂಗದೊಳಿಂದ್ರನ ಜಿಹ್ವೆಯೊಳ್ ಶಿವಾ
ವಸಥದ ಬಾಗಿಲಲ್ಲಿ ಬರೆದಿಪ್ಪುದೆನಲ್ಕಿದುಮೊಪ್ಪದಿಪ್ಪುದೇ॥

ಗೀತಂ ಸಂಗಸ್ತುತಿ ಸಂ
ಗೀತಂ ಗೀತಂ ವಿಶಾಲ ವಸುಧಾಪೂತಂ ।
ಗೀತಂ ಗಣವಿಖ್ಯಾತಂ
ಗೀತಂ ಸಂಪ್ರೀತಿ ನೀತಿ ಗೀತಂ ನೂತಂ ॥

ಗೀತಂ ವೇದಾಂತಾರ್ಥ
ವ್ರಾತಂ ಗೀತಂ ಸಮಸ್ತ ಶಾಸ್ತ್ರೋಪೇತಂ ।
ಗೀತಂ ಸಕಳಾಗಮಕುಲ
ಜಾತಂ ಗೀತಂ ಪರಾಪರೈಕಸಮೇತಂ ॥

ಎಂದಿಂತು ಗೀತಮಂ ತನ್ನ ಸಾಮರ್ಥ್ಯಮಂ ಕೊಂಡಾಡುತ್ತಿರ್ಪ ಪರಮಮಾಹೇಶ್ವರರ ಕರುಣಮಂ ಕೈಕೊಂಡು ಪನ್ನಿಚ್ಛಾಸಿರ ಮನ್ನಣೆಯ ಭಕ್ತರ ನಡುವೆ ಸನ್ನಿಹಿತನಾಗಿ ಬಸವಿದೇವಂ ಸುಖದಿಂದಮಿರ್ದೊಂದು ದೆವಸಂ ಶರಣರ ಬರವಂ ಪಾರ್ದಿರ್ಪ ಸಮಯದೊಳು ಬರುತಿರ್ದಪರೆಂಬ ಭಾವದೊಡನೆ ಪುಳಕಂ ಪುಟವೇರೆ ಭೋಂಕನೇಳ್ದುನ್ನತಾಸನವೇರಿ ಪಲ್ಲವಸತ್ತಿಗೆ ಮೇಲ್ಮಸಗೆ ಕೆಲಬಲದ ಪರಿಜನಂ ನೆಲನನುಗ್ಘಡಿಸೆ, ಚಾಮರ ಸೀಗುರಿಗಳಿಕ್ಕೆಲದೊಳಲ್ಲಾದಡೆ, ಶಂಖಧ್ವನಿಯುಣ್ಮೆ

ಶಿವಭಕ್ತಪಾದಶೇಖರನೆಂಬ ಶರಣಜನವನವಸಂತನೆಂಬ ಭಕ್ತಜನಬಾಂಧವನೆಂಬ ಬಿರುದಿನ ಕಹಳಾರವಂ ದೆಸೆದೆಸೆಗೆ ಪಸರಿಸೆ, ಪುರಮಂ ಪೊರಮಟ್ಟು ಹಿರಿಯ ಮಾಹೇಶ್ವರರ ಕೇರಿಗಳ ಕೆಲದೊಳು ನಡೆತಪ್ಪಾಗಳು,

ಓಹಿಲಯ್ಯಂಗೆ ಹಿತಾರ್ಥ, ಉದ್ಭಟಯ್ಯಂಗೆ ಹಿತಾರ್ಥ, ಬಸವರಾಜಂಗೆ ಹಿತಾರ್ಥವಾರೋಗಿ ಸೆಂದೆಂಬ ಶಿವಲಿಂಗದಾರೋಗಣೆಯ ಸಮಯ ಸರ್ವಮಂಗಳರಚಿತ ಪರಿಣಾಮ ಪೂರಿತ ದಿವ್ಯವಾಕ್ಯಂಗಳಂ ಘಂಟಾನಾದದೊಡನೆ ಕೇಳ್ದು, ಕರಣಂ ಕಳೆಯೇರಿ, ಸಿರಿಮೊಗಂ ಸಂಪದವೇರಿ, ದಂಡಿಗೆಯಿಂ ಘಳಿಲನಿಳಿದು. [ಸಂಬೋಳಿ] ನಾಗಿದೇವನೆಂಬ ಹಿರಿಯ ಮಾಹೇಶ್ವರರ ಮನೆಯಂ ಪೊಕ್ಕು, ಸಂಗಪ್ರಸಾದದಲವರ ಪ್ರಸಾದಮಂ ಬೆರಸಿ ಕೈಕೊಳುತ್ತಿರಲಿತ್ತಲೊಡನೆ ಬರುತಿಪ್ಪ ವೈಷ್ಣವರ ಬೇಹಿನ ಸಾಹಸಿಗನೊರ್ವಂ ಪುರಕ್ಕೆ ಪರಿತಂದು ಬಸವನ ಚರಿತ್ರಮನಜ್ಞಾನಿಗಳಪ್ಪ ವಿಪ್ರಕುಲಕ್ಕೆ ಪೇಳೆ ಕೇಳ್ದು, ಸಂಭ್ರಮದಿಂ ಸಡಗರಿಸುತ್ತಂ ನಾರಾಣಕ್ರಮಿತಂ ಕೃಷ್ಣಪೆದ್ದಿ ವಿಷ್ಣುಭಟ್ಟಂ ಕೇಶವಭಟ್ಟಂ ವಿಶ್ವಕ್ಸೇನಭಟ್ಟಂ ಮುರಾರಿಕ್ರಮಿತಂ ಸೌರಿಪೆದ್ದಿ ಮುಕುಂದಭಟ್ಟಂ ಪದುಮನಾಭಕ್ರಮಿತಂ ಗೋವಿಂದಪಂಡಿತಂ ಧರಣೀಧರಭಟ್ಟಂ ವೈಕುಂಠಪೆದ್ದಿ ಜಲಶಯನಕ್ರಮಿತಂ ದಶಾವತಾರಭಟ್ಟಂ ಜನಾರ್ದನಪೆದ್ದಿ ವಾಸುದೇವಘಯಿಸಂ ಅಚ್ಯುತಕ್ರಮಿತಂ ದಾಮೋದರಭಟ್ಟಂ ಮೊದಲಾದ ಛಾಂದಸರು ವೇದಜಡರ್ಮಟ್ಟೆಯ ಮರುಳ್ಗಳು ವ್ಯಥೋತ್ಸಾಹಿಗಳು ಹೆರ್ಬೇಸಿಗಳು ದರ್ಭೆಯ ನಿರ್ಭಾಗ್ಯರೆಲ್ಲಂ ನೆರೆದರಮನೆಗೆ ಬಂದು–

ದೇವ ದೇವಾ, ಎಲೆ ಭೂಪಾ, ಎಲೆಲೆ ಬಿಜ್ಜಣಾ ಬಸವನ ನಡವಳಿ ದಿನದಿನಕೆ ವಿಪರೀತವಾಗಿರ್ದಪುದು. ಹಿರಿಯ ಮಾಹೇಶ್ವರರೆಂದು ಬೆರಸಿಕೊಂಡಿರ್ಪುದಂತಲ್ಲದೆ ಇಂದೀಗಳೀಗಳ್ ಪೊಲೆಗೇರಿಯೊಳೊರ್ಬಂ ಪೊಲೆಯನೆಂದಡೆ ಕೊಂದಪಂ ಹಿರಿಯ ಭಕ್ತನ ಮನೆಯೊಳುಂಡು ಉಂಡುದಲ್ಲದೆ ನಿನ್ನೋಲಗದೊಳ್ ಪೊಲೆಗಲಸಲ್ ಬಂದಪಂ. ಇಂತಾದಡೆಮಗಿರಲ್ಬಾರದೆಂದು ಪೇಳ್ವರಂ ಸಂತೈಸಿ ಬಸವನಂ ಕರೆಯಿಮೆಂದರಸಾಳ್ಗಳಂ ಕಳುಪುತ್ತಂ ಬಸವರಾಜಂ ಬಂದೋಲಗದ ಮನೆಯಂ ಪೊಗುವನೆಂದು ರಾಜಾಂಗಣದ ಬಯಲೊಳೊಡ್ಡೋಲಗಂಗೊಟ್ಟಿರಲಲ್ಲಿಗೆ ಜಂಗಮದಶಾವಸ್ಥಂ, ಜಂಗಮಪ್ರಾಣಿಯೆನಿಪ್ಪ ಸಂಗನಬಸವಂ ಬಂದಿರೆ ಬಿಜ್ಜಳಂ ಕಂಡೆಲೆ ಬಸವಣ್ಣಾ, ಮಿಸುನಿ ಕಂಪಿತಾದಂತೆ ವಿಪ್ರಕುಲಕ್ಕನುಕೂಲವಪ್ಪ ಶಿವಭಕ್ತಿ ಪೊದ್ದಿರ್ದು ಸದಾಚಾರದಿಂ ಸುಖಿಯಾಗಿರ್ಪುದನೊಲ್ಲದೆ ಅತಿಭಕ್ತಿ ತಲೆಗೇರಿ ಹಿರಿಯಮಾಹೇಶ್ವರರೆಂದು ಪೊಲೆಗಲಸಿಯವರ ಮನೆಯೊಳುಂಡುದಲ್ಲದಿಲ್ಲಿದೆ ಬಂದೆಮ್ಮಲ್ಲಿರಂ ಗೋಜಾಗತೆ ಮಾಳ್ಪುದು ಮಾರ್ಗವಲ್ಲೆಂದು ವಿಪ್ರಪ್ರೇರಕಂ ನುಡಿಯೆ,

ಬಸವರಾಜು ಕೇಳ್ದೆಲೆ ಬುದ್ಧಿಯಲ್ಲದ ಭೂಪಾ, ಎರಗಿವಿಯ ಮರುಳೆ, ನಾರಣಕ್ರಮಿತರ ಕೇರಿಯಂ ಹೊಕ್ಕೆನೆ, ಮುಕುಂದಭಟ್ಟರ ಮನೆಯಲುಂಡೆನೆ, ಸೌರಿಪೆದ್ದಿಗಳಂ ಸಾರಿನಿಂದೆನೆ, ದಾಮೋಧರಭಟ್ಟರಂ ಪ್ರೇಮದಿಂ ಸೋಂಕಿದೆನೆ, ಕೇಶವಘಯಿಸರ ವಾಸನೆಯುಂಟೆ, ಹರನನರಿಯದ ಹೊಲೆಯರ ಮನೆಯಂ ಪೊಕ್ಕುದಿಲ್ಲೆಂದು ಶಿವಪ್ರೇರಕಂ ನುಡಿದ ಮಾತಿನೊಡನೆ ಬಿಜ್ಜಳಂ ಕೋಪದೊಳುರಿದಿಂತು ನಡುವರೇ ಭಂಡಾರಿ ಬಸವಾ, ವೇದಶಾಸ್ತ್ರ ಪುರಾಣಾಗಮಯಜ್ಞ ವಿಧಿಯಿಂ ನಡೆವ ವಿಪ್ರರಂ ಹೊಲೆಯರೆಂದು ಶಿವಭಕ್ತನಾದ ಹೊಲೆಯನಂ ಉತ್ತಮನೆಂಬುದಕ್ಕೆ ಪ್ರಮಾಣೇನು? ವಿಪ್ರರ ಮೈಯಂ ಕುಯ್ಯೆ ನೆತ್ತರು ಸುರಿದು ಭಕ್ತರ ಮೈಯೊಳಳ್ಪಾಲು ಸುರಿದಪುದೆ? ಬೇಡ ಬೇಡ, ಸಮಯಪಕ್ಷದೊಳಪ್ಪುದೆಲ್ಲತಿರೇಕವೇಕೆಲ ಪದುಳಮಿರ್ದಡೆ ಸಾಲ್ವುದೆಂದರಸಂ ನುಡಿಯೆ, ಬಸವಣ್ಣಂ ಕೇಳ್ದು ನಸುನಗುತ್ತಾ ಮಾತಿಂಗೊಡಂಬಟ್ಟು, ತಪ್ಪದು ತಪ್ಪದು ಎಲೆಯರಸಾ, ನೀಂ ತಪ್ಪಿ ನುಡಿಯೆ.

ನೀನೆಂದಂತೆ ವಿಪ್ರರ ಮೈಯೊಳ್ನೆತ್ತರು ಭಕ್ತರ ಮೆಯ್ಯೊಳ್ಪಾಲು ಸುರಿಯದಿರ್ದಡೆ ಸಂಗಂಗೆ ದೂರಂ, ಶರಣರ್ಗೆ ದೂರಂ, ನೋಡು ನೋಡರಸ, ನೀಂ ನೀಡಿನಿತು ಬೇಗಂ ಸೈರಿಸೆಂದು ಗಳಗಳನೆ ಹಿರಿಯ ಕೇರಿಗೆ ನಡೆತಂದು [ಸಂಬೋಳಿ] ನಾಗಿದೇವಯ್ಯನನಂದಳದೊಳ್ಬಿಜಯಂಗೆಯ್ಸಿ ತಾಂ ಕೆಲಬಲದೊಳ್ಬರುತಂ, ದೇವ, ಭಕ್ತದೇಹಿಕ ದೇವ, ನೀಂ ಪೊಕ್ಕಲ್ಲಿ ಪೊಕ್ಕವರೊಕ್ಕುದಂ ಕೊಂಡೆ, ನೀನಿರ್ದ ಕುಲವೆ ಸತ್ಕುಲಂ, ನಿನ್ನಿಂದೆ ನಾಂ ಕುಲಜನೆಲ ಕೂಡಲಸಂಗ, ಕರುಣಿಸೆಂದು ಗೀತಮಂ ಪಾಡುತ್ತಂ ನಡೆತಂದು ಬಿಜ್ಜಳನುಂ ಪರವಾದಿಗಳುಂ ಕೌತುಕಂಬಡುತ್ತಿರಲು, ದಂಡಿಗೆಯಿಂದು ಪಮನ್ಯುದೇವರನಿಳುಪುವಂತಿಳುಪಿ ತಾನೆ ಕೈಕೊಟ್ಟುಬಂದಾಸ್ಥಾನದ ನಡುವೆ ನಿಂದಿರ್ದು, ಕರೆ ಕರೆ ನಿನ್ನ ಕರ್ಮಜಡರನೆಂದು ಕರೆಸಿ ಬಂದ ವಿಪ್ರರೊಳೊರ್ವನ ಮೈಯಂ ಸೀಳೆ, ಕನ್ನೆತ್ತರುಂ ಬಾಲವುಳುಗಳುಂ ಸುರಿಯಲರಸಂ ಕಂಡು, ನೆರೆ ಪೇಸಿ ತೆಗೆತೆಗೆಯೆಂದು ಕಣ್ಮುಚ್ಚಿಕೊಳುತಮಿಕೆ ಬಸವರಾಜನೆದ್ದು ಇತ್ತಲ್ ನೋಡಾ ಬಿಜ್ಜಳನೃಪಾಲಾ ಎಂದು ರಜತಾದ್ರಿಯರಸನಂ ಗೌರಿಪತಿಯಂ ಗಂಗಾಧರನಂ ವಿಭೂತಿಭೂಷಣನಂ ಚಂದ್ರಧರನಂ ಪುಣ್ಯಮಯನಂ ಶಿವನಂ ನೆನೆದು ಸುಧಾಕರಧರನ ಪಾದದಂತಿರ್ದ ಶರಣನ ಪಾದಮಂ ಹಿಡಿದು ಸುರಧೇನುವಿನ ಪಯೋಧರಮನಿಸುವಂತುಂಗುಟದ ಮೊನೆಯನಿಸಲೊಡಂ ಶ್ವೇತಪರ್ವತದ ಪಾದತಟದ ಸುರಿವುದರಿವಿನ ಹಾಲೊರತೆ ಸುರಿತಪ್ಪಂತೆ ಹಾಲಹಳ್ಳ ವೋಲಗದ ನಡುವೆ ಮಡುಗಟ್ಟಿ ಪರಿದು ಪೊರಸೂಸೆ, ಕಂಡು ಕಂಡು ಬಿಜ್ಜಳಂ ಕೌತುಕಂಗೊಂಡು ಭಯರಸವೇರಿ ಭಾವಿಸುತ್ತಿರೆ ಪುರಜನಂ ಬೆರಗಾಗೆ, ಶರಣರ್ಗುಡಿಗಟ್ಟೆ, ಪರವಾದಿಗಳೆಲ್ಲಂ ಮೆಲ್ಲಮೆಲ್ಲನೆ ಸರಿಯೆ,

ಸಾಮರ್ಥ್ಯದಾಯಕಂ, ನಾಯಕರ ದೇವಂ ಬಸವರಾಜಂ ನಿಂದೆಲೆ ಧರಿತ್ರೀನಾಥಾ, ಸೂರ್ಯನ ಮೈಯೊಳ್ಕಲಂಕುಂಟೆ ಲ ಅಮೃತರಸದೊಳು ಕೈಪೆಯುಂಟೆ? ಶಿವಭಕ್ತರ ಮೈಯೊಳು ಸುಧಾರಸವಲ್ಲದೆ ಮತ್ತೊಂದುಂಟೆ ? ಶರಣಕುಲದುನ್ನತಿಯನರಿಯದೆ ನಿನ್ನ ವೇದಜಡರ ಮಾತು ಮೇರೆಗೆಡಿಸಿತ್ತು; ನಿರ್ದೈವರ ನುಡಿ ಬುದ್ಧಿಗೆಡಿಸಿತ್ತು, ಕರ್ಮಿಗಳ ಸಂಗಂ ಪೆರ್ಮೆಗೆಡಿಸಿತ್ತಿದಂ ಕಂಡಾದಡಂ ಶರಣರಂ ನಂಬು, ಮರುಳಾಗದಿರಲೆಂದು ಬಿಜ್ಜಳಂಗಭಯಮಂ ಕೊಟ್ಟು ಭಕ್ತಿಯ ಬೆಂಬಳಿಯೆ ಶರಣರ ಬೆಂಬಳಿಯಲ್ಲದೆ ಭವಿಗಳಂ ಮುಟ್ಟೆನೆಂಬ[ಸಂಬೋಳಿದಿ ನಾಗಿದೇವನಂ ಗಜಮಸ್ತಕದೊಳು ಬಿಜಯಂಗೆಯ್ಸಿ ಪುರದೊಳ್ಮೆರೆಯಿಸಿ ತನ್ನ ಮಹಮನೆಗೆ ತಂದಾನೆಯಿಂದಿಳುಪಿ, ಗದ್ದುಗೆಯಿತ್ತು ಮೈ ತೀವಲುಡಕೊಟ್ಟು, ಮನಂ ತೀವಲಾರಾಧಿಸುತ್ತವರಂ ಕಳುಪಿ, ಸಂಗನಬಸವಂ ಬಸವಿದೇವಂ ಹಾರದ ನಡುವಣ ನಾಯಕರತ್ನದಂತೆ; ಅವಯವದ ನಡುವಣ ಉತ್ತಮಾಂಗದಂತೆ, ನವರತ್ನದ ನಡುವಣ ಚಿಂತಾರತ್ನದಂತೆ, ಗೋಕುಲದ ನಡುವಣ ಕಾಮಧೇನುವಿನಂತೆ, ತರುಕುಲದ ನಡುವಣ ಸುರಕುಜದಂತೆ; ನವಗ್ರಹಂಗಳ ನಡುವಣ ಭಾಸ್ಕರನಂತೆ, ಅನುಲೇಪಂಗಳ ನಡುವಣ ಭಸಿತಮಂಡನದಂತೆ, ಕಾಂತಿಗಳ ನಡುವಣ ಸ್ವಯಂಜ್ಯೋತಿಯಂತೆ, ಸಮಸ್ತಶರಣ ಮಧ್ಯಸ್ಥಿತ ಮನೋಹರಮೂರ್ತಿಯಾಗಿ ಮಿತ್ಯಸುಖದಿಂದಿರ್ಪಲ್ಲಿ

ಸುರನದಿಯೊಳನರ್ಘ್ಯರತ್ನವುದಯಿಸುವಂತೆ ತಮ್ಮರಸಿ ಗಂಗಾದೇವಿಯರ್ಗೆ ಗರ್ಭವುದಯಿಸೆ, ಬಹಿರಂಗಭಾವರಸಂ ಮಿಕ್ಕು ಸೌಕುಮಾರ್ಯವೇರೆ, ಮೆಲ್ಲಡಿದಳು ಮಲ್ಲಳಿಗೊಳೆ, ಕೀಳ್ತೊಡೆ ತ್ರಿವಳಿಗಳಂ ಬೀಳ್ಕೊಡೆ, ತಿಳಿಗರ್ಭಂ ತೆಳುವಸಿರನೊತ್ತರಿಸೆ, ಪುಣ್ಯೋದರಂ ನಾಭಿಯಂ ಪೊರಗಿಕ್ಕೆ, ತನುಚ್ಛಾಯೆ ಬಾಸೆಯಂ ಬಣ್ಣವಿಡೆ, ಕಕ್ಷಪುಟಂ ಕರ್ಬೊಗರನುಗುಳೆ, ವಕ್ಷಶ್ರೀ ನೆಲೆಮೊಲೆಗೆ ತಿಲಕವಿಕ್ಕೆ, ಮುಖಂ ಲಾವಣ್ಯದ ಚಿಬ್ಬುವೊಯ್ಯೆ, ನುಡಿಗಳು ದಟ್ಟಡಿಯಿಡೆ, ಅಲರ್ಗಣ್ಣಾಯವೇರೆ, ನೋಟಂ ಬಳಲೆ, ಕಚಭರಂ ಕುಡಿಯಿಡೆ, ಸರ್ವಾಂಗಂ ಸಡಿಲೆ, ನವಮಾಸಂ ತೀವಿದ ಪಕ್ಷಮುಖಸಮಯದೊಳು ಬೇನೆ ಬೆರಸದೆ

ನೋವು ನೆರೆಯದೆ ಗರ್ಭವಾಸದಿಂದಿಳಿತಂದರಳ್ದ ತಾವರೆಯೊಳಗಣಿಂ ಬಾಲಹಂಸಂ ಪೊರಮಡುವಂತೆ ಸುಮುಹೂರ್ತದೊಳು ಸುಪುತ್ರನುದ್ಭವಿಸೆ, ಜಾತಕರ್ಮವನಲಂಕರಿಸಿ ನಾಮಕರಣಮಂ ಸಿದ್ಧರಸನೆಂದಿಟ್ಟು, ಲಿಂಗಮುಖದೊಳು ಕೆಂದೆರೆದ ಕಂದನಂ ಗಂಗಾದೇವಿಯರ್ಭಾವಿಸಿ ನೋಡಿ ಪಾದೋದಕದಿಂ ಮಜ್ಜನಕ್ಕೆರೆದು, ಪಂಚಾಕ್ಷರಿಯ ಬಾಯ್ವೆಣ್ಣೆಯನಿಕ್ಕಿ, ಭಕ್ತಿರಸದ ಮೊಲೆವಾಲನೂಡಿ, ಮಂಗಳಾರತಿಯ ಕುಡಿಗಪ್ಪಿನ ಕಾಂತಿಯಿಂದಂಜನಮನೆಚ್ಚಿ, ಭಸಿತದ ತಿಲಕಮನಿಟ್ಟು, ನೇಹದ ಕಾಪಿಟ್ಟು, ಪ್ರಸಾದದ ತುಂತುರಿಂ ತೂಪಿರಿದು, ಶರಣರ ಚರಣದ ತೊಟ್ಟಿಲೊಳ್ಪಟ್ಟಿರಿಸಿ, ಪುರಾತನರ ಗೀತದಿಂ ಜೋಗುಳಂಬಾಡಿ, ಭಕ್ತಿಯ ಮರಿಯಂ ಸಲಹುವಂತೆ ನಿಷ್ಠೆಯ ಶಿಶುವಂ ಸಾಗಿಪಂತೆ ಮೋಹದಿಂದೋವುತ್ತಿರಲೊಂದೆರಡು ವರುಷಂ ಸಜ್ಜನನೆನಿಪ ಸಿದ್ಧರಸಂ ಬಸವಣ್ಣನ ತೊಡೆಯಮೇಲಿರ್ದು, ಭೋಂಕನೇಳ್ದು ಮಹಮನೆಯಂಗಳದೊಳಂ ತವೆ ಪರಿದು, ಗೆಜ್ಜೆಯ ದನಿಯಾಲಿಸಿ ನಿಂದು, ಕೆಲಬಲನಂ ನೋಡಿ ಕಾಣದೆ ಮತ್ತೆ ಪರಿದು, ಮತ್ತೆ ನಿಂದಂಜಿದಂತೆ ಬೆದರುತ್ತಂ, ಜಾನಿಸುವಂತೆ ಸುಮ್ಮನಿರುತಂ, ಮೆಚ್ಚಿದಂತೆ ನಗುತಂ, ಬೆಚ್ಚಿದಂತೆ ಪರಿತಂದು ತಾಯನಪ್ಪುತ್ತಂ, ಮೊಲೆಗೆ ಲಲ್ಲೈಸಿ ನಿರಿವಿಡಿದು ಮೊಗಮಂ ನೋಡುತಂ ತೂಗಾಡುವ ಮಗನ ಬಸವರಾಜಂ ಕಂಡು ಮನಂದಣಿದು ಕುಳಿರ್ಕೋಡಿ ಹಾರೈಸಿ ಹಿಗ್ಗಿ ಶರಣರ್ಪರಕೆಗಳನೀಯೆ ಸುಖಮುಖದಿಂದಂ ಶಿವಭಕ್ತಸಂಗ ಸಮರಚಿತ್ತ ಸಂಗಪ್ರಸಾದ ಹೃದಯಕಾಯ ಸಂತುಷ್ಟನಾಗಿರುತ್ತಮಿರೆಯಿರೆ,

## ಸ್ಥಲ ೧೧

ಬಸವನ ಭಕ್ತಿಯಂ ಬಸವರಾಜನ ದಾನವಿನೋದವೃತ್ತಿಯಂ
ಬಸವನ ನಿಷ್ಠೆಯಂ ಬಸವಿದೇವನ ಸನ್ನುತ ಪುಣ್ಯಕೀರ್ತಿಯಂ ।
ಬಸವನ ಪೆರ್ಮೆಯಂ ನಲಿದು ಕೇಳುತೆ ಕಿನ್ನರ ಬೊಮ್ಮಿತಂದೆಗಳ್
ಬಸವ ನಿರೀಕ್ಷಣಾರ್ಥ ಒಲವಿಂ ಬರುತಿರ್ದನನೂನ ಸಾತ್ವಿಕಂ ॥

ಇಂತು ಬಸವಣ್ಣನಂ ನೋಡುವುದ್ಯೋಗದಿಂ
ಸಂತಸದೆ ಬರುತಿರ್ದರಂತಲ್ಲಿ ಬೇಗದಿಂ
ಎಸೆವ ಕಿನ್ನರಬೊಮ್ಮ ತಂದೆಗಳು ಬರುತಮಿರೆ
ಅಸಮನಯನನ ಗಣಾವಳಿ ನೋಡಿ ನಲಿವುತಿರೆ
ಮುಂತೆ ವೃಷಭಧ್ವಜಂ ಗಗನದೊಳ್ಕುಣಿವುತಿರೆ
ಪಿಂತೆ ಮಾಹೇಶ್ವರರ ಕೇಳಿಕೆಗಳೊಪ್ಪಿ ಬರೆ
ನಡೆತಂದು ಪುರವೀಧಿಯಂ ಪೊಗುತ್ತಿರಲಿತ್ತ
ಕಡುನೇಹಿ ಬಸವಂಗೆ ಬಲದ ಕಣ್ ಕೆತ್ತುತ್ತೆ
ಇಮ್ಮಡಿಸಿ ಪುಳಕಂಗಳೊಮ್ಮಿಗೊಮ್ಮಿಗೆ ನೆಗೆಯೆ
ನೂರ್ಮಡಿಸಿ ಮೈವೆಚ್ಚುತಾನಂದವಂದೊಗೆಯೆ
ಪರಮ ಹರುಷಂದೋರುತಿರೆ ಸಂತಸಂಬಡುತೆ
ಹರನ ಭಕ್ತರ್ಬಪ್ಪರಿಂದೆನ್ನ ಮನೆಗೆನುತೆ

ಶಶಿಯ ಬರವಂ ಚಕೋರಂ ಬಯಸಿ ನಿಂದಂತೆ
ಎಸೆವ ಕಾರಂ ಬಯಸಿ ನಿಂದ ಚಾದಗೆಯಂತೆ
ಇರೆ ಮುಂದೆ ಮೆರೆವ ನಂದಿಯ ಪತಾಕೆಯ ನಡುವೆ
ಹರನ ಗಣನಾಯಕರ ಸಂಭ್ರಮಂಗಳ ನಡುವೆ
ಕಿನ್ನರಯ್ಯಂ ಬರುತ್ತಿರೆ ದೂರದಿಂ ಕಂಡು
ತನ್ನ ಪುಳಕದೊಳೆ ಗುಡಿಗಟ್ಟುತೆ ಮನಂಗೊಂಡು
ಬಸವನಿದಿರ್ವಂದು ಭಯಭಕ್ತಿಯಿಂ ಮೈಯಿಕ್ಕಿ
ಒಸೆದು ಕಿನ್ನರ ತಂದೆಯಿದಿರಾಗಿ ಮೈಯಿಕ್ಕಿ
ಇರ್ಬರೊಂದಾಗಿ ನಲಿನಲಿದು ತಕ್ಕೈಸುತಂ
ಸರ್ಬನ ಗಣಂಗಳೊಳ್ಪರಮಸುಖವೊಂದುತಂ
ಬಂದು ಬಸವಣ್ಣನರಮನೆಯನೊಲವಿಂ ಪೊಕ್ಕು
ತಂದುನ್ನತಾಸನದೊಳಿರಿಸುತೆ ಮನಂ ಮಿಕ್ಕು
ಪಾದಂಗಳಂ ತೊಳೆದು ತೀರ್ಥಜಲಮಂ ತಳೆದು
ಆದರಂ ಮಿಗೆ ಕಿಂಕರಾಕಾರದೊಳ್ನೆರೆದು
ಪನ್ನೆರಡುಸಾವಿರೊಡೆಯರ ನಡುವೆಯಾಡುತಂ
ಕಿನ್ನರಯ್ಯಂಗೆ ಲಿಂಗಾರ್ಚನೆಗೆ ನೀಡುತಂ
ಸಂಗಂಗೆ ಸಂಗಡದೊಳಾರೈಸಲಿಕ್ಕುತಂ
ಹಿಂಗದೆ ಶಿವಪ್ರಸಾದಂಗಳಿಂ ಪೆರ್ಚುತಂ

ಕಿನ್ನರಯ್ಯಂಗೆ ಆದರದಿಂದಲುಡಲಿತ್ತು
ಮನ್ನಿಸುತ್ತವರ ಪದಮಂ ನೆತ್ತಿಯೊಳು ಹೊತ್ತು
ಕಿನ್ನರಯ್ಯನ ಹರುಷವೇ ಹರುಷವಾಗುತಂ
ಕಿನ್ನರಯ್ಯನ ನೇಹವೇ ನೇಹವಾಗುತಂ
ನಲಿನಲಿದು ಕೆಲದೆವಸವೀ ತೆರದೊಳೊಪ್ಪುತಿರೆ
ಒಲವು ದಳವೇರಿ ಇಬ್ಬರ ನಡುವೆ ಬೆಳೆವುತಿರೆ

ಒಂದು ದೆವಸಂ ಕಿನ್ನರಯ್ಯಂಗಳೊಲ್ಮೆಯಿಂ
ಇಂದುಧರನಾರೋಗಣೆಗೆ ಚಿತ್ತದಳ್ತಿಯಿಂ
ತನ್ನ ಸೊಗಸೇ ಶಿವಗಂತಿ ಸೊಗಸು ತಾನೆಂದು
ಚೆನ್ನನಪ್ಪುಳ್ಳಿಗಳ ಮೇಲೋಗರಕ್ಕೆಂದು
ತರಿಸಿ ಸುಖಮುಖದಿಂದೆ ಸೋದಿಸುತ್ತಿರ್ಪಲ್ಲಿ
ಶರಣರೊಡಗೂಡೆ ಮಿಗೆ ಬಣ್ಣಿಸುತ್ತಿರ್ಪಲ್ಲಿ
ಹೆಂಪಿಂದೆ ಶರಣರ ನಡುವೆ ಉಳ್ಳಿ ಮೆರೆವುತಿರೆ

ಕಂಪು ಬಸವನ ನಾಸಿಕಕ್ಕೆ ತೀಡುತ್ತಮಿರೆ
ತಂದರಾರೀಯಭೋಜ್ಯವನೆನುತ್ತುಳ್ಳಿಯಂ
ನಿಂದಿಸುತೆ ಪೋದನರಮನೆಗೆಯಭವಪ್ರಿಯಂ
ಆ ನುಡಿಯನಾಲಿಸುತೆ ಕಿನ್ನರಯ್ಯಂಗಳಿರೆ
ಏನೆಂದ ಬಸವಣ್ಣನೆನುತೆ ಕಾಯ್ಪಡರುತಿರೆ
ಕಂಗಳರೆಗೆಂಪಾಗೆ ಮೀಸೆಗಳು ಕೆತ್ತುತ್ತೆ
ಹಿಂಗದಿರ್ಪುದು ತನ್ನ ಮಂದಿರದೊಳಗೆ ಮತ್ತೆ
ಹರಹರ ಇದೇನೆಂದು ಕಣ್ಣನೀರಿಕ್ಕುತಂ
ಪಿರಿದುಂ ನಿರೋಧದಿಂ ಶರಣನತಿ ನೋವುತಂ
ಬರಲಾಗದಿಲ್ಲಿಗಾಂ ಬಂದಲ್ಲಿ ಸೈರಿಪುದು
ಶರಣರಂ ದೂರದಿಂ ಕೇಳುತಾದರಿಸುವುದು
ಅಮೃತಮಂ ಬಿಸುಟು ಮಲ್ಲಯ್ಯನಾರೋಗಿಸುವ
ಅಮೃತಮಯ ಶಾಕಮನಿದಂ ನೋಡಿ ನಿಂದಿಸುವ
ನುಡಿ ಗೇಳ್ದು ನಿಲಲಾಗದೆಂದು ಘುಡುಘುಡಿಸುತಂ
ಕಡುಗೋಪದಿಂದೆ ಪೊರಮಟ್ಟು ದಡದಡಿಸುತಂ
ಗಾವುದಳವಿಯ ಬಟ್ಟೆಯೊಂದೂರ್ಗೆ ನಡೆತಂದು
ದೇವಾರ್ಚನೆಯ ನಿತ್ಯನೇಮಕ್ಕೆ ಮನದಂದು

ಅತ್ತಲಾ ಕಿನ್ನರಯ್ಯಂ ಹೋಗಿಯಿರಲಿತ್ತ
ನಿತ್ಯನೇಮಕ್ಕೆ ಶರಣರ್ಕೂಡುತಿರಲಿತ್ತ
ಅಂದು ಬಸವಂ ಬಂದು ಶರಣಪಾದೋದಕದೆ
ಮಿಂದು ಮಡಿವರ್ಗಮಂ ಪೊದೆದು ಮಿಗೆ ಸಂತಸದೆ
ಕಿನ್ನರಯ್ಯನನರಸಿ ಕಾಣದೆ ಭಯಂಗೊಂಡು
ಎನ್ನೊಡೆನೆಲ್ಲಿರ್ದನೆಂದು ನೇಹಂಗೊಂಡು
ಬೆಸಗೊಳಲು ಶರಣರೆಂದರು ಬಸವರಾಜಂಗೆ
ಶಶಿಧರನ ಸದ್ಭಕ್ತಿಯಾಚಾರ ರಾಜಂಗೆ
ಎಲೆ ಬಸವ ಕಿನ್ನರಯ್ಯಂ ತಮ್ಮ ದೇವರಿಗೆ
ಸಲೆ ಸೊಗಸಿನುಳ್ಳಿಯಂ ತರೆ ಮಲ್ಲಿನಾಥಂಗೆ
ಕಂಡದಂ ನಿಂದಿಸಿದಿರೆಂದು ಕಡುಗೋಪದಿಂ
ಕೆಂಡವಂ ಮೆಟ್ಟಿದಂತಾಗೆ ಸಂತಾಪದಿಂ
ಮುಳಿದು ಪೋದರು ಕಿನ್ನರಯ್ಯಂಗಳಂತದಕೆ
ಕಳಿದು ಹೋಗದ ಮುನ್ನ ಹೋಗಿ ಬೇಳ್ಪುದನಿದಕೆ

ಗುಣವಂತನಭಿಮಾನಿ ಮುಳಿದು ಹೋದಂ ದೇವ
ತ್ರಿಣಯನವತಾರ ಶರಣಂ ಪೋದನೆಲೆ ದೇವ

ಎಂಬುದಂ ಕೇಳ್ದಂಜಿ ಬಸವಣ್ಣ ಮರವಟ್ಟು
ಹಂಬಲಿಸಿ ಹಲುಬಿ ಘನತಾಪ ಮನಮಂ ನಟ್ಟು
ನೊಂದು ಮನಗುಂದಿ ತನು ಕಂದಿ ಮಿಗೆ ಮಿಗೆ ಕೋಡಿ
ಬಂದ ಸುಕೃತಂ ತಿರುಗಿ ಹೋಯ್ತೆಂದು ನೆರೆ ಬಾಡಿ
ಇನ್ನೆಂತು ಮಾಡುವೆಂ ಕಿನ್ನರಯ್ಯಂ ಮುಳಿದ
ಇನ್ನದೆಂತಹುದೊ ಶಿವಭಕ್ತರೇ ಬಲ್ಲರಿದ
ಎಂದು ಗಣವೃಂದಕ್ಕೆ ಭಯದಿಂದೆ ಮೈಯಿಕ್ಕಿ
ಅಂದು ಬಸವಣ್ಣನುರ್ಬುಡುಗುತಂ ಮೈಯಿಕ್ಕಿ
ಅರಿದೆನರಿದೆಂ ದೇವನಿನ್ನೆನ್ನ ನಾಲಗೆಗೆ
ಮರೆದೆನುಂಟುಂಟೆನ್ನದಪರಾಧ ನಾಲಗೆಗೆ
ಬಂದುದೀಯುಳ್ಳಿಯಂ ನಿಂದಿಸಿದ ದಂಡಕ್ಕೆ
ಇಂದು ನಾನಪರಾಧಿಯೈ ಶರಣವೃಂದಕ್ಕೆ
ದೇವ ಒಂದಂ ಬೆಸಸಿರೇ ಇದಕ್ಕೆನುತಮಿರೆ
ದೇವ ಶರಣರ್ನುಡಿದರಾ ಬಸವ ನಲಿವುತಿರೆ
ಬಸವ ಕೇಳಿಂದಾದ ಸಮೆದ ಬೋನವನಿಂತೆ
ಎಸೆವ ಶರಣನ ಕೊಂಡು ಬಂದು ನಾವಿನ್ನಂತೆ
ಉಳ್ಳಿಯಿಂ ಕಿನ್ನರಯ್ಯಂಗಾದ ಮುಳಿಸುಮಂ
ಉಳ್ಳಿಯಿಂದವೆ ತೀರ್ಚಿ ಕಳೆವುದು ನಿರೋಧಮಂ

ಎನೆ ಬಸವರಾಜಂ ಹಸಾದವೆನುತಂ ನಿಂದು
ಘನಮಹಿಮನಾಕ್ಷಣಂ ತರಿಸುತಿರ್ದಂ ನಲಿದು
ಒಸೆದು ತರುತಿರ್ದರಾ ಲೇಸಪ್ಪ ಉಳ್ಳಿಯಂ
ಮಸಗಿ ತರುತಿರ್ದರಾ ಶಿವಭಕ್ತರೊಲುಮೆಯಂ
ತೀವಿ ಬಂಡಿಯೊಳು ನಾಲ್ದೆಸೆಗಳಿಂ ಬರುತಮಿರೆ
ಏವೇಳ್ವೆನಾ ಭಕ್ತರುತ್ಸವಮದೊಪ್ಪುತಿರೆ
ಕಹಳೆ ಮದ್ದಳೆ ಶಂಖನಾದ ಉಳ್ಳಿಯ ಮುಂದೆ
ಬಹುವಿಧದ ವಾದ್ಯಸಂತಾನ ಉಳ್ಳಿಯ ಮುಂದೆ
ಹಾಡುವರ್ಪರಸುವರ್ಕುಣಿವರುಳ್ಳಿಯ ಮುಂದೆ
ಆಡುವರ್ನೋಡುವರ್ನಲಿವರುಳ್ಳಿಯ ಮುಂದೆ
ಬಿತ್ತರಿಪ ವೃಷಭಧ್ವಜಂಗಳುಳ್ಳಿಯ ಮುಂದೆ

ಒತ್ತರಿಪ ಶರಣರ ಸಮೂಹ ಉಳ್ಳಿಯ ಮುಂದೆ
ಇಂತು ಬರಲುಳ್ಳಿಯಂ ಬಸವಣ್ಣನಿದಿರ್ಗೊಂಡು
ಸಂತಸದೊಳಂದು ವಿಸ್ತರಿಸಿದಂ ಕೈಕೊಂಡು
ಆನೆಗೆ ಗುಳಂ ಕುದುರೆವಕ್ಕರಿಕೆ ಉಳ್ಳಿಯಿಂ
ನಾನಾಭರಣವೆಸೆವಲಂಕರಣವುಳ್ಳಿಯಿಂ ೧೧೦
ತೊಡುವುಡುವ ಪೊದೆವ ಸುತ್ತುವುದೆಲ್ಲ ಉಳ್ಳಿಯಿಂ
ಪಿಡಿದಿಡುವ ಮುಡಿವ ಮಾಡುವವೆಲ್ಲವುಳ್ಳಿಯಿಂ

ಇಂತು ಪಟ್ಟಣವೆಲ್ಲ ಉಳ್ಳಿಗಳ ಮಯವಾಗೆ
ಸಂತತಂ ಮಾಡಿ ಬಸವಣ್ಣನುನ್ನತವಾಗೆ
ಅವರಿದಿರ್ಗಾವುದರೆ ದಾರಿಯೊಳಗಂದುಕ್ಕಿ
ತವಕದಿಂದೊಪ್ಪುವುಳ್ಳಿಯ ಚಪ್ಪರಮನಿಕ್ಕಿ
ಲಕ್ಕ ಲೆಕ್ಕಕ್ಕೆ ನೆರೆದಭವ ಭಕ್ತರ ನಡುವೆ
ಉಕ್ಕುಂದದುರವಣೆಯ ವೀರಶರಣರ ನಡುವೆ
ನೆರೆದು ನೆಗಹಿದ ಕೋಟಿ ವೃಷಭಧ್ವಜದ ನಡುವೆ
ಬರುತಿರ್ದನಾ ಬಸವ ಸಕಲ ಶರಣರ ನಡುವೆ ೧೨೦
ಉಳ್ಳಿಗಳ ಜಂಪಂ ಶಿರೋಮಾಲೆಗಳನಿಕ್ಕಿ
ಉಳ್ಳಿಗಳ ಬಾಹುಬಳೆ ಕಂಠಮಾಲೆಯನಿಕ್ಕಿ
ಉಳ್ಳಿಗಳ ಮುಡಿದು ಉಳ್ಳಿಗಳ ಕೈಯೊಳ್ಪಿಡಿದು
ಒಳ್ಳಿತೆನಿಸುವ ಮನದ ಬಸವರಾಜಂ ನಡೆದು
ಬರುತಮಿರೆ ಬೆಳ್ಗೊಡೆಗಳಲ್ಲಿ ದಿವಿ ಮುಸುಕಿದವು
ನೆರೆದು ಬಹುವಿಧವಾದ್ಯವಡಸಿ ನೆರೆ ಮೊಳಗಿದವು
ಧಿಮಿ ಧಿಮಿಕು ಧುಮುಕು ತತ್ತೊಂಗೆಂಬ ಮದ್ದಳೆಯ
ಚಮಕತ ಕನಕತಕ ನಕೆಂಬ ಕಹಳೆಯ ದನಿಯ
ನಟ ಟೆಹಕು ಟೆಹಕು ಫಣ ಫಣವೆಂಬ ಆವುಜೆಯ
ನಟವಿಕಟ ಕಟಕ ಕಿರ್ರೆಂಬ ಕರಡೆಯ ದನಿಯ ೧೩೦
ನಡುವೆ ಕೇಳಿಸುವ ಕೇಳಿಕೆಯ ವರ ಸಂಗಡದ
ಗಡಣವಿಡಿದೊಪ್ಪದಿಂ ಬರುತಿರ್ಪ ಜಂಗಮದ
ಕೋಳಾಹಳದ ಸರ್ವಸಂಭ್ರಮಂ ನೆಗಳುತಿರೆ
ಮೇಳೈಪ ಪೌರಜನರ್ತಿಯಿಂ ಬರುತಮಿರೆ
ಎಡಬಲದ ವೀರತತಿ ನೆಲನನುಗ್ಘಡಿಸುತಿರೆ
ಬಿಡದೆ ಪರಸಮಯಿಗಳು ನಡುನಡುಗಿ ಸರಿವುತಿರೆ
ಭಕ್ತಜನ ಚರಣಸರಸಿರುಹ ಷಟ್ಪದನೆಂಬ

ಭಕ್ತಜನ ಕುಮುದವನ ಕಮನೀಯ ಶಶಿಯೆಂಬ
ಜಂಗಮದ ವೇಳೆ ಜಂಗಮದ ಕಿಂಕರನೆಂಬ
ಜಂಗಮಪ್ರಾಣಿ ಜಂಗಮದ ಸಂಪದವೆಂಬ
ಬಿರುದೆತ್ತಿ ಕಹಳೆಗಳು ದೆಸೆದೆಸೆಗೆ ಕರೆವುತಿರೆ
ಧರೆ ನಡುಗೆ ನಿಸ್ಸಾಳ ನಾದವುಣ್ಮುತ್ತಮಿರೆ
ನಡೆದು ಬಂದುದು ರಜತಗಿರಿಯ ಹಾದಿಯ ತೆರದೆ
ನಡೆತಂದುದಿಂದುಮೌಳಿಯ ನಿಬ್ಬಣದ ತೆರದೆ

ಇಂತು ಬರುತಿರೆ ಕಂಡು ಕಿನ್ನರಯ್ಯಂ ನಿಂದು
ಚಿಂತಿಸಿದನೆಲ್ಲಿಯದಿದೇನೊ ಕೌತುಕವೆಂದು
ತನ್ನ ಮುಳಿಸಂ ತಿಳಿಪಲೆಂದು ಬಸವಂ ಬಪ್ಪ
ಉನ್ನತಿಯಿದೆಂದರಿದು ತನ್ನ ಮನದೊಳಗಿಪ್ಪ
ಮುನಿಸು ನೇಹದೊಳಿದಿರ್ಗೊಂಡುದಾ ಭಕ್ತಂಗೆ
ನೆನಹು ಬಸವನ ಮೇಲೆ ಬಿದ್ದುದಾ ಭಕ್ತಂಗೆ
ಚಿತ್ತಂ ಬಸವನತ್ತ ತಿರುಗಿತ್ತು ಭಕ್ತನಂ
ಒತ್ತರಿಪ ಪುಳಕಂಗಳೆತ್ತಿದವು ಶರಣನಂ
ಎದಿರೇಳ್ದು ಬರಿಸಿದವು ಕರಣಂಗಳಾತನಂ
ಸದಮಳ ಶಿವಧ್ಯಾನ ಪರಿಪೂರ್ಣ ಹೃದಯನಂ
ಇಂತು ಸಾತ್ವಿಕರಸದ ವಶವಾಗಿ ಬರುತಿರ್ಪ
ಕಂತುಮದಹರನ ಸುಖದವತಾರವೆನಿಸಿರ್ಪ
ಕಿನ್ನರಯ್ಯನನಕ್ಕರಿಂದೆ ನೋಡುತೆ ಬಂದು
ಎನ್ನ ಸಂಗಮನಿದ್ದನಿದ್ದನೆನುತೆಯ್ತಂದು
ಇಳಿಪಿದಂ ಸರ್ವಾಂಗಮಂ ಕಿನ್ನರನ ಪದಕೆ
ಗಳಗಳನೆ ಸುರಿದವಾನಂದಜಲ ಪದತಳಕೆ
ಎತ್ತಿದಂ ಕಿನ್ನರಯ್ಯಂ ಬಸವರಾಜನಂ
ಉತ್ತಮೋತ್ತಮಭಕ್ತಿಯಾಚಾರತೇಜನಂ
ತೆಗೆದು ತಕ್ಕೈಸುತಂ ತಣಿಯದೊಬ್ಬೊಬ್ಬರೊಳು
ಬಗಿಬಗಿದು ಪುಗಲೆಳಸುತಿರ್ದರೋರೊರ್ವರೊಳ್
ಆಲಿಕಲ್ಲಾಲಿಕಲ್ಲಂ ತಾಗಿದಂತಾಗೆ
ಹಾಲೊಳಗೆ ಹಾಲಂ ಕರಂ ಬೆರಸಿದಂತಾಗೆ
ಬೆಳಗು ಥಳಥಳಿಪ ಬೆಳಗಂ ಕೂಡಿದಾತಂಗೆ
ತಿಳಿದಮೃತವಮೃತಮಂ ಬಿಡದಪ್ಪಿದಂತಾಗೆ
ಅಪ್ಪಿಕೊಂಡಿರ್ದರೆನಿತುಂ ಬೇಗವಿಬ್ಬರುಂ

ಒಪ್ಪಂ ಬಡೆದರಭವನಡಿಯೊಳವರಿಬ್ಬರುಂ
ಆಗಳುಣ್ಮಿದವು ದುಂದುಭಿ ಶಂಖ ಕಹಳೆಗಳು
ಜಾಗು ಬೊಲ್ಲೆನುತೆ ನೆಗೆದವು ಭಕ್ತ ಪರಕೆಗಳು
ಭೋರೆಂದು ಕೊಂಡಾಡಿದರ್ ಬಸವರಾಜನಂ
ಹಾರೈಸಿ ಕೊಂಡಾಡಿದರ್ ಕಿನ್ನರಯ್ಯನಂ

ಒಡಗೊಂಡು ಬಸವರಾಜನ ಮಹಮನೆಗೆ ಬರುತೆ
ಗುಡಿಗಟ್ಟಿದುಳ್ಳಿಗಳ ಗುಡಿಯಂ ನಿರೀಕ್ಷಿಸುತೆ
ಹಾಡುವ ಗಣಂಗಳಂ ಹರುಷದಿಂ ನೋಡುತಂ
ಆಡುವ ಗಣಂಗಳನಗುರ್ವಿನಿಂ ನೋಡುತಂ
ಬಂದು ಬಸವಣ್ಣನರಮನೆಯನೊಲವಿಂ ಪೊಕ್ಕು
ಸಂದಣಿಪ ಕೋಟಿ ಗಣಸಂಚಯಕೆ ಕೈಮಿಕ್ಕು
ಇರೆ ಸಮೆದವಲ್ಲಿ ಉಳ್ಳಿಗಳ ಮೇಲೋಗರಂ
ಸರಸವೆನಿಪುಳ್ಳಿಗಳ ಪಕ್ವಾನ್ನದಾಗರಂ
ಮಲ್ಲಿಗೆಯ ಬಣ್ಣಮಂ ಚಂದ್ರಿಕೆಯ ರುಚಿಗಳಂ
ಅಲ್ಲಿಯಂಕುರಿಪ ತಾರಾಗಣದ ಸವಿಗಳಂ
ಕವರ್ದುಕೊಂಡಂತೆ ನೆರೆ ಥಳಥಳಿಸುವುಳ್ಳಿಯಂ
ಶಿವಭಕ್ತ ಕಿನ್ನರಯ್ಯನ ಸವಿಯ ಬಳ್ಳಿಯಂ
ಸಕಲ ಪಕ್ವಾನ್ನದೋಗರ ತತಿಗಳಂ ಸವೆಯೆ
ಸಕಲ ಶರಣರ ಶಿವಾರ್ಚನೆ ಸೌಖ್ಯಮಂ ಪಡೆಯೆ
ಆರೈಸಲಿಕ್ಕುತಂ ಸಕಳ ಶಿವಲಿಂಗಕ್ಕೆ
ಹಾರೈಸಿ ಪೊಡವಡುತೆ ಪರಮ ಪ್ರಕಾಶಕ್ಕೆ
ಕೈಕೊಂಡರಲ್ಲಲ್ಲಿ ಸತ್ಯಪ್ರಸಾದಮಂ
ಮೈ ಕೊನರೆ ತಾಳಿದರು ಸುಕೃತ ಪ್ರಸಾದಮಂ
ಉಳ್ಳಿಯಂ ಕಚ್ಚಿ ಪರಿದಾಡುತಿರ್ಪರ್ಕೆಲರು
ಉಳ್ಳಿಯಂ ಕಿನ್ನರನುಮಂ ಪರಸುವರ್ಪರ್ಕೆಲರು

ಇಂತು ನಲವಿಂ ಪ್ರಸಾದಂಗಳಂ ಕೈಕೊಂಡು
ಸಂತತಂ ಪರಸಿದರು ಬಸವನಂ ನೆಲೆಗೊಂಡು
ಅಮಮ ಶರಣರ ಬಂಧು ಶರಣರೊಲುಮೆಯ ಬಸವ
ಅಮಮ ಶರಣ್ಯೈಕ ಚಿಂತಾಮಣಿಯೆ ಎಲೆ ಬಸವ
ಅರರೆ ಶರಣರ ಮುಖದ ರತ್ನದರ್ಪಣ ಬಸವ
ಅರರೆ ಶರಣರ ಮನೆಯ ಪರುಷಪುರುಷನೆ ಬಸವ

ಬಸವ ಭಲಿ ಬಸವ ಸಂಗನಬಸವ ಬಸವಣ್ಣ
ಬಸವರಸ ದಂಡನಾಥಾಧಿಪನೆ ಬಸವಣ್ಣ

ಎಂದು ತುತಿಯಿಸುವ ಶರಣರ ಸ್ತುತಿಗೆ ನಡನಡುಗಿ
ಒಂದುವಂ ಪೊಗಳದಿರಿಯೆಂದು ಚರಣದೊಳೆರಗಿ
ನುಡಿದನಾ ಬಸವಣ್ಣನರರೆ ಶರಣರ ಮುಂತೆ
ಬಿಡದೆ ಮಾಡುವೆನಿಂದು ಮಾಡಿದ ತೆರದೊಳಿಂತೆ
ಅತಿಶಯದೊಳೊಪ್ಪುವುಳ್ಳಿಯ ಪರ್ವವಂ ಕರಂ
ಪ್ರತಿವತ್ಸರಂ ಮಾಡುತಿರ್ಪೆನಿಂತಿದು ಭರಂ
ನೇಮವೆನಗೆಂದು ನೆರೆ ಬಸವರಾಜಂ ನುಡಿಯೆ
ಸೋಮಧರನೆನಿಪ ಕಿನ್ನರನ ಕರುಣಂ ಬಡೆಯೆ ೨೧೦
ಕಿನ್ನರನ ಮುಳಿಸನಾ ಪರ್ಬದಿಂದಂ ತಿಳಿಪಿ
ಮನ್ನಿಸುತ್ತವರ ಪಾದದೊಳೆ ಚಿತ್ತಮನಿಳಿಪಿ
ಭಕ್ತಜನವನಜ ವಿಕಸಿತ ಸುಧಾಕರನೆನಿಸಿ
ಭಕ್ತಜನವನಜವಿಕಸಿತ ತರಣಿಯೆಂದೆನಿಸಿ
ಪರಸಮಯ ತಿಮಿರ ಕಮನೀಯ ಭಾಸ್ಕರನೆನಿಸಿ
ಪರಸಮಯ ಸುಮನಕೋದಂಡ ಪುರಹರನೆನಿಸಿ
ಮಝರೆ ಶರಣರ ನಡುವೆ ಬಸವಣ್ಣನೊಪ್ಪಿದಂ
ಮಝ ಭಾಪು ಭಾಪು ಸಂಗನ ಬಸವನೊಪ್ಪಿದಂ ೨೧೮-೧೧೧೦

## ಸ್ಥಲ ೧೨

ಬಸವನ ಪುಣ್ಯಕೀರ್ತಿಲತೆ ಬೇರ್ವರಿದತ್ತುರಗೇಂದ್ರಲೋಕದೊಳ್
ದೆಸೆಗಳನಗ್ಗಳಂ ಮುಸುಗಿ ಪರ್ವಿಗೆಯಾಯ್ತು ನರೇಂದ್ರಲೋಕದೊಳ್ ।
ಕುಸುಮಿತವಾಗಿ ಸೌರಭದಿ ಪೊಂಪುಳಿಯೋಯ್ತು ಸುರೇಂದ್ರಲೋಕದೊಳ್
ಪಸರಿಸಿ ಪೂರಿತಾಮಳ ಸುದಾಫಳಮಾದುದು ರುದ್ರಲೋಕದೊಳ್ ॥

ಇಂತು ಬಸವರಾಜಂ ಸಕಲ ಜಗದ್ಭರಿತವಾದಗಣ್ಯ ಪುಣ್ಯಮಯ ಕೀರ್ತಿಯಂ ತಳೆದು ಸಂಗಮೇಶ್ವರ ಶ್ರೀಪಾದಪಂಕಜ ನಿರಂತರ ಸೇವನಾಜನಿತ ಸುಖರಸಭರಿತ ಶುದ್ಧಶೈವಸರೋನಿಧಿ ತರಂಗಮಾಲಾ ನಿಮಗ್ನಚಿತ್ತಾಗಿರ್ದಂ.

ಇತ್ತಲು ಕಳಿಂಗದೇಶದ ಮಹಾಭಕ್ತನಪ್ಪ ಮಹದೇವಿಸೆಟ್ಟಿಯರೊಂದು ದೆವಸಂ ಲಿಂಗಾರ್ಚನಾತತ್ಪರಮನಂ ತಾತ್ಪರಿಯಭರಿತ ಸುಕಮಜ್ಜನ ಸಜ್ಜನಸ್ನೇಹಾಳಾಪ ಸಮ್ಮಿಳಿತ ಸತ್ಯಪೂಜಾಲಸಿತ ಸುಧೂಪನಿರಂಜನ ಚಂದ್ರಿಕಾ ಸಕಳನಿಕರ ವಿವಿಧಾಮೃತಾನ್ನ ನೈವೇದಿತ ಸತ್ಪ್ರಸಾದಸ್ವೀಕೃತ ಕೃತಕೃತ್ಯನಾಗಿ

ಸುಖದೊಳಿರ್ಪ ಸಮಯದೊಳೊಬ್ಬ ಮಾಹೇಶ್ವರಂ ಪುರಾತನ ವಿರಚಿತ ಗದ್ಯಪದ್ಯಂಗಳಂ ಕೇಳಿಸುತ್ತಂ, ಬಸವರಾಜನ ಗೀತದೊಳು ಬೇಡಿ ಬೇಡಿದ ಶರಣರ್ಗೆ ನೀಡದಿರ್ದಡೆ ತಲೆದಂಡ ಕೂಡಲಸಂಗ ಅವಧಾರೆಂಬ ಗೀತಮಂ ಪಾಡೆ ಕೇಳ್ದು, ಮಹದೇವಿಸೆಟ್ಟಿಯರ್ಕಂಪಿಸಿ ಕೌತುಕಂಗೊಂಡು ತಲೆಯಂ ತೂಗಿ ಓಹಿಲಯ್ಯಂ ಉದುಭಟಯ್ಯಂ ಮಲೆಯರಾಜದೇವರ್ವೊದಲಾದರೀ ತೆರದಿಂ ನುಡಿಯಲಮ್ಮರಿಂತು ನುಡಿವುದರಿದೀ ಗೀತದರ್ಥಮಂ ಪರೀಕ್ಷಿಪೆಂ ಪತ್ತೆತ್ತಿನೊಳ್ಮಾಣಿಕಂ ಪತ್ತೆತ್ತಿನೊಳ್ಮುತ್ತು ಮಿಕ್ಕ ಪತ್ತೆತ್ತಿನೊಳ್ ಹೊಸಹೊಂಗಳಂ ಬೇಡಿ ಬಸವನಂ ಮುಂದುಗೆಡಿಸುವೆನೆಂಬ ಮನದಿಂ ಸತ್ಯಶರಣಸಂಕುಳಂ ಬೆರಸಿ ಪೊರಮಟ್ಟು, ಕೆಲವೆಡೆಗೆಯ್ದು ಪಲವೂರ್ಗಳಂ ಕಳೆದು ನಡೆತಂದು ಮಂಗಳವಾಡದ ಪೊರವೊಳಲ ಶಿವಪುರದೊಳು ಬಿಟ್ಟಿಪ್ಪಲ್ಲಿ,

ಇತ್ತಲು ಸಂಗಮೇಶ್ವರಂ ಬಸವನ ಚಿತ್ತಮಂ ಪರೀಕ್ಷಿಪೆನೆಂದು ಕೆಂಜೆಡೆ ಕುಂಡಲಂ ಬೆಳಪ ಕಣ್ಣಿಂ ಕಪೋಳಂ ಸುಲಿಪಲ್ಲು ಸುಧಾವದನಂ ಪುಲಿದೊವಲ್ ಭಸಿತಾಂಗಂ ಸಮುದಾಯಮಾಗೆ ಗಳಗಳನೆ ನಡೆತಂದು, ಜಂಗಮಧ್ಯಾನ ನಿದ್ರಾಮುದ್ರೆಯೊಳಿರ್ದ ಬಸವನಂ ಪೊಡೆದೆಬ್ಬಿಸಿ ಏಳೇಳು ಬಸವಾ, ಮುಂದರಿಯದೆ ಗೀತಮಂ ಪಾಡಿ ತೊಡಕಂ ತಂದುಕೊಂಡೆ. ಕಳಿಂಗ ದೇಶದ ಮಹದೇವಿಸೆಟ್ಟಿಯರೆಂಬ ನಿಚ್ಚಳಭಕ್ತಂ ಕನಕ ಮುತ್ತು ರತ್ನರಾಸಿಗಳಂ ಮನವಾರೆ ಬೇಡಲೆಂದು ಬಂದಿರ್ದಪನೆಂತು ಮಾಡಿದಪೆ ? ಇನ್ನೆಂತು ಕೊಟ್ಟಪೆಯೆಂದು ಸಂಗಂ ಬೆಸಸಿದ ಮಾತಿಂಗೆ ಬಸವಂ ಮುಗುಳ್ನಗೆ ನಗುತಂಜದಿರ್ದೇವ, ಪರೀಕ್ಷೆಗೆ ತೆರಹಿಲ್ಲಂ, ಕಟ್ಟಿದೆನೊರೆಯು ಬಿಟ್ಟೆ ಜನ್ನಿಗೆಯರನೋಡದಿರೋಡದಿರು ಶರಣರ ಮನೆಯ ಬಿರಿದಿನಂಕಕ್ಕೆ ಹಿಮ್ಮೆಟ್ಟದಿರೆಲಲೆ ದೇವ ಎಲೆ ತಂದೆ ಎಲೆಲೆ ಹಂದೆ ಕೂಡಲಸಂಗ, ಸಯವಾಗು ಸಯವಾಗು ಎಂಬ ಪರಿಚ್ಛೇದದ ಗೀತದುರವಣೆಗೆ ಸಂಗಂ ನಿಲಲಮ್ಮದೆ ಮಗನ ನಿಷ್ಠೆಗೆ ಮೆಚ್ಚಿ ಅಂತರ್ಧಾನಕ್ಕೆ ಸಂದು ಕೈಲಾಸಕ್ಕೆ ಬಂದು ಬಸವಂ ಕೊಟ್ಟಲ್ಲದೆ ಮಾಣಂ, ಕೊಡುವ ಸಮಯಕ್ಕೆ ಅನುವಾಗಿರವೇಳ್ಕುಮೆಂದು ಮೇರುವಿನೊಳಚ್ಚೊತ್ತಿ ಬೆಟ್ಟಿದ ಹೊಚ್ಚ ಹೊಸ ಹೊಂಗಳಂ ಪದ್ಮರಾಗಂಗಳಂ ಮೌಕ್ತಿಕವ್ರಜವನನುಮಾಡಿಕೊಂಡು ಮಂಗಳವಾಡದ ಬಸವನ ಮಹಮನೆಯ ಮುಂದೆ ಹೋಗಿರೆಂದು ಕುಬೇರನಂ ಕಳುಪುತ್ತಿರಲಿತ್ತಲು,

ಬಸವರಾಜಂ ದಂಡನಾಥಪಂಚಾನನಂ ಶಿವನ ಶರಭಂ ನಿತ್ಯನೇಮಸಂಪನ್ನಂ ಪನ್ನಿಚ್ಛಾಸಿರ ಮಕುಟವರ್ಧನ ಮಾಹೇಶ್ವರರ ನಡುವೆ ನೀಚಾಸನನಾಗಿ ಭಯಭಕ್ತಿಯಿಂದಿಪ್ಪಲ್ಲಿ, ಶರಣಕುಲದ ಕರ್ಣಪರಂಪರೆಯಿಂ ಮಹದೇವಿಸೆಟ್ಟಿಯರೀ ಬಂದರೆಂಬ ಸಂಭ್ರಮಮಂ ಕಂಡಿದಿರೆದ್ದು ಪಾದದೊಳ್ಬಿದ್ದು ತೆಗೆದಪ್ಪಿ ಬಿಗಿದಪ್ಪಿ, ನಡೆತಂದು ಸಿಂಹಾಸನದೊಳಿರಿಸಿ, ಪಾದಪದ್ಮಪ್ರಕ್ಷಾಲನಂ ಗೆಯ್ದು, ಪಾದೋದಕಭರಿತ ಸರ್ವಾಂಗನಾಗಿ, ಸಕಲಗಣಂಗಳ್ವೆರಸು ಲಿಂಗಾರ್ಚನಂಗೆಯ್ದಾರೋಗಣೆಗೆಡೆಮಾಡಿ, ಸಪಙ್ತಿಯಲ್ಲಿ ಪ್ರಸಾದಮಂ ಕೈಕೊಂಬಲ್ಲಿ ಮಹದೇವಿಸೆಟ್ಟಿಯರಿದೇ ಸಮಯವೆಂದೆಲೆ ಬಸವಣ್ಣಾ, ಬೇಡಿದುದ ಶರಣರ್ಗಿಲ್ಲೆನ್ನದೀವೆನೆಂಬ ಗೀತದೊಳಗಣ ಬಿಂಕದ ಬಿರುದಂ ಕೇಳ್ದು ನಿಮ್ಮೊಳೊಂದಂ ಬೇಡಿ ಬಂದೆನೆನುತ್ತೆನುತ್ತೆ ಮತ್ತೆ ಬೇಡಲಮ್ಮದೆ ಗದುಗದಿಸಿ ಬೆಮರ್ತು ಮೂವತ್ತೆತ್ತಿನೊಳು ಜೋಳದಕ್ಕಿ ಕಡಲೆ ತೊಗರಿಗಳನೊಡತೀವಿ ಕೊಡುವುದೆಂದು ಶಿವಪ್ರೇರಣೆಯಿಂ ನುಡಿಯೆ ಕೇಳ್ದು ಬಸವರಾಜಂ ಲಿಂಗಸದರ್ತ್ಥಂ ಜಂಗಮಸುರತರು ಸಾರಹೃದಯಂ ಧಿರೋದಾತ್ತಂ ಸತ್ಯಸಂಗಂ ದಯಾನಿಧಿ ಶಿವಜ್ಞಾನಸಂಪನ್ನಂ ದರಹಸಿತವದನಸರಸಿರುಹನಾಗುತ್ತೆ ಭಯಂ ಬೇಡ. ಬೇಡಿ ಬೇಡಿ, ಕಳಿಂಗದೇಶದಿಂ

ಪೊರಮಡುವಾಗಳೇನಂ ಬೇಡಲೆಂದುದ್ಯೋಗಿಸಿದೆಯಾ ಮಾರ್ಗದೊಳೆ ಬೇಡುವುದು, ಕುಡುವವಂ ಸಂಗಂ ಬೇಡುವವಂ ಸಂಗಮದೇವನೆನಗೊಂದು ಭಾವವಿಲ್ಲಂಜಬೇಡಂಜಬೇಡ, ಬೇಡಿಮೆನೆ ಮಹದೇವಿಸೆಟ್ಟಿಯರ್ನಾಂಚಿ ತಲೆವಾಗಿರ್ದುದನರಿದು, ಬಸವರಾಜಂ ದಂಡನಾಥಚೂಡಾಮಣಿ ಭಕ್ತಜನಬಾಂಧವಂ ಸಂಗನಂ ಮೂದಲಿಸಿ ಶಿವಜ್ಞಾನದ ಮೇಲೆ ಚಿತ್ತವನಿಟ್ಟು, ಆಚಾರದ ಮೇಲೆಯಹಂಕಾರವನಿಟ್ಟು, ನಿಷ್ಠೆಯ ಮೇಲೆ ಬುದ್ಧಿಯನಿಟ್ಟು, ಕಠಾರಿಯ ಮೇಲೆ ಕೈಯನಿಡೆ [ಶಿವಂ] ಮುನ್ನಂ ಕರಿಕಾಲಚೋಳಂಗೆ ಕರೆದಂತೆ ಪೊನ್ನಮಳೆಯೊಂದಂ ಕರೆಯೆ ಪುನರುಕ್ತವೆಂದು, ಬಸವಂ ಕೈಕೊಳ್ಳನೆಂದು, ಬಸವನ ಮನೆಯ ಮುಂದೆ ಪೊನ್ನಮಳೆ ಮುತ್ತಿನ ಮಳೆ ಮಾಣಿಕದ ಮಳೆ ಮೊದಲಾದ ನವರತ್ನವೃಷ್ಟಿಯಂ ಕರೆದನೆಂಬಂತೆ ರೋಹಣಾಚಲದ ಮಾಣಿಕ್ಯಂಗಳಂ ತಾಮ್ರಪರ್ಣಿಯ ಮುತ್ತುಗಳಂ ನಂದಿಯುಂಡಿಗೆಯ ಮಿಸುನಿಯ ಪೊಂಗಳಂ ಪುರದೊಳ್ತೀವಿ ಶರಣರ್ಗೆ ನೆಮ್ಮುಗೆಯಾಸ್ಥಾನವಾದ ಬಸವನ ಮಹಮನೆಯ ಮುಂದೆ ಸುರಿದು, ರಾಸಿಯಾಗಿರೆ ಕಂಡು ಬಸವರಾಜಂ ಪುಳಕದ ಹಿಂಡನಿಂಡೆಗೊಳಿಸುತ್ತಂ ನಡೆತಂದೆತ್ತುಗಳ ಹೇರಂ ತೀವಿ ಸಂತೋಷದಿಂ ಮಹದೇವಿಸೆಟ್ಟಿಯರ ಮನಮಂ ತಣಿಪಿ ಕಳಿಂಗದೇಶಕ್ಕವರಂ ಬೀಳ್ಕೊಟ್ಟು, ಸಂಗನಬಸವಂ ಬಸವಿದೇವಂ ಸುಕೃತ ಸೂರೆಗಾರಂ ಸುಖದೊಳಿಪ್ಪವಸರದೊಳು,

ಸಂಗಮೇಶ್ವರಂ ಬಸವಿದೇವನೊಡತಣ ಲೀಲಾವಿನೋದ ಕಲಹಮಂ ಕೈಕೊಂಡು, ಮನಮಂ ಮತ್ತೆ ಪರೀಕ್ಷಿಪೆಂ ಮಹದೇವಿಸೆಟ್ಟಿಗೆ ಕನಕರತ್ನಂಗಳಂ ಕೊಡುವುದರಿದಲ್ಲಂ, ಕುಲವಧುವಂ ಕುಡಲ್ಬಾರದೆಂದು ವಿಚಿತ್ರಮಹಿಮಂ ಕೆಲಬರ್ಗಣೇಶ್ವರರಂ ಕರೆದು, ನೀವೆಲ್ಲರುಂ ಪೋಗಿ ಮರ್ತ್ಯಲೋಕದೊಳು ಮಂಗಳವಾಡದ ಪಣ್ಯಾಂಗನೆಯರೊರ್ಬರುಳಿಯದಂತೆ ಎಲ್ಲರ್ಗೆ ಬೇರೆ ಬೇರೊತ್ತೆಗಳನಿತ್ತಲ್ಲಲ್ಲಿ ನೆರೆದಿರ್ಪುದೆಂದು ಬೆಸಸಿ ಕಳುಪಿ, ತಾನೊಂದು ವಿಟವೇಷಮಂ ತಳೆದು ನಡೆತಪ್ಪಲ್ಲಿ,

ಕುಸುಮಕುಲದಿಂ ಪರಿಮಳಾಮೋದಕ್ಕೆಡೆಗೊಟ್ಟು ಮೊಕ್ಕಳವಾದ ಸಿರಿ ಮುಡಿಯೊಳು ನೀಲದರಮನೆಯ ಸುರನದಿಯ ಸುಕುಮಾರನೆನಿಪ ಬಾಲಶಶಿಯಂ ಕೇಳಿಸುವ ಗಾಯಕರಂತೆ ಸುತ್ತಿಮುತ್ತಿ ಝೇಂಕಾರಂಗೊಂಬ ತುಂಬಿಗಳ ಪಜ್ತಿಯಂ ಮುಸುಂಕಿಟ್ಟು ಪವಡಿಸುವ ಬಿಸುಗಣ್ಣ ತೊ[ಡಂಬೆ]ಯಂ ತಪ್ಪಡಿಸುವ ಪೆಣ್ದುಂಬಿಗಳಂತೆ ಲಲಾಟರಂಗದೊಳುಂಗುರಿಸಿ ಸಿಂಗರಿಸಿ ಸಂಗಡದಿಂ ಕುಣಿವ ನೀಲಾಳಕಂಗಳ, ಅದಲ್ಲದೆಯುಂ, ಪಡಿಯಂ ನೋಡಲ್ಬಯಸಿ ನಡುವೆ ಪರಿಮಳದ ನಾವೆಯಂತಡ್ಡಮಿರ್ದ ನಾಶಿಕಮಂ ದಾಂಟಲಾರದುಭಯಪಕ್ಕದಿಂ ಸುತ್ತಿಬರ್ಪ ಆಸೆಯೊಳು ಬಟ್ಟೆಗೊಡುವುದೆಂದು ಕರ್ಣಾವತಂಸದ ತಳಂಗಳ ಲಹಣಿ ಶ್ರೀಗೆ ಮುಕ್ತಾವಸಂತಕಿರಣಚ್ಚಲದಿಂ ಚಾಮರವಿಕ್ಕುವಂತೆ ಗಂಡಮಂಡಲದೊಳು ಮಾರ್ಪೊಳೆವ ಕರ್ಣಪಾಲಕೆಗಳ, ಅಲ್ಲದೆಯುಂ, ನಸುಸುಧಾ ಕಿರಣಮಂ ಪೋಲುವ ನೀಲಚ್ಚವಿಯಂ ಸೂಸುವಂತೆಸೆವ ತುಪ್ಪುಳು ಮೀಸೆಗಳ, ಮತ್ತಂ, ಬಿಂಬಫಳಮಕಾಲಪಕ್ವಮೆಂದು ಮಾಣಿಕದ ಬಣ್ಣದ ನವಮಧುರಮಂ ಕಠಿನಾಶ್ರಯಮೆಂದು ಮೂಡ ದ್ವೀಪಾಂತರದೊಳೆಸೆವ ಪ್ರವಾಳಮಂ ಜಡಾಶ್ರಮೆಂದೆಲ್ಲವನಧಃಕರಿಸಿ ಮುಕ್ತಿಯ ಬಿತ್ತನೋಯಾರಿಸಿದಂತಿರ್ದ ದಂತಪಜ್ತಿಗಳನೊಳಗು ಮಾಡಿಕೊಂಡು ಗರ್ಬದಿಂ ರಾಗಿಸುವಂತೆಳೆವೆಳುದಿಂಗಳೊಳು ಚಂದ್ರಮಂಡಲ ದೊಳೋಲ್ಯೆಯ್ಸಿ ಕೊಳುತಿರ್ಪ ದಂತಪಜ್ತಿಗಳನೊಳಗುಮಾಡಿಕೊಂಡು ಗರ್ಬದಿಂ ರಾಗಿಸುವಂತೆಳೆವೆಳು ದಿಂಗಳೊಳು ಚಂದ್ರಮಂಡಲದೊಳೋಲ್ಯೆಸಿಕೊಳುತಿರ್ಪ ಮಧುರಾಧರಪಲ್ಲವದ, ಅದಲ್ಲದೆಯು, ಸತ್ಯಾಮೃತ

ಸಾಮರ್ಥ್ಯಕೃಪಾರತ್ನಭರಿತಮಾದ ಪುಣ್ಯದ ಕರಂಡಗೆಯಂತಿರ್ದ ಬಾಯ್ದೆರೆಯಿಂ ಮೆರೆವ ಮುಖಮಂಡಲದ, ಅದಲ್ಲದೆಯುಂ, ಸುಕುಮಾರ ಸೌಂದರ್ಯವಿರಚಿತ ಸುಕುಮಾರತೆಗಳಿರ್ದೆಸೆಯ ನೊತ್ತುಗೊಂಡು ವೃತ್ತಮಾಗಿ ಗಳಗಳನಿಳಿದು ನಳನಳಿಸಿ ಬೆಳೆದಂತೆಸೆವ ನಳಿತೋಳ್ಗಳ, ಮತ್ತಂ, ಕಲ್ಪಕುಜದ ಶಾಖಾಂತರದಂತೆ ಮೆರೆವ ಧವಳದುಕೂಲದ, ಮತ್ತಂ ಎರಡರಿಯದೆರಗುವ ಲೋಕಪಾಲಕರ ಮಕುಟದ ಮಾಣಿಕದ ತಂಬೆಳಗನುಂಡು ಬೆಳೆದಂ[ತಲಕ್ತ]ಕದ ಹಂಗಿಲ್ಲದೆ ನಿಜರಾಗದಿ ರಂಜನೆವಡೆದ ನು[ಣ್ಬೆ]ಳಗನುಗುಳ್ವ ಪದತಳದ ಸೌಂದರಿಯದಿಂ ದೇಸೆವಡೆದ ಹದಿನಾರರ ಹರೆಯದ ಹರಂ ಕರುಣಿಸಿ ನಡೆತಂದು,

ಬಸವರಾಜನ ಮಹಮನೆಯ ಶಿವರಾತ್ರಿಯ ಸಂಭ್ರಮಕ್ಕೆ ಸಂತಸಂಬಡುತ್ತಂ ಬಂದು ನಿಂದಿರ್ದ ಶಿವನಂ ಷೋಡಶ ಹರೆಯದ ಕಮನೀಯ ಜಂಗಮವೆಂದರಿದು, ಬಸವಂ ಪುಳಕದೊಡನೆ ಭೋಂಕನೆದ್ದು ಕದವಂ ತೆಗೆದು ಪದತಳದೊಳ್ಬಿದ್ದು ಕೊಂಡೊಯ್ದು ಸುಖಿಜಂಗಮನೆಂಬುದಂ ಮನದೊಳರಿದು ಕಣ್ಣೆವೆಯೊಳಿಕ್ಕಿ, ಪಾದಮಂ ತೊಳೆದು, ಕಮ್ಮೆಣ್ಣೆಯಂ ಪೂಸಿ ಮಜ್ಜನಂ ಮಾಡಿಸಿ, ಅಮೃತ ಪ್ರಸಾದವುನಾರೋಗಣೆಗಿತ್ತು. ಚಂದನ ದ್ರವ್ಯ ಮೃಗಮದಮನುದ್ವರ್ತನಂಗೆಯ್ದು ಸುವರ್ಣಾಭರಣಂಗಳಿಂದಲಂಕರಿಸಿ, ಪಚ್ಚೆಗರ್ಪುರದ ವೀಳೆಯಮನಿತ್ತು, ಭಯಭಕ್ತಿಯಿಂ ಬೆಸಕೆಯ್ದು ನಿಯತನಾಗಿ, ಕಣ್ತೀವಿ ನೋಡಿ ನಾಲಗೆ ತೀವಿ ಹಾಡಿ ಕಮಲಕುಟ್ಮಳದೊಳು ಬಾಲಹಂಸನನಿರಿಸುವಂತೆ ಸೆಜ್ಜೆಯ ಮನೆಯೊಳು ಮೃದುತರವಪ್ಪ ತಳ್ಪದ ಮೇಲೆ ಬಿಜಯಂಗೆಯ್ಸಿ ಬಸವರಾಜಂ ಸನ್ನಿಧಿಯೊಳು ನೀಚಾಸನದಿಂ ಕುಳ್ಳಿರ್ದು ಪಾದಮಂ ಪಿಡಿದೊತ್ತುತ್ತಮಿರೆ,

ಎಲೆ ಬಸವರಾಜಾ, ಹೆಂಗೂಸಿಲ್ಲದೆ ಎಂದುಂ ಇದ್ದುದಿಲ್ಲವೆಂಬ ಮಾತಂ ಕೇಳ್ದು, ದೇವ ದೇವಾ, ನಿಮ್ಮ ಚಿತ್ತಮವರಿಯದಂಜಿರ್ದೆನಿದೊಂಧರಿದಲ್ಲೆಂದು ಪರಿಚಾರರಂ ಪುರದೊಳಯಿಂಕೆ ಪಣ್ಯಾಂಗನೆಯರನೊಡಗೊಂಡು ಬಪ್ಪುದೆಂದು ಕಳುಪಲವರು ವಿಚಾರಂಗೆಯ್ದು ಬಂದು ದೇವಾ, ಪಟ್ಟಣದ ಪಣ್ಯಾಂಗನೆಯರೆಲ್ಲಂ ಅವರಿವರೆನ್ನದೆ ದಂಪತಿಗಳಾಗಿ ಎಲ್ಲಿಯುಂ ತೆರಹಿಲ್ಲವೆಂದು ಬಿನ್ನೈಸೆ ಕೌತುಕಂ ಬಟ್ಟರಿದೆನರಿದೆಂ ತನ್ನ ಮಾಯವೆನ್ನಂ ಕೊಳುವುದೆ ? ಅದಕ್ಕೇನರಿಯಲಕ್ಕುಮೆನುತ್ತೆ ಸಿರಿ ಸರಸ್ವತಿ ಶಚಿಗಳಂ ಕೀಳ್ಮಾಡುವ ತನ್ನರಸಿ ಮಾಯಿದೇವಿಯರಂ ತಂದು ಕೂಡುವೆಂ, ಬಳಿಕ ನೋಡಿಕೊಂಬೆಂ, ಮಾಯಿದೇವಿಯುರನೊಲ್ಲೆನೆಂದರಾದಡೆ ಮೇಲೆ ಮಾಳ್ಪ ಕಜ್ಜಮುಂ ಕಾಣವೇಳ್ಪುದೊಲ್ಲೆವೆಂದ ವಸ್ತುವಂ ಸಂಗಂಗೆ ಕುಡಲಾಗಂದೆಂತು ಮಾಳ್ಪೆನೆನುತೆ ಮುನ್ನ ತನ್ನರ್ತಿಗೆ ಹೇರೂರ ಹೆಣ್ಣಿಂ  ಗಂಡುರೂಪಂ ಮಾಡಿದೊಪಾದಿ ಇಂದೆನ್ನಂ ಹೆಣ್ಣು ಮಾಡದೆಂತು ಪೋದಪಂ ಲಿಂಗಪತಿ ಶರಣ ಸತಿಯೆಂಬೀ ಮಾತಂ ದಿಟಮಾಡಿ ತೋರ್ಪೆನೆನುತ್ತಿರಲತ್ತಲು,

ಮಾಯಿದೇವಿಯರು ಊರೊಳಗೆ ಪೆಣ್ಣಿಲ್ಲದಿರ್ದಡೆ ಜಂಗಮಕ್ಕೆ ಬಸವನೆನ್ನಂ ಕೊಟ್ಟಲ್ಲದೆ ಮಾಣವೆಂದು ಸಿಂಗರಿಸಿಕೊಂಡು ಬಸವನ ಬರವಂ ಪಾರ್ದಿರ್ಪ ಸಮಯದೊಳು, ಬಸವಂ ಬರಲಿದಿರ್ವಂದು ನಡೆ ಬಸವ, ನಿನ್ನ ಮನೋರಥವಂ ಮಾಡಿಪದಪೆನೆಂಬ ಸತಿಯಂ ನೋಡಿ ಸಂತಸದಿಂ ಶಿವನ ಸುಖನನೊಡಗೊಂಡು ಬಪ್ಪಂತೆ ತಂದು ಸೆಜ್ಜೆಯ ಮನೆಯಂ ಪುಗಿಸಿ ಮುಚ್ಚುಳನಿಕ್ಕಿಕೊಂಡು ಬಸವಂ ಪೊರವಾಗಿಲೊಳಿರೆ, ಮಾಯಿದೇವಿಯರು ದೇವನ ತೊಡೆಯಂ ಪೊಯ್ದೆಬ್ಬಿಸೆ ದೇವನ ಪುಸಿಮುಸುಕನೊಯ್ಯನೋಸರಿಸೆ ಮಾಯದ ಜವನಿಕೆ ತೆಗೆದಂತೆ ದೇವನ ಚೋಹವಳಿದು ದಶಭುಜಂ ಪಂಚವಕ್ತ್ರಂ ತ್ರಿಣೇತ್ರನಾಗಿರೆ, ಮಾಯಿದೇವಿಯರು ನೋಡಲಮ್ಮದೆ

ನಡನಡಂ ನಡುಗಿ, ಬಸವ ಬಸವಾ ಜಂಗಮದೇವರು ಸಂಗಮದೇವರಾದರೆನೆ, ತಾಯೆ ತಾಯೆ ಮುನ್ನವಾರೆಂದು ಕೊಟ್ಟೆನೆಂದು ಬಸವಂ ನುಡಿವಲ್ಲಿಂ ಮುನ್ನವೆ, ಸಂಗಮೇಶ್ವರಂ ಬಸವನ ಚಿತ್ತಮಂ ಪರೀಕ್ಷಿಸಲಾರದೆ ಸೋಲ್ತು ಬೇಗದಿಂದಂತರ್ಧಾನಕ್ಕೆ ಸಂದುದಂ ಮಾಯಿದೇವಿಯರ್ಕಂಡು ಕದವಂ ತೆರೆದು ಬಸವರಾಜಂಗೆ ಪೇಳೆ, ಕೇಳ್ದು ಅನುತಾಪದೊಳೊಂದಿ ದೇವಮಂ ಮೂದಲಿಸಿ, ಎಲೆ ಎಲೆ ಕಾಡಿ ಕಾಡಲಮ್ಮದ ತಂದೆ, ನೀಂ ಕೇಳು, ಬೇಡಿ ಬೇಡಲಮ್ಮದ ಹಂದೆ ನೀಂ ಕೇಳು, ಕೂಡಿ ಕೂಡಲಮ್ಮದ ಜಾತಿಯೆ ನೀಂ ಕೇಳು ಎಂದು ಗೀತಮಂ ಪಾಡಿ ನಿರೋಧದೊಳಿರಲಿತ್ತಲು ಪೂರ್ವದಿಶಾಮುಖದೊಳರುಣೋದಯವಾಗುತ್ತಮಿರೆಯಿರೆ,

## ಸ್ಥಲ ೧೩

ತವೆ ಬೆಳಗುತ್ತ ಶರ್ವ ಕರುಣೋದಯದಂತರುಣೋದಯಂ ಕರಂ
ಕವಿದಡೆ ನಿತ್ಯ ನೇಮರಚಿತಂ ಶರಣವ್ರಜಪಾದಪಂಕಜ ।
ಕ್ಕವನತನಾಗಿಯಂದು ಮೊದಲಾಗಿ ಗುಣಾನ್ವಿತೆ ಮಾಯಿದೇವಿಯಂ
ಶಿವನ ಲತಾಂಗಿಯೆಂದು ಬಸವಂ ಪದೆದರ್ಚಿಸುತಿರ್ದನುರ್ವಿಯೊಳ್ ॥

ಇಂತರ್ಚಿಸುತ್ತಮಿರೆ ನಡೆತಂದನಲ್ಲಮಂ
ಕಂತು ಹರನವತಾರವರಿವುತ್ತವೆಲ್ಲಮಂ
ಬಂದು ಬಸವಂಗೆ ಶಿವಲಿಂಗದನುವಂ ತೋರಿ
ನಿಂದಿರದೆ ಹೋದನಾ ಕದಳಿಗೆ ಮನಂ ಮೀರಿ
ಪೋಗೆ ಬಸವಂ ಸದಾ ಸನ್ನಿಹಿತನಾಗುತಿರೆ
ರಾಗದಿಂದಲ್ಲಮಯ್ಯಂಗೆ ಬೆರಗಾಗುತಿರೆ
ಅನುವನಲ್ಲಮದೇವನರುಪಿದಂ ತಾನೆಂದು
ಮನವಾರೆ ಗೀತಮಂ ಪಾಡುತ್ತಲಿರಲಂದು
ಅರಸಿ ಗಂಗಾದೇವಿ ನಿಳಯದೊಳು ಸುಳಿವುತಿರೆ
ವರ ನೀಲಮುತ್ತಿನೋಲೆಗಳಲ್ಲಿ ಹೊಳೆವುತಿರೆ
ಲೆಂಕರಸನೆಂಬ ಭಕ್ತಂ ನೋಡಿ ಸೈರಿಸದೆ
ಭೋಂಕನೋಲೆಯನಲ್ಲಿ ತೆಗೆವುತಿರೆ ಸೈರಿಸದೆ
ತೆಗೆವ ಸಂಭ್ರಮದೊಳಗೆ ಹಾಲೆ ಸೊಪ್ಪಾಗುತಿರೆ
ಬಗೆವೆಚ್ಚಿ ಭಕ್ತರೆಲ್ಲೇನಿದೇನೆನುತಮಿರೆ
ಬಸವನರಿದೆಲೆಲೆ ಸಂಗನ ಕರಂ ನೊಂದುದೇ
ಬೆಸಸುವಲ್ಲಿಂ ಮುನ್ನವೇ ಕೊಡದೆ ನಿಲುವುದೇ
ಎನೆ ಭಕ್ತರೆಲ್ಲವನ್ಯಾಯವನ್ಯಾಯವೆನೆ
ಘನಮಹಿಮ ನುಡಿದನಲ್ಲಿಂ ಬಸವನಪ್ಪುದೆನೆ

ಕೊಡದಿಪ್ಪುದನ್ಯಾಯ ಕೊಳುವುದೆಂತುಂ ನ್ಯಾಯ
ಒಡೆಯರೊಡವೆಯನೆಳಸೆ ಕೊಡದಿಪ್ಪುದನ್ಯಾಯ
ಕನ್ನವಿಕ್ಕುವಡೆ ಕತ್ತಿಗೆವಿಡಿದು ನಿಂದಪೆಂ
ಮುನ್ನೆಯ್ದೆ ಬಂದಿವಿಡಿವಲ್ಲಿ ಒಳಪೊಕ್ಕಪೆಂ
ಎನ್ನವರ್ಗೆ ಕೊಟ್ಟ ಕಾಯಂ ಕೊಟ್ಟ ಹರಣವಿದು
ಮನ್ನಿಸುತ್ತೀಯದಡೆ ತಾನೆಲ್ಲ ವಾಯವಿದು

ಎಂದು ಬಸವಂ ಭಕ್ತಿಯಂ ನುಡಿವುತಿರಲಂದು
ಬಂದು ಸಂಗಂ ಜಂಗಮಾಕಾರದಿಂ ನಿಂದು
ನಡೆ ಬಸವ ಕೈಲಾಸಗಿರಿಗೆ ಪುಷ್ಪಕದೊಳಗೆ
ಪೊಡವಿಯೊಳಗಿರವು ಸಾಲ್ವುದು ಬಾ ಮಗನೆ ನಿನಗೆ
ಎನೆ ಕೇಳ್ದು ನಸುನಗುತೆ ನುಡಿದನಾ ಸಂಗಂಗೆ
ಮನಸಿಜಹರಂಗೆ ಗಿರಿಶಂಗೆ ಗಿರಿಜೇಶಂಗೆ
ಸಂಗಯ್ಯ ಬಾಯೆಂದು ಕರೆವೆ ನೀನೆನ್ನುವಂ
ಹಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ
ಶರಣರೊಕ್ಕುದರ ಸವಿ ಕೈಲಾಸಗೊಳಗುಂಟೆ
ಶರಣಸಂಗದ ಸುಖಂ ಕೈಲಾಸದೊಳಗುಂಟೆ
ಇಲ್ಲಿಯ ಸುಖಂ ದೇವ ಅಲ್ಲಿಯುಳ್ಳಡೆ ಲೇಸು
ಅಲ್ಲೆನ್ನೆನಿಲ್ಲಿಯೇ ನಿಂದು ಹೋಹುದು ಲೇಸು
ಎಂದು ಬಿನ್ನೈಸೆ ಬಸವಂ ಬಾರದುದನರಿದು
ಇಂದುಧರ ಸರಿದನಾ ನಿಜನಿವಾಸಕೆ ನಲಿದು
ಇತ್ತಲಾ ಬಸವನಾನಂದಿದಿಂ ಪಾಡುತಂ
ಉತ್ತಮೋತ್ತಮ ಶರಣರೊಳು ಕೂಡಿಯಾಡುತಂ
ಬಿಬ್ಬ ಬಾಚಯ್ಯಂಗಳೊಲಿದು ಬರೆ ಕಾಣುತಂ
ಅಬ್ಬರಿಸಿ ಬೊಬ್ಬಿಟ್ಟು ಪರ್ಬಿ ಪುಟವೇಳುತಂ
ಅವರ ಪ್ರಸಾದನಿಷ್ಠೆಗೆ ಮೆಚ್ಚಿ ಮಚ್ಚುತಂ
ಅವರನಾರಾಧಿಸುತ್ತಾದರಿಸಿ ಕಳುಪುತಂ
ಕಕ್ಕಯ್ಯನೆಸೆವ ಭಕ್ತಿಯನೊರೆದು ನೋಡುತಂ
ತಕ್ಕುದಂ ಮಾಡದಿರ್ದಡೆ ಕೋಡಿ ಬಾಡುತಂ
ಮೋಳಿಗೆಯ ಮಾರಿತಂದೆಯ ಮನಂ ನೋಡುತಂ
ತಾಳಲರಿಯದ ಮಹಿಮೆಗೊಲಿದು ತಲೆದೂಗುತಂ
ಮಡಿವಾಳ ಮಾಚಯ್ಯನುರವಣೆಯನಾನುತಂ
ಜಡಿದು ನುಡಿದೊರೆಯೆ ಮೈವೆಚ್ಚಿ ಮುಯ್ಯಾನುತಂ

ಕಾಲಲೊದೆವರ್ಬಡಿವರೊಡೆಯರಾಗಿರ್ದವರು
ಬಾಲನಂ ತಿದ್ದುವರು ತಂದೆಯಾಗಿರ್ದವರು
ಶಿವಭಕ್ತಿಯೆಯ್ದದೆಂದೆನ್ನನುದ್ಧರಿಸುವರು
ಶಿವಭಕ್ತರೆನ್ನೊಡೆಯರೊಲಿದಂತೆ ಮಾಡುವರು
ಎಂದು ಗೀತಂಗಳಂ ಪೊರೆಯೇರಿ ಪಾಡುತಂ
ಸಂದಣಿಪ ಶರಣಕಾರುಣ್ಯಂ ನೋಡುತಂ*
ಇಂತು ಬಸವಂ ಮರ್ತ್ಯದೊಳಗೆ ಮಹಿಮೆಯ ಬೀರಿ
ಸಂತತಂ ಕೆಲಕಾಲ ಶಿವಸುಖದೊಳೋಲಾಡಿ
ಶಿವದ್ರೋಹವಂ ಗೈದ ಬಿಜ್ಜಳನ ಕೊಲಿಸುತಂ
ಭವಹರನ ಶರಣಸದ್ಗೋಷ್ಠಿಯಂ ಸಲಿಸುತಂ
ಕಪ್ಪಡಿಯ ಸಂಗಮೇಶ್ವರಲ್ಲಿಗೈತಂದು
ನಿಷ್ಠೆಮಿಗೆ ತುತಿಗೈದು ಪೊಡಮಟ್ಟು ಕೈಮುಗಿದು
ದೇವ ಎನ್ನಂ ಬಿಡದೆ ಪೊರೆದ ಕೂಡಲಸಂಗ
ದೇವ ಎನ್ನೊಡೆಯ ಮತ್ತಾತ ಕೂಡಸಲಂಗ
ಷಟ್ತ್ರಿಂಶ ತತ್ವಕ್ಕತೀತ ಕೂಡಲಸಂಗ
ನಿತ್ಯ ನಿರ್ಮಳ ನಿಷ್ಕಳಂಕ ಕೂಡಲಸಂಗ
ದೇವ ಭವದೀಯಾಜ್ಞೆಯಂ ಕೊಂಡು ಶಂಕರಾ
ದೇವ ಮರ್ತ್ಯದ ಲೀಲೆ ಪೂರೈಸೆ ಶಶಿಧರಾ
ಸಾಕು ಮಾಡೈ ತಂದೆ ಲೋಕದಾಟವನಿನ್ನು
ಸಾಕಾರವಲ್ಲದ ನಿರಾಕಾರವೆಡೆಗೊಂ[ಡಿನ್ನು]
ತೆರಪುಗೊಡು ತಂದೆ ಬಂದಿಹೆನು ಬಸವನು ನೊಂದೆ
ತೆರಪುಗೊಡು ಕರುಣಾಬ್ಧಿ ತೆರಪುಗೊಡು ಭಕ್ತಾರ್ತಿ
ತೆರಪುಗೊಡು ತಂದೆ ಕೂಡಲಸಂಗ ಭಕ್ತಾಂಗ
ಎನಲು ಸಂಗಮದೇವ ಬಸವನ ನಿರೀಕ್ಷಿಸುತ
ತೆರಹ ತನ್ನೊಳು ಕೊಟ್ಟು ಬಸವನಂ ಸೈತಿಟ್ಟು
ನೋಡುತಿರೆ ಭಕ್ತರೆಲ್ಲರ ಮುಂದೆ ಬಸವಣ್ಣ
ಗಾಢದಿಂ ಶಿವನೊಳಗೆ ಬೆರೆದು ತಾ ಬಯಲಾದ
ಆದಿ ಮೂರುತಿ ಧರ್ಮರೂಪ ವೃಷಭನನಂದು
ಮೇದಿನಿಯೊಳ್ಮೆರೆಸಿ ಬಳಿಕಾತನಂ ಒಳಕೊಂಡು
ಕೈಲಾಸದೊಳಗೆ ಶ್ರೀಶೈಲಜೆಗೆ ಪೇಳುತಂ

* ಇಲ್ಲಿಂದ ಮುಂದಿನಭಾಗ ಒಂದು ಒರತಿಯಲ್ಲಿ ಮಾತ್ರ ಸಿಗುತ್ತದೆ.

ಉಲ್ಲಾಸದಿಂ ಶರಣಜನಕೆ ತಾಂ ಪೇಳುತಂ
ವೃಷಭಮುಖನಾಗಿರ್ದು ಮೊದಲ ಅಭಯದ ತೆರದಿಂ
ಬಸವನಂ ವೃಷಭಮುಖನಾಗಿ ಸೈತಿರಿಸುತಂ
ಹೆಂಪಿನಿಂ ಹೆಚ್ಚಿನಿಂ ಅಮೃತಮಯನೊಪ್ಪಿದಂ
ಸಂತತಂ ಹಂಪೆಯ ವಿರೂಪಾಕ್ಷನೊಪ್ಪಿದಂ ೮೫–೧೧೯೫

ಧರೆಯೊಳಗರಿದೆಂದೆನೆ
ಪುರಹರ ಸದ್ಭಕ್ತಿಯಂ ಮೆರೆಯಿಸಿ ಸಂದ ।
ತ್ಯುರು ವೃಷಭಾಂಕನ ಮೋಹದ
ತರಳಂ ಹರಿಪಂಗೆ ಭಕ್ತಿಯನಿರದೀಗೆ ಹಂಪೆಯ ವಿರೂಪಾಕ್ಷಂ ॥

❖❖

# ೧೧. ಕೋವೂರ ಬೊಮ್ಮಿತಂದೆಯ ರಗಳೆ

## ಸ್ಥಲ ೧

ದೇವರ ದೇವಂ ದೇವರ
ಜೀವಂ ದೇವರ ಪಿತಾಮಹಂ ದೇವೇಶಂ ।
ಕೋವೂರ ಬೊಮ್ಮಿತಂದೆಯ
ನೀ ವಸುಧೆಗೆ ಮೆರೆದನೆಮ್ಮ ಹಂಪೆಯ ದೇವಂ ॥

ಹೆಸರ ಕಲ್ಯಾಣದುತ್ತರದಿಶಾಭಾಗದೊಳು
ಎಸೆವ ಪೊಳಲುಂಟು ಕೋವೂರೆಂಬ ನಾಮದೊಳು
ಆ ಪುರದೊಳೊಪ್ಪುವಂ ಚಾಳುಕ್ಯಕುಲಯುತಂ
ಭೂಪರಂ ಲೆಕ್ಕಿಸದ ಸಾಮರ್ಥ್ಯ ಸಂಯುತಂ
ಕೋವೂರ ಬೊಮ್ಮಯ್ಯನೆಂಬೊಂದು ನಾಮದಿಂ
ಭಾವಿಸುತ್ತಿರ್ಪನೀಶನನತಿ ಪ್ರೇಮದಿಂ
ಚಾಳುಕ್ಯ ಕುಲದೊಳಗೆ ತಾನೋರ್ವನೇ ಭಕ್ತ
ರಾಳೆನಿಪ್ಪಂ ಚಂದ್ರಶೇಖರನ ಪದಯುಕ್ತ
ಆವೂರ ಪಡುವಣರೆಗಾವುದಳೊಪ್ಪುವಂ
ದೇವನಪ್ರತಿಮನಘಹರನಭವನೊಪ್ಪುವಂ
ಅಂಬುಧಾರಾರಾಮನಾಥನೆಂಬುದು ನಾಮ
ಇಂಬಿನಿಂ ಕೋವೂರ ಬೊಮ್ಮಯ್ಯನ ಪ್ರೇಮ
ವಾಗಿರಲು ಕೋವೂರೊಳೆಲ್ಲ ಸವಣರ ಹುತ್ತು
ರಾಗಹೀನರು ಕುತರ್ಕಿಗಳು ಜೈನರ ಗೊತ್ತು
ಎಂಟು ಸಾವಿರ ಬಸದಿಯೆಂಟು ಸಾವಿರ ರಿಸಿಯ
ರೆಂಟುಮಡಿ ಚಾರ್ವಾಕತನದ ಕುಹಕದ ಪಿರಿಯ
ರಲ್ಲಿ ಪ್ರಧಾನ ಮಂತ್ರಿಗಳೆಲ್ಲ ಜೈನರೇ
ಅಲ್ಲಿ ಮಾವಂತರುಂ ವಾಹಕರು ಜೈನರೇ

ಅಲ್ಲಿ ಅತಿರಥ ಮಹಾರಥರೆಲ್ಲ ಸವಣರೇ
ಅಲ್ಲಿ ನಾಯಕ ಮಂತ್ರಿವರ್ಗವುಂ ಸವಣರೇ
ಸರ್ವಮಂತ್ರಕ್ಕೆ ತಂತ್ರಕ್ಕೆಲ್ಲ ಸವಣರೇ
ಸರ್ವ ಕಾರ್ಯಕ್ಕೆ ಕಾರಣರೆಲ್ಲ ಸವಣರೇ
ಕರಿ ಸಹಸ್ರದ ಸಂಖ್ಯೆ ಲಕ್ಷ ಸಂಖ್ಯೆಯ ಹಯಂ
ನೆರೆದಾ ಪದಾತಿ ಮಿಗೆ ಕೋಟಿ ಸಂಖ್ಯೆಯ ಮಯಂ
ಸವಣರೆಲ್ಲಂ ತನ್ನ ಕುಲಗೋತ್ರ ಬಂಧುಗಳು
ಸವಣರೆಲ್ಲಂ ತನ್ನ ಸಂಪದದ ಮಂದಿಗಳು
ತನಗಾಪ್ತರಲ್ಲಿ ಮುನ್ನೂರ್ವರಭವನ ಭಕ್ತ
ರನುಪಮ ತುರಂಗವಾಹಕರಭವಗುಣಯುಕ್ತ
ರಿಂತಿರ್ದು ಪುರದೊಳಗೆ ಸವಣರೊಡನೊಪ್ಪುತಂ
ಭ್ರಾಂತಳಿದು ಶಿವನೇಕನಿಷ್ಠೆಯುಮನಪ್ಪುತಂ
ಅಲ್ಲಿ ಕತ್ತಲೆಯ ನಡುವಳ ಜ್ಯೋತಿಯಿರ್ಪಂತೆ
ಅಲ್ಲಿ ವೃಕ್ಷದ ನಡುವೆ ಬಾವನ್ನವಿರ್ಪಂತೆ
ತರುಕುಲದ ನಡುವೆ ದಾವಾಗ್ನಿ ಮುಸುಕಿರ್ಪಂತೆ
ಪರುಷವಾ ಕಬ್ಬುನದ ನಡುವೆ ನೆಲಸಿರ್ಪಂತೆ
ತನ್ನ ಮನೆ ತನಗೆ ಶಿವಪುರವದಾಗುತ್ತಮಿರೆ
ಪನ್ನಿರ್ವರರಸಿಯರು ತನ್ನ ವಶವಾಗುತಿರೆ
ಅವರೊಳತಿ ಮೆರೆವಳ್ ಕಳಾವತಿಯೆನಿಪ್ಪ ಸತಿ
ಭುವನದೊಳು ಸಮವಿಲ್ಲ ಶಿವಭಕ್ತಿಭರಿತಮತಿ
ಆಕೆಗುದಯಿಸಿದನೊರ್ವಂ ಪುತ್ರನೊಲುಮೆಯಿಂ
ಲೋಕೈಕ ಬಾಂಧವನ ಶಿವನ ಪರಮಾಜ್ಞೆಯಿಂ
ಆತನ ಪೆಸರ್ ಮಲ್ಲಿದೇವನೆಂದಿಡುತಲ್ಲಿ
ನೂತನಸುಖಗಂಳಿಂ ಸಂತಸದೊಳಿರಲಲ್ಲಿ

ಒಂದೆರಡು ಮೂರು ನಾಲ್ಕಯಿದಾರು ವತ್ಸರಂ
ಸಂದಿರಲು ಕ್ರಮದೆ ಪದಿನಾರು ಸಂವತ್ಸರಂ
ಬೆಳೆಯೆ ಬೆಳೆದುದು ಬಕುತಿ ಮಲ್ಲಿದೇವಂಗೊಡನೆ
ಅಳವಟ್ಟುದಲ್ಲಿ ರಸವಾದ್ಯ ಕೇಳಿಕೆಯೊಡನೆ
ಇಂತೊಪ್ಪಿ ಬೆಳೆವ ಮಗನಂ ನೋಡಿ ರಾಗಿಸುತೆ
ಸಂತತಂ ಶಿವನ ಸದ್ಭಕ್ತಿಯಂ ಸಾಗಿಸುತೆ
ಇಪ್ಪಲ್ಲಿ ಶಿವನ ಭಕ್ತರ್ಬಂದಡುಬ್ಬುತಂ
ಸರ್ಪಭೂಷಣನು ಬಂದಂತೆ ಮಿಗೆ ಕೊಬ್ಬುತಂ

ಆದರದೊಳಿದಿರ್ವಂದು ಮಿಗೆ ಸಂತಸಂಬಡುತೆ
ಪಾದತಳದೊಳು ಪೊಂಗಳಂ ಸರಿದು ಪೊಡವಡುತೆ
ಅವರರ್ತಿ ಬೆಳೆವಂದದಿಂ ಸುಖದೊಳಿರಿಸುತಂ
ಅವರನಾರಾಧಿಸಿ ವಿಳಾಸದಿಂ ಕಳುಪುತಂ

ಇಂತು ಸುಖದಿಂದಿರ್ದು ಗಣಪರ್ವವಂ ನೆನೆದು
ಕಂತುಮದಹರನ ಶರಣರ್ಗೆ ಸುಖಮಂ ನೆನೆದು
ಅಂಬುಧಾರಾ ರಾಮನಾಥನೆಸೆದಿಪ್ಪಲ್ಲಿ
ಇಂಬಿನಿಂ ನಡೆದುದಾ ಸಮಕಟ್ಟು ಮೆರೆದಲ್ಲಿ
ಅಕ್ಕಿಗಳ ರಾಸಿ ಮೇಲೋಗರದ ಪರ್ವತಂ
ಮಿಕ್ಕ ವಸ್ತುಗಳೆಣಿಸಲಳವಲ್ಲದುನ್ನತಂ
ತಾವಾಗಿ ಕಳುಪುತಂ ಸತಿಯರ ಮೊಗಂ ನೋಡಿ
ಭಾವಿಸುತ್ತಂ ಮಲ್ಲಿದೇವನ ಮೊಗಂ ನೋಡಿ
ಗಣಮುಖ್ಯ ಭಕ್ತರಂ ಪಡಿಯರರುಮಂ ಕರೆದು
ತ್ರಿಣಯನನ ಭಕ್ತರ್ಗೆ ಬೆಸಕೆಯ್ದುಪೆಂ ನಲಿದು
ಅರುದಿಂಗಳಾದಲ್ಲದಿತ್ತಲಿನಿಸುಂ ಬಾರೆ
ಅರಿಪಲಾಗದು ಕಜ್ಜವೆನಿತಾದಡಂ ಬಾರೆ
ಇಲ್ಲಿ ಪುತ್ರಂ ಪಟ್ಟದಾನೆ ಮಿಗೆ ಸತ್ತಡಂ
ಇಲ್ಲಿ ರಾಜ್ಯಂ ಕೆಟ್ಟು ಸಂಹಾರವಾದಡಂ
ಏನಾದಡಂ ಪೇಳಿ ಕಳುಪದಿರಿ ನೀವೆಂದು
ನಾನಾ ಸುಖಗಳಂ ಕೆಡಿಸದಿರಿ ನೀವೆಂದು
ಬುದ್ಧಿಗಲಿಸುತೆ ತನ್ನ ಮೂನ್ನೂರ್ವರುಂ ಸಹಿತೆ
ಸದ್ಧರ್ಮಸಂಯುತ ವಿನಿಶ್ಚಳ ಮನಂ ಸಹಿತೆ
ನಂಬಿ ಹಾರೈಸುತಂ ಪೊರಮಟ್ಟು ನಡೆಗೊಂಡು
ಅಂಬುಧಾರಾ ರಾಮನಾಥನಂ ನೆರೆ ಕಂಡು
ಪಂಚಾಮೃತಾದಿ ಘನ ಭೋಗಂಗಳಂ ಮಾಡಿ
ಪಂಚವದನಂಗೆ ದಂಡ ಪ್ರಣಮುಮಂ ಮಾಡಿ
ಗಣಸಮೂಹಕ್ಕೆ ನಲಿದಾರೈಸಲಿಕ್ಕುತಂ
ತ್ರಿಣಯನನ ಭಕ್ತರಂ ನೋಡಿ ಮನವುಕ್ಕುತಂ
ಬೇಡಿದರ್ಗೀವುತಂ ಬಂದದವರ್ಗೀವುತಂ
ನೋಡಿದರ್ಗೀವುತಂ ನೆರೆದವರ್ಗೀಯುತಂ
ಶರಣ ಸಂದೋಹದೊಳು ಬೆರಸಿ ಸುಖಿಯಾಗುತಂ
ಶರಣರ ಮನಂಗಳೊಳು ಹಾಸುಹೊಕ್ಕಾಡುತಂ

ಶಿವಭಕ್ತರಂ ಸರ್ವಮುಖದಿಂದೆ ತಿಳಿಪುತಂ
ಅವರನಾನಂದದಿಂದಂದೊಲಿದು ಕಳುಪುತಂ

ಇರಲತ್ತಲಿತ್ತಲಾ ಕೋವೂರ ಪುರದೊಳಗೆ
ನೆರೆದ ಜೈನಪಾರ್ತಕರು ತಮ್ಮ ಮನದೊಳಗೆ
ದುರ್ಬುದ್ಧಿಯಂ ನೆನೆದು ನಾಣಿಲಿಗಳಂತಲ್ಲಿ
ಒರ್ಬ ಸವಣಂಗೆ ಭಕ್ತರ ವೇಷವಿಟ್ಟಲ್ಲಿ
ಅರಮನೆಗೆ ಕಳುಪೆ ಬರುತಿರ್ದಂ ಶಿವದ್ರೋಹಿ
ನರಕಕ್ಕೆ ನಡುಗದ ಮಹಾಪಾತಕ ಸ್ನೇಹಿ
ಬರಲಲ್ಲಿ ಕೋಲಡ್ಡವಿಲ್ಲದೊಳಗಂ ಪುಗಲು
ಅರಸರ ಕುಮಾರಂಗೆ ಭಯಭಕ್ತಿ ನೆರೆ ಮಿಗಲು
ಇದಿರೆದ್ದು ಮಲ್ಲಿದೇವಂ ಬಂದು ಮೈಯಿಕ್ಕಿ
ಬದುಕಿದೆಂ ಬದುಕಿದೆನೆನುತ್ತೆ ಮನದೊಳಗುಕ್ಕಿ
ಗದ್ದುಗೆಯನಿತ್ತು ಪಾದೋದಕಗಳಿಂ ದಣಿದು
ನಿರ್ದೈವನೆಂದರಿಯದತಿ ಭಕ್ತಿಯಿಂ ಮಣಿದು
ಇರೆ ನಿರ್ಜನ ಪ್ರದೇಶ ಪ್ರಸ್ತುತಮನರಿದು
ಹರ ಹರ ನಮಃಶಿವಾಯೆನಗದನುಸುರಲರಿದು
ಪರಮಾಯುಮಂ ಮಾಡಿದಂ ಮಲ್ಲಿದೇವಂಗೆ
ಪರಿದನಾ ಪಾತಕಂ ಮೆಲ್ಲನಾ ಪೊತ್ತಿಂಗೆ
ಇತ್ತಲು ಕಳಾವತಿ ಕುಮಾರನಲ್ಲಿಗೆ ಬಂದು
ಸತ್ತಿರ್ದನಂ ಕಂಡು ತಾಂ ಸಾವುತಂ ನೊಂದು
ಗಣಮುಖ್ಯನಂ ಬಾಗಿಲವರ್ಗಳಂ ಕರೆಯಿಸಲು
ಕ್ಷಣದಿಂದೆ ಬಂದಿದೇನಾಯ್ತಿದಂ ಪರಿಕಿಸಲು
ಸವಣರ್ದಿಟಂ ಮಾಡಿದೊಂದು ಕುಟಿಲಂ ತಾನೆ
ಶಿವಭಕ್ತಿಪರ್ವಮಂ ಕೆಡಿಸುವ ಭರಂ ತಾನೆ
ಸಾಯಸಂಗೊಳಲೇಕೆ ಬೇಡ ನೀವೆಂಬಂತೆ
ಆ ಯುವತಿಯರ ಶೋಕಮಂ ಮಾಣಿಸುತ್ತಂತೆ
ಅರಸನರಿದಡೆ ಮಹಾಪರ್ವವಳಿವುದು ಬೇಡ
ಚರಿತದಿಂದೆಲ್ಲವಂ ಲೇಸುಮಾಳ್ಪುದು ನೋಡ
ಎಂದಲ್ಲಿ ಸಿಂಗರಂ ಮಾಡುತಂ ಮನೆಯೊಳಗೆ
ತಂದೊಂದು ಶಾವಿನೊಳು ಶಿವಭಕ್ತಿ ತೊಳತೊಳಗೆ
ತಂದೆ ಬಪ್ಪನ್ನಂ ಸಮಾಧಿ ನಿನಗೆಂಬಂತೆ
ಕಂದನಂ ಗೊಪೆಯೊಳಳವಡಿಸುತ್ತಲಿರಲಂತೆ

ಅತ್ತಲರುದಿಂಗಳ್ಗೆ ಗಣಪರ್ವಮುಂ ತೀರ್ದು
ಉತ್ತಮಗುಣಂ ಬೊಮ್ಮಿತಂದೆ ಸುಖದೊಳು ಸಾರ್ದು
ತಿರುಗಿ ಬರುತಿರಲತ್ತ ಪುರದ ಸವಣರ್ಕೂಡಿ
ಅರಸನೊಡನೆಲ್ಲ ತರ್ಕಿಸುತೆ ಗಮನಂ ಮಾಡಿ
ಇದಿರಾಗಿ ಪೊರಮಟ್ಟು ಸಕಳ ತಂತ್ರಂ ನೆರೆದು
ಮುದದಿಂದಲೆಂಟು ಸಾವಿರ ರುಷಿಯರುಂ ನಡೆದು
ಮುಂದೆ ಹೇರಾಲದ ಮರದ ನೆಳಲೊಳಿರ್ದಂಗೆ
ಸಂದಣಿಸಿ ಶಿವಭಕ್ತಕುಲದ ನಡುವಿರ್ದಂಗೆ
ಕೋವೂರ ಬೊಮ್ಮಿತಂದೆಗೆ ಕಾಣ್ಕೆಗಳನಿತ್ತು
ತಾವೆಲ್ಲರುಂ ಮನದೊಳತಿ ಗರ್ವವಂ ಹೊಕ್ಕು
ನರಿವಿಂಡು ನೆರೆದಂತೆ ರುಷಿಯರೆಲ್ಲಂ ಬಂದು
ಅರಸನೊಡನಂದು ಮಾತಾಡುತಿರ್ದರು ನಿಂದು
ಆದುದೇ ಪರ್ವವಿದರಿಂದೆ ಫಲವೊಂದಿಲ್ಲ
ಸಾದರಂ ಪ್ರತ್ಯಕ್ಷವುಳ್ಳಡದು ತಪ್ಪಲ್ಲ
ಎಂದಡರಸಂ ಕೇಳಿ ಮುನಿದು ಕಿಡಿ ಕಿಡಿಯೋಗಿ
ಎಂದನಾ ಸವಣಗುನ್ನಿಗಳ ಕೂಡನುವಾಗಿ
ಎಡೆ ಹಂಚದೈವದ ಮರುಳು ಬತ್ತಲೆಗಳಿರಾ
ಮೃಡನನರಿಯದ ಪಚ್ಚಪಸಿಯ ಪಾತಕರಿರಾ
ಎಂಬತ್ತುನಾಲ್ಕು ಲಕ್ಷದ ಯೋನಿಯಂ ಕಳಿದು
ಶಂಭುವಿನ ಕರುಣದಿಂ ಮನುಜ ಜನ್ಮದೊಳುಳಿದು
ಭವಿಯಾಗಿ ಮತ್ತೆ ನರಕದೊಳಡಸಿ ಬಾಳ್ವುದೆ
ಶಿವಭಕ್ತನಪ್ಪುದೇ ಪ್ರತ್ಯಕ್ಷವಲ್ಲದುದೆ
ಫಲಕೆ ಫಲಗಳು ಉಂಟೆ ಬೆಳಸಿಂಗೆ ಬೆಳಸುಂಟೆ
ತಿಳುವಿಲ್ಲದಜ್ಞರಿರ ಭಕ್ತಿಯಿಂ ಮೇಲುಂಟೆ
ಎಂದಡಂತಲ್ಲಂ ನಿದರುಶನಂ ತೋರುವೆವು
ಇಂದುಧರ ಮೆಚ್ಚೆ ಸಾಮರ್ಥ್ಯಮಂ ಬೀರುವೆವು
ಈಗಳೀ ವಟವೃಕ್ಷಮಂ ಜನಂ ನೋಡುತಿರೆ
ಬೇಗದಿಂ ಭಸ್ಮಮಂ ಮಾಡಿದಪೆವರಿವುತಿರೆ
ನೀವೇಳಿಸಲು ಬಳಿಕ ನಿಮ್ಮದೇ ದರುಶನಂ
ಆವೆಲ್ಲರುಂ ಭಕ್ತರಪ್ಪೆವಿದು ದರುಶನಂ
ಎನಲೊಡಂಬಡಲಲ್ಲಿ ರುಷಿಯರೆಲ್ಲಂ ನಿಂದು
ನೆನೆದು ನೆರೆ ಕುಟಿಲ ಮಂತ್ರಂಗಳೊಳು ನೆರೆ ಸಂದು
ಅಕ್ಷತೆಗಳಂ ಕೊಂಡು ಮರನನಿಡುವನಿತಕ್ಕೆ

ಈಕ್ಷಿಸದ ಮುನ್ನ ಮುಂದಣ ಮರಂ ನಿಮಿಷಕ್ಕೆ
ಉರಿದು ಭಸ್ಮೀಭೂತವಾಗಲರಸಂ ಕಂಡು
ಹರನ ಚರಣಸ್ಮರಣೆಯಂ ಮಿಗೆ ಮನಂಗೊಂಡು
ಕಂಕಣಂಗಟ್ಟಿ ಮುನ್ನೂರ್ವರುಂ ಸಹಿತಲ್ಲಿ
ಬಿಂಕದಿಂ ಕೋವೂರ ಬೊಮ್ಮಯ್ಯ ವಿಭುವಲ್ಲಿ
ಮರನುರಿದಡೇನೊ ಭಸ್ಮಂ ಬೀಜವಿದೆನೋಡೆ
ಚರಿತದಿಂ ಚಂದ್ರಶೇಖರನಂ ಮನಂಗೂಡೆ

ನೆನೆಯಲಂಕುರಿಸಿತ್ತು ನೋಡೆ ಪಲ್ಲವಿಸಿತ್ತು
ದನಿದೋರೆ ಪುಷ್ಪ ಫಲದಿಂದೆ ಸಂದಣಿಸಿತ್ತು
ಮುನ್ನಿಂದೆ ಪತ್ತುಮಡಿಯುದ್ದಮಗಲಂಬೆತ್ತು
ಉನ್ನತಫಳಂ ವಿಡಿದ ಶಾಖೆಗಳನುರೆ ಹೊತ್ತು
ನಾಗರ್ಕಳಂಜಿ ಕಳುಪಿದ ಪುಣ್ಯಕುಜದಂತೆ
ಮೇಗೆ ದೇವರ್ಕಳಿಳುಪಿದ ಸುರದ್ರುಮದಂತೆ
ಇರೆ ತೆರಳ್ದೋಡಿತ್ತು ಸವಣರೊಬ್ಬುಳಿಯೆಲ್ಲ
ಪರಿದು ನಡೆದೋಡಿತ್ತು ಬೀಳುತುಂ ತಾವೆಲ್ಲ
ಓಡಲರಸಂ ಕಂಡು ಕರುಣದಿಂದಂ ನಗುತೆ
ನೋಡಿ ಕೃಪೆಮಾಡಿ ಕರೆಕರೆ ವಂಚಕರನೆನುತೆ
ಕರೆಯಿಸಲು ಬಂದ ಸವಣರ್ಗೆ ನುಡಿದಂ ನೃಪಂ
ನರಕಿಗಳ ನಿಮ್ಮ ಚಿತ್ತವನೇನನೆಂದಿಪೆಂ
ಕಷ್ಟವಯ್ಯೋ ಭಕ್ತರಾಗಿರೇ ಮರಳರಿರ
ದೃಷ್ಟಾಂತವಂ ಕಂಡು ನಂಬಿರೇ ಹೆಡ್ಡರಿರ
ನೋಡೆ ಮೂರುಂ ತಪ್ಪನನುಸರಿಸುವೆಂ ಬಳಿಕ
ಮಾಡುವೊಂದಣಕಮಂ ಹರನೆ ಬಲ್ಲಂ ಬಳಿಕ
ಅರಿದಿಪ್ಪುದದನೆನುತೆಯೆದ್ದನಾ ಮರದಿಂದೆ
ನೆರೆ ಮನದ ಕಲಿ ಪುರವನೊಪ್ಪದಿಂ ಪುಗೆ ಮುಂದೆ
ಕಲ್ಲ ಪುತ್ಥಳಿಯಾರತಿಯನೆತ್ತಿ ಬರುತಮಿರೆ
ನಿಲ್ಲೆಂದು ನಿಲಿಸುತಂ ಸವಣರಂಜುತ್ತಮಿರೆ

ಅಂದು ತನ್ನರಮನೆಯ ಶಿವಪುರವನೊಲುಮೆಯಿಂ
ಬಂದು ಹೊಕ್ಕಂ ಬೊಮ್ಮತಂದೆಯತಿ ನಲುಮೆಯಿಂ
ಇಕ್ಕಿರ್ದ ಸಿಂಹಾಸನಮನಳ್ಕರಿಂದೇರಿ
ಮಿಕ್ಕು ಮೀರುವ ಪುಳಕಸಂತತಿಗಳಂ ಹೇರಿ

ಒಡನೆ ಮುನ್ನೂರ್ವರೊಡೆಯರು ನಲಿದು ಕುಳ್ಳಿರಲು
ಮೃಡನನಣುಗನೊಪ್ಪದಿಂ ಬೊಮ್ಮಯ್ಯನಿರುತಿರಲು
ಪನ್ನಿರ್ವರರಸಿಯರು ರನ್ನದಾರತಿಯೆತ್ತೆ
ಮನ್ನಿಪ ಕಳಾವತೀ ದೇವಿಯಾರತಿಯೆತ್ತೆ
ಎತ್ತುವಾಗಲು ತೋರಹಾರವೊಂದಲ್ಲಾಡೆ
ಒತ್ತರಿಪ ಕಂಬನಿಗಳಾ ಹಾರದೊಡನಾಡೆ
ಏನಿದೇನೆಂದರಸನಂಜಿ ಬೆಸಗೊಳಲಲ್ಲಿ
ಏನೆಂದು ಪೇಳ್ವೆನೆಂದರಸಿಯ[ರ]ಳುತ್ತಲ್ಲಿ
ಮಗನಿರ್ದಡಿಂದು ನಿಮ್ಮ ಬಂದು ಕೇಳಿಸನೆ
ಸೊಗಯಿಸುವ ಹೊಸ ವಾದ್ಯದಿಂದಲ್ಲಿ ರಾಜಿಸನೆ
ಎನೆ ಕುಮಾರಂ ತಾನಿದೇನಾದನೇನಾದ
ಅನುಪಮ ಗುಣಾಬ್ಧಿ ತಾನೆಲ್ಲಿರ್ದನೇನಾದ
ಎಂದು ಗಣಮುಖ್ಯರಂ ಬಾಗಿಲವರಂ ಕರೆಯೆ
ಬಂದು ಪೇಳ್ದರು ಜನಂ ಕಣ್ಣನೀರಿಂ ನೆರೆಯೆ
ದೇವ ಭಕ್ತರ ವೇಷದಿಂದೆ ಸವಣರು ಬಂದು
ಭಾವಿಸದೆ ಪುತ್ರನಂ ತೀರ್ಚಿದರು ತಾವೆಂದು
ನುಡಿಯೆ ಘುಡುಘುಡಿಸಿದಂ ಕೋವೂರ ಬೊಮ್ಮಯ್ಯ
ಎಡೆಗೊಂಡ ಕೋಪದಿಂ ನುಡಿದನಾ ಬೊಮ್ಮಯ್ಯ
ಅಪ್ಪುದೀ ದಂಬರಿಚ್ಚೆಯನೀವ ಪುರಹರಂ
ತಪ್ಪದೆನ್ನಿಚ್ಚೆಯಂ ಸಲಿಸನೇ ಶಂಕರಂ
ನಡೆ ತೋರದೆಲ್ಲಿರ್ದನೆಂದು ಕೈಯಂ ಪಿಡಿದು
ಮೃಡನ ನಾಮಂ ತನ್ನ ನಾಲಗೆಯೊಳಿದಿಡಿದು
ಮೂನ್ನೂರ್ವರುಂ ಪಿಂತೆ ಕಂಕಣಂಗಟ್ಟಿರಲು
ನಾನಾ ವಿಳಾಸಿನೀಜನ ವೀಕ್ಷಿಸುತ್ತಿರಲು
ನಡೆದು ಬಂದೇಳಯ್ಯ ಏಳ್ಕುಮಾರಕ ಎನಲು
ಮೃಡಪದಸಮಾಧಿ ಸಾಲ್ವುದು ಮಗನೆ ಏಳೆನಲು
ಪ್ರೇಮದಿಂ ಪಿತನ ದನಿಗಿರಬಾರದೆಂಬಂತೆ
ಭೂಮಿ ಕೈಲೆಡೆಗೊಂಡು ಶಿಶುವನೊಪ್ಪಿಸುವಂತೆ
ರತ್ನಗರ್ಭಿಣಿ ಪುರುಷರತ್ನಮಂ ಕೊಡುವಂತೆ
ನೂತ್ನನಿಧಿ ಪೊರಮಡುತ್ತಿಪ್ಪ ಸಮಯದೊಳಿಂತೆ
ಅದೆ ಕೇಶವದೆ ಭಾಳವದೆ ಕರ್ಣವದೆ ಮೊಗಂ
ಅದೆ ಕಂಠವದೆ ಬಾಹುವದೆ ಕರಸ್ಥಳಯುಗಂ

ಅದೆಯುದರವದೆ ಜಾನುವದೆ ಚರಣಪಲ್ಲವಂ
ಅದೆಯೆನುತ್ತಂ ತೋರಿ ಸರ್ವಾಂಗವೆಲ್ಲಮಂ
ಮಲ್ಲಿದೇವಂ ಬಂದು ತಂದೆಯಂ ಬಿಗಿದಪ್ಪಿ
ಸಲ್ಲೀಲೆಯಿಂ ತಾಯನೊಲಿದಪ್ಪಿಯಮರ್ದಪ್ಪಿ
ಪರಮ ಮಾಹೇಶ್ವರರ ಚರಣ ತಳದೊಳು ಬಿದ್ದು
ಹರನ ಕರುಣದಿ ಶಿವನ ಭಕ್ತರೊಳು ಸಲೆ ಬಾಳ್ದು
ಬಾಲಚಂದ್ರನ ತೆರದೆ ತರುಣ ತರಣಿಯ ತೆರದೆ
ಮೂಲೋಕವಿಚ್ಛಯಿಪ ಜೀವರತ್ನದ ತೆರದೆ
ಸಿರಿಯಂತೆ ಸುಖದಂತೆ ಸುರಕುಜದ ಸಸಿಯಂತೆ
ಪರದಂತೆ ಪುರುಷ ಪರುಷದ ತೆರದೆ ನಿಧಿಯಂತೆ ೨೨೦
ಇಂತಿಂತು ಮಲ್ಲಿದೇವಂ ಪಿತನೊಳೊಪ್ಪುತಿರೆ
ಇಂತು ಕೋವೂರ ಬೊಮ್ಮಯ್ಯ ಸಂತಸದಲಿರೆ ೨೨೨

## ಸ್ಥಲ ೨

ಧರೆ ಮೆಚ್ಚಲ್ಗಣಪರ್ವಮಂ ಮೆರೆದು ಜೈನರ್ಮಾಳ್ಪ ವಾದಕ್ಕೆ ವಿ
ಸ್ತರದಿಂದಂ ವಟವೃಕ್ಷಮಂ ಪಡೆದು ಪುತ್ರಂ ಧಾತ್ರಿಯೊಳ್ಪೊಕ್ಕಡಾ
ದರದಿಂದೆತ್ತಿ ಜಗತ್ತ್ರಯಂ ಪೊಗಳಲಾಹಾ ಬೊಮ್ಮಯಂ ನೋಡಲ
ಚ್ಚರಿಯಿಂದಿರ್ದನನೂನ ಭಕ್ತಿಸುಖ ಪಾರಾವಾರ ಚಂದ್ರೋದಯಂ ॥

ಅಂತು ಜೈನರೊಳ್ಪೋರ್ದು ಕಡುನಿಷ್ಠೆಯಿಂ ಸಾರ್ದು ಶರಣರ್ಗೊಳಸೋರ್ದು ಹರಕರುಣಮಂ ಪಾರ್ದು ಸ್ನೇಹರಸಮಂ ಪೀರ್ದು ಪುಣ್ಯೋತ್ಸವದೊಳಾರ್ದು ಸಂತೋಷದೊಳಿರ್ದು ಜೈನವನದಾವಾಗ್ನಿಯೆನಿಪ ಕೋವೂರ ಬೊಮ್ಮಯ್ಯಂ ಕುಮಾರಂ ಬಂದ ಪರಮೋತ್ಸವಕ್ಕೆ ಹರುಷಿತವಾಗಿ ಸತ್ಯಸುಲಭನಸತ್ಯದೂರನತ್ಯಾದರದಿಂ ಮತ್ತೆ ಗಣಪರ್ವವಂ ಬಿತ್ತರಿಲಸೆಂದು ಪಡಿಯರನಂ ಕರೆದು, ಪನ್ನಿಚ್ಛಾಸಿರ ಖಂಡುಗಕ್ಕಿ ನಾಳಿನ ಸೋಮವಾರಕ್ಕೊದಗುವಂತೆ ಮುದದಿಂ ಮಾಡಿಸುವುದೆಂದು ಬೆಸಸಿ ಕಳುಪಲಾತಂ ಬಂದರಮನೆಯ ವಿಳಾಸಿನೀ ಜನಕ್ಕೆ ಕಳಮಾದಿಗಳಂ ವಿಚಾರಿಸಿ ಕೊಡುತ್ತಿಪ್ಪಲ್ಲಿ, ಸಲುಗೆಯುಳ್ಳ ನೆಲೆದೊತ್ತುಗೆಲಸಕ್ಕಲಸಿ ಇವನಾರ್ಮಿದಿವರೀ ನೆಲ್ಲಂ ಮಸಣಿಕಬ್ಬೆ ಮಿದಿಗೆಂದು ನುಡಿದಾ ಸರನುಡಿಯನರಸಂ ಕೇಳ್ದು ಪಡಿಯರನಂ ಕರೆದಿವಳೆಂದಂತೆ ನಮ್ಮ ಕೋಟೆಯ ಕೊತ್ತಳದ ಮಸಣಿಕಬ್ಬೆಯಂ ಕರೆಯೆಂದು ನುಡಿವಲ್ಲಿಂ ಮುನ್ನುಟ್ಟ ಕರಿಯ ಹುಟ್ಟಿಗೆಯಿಂ ಜೋಲ್ವ ಬಿಚ್ಚೋಲೆಯಿಂ ನೇಲ್ವ ತೋಳ ತೊವಲಿಂ ಶಿರದ ನರೆಯಿಂ ಕಣ್ಣ ಕಾಡಿಗೆಯಿಂ ನುಣ್ಣನರಿಸಿನದಿಂ ರಂಜಿಸೆ ಬೊಮ್ಮಿತಂದೆಯೋಲಗದ ನಡುವೆ ಮೈಯಿಕ್ಕಿ ನಿಂದುಗ್ರದೇವತೆಯುನರಸಂ ಕಂಡು ಬೆಳಗಪ್ಪನಿತಕ್ಕೆ ಚಳಿಸಿದಕ್ಕಿ ಪನ್ನಿಚ್ಛಾಸಿರಖಂಡುಗವಾಗವೇಳ್ವುದೆನೆ ಹಸಾದಂ ದೇವ ದೇವ ಮನೆ ಮನೆಗಳೊಳಂ ಪೊಕ್ಕಡಂಜಿಹರು ಅಂದಿನಿರುಳ್ಪುರದ ತಂಡುಲ ಪರಿಕರಮಂ ಪೊರಗಿರಿಸಲ್ಬೆಸಸುವುದೆಂದು ಬಿನ್ನವಿಸಿ ಬೀಳ್ಕೊಂಡು ಪೋದಳಿತ್ತಲು ಪ್ರಭಾಕರಂ ಪಶ್ಚಿಮ ವಾರ್ಧಿಯೊಳ್ಮುಳುಂಗೆ ಕವಿವ ಕತ್ತಲೆಯುಮಂ ತೊಳಗುವ

ತಾರೆಗಳುಮಂ ಬೆಳಗುವ ಚಂದ್ರೋದಯಮುಮಂ ಪರ್ಬುವ ಚಂದ್ರಿಕೆಯುಮಂ ನೋಡಿ ಕೊಂಡಾಡಿ ಕೋವೂರ ಬೊಮ್ಮಯ್ಯಂ ಗಣಸಮೂಹಸಂಯುಕ್ತಂ ಶಿವರಾತ್ರಿ ಭರಿತನಾಗಿರಲಂಬುಧಾರಾ ರಾಮನಾಥಂ ನರಲೋಕದೊಳಾರೈಸುವುದಂ ನೋಳ್ಪೆನೆಂಬಂತುದಯಿಸಿದ ಸೂರ್ಯೋದಯಮಂ ಕಂಡು ನಿತ್ಯನೇಮಸಂಪನ್ನನಾಗಿ ಕೊತ್ತಳದುಗ್ರದೇವತೆ ಮಾಡಿತಂದಕ್ಕಿಯ ರಾಸಿಗಳಂ ತನತನಗೆ ತಂದ ಮೇಲೋಗರದೊಟ್ಟಿಲುಗಳಂ ಪಕ್ವಾನ್ನದ ಪಂಕ್ತಿಗಳಂ ತುಪ್ಪದ ಕೊಪ್ಪರಿಗೆಗಳಂ ಕಂಡು ಕಂಡು ಮುಯ್ಯಾನುತ್ತಿಪ್ಪಲ್ಲಿ,

ಮೊಗ ಮೋಟರ ಮೊತ್ತಂ ಚಂಡಿಗಳ ಚಾವಡಿ ಚಾರ್ವಾಕರೊಬ್ಬುಳಿಯೆನಿಪ್ಪೆಂಟು ಸಾವಿರ ಸವರ್ಣರ್ನೆರೆದು ಬಂದರಸ, ಪರ್ವಪರ್ವವೆಂದು ಭಕ್ತರುಂಡು ಪೋಪುದ ಕಂಡಪೆವಲ್ಲದೆ ನಿಮ್ಮ ದೇವರೆಮ್ಮೆಲ್ಲರುಂ ನೋಡಲಾರೈಸುವುದಂ ಕಾಣಬಾರದೆಂದಜ್ಞಾನ ಪಟಲಂ ಕವಿದ ಮಾಯಾತಮಂಧರ್ನುಡಿದ ಮಾತಂ ಕೇಳ್ದು, ಅಯ್ಯೋ ಮರಳ್ಗಳಿರಾ ಪಿಶಾಚರಿರಾ ನರಕ ಸಮೀಪಸ್ಥರಿರಾ ನೀವೆಲ್ಲರುಂ ನೋಳ್ಪವರೆ ಅ ನಿತ್ಯತೃಪ್ತನಾರೋಗಿಪನೆ? ಅದಕ್ಕೇನು, ನೀವೆಂದುದಂ ಮಾಡದಿರ್ದಡೆ ಕ್ಷಮತೆಯಂ ಕಲ್ಪಿಸಲಾಗದೆನುತೆ ಶಿವಭಕ್ತರ ಕೈಯೊಳನುಜ್ಞೆಯಂ ಪಡೆದು, ಹರನಂ ಬರಿಸಲೆಂದು ನೆರೆದ ಪಡಿಯರನಂ ಕರೆದು, ನೀಂ ಪೋಗಿ ಪುರದ ಪಶ್ಚಿಮಭಾಗದೊಳು ನಿಂದಿರ್ದ ಅಂಬುಧಾರಾ ರಾಮನಾಥಂಗೆನ್ನೊಡೆಯಂಗೆ ಬಿನ್ನವಿಸಿ ಬಿಜಯಂಗೆಯ್ಸಿಕೊಂಡು ಬಾಯೆಂದು ಕಳುಪಲಾತಂ ಶಿವಭಕ್ತಿಯ ಬಳಿಸಲುವಂತೆ ಏಕನಿಷ್ಠೆ ನಡೆವಂತೆ ಶಿವಜ್ಞಾನವುದಯಿಸುವಂತೆ ಪರಿದು ಬಂದು, ಪುರದ ಪಡುವಣ ಮೈಯೊಳು ನಿಂದು ಕೈಯೆತ್ತಿ ದೇವ ದೇವಾ, ದೇವರಾದಿತ್ಯ, ದೇವರ ದೇವ, ದೇವರ ಗಂಡ, ದೇವಕುಲರಕ್ಷಾದಕ್ಷ ಕಾರುಣ್ಯಪಾರಾವಾರ ಕೃಪಾನಿಧಿಯೆ ದಯಾವಲ್ಲಭ ಸದ್ಭಕ್ತಸುಲಭ ಶರಣಜನಸ್ನೇಹಿ ಅಂಬುಧಾರಾ ರಾಮನಾಥ ಚಿತ್ತೈಸು, ನಿಮ್ಮಡಿಗಳ ಸಲುಗೆಯ ಶರಣಂ ಕೋವೂರ ಬೊಮ್ಮಿತಂದೆ ನಿಮ್ಮಡಿಗಳ ಬಿಜಯಂಗೈಸಲುವೇಳ್ದು ಬಿನ್ನಯಿಸಿ ಎನ್ನೊಡನೆ ತನ್ನಿಂದಧಿಕವೆನಿಪ ಮನವಂ ಕಳುಪಿದನೆಂದತಿಧ್ವಾನದಿಂ ಪಡಿಯರಂ ಕರೆವಮೃತರಸವಾಕ್ಯದ ಭಕ್ತಿರಸಾರ್ದ್ರ ದೈನ್ಯಾಕ್ಷರಂಗಳು ಶಿವನೇರಿಬಪ್ಪ ನಂದಿಯ ಖುರವಳಯದ ಕಿರುಗೆಜ್ಜೆಗಳಂತಿರೆ ಮಂಗಳಕ್ಕೆ ಮಂಗಳ, ಭಾಗ್ಯಕ್ಕೆ ಭಾಗ್ಯ, ಪುಣ್ಯಕ್ಕೆ ಪುಣ್ಯ, ಸುಖಕ್ಕೆ ಸುಖತರವೆನಿಪ ಅಂಬುಧಾರಾ ರಾಮನಾಥಂಗೆ ಮೈಯಿಕ್ಕಿ ನಿಂದು ಪುಳಕದ ಗುಡಿಗಟ್ಟಿ ಹರುಷಮಾಲೆಯಂ ತೋರಣಂಗಟ್ಟಿ ಶಿವನ ಮುಂದೆ ಪಡಿಯರಂ ಮನದ ಮುಂದೆ ರಾಮನಾಥಂ ನಡೆದು ಬಪ್ಪಾಗಳು,

ನರಲೋಕವಂಜದಂತೆ ಸೂಕ್ಷ್ಮಶರೀರಮಂ ಪವಣಿಸಿಕೊಂಡು ಬಪ್ಪ ವೃಷಭರಾಜನ ಕಿರುನವಿರ ತುತ್ತತುದಿಯ ನಸುಗಾಳಿ ಸೋಂಕಿ ಬಸದಿಗಳನು ಬೊಮ್ಮಿತಂದೆ ಈ ತೆರದಿಂ ಕೆಡಪುವನೆಂಬುದಂ ಸೂಚಿಸುವಂತೆ ಕೋವೂರ ಕೋಂಟೆ ಕೆಡೆದುಬೀಳೆ, ನಡೆತಂದು ಪರಮಭಕ್ತನರಮನೆಯ ಪರಿವೇಷದಾ ಗಗನಮಂಡಲದೊಳು ಕೋಟಿ ಸೂರ್ಯೇಂದುಗಳ ಬೆಳಗನೇಳಿಸುತಿರ್ದ ರಾಮನಾಥನಂ ಬೊಮ್ಮತಂದೆ ಭೋಂಕನೆ ಕಂಡು, ಪುಳಕಿಸುತಂ ಕಂಪಿಸುತಂ ಬೆಮರುತ್ತಂ ಗದಗದಿಸುತ್ತಂ ನಿಂದು, ದಾಸಿಮಯ್ಯನ ತವನಿಧಿ ಭಾಸುರವಾದುದೆ, ನಂಬಿಯ ಬೆಂಬಳಿಯಿಂಬುಗೊಂಡುದೆ, ಭೋಗಯ್ಯನ ಭಾಗ್ಯಂ ಬಳಿಸಂದುದೆ, ಕುಂಬರಗುಂಡಯ್ಯನ ನೃತ್ಯದಫಲಂ ನಡೆತಂದುದೆ ಎಂದು ಬಣ್ಣಿಸಿ ನಂದಿಯ ಕೆಳಗೆ ನಲಿದಾಡಿ ಪುರದ ನಡುವೆ ಸವಾಲಕ್ಷಂ ನೋಡುತಿರೆ ಪರುಷದ ಪರಿಯಣದೊಳಮೃತಮಯ ಶಾಕಪಾಕ ಪಕ್ವಾನ್ನಂಗಳ ರುಚಿಯನಾರೋಗಣೆಗಿತ್ತಘವಣಿಯಂ ಕೊಟ್ಟು ಕೈಘಟ್ಟಿಯಂ ನೀಡಿ ವೀಳಯಮನರ್ಪಿಸಿ

ಸರ್ವಾಪರಾಧಮಂ ಸೈರಿಸುವುದೆಂದು ಪೊಡವಡುವಲ್ಲಿಂ ಮುನ್ನ ಬೊಮ್ಮಿತಂದೆಗಳ ಹೃತ್ಕಮಳದೊಳು ಪೊಕ್ಕಂತೆ ಭುಜಗಾಭರಣಂ ನಿಜನಿವಾಸಕ್ಕೆ ಬಿಜಯಂಗೈಯಲೊಡಂ ನೋಡುವ ಜನವದ್ಭುತದೊಳದ್ದಂತೆ ಕೌತುಕದೊಳಿದ್ದಂತೆ ಬೆರಗಾಗಿರೆ ಬೊಮ್ಮಿತಂದೆ ಹರಕರುಣದೊಳು ಬೆರಸಿ ತನ್ನನರಿಯದೆ ಕಿರಿದುಂ ಪೊತ್ತುಂ ಮರೆದಿದ್ದೆಂತಕ್ಕೆಚ್ಚತ್ತು ಹರನ ಕರುಣಮಂ ಧರಿಯಿಸಲಾರದೆ ತೂಗಿ ಬೀಗಿ ಬಳುಂಕಿ ಸಾತ್ವಿಕ ರಸದಿಂ ಕಂಪಿಸಿ ಕಿಂಕರಭಾವದಿಂ ಭಕ್ತರ್ಗೆ ಕೈಮುಗಿದು ಗಣಪರ್ವವನಣಿಯರದಿಂ ಮಾಡಿ ಶರಣರಂ ನೋಡಿ ಪವಣಿಲ್ಲದೆ ಮುಳಿದು ಎಲೆ ಎಲೆ ಪಾತಕರಿರಾ, ಸುಡು ಸುಡು ಹೇಸಿಕೆಯ ಪುತ್ತುಗಳಿರಾ ಮೀರಿ ನುಡಿದು ಮೂರು ತಪ್ಪಂ ಸಾರಿ ಸೈರಿಸಿದೆನಿನ್ನೆನ್ನ ಪವಣವಲ್ಲಂ ಹರಭಕ್ತರ್ತೇಜೋಧಿಕರರಿದಿರ್ಪು ದೆನುತ್ತವಂದಿರಂ ಕಳುಪಿ ಕೇವೂರ ಬೊಮ್ಮಯ್ಯಂ ನಿರ್ಮಳಚಿತ್ತಂ ಧೈರ್ಯನಿಧಿ ಅಪ್ರತಿಮ ಪ್ರತಾಪಮುಖಂ ಶೈವತೇಜೋಭರಣಂ ಶರಣಸಂತತಿಯೊಳು ಪರಮಹರುಷ ಜನಿತ ರೋಮಾಂಚಶರೀರನಾಗುತ್ತಿರಲಿತ್ತಲು,

ಕೋವೂರೊಳಗೆ ಕಾವುಳೆದ್ದಂತೆ ಸಾವಿಂಗೆ ಸಂಚಕರವ ಸಂದಣಿಸುವಂತೆ ನೆಲೆಗೊಂಡು ತಲೆಗೇರಿದಂತೆ ಎಂಟು ಸಾವಿರ ಸವಣರು ಕೂಡಿ ಪಾಪಮಂ ಪಡಿಸಣಿಸಿನೋಳ್ಪಂತೆ ಆತ್ಮದ್ರೋಹವ ನೊಡರ್ಚುವಂತೆ ಮೃತ್ಯುವಂ ಕೈಸನ್ನೆಗೈದುಕೊಳುವಂತೆ ವಿಷಪುಷ್ಪವಂ ವಾಸಿಸುವಂತೆ ಪುಷ್ಪಾಂಜಲಿ ಎಂಬ ನರಕ ಪರ್ವವನನುಕ್ರಮಿಸುತ್ತಮಿರೆ ಶಿವಪುರದ ಪಡಿಯರಂ ಅರಮನೆಗೆ ಬರುತೆ ಸವಣರ ಸಂಭ್ರಮದ ಸಾವಿನ ಹಬ್ಬಮಂ ಕಂಡು ಎಯ್ತಂದೆಲೆ ದೇವಾ, ಇಂದಿಂದೀಗಳೀಗಳಾರುಹತರೆಲ್ಲಂ ಮಾರಿಯಂ ಕರೆದುಕೊಳುವಂತೆ ಪುಷ್ಪಾಂಜುಳಿಯ ಪರ್ವವೆಂದು ನೆನೆಯಲು ಬಾರದ ಶಿವದ್ರೋಹಮಂ ಮಾಡುತ್ತಿರ್ದಪರೆಂದರುಪಿದ ಬಿನ್ನಪದೊಡನೆ ಬೊಮ್ಮಿತಂದೆಗೆ ಚಿತ್ತಂ ನೊಂದು ಬುದ್ಧಿ ಬೆಂದು ಮನಂ ಮರುಗಿ ತನುವುರಿದು ಕೊನೆಮೀಸೆಗೆತ್ತಿ ಕಣ್ಕೆಂಪೇರಿ ಸವಣಗುಲವಂ ಸಂಹರಿಸುವೆಂ ಬತ್ತಲೆಯ ಬೊಂಬೆಗಳಂ ಕಿತ್ತೆತ್ತುವೆನೆಂದು ಕೆಲಬಲದ ಮಾಹೇಶ್ವರರ ಮುನ್ನೂರ್ವರ ಮೊಗಮಂ ನೋಡಲೊಡಂ, ಕಣ್ಣ ಸನ್ನೆಯನರಿದು ಅಮೃತಮಥನದೊಳ್ಪುಟ್ಟಿದುಚ್ಚೈಶ್ರವಕ್ಕೋರಗೆಯೆನಿಪ ಚಾರು ತುರಗಂಗಳಂ ನಲಿವುತೆ ಪಲ್ಲಣಿಸಿ ನಿಂದು ರುದ್ರಾಕ್ಷಿಗಳ ಪಕ್ಕರಿಕೆಗಳನಿಕ್ಕಿ ನೀಡಾಗ[ದೆದಿ ಜೋಡಂ ತೊಟ್ಟು ಸಿಂಹದ ಹಿಂಡು ಸಂದಣಿಪಂತೆ ಶರಭನ ನೆರವಿಯುರವಣಿಪಂತೆ ತುರಂಗಕುಲಮಂ ಬೆಂಗೆವಾಯ್ದು ಸಿಡಿಲ ಸೆಕ್ಕೆಗಳಂತಿಟ್ಟಣಿಸಿದ ಪಟ್ಟೆಹಗಳಂ ಹೆಗಲೊಳಿಟ್ಟು ಬರಸಿಡಿಲ ಬಳಗಂ ಪೊರಮಡುವಂತೆ ನಂಜಿನ ಗಾಳಿ ಬೀಸುವಂತೆ ನಡೆತಂದು

ರವಿಕಿರಣಂಗಳ ಮುಂದಣ ಕತ್ತಲೆಯಂತೆ ನೆರೆದಿರ್ದ ಪುಷ್ಪಾಂಜಲಿಯ ಪಾತಕರಂ ಕಂಡು ಕೋಲೊಡ್ಡಿದಂಕದಂತೆ ಕೈವೀಸೆ ನಡೆದಿದಿರಾದ ಹಸ್ತ್ಯಶ್ವರಥಪದಾತಿಗಳಂ ಪೊಡೆದು ಸೀಳುತ್ತಂ ಕಟಿಪಲ್ಲಟಂಬೊಯ್ಯುತ್ತಂ ಪಿಡಿದು ನುರ್ಗುತ್ತಂ ಅರೆದು ಸಣ್ಣಿಸುತ್ತಂ ಮುಂದಿರ್ದ ಸವಣರಂ ಜವಂಗೊಪ್ಪಿಸುತಂ ಗುಂಡಿಗೆಯ ಚಂಡಿಗಳಂ ತುಂಡಿಸುತ್ತಂ ಪಂಡಿತರಂ ಖಂಡಿಸುತ್ತಂ ರಿಸಿಯರಂ ಹಸಗೆಡಿಸುತ್ತಂ ಜೈನರಂ ಜವಗೆಡಿಸಿ ಸಂಹರಿಸುತ್ತಂ ಲೋಚುಗಳಸುವಂ ಬಾಚುತ್ತಂ ಆರುಹತರಂ ರಣಕ್ಕಿಕ್ಕುತ್ತಂ ಪಾಪಮಂ ಬರಿಕೈದಂತೆ ಕತ್ತಲೆಯಂ ಕಳಿದಂತೆ ಮಲಿನಮಂ ತೊಳೆದಂತೆ ದುರಾಚಾರಮನಳಿದಂತೆ ಸವಣವಡೆಯಂ ನಿವಳಿವಟ್ಟಂ ಮಾಡೆ ತಮ್ಮ ಜಿನಧರ್ಮವೆ ನಂಜಿನ ಧರ್ಮವಾಗೆ ನಂಜಿನ ಧರ್ಮದಿಂ ಪಿರಿದುಂ ಸತ್ತು ಕೆಟ್ಟು ಪೋಗೆ ಭೂಭಾರವನಿಳಿಪಿ ಜಿನಪ್ರತಿಮೆಗಳನೆತ್ತಿ ಬಿಸುಟು ಪಟ್ಟಣದೊಳಗಣ ನೆತ್ತರ್ಗೆಸರಿಂಗೆ ನದಿಯಂ ತಂದು ಮೇಲೆ ಪರಿಯಿಸಿ ಪುರಮಂ ತೊಳೆದು ಶುದ್ಧಂ ಮಾಡಿ ವೀರಮಾಹೇಶ್ವರರು ಕೋವೂರ ಬೊಮ್ಮಿತಂದೆಗೆ ಭಯದಿಂದೆರಗಿ ಕೈಮುಗಿದು

ದೇವಾ, ಸವಣಗುಲಂ ಸಂಹಾರಮಾದುದು, ಬತ್ತಲೆ ಬೊಂಬೆಗಳು ಬರಿದಾದವೆಂಟುಸಾವಿರ ಬಸದಿಗಳಂ ಶಿವಲಿಂಗಮಮಂ ಬಿಜಯಂಗೈಸಲುವೇಳ್ಪುದೆಂದು ಬಿನ್ನಯಿಸೆ ಬೊಮ್ಮಿತಂದೆಗಳು ಕೇಳ್ದು ಶಿವ ಶಿವ ಎಂದು ಕಿವಿಯಂ ಮುಚ್ಚಿ ಶಿವಭಕ್ತರಿದಂ ನುಡಿವರೆ ಪೊಲೆಯಂ ಪೊರಮಡಲಾ ಮನೆಯಂ ಶೂದ್ರರೊಳಗಾಗಿ ಪೊಗುವರೆ ಪೊಗರು. ಶಿವಂಗೆಂದುಂ ಸೇವ್ಯವಲ್ಲೆಂದು ಬಸಿದಿಗಳಂ ಕೆಡಪಿ ಕೋಂಟೆಗಿಕ್ಕುವುದೆನೆ ಜಿನಾಲಯಂಗಳನೆಲ್ಲಂ ನೆಲಸರಿಸಂ ಮಾಡಿ ಸೋಮಸೂರ್ಯವೀಧಿಗಳಂ ನಿಮಿರ್ಚಿ ಸತ್ಯ ಮಾಹೇಶ್ವರರಂ ಬಿಜಯಂಗೈಸಿ ತಂದು, ಪಟ್ಟಣಮಂ ಶಿವಪುರಮಂ ಮಾಡಿ ಕೋವೂರ ಬೊಮ್ಮಯಂ ಭಾವಜಹರನ ಮನೋಹರನಂಬುಧಾರಾ ರಾಮನಾಥನ ಶ್ರೀ ಚರಣಕಮಳಮಕರಂದ ಮಧುಕರಾಯಮಾನಂ ಹರನ ಶರಣರ್ಗೆರಗುತ್ತಂ ಹರುಷಿತನಾಗುತ್ತಂ ಕುಮಾರನಂ ನೋಡಿ ನೋಡಿ ಹಿಗ್ಗುತ್ತಂ ಶಿವಭಕ್ತರ ನಡುವೆ ಪವಣಿಲ್ಲದ ಸುಖದಿಂದೊಪ್ಪುತ್ತಮಿರೆಯಿರೆ–

## ಸ್ಥಲ ೩

ಧರೆ ನೋಡಲ್ಪರಮಂಗೆ ಸಂತ ಸುಖದಿಂದಾರೋಗಿಸಲ್ಕೊಟ್ಟು ಜೈ
ನರ ಪುಷ್ಪಾಂಜಲಿಯೆಂಬ ಪಾಪರಚನಾ ಪ್ರಾರಂಭಮಮಂ ಕೇಳ್ದು ನಿಂ
ದುರಿದೆದ್ದಾರುಹತಪ್ರತಾಪಮನದಂ ಸಂಹಾರಮಂ ಮಾಡಿ ಶಂ
ಕರಭಕ್ತಂ ಕಲಿ ಬೊಮ್ಮತಂದೆ ಮೆರೆದಿರ್ದಂ ಶೈವಸಾರೋದಯಂ ॥

ಇಂತು ಕೋವೂರ ಬೊಮ್ಮಯ್ಯನೊಪ್ಪುತ್ತಮಿರೆ
ಕಂತುಮದಹರನ ಶರಣರ ಗೋಷ್ಠಿ ಪರ್ವುತಿರೆ
ಸುಖದಿಂ ಪುರಾತನರ ಗೀತದೊಳು ಬಾಳುತಂ
ಮುಖವಲರ್ದು ಭಕ್ತಿರಸ ಸಿಂಧುವಿನೊಳಾಳುತಂ
ಗೀತಕ್ಕೆ ಮೆಚ್ಚಿ ಮೆಚ್ಚುಗಳನೊಲಿದೀವುತಂ
ಓತು ನೂತನವಸ್ತ್ರ ಕನಕದಿಂ ತಣಿಪುತಂ
ಶರಣರ ಪದಂಗಳಂ ಬಿಗಿಯಪ್ಪಿ ತಣಿವುತಂ
ಹರಭಕ್ತಿಯುಕ್ಕಿ ಶಿವಮರುಳಾಗಿ ಕುಣಿವುತಂ
ಪುಳಕದಿಂ ಪೊಣ್ಮುತಂ ಬೆಮರಿಂದೆ ನೆನೆವುತಂ
ಬೆಳೆವ ಗದ್ಗದದಿಂದೆ ಮರೆದು ಸುಖಿಯಾಗುತಂ ೧೦
ಆನಂದ ಜಲವೊಸರಲಟ್ಟಹಾಸಂ ನಿಮಿರೆ
ನಾನಾವಿಧದ ಸಾತ್ವಿಕ ಪ್ರಸರವುಣ್ಮುತಿರೆ

ಇಂತಿರಲು ಮುದ್ರಿಸಿದ ಭಕ್ತಿ ಬೀಳ್ತಪ್ಪಂತೆ
ಕಂತುಹರನೇಕನಿಷ್ಠೆಯ ಸುತ್ತು ಬೀಳ್ವಂತೆ
ನಡುವೆ ಬಿದ್ದುದು ನಂದಿಯುಂಡಿಗೆಯ ರಾಯಸಂ
ಮೃಡನ ಸಮ್ಮತಿ ಹರನ ಕಾರುಣ್ಯ ರಾಯಸಂ

ಇರೆ ಕಂಡು ನಿಷ್ಠೆಯಂ ತಲೆಗೇರಿಪಂದದಿಂ
ಹರನ ಬೆಸನಂ ಹೊತ್ತು ನಿತ್ತರಿಸುವಂದದಿಂ
ರಾಯಸವನೆತ್ತಿ ಮಸ್ತಕದ ಮೇಲಿರಿಸುತಂ
ರಾಯ ಕೋವೂರ ಬೊಮ್ಮಯ್ಯ ನಲಿದಾಡುತಂ
ಓದಿಸಿದನಾ ರಾಯಸವನಲ್ಲಿ ಭೋಂಕೆನಲು
ಓದಿದಂ ಗಣಕ ನರಪನ ಮುಂದದೆಂತೆನಲು
ತ್ರ್ಯಂಬಕಂ ಶಶಿಧರಂ ಸ್ಮರಹರಂ ಪುರಹರಂ
ಅಂಬುಧಾರಾ ರಾಮನಾಥನೊಲವಿಂ ಕರಂ
ಕೋವೂರ ಬೊಮ್ಮಯ್ಯನೊಲಿದು ಬರ್ಪುದು ನಾಳೆ
ಈ ವೋಲೆಗಂಡಾಕ್ಷಣಂ ಬರ್ಪುದುಬ್ಬೇಳೆ
ವೀರಮಾರ್ಗದಿ ಮೆರೆದು ಮುನ್ನೂರ್ವರುಂ ಸಹಿತ
ಧಾರುಣಿಗಿದದ್ಭುತವೆನಲ್ಕೆ ಬಪ್ಪುದು ವಿದಿತ
ಎಂದಿರಲ್ಕೆದ್ದು ಬಾಹಾಸ್ಫಾಳನಂ ಮಾಡಿ
ಸಂದಣಿಪ ಗಣಸಮೂಹದ ವದನಮಂ ನೋಡಿ
ನೀಗಿದೆಂ ಸಂಸಾರದುಃಖಮಂ ದುರಿತಮಂ
ಹೋಗಲೊದೆದೆಂ ಭೋಗವನದ ಸಂಸಾರಮಂ
ಬದುಕಿರ್ದೆಂ ಗುರುವಿಂದೆ ಶರಣ ಸುರತರುವಿಂದೆ
ಬರ್ದುಕಿದೆಂ ಭಕ್ತರೊಡತಣ ಸಂಗದಿರವಿಂದೆ
ಕಟ್ಟುಪ್ಪರದ ಗುಡಿಯನೆತ್ತಿದಾತುರದಿಂದೆ
ಮೆಟ್ಟಿ ನಿಷ್ಠೆಯ ಮೊದಲ ಬಟ್ಟೆಯಂ ಭರದಿಂದೆ
ಎಂದು ನುಡಿವುತೆ ಮಲ್ಲಿದೇವನಂ ಕರೆದಲ್ಲಿ
ಅಂದು ಪೇಳ್ದಂ ಬುದ್ಧಿಗಳನತುಳಬಲನಲ್ಲಿ
ಶಿವಲಿಂಗದರ್ಚನೆಯನಾವಗಂ ಮಾಡುವುದು
ಶಿವನನೆಲ್ಲಂದದಿಂ ಮನದೊಳಗೆ ಕೂಡುವುದು
ಭಸಿತಮಂ ಪಂಚಾಕ್ಷರಿಗಳನಾದರಿಸುವುದು
ಎಸೆವ ರುದ್ರಾಕ್ಷಿಗಳನೊಲುಮೆಯಿಂ ಧರಿಸುವುದು
ಶಿವಪುರವನಳ್ಕರಿಂ ಪ್ರೇಮದಿಂ ಪಾಲಿಪುದು
ಶಿವಭಕ್ತವಚನಮಂ ಭಕ್ತಿಯಿಂದಾಲಿಪುದು
ಇದು ನಿನಗೆ ನಿಸ್ತಾರವಿದು ನಿನಗೆ ಶಾಶ್ವತಂ
ಇದು ನಿನಗೆ ಸುಖನಿಕರ ಇದು ನಿನಗೆ ಅತಿಹಿತಂ

ಎಂದಾ ಕುಮಾರನಂ ಹರುಷದಿಂದಿರಿಸುತಂ
ಬಂದ ಶಿವಭಕ್ತರುತ್ಸವಿಸಲಾದರಿಸುತಂ

ಕೆಲಬಲದೊಳೊಸೆದು ಮುನ್ನೂರ್ವರೊಡೆಯರ್ಬರಲು
ನಲಿನಲಿದು ನಡುವೆ ತಾನೊಲುಮೆಯಿಂ ನಡೆತರಲು
ಕರೆವ ಕಹಳೆಗಳೊಳಗೆ ಹೊಯ್ವ ದುಂದುಭಿಯೊಳಗೆ
ನೆರೆದ ಧವಳಚ್ಛತ್ರ ಸಂತತಿಯ ನೆಳಲೊಳಗೆ
ಚಾಮರಂ ಸಿಗುರಿಗಳಿಕ್ಕೆಲದೊಳಾಡುತಿರೆ
ಭೂಮಿ ಬೆಸಲಾದಂತೆ ಪೆರ್ಬಲಂ ನಡೆವುತಿರೆ
ಕರಿ ತುರಗ ರಥ ಪದಾತಿಗಳ ಸಂದಣಿಯೊಳಗೆ
ಹರಭಕ್ತರಿಕ್ಕೆಲದೊಳೆಸೆವ ತಿಂಥಿಣಿಯೊಳಗೆ
ಬರುತಿರ್ದನಮ್ಮಮ್ಮ ಕೋವೂರ ಬೊಮ್ಮಯ್ಯ
ಅರರೆ ಕಲಿ ಕೋವೂರ ಬೊಮ್ಮಯ್ಯನೆಮ್ಮಯ್ಯ
ಐತರುತ್ತಂಬುಧಾರಾ ರಾಮನಾಥನಂ
ಮೈ ತೀವಲಪ್ಪಿಕೊಂಡಾನಂದಯೂಥನಂ
ತಿರುಗಿ ಬರುತಿರಲಲ್ಲಿ ತವಗವಿರ್ದುದು ಮುಂದೆ
ಸುರರಂಜಿ ಭೀತಿಗೊಳುತಿರ್ಪ ಮೇಳೆಯದಿಂದೆ
ಮಾರಿ ತಲೆಗೆದರಿದಂತೊಪ್ಪಿರ್ಪ ಭವನದಿಂ
ವೀರಘಂಟಾ ಠಣತ್ಕಾರಸಂದೋಹದಿಂ
ನೆರೆದ ಬತ್ತೀಸಾಯುಧ ಪ್ರತಾನಂಗಳಿಂ
ಉರಿವರಿದು ನೆಗೆವ ವೀರರ ಸಂಭ್ರಮಂಗಳಿಂ
ಘುಳು ಘುಳಿಸುತಿರ್ಪ ತವಗವನೊಪ್ಪದಿಂದೇರಿ
ತೊಳ ತೊಳಪ ಸಿಂಹಾಸನದ ಮೇಲೆ ತಾಂ ಮೀರಿ
ಕುಳ್ಳಿರ್ದು ಕೋವೂರ ಬೊಮ್ಮಯ್ಯನೊಪ್ಪುತಿರೆ
ಬಳ್ಳಿವರಿದಡರ್ವಾಯುಧದ ಕಾಂತಿ ಮಿಂಚುತಿರೆ
ನೋಡುತಂ ಕರೆ ವೀರಸಂತತಿಯನೆನುತಿರಲು
ಮೂಡುವಾದಿತ್ಯನಂದದಿ ಮೀರಿ ಬರುತಿರಲು
ಮೈಯೊಳುದ್ಧೂಳಿಸಿದ ಭಸಿತ ಪ್ರಕಾಶದಿಂ
ಕೈಯೊಳಳವಡಿಸಿದ ಕಠಾರಿಯ ವಿಳಾಸದಿಂ
ರುದ್ರಾಕ್ಷಿಗಳ ಬಾಹುಬಳೆ ಕಂಠಮಾಲೆಯಿಂ
ರುದ್ರನುತ್ಸವಿಪ ವೀರರ ಮಹಾಲೀಲೆಯಿಂ
ಬಾವನ್ನ ವೀರರಂ ಕಾಲ ಹಾಹೆಯೊಳಿಡುವ
ದೇವನಂ ಮೂದಲಿಸಿ ಕೈಯೆತ್ತಿ ಬೊಬ್ಬಿಡುವ
ನೆರೆದ ಶರಭನ ಹಿಂಡು ಘುಡುಘುಡಿಸುತಿಪ್ಪಂತೆ
ಹರನ ವೀರಂ ಬೇರೆ ಬೇರೆ ರೂಪಾದಂತೆ

ವೀರಭದ್ರನ ಗಣಂ ವೀರಮಂ ಮಾಳ್ಪಂತೆ
ಓರಂತೆ ಗರ್ಜಿಸುವ ಸಿಡಿಲ ಸಂದಣಿಯಂತೆ

ಭಾವಿಸಲು ತಮತಮಗೆ ಮುನ್ನೂರ್ವರುಂ ಬಂದು
ಕೋವೂರ ಬೊಮ್ಮಿತಂದೆಗೆ ಭಾಷೆಗೊಡುತಂದು
ಅವಧರಿಪುದೆಮ್ಮೆಮ್ಮ ಭಾಷೆಗಳನೆಲೆ ದೇವ
ಶಿವಲೋಕಮಂ ಸೂರೆಗೊಳುವ ಛಲಮಂ ದೇವ
ಮನದೊಳೆಳ್ಳನಿತಪ್ಪ ಲೋಲುಪ್ತಿಯುಳ್ಳಡಂ
ತನುವಿನಾಸೆಗೆ ಸಾರ್ದು ಕೈಮೆಲ್ಲನಾದಡಂ
ಅತ್ತತ್ತ ಸಂಚಲಿಸಿ ನೋವೇರಿ ನಿಂದಡಂ
ನೆತ್ತಿಯಲಗಂಗಾಲ್ಗೆ ಮೊನೆ ಮೂಡದಿರ್ದಡಂ
ಹೂತ ಮುತ್ತದ ತೆರದೆ ದೇಹವಿರದಿರ್ದಡಂ
ಭೂತೇಶ್ವರಂಗೆ ಭೀತಿಯ ಮಾಡದಿರ್ದಡಂ

ಎಂದು ಕಡುಗಲಿತನದ ನುಡಿಗಳಂ ನುಡಿವುತಂ
ನಿಂದು ಬುಬುವೆನುತ ಹೊಸ ಬಾಳ್ಗಳಂ ಜಡಿವುತಂ
ಇರೆ ವೇಗವಲ್ಲಿ ನಿಸ್ಸಾಳ ಭೇರೀರವಂ
ಪರಿಪರಿಯ ಬಿರಿದೆತ್ತಿ ಕರೆವ ಕಹಳಾರವಂ
ನಡುವೆ ತೊಡಗಿದುದು ವೀರರ ಕೆಲಸವಮ್ಮಮ್ಮ
ಪೊಡವಿಯೊಳಗುಳ್ಳ ಧೀರರು ನಡುಗಲಮ್ಮಮ್ಮ
ಮೊಳೆಯ ಹಾವುಗೆಗಳಂ ಮೆಟ್ಟಿ ದುಮ್ಮಿಕ್ಕುತಂ
ಕಳಿದವಂ ಮೀರಿ ಪದಖಂಡವಂ ಮಾಡುತಂ
ಕಡಿದ ಕಾಲೊಳಗೆ ನಾರಾಚವಂ ಬೆಟ್ಟುತಂ
ಅಡಿಗೆ ಮುಂದಡಿಯಿಟ್ಟು ಎತ್ತುತಂ ನಡೆವುತಂ
ಬಂದು ಶಿವಲಿಂಗಕ್ಕೆ ಮಜ್ಜನಕ್ಕೆರೆವುತಂ
ನಿಂದು ಕರುಳಂ ತೆಗೆದು ಕೊರೆಕೊರೆದು ತರಿವುತಂ
ಹರುಷದಿಂ ಹರನ ಪುರಹರನ ಸಿರಿಮುಡಿಗೊಟ್ಟಿ
ಕರುಳಿಂದವಿಂಡೆದಂಡೆಗಳನೊಲವಿಂ ಕಟ್ಟಿ
ತಿರುಗಿದರ್ವೀರರಾರುತ್ತ ಬೊಬ್ಬಿಡುತಲ್ಲಿ
ಧರಣೀಶ ಬೊಮ್ಮಿತಂದೆಗೆ ಪೊಡಮಡುತ್ತಲ್ಲಿ
ಸುರಗಿಯಿಂದಿರಿದುಕೊಳುತಂ ಕಿತ್ತು ಸೆಳೆವುತಂ
ಪರಶುವಿಂ ಕಡಿದುಕೊಳುತಂ ಕೆಲಕ್ಕಿಕ್ಕುತಂ
ಎತ್ತಿದ ಕಠಾರಿಯಿಂದೊಪ್ಪಿ ನಲಿದುರ್ಬುತಂ
ಸುತ್ತಿ ಕರಗಸದಿಂದೆ ಕೊರೆದುಕೊಂಡಾಡುತಂ

ಸರಳಿಂದೆ ಹೊಸೆದುಕೊಳುತೆಣ್ದೆಸೆಗೆ ಮಸಗುತಂ
ಸುರಿವ ರಕ್ತಾಂಬುವಂ ಬಳಿದು ಮಿಗೆ ಚಲ್ಲುತಂ
ಇಟ್ಟಿಯಿಂದಿರಿದು ಚಕ್ರದೊಳಿಟ್ಟುಕೊಳುತಲ್ಲಿ
ಪಟ್ಟೆಹವನೊಳಗೆ ಪೊಗಿಸುತ್ತೆ ಕರವಾಳಲ್ಲಿ
ಅಮ್ಮಮ್ಮ ಕೂರಹಿಂ ಕೊಯ್ದು ಬಿಸುಡುತ್ತಲ್ಲಿ
ಚಿಮ್ಮುಟಗಳಿಂದಲಿರಿದಿರಿದು ಚಿಮ್ಮುತ್ತಲ್ಲಿ
ಚಿಟಿಚಿಟಿಲೆನಲು ಶಿರನರಂಗಳಂ ಪರಿವುತಂ
ಚಿಟಿಲೆನಲು ದೇಹದೆಲುಗಳನಂದು ಮುರಿವುತಂ
ಅಂಗವಿಸಿ ನೆಗೆವುತಂ ಹಿಂಗಿ ಮತ್ಸರಿಸುತಂ
ಜಂಗಂಳಂ ಜಾರುತಂ ರಿಂಗಣಂಗುಣಿವುತಂ
ಜಾರಿ ರಕ್ತದ ಹೊನಲೊಳಗೆ ಬಿದ್ದು ಕೈಯೂರಿ
ಮೀರಿಯೆದ್ದೆದ್ದು ಬಿದ್ದಿದ್ದು ಬಲ್ಪಂ ತೋರಿ
ನೋಡಲಾ ದಾರುಣವದೆಳ್ನೆನಿತ್ತಿಲ್ಲದಿರೆ
ನೋಡೆ ರಂಧ್ರಂ ಶರೀರಂಗಳೆಲ್ಲೆಡೆಯೊಳಿರೆ
ಅಲ್ಲಿ ಬತ್ತೀಸಾಯುಧಂ ಬೇಸರುತ್ತಮಿರೆ
ಬಿಲ್ಲಾಳ್ಗಳಂಜದಳ್ಕದೆ ಬೊಬ್ಬಿಡುತ್ತಮಿರೆ
ಕಂಡು ಕೋವೂರ ಬೊಮ್ಮಯ್ಯನತಿ ಕೌತುಕಂ
ಗೊಂಡು ಹೊಗಳುತ್ತೆ ತಲೆದೂಗೆ ಪುಣ್ಯಾಧಿಕಂ
ತನ್ನ ಕೆಲಸಕ್ಕೆಂದು ಕರವಾಳ್ಗೆ ಕೈನೀಡೆ
ಉನ್ನತಾನಂದನಿಧಿ ಜಡಿಜಡಿದು ನೆರೆ ನೋಡೆ
ಬೊಬ್ಬಿಡಲು ಬೊಬ್ಬಿಟ್ಟುದಾಶಾಪ್ರತಿಧ್ವಾನ
ಉಬ್ಬಲುಬ್ಬಿತ್ತು ಕಡುಪಿಂ ವೀರಸಂತಾನ
ಅಗಳಾ ಪದ ಖಂಡನಂ ಮಾಡುತಿರ್ಪಲ್ಲಿ
ರಾಗದಿಂದೆರಡುಮುಂ ಕಡಿದು ಬಿಸುಡಲ್ಕಲ್ಲಿ
ಕೆಲದ ಕಾಲುಳಿದ ಸವಣರನಟ್ಟಿ ಕೊಲುತಲ್ಲಿ
ಬಲದ ಪದವಾ ಭಕ್ತರಂ ಬಲಂಗೊಳುತಲ್ಲಿ
ಕೊಯ್ದು ಖಂಡಂ ಬೇರೆ ಬೇರೆ ರೂಪಾಗುತಿರೆ
ಕೈದುಗಳ ಬೆಳಗಿನೊಳು ಪುಷ್ಪಕಂ ಹೊಳೆವುತಿರೆ

ಬಂದ ಪುಷ್ಪಕದೊಡನೆ ಮುನ್ನೂರು ಪುಷ್ಪಕಂ
ನಿಂದು ಸಂದಣಿಸುತಿರೆ ಕಂಡ ವೀರಾಧಿಕಂ
ಬೇರೆ ಬೇರೆಲ್ಲರಂ ಪುಷ್ಪಕದೊಳಿರಿಸುತಂ
ಹಾರಿದಂ ಗಗನವಳಯಕ್ಕೆ ವಿಸ್ತರಿಸುತಂ

ಪೂಮಳೆಗಳೊಳಗೆ ದುಂದುಭಿಗಳ ಧ್ವನಿಯೊಳಗೆ
ಏಮಾತೊ ಬಿರಿದೆತ್ತಿ ಕರೆವ ಕಹಳೆಗಳೊಳಗೆ
ನಡೆತಂದು ನಂದೀಶ್ವರನ ಬಾಗಿಲೊಳಗಿಳಿದು
ಪೊಡವಂಟು ಮೈಯಿಕ್ಕಿ ಕಿಂಕರತೆಯಂ ತಳೆದು
ಮುನ್ನೂರ್ವರುಂ ಸಹಿತಂ ಪದತಳಕ್ಕೆರಗಿರಲು
ನಾನಾ ಮುಖದ ವೀರವೃತ್ತಿ ಮೈ ಸಂದಿರಲು
ಕಂಡು ಶಿವನೆತ್ತಿದಂ ಬೊಮ್ಮಿತಂದೆಯನಲ್ಲಿ
ತಂಡ ತಂಡದ ವೀರಕುಲಕೆ ಕರುಣಿಸುತಲ್ಲಿ
ನೋಡು ನೋಡೆಲೆ ವೀರಭದ್ರ ಕಲಿಗಳ ನಿಲವ
ನೋಡು ನಂದೀಶ ತನುಪೂಜೆ ತಾನೆನ್ನೊಲವ
ವೀರನಿಧಿ ಬಂದನೀ ಕೋವೂರ ಬೊಮ್ಮಯ್ಯ
ಆರೈವಡರಿದು ನಿಜಕಲಿತನಂ ಕೇಳಯ್ಯ
ಎಂದು ಕೊಂಡಾಡುತಂ ಗಣಕುಲಕೆ ತೋರುತಂ
ಬಂದವರ್ಗಳಂ ರುದ್ರಲೋಕದೊಳಿಗಿರಿಸುತಂ
ಕೋವೂರ ಬೊಮ್ಮಿತಂದೆಗೆ ಪರಮನರ್ತಿಯಿಂ
ಈವುತಂ ಗಣಪದವಿಯಂ ಮಾನ್ಯವೃತ್ತಿಯಿಂ
ಸರ್ಪಭೂಷಣನಪ್ರತಿಮರೂಪನೊಪ್ಪಿದಂ
ದರ್ಪಕದ ಪರಸಮಯವನವಹ್ನಿಯೊಪ್ಪಿದಂ
ತ್ರಿಣಯನಂ ತ್ರಿಪುರಹರನೆ[ಳೆ]ಯಗಲ[ನೊ]ಪ್ಪಿದಂ
ಗಣಕುಲಾಸ್ಥಾನ ಮಧ್ಯಜ್ಯೋತಿಯೊಪ್ಪಿದಂ
ಶಿವಭಕ್ತಕಮಲವನ ವಿಮಲರವಿಯೊಪ್ಪಿದಂ
ಶಿವಭಕ್ತನವನವ ಪ್ರೇಮನಿಧಿಯೊಪ್ಪಿದಂ
ಗಂಭೀರವಾರಾಶಿ ಕಾರಣಿಕನೊಪ್ಪಿದಂ
ಶಂಭು ಹಂಪೆಯ ವಿರೂಪಾಕ್ಷನಿಂತೊಪ್ಪಿದಂ ೧೬೮-೩೯೦

ವೀರತ್ವದಿ ಮೆರೆದಾ ಕೋ
ವೂರರಸಂ ಬೊಮ್ಮಿತಂದೆಗಳ ಮಗನಿವನೆಂ।
ದೋರಂತೆ ಕರುಣಿಸೆನಗೆಲೆ
ಕಾರುಣ್ಯಾಂಬೋಧಿ ಹಂಪೆಯ ವಿರೂಪಾಕ್ಷಾ ॥

# ೧೨. ಮುಸುಟೆಯ ಚೌಡಯ್ಯನ ರಗಳೆ

ಬಿಸುಗಣ್ಣಂ ಕೆಂಜೆಡೆಯಂ
ದೆಸೆಯುಡಿಗೆಯ ವೀರ ಹಂಪೆಯ ವಿರೂಪಾಕ್ಷಂ ।
ವಸುಧಾತಳದೊಳ್ಮೆರೆದಂ
ಮುಸುಟೆಯ ಚಾವುಂಡರಾಯನಂ ನಲವಿಂದಂ ॥

ಬಡಗಣ ದಿಶಾಭಾಗದೊಳಗೊಂದು ಶಿವಪುರಂ
ಮೃಡಭಕ್ತಿ ನೆಲೆಗೊಂಡು ಮೆರೆವುದು ಸವಿಸ್ತರಂ
ಮುಸುಟೆಯೆಂಬುದು ಪುರದ ಪೆಸರದರೊಳೊಪ್ಪುವಂ
ಮುಸುಟೆಯ ಚವುಂಡರಾಯಂ ಸುಖವನಪ್ಪುವಂ
ಆತನ ಶಿವಾಚಾರಮಂ ಪೇಳಲೆನ್ನಳವೆ
ನೂತನಂ ಧರಣೀತಳಕ್ಕೆ ಬಣ್ಣಿಸಲಳವೆ
ಶರಣಾರ್ಥಿಯೆನುತೆ ಪುಟ್ಟಿದನಮಮ ಜಂಗಮಕೆ
ಶರಣಾರ್ಥಿಯೆನುತೆ ಬೆಳೆದಂ ಹೊಸತು ಕಲಿಯುಗಕೆ
ಜಂಗಮದ ಪದರೇಣುವಿಡಿದು ತನುವಾದಂತೆ
ಜಂಗಮಸ್ನೇಹವೇ ಜೀವ ತಾನಾದಂತೆ
ಜಂಗಮದ ನೋಟವೇ ತನಗೆ ಕಣ್ಣಾದಂತೆ
ಜಂಗಮಸ್ತೋತ್ರವೇ ಜಿಹ್ವೆಯಾಗಿರ್ದಂತೆ
ಜಂಗಮಕ್ಕೆಂದವಯವಂಬಿಡಿದು ನಡೆವಂತೆ
ಲಿಂಗ ಜಂಗಮಭಕ್ತನೊಪ್ಪುತಂ ತಾನಿಂತೆ
ಕನಸಿನೊಳು ಮನಸಿನೊಳು ಶರಣಾರ್ಥಿಯೆಂದೆನುತೆ
ನೆನಹಿನೊಳ್ ನಿಷ್ಠೆಯೊಳ್ ಶರಣಾರ್ಥಿಯೆಂದೆನುತೆ
ನಡೆವಲ್ಲಿ ನುಡಿಯಲ್ಲಿ ಶರಣಾರ್ಥಿಯೆಂದೆನುತೆ
ಕೊಡುವಲ್ಲಿ ಕೊಂಬಲ್ಲಿ ಶರಣಾರ್ಥಿಯೆಂದೆನುತೆ
ಕಂಡಡಂ ಕಾಣದಡೆ ಶರಣಾರ್ಥಿಯೆಂದೆನುತೆ

ತಂಡತಂಡದ ನುಡಿಯ ಶರಣಾರ್ಥಿಯೆಂದೆನುತೆ
ಇರುಳುವುಂ ಪಗಲುವುಂ ಶರಣಾರ್ಥಿಯೆನುತಿರ್ಪ
ಶರಣಾರ್ಥಿ ಶರಣಾರ್ಥಿ ಶರಣಾರ್ಥಿಯೆನುತಿರ್ಪ
ನುಡಿಯೊಳಗೆ ಪಂಚಾಕ್ಷರಿಯ ಪದಂ ನೆಲಸಿತ್ತು
ನುಡಿಯೊಳಗೆ ಮೃಡನ ರೂಪಳ್ಕರಿಂ ನೆಲಸಿತ್ತು
ಶಿವನ ಸಾಮರ್ಥ್ಯವಾ ನುಡಿಯೊಳಗೆ ಬೆಳೆಯಿತ್ತು
ಭವನ ತೇಜಂ ಸತ್ಯವಚನದೊಳ್ನೆಲಸಿತ್ತು

ಇಂತು ಸೇರುತ್ತವಿರುತಿರ್ಪೊಂದು ದೇವಸದೊಳು
ಕಂತುವೈರಿಯ ಮಜ್ಜನಕ್ಕೆ ಸಂತೋಷದೊಳು
ಮುಸುಟೆಯ ಚವುಂಡರಾಯಂ ಹರುಷದಿಂ ಬಂದು
ಎಸೆವ ನಿರ್ಮಳ ಸರೋವರ ಮಧ್ಯದೊಳ್ನಿಂದು
ಹೊಂಗೊಡಂಗಳೊಳಗ್ಘವಣಿಯನೊಲವಿಂ ತೀವಿ
ಸಿಂಗರಿಸಿ ಬಾಸಣಿಸಿ ಕಡುನೇಹದಿಂದೋವಿ
ಹೂವಿನ ಕರಂಡಗೆಯ ಕಕ್ಷದೊಳ್ಕೈಗೊಳಿಸಿ
ಭಾವಕದೊಳಡಿಯಿಟ್ಟು ಬರುತಮಿರೆ ಸಡಗರಿಸಿ
ಬಂದೂರ ಬಾಗಿಲಂ ಭರದಿಂದೆ ಪೊಗುವಲ್ಲಿ
ಸಂದಣಿಸಿ ಬರುತಿರ್ದುದೊಂದು ಕೇಳಿಕೆಯಲ್ಲಿ
ಮುರಜವಾವುಜದ ಗಿರುಗಟೆಯ ನಾದಂಗಳಿಂ
ಶರಣ ಸಂತಾನದ ಶಿವಪ್ರಘೋಷಂಗಳಿಂ
ಭಕ್ತತತಿ ಹೊತ್ತು ನಿತ್ತರಿಸಿದ ವಿಮಾನದಿಂ
ಭಕ್ತನಂ ರಜತಗಿರಿಗೈಯ್ದಿಪನುಮಾನದಿಂ
ಬರುತಿರೆ ವಿಮಾನದೊಳಗಣ ಭಕ್ತನಂ ಕಂಡು
ಅರರೇ ಮುಸುಂಟೆಯ ಚವುಂಡರಾಯಂ ಕಂಡು
ಶರಣಾರ್ಥಿ ದೇವ ಶರಣೆಂದು ಕೈಯಂ ಮುಗಿಯೆ
ಶರಣು ಗಿರಿಜಾವರನೆ ಕರುಣಿಸೆನುತಂ ನಲಿಯೆ
ನೆರೆದ ಶಿವಭಕ್ತರೆಲ್ಲರ್ನೋಡಿ ಬೆರಗಾಗೆ
ನಿರುತ ನಿರ್ಮಳಚಿತ್ತನಂ ಸಾರೆವರೆ ಹೋಗೆ
ಹೋಗೆನಾ ಶಿವಭಕ್ತನಿಳಿವನಲ್ಲದಡಳಿವೆ
ಬೇಗಲಿಳಿಪುವುದಿಳಿಪದಿರಲೀಗ ನಾನಳಿವೆ
ಎಂದಾಗ ಚಂದ್ರಮೌಳಿಗೆ ಬಿನ್ನಪಂಗೈಯೆ
ಸಂದ ಚಿತ್ತದೊಳಂ ಸದಾಶಿವಂ ದಯೆಗೈಯೆ
ಭರದಿಂದೆ ಚೇತನಂ ತೀವಿ ಮೈಕೈಯೊಗೆಯೆ

ತರತರದ ಕಟ್ಟುಗಳು ಚಟ ಚಟಿಲೆನುತೆ ಪರಿಯೆ
ಶಿವಮಸ್ತು ಎನುತಾ ವಿಮಾನದಿಂದಿಳಿದು ಬರೆ
ಶಿವಭಕ್ತರೆಲ್ಲರುಂ ಕೌತುಕವೆನುತ್ತೆ ಬರೆ
ಶರಣರೆಲ್ಲುಘೆ ಚಾಂಗು ಬೊಲ್ಲೆನುತೆ ಹೊಗಳುತಿರೆ
ಪುರಜನಂ ಪರಿಜನಂ ನೆರೆದು ಕೊಂಡಾಡುತಿರೆ
ಇದು ನೇಮವಿದು ನೇಮಯೆಂದನಾ ನಿಚ್ಚಟಂ
ಸದಮಳಂ ಮುಸುಟೆಯ ಚವುಂಡರಾಯಂ ದಿಟಂ
ಕೈಕೊಂಡನಾ ನೇಮವಂ ಜಗಂ ಬೆರಗಾಗೆ
ಏಕನಿಷ್ಠೆಗೆ ಭಕ್ತರೆಲ್ಲ ಹರುಷಿತರಾಗೆ
ಅಂದಿಂದ ಕಂಡ ಜಂಗಮವನೊಲಿದೆತ್ತುತಂ
ಇಂದುಧರನಂಘ್ರಿಯಂ ಭಕ್ತಿಯಿಂ ಮುತ್ತುತಂ
ಇರುತೊಂದು ದಿನವಗ್ಘವಣಿ ಹೂಗಳಂ ಕೊಂಡು
ಬರುತಂ ವೃಷಭ ದೀರ್ಘನಿದ್ರೆಯೊಳಿರಲ್ಕಂಡು
ಬಸವನ ಶರೀರಕ್ಕೆ ನೋವುಂಟೆ ಸಾವುಂಟೆ
ಬಸವನಿಂತಿರ್ಪುದಂ ಸೈರಿಸುವರಿಂತುಂಟೆ
ಎಂದು ಬಸವಯ್ಯ ಬಸವನಯ್ಯ ಏಳೆಂದೆನಲು
ಮುಂದೆ ಮುರಿದೆದ್ದು ದಿಟ್ಟಿಸಿ ಭೋಂಕೆನಲು
ಮುಸುಟೆಯ ಚವುಂಡರಾಯನ ಮೇಲೆ ಮೊಗವಿಟ್ಟು
ಬಸವನಿರೆ ಭಕ್ತರೆಲ್ಲಂ ಕೌತುಕಂಬಟ್ಟು
ಕೊಂಡಾಡಿ ಕುಣಿದಾಡಿ ಗುಡಿಗಟ್ಟಿ ಮೆರೆವುತಿರೆ
ಮುಂಡಾಡಿ ತೆಗೆದಪ್ಪಿ ಬಿಗಿಯಪ್ಪಿಯೊಪ್ಪುತಿರೆ
ನೇಮದೊಳಗಿಂತಿದುವೆ ನೇಮವೆನಗಿನ್ನೆಂದು
ಸೋಮಧರನಣುಗನಾನಂದದಿಂ ನಡೆತಂದು
ಬಸವನಂ ಜಂಗಮವನೆತ್ತುತ್ತವಿರಲಲ್ಲಿ
ವಸುಧೆಯೊಳು ಶಿವಕೀರ್ತಿ ಪಲ್ಲವಿಸುತಿರಲಲ್ಲಿ
ಪಲಕೆಲವು ದೆವಸವಿಂತೀ ತೆರದೊಳೊಪ್ಪುತಂ
ನಲಿನಲಿದು ಶಂಕರನ ಭಕುತಿಯೊಳೆ ಹೆಚ್ಚುತಂ
ಲಿಂಗಮಂ ನೋಡುತಂ ಜಂಗಮಕೆ ಮಾಡುತಂ
ಸಂಗಸುಖಸಾರಾಯರಸದೊಳೋಲಾಡುತಂ

ಇರುತೊಂದು ದಿನವಗ್ಘವಣಿ ಹೂಗಳಂ ಕೊಂಡು
ಬರುತಿರಲ್ಮುಂದೆ ಮಕ್ಕಳುಗಳೊಬ್ಬುಳಿಗೊಂಡು
ಚಿಟ್ಟುಮುರಿಯಾಡುತಂ ತಮ್ಮೊಳೆಲ್ಲರ್ನೆರೆದು

ಇಟ್ಟಣಿಸಿ ತಂತಮ್ಮೊಳೊರ್ವರೊರ್ವರ ಕರೆದು
ಎರೆಗಳಂ ಹೆಚ್ಚಿಕೊಂಡಿತ್ತಂಡವೊಂದಾಗಿ
ಹರುಷದಿಂ ನಿಂದೆರಡು ಗೊತ್ತಿಂಗೆ ನೆಲೆಯಾಗಿ
ಅಲ್ಲಿ ಕುರುಹಿನ ದಿಣ್ಣೆಯದು ನಿಮಗೆ ಗೊತ್ತೆಂದು
ಇಲ್ಲಿ ಗೂಳಿಯ ಕಲ್ಲಿದೆಮಗೆ ನೆರೆ ಗೊತ್ತೆಂದು
ಮಾತಾಡೆ ಕೇಳ್ದನಪ್ರತಿಮಶರಣಂ ನೋಡ
ನೂತನಂ ಮುಸುಟೆಯ ಚವುಂಟರಾಯಂ ನೋಡ
ಎಲೆ ಮಕ್ಕಳಿರ ಕಲ್ಲ ಹೆಸರೆಂತದೆಂತೆನಲು
ನಲಿನಲಿದು ಪೇಳತೊಡಗಿದರಲ್ಲಿ ಭೋಂಕೆನಲು
ಹಿಂದೆ ಕೆಲವುಂ ಬರಿಸ ಸಂದೊಂದು ಗೂಳಿಯಂ
ತಂದು ನಿಕ್ಷೇಪಿಸಿದರಿಲ್ಲಿಯಾ ಗೂಳಿಯಂ
ಅಂದಿಂದದಿಂತು ಗೂಳಿಯ ಕಲ್ಲಿದೆಂದೆನಲು
ಸಂದಣಿಸಿ ಮಕ್ಕಳೆಲ್ಲಂ ತಪ್ಪದೆಂದೆನಲು
ಕೇಳ್ದಲ್ಲಿ ಮುಸುಟೆಯ ಚವುಂಡರಾಯಂ ನೊಂದು
ತಾಳ್ದ ಕಡುಗೋಪದಿಂ ಕ್ಷಣದೊಳೆತ್ತುವೆನೆಂದು
ನಿಮಗಲ್ಲ ಗೊತ್ತು ತಾನೆಮಗೆ ಗೊತ್ತೆಂದೆನುತೆ
ನಿಮಗಲ್ಲ ಮಕ್ಕಳಿರ ಮಾಣಿರೇ ನೀವೆನುತೆ
ಕಂಬಿಯಂ ನಿರ್ಮಳಸ್ಥಾನದೊಳೆ ಸೈತಿರಿಸಿ
ಇಂಬರಿವ ಭಕ್ತನತಿ ವೀರದೊಳ್ಸಡಗರಿಸಿ
ಎತ್ತುವೆಂ ಬಸವನಂ ಭುವನವೆಲ್ಲಂ ನೋಡೆ
ಎತ್ತದಿರ್ದಡೆ ಮಡಿವೆನಿಂದುಧರನಲ್ಲಾಡೆ
ಎನುತೆ ಕಿಗ್ಗಟ್ಟಿನಲಗಂ ಸರ್ರನುಚ್ಚುತಂ
ತೊನೆತೊನೆದು ಕೈಮಾಡಿ ಜಂಗಳಂ ಜಾರುತಂ
ನಡೆದು ಗೂಳಿಯಕಲ್ಲ ಹೆಸರ ಹತ್ತಿರೆ ಬಂದು
ಕಡುನಿಷ್ಠೆವಂತನುರವಣಿಸುತುಬುಬುಬುಯೆಂದು
ಒದರಿ ಕುಬುಜಿಸಿ ಕೂರ್ಮವಿಕ್ಕುತಂ ಪುಟನೆಗೆದು
ಅದಿರದಬ್ಬರಿಸಿ ಶರ್ವಂ ನಡುಗೆ ಬೊಬ್ಬಿರಿದು
ಎಲೆಲೆಲೆಲೆ ಬಸವ ಪೊರಮಡು ಪೊರಮಡೆನ್ನಾಣೆ
ಎಲೆಲೆ ಇನ್ನಿರ್ದಡೆ ಮಹೇಶ್ವರರ ಪಿರಿಯಾಣೆ

ಎಂಬ ನುಡಿಯಂ ಕೇಳ್ದು ನೆಲದೊಳಗೆ ಘುಡುಘುಡಿಸಿ
ಇಂಬುಗೊಂಡುರ್ವಿಯದಿರ್ದಲ್ಲಾಡೆ ಹೊಡಕರಿಸಿ
ವಸುಧೆ ಬಿಬ್ಬನೆ ಬಿರಿಯೆ ಪರಸಮಯಿಗಳ್ಸರಿಯೆ

ಕುಸಿದನ್ಯದೈವಂಗಳೆಲ್ಲ ಜಗ್ಗನೆ ಜರಿಯೆ
ನೆಲನದಿರೆ ಗುರುತರ ಘ್ರಾಣದಿಂ ಘುಡುಘುಡಿಸಿ
ಕೆಲೆವುತಂ ನೆಲ ಮೊಳಗಿದಂತಿರೆ ಠಣತ್ಕರಿಸಿ
ಕೆಲೆದ ದನಿಗಾ ನೆಲಂ ಬಾಯ್ದೆರೆದು ಬಟ್ಟೆಗುಡೆ
ನಲಿವುತಂತಿಂತೊಲೆದು ಪೊರಮಡಲ್ಚಿತ್ತವಿಡೆ
ಸ್ವರ್ಗ ಮೋಕ್ಷಾಂಘ್ರಿ ಪದಮುಗುಳ್ಗಳುಚ್ಚಳಿಪಂತೆ
ಭರ್ಗವಾಹನದ ತುದಿಗೋಡು ತೋರಲ್ಕಿಂತೆ
ನೋಡಲ್ ಸ್ವಯಂಭುಲಿಂಗದ ತೆರದಿ ಹಿಣಿಲೊಗೆಯೆ
ನೋಡಲ್ ಸಕಲಧರ್ಮಮುಖವಾದ ಮುಖವೊಗೆಯೆ
ಮಲೆವುತಂ ಕೆಲೆವುತಂ ಕೆಕ್ಕಳಿಸಿ ನೋಡುತಂ
ಒಲೆವುತಂ ನಲಿವುತಂ ಕೆಲನನಾರೈವುತಂ
ಬಸವನಮ್ಮಮ್ಮ ಭೂಮಿಯನೊಡೆದು ಮೂಡಿತ್ತು
ಮುಸುಟೆಯ ಚವುಂಡರಾಯನ ಮನಂಗೂಡಿತ್ತು
ಹರಕೀರ್ತಿ ಬಯಸಿ ಬಸವನ ರೂಹುಗೊಂಡುದೊ
ಶರಣಸಂಗದ ಪುಣ್ಯಫಲವಳವಿಗೊಂಡುದೊ
ಆಲೋಕದಮೃತಕ್ಕೆ ಕೋಡು ಮೂಡಿರ್ದುದೊ
ನೀಲಕಂಠನ ಬೆಳ್ಪು ತೊಲಗಿ ರೂಪಾದುದೊ
ಶಿವಭಕ್ತಿಗೋವಂ ಪಯನ ಮಾಡಬಂದುದೊ
ಶಿವಭಕ್ತನಂ ಮೆರೆಯಲೆಂದೆದ್ದು ನಿಂದುದೊ

ಎಂಬಂತೆ ನಿಂದಿರ್ದ ವೃಷಭರಾಜನನಂದು
ಇಂಬರಿವ ಮುಸುಟೆಯ ಚವುಂಡರಾಯಂ ನಿಂದು
ಆಹಾಹ ಪುಣ್ಯಪುರುಷನ ಸುಖಾಸನವೆ ಜಯ
ಓಹೋ ಸದಾಶಿವನ ಮೂರ್ತಿಗನಿಮಿಷನೆ ಜಯ
ಎನ್ನ ಶಿವಭಕ್ತರೆಲ್ಲರ ಪುಣ್ಯಮೂರ್ತಿ ಜಯ
ಚನ್ನ ವೃಷಭೇಂದ್ರ ಸಕಲೋತ್ಪತ್ತಿವರನೆ ಜಯ
ಊರ್ಜಿತ ಶಿವಾಚಾರದುನ್ನತಧ್ವಜನೆ ಜಯ
ನಿರ್ಜಿತೇಂದ್ರಿಯನೆ ಶೈವಾಗಮವ್ರಜನೆ ಜಯ
ನಿರ್ಮಳನೆ ಕರ್ಮರಹಿತನೆ ಧರ್ಮಮೂರ್ತಿ ಜಯ
[ಚರ್ಮಾವರಣ] ಹರನ ಹೊತ್ತಿರ್ಪಪಾರ ಜಯ
ಎಂದು ಹೊಗಳುತ್ತೆ ಹೊಮ್ಮುತ್ತೆ ಹಿಗ್ಗುತ್ತಗಿದು
ಹೆಂದದಾನಂದದಿಂದಂದು ಹೊಗಳುತೆ ನೆಗೆದು
ಬಸವನಂ ಬಿಗಿದಪ್ಪಿ ಬಸವನಂ ನಲಿದಪ್ಪಿ

ಎಸೆವ ಸಂತೋಷದಿಂ ಮತ್ತೆ ಮತ್ತಮರ್ದಪ್ಪಿ
ಇರೆ ಪುಷ್ಪವೃಷ್ಟಿಗಳ್ಸುರಿದವಾತನ ಮೇಲೆ
ಪರಿಪರಿಯ ದುಂದುಭಿಸ್ವನವುಣ್ಮಿದವು ಮೇಲೆ
ಆಗಳೈತಂದುದು ವಿಮಾನವಾಕಾಶದಿಂ
ರಾಗವಿರ್ಮಡಿಸಿ ಬಂದುದು ಮನೋವೇಗದಿಂ
ಬಂದ ಪುಷ್ಪಕದೊಳಗೆ ನಿಂದ ಬಸವಂ ಸಹಿತೆ
ಬಂದಲ್ಲಿ ಮುಸುಟೆಯ ಚವುಂಡರಾಜಂ ಸಹಿತೆ
ಏರೆ ಗಗನಕ್ಕೆ ನೆಗೆದುದು ದೇವಗಣಕುಲಂ
ಮೀರೆ ಬೆರಗಾಗಿ ನೋಡುತ್ತಿರ್ದುದೀ ನೆಲಂ
ನೋಡೆ ನಡೆತಂದು ರಜತಾದ್ರಿಯಂ ಪುಗಲಂದು
ನೋಡಿ ಶಿವನೆಯ್ದೆ ಬೆರಗಾಗುತಿರೆ ಪರಿತಂದು
ಮುಸುಟೆಯ ಚವುಂಡರಾಯಂ ಹರನ ಚರಣಕ್ಕೆ
ಎಸೆವ ಹರಿನಯನದಿಂದೊಪ್ಪುವ ಪದಾಬ್ಜಕ್ಕೆ
ವೇದಂಗಳರಸಿ ಕಾಣದ ಪಾದಯುಗಳಕ್ಕೆ
ವಾದಿಂಗತರ್ಕ್ಯವೆನಿಸುವ ಪಾದಯುಗಳಕ್ಕೆ
ಕೈಯೆತ್ತಿ ಕೈಯೆತ್ತಿ ಪೊಡಮಟ್ಟು ಪೊಡಮಟ್ಟು
ಮೈಯಿಕ್ಕಿ ಮೈಯಿಕ್ಕಿ ನೆರೆ ಸಂತಸಂಬಟ್ಟು

ಇರೆ ಸದಾಶಿವನೆತ್ತಿ ತಕ್ಕೈಸಿ ಮುಂಡಾಡಿ
ಶರಣಸಂತತಿಗೆ ನೆರೆ ಬೆಸಸುತ್ತೆ ಕೊಂಡಾಡಿ
ನೋಡ ನಂದೀಶ ಜಂಗಮವನೆತ್ತಿದರುಂಟೆ
ನೋಡ ನಿಕ್ಷೇಪ ಗೂಳಿಯನೆತ್ತಿದವರುಂಟೆ
ಎಂದು ಪುಳಕಿಸುತೆ ಮೂರ್ಧ್ನಿಘ್ರಾಣಮಂ ಮಾಡಿ
ಬಂದು ಬಸವನನಲ್ಲಿ ಸುರಭಿಗಳೊಡನೆ ಕೂಡಿ
ಮುಸುಟೆಯ ಚವುಂಡರಾಯಂಗೆ ಗಣಪದವಿತ್ತು
ಹೊಸ ಸಂತಸಂಗಳಂ ಮನದ ಮೊನೆಯೊಳು ಹೊತ್ತು
ದೇವನೊಪ್ಪಿದನಮೃತ ಭಾವನಿಂತೊಪ್ಪಿದಂ
ಭಾವಜಶರೀರವನದಾವ ಮುಖನೊಪ್ಪಿದಂ
ಗಜದನುಜ ಚರ್ಮಧರನಜ ಹರಣನೊಪ್ಪಿದಂ
ಭುಜಗಭೂಷಣನಮಲಭುಜನಿಕರನೊಪ್ಪಿದಂ
ಅಮ್ಮಮ್ಮ ಸಕಳಲೋಕೈಕ ಗುರುವೊಪ್ಪಿದಂ
ಎಮ್ಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಅಸಮಾಕ್ಷಂ ಕರುಣಂ ಮಿಗೆ
ಮುಸುಟೆಯ ಚವುಂಡರಾಯನವನೆಂದೆನಗಿಂ ।
ತೊಸೆದೀಗೆ ಭಕ್ತಿಯಂ ರಾ
ಜಿಸುವಹಿಧರನೆಮ್ಮ ಹಂಪೆಯ ವಿರೂಪಾಕ್ಷಂ ॥

❖❖

# ೧೩. ಸುರಿಗೆಯ ಚೌಡಯ್ಯನ ರಗಳೆ

ಸುರರಾಜರಾಜನಾನತ
ಸುರಧೇನು ಪುರಾರಿ ಹಂಪೆಯ ವಿರೂಪಾಕ್ಷಂ
ಗರಳಧರಂ ನೆರೆ ಮೆರೆದಂ
ಸುರಗಿಯ ಚಾವುಂಡರಾಯನಂ ಧಾರುಣಿಯೊಳ್ ॥

ಉತ್ತರದಿಶಾಭಾಗದೊಳಗೊಂದು ಶಿವಪುರಂ
ಬಿತ್ತರಿಸಲರಿದೆನಿಸುತಿರ್ಪುದುತ್ತಮಕರಂ
ಅಲ್ಲಿರ್ಪನೊರ್ವ ಶಿವಭಕ್ತನಾನಂದದಿಂ
ಸಲ್ಲೀಲೆಯಿಂ ಸಕಳ ಶಿವಭಕ್ತವೃಂದದಿಂ
ಸುರಗಿಯ ಚವುಂಡರಾಯಂ ತನ್ನ ನಾಮವದು
ಪುರಹರನನೊಲ್ಮೆಯಿಂದರ್ಚಿಸುವ ನೇಮವದು
ನಿಚ್ಚಟಂ ನಿರ್ಮಳಂ ನಿರುಪಮಂ ಕಡುಮಾನಿ
ಅಚ್ಚ ಶಿವಭಕ್ತನುತ್ಕೃಷ್ಟನೀಶಧ್ಯಾನಿ
ಮಾಡುವತಿ ನೇಮವದನೇನೆಂಬೆನಮ್ಮಮ್ಮ
ನೋಡಬಾರದ ಘಟಿತವಘಟಿತವದಮ್ಮಮ್ಮ
ಉದಯಸಮಯದೊಳೆಳ್ದು ನಿಳಯಮಂ ಪೊರಮಟ್ಟು
ಸದಮಳಮನಂ ಶಿವನ ಭಕ್ತಿಯಂ ಮುಂದಿಟ್ಟು
ಬಂದು ಕುಂಡದೊಳಂದು ಶುದ್ಧಾಂಗನಾಗುತಂ
ಸಂದಣಿಪ ಪೊದೋಂಟದೊಳಗೆ ಪೂಗೊಯ್ಯುತಂ
ಶರ್ವನಂ ಕಾಣ್ಬ ತವಕಂ ತನಗೆ ಮಿಗಿಲಾಗಿ
ಶರ್ವ ಭರವಸಚಿತ್ತದುತ್ತಮಾನನನಾಗಿ
ನಡೆತಂದು ಶಿವನಿಳಯಮಂ ಹರುಷದಿಂ ಪುಗಲ್
ಕಡುನೇಹದಿಂ ನೋಳ್ಪ ಜನದ ಸಂದಣಿ ಮಿಗಲ್

ಭರದ ಮೊನೆ ಮುರಿದು ಕಾಣದೆ ಕಂದಿ ಕುಂದುತಂ
ಹರಹರ ನಮಃ ಶಿವಾಯೆಂದೆಂದು ಕೊರಗುತಂ
ಶಿವನನೀಕ್ಷಿಸುವ ನಯನಕ್ಕೆ ಮರೆಯಾಗುತಿರೆ
ಭವನ ನೋಟಕ್ಕೆ ನಡುವಡ್ಡಮಾಗುತ್ತಮಿರೆ
ಬಾಗಿಯಂತಿಂತೊಲೆದು ಕುಗ್ಗಿ ಮಿಗೆ ನೋಡುತಂ
ತೂಗಿ ಕುಸಿದಿರ್ದು ಕುಳ್ಳಿರ್ದೆದ್ದು ನೋಡುತಂ
ಕಂಗೆ ಮರೆ ತನ್ನಯ ಮನದ ಕಣ್ಗೆ ಮರೆಯಾಗೆ
ಕಂಗೆ ಮುಳ್ಳಡ್ಡವಾದಂತೆ ಸಂಕಟಮಾಗೆ
ಮತ್ತೆ ಮತ್ತಡಿಗಡಿಗೆ ಪೊಡಮಡಲ್ಕೆನೆವುತಿರೆ
ಎತ್ತಲುಂ ತನ್ನ ನೋಟಕ್ಕೆ ತೆರಹಿಲ್ಲದಿರೆ
ಸುಯ್ದು ಸಿಗ್ಗಾಗಿ ಕಡು ಚಿಂತೆಯಿಂ ನೋಡುತಂ
ಎಯ್ದೆ ಕೈಯೊಳಗಿರ್ದರಲ್ಗಳುಂ ಬಾಡುತಂ
ಎಂತಕ್ಕೆ ಮಧ್ಯಾಹ್ನ ಸಮಯದೊಳ್ತೆರಹಾಗೆ
ಚಿಂತಿಸುತೆ ಬಳಲುತ್ತೆ ಕಣ್ಣನೀರ್ಕಡಲಾಗೆ
ಏನಯ್ಯ ತೆರಹುಗುಡದಿರ್ಪರೇ ಶಂಕರಾ
ನಾನಾ ನಿರೋಧದೊಳಗಿರಿಸುವರೆ ಶಶಿಧರಾ
ನೋಡದೆಂತಿರ್ಪೆನೆನ್ನಯ ಕಣ್ಣ ಪುಣ್ಯವೆ
ನೋಡುವಡೆ ಸುರರೆಣಿಸಲರಿದೆನಿಪಗಣ್ಯವೆ
ತವನಿಧಿಯೆ ಮಹನಿಧಿಯೆ ಸರ್ವನಿಧಿಗಳ ನಿಧಿಯೆ
ಭುವನ ಭವನಪ್ರಕಾಶಿತ ನೂತ್ನವೀಥಿಯೆ
ತತ್ವಮಯ ಶಾಂತಮಯ ನಿತ್ಯಮಯ ಶಂಭುವೆ
ಸತ್ವರಾಜಸ ತಮೋಗುಣರಹಿತ ನಿತ್ಯವೆ
ಕಾಣದಿರ್ದಡೆ ನಿಮಿಷವೆನಗೆ ಶತಯುಗಮಾಯ್ತು
ಕಾಣದಿರ್ದಡೆ ಕಣ್ಗೆ ಕತ್ತಲೆಯ ಮಯವಾಯ್ತು
ನೋಡದಿರಲಾರೆನಿನ್ನೆಂತು ಮಾಡುವೆನಯ್ಯ
ನೋಡದಡೆ ನೀನೀಯೆ ಎಂತು ಜೀವಿಪೆನಯ್ಯ
ದಿಟ್ಟಿ ಮೂರರ ಮಹಿಮೆ ಕೇಳ್ನಾಳೆ ಮೊದಲಾಗಿ
ದಿಟ್ಟಿವಾರಿಯ ನೇಮದಿರವನೊಚ್ಚತವಾಗಿ
ಕೈಕೊಂಡೆನಿದು ನೇಮವಬಿದುನೇಮವಿನ್ನೆನಗೆ
ಲೋಕೈಕ ಬಂಧುವೇ ನಡೆಯಿಸುವುದಿದನೆನಗೆ
ಎನ್ನ ನೋಟದ ನಡುವೆ ನಿನಗಡ್ಡವಾದರಂ
ನಿನ್ನಾಣೆ ತೀರ್ಚಿ ತೊಲಗಿಸಿ ಕಳೆವೆನನ್ಯರಂ

ಎಂದಲ್ಲಿ ಮೈಯಿಕ್ಕಿ ನಿತ್ಯನೇಮಂ ಮಾಡಿ
ಇಂದುಧರನೊಡನೆ ಕಡುಸಲುಗೆಯಿಂ ಮಾತಾಡಿ
ನಡೆತಂದು ಶಿವನಲ್ಲಿ ಕಡುನಿಷ್ಠೆಯಂ ಪಡೆದು
ಮೃಡನಣುಗನೊಂದು ಸುರಗಿಯನಳವಡಲ್ಪಿಡಿದು
ದಿಟ್ಟವಾರಿಯ ನೇಮಮಂ ತಪ್ಪದೊಪ್ಪುತಂ
ನಿಟ್ಟೆಗೀಶ್ವರನೊಲಿದು ಕೌತುಕವನಪ್ಪುತಂ
ಕಲಿನಿಷ್ಠೆವಂತನಭಿಮಾನಿ ನಿಶ್ಚಲನೆಂದು
ಕೆಲಬಲಕೆ ಸಾರ್ವನಲ್ಲುಬ್ಬಟೆಯ ಥಲಿಯೆಂದು
ಸುರಗಿಯ ಚವುಂಡರಾಯಂ ಬರ್ಪ ಹೊತ್ತಿನೊಳು
ಹರನಾರುವಂ ಹೊದ್ದಲೀಯನಾ ಹೊತ್ತಿನೊಳು
ಹೂವನೊಳಗಾಗಿ ಮರೆಮಾಡಿಕೊಂಡಿರಲಮ್ಮ
ನಾವುದಮನಡ್ಡವಾಗಿರಿಸಿ ಮರೆದಿರಲಮ್ಮ
ಇಂತು ಶಿವನಂಜುತಿರೆ ನೇಮವದು ನಡೆವುತಿರೆ
ಸಂತತಂ ಶಿವಭಕ್ತಿ ಮಿಕ್ಕು ಕಳೆಯೇರುತಿರೆ
ಒಂದು ದೇವಸಂ ಶಂಕರಂ ಬಂದು ಕನಸಿನೊಳು
ನಿಂದು ಚಾವುಂಡರಾಯಂಗೆ ನೆರೆ ನಲವಿನೊಳು
ಹಸಿದೆನೆಲೆ ಮಗನೆ ಹಸಿದೆಂ ಕಂದ ಕೇಳೆಂದು
ಬೆಸಸಿ ಭಾಳಾಂಬಕಂ ಹೋಗೆ ಹರುಷದೊಳಂದು
ಎಚ್ಚತ್ತು ಕಂದೆರೆದು ಪುಳಕಮಂ ಸಂತೈಸಿ
ಮಚ್ಚಿ ನೆರೆ ನಚ್ಚಿ ಕನಸಂ ಮನಸಿನೊಳ್ ನಿಲಿಸಿ
ಪನ್ನಗಧರಂ ಬೆಸಸಿತಂ ಚಿತ್ತದೊಳ್ನಿಲಿಸಿ
ತನ್ನರಸಿ ಮೊದಲಾದ ಮಾನಿನಿಯರಂ ಬರಿಸಿ
ಓಗರಂ ಮೇಲೋಗರಂಗಳಂ ಮಾಡುವುದು
ನಾಗಕುಂಡಲಗೆ ಸದ್ಭಕ್ತಿಯಿಂ ಮಾಡುವುದು
ದೇವಾನ್ನ ದಿವ್ಯಾನ್ನವಮೃತಾನ್ನವೆಂಬಿವಂ
ದೇವಂಗೆ ಷಡ್ರಸಾಯನ ರುಚಿಗಳೆಂಬಿವಂ
ಚರಿತದಿಂ ತನತನಗೆ ಮಾಳ್ಪುದೆಂಬನಿತಕ್ಕೆ
ಹರಭಕ್ತೆಯರ್ಸಮೆದು ತರುತಮಿರೆ ನಿಮಿಷಕ್ಕೆ
ಬೋನಂಗಳಂ ಕೊಂಡು ಧೂಪಾರತಿಯನಿತ್ತು
ನಾನಾ ಶಿವೋತ್ಸಾಹಮಂ ಚಿತ್ತದೊಳು ಹೊತ್ತು
ಕರಡೆ ಕೌಸಾಳ ಮದ್ದಳೆಯ ನಾದಂ ಸಹಿತೆ
ಪುರಹರನ ಶರಣಸಂಕುಳದ ಕೇಳಿಕೆ ಸಹಿತೆ

ಬೋನಂಗಳಂ ಕೊಂಡು ಬಂದು ಶಿವನಿಳಯದೊಳು
ಆನಂದದಿಂದಿಳುಪಿ ನಿರ್ಮಳ ಸ್ಥಾನದೊಳು
ಒಳಪೊಕ್ಕು ಜವನಿಕೆಯನಳ್ಕರಿಂದಂ ಸರಿದು
ಪುಳಕವಿರ್ಮಡಿಸೆ ಪರಿಯಣಗಳಂ ತೊಳೆತೊಳೆದು
ಸವಿಗಂಪು ಸೆಳೆಯೇಳ್ವ ಕಳವೆಯೋಗರವಿಕ್ಕಿ
ನವರುಚಿಗಳಂಕುರಿಪ ಮೇಲೋಗರವನಿಕ್ಕಿ
ಪಕ್ವಾನ್ನತತಿಗಳಂ ತಂದು ಥರದಿಂ ಬಡಿಸಿ
ಪಕ್ವಫಳಮಂ ಪಲವನಲ್ಲಿ ನಲವಿಂದಿರಿಸಿ
ತಿಳಿದುಪ್ಪಮಂ ಹೊನ್ನ ಬಟ್ಟಲುಗಳೊಳಗೆರೆದು
ಅಳವಡಲ್ಮಜ್ಜಿಗೆಯನಾನಂದದಿಂ ಪಿಡಿದು
ಮೈಯಿಕ್ಕಿ ನಿಂದಿರ್ದು ಸುಖರಸದೊಳೋಲಾಡಿ
ಕೈಯೆತ್ತಿ ಪೊಡಮಟ್ಟು ಸಂತೋಷದಿಂ ನೋಡಿ

ಚೆನ್ನನ ಮನೋನಿಧಿಯೆ ಆರೋಗಿಸೆಲೆ ದೇವ
ಕನ್ನೆಯ ಮನೋರಥವೆ ಆರೋಗಿಸೆಲೆ ದೇವ
ಎನ್ನಾಳ್ದ ಎನ್ನರಸ ಸುಖದೊಳಾರೈಸಯ್ಯ
ಎನ್ನ ಪುಣ್ಯದ ಫಲವೆ ಹದುಳವಾರೈಸಯ್ಯ
ಹಸಿದೆನೆಂದಿರುಳೆಂದು ಸುಮ್ಮನಿರ್ದಪಿರಯ್ಯ
ಪಶುಪತಿ ಇದೇಕೆ ಉಣಲೊಲ್ಲದಿರ್ದಪಿರಯ್ಯ
ಆರೋಗಿಸುವ ಪರಿಯನರಿದೆ ನಾನೆನುತಲ್ಲಿ
ಕೂರಲಗನೆತ್ತಿ ಕಂಠದೊಳಾನಿಸಲ್ಕಲ್ಲಿ
ಶಿವಲಿಂಗದಿಂ ಶಿವನ ಹಸ್ತವಂದೊಗೆತಂದು
ಸವಿದುತ್ತನಾನಂದದಿಂದೆ ನೋಡುತ್ತಂದು
ಪಂಚವದನಕ್ಕೆ ನಲವಿಂದೆ ನೀಡುತ್ತಮಿರೆ
ಪಂಚಮುಖನತಿ ಹರುಷದಿಂದೆ ದಣಿವುತ್ತಮಿರೆ
ದೇವ ದೇವಿಯರು ಗುಹಗಣಪತಿಯುಮೊಂದಾಗಿ
ದೇವಗಣತತಿಗೆ ನಲಿದೀವುತಿರೆ ಪಿರಿದಾಗಿ
ಆರೋಗಿಸಿದ ಶಿವಂ ಚವುಡರಾಯಂಗಂಜಿ
ಧೀರನಲಗಂ ಕಿತ್ತಡಾರೋಗಿಸಿದನಂಜಿ
ಆರೋಗಿಸಲ್ಕಂಡು ಹಿಗ್ಗಿದಂ ಹೆಚ್ಚಿದಂ
ಹಾರೈಸಿ ಪುಳಕದಿಂದುಬ್ಬಿದಂ ಕೊಬ್ಬಿದಂ
ಇದು ನೇಮವಿದು ನೇಮವಾರೈಸಲಿಕ್ಕುವೆಂ
ಸದಮಳ ಸುಧಾಮಯನನನುದಿನಂ ತಣಿಪುವೆಂ

ಎನುತೆ ಕರ್ಪೂರವೀಳೆಯವನೊಲವಿಂದಿತ್ತು
ಮನವಾರೆ ನಡೆನೋಡಿ ತೂಪಿರಿದು ಕಾಪಿತ್ತು
ಬಂದಲ್ಲಿ ಮಿಕ್ಕ ಪ್ರಸಾದಮಂ ಕೈಕೊಂಡು
ಇಂದುಮೌಳಿಯ ಕೃಪೆಯನೊಲಿದೊಚ್ಚತಂಗೊಂಡು

ಇಂತು ನಿಚ್ಚಂ ಹೆಚ್ಚೆಯಾರೈಸಲಿಕ್ಕುತಂ
ಕಂತುಮದಮರ್ದನನ ಭಕ್ತಿಯೊಳ್ನಲಿವುತಂ
ಹರನ ಶರಣರ್ಗೆ ಬೇಡಿತನಿತ್ತು ತಣಿಪುತಂ
ಸುರಗಿಯ ಚವುಂಡರಾಯಂ ಸುಖದೊಳೊಪ್ಪುತಂ
ಇರುತಿರುತಲೊಂದುದಿನ ಉದಯ ಸಮಯದೊಳೆದ್ದು
ಹರನ ನೇಮಕ್ಕೆಂದು ಬರಲು ಹರುಷಂದಾಳ್ದು
ಬಂದು ಕುಂಡದ ತಡಿಯೊಳೊಪ್ಪಿರಲು ಕಾಲ್ದೊಳೆದು
ನಿಂದು ಭಸಿತಮನಾಗಮಸ್ಥಾನದೊಳ್ತಳೆದು
ಬಾಹುಬಳೆ ಕಂಠಮಾಲೆಗಳನೊಪ್ಪಿರಲಿಕ್ಕಿ
ಸಾಹಸಾಭರಣನುತ್ಸಾಹದೊಳ್ಕೈಯಿಕ್ಕಿ
ಸುರಗಿಯಂ ತಿರುಪಿ ಜಂಗಳಮನೀಡಾಡುತಂ
ತರಹರಿಸಿ ಕೂರ್ಮದೊಳು ನಿಂದು ಪುಟವೇಳುತಂ
ಬರುತಮಿರಲತ್ತಲಿತ್ತಲು ಶಿವಾಲಯದೊಳಗೆ
ಹರನೊಳಗೆ ನೇಮವಂ ಮಾಡಲೆಂದೊಳಗೆ ಮಿಗೆ
ಅರಿಯದೇ ಹೊಸಬರಿರ್ವರು ನಡುವೆ ಬಂದಿರಲು
ಮರೆಯಾಗಿ ದಿಟ್ಟಿಗಿಟ್ಟಣಿಸಿ ನಿಂದಿರ್ದಿರಲು
ಇರಿದಿರ್ಕೆಲಕ್ಕೆ ಈಡಾಡುತಂ ನಡೆತಂದು
ಕರೆಗೊರಲನಂ ನೇಹದಿಂದಪ್ಪಿಕೊಂಡಂದು
ಮರೆಯಾದ ನಿಮಿಷವದು ಜುಗವಾದುದೆನಗರಸ
ಮರೆಮಾಳ್ಪರೇ ನಿನ್ನ ಭಕ್ತಂಗೆ ಹೇಳರಸ

ಎಂದೊಳಗೆ ನೇಮಮಂ ಮಾಡುತ್ತಮಿರಲಲ್ಲಿ
ಬಂದು ನೆರೆಯಿತ್ತು ಭರದಿಂದೆ ಪುರಜನವಲ್ಲಿ
ನೆರೆದು ತಮ್ಮೊಳಗೆ ಬೆರಗಾಗಿ ನುಡಿದರ್ನೋಡ
ಹರಭಕ್ತಿಗಿದು ಗುಣವೆ ಧರೆಗೆ ಚಿತ್ರಂ ನೋಡ
ಕೊಂದು ನೇಮಂ ಮಾಳ್ಪುದಿದು ಹೊಸತು ಮೇದಿನಿಗೆ
ಎಂದುವುಂ ಕಂಡರಿಯೆವುಬ್ಬಟೆಯ ಧಾರುಣಿಗೆ
ಹೊರಗೆ ಹೆಣನೊಳಗೆ ನೇಮಂ ಕರಂ ಹೊಸತಾಯ್ತು

ಪೊರಮಡಲ್ನೋಡಿಕೊಂಬಂ ಭ[ಕು]ತಿ ಲೇಸಾಯ್ತು
ಎನುತಿರಲ್ಪೊರಮಟ್ಟನಪ್ರತಿಮನಮ್ಮಮ್ಮ
ಮನಸಿಜಾರಿಯ ನೇಮಸಂಪನ್ನನಮ್ಮಮ್ಮ
ನಡೆತರುತೆ ಕೆಲಬಲದೊಳಿರ್ದ ಹೆಣನಂ ನೋಡಿ
ಮೃಡನನುಗನಿರ್ವರುಮನೇಳೇಳೆನಲ್ಕೂಡಿ
ಏಳ್ದು ಕೈಮುಗಿದಿರ್ವರುಂ ಮುಂದೆ ನಿಂದಿರಲು
ತಾಳ್ದು ಕೌತುಕಮನಾ ಪುರಜನಂ ನೆರೆದಿರಲು
ಪುಷ್ಪವೃಷ್ಟಿಗಳೆರಗಿದವು ಗಗನ ತಳದಿಂದೆ
ಪುಷ್ಪಕಂ ಬಂದುದಗಜಾವರನ ದಯೆಯಿಂದೆ
ಬಂದ ಪುಷ್ಪಕದೊಳಗೆ ನಿಂದಿರ್ವರುಂ ಸಹಿತ
ಸಂದಣಿಸಿ ನೆಗೆದಂ ಚವುಂಡರಾಯಂ ವಿದಿತ
ಮಾಗಳಾ ಪುರಜನಂ ಬೆರಗಾಗಿ ನೋಡುತಿರೆ
ನಾಗಭೂಷನ ಭಕ್ತರೆಲ್ಲ ಕೊಂಡಾಡುತಿರೆ
ಬಂದು ರಜತಾದ್ರಿಯಂ ಪುಗುವಾಗಳೀಶ್ವರಂ
ನಿಂದಡ್ಡವಿದ್ದರಂ ಸಾರೆನುತೆ ಶಂಕರಂ
ಸುರಗಿಯ ಚವುಂಡರಾಯಂ ಬಂದಪಂ ತೊಲಗಿ
ಉರವಣೆಯ ದಿಟ್ಟವಾರಿಯ ನಿಜ್ಚಟಂ ತೊಲಗಿ
ನಡುವಡ್ಡಮಾಗಿರಲು ಸೈರಿಸಂ ಕಡುಮಾನಿ
ಪೊಡವಿಯೊಳಗಧಿಕನೆನ್ನಯ ದರುಶನಧ್ಯಾನಿ
ಎಂದಡ್ಡವಿದ್ದರಂ ತೊಲಗಿಸುತ್ತಿರಲಂದು
ಬಂದ ನಂದೀಶನಲಿಗಾನಂದಮಯನಂದು
ಸೈಗೆಡೆದು ಹರನ ಚರಣವನಪ್ಪಿಕೊಂಡಿರಲು
ಕೈಗಣ್ಮೆನಯನಾಶ್ರು ಕೋಡಿವರಿವುತ್ತಿರಲು

ನೋಡ ನಂದೀಶ ನಿಜ್ಚಟ ಶರಣನಿಪ್ಪುದಂ
ನೋಡ ಕಟ್ಟುಬ್ಬಟೆಯ ನೇಮದಿಂ ಬಾಳ್ದುದಂ
ದಿಟ್ಟವಾರಿಯ ನೇಮದಿಂ ಬಾಳ್ದರಿಂತುಂಟೆ
ದಿಟ್ಟಿಗಡ್ಡಂ ಬಂದರಂ ಕೊಂದರಿಂತುಂಟೆ
ಅವರಿಬ್ಬರುಮನಿಲ್ಲಿಗೊಲಿದು ತಂದವರುಂಟೆ
ಅವನಿಗತಿ ಚೋದ್ಯಮಂ ಮಾಡಿ ಬಂದವರುಂಟೆ
ಎಂದು ಕೊಂಡಾಡುತಂ ಗಣಕುಲಕೆ ತೋರುತಂ
ಇಂದುಮುಖಿ ಪಾರ್ವತಿಗೆ ಬೆಸಸಿ ಕೊಂಡಾಡುತಂ
ಸುರಗಿಯ ಚವುಂಡರಾಯಂಗೆ ಗಣಪದವಿತ್ತು

ಹರಭಕ್ತರಿರ್ವರಿಗೆ ಸಾಲೋಕ್ಯಮುಮನಿತ್ತು
ಶಶಿಧರಂ ವಿಷಧರಂ ಕುಸುಮಶರಸಂಹರಂ
ವಿಷಮಾಕ್ಷನಕ್ಷಯಂ ದಕ್ಷಮುಖಮದಹರಂ ೧೮೦
ತಾಂಡವಾಡಂಬರಂಬರವಸನ ವಿಭ್ರಮಂ
ದಂಡಧರಸಂಹನನ ಸಂಹರಣ ವಿಕ್ರಮಂ
ವಿಕ್ರಮಧನಂಜಯ ತಪೋವೇಷಶೋಷಣಂ
ಶಕ್ರಾದಿ ಸುರನಿಕರ ಕಾರುಣ್ಯ ಪೋಷಣಂ
ಸುರನರೋರಗನಿಕರ ವಿನುತಾಂಗನೊಪ್ಪಿದಂ
ಹರಿ ಪುರಂದರ ವಿರಿಂಚಿಗಳರಸನೊಪ್ಪಿದಂ
ಪಂಪಾಮುಖಾಂಬುಜ ಸಹಸ್ರಕರನೊಪ್ಪಿದಂ
ಪಂಪಾಪುರಾಧಿಪ ವಿರೂಪಾಕ್ಷನೊಪ್ಪಿದಂ ೧೮೮

ಪರಮಗುರು ಪರಮಶಾಂತಂ
ಸುರಗಿಯ ಚಾವುಂಡರಾಯನವನೆಂದೆನಗಾ ।
ದರದಿಂ ಕರುಣಿಸುತಿರ್ಕನ
ವರತಂ ಶಶಿಮೌಳಿ ಹಂಪೆಯ ವಿರೂಪಾಕ್ಷಂ ॥

❖❖

# ೧೪. ಆದಯ್ಯನ ರಗಳೆ

## ಸ್ಥಲ ೧

ಆದಯ್ಯನನುರ್ವಿಗೆ ಗುರು
ವಾದಯ್ಯನನರುಹಕುಂಭಿಕುಂಭಸ್ಥಲನಿ।
ರ್ಭೇದಯ್ಯನನುರೆ ಮೆರೆದಂ
ಮೇದಿನಿಯೊಳಗೆಮ್ಮ ಹಂಪೆಯ ವಿರೂಪಾಕ್ಷಂ ॥

ಶ್ರೀ ಗೌರಿಪತಿಯೊಡ್ಡೋಲಗದೊಳ್
ರಾಗಂ ಮಿಗುತಿರೆ ಗಣತತಿ ಕೆಲದೊಳ್
ಅಲ್ಲಿಯನಾದಿಯೆನಿಪ್ಪ ಗಣೇಶಂ
ಸಲ್ಲೀಲೆಯೊಳಿಪ್ಪಲ್ಲಿ ವಿಳಾಸಂ
ಮಿಗೆ ಬಂದಳು ಸುರಕನ್ಯೆಯದೊರ್ವಳು
ಸೊಗಯಿಪ ರೂಪಿಂದೊಪ್ಪುವಳೊರ್ವಳು
ಬರೆ ಕಂಡಾ ಗಣನಾಥಂ ಸೋಲ್ತಿರೆ
ಸುರಕಾಮಿನಿಯುಂ ನೋಟದೊಳಳುಪಿರೆ
ಹರನವರಿರ್ವರನೀಕ್ಷಿಸಿ ನಗುತಂ
ಕರೆದಿಂತೆಂದಂ ಕೃಪೆಯೊಳ್ಮಿಗುತಂ
ನೀವಿರ್ವರುವಾ ಧರೆಯೊಳ್ ಜನಿಯಿಸಿ
ಕಾಮನನೇಳಿಪ ಸುಖಮಂ ಧರಿಯಿಸಿ

ಬರ್ಪುದೆನಲು ಬಿನ್ನೈಸಿದನೊಲವಿಂ
ಸರ್ಪಾಭರಣಗೆ ನಗುತಂ ನಲವಿಂ
ದೇವಾ ಬಳಿಕಿಲ್ಲಿಗೆ ಬರವುಂಟೆ
ದೇವರ ಚರಣವನೀಕ್ಷಿಪುದುಂಟೆ
ಕಾಮಂ ಕ್ರೋಧಂ ಪಿರಿದಾ ಧರೆಯೊಳು

ವ್ಯಾಮೋಹಂ ಪಿರಿದವನೀತಳದೊಳು
ವಂಚನೆಯುಂ ದಂಬುಂ ಪುಸಿಯದರೊಳು
ಸಂಚಿತ ಪಾಪಂ ಪಳಿಯುಂಟದರೊಳು
ಎಂತೆಂತಿರ್ಪೆನದೇನೇನಪ್ಪೆಂ
ಕಂತುಹರಾ ಬಳಿಕೆಂದಾಂ ಬರ್ಪೆಂ

ಎನೆ ನಗುತೀಶ್ವರನಾದಿಯನೀಕ್ಷಿಸಿ
ನಿನಗಂಜಲದೇಕಾನೇ ರಕ್ಷಿಸಿ
ನಡೆಯಿಸುವೆಂ ಕಾರಣವುಂಟದರೊಳು
ಕಡು ಪೆರ್ಚಿದರಾ ಸವಣರ್ ಜಗದೊಳು
ಅವರಂ ನಿಲಿಸುತೆ ಧರೆಯೊಳ್ಮೆರೆವುತೆ
ಅವನಿಗೆ ಕೌತುಕರಸಮಂ ಕರೆವುತೆ
ಬಳಿಕೆಮ್ಮಲ್ಲಿಗೆ ಸುಖದಿಂ ಬರ್ಪುದು
ಪಳೆಯಂತಿಲ್ಲಿ ಗಣೇಶ್ವರನಪ್ಪುದು
ಎನೆ ಸಂತಸದಿಂದುರ್ಬುತೆ ಕೊರ್ಬುತೆ
ತನು ತೀವಿದ ಪುಳಕಂಗಳನಾನುತೆ
ಹರನಂ ಬೀಳ್ಕೊಂಡೊಲವಿಂ ಬಂದಂ
ನರಜನ್ಮಕ್ಕೆಳಸುತೆ ಮೈಸಂದಂ

ಬಂದುತ್ತರಭಾಗದ ಶಿವಪುರದೊಳು
ಇಂದುಧರನ ಕರುಣಂ ಮಿಗೆ ಭರದೊಳು
ಶಿವಭಕ್ತನ ಸತಿಯುದರದೊಳಿರುತಿರೆ
ಶಿವಭಕ್ತೆಗೆ ಗರ್ಭಂ ಮೂಡುತ್ತಿರೆ
ನಡೆ ಮೆಲ್ಲನೆ ಮೆಲ್ಲನೆ ಜಡವಾಗಿರೆ
ತೊಡೆ ಥಾಳದ ಮೇಳದ [ಸ]ಖಿಯಾಗಿರೆ
ತ್ರಿವಳಿಗಳವಿರಳವಾಗುತೆ ಹಾರಲು
ನವ ನಾಭಿಯ ಗುಣ್ಪೊಳಗಂ ತೋರಲು
ನಡು ಹೊಂಗುತೆ ಕಿಳ್ಪೊಡೆ ದಳವೇರಲು
ನಿಡು ಬಾಸೆಗೆ ನಯಮೇರುತೆ ಬೀರಲು
ಪೀನಕುಚಂಗಳ ತುದಿ ಕಾರಿಡುತಿರೆ
ನಾನಾ ರುಚಿ ಕಕ್ಷಮನೊಳಕೊಳುತಿರೆ
ಕಂಬುಗ್ರೀವಂ ತೊಳತೊಳಗುತ್ತಿರೆ

ಇಂಬಿಂ ಮುಖವಳಯಂ ಬೆಳಗುತ್ತಿರೆ
ಅಲರ್ಗಣ್ ಕುವಲಯಮಮಂ ಪಳಿವುತ್ತಿರೆ
ನಲವಿಂ ಕುಂತಳವಗ್ಗಲಿಸುತ್ತಿರೆ
ನವಮಾಸಂ ಶಿವಭಕ್ತೆಗೆ ತೋರಲು
ತವೆ ಕಾಂತಿಗಳಾ ಮೈಯೊಳ್ಬೀರಲು
ಶಿವನಣುಗಂ ಪೊರಮಡಲನುವಾದಂ
ಅವನಿಯನೀಕ್ಷಿಸಲುರೆ ಕಣ್ತೆರೆದಂ
ಸರ್ವಾಂಗಂ ಸಡಿಲಲು ಸಡಿಲುತ್ತಂ
ಸರ್ವೇಶನನೊಳಗಳವಡಿಸುತ್ತಂ

ಕ್ಷೀರಾಂಬುಧಿಯಿಂ ಶಶಿಯೊಗೆವಂತಿರೆ
ಮೇರುವಿನೊಳು ಸುರಕುಜವೊಗೆದಂತಿರೆ
ಪುಟ್ಟಿದನವನಿಗೆ ಸತ್ಯಂ ಪುಟ್ಟಲು
ಮೆಟ್ಟಿದನವನಿಗೆ ಸುಕೃತಂ ಮೆಟ್ಟಲು
ಶಿವನಂ ನೋಡಲು ನೆರೆ ಕಂದೆರೆದಂ
ಸವಿಯಲ್ ಪ್ರಸಾದಮಂ ಬಾಯ್ದೆರೆದಂ
ಆದಯ್ಯನೆನಿಪ್ಪುದು ತನ್ನಾಮಂ
ಸಾದರವೀಶಂಗತುಳ ಪ್ರೇಮಂ
ಆಗಿರೆ ಬಾಲ್ಯವನೊಲವಿಂ ಕಳೆದಂ
ಸಾಗಿಸೆ ಸುಕುಮಾರತೆಯಂ ತಳೆದಂ
ಸಂಸಾರದ ಸವಿಗಾಣುತೆ ಬೆಳೆದಂ
ಹಂಸಂ ಬೆಳೆವಂದದೊಳಂ ಬೆಳೆದಂ
ಬೆಳೆಯಲ್ಲುಗ್ಗುರುಕರುಣಂ ತನಗೊದವಿತು
ತಿಳಿವಿನ ಮುಖವೀಶ್ವರನೊಳೆ ಮಡಗಿತು
ತಿಸುಳಂ ಡಮರುಗವಜಶಿರವಭಯಂ
ನೊಸಲೊಳ್ ಕಣ್ ವೃಷಭಾರೂಢತೆಯಂ
ಲಿಂಗದೊಳಗೆ ಕಂಡಂ ಶಿವನಿರವಂ
ಹಿಂಗದೆ ಪಡೆದಂ ಪರಮನ ವರವಂ
ಸೋಮಯ್ಯಂ ಗುರು ತನಗೆಂದರಿದು
ಸೋಮೇಶಂ ಗತಿಮತಿಯೆಂದರಿದಂ

ಇಂತರಿವುತ್ತಂ ನೇಮಂ ಮಾಡುತೆ
ಸಂತಂ ಶಿವಸುಖದೊಳಗೋಲಾಡುತೆ

ಇರೆ ಯೌವನವಾದಯ್ಯನೊಳಾಗಲು
ಹರನ ಭಕುತಿ ಒಡನೊಡ ಪುಟವೇರಲು
ನೊಸಲೊಳ್ಳಸಿತವನೊಪ್ಪದೊಳಿಡುತಂ
ಎಸೆಯಲು ರುದ್ರಾಕ್ಷೆಗಳಂ ತೊಡುತಂ
ಶಿವನಂಘ್ರಿಗಳಂ ಚೆಲುವಿಂ ಮುಟ್ಟುತೆ
ಶಿವಭಕ್ತೆಯರಂ ನಲವಿಂ ನೋಡುತೆ
ಶಿವಗಿತ್ತಾ ವೀಳೆಯಮಂ ಸವಿವುತೆ
ನವಧೂಪದೊಳಂ ತನ್ನಂ ಪೊರೆವುತೆ
ಬಲವರುತಂ ಲಲನೆಯರಂ ನೋಡುತೆ
ನಲವಿಂ ಪಶುಪತಿಗಂ ಬಿನ್ನೈಸುತೆ
ಶಿವನಂ ನೆನೆವುತೆ ಸುಖದೊಳ್ನೆನೆವುತೆ
ಭವನಂ ಪಾಡುತೆ ಭಾವಮನೆಣಿಸುತೆ
ನರಲೋಕದವರ ಸುರಲೋಕದವಂ
ಪರಿಕಿಪನೇ ಸ್ತ್ರೀರೂಪಿನ ಪದಮಂ

ಎಂಬಂತಿರೆ ಯೌವನವಡೆದೇರಲು
ಇಂಬಿಂ ಪದಿನಾರಬ್ಧಂ ಮೀರಲು
ಸರ್ವ ವ್ಯವಹಾರಂಗಳ ತೆರನಂ
ಊರ್ವಿಯೊಳಗೆ ಹರದಾಡುವ ಹದನಂ
ಕೂಡಿದ ಮೊದಲುಂ ಲಾಭದ ಪರಿಯಂ
ನೋಡಲು ಲೆಕ್ಕದ ಗಣನೆಯ ಪರಿಯಂ
ಕಲಿಸಿದನಾದಯ್ಯಂಗಾ ಜನಕಂ
ಕಲಿಸಲ್ಪುತ್ರಂ ಕಣ್ಗಂ ಮನಕಂ
ಮಾಯಾವ್ಯವಹಾರಂ ತಿಳಿವುತ್ತಿರೆ
ಆಯವನಂದಂದಿಂಗಾರ್ಜಿಸುತಿರೆ
ಪಿತನಾದಯ್ಯನ ಪರಿಯಂ ಮೆಚ್ಚುತೆ
ಸತತಂ ಸಂತಸದಿಂದಂ ಬಾಳುತೆ
ಮಗನಂ ಕರೆದೆಲ್ಲವನಾಲೋಚಿಸಿ
ಸೊಗಯಿಪ ಭಂಡಂಗಳನೊಲಿದೊಪ್ಪಿಸಿ
ಪಲವೆತ್ತಿನೊಳಂ ತೀವುತ್ತೋವುತೆ
ಪಲವುಂ ದೋರಿಗರಂ ಕರೆದೀವುತೆ
ಪುತ್ರನನೆಲ್ಲರಿಗಪ್ಪಯಿಸುತ್ತಂ

ಪತ್ತು ಸಹಸ್ರಂ ಪೊಂಗಳನಿತ್ತಂ
ಪುತ್ರನ ಕೈಯೊಳ್ಕೊಟ್ಟಿಂತೆಂದಂ
ಉತ್ತಮ ವಸ್ತುಗಳಂ ಕೊಳ್ಳೆಂದಂ
ಪುಲಿಗೆರೆಯಣ್ಣಿಗೆರೆಗಳೊಳಗೊಳಗಂ
ನಲವಿಂ ಪಲವುಂ ಪಟ್ಟಣದೊಳಗಂ
ಪರದಾಡುವುದೆಲೆ ಕಂದ ಎನುತ್ತಂ
ಹರನಂ ನೆನೆವುದು ಮರೆಯದೆನುತ್ತಂ
ಸೋಮಯ್ಯಂ ನಿನ್ನೊಡನೇ ಬರ್ಪಂ
ಸೋಮಯ್ಯಂ ಚಿತ್ತದೊಳೊಲಿದಿರ್ಪಂ
ಲೋಭದೊಳಿಪ್ಪುದು ಸದ್ವ್ರಯವಾಗದು
ಲಾಭವನರಿವುದು ಮರೆದಿರಲಾಗದು
ಎನೆ ನಸುನಗುತಾದಯ್ಯಂ ನುಡಿದಂ
ಮನಸಿಜಹರನನುಗಂ ನೆರೆ ನುಡಿದಂ
ಮೊದಲೀಶನ ಸದ್ಭಕ್ತಿಯೆ ಲಾಭಂ
ತದನಂತರವಿನ್ನುಂಟೇ ಲಾಭಂ
ಎನುತಾಗಳ್ ಪಿತನಂ ಬೀಳ್ಕೊಂಡಂ
ಮನದೊಳ್ ಸೋಮಯ್ಯನನೆಡೆಗೊಂಡಂ
ನಡೆತಂದಂ ಭಕ್ತಿಯೊಳಾದಯ್ಯಂ
ನಡೆತರುತಿರ್ದಂ ಶಿವನಾದಯ್ಯಂ

ಇತ್ತಲ್ ಸುರಪತಿ ಶರ್ವನ ಬೆಸದೊಳ್
ಉತ್ತಮ ಗುಣನಿಧಿ ಜನನದ ವಶದೊಳ್
ಸಲುತಂ ಪುಲಿಗೆರೆಯೊಳ್ಬಂದೊಪ್ಪುವ
ಸಲೆ ಸವಣರ್ಸಂತಸದಿಂದೊಪ್ಪುವ
ಸುರಹೊನ್ನೆಯ ಬಸದಿಯ ಪೂಜಾರಿಯ
ಅರುಹಂತನನರ್ಚಿಪ ಮಲಧಾರಿಯ
ಹರುಷದಿಯವನಾ ಲಲನೆಯ ಬಸುರೊಳು
ಅರುಹಂತನ ಪಾಪದ ಕೊಗ್ಗೆಸರೊಳು
ಪಂಕಜದಂತಿರೆ ಪುಟ್ಟಿದಳೊಲವಿಂ
ಪಂಕವನೆಂದುಂ ಪೊರ್ದದೆ ನಲವಿಂ
ಪುಟ್ಟಲು ಪದುಮಾವತಿಯೆನೆ ನಾಮಂ
ಗೊಟ್ಟರು ಪಿತೃಮಾತೆಯರತಿಪ್ರೇಮಂ

ತಾನಾಗಿರೆ ಶೈಶವಮಂ ಕಳೆದಳು
ನಾನಾಭರಣಂ ರಂಜಿಸೆ ಬಳೆದಳು
ಶಶಿಕಳೆಯಂದದೆ ಕೌಮುದಿಯಂದದೆ
ಬಿಸಕಂದದ ಕುಂದದ ಮುಗುಳಂದದೆ
ಬೆಳೆದಳ್ ಪದ್ಮಾವತಿ ವಿಭ್ರಮಮಂ
ತಳೆದಳು ನವಯೌವನ ಭೂಷಣಮಂ
ನಡು ನಡೆ ನುಡಿಗಳ್ಕಿರಿದಾಗುತ್ತಿರೆ
ಮುಡಿ ಮೊಲೆ ಜಘನಂ ಪಿರಿದಾಗುತ್ತಿರೆ
ಭಾಳತಳಂ ನಯವಂ ಕರೆವುತ್ತಿರೆ
ತೋಳಮೊದಲು ಹೊಗರಂ ಸೂಸುತ್ತಿರೆ
ಅಳಕಂ ನೊಸಲೊಳು ರಂಗಂಬೊಗುತಿರೆ
ತಿಳಕಂ ಕಾಂತಿಯ ಮರೆಯೊಳ್ನಿಂದಿರೆ
ತರದಿಂ ಬಾಲ್ಯದ ತೆರೆ ಸರಿವುತ್ತಿರೆ
ನಿರುತದ ನಿಲವಿಂ ಯೌವನಮೊಪ್ಪಿರೆ
ಪುಷ್ಪಾಂಜಲಿಯಂ ನೋಟಂ ಕೆದರಲು
ಪುಷ್ಪಶರಂ ಮನದೊಳ್ಮಿಗೆ ಹೆದರಲು
ತೊಡಿಗೆಯ ನಿನದಂ ವಾದ್ಯಂಗುಡುತಿರೆ
ನಡೆ ಸುಗತಿಗಳಂ ತಾಳೈಸುತ್ತಿರೆ
ಯವ್ವನಮಲ್ಲಿ ಸುಪಾತ್ರಮದಾಗಿರೆ
ಅವ್ವಳಿಸುವ ವಿಟರೆರ್ದೆ ನಡುಗುತ್ತಿರೆ
ತನಗೊಳಗಾದಯ್ಯನನರಸುತ್ತಿರೆ
ಮನುಜರನಾವಗಮೊಲ್ಲದಿರುತ್ತಿರೆ

ಇರೆ ತಾಯ್ತಂದೆಗಳರಿಯದೆ ಮರುಗುತ
ಹರೆಯವಿದಾರುವನೊಲ್ಲಳಿದದ್ಭುತ
ಈ ಸುಖವಿನ್ನಾವಂಗಿರ್ದಪುದೊ
ಈ ಸೊಬಗಿನ್ನಾರಂ ಸಾರ್ದಪುದೊ
ಎಂದುಮ್ಮಳದಿಂದಂ ನೋಡುತ್ತಿರೆ
ಅಂದಂದಿಂಗತಿ ಚಿಂತೆಯೊಳಿರುತಿರೆ
ಬರುತಿರ್ದಂ ಶಂಕರನಾದಯ್ಯಂ
ದುರಿತಕುಲಂಗಳನುರೆ ಸೋ[ವ]ಯ್ಯಂ
ಪುರದೊಳಗೆಲ್ಲುತ್ಪಾತಂ ನೆಗೆಯಲು
ಅರುಹಾಗಾರದೊಳದ್ಭುತವೊಗೆಯಲು

ಸುರಹೊನ್ನೆಯ ಬಸದಿಯ ಜಿನನಳುತಿರೆ
ಅರುಹವ್ರತಿಗಳ ಮನ ಬೆದರುತ್ತಿರೆ
ಪುಲಿಗೆರೆಯೊಳ್ಪೊಕ್ಕಂ ಶಿವಭಕ್ತಂ
ಕಲಿಭಲಿ ಸಮ್ಯಗ್ಭಾಷಾಯುಕ್ತಂ
ಪುಗುತುರುತರ ಬಸದಿಗಳಿರೆ ಕಂಡಂ
ಮಿಗೆ ಬಗೆಯೊಳಗೆ ನಿರೋಧಂಗೊಂಡಂ
ಅರಸುತೆ ಬಂದಂ ದೇವಾಲಯಮಂ
ಹೆರೆಯಂ ಸೂಡಿರ್ಪನ ಮಂದಿರಮಂ
ಕಂಡಂ ಹೋಜೇಶ್ವರನಿರ್ಪಿರವಂ
ಕಂಡಂ ಮೂಲಸ್ಥಾನದ ವರವಂ
ಅಲ್ಲಿಯೆ ಬೀಡಾರಂ ತನಗಾದುದು
ಎಲ್ಲಾ ವಸ್ತುವಿನಾಲಯವಾದುದು
ತಂದ ಸುವಸ್ತುವನಲ್ಲಿರಿಸುತ್ತಂ
ಬಂದ ಗ್ರಾಹಕ ತತಿಗೀವುತ್ತಂ
ಮೊದಲುಂ ಲಾಭಂಗಳನರಿವುತ್ತಂ
ಸದಮಳಚಿತ್ತಂ ಸುಖದೊಳಿರುತ್ತಂ

ಒಂದು ದಿನಂ ನೇಮಂ ಮಾಡುತ್ತಂ
ಇಂದುಧರನ ಭಕ್ತಿಯೊನೋವುತ್ತಂ
ಪುಳಕದ ಸಂದಣಿಯಿಂ ಸ್ಪರುಶನಮಂ
ಜಳಬಿಂದುಗಳಿಂದಂ ದರುಶನಮಂ
ಮಾಡುತೆ ಪಾದೋದಕಮಂ ಕೊಳುತಂ
ನೋಡುತೆ ಹರಕರುಣಮನೆಡೆಗೊಳುತಂ
ಭರದಿಂ ಪ್ರಸಾದ ಜೀವಕನಾದಂ
ಹರಪದ ಪಂಕಜ ಭಾವಕನಾದಂ
ಪಟ್ಟಣಮಂ ನೋಡಲ್ಪೊರಮಟ್ಟಂ
ನೆಟ್ಟನೆ ಸಖನಿಕರದೊಳಳವಟ್ಟಂ
ಸುಕುಮಾರ ಶಿಖಾಮಣಿ ಬರ್ಪಂದದೆ
ಅಕಳಂಕ ಸುಧಾಕರ ಪೊಳೆವಂದದೆ
ನಲವಿಂ ಪದುಮಸಖಂ ಬರ್ಪಂದದೆ
ಸುಲಲಿತ ಸೌಂದರಿಯಂ ನಡೆವಂದದೆ
ಜಂಗಮಸುರತರು ನಡೆತರ್ಪಂದದೆ
ಲಿಂಗದ ಮಹಿಮಾನಿಧಿ ಬರ್ಪಂದದೆ

ಮೆಲ್ಲನೆ ಪುರವೀಧಿಯೊಳಂ ಬರುತಿರೆ
ಬಲ್ಲಿದನಾದಯ್ಯಂ ಬರುತಿರೆಯಿರೆ ೨೦೬

## ಸ್ಥಲ ೨

ಪುಲಿಗೆರೆಯ ಪುರಜನಂ ಪೂ
ವಲಿಗೆದರಿದ ಪುಷ್ಪಸೌರಭಕ್ಕಾಸ್ವಾದಾ।
ಕುಲಿತ ಮಧುಕರ ಮುಖೋದ್ಗತ
ಕಲರವಯುತ ವೀಥಿಯೊಳಗೆ ಬರಲಾದಯ್ಯಂ ॥

ಇಂತು ಪುರವೀಥಿ ನಿರೀಕ್ಷಣ ಸಂಜನಿತ ಹರುಷಪುಳಕ ಶರೀರಂ ಸಖನಿಕರ ಮುಖಾವಲೋಕನನಾಗುತ್ತಂ ಬರೆವರೆ, ಮುಂದೆ ಸುಧಾಧವಲಿತ ಸೌರಭಾದಿ ವೇದಿಕಾಸ್ತಂಭಂಗಳ ನಡುವೆ ಹಂಸ ಕಳಕೀರ ಕುರವಕ ಸರಸಿರುಹ ಲತಾವಳಿಗಳ ತಂಡಣೆಯಿಂ ಕೊಳನಂತೆ ವಿರಾಜಿಪ ಹಂಗುಳಿಯ ಮೇಲಿರ್ದ ಪದ್ಮಾವತಿಯಂ ಭೋಂಕನೆ ಕಂಡು, ಸ್ನೇಹಂ ಕವಿದಾರ್ತಂ ತಲೆದೋರಿ ತಾತ್ಪರ್ಯಂ ಕೈಮಿಕ್ಕು ಲವಲವಿಕೆ ಬೆಳೆದು ಸವಿವೋಟಂ ಸಂದಣಿಸಿ ಸೌಂದರ್ಯದ ಮದಂ ಸೀಮೆಯನೊಳಕೊಳ್ಳಲಾರದೆ ಲಾವಣ್ಯರಸದೊಳ್ ತಾಂ ಮುಳುಂಗೆ ನೋಡಲರಿಯದೆ ಸಿಕ್ಕಿದ ವಿಲೋಚನದ ಬಳಿಸಂದು ಮನದೊಡನೆ ಭಾವಂ ಬಲಿತು ಸಾತ್ವಿಕರಸಪರವಶದಿಂ ಮಿತ್ರರ ಮೇಲೆ ಮೈಯನೀಡಾಡಿ ಪರಮಹಂಸನಂತಿರ್ದಾದಯ್ಯನಂ ಪದ್ಮಾವತಿ ಘಳಿಲನೆ ಕಂಡು, ನವಯೌವನಮಂ ಮುಂಗಾಣಿಕೆಗೊಟ್ಟು ನೋಟವನಿಂಬುಗೊಟ್ಟು ರೂಪನೊಪ್ಪಿಸಿಕೊಟ್ಟು ಆಸೆಯಂ ಮನಕ್ಕೆಡೆಗೊಟ್ಟು ಚೆಲ್ವುಮಂ ಸೂರೆಗೊಟ್ಟು ಪ್ರೇಮರಸಂ ತೀವಿ ಮನಂ ನನೆಯೇರಿ ತವಕಂ ಬೀಗಿ ತನುವರಳ್ದಿರಲ್,

ಇರ್ವರ ಪರ್ವಿಗೆಯ ನೇಹಮಂ ಮಿತ್ರಜನಂ ಕಂಡು ಕಮಲಾಕರಕ್ಕೆ ಹಂಸಮಿಥುನಮಂ ತಪ್ಪಂತೆ ತಂದು ಪದ್ಮಾವತಿಯ ಸೆಜ್ಜೆಯ ಮನೆಯ ಮೃದುತರಹಂಸತೂಲತಲ್ಪದೊಳ್ ಸುಖ ಮಿಥುವನನೊಲಿದಿರಿಸಿ ಸಖೀಜನಂ ಕೃತಸಂಕೇತಸ್ಥಾನ ಗಮನಾಸಕ್ತರಾದರಿತ್ತಲ್ಪದ್ಮಾವತಿ [ಗಮಾ]ದಯ್ಯಂಗವಾಲಿಂಗನದ ಮುತ್ತಿಗೆಯಿತ್ತಳಮಾಗೆ ಸಕಳೇಂದ್ರಿಯಂಗಳೊಳಗುಗೊಟ್ಟು ಲಜ್ಜಾರಸಂ ಬೆಂಗೊಟ್ಟಭಿಮಾನದ ಕೋಂಟೆ ಕೋಳುವೋಗಿ ಧೈರ್ಯದ ಕದಂದೆರೆದು ಕರಣಂ ಕಲ್ಲವಿಲ್ಲಿಯಾಗಿ ಸುಖಂ ಸೂರೆಯಾಗಿ ಮನಂ ಪಿಡಿಪಟ್ಟು ಮುಟ್ಟಿದ ಸುಖಮಂ ಸೋಮನಾಥಸ್ಮರಣೆಯಿಂ ಸವಿವುತಿರ್ಪ ಸುಖಸಮಯದೊಳ್ಮುನಿಸಿಲ್ಲದ ಕಲಹಂ ಕೋಪವಿಲ್ಲದ ಖಾತಿ ಭಂಗವಿಲ್ಲದ ಸೋಲಂ ಭಾರವಿಲ್ಲದ ಬಳಲಿಕೆ ನಿದ್ರೆಯಿಲ್ಲದ ನಿಡುಸುಯಿ ತಣಿವಿಲ್ಲದ ತೃಪ್ತಿ ಅಗಲ್ಕೆಯಿಲ್ಲದ ವಿರಹವಾತುರಿಸಿ ಚಿತ್ತಭೂಮಿಯೊಳೊಳಪೊಕ್ಕ ನೇಹದ ಬೀಜಂ ಮನ್ಮಥಘಟೀಯಂತ್ರತಳದೊಳ್ಪುಟ್ಟಿ ಸ್ವೇದಜಳದಿಂ ತಳಿತು ಪುಳಕದಗೆವೊಯ್ದು ನಳನಳಿಸಿ ಮಕರಕೇತನೋದ್ಯಾನದೊಳ್ಸಿಸಟಂಬರಿವ ವ್ಯಾಕುಳಾಕ್ಷರಂ ಕೋಕಿಳಧ್ವನಿಯನಿಂಬುಗೊಳುತ್ತಿರೆ ಕುಣಿವಳಕಂ ಶಿಲೀಮುಖಂಗಳನನುಕರಿಸೆ ಸುಯ್ಯೆಲರೆಂಬ ಗಂಧವಹಂ ಸುಳಿಯೆ ಗಾಢಾಲಿಂಗನದ ಲತೆವನೆಯೊಳಗೆ ಸಮಸುಖಸಾರ್ವಭೌಮರಾಗಿ ತಮ್ಮೊಳ್ತಮ್ಮನಲ್ಲದೆ ಮತ್ತೊಂದರಿಯದೆ ತಮ್ಮೀರ್ವರುಂ ಒಂದಾದಂತೆರಡನರಿಯದೆ ಪುಲವುಂ ದೆವಸಮಿರ್ದೊಂದು ದೆವಸಂ,

ಆದಯ್ಯನುಂ ಪದ್ಮಾವತಿಯುಮೊಂದಾಗಿ ಬಿನದದಿಂ ವ್ಯಾಗ್ರಪುರದ ಹೊರಗಣ ಪೂರ್ಣತಟಾಕದಪರಭಾಗದ ವನಾಂತರದೊಳ್ ಶುಕ ಪಿಕ ಹಂಸ ಮಯೂರ ಲೀಲಾನಿರೀಕ್ಷಣಾ ಸಕ್ತರಾಗಿರಲಲ್ಲಿಗೆ ನೀಳ್ದ ಕೆಂಜೆಡೆಯಿಂ ತಾಳ್ದ ಕುಂಡಲದಿಂ ಉಟ್ಟ ಪುಲಿದೊವಲಿಂ ತೊಟ್ಟ ರುದ್ರಾಕ್ಷೆಯಿಂದಿಟ್ಟ ಭಸಿತದಿಂ ಪೊಳೆವ ಕಣ್ಗಳಿಂ ಬೆಳಪ ಗಂಡಸ್ಥಲದಿಂ ತೊಳಪ ಸುಲಿಪಲ್ಲವಿಳಾಸದಿಂ ಮೆರೆವ ಮೈಯ ಬೆಳಗು ಬನಕ್ಕೆ ಬೆಳ್ದಿಂಗಳಂ ಸೂಸೆ, ಸತ್ಯದಂತೆ ಪುಣ್ಯದಂತೆ ಭಕ್ತಿಯಂತೆ ತಪೋಧನಮೂರ್ಪವರನಾದಯ್ಯಂ ಕಂಡು ಭಯಭಕ್ತಿಯಿಂದಿದಿರ್ವಂದಷ್ಟಾಂಗ ಪ್ರಣತನಾಗಿ ನಿಂದಿರ್ದು, ದೇವ ದೇವಾ ಎತ್ತಣಿಂ ಬಿಜಯಂಗೆಯ್ದಿರಿ, ಕಂಗಳ ಕಾಂತಿ ಕಂದಿದವು, ಮುಖಮಂಡಲಂ ಕೊರಗಿದವು, ಪುಣ್ಯೋದರಂ ಬಡವಾದವೇಂ ಬೆಸನೇಗೆಯ್ವೆನೆಂದು ಬಿನ್ನಯಿಸಿದ ಭಕ್ತನ ಮೊಗಮಂ ನೋಡಿ ಎಲೆ ಮಗನೆ, ಮುಂದರಿಯದೆ ಬಂದೀವೂರಂ ನಿನ್ನೆ ಪೊಕ್ಕುನ್ನತಿಕೆ ಗೆಟ್ಟು ಬಸದಿಗಳಂ ಬತ್ತಲೆಯ ಬೊಂಬೆಗಳಂ ಕಂಡು ಬೆಗಡುಗೊಂಡು ಬೇವಿನ ವನವಂ ಪೊಕ್ಕಂತೆ ಪೊಲೆಗೇರಿಯಂ ಸಾರ್ದಂತೆ ದೆಸೆಗೊಟ್ಟೊಂದುಪವಾಸಂ ಪತ್ತಿ ನಡೆಯುಡುಗಿ ವ್ಯಾಘ್ರಪುರಮಂ ಪೊಕ್ಕು ವ್ಯಾಘ್ರಮುಖಮಂ ಪೊಕ್ಕಂತತಿ ಭೀತಿಯಿಂ ಪೊರಮಟ್ಟು ಮೆಲ್ಲ ಮೆಲ್ಲನೆ ತಟಾಕದೇರಿಯ ಮೇಲೆ ಬರುತ್ತಂ ಭಸ್ಮಾವಲೀಲಲಾಟನಾಗಿರ್ದ ನಿನ್ನಂ ಕಂಡೆವಿನ್ನೆಲ್ಲಿಗಂ ಪೋಗಲಾರೆವೆಂದೊಂದು ಚೂತದ ತಳದ ನೆಳಲ ಹೊಸ ಹಸಲೆಯ ಮೇಲೆ ಬಳಲ್ದು ಪಟ್ಟಿರ್ದವರಂ ಕಂಡು ಕಣ್ಣನೀರಂ ತೀವಿ ಪದ್ಮಾವತಿಯ ಮೊಗಮಂ ನೋಡಲಾಕೆಯನು ಕೂಲಾವಲೋಕನವರಿದು ಸಂತಸಮನಾಂತು, ದೇವ ದೇವಾ ಪುರದೊಳ್ಪೊಕ್ಕತಿವೇಗದಿಂ ಬೋನವನನುಕ್ರಮಿಸಿ ತಳುಮಾಡದೆ ಬರ್ಪೆನನ್ನೆವರವೀ ನೆಳಲೊಳಿಲ್ಲಿಯೆ ನೆಲಸಿರ್ಪುದೆಂದು ಬಿನ್ನೈಸಿ ನಲವಿಂ ಬಂದು ಪುರಮಂ ಪೊಕ್ಕು ಸರ್ವಸಾಧನವಂ ಪದ್ಮಾವತಿಗೊಪ್ಪಿಸಲೊಡಂ, ದಿವ್ಯ ಪರಿಮಳದಿಂದಮೃತಾನ್ನ ಮನತ್ಯಾದರದಿಂ ಸಮೆದಾದಯ್ಯನಂ ನೋಡಲೊಡೆಯರಂ ಬಿಜಯಂಗೈಸಿ ತಪ್ಪೆನೆಂದು ಪೋದನಿತ್ತಲು,

ಪದ್ಮಾವತಿಯ ಪಿತನಪ್ಪ ಪಾರಿಸಪಂಡಿತಂ ಮೇರೆಗೆಟ್ಟ ಮತಿಹೀನಂ ಕೊಪಣದಿಂ ಬಂದ ಹೊಸ ರಿಸಿಯರೆನಿಪ ನೀಚರಿಗೆ ಚರಿಗೆಯಂ ಪೇಳೆ, ಬಾವರಿಯ ಭಂಡರುಂ ಲೋಚಿನ ಲೋಲ್ಯರುಂ ಬತ್ತಲೆಯ ಬಾಹ್ಯರುಂ ಕುಂಚದ ಕೂನರುಂ ನಾ[ರು]ವಳದ ನರಿಗಳುಂ ನೆರೆದು ಬಂದು ಮನೆಯ ಮುಂದೆ ಸಂದಣಿಸೆ ಪಾರಿಸಪಂಡಿತಂ ಕಂಡಾಂ ಪೇಳ್ದುದೊಮ್ಮಡಿ ಬಂದುದು ನಾಲ್ಮಡಿ ಇನ್ನೆಂತು ಮಾಳ್ಪೆನೆಂದು ಚಿಂತಿಸಿ ತನ್ನ ಸತಿಯಂ ಕರೆದು ಕೇಳಲದಕ್ಕೇನಾಯಿತಂಜಲುವೇಡಂ ನಮ್ಮ ಪದ್ಮಾವತಿಯ ಗಂಡಂ ಗೊರವರ್ಗೆಂದು ಮಾಡಿಸಿದ ಸಾಧನಮಿರ್ದಪುದೇಳಿಮೆಂದು ಮಗಳಂ ಕರೆದು ಕೆಸರ ಕೊರತೆಗೆ ಕತ್ತುರಿಯಂ ಕೊಳುವಂತೆ ಸುಣ್ಣದ ಕೊರತೆಗೆ ಬೆಣ್ಣೆಯಂ ಬಳಸುವಂತೆ ಬೇಲಿಯ ಕೊರತೆಗೆ ಕಲ್ಪತರುವಂ ತರಿವಂತೆ ಪದ್ಮಾವತಿಯಂ ಬೋನಮಂ ಬೇಡೆ ಪದ್ಮಾವತಿ ನಡ ನಡಂ ನಡುಗಿ, ಬೇಡ ಬೇಡ ಕೊಡುವುದಿಲ್ಲೆಂದು ಬಾಗಿಲೊಳ್ನಿಲೆ ಚಂದ್ರಕಳೆಯಂ ರಾಹು ಪಿಡಿವಂತೆ ಪಿಡಿದು ಒಳಪೊಕ್ಕು ಕೊಂಡುಪೋಗಿ ಸುರಹೊನ್ನೆಯ ಜಿನನ ಪ್ರತಿಮೆಗೆ ಮಾರಿಯಂ ತಪ್ಪಂತೆ ತಂದು ಕಾಡಬೆಕ್ಕಿಂಗೆ ತುಯ್ಯಲನೂಡವಂತೆ ಸುಧೆಯಂ ನಾಯಿಗೆರೆವಂತೆ ಪಂಚಭಕ್ಷಮಂ ವಾಯಸಂಗಿಕ್ಕುವಂತೆ ಫಲರಸಮಂ ಬಕಂಗಿಕ್ಕುವಂತೆ ತಂದು, ಬತ್ತಲೆಯ ಮಂದಿಯ ಕೈಯ್ಗಿಯ್ಯೊಳ್ಪೂರ್ವಜನ್ಮದ ದುಃಕರ್ಮಶೇಷವನೂಡು ವಂತೂಡಲ್ಚಂಡಿಗಳೆಲ್ಲಂ ಸುಲಿವಡೆದ ಮಲ್ಲರ ಮೊತ್ತದಂತೆ ಪೊರವಡುವ ಸಮಯದೊಳ್,

ಬಳಲ್ದ ತಪೋಧನದೇವರ್ಗೆ ಕೈಗೊಟ್ಟು ಮೆಲ್ಲ ಮೆಲ್ಲನೊಡಗೊಂಡು ಬರ್ಪಾಗಳ್, ಬೆಳಗಿನ ಮುಂದಣ ಕತ್ತಲೆ ಪರಿವಂತೆ ನೋಡೆ ನೋಡೆ ರುಷಿಯರ್ಪರಿದು ಪೋಗಲಾದಯ್ಯಂ ಸಂದೇಹಿಸುತ್ತಂ ಶಂಕಿಸುತ್ತಂ ಮನೆಗೆ ಬಂದಿರುಳುದಾವರೆಯಂತೆ ಹಗಲ ಚಂದ್ರನಂತೆ ಬಾಡಿರ್ದ ಪದ್ಮಾವತಿಯಂ ಬೆಸಗೊಳಲ್ಲುಡಿಯಲಮ್ಮದೆ ಸುಮ್ಮನೆ ಸೆರೆಬಿಗಿದು ಭೀತಿಗೊಂಡಾ ಸಾಧನಮನೆಮ್ಮ ತಂದೆತಾಯ್ಗಳ್ಗಲ್ಪಿಂ ಕೊಂಡುಹೋಗಿ ರುಷಿಯರ್ಗಿತ್ತರಿನ್ನಿವರ್ಗೀಗಳೆ ಬೋನಮಂ ಮಾಳ್ಪೆನೆಂದು ನುಡಿಯಲಾ ಮಾತಿಂಗೊಮ್ಮೆ ಸತ್ತು ಹುಟ್ಟಿ ಕೆಂಪಡರ್ದ ಕಂಗಳಿಂ ಕೆತ್ತುವ ಮೀಸೆಯಿಂ ಹೊತ್ತುವ ಕರಣದಿಂ ಬತ್ತುವಾಸೆಯಿಂ ಮುತ್ತುವ ಕೋಪದಿಂ ಕನಲ್ದು ನೋಡುತ್ತಿವಳಂ ಕೊಂದಡಂ ಪಂಡಿತನಂ ಖಂಡಿಸಿದಡಂ ರುಷಿಯರಂ ತುಂಡಿಸಿದಡಂ ತಪೋಧನರಂ ತಣಿಪಿದಂತಾಗದೆನುತಂ ಒಳಗೊಳಗೆ ಹೊತ್ತಿ ಹೊಗೆವ ಜೈವರ ಸಾವಿನ ಸಂಚಕಾರದುರಿಗೋಪಮಂ ಬೈತಿಟ್ಟು ತಪೋಧನ ದೇವರಂ ನೋಡಿ, ಎನ್ನೊಡವೆ ನಿಮಗೆ ಸಾರ್ವುದೆ ಪಾಪಿಯೊಡವೆ ಪುಣ್ಯಕ್ಕಪ್ಪುದೆ ಎಂದನುತಾಪದಿಂದವರನೊಡಗೊಂಡು ಪೋಗಿ ನವಫಳ ವಿಕ್ರಯ ವೀಧಿಯೊಳ್ ಕದಳೀಫಳ ದ್ರಾಕ್ಷೆಯಾಮ್ರ ನಾರಿಕೇಳಾದಿ ಫಳಂಗಳಿಂ ತಣಿಪಿ ತಪೋಧನರಂ ಕಳುಪಿ, ಶೈವತೇಜೋಭಿಹತೋನ್ಮಾದಚಿತ್ತದಿಂ ತಿರಿಗಿ ಬಂದು ಸೆಜ್ಜೆವನೆಯೊಳುಮ್ಮಳದಿಂ ಪಟ್ಟಿರ್ದಿರಲಲ್ಲಿಗೆ ಪದ್ಮಾವತಿ ಬಂದಾದಯ್ಯನನಾರೋಗಣೆಗೆಬ್ಬಿಸೆ ಕನಲ್ದು ಕಿಡಿಕಿಡಿಯೋಗಿ ಶಿರವಂ ಕುಡವೇಳ್ಕನಿತು ನಿರೋಧಂದಳೆಯದ[ಡೆ]ವೊಂದುಪವಾಸಂ ಮಾಳ್ಪೆನಲ್ಲದೂಟವಿಲ್ಲೆಂದು ನುಡಿದ ಮಾತಂ ಕೇಳ್ದು ಮಗಳ ಮೋಹಕ್ಕೆ ಮಾತೆ ಪಿತರ್ಬಂದು ಬೇಡಿಕೊಂಡೆಲ್ಲಾ ತೆರದಿಂದೊಲ್ಲದಿರಲಿಂತಪ್ಪ ಛಲಿಯೆಂತಾದಡಂ ತಾನರ್ಚಿಪ ಸೋಮನಾಥನಂ ಸುರಹೊನ್ನೆಯ ಬಸದಿಗ ತಂದಲ್ಲದುಂಬವನಲ್ಲಾತನಂ ಪ್ರಾರ್ಥಿಸಲೇಕೆಂದು ನೆಟ್ಟನೆ ನುಡಿದ ಕಟ್ಟಣಕಮುಂ ತೊಟ್ಟನೆ ಕಿವಿಯಂ ಮುಟ್ಟೆ ಘುಳು ಘುಳಿಸುತಂ ಘಳಿಲನೇಳ್ದು ಘೂರ್ಣಿಸಿ ಬಂದು ನುಡಿದಂ,

ಕೇಳ ಕೇಳ ಮರುಳ ಜೈನ, ನೀಂ ಪ್ರತಿಯಲ್ಲಂ ನಿನ್ನ ಮನವಂ ಪ್ರೇರಿಪನೀಶ್ವರಂ, ನೀನೆಂದಂತೆ ನಿನ್ನ ಜಿನಪ್ರತಿಮೆಯನೆರಳ್ಭಾಗಮಂ ಮಾಡಿ, ಸೌರಾಷ್ಟದೊಡೆಯನಂ ಬಿಜಯಂಗೆಯ್ಸಿ ತಂದಲ್ಲದೂಟವಿಲ್ಲಿಲ್ಲದೇ ನೇಮಂ ಕೈಕೊಂಡೆನೆಂದು ಗದ್ದುಗೆವೊಯ್ದಾಸ್ಫೋಟಿಸಿ ನಿಂದಿರ್ದು, ಪುಲಿಗೆರೆಯಂ ಪೊರಮಡುವಾಗಳೊಡನೊಡನೆ ಬರ್ಪ ಪದ್ಮಾವತಿಯಂ ಕಂಡು ಸೋಮನಾಥನಂ ತಂದಪೆಂ ಪುಸಿಯಲ್ಲಂಜದಿರೆಂಬಂತೆ ಸತ್ಯಹಸ್ತಮಂ ನೀಡಿ, ಸಾಗಿಸಿ ನೋಡಿ ಪಿಂತಿರಿಸಲಾಕೆಯುಂ ತನ್ನಂತೆಯುಂ ಬರ್ಪನ್ನೆಗವನಶನ ವ್ರತಮಂ ಕೈಕೊಂಡು ಪೆರಗೆ ನಿಲೆ, ಸತ್ಯನಿಧಿಯೆನಿಪ ಸತ್ಯ ಶರಣನುತ್ತರಾಭಿಮುಖನಾಗಿ ವಿಭೂತಿಯ ವೀರಂ ರುದ್ರಾಕ್ಷೆಯ ಭದ್ರಗಜಂ ಪಂಚಾಕ್ಷರಿಯ ಪಂಚಾನನಂ ನರಲೋಕಶರಭಂ ಜೈನಕುಲಕುಮುದ ಮಾರ್ತಂಡನೆನಿಪಾದಯ್ಯಂ ನಡೆದುಬರುತ್ತಂ ಗಿಡುವುಂ ಮುಳ್ಳುಂ ಮಲೆಯುಂ ಸರಿಯುಂ ದರಿಯುಂ ಹಳ್ಳಂ ಕೊಳ್ಳಂ ನದಿ ನದಂ ಕೆರೆ ತೊರೆ ಬೆಟ್ಟ ಘಟ್ಟಂಗಳೆನ್ನದೆ ಹುಲಿ ಕರಡಿ ಸರ್ಪನಮ್ಮಾವು ಕಾಡಕೋಣಂ ಕರಿ ಮೃಗಪತಿ ಶರಭ ಶಾರ್ದೂಲ ಪುರುಷಾಮೃಗಂಗಳಂ ಲೆಕ್ಕಿಸದೆ ಮಳೆ ಗಾಳಿ ಸೀತಾತಪ ಕಡುಗಾಳಂ ಗುಹೆಗಹ್ವರವಿರುಳ್ಪಗಲ್ಪಸಿವು ನಿದ್ರೆ ಪಿಪಾಸೆಗಳಂ ಕೈಕೊಳ್ಳದೆ, ನಡೆಯಲಂಗಾಲಂ ಮೊನೆಗಲ್ಲುಗಳೊತ್ತೆ ಹಲ್ಲಯಿಸಿ ಬಿರಿದು ಬಿಸಿನೆತ್ತರ್ಜಗಿಲ್ತು ರಕ್ತಪಂಕದಿಂ ಮುಳ್ಳು ಕಡ್ಡಿ ಕಸಂ ದಸಿಗಳ್ಪತ್ತಿ ಮುತ್ತಿದಡಂ ಕರಯುಗಮಂ ಬೀಸಿ ಘಾಸಿಯಾಗಿ ಲೋಳರಕ್ತಂ ಜಾಳಿಸುತ್ತಿಳಿದಂಗುಳಿಗಳ್ ಕೆಂಗಲ್ಮಸಗೆ ತೂಗಿ ಬೀಗಿದಡದೋರಂತೆ ನೆತ್ತರ್ಧಾರೆಯಿಟ್ಟಡಂ ಪಸಿವು ತೃಷೆಗಳಿಂ ಬಸುರ್ಪತ್ತಿ ಬಾಯಿಬತ್ತಿ ಬಡಕರಿಸಿ ಪಲ್ದೋರಿ ಬೆನ್ನು ಕೂನ್ತು ಮೊಗವೊಣಗಿ ಕಣ್ಕಂದಿ

ಕಾವುಳಂ ಕವಿದಡಂ ಸೋಮನಾಥನ ದರ್ಶನ ಭರಭರಿತಂ ಸರ್ವಾಂಗಮಂ ಬಗೆಗೊಳ್ಳದೆ ಭಾವಿಸದೆ ಸರ್ಪಭೂಷಣ ಧ್ಯಾನದಿಂದಿಪ್ಪತ್ತೆಂಟು ದೇವಸವೀ ತೆರದೊಳಾತುರದಿಂ ಬರ್ಪಲ್ಲಿ ಕೆನ್ನೆತ್ತರಗಲ್ಲೆಗಳನುಗುಳ್ವ ಪದತಳವಡಿಯನಿಡಲ್ಬಾರದಡೆ ಕುಳ್ಳಿರ್ದುಂ ಕುಳ್ಳಿರಲ್ಬಾಡೆಯದೆ ಪೊರಳ್ದುಂ ತನು ಸೀಳ್ದಡಂ ನುಡಿದ ಭಾಷೆಗೆಳ್ಳನಿತುಂ ಹಿಮ್ಮೆಟ್ಟದ ಕಟ್ಟಭಿಮಾನಿ ಕುಹಕವಿಲ್ಲದ ಕಲಿ ಆಸೆಯಿಲ್ಲದ ಛಲಿ ಇದಿರಿಲ್ಲದ ಬಲಿ ಪೊರಳ್ದುರುಳ್ದು ಬರುತ್ತೊಂದು ಬೆಲ್ಲವತ್ತದ ಮರದ ನೆಳಲೊಳಂ ವಿಗತಚೇತನಂ ಪಥಶ್ರಮ ಮೂರ್ಛಿತವಾಗಿ ಬರಲ್,

ಅಲ್ಲಿಗೆ ಚೀಲಾಳನ ಚಿತ್ತವಲ್ಲಭಂ ಅರಿವಾಳ್ತಾಂಡರಕಳಂಕಂ ಎಲುದೋರೆ ಸರಸವಾಡುವ ಸುಲಭಂ ನೋಯೆ ನೋಡುವ ದಯಾಪರಂ ಸಾಯಬಡಿದು ಕಿವಿಯನೂದುವ ಕರುಣಿಯೆನಿಪ ಸೌರಾಷ್ಟ್ರದೊಡೆಯಂ ಸೋಮನಾಥನೊರ್ವ ವೃದ್ಧಮಾಹೇಶ್ವರನಾಗಿ ಕೊಡೆ ಕಮಂಡಲು ಯಜ್ಞೋಪವೀತಂ ನೊಸಲ ಭಸಿತಂಬೆರಸುಮಾ ದಾರಿಯಿಂ ಬರ್ಪಂತೆ ಬಂದಾದಯ್ಯನ ಮುಂದೆ ನಿಂದು, ಮಗನೆ ಮಗನೆ, ಎಲ್ಲಿಗೆ ಪೋದಪೆ ಬಳಲ್ಕೆ ಪಿರಿದಾಯ್ತು ಸಮೀಪದೊಳೂರುಂಟೆ ಎಂದು ಕೇಳಲೊಡಂ ಚಂದ್ರಂಗೆ ಮೇಘಂ ಕವಿದಡಂ ಜಗಕ್ಕೆ ತಣ್ಪು ತಪ್ಪದೆಂಬಂತೆ ವೇಷದ ಮರೆಯ ಚಂದ್ರಧರನ ಸುಧಾವಾಕ್ಯವಾದಯ್ಯಂಗೆ ಸೀತಳಾರ್ದ್ರತೆಯಿತ್ತು ಚೇತನಗುಡಲೆಳ್ದು ನಿಂದಿರ್ದು, ಈ ಮಹೇಶ್ವರಂಗುತ್ತರಂಗೊಡುವುದರಿಂ ಮತ್ತೆ ಹತ್ತಡಿಯ ಸೋಮಯ್ಯನಲ್ಲಿಗೆ ನಡೆವೆನೆಂದು ಮರುಮಾತುಗುಡದೆ ಪೋಗುತಿರೆ ತನ್ನ ಮೇಗಣೇಕನಿಷ್ಠೆಗೆ ಪನ್ನಗಭೂಷಣಂ ಮೆಚ್ಚಿ ಮುಂದಡ್ಡಬಂದು ಕೈಯಂ ಪಿಡಿದು, ಪೇಳು ಪೇಳಿದೆಲ್ಲಿಗೆ ಪೋದಪೆಯೆನೆ ಸೌರಾಷ್ಟ್ರಪತಿಯಂ ಪುಲಿಗೆರೆಗೆ ಬಿಜಯಂಗೈಸಿ ತರಲು ಪೋದಪೆಂ ನೀಂ ಬಲ್ಲೆಯಾ ನಾನರಿಯದಿರ್ದಡಾತನರಿವನನ್ನೆಗಂ ಎನ್ನುಸುರುಳ್ಳನ್ನೆಗಮೆಯ್ದು ವೆನೆಂದು ನುಡಿದ ನಿಶ್ಚಲ ವಚನಕ್ಕೆ ಮೆಚ್ಚಿನಿಂದೆಲೆ ಮಗನೆ ಇಂತಾದಡಾಂ ಸೋಮನಾಥಂ ನಿನ್ನ ನಿಷ್ಠೆಗೆ ಮೆಚ್ಚಿ ಬಂದೆಂ ಕಂದ ಕಂದ ಬಳಲಲು ಬೇಡೆಂದು ಕರುಣಿಸಲೊಡಂ ಬಳಲಿಕೆಯಡಂಗಿದುದರಿಂ ನಂಬುಗೆಯೇರುತ್ತಂ ವೇಷಮಂ ಕಂಡು ಶಂಕಿಸುತ್ತಂ, ದೇವ ದೇವಾ ಅಮಾನುಷಚರಿತ್ರಂ ಮಾನುಷಾಕಾರವಾಗಿರ್ದಡೇನೆಂದು ನಂಬಲರಿಯದಿಪ್ಪೆನ್ನ ಮನದ ಸಂದೇಹಮಂ ಪಿಂಗಿಸಿ ಕರುಣಿಸುವುದೆಂದು ಬಿನ್ನಪಂಗೈಯ್ಯಲಾ ಮಾತಿನೊಡನೆ ಚಂದ್ರಕಳೆ ದಶಭುಜಂ ಕೆಂಜೆಡೆ ಲಲಾಟಲೋಚನಂ ಪುಲಿದೊವಲ್ಗಜಚರ್ಮಂ ನಂದಿವಾಹನನೊಪ್ಪೆ, ಗುರು ಕರುಣಿಸಿದ ಶಿವಲಿಂಗದೊಳಗಣ ಮೂರ್ತಿವಿಳಾಸಂ ಸಾಕಾರ ಸಂವಿತ್ತವಯವದ ಪರಬೊಮ್ಮಂ ವೃಷಭಾ ರೂಢತೆಗೊಂಡ ಪರಂಜ್ಯೋತಿ ಸ್ವರೂಪನೆನಿಪ್ಪ ಸೋಮನಾಥನಾದಯ್ಯನ ಕಣ್ಣ ಪುಣ್ಯದಂತೆ ಮುಂದೆ ತೊಳತೊಳಗಿ ಥಳಥಳಸಿ ಘುಳುಘುಳಿಸುತ್ತಮಿರೆಯಿರೆ,

## ಸ್ಥಲ ೩

ಕಂಡಂ ತ್ರಿಶೂಲವಭಯಕ
ರಂ ಡಮರುಗವಜಕಪಾಲವಹಿಪತಿಕಟಕಂ ।
ಕುಂಡಲವಿಂದುಕಳಾಪಾ
ಮಂಡಿತನಂ ಹಂಪೆಯಾಳ್ದನಂ ನಲವಿಂದಂ ॥

ಕಂಡುತ್ಸವದಿಂದಂ ಸೈಗೆಡೆದಂ
ತಂಡದ ಪುಳಕವನಂಗದೊಳಿಡಿದಂ
ಅಧ್ವಶ್ರಮಮಂ ಕಳೆದಂ ಕಳೆದಂ
ಸಾಧ್ವಿಯೆನಿಪ ಭಕ್ತಿಯನುರೆ ತಳೆದಂ
ನಿಂದಿರ್ದಂ ಕೈಮುಗಿದಗಿದಗಿದಂ
ಇಂದುಧರನನೀಕ್ಷಿಸುತೊಳಸುಗಿದಂ
ದೇವಾ ಮುನ್ನಿನ ತೆರದಿಂದಿಪ್ಪುದು
ದೇವಾ ನೋಡುವಡೆನಗರಿದಪ್ಪುದು
ಎಂದಡೆ ಮುನ್ನಿರ್ದಂದೊಳಿರ್ದಂ
ಕಂದನ ಸಾರಿಂಗೊಯ್ಯನೆ ಸಾರ್ದಂ
ನಾಡಿದು ಬರ್ಪೆಂ ಸೋಮನ ವಾರಂ
ಬೇಡೆಂದುಂ ಚಿಂತಾ ಸಂಸಾರಂ
ಎನಲಾದಯ್ಯಂ ನಾಡಿದು ಬಂದಡೆ
ಎನಗೆಂತಭವಾ ನೀನಿಂತೆಂದಡೆ
ಇಪ್ಪತ್ತೆಂಟುಂ ದಿನವೆಂದಿತ್ತಂ
ತಪ್ಪದೆ ನಡೆವಡೆ ಬಾರದೆನುತ್ತಂ
ಪ್ರಭುವೇ ವಿಭುವೇ ಕರುಣಿಪುದೆಂದೆನೆ
ಅಭವಾ ಶಂಕರ ಕರುಣಿಪುದೆಂದನೆ
ಆದಯ್ಯನ ನಲವಿಂದಪ್ಪುತ್ತಂ
ಸಾದರದಿಂ ಕೃಪೆಯಿಂದಪ್ಪುತ್ತಂ
ಬಿಲ್ವದ ತಳದೊಳಿರುಳ್ ಪಟ್ಟಿರ್ಪುದು
ಚೆಲ್ವಿಂ ಪುಲಿಗೆರೆಯೊಳಗಿಟ್ಟಿರ್ಪುದು
ಮರುದೆವಸಂ ಬಂದಪೆವೆರಡಿಲ್ಲಂ
ನೆರೆ ನಂಬುವುದೀ ನುಡಿಗೆಡೆಯಿಲ್ಲಂ
ಎಂದಾ ಸುತನಂ ಪಟ್ಟಿರಿಸುತ್ತಂ
ಕಂದನನೊಲವಿಂ ಬೋಳೈಸುತ್ತಂ
ನಡೆದಂ ಪುಲಿಗೆರೆಯತ್ತಲು ಶರ್ವಂ
ಮೃಡನಭವಂ ನಿತ್ಯಂ ತಾನೊರ್ವಂ

ಇತ್ತಲು ನೆರೆ ಪಟ್ಟಿರ್ದಾದಯ್ಯಂ
ಚಿತ್ತಜಹರನಾಜ್ಞೆಯೊಳಾದಯ್ಯಂ
ಘಳಿಲನೆ ಕಂದೆರೆದಂ ಪುಲಿಗೆರೆಯೊಳು
ಬಳಲುವ ಪದ್ಮಾವತಿಯಾ ಎಡೆಯೊಳು

ಕಂದೆರೆಯಲು ಕಂಡಳು ಪದ್ಮಾವತಿ
ನುಣ್ದನಿಯಿಂ ನುಡಿದಳು ಸಾತ್ವಿಕ ಸತಿ
ಎನ್ನಯ ನಿಧಿ ಬಂದುದೆ ಸಿರಿ ಬಂದುದೆ
ಎನುತುಪವಾಸದಿ ಪಟ್ಟಿರ್ದೇಳುತೆ
ಮನದೊಲವಿಂ ಪ್ರಿಯನಂ ಬಂದಪ್ಪುತ್ತೆ
ಶಿವನಂ ಕಂಡವನಂ ಕಾಣುತ್ತಂ
ಪವಣಿಲ್ಲದ ಸುಖದೊಳು ಸೇರುತ್ತಂ
ಲಲನೆಯರಂ ಪದ್ಮಾವತಿ ಕರೆವುತೆ
ನಲವಿಂ ಬೋನವ ಮಾಡಲು ಹೇಳುತೆ
ಇರಲಾದಯ್ಯಂ ಸತಿಗಿಂತೆಂದಂ
ಭರದಿಂದಂ ಬೋನಂ ಬೇಡೆಂದಂ
ನಾಳೆ ಶಿವಂ ಸೋಮಯ್ಯಂ ಬರ್ಪಂ
ನೀಲಗಳಂ ಸೋಮಯ್ಯಂ ಬರ್ಪಂ
ಗುರು ಬರ್ಪಂ ಗುರುತರ ನಿಧಿ ಬರ್ಪಂ
ಹರಿಯಜರರಿಯದಗಮ್ಯಂ ಬರ್ಪಂ
ಸುರಹೊನ್ನೆಯ ಜಿನನಂ ಸೀಳುತ್ತಂ
ಅರಹುಪ್ರತಿಮೆಯನುರೆ ಹೋಳುತ್ತಂ
ಬಂದ ಬಳಿಕ ಬೋನಂಗಳ ಮಾಳ್ಪುದು
ಇಂದುಧರನ ಕರುಣದೊಳೆಸೆದಿರ್ಪುದು

ಎಂಬೀ ನುಡಿಯಂ ಸತಿಯಳ್ಕೇಳುತೆ
ಬೆಂಬೀಳುತೆ ನಡೆದೆಡಹುತೆ ತಾಗುತೆ
ಪಾರಿಸಪಂಡಿತನಲ್ಲಿಗೆ ಬರುತಂ
ದೂರಿಸುತುಮ್ಮಳದಿಂದಂ ನಿಲುತಂ
ಆದಯ್ಯಂ ನುಡಿದುದನರುಪುತ್ತಿರೆ
ಆದರ ಉಡುಗುತ್ತಂ ಪೇಳುತ್ತಿರೆ
ಆಹಾ ತಾನೇ ತಪ್ಪಂ ತಪ್ಪಂ
ಆಹಾ ಆಹಾ ಬಳಿಕೇನಪ್ಪಂ
ಇನ್ನೇನಿನ್ನೇನಭವಂ ಬಂದಂ
ಇನ್ನೇನೀ ಬಸದಿಯೊಳೇ ನಿಂದಂ
ತಪ್ಪುವದೇಯಾತನ ನುಡಿ ಧರೆಯೊಳು
ತಪ್ಪುವದೇ ಭಕ್ತರ ನುಡಿ ಧರೆಯೊಳು
ತಂದಾ ತಂದಾ ತಾರದೆ ಮಾಣ್ಬನೆ

ಬಂದಾ ಬಂದಾ ಬಾರದೆ ಮಾಣ್ಬನೆ
ನಡೆ ನಡೆಯೆನುತಂ ಬಸದಿಗೆ ಬಂದಂ
ಕಡುಗೋಪದೊಳೆಲ್ಲರ್ಗಿಂತೆಂದಂ
ಸೋಮಯ್ಯಂ ಬಸದಿಗೆ ಬಂದಹ ಗಡ
ಏಮಾತೀವೂರೊಳು ನಿಂದಹ ಗಡ
ಹಸನಾಯ್ತಳಿಯನ ನೋಟಂ ಬೇಟಂ
ವಿಷವಾಯ್ತಳಿಯನ ಮಾಟಂ ಕೂಟಂ
ಏಳಿರೆ ರಂಗವಲಿಗಳುಮನಿಕ್ಕಿರೆ
ಏಳಿರೆ ಗುಡಿದೋರಣಗಳ ಕಟ್ಟಿರೆ

ಎಂಬೀ ಕಟಕಿಗಳಂ ನುಡಿವುತ್ತಂ
ನಂಬದ ನರಕಿಗಳೊಂದಾಗುತ್ತಂ
ಇರಲಸ್ತಾದ್ರಿಯನೇರಿದನರ್ಕಂ
ಧರೆಗದು ತೀವಿದ ತಮಸಂಪರ್ಕಂ
ಜೈನರ ಕಣ್ಣಂಧತೆ ಕವಿವಂದದೆ
ಜೈನರ ಪಾಪಂ ಪುಂಜಿಸುವಂದದೆ
ಕತ್ತಲೆ ಪುರದೊಳ್ತೀವಿದ ಬಳಿಕಂ
ಒತ್ತಂಬಿಸುತಂ ಪರ್ವಿದ ಬಳಿಕಂ
ಬೆಳಗಿನ ಬಿತ್ತಂಕುರಿಸುವ ತೆರದಿಂ
ತೊಳ ತೊಳಗಿದವಾ ತಾರಗೆ ನಭದಿಂ
ಸೋಮಯ್ಯನ ಬರವರಿಪುವ ತೆರದಿಂ
ಸೋಮಂ ಪೊರಮಟ್ಟಂ ಸನ್ಮುದದಿಂ
ದೆಸೆಯಂ ಕೌಮುದಿಯಿಂ ಧವಳಿಸುತಂ
ರಸೆಯಂ ಕೂಡೆ ಕುಳಿರ್ಕೋಡಿಸುತಂ
ಚಂದ್ರಂ ಪೊರಮಟ್ಟೊಪ್ಪಿರ್ಪಿರುಳೊಳು
ಚಂದ್ರಿಕೆ ಸುತ್ತಂ ತೀವಿಪ್ಪೆಡೆಯೊಳು
ಸೋಮಯ್ಯನ ಚಿಂತೆಯೊಳಾದಯ್ಯಂ
ಯಾಮಂಗಳನುರೆ ಕಳೆದಾದಯ್ಯಂ
ಚಿಂತಿಸುತಿರಲರುಣೋದಯವಾದುದು
ಕಂತುಹರನ ಕರುಣೋದಯವಾದುದು
ಸವಣರನಾದಯ್ಯಂ ಭಂಗಿಪುದಂ
ತವೆ ನೋಳ್ಪಿಂ ಭರದಿಂ ಸೋಲಿಪುದಂ

ಎಂಬಂದದೊಳಾದಿತ್ಯಂ ಮೂಡಲು
ತುಂಬಿದ ತಮವೆಲ್ಲಂ ಪರಿದೋಡಲು
ಪಾರಿಸಪಂಡಿತನೆಂದಿನ ತೆರದಿಂ
ಆರೈಯದೆ ನಡೆತರುತಂ ಭರದಿಂ
ಸುರಹೊನ್ನೆಯ ಬಸದಿಯ ಹೊಸ ಕದವಂ
ಹರನೊಳಗುದ್ಭವಿಸಿದ ಸನ್ಮುದವಂ
ತೆಗೆಯಲ್ಕುದ್ಯೋಗಿಸೆ ಹೋಗದೆ ನಿಲೆ
ಬಗೆಯೊಳ್ತಳವೆಳಗಾಗುತ್ತಂ ನಿಲೆ
ಒತ್ತಲು ನೂಂಕಲು ಮಿಡುಕದೆ ನಿಂದಿರೆ
ಕೆತ್ತಲು ಕಡಿಯಲು ಸೆಡೆಯದೆ ನಿಂದಿರೆ
ಕದವದು ಚಲಿಸದೆ ಧಾರುಣಿಯಂತಿರೆ
ಕದವದು ತೊಲಗದೆ ಮೇರುವಿನಂತಿರೆ
ಕಂಡಲ್ಲಿಯ ಸವಣರ್ನಡುಗುತ್ತಂ
ಚಂಡಿಗಳೆಲ್ಲಂ ಬೆಂಡಾಗುತ್ತಂ
ಬತ್ತಲೆಗರ್ ನೆರೆ ಬಾಯಂ ಬಿಡುತಂ
ಸುತ್ತಿದ ಸವಣರ್ ಮಿಗೆ ಕೂಗಿಡುತಂ
ಪಂಡಿತರೆಲ್ಲಂ ಖಂಡಿತರಾಗುತೆ
ತಂಡದ ರುಷಿಯರ್ ತರದಿಂ ನೋಡುತೆ

ಇರೆ ಬರುತಿರ್ದಂ ಹರನಾದಯ್ಯಂ
ಬರುತಿರ್ದಂ ಶಶಿಧರನಾದಯ್ಯಂ
ಧರಣೀತಳದೊಳು ಗುರುವಾದಯ್ಯಂ
ಶರಣಜನದ ಸುರತರುವಾದಯ್ಯಂ
ಸುಮ್ಮಾನದ ಸಮಸುಖಿಯಾದಯ್ಯಂ
ಹಿಮ್ಮೆಟ್ಟದ ಕಲಿ ಛಲಿಯಾದಯ್ಯಂ
ಭಸಿತದ ಭರಿತಂ ಭಾಷೆಯ ನಿರುತಂ
ಅಸಮಾಕ್ಷನ ಘನ ವಿಕ್ರಮಚರಿತಂ
ಧರೆಯೊಳ್ಕಲಿ ಛಲಿ ಬಲಿಯಾದಯ್ಯಂ
ಪರಮನ ಕರಿ ಗಿರಿ ಸಿರಿಯಾದಯ್ಯಂ
ನಡೆತರೆ ಪದ್ಮಾವತಿ ಬೆಂಬಿಡದಿರೆ
ಕಡುನೇಹಿತೆ ಒಡನೊಡನೆ ಬರುತ್ತಿರೆ

ಬರ್ಪಾದಯ್ಯನ ಸಾಮರ್ಥ್ಯದೊಳಂ
ಸರ್ಪಾಭರಣನ ಘನ ಕರುಣದೊಳಂ

ಬಸದಿಯ ಮುಂದಣ ಕುರುಡರು ಹೆಳವರು
ಮಿಸುಗುವ ಕಣ್ಕಾಲ್ಗಳನುರೆ ಪಡೆದರು
ತಳೆದಿದಿರ್ವಂದಾದಯ್ಯಂಗೆರಗುತೆ
ತೊಳತೊಳಗುವ ಭಸಿತವನಿಟ್ಟೊಪ್ಪುತೆ
ದೇವ ಗುರುವೆ ನೀವೆಂದೊಡವರುತಿರೆ
ಭಾವಿಸಿ ಜೈನರು ಬೆರಗಾಗುತ್ತಿರೆ
ಆಯತಿಯಿಂ ಭಕ್ತಿಯ ಭಂಡಾರದಿ
ಬೀಯಗದಲ್ಲಿಗೆ ಕೈ ಬರ್ಪಂದದಿ
ನಿಷ್ಠೆಯ ನಿಧಿ ಕಡುಪಿಂದೆಯ್ತಂದಂ
ನೆಟ್ಟನೆ ಬಾಗಿಲ ಮುಂದೆಯೆ ನಿಂದಂ
ಸವಣರ ಹಾಳೆದೆ ಹಡಿದೆರೆವಂತಿರೆ
ಸವಣರ ಕಲ್ಲೆದೆ ಹಾಳಾಗುತ್ತಿರೆ
ನಲಿದಾದಯ್ಯಂ ಕಂಡಾ ವಿಭುವಂ
ಸಲೆ ನೆಲಸಿದ ಸೋಮಯ್ಯ ಪ್ರಭುವಂ
ಶಿವಭಕ್ತರ ಘನತರ ಸುಖಸಿಂಧುವೆ
ಶಿವಭಕ್ತರ ಮನದನುಪಮ ಬಂಧುವೆ
ಶರಣರ ನೂತನ ಗೀತದ ಪುರುಳೆ
ಶರಣರ ಚಿತ್ತದ ಬಿತ್ತಿನ ತಿರುಳೆ
ಸುರುಚಿರ ಶರಣರ ಕಣ್ಣಿಂ ಗತಿಯೆ
ವರ ಮುನಿಗಳ ಘನ ಮತಿಯುನ್ನತಿಯೆ
ಎಂದಾದಯ್ಯಂ ನೆರೆ ಹೊಗಳುತ್ತಿರೆ
ಇಂದುಧರನ ಕರುಣಂ ಕವಿವುತ್ತಿರೆ

ಭಕ್ತಿಯ ಬಾಸಣವೋಸರಿಪಂತಿರೆ
ಮುಕ್ತಿಯ ಮುಚ್ಚುಳ ಮುಖವರಳ್ವಂತಿರೆ
ಘಳಿಲನೆ ಶಿವನ ಕವಾಟಂದೆಗೆಯಲು
ಪುಳಕಂ ಭಕ್ತನ ಮೆಯ್ಯೊಳ್ನೆಗೆಯಲು
ಕಾಮಹರಂ ಕೃಪೆಯಿಂದೊಳಗಿರ್ದಂ
ಸೋಮಧರಂ ಮುದದಿಂ ಮೂಡಿರ್ದಂ
ಅರುಹನನಿರ್ಭಾಗಂ ಮಾಡುತ್ತಂ
ಹರನೊಲವಿಂದಂ ಸಲೆ ನೆಲಸುತ್ತಂ
ಸುರನದಿ ಜಡೆಮುಡಿ ಶಶಿಕಲೆಯೊಪ್ಪಿರೆ
ಉರಗಾಧಿಪ ಕುಂಡಲಯುಗನೊಪ್ಪಿರೆ

ಶಶಿ ರವಿ ಶಿಖಿ ನಯನತ್ರಯನೊಪ್ಪಿರೆ
ಹೊಸ ಸುಧೆ ಸೂಸುವ ಸುಖಮುಖವೆಸೆದಿರೆ
ಡಮರುಗ ತ್ರಿಶೂಲ ದಶಭುಜವೆಸೆಯಲು
ಕಮಲಜ ಶಿರವಭಯಕರಂ ಮೆರೆಯಲು
ಬಿಸಿಲಂ ಬೀರುವ ಪುಲಿದೊವಲೆಸೆಯಲು
ಅಸದಳದೆಡಗಾಲೊಳು ತೊಡರೆಸೆಯಲು

ಬಸವನ ಮೇಲಣ ವಾಘೆಯದೊಪ್ಪಲು
ಮಿಸುಗುವ ಭೋಗಿಯ ರಾಘೆಯದೊಪ್ಪಲು
ಪರುಷದ ಪಲ್ಲಣದಂಕಣಿಯೆಸೆಯಲು
ಉರಗನ ಹೆಡೆಗಳ ಮಣಿಗೊಡೆಯೆಸೆಯಲು
ಅಣಿಯರದಿಂ ಬೆಳೆದೊಪ್ಪುವ ಕಕುದಿನ
ಫಣಿಗಳ ಪಣೆಗಟ್ಟಿನ ನುಣ್ಗೋಡಿನ
ಶ್ರುತಿಗಳ ನೆಲೆವನೆಯೆನಿಸುವ ಕಿವಿಗಳ
ಅತಿ ಧರ್ಮದ ಕಣ್ಣೆನಿಸುವ ಕಂಗಳ
ಭೀಕರತರ ಘುರುಘುರಿತ ಘ್ರಾಣದ
ಲೋಕೈಕಾತುಳ ನಿಟಿಲ ತ್ರಾಣದ
ಸತ್ಯಂ ಶಾಂತಂ ತನುವಾದಂತಿರೆ
ಮುಕ್ತಿಯ ಮೊಳೆ ಫಲವಾದಂತಿರುತಿರೆ
ಸೊಗಯಿಸುವುರಗೆಜ್ಜೆಯ ಘನ ಘಂಟೆಯ
ಯುಗಧರ್ಮಂ ಸೇವಿಪ ಚತುರಂಘ್ರಿಯ
ವರ ತೀರ್ಥಂಗಳು ನೆಲಸಿದ ವಾಳದ
ಉರಗಂಗಳ ನಿರ್ಮಲ ಖುರನಿಗಳದ
ಪ್ರಣವಧ್ವನಿಗಳು ಅಂದುಗೆಯಾಗಿರೆ
ಅಣಿಯರದಿಂ ಶ್ರುತಿ ಕಿಂಕಿಣಿಯಾಗಿರೆ
ಚೆಲುವಿಂದೊಪ್ಪಿದ ನಂದಿಯನೇರಿದ
ಒಲಿವ ಗಣೇಶ್ವರರೊಲವಂ ಹೇರಿದ
ಹರಿಯಜಸುರಪರ ಮನಮಂ ಮೀರಿದ
ಶರಣಜನಕೆ ತನ್ನಿರವಂ ತೋರಿದ
ಸುರಹೊನ್ನೆಯ ಬಸದಿಯೊಳಂ ನೆಲಸಿದ
ನರಲೋಕದೊಳಚ್ಚರಿಯಂ ಮಾಡಿದ
ಸೋಮಯ್ಯನನತಿ ಮುದದಿಂ ಕಾಣುತೆ
ಆ ಮಹಿಮಂ ಬಯಸಿತು ಕೈಗೂಡುತೆ

ಆದರದಿಂ ಹೆಚ್ಚುತೆ ಪೊರೆಯೇರುತೆ
ಆದಯ್ಯಂ ಸುಖದಿಂ ನಲಿದಾಡುತೆ
ಕುಣಿವುತೆ ಕೂಗುತೆ ತೂಗುತೆ ತೊನೆವುತೆ
ಮಣಿವುತಲೊಲೆವುತೆ ಬೀಗುತೆ ತೇಗುತೆ
ಬಂದು ವೃಷೇಂದ್ರನ ಚರಣವನಪ್ಪುತೆ
ಮುಂದರಿಯದೆ ಸುಖಮೂರ್ಛೆಯಳೊಪ್ಪುತೆ
ಪುಳಕದೊಳುರ್ಬುತೆ ಗದುಗದಿಸುತ್ತಂ
ಇಳಿವಶ್ರುಗಳಿಂದಂ ನೆನೆವುತ್ತಂ
ಬೆಮರುತೆ ಬಿಕ್ಕುತೆ ಸುಖದಿಂ ಸೊಕ್ಕುತೆ
ಅಮರ್ದಪ್ಪುತೆ ಕೊರ್ಬುತೆ ಬೊಬ್ಬಿಕ್ಕುತೆ

ಇರ್ದಾದಯ್ಯನನೀಶ್ವರ ನೋಡುತೆ
ಸಾರ್ದವನಂ ಪಿಡಿದಪ್ಪುತೆ ಪೆರ್ಚುತೆ
ನಲವಿಂ ಮೂರ್ಧ್ನಿಘ್ರಾಣಂ ಮಾಡುತೆ
ಒಲವಿಂ ಸಾಮರ್ಥ್ಯಮುಮಂ ಕೂಡುತೆ
ಕೇಳೆಲೆ ಕಂದಾ ಸವಣರ್ನೆರೆದರು
ಆಳೆದ್ದೆಲ್ಲಾ ಕ್ಷುದ್ರರ್ನೆರೆದರು
ಹೋಗಿಯವಂದಿರನುರೆ ಸಂಹರಿಪುದು
ಬೇಗಂ ಶಿವಭಕ್ತಿಯನುದ್ಧರಿಪುದು
ಹೋಗೆಂದೊರ್ವ ಗಣೇಶನನೀವುತೆ
ರಾಗದಿ ಬತ್ತೀಸಾಯುಧವೀವುತೆ
ಕಳುಪಲ್ಕಾದಯ್ಯಂ ನಡೆತಂದಂ
ಕಳೆಯೇರುತೆ ಬಾಗಿಲೊಳಂ ನಿಂದಂ
ನಿಂದಿರೆ ಸವಣರ್ ಲಕ್ಷದ ಸಂಖ್ಯೆಗೆ
ಬಂದುರವಣಿಸುತ್ತಿರೆ ಕೋಪಂ ಮಿಗೆ
ಕಂಡಾದಯ್ಯಂ ಬೇಡೆಂದೆನುತಿರೆ
ತಂಡದ ಜೈನರನುರೆ ಗರ್ಜಿಸುತಿರೆ
ನೋಡಿದಪೆವು ಸೋಮಯ್ಯನನೆಲ್ಲಂ
ಬೇಡೆನ್ನದಿರೆಮ್ಮಿಷ್ಟವನೆಲ್ಲಂ
ಎನುತಂ ವಚನದೊಳೊಳ್ಪಿತನಾಡುತೆ
ಮನದೊಳು ಪಾತಕಮಂ ನೆರೆ ನೆನೆವುತೆ
ಬರಲಾದಯ್ಯಂ ಗರ್ಜಿಸಿ ನುಡಿದಂ
ಅರುಹವ್ರತಿಗಳನೆಲ್ಲರ ಜಡಿದಂ

ಕತ್ತಲೆ ಸೂರ್ಯನನಾಲೋಕಿಪುದೆ
ಬತ್ತಲೆಗಳಿರಾ ನಿಮಗೊದಗುವುದೆ
ತರಗೆಲೆ ದಾವಾನಳನಂ ನೋಳ್ಪುದೆ
ನೆರೆ ಮೂರ್ಖರಿರಾ ನಿಮಗಿದು ತಕ್ಕುದೆ

ಎನೆ ಲೆಕ್ಕಿಸದುರವಣಿಸುತೆ ಬರೆವರೆ
ತನ ತನಗೆಲ್ಲಾ ಜೈನರ್ ನಡೆತರೆ
ಗಣನಾಥನನಾದಯ್ಯಂ ನೋಡಲು
ಕ್ಷಣದಿಂದೊಂದಾಯುಧಮಂ ನೀಡಲು
ಕೊಂಡಾದಯ್ಯಂ ಶಿವನಂ ನೆನೆವುತೆ
ಕಂಡುರವಣಿಸುತೆ ಜೈನರನಟ್ಟುತೆ
ಕೆಡೆ ಕೆಡೆ ಕೆಟ್ಟ ಶಿವದ್ರೋಹಿಗಳಿರ
ಫಡ ಫಡ ಪಚ್ಚಪಸಿಯ ಪಾತಕರಿರ
ಎನುತಿರಲೊಂದು ಸಹಸ್ರಂ ಸತ್ತುದು
ಮುನಿದಿರಲಿಚ್ಛಾಸಿರವಡಿಗದ್ದುದು
ಈ ತೆರದಿಂ ಬತ್ತೀಸಾಯುಧದಿಂ
ಪಾತಕರಂ ಕೊಲುತಿರೆ ಕಡುಭರದಿಂ
ಕಂಡಾ ಜೈನರ ತಿಂತಿಣಿಯೆಲ್ಲಂ
ಗಂಡುಗೆಡುತ್ತತಿ ಭೀತಿಯೊಳೆಲ್ಲಂ
ಸೈಗೆಡೆದದು ಹಲ್ಲಂಗಿರಿವುತ್ತಂ
ಮೈಗರೆವುತೆ ಬೆರಲಂ ಕಚ್ಚುತ್ತಂ
ಶರಣೆಂದರನೆಲ್ಲರನುರೆ ಕಾವುತೆ
ಧುರದೊಳಗಿದಿರಾದವರಂ ತೀರ್ಚುತೆ
ಮರೆವೊಕ್ಕವರಂ ನೆರೆ ರಕ್ಷಿಸುತಂ
ಹೆರೆಸೂಡಿದನಲ್ಲಿಗೆ ತಿರುಗುತ್ತಂ
ಬಂದಾ ಸೋಮಧರಂಗೆರಗುತ್ತಂ
ನಿಂದೊಲವಿಂದಂ ಕೈಮುಗಿವುತ್ತಂ
ದೇವಾ ಜೈನರು ಸಾರ್ದರು ತೀರ್ದರು
ದೇವಾ ಖಳರಂತಕನಂ ಸಾರ್ದರು
ಪರಮ ಪ್ರಭುವೇ ಆಯುಧವಿಲ್ಲಿವೆ
ಉರಿವುರಿವುತೆ ಭೋರ್ಗರೆವುತೆ ಮುಂದಿವೆ
ಇವನೆಲ್ಲಿರಿಸುವೆನಂತಕಹರನೆ
ಭವನೇ ಭರ್ಗನೆ ಗಿರಿಜಾವರನೆ

ಎನೆ ಸೋಮಯ್ಯಂ ಕರುಣಿಸಿ ನೋಡುತೆ
ತನಯನನಾಲಿಂಗಿಸಿ ಮುಂಡಾಡುತೆ
ಖಡ್ಗವನೊಂದೆಡೆಯೊಳು ಬೈತಿಡಿಸಲು
ಖಡ್ಗದ ನಾಮದ ತೀರ್ಥವದೆನಿಸಲು
ಆ ಸಮಯದೊಳೆಲ್ಲಾ ಶರಣರ್ಬರೆ
ದೇಶದ ಗಣಮುಖ್ಯರ್ಗಳ್ಬರೆವರೆ
ಕಂಡಾದಯ್ಯಂ ಗಣಕುಲಕೆರಗುತೆ
ತಂಡದ ಪುಳಕಾವಳಿಯಂ ಹೇರುತೆ
ಸೋಮಯ್ಯನನೊಲವಿಂದಂ ತೋರುತೆ
ಕಾಮಹರನನೆಲ್ಲರ್ಗಂ ತೋರುತೆ
ನಲವಿಂ ಪ್ರಸಾದಭೋಗಂ ಮಾಡುತೆ
ನಲಿ ನಲಿದೊಲೆದೊಲೆದಕ್ಕರೊಳಾಡುತೆ
ಪದ್ಮಾವತಿಯಂ ನಲವಿಂದಪ್ಪುತೆ
ಪದ್ಮಜಮಸ್ತಕ ಹಸ್ತನನರಿಪುತೆ

ಇರೆ ಹೂಮಳೆಗರೆದುದು ನಭದಿಂದಂ
ತರದಿಂ ಮೊಳಗಿತು ದುಂದುಭಿವೃಂದಂ
ಕಹಳಾರವವೆಣ್ದೆಸೆಗುಣ್ಮುತ್ತಿರೆ
ಬಹುವಿಧ ವಾದ್ಯಧ್ವನಿ ಪೊಣ್ಮುತ್ತಿರೆ
ಬಂದುದು ಪುಷ್ಪಕವಾಗಸದಿಂದಂ
ನಿಂದುದು ಶರಣರ ನಡುವೊಲವಿಂದಂ
ಏರಿದನಾದಯ್ಯಂ ಶುಭಚರಿತಂ
ಏರಿದನಾ ಪದ್ಮಾವತಿ ಸಹಿತಂ
ಶರಣರು ಸುಖದಿಂ ಕುಣಿದಾಡುತ್ತಿರೆ
ಅರುಹವ್ರತಿಗಳು ಬಲವಳಿವುತ್ತಿರೆ
ಪುರಜನವೆಲ್ಲಂ ಬೆರಗಾಗುತ್ತಿರೆ
ಧರೆ ಕೌತುಕದಿಂ ಕೊಂಡಾಡುತ್ತಿರೆ
ನೆಗೆದುದು ಪುಷ್ಪಕವಂಬರ ತಳದೊಳು
ಬಗೆ ಮಿಗೆ ನೆಗೆದುದು ತಾರಾಪಥದೊಳು
ನಡೆತರುತಂ ನಂದೀಶನ ಬಾಗಿಲ
ನಡುವೆ ವಿಮಾನವನಿಳಿದಾದಯ್ ನಲ
ವೊದಗಲು ಭಕ್ತರ ಭಾಗ್ಯದ ಬಯಕೆಗೆ
ಸದಮಳ ಶರಣರ ಪರಮಜ್ಯೋತಿಗೆ

ನಿರುಪಾಧಿಕ ಜ್ಯೋತಿರ್ಮಯ ಭಾನುಗೆ
ಎರೆದಾನತಜನ ವರಸುರಧೇನುಗೆ
ಮೈಯಿಕ್ಕುತೆ ಮುದದಿಂ ಪಟ್ಟಿರ್ದಿರೆ
ಕೈಯೆತ್ತುತೆ ಕರುಣಂದೋರುತ್ತಿರೆ
ಶಿವನಾದಯ್ಯನನೊಲಿದಪ್ಪುತ್ತಂ
ಪವಣಿಲ್ಲದ ಸುಖದಿಂದೊಪ್ಪುತ್ತಂ
ನಂದೀಶಂಗಾದರದಿಂ ತೋರುತೆ
ನಿಂದ ಗಣಾಳಿಗೆ ನಲಿವಿಂ ಪೇಳುತೆ
ಮುನ್ನಿನ ಆದಿಗಣೇಶನ ನಾಮಂ
ಸನ್ನುತವಾಗಿರೆ ಕೊಡುತತಿ ಪ್ರೇಮಂ
ಮಿಗೆ ಪದ್ಮಾವತಿಯಂ ಕರೆವುತ್ತಂ
ಸೊಗಯಿಪ ಸುರಸತಿಯರೊಳಿರಿಸುತ್ತಂ
ಕೈಲಾಸಾದ್ರೀಶ್ವರನೊಪ್ಪಿರ್ದಂ
ಶೈಲಜೆಯರ ಸುಖನಿಧಿಯೊಪ್ಪಿರ್ದಂ
ಪುಲಿಗೆರೆಯೊಳು ನೆಲಸಿದನೊಪ್ಪಿರ್ದಂ
ಪುಲಿಗೆರೆಯರಸಂ ನಲಿದೊಪ್ಪಿರ್ದಂ
ಏಕನನೂನ ಪ್ರಭುವೊಪ್ಪಿರ್ದಂ
ಸಾಕಾರಂ ಸನ್ನಿಭನೊಪ್ಪಿರ್ದಂ
ವೃಷಭಾರೂಢ ಪ್ರಭುವೊಪ್ಪಿರ್ದಂ
ಶಶಿಧರ ವಿಷಧರನತಿಬಲನಿರ್ದಂ
ಬ್ರಹ್ಮಾಂಡಾಭರಣಂ ಮೆರೆದಿರ್ದಂ
ಬ್ರಹ್ಮಕಪಾಲಾಂಕಂ ಮೆರೆದಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ ೨೧೨-೫೧೮

ಅಯ್ಯಯ್ಯ ನಿಮ್ಮನೊಲವಿಂ
ದೊಯ್ಯನೆ ಪುಲಿಗೆರೆಗೆ ಬರಿಸಿ ನಿಲಿಸಿದ ಕಲಿಯಾ
ದಯ್ಯನವನೆಂದು ಭಕ್ತಿಯ
ನಯ್ಯಾ ಕರುಣಿಸುವುದೆನಗೆ ಹಂಪೆಯ ರಾಯಾ ॥

❖❖

# ೧೫. ಏಕಾಂತರಾಮಿತಂದೆಯ ರಗಳೆ

ನತಜನ ಸಮೀಪನಭವಂ
ಶ್ರುತಿದೂರಂ ಸಕಲದೇವಸೇವ್ಯಂ ಮೆರೆದಂ ।
ಕ್ಷಿತಿಯೊಳಗೆ ರಾಮಿತಂದೆಯ
ನತಿಶಯದಿಂ ಕರುಣಿ ಹಂಪೆಯ ವಿರೂಪಾಕ್ಷಂ ॥

ಶ್ರೀ ಮೇರುವಿಂಗೆ ದಕ್ಷಿಣ ದಿಶಾಭಾಗದೊಳು
ಭೂಮಿಗೆ ವಿಭೂಷಣಮೆನಿಪ್ಪುದತಿ ರಾಗದೊಳು
ಹೆಸರೊಪ್ಪುವಬ್ಬಲೂರೆಂಬ ಪೆರ್ಮೆಯ ಪುರಂ
ವಸುಧಗೆಸೆದಿರ್ಪುದಂತದು ಕೀರ್ತಿ ಸಡಗರಂ
ಮುಗಿಲನಳ್ಳಿರಿವ ಕೋಂಟೆಯ ನೀಳ್ದ ತೆನೆಗಳಿಂ
ಗಗನದೊಳ್ಪಸರಿಸುವ ಬಿರುದಿನಟ್ಟಣೆಗಳಿಂ
ಬಗಿದು ಪಾತಾಳಮಂ ಮುಟ್ಟಿದಗಳುದ್ದದಿಂ
ನೆಗದಂಬರದೊಳೆಸೆವ ಹಳವಿಗೆಗಳೊಪ್ಪದಿಂ
ಹೊಳೆ ಹೊಳೆವ ಹೊಸ ಸೋಮ ಸೂರ್ಯವೀದಿಗಳಿಂದೆ
ನಳನಳಿಸುತಿರ್ಪ ಜಿನಭವನ ಕೋಟಿಗಳಿಂದೆ
ದೆಸೆಗೆ ಸಂಭ್ರಮಿಪ ಕೀಳ್ ಜೈನರೊತ್ತೊತ್ತೆಯಿಂ
ಎಸೆವುದಾ ಪುರವದರೊಳಗೆ ಮಾನ್ಯವೃತ್ತಿಯಿಂ
ಕತ್ತಲೆಯ ನಡುವೆ ಮಿನಿಮಿನಿಪ ಜ್ಯೋತಿಯ ತೆರದೆ
ಸುತ್ತಿರ್ದ ಬಕದ ನಡುವಣ ಮರಾಳನ ತೆರದೆ
ನೆರೆದ ಕಬ್ಬುನದೊಳಗೆ ಸಿಲ್ಕಿದ ಪರುಷದಂತೆ
ತರು ಗುಲ್ಮ ಲತೆಗಳೊಳಗಿರ್ಪ ಚಂದನದಂತೆ
ಬಸದಿಗಳ ನಡುವಿರ್ದುದೊಂದೇ ಶಿವಾಲಯಂ
ಮಿಸುಪ ಬ್ರಹ್ಮೇಶ್ವರಂ ನೆಲಸಿದ ಶಿವಾಲಯಂ
ಆ ಶಿವಾಲಯದೊಳಗೆ ಬಡವಾಗಿ ಶಂಕರಂ

ದೇಶಿಗರ ತೆರದೆ ಸದ್ಭಕ್ತರಿಲ್ಲದೆ ಕರಂ
ಜಿನನವರ್ ಮಾಡುವ ನಿರೋಧಮಂ ನೋಡುತಂ
ತನತನಗೆ ನುಡಿವ ದುಃಶ್ರುತಿಗಳಂ ಕೇಳುತಂ
ಪೂಜೆಯಿಲ್ಲದೆ ಮಜ್ಜನಕ್ಕೆರೆಹರಿಲ್ಲದಿರೆ
ಓಜೆಗೆಟ್ಟರುಹನವರೆಲ್ಲರುಂ ಬಗೆಯದಿರೆ
ಭುಗಿಲನುರುಪಲ್ ನೆನೆವುತೊಲ್ಲದೆ ತಿಳಿದು ನೋಡಿ
ಸೊಗಯಿಸುವ ಭಕ್ತನಂ ತಂದು ಮೆರೆಯಲ್ವೇಡಿ
ಎನ್ನಯ ನಿರೋಧಮಂ ಕೇಳರೆನ್ನವರೆಂದು
ಇನ್ನುದಾಸೀನಮಂ ಮಾಡರೆನ್ನವರೆಂದು
ಶಶಿಮಂಡಲದ ಚಕೋರಿಗಳೆಲ್ಲ ಪಾರ್ವಂತೆ
ಎಸೆವ ಪೊಕನೊಲಿದು ಚೈತ್ರನ ಬರವ ಪಾರ್ವಂತೆ
ಬಯಸುತಿರ್ದಂ ತನ್ನೊಳೊಂದಿರ್ಪ ಧೀರನಂ
ಬಯಸುತಿರ್ದಂ ನಿಷ್ಠೆ ಬೇರ್ವರಿವ ವೀರನಂ

ಇರಲಿತ್ತಲತ್ತಲುತ್ತರ ದಿಶಾಭಾಗದೊಳು
ಹರಭಕ್ತನೇಕಾಂತರಾಮಯ್ಯನೊಪ್ಪದೊಳು
ಇರ್ಪನಾತನ ನಿಲವನೇನೆಂದು ಬಣ್ಣಿಪೆಂ
ಸರ್ಪಭೂಷಣನೊಲ್ಮೆಯವತಾರನೆಂದಪೆಂ
ನಿರ್ದಂಭನನಸೂಯನತನುಹರನೆಂದಪೆಂ
ನಿರ್ದೋಷಿ ಶುಚಿ ನಿಯತನಾಜ್ಞಾಧರೆಂದಪೆಂ
ನುಡಿಯಂ ನುಡಿದ ಬಳಿಕ ತಪ್ಪನಚಲಿತ ವಚನ
ಎಡೆಗುಡಂ ಕೊಟ್ಟ ಬಳಿಕಿಚ್ಛೈಸದವರ ಮನ
ಅಡಿಯನಿಡನಿಟ್ಟು ಹಿಮ್ಮೆಟ್ಟ ಬಳಿಕಂತು ಕಲಿ
ತೊಡ[ರ]ಮಂ ತೊಡಕಿ ಬಿಡಿಸಲ್ಬಾರದಂತು ಛಲಿ
ಇಂತೆನಿಪ ಶಿವನ ಭಕ್ತಿಯ ನಿಷ್ಠೆಯೊಳ್ನಿಂದು
ಚಿಂತಿಸಿದನಿದ್ದಿದ್ದು ತನ್ನ ಮನದೊಳಗಂದು
ಅರಿಬಿರುದರಂ ಧೀರರಂ ಸತ್ಯ ಭಕ್ತರಂ
ಹರವರಿಸುವಪ್ರತಿಮ ಶಿವಲಿಂಗಯುಕ್ತರಂ
ದಿವ್ಯ ಶಿವಲಿಂಗಂಗಳಂ ಶಿವಕ್ಷೇತ್ರಮಂ
ಸೇವ್ಯವೆನಿಸಿರ್ದ ಹರಶರಣ ಸಾಮರ್ಥ್ಯಮಂ
ನೋಡಲುದ್ಯೋಗಮನನಾಗಿ ಚಿಂತಿಸ ತೊಡಗೆ
ನೋಡಬ್ಬಲೂರ ಜಿನನ ಪ್ರತಿಮೆ ನಡುನಡುಗೆ

ಪೊರಮಟ್ಟನಪ್ರತಿಮನತುಳಬಳನುರವಣಿಸಿ
ನೆರೆ ಮನದ ಶಿವಭಕ್ತನಾನಂದಮಂ ಧರಿಸಿ
ಸಕಳ ಭವಿಗಳ ಪಾಪಗಳನೋವಿ ಕಳೆವುತಂ
ಸಕಳ ದೇಶಂಗಳಂ ಪಾವನಂ ಮಾಡುತಂ
ದುರಿತಕುಲಮೇಘ ಮಾರುತಮೂರ್ತಿ ಬರುತಿರ್ದ
ಉರವಣಿಪ ನಿಂದಕಧ್ವಾಂತ ರವಿ ಬರುತಿರ್ದ

ಇಂತು ಪಲವೆಡೆಗೆಯ್ದಿ ನಲಿನಲಿದು ಬರುತಮಿರೆ
ಮುಂತೆ ದೂರದಲಬ್ಬಲೂರಲ್ಲಿ ತೋರುತಿರೆ
ನೆರೆದಿರ್ದ ಬಸದಿಗಳು ಕಣ್ಗೆ ಬಿಳಿದಾಗಿರಲು
ಹರಭವನವೆಂದು ಕೈಯೆತ್ತಿ ಪೊಡವಡುತಿರಲು
ನಡುಗುತಂ ಬೆಮರುತಲ್ಲಿಯ ಜೀನಪ್ರತಿಮೆಗಳು
ಘುಡು ಘುಡಿಸಿ ಕಣ್ಣನೀರಿಕ್ಕುತಂ ಪ್ರತಿಮೆಗಳು
ಭಂಗಂಗಳಡಗಿ ಒರ್ಗುಡಿಸಿದವು ಪ್ರತಿಮೆಗಳು
ಶೃಂಗಾರವಳಿದು ತಲ್ಲಣಿಸಿದವು ಪ್ರತಿಮೆಗಳು
ಹಿಂದಿಂಗೆ ಬೆರಗಾದವಕಟಕಟ ಪ್ರತಿಮೆಗಳು
ಮುಂದಿಂಗೆ ಮೂಗೂರಿದವು ಜಿನಪ್ರತಿಮೆಗಳು
ಒಡನೆದ್ದವಾ ಬಾಗಿಲೊಳ್ಕೇಸಿರುಂಪೆಗಳು
ನಿಡುಸರಂಗೊಂಡು ಕರೆದವು ಪಗಲ್ ಬಳ್ಳುಗಳು
ಈ ತೆರದೊಳುತ್ಪಾತವಾಗುತಿರೆ ನಡೆತಂದು
ನೀತಿಯಿಲ್ಲದ ಸವಣರೂರ ಹತ್ತಿರೆ ಬಂದು
ಕೂಡೆ ಪುರದೊಳ್ಪೊಕ್ಕು ಬಾಗಿಲ್ಗಳಂ ಕಳಿದು
ನೋಡೆ ಬತ್ತಲೆಯ ಬೊಂಬೆಗಳಿರಲ್ಕಳವಳಿದು
ತಿರುಗಿದಂ ಹರ ಹರ ನಮಃಶಿವಾ ಎಂದೆನುತೆ
ಪರಮಭಕ್ತಂ ಹೇಸಿದಂ ಸುಡು ಸುಡೆಂದೆನುತೆ
ಎಲ್ಲವುಂ ಜಿನಭವನವಾಗೆ ಸುರ್ರನೆ ಸುಯ್ದು
ಪೊಲ್ಲವಾಯ್ತೆನುತೆ ಮಿಗೆ ಮರುಗಿ ಮುಮ್ಮಳವಾಯ್ದು
ತಲೆಗೊಡಹಿ ಸಿಡಿಮಿಡಿಗೊಳುತ್ತೆ ಚೀಃ ಚೀಃ ಎನುತೆ
ನೆಲನ ಹೊಯ್ದುಂ ತನ್ನ ಬಯ್ದುಕೊಳುತಂ ಬರುತೆ
ಹುಟ್ಟಿದಂದಿಂದವೀ ಪ್ರತಿಮೆಯಂ ಬಲ್ಲೆನೆ
ಕೆಟ್ಟೆನಿಂತೇಕಾಯ್ತು ನಾಂ ಭಕ್ತನಲ್ಲೆನೆ
ಪೋಪಡಿರುಳಾಯ್ತಿರಲ್ಬಾರದೇವೆಂ ಶಿವನೆ
ಆಪತ್ತೆನಗಿದರಿಂದಧಿಕವಿಲ್ಲೆಲೆ ಶಿವನೆ

ಎನುತಿರಲ್ ಬ್ರಹ್ಮೇಶ್ವರಂ ಕರುಣದಿಂ ಬಂದು
ತನಗೆ ಸೊಗಸುವ ಭಕ್ತವೇಷ ಮಾರ್ಗದೆ ನಿಂದು
ರಾಮತಂದೆಗಳ ಕೆಲಬಲದಲ್ಲಿ ಸುಳಿವುತಿರೆ
ಕಾಮಹರನಲ್ಲಿ ತನ್ನಂ ಮರೆಸಿ ನಿಲುತಮಿರೆ
ಕಂಡಿದೇನೀ ಪುರದೊಳಿರ್ಪವರ ಪರಿಯಲ್ಲ
ಖಂಡೇಂದುಮೌಳಿಯ ಶರಣರಪ್ಪರೋ ಅಲ್ಲ
ಶಿವನ ಭಕ್ತರ ವೇಷಮಾರ್ಗದಂತಿರ್ದಪರು
ಹವಣಿಸದೆ ಎನ್ನ ಮುಂದೆಡೆಯಾಡುತಿರ್ದಪರು
ನೆರೆದ ಕಲ್ಗಳ ನಡುವೆ ಪರಿಸದ ಕಣಿಯ ಕಂಡೆ
ಸರ ಹರಿದ ಮಣಿಗಳೊಳು ಚಿಂತಾಮಣಿಯ ಕಂಡೆ
ಗುಣಹೀನಧೇನುಗಳೊಳಗೆ ಕಾಮಧೇನುವಿದೆ
ಕಣಗಿಲೆಯ ತೋಪಿನೊಳು ಸಲೆ ಕಲ್ಪವೃಕ್ಷವಿದೆ
ನುಡಿಸಿ ನೋಡುವೆನಾದುದಕ್ಕೆಂದು ಸಾರ್ತಂದು
ನಿಡುಸುಯ್ಯುತುಮ್ಮಳಿಸುತೆಂತಕ್ಕುಮೋ ಎಂದು
ಶರಣಾರ್ಥಿ ನಿಮ್ಮ ಮಠವಾವುದೆಂದೆನುತೆರಗೆ
ಪುರದೊಳಗೆ ಬ್ರಹ್ಮೇಶ್ವರಾಲಯವೆನುತೆ ಪೋಗೆ
ಎಲ್ಲಿ ಬ್ರಹ್ಮೇಶ್ವರವೆನುತ್ತೆ ಕಣ್ಬಂದಂತೆ
ನಿಲ್ಲದುರವಣಿಸುತ್ತಲೈದಿ ಗುರುಗಳ ಪಿಂತೆ
ನಡೆದದೊಡನಡೆದು ಪರಿದಡಮೊಡನೆ ಪರಿತಂದು
ಮೃಡನಾಲಯಂಬುಗಲ್ಬೆನ್ನಲೇ ಪುಗುತಂದು
ಧೊಪ್ಪೆನಲ್ ಶಂಕರನ ಚರಣತಳದೊಳ್ಬಿದ್ದು
ಕುಪ್ಪಳಿಸಿ ಕಣ್ಣನೀರೊಡೆಯಲಳಲುತ್ತೆದ್ದು
ಏನಯ್ಯ ಶಿವನೆ ಉಮ್ಮಳಿಸುತಿರ್ದೈ ತಂದೆ
ಏನಯ್ಯ ಕರ ನಿರೋಧದೊಳಿರ್ದೆ ಎಲೆ ತಂದೆ
ಎಂದೆನುತ್ತಪ್ಪಿಕೊಂಡಡಿಗಡಿಗೆ ಮುಂಡಾಡಿ
ಬಂದಾಯಸವನುಳಿದು ಕಡು ನೇಹದಿಂ ನೋಡಿ
ದೇವ ಇಂತಿರತಕ್ಕುದೇ ದೋಷಕರ ನಡುವೆ
ದೇವ ಇಂತಿರ್ಪರೇ ಶಿವದ್ರೋಹಿಗಳ ನಡುವೆ
ಎನೆ ಶಶಿಧರಂ ರಾಮತಂದೆಯಂ ಬಿಗಿದಪ್ಪಿ
ಎನಗೊಡೆಯರಿನಿತು ದಿನವಿಲ್ಲೆನುತ್ತಮರ್ದಪ್ಪಿ
ನೆನೆದೆನುಮ್ಮಳಿಸಿ ಬಡವಾದೆನಿಂತೆಲೆ ಮಗನೆ
ಜಿನನವರ್ ಮಾಡುವ ನಿರೋಧಂ ಪಿರಿದು ಮಗನೆ
ನಿನ್ನ ಬರವಂ ಪಾರುತಿರ್ದೆನೆಲೆ ಮಗನೆ

ಈನನವರ್ ಮಾಡುವ ನಿರೋಧಂ ಪಿರಿದು ಮಗನೆ
ನಿನ್ನ ಬರವಂ ಪಾರುತಿರ್ದೆನೆಲೆ ರಾಮಯ್ಯ
ಎನ್ನೊಲವು ಬರ್ಪಂದದಿಂ ಬಂದೆ ರಾಮಯ್ಯ
ಅರುಹನ ಪ್ರತಿಮಾದಿಗಳನೆತ್ತಿ ಬಿಸುಡಯ್ಯ
ನೆರೆದಿರ್ದ ಜೈನಸಂಕುಳವನೆಬ್ಬಟ್ಟಯ್ಯ

ಎಂದು ಬೆಸಸಲು ರಾಮತಂದೆ ಹರುಷಂದಳೆದು
ಅಂದಿನಿರುಳಂ ಹರನೊಳೇಕಾಂತದಿಂ ಕಳೆದು
ವಸುಧೆಗಿನಕಿರಣ ಶಿವಭಕ್ತಿ ಪಸರಿಸುವಂತೆ
ದೆಸೆದಿಕ್ಕನಾವರಿಸಿ ತೊಳಗಿ ಬೆಳಗುತ್ತಿಂತೆ
ಬೆಳಗಾಗಿ ಶಿವನ ಪೂಜೆಗೆ ಪೂವ ತರಲೆಂದು
ಗಳಗಳನೆ ಬರೆ ರಂಗಮಂಟಪದ ನಡುವಂದು
ಹರನತ್ತ ಕಾಲಾಗಿ ಪಟ್ಟಿರೆ ಸವಣಗುನ್ನಿ
ಹರನಣುಗನೀಕ್ಷಿಸುತ್ತೇಳೆಲೊ ಹುಳಿತ ಕುನ್ನಿ
ಹರನಿರ್ದ ದೆಸೆಯೊಳೀ ಪರಿಯಿರಲ್ತಕ್ಕುದೆ
ನರಕಿಯೇಳೇಳ್ ಶಿವದ್ರೋಹಿ ಇರತಕ್ಕುದೆ
ಎಂಬ ನುಡಿಗೇಳ್ದು ಸವಣಂ ಕರಂ ಘುಡು ಘುಡಿಸಿ
ದಂಬಿನ ಗೊರವ ಗಳಹದಿರ್ ನಿನ್ನ ಮಾತು ಹುಸಿ
ಶಿವನೆಂದದಾರೆಲ್ಲಿಯಾರ್ಗಿತ್ತನೆಲೆಗೊರವ
ಹವಣರಿಯದೆನ್ನೊಡನೆ ನುಡಿವರೆ ಮರುಳ್ಗೊರವ
ಎನೆ ರಾಮತಂದೆ ಘುಡುಘುಡಿಸಿ ಮಸಗಿದನಂದು
ಕೊನೆಮೀಸೆ ಕೆತ್ತೆ ಸಿಡಿಲೇಳ್ಗೆಯೇಳ್ದಂ ನಿಂದು
ಕೇಳೆಲವೊ ಮೂರುಂ ಪುರವನುರುಪಿದನನರಿಯ
ಕಾಲನಂ ಭಸ್ಮೀಕೃತಂ ಮಾಡಿದನನರಿಯ
ಸೋಮನಂ ಸಿರಿಮುಡಿಯೊಳಗೆ ಸೂಡಿದನನರಿಯ
ತಾಮರಸಭವನ ತಲೆಗೊಯ್ದು ಪಿಡಿದನನರಿಯ
ಹರಿಯಜರ ನಡುವೆ ಉರಿಲಿಂಗವಾದನನರಿಯ
ಪರಿವಳಿಗೆಯೊಳ್ಜಿನನನೊಡೆದು ಮೂಡಿದನರಿಯ
ಎಲೆ ಮಧುರೆಯೊಳು ಸವಣರಂ ಕೆಡಿಸಿದನನರಿಯ
ಹುಲಿಗೆರೆಯೊಳುದಯಿಸಿದ ಸೋಮನಾಥನನರಿಯ
ಎಲೆ ಮರುಳೆ ಬಾಣಂಗೆ ಕೈಯನಿತ್ತುದನರಿಯ
ಎಲೆಲೆ ಮೈಯೂರಂಗೆ ಮೈಯನಿತ್ತುದನರಿಯ
ಎಲೆ ಕಾಳಿದಾಸಂಗೆ ಕಣ್ಣನಿತ್ತುದನರಿಯ

ಎಲೆ ನಂಬಿಯಣ್ಣಂಗೆ ತನ್ನನಿತ್ತನನರಿಯ
ಚೋಳಂಗೆ ಹೊನ್ನ ಮಳೆಗರೆದು ಮೆರೆದನನರಿಯ
ಬಾಲೆಯ ನುಡಿಗೆ ಮೆಚ್ಚಿ ಹಾಲ್ಗುಡಿದವನನರಿಯ
ಓಹಿಲನನಿಳೆಯರಿಯೆ ಕೊಂಡೊಯ್ದವನನರಿಯ
ಆಹ ಪುರವೆರಸಿ ಉದ್ಭಟನನೊಯ್ದನನರಿಯ
ಎಲವೊ ದಾಸಂಗೆ ತವನಿಧಿಯನಿತ್ತನನರಿಯ
ಎಲವೊ ಕರುಕುಟಿಕಗೆ ವರವನಿತ್ತನನರಿಯ

ಎಂದು ಗರ್ಜಿಸಿ ರಾಮತಂದೆಗಳ್ಮೊದಲಿಸೆ
ಸಂದ ಭಕ್ತಂಗೆ ಸವಣಂ ನುಡಿದನಗ್ಗಲಿಸೆ
ಎಲೆ ಭಕ್ತ ತೆಗೆ ಪುರಾಣದ ಮಾತು ನಿನಗೇಕೆ
ಕೆಲರರಿಯೆ ಹಿಂದಾದ ಹಳೆಯ ಮಾತುಗಳೇಕೆ
ಇಂದೆನ್ನ ಮುಂದೆ ನಿನ್ನಯ ತಲೆಯನರಿದು ಹಡೆ
ಸಂದದು ಬಳಿಕ್ಕ ನುಡಿಯಾವೆಲ್ಲರುಂ ನೋಡೆ
ಪಡೆಯೆ ಜಿನನ ಪ್ರತಿಮೆಗಳನೆತ್ತಿ ಬಿಸುಡುವೆವು
ನಡುವೆ ಶಿವಲಿಂಗ ಪ್ರತಿಷ್ಠೆಯಂ ಮಾಡುವೆವು
ಎನಲಿದನೊಡಂಬಟ್ಟೆನೆಂದು ಸವಣಂ ನುಡಿಯೆ
ತನಗಿಚ್ಛೆಯೆಂತಿರ್ದುದಂತದನವರ್ನುಡಿಯೆ
ಆ ರಾಮತಂದೆ ಪುಳಕಿತನಾಗಿ ಹಿಗ್ಗುತಂ
ಭೋರೆಂದು ಗುಡಿಗಟ್ಟಿ ಮತ್ತೆ ಮೈವೆಚ್ಚುತಂ
ಇದು ಭಾಷೆ ಭಾಷೆ ಬರೆ ಬರೆ ಇದನೊಡಂಬಟ್ಟೆ
ಇದನಾರದಡೆ ಬಳಿಕ ಬಹುದೇ ಶಿವನ ಬಟ್ಟೆ

ಎಂದು ಭಾಷಾಪತ್ರಮಂ ಬರೆಯಿಸಿದನಂದು
ತಂದು ನೆರಹಿರೆ ನಿನ್ನ ಸವಣರನೆನುತ್ತಂದು
ಕರೆಯವೇಳ್ದಂ ಧರೆಯೊಳುಳ್ಳ ಶಿವಭಕ್ತರಂ
ಬರುತಮಿರ್ದುದು ಹರನ ಗಣಸಮಿತಿಯೊತ್ತರಂ
ಅಗ್ಗಣಿಯ ಹೊನ್ನ ತಂದೆಗಳಲ್ಲಿ ಮುಂತಾಗಿ
ವೆಗ್ಗಳೆಯ ದೇವರಸರಕ್ಕರಿಂ ಸಹಿತಾಗಿ
ದೆಸೆ ನೂರು ಗಾವುದದೊಳುಳ್ಳ ಶರಣರ ಮೊತ್ತ
ಎಸೆಯೆ ನೆರೆದುದು ಲಕ್ಕಲೆಕ್ಕದಿಂದತ್ತತ್ತ
ರಜತಗಿರಿ ಬಯಸಿ ಭಕ್ತರ ರೂಹುಗೊಂಡಂತೆ
ನಿಜ ಭಸಿತಕಾಂತಿಯಿಂ ಚಂದ್ರಿಕೆಯೊಳದ್ದಂತೆ

ಮಕುಟದ ಮಹಾಮಹಿಮರಪ್ರತಿಮರಲ್ಲಲ್ಲಿ
ಅಕಳಂಕಚರಿತರನುಪಮ ಕೃಪಾಕರರಲ್ಲಿ
ಒಪ್ಪುವ ಕರಸ್ಥಲದುರಸ್ಥಲದಚಲರಲ್ಲಿ
ನಿಪ್ಪಸರದಚ್ಚ ಶಿವಲಿಂಗವ್ರತಿಗಳಲ್ಲಿ
ಪಂಚಾಕ್ಷರಿಯೆ ರೂಪುಗೊಂಡಂದದಿಂ ಕೆಲರು
ಪಂಚಭೌತಿಕವಿಲ್ಲದೊಡಲೊಳಿರ್ಪರ್ಕೆಲರು
ಶಾಂತರುಗ್ರರ್ಸತ್ಯರನುಪಮ ತ್ಯಾಗಿಗಳು
ಸಂತೋಷಿಗಳ್ಸುಖಿಗಳಸಮ ಶಿವಯೋಗಿಗಳು
ನೀಡಿ ನೆಗಪಿದ ಕೋಟಿ ವೃಷಭಧ್ವಜದ ನಡುವೆ
ಕೂಡೆ ಕೇಳಿಸುವ ಶರಣರ ಸಂದಣಿಯ ನಡುವೆ
ಗಿರುಗಟೆಯ ಮದ್ದಳೆಯ ಕರಡೆಗಳ ದನಿಯೊಳಗೆ
ತುರುಗಿದಾವುಜೆ ತಾಳ ಕೌಸಾಳರವದೊಳಗೆ
ಕೊಂಬಿನಸಿವುರ ವೀಣೆ ಕಹಳೆಗಳ ದನಿಯೊಳಗೆ
ಬೊಂಬುಳಿಯ ಕಿನ್ನರಿಯ ಶಂಖ ಧ್ವನಿಗಳೊಳಗೆ
ಮೊಳಗುತ್ತೆ ಮಿಂಚುತ್ತೆ ಬಪ್ಪ ಸಿಡಲ್ಗಳ ತೆರದೆ
ತೊಳಗುತ್ತೆ ಬೆಳಗುತ್ತೆ ಬರ್ಪ ರವಿಗಳ ತೆರದೆ
ಅರರೆ ನಡೆತಪ್ಪ ಸಿಂಗದ ಜಂಗುಳಿಗಳಂತೆ
ಉರವಣಿಸಿ ಘುಳುಘುಳಿಪ ಶರಭನ ನೆರವಿಯಂತೆ
ಬಂದು ನೆರೆದುದು ಭೂಮಿಯಗಲಕ್ಕೆ ಹರಗಣಂ
ನಿಂದುಘೇ ಚಾಂಗು ಬೊಲ್ಲೆನುತಿರ್ದುದಾ ಗಣಂ

ಇಂತು ನೆರೆದಿರ್ದುದೊಂದೆಸೆಯೊಳಭವನ ಗಣಂ
ಮುಂತೆ ಮತ್ತೊಂದೆಸೆಗೆ ಸಾರ್ದು ಜಿನಮಂತಣಂ
ನೆರೆದು ಬರುತಿರ್ದುದು ಜಿನವ್ರತಿಗಳಲ್ಲಲ್ಲಿ
ಹರಿದು ಸಡಗರಿಸಿ ಸಾಲ್ಗೊಂಡು ಜಿನುಗುತ್ತಲ್ಲಿ
ಕೈಯ ಗುಂಡಿಗೆ ಮೋಟಗುಂಚಂ ಹರಿದ ತಟ್ಟು
ಮೈಯ ಗೇಣುದ್ದದ ಮಲಂ ತರೆದ ತಲೆಕಟ್ಟು
ಮಿಂಚುದಲೆ ಹಡಿಕೆವಾಯ್ ಕೀನಿವಲ್ಗಳ್ತೋರೆ
ಸಂಚಿಸಿದ ಹಲವು ಮಲವೆತ್ತಂ ಹಡಿಕೆನಾರೆ
ಕುರುಡರುಂ ಕುಂಟರುಂ ಡಂಬರುಂ ಡಸಿಕರುಂ
ಬರಡರುಂ ನಿಃಕರದರುಂ ನಿಜದ ಹುಸಿಕರುಂ
ಕ್ಷುದ್ರರುಂ ವಾಚಾಳರುಂ ಕೆಟ್ಟ ಸವಣರುಂ
ನಿದ್ರೆಯಿಂದೆದ್ದು ಬಂದಂತಿರ್ಪ ಜಾಡ್ಯರುಂ

ಬತ್ತಲೆಗರುಂ ಬಡಕರುಂ ವೀತರಾಗರುಂ
ಕತ್ತಲಿಪ ಮೊಗದ ಭಾಗ್ಯದ ಭೋಗಹೀನರುಂ
ಮುತ್ತ ಮುದುನರಿಯಂತೆ ಬಳ್ಳುಗರೆವರ್ಕೆಲರು
ನೆತ್ತಿಯೊಡೆಯಲ್ಗಳಹಿ ಕತ್ತೆಗರೆವರ್ಕೆಲರು
ಗೂಗೆಯಂತಿರೆ ಮಿಗೆ ಪಲುಂಬುತಿರ್ಪರ್ಕೆಲರು
ಕಾಗೆಯಂತಿರೆ ಕಾಕುಗೆಡೆವುತಿರ್ಪರ್ಕೆಲರು
ಉಮ್ಮಳಿಪ ಕಪಿಯಂತೆ ಸುಮ್ಮನಿರ್ಪರ್ಕೆಲರು
ತಮ್ಮೊಳಗೆ ತಾವು ಗುಜು ಗುಜು ಗುಟ್ಟುವರ್ಕೆಲರು
ವಾದಿಂ ವಶಿಷ್ಟನಂ ಗೆಲ್ವ ಪಂಡಿತರಲ್ಲಿ
ಸಾಧಿಸಿ ಸಕಲ ಮಂತ್ರಮಂ ಕಲಿತವರ್ಗಳಲ್ಲಿ
ವಾದ ವಸ್ಯಂ ಮೋಹನ ಸ್ತಂಭನವ ಬಲ್ಲ
ಭೇದಂಗಳಂ ದಂಡ ಸಾಮಂಗಳಂ ಬಲ್ಲ
ಪಂಡಿತರ್ ಸವಣರುಂ ಜೈನರಾರ್ಹತರಲ್ಲಿ
ತಂಡ ತಂಡದ ರುಷಿಗಳೆಂಬ ಸಾಧಕರಲ್ಲಿ
ಸವಣವಡೆ ಕೂಡಿ ನೆರೆದುದು ಗಣಂಗಳ ಮುಂತೆ
ರವಿಕಿರಣದುರವಣೆಗೆ ಸಾರ್ದ ಕತ್ತಲೆಯಂತೆ
ದಾವಾನಲಂಗೊಡ್ಡಿ ನೆರೆದ ತರಗೆಲೆಯಂತೆ
ಭಾವಿಸೆ ಮಹಾಬಲಂಗೊಡ್ಡಿದ್ದ ಮುಗಿಲಂತೆ
ನೆರೆದು ಬರುತಿರ್ಪ ಪಾಪದ ಹಾಡಿಯಂದದಿಂ
ತರತರದೆ ಬಪ್ಪ ದಾರಿದ್ರ್ಯಂಗಳಂದದಿಂ
ಬಂದು ಕೂಡಿ[ಯೆ] ಕೂಡೆ ಕರಸೆ ಸವಣರ ಮೊತ್ತ
ಅಂದದಂ ನೋಡಿ ನಗುತಾನಂದದಿಂದಿತ್ತ

ಆ ಸಮಯದೊಳು ರಾಮತಂದೆ ಕರಮೊಪ್ಪಿದಂ
ಭಾಸುರವೆನಿಪ್ಪ ಭಕ್ತ್ಯಂಗನೆಯನಪ್ಪಿದಂ
ನಳನಳಿಪ ಘುಳುಘುಳಿಪ ಸಿಂಗರಂ ಮಾಡಿದಂ
ಬೆಳ ಬೆಳಗುತಿರ್ಪ ಪೊಸ ಭಸಿತಮಂ ಪೂಸಿದಂ
ಕರಮುರಂ ಕಂಠದೊಳು ರುದ್ರಾಕ್ಷೆಯಂ ಧರಿಸಿ
ಶಿರ ಕರ್ಣ ತೋಳ್ಗಳೊಳಗಂತವಂ ಸಿಂಗರಿಸಿ
ಸುರುಚಿರ ಸುವರ್ಣ ಪಳಿಯಂ ತೆಗೆದು ಬಿಗಿದುಟ್ಟು
ನೆರೆದ ಸವಣರ್ನಡುಗಲುಬುಬೆಂದು ಬೊಬ್ಬಿಟ್ಟು
ಗಾಳಿಯಂ ಸೀಳ್ವ ಪೊಸ ಕೂರಲಗನಳವಡಿಸಿ
ಬಾಳೆಂದು ಧರನಣುಗನುಬ್ಬಿನಿಂದಗ್ಗಲಿಸಿ

ಕಾಲ ತೊಡರುಲಿಯೆ ಘುಲಘುಲಕೆಂದು ನಡೆತಂದು
ಲೀಲೆ ಮಿಗೆ ಭಕ್ತರುಘೆ ಚಾಂಗು ಬೊಲ್ಲೆನಲಂದು
ಶಿವಭಕ್ತರಿಂಗೆ ಮೆಯ್ಯಿಕ್ಕಿ ಹೋ ಹೋ ಎಂದು
ಭವನತ್ತ ಕೈಯೆತ್ತಿ ಶರಣಾರ್ಥಿ ಶರಣೆಂದು
ಇಂದು ನಿನ್ನಯ ಕರುಣಮಂ ಈವುದೆನಗೆಂದು
ನಿಂದು ನುಡಿದಂ ರಾಮತಂದೆ ಹಿಗ್ಗುತ್ತಂದು
ಈ ಶಿರವನರಿದು ಹತ್ತಿಸಿ ಶಿವನನೊಲಿಸುವೆಂ
ಸಾಸಿರ ಜಿನರನೊಡೆದು ಲಿಂಗವಂ ನಿಲಿಸುವೆಂ
ಇದು ಭಾಷೆ ಇದಕಳಿಕಿದಡೆ ಜೈನರೆಂದುದಂ
ಮುದದಿಂದೊಡಂಬಟ್ಟೆನೆಂದಲಗನೆತ್ತಿದಂ

ಆಗಳಾ ಜೈನರೆಲ್ಲಂ ಕೌತುಕಂಬಡಲು
ರಾಗದಿಂ ಭಕ್ತರೆಲ್ಲಂ ಸಂತಸಂಬಡಲು
ಎಡದ ಕೈಯಿಂದೆ ಜೆಡೆಯಂ ಸುತ್ತಿ ಪಿಡಿದಾಗ
ಎಡೆಗುಡದೆಯಲಗಂ ಶಿರಕ್ಕೆ ಮೋಹಿಸುವಾಗ
ಏನೆಂಬೆನೇನೆಂಬೆ ನೆಲೆಲೆಲೆಲೆ ಕೌತುಕಂ
ಆನರಿಯೆನಾನರಿಯೆನಾಹ ವೀರಾಂತಕಂ
ಘರಿಲೆಂಬ ದನಿ ಹುಟ್ಟುವಲ್ಲಿಂದೆ ಮುನ್ನರಿದು
ಹರನಿರ್ದ ದೆಸೆಗಟ್ಟೆ ತಲೆವಿಡಿದು ನಲಿನಲಿದು
ಶಿರವನೇರಿಸಿ ಮಲೆತು ಸರಸರನೆ ಹಿಮ್ಮೆಟ್ಟೆ
ಬರುತೆ ಹಿಂದಣ ನಂದಿಯಂ ಮಲಂಗಿರೆ ಮುಟ್ಟೆ
ಸವಣರೆಲ್ಲಂ ನಡನಡಂ ನಡುಗಿ ಗೋಳಿಟ್ಟು
ತವತವಗೆ ಭೀತಿಗೊಂಡೆಲ್ಲರುಂ ಮರವಟ್ಟು
ಮಾಯವಿದು ಮಂತ್ರವಿದು ಮಾಹೇಂದ್ರಜಾಲವಿದು
ಕಾಯವೆದ್ದಿಂತು ಮಾಡುವುದು ಕೌಟಿಲ್ಯವಿದು
ಎವಗಿದರ ಪರಿ ತಿಳಿಯದೆನುತಾರುಹತರಳುಪಿ
ನೆವದಿಂದಲೇಳಲುದ್ಯತರಾಗಿ ಮನವಳುಪಿ

ಅಂತದಂ ಕಂಡಗ್ಗಣಿಯ ಹೊನ್ನತಂದೆಗಳು
ಇಂತಾಗಲಾಗದೆನೆ ನುಡಿದು ಪರವಾದಿಗಳು
ಚೆನ್ನಾಯಿತಯ್ಯ ಕಪಟವಿದೆನಲು ತಮತಮಗೆ
ಬಿನ್ನಣವದೇಕೆ ಮಾಡುವುದನುಸುರುವುದೆಮಗೆ
ಎನೆ ಸವಣರೆಲ್ಲ ತಮ್ಮೊಳು ವಿಚಾರಿಸಿ ನೋಡಿ

ತನತನಗೆ ನುಡಿದೇಕವಾಕ್ಯವಾಗುತೆ ಕೂಡಿ
ಇಂತೆಂದರೇಳು ದಿವಸಕ್ಕೆ ಶಿರವಂ ಕೂಡಿ
ಮುಂತೆ ಶಿರವಂ ಪಡೆವುದೆಮಗಿಷ್ಟವೆಂದಾಡಿ
ನುಡಿಯೆ ಕೈಕೊಂಡೆವೆನುತಂ ಹೊನ್ನತಂದೆಗಳು
ಮೃಡನ ಮೊಗಮಂ ನೋಡಿ ತಲೆದೂಗಿ ತಂದೆಗಳು
ಇಂತು ಮಾಡಿದರೀ ಸವಣರಿದಕ್ಕೇನೆಂದು
ಕಂತುಹರಮೂರ್ತಿ ಮಿಗೆ ಹೊಸತು ಮಾಡುವೆನೆಂದು
ಏಳು ದಿನವೀ ಶರೀರವನೀ ತೆರದೊಳಿರಿಸಿ
ಬಾಲೇಂದುಧರನಣುಗನಿಚ್ಛೆಯಿಂದನುಕರಿಸಿ
ಮೆರೆಯವೇಳ್ಕೇಳು ದಿವಸಕ್ಕೆ ಶಿರವುಂ ಕೂಡೆ
ನೆರೆ ಲೋಕವರಿಯೆ ಮೆರೆವೆಂ ಪಡೆವೆನಿಳೆ ನೋಡೆ
ಅಲ್ಲದಂದಿಂ ಭೂಮಿ ನಡುಗದೆಂತಿರ್ದಪುದು
ಅಲ್ಲದಂದಂಬುನಿಧಿ ಮೀರದೆಂತಿರ್ದಪುದು
ಪಡೆಯದಡೆ ಬೊಮ್ಮಾಂಡವೊಡೆಯದೇಕಿರ್ದಪುದು
ಪಡೆಯದಡೆ ಶಿವನ ಕೈಲಾಸವೆಂತಿರ್ದಪುದು
ನುಡಿದು ತೋರದಡೆ ಶಿವಭಕ್ತಿಯೆಂತಿರ್ದಪುದು
ಮೃಡನ ಸಮ್ಮುಖದಿ ಪಡೆವೆಂ ಪಡೆವೆನೆನುತಿರ್ದು
ಎಂದು ಗರ್ಜಿಸುತೆ ಕಂಕಣದಾರವಂ ಕಟ್ಟಿ
ಅಂದು ಸವಣರ ಮನಂ ನಡುಗಿ ಸರಕಂ ಕಟ್ಟಿ
ಒಡನೆ ನಾನೂರ್ವರೊಡೆಯರು ಕಂಕಣಂಗಟ್ಟಿ
ಸಡಿ ಘಡ ಜಿನನ ಬೊಂಬೆಗಳನೆಲ್ಲ ಹುಡಿಗುಟ್ಟಿ
ಕಳೆಯ ಬೇಕೆನುತಾರುತುಂ ಬೊಬ್ಬಿರಿವುತಿರಲು
ಘುಳುಘುಳಿಸಿ ಘೂರ್ಣಿಸುತೆ ಕುಪಿತರಾಗುತ್ತಿರಲು

ಆ ಸಮಯದೊಳ್ ಹೊನ್ನತಂದೆಗಳ್ ಸಡಗರಿಸಿ
ಲೇಸಪ್ಪ ಹೊಸ ಹೊನ್ನ ಪರಿಯಾಣಮಂ ತರಿಸಿ
ಅದರೊಳು ದಣಿಂಬವಂ ಹಾಸಿ ಭಸಿತವನಿಟ್ಟು
ಮುದದಿಂದೆ ಪಾದೋದಕ ಪ್ರಸಾದವನಿಟ್ಟು
ಸುಲಿಪಲ್ಲು ಮಿರುಗೆ ಕೆತ್ತುವ ಮೀಸೆಯಿಂದೊಪ್ಪೆ
ಚಲದಿಂದೆ ಗಂಟಿಕ್ಕಿ ಬಿಗಿದ ಪುರ್ಬಿಂದೊಪ್ಪೆ
ಘುಳ ಘುಳಿಪ ರಾಮಿತಂದೆಗಳ ಶಿರಮಂ ತಂದು
ಇಳುಪಿದರು ಹರಿಯಾಣದೊಳಗೆ ಬೊಬ್ಬಿಡುತಂದು
ಎತ್ತಿದಂ ಶಿವಭಕ್ತರೆಲ್ಲುಘೇವುಘೆಯೆನಲು

ಸುತ್ತಿರ್ದ ಸವಣವಡೆ ಕೌತುಕಂಬಡುತಿರಲು
ಶಿವನ ಪ್ರತಾಪಮಂ ನಿಂದು ಹೊರುವಂದದಿಂ
ಭವನ ಕೀರ್ತಿಯನೊಪ್ಪದಿಂ ಧರಿಸುವಂದದಿಂ
ಗಿರಿಶನಭಿಮಾನವಂ ಹೊತ್ತು ನಿತ್ತರಿಪಂತೆ
ಶರಣಸಂಕುಳದ ಹರಣಮನರರೆ ಹೊರುವಂತೆ
ಹೊತ್ತುಕೊಂಡಂ ಹೊನ್ನತಂದೆ ಹರಿಯಾಣಮಂ
ಹೊತ್ತುಕೊಂಡರ್ ಸವಣರೆಲ್ಲ ದುಮ್ಮಾನಮಂ
ಹಿಂದೆ ದೇಹಕ್ಕೆ ಕಾಪಿಟ್ಟು ನೆರೆ ವೀರರಂ
ಮುಂದೆ ನಡೆಗೊಂಡನಪ್ರತಿಮನಭಿನವ ಹರಂ
ಹೊತ್ತ ಬಾಳೆತ್ತಿದ ಕಠಾರಿ ಕಿಳ್ತಲಗುಗಳು
ಸುತ್ತಂ ತಳಿರ್ತು ತಳತಳಿಪ ಹೊಸ ಕೈದುಗಳು
ನೋಡಲೆಂದವನಿಯಗಲಕ್ಕೆ ನೆರೆದರಸುಗಳು
ಕೂಡೆ ನೆರೆ ತೀವಿತ್ತು ಶಿವಭಕ್ತರಿಕ್ಕೆಗಳು
ಗಗನವೆಡೆಯಿಲ್ಲೆನಿಸಿ ತುರುಗಿದ ವೃಷಧ್ವಜದ
ಜಗವದಿರೆ ಹೊಯ್ವ ನಿಸ್ಸಾಳದ ಮಹಾರವದ
ದೆಸೆಗೇಳ್ವ ತೆರದೆ ಮೊಳಗುವ ಭೇರಿಗಳ ನಡುವೆ
ಅಸಮಾಕ್ಷನಣುಗನಾ ವೀರವೃಂದದ ನಡುವೆ
ನಡೆತಂದನಾಗಳಿಳೆ ಬೆರಗಾಗಿ ತಲೆದೂಗೆ
ಒಡನೆ ಭಾಷೆಯ ಗಣಂಗಳ್ಸಹಿತವೆಯ್ದಿ ಮಿಗೆ

ಬಂದು ಹುಲಿಗೆರೆಯ ಪಟ್ಟಣವನೊಲವಿಂ ಪೊಕ್ಕು
ಸಂದಣಿಸಿ ಮೆರೆವುತ್ತೆ ಬರುತಂ ಮನಂ ಮಿಕ್ಕು
ಸೋಮನಾಥನ ಚರಣಕೇರಿಸುತೆ ಮನವಿಟ್ಟು
ಭೂಮಿಗಚ್ಚರಿಯೆನಲ್ಕಲ್ಲಿಂದೆ ಪೊರಮಟ್ಟು
ಅಣ್ಣಿಗೆರೆಯಮೃತನಾಥನ ಚರಣಮಂ ಕಂಡು
ಬಣ್ಣಿಸುತ್ತಲ್ಲಿ ನಲವರಕೆಯಂ ಕೈಕೊಂಡು
ಕೆಂಭಾವಿಯೊಳು ಭೋಗನಾಥನಲ್ಲಿಗೆ ಬಂದು
ಬೆಂಬಳಿಯಲುರುಳಿದಾತನೆ ಕರುಣಿ ಶರಣೆಂದು
ಕಪ್ಪಡಿಯ ಸಂಗಮೇಶ್ವರನಲ್ಲಿಗೆಯ್ತಂದು
ಒಪ್ಪುತಿಹ ರಾಮಿತಂದೆಗಳ ಶಿರ ಶರಣೆಂದು
ಆ ವೃಂದದೊಳು ನಾಗನಾಥನಲ್ಲಿಗೆ ಬಂದು
ದೇವ ನಿಮ್ಮಯ ಕರುಣವೀಯೆನುತ್ತಂ ನಿಂದು
ಸೊನ್ನಲಿಗೆಯೊಳು ಜಗದ್ಗುರು ಸಿದ್ಧರಾಮಂಗೆ

ನಿನ್ನ ಪ್ರಸಾದವೀಯೆನುತೆ ಕರುಣಂಬಡುಗೆ
ಹಂಪೆಗೈತಂದು ವಿರುಪಾಕ್ಷಲಿಂಗವ ಕಂಡು
ಹೆಂಪಿಂದೆ ಹೆಚ್ಚುತ್ತೆ ಹಿಗ್ಗುತ್ತೆ ನಡೆಗೊಂಡು

ಇವು ಮೊದಲ್ಗೊಂಡು ಶಿವಪುರವೆಲ್ಲರೊಳ್ಮೆರಸಿ
ಭುವನವೆಲ್ಲರಿಯಲೇಳುಂ ದಿವಸಮುಂ ಮೆರಸಿ
ತಿರುಗಿ ಬರುತಿರ್ದುದಪ್ರತಿಮನಭವನ ಗಣಂ
ಭರದಿಂದೆ ನಡೆತಂದುದಭವನೊಲ್ಮೆಯ ಗಣಂ
ಈ ಬಂದುದರುಹ ಕುಲವಿಲಯಾಗ್ನಿಮುಖವೆಂಬ
ಈ ಬಂದುದೆಲೆ ಜೈನ ಹರಿಶರಭಮುಖವೆಂಬ
ಅರಿಬಿರುದಿನುಬ್ಬಟೆಯ ಕಹಳೆಯಂ ಪಿಡಿಸುತಂ
ನೆರೆದು ಘುಳುಘುಳಿಪ ಶರಣರ ಮುಂದೆ ನಡೆವುತಂ
ಉರವಣಿಸಿ ನಡೆತಂದು ಬ್ರಹ್ಮೇಶ್ವರದ ಮುಂದೆ
ಹರಿಯಜರಿಗತ್ಯತಿದ್ದಶಾಂಗುಲನ ಮುಂದೆ
ಸ್ಮರಕಾಲರಿಪು ತ್ರಿಪುರಮಂ ಉರುಪಿದನ ಮುಂದೆ
ಶರಣಕುಲ ಕಮಲಾರ್ಕಕರುಣಶರಧಿಯ ಮುಂದೆ
ಸಂಭ್ರಮದೊಳಾಳ್ದು ಘುಡುಘುಡಿಸುತ್ತೆ ಮಿಗೆ ಬಂದು
ಸಂಭ್ರಮಿಸಿ ಸಡಗರಿಸಿ ನುಡಿವುತ್ತಲಂತಂದು
ಶಿರಮಂ ತೆಗೆದು ಶಿವನ ಪೀಠಮೂಲದೊಳಿರಿಸಿ
ಹರನ ಪ್ರಸಾದ ಪಾದೋದಕದೆ ಶೃಂಗರಿಸಿ
ಇರೆ ಹೊನ್ನತಂದೆ ದೇವರ ಮಂಟಪದ ನಡುವೆ
ಹರಿಯಾಣ ಸಹಿತ ತಂದಿಳುಪಿ ಭಕ್ತರ ನಡುವೆ
ಓಹೋ ಉಘೇ ಚಾಂಗು ಬೊಲ್ಲೆಂದು ತೆಗೆತಂದು
ಆಹಾ ಶಿರವನೆತ್ತಿ ನಲವಿಂದಲೈತಂದು
ತೆಗೆದು ತಂದಾ ಶಿರವನೆತ್ತಿ ನಲವಿಂ ತೋರಿ
ಬಗುಳ್ವ ಸವಣರ್ನೋಡಿರೋಯೆನುತ್ತಂ ಸಾರಿ
ಜಡಿವುತೀ ಸವಣಗುನ್ನಿಗಳ ಕೈಕೊಂಬರೆ
ಮೃಡನ ಭಕ್ತರ್ಮುಳಿದಡೇನುವಂ ಬಗೆವರೆ

ಎನುತಗ್ಘಣಿಯ ಹೊನ್ನತಂದೆಗಳು ಸಡಗರಿಸಿ
ಘನ ಸಂಭ್ರಮದೆ ಕುಣಿದು ಕುಕಿಲಿರಿವುತಬ್ಬರಿಸಿ
ಶರಣರು ಜಿನಪ್ರತಿಮೆಗಳನೆತ್ತಲನುವಾಗೆ
ಸುರಸಮಿತಿ ಹೂಮಳೆಗಳಂ ಕರೆಯಲನುವಾಗೆ

ಇಂದು ಶಿವಲಿಂಗ ಪ್ರತಿಷ್ಠೆಯಂ ಮಾಳ್ಪಂತೆ
ತಂದು ಪೀಠಿಗೆಯೊಳಗೆ ಲಿಂಗವನಿಳಿಪುವಂತೆ
ಇಳಿಹಿದರು ರಾಮಿತಂದೆಗಳ ದೇಹದ ಮೇಲೆ
ಇಳುಹುವಲ್ಲಿಂ ಮುನ್ನಲುರವಣಿಸುತಂ ಮೇಲೆ
ಒಂದು ಕೈಯೊಳು ತನ್ನ ಶಿರವ ಹತ್ತಿಸಿಕೊಳುತೆ
ಒಂದು ಕೈ ಕೂರಲಗಿನಾಯುಧವನೆಡೆಗೊಳುತೆ

ಮುರಿದೆದ್ದು ಗರ್ಜಿಸುತೆ ದೆಸೆದೆಸೆಯ ನೋಡುತಂ
ಇರೆ ಕಂಡು ಸವಣವಡೆ ನಡನಡನೆ ನಡುಗುತಂ
ಆ ಎದ್ದನಾ ಎದ್ದನಮ್ಮಮ್ಮ ರಾಮಯ್ಯ
ಈ ಎದ್ದನೀ ಎದ್ದನೆಲೆಲೆಲೆ ರಾಮಯ್ಯ
ಆ ನಡೆದನತ್ತತ್ತಲೇಕಾಂತ ರಾಮಯ್ಯ
ಈ ನಡೆದನಿತ್ತಿತ್ತಲೇಕಾಂತ ರಾಮಯ್ಯ
ಎನುತೆ ಸವಣರ್ಸರಿಯಲೆದ್ದು ಹರವರಿವರಿದು
ಮುನಿದು ಭುಗಿಭುಗಿಲೆನುತೆ ಹೂಗೆಯಿಲ್ಲದುರಿವುರಿದು

ಕೂರಲಗನೆತ್ತಿ ಭುಗಿಭುಗಿಲೆಂದು ತಿರುಹುತಂ
ಕಾರ ಮಿಂಚಿನ ತೆರದೆ ಹೊಳೆದು ಘುಳುಘುಳಿಸುತಂ
ಪರಿದನಟ್ಟಿದನೋಡಿಸಿದನರುಹ ನಿಕರಮಂ
ತಿರುಗಿ ಕೈವೀಸಿದಂ ಶಿವಭಕ್ತ ನಿಕರಮಂ
ಕೈವೀಸೆ ತಮ ತಮಗೆ ವೀರರೆಲ್ಲರ್ನೆರೆದು
ಕೈವಾರದಿಂದೆ ಬಸದಿಗಳೊಳಗೆ ಪುಗುತಂದು
ಕಿತ್ತು ಬಿಸುಟರು ಜಿನನ ಪ್ರತಿಮೆಗಳನಲ್ಲಲ್ಲಿ
ಎತ್ತಿದರು ಬತ್ತಲೆಯ ಬೊಂಬೆಗಳನಲ್ಲಲ್ಲಿ
ಎತ್ತಿದರು ಬತ್ತಲೆಯ ಬೊಂಬೆಗಳನಲ್ಲಲ್ಲಿ
ನಾನಾ ವಿಧದ ಸಂತಸಂ ಸಾರ್ದ ಕೂಟಮಂ
ಏನೆಂಬೆನಾ ಭಕ್ತರಾನಂದದಾಟಮಂ
ನಲಿನಲಿದು ನೆಗೆನೆಗೆದು ನಿಂದು ನಿಂದಾಡುತಂ
ಉಲಿದುಲಿದು ಪರಿಪರಿದು ಮುರಿಮುರಿದು ಹಿಗ್ಗುತಂ
ಇರ್ದ ಭಕ್ತರ ನೋಡುತೀಕ್ಷಿಸುತೆ ರಾಮಯ್ಯ
ಪೊರ್ದಿದವರಂ ಕರೆದನೇಕಾಂತರಾಮಯ್ಯ
ಆನಂದದಿಂದೆ ಶಿವಲಿಂಗಂಗಳಂ ತರಿಸಿ
ನಾನಾ ಮೂಹೂರ್ತದಿಂದಂ ಲಿಂಗವಂ ನಿರಿಸಿ

ಲಿಂಗಪ್ರತಿಷ್ಠೆಗಳನಲ್ಲಲ್ಲಿ ಮಾಡುತಿರೆ
ಹಿಂಗದೆ ಹರನನಳ್ಕರಿಂದೆ ಕೊಂಡಾಡುತಿರೆ
ಆಗಳೆರಗಿದವಲ್ಲಿ ಹೂಮಳೆಗಳೊಪ್ಪದಿಂ
ಮೇಗೆ ದುಂದುಭಿ ಶಂಖನಾದಂಗಳೊಪ್ಪದಿಂ
ಮೊಳಗಿದವು ಮಂಗಳ ಮೃದಂಗಂಗಳಲ್ಲಲ್ಲಿ
ತೊಳಗಿದವು ಧವಳಛತ್ರಂ ಚಾಮರಗಳಲ್ಲಿ
ಆ ಸಮಯದೊಳು ಸಕಳ ಭಕ್ತರೆಲ್ಲಂ ಪೊಗಳೆ
ಆಸುರದೆ ಹೊಗಳತೊಡಗಿದರುತ್ಸವಂ ನೆಗಳೆ
ಶಿವನ ಕೀರ್ತಿಗೆ ಮೂರ್ತಿಯಾದೆಯೆಲೆ ರಾಮಯ್ಯ
ಭವನ ಕೀರ್ತಿಯ ಲತೆಗಡರ್ಪಾದೆ ರಾಮಯ್ಯ
ಸಂದುದು ಸದಾಚಾರ ನಿನ್ನಿಂದೆಲೆಲೆ ವೀರ
ವೊಂದಿತ್ತು ಶಿವಭಕ್ತಿ ನಿನ್ನಿಂದೆಲೆಲೆ ಧೀರ
ಸಂದುದೀಶ್ವರನಲ್ಲಿ ಏಕಾಂತರಾಮಯ್ಯ
ಇಂದು ನಿನಗೆಣೆಯಾವನೇಕಾಂತರಾಮಯ್ಯ
ಭಾಪುರೇ ವೀರ ಸೋಮೇಶನ ಮಹಾಮೂರ್ತಿ
ಭಾಪು ಶಿವಭಕ್ತೈಕ ನಿಷ್ಠೆಯ ಸುಧಾಕೀರ್ತಿ

ಎಂದು ಹೊಗಳಲ್ಕೆ ಶಿವಭಕ್ತರ್ಗೆ ಕೈಮುಗಿದು
ನಿಂದು ಪೊಡಮಟ್ಟು ಬಲವಂದು ತನುವಂ ಸುಗಿದು
ಶರಣರ್ಗೆ ಸಂತಸದ ಗಣಪರ್ವವಂ ಮಾಡಿ
ಹರವರಿಯ ಹರುಷಂಗಳಿಂದೆಯೋಕುಳಿಯಾಡಿ
ಎಲ್ಲರ್ಗೆಯುಡಕೊಟ್ಟು ಮಿಗೆ ಸಂತಸಂಬಡಿಸಿ
ಎಲ್ಲರಂ ನಿಜನಿವಾಸಕ್ಕೆ ಬಿಜಯಂಗೈಸಿ
ಹೊನ್ನತಂದೆಗಳನಿದಿರ್ಗೊಂಡು ಪುರದೊಳು ಮೆರೆಸಿ
ಮನ್ನಿಸುತ್ತವರ ಹುಲಿಗೆರೆಗೆ ಬಿಜಯಂಗೈಸಿ
ಇರುತಮಿರೆ ಬಂದ ಪುಷ್ಪಕದೊಳಗೆ ರಾಮಯ್ಯ
ಅರರೆ ಕುಳ್ಳಿರುತಿರ್ದನೇಕಾಂತ ರಾಮಯ್ಯ
ಆ ಗಣಂಗಳ್ಸಹಿತೆ ದೇವದುಂದುಭಿ ಸಹಿತೆ
ಮೇಗೆ ನೆಗೆದುದು ಸರ್ವ ವಾದ್ಯರಭಸಂ ಸಹಿತೆ
ನಡೆವುತಿರೆ ಗಗನದೊಳಗಿಳೆ ಕೌತುಕಂಬಡಲು
ಮೃಡಭಕ್ತರುತ್ಸವದೆ ಮಿಗೆ ಸಂತಸಂಬಡಲು
ಬಂದು ರಜತಾದ್ರಿಯ ಸಮೀಪಕ್ಕೆ ಸೇರುತಂ
ನಂದೀಶನಿರ್ದ ಬಾಗಿಲ್ಗಲ್ಲಿ ಸೇರುತಂ

ಮೈಯಿಕ್ಕುತಂ ಮೃಡನ ಪದತಳದೆಡೆಗೆ ಬಂದು
ಕೈಯಂ ಮುಗಿದು ಪುಳಕವುಣ್ಮುತ್ತಿರಲ್ನಿಂದು
ಇರಲಭವನುಂ ಪರಿಸ್ನೇಹದಿಂ ಬಿಗಿಯಪ್ಪಿ
ಗಿರಿಸುತೆಗೆ ಪೇಳುತಂ ಪ್ರೇಮದಿಂ ಬಿಗಿದಪ್ಪಿ
ನೋಡು ಪಾರ್ವತಿ ಧೀರನಪ್ರತಿಮ ಭಕ್ತನಂ
ನೋಡಯ್ಯ ನಂದೀಶ ನೆರೆ ನಿಷ್ಠೆಯುಕ್ತನಂ
ಅಬ್ಬಲೂರೊಳ್ಸವಣರೊಳ್ವಾದಿಸಿದರುಂಟೆ
ನಿಬ್ಬರದ ಭಾಷೆಯಂ ಕೈಕೊಂಡರಿಂತುಂಟೆ
ಶಿರವನರಿದೇಳುದಿನವಿರಿಸಿ ಹಡೆದವರುಂಟೆ
ಉರವಣಿಸಿ ಎನ್ನ ವಿಶ್ವಾಸಿಸಿದರಿಂತುಂಟೆ
ಎಂದು ಬೋಳೈಸುತಂ ಗಣಕುಲಕೆ ಪೇಳುತಂ
ಸಂದಣಿಪ ಲೀಲೆಯಂ ಸುಖರಸದೊಳಾಳುತಂ
ರಾಮತಂದೆಗಳಿಗಂ ಗಣಪದವನೀವುತಂ
ಕಾಮಹರನಲ್ಲಿ ಸಾಮೀಪ್ಯಮಂ ಪಡೆವುತಂ
ಶಂಕರಂ ಶಶಿಧರಂ ಗಿರಿಜೇಶನೊಪ್ಪಿದಂ
ಪಂಕಜೋದ್ಭವ ಶಿರಃಕಂಜಕರನೊಪ್ಪಿದಂ
ಅಭಯಹಸ್ತಂ ಶೂಲಪಾನಿಯಿಂತೊಪ್ಪಿದಂ
ವಿಭವದಿಂ ಡಮರು ಘಂಟಾಹಸ್ತನೊಪ್ಪಿದಂ
ಸುರನಿಕರ ಮಕುಟ ಮಾಣಿಕ್ಯ ರಂಜಿತಪದಂ
ಶರಣಜನ ಸರಸಿಜ ಸಹಸ್ರಕರನೊಪ್ಪಿದಂ
ಹೆಂಪೆಸೆವಲಂಪಿನಿಂ ಪ್ರಮಥನಿಧಿಯೊಪ್ಪಿದಂ
ಹಂಪೆಯ ವಿರೂಪಾಕ್ಷಲಿಂಗನಿಂತೊಪ್ಪಿದಂ

ಹರದೂಷಕ ಸವಣರ ಕೂ
ಡರರೇ ವಾದಿಸಿಯೆ ಗೆಲಿದ ಏಕಾಂತದ ರಾ ।
ಮರಸರ ಸುತನೆಂದೊಲವಿಂ
ಕರುಣಿಸುತಿರ್ಕೆಮಗೆ ಹಂಪೆಯ ವಿರೂಪಾಕ್ಷಂ ॥

❖❖

# ೧೬. ಹಾವಿನಹಾಳ ಕಲ್ಲಯ್ಯನ ರಗಳೆ

ಬಲ್ಲಿದನೆಲ್ಲಾ ದೇವರ
ವಲ್ಲಭನಿಳೆಯಲ್ಲಿ ಮೆರೆದನೆನಗಂದಿಂದುಂ
ನಲ್ಲಂ ಹಾವಿನಹಾಳಿನ
ಕಲ್ಲಯ್ಯನನೆಮ್ಮ ಹಂಪೆಯ ವಿರೂಪಾಕ್ಷಂ ॥

ಧರೆಗೆ ಹಾವಿನಹಾಳೆನಿಪ್ಪ ಪುರವೊಪ್ಪುವದು
ಹರಭಕ್ತರಿಂ ವಿಪ್ರರಿಂದವಿಡಿದೊಪ್ಪುವದು
ಅಲ್ಲಿ ಸ್ವಯಂಭು ಕಲಿನಾಥನಿರ್ಪಂ ನೋಡ
ಎಲ್ಲರ್ಗೆ ತಾಯ್ತಂದೆ ಗುರುವೆನಿಪ್ಪಂ ನೋಡ
ಇಂತಪ್ಪ ಪುರದೊಳಗೆ ಶಿವನೋಜನೆಂದೆಂಬ
ನಂತವರ್ಗೆ ಪುಣ್ಯಸತಿ ಸೋಮವ್ವೆಯೆಂದೆಂಬ
ಪೆಸರಾಗೆ ಸುಖದಿಂದವಿರ್ಪರಾ ಪುರದೊಳಗೆ
ಎಸೆವುತಿರೆ ಹೊನ್ನಕಾಯಕವಲ್ಲಿ ತೊಳತೊಳಗೆ
ಧನದೊಳಂ ಧಾನ್ಯದೊಳ್ ಕೊರತೆಯಿಲ್ಲದೆ ಪೆರ್ಚಿ
ಘನಸಂಪದಕ್ಕೆ ಸಂತೋಷದಿಂ ಮೈವೆರ್ಚಿ
ಪುತ್ರನಿಲ್ಲದೆ ಚಿಂತೆ ಚಿತ್ತದೊಳ್ ಮಿಗೆ ಸಂದು
ನೇತ್ರತ್ರಯನ ಕಲ್ಲಿನಾಥನಲ್ಲಿಗೆ ಬಂದು
ದೇವ ಕರುಣಿಪುದಯ್ಯ ಎಮಗೊರ್ವ ಪುತ್ರನಂ
ದೇವ ನಿಮ್ಮಡಿಯನರ್ಚಿಪ ಸಚ್ಚರಿತ್ರನಂ
ಕುಡೆ ನಿನ್ನ ಪೆಸರನಿಟ್ಟಪೆನೆಂಬ ನುಡಿಯೊಡನೆ
ಮೃಡನ ಸಿರಿಮುಡಿಯಿಂದವೊಂದರಲು ಬರಲೊಡನೆ
ಕೊಂಡು ಪ್ರಸಾದಮಂ ಸತಿಯುದರದೊಳಗಿರಿಸಿ
ಕೊಂಡು ಪಾದೋದಕಮನಿರ್ಬರುಂ ಸಡಗರಿಸಿ

ಹರುಷದಿಂದಂ ತಿರುಗಿ ನಿಳಯಕ್ಕೆ ನಡೆತಂದು
ಇರೆ ಗರ್ಭವುದಯಿಸಿತ್ತಾ ಮಾನಿನಿಯೊಳಂದು

ಒಳಗೆ ಗರ್ಭಂ ಬೆಳೆಯೆ ಹೊರಗೆ ತನು ನಳಿನಳಿಸೆ
ತಿಳಿದು ಮೆಲ್ನಡೆ ಜಘನಭಾರದಿಂ ತೇರಯಿಸೆ
ತ್ರಿವಳಿ ತಲೆಗರೆಯ ನಾಭಿಯ ಗುಣ್ಪು ನೆರೆದೋರೆ
ನವ ಬಾಸೆಯಡರೆ ನೆಲೆಮೊಲೆಯ ಕುಡಿ ಕರ್ಪೇರೆ
ಮೊಗಮಲರ್ದು ಮೆಲ್ನುಡಿಯ ಪರಿಮಳವನೀವುತಿರೆ
ನಗೆಗಣ್ಗಳೊಯ್ಯನೆ ಬಳಲ್ಕೆಯಿಂ ಬಳೆಸುತಿರೆ
ಕೇಶಪಾಶವದುರ್ಬಿ ಕುಡಿನಿಮಿರ್ದು ಬಳೆಯುತಿರೆ
ಆಶೆ ಪುತ್ರನ ಮೇಲೆ ಪರ್ವಿ ಪಲ್ಲವಿಸುತಿರೆ
ನಮಮಾಸವಾಯ್ತು ಸತಿ ಸಂತಸದೊಳಕ್ಕಾಡೆ
ನಮಮಾಸದೊಡನೆ ಶುಭದಿನ ಮೂಹೂರ್ತಂ ಕೂಡೆ
ಪಡೆದಳಾನಂದಮಯನೆಂದೆನಿಪ ಕಂದನಂ
ಪಡೆಯೆ ಶಂಕರನ ಭಕ್ತಿಜ್ಞಾನವೃಂದನಂ
ಕಲ್ಲಿನಾಥನ ಪ್ರಸಾದದ ಬೆಣ್ಣೆಯಂ ತಂದು
ಅಲ್ಲಿ ಶಿಶುವಿಂಗಿಕ್ಕಿ ಲೀಲೆಯಿಂದಂ ಬಂದು
ಕಡುನೇಹದಿಂ ಬಳಿಕ ಜಾತಕಕರ್ಮಂ ಮಾಡಿ
ಬಿಡದೊಡನೆ ಹರುಷದಿಂ ನಾಮಕರಣಂ ಮಾಡಿ
ಕಲ್ಲಿನಾಥನ ಪೆಸರನಿಟ್ಟರಾನಂದದಿಂ
ಅಲ್ಲಿ ಬಳೆಯುತಿರ್ದನಿಂದುಕಳೆಯಂದದಿಂ
ಒಂದೆರಡು ಮೂರು ನಾಲ್ಕೈದಾರು ವತ್ಸರಂ
ಸಂದಣಿಸಿ ಪತ್ತುಪದಿನೈದು ಸಂವತ್ಸರಂ
ನೆರೆದ ಮಗನಂ ತಂದು ಪೆಸರೊಪ್ಪಿಸಲ್ನೆನೆದು
ಹೆರೆಸೂಡಿದನ ಭಕ್ತಸಂತಾನವಂ ತಳೆದು
ಹರುಷದಿಂದಾರಾಧನೆಯನಿತ್ತು ರಾಗದೊಳ್
ತರದಿಂ ಸುವಾಸಿನಿಯರಂ ಕರಸಿ ಬೇಗದೊಳ್
ಕಳಸಕನ್ನಡಿಯೊಳಗೆ ಹೊಳೆವ ಲಲನೆಯರೊಳಗೆ
ಫಳಪುಷ್ಪನವ್ಯವಸ್ತ್ರಾಭರಂ ತತಿಯೊಳಗೆ
ಶಿವಭಕ್ತರೊಲ್ದೊಲ್ದು ನಡೆವ ಕೇಳಿಕೆಯೊಳಗೆ
ತವೆ ಗಗನದೊಳ್ ಕುಣಿವ ವೃಷಭಕೇತನದೊಳಗೆ

ನಡೆತಂದು ಕಲ್ಲಿನಾಥನ ನಿಳಯಮಂ ಪೊಕ್ಕು
ಮೃಡನ ಶಂಕರನ ಶಿವಸುಖನಿಳಯಮಂ ಪೊಕ್ಕು

ಪೆಸರೊಪ್ಪಿಸಲ್ಕೆ ಶಿವಭಕ್ತರೆಲ್ಲಂ ಬಂದು
ಪಶುಪತಿಯ ಮುಂದೆ ಸದ್ಭಕ್ತಿಯಿಂದಂ ನಿಂದು
ದೇವಂಗೆ ಭಕ್ತನಂ ಭಕ್ತಂಗೆ ದೇವನಂ
ಭಾವಶುದ್ಧಿಯೊಳೆಯ್ದೆ ತೋರುತ್ತೆ ನತಜನಂ
ಕಲ್ಲಿನಾಥಂ ನಿನಗೆ ಗತಿ ನಿನಗೆ ಮತಿ ನಿನಗೆ
ಕಲ್ಲಿನಾಥಂ ಕಲ್ಪತರು ನಿನಗೆ ಗುರು ನಿನಗೆ
ಕಲ್ಲಿನಾಥನನರಿದು ಪೂಜಿಪುದು ಕಲ್ಲಯ್ಯ
ಎಲ್ಲಾ ಮನುಷ್ಯರೋಪಾದಿ ನೀನಲ್ಲಯ್ಯ
ಎಂದೆನುತೆ ಕಲ್ಲಿನಾಥನನಲ್ಲಿ ಬೀಳ್ಕೊಂಡು
ಬಂದರಾನಂದದಿಂ ಸಂತಸಮನೊಳಕೊಂಡು

ಬಂದು ಪುರಮಂ ಪೊಕ್ಕು ಪರಮಸುಖದಿಂದಿರಲ್
ಅಂದು ಕಲ್ಲಯ್ಯನ ಮನಂ ಶರ್ವನೊಳಗಿರಲ್
ನಿಚ್ಚ ನಿಚ್ಚಲು ಬಂದು ನೇಮಮಂ ಮಾಡುತ್ತೆ
ಅಚ್ಚರಿ ಮಿಗಲ್ ಭಕ್ತಿ ಘನಕೆ ಘನವಾಗುತ್ತೆ
ನಿಂದೆಡೆಯೊಳುಂ ಕಲ್ಲಿನಾಥ ಶರಣೆಂದೆನುತೆ
ಬಂದೊಡೆಯೊಳುಂ ಕಲ್ಲಿನಾಥ ಶರಣೆಂದೆನುತೆ
ಭವಿಗಳಂ ಕಂಡು ಭಯದಿಂದೆ ಕೊಕ್ಕರಿಸುತಿರೆ
ಶಿವಭಕ್ತರಲ್ಲದರ್ಗನುದಿನಂ ಪೇಸುತಿರೆ
ವಿಪ್ರರೆಲ್ಲರ್ ಬಂದು ಕೀರ್ತಿಸಲು ನೋವುತಂ
ಅಪ್ರಸ್ತುತಂಗಳಂ ಗಳಹುತಿರೆ ಕೊರಗುತುಂ
ಉತ್ತರಂಗುಡಲರಿಯದಲ್ಲಿ ಖಾತಿಗೆ ಸಂದು
ಒತ್ತರಿಪ ತರ್ಕದೊಡನೋಡಲಾರದೆ ನಿಂದು
ಮನದೊಳೆಲ್ಲವನರಿದು ಮಾಡಬಾರದೆ ನೊಂದು
ಅನುಗೆಟ್ಟ ವಿಪ್ರರಂ ಗೆಲ್ವ ಚಲದಿಂ ಬಂದು
ಕಲ್ಲಿನಾಥಂಗೆ ನಿಚ್ಚಂ ಬಿನ್ನಪಂ ಗೆಯ್ದು
ಅಲ್ಲಿ ಶಿವನುಸುರದಿರೆ ಮುಳಿದು ಸುರ್ರನೆ ಸುಯ್ದು
ಪೂಜೆಯಂ ಮಾಡುತಂ ನೋಡಿ ನೆರೆ ಬಾಳುತಂ
ಓಜೆಯಂ ಮೀರುತಂ ತಳ್ಕೈಸಿ ತಾಳುತಂ
ಅಗಲದಾರೈವುತಂ ನೇಹದಿಂ ಸಲಹುತಂ
ಮಿಗೆ ನಚ್ಚಿ ಹೆಚ್ಚುತಂ ಕುಣಿದು ಕುಕಿಲಿರಿವುತಂ
ಇಂತು ಪುರದೊಳಗೆ ಕಲ್ಲಯ್ಯಂಗಳಿರುತಮಿರೆ
ಸಂತತಂ ಕಲ್ಲಿನಾಥನ ಭಕ್ತಿಸುಖದೊಳಿರೆ

ಇತ್ತಲಾ ಬಿಜ್ಜಳನ ಮನೆಯ ನಾಯಕನೆನಿಪ
ಉತ್ತಮರನರಿಯದತಿ ದುರ್ಜನಂ ತಾನೆನಿಪ
ಪೆಸರ ಕಸಿಕಿಲನಾರಣಂ ಬಂದು ಪುರದೊಳಗೆ
ಎಸೆಯೆ ಕುಳ್ಳಿರ್ದು ಕರೆಯಿಸಿದನಾಕ್ಷಣದೊಳಗೆ
ಬಂದು ಶಿವನೋಜಂಗೆ ನುಡಿದನಾ ನಾರಣಂ
ಚಂದದಾಭರಣಮನಲಂಕರಿಪ ಕಾರಣಂ
ಕೇಳಯ್ಯ ಶಿವನೋಜ ನಿನ್ನ ಕೆಲಸಕ್ಕೆ ಪಡಿ
ಕೇಳಲಿಲ್ಲೀ ಜಗದೊಳೆಲ್ಲರ್ಗೆ ಹತ್ತುಮಡಿ
ನಿನ್ನ ಹವಣಲ್ಲ ನಿನ್ನಯ ಸುತನ ಕೌಶಲಂ
ಇನ್ನೊರ್ವರುಂಟೆ ಮಾಳ್ಕೆಯ ಜಾಣನುಜ್ವಲಂ
ಎಂದೊಂದು ಸಾವಿರದ ಘಟ್ಟಿಯಂ ಕೊಟ್ಟಲ್ಲಿ
ಒಂದು ಚೆಲ್ವುತ್ತರಿಗೆಯಂ ಮಾಳ್ಪುದೆನುತಲ್ಲಿ
ಪೋದನಾ ನಾರಣಂ ಶಿವನೋಜನೊಲ್ದಿತ್ತ
ಸಾದರಂ ಮನೆಗೆ ಬಂದಲ್ಲಿ ಸಡಗರಿಸುತ್ತ
ಉತ್ತರಿಗೆಯಂ ಮಾಡಲೆಂದು ಸಂಭ್ರಮಿಸುತಿರೆ
ಬಿತ್ತರಿಸುವಡೆ ತನ್ನ ವಶವಲ್ಲದಿರುತಮಿರೆ
ಕಲ್ಲಯ್ಯನೊಮ್ಮೆಯಾ ಕಲ್ಲಿನಾಥನೊಳಿರಲು
ಎಲ್ಲ ತೆರದಿಂ ತನಗೆ ಕೆಲಸವಳವಡಿದಿರಲು
ಚಿಂತಿಸಿ ಮನಂ ಮರುಗಿಯರಸುಗೆಲಸಂ ನಮಗೆ
ಇಂತು ಬಂದುದು ಮಾಳ್ಪಡತ್ಯಂತವರಿದೆನಗೆ
ಮಗನಾವುದಮನೊಲ್ಲನಾವಗಂ ಶಿವಮರುಳು
ಬಗೆಯನೀ ಮನೆವಾರ್ತೆಯಂದಮಂ ಮಿಗೆ ಮರುಳು

ಎಂದು ಮತ್ತೊಂದು ದೆವಸಂ ಮಧ್ಯರಾತ್ರಿಯೊಳು
ಕಂದನಂ ಕರೆದೆಬ್ಬಿಸುತ್ತೆಯತಿ ಚಿಂತೆಯೊಳು
ಮಗನೆ ಕಲ್ಲಯ್ಯ ಶಿವಮರುಳಾಗಿ ನಿಲ್ವರೆ
ಜಗದೊಳಗನುದ್ಯೋಗಿಯಾಗಿ ಲಘುವಪ್ಪರೆ
ಮಕ್ಕಳ್ಗೆಯುಂ ಮನೆಗೆಯುಂ ನೆನೆಯದಿಪ್ಪರೆ
ಅಕ್ಕಟನ್ನೇಕೆನ್ನ ಕಂದ ಇಂತಪ್ಪರೆ
ಕಲ್ಲಿನಾಥನ ನಿಲಯವೆಂದಡಲ್ಲಿಂ ತೊಲಗೆ
ಕಲ್ಲಿನಾಥನ ನಾಮವೇ ಹರಣವದು ನಿನಗೆ
ಕಲ್ಲಿನಾಥನ ಮಾತು ಕಲ್ಲಿನಾಥನ ನೀತಿ
ಕಲ್ಲಿನಾಥನ ಸಂಗವಲ್ಲದುದು ಮಿಗೆ ಖಾತಿ

ಇಂತಿರ್ದಡಿನ್ನೆಂತು ಹೇಳಯ್ಯ ಎಲೆ ಮಗನೆ
ಇಂತಾದಡಿನ್ನು ಘಳಿಸುವರಾರೆಲೇ ಮಗನೆ
ಉದ್ಯೋಗವಿಲ್ಲದೆ ಮಹೇಶ್ವರಂ ಕೊಡ ಮಗನೆ
ಸದ್ಯ ಫಲವಂ ಪುಣ್ಯವುಳ್ಳವಂ ಬಿಡುವನೇ
ಹಸ್ತ ಕುಶಲತೆಗೆ ನಿನಗೆಣೆಯುಂಟೆ ಧರಣಿಯೊಳು
ವಿಸ್ತಾರವಂ ಕೆಡಿಸುವರೆ ಕಂದ ಹರೆಯದೊಳು
ಮರುಳಾಗಿ ಕಲ್ಲಿನಾಥನ ಪೆಸರನಿಟ್ಟೆನೇ
ನರರ ಪೆಸರಿಡದಿಂತು ಭಕ್ತಿಯಿಂ ಕೆಟ್ಟೆನೇ
ಪ್ರಾಯದೊಳ್ಪಡೆಯದ ಧನಂ ಮುಪ್ಪಿನೊಳಗುಂಟೆ
ಆಯುವಂ ಬರಿಸೂರೆಗಳೆವಡೆ ಬಳಿಕ್ಕುಂಟೆ
ಏಕೆಮ್ಮ ಗಂಟಲಂ ಕೋದಪ್ಪೆ ಕಲ್ಲಯ್ಯ
ಲೋಕದೊಳ್ಬದುಕುವರ್ಗಿದು ನೀತಿಯಲ್ಲಯ್ಯ
ಇಂದು ಶಿವನಿಳಯಕ್ಕೆ ಪೋಗಲೀಯೆಂ ಮಗನೆ
ಕೊಂದು ಪೋಗೆನ್ನನೆಂದಲ್ಲಿ ಶಿವನೋಜನೆನೆ

ಕೇಳ್ದು ಸುತ್ರನೆ ಸುಯ್ದು ನೊಂದು ಕಡುಶೋಕದಿಂ
ತಾಳ್ದು ನುಡಿದಂ ತಂದೆಯೊಡನೆ ಕಡುಗೋಪದಿಂ
ಕೊಂದಡಂ ಕಡಿದಡಂ ಸೀಳ್ದಡಂ ಪೋಳ್ದಡಂ
ಒಂದೊಂದು ದೆಸೆಗೆ ನೆರೆ ಕಡಿಖಂಡಗೆಯ್ದಡಂ
ಬಿಡೆನೆನ್ನ ಕಲ್ಲಿನಾಥನ ಚನ್ನ ಪಾದವಂ
ಮೃಡ ಮಹಾಲಿಂಗಕಲ್ಲೇಶ್ವರನ ಪಾದಮಂ
ಸಡಿಫಡೆಲ್ಲಿಯ ತಂದೆಯೆಲ್ಲಿಯ ಮಗಂ ಕೇಳ
ಮೃಡನೆ ತಾಯ್ತಂದೆ ತನುವೆನಗೆ ಸರ್ವಂ ಕೇಳ
ಸಾವ ತಾಯ್ತಂದೆಗಳ ನಾನೊಲ್ವೆನೇ ಕೇಳ
ಜೀವಿಸುವದೇಕೆ ಸಂಸಾರವೇಕಿದು ಕೇಳ
ಎನಲಲ್ಲಿ ಶಿವನೋಜನಟ್ಟಾಸುರಂ ಮಸಗಿ
ತನಯನಂ ಬಂದು ಬಡಿದಂ ಕೋಪದಿಂ ನಡುಗಿ
ಬಡಿದಡೆ ಪರಿಚ್ಛೇದಿಸಿದನಲ್ಲಿ ಕಲ್ಲಯ್ಯ
ಒಡಲನೀ ಧರಣಿಯೊಳಗಿರಿಸುವವನಲ್ಲಯ್ಯ
ಎನುತಂ ಕಠಾರಿಯೊಂದು ಕೊಂಡು ನಡೆತಂದು
ಘನಕೋಪದಿಂ ಕಲ್ಲಿನಾಥನಲ್ಲಿಗೆ ಬಂದು
ತಂದೆ ಶಿವ ನೀನಿರಲ್ ಭವಿ ತಂದೆ ಬಡಿವನೆ
ಇಂದುಧರ ನೀನಿರಲ್ನರನಿಂತು ಮಾಳ್ಪನೆ

ಎಲ್ಲವಂ ಮಾಡಿಸಿದವನು ನೀನೆ ನೀನೆನುತೆ
ಬಲ್ಲೆನವನೊಂದು ರೂಪಲ್ಲ ರೂಪಲ್ಲೆನುತೆ
ಅಲ್ಲಿ ಹತ್ತಿರ ಸಾರ್ದು ತೆಳ್ವಸುರ ನೆರೆ ಕೊರೆದು
ಸಲ್ಲೀಲೆಯಿಂದೆ ಕರುಳಿಂಡೆಗಳನಳ್ಳಿರಿದು
ತೆಗೆದು ಪೂಜಿಸಿ ಕಲ್ಲಿನಾಥನಂ ಬಿಗಿದಪ್ಪಿ
ನೆಗೆದ ಪುಳಕಂಗಳಿಂ ಮತ್ತೆ ಮತ್ತಮರ್ದಪ್ಪಿ
ಕಲ್ಲಿನಾಥಂ ಮಚ್ಚಿ ಕರುಣಮಂ ಮುಂದಿಟ್ಟು
ಕಲ್ಲಯ್ಯನಂ ಮತ್ತೆ ಮತ್ತಪ್ಪಿ ಸೈತಿಟ್ಟು
ವೇದ ಶಾಸ್ತ್ರಾಗಮದ ಗೀತಮಂ ಪಾಡಯ್ಯ
ವೇದಚೋರ ಕರನೆಲ್ಲಂದದಿಂ ಗೆಲ್ಲಯ್ಯ
ಸಿದ್ಧರೇವಣದೇವನಣುಗನೆಂದೆನಿಸಿರ್ದ
ಉದ್ಧತಜ್ಞಾನಿ ಶೈವಾಚಾರ್ಯನೆನಿಸಿರ್ದ
ರುದ್ರದೇವಂ ನಿನಗೆ ಗುರುವಾಗಿ ಸಂದಪಂ
ಭದ್ರಗುಣನಾನಂದದಿಂದೊಲ್ದು ಬಂದಪಂ
ಅಂಜಬೇಡೆಲೆ ಮಗನೆ ಮರ್ತ್ಯದೊಳ್ಸುಖಮಿರ್ದು
ರಂಜಿಸುತ ಸಿದ್ಧರಾಮನ ಬೆಂಬಳಿಯೊಳಿರ್ದು
ಬಳಿಕ ಬರ್ಪುದು ರಜತಪರ್ವತಕೆ ಕಲ್ಲಯ್ಯ
ತೊಳತೊಳಪ ಗಣಪದದೊಳಿರ್ಪುದೆಲೆಕಲ್ಲಯ್ಯ

ಎಂದು ಕಲ್ಲಯ್ಯಂಗೆ ಬುದ್ಧಿಗಲಿಸುತ್ತಮಿರೆ
ಬಂದನಾ ಪೂಜಾರಿಯಂದೊಳಗೆಪೊಗುತಮಿರೆ
ಕಲ್ಲಿನಾಥನ ಸುತ್ತಲುಂ ನೆತ್ತರೊಕ್ಕಿಸಲು
ಕಲ್ಲಯ್ಯನಲ್ಲಿ ತಲೆಯಿಟ್ಟು ಮೂರ್ಛಿಸುತಿರಲು
ಕಂಡು ನಿಲಲಂಜಿ ಪರಿತಂದೂರ್ಗೆ ಪೇಳುತಿರೆ
ತಂಡದಿಂ ತವಕಿಸುತ್ತಲ್ಲಿ ಭಕ್ತಾಳಿ ಬರೆ
ಶಿವನೋಜನುಂ ಸತಿಯುವಳಲಿಂದೆ ಬರುತಮಿರೆ
ತವತವಗೆ ಪುರಜನಂ ಕೌತುಕಂಬಡುತಮಿರೆ
ಬಂದು ಶಿವಲಿಂಗದೊಳಗಿರ್ದ ಕಲ್ಲಯ್ಯನಂ
ನೊಂದು ಶಿವನ ಕೂಡಿಕೊಂಡ ಕಲ್ಲಯ್ಯನಂ
ನೆನೆದು ಶಿವಮಯವಾಗಬಲ್ಲ ಕಲ್ಲಯ್ಯನಂ
ಮನವನೀಶನೊಳಿರಿಸಬಲ್ಲ ಕಲ್ಲಯ್ಯನಂ
ಕರುಳಿಂಡೆಯಂ ತರುಬಿ ನಿಂದ ಕಲ್ಲಯ್ಯನಂ
ಹರನೊಳೇಕಾಂತವಿರುತಿರ್ದ ಕಲ್ಲಯ್ಯನಂ
ಕಂಡು ಮೆಲ್ಲನೆ ಬಿಡಿಸಿ ತನುವನಾನಿಸಿಕೊಂಡು

ಇಂಡೆಗಳ ಕರುಳೆಲ್ಲವಂ ತೆಗೆದು ಕೈಕೊಂಡು
ಬಸುರೊಳಗೆ ಕೂಡಿ ಪ್ರಸಾದಮುಮನೊಳಗಿಕ್ಕಿ
ಭಸಿತಮಂ ಮೈಯೊಳುದ್ಧೂಳಿಸುತೆ ಮನವುಕ್ಕಿ
ಶಿವಭಕ್ತರೆಲ್ಲರುಂ ಕೇಳಿಕೆಗಳಂ ಮಾಡೆ
ಶಿವನ ಮುಂದೆಲ್ಲರ್ಪರಿಚ್ಛೇದದೊಳ್ಕೂಡೆ
ಮೆಲ್ಲನೆಚ್ಚತ್ತು ಕಣ್ದೆರೆದನಾ ಕಲ್ಲಯ್ಯ
ಎಲ್ಲರುಂ ಗುಡಿಗಟ್ಟಿ ಕುಣಿವುತಿರೆ ಕಲ್ಲಯ್ಯ
ಏಳ್ದು ಶಿವಲಿಂಗಮಂ ಬಲವಂದು ಪೊಡವಟ್ಟು
ತಾಳ್ದು ಪುಳಕಂಗಳಂ ಗಣಕುಲಕೆ ಪೊಡಮಟ್ಟು
ಹರನ ಶರಣರ ನಡುವೆ ಮೆರೆವುತಂ ನಡೆತಂದು
ಪರಮ ಹರುಷಂ ಮಿಕ್ಕು ಪುರದೊಳಗೆ ಪೊಗುತಂದು
ವೇದದಿಂ ಶಾಸ್ತ್ರದಿಂ ಗೀತಮಂ ಪಾಡುತಂ
ವಾದದಿಂ ವಿಪ್ರರಂ ಗೆಲ್ದು ನಲಿದಾಡುತಂ
ಲೋಕಾಯತರನಲ್ಲಿ ಬೌದ್ಧರಂ ಸೋಲಿಸುತೆ
ಲೋಕದೊಳ್ಚಾರ್ವಾಕರಂ ಗೆಲ್ದು ರಂಜಿಸುತೆ

ಇರುತಮಿರೆ ಬಂದನಾ ಸಿದ್ಧರೇವಣದೇವ
ಅರರೆ ಪರಮಾನಂದಮೂರ್ತಿ ಶಿವಸದ್ಭಾವ
ಅಲ್ಲಿ ಬರೆ ಕಂಡು ಕಲ್ಲಯ್ಯನಾನಂದದಿಂ
ಪಲ್ಲವಿಪ ಪುಳಕವಿದಿರೇರುತಂ ರಾಗದಿಂ
ನಡೆದೊಲ್ದು ಪರಿತಂದು ಪದಯುಗಳಮಂ ಪಿಡಿದು
ಕಡುಲಲ್ಲೆಗರೆದು ಕಿಂಕುರ್ವಾಣಮಂ ತಳೆದು
ದೇವ ಶಿವಸಿದ್ಧಸದ್ಗುರುವೆ ಶಾಶ್ವತಗುರುವೆ
ದೇವ ಸಿದ್ಧರ ಚಕ್ರವರ್ತಿ ನತಸುರತರುವೆ
ಶಿವಯೋಗಿಗಳ ಗತಿಯೆ ನೆನೆವರ ಮಹಾಮತಿಯೆ
ಶಿವನಂತೆ ಭುವನದೊಳ್ಬೆಳಗುತಿಪ್ಪುನ್ನತಿಯೆ
ಕರುಣಿಸೆನಗೊರ್ವ ಗುರುವಂ ಪರಮ ಗುರುಮೂರ್ತಿ
ಕರುಣಿಸೆಲ್ಲಾ ಭುವನದೊಳಗುಜ್ವಳಿಪ ಕೀರ್ತಿ
ಎಂದು ಬಿನ್ನಯಿಸಲೇಳಯ್ಯ ಕೇಳೆಂದೆನುತೆ
ಮುಂದಿರ್ದ ರುದ್ರಮುನಿದೇವರಂ ಪರಿಕಿಸುತೆ
ಮಗನೆ ಕಲ್ಲಯ್ಯಂಗೆ ಗುರುವಾಗ ಹೋಗಯ್ಯ
ಬಗೆಗೆಯಗ್ಗಳವಾದ ಮಾಯೆಯಂ ನೀಗಯ್ಯ
ಎಂದಲ್ಲಿ ರುದ್ರಮುನಿದೇವರಂ ಕಳುಪುತಿರೆ

ಬಂದನಾ ಕಲ್ಲಿನಾಥಂ ಮನದೊಳೆಳಸುತಿರೆ
ರಂಗಮಂಟಪದೊಳಗೆ ಶಿವಕಳಸಮುಮನಿರಿಸಿ
ಪಿಂಗದೊಲವಿಂ ಪಂಚಶುದ್ಧಿಯಂ ಸಂಸ್ಕರಿಸಿ
ಸುರುಚಿರವಿಭೂತಿಯಂ ಶಿವಪಟ್ಟವಂ ಕಟ್ಟಿ
ಶರಣ ಸಂತತಿಯೊಲ್ದು ಸಂತೋಷವಂ ಮುಟ್ಟಿ
ಗುರುಕಳಸದೊಡನೆ ಶಿವಕಳಸಂಗಳಂ ಪಿಡಿದು
ಪರಮಾನುರಾಗದಿಂ ಕಳಸೋದಕವನೆರೆದು

ಇಂತು ಗುರು ರುದ್ರಮುನಿದೇವ ಬಿಜಯಂಗೈಯ್ಯೆ
ಪಿಂತೆ ಕಲ್ಲಯ್ಯನಾ ಶೈವರಾಜ್ಯಂಗೆಯ್ಯೆ
ಗುರುಹಸ್ತದಿಂ ಪಿಡಿಯೆ ಲಘುವಳಿದು ಗುರುವಾಗಿ
ಗುರುತರ ಜ್ಞಾನಮಯನಾಗಿ ಸುಖತರವಾಗಿ
ಸಂತಸುಖದಿಂದವಿರ್ದೊಂದು ದೇವಸಂ ಬಂದು
ಸಂತಸದೆ ಕಲ್ಲಿನಾಥನ ನಿಳಯದೊಳ್ನಿಂದು
ಹಾರೈಸಿ ಹೊರೆಯೇರಿ ನೇಮಮಂ ಮಾಡುತಿರೆ
ತೇರೈಸಿ ರೋಮಾಂಚವಂಗದೊಳ್ಬೆಳೆವುತಿರೆ
ಮುಟ್ಟಿ ನೆರೆ ಮುಟ್ಟಿ ಮಿಗೆ ಮುಟ್ಟಿ ಗದ್ಗದಿಸುತಂ
ನಟ್ಟು ಮಾನಸದೊಳಳವಟ್ಟು ದಳವೇರುತಂ
ಪೂಜೆಯೊಳಗಾಳುತ್ತ ಏಳುತ್ತಮಿಪ್ಪಲ್ಲಿ
ಓಜೆಗೆಟ್ಟಳ್ಕರಿಂದೋಲೈಸುತಿಪ್ಪಲ್ಲಿ
ಬಂದುದೊಂದುಗ್ರಸರ್ಪಂ ಪೂಜೆಗೆಯ್ವೆಡೆಗೆ
ನಿಂದು ಪಿಡಿಯಿತ್ತು ಕರವಂ ತನಗೆ ಖಾತಿ ಮಿಗೆ
ಪಿಡಿಯೆ ಮೃಡನಂ ಕಲ್ಲಿನಾಥನಂ ನೋಡುತಂ
ಕಡು ನೊಂದು ಕಲ್ಲಯ್ಯನಲ್ಲಿ ಬಿನ್ನೈಸುತಂ
ನಿಮ್ಮನರ್ಚಿಸುತೆ ಪೂಜಿಸುತಿಪ್ಪ ಸಮಯದೊಳು
ನಿಮ್ಮ ಗೀತಂಗಳಂ ಪಾಡುವೀ ಸಮಯದೊಳು
ಏನೊಂದು ವಿಘ್ನಂಗಳಾದಡಂತೆಲ್ಲವಂ
ನೀನೆ ಪರಿಹರಿಸಲ್ಕೆವೇಳ್ಪುದಂತೆಲ್ಲವಂ
ಎಲೆ ಮಹಾಲಿಂಗ ಕಲ್ಲೇಶ್ವರಾ ಕೇಳಯ್ಯ
ಸಲೆ ನಿಮ್ಮ ದೇವತನಮಂ ಮೆರೆವುದೇನಯ್ಯ
ಇಂತೆಂದು ಗೀತಮಂ ಪಾಡುತ್ತಮಿರಲಲ್ಲಿ
ಪಿಂತೆ ಕಚ್ಚಿದ ಪಾವು ಜೀವಮಂ ಬಿಡಲಲ್ಲಿ
ಅರ್ಚಿಸುತ್ತೆಳ್ದು ಬಲವರಲೆಂದು ಕಲ್ಲಯ್ಯ

ಅಚ್ಚರಿ ಮಿಗಲ್ಬರುತ್ತಿರೆ ಭಕ್ತ ಕಲ್ಲಯ್ಯ
ನಲ್ಲಿ ತನ್ನಂ ಕಚ್ಚಿದಹಿ ಸುತ್ತ ಬಿಳ್ದಿರಲು
ತಲ್ಲಣಿಸಿ ಬಂಧನಭವಂ ಮೇಲೆ ನಗುತಿರಲು

ಬಂದು ಕಲಿದೇವ ನೀವಿಂತಿದಂ ಮಾಳ್ಪರೇ
ಇಂದೆನ್ನನತಿ ಕಠಿಣ ದಿಟ್ಟಿಯಿಂ ನೋಳ್ಪರೆ
ಇಂತೀ ನರರ್ಪಾವು ಸೋಂಕೆ ಮಿಗೆ ಸಾವರೆನೆ
ಅಂತಪ್ಪ ಸರ್ಪನೆನ್ನಂ ಮುಟ್ಟಿ ಸತ್ತುದೆನೆ
ನಾನಿನ್ನದೆಂತಪ್ಪ ವಿಷಮವಿಷಕಾಯನೋ
ಏನೆಂದಪೆಂ ವಿಷಕೆ ವಿಷವಾಗಿ ನಿಂದೆನೋ
ಎನ್ನನಿಂತತಿಕಷ್ಟನಂ ಮಾಳ್ಪರೇ ದೇವ
ಎನ್ನನತಿ ನಿಷ್ಠುರಗುಣಕ್ಕಿಕ್ಕುವರೆ ದೇವ
ಎಂದು ಬಿನ್ನೈಸುತಿರೆ ಕಲ್ಲಿನಾಥಂ ನಗುತೆ
ಕಂದ ಭಯವೇಕಯ್ಯ ಪಾವು ಬರ್ದುಕಿತ್ತೆನುತೆ
ಸತ್ತ ಪಾವೆದ್ದುದಿನ್ನಂಜವೇಡೆಲೆ ಮಗನೆ
ಉತ್ತಮ ಶಿವಾಚಾರ ಭಯಭಕ್ತಿಭರಿತಯೆನ
ಪೊರಮಟ್ಟು ಬಂದು ಹರಿದಾಡುವಹಿಯಂ ಕಂಡು
ಹೆರೆಸೂಡಿದನ ಕೃಪೆಗೆ ಕೌತುಕವನೊಳಕೊಂಡು
ಗೀತಮಂ ಪಾಡುತಂ ಸುಕೃತಮಂ ಸೂಡುತಂ
ನೂತನ ಶಿವಾನಂದ ಸುಖದೊಳೋಲಾಡುತಂ
ಮಾರಮದಮರ್ದನನ ಭಕ್ತಯೊಳ್ಬಾಳುತಂ
ವೈರಾಗ್ಯವೊದಗುತ್ತೆ ಶಿವಜ್ಞಾನಿಯಾಗುತಂ
ನಿರುಪಮೈಶ್ವರ್ಯಯುತ ಪರಮಸುಖದಿಂದಮಿರೆ
ಹರನ ಪುರಹರನ ಕಾರುಣ್ಯಜಲನಿಧಿಯೊಳಿರೆ

ತಂದೆ ಶಿವನೋಜನಾ ಕಲ್ಲಯ್ಯನಂ ನೋಡಿ
ಚಂದದಿಂ ಮದುವೆಯಂ ಮಾಡಲ್ಮನಂಗೂಡಿ
ಎಲೆ ಮಗನೆ ಕಲ್ಲಯ್ಯ ನಿನಗೊರ್ವ ಕನ್ನೆಯಂ
ಲಲಿತಾಂಗಿಯಂ ಮದುವೆಯಂ ಮಾಳ್ಪೆ ಚೆನ್ನೆಯಂ
ಎಂದು ನುಡಿವುತ್ತಮಿರಲೊಲ್ಲೆ ನಾಂ ಮದುವೆಯಂ
ಸಂದಣಿಪ ಸಂಸಾರದಲ್ಪ ಸುಖಸೀಮೆಯಂ
ಒಲ್ಲೆನೆಂದಲ್ಲಿ ಪೊರಮಟ್ಟನಾ ನಿಶ್ಚಳಂ
ಸಲ್ಲೀಲೆಯಿಂ ಬರುತ್ತಿರ್ದನತಿ ನಿರ್ಮಲಂ

ತಂದೆ ತಾಯಂ ಬಿಟ್ಟು ಬಂಧುಕುಲಮಂ ಬಿಟ್ಟು
ಪಿಂದೆ ಪುಟ್ಟಿದ ಜನ್ಮಭೂಮಿಯಂ ನೆರೆ ಬಿಟ್ಟು
ಪತಿಯುಂ ಪಿತಂ ಸಿದ್ಧರಾಮನೇ ತನಗೆಂದು
ಗತಿಮತಿ ಮಹಾ ಸಿದ್ಧರಾಮನೇ ಶರಣೆಂದು
ಸೊನ್ನಲಿಗೆಗೆಯ್ತಂದು ಶಿವಸಿದ್ಧನಂ ಕಂಡು
ಉನ್ನತಜ್ಞಾನಿ ವೈರಾಗ್ಯನಿಧಿಯಂ ಕಂಡು
ಮಲ್ಲಿಕಾರ್ಜುನನ ಮನದಂತಪ್ಪನಂ ಕಂಡು
ಮಲ್ಲಿನಾಥನ ಬೆಳಗಿನಂತಪ್ಪನಂ ಕಂಡು
ದಳವೇರಿ ಸುಖವೇರಿ ನಲವೇರಿ ಸೊಂಪೇರಿ
ತಿಳಿವೊದಗುತಡಿಗಡಿಗೆ ದೃಷ್ಟಾಂತವಂ ತೋರಿ
ಮಹಲಿಂಗ ಕಲ್ಲೇಶ್ವರನನೊಲ್ದು ಪಾಡುತಂ
ಬಹುವಿಧದೆ ಸಿದ್ಧರಾಮನನಲ್ಲಿ ಪಾಡುತಂ
ರಾಮನಾಥಂ ಮಲ್ಲಿನಾಥನೆನೆ ಪಾಡುತಂ
ಆ ಮಹಾಸಿದ್ಧನೊಳ್ಮಿತ್ರತ್ವವೊದಗುತಂ
ಇಹ ಪರದ ಮಿತ್ರನಾಗಿಂತು ಸುಖಮಿರುತಿರಲು
ಸಹಜ ಶಿವಭಕ್ತಿ ಪಿರಿದಾಗುತ್ತಮಿರುತಿರಲು

ಒಂದು ದಿನವೊರ್ವ ಗುಡ್ಡಂ ವಿಕೃತವೇಷದಿಂ
ಬಂದು ಮೈಯರಿಸಿನದ ನಖರೇಖೆಯೊಪ್ಪದಿಂ
ಇರೆ ಕಂಡು ಕಲ್ಲಯ್ಯನಲ್ಲಿ ಪೇಸುತ್ತಮಿರೆ
ವರ ಸಿದ್ಧನವರಂ ನಿರೀಕ್ಷಿಸುತೆ ನುಡಿವುತಿರೆ
ಕಲ್ಲಯ್ಯ ಮದುವೆವೇಳ್ಪುದು ನಿನಗೆನುತ್ತಮಿರೆ
ಒಲ್ಲೆನೆಲೆ ದೇವ ವೈರಾಗ್ಯವೆನಗೆನುತಮಿರೆ
ಸಿದ್ಧರಾಮಂ ನೋಡಿ ನಗುತಮಿರ್ಪನಿತಕ್ಕೆ
ಸಿದ್ಧರಾಮನನೋಲಗಿಸುತಮಿರ್ಪನಿತಕ್ಕೆ
ಒಂದೆವಸವಲ್ಲಿ ಕಲ್ಲಯ್ಯಂಗಳಿಪ್ಪೆಡೆಗೆ
ಬಂದಳೊರ್ವಳ್ಭಕ್ತೆ ಹಂಸೆ ಸೋಲಲ್ಲನ್ನೆಡೆಗೆ
ಬಂದು ಕಲಿದೇವರ ಮನೆಯೊಳಾಗಳೆಡೆಗೆಯ್ಯೆ
ನಿಂದು ಶಿವಲಿಂಗಾರ್ಚನಂ ಮಾಡುತಾರಯ್ಯೆ
ಪಾಡುತಿರ್ದಳು ಪುರಾತನರ ಪೊಸಗೀತಮಂ
ಪಾಡುತಿರ್ದಳು ಶಿವನ ಭಕ್ತಿಪ್ರತಾಪಮಂ
ಪಾಡೆ ಕಲ್ಲಯ್ಯಂಗಳತಿ ಕೌತುಕಂಗೊಂಡು

ನೋಡೆ ಸೌಂದರ್ಯಮಂ ಚಿತ್ತದೊಳ್ಕೆಳೆಗೊಂಡು
ಈ ಗೀತವೀ ಪೂಜೆಯೀ ರೂಪಿನ್ನುನ್ನತಂ
ಈ ಗರುವತನವೀ ಹರೆಯವೀ ಸುಖಾನ್ವಿತಂ
ಈ ಕನ್ಯೆ ಮುಟ್ಟುವುಪಕರಣವೆಂದಪ್ಪೆನೊ
ಈ ಕಳಾವಿದೆ ಮಾಳ್ಪ ಪೂಜೆಯೆಂದಪ್ಪೆನೊ

ಎಂದು ಚಿಂತಿಸುತಮಿರಲಂದಿನಿರುಳಿರ್ವರುಂ
ಒಂದಾಗಿ ನೇಹದಿಂ ಕೂಡಿದಂ ಶಂಕರಂ
ಕೂಡೆ ಸಮಸುಖದಿಂದಮಿರ್ದು ಬೆಳಗಾಗುತಿರೆ
ಮಾಡಿ ನೇಮವನಲ್ಲಿ ಕಲ್ಲಯ್ಯನೊಪ್ಪುತಿರೆ
ನಡೆತಂದನಲ್ಲಿ ಘನಸಿದ್ಧನ ಸಮೀಪಕ್ಕೆ
ಎಡೆಗೊಂಡ ಸುಖವಿಕಾರಂ ಮೈಯ್ಯೊಳಂದುಕ್ಕೆ
ಅರಿಸಿನದ ಪರಿಮಳಂ ನಖರೇಖೆ ನಗೆಮೊಗಂ
ಬೆರಸಿ ಸೊಪ್ಪಾದಧರಮಂಡಲಂ ಸೋಜಿಗಂ
ತೋರುತ್ತಮಿರೆ ಸಿದ್ಧಪತಿ ನೋಡಿ ನಗುತಮಿರೆ
ನೀರತನಮಂ ನೋಡಿ ಮತ್ತೆ ನಸುನಗುತಮಿರೆ
ನಗಲೇಕೆ ದೇವ ನೀವೆಂದಂತೆ ತಪ್ಪುವುದೆ
ಅಗಣಿತಜ್ಞಾನಮಯ ನುಡಿದಂತೆ ತಪ್ಪುವುದೆ
ಎಂದಲ್ಲಿ ನಿರ್ಮಳಜ್ಞಾನಿಯಂ ಕೊಂಡಾಡಿ
ಸಂದ ಸಿದ್ಧನ ಮೇಲೆ ಗೀತಂಗಳಂ ಪಾಡಿ
ಶಿವಭಕ್ತೆಯೊಡಗೂಡಿ ಸಮಸುಖದೊಳಿಪ್ಪಲ್ಲಿ
ಶಿವಭಕ್ತೆಗಂದು ಗರ್ಭ ಮೂಡಿತಂತಲ್ಲಿ
ನವಮಾಸವಾಗೆ ಪಡೆದಳು ಮುಗ್ಧೆ ಬಾಲೆಯಂ
ಶಿವನ ಮೆಲ್ಲಡಿಗೆ ಸಲಿಸುವ ಕುಸುಮಮಾಲೆಯಂ
ಅಲ್ಲಿ ಪಡೆಯಲ್ಭಕ್ತರೆಲ್ಲರಂ ಮುಂದಿಟ್ಟು
ಕಲ್ಲಿನಾಥನ ಪೆಸರ ಕಲ್ಲವ್ವೆಯೆಂದಿಟ್ಟು
ನಾಮಕರಣಂ ಮಾಡಿ ಗುರುಕರುಣಮಂ ನೀಡಿ
ನೇಮಮಂ ಮಾಡಿಸುತ್ತಿರೆ ಕೃಪೆಯೊಳೊಡಗೂಡಿ
ಬೆಳೆವುತಿರ್ದಳ್ಭಕ್ತೆ ಕಲ್ಲವ್ವೆ ರಾಗದಿಂ
ದಳವೇರುತಿರ್ದನಾ ಕಲ್ಲಯ್ಯನೊಪ್ಪದಿಂ

ಇರೆ ಸಿದ್ಧರಾಮನಾ ಯುಗಧರ್ಮಮಂ ಕಂಡು
ವಿರಚಿಸಿದ ಗೊಪೆಯೊಳಗೆ ಪೊಗಲೆಂದು ಕೈಕೊಂಡು
ಕಡುನೇಹಿ ಕಲ್ಲಯ್ಯನಗಲಲಾರ್ಪವನಲ್ಲ

ಒಡನೆ ಬಂದಪೆನೆಂದಡೊಳಪೊಗುವಡಳವಲ್ಲ
ಎಂದಲ್ಲಿ ಚಿಂತಿಸುತ್ತೊಂದುಪಾಯವನರಿದು
ಮುಂದಿರ್ದ ಕಲ್ಲಯ್ಯನಂ ನೋಡಿ ಸುಖವಿಡಿದು
ಕಲ್ಲಯ್ಯ ಕುದುರೆ ಕೆಟ್ಟಿತು ನೋಡಿ ತನ್ನಿರೇ
ಕಲ್ಲಯ್ಯ ಇಲ್ಲಿರದೆ ಬೇಗದಿಂದರಸಿರೇ
ಎಂದಡಾ ಸಿದ್ಧರಾಮನ ಮಾಯೆಗೊಳಗಾಗಿ
ಬಂದನಿತ್ತಲ್ಕುದುರೆಯರಸುತಂ ಬೇಳಾಗಿ
ಕುದುರೆಯ ಕಂಡು ಮತ್ತತಿ ಬೇಗದಿಂ ತಿರುಗಿ
ಸದಮಲಂ ಬಂದನಾ ಗೊಪೆಗೆ ಮಿಗೆ ಭಯವೊದಗಿ
ಬರೆ ಗೊಪೆಯ ಮುಚ್ಚುಳಿಕ್ಕಿರ್ದುದಂ ನೆರೆ ಕಂಡು
ವರ ಸಿದ್ಧನಂ ಕಾಣದುರಿದು ಸಿಡಿಮಿಡಿಗೊಂಡು
ಸಿದ್ಧರಾಮಯ್ಯ ನಿನ್ನಂ ಕಾಣದಿರ್ಪೆನೆ
ಸಿದ್ಧರಾದಿತ್ಯನೇ ಕಾಣದಿರಲಾರ್ಪೆನೆ
ಎಲೆಲೆ ಸಾಕಾರದೊಳ್ ಭಕ್ತ ಸನ್ನಹಿತನೆ
ಎಲೆ ನಿರಾಕಾರದೊಳು ವ್ಯೋಮಕ್ಕತೀತನೆ
ತೋರಯ್ಯ ಸಿದ್ಧರಾಮಯ್ಯ ನಿನ್ನಯ ರೂಪ
ಆರೆನಿನ್ನಿರಲಾರೆನಳಿವೆನೆನ್ನಯ ರೂಪ

ಎನೆ ಗೊಪೆಯ ಬಾಗಿಲ್ಗೆ ಬಂದ ಸಿದ್ಧರದೇವ
ಅನವಧಿಗುಣಂ ನುಡಿದನಮಮ ಸಿದ್ಧರದೇವ
ಏನಯ್ಯ ಕಲ್ಲಯ್ಯ ಉಮ್ಮಳಂ ಬೇಡಯ್ಯ
ನಾನಗಲ್ದಿರ್ಪೆನೇ ತಾಪವಿನಿತೇಕಯ್ಯ
ಇನ್ನೊಂದು ತಿಂಗಳ್ಗೆ ಕರೆದಪ್ಪೆ ಕೇಳ್ನಿನ್ನ
ಇನ್ನಂಜಬೇಡೆಲೆಲೆ ಕಲ್ಲಯ್ಯ ನಂಬೆನ್ನ
ಎಂದು ಬೆಸಸಿದಡರಿದು ಸಂತಸಮನೊಳಕೊಂಡು
ಬಂದನಾನಂದದಿಂ ಶಿವಸುಖವನೊಳಕೊಂಡು
ಬಂದು ಮನೆಯಂ ಪೊಕ್ಕು ಕಲ್ಲವ್ವೆಯಂ ಕರೆದು
ಒಂದು ತಿಂಗಳ್ಗೆ ಕೈಲಾಸಕ್ಕೆ ಪಯಣವಿದು
ನಿರುತವೆಂದರಿಪಿ ಲಿಂಗಾರ್ಚನೆಗೆ ಕುಳ್ಳಿರ್ದು
ಭರದಿಂದಲುದಕಮಂ ಕೊಂಡುಬಾರಾ ಎಂದು
ಬೆಸಸೆ ಕಡುವೇಗದಿಂ ಬರುತಿರ್ದಳಾ ಭಕ್ತೆ
ಶಶಿಧರನ ಸದ್ಭಾವವಂ ಚಿತ್ತದೊಳಗೊತ್ತೆ
ಆ ವೇಳೆಯೊಳ್ ಸೋಮಯಾಜಿಗಳ್ ಬರುತಿರಲ್

ತೀವಿ ಬೀದಿಯೊಳು ಮದಗಜವೊಂದು ಬರುತಿರಲ್
ಭರದಿ ಸೋಮಾಜಿಗಳ್ ಸೋಂಕಲಾಭಕ್ತೆಯುಂ
ಹರ ಹರ ಮಹಾದೇವ ಪಾತಕವು ಮುಟ್ಟಿಯುಂ
ಉದಕಮಂ ತರಬಹುದೆ ಎನುತೆ ಹರವಿಯನೊಡೆದು
ಮುದವರಿತು ಊಳಿದಳ್ ಬ್ರಹ್ಮಶಿರಕರ ಎಂದು
ಕಂಡು ಸೋಮಾಜಿಗಳ್ ಭುಗಿಲೆಂಬ ಕೋಪದೊಳ್
ಮಂಡೆದೊನೆಯುತ್ತ ಪಾರ್ವರಿಗೆ ಪೇಳುತ್ತಿರಲ್
ಕೇಳುತ್ತೆ ಖತಿಗೊಂಡು ವಿಪ್ರರುಂ ಕೂಡುತಂ
ಭಾಳಲೋಚನನೆನಿಪ ಭಕ್ತನೆಡೆಗೈತಂದು
ಕಲ್ಲಯ್ಯಗಳಿರ ನಿಮ್ಮಯ ಸುತೆಯು ಕಡು ಧೂರ್ತೆ
ಬಲ್ಲಿದಂ ಸೋಮಯಾಜಿಗಳು ಸೋಂಕಲು ಮತ್ತೆ
ಹರವಿಯಂ ಹೊಡೆದೂಳಿದಳು [ನೋಡ] ಇಂತುಂಟೆ
ಧರೆಯೊಳಗೆ ಬ್ರಾಹ್ಮಣರ ಮುಟ್ಟೆ ಪೊಲ್ಲಮೆಯುಂಟೆ
ನೀವು ಸದ್ಭಕ್ತರತ್ಯಂತ ಸದ್ಭಾವಿಗಳು
ಈ ವನಿತೆಯತಿಧೂರ್ತೆಯಾದಳೀ ಜಗದೊಳು
ಅಂದು ಸರ್ಪಂ ಮುಟ್ಟಿ ಮಡಿಯೆ ಎಬ್ಬಿಸೆ ಪೋಯ್ತು
ಇಂದುವೀ ಕನ್ನಿಕೆಯ ಚರಿತದೊಳು ಪೊಸತಾಯ್ತು
ನೀವು ಪೇಳಿರೆ ಅಷ್ಟದಶವರ್ಣದೊಳು ಶ್ರೇಷ್ಠ
ಆವಗಂ ವೇದವಿತ್ತುಗಳ್ ತಾವುತ್ಕೃಷ್ಟ
ಇಂತಪ್ಪರಂ ಮುಟ್ಟಬಾರದೇ ನೀವೆನಲ್
ಎಂತು ನಿಮ್ಮಂ ನೋಡಿ ಸೈರಿಸುವೆವಾವೆನಲ್

ಎನಲು ಭುಗಿಲೆಂದು ಕಲ್ಲಯ್ಯನೆಂದು ಕೂಡೆ
ಮನದೊಳಗೆ ಕೋಪಾಗ್ನಿ ಮೂಡುತಿರೆ ತಾಂ ಕೂಡೆ
ನೋಡಬಹುದೇ ನುಡಿಸಬಹುದೇ ನಿಮ್ಮೊರ್ವರಂ
ರೂಢಿಯೊಳು ನುಡಿವ ಮಾತುಂಟೆಂತಿದೇ ಸ್ಥಿರಂ
ಶಿವನ ಭಕ್ತರ ಮನೆಯ ಶುನಕ ಮುಟ್ಟವು ನಿಮ್ಮ
ಭವಹರನ ಭಕ್ತರುಂ ಸೋಂಕಲಹುದೇ ನಿಮ್ಮ
ನೋಡಿ ಮುಳ್ಳಂ ತೆಗೆದು ದಸಿಯ ಬೆಟ್ಟಂತಾಯ್ತು
ಕೂಡಿರ್ದ ಭೂಸುರರು ಶುನಕನಿಂ ಕಡೆಯಾಯ್ತು
ಎನೆ ನಿಮ್ಮ ಶುನಕನುಂ ವೇದವಂ ಓದಿದಡೆ
ಮನವಾಸಿಯಿಲ್ಲ ಸಾರಮೆಯಿಂದೆ ನಾವು ಕಡೆ

ಎನಲುಘೆಯ ಕಾಳನ ಸಹೋದರನ ಜಾಯಿಲನು
ಮನವಾರೆ ಕರೆಯೆ ಬಂದುದು ಕೃಷ್ಣಶುನಕನು
ನೋಡಿ ಬಾರೆನಲು ಬಾಲವ ಮಿಡಿದು ನಡೆತರಲು
ರೂಢಿಗಪ್ರತಿಮ ಕಲಿದೇವರಿದಿರೊಳು ನಿಲಲು
ಸಚ್ಚರಿತ ಕಲ್ಲಿದೇವಂ ಮನದೊಳೆಚ್ಚುತಂ
ಅಚ್ಚರಿಯ ಜಾಯಿಲನ ನೋಡಿ ಕೊಂಡಾಡುತಂ
ಉಚ್ಚಲಿಂಗೋಚ್ಚಿಷ್ಟ ಭೋಗಿಯೇ ಉಚ್ಚರಿಸು
ಉಚ್ಚ ಓಂಕಾರಾಂಕ ಯೋಗಿಯೇ ಉಚ್ಚರಿಸು
ಆವ ವೇದದೊಳೊಂದು ಠಾವ ಪೇಳೆಂದೆನಲು
ಭಾವದೊಳು ವಿಪ್ರರು ಯಜುರ್ವೇದವೆನುತಿರಲು
ಹೃದಯಕಮಲದಲಿ ಶಿವಮೂರ್ತಿಯಂ ನೆಲೆಗೊಳಿಸಿ
ಮುದದಿಂದಲಾಕುಂಚನಂಗೈದು ನೆಲೆಗೊಳಿಸಿ
ಆದಿಶಕ್ತಿಯನಾಂತು ಮೆಟ್ಟಿ ಶಶಿರವಿಗಳಂ
ವೇದಿಸುತೆ ನಾಸಾಗ್ರದೊಳ್ ನಯದ ಶ್ರುತಿಗಳಂ
ಮಾಧುರ್ಯ ಮಧುರರಸವಾದ ಸುಸ್ವರಗಳಂ
ವೇದಾಂತದೊಳಗುಳ್ಳ ಅರ್ಥ ನಿಚಯಂಗಳಂ
ಲಕ್ಷಣೋಪೇತ ಸ್ಥಿರಪ್ರಚಯವೆಂಬಿವಂ
ಅಕ್ಷರತ್ರಯ ಬಿಂದುನಾದ ಕಳೆಯೆಂಬಿವಂ
ಸುರುಚಿರೋದಾತ್ತಾನುದಾತ್ತ ಪ್ರಚಯಗಳುಂ
ಬೆರಸಿ ಪದವರ್ಗ ಕ್ರಮಾದಿಯೊಳಗಾಗಳುಂ
ನಿರುತ ಜಾತುಃಶ್ರುತಿಗಳಿಂದೆ ವಿಸ್ತರಿಸುತಿರೆ
ಕರಮೆಸೆಯಲರಿದೆತ್ತಿ ಶುನಕನುಚ್ಚರಿಸುತಿರೆ

ಆಗಳಾ ಕಲಿದೇವನೆಲ್ಲನು ಹರುಷದಿಂದ
ರಾಗದಿಂ ಹೋ ಮಾಣು ವೇದಕಧಿಪತಿಯೆಂದ
ಎನಲಧ್ಯಯನವನಂದುಡುಗಿ ಮೇಲುಂ ನೋಡೆ
ಮನನೊಂದು ಭೂಸುರರ್ ಕಂಬನಿಯೊಳಳ್ಕಾಡೆ
ಕೇಳಿದಿರಿ ಈಗ ಕಂಡಿರೆ ವಿಪ್ರರೆಲ್ಲರುಂ
ಭಾಳಾಂಬಕನ ಭಕ್ತರಲಿಹ ಜಾಯಿಲಕೆ ಸರಿ
ಎನಲು ವಿಪ್ರರು ಸ್ತೋತ್ರವಂ ಮಾಡಿ ಮೈಯಿಕ್ಕಿ
ಅನಘ ಕಲ್ಲಯ್ಯನವರಂ ಕಳಿಪಿ ಮನವುಕ್ಕಿ
ನಿರತದಿಂದಿರ್ದು ಲಿಂಗಾರ್ಚನೆಗೆ ಕುಳ್ಳಿರ್ದು
ಅರರೆ ಶಿವನೇಕನಿಷ್ಠೆಯ ವ್ಯಸನಿ ಕುಳ್ಳಿರ್ದು
ಅತ್ತಿತ್ತ ಚಲಿಸದಚಲಂ ಪೂಜಿಸುತ್ತಿರ್ದ

ಉತ್ತಮ ಶಿವಾರಾಧಕಂ ಪೂಜಿಸುತ್ತಿರ್ದ
ಇರುಳೆನ್ನದಲ್ಲಿ ಪಗಲೆನ್ನದರ್ಚಿಸುತಿರ್ದ
ಉರವಣಿಸಿ ನಿತ್ಯಲಿಂಗಾರ್ಚನೆಗೆ ಸಂದಿರ್ದ
ಎಮ್ಮ ಹಾವಿನಹಾಳಕಲ್ಲಯ್ಯನೊಪ್ಪಿರ್ದ
ಅಮ್ಮಮ್ಮ ಕಲ್ಲಿನಾಥನ ಶರಣನೆಸೆದಿರ್ದ

  ಇಂತು ಶಿವಲಿಂಗಾರ್ಚನಾಭರದೊಳೊಪ್ಪುತಿರೆ
ಮುಂತೆ ಮೂವತ್ತನೆಯ ದಿನವಲ್ಲಿ ತೋರುತಿರೆ
ದಿನದೊಡನೆ ದಿವ್ಯದೇಹಂ ವಿಮಾನಂ ಬರಲು
ತನತನಗೆ ದೇವಗಣಸಂಕುಳಂ ಬರುತಿರಲು
ಕಂಡು ಕಲ್ಲಯ್ಯನುಬ್ಬುಬೆಂದು ಬೊಬ್ಬಿಡುತಲ್ಲಿ
ಖಂಡೇಂದುಮೌಲಿಯಣುಗರನೀಕ್ಷಿಸುತ್ತಲ್ಲಿ
ಕರೆವ ಪೂಮಳೆಯೊಳಗೆ ಕರೆವ ಕಹಳೆಗಳೊಳಗೆ
ಮೆರೆವ ಜಯರವದೊಳಗೆ ಕುಣಿವ ಗಣತತಿಯೊಳಗೆ
ದಿವ್ಯದೇಹಂಬೊಕ್ಕು ಪುಷ್ಪಕವನೇರುತಂ
ದಿವ್ಯಪಥದೊಳ್ನಡೆದು ಗಗನಕ್ಕೆ ಪಾರುತಂ
ಕೈಲಾಸಮಂ ಪೊಕ್ಕು ಗಣಪದವಿಯಂ ಪಡೆದು
ಶೈಲಜಾಪತಿಯ ಪದಕಮಲವಂ ಬಲ್ಪಿಡಿದು
ಇರುತಿರ್ದನೆಮ್ಮಹಾವಿನಹಾಳ ಕಲ್ಲಯ್ಯ
ಉರುತರ ಶಿವಾನಂದ ಸುಖಿಯಾಗಬಲ್ಲಯ್ಯ
ಇಂತು ಕಲ್ಲಯ್ಯನಂ ಗಣಪದವಿಯೊಳಗಿರಿಸಿ
ಸಂತತಂ ದೇವಗಣದೊಳಗಿರಿಸುತಾದರಿಸಿ
ಶರಣಕುಲಕಮಲಮಾರ್ತಾಂಡನಿಂತೊಪ್ಪಿದಂ
ಶರಣಕುಲ ಕುಮುದ ಪೂರ್ಣೇಂದುವಿಂತೊಪ್ಪಿದಂ
ಮಝರೇ ಮಹಾಗುರು ಮಹಾಮಹಿಮನೊಪ್ಪಿದಂ
ಮಝಭಾಪು ಹಂಪೆಯ ವಿರೂಪಾಕ್ಷನೊಪ್ಪಿದಂ

ಮನಮೊಸೆದೆನಗೀಗತ್ಯಂ
ತ ನವೀನಾಶ್ಚರ್ಯಭಕ್ತಿಯಂ ಕೃಪೆಯಿಂ ಹಾ ।
ವಿನಹಾಳೊಳ್ನೆರೆ ಕಲಿದೇ
ವನನುರ್ವಿಗೆ ಮೆರೆದ ಹಂಪೆಯ ವಿರೂಪಾಕ್ಷಂ ॥

❖❖

# ೧೭. ಕೋಳೂರು ಕೊಡಗೂಸಿನ ರಗಳೆ

ಕಾರುಣ್ಯಾಂಬುಧಿ ಮಹಿಮಾ
ಗಾರಂ ಬೋಳೆಯರ ಬಲ್ಲಹಂ ಭಕ್ತಿಸುಧಾ ।
ಕಾರಂ ಮಿಗೆ ಮೆರೆದಂ ಕೋ
ಳೂರೊಳ್ ಕೊಡಗೂಸನೆಮ್ಮ ಹಂಪೆಯ ರಾಯಂ ॥

ಉತ್ತರ ದಿಶಾಭಾಗದೊಳಗೊಂದು ಶಿವಪುರಂ
ಬಿತ್ತರಿಪ ಕೋಳೂರೆನಿಪ್ಪ ಪೆರ್ಮೆಯ ಪುರಂ
ಅಲ್ಲಿರ್ಪಳೊರ್ವ ಶಿವಭಕ್ತೆ ಶಂಕರಯುಕ್ತೆ
ಸಲ್ಲಲಿತ ಸತ್ಯಭಾಷಿಣಿ ಭೂಮಿಗತಿ ಶಕ್ತೆ
ತನಗೊರ್ವ ಮಗಳುಂಟು ಕೊಳೂರ ಕೊಡಗೂಸು
ಮನಸಿಜಾರಿಗೆ ಮುನಿದು ಮುದ್ದಿಸುವಳಾ ಕೂಸು
ಆಗಿರ್ಪ ಶಿವಭಕ್ತೆಗೊಂದು ನೇಮಂ ನೋಡ
ನಾಗಭೂಷಣನೊಲಿವ ಸುಖದ ನೇಮಂ ನೋಡ
ಸೋಮವಾರದ ನೇಮವಾ ಕಲ್ಲಿನಾಥಂಗೆ
ಸೋಮವಾರದೆ ಹಾಲೊಳಭಿಷೇಕವೀಶಂಗೆ
ಇರಲೊಂದು ಸೋಮವಾರದೊಳೆ ಹಾಲಂ ಕೊಂಡು
ಚರಿತದಿಂದಭಿಷೇಕಮಂ ಮಾಡಿ ಬರೆ ಕಂಡು
ಕೊಡಗೂಸು ಬೆಸಗೊಂಡಳೆಲ್ಲಿರ್ದೆಯೆಲೆ ತಾಯೆ
ಗಡಿಗೆವಾಲಂ ಕೊಂಡು ಹೋದಿರೆಲ್ಲಿಗೆ ತಾಯೆ
ಆರ್ಗೆ ಕೊಂಡೊಯ್ದೆ ನೊರೆವಾಲನಿಂತೆಲೆಯವ್ವ
ಆರ್ಗೆರೆದು ಬಂದೆ ಸವಿವಾಲನಿಂತೆಲೆಯವ್ವ
ಎನೆ ಮಗಳ ಮುದ್ದುಮಾತಂ ಕೇಳಿ ನಲಿವುತಂ

ನಿನಗೆ ಪೇಳ್ದಪೆನವ್ವ ಕೇಳೆಂದು ಪೇಳುತಂ
ಕಲ್ಲಿನಾಥಂಗೆ ಶರ್ವಂಗೆ ಸರ್ವೇಶಂಗೆ
ಸಲ್ಲೀಲೆಯಿಂ ಶಂಕರಂಗೆ ಗಿರಿಜೇಶಂಗೆ
ಹಾಲನೊಯ್ದೆರೆದು ಬಂದೆಂ ಮಗಳೆ ಕೇಳೆನಲು
ಬಾಲೆ ಬೆರಗಾಗಿರ್ದದಾರವ್ವದಾರೆನಲು
ದೇವನೆಂದಾರವ್ವದೆಂತಿರ್ಪನೆಂದೆನಲು
ದೇವನಂ ಪೇಳವ್ವ ತಾಯೆ ನೀಂ ಪೇಳೆನಲು
ಆರೆಂಬ ಸಂದೇಹಮಂ ನುಡಿವರೇ ಮಗಳೆ
ಮಾರಾರಿಯಂ ಶಿವನ[ನಾ] ತಂದೆಯಂ ಮಗಳೆ
ಅಯ್ದು ಮುಖ ಈರೈದು ಭುಜದ ಸರ್ವಜ್ಞನಂ
ಎಯ್ದೆ ಗಜಚರ್ಮಮಂ ಪೊದೆದಿರ್ದ ತಜ್ಞನಂ
ಪುಲಿದೊವಲನುಟ್ಟ ಪುಣ್ಯಪ್ರಕರ ಸೇವ್ಯನಂ
ನಲಿದು ಡಮರುಗ ತ್ರಿಶುಲವಿಡಿದಿರ್ದ ಭವ್ಯನಂ
ಹರಿಬೊಮ್ಮರಾದ್ಯಂತವರಿಯದಿಹ ಜ್ಯೋತಿಯಂ
ಶರಣರೊಡನೊಡನೆ ಬರುತಿರ್ಪ ವಿಖ್ಯಾತಿಯಂ
ಉಪಮನ್ಯುವಿಂಗೆ ಪಾಲ್ಗಡಲನಿತ್ತಭವನಂ
ತಪನಶತಕೋಟಿಗೆ ಘನಪ್ರಭಾವಿಭವನಂ
ಅರಿಯವ್ವ ಬೊಮ್ಮಾಂಡಮಂ ಹೆತ್ತ ತಂದೆಯಂ
ಅರಿಯವ್ವ ಮನ್ಮನೋರಥವೀವ ತಂದೆಯಂ

ಎಂದಲ್ಲಿ ಪೇಳ್ದ ಮಾತೆಯ ಮಾತು ಗುರುವಾಗಿ
ಇಂದುಧರಮೂರ್ತಿ ತನ್ನೊಳಗೆ ಹೊಸಕರುವಾಗಿ
ಎಡೆಗೊಂಡಳೆಡೆಗೊಂಡಳಭವನಂ ಕೊಡಗೂಸು
ನುಡಿಯನುಡುಗಿದಳಲ್ಲಿ ತಾಯೊಡನೆ ಕೊಡಗೂಸು
ಮನದ ಬಸುರೊಳಗೆ ಗರ್ಭಿಣಿಯಾದಳಾ ಕೂಸು
ನೆನಹಿನೊಳು ರತಿಯನೆಡೆಗೊಂಡಳಾ ಕೊಡಗೂಸು
ಶಂಭು ಮನದೊಳ್ಬೆಳೆಯೆ ಬಯಕೆ ಕಂಗಳೊಳೆಸೆಯೆ
ದಂಬಳಿದು ಮತ್ತೊಂದು ಬಗೆ ಸೊಗಯಿಸದೆ ಬೆಳೆಯೆ
ಆನೊಮ್ಮೆ ಹಾಲನೆರೆವುದನೆಂದು ಕಾಣ್ಬೆನೊ
ಆನೊಮ್ಮೆ ಶಿವನ ವದನವನೆಂದು ಕಾಬೆನೊ
ಎಂದು ತಾಯ್ ಹೋಹಾಗಳೊಮ್ಮೆಯುಂ ಕೇಳುತಿರೆ
ಕಂದ ನೀಂ ಬರಲಾರೆ ಬೇಡವ್ವಯೆನುತಮಿರೆ
ಮನೆಯೊಳಂಗಣದೊಳಗೆ ಶೂಲಿಯಂ ಪಾಡುತಂ

ಮನದೊಳ್ಮನೋಹರನನೊಲಿದು ಕೊಂಡಾಡುತಂ
ಒರಳಕ್ಕಿ ಮಿದಿವಲ್ಲಿ ಪರಮನಂ ಪಾಡುತಂ
ನೆರೆದ [ಕ]ಳ್ಳುಂಬಳ್ಳಿಯೊಳಗೆ ನಲಿದಾಡುತಂ
ಅಟ್ಟುಗೂಳೊಳ್ ಕಲ್ಲಿನಾಥನಂ ಪಾಡುತಂ
ಹೆಟ್ಟುಗೆಯರೊಳ್ ಕಲ್ಲಿನಾಥನಂ ಹೊಗಳುತಂ
ಬೆಳವುತಿರ್ದಳು ಹರನನೊಳಗಿರಿಸಿ ಕೊಡಗೂಸು
ತಳೆವುತಿರ್ದಳು ಶಿವನ ಭಾವಮಂ ಕೊಡಗೂಸು

ಇರುತಮಿರೆ ಹತ್ತು ಸಂವತ್ಸರಂ ತನಗಾಗೆ
ಹರನ ಕರುಣಂ ತನ್ನ ದೆಸೆಗೆ ಹತ್ತಿರೆಯಾಗೆ
ಒಂದು ದೆವಸಂ ಮಾತೆ ಮಾಣಿಕಂಗಂಡಿರ್ದು
ಇಂದುಧರನಭಿಷೇಕದತ್ತ ಚಿಂತಿಸುತಿರ್ದು
ಹಾಲನಭಿಷೇಕಕ್ಕೆ ಕೊಂಡೊಯ್ವರಿಲ್ಲೆಂದು
ಬಾಲೆಯಂ ಬೋಳೈಸಿ ಕೇಳಿ ನೋಡುವೆನೆಂದು
ಮಗಳೆ ಏನವ್ವ ನಲವಿಂ ಕಲ್ಲಿನಾಥಂಗೆ
ಬಗೆಗಗೋಚರವೆನಿಪ ಲೋಕೈಕನಾಥಂಗೆ
ನೀಲಕಂಠಂಗೆ ನಿತ್ಯಂಗೆ ನಿರ್ಮಾಯಂಗೆ
ಹಾಲನೆರೆ ಹೋಗವ್ವ ಸದ್ಗುಣನಿಕಾಯಂಗೆ
ಎನೆ ಜೀವವಿಮ್ಮಡಿಸಿದಂತಲ್ಲಿ ಪುಳಕಿಸುತೆ
ಮನಸಿಜಾರಿಯನಲ್ಲಿ ಕಂಡಂತೆ ಕಾಮಿಸುತೆ
ನಿಂದೆಡೆಯೊಳುಂ ನಿಲ್ಲದಲ್ಲಿ ಸಂಭ್ರಮಿಸುತ್ತೆ
ಸಂದಣಿಪ ಹರುಷದಿಂ ಹೆಚ್ಚಿ ಸಡಗರಿಸುತ್ತೆ
ಇಂದೆಮ್ಮ ದೇವಂಗೆ ನಾ ಹಾಲನರೆದಪೆಂ
ಇಂದೆಮ್ಮ ತಂದೆಯಲ್ಲಿಗೆ ನಲಿದು ಪೋದಪೆಂ
ನಿಮಗುಂಟೆ ಇಂತಪ್ಪ ಸಂತೋಷವೆಂದೆನುತೆ
ನಿಮಗೆಲ್ಲ ಇಂತಪ್ಪ ದೇವನುಂಟೇ ಎನುತೆ
ನೆರೆಮನೆಯ ಮಕ್ಕಳೊಳಗಕ್ಕರಿಂ ನುಡಿವುತಂ
ಹರಿತಂದು ಮನೆಯೊಳಂಗಣದೊಳಂ ನಲಿವುತಂ
ಅರಿಸಿನವನರೆವುತಂ ಮೈದೊಳೆದು ಪೆಚ್ಚುತಂ
ಹರುಷದಿಂದಂ ದಣಿಂಬವನುಟ್ಟು ಮೆಚ್ಚುತಂ
ಅಂಜನವನೆಚ್ಚುತಂ ಬೈತಲೆಯನಳವಡಿಸಿ
ರಂಜಿಸುವ ಭಾಳದೊಳು ಭಸಿತಮಂ ಕೆಳೆಗೊಳಿಸಿ
ಹೊಸ ಹೂವಿನೋಲೆಯಂ ತಿರುಹಿ ತಿರುಹಿಕ್ಕುತಂ

ಎಸೆವ ತಾಯಂ ನೋಡಿ ಸಂತಸದೊಳುಕ್ಕುತಂ
ಮೇಲುದಂ ಕಳೆ ಕಳೆದು ಮತ್ತೊಮ್ಮೆ ಹೊದೆವುತಂ
ಹಾಲಗಡಿಗೆಯ ಮೇಲೆ ಬಟ್ಟಲಂ ಮುಚ್ಚುತಂ
ಮನದೊಳಗೆ ಶಿವಮೂರ್ತಿ ಕೈಯ್ಯೊಳಗೆ ಹಾಲೊಪ್ಪೆ
ತನುವಿನೊಳು ಹರಭಕ್ತಿ ಕರಣದೊಳು ಹರನೊಪ್ಪೆ
ಮಗಳ ಸಂಭ್ರಮಕಲ್ಲಿ ತಾಯಿ ಬೆರಗಾಗುತಿರೆ
ಮಗಳೆ ಹದುಳಂ ಹದುಳ ಹೋಗೆಂದು ಕಳುಹುತಿರೆ

ಕೈಲಾಸಪುರಕಿದೆ ಪರಸ್ಥಾನವೆಂಬಂತೆ
ಶೈಲಜಾಪತಿಯೆಡೆಗೆ ಪಯಣಮಂ ಮಾಳ್ಪಂತೆ
ಪೊರಮಟ್ಟಳಲ್ಲಿ ಕೊಡಗೂಸು ಹಾಲಂ ಕೊಂಡು
ಪಿರಮಟ್ಟಳಭವನಾಕೃತಿಯನೊಲಿದೊಳಕೊಂಡು
ನಡೆತಂದಳಡಿಗಡಿಗೆ ಜನನಪದವರೆಯಾಗೆ
ಮೃಡನರೂಪಂ ಕಾಣ್ಬ ತವಕವಿರ್ಮಡಿಯಾಗೆ
ಬಂದು ಶಿವನಿಳಯಮಂ ಪೊಕ್ಕಳಾ ಕೊಡಗೂಸು
ನಿಂದಳಾ ರಂಗಮಂಟಪದೊಳಗೆ ಕೊಡಗೂಸು
ತನ್ನ ಭಾವಂ ಬಲಿದು ಶಿವಮೂರ್ತಿ ಲಿಂಗದೊಳು
ಮುನ್ನವೇ ತೋರುತ್ತಮಿರ್ದುದಾ ಲಿಂಗದೊಳು
ಬೀಜದೊಳಗಂಕುರಂ ಹೊಳೆ ಹೊಳೆದು ತೋರ್ಪಂತೆ
ತೇಜದೊಳಗಣ ಮೂರ್ತಿ ಥಳಥಳಿಸಿ ಹೊಳೆವಂತೆ
ಇರೆ ಕಂಡು ಪುಳಕಿಸುತೆ ಹರನ ಹತ್ತಿರೆ ಬಂದು
ಹರುಷದಿಂದಂ ಶರ್ವನೆಡದ ದೆಸೆಯೊಳು ನಿಂದು
ಗಡಿಗೆವಾಲಂ ತನ್ನ ಕೈಯ ಬಟ್ಟಲೊಳೆರೆದು
ಪಿಡಿದು ನಿಂದಿರ್ದು ಶಿವನಂ ನೋಡಿ ಸುಖವಿಡಿದು
ಎನ್ನ ರನ್ನವೆ ಎನ್ನ ಹೊನ್ನೆ ಹಾಲ್ಗುಡಿಯಯ್ಯ
ಎನ್ನ ಪರಿಸವೆ ಎನ್ನ ಚೆನ್ನೆ ಹಾಲ್ಗುಡಿಯಯ್ಯ
ಎನ್ನರಸ ನೊರೆವಾಲನೊಲ್ಮೆಯಿಂ ಸವಿಯಯ್ಯ
ಎನ್ನ ಸುಖನಿಧಿಯೆ ನೀನೆನ್ನಾಣೆ ಸವಿಯಯ್ಯ
ಎಮ್ಮವ್ವೆ ಕಳುಹಿದಳದೇಕುಸುರದಿರ್ದಪ್ಪೆ
ಎಮ್ಮಯ್ಯ ದಮ್ಮಯ್ಯ ಸುಮ್ಮನೇಕಿರ್ದಪ್ಪೆ
ನೊರೆಯಾರಿ ಬಿಸಿಗುಂದಿ ಸವಿಗೆಡುವುದೆಲೆಯಯ್ಯ
ನೊರೆವೆರಸಿ ಸವಿವಾಲನಾರೋಗಿಸೆಲೆಯಯ್ಯ
ಏಕುಸುರದಿರ್ದಪ್ಪೆ ಎಲೆ ತಂದೆ ಪೇಳೆನಲು

ಲೋಕೈಕ ಬಂಧು ಹಾ ಹಾಲ್ಗುಡಿವುದೆಂದೆನಲು
ಹಾಲ ಹವಣಲ್ಲವೀ ನುಡಿಯ ಸವಿ ಪಿರಿದೆಂದು
ಬಾಲೆಯ ಸ್ನೇಹವಚನವನೆ ಸವಿವುತ್ತಂದು
ಇರೆ ನೊಂದು ಕಂದಿದಳ್ಕುಂದಿದಳ್ ಕೊಡಗೂಸು
ಕೊರಗಿದಳ್ಕೊಡಿದಳ್ ಬಾಡಿದಳ್ ಕೊಡಗೂಸು
ಭೀತಿ ಕಾಲೂರಿ ದುಃಖಂ ತೀವಿ ಗದುಗದಿಸಿ
ಮಾತು ಹಿಮ್ಮೆಟ್ಟಿ ಹಿಂದುಳಿದು ತೊದಳಂಕುರಿಸಿ
ನಾಲಗೆಯ ಮೇಲೆ ದೈನ್ಯಾಕ್ಷರಂಗಳು ಹೊರಳೆ
ಮಾಲೆಗೊಂಡಕ್ಷಿಯೊಳ್ ಜಲಬಿಂದುಗಳ್ತೆರಳೆ
ಬಿಕ್ಕುತಂ ಗಂಟಲೊಳ್ ಬಿಗಿದ ಸೆರೆ ಬೀಗುತಿರೆ
ಅಕ್ಕೆಯೊಳು ನೇಹದಕ್ಕರವೊಡೆದು ಸುರಿವುತಿರೆ
ಹಾಲ್ಗುಡಿಯದಿರ್ದಡೆಮ್ಮವ್ವೆ ಬಡಿದಪಳಯ್ಯ
ಹಾಲ್ಗುಡಿಯದಿರೆ ಮನೆಗೆ ಹೋಗಲಂಜುವೆನಯ್ಯ
ಹಾಲನೆರೆಯದೆ ತಾಯನೆಂತು ನೋಡುವೆನಯ್ಯ
ಹಾಲನೆಂತಾದಡಂ ಕುಡಿಯಯ್ಯ ಕುಡಿಯಯ್ಯ
ಅಯ್ಯೋ ಮಹಾದೇವ ಹಾಲ್ಗುಡಿಯದಿರ್ಪರೆ
ಅಯ್ಯೋ ಕರುಣಿ ಕರುಣವಿಲ್ಲದಂತಿರ್ಪರೆ

ಎಂದತ್ತು ನಿಂದತ್ತು ನೆನೆದತ್ತು ಮುನಿದತ್ತು
ಸಂದಣಿಪ ನೇಹದಿಂದತ್ತತ್ತು ಮತ್ತತ್ತು
ಅಳುತಿರ್ಪ ಮುಗ್ಧೆಯಂ ಕಂಡು ಕರುಣಾಕರಂ
ಬೆಳೆವ ಕರುಣದ ವಶಕೆ ಸಂದು ಸರ್ವೇಶ್ವರಂ
ಸತ್ಯದಕ್ಕೆಗೆ ಶಿವನ ಚಿತ್ತವಾಗಳೆ ಮರುಗಿ
ನಿತ್ಯನಿನ್ನಿರಬಾರದೆಂದು ಕೃಪೆಯೊಳಗೆರಗಿ
ಭಕ್ತಿವೆರಸಿದ ಸುಧೆಯನಲ್ಲಿ ಸವಿನೋಳ್ಪಂತೆ
ಯುಕ್ತಿ ಹೊದ್ದದ ನೇಹಮಂ ಸವಿದು ನೋಳ್ಪಂತೆ
ಆಹ ಶಿವನಲ್ಲಿ ಕೂಸಿನ ಕೈಯ ಬಟ್ಟಲಂ
ಶ್ರೀಹಸ್ತದಿಂ ಕಳೆದುಕೊಂಡನತಿ ನಿಶ್ಚಲಂ
ಹಾಲೊಳಗೆ ಭಕ್ತಿಸರ್ಕರೆಯ ಸವಿಯಂ ಕುಡಲು
ಹಾಲನಾರೋಗಿಸಿದನಿಳೆ ಕೌತುಕಂಬಡಲು
ಆಗಳೆರಗಿದವಲ್ಲಿ ಹೂಮಳೆಗಳೊಪ್ಪದಿಂ
ರಾಗದಿಂ ದುಂದುಭಿಧ್ವಾನಂಗಳೊಪ್ಪದಿಂ
ಪುಟ್ಟುತಿರೆ ಬಂದುದು ಸುವರ್ಣಪುಷ್ಪಕವಲ್ಲಿ

ನೆಟ್ಟನೆ ಗಣೇಶವಿಲಸಿತವಾಗೆ ನಭದಲ್ಲಿ
ಬಂದ ಪುಷ್ಪಕದೊಳಗೆ ಕೊಡಗೂಸನೊಲಿದಿರಿಸಿ
ಇಂದುಧರನಾನಂದದಿಂ ನಭಕ್ಕವತರಿಸಿ
ಕೋಳೂರ ಜನವೆಲ್ಲ ನೋಡಿ ಬೆರಗಾಗುತಿರೆ
ಆಳೆದ್ದು ಶಿವಭಕ್ತರೆಲ್ಲ ಗುಡಿಗಟ್ಟುತಿರೆ

ನಡೆತಂದು ಕೈಲಾಸಮಂ ಹರುಷದಿಂ ಪೊಕ್ಕು
ಮೃಡನೊಲಿದು ಸಿಂಹಾಸನಮನೇರುತಂ ಮಿಕ್ಕು
ನೋಡು ನಂದೀಶ ಕೊಡಗೂಸಿರ್ಪ ಮಹಿಮೆಯಂ
ನೋಡು ಪಾರ್ವತಿ ಹಲನೆರೆದ ನಿಸ್ಸೀಮೆಯಂ
ಹಾಲ್ಗುಡಿದೆನಿಂದು ಕೊಡಗೂಸಿಂಗೆ ಶಿಶುವಾಗಿ
ಹಾಲ್ಗುಡಿಸಿದೆಂ ಭಕ್ತಿಯತ್ತಲೊಲವರವಾಗಿ
ಎಂದಲ್ಲಿ ಪೇಳುತಂ ಗಣಕುಲಕೆ ತೋರುತಂ
ತಂದ ಬಟ್ಟಲನಲ್ಲಿ ಪಾರ್ವತಿಗೆ ತೋರುತಂ
ಹಾಲನಾರೈಸುವಡೆ ನಮಗಿದೇ ಸಾಲ್ಗೆಂದು
ನೀಲಕಂಠಂ ಕುಬೇರಂಗೆ ಬೆಸಸುತಲಂದು
ಭಂಡಾರದೊಳಯಿಂಕೆ ತೆಗೆಯಿ ಬಟ್ಟಲನೆನುತೆ
ಕೊಂಡಾಡಿ ಕೊಡಗೂಸನೊಪ್ಪದಿಂ ಪಾಲಿಸುತೆ
ರುದ್ರ ಕನ್ನಿಕೆಯರೊಳಗಿರ್ಪಿರವನೊಲಿದಿತ್ತು
ರುದ್ರನಾನಂದದಿಂ ಸಕಲಸುಖಮಂ ಪೊತ್ತು
ಭಕ್ತರಿಚ್ಛೆಯನೀವ ಶಾಂತಮಯನೊಪ್ಪಿದಂ
ಭಕ್ತರೆಂದುದನೀವ ಘನ ಕರುಣಿಯೊಪ್ಪಿದಂ
ಆದಿ ಮಧ್ಯಾಂತರಹಿತಂ ಶಂಭುವೊಪ್ಪಿದಂ
ನಾದಪ್ರಿಯಂ ಭಕ್ತಿಸುಲಭನಿಂತೊಪ್ಪಿದಂ
ವ್ಯೋಮಕೇಶಂ ಸರ್ವನಾಮನಿಂತೊಪ್ಪಿದಂ
ಕಾಮಾರಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಮೃಡನಭಮಂ ಕೋಳೂರೊಳ್
ಕೊಡಗೂಸಂ ಮೆರೆದ ಶಂಭು ಸದ್ಭಕ್ತಿಯನಿಂ ।
ತೆಡೆವರಿಯದೆಮಗೆ ಕುಡು ನೀಂ
ಕಡೆಗಣಿಸದೆ ದೇವ ಹಂಪೆಯ ವಿರೂಪಾಕ್ಷ ॥

❖❖

# ೧೮. ನಿಂಬಿಯಕ್ಕನ ರಗಳೆ

ತ್ರ್ಯಂಬಕನೊಲ್ದಖಿಳ ಸುಖಾ
ಡಂಬರಮುಖನೊಸೆದು ಮುದದೆ ಕೈಲಾಸವ ತಾ ।
ನಿಂಬಿಂ ಸೂರೆಯನಿತ್ತಂ
ನಿಂಬವ್ವೆಗೆ ದೇವ ಹಂಪೆಯ ವಿರೂಪಾಕ್ಷಂ ॥

ಹರನ ಕೈಲಾಸದಂತಃಪುರ ನಿವಾಸದೊಳ್
ಗಿರಿಜೇಶ ಸಿಂಹಾಸನದೊಳಿರ್ಪ ಸಮಯದೊಳ್
ಮಧುರಮುಖಿಯೆಂದೆಂಬ ರುದ್ರಕನ್ನಿಕೆಯಲ್ಲಿ
ವಿಧುಕಾಂತಭೂಮಿಯಂ ಬೋಹರಿಸುತಿಪ್ಪಲ್ಲಿ
ಓಲಗಕೆ ಬರುತಮಿರೆ ಕಲ್ಪಕುಜೆಯೆಂಬ ಸತಿ
ಮೇಲೆ ಧೂಳೇಳೆ ಕೋಪಿಸಿ ನುಡಿದಳಲ್ಪಮತಿ
ತೊತ್ತೆ ಸಸಿನುಡುಗೆಂದು ಕಲ್ಪಕುಜೆ ನುಡಿವುತಿರೆ
ಚಿತ್ತದೊಳ್ಬಾಡುತಂ ಮಧುರಮುಖಿ ನೋವುತಿರೆ
ಕೇಳ್ದಳಾ ಕಠಿಣೋಕ್ತಿಯಂ ಪಾರ್ವತೀದೇವಿ
ತಾಳ್ದಳಾ ಕಲ್ಪಕುಜೆಗತಿ ಕೋಪಮಂ ದೇವಿ
ಎನ್ನ ಬಂಟರ್ ಹರಿ ಬ್ರಹ್ಮರೇನಲ್ಲರೆ
ಎನ್ನ ತೊತ್ತಿರ್ ಲಕ್ಷ್ಮಿಸರಸ್ವತಿಯರಲ್ಲರೆ
ತೊತ್ತೆಂದು ನುಡಿದುದಕೆ ಮರ್ತ್ಯದೊಳಗುದ್ಭವಿಸಿ
ತೊತ್ತಾಗಿ ನುಡಿದುದಕೆ ಮರ್ತ್ಯದೊಳಗುದ್ಭವಿಸಿ
ತೊತ್ತಾಗಿ ಬಾಳ್ದು ಬಳಿಕೈತಪ್ಪುದನುಭವಿಸಿ
ನೀಚವೆನಿಸಿದ ನಿಂಬಿನಾಮದಿಂದಂ ಸಂದು
ಭೂಚರರ ನಿಳಯದೊಳು ತೊತ್ತಾಗಿ ಬಾ ಎಂದು

ಎಂದಿತ್ತ ದೇವಿಯರ ಶಾಪಮಂ ಕೈಕೊಂಡು
ಬಂದು ವಸುಧಾತಳದ ಜನನವಂ ಕೆಳೆಗೊಂಡು
ಉತ್ತರದಿಶಾಭಾಗದೊಳಗೊಂದು ಶಿವಪುರಂ
ಉತ್ತಮ ಶಿವಾಚಾರವೆಂದೆನಿಪ ಶಿವಪುರಂ
ಶಿವಭಕ್ತನರಸಿಯುದರದೊಳು ಪೊಕ್ಕಳ್ ಬಂದು
ಶಿವಭಕ್ತಿಗಾನಂದರಸದ ಗರ್ಭಂ ನಿಂದು
ನಡೆಗಳುಂ ನುಡಿಗಳುಂ ಮೆಲ್ಪಿನಲಿ ಸಾರ್ದಿರಲು
ಮುಡಿ ನಡು ಜಘನ ಭರಕೆ ತೊಡೆ ಬಳುಂಕುತ್ತಿರಲು
ಕುಂತಳಂ ಕುಚಚೂಚಕಂ ಕಪ್ಪನಾಶ್ರಯಿಸೆ
ಸಂತತಂ ತೋಳ್ತೊಡೆ ನಯಂಗಳಂ ಮೇಳೈಸೆ
ನೇತ್ರಂ ಗುಳಿವುತಿರಲ್ ಮುಖಮಂಡಲಂ ಬೆಳಗೆ
ಗಾತ್ರಂ ಸಡಿಲುತಿರಲ್ ನವಮಾಸವನುವಾಗೆ
ಪುಟ್ಟಿದುದೆ ಸುಮುಹೂರ್ತವಾಗಿ ಪುಟ್ಟಿದಳಲ್ಲಿ
ಮೆಟ್ಟಿದಳ್ ಸಂಸಾರಸಂಗಜನನವನಲ್ಲಿ
ಶಿವಭಕ್ತನೊಲಿದಲ್ಲಿ ಜಾತಕರ್ಮಂ ಮಾಡಿ
ಪವಣಿಲ್ಲದುತ್ಸಾಹಮಂ ಚಿತ್ತದೊಳ್ಕೂಡಿ
ನಿಂಬವ್ವೆಯೆಂದೆಂಬ ನಾಮಕರಣಂ ಮಾಡಿ
ಇಂಬಿನಿಂ ಶಿವಭಕ್ತಿ ಸಂಪದದೊಳೊಡಗೂಡಿ
ಲಿಂಗಪ್ರಸಾದಮಂ ನಿರುತದಿಂ ತಂದಿಕ್ಕಿ
ಹಿಂಗದಾನಂದದಿಂ ಸ್ನೇಹರಸದೊಳಗುಕ್ಕಿ

ಇರೆ ಬೆಳೆದಳಲ್ಲಿ ನವಲತೆಯಂತೆ ನಳನಳಿಸಿ
ಚರಿತದಿಂದಿಂದುಕಳೆ ಬೆಳೆವಂತೆ ಥಳಥಳಿಸಿ
ತಂದೆ ಮಾಡುವ ಪರಮ ಭಕ್ತಿಯಂ ನೋಡುತಂ
ಇಂದುಧರನಂಘ್ರಿಯೊಳ್ ನೇಹಮಂ ಮಾಡುತಂ
ಗಣಕುಲದ ಪಾದರಜದೊಳ್ಬೆರಸಿ ಬೆಳೆವುತಂ
ಗಣಪರ್ವಮಂ ನೋಡಿ ಹರುಷಮಂ ತಳೆವುತಂ
ಬೆಳೆಯೆ ಬೆಳೆದುದು ದರಿದ್ರಂ ಮಾನಿನಿಯ ಕೂಡೆ
ತಳೆದು ಮುನ್ನಿನ ಶಾಪಮಂ ಸೂಚನೆಯ ಕೂಡೆ
ನಂಟರುಂ ನಲ್ಲರುಂ ಬಂಟರುಂ ನೋಡುತಿರೆ
ಉಂಟಾದ ಬಂಧುಗಳ್ ಭಕ್ತರುಂ ನೋಡುತಿರೆ
ಜನನಿಯುಂ ಭ್ರಾತರುಂ ದೇವಲೋಕಕ್ಕೈದೆ
ಜನಕನುಂ ತಾನುಮಿರ್ಬರುರುವುಳಿವುತಿಂತೈದೆ

ಹುಟ್ಟಿದೂರೊಳ್ ತಿರಿವುದಭಿಮಾನವಲ್ಲೆಂದು
ಬಟ್ಟೆಗೊಂಡರು ಜನಕನುಂ ಮಗಳು ಸುಯಿದಂದು
ಬಂದು ಬೇರೊಂದು ಪಟ್ಟಣವನೊಲವಿಂ ಪೊಕ್ಕು
ಬಂದ ಬಡತನದಳಲಿನಿಂದೈದೆ ಮನಮಿಕ್ಕು
ಮಗಳನೊಂದೆಡೆಯೊಳಿರಿಸುತ್ತೆ ತಾಂ ತಿರಿತಂದು
ಮಗಳುಂ ಪಿತಂ ಜೀವಿಸುತ್ತಮಿರುತಿರಲಂದು
ರೋಗದ ಭಯಂ ಬಂದು ಸಾರಿತ್ತು ಜನಕಂಗೆ
ರಾಗವಳಿದನುಗೆಡುತ್ತಿರೆ ಮುತ್ತಿತಾತಂಗೆ
ತಿರಿಯಲರಿಯಳ್ ಮುಗುದೆ ನಿಂಬವ್ವೆ ತಾನಲ್ಲಿ
ಪಿರಿದು ತಿರಿವಡೆ ರೋಗವಡಿಸಿತ್ತು ಪಿತನಲ್ಲಿ
ಇಬ್ಬರಿಗೆ ಒಂದೆರಡು ಉಪವಾಸವಾಗುತಿರೆ
ಒಬ್ಬರುಂ ತಮ್ಮ ಮುಖಮಂ ನೋಳ್ಪರಿಲ್ಲದಿರೆ
ಮಗಳೆ ನಿಂಬವ್ವೆ ನೀಂ ತೊತ್ತಾಗಿಯಾದಡಂ
ಮಗಳೆ ಎನ್ನಂ ಕಾಯಿಯೇನಾಗಿಯಾದಡಂ
ಬದುಕಿದ ಬಳಿಕ್ಕೆ ಬಿಡಿಸುವೆ ನೀನು ಪೋಗೆನಲು
ಹೆದರಿದಳು ಮರುಗಿದಳು ನಿಂಬವ್ವೆ ಭೋಂಕೆನಲು
ಬಂದೊರ್ವ ಭವಿಯೆನಿಪ ವಿಪ್ರಂಗೆ ತೊತ್ತಾಗಿ
ತಂದೆಯಂ ತಂದವರ ಕೀಳಿಲೊಳು ಸೈತಾಗಿ
ಮರೆಮಾಡಿ ಪಟ್ಟಿರಿಸಿ ಪಥ್ಯಮಂ ತೋರುತಂ
ಮರೆಯದಾ ಮನೆಯ ಕೆಲಸಂಗಳ ಮಾಡುತಂ
ತೊಂಡು ಮಿಕ್ಕುದು ಮುಖರಸಂ ಜವ್ವನಂ ಮಸಗೆ
ದುಂಡಿಸಲ್ತೊಡಗಿದವು ಕಂಗಳೆರಡುಂ ದೆಸೆಗೆ
ಉಬ್ಬಿ ಕೊಬ್ಬಿದವು ಪೇರುರದೊಳಗೆ ಘನಕುಚಂ
ಕೊಬ್ಬಿ ಕೋರೈಸಿ ನಯವೇರಿ ಬೆಳೆದವು ಕುಚಂ
ವೃತ್ತತೆಯನೊಳಕೊಂಡು ಪೊರವಾದ ಮೆರೆವುತಿರೆ
ತೊತ್ತುತನದೊಡನೆ ನವಯೌವನಂ ಹೇರುತಿರೆ

ಪೊರಮಟ್ಟಳಲ್ಲಿ ನಿಂಬವ್ವೆ ನೀರ್ ತರಲೆಂದು
ಮೆರೆವ ಕುಂಬರಗುಂಡನಿತ್ತ ಹರವಿಯನಂದು
ಹೊತ್ತು ನಿತ್ತರಿಸುವಂತೆತ್ತಿದಳು ಹರವಿಯಂ
ಉತ್ತಮ ಶಿವಾಚಾರೆ ಕೈಕೊಂಡು ವೃತ್ತಿಯಂ
ನಡೆಯಿಸಲ್ಕತ್ತ ಪುರದೊಳಗಂ ಬರುತ್ತಮಿರೆ
ಮೃಡಭಕ್ತರೆಲ್ಲರುಂ ನೆರೆದು ತಿಂಥಿಣಿಸುತಿರೆ

ಗಣಪರ್ವವಂ ಮಾಡೆ ತನ್ನ ಹಿಂದಂ ನೆನೆದು
ಗಣಿಕೆಯುಮ್ಮಳಿಸಿದಳ್ ಕಣ್ಣನೀರಂ ತಳೆದು
ಭಕ್ತರ್ಗೆ ಮಗಳಾಗಿ ಭವಿಗಳಿಗೆ ತೊತ್ತಾಗಿ
ಭಕ್ತರ್ಗೆ ಬೆಸಕೈಯಲಿಲ್ಲವೀ ತೆರನಾಗಿ
ಇಪ್ಪಂತೆ ಮಾಡಿದಾ ಶಿವನೆ ಎನ್ನಂ ನೋಡಿ
ಬಪ್ಪ ಕಣ್ಣೀರಿಂದೆ ಶೋಕದೊಳಗಕ್ಕಾಡಿ
ತಂದೆ ಮಗಳಂ ನೋಡಿ ಶಿವನ ನೆನೆಯೆಂದೆನಲು
ಅಂದು ಶಿವನರ್ಚನೆಗೆ ಚಿತ್ತಮಂ ಸೇರಿಸಲು
ಎಂದೆನುತೆ ನಡೆತಂದು ಕೆರೆಯ ತಡಿಗಂ ಬಂದು
ನಿಂದು ಹರವಿಯನಿಳುಪಿ ಕಾಲ್ಮೊಗಂದೊಳೆದಂದು
ಹೂಪತ್ರೆಯಂ ಕುಯ್ದು ಬಂದು ಶಿವನಿಳಯದೊಳ್
ತಾಪತ್ರಯವನಿಳುಹಲೆಂದು ಸುಖನಿಳಯದೊಳ್
ನಿಂದು ಭಸಿತಮನಾಗಮಸ್ಥಾನದೊಳಗಿಟ್ಟು
ಇಂದುಧರನಂ ನೋಡಿ ಭಕ್ತಿಯಂ ಮುಂದಿಟ್ಟು
ದರುಶನ ಸ್ಪರುಶನಂಗಳನಕ್ಕರಿಂ ಮಾಡಿ
ಕರುಣಾಕರಂಗೆ ಬಿನ್ನೈಸಿದಳ್ ನೆರೆ ಕೂಡಿ
ದೇವ ಭಕ್ತರ್ಗೆ ಮಾಡುವಡೆನಗೆಯನುವಿಲ್ಲ
ದೇವ ಬೆಸಕೈವಡೆಗರ್ಥವೆಳ್ಳನಿತಿಲ್ಲ
ಎಂತಕ್ಕೆ ದೊರೆಕೊಂಡಿತೀ ಯವ್ವನಂ ತಂದೆ
ಕಂತುವಂ ಹೊದ್ದಿಸದೆ ಸುಖದೊಳಿರಿಸೈ ತಂದೆ
ಇಂದುಮೊದಲಾಗಿಯೆನ್ನಯ ಕಾಯಮಂ ದೇವ
ಬಂದ ಜಂಗಮಕೊಪ್ಪುಗುಡುವೆನಿಂತೆಲೆ ದೇವ
ಇದು ಸತ್ಯವೆಂದೆನುತೆ ನೇಮಮಂ ಕೈಕೊಂಡು
ಮದನಮರ್ದನಗೆ ಮನಮುಟ್ಟಿ ಸುಖಮಂ ಕೊಂಡು
ಸೋಂಕನೊಮ್ಮೊಮ್ಮೆ ಆಲಿಂಗನವನೊಮ್ಮೊಮ್ಮೆ
ಮುಂಕೊಳಿಸಿ ನೆರೆ ನೆಗೆವ ಪುಳಕಂಗಳೊಮ್ಮೊಮ್ಮೆ
ಶಶಿಧರಂಗರ್ಪಿಸುತೆ ಶಂಕರಂಗರ್ಪಿಸುತೆ
ಪಶುಪತಿಯ ಶರಣರ್ಗೆ ವಶವಾಗಿ ಸೇರುತ್ತೆ
ಶಿವನ ಭಕ್ತರ ಸೋಂಕ ನಾನಿಂತು ಪಡದೆನೆ
ಶಿವಭಕ್ತರನುಭವದ ಸುಖಪಾತ್ರೆಯಾದೆನೆ
ಎಂದೆಂದು ಹೆಚ್ಚುತಂ ನಚ್ಚುತಂ ಮೆಚ್ಚುತಂ
ಸಂದಣಿಪ ಪುಳಕಂಗಳಿಂದುಕ್ಕಿ ಮೆಚ್ಚುತಂ
ಬೇಟವಾ ಜಂಗಮಕೆ ಸುಖಪೂಜೆ ಲಿಂಗಕ್ಕೆ

ಮಾಟವಾ ಜಂಗಮಕೆ ಸುಖಪೂಜೆ ಲಿಂಗಕ್ಕೆ
ಆಗುತಿರೆ ಪಲಕೆಲವು ವತ್ಸರಂ ನಡೆವುತಿರೆ
ನಾಗಭೂಷಣಗೊಲುಮೆ ನಲುಮೆಯಂ ಬೀರುತಿರೆ
ನಿಂಬವ್ವೆ ಗಣಭಾಜನಂ ಜಗದೊಳತಿ ಕರಂ
ಎಂಬ ನುಡಿ ಲೋಕಪ್ರಸಿದ್ಧಮಾಗಿರೆ ಕರಂ

ಒಂದು ದೇವಸಂ ಸೋಮವಾರದೊಳು ನಡೆತಂದು
ಇಂದುಧರನಂ ಪೂಜಿಸುತ್ತಿರಲು ಮನದಂದು
ಕಾಮಹರನಂ ನೋಡಿ ಮೈಯಿಕ್ಕಿ ಬೀಳ್ಕೊಂಡು
ಕಾಮಿ ನಿಷ್ಕಾಮಿ ನಿಂಬವ್ವೆ ಹರುಷಂಗೊಂಡು
ನೀರ ಕೊಡನಂ ಹೊತ್ತು ಹೊಸ ಹರಯಮಂ ಹೊತ್ತು
ಮಾರಾರಿ ಕರುಣಿಸಿದ ಸುಖದ ನೇಮಂಬೆತ್ತು
ಬರುತಿರಲ್ಕೊಬ್ಬ ಜಂಗಮವೆಳಸಿ ನೋಡಲ್ಕೆ
ಕರಗಿ ನಿಂಬವ್ವೆಯಂ ಮನಸೋತು ನೋಡಲ್ಕೆ
ಒಡನೊಡನೆ ಬಂದನಾ ಶಿವಭಕ್ತನರ್ಥಿಯಿಂ
ತಡೆಯದಾ ಸೂಚಿಸಿದ ಗೇಹಕ್ಕೆ ನಲ್ಮೆಯಿಂ
ಬರುತಮಿರಲವರನಲ್ಲಿರಿಸಿ ಮನೆಯಂ ಪೊಕ್ಕು
ಚರಿತದಿಂ ಕೊಡನನಿರಿಸುತ್ತಂ ಮನಂ ಮಿಕ್ಕು
ಬಯಸುವಲ್ಲಿಂ ಮುನ್ನ ಬಂದು ಮುಂದಂ ನಿಲಲು
ಭಯಭಕ್ತಿಯಿಂದವರ ಚಿತ್ತದಿಚ್ಛೆಗೆ ಸಲಲು
ತೆಗೆವುದಕೆ ಮುನ್ನ ತೆಗೆದಂತಾಗೆ ಹೆಚ್ಚುತಂ
ಬಗೆವುದಕೆ ಮುನ್ನ ಬಗೆದಂತಾಗೆ ಕೊರ್ಬುತಂ
ಮೈಯೆಲ್ಲ ಮುಖವಾಗಿ ಬಯಸಿ ಮುಖವಾಗುತಂ
ಮೈಯೆಲ್ಲ ಕೈಯಾಗಲಿಚ್ಛಯಿಸಲಾಗುತಂ
ಮೆಯ್ ಬಳಲ್ದಾಸೆ ಬಳಲದಡೆ ಎಚ್ಚರಿವುತಂ
ಸುಯ್ ಬಳಲ್ದರ್ತಿ ಬಳಲದಡೆ ಪೂರಯಿಸುತಂ
ನೋಡುತಂ ನೆನೆವುದಕೆ ಮುನ್ನ ಮುನ್ನೀವುತಂ
ಕೂಡುವಾಸೆಯನರಿದು ಬೆರೆಸಿ ಕಳೆದೋರುತಂ
ಶಂಕರಾ ಶಂಕರಾ ಶಶಿಧರಾ ಶಶಿಧರಾ
ಭೋಂಕನೀಗಳೆ ಕರುಣಿಸೆನಗೆ ಗಿರಿಜಾವರಾ
ಎಂದೆನುತೆ ಜಂಗಮವ ತಣಿಸುವಳು ಮನಗೊಂಡು
ಸಂದ ಭಕ್ತಿಯ ನಿಷ್ಠೆಯಾಚಾರ ಕೆಳೆಗೊಂಡು
ಚೆನ್ನುಳ್ಳ ಚದುರಿಗರು ಬಂದಡೊಂದೇ ತೆರಂ

ಹೊನ್ನ ಮೈಯಾಗಿ ಬಂದವರೊಳೊಂದೇ ತರಂ
ನಡೆಯದರು ನಡೆವವರು ಬಂದಡೊಂದೇ ತೆರಂ
ನುಡಿಯದರು ನುಡಿವವರು ಬಂದಡೊಂದೇ ತೆರಂ
ಮನದಲ್ಲಿ ಕಲೆಯಿಲ್ಲದ್ಯೆತಂದು ಕೂಡುವಳು
ನೆನಹಿನಲಿ ನೆಲಸಿ ತಣಿವನ್ನೆಗಂ ಮಾಡುವಳು
ಇಂತು ಜಂಗಮದಿಚ್ಛೆಯಲಿ ನಿಂಬಿ ಸಲುತಮಿರೆ
ಅಂತು ತನ್ನೊಡೆಯನಾಲಯದಲ್ಲಿ ಕೆಲಸಮಿರೆ
ಹರವಿ ನೀರಂ ತಂದು ಮನೆಯೊಳಗೆ ತೀವುತಿರೆ
ಇರದೆ ಮೀಸಲ ತಂಡುಲಂಗಳಂ ಚಳಿಸುತಿರೆ
ಅನುರಾಗವಲ್ಲಿ ನೆರೆ ವೈರಾಗ್ಯವಾಗುತಿರೆ
ಮನಸಿಜಹರಂಗಲ್ಲಿಯುತ್ಸಾಹವೇರುತಿರೆ

ಇರೆ ತಂದೆ ನೆಗೆದನಾ ದೇವಲೋಕಕ್ಕಾಗಿ
ತರುಣಿ ನಿಂಬವ್ವೆ ಮರುಗುತ್ತಲ್ಲಿ ಮರನಾಗಿ
ಎಂತಕ್ಕೆ ಎಚ್ಚತ್ತು ತಂದೆಯಂ ಸಂಸ್ಕರಿಸಿ
ಕಂತು ಮದಮರ್ದನನ ಮೇಲೆ ಚಿಂತೆಯನಿರಿಸಿ
ಶಿವಭಕ್ತ ನಿಳಯದೊಳು ಗಣಪರ್ವಮಂ ಮಾಡಿ
ಶಿವಭಕ್ತೆ ನಿಂಬವ್ವೆಯಿರ್ದಳೊಪ್ಪಂಗೂಡಿ
ತೊತ್ತಾಗಿ ಕೆಲಸಂಗಳಂ ನೋಡಿ ಮಾಡುತಿರೆ
ಒತ್ತರಿಸಿ ಜವ್ವನಂ ತನುವಿನೊಳ್ ಮೂಡುತಿರೆ
ನಿಂದು ಕೆರೆಯಲ್ಲಿ ಕಾಲಂ ತೊಳೆವುತಂ ಬಂದು
ಚಂದ್ರಧರನಂ ಚಿತ್ತದೊಳಗೆ ಸ್ಮರಿಯಿಸುತಂದು
ಭಸಿತಮಂ ತೀವಿಟ್ಟು ಶಿವನ ಹತ್ತಿರೆ ಬಂದು
ವಿಷಮಲೋಚನ ಕರುಣಿ ಶರಣಾಗೆನುತ್ತಂದು
ಸ್ಪುರುಶನಕೆ ಬರಲೆಂದು ಶಿವಲಿಂಗದತ್ತಲ್ಲಿ
ಸ್ಪುರುಶನವ ಮಾಡುತ್ತೆ ನಿಂಬವ್ವೆಯಿರಲಲ್ಲಿ
ಘನತರಂ ಕಾಮದಂಡಲೆಯ ಕ್ರೀಡಿತನಲ್ಲಿ
ಅನುಭವಿಸಲೊರ್ವ ಭಕ್ತಂ ಪರಿದುಬಂದಲ್ಲಿ
ಬಾಹುಬಳೆ ಹಸ್ತಕಟಕಂ ಕಂಠಮಾಲೆಯಿಂ
ಆಹ ಶಿವನಲ್ಲಿಗೆಯ್ತಂದು ಸಲ್ಲೀಲೆಯಿಂ
ನೇಮಮಂ ಮಾಳ್ಪನ್ನೆಗಂ ನಿಲುವುದರಿದೆನಲು
ನೇಮಸಂಪನ್ನೆ ಎನ್ನಿಚ್ಛೆಯಂ ಸಲಿಸೆನಲು
ಮುನ್ನವೀ ನೇಮಮಂ ಮಾಳ್ಪನೆನುತಂ ತಿರುಗಿ

ಉನ್ನತಗುಣಾಭರಣೆ ಭಕ್ತನತ್ತಲ್ ತಿರುಗಿ
ಶಿವಲಿಂಗಪೀಠವೇ ತಲೆಗೆ ತಲೆಗಿಂಬಾಗಿ
ಶಿವಭಕ್ತನಚಲಸುಖಮಂ ತೊಡಗಲನುವಾಗಿ
ದೇವಿ ಪಾರ್ವತಿ ಕಂಡಿದೇನೆಂಬ ಕಷ್ಟವಿದು
ದೇವ ನೀವುಸುರದಿರ್ದಪಿರೆನಗೆ ತಿಳಿಯದಿದು
ಪುರುಷರಿಗೆ ನೀತಿಯೇ ಸ್ತ್ರೀಯರಿಗೆ ಲಕ್ಷಣವೆ
ಪರಮ ನೀನಿಂತು ನೋಡುತ್ತಿರ್ಪುದಿದು ಗುಣವೆ
ಎನೆ ದೇವ ಗಿರಿಜೆಯರ ಬಿನ್ನಪಮುಮಂ ಕೇಳ್ದು
ಮನದೊಳಗೆ ಲಜ್ಜಾರಸದ ಭಾವಮಂ ತಳೆದು
ಶಿವಲಿಂಗದೊಳಗಣಿಂದೊಂದು ಮುಖಮಂ ತೋರಿ
ಶಿವಭಕ್ತನಲ್ಲಿ ಹೆಡ್ಡೈಸುತ್ತೆಯಿರೆ ಮೀರಿ
ಏನೆಲಗೆ ನಿಂಬಿ ನಿನಗಿಂತಿದೇ ಠಾವೆನಲು
ಆನಿದ್ದೆಡೆಯೊಳಿಂತು ಮಾಳ್ಪುದುಚಿತವೆಯೆನಲು
ದೇವಾ ಜಗದ್ಭರಿತ ನೀನಿಲ್ಲದೆಡೆಯುಂಟೆ
ದೇವ ಈ ಸುಖವ ಕೈಕೊಂಬವರ್ಪೆರರುಂಟೆ
ಎಂದ ಮಾತಿಂಗುತ್ತರಂಗಾಣದೀಶ್ವರಂ
ಸಂದಣಿಸಿ ಮೆಚ್ಚಿದೆಂ ಬೇಡಿಕೊಳ್ಳೆನೆ ಕರಂ
ತಿರುಗಿದಳ್ ಕೈಮುಗಿದು ನಿಂದಿರ್ದಳಂತಲ್ಲಿ
ನೆರೆದ ಪುಳಕಂ ಪುಂಜವಾಗಿ ನಿಲುತಂತತಲ್ಲಿ
ನೋಡುವರ ಚೆಲುವಿಂಗೆ ಕೂಡುವರ ಸುಖವಿಂಗೆ
ಆಡುವರ ನಲವಿಂಗೆ ಬೇಡುವರ ಸುರತರುಗೆ
ಹೊಗಳುವರ ಪುಣ್ಯಕ್ಕೆ ಸೋಂಕುವರ ಮೈಸಿರಿಗೆ
ಬಗೆವವರ ಭಾಗ್ಯಕ್ಕೆ ಅಗಲದವರಚ್ಚರಿಗೆ
ನೆನೆವರ ನಿಧಾನಕ್ಕೆ ಮುನಿಗಳ ಧ್ಯಾನಕ್ಕೆ
ಘನತರಜ್ಞಾನಕ್ಕೆ ಮುಕ್ತಿ ಸಂಧಾನಕ್ಕೆ
ಬಿನ್ನೈಸಿದಳ್ ಭಕ್ತೆ ನಿಂಬವ್ವೆಯಂತಲ್ಲಿ
ಪನ್ನಗಾಭರಣಂಗೆ ಭಕ್ತಿಯಿಂದೊಲಿದಲ್ಲಿ
ಈ ಸೋಮವಾರ ಮೊದಲಾಗಿ ನೀಂ ಕರುಣದಿಂ
ಆ ಸೋಮವಾರಂಬರಂ ದೇವ ಹರುಷದಿಂ
ಏಳುಂ ದಿನಂ ಲೋಕವರಿಯೆ ದೇವರ ದೇವ
ಕೈಳಾಸಮಂ ಸೂರೆಗೊಡುವುದೆನಗೆಲೆ ದೇವ
ಎನಲಿತ್ತೆ ಮೂರುಸೂಳಂ ನಂಬು ನಿಂಬವ್ವೆ
ನಿನಗಲ್ಲದಾರ್ಗೀವೆಯಿಂದುಮುಖಿ ಎನ್ನವ್ವೆ

ಕೊಟ್ಟೆನೆಲೆ ಭಕ್ತೆ ಸತ್ಯಂ ಕೊಟ್ಟೆನೆಂದೆನಲು
ಅಟ್ಟಾಸುರಂ ಲೋಕದೊಳಗೆ ಸಾರೆಂದೆನಲು
ಹಿಗ್ಗಿದಳ್ ಹೊಂಗಿದಳ್ ಹಿಂಗಿದಳ್ ಭವದಿಂದೆ
ಒಗ್ಗಿದಳ್ ಶಿವಪುರಕೆ ಮುಖವಾದಳೊಲವಿಂದೆ
ಸಾರೆಂದು ಕಳುಹಿದಳು ಶಿವಭಕ್ತನಿಕರಕ್ಕೆ
ಸೂರೆಯಂ ಬೀರೆಂದು ಪೇಳುತಿಪ್ಪನಿತಕ್ಕೆ
ನಿಂಬಿಯಪವರ್ಗಮಂ ಸೂರೆಗೊಂಡಳ್ ನೋಡ
ನಿಂಬವ್ವೆ ಮುಕುತಿಯಂ ಮಾರುಗೊಂಡಳ್ ನೋಡ
ಬನ್ನಿಮೆಂದಲ್ಲಲ್ಲಿ ಭಕ್ತೆ ಸಾರುತ್ತಮಿರೆ
ಪನ್ನಗಾಭರಣನೊಲಿದೊಲುಮೆಯಂ ಬೀರುತಿರೆ
ನಡೆತಂದರಲ್ಲಲ್ಲಿ ಭಕ್ತರೊಲಿದರ್ತಿಯಿಂ
ನಡೆತಂದರದಿದೆನ್ನದೆಲ್ಲ ಜನರೊಲುಮೆಯಿಂ
ಅನುನಯದೊಳೀಶಭಕ್ತಿಯನಲ್ಲಿ ಕೊಂಡಾಡೆ
ತನತನಗೆ ನಿಂಬವ್ವೆಯಂ ಹರಸುತಿರೆ ಕೂಡೆ
ನೋಡಿ ನಿಂಬವ್ವೆ ಮನದಲ್ಲಿ ಮಿಗೆ ಮೆಚ್ಚುತಂ
ಬೇಡಿ ಶಿವಭಕ್ತಿಯೊಳ್ ಬೆಳೆದು ಬಿನ್ನೈಸುತಂ
ದೇವ ಕೈಲಾಸಪುರಕೊಯ್ಯಬೇಕೆಂದೆನಲು
ದೇವ ಕರುಣಿಪುದು ಕರುಣಿಗಳ ಬಲ್ಲಹ ಎನಲು
ಸುರಿದವು ಸುವರ್ಣವೃಷ್ಟಿಗಳಲ್ಲಿ ಪುರದೊಳಗೆ
ಮೊರೆಯೆ ದುಂದುಭಿರವಂ ಆಕಾಶಪುರದೊಳಗೆ
ನೆಗೆದವಾ ಪುರ ಈಶ್ವರ ಪ್ರೇರಣೆಗಳಿಂದೆ
ಬಗೆಗೆ ಹೊಸತೆನಲಮರರಾ ನಾಕಪಥದಿಂದೆ

ಬಂದು ಕೈಲಾಸಮಂ ಹರುಷದಿಂದಂ ಹೊಕ್ಕು
ನಿಂದ ನಿಂಬಿಯನಗಜೆಗೊಲಿದು ತೋರಿಸಿ ಮಿಕ್ಕು
ನೋಡು ನಂದೀಶ ನಿಂಬವ್ವೆಯತಿಭಕ್ತಿಯಂ
ನೋಡು ಎನ್ನವರೊಳೊಂದಿದ ತೆರನ ಭಕ್ತಿಯಂ
ಕಾಮದಿಂ ನಿಷ್ಕಾಮಿಯಾದರೇನಿಂತುಂಟೆ
ಪ್ರೇಮದಿಂ ನಿಷ್ಠೇಮಿಯಾದರೇನಿಂತುಂಟೆ
ಲಜ್ಜೆನಾಚಿಕೆಯೆಂಬಿವಂ ತೊರೆದರಿಂತುಂಟೆ
ಸಜ್ಜನವನೆನ್ನ ಭಕ್ತರ್ಗೆ ಮಾಡಿದರುಂಟೆ
ಶೈಳಜೆಯ ಶಾಪಮಂ ಕಳೆದರುಂಟೇ ನಂಬಿ

ಇಳೆಯರಿಯಲೆನ್ನವರ್ಗೆ ಸಂದರುಂಟೇ ನಂಬಿ
ಎಂದು ಕೊಂಡಾಡುತುಂ ಗಣಕುಲಕೆ ತೋರುತಂ
ಸಂದ ಸುರಸತಿಯರ್ಗೆ ತೋರಿ ಮಿಗೆ ಮೆಚ್ಚುತಂ
ಮುನ್ನಿನಂದದೆ ಕಲ್ಪಕುಜೆಯೆಂಬ ಪೆಸರಿತ್ತು
ಮನ್ನಿಸುತೆ ರುದ್ರಕನ್ನಿಕೆಯರೊಳಗಿರವಿತ್ತು
ಬಂದ ಭೂಜನತತಿಗೆ ರುದ್ರಲೋಕಂಗೊಟ್ಟು
ಇಂದುಧರನೆಲ್ಲರ್ಗೆ ಕರುಣಮಂ ಮುಂದಿಟ್ಟು
ಗುರುವೊಪ್ಪಿದಂ ಪರಾಪರ ರೂಪನೊಪ್ಪಿದಂ
ಸಿರಿಯೊಪ್ಪಿದಂ ಸುಧಾಕಿರಣಧರನೊಪ್ಪಿದಂ
ಭವನೊಪ್ಪಿದಂ ಭರ್ಗ ಭೀಮನಿಂತೊಪ್ಪಿದಂ
ಶಿವನೊಪ್ಪಿದಂ ಸದಾಶಿವ ಕರುಣಿಯೊಪ್ಪಿದಂ
ಅಮ್ಮಮ್ಮ ಶರಣಜನ ಸುರಧೇನುವೊಪ್ಪಿದಂ
ಎಮ್ಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ತ್ರ್ಯಂಬಕನಂಬಥಕೇಶಂ
ನಿಂಬವ್ವೆಯ ಪುತ್ರನೆಂದುವೆನಗಾದರದಿಂ ।
ದಿಂಬಿನ ಭಕ್ತಿಯನೊಲವಿಂ
ಶಂಭುವೆ ಕರುಣಿಪುದು ಹಂಪೆಯ ವಿರೂಪಾಕ್ಷಾ ॥

❖❖

# ೧೯. ಅಮ್ಮವ್ವೆಯ ರಗಳೆ

ಶ್ರೀ ಗಿರಿಜೆಯರಸ ಕರುಣೋ
ದ್ಯೋಗದಿ ಶಿಶುವಾಗಿ ಮೆರೆ[ದ]ನಮ್ಮೆಯ ಮುಗ್ಧಾ ।
ಭೋಗಕೆ ಕಾರುಣ್ಯಾಮೃತ
ಯೋಗ್ಯಕ್ಕಂ ಮೆಚ್ಚಿ ಹಂಪೆಯ ವಿರೂಪಾಕ್ಷಂ ॥

ಶ್ರೀ ವಿರೂಪಾಕ್ಷನಿಹ ಪುರಕೆಯುತ್ತರದಲ್ಲಿ
ಭೂವರರುಮೆಸೆವ ಬಿಜ್ಜಾವರದಿ ಶಿವನಲ್ಲಿ
ಒಪ್ಪಿಹಂ ಪರಮೇಶ ನಾಗಭೂಷಣನಂದು
ಸರ್ಪಭೂಷಣನಾಗಲೆಲ್ಲರಿಗೆ ಕೃಪೆನಿಂದು

ಆ ಪುರದಿ ಶಂಕರನೆನಿಪ್ಪ ವಿಪ್ರನುಮಿರ್ಪ
ಕಾಪಾಲಿಗತ್ಯಂತ ಹರುಷಮಯನೆಂದಿರ್ಪ
ಆತಂಗೆಯರಸಿ ಸಕಲೈಶ್ವರ್ಯ ಸಂಪನ್ನೆ
ನೂತನದ ರತಿಯೆನಿಸಿ ಮೆರೆವ ಗುಣಸಂಪನ್ನೆ
ಭಾಗೀರಥೀ ಎಂಬ ಪೆಸರಿಂದಲೆಸೆದಿಹಳು
ನಾಗಭೂಷಣನನಾವಾಗ ಭಜಿಸುತ್ತಿಹಳು
ಉಮ್ಮಹದೊಳೊಬ್ಬ ಮಗಳಾಗೆ ಮುದ್ದಾಡುವೆಂ
ನಮ್ಮಮ್ಮೆ ನಮ್ಮವ್ವೆಯೆಂದು ಕೊಂಡಾಡುವೆಂ

ಎಂದು ನೆನವುತ್ತಿರಲು ದೇವಿಯಾಗಳು ಮೆಚ್ಚಿ
ತಂದಿರಿಸಿದಳು ತನ್ನ ಭಕ್ತಿಯ ಗುಣಕೆ ಮೆಚ್ಚಿ
ಅವಳುದರದೊಳು ಬಂದು ಪೊಕ್ಕಳಂತಮ್ಮವ್ವೆ
ಶಿವನ ಸದ್ಭಕ್ತಿಯೇ ಕರುವಾದ ನಮ್ಮವ್ವೆ

ಹರನ ಕರುಣೋದಯದಲವರ ಬಸಿರೊಳು ಬಂದು
ದುರಿತಾಂತಕನ ಕರುಣರಸವದನೆ ಲೇಸೆಂದು

ಉದಯವಾದಳು ಕಾಮಧೇನುವಿನ ಶಿಶುವಂತೆ
ಸುಧೆಯ ವಾರಾಶಿಯಲಿ ಉದಯಿಸಿದ ಶಶಿಯಂತೆ
ಕಂಡುರುತ್ಸವದಿಂದೆ ತಂದೆ ತಾಯ್ನಂಟರುಂ
ತಂಡತಂಡದಲಿ ಹರುಷಂಗೊಂಡರಿಷ್ಟರುಂ
ನಮ್ಮಕ್ಕ ನಮ್ಮಮ್ಮ ನಮ್ಮಜ್ಜಿಯೆಂದವರು
ನಮ್ಮಕ್ಕ ನಮ್ಮವ್ವ ನಮ್ಮಮ್ಮೆಯೆಂದವರು
ಅಮ್ಮವ್ವೆ ಎಂದೆಂಬ ಪೆಸರದೇ ಲೇಸೆಂದು
ಅಮ್ಮಮ್ಮ ಜಗವರಿಯೆ ಮೆರೆವುತಿರೆ ಸಲೆ ಸಂದು
ಬಳೆವುತಿರ್ದಳು ಶಿವೆಯ ಕರುಣರಸ ಬಳೆವಂತೆ
ತೊಳಗುತಿರ್ದಳು ಶಿವೆಯ ಸಕಲಗುಣ ಬಳೆವಂತೆ
ಬಳೆವುತುಂ ಶಿವಕಥನ ತಳೆವುತುಂ ಹರಕಥನ
ಕೆಳೆಗೊಂಡ ನುಡಿಯೆಲ್ಲವುಂ ಪುರಹರನ ಕಥನ
ಏಗಳುಂ ಪುರಹರನ ಸ್ಮರಹರನ ವರ ಕಥನ
ಬೀಗಿ ಬೆಳೆದೊಲೆದಾಡುತುಂ ಪುರಹರನ ಕಥನ
ಸುವ್ವಾಲೆಯೊಳಗೆ ತಾಂ ಶೂಲಿಯಂ ಪಾಡುತಂ
ದೇವಾಲಯಕ್ಕೆಯ್ದಿ ದೇವನಂ ಕಾಣುತುಂ
ಓವಿ ಕೊಂಡಾಡುತುಂ ದೇವನಂ ಪಾಡುತುಂ
ದೇವ ಮಗನಾಗಬೇಕೆಂಬಂತೆ ನೋಡುತುಂ
ಇಂತಿರಲು ಕನ್ನಿಕಾ ಪ್ರಾಯವಧಿ ತೋರುತಿರೆ
ಸಂತೋಷದಿಂದೆ ತಾಯ್‌ತಂದೆಗಳು ಕಾಣುತಿರೆ
ಶಂಕರಂ ಭಾಗೀರಥಿಯು ನೋಡಿ ನಲಿವುತಿರೆ
ಶಂಕಿಸುತೆ ಕೂಸುಮಂ ನೋಡಿ ತೂಪಿರಿವುತಿರೆ
ಕರೆಸಿ ಕೊಟ್ಟರು ಸೋದರಳಿಯಂಗೆಯಾಗಳುಂ
ವರನಲ್ಲಿ ಸ್ಥಿರನಲ್ಲವೆಂದರಿಯದಾಗಳುಂ

ಈ ಪರಿಯಲುಂ ಕೆಲವು ದಿವಸಂ ಸಲುತಮಿರಲು
ಆ ಪುರಕ್ಕಮ್ಮವ್ವೆಯೆಂಬ ನಾಮಂ ಮಿಗಲು
ಶಂಕರಮ್ಮವ್ವೆಗಂ ಮಗನಾಗಬೇಕಾಗಿ
ಶಂಕರಸದೆಯವಳ ವರನಂ ಕರೆದ ತನಗಾಗಿ

ಆಗಳಮ್ಮವ್ವೆಗಾ ವೈಧವ್ಯವಾಗಿರಲು
ನಾಗಭೂಷಣನು ಶಿಶುವಪ್ಪೆನೆಂದೊಲಿದಿರಲು
ಅಲ್ಲಿ ತಾನೇಕಾಂತೆಯಾಗಿರಲ್ಕಮ್ಮವ್ವೆ
ಸಲ್ಲೀಲೆಯಿಂದೆ ಶಂಕರಧ್ಯಾನಿಯಮ್ಮವ್ವೆ
ಕದಿರಕಾಯಕದಿಂದೆ ಮುಂಜಿಯಂ ಮಾಡುವಳು
ಮದನವೈರಿಯ ಮನದ ಭಾವದೊಳ್ ಕೂಡುವಳು
ದೇವನಂ, ನಂಬಿದರ ಕಾವನಂ ಪಾಡುವಳು
ಜೀವನಂ ಭಕ್ತಿರಸ ಭಾವನಂ ಪಾಡುವಳು
ಪಂಪಾಧಿನಾಥನಂ ಪರಶಿವನ ಪಾಡುವಳು
ಹಂಪೆಯ ವಿರೂಪಾಕ್ಷಲಿಂಗನಂ ಪಾಡುವಳು
ಹರನ ರೂಪೆಂದು ಶರಣರುಗಳಂ ಕಾಣುವಳು
ಪರಮನಿರವೆಂದವರ ಚರಣಕ್ಕೆ ಬೀಳುವಳು
ತನ್ನಿಂದ ತಾನುರ್ಬಿ ಶರ್ವನಂ ಪಾಡುತಿರೆ
ತನ್ನ ಮನೆಗೊರ್ವ ದೇಶಾಂತ್ರಿ ಜಂಗಮವು ಬರೆ
ತನ್ನ ಮನಮೂರ್ತಿ ಶರಣನದೊರ್ವ ಮನೆಗೆ ಬರೆ
ಕಣ್ಣಿಲ್ಲದಂಧಂಗೆ ಕಣ್‌ಬಂದ ತೆರದೊಳಿರೆ

ಕಯ್ಯ ಕದಿರಂ ಹಂಜಿಯಂ ಬಿಸುಟು ಶರಣೆಂದು
ಆಯ್ಯ ಒಳಯಿಂಕೆ ಬಿಜಯಂಗೆಯ್ಯೆನುತಲಿಂದು
ಗದ್ದುಗೆಯನಿಕ್ಕಿ ಮೂರುತಿಗೊಳಿಸಿ ಸತ್ಕರಿಸಿ
ಶುದ್ಧಶೈವಾಚಾರಗಳನು ತಾನಳವಡಿಸಿ
ಮುದ್ದುಮಾತಿಂದಮೃತ ವಚನಗಳ ಬಿತ್ತರಿಸಿ
ಸಿದ್ಧಿಗಧಿಪತಿಯ ಕೇಳಿದಳಲ್ಲಿ ಬಿತ್ತರಿಸಿ
ಆವ ಕಡೆಯಿಂದ ಬಿಜಯಂಗೆಯ್ದಿರಯ್ಯಗಳೆ
ನೀವು ಬರಲಾಂ ಧನ್ಯನಾದೆನೆಮ್ಮಯ್ಯಗಳೆ
ಎಂದ ವಾಕ್ಯಗಳಿಗಾಯಯ್ಯಗಳು ಪರಿಣಮಿಸಿ
ಎಂದ ಮುಗ್ಧೆಯ ಹದನನರಿದವಳಿಗೆಚ್ಚರಿಸಿ
ಪೇಳಿದನು ನಾವು ದೇಶಾಂತ್ರಿಗಳು ಕಾಣವ್ವ
ಭಾಳಲೋಚನನ ಭಕ್ತರು ನಾವು ಕಾಣವ್ವ
ರುದ್ರಲೋಕದ ರುದ್ರನವತಾರ ನಾವಮ್ಮ
ರುದ್ರನೀ ಪರಿಯಲಿಹನಾಗಿ ಕೇಳೆಮ್ಮಮ್ಮ
ಆತನೆಂತಿಪ್ಪನೆಂಬುದನೆನಗೆ ಪೇಳಯ್ಯ
ರೀತಿ ಚಾರಿತ್ರಗಳ ಕುರುಹೇನು ಪೇಳಯ್ಯ

ಎನಲು ನಮ್ಮವ್ವ ನಮ್ಮಮ್ಮ ನೀ ಕೇಳೆಂದು
ಅನುಪಮನ ಘನಚರಿತ್ರವನು ನೀಂ ಕೇಳೆಂದು
ಜೆಡೆಯೊಳಗೆ ಗಂಗೆ ಸೂರಿಯ ಚಂದ್ರರಿರುತಿಹರು
ಕಿಡಿಗಣ್ಣು ಕಿವಿಯಲ್ಲಿ ಫಣಿಗಳುಂ ಇರುತಿಹವು
ಕೊರಲೊಳ್ ಗರ[ಳ] ಸುರಕರೋಟಿ ಮಾಲೆಗಳಿಹವು
ಕರದಲ್ಲಿ ಬ್ರಹ್ಮದಲೆ ಮುರಿದಿಕ್ಕಿಯಿರುತಿಹವು
ತೊಡುವುದಂ ಕರಿದೊವಲು ಉಡುವುದಂ ಪುಲಿದೊವಲು
ತೊಡವು ಹಾವುಗಳು ಭಸ್ಮಾಂಗಮುಂ ಶಿವಗೆನಲು
ಪಡುವುದಂ ಸುಡುಗಾಡು ಕಡೆಗೆಯದರೊಳಗಾಟ
ಒಡನೆಯಿರ್ಪವರೆಲ್ಲ ಮರುಳ್ಗಳವರೊಳೆಯಾಟ
ತಂದೆ ತಾಯಿಗಳಿಲ್ಲ ತಂದೆ ಮೂಜಗಕೆಲ್ಲ
ಬಂಧು ಬಳಗಗಳಿಲ್ಲ ಪೊರೆವೊಡೆಯ ತಾ[ನಿ]ಲ್ಲ
ದೇಶಿಗನು ತಾನೆ ದೇಶಾಧಿಪತಿಯುಂ ತಾನೆ
ಆಶೆಯೊಬ್ಬರುವಿಲ್ಲವಾಶಾಂಬರಂ ತಾನೆ
ಹೇಳುವರೆ ತಂದೆತಾಯಕ್ಕ ತಂಗಿಯರಿಲ್ಲ
ಕೇಳವ್ವ ಹೊಟ್ಟೆಯಂ ನೋಡಿ ಹೊರೆವವರಿಲ್ಲ
ಹಸಿದೆನೆಂದರೆ ಮರುಗಿ ಇಕ್ಕುವವರುಗಳಿಲ್ಲ
ಬಸವಳಿದ[ರುಂ] ಬಳಲಿಕೆಯನಾರಿಸುವರಿಲ್ಲ
ಈ ಪರಿಯೊಳಿರುತಿರ್ಪ ಶಿವನ ಕಾಣ್ಬರೆ ಇಂತು
ದ್ವೀಪ ದ್ವೀಪವ ತೊಳಲಿ ತಪ್ಪದೆಮ್ಮಯ ಭ್ರಾಂತು

ಅಕ್ಕಟಾ ಶಿವಗಾರು ಇಲ್ಲವೇ ಅಯ್ಯಗಳೆ
ಮುಕ್ಕಣ್ಣ ಶಿವಗೆ ಇನ್ನಾರು ಗತಿಯಯ್ಯಗಳೆ
ಎನ್ನೆಡೆಗೆ ಬಾರ ನಾನನ್ಯಳಾಗಿಯೆ ಕಾಣೆ
ಚೆನ್ನಾಗಿ ನೋಡಿ ರಕ್ಷಿಸುವೆ ನಾಂ ತನ್ನಾಣೆ
ಜೆಡೆಯ ಹಿಕ್ಕಂ ಬಿಡಿಸಿ ಮುಡಿಯ [ಸೀ]ರಂ ಬಿಡಿಸಿ
ಇಡಿದ ರವಿ ಶಶಿ ಕೊರಲ ತೊಡರ್ದ ಗರಳವ ಬಿಡಿಸ
ಕಂಡಮಾಲೆಯ ತೆಗೆಸಿ ಕೆಂಡಗಣ್ಣಂ ಬಿಡಿಸಿ
ಪುಂಡರೀಕಾಜಿನವ ಗಜಚರ್ಮವಂ ಬಿಡಿಸಿ
ಕಲ್ಲೊಳಗೆ ಕಾಡೊಳಗೆ ಮಸಣದೊಳಗಂ ತಿರಿಗಿ
ಹಳ್ಳಿಗ[ಳ] ಮುಳ್ಳೊಳಗೆ ಮಸಣದೊಳಗಂ ತಿರಿಗಿ
ಮರುಳಗಳೊಳಾಡುವರೆ ಘನಬುದ್ಧಿಯುಳ್ಳವರು
ತಿರಿದು ಉಣಲೀಸುವರೆ ದೆಸೆದಿಕ್ಕು ಉಳ್ಳವರು

ಎಂಬ ನುಡಿಗಾ ಶರಣ ಹರುಷ ಪುಳಕವ ತಾಳ್ದು
ನಂಬುಗೆಯ ಮುಗ್ಧೆಯೆಂದೆನುತೆ ಹರುಷವ ತಾಳ್ದು
ನಾವು ಹಸಿದೆವು ನಮಗೆ ಬೋನಮಂ ನೀಡೆನಲು
ಭಾವೆ ಜಂಗಮಗೆಯಾರೋಗಣೆಯ ಕುಡುತಿರಲು
ಶರಣಂಗೆ ನೈವೇದ್ಯಮಂ ತಂದು ಎಡೆಮಾಡಿ
ಹರುಷದಿಂ ಶರಣನಾರೈಸಿ ಸುಖದೊಳು ಮೂಡಿ
ಕೈ[ಯೆ]ರೆದು ವೀಳೆಯಂಗಳನಿತ್ತವರ ಕಳಿಪಿ
ಸುಯ್ವುತುಂ ಉಮ್ಮಳಿಸುತುಂ ಶಿವಗೆ ಮನವಳಿಪಿ
ಕಂಡು ನೇಹದಿ ಮರುಗುತಮ್ಮವ್ವೆಯಕ್ಕಟಾ
ಖಂಡೇಂದುಮೌಳಿ ನಿನಗಾರುವಿಲ್ಲಕ್ಕಟಾ

ಬಾರಯ್ಯ ಶಿವನೆ ನಾಂ ಮಕ್ಕಳಿಲ್ಲದ ಬಂಜೆ
ಬಾರಯ್ಯ ಎನ್ನ ಸಾರಲ್ಕೆ ಮನುಜರಿಗಂಜೆ
ಮುಂಡೆ ಜಡೆಗಟ್ಟಿ ನೀರೆರೆವರಿಲ್ಲಕ್ಕಟಾ
ಕೆಂಡವಂ ಹಣೆಯೊಳಗೆ ತಾಳುವರೆಯಕ್ಕಟಾ
ಬಾರಯ್ಯ ಶಿವನೆ ನಾನಾರಯ್ವೆನೆಲೆ ತಂದೆ
ಆರಯ್ವೆ ನಿನ್ನ ಮಗನೆಂದುವಾನೆಲೆ ತಂದೆ
ಅಡವಿಯಲಿ ಬೆಟ್ಟದಲಿ ತಿರುಗದಿರು ಕಂಡಯ್ಯ
ಮಡುವಿನಲಿ ಹಳ್ಳದಲಿ ಮುಳುಗಿ ಹೋದಪೆಯಯ್ಯ
ಜೆಡೆಯ ಬಿರ್ಚಿಯೆ ನೀರನೆರೆದು ಸಾಗಿಸುವೆ ಬಾ
ಕಿಡಿಗಣ್ಣಿಗೀವೆ ಕರ್ಪುರದಂಜನವನು ಬಾ
ಕರಿಯ ಕುಪ್ಪುಸವ ತೆಗೆದೀವೆ ವಸ್ತ್ರವನು ಬಾ
ಗರಳವುಂ ಬಿಡಲೌಷಧವ ನಿನಗೆ ಈವೆ ಬಾ
ಭಸಿತಮಂ ಬಿಡಿಸಿ ಪರಿಮಳವ ಪೂಸುವೆನು ಬಾ
ಹೊಸಪರಿಯ ಸಾಗಿಸುವೆ ಲೇಸು ಮಗನಾಗಿ ಬಾ
ತಿರಿದು ಉಣಲೇಕೆ ಹಾಲೆರೆದು ಸಾಗಿಸುವೆ ಬಾ
ಹೊರೆವರಿಲ್ಲದೆ ಮರುಳರಂತೆ ಇರಬೇಡ ಬಾ
ಎರವಾಗಿ ನೋಡೆ ನಾಂ ಹೊರೆವೆ ತಾಯಂತೆ ಬಾ
ಪರಿಪರಿಯಲುಪಚಾರ ಮಾಳ್ಪೆ ನಿನ್ನಾಣೆ ಬಾ

ಎಂಬ ಮಾತುಂ ಶಿವಗೆ ತುಂಬಿತ್ತು ಕರ್ಣದಲಿ
ಶಂಭು ಈಕೆಗೆ ಮಗನು ಆಹೆನುತೆ ಗಿರಿಜೆಯಲಿ
ಎಚ್ಚರಿಸಿ ಇಳಿತಂದು ನಿಂದನಾರಣ್ಯದಲಿ

ಸಚ್ಚರಿತ ಶಿವನೊಪ್ಪುತಿರ್ದನಾ ವಿಂಧ್ಯದಲಿ
ಈಕೆಯುದರದಲಿ ಜನಿಸಿದೊಡೆ ಮನುಜರು ನೆರೆದು
ಲೋಕ ಹೊರಗೆಂಬುದಿದು ಬುದ್ಧಿಯಲ್ಲಂ ಪಿರಿದು
ವೃಕ್ಷದೊಳಗಂ ತೊಟ್ಟಿಲಲ್ಲಿ ತಾಂ ಶಿಶುವಾಗಿ
ಲಕ್ಷಣಯುತಂ ಶಿವನು ಇರ್ದನುನ್ನತನಾಗಿ
ಬಿಟ್ಟ ಕೆಂಜೆಡೆಗಳೇ ಎಳೆದು ಕೆಂಜೆಡೆಯಾಗಿ
ನೆಟ್ಟನಾ ಮುಡಿದ ಸೂರಿಯನುವರಳೆಲೆಯಾಗಿ
ಹಣೆಯ ಕಣ್ಣೆಸೆವ ಕರ್ಪಿನ ತಿಲಕವಾಗಿರಲು
ಫಣಿ ಕುಂಡಲಂಗಳುಂ ಮಾಗಾಯ್ಗಳಾಗಿರಲು
ಪೊಳೆವ ಅರಳೆಲೆಯದುಂ ಎಸೆವ ಶಶಿಯಾಗಿರಲು
ಗಳದ ವಿಷವದು ಪುಲಿಯುಗುರಿನಂದವಾಗಿರಲು
ತರದ ಕರಗಳವೆರಡು ಕರವಾಗಿಯೊಪ್ಪಿರಲು
ಬೆರಳ ಉಂಗುರವಜನ ಶಿರವದೇಯೊಪ್ಪಿರಲು

ಆದಿಯಾಧಾರವೇ ಉಡಿದಾರವಾಗಿರಲು
ವೇದವಾದಂಗಳೇ ಗೆಜ್ಜೆಗಳುಮಾಗಿರಲು
ಬಟ್ಟಬಯಲೇ ತನಗೆ ತೊಟ್ಟಿಲಾಗೆಸೆದಿರಲು
ಕಟ್ಟಿರ್ದ ನೇಣುಗಳೆಯಾಗಮವವಾಗಿರಲು
ಜ್ಞಾನಪ್ರಭಾವದಿಂ ಬೆಳಗುಮಯ ತಾನಾಗಿ
ನಾನಾ ಸುಚಾರಿತ್ರವೆಲ್ಲವಂಗಮದಾಗಿ
ಮುಟ್ಟಿ ದೃಢವಾಗಿ ಸದ್ಭಕ್ತಿಯಂ ಪಿಡಿದಿರಲು
ತೊಟ್ಟಿಲಂ ತನಗೆ ತಾನೇ ತೂಗಿಕೊಳುತಿರಲು

ಇತ್ತ ಶಿವನಿರೆಯತ್ತಲಮ್ಮವ್ವೆ ಗೃಹದೊಳುಂ
ಚಿತ್ತಜಾರಿಯ ನೆನೆವುತಂ ತನ್ನ ಮನದೊಳುಂ
ಹಂಜಿಯಂ ಮಾಡುತಿರಲಾಲಸ್ಯಮಂಕುರಿ
ಓಜೆಯಿಂದೆಂದ ನಾಗೇಶ್ವರಂ ಬಿತ್ತರಿಸಿ
ಮಗನ ಬೇಡಿದೆಯವ್ವ ಕಾನನದೊಳಹನೆ ಬಾ
ಮಿಗೆ ಕಾಡಕುರ್ಚುಳ ತಹ ನೆವನಾಗಿ ನೀನು ಬಾ
ಶಿವ ನಿನಗೆ ಶಿಶುವಾಗಿ ಬಂದಹನೆ ತಾಯಿ ಬಾ
ಭವಹರಂ ಮಗನಾಗಿ ಬಂದಹನೆಯಮ್ಮ ಬಾ
ಕಂಡ ಕನಸಿಂಗೆ ಹಿಂಡೇಳ್ವ ಪುಳಕಂಗಳಿಂ
ಕೊಂಡಾಗ ಹೆಡಗೆಯಂ ಹರುಷಾಸ್ಪದಂಗಳಿಂ

ನೇಹವಿರ್ದೆಡೆಗೆ ಮೋಹನವೆಯ್ದಿ ಬರ್ಪಂತೆ
ಸೋಹವಿರ್ದೆಡೆಗೆ ಸತ್ಕ್ರಿಯೆಯೆಯ್ದಿ ಬರ್ಪಂತೆ

ಅರಸಿ ಬರುತಿರೆ ಜಗನ್ಮಯನ ಸದ್ಭಕ್ತೆ ತಾಂ
ಕರೆವುತಿರ್ದಳ್ಮುಕ್ತಿಮಯನ ಸಚ್ಚರಿತೆ ತಾಂ
ಏ ಶಿವನೆ ಬಾ ಶಿವನೆ ಕೂ ಶಿವನೆ ಆ ಶಿವನೆ
ಲೇಸು ಮಾಡಿದೆ ಶಿವನೆ ಆಶೆ ಮಾಣಿಸು ಶಿವನೆ
ನಾಗೇಶ ಬಾರಯ್ಯ ನೀನು ಎನ್ನಯ ಮಗನು
ಆಗಯ್ಯ ನಿನ್ನೊಳಗೆ ಮುನಿದೆನಯ್ಯಾ ನಾನು
ಏನು ನಟ್ಟಡವಿಯೊಳು ತಾನೊಬ್ಬಳೇ ಬರಲು
ತನತನಗೆ ಹರಿಣ ಸಾರಂಗ ಹರಿವುತ್ತಿರಲು
ಹಿಂದೆ ಮರಿಗಳು ಹತ್ತಿ ಬೆನ್ನಲ್ಲಿ ಬರುತಿರಲು
ನೊಂದಕ್ಕಟಾ ಮಕ್ಕಳಿಲ್ಲದಿಹುದೆನ್ನಳಲು
ನಿನ್ನ ತಾಗುವುದು ನಾಗೇಶನೀ ಮೃಗಗಳೊಳು
ಎನ್ನ ಪುಟ್ಟಿಸದಾದೆ ಯಾಕಯ್ಯ ಮೃಗಗಳೊಳು
ಕೋಡಗಂಗಳು ತಮ್ಮ ಮರಿಯ ಹೊಟ್ಟೆಯೊಳಿಕ್ಕಿ
ಓಡಿ ಕೊಂಬಿಗೆ ಪಾರಲವ ಕಂಡು ಮನವುಕ್ಕಿ
ಅಯ್ಯಯ್ಯ ಶಿವನೆ ವಾನರದಿಂದ ಕಡೆಯಾದೆ
ನಯ್ಯಯ್ಯ ಭವನೆ ಈ ನರಕದೊಳಗಾನಾದೆ
ನಾಗನಾಥನೆಯನಾಥರನಾಥ ಬಾರಯ್ಯ
ಆಗಮನಿಗಮ ನಿಲುಕದಾಧಾರ ಬಾರಯ್ಯ
ಅರುಪಿ ಕಾಣಿಸಿಕೊಳ್ಳದಾದ ಗರುವಿಕೆ ಇರವು
ಮರೆಮಾಡಿಕೊಂಡಿರ್ಪುದಾವ ಗುರುತನದಿರವು
ಕರೆಯೆ ಕಾಣಿಸದಿರಲು ಕಳ್ತಲೆಯದಾಗಿಯಿದೆ
ಪರಮೇಶ ನಿನ್ನ ಕಾಣ[ದಿ]ರೆ ಭಯವಾಗಿಯಿದೆ
ಎನೆ ಕೇಳ್ದು ತಾನಳುವ ನೆವದಿಂದೆ ದನಿಮಾಡೆ
ಘನಮಹಿಮ ಶಿಶುತನದ ನಟನೆಯಿಂ ಧ್ವನಿಮಾಡೆ
ಆಲಿಸುತೆ ಕೇಳುತ್ತೆ ಪರಿದಳಾ ಅಳುವೆಡೆಗೆ
ಬಾಲತನವಂ ಮೆರೆವ ಸೂತ್ರಧಾರಕನೆಡೆಗೆ
ಮುದದಿ ಕಂಡಳು ಬಾಲಶಶಿಧರನ ಕಂಡಂತೆ
ಸದುಭಕ್ತನಾಗಿರ್ಪ ಪರಿಶಿವನ ಕಂಡಂತೆ
ಬರ್ದುಕಿದೆಂ ಕಣ್ಣ ಪುಣ್ಯಂ ಮುಂದೆ ಇದೆ ಎನುತೆ
ಬದುರ್ಕಿದೆಂ ಎನ್ನ ಮನದಾನಂದ ಇದೆ ಎನುತೆ

ಇಲ್ಲಿರಿಸಿ ಹೋದರಾರಯ್ಯ ಚೆನ್ನನೆ ನಿನ್ನ
ಇಲ್ಲಿಗೇತಕೆ ಬಂದೆ ಎನ್ನ ಭಾಗ್ಯದ ಚೆಣ್ಣ
ಇಲ್ಲಿರಿಸಿ ಹೋದರಾರಯ್ಯೊ ಕಂದನೆ ನಿನ್ನ
ಬಲ್ಲ ತಾವಲ್ಲ ಆರೂ ಇಲ್ಲ ಬಾ ನಿನ್ನ
ಕರಡಿಗಳು ಬಂದು ನಿನ್ನ ತಿನ್ನವೇ ಅಣ್ಣ
ಅರವರಿಸದಿಲ್ಲಿರಿಸಿ ಹೋದರಾರೈ ಅಣ್ಣ
ಆರಿರಿಸಿದವರೆಂದು ಅತ್ತಿತ್ತ ನೋಡುತುಂ
ಆರುವಂ ಕಾಣದೆ ಮನದಿ ನೊಂದು ಬಾಡುತುಂ
ಈತ ನಾನರಸುತಿಹ ಶಿವನೆ ತಾನಾಗದಿರ
ಈತನೇ ನಾಗೇಶ ಮಹಿಮ ತಾನಾಗದಿರ
ಈತ ನಾನರಸುತಿರ್ಪಾ ಹರನು ತಾನಕ್ಕು
ಈತನಾಜೆಡೆಯೆ ಕಿರುಜೆಡೆಯಾದವಕ್ಕಕ್ಕು
ಈತನರಳೆಲೆಯು ಮೃಗಧರನೆಂ[ದೆ] ತಾನಕ್ಕು
ಈತನ ಕೊರಲ ಕಪ್ಪು ಹುಲಿಯುಗುರು ತಾನಕ್ಕು
ಈತನಾ ಮಾಗಾಯಿ ನಾಗಾಭರಣಮಕ್ಕು
ಈತನಡವಿಯೊಳಿರ್ಪನೆಂದೊಡದು ತಾನಕ್ಕು
ಎಂದು ಸಂತೋಷದಿಂ ಪೆರ್ಚುತ್ತಲಮ್ಮವ್ವೆ
ಚಂದ್ರಶೇಖರನ ಮುದ್ದಾಡಿಸುತಲಮ್ಮವ್ವೆ
ಎಂದೆತ್ತಿ ತಳ್ಕೈಸಿ ತನುವಾರೆ ಬಿಗಿದಪ್ಪಿ
ಕಂದ ಮೈ ಕಂದಿತೇ ಎನುತೆ ಬಸುರಲಿಯಪ್ಪಿ
ಎನ್ನ ನೆನಹಿಂಗೆ ಶಿಶುವಾಗಿ ಬಂದವನೆ ಬಾ
ನಿನ್ನ ನೆನಹಿಂಗೆನ್ನ ಬಯಸಿದುದನೀವೆ ಬಾ
ಬಾರಯ್ಯ ತಮ್ಮನಮ್ಮಯ ಮನೆಗೆ ಹೋದಪೆವು
ಧಾರುಣಿಗೆ ನಿನ್ನ ಹೊಸ ಶಿಶುತನವ ಬೀರುವೆವು
ಎನುತೆ ತೊಟ್ಟಿಲನೆತ್ತಿ ಹೊತ್ತುಕೊಳುತುಂ ಬರುತೆ
ಮನಸಿಜಾರಿಯ ಹೊತ್ತ ನಂದಿಯಂದದಿ ಬರುತೆ
ತನ್ನ ಮನೆಗೆಯ್ತಂದು ರನ್ನದಾರತಿಯೆತ್ತಿ
ಪನ್ನಗಾಭರಣನಂ ಕರುಣವೆರಸುಂ ಮುತ್ತಿ
ಆಗ ಮಗನುಮ ನಾಗನಾಥಂ ಪೆಸರಿನಿಟ್ಟು
ನಾಗಾಜಿನಾಂಬರಂಗಂ ಭಸಿತಮುಮನಿಟ್ಟು
ಎಣ್ಣೆಯಂ ಪೂಸಿ ಮೆಯ್ಯೊತ್ತಿ ಮಜ್ಜನಕೆರೆದು
ಬೆಣ್ಣೆಯುಮನಿಕ್ಕಿ ಕಣ್ಣಿಂಗೆಯಂಜನಮೊರೆದು

ತೊಟ್ಟಿಲಲಿ ಮಲಗಿಸಿದಳಾ ಸೃಷ್ಟಿಕರ್ತನಂ
ಅಟ್ಟರಸಲೆಯ್ದಿ ಸಿಲುಕದ ಮಿಮಲಚರಣನಂ
ಶರಣರಂ ಕರುಣದಿಂ ಪೊರೆವನಂ ಗರುವನಂ
ಹರಿಣನಂ ಕರದೊಳಗೆ ಧರಿಸಿಕೊಂಡಿರ್ಪನಂ
ಸಕಲವಂ ರಕ್ಷಿಸುವ ದಾತನಂ ರಕ್ಷಿಪಳು
ಅಖಿಲರಂ ಪೊರೆವ ನಿರ್ಮಾಯನಂ ರಕ್ಷಿಪಳು
ತೊಟ್ಟಿಲಲಿ ಪಟ್ಟರಿಸಿ ಜೋಗುಳಂ ಪಾಡುವಳು
ಕಟ್ಟಳ್ಕರಿಂದೆ ಸಂತೋಷದಿಂ ಪಾಡುವಳು
ನಿದ್ದೆ ಬಾರದೆ ಎನುತ್ತುಂ ತೂಗುತಿಹಳಾಕೆ
ಅರ್ಧಶಶಿಧರನ ಹಾಡುತ್ತ ಹರಸುತಲಾಕೆ

ಜೋ ಸುಕೃತಮಯನೆ ಸರ್ವೈಶ್ವರ್ಯಕಾಯ ಜೋ
ಜೋ ಸುಪ್ರಭಾಮಯನೆಯಾದಿಗಾಧಾರ ಜೋ
ಜೋ ಮಂಗಳಾಕಾರ ಮೂದೇವದಾತ ಜೋ
ಜೋ ಜಂಗಮಾಕಾರ ಶರಣರಾಧಾರ ಜೋ
ಜೋ ಜೋ ಮಹಾದೇವ ದೇವ ದೇವೇಶ ಜೋ
ಜೋ ಜೋ ಅನಾಥರಿಗೆ ದಾತಾರ ತಂದೆ ಜೋ
ಎಂಬ ಜೋಗುಳವನಾಲಿಸಿ ನಿದ್ರೆಯಂ ಮಾಡಿ
ಯಂಬಕತ್ರಯನು ನಾದಕ್ಕೆ ಮೆಚ್ಚಂ ಕೂಡಿ
ಮೆಚ್ಚಿದಂದದೆ ಕಾಲ ಕಯ್ಗಳಂ ಅಲುಗುತಿರೆ
ಬೆಚ್ಚುತಿವೆಯಂಗಂಗಂಳೆಂಬಂತೆ ತೋರುತಿರೆ

ಅಂಜಲೇಕಯ್ಯ ಮೃತ್ಯುಂಜಯನ ಪೆಸರಣ್ಣ
ಕಂಜಭವಶಿರಧರನ ಮುಕ್ಕಣ್ಣ ಪೆಸರಣ್ಣ
ಎನುತಲಮ್ಮವ್ವೆ ದೇಶಾಖಿರಾಗದೆ ಪಾಡಿ
ಘನಮಯನ ದೇಶಿ ಗುಜ್ಜರಿಗಳಿಂದಂ ಪಾಡಿ
ಗೌಳ ರಾಮಕ್ರಿ ಗುಂಡಕ್ರೀಗಳಂ ಪಾಡಿ
ಭೌಳಿ ಮಲಹರಿ ಗುಜ್ಜರೀ ರಾಗದಿಂ ಪಾಡಿ
ಆಹರಿ ವರಾಳಿಯಿಂ ನಾಗೇಶನಳುತಲಿರೆ
ಆಹ ರಕ್ಷೆಗಳನಸಮಾಕ್ಷಂಗೆ ಕಟ್ಟುತಿರೆ

ಇಂತು ಶಿವಭ್ರಾಂತೆಯಾಗುತ್ತಲಿರದಲಮ್ಮವ್ವೆ
ಚಿಂತಾಯಕನ ಶಿಶುತನಕೆ ಹಿಗ್ಗುತಮ್ಮವ್ವೆ

ಇಂತು ಶಿವನಂ ಪಾಡಿ ತಾಯಪ್ಪ ನಮ್ಮವ್ವೆ
ಕಂತುಹರನಂ ಕೆಳೆಗೊಳುತ್ತಿರಲ್ ನಮ್ಮವ್ವೆ
ಅಮ್ಮವ್ವೆಗಾರು ಸರಿ ಶಿವನೊಲವದಾರ್ಗುಂಟು
ಅಮ್ಮವ್ವೆ ಮಾಡಿದಾ ಪುಣ್ಯಫಲವಾರ್ಗುಂಟು
ಎರೆವ ಹಾಲದು ತಾನೆ ಕರುಣಾಮೃತವದಾಯ್ತು
ಹೆರೆನೊಸಲಿಗೆರೆದುದಕವಾನಂದ ಜಲವಾಯ್ತು
ಇಟ್ಟ ಭಸಿತದ ತಿಲಕಜ ಉರಿಗಣ್ಗೆ ತಂಪಾಯ್ತು
ದಿಟ್ಟಿಗೆ ನಿವಾಳಿಸಿದ ಬೇವೆ ಹೋಮವದಾಯ್ತು
ತೊಟ್ಟಿಲ ಕೆಳಗೆ ಇಟ್ಟ ಅಗ್ನಿ ಧೂಪವದಾಯ್ತು
ಮುಟ್ಟಿಸಿದ ದೀಪವೆ ನಿರಂಜನಾರತಿಯಾಯ್ತು
ಚೆಣ್ಣಂಗೆ ಮೊಲೆವಾಲೆ ಪುಣ್ಯದುಣಿಸಿಂಗಾಯ್ತು
ಚೆಣ್ಣ ಜೋ ಎಂಬುದೇ ನಾದದುನ್ನತಿಯಾಯ್ತು
ತೊಟ್ಟಿಲಲೆಸೆವ ನೇಣೆ ಶಿವದಾರ ತಾನಾಯ್ತು
ತೊಟ್ಟಿಲೇ ಶಿವಗೆ ತಾಂ ಸೆಜ್ಜಾಗೃಹಮದಾಯ್ತು

ಇಂತೊಪ್ಪುತಿರ್ದ ನಾಗೇಶ ಶಿಶುತನದಿಂದೆ
ಸಂತಸದೆ ಭಕ್ತವತ್ಸಲ ತನ್ನ ನಲವಿಂದೆ
ನೆನೆದನೊಂದನುವ ನೇಹವ ನೋಡಬೇಕೆಂದು
ಮನವಾರೆ ಈಕೆಯುಮ ತಾಂ ಮೆರೆಯಬೇಕೆಂದು
ಇರ್ದಿರ್ದು ಕಣ್ಣಾಲಿ ಮೇಲಕಂ ಸೇರುತಿರೆ
ಇರ್ದಿರ್ದು ಕೈಕಾಲುಗಳ ನೀಡಿ ನಡುಗುತಿರೆ
ಮೊಗ ಬೆವತು ಕಣ್ಗುಳಿದು ಮೆಯ್ ತಣ್ಣನಾಗುತಿರೆ
ಮೊಗಸಿ ಬೆಮರುಂ ಅಳ್ಳೆ ಹೊಯ್ವುತ್ತ ನಿಗುರುತಿರೆ
ಕಾಲು ಕಯ್ಯುಂ ಬೆರತು ಮೇಲು ಬೆಮರಿಕ್ಕುತಿರೆ
ಮೇಲಕ್ಕೆ ನೆತ್ತಿವಾಯ್ ಕಣ್ಣುಮುಚ್ಚುತ್ತಮಿರೆ
ಇರೆ ಕಂಡು ಅಮ್ಮವ್ವೆ ಏನು ಸೋ[ಜಿ]ಗವೆನುತೆ
ಹೊರೆಯಿಳಿದು ತನು ಜಜ್ಝರಿತವಾಗಿ ಕಣ್ಗೆಡುತೆ

ಏನಯ್ಯ ತಮ್ಮ ಇಂತೇಕಾಯಿತೆಲೆ ಮಗನೆ
ಏನಿರ್ದಿದೇನು ಸೋಜಿಗ ನಿನಗೆ ಎಲೆ ಮಗನೆ
ನೀನೆನ್ನ ಸಲುಹಿದಪೆ ಎಂದಿರ್ದೆನೆಲೆ ಕಂದ
ನೀನೆನ್ನ ಹೊರೆದಪನು ಎನುತ ನಚ್ಚಿದೆ ಕಂದ
ಭೂತ ಸೋಂಕದು ಭೂತಪತಿಯಪ್ಪೆ ನೀಂ ಮುನ್ನ

ಭೂತಿಭೂಷಣನು ಭೂತಾತ್ಮಕನು ನೀಂ ಚೆನ್ನ
ಶೂಲಿಯ ಕಪಾಲಾಸ್ಥಿಮಾಲೆಯ ಪೆಸರುಮೆಂದು
ಕಾಲಾಂತಕನ ಣಾಗಭೂಷಣನ ಪೆಸರೆಂದು
ನಿನ್ನ ಮರೆಯೊಗೆ ಇಂತು ಮಾಡುವರೆ ಮಗನಿಗಂ
ಪನ್ನಗಧರಾ ಇಂತು ಮಾಡುವರೆ ಕೂಸಿಗಂ
ತನು ಕರಗಿ ಮನ ಜರಿದು ಮಗನ ಮೊಗ ನೋಡುತುಂ
ಕನಲುತುಂ ಕಳಲುತುಂ ಕುಂದಿ ಹಂಬಲಿಸುತುಂ
ಏಳುತುಂ ತರತರಿಸಿ ಕಣ್ಬನಿಯೊಳಾಳುತುಂ
ಕಾಲಾರಿ ಇಂತು ಮಾಳ್ಪರೆ ಎಂದು ಕೊರಗುತುಂ

ನೀನೆಲ್ಲಿ ನಾನೆಲ್ಲಿ ಇನಿತವಸ್ಥೆಯದೆಲ್ಲಿ
ನೀನೆನಗೆ ಮಗನಾಗಿ ನೋವನಿಕ್ಕಿದೆಯಿಲ್ಲ
ಇರದಾದರೇಕೆ ನಿಮ್ಮವರುಗಳು ಅಡವಿಯಲಿ
ಉರವಣಿಸಿ ಹೋದರೀ ನೀವಿಗವರಾದಿಯಲಿ
[ಹೆ]ತ್ತಾಕೆ ಎತ್ತಿ ಸಲಹದೆ ಹೋದಳಕಟಕಟ
ಹೆತ್ತರಿಂದಂ ಸಾಕಿದವರಿಗತಿ ನೋವಕಟ

ಕಂದ ನಿನ್ನಯ ನೋವ ನಾಂ ನೋಡಲಾರೆನೈ
ಮುಂದೆ ನಿನಗಿಂದ ಸಾವೆಂ ತಾಳಲಾರೆನೈ
ಈಳಿಗೆಯ ತಂದಿಕ್ಕಿಕೊಂಡಾಗಳೇ ಕೊರಲ್ಗೆ
ಬಾಲಕನ ನೋವ ನೋಡಲುಮಾರದೆಯೆ ಕೊರಲ್ಗೆ
ಅರಿದುಕೊಳೆ ಕೆಣ್ದೆರೆದು ನೋಡಿದಂ ಕರೆಕಂಠ
ಅರಿದನು ಪರಿಚ್ಛೇದಿಸುವ ಪರಿಯ ವಿಷಕಂಠ

ಘರಿಲೆಂಬ ದನಿಯೊಳಗೆ ಪುರಹರಂ ಮೆಚ್ಚುತುಂ
ಕರಿಚರ್ಮಧರನಾಗ ಗಿರಿಜೆಯಂ ನೆನೆವುತುಂ
ಹಿಡಿಯಯ್ಯ ಕರವನೆಂದೆನುತೆ ಶಿವೆ ಬೆರಗಾಗೆ
ಮೃಡನಿಷ್ಠೆಯಂ ನೋಡೆನುತ್ತೆ ನಸುನಗೆಯೋಗೆ
ತೊಟ್ಟಿಲೇ ವೃಷಭವಾಹನಮಾಗಿಯೊಪ್ಪಿರಲು
ಕಟ್ಟಿರ್ದ ದಾರಗಳ್ ವೇದನುತಿ ಎಸೆದಿರಲು
ಕಿರಿಯ ಶಶಿ ಮೇರೆವ ಸುರುಚಿರಗಂಗೆಯೊಪ್ಪುತಿರೆ
ತುರುಗಿದ್ದೈಮೊಗ ಫಣಿಯೆ ಕುಂಡಲಗಳೊಪ್ಪುತಿರೆ
ನೊಸಲ ಕಣ್ ನಸುನಗೆಯ ಸುಲಿಪಲ್ಲು ಬೆಳಗುತಿರೆ

ವಿಷಕಂಠ ರುಂಡಮಾಲಾಭರಣಮೊಪ್ಪುತಿರೆ
ಎರಡು ಭುಜದೊಳಗೆಂಟು ಹಸ್ತಗಳ್ ಮೂಡುತಿರೆ
ಉರುತರದ ತೇಜಃಪ್ರಕಾಶ ಕೂಡುತ್ತಮಿರೆ
ಪೊದೆದ ಗಜಚರ್ಮ ಪುಲಿದೊವಲಿಂದಲೊಪ್ಪಿರಲು
ಮದನಾಂಗಭಸ್ಮಲೇಪನಕಾಯನೊಪ್ಪಿರಲು
ಎಡದ ಕಡೆಯಣ ಪಾರ್ವತಿಯು ನೋಡಿ ಹೆಚ್ಚುತಿರೆ
ನುಡಿದನೀಶ್ವರ ತಾಯಿಗಂ ಮೋಹ ಮಚ್ಚುತಿರೆ

ಇಂತಪ್ಪ ಹಿತವರುಗಳೆನಗುಂಟೆ ದೇವಿಯರೆ
ಇಂತಪ್ಪ ತಾಯಿಯೆನಗೆಲ್ಲುಂಟು ದೇವಿಯರೆ
ಎನುತಲ[ಮ್ಮವ್ವೆಯಂ] ಶಿರವ ಪಿಡಿದೆತ್ತುತಿರೆ
ಅನುಪಮಂ ಅಭಯಕರದಿಂದೆ ಸಂತೈಸುತಿರೆ
ಕಂದೆರೆದು ನೋಡಿದಳು ಅಘಹರನನಮ್ಮವ್ವೆ
ಇಂದುಧರನಂ ನೋಡಿ ಕಂಡಳಾಗಮ್ಮವ್ವೆ
ಮೆಚ್ಚಿದೆಂ ಬೇಡಿಕೋ ಎನ್ನ ತಾಯೇ ಎನಲು
ಸಚ್ಚರಿತ ಸುಕುಮಾರ ಸುಖಿಯಾಗಿ ಇರು ಎನಲು

ಹೆಚ್ಚಿದಂ ಹಿಗ್ಗಿದಂ ಗಣಕುಲಂಗಳ ಕರೆದು
ಸಚ್ಚರಿತರೆಲ್ಲರುಂ ಬಂದರಾಗಳು ಪರಿದು
ಸಕಲ ದೇವಾಧಿದೇವರ್ಕಳುಘೆಯುಘೆಯೆನುತೆ
ಸಕಲ ಮುನಿಗಳು ದೇವರಾಯ ಭಾಪೆಂದೆನುತೆ
ಸಕಲ ಸುರರುಗಳಪ್ರತಿಮನೆ ಜಯ ಜಯ ಎನುತೆ
ಸಕಲ ಗಣವೆಲ್ಲ ತ್ರಾಹಿ ತ್ರಾಹಿ ಎಂದೆನುತೆ

ನೋಡು ನಂದೀಶ ಇಂತಪ್ಪ ಹಿತವೆಯರುಂಟೆ
ನೋಡು ಎನಗಾಗಿ ಹರಣವನಿತ್ತರಿಂತುಂಟೆ
ಬೇಡಿಕೋ ಎನಲೆನಗೆ ಹರಕೆಯಿತ್ತವರುಂಟೆ
ನೋಡಿ ಎನ್ನುವನು ಸುಖಿಯಾಗಿರೆಂದವರುಂಟೆ
ಎಂದೆನಲು ಗಣನಿಕರವತಿಶಯಂಬಡುತಿರಲು
ಎಂದುವರಿಯದ ಪರಿಯಿದೆಂದು ಹರುಷದೊಳಿರಲು
ಹರಿಯಜಪುರಂದರರು ಜಯ ಜಯ ಎನುತ್ತಿರಲು
ಕರಗಳಂ ಮುಗಿದು ಗಣನಾಯಕರು ನಿಂದಿರಲು

ಬಂದುದೊಂದಳ್ತಿಯ ವಿಮಾನವಾನಂದದಿಂ
ಚಂದದಿಂದಮ್ಮವ್ವೆಯಂ ಇರಿಸಿ ನೇಹದಿಂ
ನಡೆದುದಾ ಪುಷ್ಪಕಂ ಧವಳಗಿರಿ ಮಂದಿರಕೆ
ಪೊಡೆದವುಂ ಭೇರಿ ಶಂಖದ ನಾದವೆನಿತಕ್ಕೆ
ಕೈಲಾಸಗಿರಿಯಲ್ಲಿ ಸಂಭ್ರಮದಿ ಗುಡಿಗಟ್ಟಿ
ಶೈಲಜಾಲಿಂಗನಾಲಿಂಗನೊಲುಮೆಯ ಮುಟ್ಟಿ
ಗಜಮುಖಿಗೆ ಷಣ್ಮುಖಿಗೆ ತೋರಿ ಕೊಂಡಾಡುತುಂ
ವಿಜಯಕಲಿ ವೀರಭದ್ರಂಗಲ್ಲಿ ತೋರುತುಂ

ನಮ್ಮ ತಂದೆಯ ಹಡೆದ ತಾಯವ್ವ ಎನುತಿರಲ್
ನಮ್ಮಮ್ಮಗಂ ಅತ್ತೆ ನಿಮ್ಮಮ್ಮನೆನುತಿರಲ್
ಅತ್ತೆಯೆಂದಂಜುತುಂ ಗಿರಿಜೆ ಹೆರಸಾರುತಿರೆ
ಹತ್ತಿರಿರ್ದಮ್ಮವ್ವೆ ತಾಯೆ ಬಾ ಎನುತಲಿರೆ
ನಿನ್ನ ತೊತ್ತಿನ ತೊತ್ತುವಾನೆನಿತರವಳಮ್ಮ
ನಿನ್ನ ಕರುಣೆಯ ಕೃಪೆಯದಾರ್ಗುಂಟೆ ಜಗದಮ್ಮ

ಎಂದು ಪಾರ್ವತಿಯರ್ಗೆ ಕೈಮುಗಿದು ಅಮ್ಮವ್ವೆ
ನಿಂದು ಸೈಗೆಡೆದಿರಲ್ಕೆತ್ತಿದಳು ಎಮ್ಮವ್ವೆ
ರುದ್ರಕನ್ನಿಕೆಯರೊಳಗೊಲ್ದಿರಿಸಿ ಹರ್ಷದಿಂ
ರುದ್ರಕನ್ನಿಕೆಯರೊಳಗಧಿಕತರ ಸುರಸದಿಂ
ಕಾರಿಕಾಲಮ್ಮೆ ವೈಜವ್ವೆಯೊತ್ತಿನೊಳಿರಿಸಿ
ಸಾರೆ ಮಂಗವ್ವೆ ಸುಗ್ಗಲದೇವಿಯರೊಳಿರಿಸಿ
ಎಸೆದನಾ ಹೇಮಗಿರಿಯರಸ ಸುಮ್ಮಾನದಿಂ
ಶಶಿಧರಂ ಕೈಲಾಸಪುರದೊಳಾನಂದದಿಂ
ಎಸೆವ ಪಂಪಾವತಿ ಮತಂಗಗಿರಿ ಮಧ್ಯದಿಂ
ಎಸೆವಳುನ್ಮಿಸಿದ [ಮು]ನ್ಮುಖತೀರ್ಥತೀರದಿಂ

ರಜತಗಿರಿ ಸಿಂಹಾಸನಾರೂಢನೊಪ್ಪಿದಂ
ಭಜಿಯಿಸುವ ಭಕ್ತರಾನಂದಮಯನೊಪ್ಪಿದಂ
ಅಭಯಕರಶುಭಚರಿತ ವಿಭವನಿಂತೊಪ್ಪಿದಂ
ತ್ರಿಭುವನಾಧಾರ ಲೋಕೈಕನಿಂತೊಪ್ಪಿದಂ
ಇಂಪೆಸೆವ ಸಂಪದದ ಪರಮನಿಂತೊಪ್ಪಿದಂ
ಪಂಪಾಂಬಿಕೆಯ ಮನೋವಾಸನಿಂತೊಪ್ಪಿದಂ

ಅನುಪಮಾನಂದಮಯ ತೇಜನಿಂತೊಪ್ಪಿದಂ
ಘನಮಹಿಮ ಹಂಪೆಯ ವಿರೂಪಾಕ್ಷನೊಪ್ಪಿದಂ ೩೮೮

ಅಮ್ಮವ್ವೆಯ ನಿಜಭಕ್ತಿಗೆ
ನಮ್ಮಯ್ಯಂ ಮೆಚ್ಚಿ ಮೆರೆದ ಕಥನವನೊರೆದಾಂ ।
ದಮ್ಮಯ್ಯ ಸಲಹುಗೆನ್ನಂ
ಸುಮ್ಮಾನದಿ ದೇವ ಹಂಪೆಯ ವಿರೂಪಾಕ್ಷಾ ॥

❖❖

# ೨೦. ವೈಜಕವ್ವೆಯ ರಗಳೆ

ಅರುಹಕುಲಕುಮುದ ಭಾಸ್ಕರ
ನರುಹದ್ವಿಪಸಿಂಹ ಹಂಪೆಯ ವಿರೂಪಾಕ್ಷಂ ।
ಶರಣರ್ ಜಯವೆನೆ ಮೆರೆದಂ
ಪರಿವಳಿಗೆಯ ವೈಜಕವ್ವೆಯಂ ಧಾರುಣಿಯೊಳ್ ॥

ಒಂದು ಶಿವಪುರಂ ವಿರಾಜಿಸಿರ್ಪುದುತ್ತರಾಸೆಯಲ್ಲಿ
ಇಂದುಧರನ ಹರನ ಶರಣವೃಂದದಿಂದಲೊಪ್ಪುತಲ್ಲಿ
ಶಿವನ ಭಕ್ತನೊರ್ವನಿಪ್ಪನಾತನರಸಿ ಪರಮಭಕ್ತೆ
ಭವನ ಭಾವಭರಿತಚರಿತೆ ಸರ್ವಲಕ್ಷಣ ಪ್ರಯುಕ್ತೆ
ಅಂತವರ್ಗೆ ಪುಟ್ಟಿದಳು ವಿವೇಕನಿಧಿಯೆನಿಪ್ಪ ಬಾಲೆ
ಕಂತುಹರನನೊಲಿಸಬಲ್ಲ ನಿರ್ವಿಕಾರಯುಕ್ತಶೀಲೆ
ನಾಮವಾಕೆಗೋಜೆವೆತ್ತ ವೈಜಕವ್ವೆಯೆಂಬುದಾಗೆ
ಸೋಮಧರನ ಕಿವಿಗೆ ಸವಿಗಳೀವ ಕರ್ಣಪೂರಮಾಗೆ
ಬೆಳೆವುತಿರ್ದಳಿಂದುಕಳೆಗೆ ಮುಖದ ಬೆಳಗನೀವುತಲ್ಲಿ
ಬಳೆವುತಿರ್ದಳಮಮ ನಿತ್ಯನೇಮದಚಲ ಭಕ್ತಿಯಲ್ಲಿ
ಬೆಳೆಯೆ ಬಾಲಲೀಲೆ ಕಳೆದು ಯೌವನಂ ತಳಿರ್ತು ತೋರೆ
ತೊಳಗುವಂಗರೇಖೆ ಕನಕಲತೆಯನಳಿದು ಕಳಿದು ಮೀರೆ
ಪದತಳಂ ಸರಾಗನಳಿನದಳದ ಕೆಂಪನೇಳಿಸುತ್ತೆ
ಮುದದೆ ಗುಲ್ಫಗಳ್ಸುವರ್ಣ ಘಟಿಕೆಯಂತೆ ರಂಜಿಸುತ್ತೆ
ಜಾನುದೇಶವಾನತರ್ಗನೂನ ಪದವನಿತ್ತು ತಣಿಪೆ
ಭೂನುತಂಗಳೂರುದಂಡವಲ್ಲಿ ಕದಳಿಯಪಳ್ಳನರಿಪೆ
ಕೃತಕಗಿರಿಯಸಿರಿಯ ನೆಳೆದು ಸೆಳೆದುಕೊಂಡ ಜಘನವೊಪ್ಪೆ
ಅತನುವಿಂಗೆ ಪೊಗುವಡಡ್ಡವಾದ ತೆರದೆ ತ್ರಿವಳಿಯೊಪ್ಪೆ

ಪೊಕ್ಕು ಗುಣ್ಪನರಿವಡತನುಗರಿದೆನಿಪ್ಪ ನಾಭಿಯೆಸೆಯೆ
ಮಿಕ್ಕು ಮೀರಿ ಸೈತನಾಗಿ ಸೂಸದಡರ್ದ ಬಾಸೆ ಮೆರೆಯೆ
ಮಿಸುಪ ಮೊಲೆ ಮನೋಜ ಕುಂಭಿಕುಂಭಯುಗಮನೆಯ್ದೆ ತೆಗಳೆ
ಎಸೆವ ತೋಳ ಮೊದಲನಂಗಖಡ್ಗಲತೆಯ ಹೊಗರನುಗುಳೆ
ವದನಮಂಡಲಂ ಮೃಗಾಂಕಬಿಂಬವಂ ನಗುತ್ತೆ ಪಳಿಯೆ
ಸುದತಿಯಕ್ಷಿ ಮದನಬಾಣದುದಯಮಮಂ ನಿಮಿರ್ಚಿ ಕಳೆಯೆ
ಕುಂತಳಂ ಕವರ್ತು ಕೊರ್ವಿ ಕುಸುಮಗಂಧದಿಂದೆ ಮೆರೆಯೆ

ಇಂತು ವೈಜಕವ್ವೆಗೊಪ್ಪಿ ಯೌವನಂ ಪೊದಳ್ದು ಮೆರೆಯೆ
ತಂದೆ ಕಂಡು ಮಗಳ ರೂಪ ಯೌನಕ್ಕೆ ನೇಹದಿಂದೆ
ಇಂದುಮುಖಿಗೆ ವರನನರಸವೇಳ್ಕುಮೆಂಬ ಚಿತ್ತದಿಂದೆ
ಇರುತಿರಲ್ಕೆ ಬಂದಳೂರ್ಗೆ ತನ್ನ ತಂಗಿ ನೋಡಲೆಂದು
ಪರಿವಳಿಗೆಯೊಳಿರ್ಪ ಜೈನನರಸಿ ಹರುಷದಿಂದೆ ಬಂದು
ಸುಖದೊಳಿರ್ದ ವೈಜಕವ್ವೆಯಿರವನಳ್ಕರಿಂದೆ ನೋಡಿ
ನಿಖಿಳ ಸಂಪದಕ್ಕೆ ನೆಲೆಯಿದಪ್ಪುದೆಂದು ಮತ್ತೆ ನೋಡಿ
ತನ್ನ ಪುತ್ರನಪ್ಪ ನೇಮಿಸೆಟ್ಟಿಗುಚಿತವೀಕೆಯೆಂದು
ಉನ್ನತಪ್ರಮೋದ ಯೌವನಂ ಸಮಾನವಪ್ಪುದೆಂದು
ನೆನೆದು ನೋಡಿ ನುಡಿದಳಣ್ಣನಲ್ಲಿ ನಲಿದು ಸಲುಗೆಯಿಂದೆ
ಮನದೊಳುತ್ಸವಂಬಡುತ್ತೆ ಬೇಡಿದಳ್ ವಿಮೋಹದಿಂದೆ
ನಿನ್ನ ಮಗಳನೆನ್ನ ನಿಜತನೂಭವಂಗೆ ಕುಡುವುದೆಂದು
ಸನ್ನುತಂ ಸಲಕ್ಷಣಂ ವರಾನ್ವಿತ್ವಂ ಸಮಾನವೆಂದು
ನುಡಿಯೆ ಕೇಳ್ದು ಸೋದರಳಿಯನಾದಡೇನು ಭವಿಗೆ ಕುಡೆನು
ಮೃಡನ ಭಕ್ತರಾವು ಸವಣಗುನ್ನಿಗಳಿಗೆ ಹೆಣ್ಣ ಕುಡೆನು
ಎಂಬ ನುಡಿಗೆ ತಂಗಿ ಒಟ್ಟಿವೊರಲಿಯಳುತೆ ಬೇಡಿ ಕಾಡಿ
ನಂಬಿ ನಚ್ಚಿ ಬೆನ್ನ ಬಂದ ಸೋದ[ರಿ]ಕ್ಕೆ ಲೇಸುಮಾಡಿ
ನುಡಿದಿರಪ್ಪುದಪ್ಪುದೆನ್ನ ಸೊಸೆಯನಿಂತು ಬಿಡುವಳಲ್ಲ
ಕುಡದೆ ನಿಂದಡನ್ನ ತನುವನಳಿವಳಲ್ಲಡುಳಿವಳಲ್ಲ
ಎಂದು ನುಡಿವುತೊಂದುಪಾಸವೆರಡುಪಾಸವಿರ್ದಳಲ್ಲಿ
ಅಂದು ನೆರೆಯ ಹೊರೆಯ ನಂಟರಿಷ್ಟರೆಲ್ಲ ನೆರೆವುತಲ್ಲಿ
ನೋಡ ನಿನ್ನ ತಂಗಿ ಪಟ್ಟಿರುತ್ತೆ ಸತ್ತಡಕಟ ಲೇಸೆ
ಬೇಡ ಜೈನರಾದಡೇನು ಮಗಳನೀವುದೀವು[ದೈ]ಸೆ
ಪಿರಿಯರಲ್ಲಿ ನಂಟರಲ್ಲಿ ನಲ್ಲರಲ್ಲಿ ಚಲವಿದೇಕೆ
ಗುರುವಿನಲ್ಲಿ ಗೋತ್ರದಲ್ಲಿ ತಂದೆಯಲ್ಲಿ ಬಲ್ಪಿದೇಕೆ

ಎಂದು ಪೇಳೆ ಭಕ್ತನಲ್ಲಿ ಕಂದಿ ಕುಂದಿ ಮನವನಿಳಿಪಿ
ನೊಂದು ಸುಯ್ದೊಡಂಬಡುತ್ತೆ ಬಂಧುಜನವನೆಯ್ದೆ ಕಳುಪಿ
ಇಹದ ಕೀರ್ತಿಗಂಜಿ ಪರದ ಗತಿಯನೆಯ್ದೆ ಮರೆದು ಕಳೆದು
ಅಹಹ ಕೊಡುವೆನೆಂಬ ಬುದ್ಧಿ ಚಿತ್ತದೊಳಗೆ ಬೇಗ ಹೊಳೆದು
ಕೊಟ್ಟೆನೇಳು ತಂಗಿ ಬ[ಟ್ಟೆ]ಗುತ್ತತನವಿದೇವುದೆಂದು
ಕೊಟ್ಟೆನವ್ವ ಪುತ್ರಿಯಂ ಸಧರ್ಮದಿ[ಂ]ದೆ ರಕ್ಷಿಸೆಂದು
ನುಡಿಯೆ ಪುಳಕವೇಳಲೆದ್ದು ಪರಮಹರುಷಚಿತ್ತೆಯಾಗಿ
ಒಡನೆ ಹುಟ್ಟಿದಣ್ಣನಂ ಸರಾಗದಿಂದವಪ್ಪಿ ಪೋಗಿ
ಕರೆಯಿಸಲ್ಕೆ ಬಂದ ಜೋಯಿಸಂಗೆ ದಕ್ಷಿಣೆಗಳನ್ನಿತ್ತು
ಹರುಷದಿಂದೆ ಲಗ್ನಮಂ ಸಮೀಪದಿನದೊಳೊಲಿದು ಹೊತ್ತು
ಇರೆ ವಿವಾಹ ಮಂಟಪಂ ಸವಿಸ್ತರಂ ನಿಮಿರ್ಚಿತಲ್ಲಿ
ಅರರೆ ತಳಿರ ತೋರಣಂಗಳೊಪ್ಪಿ ನೆಗೆದವಲ್ಲಿಗಲ್ಲಿ
ನಡುವೆ ವೇದಿಕಾವಿಳಾಸವಾಗಳೊಪ್ಪುತಿರ್ದವಲ್ಲಿ
ಮಡದಿಯರ್ಕಳಿಂಡೆ ದಿಂಡೆ ತೊಂಡಿಲಿಂದ ಮರೆಯಲಲ್ಲಿ

ಇಂತು ಮದುವೆಯುತ್ಸವಂ ವಿರಾಜಿಸುತ್ತಮಿರ್ದುದಿತ್ತ
ಕಂತು ಹರನ ಭಕ್ತೆ ವೈಜಕವ್ವೆ ನಿತ್ಯ ನೇಮದತ್ತ
ಬಂದು ಶಿವನ ಮುಂದೆ ನಿಂದು ಸೂಸಿ ಸುಯ್ದು ಘಾಸಿಯಾಗಿ
ಇಂದುಮೌಳಿ ಕರುಣಿಸೆನುತೆ ನಿತ್ಯನೇಮಹಸ್ತೆಯಾಗಿ
ದೇವ ಭವಿಗೆ ಮದುವೆ ಬಂದು ತಾಪಿಸಿರ್ದುದೇವೆನಯ್ಯ
ಭಾವಿಸಲ್ಕೆ ಭವಿಯ ಸೋಂಕನಾವ ತೆರದೊಳಾರ್ಪೆನಯ್ಯ
ತಿಳಿವಿನೊಳಗೆ ಪುಟ್ಟಿ ಮರವೆಯೊಳಗದೆಂತು ಪುಗುವೆನಯ್ಯ
ಬೆಳಗಿನೊಳಗೆ ಬೆಳೆದು ತಮದೊಳೆಂತು ಪೋಗಿ ಬೀಳ್ವೆನಯ್ಯ
ನಿಮ್ಮನರಿಯದಚ್ಚ ಬಚ್ಚಬರಿಯ ಭವಿಗಳಲ್ಲಿ ದೇವ
ನಿಮ್ಮನೆಂತು ನೆನೆವೆನೆಂತು ನೋಳ್ಪೆನೆಂತದೆಂತು ದೇವ
ಏಕೆ ಭಕ್ತರೊಳಗೆ ಬರಿಸಿ ಭವಿಗಳೊಳಗೆ ನೂಂಕಿದಪ್ಪೆ
ಏಕೆ ನಿಮ್ಮನರಿಪಿಯರಿಯಲೀಯದಿರಿದು ನೋಡಿದಪ್ಪೆ
ಕರುಣಿಯೆಂಬರಭವ ಕರುಣವಿಲ್ಲದಂತಿರಿರ್ಪಿರಯ್ಯ
ತರುಣಿಯೊರಲುತಿದ್ದೆನೆನ್ನನಕ್ಕಾಟ ವಿಚಾರಿಸಯ್ಯ
ದೇವ ಚಂದ್ರಮೌಳಿ ಶೂಲಿ ಗರಳಕಂಠ ಕರುಣಿಸಯ್ಯ
ದೇವ ಸಲಿಲಶಯನನಯನಚರಣಕಮಲ ಕರುಣಿಸಯ್ಯ
ಅಯ್ಯಲಾ ಕೃಪಾಳುವೆ ದಯಾಳುವೇ ನಿರೀಕ್ಷಿಸಯ್ಯ
ಅಯ್ಯಲಾ ಸದಾಶಿವಾ ಶಿವಾಧವಾ ಪರೀಕ್ಷಿಸಯ್ಯ

ಎಂದು ಪುಯ್ಯಲಿಡುವ ಪುಯ್ಯಲಂ ಪುರಾರಿಯಾಲಿಸುತ್ತೆ
ಬಂದು ವೈಜಕವ್ವೆಗೊಂದು ಮರಹನಲ್ಲಿ ಕೀಲಿಸುತ್ತೆ
ಕನಸಿನೊಳಗೆ ನಿಂದು ವೈಜಕವ್ವೆ ನಿನಗೆ ಚಿಂತೆ ಬೇಡ
ಅನುದಿನಂ ಸಮೀಪದಿಂದವಗಲೆನವ್ವ ನಂಬು ನೋಡ
ಮದುವೆಯಾಗಿ ಪೋಗು ಮಗಳೆ ಮೆರೆವೆನಲ್ಲಿ ನಿನ್ನನೆಂದು
ಮದನವೈರಿ ಕರುಣದಿಂದೆ ನಿಂದು ಬೆಸಸಿ ಪೋಗಲಂದು
ಮೆಲ್ಲನೆಚ್ಚರೊಳಗೆ ಸಂದು ವೈಜಕವ್ವೆ ತಿಳಿದು ನೋಡಿ
ಅಲ್ಲಗಲ್ಲಿಗಡರ್ದು ನಳನಳಿಪ್ಪ ಪುಳಕದೊಳಗೆ ಕೂಡಿ
ಶಂಭು ಬೆಸಸಿತಕ್ಕೆ ಮನವನಿಂಬುಗೆಯ್ದು ನಂಬಿ ನಚ್ಚಿ
ದಂಭರಹಿತೆ ಜೈನರಹಿತೆ ಶರ್ವಸಹಿತೆ ಮೆಚ್ಚಿ ಮಚ್ಚಿ

ಇರೆ ವಿವಾಹದುತ್ಸವಂ ವಿರಾಜಿಸುತ್ತಮಿರ್ದುದಲ್ಲಿ
ತರುಣಿಯರ್ಕಳೆಸೆವ ಸಿಂಗರಂಗಳೊಪ್ಪುತಿರ್ದುದಲ್ಲಿ
ಆಗಳೆಲ್ಲ ತೆರದ ಸಂಭ್ರಮಂಗಳೊಳಗೆ ನಲಿದು ಬಂದು
ರಾಗದಿಂದೆ ಮದುವೆ ಮಂಟಪಾಂತರಂಗಳೊಳಗೆ ನಿಂದು
ಸಕಲ ವಸ್ತುನಿಕರಹಸ್ತವಾದ ಬಂಧುಜನಗಳೊಳಗೆ
ಸುಕರವೆನಿಪ ಮುಕುರಕಳಸ ಲಲಿತ ಲಲನೆಯರ್ಕಳೊಳಗೆ
ವರನಿರಲ್ಕೆ ವೈಜಕವ್ವೆಗೊಪ್ಪೆ ಸಿಂಗರಂಗಳಾಗೆ
ತರುಣಿಯರ್ಕಳಿಂಬುಗೊಂಡು ಬರ್ಪ ಗಾಡಿ ಗಮಕವಾಗೆ
ತಂದು ತಂಡುಲಂಗಳೊಳಗೆ ಬೇರೆ ಬೇರೆ ನಿಲಿಸಲಲ್ಲಿ
ಅಂದು ನಡುವೆ ತೆರೆ ವಿರಾಜಿಸಲ್ಕೆ ಬಂಧುನಿಕರವಲ್ಲಿ
ಆಯತಪ್ರಣಾದಚಿತ್ತರಾಲಿಸುತ್ತೆ ನೋಡೆ ನೋಡೆ
ಜೋಯಿಸನ ಮುಹೂರ್ತವಚನದೊಡನೆ ತೆರೆಗಳಲ್ಲಿ ಕೂಡೆ
ವೈಜಕವ್ವೆಗಳಿಗೆ ಸೋಲ್ತು ನೇಮಿಸೆಟ್ಟಿಯೊಪ್ಪವಾಗೆ
ಮೂಜಗಂಗಳರಿಯೆ ಮುಂದೆ ಮೆರೆವುದಕ್ಕೆ ಚಿಹ್ನಮಾಗೆ
ವರ ಸುವಾಸಿನೀಜನಂಗಳೆತ್ತುವಾರತಿಗಳು ಮೆರೆಯೆ
ಪರಸುತಿಪ್ಪ ಪರಕೆ ಮಂಗಳಂಗಳಂ ನಿಮಿರ್ಚೆ ಕರೆಯೆ
ಇಂತು ಮದುವೆ ಬೆಳೆವುತಿರೆ ಚತುರ್ಥಿಯಂ ನಿಮಿರ್ಚಿ ಕಳೆದು
ಮುಂತೆ ಪರಿವಳಿಗೆಗೆ ನಡೆದು ಪೊಕ್ಕು ಸುಖವನೊಲಿದು ತಳೆದು
ತಮದ ನಡುವೆ ನಿರ್ಮಳ ಪ್ರಭಾಕರಾಂಶುವಿರ್ಪ ತೆರದೆ
ಅಮಮ ತರುಗಳೊಳಗೆ ಚಂದನಂ ವಿರಾಜಿಸಿರ್ಪ ತೆರದೆ
ನೇಮಿಸೆಟ್ಟಿಯೊಡನೆ ವೈಜಕವ್ವೆ ಸುಖದೊಳೊಂದಿರುತ್ತೆ
ಕಾಮಹರನನೊಳಗೆ ನೆನೆಯುತೊಳಗೆ ಕಂಡು ಪೂಜಿಸುತ್ತೆ

ಭಸಿತ ರುದ್ರರಕ್ಕೆಯಂ ಮನೋಶರೀರದೊಳಗೆ ತಳೆದು
ಪುಸಿವು ಕಾಮವಾಸೆ ಲೋಭವೆಂಬ ಕಸವನುಡುಗಿ ಕಳೆದು
ಹೃದಯನಿಳಯ ಕಮಳವಳಯ ಕರ್ಣಿಕಾ ಸುಪೀಠದೊಳಗೆ
ಸದಮಳ ಪ್ರಕಾಶರಾಶಿ ರೂಪಲಿಂಗವೊಳಗೆ ತೊಳಗೆ
ಮನದ ಪುಷ್ಪಪೂಜೆ ನೆಗಳೆ ನೇಹದುಸುರ ಧೂಪವೆಸೆಯೆ
ನೆನಹಿನರಿವಿನಚ್ಚ ಬೆಳಗಿನ ಪ್ರಕಾಶದೀಪವೆಸೆಯೆ
ಭಕ್ತಿಯೋಗರಂ ವಿರಾಜಿಸಲ್ಕೆ ಶಿವನನೆಯ್ದೆ ತಣಿಸಿ
ಮುಕ್ತಿ ಸುಖದೊಳಿಂತು ಬಾಳುತಿರ್ಪಳಬಳೆ ಭವವನಿಳಿಪಿ
ಜಲದ ಜಲಜದಂತೆ ಪವನನಂತೆ ತರಣಿ ಕಿರಣದಂತೆ
ತಿಲದ ತೈಲದಂತೆ ನನ್ನಿಯಂತೆಯಾತ್ಮ ತೇಜದಂತೆ
ಜೈನರೊಳಗೆ ಹೊದ್ದಿ ಹೊದ್ದದಿರ್ಪಳಮಮ ನಿರ್ಮಳಾಂಗಿ
ದಾನನಿಧಿ ನವೀನಭಕ್ತೆ ಮಾನಶೀಲೆ ಸುರುಚಿರಾಂಗಿ
ವಿಮಳಭಕ್ತೆ ಶಾಂತಿಯುಕ್ತ ಯತಿವಿರಕ್ತೆ ವೈಜಕವ್ವೆ
ಅಮಮ ಗುಪ್ತೆ ಭವಸಮಾಪ್ತೆ ಶೈವಶಕ್ತೆ ವೈಜಕವ್ವೆ

ಇಂತೆನಿಪ್ಪ ಗುಣಗಣಕ್ಕೆ ನಿಳಯಮೆನಿಸಿ ನೆನೆವುತಿರ್ದು
ಸಂತತಂ ಪುರಾರಿಯಂ ಸರಾಗದಿಂದೆ ಬಯಸುತಿರ್ದು
ದೇವ ಭವಿಗಳೊಳಗಣಿರವಿದೆಂದು ಮಾಣ್ಬುದೆಂದೆನುತ್ತೆ
ದೇವ ನಿನ್ನನೆನ್ನ ಕಣ್ಗಳಾರೆ ಕಾಬೆನೆಂದೆನುತ್ತೆ
ದೇವ ಚಿತ್ತವೃತ್ತಿ ತಣಿಯೆ ಪೂಜಿಸುವೆನದೆಂದೆನುತ್ತೆ
ದೇವ ಜೈನರೊಳಗೆ ಸಿಲ್ಕಿದೆಂ ಪುರಾರಿ ಬಿಡಿಸೆನುತ್ತೆ
ಇಂತು ಶಂಕರಂಗೆ ಸಾರಿ ತೋರಿ ಮೀರಿ ದೂರಿಸುತ್ತೆ
ಚಿಂತೆ ಬಲಿಯೆ ಭಕ್ತಿ ನಲಿಯೆ ಶಂಭುವೊಲಿಯೆ ಭಾವಿಸುತ್ತೆ
ಇರಲಿರಲ್ಕೆ ನೇಮಿಸೆಟ್ಟಿ ಹರುಷದಿಂದೆ ಮನೆಗೆ ಬಂದು
ಕರೆದು ವೈಜಿ ಕೇಳ ಸಕಳ ಋಷಿಯರೆಲ್ಲ ನೆರೆದುಬಂದು
ಚರಿಗೆ ಮಾಡಿದಪ್ಪರಿಲ್ಲಿ ಬೋನಮಂ ವಿರಾಜಿಸೆಂದು
ಸರಸ ವಸ್ತುನಿಕರಮಂ ಸರಾಗದಿಂದೆ ಮುಂದೆ ತಂದು
ತೋರಿ ಕೊಟ್ಟು ವೈಜಕವ್ವೆಗಿನಿದೆನಿಪ್ಪ ಮಾತನಾಡೆ
ಮೀರದಂತೆ ಮುಳಿಯದಂತೆ ಬೋಳವಣೆಯನೆಯ್ದೆ ಕೂಡೆ
ಮಾಡುತಿರ್ದಳಲ್ಲಿ ಬೋನಮಂ ಮಹೇಶಭಕ್ತಿಯುಕ್ತೆ
ನೋಡೆ ನೋಡೆ ಮೃಡ ವಿವೇಕನಿಧಿ ದಯಾಂಬುನಿಧಿ ವಿರಕ್ತೆ
ಹಾಲಲವುಗು ಹಾಲಲುಂಡೆ ಹಾಲಮಂಡಿಗೆಗಳನಟ್ಟು
ಮೇಲೆನಿಪ್ಪ ತರಗು ಹೊಸಣಂಬುಮಂ ತೆರಳ್ಕೆಯಿಟ್ಟು

ಲಡ್ಡುಗೆಗಳನೆಸೆವ ಬೀಸುವೂರಿಗೆಗಳನೆಯ್ದೆ ಸಾರ್ಚಿ
ಇಡ್ಡಲಿಗೆಯನಣ್ಣೆವಾಲ ಪಾಯಸಂಗಳಂ ನಿಮಿರ್ಚಿ
ಚಂದ್ರಿಕಾ ಸುಬೀಜವೆನಿಪ ಕಳವೆಯೋಗರಂಗಳಾಗೆ
ಸಾಂದ್ರರುಚಿಯ ಕಂಪನಾಂತ ಶಾಕಪಾಕತತಿಯುಮಾಗೆ
ಕಿವಿಗೆ ಕಣ್ಗೆ ಜಿಹ್ವೆಗೆಯ್ದೆ ನಾಸಿಕಕ್ಕೆ ತನುಗೆ ಮೆರೆವ
ರವದ ಚೆಲ್ವ ರುಚಿ ಸುಗಂಧ ಮೃದುಗಳಿಂದೆ ಸವಿಗಳೊರೆವ
ಮಧುರವಾಮ್ಲ ಕಟುಕ ತಿಕ್ತ ಲವಣ ಕೈಪೆವೆಸರನುಳ್ಳ
ಮಧುಗೆ ವಿಧುಗೆ ಸುಧೆಗೆ ಮಿಗಿಲೆನಿಪ್ಪ ರುಚಿಯ ರೂಪನುಳ್ಳ
ಸಕಳ ಸುಖವನಾಂತು ಷಡ್ರಸಾಯನಂಗಳೊಪ್ಪೆ ಮಾಡಿ
ಸುಕರಚಿತ್ತೆ ಸಚ್ಚರಿತ್ರೆ ವೈಜಕವ್ವೆ ಮಾಡಿ ನೋಡಿ
ಅಕ್ಕಟಾ ಸುವಸ್ತುವಂ ಮಹೇಶ ನಿನಗೆ ಸಲಿಸಲಿಲ್ಲ
ತಕ್ಕ ಭಕ್ತವಿತತಿಗೆಯ್ದೆ ತವಕದಿಂದೆ ತಣಿಸಲಿಲ್ಲ

ಇಂತು ಮಾಡಿದಯ್ಯಯೆನ್ನ ತಂದೆ ಭವಿಗಳಲ್ಲಿ ಕೂಡಿ
ಕಂತುವೈರಿ ನಿಮಗೆ ಭಕ್ತಿಮಾಡಲಿಲ್ಲದಂತೆ ಮಾಡಿ
ಇಂತಿವಂ ಪುರಾರಿ ನಿಮ್ಮನರಿಯದಚ್ಚ ಪಾಪಿಗಳ್ಗೆ
ಎಂತು ಮಾಡಿ ನೋಡಿ ಕೊಡುವೆನಯ್ಯ ಸವಣಗುನ್ನಿಗಳ್ಗೆ
ಎಂದಳಲ್ದು ಕಂದಿ ಕುಂದಿ ನೊಂದು ಕಣ್ಣನೀರನಿಕ್ಕೆ
ಬಂದು ತಾಗಿತಭವನಂ ಸಮರ್ಥ ಸತ್ಯ ಭಕ್ತಿಯಕ್ಕೆ
ತಾಗೆ ಶಂಭುವರಿದು ಮೆಚ್ಚಿ ಕರುಣದಿಂದೆ ಗಿರಿಜೆಗೆಂದ
ರಾಗವಲರೆ ನುಡಿದನಲ್ಲಿ ಕೇಳ ನಿನಗೆ ಪೇಳ್ವೆನೊಂದ
ವೈಜಕವ್ವೆಯಕ್ಕೆಯಂ ಸಡಿಲ್ಚಿಕೊಂಡು ಬರ್ಪೆನೆಂದು
ರಾಜಿಸುತ್ತೆ ದೇವ ಶರಣವೇಷದಿಂ ಬರುತ್ತವಂದು
ದಶಭುಜಂಗಳಂ ಭುಜದ್ವಯಂಗಳಾಗೆ ನಿರ್ಮಿಸುತ್ತೆ
ಎಸೆವ ಪಂಚಮುಖವನೊಂದು ವದನದೊಳಗೆ ರಂಜಿಸುತ್ತೆ
ಹರೆಯನಲ್ಲಿ ಕಿರಿಯ ಜೆಡೆಗೆ ಮಿರುಪ ಕುಸುಮವಾಗಿ ಮಾಡಿ
ಮೆರೆವ ಕೊರಲ ಗರಳಮಂ ಶರೀರವರ್ಣದೊಳಗೆ ಕೂಡಿ
ಪುಲಿದೊವಲ್ವಿಭೂತಿ ಭೂಷಣಂ ವಿಶೇಷಮಾಗಲೊಪ್ಪೆ
ನಲಿದು ಕುಣಿವ ಕುಂಡಲಂಗಳುಭಯ ಗಂಡತಟದೊಳೊಪ್ಪೆ
ಸುಲಿದ ಪಲ್ಲ ಬೆಳಪ ಕಣ್ಗಳಭವನಲ್ಲಿ ಚೆಲ್ವುಗೊಂಡು
ನಲಿವುತಜಕಪಾಲಪಾತ್ರವೊಪ್ಪೆ ಕರದೊಳಾಂತುಕೊಂಡು
ಬಂದು ಪರಿವಳಿಗೆಯ ನೇಮಿಸೆಟ್ಟಿಯಿಪ್ಪ ಮನೆಯ ಮುಂದೆ
ನಿಂದು ವೈಜಕವ್ವೆ ಕಾಣ್ಬ ಕೇಳ್ವ ತೆರದೆ ಕರುಣದಿಂದೆ

ಭವನ ವೇಷವಚ್ಚಶರಣ ವೇಷದಿಂದೆ ರಂಜಿಸುತ್ತೆ
ಶಿವನ ಕರುಣವಕ್ಕೆ ನಿಮಗೆ ಭಿಕ್ಷೆಯೀವುದೆಮಗೆನುತ್ತೆ

ಇರೆ ಸದರ್ಥೆ ವೈಜಕವ್ವೆ ಹರುಷದಿಂದೆ ಕೇಳುತಂದು
ಸರವನಾಲಿಸುತ್ತೆ ಕಿವಿ[ಯೆ] ಕಣ್ಗಳಾದ ತೆರದೆ ಬಂದು
ನೆನೆವ ಮನವೆ ಕಾಮಧೇನುವಾದ ತೆರದೆ ಬಂದಿರಯ್ಯ
ಮನದ ಬಯಕೆ ಭಾವಿಸಲ್ಕೆ ರೂಪುಗೊಂಡ ತೆರದೊಳಯ್ಯ
ಎನುತೆ ಪುಳಕಿಸುತ್ತೆ ಕಂಪಿಸುತ್ತೆ ಪದದ ಮೇಲೆ ಬಿದ್ದು
ವಿನುತಭಕ್ತೆ ಹರುಷಚಿತ್ತೆಯಾಗಿ ಬೇಗಿ ಮೆಲ್ಲನೆದ್ದು
ದೇವ ಪಾತ್ರೆ ಕಿರಿದು ವಸ್ತು ಪಿರಿದದೆಂತು ಮಾಳ್ಪೆನೆಂದು
ಭಾವಭಕ್ತಿಭರಿತೆ ತೀವುತಿರ್ದಳಲ್ಲಿ ತಂದು ತಂದು
ತಂದು ತೀವಲೊಳಕೊಳುತ್ತವಿರ್ದುದಲ್ಲಿ ಕಿರಿಯಪಾತ್ರೆ
ಅಂದು ಕೌತುಕಂಬಡುತ್ತವಿಕ್ಕಿದಳ್ ಸರೋಜನೇತ್ರೆ
ಒಳಗೆ ತೀರೆ ಪಾತ್ರೆ ತೀವೆ ವೈಜಕವ್ವೆ ನೋಡಿ ನಲಿದು
ಎಳಸಿ ಹಿಗ್ಗಿ ಬಳಸಿ ಹೆಚ್ಚಿ ನಚ್ಚಿ ಮಚ್ಚಿ ಪವಣನರಿದು
ದೇವ ಪೋಗವೇಳ್ಕುಧಭವ ಕರುಣಿಸಿನ್ನಿರಲ್ಕೆವೇಡ
ದೇವ ಮತ್ತೆ ಭವಿಗಳಿಲ್ಲಿ ಬಂದು ಸುಳಿಯೆ ಕಾಣಬೇಡ
ಎನೆ ವಿಭೂತಿಯಂ ಕೊಡುತ್ತೆ ಮಾತನಾಡಿ ಪೊತ್ತುಗಳೆದು
ತನು ಸುರುಳ್ದುದೇಕೆ ವೈಜಕವ್ವೆ ನಿನಗೆ ಚಿಂತೆ ಪಿರಿದು
ಎನುತಿರಲ್ಕೆ ಬರುತೆ ನೇಮಿಸೆಟ್ಟಿ ರಿಸಿಯರೆಲ್ಲರಂದು
ಮನದೊಳಗೆ ವಿರೋಧದಿಂದೆ ನೋಡೆ ನೋಡೆ ನೆಗೆದನಂದು
ನೆಗೆಯೆ ಋಷಿಯರೆಲ್ಲ ಮುಟ್ಟುಪಡವಿದಾದುದೊಲ್ಲೆವೆಂದು
ಬಗೆಯೊಳತಿ ವಿಷಾದವೇರಿ ನೊಂದು ತಿರುಗಿ ಪೋಗಲಂದು
ಮನೆಗೆ ಬಂದು ನೇಮಿಸೆಟ್ಟಿ ಮುನಿದು ಸುಯ್ದು ನುಡಿದನಂದು
ವನಿತೆ ನೀನಿದೇಕೆ ಇಂತು ಮಾಡಿಯೆನ್ನನಿರಿದೆಯೆಂದು
ರಿಸಿಯರೋಗರಂಗಳಂ ತಪಸ್ವಿಗಿಕ್ಕಿ ಕೆಡಿಸಿ ಕಳೆದೆ
ಹೊಸೆದ ಹೂವಿನಂತೆ ರಿಸಿಯರೆಲ್ಲ ಪಸಿದು ಪೋದರುರದೆ
ಗೊರವರೆಂಜಲಾಯ್ತು ಮುಟ್ಟುಪಡವನಿಂತು ಮಾಡಿ ನಿಂದೆ
ಅರುಹನ ವ್ರತಕ್ಕೆ ಹೊಲ್ಲಗೆಯ್ದು ಕುಂದನಿಂದು ತಂದೆ

ಎಂದ ನೇಮಿಸೆಟ್ಟಿಗಂದು ನುಡಿದಳೆಮ್ಮ ವೈಜಕವ್ವೆ
ಇಂದುಧರನ ಭಕ್ತಿಯುಕ್ತೆ ನಿಜದ ನೀರೆ ವೈಜಕವ್ವೆ
ಶಿವನ ನೊಸಲನಯನದೆಂಜಲೆಂಬುದರಿಯ ಲೋಕವೆಲ್ಲ

ಭವನ ಕರುಣದಿಂದವಿಪ್ಪುದೆಂಬುದರಿಯ ಭುವನವೆಲ್ಲ
ನೇಮಿಸೆಟ್ಟಿ ನೀನದಕ್ಕೆ ಮರುಳನಾಗಿ ಕೆಟ್ಟು ನುಡಿದೆ
ಭೂಮಿಯೊಳಗೆಯರುಹನೆಂದದಾರದೆಲ್ಲಿ ಬರಿದೆ ಮುನಿವೆ
ವೇದದೊಳಗೆ ಶಾಸ್ತ್ರದೊಳಗೆ ನೋಡಲಿಲ್ಲ ನುಡಿಯಲಿಲ್ಲ
ವಾದಿದೇವರಾದಿಯಿಲ್ಲ ಹೇಳಲಿಲ್ಲ ಕೇಳಲಿಲ್ಲ
ಬಯಲ ಬರಿಯ ಬೊಂಬೆಗಳಿಗೆ ಭಕ್ತಿಮಾಡಿ ಮರುಗಲೇಕೆ
ಅಯಶವಿಹದ ಪರದ ನರಕ ಬರಿದೆ ಕೆಟ್ಟು ಪೋಗಲೇಕೆ
ಎಂದ ವೈಜಕವ್ವೆಗುತ್ತರಕ್ಕೆ ತೆರಹುಗಾಣದಿರ್ದು
ನೊಂದು ನೇಮಿಸೆಟ್ಟಿ ಕೋಪದಿಂದೆ ಬಂದು ಹತ್ತೆ ಸಾರ್ದು
ತನ್ನ ಭಾಗ್ಯಕುಸುಮಮಾಲೆಗಲಸಿ ಪೊಸೆದು ಬಿಸುಡುವಂತೆ
ತನ್ನ ಪುಣ್ಯಫಲವನಂದು ಜಡಿದು ಘಾಸಿಮಾಡುವಂತೆ
ಪಾಪಿ ಮುಟ್ಟೆ ಬಡಿದನಲ್ಲಿ ವೈಜಕವ್ವೆ ಸೆಡೆದು ನೋಯೆ
ಕೋಪಿ ಬಡಿದನಲ್ಲಿ ರಜತಗಿರಿಯೊಳಭವನೆಯ್ದೆ ನೋಯೆ
ಬಡಿಯೆ ವೈಜಕವ್ವೆ ಶಿವನನಂದು ನೆನೆವುತಿರ್ದಳಲ್ಲಿ
ಮೃಡನನಂತರಂಗದೊಳಗೆ ಭಾವಿಸುತ್ತಲಿರ್ದಳಲ್ಲಿ

ಇರಲಿರಲ್ಕೆ ಭಕ್ತೆ ನೋಯೆ ನೋಡಲಾರೆನೆಂಬ ತೆರದೆ
ತರಣಿಯಿಳಿದನಪರಜಳಧಿವಳಯದೊಳಗೆ ಮೆಲ್ಲನುರದೆ
ಇಳಿಯೆ ವೈಜಕವ್ವೆಯೊಡನೆ ವೇಳೆಗೊಂಡ ತೆರದೆ ಬಳಲೆ
ನಳಿನ ಸಮಿತಿ ಮುಗಿಯೆ ಕುಮುದವಲರೆ ಚಕ್ರವಾಕವಗಲೆ
ಕವಿಯೆ ತಮವನಂತರಂ ಸುತಾರಕಾಳಿ ಫಳಿಲನೊಗೆಯೆ
ನವಕರಂಗಳಿಂದ ಬೆಳಗುತೋಷಧೀಶನಂದು ನೆಗೆಯೆ
ವೈಜಕವ್ವೆ ನೊಂದು ಕಂದಿ ಕುಂದಿ ಮಧ್ಯನಿಶಿಯೊಳೆಯ್ದೆ
ರಾಜಶೇಖರಂಗೆ ಪುಯ್ಯಲಿಕ್ಕೆ ನೋವು ಶಿವನನೆಯ್ದೆ
ಕನಸಿನಲ್ಲಿ ಮುನ್ನ ಬಂದ ತೆರದೆ ಶಂಭುವೊಲಿದು ಬಂದು
ಮನದ ಮೊನೆಯ ಕೊನೆಯ ಭಾವದಚಲ ದೀಪ್ತಿಯೊಳಗೆ ನಿಂದು
ನಿನಗೆ ಚಿಂತೆ ಬೇಡ ಬೇಡ ವೈಜಕವ್ವೆ ನಾಳೆ ನೋಡ
ಜಿನನ ಶಿರವನೊಡೆದು ಜಡಿದು ಮೂಡಿ ನಿಲುವೆನಂಜಬೇಡ
ಎಂದು ಬೆಸಸಿ ಪೋಗೆ ಮೆಲ್ಲನೆಚ್ಚರೊಳಗೆ ಸಂದು ತಿಳಿದು
ಇಂದುಧರನ ಕೃಪೆಯಿದೆಂದು ಹರುಷಚಿತ್ತೆ ಮನದೊಳರಿದು
ಇರೆ ಪುರಾರಿ ಜಿನನನೊಡೆದು ಮೂಡುವುದನೆ ನೋಳ್ಪೆನೆಂದೆ
ತರಣಿಯೊಗೆದನಲ್ಲಿ ವೈಜಕವ್ವೆಗಿತ್ತ ನಲಿವನಂದೆ
ಅ[ರುಹ]ತೆಲ್ಲರರಿಯ[ಲೆ]ಂದು ಭಸತಮಂ ತೆರಳ್ಚಿ ಪೂಸಿ

ಅರೆವರುಳ್ಗಳೆನಿಪ ಜೈನ ಮಲಿನ ಕುಲದ ಕಲೆಗೆ ಹೇಸಿ
ಸುಲಿದ ಪಲ್ಲ ಸುಲಲಿತಾಂಗಿ ಧವಳವಸನದಮೃತಮೂರ್ತಿ
ಛಲದ ಲಲನೆ ನಲವಿನೊಲ[ವೆ] ಶಿವನ ಭವನ ಭುವನಕೀರ್ತಿ
ವೈಜಕವ್ವೆ ನಿಳಯದೊಳಗೆ ಸುಖದೊಳೊಪ್ಪುತಿರ್ದಳಿತ್ತ
ರಾಜಿಸುತ್ತೆ ಧರಣಿಯೊಳಗೆ ಜೈನರೆಲ್ಲ ಬಸದಿಯತ್ತ
ಬಂದು ಕದವನೊತ್ತಿ ಹೋಗದಿರ್ದಡಲ್ಲಿ ಸವಣರೆಲ್ಲ
ನಿಂದು ಕೌತುಕಂಬಡುತ್ತೆ ವಿಕೃತಪವೇಷನಿಹಿತರೆಲ್ಲ
ಹಾರೆ ದಬ್ಬುಕಂಗಳಿಂದೆ ಒತ್ತಿ ಒತ್ತಿ ನೂಂಕಿ ಸೆಡೆಯೆ
ಮೇರೆಯಿಲ್ಲದಚಲ ಕಠಿಣ ತರುಗಳಿಂದೆ ಒತ್ತಿ ಕೆಡೆಯೆ
ಮತ್ತಕರಿಗಳಿಂದೆ ಒತ್ತಿ ನೂಂಕಿಸುತ್ತೆ ಬಾಡಿ ಬಳ್ಕಿ
ಮತ್ತೆಯುಂ ಸಹಸ್ರ ಬಾರಿಯಂತುಮಿರದೆ ನೂಂಕುತಳ್ಕಿ
ಜೈನರೆಲ್ಲ ಜಂಗು ಜರಿದು ಋಷಿಯರೆಲ್ಲ ಮಟ್ಟವಾಗಿ
ಮಾನವಳಿದು ಮೌನವಳಿದು ಹೀನಮನದ ದೀನರಾಗಿ
ಏಕೆ ಜಿನಕವಾಟವಿಕ್ಕಿತದ್ಭುತ ಪ್ರಕಾರವೆಂದು
ಏಕೆ ತಾನಿದಾದಪುದು ನಿರೋಧವೆಂದು ಮುಳಿದು ನೊಂದು
ನಮ್ಮ ಪುರದೊಳಿಂದು ನಿನ್ನೆ ಧರ್ಮಹಾನಿಗೆಯ್ದರುಂಟೆ
ಉಮ್ಮಳಕ್ಕೆ ಕಜ್ಜವೇನೊ ಜೀವತತಿಯನಳಿದರುಂಟೆ
ಇಲ್ಲದಿರ್ದಡರುಹನಿಂತು ಕದವನಿಕ್ಕಿಕೊಂಬನಲ್ಲ
ಎಲ್ಲರಂತೆ ಭೂತಹಿಂಸೆ ಮಾಳ್ಪ ಸಮಯವಿಂತಿದಲ್ಲ
ಜೀವತತಿಗೆ ನೋವು ಬಂದಡರುಹನಿಲ್ಲಿ ನಿಲ್ವನಲ್ಲ
ಭಾವಿಸಲ್ಕೆ ಸುಮ್ಮನಿರದೆ ಪೇಳಿರೆಮಗೆ ಜೈನರೆಲ್ಲ

ಎಂದಡಲ್ಲಿ ನೇಮಿಸೆಟ್ಟಿ ನಿನ್ನ ಬಡಿದೆನೆನ್ನ ಸತಿಯ
ನಿಂದು ಕದವನಿಕ್ಕಿತೇನನೆಂಬೆನೆನ್ನನಗಲ್ದ ಮತಿಯ
ನೆನಲು ಜೈನರೆಲ್ಲರುಂ ತೆರಳ್ಚಿ ಕೂಡಿಕೊಂಡು ಬಂದು
ವನಿತೆ ವೈಜಕವ್ವೆಯಲ್ಲಿಗೆಲ್ಲರೆಯ್ದೆ ಸಾರ್ದು ನಿಂದು
ಚರಣದಲ್ಲಿ ಬಿದ್ದು ವೈಜಕವ್ವೆ ನಿನ್ನ ನೋವಿನಿಂದೆ
ಅರುಹನಲ್ಲಿ ಕದವನಿಕ್ಕಿಕೊಂಡು ಕಾಡುತಿರ್ದನಿಂದೆ
ಬಂದು ಕದವನಿಂದು ತೆರೆಯಿಸುತ್ತೆ ಕರುಣಿಸೆಂದು ನುಡಿಯೆ
ಇಂದುವದನೆ ನಗುತೆ ನುಡಿದಳಲ್ಲಿ ಪಿರಿಯರೆಯ್ದೆ ಸೆಡೆಯೆ
ಏಕೆ ಬಂದಿರಣ್ಣ ವೈಜಕವ್ವೆಯೆತ್ತಲರುಹನೆತ್ತ
ಲೋಕನಾಥನರುಹಶಿರವನೊಡೆದು ಮೂಡಿ ನಿಂದನತ್ತ
ನೀವು ಬೇಡಿಕೊಳಲಿದೇಕೆ ನಾನೆ ಬಪ್ಪೆನೆನ್ನ ಗತಿಗೆ

ನೀವಿದೇಕೆ ಬೇಡವಾಯಸಂಗೊಳಲ್ಕೆ ನೋಡ ಧರೆಗೆ
ಹೊಸತು ಮಾಳ್ಪೆನೆನುತೆ ನಡೆದಳಭವಭಕ್ತೆ ವೈಜಕವ್ವೆ
ಅಸಮನಯನನಚಲಭಕ್ತಿ ನೆಲಸಿನಿಂದ ವೈಜಕವ್ವೆ
ಬಕನಿಕಾಯಮಧ್ಯದೊಳಗೆ ನಡೆವ ರಾಜಹಂಸೆಯಂತೆ
ಸಕಲ ಜೈನಕುಲದ ನಡುವೆ ವೈಜಕವ್ವೆ ನಡೆವುತಿಂತೆ
ಬಂದು ಶಿವಕವಾಟದಲ್ಲಿ ನಿಂದು ನೋಡುತಚಲಭಕ್ತೆ
ಇಂದುವದನೆ ಸುಕೃತ ಸದನೆ ದೇವರಲ್ಲಿ ಸಹಜಯುಕ್ತೆ
ದೇವ ಸತ್ಯ ನಿತ್ಯ ಭರ್ಗ ಭೀಮ ರುದ್ರ ಕರುಣಿಸಯ್ಯ
ದೇವ ಸಕಲ ಭುವನತಿಮಿರಹರಣ ಕಿರಣ ಕರುಣಿಸಯ್ಯ
ದೇವ ವಹ್ನಿಮಿತ್ರ ಕುಮುದಮಿತ್ರನಯನ ಕರುಣಿಸಯ್ಯ
ದೇವ ದುರಿತನಿಕರದೂರ ಭುಜುಗಹಾರ ಕರುಣಿಸಯ್ಯ
ದೇವ ಗಿರಿಶ ಗಿರಿಜೆಯರಸ ತತ್ವದರ್ಶ ಕರುಣಿಸಯ್ಯ
ದೇವ ಚಂದ್ರ ಸುರನದೀ ಕಳಾಪಜೂಟ ಕರುಣಿಸಯ್ಯ

ಎಂದು ಹೊಗಳ್ವ ತುತಿಗಳೊಡನೆ ಶಾಂತಿ ಕುಸುಮವರಳ್ವ ತೆರದೆ
ಇಂದುಧರನ ನಿಜದ ಪರಮಭಕ್ತಿ ತಎರಹುಗುಡುವ ತೆರದೆ
ಶಿವನ ಕಣ್ಗಳೆವೆಯ ಸಂಪುಟಂಗಳಲ್ಲಿ ಸಾರ್ವತೆರದೆ
ಭವನ ನಿಷ್ಠೆಯೊಗ್ಗು ಹಿಗ್ಗಿ ತನ್ನೊಳೆಡೆಯನೀವ ತೆರದೆ
ಶಿವಕವಾಟವಲ್ಲಿ ತೆರೆಯಲೊಳಗೆ ತೋರುತಿರ್ದುದರರೆ
ನವ ಮರೀಚಿ ಮಸಗಿ ದೆಸೆಗೆ ಪರಿದು ತೊಳಗೆ ಬೆಳಗಲರರೆ
ಜಿನನ ಶಿರವನೊಡೆದು ಶಿವನ ಲಿಂಗವಲ್ಲಿ ಬೆಳೆದು ನೆಗೆಯೆ
ಅನಘನಪ್ರಮಾಣನತುಳತೇಜನಮಳ ಕಾಂತಿಯೊಗೆಯೆ
ಜೈನರೆಲ್ಲ ಕಂಡು ಕಣ್ಗುಳುರಿದು ತನುಗಳುರಿದು ಬೀಳೆ
ಮಾನವಳಿದು ಗಂಡುಗೆಟ್ಟನೂನ ದುಃಖಜಲದೊಳಾಳೆ
ನೆರೆದ ಋಷಿಯರೆಲ್ಲ ಬೆಂದ ಮರದ ತೆರದೆ ಜಂಗು ಜರಿಯೆ
ಪರಮ ಪಂಡಿತರ್ಕಳೆಲ್ಲ ಮೆಲ್ಲ ಮೆಲ್ಲನೆದ್ದು ಸರಿಯೆ
ಆಗಳಲ್ಲಿ ವೈಜಕವ್ವೆ ಶಿವನನಪ್ಪಿ ಭವನನಪ್ಪಿ
ರಾಗವಲರೆ ಚರಣತಳವನಪ್ಪಿ ಮತ್ತೆ ಮಾಣದಪ್ಪಿ
ಪುಳಕವಡರೆ ಗದ್ಗದಂಗಳಡಸೆ ಬೆಮರ ಬಿಂದುನೆರೆಯೆ
ಇಳಿವ ಸುಖಜಲಂ ವಿಲೋಚನಂಗಳಿಂದೆ ಸೂಸಿ ಪರಿಯೆ
ಕುಣಿದು ಕುಣಿದು ತಣಿದು ಮಣಿದು ತೇಗಿ ಬೀಗಿ ವೈಜಕವ್ವೆ
ಅಣಿಯರಂಗಳುಕ್ಕಲಾಡಿ ಹಾಡಿ ನೋಡಿ ವೈಜಕವ್ವೆ
ತನ್ನ ಚರಣದಲ್ಲಿ ಬಿದ್ದ ನೇಮಿಸೆಟ್ಟಿಗೆಂದಳಂದು

ಎನ್ನ ಸಂಗವಾದ ನಿನಗೆ ಪಾಪವಾಗಲಾಗದೆಂದು
ಕರುಣದಿಂದೆ ಭಸಿತವಿಟ್ಟು ಶೈವದೀಕ್ಷೆಯಂ ತೊಡರ್ಚಿ
ಪರಮ ಪಂಚವರ್ಣ ಕರ್ಣಕುಹರನಪ್ಪುದಂ ನಿಮಿರ್ಚಿ
ಎನ್ನ ಪೆಸರ ವೈಜನಾಥದೇವರಿವರನರ್ಚಿಸುವುದು
ಉನ್ನತ ಪ್ರಮೋದಮಮಂ ಮಹೇಶನಲ್ಲಿ ಪೆರ್ಚಿಸುವುದು

ಎಂದು ನುಡಿವುತಿರಲಿರಲ್ಕೆ ಪುಷ್ಪವೃಷ್ಟಿ ಸುರಿದವಲ್ಲಿ
ದುಂದುಭಿ ಪ್ರಾಣಾದದೊಡನೆ ಶಂಖನಾದವೊಗೆದುದಲ್ಲಿ
ನಡುವೆ ಬಂದುದೊಂದು ಪುಷ್ಪಕಂ ಜಗಂಗಳೆಲ್ಲ ಹೊಗಳೆ
ಮೃಡನ ಭಕ್ತಸಂಕುಳಕ್ಕೆ ಸಂತಸಂಗಳೆಯ್ದೆ ನೆಗಳೆ
ಭುವನವೆಲ್ಲ ಹೊಗಳೆ ವೈಜಕವ್ವೆ ಪುಷ್ಪಕದೊಳೆ ಹೊಕ್ಕು
ಶಿವಗಣಂಗಳೊಡನೆಯಂಬರಕ್ಕೆ ನೆಗೆದು ಮೀರಿ ಮಿಕ್ಕು
ಬಂದು ನಂದಿನಾಥನಿಪ್ಪ ಬಾಗಿಲಲ್ಲಿ ಭೋಂಕನಿಳಿದು
ಇಂದುಮೌಳಿ ಶರಣೆನುತ್ತೆ ಪುಳಕತತಿಯನೊಲಿದು ತಳೆದು
ಎನ್ನ ನಿಧಿಯೆ ಎನ್ನ ಮಧುವೆ ಎನ್ನ ಸುಧೆಯೆ ಕರುಣಿಸೆಂದು
ಎನ್ನ ಗುರುವೆ ಪರಮ ಗುರುವೆ ಪರಕೆ ಪರವೆ ಕರುಣಿಸೆಂದು
ತಂದೆ ತಾಯೆ ಗತಿಯೆ ಮತಿಯೆ ಚಂದ್ರಚೂಡ ಕರುಣಿಸೆಂದು
ಬಂದು ವೈಜಕವ್ವೆ ಹರನ ಚರಣದಲ್ಲಿ ಬೀಳಲಂದು
ಶಂಭುವೊಸೆದು ನಲಿವುತೆತ್ತಿ ಶಿರದ ಮೇಲೆ ಕರವನಿಟ್ಟು
ದಂಭರಹಿತನೊಲವು ಸಹಿತ ವೀಕ್ಷಿಸುತ್ತೆ ಚಿತ್ತವಿಟ್ಟು

ಗಿರಿಜೆ ನೋಡ ವೈಜಕವ್ವೆಯಂತೆ ನಿಷ್ಠೆಯುಳ್ಳರುಂಟೆ
ಪರರ ಸಮಯದೊಳಗೆ ನಿಂದು ಭಕ್ತಿಯುಕ್ತೆಯಾದರುಂಟೆ
ಸವಿಗೆ ಸವಿಗಳೆನಿಪ ವಸ್ತುಕುಲವನೆನ್ನೊಳಿತ್ತರುಂಟೆ
ಭುವನದೊಳಗೆ ಭಕ್ತಿಯಂ ವಿರಾಜಿಸಲ್ಕೆ ಮೆರೆದರುಂಟೆ
ಎಂದು ಕೊಂಡು ಕೊನೆದು ರುದ್ರಕನ್ನಿಕಾ ನಿಯೋಗವಿತ್ತು
ಸಂದ ಗಣನಿಕಾಯದೊಳಗೆ ಸಕಳ ಸುಖಮನೆಯ್ದೆ ಹೊತ್ತು
ರಜತಗಿರಿಯ ಸಿರಿಯ ನಿಳಯದೊಳಗೆ ಬೆಳಗುತಿರ್ದನಲ್ಲಿ
ನಿಜಮರೀಚಿ ಕೋಟಿರವಿಯ ರುಚಿಯನಳಿಪನಿರ್ದನಲ್ಲಿ
ಸುರನದಿವಿರಾಜಮಾನ ಜೂಟನೊಪ್ಪುತಿರ್ದನಲ್ಲಿ
ಪರಮಭಕ್ತಜನಸಮೀಪ ರೂಪನೊಪ್ಪುತಿರ್ದನಲ್ಲಿ
ಅಂಬಕತ್ರಯಂ ನಭಃಪುರಾರಿಯೊಪ್ಪುತಿರ್ದನಲ್ಲಿ
ನಂಬಿ ನೆನೆಯಲಿಂಬುಗೊಂಬ ಶಂಭುವೊಪ್ಪುತಿರ್ದನಲ್ಲಿ

ದೇವಗಣ ಸಹಸ್ರದೊಳಗೆ ಭಾಳನಯನನೊಪ್ಪಿದಂ
ದೇವನೆನ್ನ ಹಂಪೆಯರಸ ವಿರೂಪಾಕ್ಷನೊಪ್ಪಿದಂ ೩೩೮

ಧರೆ ಹೊಗಳೆ ಕೃಪೆಯೊಳಾಹಾ
ಪರಿವಳಿಗೆಯ ವೈಜಕವ್ವೆಯಂ ಮೆರೆದಭವಂ ।
ಕರುಣಿಸುಗೆ ಭಕ್ತಿಸುಖಮಂ
ಹರುಷಂ ಮಿಗಲೆನಗೆ ಹಂಪೆಯ ವಿರೂಪಾಕ್ಷಂ ॥

❖❖

# ೨೧. ಹೆರೂರ ಹೆಣ್ಣಿನ ರಗಳೆ

ಚಂಡೇಶನಭವಘದೋ
ರ್ದಂಡಂ ಹೇರೂರೊಳೆಸೆವ ಹೆಂಗೂಸಂ ತಾಂ ।
ಗಂಡುಡುಗೆಯುಡಿಸಿದಮರರ
ಗಂಡಂ ಮದನಾರಿ ಹಂಪೆಯ ವಿರೂಪಾಕ್ಷಂ ॥

ಎಂತೆನಲ್ ರಂಜಿಪುತ್ತರ ದಿಶಾಭಾಗದೊಳ್
ಸಂತತಂ ಸೊಗಯಿಸುತ್ತಿರ್ಪುದತಿ ರಾಗದೊಳ್
ಹೇರೂರೆನಿಪ್ಪ ಪುರವಾ ಪುರದೊಳೊಪ್ಪುತಿರೆ
ಮಾರಮದ ಮರ್ದನನ ಭಕ್ತಿಯಿಂದೊಪ್ಪುತಿರೆ
ತನ್ನ ಪೆಸರೆಸೆವ ಶಿವಭಕ್ತನೆಂಬುದು ನೋಡ
ತನ್ನ ಭಕ್ತಿಗೆ ಮಿಗಿಲೆನಿಪ್ಪಳೊರ್ವಳ್ ನೋಡ
ಹೇರೂರ ಹೆಂಗೂಸೆನಿಪ್ಪ ಮಗಳೊಪ್ಪಿರಲ್
ಸಾರಾಯ ಸದ್ಭಕ್ತಿಯುಕ್ತಿಯಿಂದೊಪ್ಪಿರಲ್

ಮೆಲ್ಲ ಮೆಲ್ಲನೆ ಯೌವನಂ ಹ[ತ್ತೆ] ಸಾರಿತ್ತು
ವಲ್ಲಭಂ ಶಿವನಾಗವೇಳ್ಕೆಂದು ಬಯಸಿತ್ತು
ಕಡೆಗಣ್ಣ ಕುಡಿವೆಳಗು ಗಂಡುಗೆದರುತ್ತಮಿರೆ
ಕಡು ಚೆಲ್ವ ಮುಡಿ ಹೂದುರುಂಬಿಂಗೆ ಬಯಸುತಿರೆ
ಒಳಗೆ ಕರಣಪ್ರತತಿ ಪೊರಮಡುವ ಛಂದದಿಂ
ತೊಳಗುವ ಪಯೋಧರಂ ಪೊಣ್ಮಿದವು ಚಂದದಿಂ
ಬಾಸೆ ಮೊಲೆಯಾಸೆಯಂ ಮರೆದು ಮಧ್ಯಮನಪ್ಪೆ
ಮೀಸಲು ನಿತಂಬವುಡಿಗೆಯನೊತ್ತರಿಸುತೊಪ್ಪೆ
ಪುರುಷಚಿಹ್ನಂ ಪುಟ್ಟುವಾಸ್ಥಳಮಿದೆಂಬಂತೆ

ಸುರುಚಿರ ಸ್ಮರಮಂದಿರಂ ಸೊಗಯಿಸಿತ್ತಿಂತೆ
ನಿಂದ ರೂಪಿಂ ಲಿಂಗದಾಗ ನೆಲಸುತ್ತಮಿರೆ
ಬಂದ ಜವ್ವನವೆರವಿನಂತೆ ತೋರುತ್ತಮಿರೆ
ಮನದೊಳಿರೆ ಗಂಡು ರೂಪವಯವಂ ಹೆಣ್ಣಾಗೆ
ತನುವಿನೊಳ್ ಹೆಣ್ಣು ಚೋಹವನೆ ತೊಟ್ಟನುವಾಗೆ
ಬಂದ ಜವ್ವನಮುಮಂ ನಿಂದ ಸೌಂದರಿಯಮಂ
ತಂದೆ ಕಾಣುತ್ತೆ ಬೆರಗಿಂದಾಂತು ಚೋದ್ಯಮಂ
ಈ ಮಗಳ ಜವ್ವನಕ್ಕಿನ್ನೊಂದು ಸರಿಯುಂಟೇ
ಈ ಮಗಳ್ ಗಂಡಾದಡೆನಗೆ ತೀರದುದುಂಟೆ
ಇವಳ ಹರಯಂ ಶಿವನನರ್ಚಿಸುತ್ತಿರ್ದಪುದು
ಇವಳಿಚ್ಛೆ ಗಂಡುರೂಪಿಂಗೆಳಸುತಿರ್ದಪುದು
ಆರ್ಗೀವೆನೀ ಮಗಳನಾಳಲಾರ್ಪವರಾರು
ಆರ್ಗೆ ಕೊಡುವೆಂ ಜವ್ವನಕ್ಕೆ ಪಾಸಟಿ ಯಾರು

ಎಂದು ಚಿಂತಿಸುತವಿರ್ಪನ್ನೆಗಂ ಸೋದರಂ
ಬಂದಳಾಗಳೆ ತನ್ನ ಕಿರಿಯಳತ್ಯಾದರಂ
ಜೈನಂಗೆ ಕೊಟ್ಟ ತನ್ನೊಡಹುಟ್ಟಿದಳ್ಬಂದು
ನಾನಾನಿರೋಧದಿಂ ಮುನಿಸಿನಿಂ ನಡೆತಂದು
ಎನ್ನಯ ಸುತಂಗೆ ಮಗಳಂ ಕುಡುಲುವೇಳ್ಕೆನುತೆ
ಎನ್ನ ಪುತ್ರಂಗೆ ಪಾಸಟಿ ಕುಡುವುದೆಂದೆನುತೆ
ಸೋದರಂ ಸ್ವಾಧೀನದಿಂದೆ ಮಗಳಂ ಬೇಡೆ
ಸೋದರಳಿಯಂಗೆ ಜೈನಂಗೆ ಕುಡಲನುಮಾಡೆ
ಲಗ್ನಮಂ ಪೇಳುತಿರೆ ತಿಂಗಳೆರಡಂದಲ್ಲಿ
ಭಗ್ನಮತಿಗಳ ಮದುವೆ ಸಂಭ್ರಮಿಸುತಿರಲಲ್ಲಿ

ಕಂದಿದಳು ಕುಂದಿದಳು ಹೇರೂರ ಹೆಂಗೂಸು
ನೊಂದು ಒಳಗೊಳಗೆಯಳಲ್ವಳ್ ಬಳಲ್ವಳ್ ಕೂಸು
ನಿತ್ಯ ನೇಮಕ್ಕೆಂದು ಹರನಲ್ಲಿಗೆಯ್ತಂದು
ನಿತ್ಯನ ನಿರಾಶ್ರಯನ ಹರನ ಹತ್ತಿರೆ ಬಂದು
ಪುರಹರನ ವರನ ಶಶಿಧರನ ಹತ್ತಿರೆ ಬಂದು
ಗಿರಿಜಾವರನ ಕೃಪಾಕರನ ಹತ್ತಿರೆ ಬಂದು
ದರುಶನ ಸ್ಪರುಶನಂಗಳನೊಲ್ಮೆಯಿಂ ಮಾಡಿ
ಹರುಷದಿಂ ಪಾದೋದಕಂಗಳಿಂದಕ್ಕಾಡಿ

ಮಾರಾರಿಗಭವಂಗೆ ನಿಂದು ಬಿನ್ನೈಸಿದಳು
ಹೇರೂರ ಹೆಂಗೂಸಳುತ್ತ ಬಿನ್ನೈಸಿದಳು
ದೇವ ಭವಿಗುರದೆನ್ನನೊಯ್ದು ಕೊಟ್ಟಪರಯ್ಯ
ದೇವ ಸವಣಂಗೆ ಹೆಂಡತಿ ಮಾಡಿದಪರಯ್ಯ
ಭವಿಯ ನಾನೆಂತು ನೋಡುವೆನಯ್ಯ ಶಂಕರಾ
ಭವಿಯ ನುಡಿದ ಕರ್ಣಕ್ಕೆ ಶೂಲ ಶಶಿಶೇಖರಾ
ಭವಿಯ ಕೂಟಂ ಕಾಳಕೂಟದಿಂ ಪಿರಿದೆನಗೆ
ಭವಿಯ ಸಂಸರ್ಗ ದಳ್ಳುರಿಯ ಸಂಗವದೆನಗೆ
ಬೆಳಗಿನೊಳಗಿರ್ದು ಕತ್ತಲೆಯೊಳಿರಲಾರ್ಪೆನೆ
ತಿಳಿವಿನೊಳಗಿರ್ದು[ವ]ಜ್ಞಾನಕೊಳಗಪ್ಪೆನೆ
ಅಮೃತದೊಳಗಿರ್ದು ವಿಷದೊಳಗೆ ಪುಗಲಾರ್ಪೆನೆ
ವಿಮಳ ಪುಣ್ಯದೊಳಿರ್ದು ಘೋರಕ್ಕೆ ಪೋಪೆನೆ
ಭವಿಗೆ ಹೆಂಡತಿಯಪ್ಪ ಹೆಣ್ಣಿಂದವೇಕೆನಗೆ
ಭವಿಯೊಡನೆ ಬೆರಸುವ ಶರೀರವಿಂತೇಕೆನಗೆ
ಭವ ಭರ್ಗ ಭಾಳಾಕ್ಷ ಭೀಮ ಕರುಣಿಪುದೆನಗೆ
ಶಿವ ಸುರನದೀ ಜಟಾಸ್ತೋಮ ಕರುಣಿಪುದೆನಗೆ
ಹರ ಕಾಮಹರ ಕಾಲಹರನೆ ಕರುಣಿಪುದೆನಗೆ
ಸುರನರೋರಗನಿಕರ ಗುರುವೆ ಕರುಣಿಪುದೆನಗೆ
ಅಯ್ಯ ನಾನಾರೆನಭವಾ ಭವಿಯ ಸಂಗಮಂ
ಕಯ್ಯ ಮೇಲೀಗ ಹೆಣ್ಣಾಗಿರ್ಪ ಭಂಗಮಂ
ಎಂದಿಂತು ಕವಿದಿರ್ಪ ಕಾರ್ಪಣ್ಯಮಂ ತೋರಿ
ಸಂದಣಿಪ ತನ್ನಳಲನಳ್ಕರಿಂದಂ ತೋರಿ
ನೇಮವಂ ಮಾಡುವಾ ಹೊತ್ತಿನೊಳ್ಮೊರೆಯಿಟ್ಟು
ಕಾಮಾರಿಗನುದಿನಂ ಪ್ರೇಮದಿಂ ಶಿವದಿಟ್ಟು
ಬಿಡದಿಂತಹರ್ನಿಶಂ ಭಕ್ತಿಯಿಂದಲೆದಲೆದು
ಅಡಿಗಡಿಗೆ ಶಿವನ ಸದ್ಭಕ್ತಿಯಿಂದಲೆದಲೆದು
ಭೇದವಿಲ್ಲದ ಭಕ್ತಿಭಾವದಿಂದಂ ಮುನಿದು
ಆದರಂ ಮಿಗಲೇಕನಿಷ್ಠೆಯಿಂದಂ ಮುನಿದು

ಇರಲಿಂತು ತಿಂಗಳೆರಡಾಗೆ ಬಂದುದು ಮದುವೆ
ನೆರೆದು ಸಾರಿಸುವ ಹೆಂಗೂಸಿಂಗೆ ಹುಸಿ ಮದುವೆ
ಮಂಟಪಂ ವೇದಿಕೆಗಳೊಪ್ಪದಿಂ ಸಮೆದಿರಲು
ನಂಟರುಂ ನಲ್ಲರುಂ ಹರುಷದಿಂ ನೆರೆದಿರಲು

ಮುತ್ತೈದೆಯರ್ತರಂಗೊಂಡು ಸಿಂಗರಿಸುತಿರೆ
ಹೆತ್ತ ತಾಯ್ತಂದೆಗಳ್ನಲಿನಲಿದು ಪೆರ್ಚುತಿರೆ
ಕಳಸ ಕನ್ನಡಿಯ ನಾರೀನಿಕರವೊಪ್ಪುತಿರೆ
ಗಳಿಗೆವಟ್ಟಲ ಮುಂದೆ ಜೋಯಿಸರ್ಮೆರೆವುತಿರೆ
ಅಂಗನೆಯರಾನಂದದಿಂದೆ ಸಂಭ್ರಮಿಸುತಿರೆ
ಮಂಗಳಮಯಂ ಮನೆಯ ಮುಂದೆ ಕರ ಮೆರೆವುತಿರೆ
ಹೇರೂರ ಹೆಂಗೂಸಿದೆಲ್ಲಮಂ ಕಾಣುತಂ
ಮಾರಾರಿಯೊಡನೆ ಮನದೊಳ್ಜಗಳವಾಡುತಂ
ಮದುವೆಯಂ ನೋಡುತಂ ಬೆಚ್ಚುತಂ ಸುಯ್ವುತಂ
ಹೃದಯದೊಳ್ನೋವುತಂ ಪರಮಂಗೆ ಮುಳಿವುತಂ
ನಿಂದು ಬೆರಗಾಗುತಂ ಸಂದಣಿಸಿ ನೋಡುತಂ
ಇಂದುಮುಖಿಯರ ನಡುವೆ ಬಾಡಿ ಬಸವಳಿವುತಂ
ತನು ಹಂದರಲಿ ತನ್ನ ಮನವಾ ಶಿವನ ಮೇಲೆ
ಮುನಿಸು ತನ್ನೊಳ್ ತನ್ನ ಮಾತು ಕರ್ತನ ಮೇಲೆ
ಆಗಿರ್ಪ ಹೇರೂರ ಹೆಂಗೂಸನೊಪ್ಪದಿಂ
ಸಾಗಿಸುತೆ ಸಿಂಗರಿಸಿ ಕೈಗೊಡುತ್ತೊಪ್ಪದಿಂ
ತಂದು ಮೆಟ್ಟಕ್ಕಿಯೊಳ್ ಬಲ್ಪಿನಿಂ ನಿಂದಿರಿಸಿ
ಮುಂದೆ ಕಟ್ಟದಿರಾಗಿ ಜೈನನಂ ತಂದಿರಿಸಿ
ಭಕ್ತೆ ಭವಿಯಂ ನೋಡಲಾಗದೆಂಬಂದಂದಿಂ
ಯುಕ್ತಿಗೆಟ್ಟವರೆಲ್ಲ ತೆರೆವಿಡಿಯೆ ಚಂದದಿಂ
ಮುಂದೆ ಹಣ್ಣೋಹ ಜಲದೊಳಲ್ಕಸುಗೆಂಬಂತೆ
ತಂದೆ ಕೈನೀರೆರೆದನಂದು ಸೂಚಿಸುವಂತೆ
ತಂಡ ತಂಡದ ಸತಿಯರಾರರಿಗಳೊಡಗೂಡಿ
ಗಂಡನಿ[ವ] ಸಯವಲ್ಲವೆನಗೆಂದು ಹರಗೂಡಿ
ಮೊಗದ ಜವನಿಕೆ ತೆಗೆಯೆ ಕಣ್ಣ ಜವನಿಕೆ ಮುಗಿಯೆ
ಸೊಗಯಿಸದೆ ಕಣ್ಮುಚ್ಚಿ ಮದವಳಿಗೆ ಮನ ಸುಗಿಯೆ
ಜೈನನಂ ತಂದು ಹೋಮದ ಹಸೆಯ ಮೇಲಿರಿಸಿ
ಮಾನಿನಿಯನಲ್ಲಿ ತಾಯ್ತಂದೆಗಳ್ಬೋಳಯಿಸಿ
ಒಡಗೊಂಡು ಬಂದು ವಿಷಭೂರುಹದ ಕೆಲದಲ್ಲಿ
ನಡೆಯದೊಂದಮೃತವಳ್ಳಿಯನಿರಿಸುವಂತಲ್ಲಿ
ಭವಿಯ ಕೆಲದಲ್ಲಿ ಶಿವಭಕುತೆಯಂ ಕುಳ್ಳಿರಿಸೆ
ಶಿವಭಕುತೆಗತಿನಿರೋಧಂ ಮನದೊಳಂಕುರಿಸೆ
ಎಡದ ಭಾಗಂ ಪಾಪದೇವರ್ವಡೆದ ತೆರನಾಗೆ

ಎಡದ ಭಾಗಂ ತನ್ನದಲ್ಲೆಂಬ ತೆರನಾಗೆ
ಮೊಗದ ಹೊಗೆಯೊಡನೆ ಹೋಮದ ಹೊಗೆ ಕರಂ ನಿಮಿರೆ
ಬಗೆಯ ಕಿಚ್ಚಿನ ಕೂಡೆ ಹೋಮಗಿಚ್ಚಂತಡರೆ
ಕಾಮಿನೀರೂಪರಿವ ಕಾಮ ಹೋಮದ ತೆರದೆ
ಹೋಮವಿರಲಂತಂತೆ ಮದುವೆಯಾಯಿತ್ತುರದೆ
ಮಕ್ಕಳಾಟದ ಮದುವೆಯಂತೆ ತನಗಾಗುತಿರೆ
ಮಿಕ್ಕವರ್ಗೆ ದಿಟ ಮದುವೆಯಂತೆ ತೋರುತ್ತಮಿರೆ

ಇರೆ ತಂದು ಮುಂದಿಟ್ಟರೆಲ್ಲ ಭೂಮವನೆಲ್ಲ
ಹರನ ಕಂಡಲ್ಲದಿನ್ನೆನಗೂಟವಿಲ್ಲಿಲ್ಲ
ಎನುತೆ ನಡೆತಂದಳಾ ಮುದದಿಂದೆ ಶಿವನೆಡೆಗೆ
ಮನ ವೇಗದಿಂ ಬಂದು ಬಿನ್ನೈಪ ಮನದೆಡೆಗೆ
ನಡೆತಂದಳಳಲುತ್ತೆ ಹೇರೂರ ಹೆಂಗೂಸು
ಮೃಡನಲ್ಲಿಗತಿಕೋಪದಿಂ ಬಂದಳಾ ಕೂಸು
ಬಂದು ನಿಂದಾಕ್ಷೇಪಿಸುತೆ ಬಿನ್ನಹಂ ಮಾಡಿ
ಇಂದುಧರನಂ ಮನದ ಮುನಿಸಿನಿಂದ ನೋಡಿ
ಲೇಸಾಗಿ ಮಾಣಿಸದೆ ಮದುವೆಯಂ ಮಾಡಿದ್ಯೆ
ಲೇಸು ಲೇಸಕ್ಕಕ್ಕು ಭವಿಯೊಡನೆ ಕೂಡಿದ್ಯೆ
ಭವಿಯ ಹವಣೇ ಮೀರಿ ನಿನ್ನ ಹವಣೇ ದೇವ
ಶಿವನೆ ನೀ ನೋಡುವಡೆ ಹರಣದನಿತೇ ದೇವ
ನಂಬಿರ್ದವಳನು ನೀನಿಂತುಪೇಕ್ಷಿಸುವರೇ
ನಿಂಬಿ ನಂಬಿಗಳರಸ ಇಂತು ಮಾಡಿಸುವರೇ
ದೇವ ಇನ್ನೆಂತು ಮಾಣಿಪೆ ಮದುವೆಯಾಯಿತ್ತು
ದೇವ ಭವಿಯೊಡನೆ ಪುದುವಾಳ್ವುದೆನಗಾಯಿತ್ತು
ದೇವ ಭವಿಯೊಡನಿರ್ಪ ಪಾಪವಿಂತಾಯಿತ್ತು
ದೇವ ನರಕದ ಬಟ್ಟೆ ತಪ್ಪದೆನಗಾಯಿತ್ತು
ಪುರವನುರುಪಿದ ಕಲಿಯೆ ಸುಮ್ಮನೇಕಿರ್ದಪಯ್
ಗರಳಧರ ನೀನೇತಕಿಂತುಸುರದಿರ್ದಪಯ್
ಕಾಲಹರ ಕರ್ಮಹರ ಉಸುರದೇಕಿರ್ದಪಿರಿ
ನೀಲಕಂಠಾ ಕರುಣಿ ನೀವುಸುರದಿರ್ದಪಿರಿ
ಕಲ್ಲಲಿಟ್ಟಂಗೆ ಕೈಯೊಡನೆ ವರಗಳನಿತ್ತೆ
ಎಲ್ಲರರಿಯಲ್ ವೈಜಕವ್ವೆಗೆ ವರವನಿತ್ತೆ
ಬಲ್ಲಿದನೆ ಬಾಣಾಸುರನ ಬಾಗಿಲಂ ಕಾಯ್ದೆ

ಸಲ್ಲೀಲೆಯಿಂ ಬಸವದಣ್ಣಾಯಕಂಗಾದೆ
ಹುಲ್ಲ ಹೊತ್ತಡಕುವಾ ಚೆನ್ನಯ್ಯನೊಡನುಂಡೆ
ಚಲ್ಲವಾಡುತೆ ನಿಂಬಿಯಕ್ಕಗಳನೊಂಳಕೊಂಡೆ
ಕೊಡಗೂಸಿನಿನಿನುಡಿಗೆ ಮೃಡ ನಂಬಿ ಪಾಲ್ಗುಡಿದೆ
ಒಡೆಯ ಎನ್ನಲ್ಲಿ ತಪ್ಪೇನ ಕಂಡಿರಿ ತಂದೆ
ಕರುಣಾಕರನುಮೆಂಬ ಬಿರಿದು ನಿಮಗರತವೆ
ವರಮೂರ್ತಿ ನೀನೆಂಬ ಹೆಸರೇನು ಬರತವೆ
ಇಂತಿಂತು ಭಕ್ತರೆಲ್ಲರ ಹೃದಯದೊಳಗಿರ್ಪೆ
ಎಂತೆಂತು ಕಾಡಿದಪೆಯದಕೇನು ನೋಡಿರ್ಪೆ
ಎಂತಕ್ಕೆ ಮುಂದೆ ನಾಲ್ಕುಂ ದಿನಂ ನೋಡಿದಪೆ
ಭ್ರಾಂತು ಬೇಡಲೆ ದೇವ ನಿನ್ನನೊಡಗೂಡಿದಪೆ
ಅಯ್ದನೆಯ ದಿನವೈದು ಮುಖದೊಳಗೆ ನೋಡೆನ್ನ
ನೆಯ್ದಿ ಕೊಂಬೆಂ ದೇವ ಬೆನ್ನಂ ಬಿಡೆಂ ನಿನ್ನ
ನೆಂದು ಬಿನ್ನಪಮಾಡಿ ಮನೆಗೆ ಮರಳಿದು ಬಂದು
ಕಂದಿ ಮೈಗುಂದಿ ಮನೆಯೊಳಗೆ ತಾಪಿಸುತಂದು
ನಾಲ್ಕು ದಿನವುಂ ನಾಲ್ಕು ಬರಿಸಂಗಳಾಗುತಿರೆ
ನಾಲ್ಕು ದಿನವುಂ ನಾಲ್ಕು ಜುಗವಾಗಿ ತೋರುತಿರೆ
ನಿಬ್ಬಣಿಗರೆಲ್ಲ ನೆರೆದುಂ ಚತುರ್ಥಿಯ ಮಾಡಿ
ಅಬ್ಬರಿಸಿಯಾನಂದದಿಂ ಬಂಡಿಯಂ ಹೂಡಿ
ಭವವನುತ್ತರಿಪ ಗಿರಿಯುಮನೇರುವಂದದಿಂ
ಭವನಲ್ಲಿಗೊಯ್ವಂದದೊಳಗಿರಿಸುವಂದದಿಂ
ಹೆಣ್ಣಂ ನಿಮಗೆ ಕೊಟ್ಟು ಗಂಡುಗೊಂಡೆವು ದಿಟಂ
ಹೆಣ್ಣಲ್ಲ ಪುತ್ರನೋಪಾದಿಯಪ್ಪುದು ದಿಟಂ

ಎಂದು ನುಡಿಯಲ್ಮುಂದೆ ಸೂಚನೆಯದಾಗುತಿರೆ
ತಂದೆ ತಾಯ್ಗಳ್ಮಗಳನಪ್ಪಯಸಿ ಕೊಡುತಮಿರೆ
ಪೊರಮಟ್ಟವಲ್ಲಿ ಬಂಡಿಗಳೆಯ್ದೆ ಗಳಗಳನೆ
ಮರುಗಿ ಮನದೊಳಗತ್ತಳಾ ಕೂಸು ಗುಳಗುಳನೆ
ಮದುವೆಯಲ್ಲದೆ ಮತ್ತೆ ಪಯಣಮಂ ಮಾಡಿದ್ಯೆ
ಮದನಾರಿ ನಿಮ್ಮನಿಂತಗಲ್ವಂತೆ ಮಾಡಿದ್ಯೆ
ಅಗಲೆನಗಲೆಂ ನಿನ್ನ ಬೆನ್ನಂ ಬಿಡೆಂ ದೇವ
ಮಗಳೆನ್ನದೆನ್ನ ಪರಿಯಂ ನೋಳ್ಪುದೆಲೆ ದೇವ
ಎಂದು ಚಿಂತಿಸುತವಿರಲಾ ಮೊದಲ ಜಾವದೊಳ್

ನಿಂದವಾಗಳೆ ಬಂಡಿ ಭರದೊಳಾರಣ್ಯದೊಳ್
ಹಸಿದು ನಿಬ್ಬಣಿಗರೆಲ್ಲಂ ಬಂಡಿಯಿಂದಿಳಿದು
ಎಸೆವ ಕಟ್ಬುಂಗೂಳನಾನಂದದಿಂ ತೆಗೆದು
ಮದವಳಿಗೆ ಹಸಿದೆ ಕೊಲ್ಲಾರಿಯಿಂದಿಳಿಯವ್ವ
ಹದುಳದಿಂದಿಳಿ ಮೆಲ್ಲನಿಳಿಯವ್ವ ಬಾರವ್ವ
ಇಳಿಯೆನುಣ್ಣೆಂ ನೇಮವಂ ಮಾಡೆನಿನ್ನುವುಂ
ಬಳವೆತ್ತವನನಾಳ್ದನಂ ಕಾಣೆನಿನ್ನುವುಂ
ಎನಲಲ್ಲಿ ಪರಿದರಸಿದರು ಶಿವನ ನಿಳಯಮಂ
ಮನವಾರೆ ಕಂಡರಾ ಸರ್ವಸುಖನಿಳಯಮಂ
ಕಂಡುಬಂದೆವು ಶಿವಾಲಯವದೇ ಹೋಗವ್ವ
ಖಂಡೇಂದುಮೌಳಿಯಂ ಕಂಡು ಸುಖಿಯಾಗವ್ವ

ಎಂದ ಮಾತಂ ಕೇಳ್ದು ಹೇರೂರ ಹೆಂಗ-ಸು
ಸಂದೇಹವಿಲ್ಲದೈತಂದಳಾ ಹೆಂಗ-ಸು
ಅಂಗನೆಯ ಜನ್ಮದಿಂದಿಳಿವಂತಿರಿಳಿತಂದು
ಸಂಗಡಕ್ಕೊಬ್ಬ ಸತಿಯಂ ಕೊಂಡು ನಡೆತಂದು
ದೇವನಾಗಲ್ವೇಳ್ಕು ನಾನಾಗವೇಳ್ಕೆಂದು
ಭೂವಳಯದೊಳಗೊಂದು ಹೊಸತು ಮಾಡುವೆನೆಂದು
ಬಂದು ಶಿವನಿಳಯದೊಳ್ ಶಂಭುವಂ ಕಾಣುತಂ
ಮುಂದೆ ಪ್ರಜ್ವಲಬಿಂದು ಕಂಗಳೊಳ್ ತೀವುತಂ
ಬೆವರ ಬಿಂದುಗಳಡಿಸಿ[ಯ]ಳಕಂಗಳೊಳಗೇಳೆ
ಅಮರ್ದ ಕಂಪನವುಕ್ಕಿ ಗದುಗದುಕೆ ಮಿಕ್ಕೇಳೆ
ಭುಜಮಂಡಲಂ ಕೆತ್ತೆ ತವಕದುರವಣೆಯೆತ್ತೆ
ನಿಜಹೃದಯ ಮುಂಕೊಳಿಸೆ ಚಿತ್ತವೊಲಿದಚ್ಚೊತ್ತೆ
ಹೊಸ ಮುನಿಸು ಲಿಂಗಕ್ಕೆ ಸವಿಗಳಂ ಸವಿಸುತಿರೆ
ಶಶಿಧರನ ಮನಕೆ ಕತಸುಖಗಳೆಯ್ದುತ್ತಮಿರೆ
ಬಂದಪ್ಪಿದಳ್ ತಪ್ಪಿದಳ್ ಹೆಣ್ಣ ಜನ್ಮಮಂ
ನಿಂದಪ್ಪಿಕೊಂಡಪ್ಪಿದಳ್ ಭಕ್ತೆ ಕಾಯಮಂ
ಲಿಂಗದೊಳ್ ತಲೆಯಿಟ್ಟು ಸರ್ವಾಂಗದೊಳುವಪ್ಪಿ
ಲಿಂಗದೊಳ್ಪುಗುವಂತಿರಮರ್ದಪ್ಪಿ ನಿಮಿರ್ದಪ್ಪಿ
ಒಟ್ಟಿ ಒರಲುತಲಪ್ಪಿ ನಿಷ್ಠೆ ನಿಲವಿನಲಪ್ಪಿ
ಮುಟ್ಟಿ ಲಿಂಗವ ನೇಹರಸದಿಂದೆ ಬಿಗಿಯಪ್ಪಿ

ಅಪ್ಪಿದಡೆ ಲಿಂಗದೊಳಗಿಂಗಿದವು ಮೊಲೆಯಲ್ಲಿ
ಒಪ್ಪಿದವು ಹೆಣ್ಣುಡಿಗೆ ಗಂಡುಡಿಗೆಗೊಂಡಲ್ಲಿ
ಜಡೆ ನಿಮಿರ್ದೊಪ್ಪೆ ಹೊಸ ಮೀಸೆ ನಸುಗಪ್ಪಾಗೆ
ಅಡಸಿರ್ದ ಕಿವಿಯೋಲೆ ಕರ್ಣಾಭರಣಮಾಗೆ
ಲಿಂಗದಪ್ಪಿಂ ಪುರುಷಚಿಹ್ನವೊಗೆದುದು ತನಗೆ
ಅಂಗಸಾರಂ ಗಂಡುರೂಪಾಗಿ ತೊಳತೊಳಗೆ
ಹೇರೂರ ಹೆಂಗೂಸು ಗಂಡುತನಮಂ ಕೊಂಡು
ಮಾರಾರಿ ತನಗಿತ್ತ ಪುರುಷಚಿಹ್ನಂಗಂಡು
ಮನದಪ್ಪಿನೊಳ್ಪಿಡದೆ ತನುವಿನಪ್ಪಂ ಬಿಟ್ಟು
ಮನವಾರೆ ಗಂಡಾ[ದ] ಸಂತೋಷಮಂ ತೊಟ್ಟು
ಹೆಚ್ಚಿದಂ ಹಿಗ್ಗಿದಂ ಹೊಂಗಿದಂ ಸುಖದೊಳಗೆ
ನಚ್ಚಿದಂ ಮಚ್ಚಿದಂ ಶಿವಭಕ್ತಿಭರದೊಳಗೆ
ಹೇರೂರ ಶಿವಭಕ್ತನಾಗಿ ಕುಳ್ಳಿರ್ದಿರಲು
ಪೂರೈಸಿ ಪರಮಪುರುಷಾಕಾರನಾಗಿರಲು
ಆಗಮಸ್ಥಾನದೊಳ್ ಭಸಿತಮಂ ತೀವಿಟ್ಟು
ರಾಗದಿಂದಂ ಶಿವನ ಭಕ್ತಿಯಂ ಮುಂದಿಟ್ಟು
ನಿತ್ಯನೇಮಂ ಮಾಡಿ ಶಿವಭಕ್ತನೊಪ್ಪಿದಂ
ನಿತ್ಯನಿಧಿ ಹೇರೂರ ಹರಭಕ್ತನೊಪ್ಪಿ[ದಂ]
ಹೆಣ್ಣಳಿದು ಗಂಡಾದ ಗಂಡುಗೂಸೊಪ್ಪಿರಲು
ಬಣ್ಣವೇರಿದ ಹೇಮದಂತೆ ಕುಳಿರ್ದಿರಲು

ಇತ್ತಲಾ ನಿಬ್ಬಣಿಗರೆಲ್ಲರುಂ ಮಿಗೆ ಪಸಿದು
ಹೊತ್ತು ಹೋಯಿತ್ತು ಬಿಸಿಲಾಯ್ತು ತಳ್ವಿದಳೆಂದು
ಒಡನಿರ್ದ ಕೆಳದಿಯಂ ಮುದದಿಂದೆ ಕರೆಯೆನಲ್
ಕಡುವೇಗದಿಂ ಪೋಗಿ ಕರೆದು ತಾಯೆನುತಿರಲ್
ನಡೆದು ಬಂದವರು ಮದವಳಿಗೆಯಂ ಕಾಣದಿರೆ
ಒಡನೆ ನುಡಿಯದೆಯಿರ್ಪ ಸಬುದಮಂ ಕೇಳದಿರೆ
ಬಂದವರು ಬೆಸಗೊಂಡರಲ್ಲಿ ಬೆಬ್ಬಳೆಗೊಂಡು
ನಿಂದು ಬೆಗೊಂಡರಂತಲ್ಲಿ ವಿಸ್ಮಯಗೊಂಡು
ಮದವಳಿಗೆ ಬಂದಳೆಲೆ ಭಕ್ತರೇ ಕಂಡಿರೇ
ಸುದತಿಯೆಲ್ಲಿಗೆ ಹೋದಳೆಲೆಯಯ್ಯ ಬಲ್ಲಿರೇ
ಈಗಳಿರ್ದಪಳೆತ್ತ ಹೋದಳಿದು ಸೋಜಿಗಂ
ಈಗಳೆಲ್ಲಿಗೆ ಮಾಯವಾದಳಿದು ಸೋಜಿಗಂ

ಎನೆ ನಿಮ್ಮ ಮದವಳಿಗೆಯಂ ಕದ್ದುಕೊಂಡೆವೆ
ಮನವಾರೆಯರಸಿಕೊಂಬುದು ನಾವು ಬಲ್ಲೆವೆ
ಕಾಣೆವಾವೆಂದು ಕಿವಿಯಂ ಮುಚ್ಚಿಕೊಳುತಮಿರೆ
ಮಾಣದಾ ನಿಬ್ಬಣಿಗರೆಲ್ಲ ಬಂದರಸುತಿರೆ
ಅತ್ತೆ ಮಾವಂದಿರಲ್ಲಲ್ಲಿ ಪೊಕ್ಕರಸುತಿರೆ
ಸುತ್ತಲುಂ ಮದವಣಿಗನೊಳಗಾಗಿಯರಸುತಿರೆ
ಮಗವು ಮುನ್ನವೆ ಕದ್ದು ತಮ್ಮೂರ್ಗೆ ಹೋದಳೊ
ಮಗಳನಿನ್ನೆಲ್ಲಿಯುಂ ಕಾಣೆವೇನಾದಳೊ
ಎಂದು ಹೇರೂರ್ಗೆ ತಮ್ಮೊಳಗಿರ್ವರಂ ಕಳುಪೆ
ಬಂದವರ್ ತಾಯ್ತಂದೆಗಳಿಗೆ ಸುದ್ದಿಯನರಿಪೆ
ಬಂಡಿಯಿಂದಿಳಿದು ಕಟ್ಟುಂಗೂಳನುಣಲೆಂದು
ಬೆಂಡಾದ ಹೇರೂರ ಹೆಂಗೂಸನೊಲಿದಂದು
ಕರೆಯೆ ನೇಮಕ್ಕೆಂದು ಶಿವನಲ್ಲಿಗೈತಂದು
ಇರಲಿರಲ್ಕಾಣಬಾರದೆ ಕೌತುಕದೊಳಂದು
ಸುತ್ತಿ ನಿಂದರಸಿ ತೊಳಲಿದೆವೆಲ್ಲಿ ಕಾಣೆವೆನೆ
ಇತ್ತಲೆಯ್ತಂದಳೆಂದಿಲ್ಲಿಗೆಯ್ತಂದೆವೆನೆ

ಪೊರಮಟ್ಟರಲ್ಲಿ ಶಿವಭಕ್ತನುಂ ಭಕ್ತೆಯುಂ
ಪೊರಮಟ್ಟರೊಡನೊಡನೆ ಶಿವನ ಭಕ್ತಾಳಿಯುಂ
ಎತ್ತಿದ ವೃಷಧ್ವಜಂ ಗಗನದೊಳ್ಕುಣಿವುತಂ
ಸುತ್ತಿ ಮಿಗೆ ಭಕ್ತರುಂ ಮೀರರುಂ ನೆರೆವುತಂ
ಭವಿಗಳ್ಗೆ ಕುಡಬೇಡನಲ್ಕುಡುವುದುಂ ಮಾಣೆ
ಭವಿ ನೆಂಟರೆಂದುಂಟೆ ಭಕ್ತರೆಂಬುದ ಕಾಣೆ
ಭವಿಗೆ ಕುಡುವರೆ ಮಗಳನಕಟ ಸದುಭಕ್ತೆಯಂ
ಭವನೊಳ್ ಸದಾಚಾರನೆಲೆಗೊಂಡ ಯುಕ್ತೆಯಂ
ಎಂದು ತಂದೆಯನೆಲ್ಲರುಂ ಮರಳ್ಮಾಡುತಂ
ಬಂದರಾ ಶಿವಭಕ್ತರಾಡುತಂ ಪಾಡುತಂ
ಕಡು ಮುಳಿಸಿನಿಂ ಶಂಭುವಿನ ನಿಳಯಮಂ ಪೊಕ್ಕು
ಮೃಡಭಕ್ತನಿರೆ ಕಂಡು ಕೇಳ್ದರೆಲ್ಲಂ ಮಿಕ್ಕು
ಕೇಳೆ ಗಂಡುಡಿಗೆಯುಟ್ಟಿರ್ದ ಶರಣಂ ಕಂಡು
ಶೂಲಿಯಣುಗರನರಿದು ನೆನೆದು ಚಿತ್ತಂಗೊಂಡು
ಭಕ್ತರಂ ಕಾಡಲೇಕಿನ್ನು ಪೇಳ್ದಪೆನೆನುತೆ

ಭಕ್ತಿಯುಕ್ತಂ ನೋೞ್ಪೆನೆಂದು ಮನದೊಳಗೆನುತೆ
ಆರನರಸಿಹಿರಿ ಎಲೆ ಭಕ್ತರಿರ ಬನ್ನಿರೇ
ಮಾರಾರಿಯಣುಗನಂ ನೋಡುವಿರಿ ಬನ್ನಿರೇ

ಎನಲು ತಾಯ್ತಂದೆಗಳು ಮಗಳ ದನಿಯಂ ಕೇಳ್ದು
ಮನವಾರೆ ತಿರುಗಿ ಕಾಣದೆ ಕೌತುಕಂದಾಳ್ದು
ಮಗಳ ದನಿಯಾದಪುದು ಗಂಡುರೂಪಿದು ಚಿತ್ರ
ಅಗಜೆಯರಸಂ ತಾನೆ ಬಲ್ಲನಿಳೆಗಿದು ಚಿತ್ರ
ಎನುತಮಿರೆ ಬನ್ನಿರೇ ನಿಮ್ಮ ಮಗಳಾನೆಂದು
ಮನಸಿಜಾರಿಯೆ ಗಂಡು ಮಾಡಿದಂ ತಾನಿಂದು
ಪಾರ್ವತೀಪ್ರಿಯನೊಲಿದು ಗಂಡು ಮಾಡಿದನಿಂದು
ಸರ್ವೇಶನೊಲಿದೆನ್ನ ಗಂಡುಮಾಡಿದನಿಂದು
ಚಂಡೇಶನೊಲಿದೆನ್ನ ಗಂಡುಮಾಡಿದನಿಂದು
ಕಂಡು ಬಳಲಲ್ಬೇಡ ಗಂಡಾದೆ ನಾನಿಂದು
ಎಂದು ಮುನ್ನಿನ ಮೈಯ ಕುರುಹೆಲ್ಲವಂ ತೋರಿ
ಬಂದ ತಾಯ್ತಂದೆಗಳಿಗಲ್ಲಿ ನಂಬುಗೆಯೇರಿ
ಬೆರಗಾಗಿ ಕೊಂಡಾಡಿದರ್ ಭಕ್ತ ಜನವೆಲ್ಲ
ಪೊರಮಡಿಸಿದರ್ ಸವಣನಿಬ್ಬಣಿಗರುಮನೆಲ್ಲ
ಆಡಿದರ್ ಹಾಡಿದರ್ ಶಂಕರನ ಮಹಿಮೆಯಂ
ನೋಡಿದರ್ ಕೂಡಿದರ್ ಶಿವನ ಸದ್ಭಕ್ತಿಯಂ
ಅಂದಿನಿರುಳಲ್ಲಿ ಗಣಪರ್ವವಂ ಮಾಡುತಂ
ಮುಂದೆ ಬೆಳಗಾಗೆ ಮಗನಂ ನೋಡಿ ಹಿಗ್ಗುತಂ
ಹೇರೂರ್ಗೆ ನಡೆಯೆನಲ್ ಬಾರೆನೆಂದುಂ ಬಾರೆ
ಆರ ಮಾತಂ ಕೇಳೆನಭವನಂ ಹೆರಸಾರೆ
ಎಂದು ಹೇರೂರ ಭಕ್ತಂ ದೇವನಂ ಬೇಡಿ
ಬಂದು ಶಿವಪುರವನಲ್ಲಡವಿಯೊಳ್ ನೆರೆಮಾಡಿ
ಭಕ್ತರೊಡಗೂಡಿ ಸರ್ವೇಶನಂ ಪೂಜಿಸುತೆ
ಯುಕ್ತಿ ಹೊದ್ದದ ನಿಷ್ಠೆ ನೆಲೆಗೊಳಲು ಪೂಜಿಸುತೆ
ಶಿವಭಕ್ತಿಗೋಷ್ಠಿಯೊಳ್ ನಿಚ್ಚಲೋಲಾಡುತಂ
ಶಿವಭಕ್ತಿ ಸುಖದೊಳಗೆ ಮೂಡಿ ಮುಳುಗಾಡುತಂ
ಹೇರೂರ ಹೆಂಗೂಸು ಗಂಡಾದಳೆಂಬ ನುಡಿ
ಧಾರುಣಿಯೊಳಗೆ ಹತ್ತಮಡಿ ತೀವುತಿರೆ ಕೂಡಿ

ಇಂತು ಪಲವುಂ ಕಾಲವಗಲದರ್ಚಿಸುತಿರ್ದು
ಕಂತುಮದಹರನ ಶಂಕರನ ಹತ್ತಿರೆ ಸಾರ್ದು
ದೇವ ಮರ್ತ್ಯದೊಳಿರವು ಸಾಕೆನಗೆ ಶಂಕರಾ
ದೇವ ಕೈಲಾಸಕ್ಕೆ ಕೊಂಡೊಯ್ಯೊ ಶಶಿಧರಾ
ಎಂಬ ಬಿನ್ನಪದೊಳಗೆ ಹೂಮಳೆಗಳೆರಗಿದವು
ಅಂಬರಸ್ಥಳದೊಳಗೆ ವಾದ್ಯತತಿ ಮೊಳಗಿದವು
ಬಂದುದಾಗಳೆ ಪುಷ್ಪಕಂ ಕಾಂತಿಯಪ್ಪಿನಂ
ಬಂದು ಪುಷ್ಪಕದೊಳಗೆ ಕುಳ್ಳಿರಿಸೆ ಭಕ್ತನಂ
ಮೀರಿ ನೆಗೆಯಿತ್ತು ಶಿವಲೋಕಕನುರಾಗದಿಂ
ತೋರಿದಂ ಕೀರ್ತಿಯಂ ಜಗಕೆ ಸಂತೋಷದಿಂ
ಬಂದು ನಂದೀಶ್ವರನ ಬಾಗಿಲೊಳೆ ನಿಂದಿರ್ದು
ಇಂದುಧರನೋಲಗಕ್ಕತುಳ ಸುಖಮಂ ಸಾರ್ದು
ಶರ್ವಂಗೆ ಶಾಂತಂಗೆ ಸತ್ಯಂಗೆ ನಿತ್ಯಂಗೆ
ಸರ್ವಂಗಸಾಧ್ಯಂಗೆ ರುದ್ರಂಗೆ ಭದ್ರಂಗೆ
ದೇವಂಗೆ ದೇವರ ಶಿಖಾಮಣಿಗೆ ಈಶಂಗೆ
ಭಾವಗಮ್ಯಂಗೆ ನಿಜಭಕ್ತಜನ ಹರುಷಂಗೆ
ಬಂದು ಮೈಯಿಕ್ಕಿದಂ ಶಿವಭಕ್ತಮನೊಲ್ಮೆಯಿಂ
ಅಂದು ನಿಜಹಸ್ತದಿಂದೆತ್ತಿದಂ ನಲ್ಮೆಯಿಂ
ನೋಡು ನಂದೀಶ ಇಂತಪ್ಪುದೊಂದರಿದುಂಟೆ
ನೋಡೆನ್ನನೇಕಚಿತ್ತದಲರ್ಚಿಸಿದರುಂಟೆ
ಭವಿಗಂಜಿ ಭವಕಂಜಿ ಎನ್ನನಪ್ಪಿದರುಂಟೆ
ಭವದ ಬೆಂಬಳಿವಿಡಿಯದೆನ್ನನಪ್ಪಿದರುಂಟೆ
ಎನ್ನಪ್ಪಿನಿಂ ಹೆಣ್ಣು ಗಂಡಾದರಿಂತುಂಟೆ
ಎನ್ನ ಭಕ್ತರ್ಗೆ ಮೂಲೋಕದೊಳು ಸರಿಯುಂಟೆ

ಎಂದು ಕೊಂಡಾಡುತಂ ಗಣಕುಲಕೆ ತೋರುತಂ
ಸಂದಣಿಪ ಸುಖದಿಂದೆ ಹೆಚ್ಚಿ ಕಳೆಯೇರುತಂ
ಹೇರೂರ ಭಕ್ತಂಗೆ ಗಣಪದವಿಯಂ ಕೊಟ್ಟು
ಕಾರುಣ್ಯನಿಧಿಯೊಲಿದು ಹರುಷದಿಂ ಮುಂದಿಟ್ಟು
ಏಕನಿಂತೊಪ್ಪಿದನನೇಕ ನಿಂತೊಪ್ಪಿದಂ
ಸಾಕಾರನೆನಿಸುವ ನಿರಾಕಾರನೊಪ್ಪಿದಂ
ಕಾಮಹರನೊಪ್ಪಿದಂ ಕರ್ಮಹರನೊಪ್ಪಿದಂ
ಸೋಮಧರನೊಪ್ಪಿದಂ ತ್ರಿಪುರಹರನೊಪ್ಪಿದಂ

ತಾನೊಲಿಯೆ ಪಾಪವಂ ಪುಣ್ಯವಂ ಮಾಡುವಂ
ತಾನೊಲ್ಲದಿರೆ ಪುಣ್ಯವಂ ಪಾಪವೆನಿಸುವಂ
ಮಿಮಲತರ ನೀಲಕಂಧರ ನಿತ್ಯನೊಪ್ಪಿದಂ
ಆಮಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ ೩೩೮

ಗಂಡನನಪ್ಪದ ಮುನ್ನವೆ
ಕಂಡಾ ಹೇರೂರ ಹೆಣ್ಣಿನಂದೊಲವಿಂದಂ ।
ಗಂಡಂ ಮಾಡಿದನಮರರ
ಗಂಡಂ ಮದನಾರಿ ಹಂಪೆಯ ವಿರೂಪಾಕ್ಷಂ ॥

❖❖

# ೨೨. ಮಹಾದೇವಿಯಕ್ಕನ ರಗಳೆ

### ಸ್ಥಲ ೧

ಶ್ರೀಮದ್ಗೌರೀವರಂ ಶಂಕರನಭವನಚಿಂತ್ಯಂ ಸದಾನಂದರೂಪಂ
ಸೋಮಾರ್ಧೋತ್ತಂಸನೀಶಂ ಪಶುಪತಿ ಗಿರಿಶಂ ಭಕ್ತವೃಂದಪ್ರಮೋದಂ
ಭೀಮಂ ಭರ್ಗಂ ಭವಂ ಭಾಸುರನಿಧಿ ಮೆರೆದಂ ಭೂಮಿಯೊಳ್ಫಾಳನೇತ್ರಂ
ಪ್ರೇಮಂ ಕೈಗಣ್ಮೆ ತಾನೊಲ್ದುಡುತಡಿಯ ಮಹಾದೇವಿಯಂ ಹಂಪೆಯಾಳ್ದಂ ॥

ಭಾವಕಿಯ ಭಕ್ತಿಚರಿತೆಯ
ಲಾವಣ್ಯದ ತಿರುಳ ತಂಬೆಲರ ತಂಪಿನ ಸಂ।
ಜೀ[ವಿನಿ]ಯೆಂದೆನಿಪ ಮಹಾ
ದೇವಿಯ ಗುಣಕಥನಮಂ ವಿತರ್ಣಿಪರಳವೇ ॥

ಶ್ರೀ ಸಕಳದೇವರೊಲಿದೊಪ್ಪಿಪ್ಪ ರಜತಗಿರಿ
ವಾಸವಂ ಮನುಮುನಿಗಳಾದರಿಪ ರಜತಗಿರಿ
ಅಣಿಮಾದಿ ಗುಣವಗಲದೊಪ್ಪಿಪ್ಪ ರಜತಗಿರಿ
ಮಣಿಮುಕುರವೀಥಿಯಂ ತಳೆದಿಪ್ಪ ರಜತಗಿರಿ
ಶಶಿಗೆ ಬೆಳುದಿಂಗಳಂ ಕಡನೀವ ರಜತಗಿರಿ
ದೆಸೆಗೆ ಪುಣ್ಯದ ಬೆಳಗನಳವಡಿಪ ರಜತಗಿರಿ
ಭಸಿತದ ಬೆಳಗನೆಳೆದುಕೊಳುತಿರ್ಪ ರಜತಗಿರಿ
ಅಸಮನಯನನ ಸುಖಸ್ಥಲವಾದ ರಜತಗಿರಿ
ಆ ಗಿರಿಯ ಮೇಗಣ ಸಭಾಭವನಮಧ್ಯದೊಳು
ನಾಗಭೂಷಣನೊಪ್ಪುತಿರ್ದನತಿ ಚೋದ್ಯದೊಳು
ಎಡಬಲದೊಳಿಡಿದಿರ್ದ ದೇವಗಣತತಿಯೊಳಗೆ
ಜಡಜನಾಭಂ ಜಡಜಭವನಮರಪತಿಯೊಳಗೆ

ಕಿನ್ನರರ ಸುರರ ಕಿಂಪುರುಷಪ್ರಕರದೊಳಗೆ
ಪನ್ನಗರ ಸಿದ್ಧ ವಿದ್ಯಾಧರ ವ್ರಜದೊಳಗೆ
ಕೆಂಜೆಡೆಯ ಕಮನೀಯ ರೂಪನೊಪ್ಪುತ್ತಿರ್ದ
ರಂಜಿಸುವ ಚಂದ್ರಕಳೆಯರಸನೊಪ್ಪುತ್ತಿರ್ದ
ಗುಪ್ತಗಣನಾಥನೆಂಬನ ವದನಮಂ ನೋಡಿ
ಆಪ್ತನೆನಿಸಿರ್ದ ಶರಣಂಗೆ ಕೃಪೆಯಂ ಮಾಡಿ
ಕರೆಯಲು ಮಹಾಪ್ರಸಾದಂ ದೇವ ಎನುತೆದ್ದು
ಕರುಣಕ್ಕೆ ಹಿಗ್ಗಿ ಹೊರೆಯೇರಿ ಸುಖದೊಳಗದ್ದು
ಮೈಯಿಕ್ಕಿ ಕೈಮುಗಿದು ತಗ್ಗಿ ಕುಗ್ಗುತ್ತಮಿರೆ
ಕೈಯೆತ್ತಿ ಪೊಡಮಟ್ಟು ಕರುಣಮಂ ಹಾರುತಿರೆ
ದೇವನಾತನನೀಕ್ಷಿಸುತೆ ನುಡಿದನೆಲೆ ಮಗನೆ
ದೇವಿಯರ ಸಮಯಮಂ ನೋಡಿ ಬಾರೆಲೆ ಮಗನೆ
ಹೋಗಯ್ಯ ಗುಪ್ತಗಣನಾಥ ಹೋಗೆಂದಲ್ಲಿ
ರಾಗದಿಂ ಬೆಸಸೆ ಪೊರಮಟ್ಟನುಬ್ಬುತ್ತಲ್ಲಿ
ಅಂತಃಪುರಕೆ ಬಂದು ಬಾಗಿಲುಗಳಂ ಕಳೆದು
ಮುಂತೆ ರುದ್ರಾಣಿಯ ಸಭಾಸ್ಥಲಕೆ ನಲಿನಲಿದು
ಬರುತಮಿರೆ ಮಾನಿನಿಯರೋಲಗಂ ತೋರಿತ್ತು
ಬರೆ ಕಂಕಣಂಗಳ ಝುಣತ್ಕಾರವುಣ್ಮಿತ್ತು
ಪರಿಮಳದ ಭಾರದಿಂ ತಂಗಾಳಿ ತೀಡಿತ್ತು
ವರ ಗಣೇಶನ ಕಣ್ಗೆ ಕೌತುಕಮನರುಪಿತ್ತು
ಪರಿವ ಬೆಳುದಿಂಗಳೋ ಕಡೆಗಣ್ಣ ನೋಟವೊ
ನೆರೆದ ಶಶಿಬಿಂಬಮೋ ಸಿರಿಮೊಗದ ಮೊತ್ತಮೊ
ಚಕ್ರವಾಕದ ನೆರವಿಯೋ ಕುಚದ ಪಜ್ತಿಯೊ
ಶಕ್ರಚಾಪಂಗಳೋ ತುಡಿಗೆಗಳ ಕಾಂತಿಯೊ
ಸುರಕುಜದ ಶಾಖೆಯೋ ನಳಿತೋಳ ತೋರ್ಕೆಯೊ
ಪರಿಮಳದ ಪಸರವೋ ಸವಿವುಸುರ ತೆರಳ್ಕೆಯೊ
ಸೌಕುಮಾರ್ಯದ ಸಾಲೊ ವನಿತೆಯರ ನೆರವಿಯೊ
ಲೌಕಿಕದ ನುಡಿ ಪುಗದ ಸಿಂಗರದ ಸೀಮೆಯೊ
ಎಂಬ ಸಂಶಯವನೊಳಕೊಂಡುದಪ್ರತಿಮ ಸಭೆ
ಅಂಬಿಕೆಗೆ ಸಕಲ ಸುಖವೀವ ಸುಕುಮಾರ ಸಭೆ
ಆ ಸಭೆಯ ನಡುವೆ ಸಿರಿ ಸೀಗುರಿಯನಿಕ್ಕೆಂಬ
ಭಾಸುರದಿ ಚಾಮರವನಿಕ್ಕು ಭಾರತಿ ಎಂಬ

ದೇವಿಯರ ಮೆಲ್ಲಡಿಯನೊತ್ತು ಮೇನಕೆ ಎಂಬ
ಓವಿ ಬಿಜ್ಜಣಿಗೆಯಂ ಬೀಸು ಖೇಚರಿ ಎಂಬ
ಸಿರಿಮುಡಿಯನೊಪ್ಪಿರಲು ಸಿಂಗರಿಸು ಶಚಿ ಎಂಬ
ವರ ಯಕ್ಷಕರ್ದಮವನಿರಿಸು ಯಕ್ಷಿಣಿ ಎಂಬ
ಎಲೆ ಪುಷ್ಪದಂತೆ ಪುಷ್ಪಂಗಳಂ ನೀಡೆಂಬ
ಎಲೆಲೆ ಧವಳಾಂಗಿ ಮಡಿವರ್ಗಮಂ ತಾರೆಂಬ
ಅಳಕಕ್ಕೆ ಪುರುಡಿಸುವ ತುಂಬಿಗಳನೆಬ್ಬೆಂಬ
ಬೆಳಪ ಮಣಿಮುಕುರಮಂ ನಾಲ್ದೆಸೆಗೆ ಪಿಡಿಯೆಂಬ
ರವಿಕಿರಣೆ ಪದಕಮಂ ಪಿಡಿದು ನೀಂ ನಿಲ್ಲೆಂಬ
ನವಕುಮುದೆ ಭಾಳಶಿಶಿಯೊಳ್ತಿಳಕವಿಕ್ಕೆಂಬ
ಜಯೆವಿಜಯೆ ಕೈಮುಗಿದು ಬಿನ್ನೈಸು ಎಂದೆಂಬ
ದಯೆಯೊಳೀಕ್ಷಿಸು ದೇವಿ ಊರ್ವಸಿಯನೆಂದೆಂಬ
ಕಿನ್ನರಿಗೆ ತೆರಹುಗುಡು ರಂಭೆ ಹೆರೆಸಾರೆಂಬ
ಪನ್ನಗಾಂಗನೆ ತಿಲೋತ್ತಮೆಗೆಡೆಯನೀಯೆಂಬ
ರತಿಯೊಡನೆ ರೋಹಿಣಿಯನೊಳಪೊಗಿಸು ಪೊಗಿಸೆಂಬ
ಅತಿಶಯದಿ ಗಂಧರ್ವಸತಿ ಪಾಡು ಪಾಡೆಂಬ
ರುದ್ರಕನ್ನಿಕೆಯರಂ ಬೇರೆ ಕುಳ್ಳಿರಿಸೆಂಬ
ಮುದ್ರಿಸಿದ ಭಂಡಾರಮಂ ನೋಡುನೋಡೆಂಬ
ಧನದಸತಿಯಾಭರಣ ಜಾಲಮಂ ನೀಡೆಂಬ
ವನಲಕ್ಷ್ಮಿ ಚಂದನಮನಾರೈದು ನೀಡೆಂಬ
ವರುಣನರಸಿಯೆ ಅಗ್ಘವಣಿಗಳಂ ತಾಯೆಂಬ
ಇರದೆ ಪವಮಾನವಧುವಂ ಹೂವನೀಯೆಂಬ
ಬೋನಮಂ ಸ್ವಾಹಾವನಿತೆ ಮಾಡು ಮಾಡೆಂಬ
ಭಾನುಸತಿ ಸೆಜ್ಜೆಯೊಳು ಜ್ಯೋತಿಯಂ ಬೆಳಗೆಂಬ
ಪಡಿಯರತಿಯರ ಮಹಾಕೋಳಾಹಳದ ನಡುವೆ
ಎಡೆಗೊಂಡ ಬಹುರತ್ನ ಕಾಂತಿನಿಳಯದ ನಡುವೆ
ವಿರಚಿಸಿದ ಮಣಿನಿಕರ ಸಿಂಹಾಸನದ ಮೇಲೆ
ಅರಸಿ ರಂಜಿಪ ಹಂಸತೂಳತಳ್ಪದ ಮೇಲೆ
ಕುಳ್ಳಿರ್ದು ಸಾವಿತ್ರಿಯೊಡನೆ ಮಾತಾಡುತಂ
ಒಳ್ಳಿತೆನೆ ಗಾಯತ್ರಿಯೊಳು ಸರಸವಾಡುತಂ
ನಿಂದರುಂಧತಿಗೆ ಕೃಪೆಯಿತ್ತು ನಡೆನೋಡುತಂ
ಮುಂದಿರ್ದ ಸಪ್ತಮಾತೃಕೆಯರೊಳು ನುಡಿವುತಂ

ಕಾರಿಕಾಲಮ್ಮೆಯಂ ವಿನಯದಿಂ ನೋಡುತಂ
ಬಾರ ಮಾಂಗಾಯಕ್ಕ ನಾಚಿಯೆಂದುಬ್ಬುತಂ
ಕರೆದು ಯಸ್ಯಜ್ಞಾನಿದೇವಿಯಂ ಪೊಗಳುತಂ
ಕರುಣದಿಂ ಕೋಳೂರ ಕೊಡಗೂಸ ನೋಡುತಂ
ಚಂಗಳವ್ವೆಯನೊಲಿದು ನೋಡಿಕೊಂಡಾಡುತಂ
ಮಂಗಳಾಂಗನೆ ಬಿಜ್ಜಳವ್ವೆಗೊಲವೀವುತಂ
ನಿಂಬಿಯಕ್ಕನ ಮೇಲೆ ಕರತಳವನೆಳೆವುತಂ
ಇಂಬರಿವ ವೈಜಕವ್ವೆಯನೊಸೆದು ನೋಡುತಂ
ವರದಾನಿ ಗುಡ್ಡವ್ವೆಯಂ ನೋಡಿ ನಲಿವುತಂ
ಪರಮ ಸುಖಿಯಾದ ಮಲುಹಣಿಯನಾದರಿಸುತಂ
ಹರನರ್ಧವಂ ಸೂರೆಗೊಂಡ ಸುಧೆಯೊಪ್ಪಿದಳು
ಹರನ ಮನಮಂ ಮಾರುಗೊಂಡ ವಧುವೊಪ್ಪಿದಳು
ನಲಿದು ಪೂಜಿಪ ಶರಣಜನ ಶಾಂತೆಯೊಪ್ಪಿದಳು
ಪುಲಿದೊವಲ ಪುಣ್ಯಾಧಿಕನ ಕಾಂತೆಯೊಪ್ಪಿದಳು
ನಿತ್ಯನೊಲು ನೆಲೆಗೊಂಡ ಮುತ್ತೈದೆಯೊಪ್ಪಿದಳು
ಸತ್ಯಂ ವಿರೂಪಾಕ್ಷನರ್ಧಾಂಗಿಯೊಪ್ಪಿದಳು

ಆ ಸಮಯದೊಳು ಗುಪ್ತಗಣನಾಥನೊಳಪೊಕ್ಕು
ಭಾಸುರಸ್ಥಾನದೊಪ್ಪಕ್ಕೆ ಹರುಷಂ ಮಿಕ್ಕು
ಮೆಲ್ಲನೊಂದೆಸೆಯ ಗೋಂಟಂ ಪತ್ತಿನಿಂದಿರ್ದು
ಅಲ್ಲಿ ಹೊರವೇಷವಿಲ್ಲದೆ ಸುಖದಿನೊಳಸಾರ್ದು
ಭಸಿತಮುಂ ಮನದೊಳಗೆ ರುದ್ರಾಕ್ಷೆ ಮನದೊಳಗೆ
ಎಸೆವ ಶಂಕರನ ವೇಷಂ ಚಿತ್ತದೊಳಗೊಳಗೆ
ಎಂದೆನಿಪ ಗುಪ್ತಮಾಹೇಶ್ವರಂ ಕೈಮುಗಿದು
ನಿಂದು ಬಿನ್ನೈಸಿದಂ ಚಿತ್ತವಲರುತ್ತಗಿದು
ತಾಯೇ ಜಗನ್ಮಾತೆ ಶಂಕರಂ ಕಳುಪಿದಂ
ಮಾಯಾರಹಿತೆ ಮಾತೆ ಶಶಿಧರಂ ಕಳುಪಿದಂ
ಎಂದು ಭಯಭಕ್ತಿಯಿಂದಲ್ಲಿ ಮೈಯಿಕ್ಕುತಿರೆ
ಪಿಂದಿರ್ದ ಭಕ್ತೆಯಂ ತನ್ನ ಕಾಲ್ ತಾಗುತಿರೆ
ದೇವಿಯರ ಪೆಸರಪ್ಪ ಮಹದೇವಿಯೆಂಬಳಂ
ಭಾವಿಸಲು ರುದ್ರಕನ್ನಿಕೆಯನಿಸಿ ನಿಂದಳಂ
ಕಾಲ್ತಾಗೆ ಕೋಪಿಸುತೆ ನುಡಿದಳತಿ ಗರ್ವದಿಂ

ಸೋಲ್ತು ಹೊರವೇಷಮಂ ಕಾಣದಜ್ಞಾನದಿಂ
ಎಲೆ ಭವಿಯೆ ನೋಡಿ ಪೊಡವಡು ಪೊಡವಡೆಂದೆನಲು
ಎಲೆಲೆ ಪಿಂದಿರ್ದರಂ ಕಾಣಬಾರದೆಯೆನಲು
ಭವಿಯೆಂಬ ನುಡಿಗೇಳಿ ಗುಪ್ತಮಾಹೇಶ್ವರಂ
ತವೆ ಕಂದಿ ಭಕ್ತಿಯಭಿಮಾನಿ ನೋವುತೆ ಕರಂ
ದೇವಿಯರ ವದನಮಂ ದೈನ್ಯದಿಂ ನೋಡುತಿರೆ
ದೇವಿಯರು ನುಡಿದರಾ ನೆರೆದ ಸಭೆ ನಡುಗುತಿರೆ
ಏನವ್ವ ಮಹದೇವಿ ಭವಿಯೆಂದು ನುಡಿವರೆ
ಜ್ಞಾನನಿಧಿ ಗುಪ್ತಗಣನಾಥನಂ ಜರಿವರೆ
ಹೊರವೇಷವಿದ್ದಲ್ಲಿ ಭಕ್ತಿ ದೊರೆಕೊಳ್ವುದೆ
ಬರಿ ವೇಷದೊಳುನುಡಿಯ ಬಲೆಯೊಳಗೆ ಬೀಳ್ವುದೆ
ಗುಪ್ತರುಂ ಶಾಂತರುಂ ಸತ್ಯವುಳ್ಳವರುಂಟು
ಆಪ್ತರೆನ್ನವರಭವನೊಲುಮೆಯುಳ್ಳವರುಂಟು
ಇಂತೊಂದು ತೆರನೆನಲ್ ಬಪ್ಪುದೇ ಭಕ್ತರಂ
ಸಂತತವನಂತಶೀಲರ್ ಭಕ್ತಿಯುಕ್ತರಂ
ಭಕ್ತರ ನಿರೋಧದಿಂದೊಂದು ಜನ್ಮಂ ನಿನಗೆ
ಯುಕ್ತವೆನಿಸಿತ್ತು ನರಜನ್ಮವುರ್ವರೆಯೊಳಗೆ
ಭಕ್ತರುದರಂಬೊಕ್ಕು ನಿಜನಾಮಮಂ ತಳೆದು
ಭಕ್ತನಂ ಭವಿಯೆಂದ ದೂಸರಿಂದಪ್ಪುದಿದು
ಭವಿಗೆ ಹೆಂಡತಿಯಾಗಿ ಭಕ್ತರ್ಗೆ ಶರಣೆಂದು
ಭವವಾರ್ಧಿಯಂ ದಾಂಟಿ ಶ್ರೀಗಿರಿಗೆ ನಡೆತಂದು
ಬಳಿಕ ಬಪ್ಪುದು ಹೋಗೆನುತ್ತೆ ಬೆಸಸಲ್ಕಂದು
ಕಳವಳಿಸಿ ಕೊರಗುತ್ತೆ ಮಹದೇವಿ ನೆರೆನೊಂದು
ಪಿರಿದೊಂದು ಭೀತಿಯಿಂ ಗಿರಿಜೆಯಂ ಬೀಳ್ಕೊಂಡು
ಹರನರಸಿಯಿತ್ತ ಶಾಪವನಲ್ಲಿ ಕೈಕೊಂಡು
ಬರುತಿರ್ದಳಗಜೆ ಬೆಸಸಿದ ಮಾತನಾಡುತ್ತೆ
ಬರುತಿರ್ದಳಂಬಿಕೆಯ ಚರಣಮಂ ನೆನೆವುತ್ತೆ

ಇತ್ತ ಧರಣೀತಳಕೆ ತೊಡವಿದೆಂದೆನಿಸಿರ್ಪ
ಮುಕ್ತಿ ಶಿವಭಕ್ತಿ ಸಂತಾನದಿಂದಿಡಿದಿರ್ಪ
ಹೊಸ ಸೋಮಸೂರ್ಯವೀಥಿಗಳಿಂ ವಿರಾಜಿಸುವ
ಮಿಸುಪ ಕರುಮಾಡ ಕೋಟಿಗಳಿಂದೆ ರಂಜಿಸುವ

ಗೌರೀಧವನ ಶಿವನ ಭವನಾಳಿಯಿಂ ಮೆರೆವ
ಪೌರಜನಜನಿತ ಸಂಪದವ ಸೊಂಪಿಂದೆಸೆವ
ಕೌಶಿಕನೆನಿಪ್ಪ ಮನ್ನೆಯನಿಪ್ಪ ಪಟ್ಟಣದ
ದೇಶದೊಳಗೊಪ್ಪುವುಡುತಡಿಯೆಂಬ ಪಟ್ಟಣದ
ಒಳಗಿಪ್ಪರೊಪ್ಪದಿಂ ಗಂಡಹೆಂಡಿರು ನೋಡ
ತಿಳಿವೊದವಿ ಶಿವನನರ್ಚಿಸುವ ಶರಣರು ನೋಡ
ಶಿವಭಕ್ತ ಶಿವಭಕ್ತೆಯೆಂಬುದಿಬ್ಬರ ಪೆಸರು
ಶಿವನ ಕಾರುಣ್ಯದಿಂ ಮಾಯೆಯಂ ಲೆಕ್ಕಿಸರು
ಷೋಡಶಪ್ರಾಯವವರಿಬ್ಬರಿಗೆ ಸಮವಾಗೆ
ರೂಢಿವಡೆದರು ಶೈವದಂಪತಿಗಳನುವಾಗೆ
ಚೆಲುವರಚ್ಚಳಿಯರಭಿಮಾನಿಗಳ್ಮಾನಿಗಳು
ಒಲಿವರತಿ ಗುಣಿಗಳತಿ ದಾನಿಗಳು ಜ್ಞಾನಿಗಳು
ವಿನಯವಿದರಾಹ ನಿರ್ಬಂಧಕರು ಸಾಧಕರು
ಘನಶಿವನ ನಿಜವರಿವ ವೇಧಕರು ಬೋಧಕರು
ಕೊರತೆಯಿಲ್ಲಂ ತಮ್ಮ ಧನದೊಳಂ ಮನದೊಳಂ
ನೆರೆಮೆರೆವರಧಿಕ ಜವ್ವನದೊಳಂ ಜನದೊಳಂ

ಇಂತಪ್ಪ ಶಿವಭಕ್ತರಂತೊಂದು ದೆವಸದೊಳು
ಚಿಂತಿಸುತ್ತೈತಂದು ಶಂಕರನ ನಿಳಯದೊಳು
ಪೊಕ್ಕು ಗಿರಿಜಾತೆಯಂ ಪೊಗಳುತ್ತೆ ಕೈಮುಗಿದು
ಅಕ್ಕರಿಂ ಬೇಡಿದರು ಸತಿಪತಿಗಳಗಿದಗಿದು
ದೇವಿಯೆಮಗೊರ್ವ ಪುತ್ರಿಯನೀವುದೆಲೆ ತಾಯೆ
ನಾವು ನಿಮ್ಮಯ ಪೆಸರನಿಟ್ಟಪೆವು ಒಲಿದೀಯೆ
ಅವನಿಗತಿ ರೂಪಸಂಪನ್ನೆಯಂ ಚೆನ್ನೆಯಂ
ಶಿವನ ಸದ್ಭಕ್ತಿಯೊಳಭಿನ್ನೆಯಂ ಕನ್ಯೆಯಂ
ಕರುಣಿಸುವುದೆಂದು ಬಾಯಳಿದು ಬಿನ್ನೈಸುತಿರೆ
ಗಿರಿಸುತೆಯ ಮುಡಿಯಿಂದಲೊಂದು ಹೂ ಸಡಿಲುತಿರೆ
ಆ ಪುಷ್ಪವಂ ಕೊಂಡು ಕುಕಿಲಿರಿದು ಕುಣಿದಾಡಿ
ಭಾಪು ಭಾಗ್ಯವೆ ಎಂದು ಶಿವಭಕ್ತರೊಲಿದಾಡಿ
ನವಪುಷ್ಪವಂ ಪುಷ್ಪವತಿಯುದರದೊಳಗಿರಿಸಿ
ಪವಣಿಲ್ಲದಕ್ಕರಿಂ ನಡೆತಂದರುತ್ಸವಿಸಿ
ಅವರ ಬಸುರೊಳ್ಬಂದು ಪೊಕ್ಕಳ್ ಮಹಾದೇವಿ

ಶಿವನರಸಿಯಾಜ್ಞೆಯಿಂದಿರ್ದಳುತ್ತಮ ಭಾವಿ
ಲೀಲೆಯಿಂ ಗರ್ಭಕಮಳಕ್ಕೆ ಪಕ್ಕಾಗಿರ್ದ ೧೭೦
ಳಾಲಂಬಕಕ್ಕೆಳಸಿ ಪುಟ್ಟಲನುವಾಗಿರ್ದ
ಳಿಂತೆಸೆವ ಸುಕುಮಾರಿ ಗರ್ಭದೊಳಗೊಪ್ಪುತಿರೆ
ಸಂತತಂ ಸುಖಮುಖದಿ ಬಳೆವುತ್ತಮಿರೆಯಿರೆ ೧೭೩

## ಸ್ಥಲ ೨

ಗಿರಿಜಾತೆಯಾಜ್ಞೆಯಿಂದಂ
ನರಲೋಕಕ್ಕಿಳಿದು ಬಂದು ಭಕ್ತೆಯಂ ಪುಣ್ಯೋ।
ದರಗತ ವಿಶುದ್ಧ ವಿಭ್ರಮ
ಗುರುತರಮುಖವಾದ ಗರ್ಭಮಂ ಬಣ್ಣಿಪರಾರ್॥

ಕೊಳನ ಸರೋಜದೊಳ್ಬೆಳೆವ ಬಾಲಮರಾಳವಿಶಾಲಪಿಂಡಮೋ
ಎಳೆವೆರೆಯೊಳ್ವಿರಾಜಿಸುವ ಶಾಂತಿಯ ಕಾಂತಿಯ ಪಜ್ತಿ ಪರ್ವಿತೋ
ಜ್ವಲ ನವಚಂದ್ರಿಕಾ ಕಳಸಮೋ ಪರಮೇಶ್ವರ ಭಕ್ತಿಸಿಂಗರ
ಕ್ಕೆಳಸಿ ವಧೂಧರಾಂತರದೊಳಿರ್ದುದೊ ಪೇಳೆನೆ ಗರ್ಭಮೊಪ್ಪುಗುಂ ॥

ಇಂತೊಪ್ಪೆ, ಶಿವಭಕ್ತೆಯ ಪುಣ್ಯೋದರದೊಳು ಚಂದ್ರಕಳೆ ಎಳೆವೆಳುದಿಂಗಳ ತಿರುಳ ಕಿರಣಂಗಳಂ ಕಾಮನ ಮೂರನೆಯಂಬಿನ ಸೌಭಾಗ್ಯಮಂ ಸೋಮಧರನರಸಿಯ ಮೆಲ್ಲಡಿಗಳ ಸೌಂದರ್ಯಮಂ ಶಂಕರನ ಬಿಂಕದ ವಿಳಾಸಮನೊಂದುಗೂಡಿ ಗಿರಿಜೆಯನುಮತಿಯಿಂ ವಸಂತರಾಜಂ ಮಾಡಿದ ಬೆಳಗಿನುರುಳಿಯಂತೊಳಗೊಳಗೆ ಗರ್ಭಂ ಬೆಳೆವುತ್ತಿರೆ,

ಹೊರಗೆ ತೋರ್ಪಗಣ್ಯಪುಣ್ಯಮಯ ಲಾವಣ್ಯತರ ಗರ್ಭಸೂಚನೆಯನೇನೆಂದು ಬಣ್ಣಿಪೆಂದ ಮೊಲೆಮುಡಿ ಪೊರವಾರಗಳ ಭಾರದಿಂ ಮುನ್ನವೆ ಮಾಂದ್ಯವನೆಯ್ದಿದ ಮೃದುಗತಿಯೊಡನೆ ತೆಳುವಸಿರ ತಿಣ್ಣದಿಂ ಮೆಲ್ಲಡಿ ಮಲ್ಲಳಿಗೊಳುತಿರ್ದಪವೆಂಬ ನುಡಿಯಂತಿರ್ಕೆ, ಪಾರ್ವತೀಪ್ರಸಾದದಿಂ ಭಕ್ತಿ ಜ್ಞಾನ ವೈರಾಗ್ಯರೂಪುಸಂಪನ್ನೆಯಪ್ಪ ಕಾರಣಿಕೆ ತನ್ನ ಗರ್ಭವಾಸದೊಳು ಬಂದಪಳೆಂಬ ಸಂತೋಷದಿಂದಂತಂತೆ ಕುಣಿದಪಳೆಂಬಂತೆ ನೇವುರದ ತಾಳಗತಿಯೊಡನೊಂದು ಮಂದಗತಿ ಮನೋಹರಮಾಗಿರ್ದುದು, ಮತ್ತಮೀ ತೆಳುವಸಿರೊಳಗೆ ಬೆಳೆವ ಕನ್ನೆಯ ರೂಪು ವಿಳಾಸಕ್ಕೆ ಮೂರುಂ ಲೋಕದೊಳು ಸರಿಯಿಲ್ಲೆಂದು ಮನ್ನೆಯನಪ್ಪ ಕೌಶಿಕರಾಜಂಗೆ ವಳಿತ್ರಯಂಗಳು ಪೇಳಲು ಪೋದವೆಂಬುದುಪಮಾನವಲ್ಲಲ್ಲ, ಈ ಶಿವಜ್ಞಾನಿಯನೊಳಗೆ ತಳೆದ ಬಳಿಕ್ಕೆ ಪೊರಗೆ ತೋರ್ಪ ತಾಪತ್ರಯಂಗಳು ಪೆರಪಿಂಗಿದವೆಂಬಂತೆ ವಳಿತ್ರಯಂ ಬಳಲ್ಚಿ ಪೋಗೆ ಕಿಳ್ಪೊಡೆಯೊಪ್ಪುತ್ತಿರ್ದುದು, ಮತ್ತಮದಲ್ಲದೆ, ತನುವೆಂಬುದ್ಯಾನವನ ಮಧ್ಯದ ಲಾವಣ್ಯಜಲಂ ತೆಕ್ಕನೆ ತೀವಿರ್ದ ನಿರ್ಮಳೋದರಮೆಂಬ ತಿಳಿಗೊಳನ ನಡುವೆ ವಿಕಾಸಮನೆಯ್ದಿದೇಕ ಕಮಲವೆಂಬಂತೆ ನಾಭಿಯಲರ್ದೊಳಗುದೋರಿತೆಂಬ ನುಡಿ ಸಾಮಾನ್ಯವಲ್ಲಲ್ಲ, ತನ್ನೊಳಗಣಿಂ ಪೊರಮಡುವ ಕನ್ನೆಯಂ ರೂಪಂ ವಿಳಾಸಮಂ ನೋಳ್ಪೆನೆಂದು ಸಾಮರ್ಥ್ಯಯುಕ್ತೆಯ ಸಂಗದಿಂ

ಪೂಣ್ಯೋದರವೊಂದು ಕಣ್ಣಂ ಪಡೆದಂತಿರ್ದುದು. ಮತ್ತಂ ಕುಸುಮಶರನ ಕೋದಂಡಕ್ಕೆ ಕೈಗೊಳಿಸಲೆಂದು ಕಮಳಸೂತ್ರದಿಂ ಸಮೆದು ಚೈತ್ರಂ ಬೈತಿಟ್ಟೆರಡನೆಯ ನಾರಿಯೆಂಬಂತೆ ಬಾಸೆ ಬಣ್ಣವೇರಿರ್ದುದೆಂಬ ಯುಕ್ತಿಯನುಲ್ಲಂಘಿಸಿ, ಶಿವಭಕ್ತಿ ಭಾಗ್ಯಕ್ಕೆ ಸೀಮೆದೆಗೆದ ಪುಣ್ಯರೇಖೆಯಂತಿರ್ದುದು, ಅದಲ್ಲದೆಯುಂ, ಕನಕ ಕಳಸಂಗಳಿಗೆ ನೀಲದ ಮುಚ್ಚುಳನಿಕ್ಕಿದಂತಿರ್ದ ಪವೆಂಬುಪಮಾನಮಂ ಮೀರಿಯೀ ಭಕ್ತೆಯ ಬಸುರೊಳ್ ಬಂದು ತಮ್ಮೊಳು ತೀವಿದ ಶಿವಪ್ರಸಾದ ಪಯಃಪಾನದಿಂ ಬೆಳೆದು ಭವಿಗೆ ಹೆಂಡತಿಯಾದಳೆಂಬುಮ್ಮಳದಿಂ ಮುಖಂ ಕುಂದಿದವೆಂಬಂತೆ ಕುಚಾಗ್ರಂ ಕಪ್ಪಂ ತಾಳ್ದಿರ್ದವು. ಇಂತು ಪುಣ್ಯಗರ್ಭಸೂಚನೆಗಳಂ ತಳೆದು ತೊಳಗುವಂಗ ಶಲಾಕೆ ನಯವೇರೆ, ಲಾವಣ್ಯಂ ಬಣ್ಣವೇರೆ, ಸೌಕುಮಾರ್ಯಂ ಸವಿಯೇರೆ, ಮುಖಮಂಡಲಂ ಕಾಂತಿಯೇರೆ, ನಯನಯುಗಂ ಶಾಂತಿಯೇರೆ, ಕುಂತಳಂ ಕವಲೇರೆ, ಸಂತಸಂ ಪಿರಿದೇರೆ, ನವಮಾಸವೇರಿದ ಪಕ್ಷಮುಖದೊಳು ಸುಮುಹೂರ್ತ ಸಮಯಮಂ ಪಾರ್ದಿರೆ, ಮೃಡಭಕ್ತರ್ಗುಡಿಗಟ್ಟೆ ಪುರಜನಂ ಹರುಷಮನೆಯ್ದೆ ತಂದೆಯ ಮನಂ ತಲೆಯೆತ್ತೆ ಕೆಳದಿಯರು ಮುದಮಂ ಮುತ್ತೆ, ಕೌಶಿಕರಾಜನ ಬಲದ ಭಜಂ ಕೆತ್ತೆ, ಚಂದ್ರನಿಂ ಬೆಳುದಿಂಗಳು ಪರುಷದಿಂ ಬಣ್ಣಂ ಚಿಂತಾಮಣಿಯಿಂ ಕಾಂತಿ ಸುರಭಿಯಿಂ ಸುಧಾರಸಂ ಕಲ್ಪತರುವಿಂ ಸಣ್ಣನನೆ ಪುಟ್ಟುವಂತೆ ಪುಣ್ಯೋದರದಿಂ ಘಳಿಲನುದಯವಾಗೆ ಕಂಡು ಕೊಂಡುಕೊನೆದು, ಸಿಂಗರದ ಶಿಶುವಿಂಗೆ ಭಕ್ತಿಯ ಭಾವಕಿಗೆ ಅರಿವಿನವಯವಕ್ಕೆ ಮುಕ್ತಿಯ ಮರಿಗೆ ತಾತಂ ಪ್ರೀತಿ ಮಿಗೆ ಜಾತಕರ್ಮವನಲಂಕರಿಸಿ ಬಯಕೆ ಕೈಗೂಡೆ ಪಾರ್ವತಿಯ ಪೆಸರನಿಟ್ಟು ಮಹಾದೇವಿಯೆಂದು ಮೂರುಸೂಳ್ಕಿವಿಯೊಳ್ಕರೆದು ಶಿವಭಕ್ತರ್ಗಾರಾಧನೆಯಿನಿತ್ತು ಬಂಧುಬಳಗಕ್ಕುಡಲಿತ್ತು ಯಾಚಕರ್ಗೆ ದಾನವನಿತ್ತು ಪರಿಜನಕ್ಕೆ ಹರುಷಮನಿತ್ತು ಪುರಜನಕ್ಕೆ ಪರಮ ಪ್ರೀತಿಯನಿತ್ತು ಮಹಾದೇವಿಗೆ ಶಿವಲಿಂಗಪ್ರಸಾದಮಂ ಭಕ್ತಿವೆರಸಿ ಬಾಯ್ವೆಣ್ಣೆಯನಿಕ್ಕಿ ನಲಿನಲಿದು ಸಲಹುತ್ತಿರೆ,

ತಾಯಮಗ್ಗುಲ ತಂಪಿನೊಳಂ ಮೊಲೆವಾಲಿಂಪಿನೊಳಂ ತೊಟ್ಟಿಲ ತೂಕದೊಳಂ ರಾಗಿಸುವರ ಜೋಗುಳದೊಳಂ ಸಾಗಿಸುವರ ಸೋಗಿಲೊಳಂ ಎತ್ತಿಕೊಂಬರಳ್ತಿಯೊಳಂ ಮುಟ್ಟುವರ ಮೋಹದೊಳಂ ಸೋಂಕುವರ ಸುಖದೊಳಂ ತಕ್ಕೈಸುವರಪ್ಪಿನೊಳಂ ಶಶಿಕಳೆಯಂತೆ ದಿನದಿನಕೆ ಕಳೆಯೇರಿ ನಳನಳಿಸಿ ಬೆಳೆವುತ್ತಿರ್ಪ ಮಹಾದೇವಿಯಕ್ಕಂ ಉತ್ಪಳದೊಳು ಸಿಲ್ಕಿದ ಪೆಣ್ದುಂಬಿ ಜಿನುಗುವಂತೊಮ್ಮೊಮ್ಮೆಯಳುತ್ತಂ, ಕಮಳಕುಟ್ಮಳಮರಳ್ವಂತೆ ನಗುತ್ತಂ, ಕುಮುದಂ ಮುಗಿವಂತೊಮ್ಮೊಮ್ಮೆ ಕಣ್ಮುಚ್ಚುತ್ತಂ, ಶಿವಭಕ್ತಿಯು ಮುಚ್ಚುಳಂ ತೆಗೆವಂತೆ ಕಣ್ದೆರೆವುತ್ತಂ, ಮಂದಾನಿಲನಂ ಸೋಂಕಿದೆಳಲತೆಯಲುಗುವಂತೆ ತೋಳಾಡಿಸುತ್ತಂ, ಜೀವರತ್ನವೇಳುವಂತಂಬಳಿಕ್ಕುತ್ತಂ, ನಿಷ್ಠೆ ನಿಮಿರ್ವಂತೆ ನಿಂದಿರುತ್ತಂ, ಸುಖಂ ಸುಳಿವಂತೆ ನಡೆಗಲಿವುತ್ತಂ, ವೀಣೆ ದನಿಗುಡುವಂತೆ ನುಡಿಗಲಿವುತ್ತಂ, ಅರಳೆಲೆಯ ಸಿರಿವಂತೆ ಸೂಸಕದ ಸುಮ್ಮಾನಿ ಭಸಿತದ ಭಾವಕಿ ಅಂಜನದ ರಂಜನೆ ಮಾಗಾಯ ಮುಗುದೆ ಹೊನ್ನೋಲೆಯ ಚನ್ನೆ ಮೂಕುತಿಯ ಮುಗುಳು ಪುಲಿಯುಗುರ ಸುಲಲಿತೆ ನೇವಣದ ನೀರೆ ರತ್ನದಾಳಿಯ ರಾಜಹಂಸೆ ತೋಳಬಂದಿಯ ಬಾಳಕಿ ಹೊಂಗಡಗಡ ಲಿಂಗವಂತೆ ಕಂಕಣದ ಕಾಮಧೇನು ತೊಡಿಗೆಯ ಬೆಡಂಗಿ ಅಂದುಗೆಯ ಮಂದಯಾನೆ ಗೆಜ್ಜೆಗಳ ಸಜ್ಜನೆಯೆನಿಸಿ, ನಳನಳಿಸಿ ಬೆಳುವುತ್ತಮೀ ತೆರದೊಳೊಂದೆರಡು ನಾಲ್ಕೈದು ಪತ್ತು ಸಂವತ್ಸರಬಂರಂ ನೆರೆದ ನೇಮದ ಕಾಮಿನಿಗೆ ಭಸಿತದ ಭಾಮಿನಿಗೆ ರುದ್ರಾಕ್ಷಿಯ ರುದ್ರಕನ್ನಿಕೆಗೆ ತಂದೆಯಪ್ಪ ಶಿವಭಕ್ತನಾ ಪುರದ ಸರ್ವಗುಣ ಸಂಪನ್ನರಪ್ಪ ಶೈವಾಚಾರ್ಯರಿಂ ಗುರುಕಾರುಣ್ಯಮಂ ಮಾಡಿಸಿ, ಹರುಷದಿಂ

ಕೈಕೊಂಡ ಲಿಂಗಪ್ರಾಣಿಯ ಸದಾಸನ್ನಿಹಿತಚರಿತೆಯ ಶಿವಭಕ್ತಿಭರಿತೆಯ ಶಿವಜ್ಞಾನಸಂಪನ್ನೆಯ ಸಾಹಿತ್ಯನಿಧಿಯ ಸಕಳಕಳಾಕೋವಿದೆಯಪುಷ್ಪಡುತಡಿಯ ಮಹದೇವಿಯ ತನುವಿನ ಬಾಲ್ಯಂ ಸಡಿಲ್ದು ಯೌವನಂ ಮೆಲ್ಲಮೆಲ್ಲನಾಲಿಂಗಿಸುವಲ್ಲಿ,

ಸಾಹಿತ್ಯಭೂಷಣರೆನಿಪ್ಪ ತಾಯಿತಂದೆಗಳ್ಕಂಡು ಶಿವ ಶಿವ, ಮಗಳರೂಪಂ ನೋಡೆ ನೋಡೆ ಬೇರೊಂದು ಕೌತುಕಮನೊದವಿಸಲಿರ್ದಪುದಿದೇನಿದೆಂತು ಉರವಣಿಪ ನಡೆ ಮಂದಗತಿಯ ನೆಳಸಲಿರ್ದಪುದು; ಮನದ ಲಲ್ಲೆ ಸಿಂಗರದತ್ತ ಸೇರಲಿರ್ದಪುದು; ಸುಳಿನಾಭಿ ಒಳಪೊಗಲಿರ್ದಪುದು; ಬಟ್ಟನಡು ಬಡವಾಗಲಿರ್ದಪುದು; ಬಾಸೆಯ ಸೀಮೆ ಸಾಲರಿಯಲಿರ್ದುದು; ಕುಚಸ್ಥಳಂ ಸೀಮಾರೇಖೆಯಂ ಕುರುಹಿಡಲಿರ್ದಪುದು, ಬರಿಯ ಮೇಲುದಂ ವಕ್ಷದೇಶಮಂ ಬಾಸಣಿಸಲಿರ್ದುದು, ಕಕ್ಷಮೂಲಂ ಕರ್ಬೊಗರನೆಳಸಲಿರ್ದಪುದು, ತೋಳ್ಗಲು ಢಾಳವೇರಲಿರ್ದವು; ಕೈಗಳು ಮೈಸಿಂಗರಕ್ಕೆ ಮನವನಳ್ಳಿರಿಸಲಿರ್ದವು; ಕಂಬುಗ್ರೀವಂ ಕಂಠರೇಖೆಯನೆಚ್ಚರಿಸಲಿರ್ದುದು; ವದನಮಂಡಲಂ ಮಣಿದರ್ಪಣದೊಳಗಂ ಪೊಗಲಿರ್ದುದು; ಮೆಲುನುಡಿಗಳು ಮನಮನೊತ್ತುಗೊಳಲಿರ್ದವು; ಮನದಾಸೆ ಮುಖವನಾಶ್ರಯಿಸಲಿರ್ದುದು; ದಶನದ್ಯುತಿ ಮುಸುಂಕುಗಳೆಯಲಿರ್ದುದು; ಬಿಂಬಾಧರಂ ಬಣ್ಣವೇರಲಿರ್ದುದು; ಬೆಳ್ನಗೆ ತೆಳುಲಜ್ಜೊಯೊಳ್ ಕೆಳೆಗೊಳಲಿರ್ದುದುದ ಕಪೋಳಸ್ಥಳಂ ಕಾಂತಿಯಿಡಲಿರ್ದುದು; ಕರ್ಣಪಾಲಿಕೆ ನಯವೇರಲಿರ್ದವು; ನಾಸಿಕಂ ಸುಗಂಧಮಂ ಬಯಸಲಿರ್ದುದು; ಸೂಸುವ ನೋಟಂ ವಕ್ರತೆಯಂ ಮರೆಗೋಳಲಿರ್ದುದು; ಮುಖರಸಂ ಮಡುಗಟ್ಟಲಿರ್ದುದು; ಕುಣಿವಳಕಂ ವಿಭೂತಿಯ ತಿಲಕಕ್ಕೆ ತೆರಹುಗುಡಲಿರ್ದವು; ಕೆದರ್ಮುಡಿ ಪೂವಿಡಿದ ಚೊಲ್ಲೆಹಮನಾಸೆಗೆಯ್ಯಲಿರ್ದಪುದು; ಮೈಮರೆದಿರವೆಚ್ಚರಿಕೆಯೊಳು ಸಲಲಿರ್ದಪುದು; ಅಂಗರುಚಿ ಮದನನ ಮುಕುರವಾಗಲಿರ್ದಪುದೀ ವಯಸ್ಸಂಧೀ ಕನ್ನೆಯತ್ಯಾಶ್ಚರ್ಯವತಿ ನವೀನವಿದಾವ ಕಾಮುಕರಂ ಕೀಳ್ಮಾಡಲಿರ್ದಪುದಿದಾವ ರಸಿಕರ ಭಾವಮಂ ಬರಿಕೈಯ್ಯಲಿರ್ದಪುದಿದಾವ ಸಜ್ಜನರಂ ನೀತಿಗೆಡಿಸಲಿರ್ದಪುದಿದಾವ  ವೀರರಂ ವಿರಥರಂ ಮಾಡಲಿರ್ದಪುದಿದಾವರಸುಮಕ್ಕಳನಾಳ್ಮಾಡಲಿರ್ದ ಪುದಿದಾವ ದೇವರ ಚಿತ್ತಮಂ ಸೂರೆಗೊಳಲಿರ್ದಪುದೆಂದು ನೋಡಿ ನೋಡಿ ನೋಡಲಮ್ಮದೆ, ಪ್ರಸಾದದ ತುಂತುರಿಂ ತೂಪಿರಿದು ರುದ್ರಾಕ್ಷೆಯ ಕಾಹಂ ಕಟ್ಟಿ ಪಂಚಾಕ್ಷರಿಯಿಂ ಮುದ್ರಿಸಿ ಭಸಿತದಿಂ ಬಾಸಣಿಸಿ ಕಾವನಂಬಂ ನಿವಾಳಿಸಿ ಬಿಸುಟ್ಟು ಗಗನಾಂಗನೆ ಶರತ್ಕಾಲದ ಮುಗಿಲಮರೆಯೊಳ್ ಚಂದ್ರಕಳೆಯಂ ಸಲಹುವಂತೆ ಧವಳಾರದಿಂದಗಲಲೀಯದೆ ಸಲಹುತ್ತಿರೆ,

ಕೆಲವುಂ ದಿನಕ್ಕೆ ಷೋಡಶಪ್ರಾಯಂ ಸಮನಿಸೆ, ತೀವಿದ ಜವ್ವನದ ಭಾವರಸದ ಸವಿಯನದಾವಂ ಬಣ್ಣಿಪನದೆಂತೆಂದಡೆ–ನೇವುರದ ನುಣ್ದನಿಗಾವರಿಸುವ ಹಂಸೆಯ ಹಿಂಡಂ ಜಡಿವಂತೆ ಪಳಂಚುವ ಚರಣಮುದ್ರಿಕೆಯಿಂದೊಪ್ಪಿ, ಕೌಶಿಕ ರಾಜನ ಸರ್ವಸಾಮ್ರಾಜ್ಯವನುಂಗುಟದ ಕೊನೆಯೊಳೊತ್ತಿಯಾಳ್ವ ಸೊಬಗಂ ಮೆರೆದಶೋಕೆಯ ಕೆಂಪನಧಃಕರಿಸಿ, ಮಲ್ಲಿಕಾರ್ಜುನನಂ ಪ್ರದಕ್ಷಿಣಂ ಬಪ್ಪಲ್ಲಿ ಮೃದುತಳಂ ನೋಯದಂತೆ ಭೂವನಿತೆ ಸುರತರುವಿನ ಪೊಸಪಲ್ಲವದೊಳಗೆಂಪಂ ಬಳಿದು ತಂದು ಪಾದಲೇಪನಂಗೆಯ್ದಳೆಂಬಂತೆ ಸಹಜರಾಗದಿಂ ರಂಜಿಸುವ ಪದಕಮಳಂಗಳಿಂ, ಮತ್ತಂ, ಪದನಖವೀಥಿಯ ಮಣಿಮುದ್ರಿಕೆಗಳ ರತ್ನಮಯ ಮಂಜೀರದ ಕದಂಬಕಾಂತಿವೊಬ್ಬುಳಿಸಿ ನೀಳ್ದು ವೃತ್ತತೆಯನೊಳಕೊಂಡು ನಳನಳಿಸಿ ಗಳಗಳನೆ ಬೆಳೆದವೆಂಬಂತೆ ಕಡುಚೆಲ್ವನಾದ ಕಣಕಾಲ್ಗಳಿಂ, ಮತ್ತಂ, ಸೆರಂಗಿನೊಳು ಕೀಲಿಸಿದ ಪೊಂಗೆಜ್ಜೆಗಳ ಝಣಝಣಿತದಿಂ ವಿಳಾಸಂಬಡೆದ ಸುವರ್ಣ ಪಳಿಯಂ ಬಾಸಣಿಸಿ ಬಾಳೆಯ ಕಂಬಮಂ

ಕೀಳ್ಮಾಡುವ ಬಟ್ಟ ನುಣ್ದೊಡೆಗಳಿಂ, ಮಕರಪತಾಕನ ಮತ್ತಕುಂಜರದ ಕುಂಭ ಯುಗಳಮಂ ಬೆಳ್ದಿಂಗಳಿಂ ಮುಸುಂಕಿದಂತೆ ನವ್ಯದೂಕುಲದಿಂ ಮುಸುಂಕಿ ಮೆರೆವ ನಿತಂಬಮಂಡಲದಿಂ, ಶೃಂಗಾರರಸದ ತೆರೆಯೆನಿಪ ತಿವಳಿಗಳಿಂ ಕೌಶಿಕರಾಜನ ಮನೋನಯನ ನಿಧಾನನಿಕ್ಷೇಪಸ್ಥಳವಿವರವೆನಿಪ ನಾಭಿಕುಹರದಿಂ, ಮತ್ತಮಾ ನಾಭಿಕೂಪದೊಳು ತೀವಿದ ಲಾವಣ್ಯರಸವೆಂಬ ನೀರನೆತ್ತಿ ಬಡನಡುವೆಂಬ ಭೂಮಿಯೊಳು ಕಾಮನೆಂಬ ಕಾರಕಂ ಸಾಲ್ಗೊಂಡಗೆವೊಯ್ದು ಬೆಳೆಸಿದ ರೋಮಾಂಚನದ ಸಸಿಯ ಸಾಲಿದೆಂಬಂತೆಸೆವ ಬಾಸೆಯಿಂ, ಸುಂಟಿಸಿ ತೋರಿದಡೆ ಉಂಟೆನಿಸಿ ತೋರಿ ಬಳಂಕುವ ಬಡನಡುವಿಂ, ರತಿಯುಂ ಅನಂಗನುಂ ದಿಗ್ವಿಜಯಂ ಮಾಳ್ಪಲ್ಲಿ ಪವಣಿಸಿ ವಸಂತಂ ಮಾಡಿದ ಪೊಸ ಸುವರ್ಣದ ಗೂಡಾರಂಗಳಿವೆಂಬಂತೆ ಪೇರುರವಂ ಬಳಸಿ ಪರ್ವಿದುತ್ತುಂಗ ಪೀನಪಯೋಧರಂಗಳಿಂ, ಕಾಮದೇವನ ತನುಚ್ಛಾಯೆ ತನ್ನ ಮರೆವುಗೆ ಕಕ್ಷದೊಳಿಟ್ಟು ಸಲಹುತ್ತಿರ್ದಪಳೆಂಬಂತೆ ಕರ್ಬೊಗರನುಗುಳ್ವ ತೋಳಮೊದಲ್ಗಳಿಂ, ಮತ್ತಂ ಕುಚಕಂದಂಗಳಿಕ್ಕೆಲದೊಳಿಳಿದ ಕನಕಲತೆಗಳಂತೆ ತೋರ್ಪ ನಳಿತೊಳ್ಗಳಿಂ, ಮತ್ತಮಾ ಲತೆಯ ನಡುವಣ ಕುಸುಮಗಂಧಕ್ಕೆಳಸಿ ಬಂದು ಸುತ್ತಿಮುತ್ತಿದ ಮದಾಳಿಗಳಂತಾದರದಿಂ ರವೆಯದ ರವದಿಂ ಮೆರೆವ ನೀಲದ ಬಾಹುಪೂರಂಗಳಿಂ, ಲಿಂಗಾರ್ಚನೆಗೆ ರಾಗಿಸುವಂತೆ ಕೆಂಪಡರ್ದ ಕೆಂದಳಂಗಳಿಂ, ಸಿಂಗರಕ್ಕೆ ಮುಖವಾದ ಮುಖಮಂಡಳದಿಂ, ಗೀತಾಮೃತವನೆಡೆಗೊಂಡ ಬಾಯ್ದೆರೆಯಿಂ; ಸುಧೆಯಂ ಸೂಸುವ ಮಧುರಾಧರದಿಂ, ತಂಬೆಳಗನುಗುಳ್ವ ಸುಲಿಪಲ್ಲಿಂ, ಹೊಂದಾವರೆಗೆರಗಿದ ಬಿಳಿಯ ತುಂಬಿಯಂತೆ ಮುಖಮಂಡಲದೊಳೊಪ್ಪುವ ಮುತ್ತಿನ ಮೂಕುತಿಯಿಂ, ಜವ್ವನಕ್ಕೆ ಕಣ್ಬಂದಂತೆಸೆವ ಲೋಚನ ಯುಗಳದಿಂ, ಕಡೆಗಣ್ಣ ಕಾಂತಿ ಮಂಡಳಿಸಿದಂತೆ ಮೆರೆವ ಮೌಕ್ತಿಕಾಪತ್ರಂಗಳಿಂ, ಕಬ್ಬಿನ ಬಿಲ್ಲಂ ಜರ್ಬಿಸುವ ಪುರ್ಬುಗಳೆಂಬ ಭಸಿತಮಂ ತಳೆದು ಶಶಿಕಳೆಯಂ ನಗುವಂತಿರ್ದ ನೊಸಲ್ವೆರೆಯಿಂ, ಮತ್ತಂ ಕುಂಜರದ ಮದಕ್ಕೆರಗುವ ತುಂಬಿಗಳನೇಳಿಪ ನೀಳಾಳಕಂಗಳಿಂ, ತುರುಂಬಿದ ನವೀನ ಪುಷ್ಪದ ಧವಳಿಮೆಯಿಂ ಕಾಳಾಹಿಯಂ ನಗುವಂತಿರ್ದ ಕಬರೀಭರದಿಂ–ಇಂತುತ್ತರೋತ್ತರ ಲಾವಣ್ಯರಸಭರಿತೆ ಸುಕುಮಾರಾವಯವಂಗಳ ವಿಳಾಸಂದಳೆದು, ತುಳುಂಕದ ಸುಮ್ಮಾನದ ಸುಖದಂತೆ ಮೀಸಲಳಿಯದ ಮನೋರಥದಂತೆ ಬಾಸಣಿಸಿದಮೃತದಂತೆ ಮುದ್ರಿಸಿದ ಪುಣ್ಯದಂತೆ ಮೂಡಿದ ಭಕ್ತಿಯಂತೆ ಕೂಡಿದ ಪೂಜೆಯಂತೆ ಕಾಮನ ಬಾಣದಂತೆ ಸೋಮನ ಕಿರಣದಂತೆ ವಸಂತನ ವಶೀಕರಣದಂತೆ ವನಲಕ್ಷ್ಮಿಯ ಭಾಗ್ಯದಂತೆ ಮಳಯಾನಿಳನ ಮದದಂತೆ ಯೌವನಮದೋನ್ಮತ್ತ ವಿಳಾಸ ವಿಭ್ರಮ ಕಳಾಪರಿಪೂರ್ಣ ಶರೀರೆಯಾಗಿರ್ದುಡುತಡಿಯ ಮಹಾದೇವಿಯರು ವಸಂತಮಾಸದೊಳೊಂದು ದಿವಸಂ ಪ್ರಭಾತ ಸಮಯದೊಳೆದ್ದು ನಿರ್ಮಳೀಕೃತಸರ್ವಾಂಗ ಶರೀರೆಯಾಗಿ ನಿತ್ಯನೇಮಸಂಪನ್ನೆಯಾಗಿ ಪರಿಮಳದ ಕರುವಾಗಿ ತಮ್ಮ ನಿಳಯದ ಮುಂದಣ ವೇದಿಕಾಸ್ತಂಭಂಗಳ ನಡುವಿಕ್ಕಿದ ಹೊನ್ನ ಹಂಗುಳಿಗೆಯ ಮೇಲೆ ಸಖಿಯರಿಂದೋಲೈಸಿಕೊಳುತ್ತಂ ವಿಳಾಸಿನಿಯರಿಂ ಸಿಂಗರಿಸಿಕೊಳುತ್ತಮಿರ್ದಳಂತುಮಲ್ಲದೆಯುಂ,

## ಸ್ಥಲ ೩

ಮುಡಿಯೊಳ್ತೀವಿರ್ದ ಪುಷ್ಪಾವಳಿಗೆರಗುವ ಭೃಂಗಂಗಳಂ ಸೋವುತಂ ಮೆ
ಲ್ಲಡಿಯಂ ಸೋಂಕಿರ್ದು ಕೆಂಪೇರಿದ ತಳಿರನತಿ ಸ್ನೇಹದಿಂ ಪಿಂಗಿಸುತ್ತಂ

ಜಡಿವುತ್ತಂ ಕೀರಮಂ ಚಾಮರವನೆಸೆಯಲಲ್ಲಾಡುತಿರ್ಪಾಳಿಯರ್ ಸಂ
ಗಡಿಸಲ್ತಾನಿರ್ದಳಾಹಾ ಉಡುತಡಿಯ ಮಹಾದೇವಿಯಾಶ್ಚರ್ಯದಿಂದಂ ॥

ಮದನಂ ಕೋದಂಡಮಂ ಕೊಂಡತಿ ಚಪಳತೆಯಿಂ ಪಿಂದೆನಿಂದಂ ವಸಂತಂ
ಮೃದುಪಾದದ್ವಂದ್ವ ಸತ್ಪಲ್ಲವಮನೆ ಪಿಡಿದಾನಂದದಿಂ ಮುಂದೆ ನಿಂದ
ಪದಪಿಂದೆಯ್ತಂದು ಮಾಣಿನ್ನುಡುತಡಿಯ ಮಹಾದೇವಿಯಂ ಕಾಣುತಂ ಸೋ
ಲದನಾವಂ ನಿಲ್ವನಾವಂ ಮದವಳಿಯದನಾವಂ ವಿರಾಜಿಪ್ಪನಾವಂ॥

ಇಂತೆನಿಪ ರೂಪುಸಂಪದ್ವಿಭವಮಂ ತಳೆದು
ಕಂತು ಮುದ್ರಿಸಿದ ನನೆಗಣೆಯಂತೆ ಮಿಗೆ ಮೆರೆದು
ಇರುತಮಿರೆ ನಿಸ್ಸಾಳನಾದವುಣ್ಮಿತ್ತಲ್ಲಿ
ಕರೆವ ಕಹಳೆಗಳ ಘನಘೋಷವಡಸಿತ್ತಲ್ಲಿ
ಮುಂದಣ ಪದಾತಿಸಂಕುಳವೆಯ್ದಿ ಬರುತಮಿರೆ
ಮಂದೈಸಿ ತುರಗ ಸಂತಾನಮುಂ ನಡೆದು ಬರೆ
ವೈಹಾಳಿಯಿಂದೆ ಬರುತಿರ್ದನಾ ಕೌಶಿಕಂ
ಸಾಹಸಾಭರಣನತಿ ವೀರಂ ಗುಣಾಧಿಕಂ
ಗಜಮಸ್ತಕದ ಮೇಲೆ ಪಿಡಿದ ಬೆಳುಗೊಡೆಯೊಳಗೆ
ಬಜಿಯಿಸುವ ಪುಣ್ಯಪಾಠಕರ ಸಂದಣಿಯೊಳಗೆ
ಕವಿ ಗಮಕಿ ವಾದಿ ವಾಗ್ಮಿಗಳ ಕೈವಾರದೊಳು
ತವೆ ಪರಸುತಿರ್ಪ ವಿಪ್ರರ ವೇದನಾದದೊಳು
ಪುರದ ಕೇರಿಗಳ ಕರುಮಾಡವಂ ಮೋಡುತಂ
ನೆರೆದ ಪುರಜನಕೆ ಸಂತೋಷಮಂ ನೀಡುತಂ
ಬರವರಲು ಮುಂದೆ ಮಹದೇವಿಯೊಪ್ಪುತ್ತಿರ್ದ
ಳರರೆ ಸರ್ವಾಂಗ ಸೌಂದರ್ಯನಿಧಿ ಕುಳ್ಳಿರ್ದ
ಳೆಮ್ಮ ಭಕ್ತರ ಭಾಗ್ಯವಾರಿನಿಧಿಯೊಪ್ಪುತಿರೆ
ಅಮ್ಮಮ್ಮ ಸಮ್ಮೋಹನಾಸ್ತ್ರದಂತೆಸೆವುತಿರೆ
ನೋಡಿದಂ ಕೌಶಿಕನೃಪಂ ನಿಂದು ನಾರಿಯಂ
ತೀಡಿದಂ ಪುಷ್ಪಚಾಪಂ ಬಿಲ್ಲ ನಾರಿಯಂ
ನೋಡಿ ಮಿಗೆ ನೋಡಿ ನಡೆ ನೋಡಿ ನೆರೆ ನೋಡುತಿರೆ
ನೋಡಿದಡೆ ನೋಡನೋಡಲ್ ಚಿತ್ತಮಾಗುತಿರೆ
ಎವೆಯಿಕ್ಕದುಸುರಿಕ್ಕದತಿಕಾಮಿ ನೋಡುತಿರೆ
ತವ ತವಗೆ ಕರಣೇಂದ್ರಿಯ ಪ್ರತತಿ ಕಾಯ್ದುವಿರೆ
ಒಂದಡಿಯನಿಡದಾನೆಯಂಕುಶಕೆ ಕೈಮರೆಯೆ

ನಿಂದೆಡೆಯೊಳಿರ್ದುದಾ ಕೌಶಿಕಂ ಮೈಮರೆಯೆ
ಬಲವೆಲ್ಲ ಚಿತ್ರಿಸಿದ ಮಾಳ್ಕೆಯಿಂ ಮಿಡುಕದಿರೆ
ಬಲವೇಕೆ ನಡೆಯದೆನುತಲ್ಲಿ ಜನ ನುಡಿವುತಿರೆ
ತನ್ನ ಮೇಲಣ ನೋಟವೆಂದರಿದು ಮಹದೇವಿ
ಉನ್ನತ ಜ್ಞಾನಿಯಭಿಮಾನಿ ಸತಿಯರ ದೇವಿ
ಅರಸು ಕೌಶಿಕನ ಮನಮಂ ಕೊಂಡು ಪೋಪಂತೆ
ಚರಿತದಿಂ ನಿಲಯದೊಳಗಂ ಪೊಕ್ಕಳಾ ಕಾಂತೆ

ಪುಗಲಿತ್ತಲರಸನಾನೆಯ ಮೇಲೆ ಬೆರಗಾಗೆ
ಬಗೆಗೆಟ್ಟು ಕಾಮನಂಬಿಂಗೆ ಮೂಡಿಗೆಯಾಗೆ
ಕಂಡು ಮಂತ್ರಿಗಳೆಲ್ಲರುಂ ಮನಂಗುಂದುತಂ
ಕೊಂಡೊಯ್ದರರಸನಂ ಕೌತುಕದೊಳೊಂದುತಂ
ಆನೆಯಿಂದಳಿಪಿ ಕೇಳೀವನದೊಳೆಸೆದಿರ್ಪ
ನಾನಾ ಹಿಮೋಪಚಾರಸ್ಥಲವಿದೆನಿಸಿರ್ಪ
ತಣ್ಗೊಳನ ತಡಿಯ ಶಶಿಕಾಂತ ಭೂಮಿಕೆಯೊಳಗೆ
ತಣ್ಗದಿರ್ಗಳಂ ಪೂಸುತಿರ್ಪ ಹಿಮಶಿಲೆಯೊಳಗೆ
ಕದಳೀದಳಂಗಳಂ ಪದ್ಮಪತ್ರಂಗಳಂ
ಸದಮಳವೆನಿಪ್ಪಶೋಕೆಯ ಪಲ್ಲವಂಗಳಂ
ಹಾಸಿ ಹೊಸ ಕುಮುದದೆಸಳಂ ಕೂಡೆ ಪರಿಕಲಿಸಿ
ಲೇಸೆನಿಪ ಕುಸುಮತಳ್ಪವನೊಪ್ಪಲಳವಡಿಸಿ
ತಂದು ಪಟ್ಟಿರಿಸಿದರು ಕೌಶಿಕನೃಪಾಲನಂ
ಇಂದುಮುಖಿ ಮಹದೇವಿಯರ ರೂಪಲೋಲನಂ
ಪಟ್ಟಿರಿಸೆ ವಿರಹಸಂತಾಪದೊಳು ಪೊರಳುತಂ
ನಟ್ಟು ನೋಯಿಸುವ ಪೂಗಣೆಗಳ್ಗೆ ತೆರಳುತಂ
ಒಂದೆರಡು ಮೂರವಸ್ಥೆಗಳೇರಿ ತಾಪಿಸುತೆ
ನೊಂದು ಕರಣಂ ಕುದಿದು ತಲ್ಲೈಸಿ ಕಂಪಿಸುತೆ
ಎತ್ತೆತ್ತ ಮಗ್ಗುಲತ್ತಲರ ಹಸೆ ಸೀವುತಿರೆ
ಮುತ್ತಿದಳಿಮಾಲೆ ಕರಿಮುರಿಯೋಗಿ ಬೀಳುತಿರೆ
ಒತ್ತುವಂಬುಜಪತ್ರತತಿ ಹೊತ್ತಿ ಹೊಗೆವುತಿರೆ
ಸುತ್ತಿ ಪತ್ತಿಸುವ ಪಲ್ಲವವುರಿದು ಬೇವುತಿರೆ
ಸೂಸುತಿಪ್ಪಾಲಿನೀರ್ಗಳು ಕುಡಿದು ಬತ್ತುತಿರೆ
ಬೀಸುತಿರ್ಪಾ ತಳಿರ ಚಾಮರಂ ಸೀವುತಿರೆ
ಚಂದನಕೆ ಕಂದುತಂ ಕುಸುಮಕ್ಕೆ ಕೊರಗುತಂ

ಮಂದಾನಿಲನ ಸೋಂಕಿನಿಂದವೇರ್ಪಡೆವುತಂ
ಅಳಿಗೆ ಮಲ್ಲಳಿಗೊಂಡು ತಳಿರ್ಗೆ ತಳವೆಳಗಾಗಿ
ಗಿಳಿಗೆ ಧರೆಗಿಳಿದು ಬೆಳುದಿಂಗಳಿಗೆ ಬೇಳಾಗಿ
ಮಾವಿಂಗೆ ಮರುಳಾಗಿ ಮಲ್ಲಿಗೆಗೆ ತಲ್ಲಣಿಸಿ
ತಾವರೆಗೆ ತನುಗುಂದಿ ತಿಳಿಗೊಳಕೆ ಹಳಹಳಿಸಿ
ಲತೆಗೆ ಲಂಚವನಿತ್ತು ನೆಯ್ದಿಲಿಗೆ ತಲೆವಾಗಿ
ಅತನುವಿಂಗಾಳಾಗಿ ಕೋಗಿಲೆಗೆ ಮಾರೋಗಿ
ಮನದೊಳು ಮಹಾದೇವಿ ಕಣ್ಣೊಳು ಮಹಾದೇವಿ
ಬನದೊಳು ಮಹಾದೇವಿ ಸೋಂಕಿತು ಮಹಾದೇವಿ
ಆಗಿಯುರಿವರಿವ ವಿರಹದಿ ಮನಂಗುಂದುತಂ
ರಾಗವಳಿದೊಳಸಾರ್ದು ಬಿಸುಸುಯಿದು ಕಂದುತಂ
ನಿಲಲಾರದಲ್ಲಿ ಮಂತ್ರಿಗಳೆಲ್ಲರಂ ಕರೆಸಿ
ಬಲವಳಿದು ನುಡಿದನತಿ ಕಾರ್ಪಣ್ಯದೊಳು ಬೆರಸಿ
ಮಹದೇವಿಯಂ ಕಂಡಡುಳಿವೆನಲ್ಲದಡುಳಿಯೆ
[ಬಾಹ]ನ್ನಬರ ಸತ್ತು ಪುಟ್ಟುತಿರ್ದಪೆ ಕಳಿಯೆ
ಸುಮ್ಮಮೇಕಿರ್ದಪಿರಿ ಮರುಳರಿರ ಹೋಗಿರೆ
ನಿಮ್ಮೆಲ್ಲರೆನ್ನ ಕಾರಣಕೆ ನೆರವಾಗಿರೆ
ಎನುತೆನುತೆ ಮಹಾದೇವಿ ಹೋಗದಿರು ನಿಲ್ಲೆಂದು
ನಿನಗೆ ತೊತ್ತಾದೆನೆನ್ನಾಣೆ ಹೋಗದಿರೆಂದು
ನುಡಿವುತಂ ಕಣ್ಮುಚ್ಚಿ ಕಳವಳಿಸುತಿರೆ ಕಂಡು
ಕಡು ನೊಂದು ಮಂತ್ರಿಗಳು ಮರುಗಿ ಮುಮ್ಮಳಿಗೊಂಡು
ಕರೆ ವಸಂತಕನನೆನುತಲ್ಲಿ ಕರೆಯಿಸುತಮಿರೆ
ಚರಿತನೆಯ್ದಿದ ಚರರ ಬೆನ್ನೊಳೊಲವಿಂದೆ ಬರೆ
ಬಂದಂಗೆ ನುಡಿದರಾ ಮಂತ್ರಿಗಳು ಸಾದರಂ
ನಿಂದಿರಲು ತೆರಹಿಲ್ಲ ಕೇಳು ನೀ ಚಚ್ಚರಂ
ಶಿವಭಕ್ತನರಮನೆಗೆ ಪೋಗಿ ಮಹದೇವಿಯಂ
ಅವನಿಪತಿಗಂ ಬೇಡುವುದು ಭಕ್ತಿಭಾವೆಯಂ
ಅರಸನಿರವಂ ಪೇಳ್ವುದುಚಿತಮಂ ತೋರುವುದು
ಹರಭಕ್ತೆಯಂ ಬೇಗದಿಂ ತಂದು ಕೊಡುವುದು

ಎಂದು ಕಳುಪುತ್ತಮಿರೆ ಬಂದಂ ವಸಂತಕಂ
ಸಂದ ಶಿವಭಕ್ತನರಮನೆಗೆ ಘನ ಸಾತ್ವಿಕಂ

ಬರೆ ಸುಖಾಸನವಿತ್ತು ಶಿವಭಕ್ತನಾದರಿಸಿ
ಬರವಪೂರ್ವಂ ಕಜ್ಜವೇನೆನುತ್ತುಪಚರಿಸಿ
ಏನನೆಂಬೆಂ ಕೌಶಿಕನ ವಿಹರದಂದಮಂ
ನಾನಾ ವಿಧಂ ಪೊಣ್ಮಿದತಿ ತಾಪವೃಂದಮಂ
ಎಂದು ಮಹದೇವಿಯಂ ಕಂಡ್ಹಂದು ಮೊದಲಾಗಿ
ಒಂದೊಂದು ದಿನಕೆ ವಿರಹಾಗ್ನಿಯುರುತರವಾಗಿ
ಬಾಳೆ ಬಾಳಂತಾಗಿ ಕುಮುದಂ ಕುಮುದಮಾಗಿ
ಈಳೆಯೀಳಿಗೆಯಾಗಿ ತಿಂಗಳಿಂಗಳವಾಗಿ
ಬಿಸಜವದು [ಬಿಸಮಾ]ಗಿ ಕೊಳನು ಕೊಳುಗುಳವಾಗಿ
ಹೊಸ ಪಲ್ಲವಂಗಳುಂ ಪಸಿಯ ಕಿಚ್ಚಗಳಾಗಿ
ಸುಡೆ ಬೇವುತಿರ್ದಪಂ ನುಡಿಯರಿಯದಿರ್ದಪಂ
ಕಡು ನೋವು ಬೆಂಬತ್ತಿ ಪೊರಳುತ್ತಮಿರ್ದಪಂ
ಕಂದುತಂ ಕುಂದುತಂ ಕೊರಗುತ್ತಮಿರ್ದಪಂ
ಮಹದೇವಿಯರ ಕರುಣವೇ ಹರಣವಿನ್ನೆಂದು
ಮಹದೇವಿಯರ ದಯಾವಾಕ್ಯವೇ ಶರಣೆಂದು
ಇಪ್ಪ ಕೌಶಿಕನೃಪಂಗೀವುದೀ ಕನ್ನೆಯಂ
ನೇರ್ಪಟ್ಟು ಕೊಡದಿರ್ದಡಪ್ಪುದದು ಅನ್ನೆಯಂ
ಅರಸನತಿ ವಿಷಯಿಯತಿ ಕೋಪಿಯತಿ ನಿಷ್ಠುರಂ
ಪಿರಿಯರವರಿವರೆನ್ನನತಿ ಸತೇಜಂ ಕರಂ

ಎಂದ ಮಾತಂ ಕೇಳ್ದು ಮಹದೇವಿಯಂ ಕರೆದು
ತಂದೆ ತಾಯ್ಗಳು ನುಡಿದರತಿಭೀತಿಯೊಳು ನೆರೆದು
ಅರಸ ಕೌಶಿಕನೊಡನೆ ಸಮಸುಖದೊಳಿರು ಮಗಳೆ
ಪಿರಿದಪ್ಪ ಸಂಪದವ ನಿನಗೀವನೆಲೆ ಮಗಳೆ
ಎನೆ ಧಗಿಲು ಭುಗಿಲೆಂದು ಕೋಪಿಸಿದಳಾ ಭಕ್ತೆ
ಮನದೊಳು ಮಹೇಶಂಗೆ ಮೊರೆಯಿಟ್ಟಳಾ ಭಕ್ತೆ
ನುಡಿದಳೆಲೆ ಭವಿಯೊಡನೆ ಬೆರಸಿರಲ್ಕಾರ್ಪೆನೆ
ಮೃಡಪೂಜೆಯಚಲ ಸುಖಮಂ ಪಿಂಗಲಾರ್ಪೆನೆ
ಆನೇಕೆ ಭವಿಯೇಕೆ ಭಕ್ತರೀ ಮಾತೇಕೆ
ಏನಾದಡಂ ಭವಿಯನೊಲ್ಲೆನೀ ಭ್ರಾಂತೇಕೆ
ಹೋಗೆಲೆ ವಸಂತಕಾ ನಿನಗೆ ಸೋಲ್ವವರಿಲ್ಲ
ನಾಗಭೂಷಣನ ಭಕ್ತರ್ಗೆ ಭವಿ ಸರಿಯಲ್ಲ

ಬೆಳಗಿಂಗೆ ಕತ್ತಲೆಯ ಕೂಟವುಂಟೇ ಮರುಳೆ
ತಿಳಿವಿಗಜ್ಞಾನದೊಳು ಸಂಗವುಂಟೇ ಮರುಳೆ
ಎನೆ ವಸಂತಕನಲ್ಲಿ ತಿರುಗಿ ಬೇಗಂ ಬಂದು
ಅನುರಾಗವುಡುಗಿ ಮಂತ್ರಿಗಳ ಮುಂದಂ ನಿಂದು
ನುಡಿದನೆನ್ನಳವಲ್ಲವಾ ಕನ್ನೆಯತಿ ಭಕ್ತೆ
ಮೃಡಪದಸ್ನೇಹಿ ಭವಿಗಳನೊಲ್ಲಳತಿ ಭಕ್ತೆ
ಸಿಡಿದೆದ್ದಪಳು ಭವಿಯ ಮಾತೆನೆ ಮಹಾದೇವಿ
ಎಡೆಗೊಡದ ಲಿಂಗಾರ್ಚನಾರತಂ ನೆರೆ ತೀವಿ
ಬಗೆಯೊಳಾರುವನೊಲ್ಲಳೊಂದುವುಂ ಸೊಗಯಿಸದು
ಜಗದೊಳಗೆ ನಡೆವ ಭಕ್ತರ ಶೀಲವಲ್ಲವಿದು
ತಂದೆ ತಾಯ್ಗಳ ಮಾತನಾವಗಂ ಲೆಕ್ಕಿಸಳು
ಬಂದ ಬಂಧುಗಳ ನುಡಿಯಂ ಮರೆದು ಪರುಕಿಸಳು
ಹರೆಯವೇ ಕೌತುಕಂ ಹರಭಕ್ತಿಯದ್ಭುತಂ
ಚರಿತವೇ ಮೋಹನಂ ವೈರಾಗ್ಯವುನ್ನತಂ
ರೂಪೇ ವಿಚಿತ್ರಂ ಶಿವಜ್ಞಾನವೂರ್ಜಿತಂ
ಭೂಪನೇ ತರಿಸಿದಪನೀಮಾತನನ್ವಿತಂ

ಎಂದಡಾ ಮಂತ್ರಿಗಳ್ಕೋಡುತಂ ಬಾಡುತಂ
ನಿಂದು ತಮ್ಮೊಳಗೊರ್ವರೊರ್ವರಂ ನೋಡುತಂ
ಮೆಲ್ಲನೀ ಮಾತನರಸಿಂಗರಿಪಿ ನೋಡುವಂ
ಅಲ್ಲಿ ಹುಟ್ಟಿದ ಹದಕೆ ತಕ್ಕುದಂ ಮಾಡುವಂ
ಎನುತೆ ನಡೆತಂದು ಮನದೊಳು ಕೊರಗುತಿಪ್ಪಂಗೆ
ಘನ ವಿರಹಶಿಖಿ ನೆಗೆದು ತನುವನುಚ್ಚಳಿಪಂಗೆ
ಅಂಡಲೆವ ಕುಸುಮಶರದಿಂ ನೋವುತಿರ್ಪಂಗೆ
ಕಂಡುದೆಲ್ಲಾ ಮಹಾದೇವಿಯೆನುತಿರ್ಪಂಗೆ
ಪೊಡವಂಟು ಮಂತ್ರಿಗಳು ಹತ್ತೆಸಾರುತ್ತಲ್ಲಿ
ನುಡಿದರಿಚ್ಚೆಯನರಿಯಲೆಂದು ಮೆಲುಪಿಂದಲ್ಲಿ
ದೇವ ಮಹದೇವಿ ಶಿವಭಕ್ತಿನಿಷ್ಠಾನಿರತೆ
ದೇವ ಏನುವನೊಲ್ಲಳತುಳವೈರಾಗ್ಯಯುತೆ
ಭವಿ ಭಕ್ತರೆಂದಿಲ್ಲ ತಾನಾರುವಂ ಮುಟ್ಟ
ಳವಿರಳ ಶಿವಾರ್ಚನಾ ಸಂಗದೊಳಗಳವಟ್ಟ
ಳೆಂಬ ಮಾತಂ ಕೇಳ್ದು ನೆರೆ ಮೂರ್ಛೆಯೊಳ್ಸಂದು

ಇಂಬಳಿದು ಹಂಬಲಿಸಿ ಬೆಂಬಳಿಗೆ ನೆಲೆನಿಂದು
ಆಗಳಾ ಮಂತ್ರಿಗಳ್ಕಂಡು ಮನದೊಳ್ಮರುಗಿ
ರಾಗವಳಿದೊಳಸಾರ್ದು ಮೈಗುಂದಿ ಮಿಗೆ ನಡುಗಿ
ಆಲಿ ನೀರ್ಗಳನಲ್ಲಿ ತಳಿದು ಕಂಗಳೊಳೊತ್ತಿ
ಮೇಲೆ ಬಿಜ್ಜಣಿಗೆಯಂ ಬೀಸಿ ತಂಪಂ ಬಿತ್ತಿ
ಮೆಲ್ಲನಂಕುರಿಸಿತ್ತು ಕೌಶಿಕನ ಚೇತನಂ
ಅಲ್ಲಿ ಕಣ್ದೆರೆದು ನೋಡಿದನಧಿಕ ಯಾತನಂ
ನುಡಿದನವರೊಡನಿನ್ನುವುಂ ನೋಡುತಿರ್ದಪಿರೆ
ತಡವೇಕೆ ಮಹದೇವಿಯೊಳ್ನೆರಪದಿರ್ದಪಿರೆ
ಬಲ್ಪಿಂದೆ ಮೆಲ್ಪಿಂದದೆಂತಾದಡಂ ಹೋಗಿ
ಕಲ್ಪಕುಜಪಲ್ಲವಾಧರೆಯನೆನಗನುವಾಗಿ
ತನ್ನಿರೇ ಏನೆಂದಳೆಂದುದನೊಡಂಬಟ್ಟು
ಇನ್ನಿರಲ್ಬಾರದೆನುತಂ ನೃಪಂ ಮರವಟ್ಟು

ಇರೆ ಸಚಿವರೆಲ್ಲರುಂ ಪೊರಮಟ್ಟು ನಡೆತಂದು
ಹರಭಕ್ತನರಮನೆಗೆ ಕಡು ರೋಷದಿಂ ಬಂದು
ಅಯ್ಯಲಾ ಭಕ್ತರಿರ ಕೆಟ್ಟಪಿರಿ ಸುತೆಯಿಂದೆ
ಅಯ್ಯೋ ಇದೇಕೆ ಮರುಳರಿರ ಮೂರ್ಖತೆಯಿಂದೆ
ದುರ್ಮರಣವಾದಪುದು ಕುಪಿತನಾದಂ ನೃಪತಿ
ದುರ್ಮದಂ ನಿಷ್ಠುರಂ ಹಸ್ತಿಮೂರ್ಖಂ ನೃಪತಿ
ಕೂಸುಗೊಡದಿರ್ದಡೀಗಳೆ ಕೊಲಲು ಬೆಸಸಿದಂ
ಕೂಸ ಕೊಟ್ಟಡೆ ನಿಮಗೆ ಸಕಳ ಸುಖಸಂಪದಂ
ಬಪ್ಪುದೆನೆ ಭಕ್ತನುಂ ಭಕ್ತೆಯುಂ ಧರೆಗಿಳಿದು
ಸೊಪ್ಪಾದ ಮುಖದಲ್ಲಿ ಕಣ್ಣೀರ್ಗಳಂ ತಳೆದು
ಎಲೆ ಮಗಳೆ ಮಗಳೆ ನಿನ್ನಯ ದೂಸರಿಂದೆಮಗೆ
ನೆಲಸಿತ್ತು ದುರ್ಮರಣವೇನೆಂಬ ವೃದ್ಧರಿಗೆ
ಹೊಸತು ನಿನ್ನಯ ಭಕ್ತಿ ತಾನೆಮಗೆ ಸಂಕಟಂ
ವಸುಧೆಯೊಳು ಭವಿಯೊಡನೆ ಬಾಳರೇನುತ್ಕಟಂ
ಕಾರಿಕಾಲಮ್ಮೆ ತಾಂ ಭವಿಯೊಡನೆ ಬಾಳಳೇ
ಹೇರೂರ ಹೆಂಗೂಸು ಭವಿಗೆ ಸತಿಯಾಗಳೇ
ಎಲೆ ವೈಜಕವ್ವೆ ತಾಂ ಭವಿಗೆ ಪುದುವೋಗಳೇ
ಎಲೆಲೆ ಮಂಗಾಯಕ್ಕ ಪಾಂಡ್ಯನೊಳು ಕೂಡಳೇ

ಮಗಳೆ ಕೇಳವರಿಂದೆ ಬುದ್ಧಿ ಪಿರಿದೇ ನಿನಗೆ
ಅಗಣಿತ ಶಿವಾತ್ಮರೆಂದೆನಿಸರೇ ಧಾರಿಣಿಗೆ
ಏಕೆಮ್ಮನೀ ವಿಧಿಗ್ಗೆ ತಂದಪ್ಪೆ ಬೇಡವ್ವ
ಲೌಕಿಕನ ಕೌಶಿಕನ ಸಂಗಮಂ ಮಾಡವ್ವ

ಎಂಬ ನುಡಿಗೇಳುತಂ ನೊಂದಳು ಮಹಾದೇವಿ
ಅಂಬಕತ್ರಯನೆ ಇನ್ನೇವೆನೆನುತಂ ತೀವಿ
ಕಣ್ಣನೀರಿಕ್ಕುತಂ ನುಡಿದಳಾ ಪಿತನೊಡನೆ
ತಿಣ್ಣವೆನಿಸಿರ್ದ ದುಸ್ಸಂಗದಾತಪದೊಡನೆ
ಪಿರಿಯರ್ ಪುರಾತನರನೆನಗೆ ಸಮಗಟ್ಟುವರೆ
ಪರಮಶೈವಾಂಬುರಾಶಿಗಳನಿಂತೆಣಿಸುವರೆ
ಆ ಮಾತದಂತಿರ್ಕೆ ನಿಮ್ಮಯ ನಿರೋಧಮಂ
ಏ ಮಾತು ತೀರ್ಚುವೆಂ ಭಕ್ತರಪರಾಧಮಂ
ಏನಾಗಿಯಾದಡಂ ಭಕ್ತರಂ ರಕ್ಷಿಪುದು
ನಾನಾ ವಿಧಂ ಬಂದು ಶರಣರಂ ಸಲುಹುವುದು
ಎಂದುಂಟು ಸತ್ಯಂ ಪುರಾತನರ ವಚನವಿದು
ಇಂದು ನಿಮಗುಮ್ಮಳಂ ಬೇಡೆನ್ನ ನಂಬುವುದು
ಎಂದು ತಾಯ್ತಂದೆಗಳನಳ್ಕರಿಂ ಸಂತಯಿಸಿ
ಮುಂದಿರ್ದ ಮಂತ್ರಿಗಳನೀಕ್ಷಿಸುತೆ ಬೋಳೈಸಿ
ನೀವೆಂದುದಂ ಮಾಳ್ಪೆನಂತದಕ್ಕೆರಡಿಲ್ಲ
ನೀವೆನ್ನ ಮನದೊಳಿದ್ದಂತೆ ಮಾಡುವುದೆಲ್ಲ
ಎನ್ನಿಚ್ಛೆಯೊಳು ಶಿವನ ಪೂಜೆಯೊಳು ನಲಿದಿಪ್ಪೆ
ಎನ್ನಿಚ್ಛೆಯೊಳು ಮಹೇಶ್ವರರ ಗೋಷ್ಠಿಯೊಳಿಪ್ಪೆ
ಎನ್ನಿಚ್ಛೆಯೊಳು ಗುರುವಿನಂಘ್ರಿ ಸೇವೆಯೊಳಿಪ್ಪೆ
ಎನ್ನಿಚ್ಛೆಯೊಳ್ನಿಮ್ಮ ನೃಪನ ಸಂಗದೊಳಿಪ್ಪೆ
ಇಲ್ಲಿ ಮೂರುಂ ತಪ್ಪನೇ ಸೈರಿಸುವೆನರಿದು
ಅಲ್ಲಿಂ ಬಳಿಕ್ಕೆವೊಲಿದಂತಿಪ್ಪೆ ನಾನುಳಿದು

ಇದು ಭಾಷೆಯೆನಲೊಡಂಬಟ್ಟರಾ ಮಂತ್ರಿಗಳು
ಮುದದೊಳೊಂದೋಲೆಯಂ ಬರೆಯಿಸಿದರಾಪ್ತಿಗಳು
ಪಿರಿದದೊಂದಾಯಾಸದಿಂದೊಡಂಬಡಿಸಿದರು
ಚರಿತದಿಂ ಪೊರಮಟ್ಟು ನೃಪನತ್ತ ತಿರುಗಿದರು

ಬರುತಿಪ್ಪ ಮಂತ್ರಿಗಳ ಮುಖಕಮಳಮಂ ಕಂಡು
ಅರಸನಾನಂದದಿಂ ಪರಮ ಸುಖವೆಡೆಗೊಂಡು
ತಾಪವೋಡುತ್ತಮಿರೆ ಬಿನ್ನಪಂ ಮಾಡಿದರು
ಭೂಪನ ಮನಕ್ಕೆ ಸಂತೋಷಮಂ ಕೂಡಿದರು
ಹರಭಕ್ತೆ ಚರಿತದೊಳೊಡಂಬಟ್ಟಳೆಲೆ ದೇವ
ಅರಿದೊಡಂಬಡಿಸುವುದು ನೀವೆ ಬಲ್ಲಿರಿ ದೇವ
ಆಣೆಯುಂ ತೇಜಮುಂ ರಾಜಾಜ್ಞೆಯುಂ ತನಗೆ
ನಾಣೆಯುಂ ಸಕಲ ಭಂಡಾರವೆಲ್ಲಂ ತನಗೆ
ಆಗಿ ಸುಖದಿಂದಿರ್ದು ಮೂರು ತಪ್ಪಿನ ಮೇಲೆ
ರಾಗದಿಂದೊಲಿದತ್ತ ಪೋಪೆನೆಂದಳು ಬಾಲೆ
ಈ ಭಾಷೆಗೊಂದೋಲೆಯಂ ಬರಸಿತೆಲೆ ದೇವ
ಶೋಭೆವಡೆದಿರೆ ಬಳಿಕೊಡಂಬಟ್ಟಳೆಲೆ ದೇವ

ಎನೆ ಹೆಚ್ಚುತಂ ಹಿಗ್ಗುತಂ ಸುಖದೊಳೊಗ್ಗುತಂ
ಕೊನರ್ವ ಪುಳಕಂಗಳಿಂದುರ್ಬುತಂ ಕೊರ್ಬುತಂ
ಬಂದು ಮಂತ್ರಿಗಳನೋರೊಮ್ಮೆ ತೆಗೆದಪ್ಪುತಂ
ಸಂದಣಿಸಿ ಪರ್ವಿ ಮುದಮೊದವಿ ಮದವೇರುತಂ
ಕಾಮಂಗೆ ಬಿರುದೆತ್ತು ರತಿಗುಪ್ಪರಂಗಟ್ಟು
ಸೋಮನೆಂಬವನಾವನಳಿಗಳಿಗೆ ಬಳಿಯಟ್ಟು
ಕೋಗಿಲೆಗಳಂ ಜಡಿ ಲತಾವಳಿಗಳಂ ಮುತ್ತು
ಪೂಗಣೆಗಳಂ ಮುರಿ ಸರೋಜಂಗಳಂ ಸುತ್ತು
ಚೂತಮಂ ಪರಿದೇರು ಗಿಳಿಗಳಂ ಚಪ್ಪರಿಸು
ನೂತನದ ಜೊನ್ನಮಂ ಶೀತಶಾಲೆಗೆ ಬರಿಸು
ಕದಳಿಗಳನೊದೆ ಮಂದಮಾರುತನನೆಬ್ಬಟ್ಟು
ಸದಮಳ ರಥಾಂಗಮಂ ಕಳಿಪು ಸೆರೆಯಂ ಬಿಟ್ಟು
ಎಂದಿಂತು ಕಾಮಸಾಮ್ರಾಜ್ಯಮಂ ಬೀರುತಂ
ಇಂದುಮುಖಿ ತನಗಾದಳೆಂಬುದಂ ತೋರುತಂ
ಮಂತ್ರಿಗಳಿಗುಡಲಿತ್ತು ಮಾನ್ಯತತಿಗುಡಲಿತ್ತು
ತಂತ್ರಿಸಿದ ಪರಿಗೆ ಮೆಚ್ಚುತ್ತೆ ಮುಖಮುಮನಿತ್ತು
ಶಿವಭಕ್ತನರಮನೆಗೆ ಬೀಯಕ್ಕೆ ಹೊಂಗಳಂ
ಅವನಿಪತಿ ಕಳುಪಿದಂ ಲಕ್ಕ ಲೆಕ್ಕಂಗಳಂ
ಬಹುವರ್ಣದೊಳು ಪುದಿದ ಸಪುರ ಸವಕಟ್ಟುಮಂ

ಬಹುರತ್ನಮಯ ನವ ನವಾಭರಣಜಾಳಮಂ
ಕಳುಪುತಿರೆ ತೊಡಗಿತ್ತು ವೈವಾಹಸಂಭ್ರಮಂ
ಪೊಳಲೊಳಗೆ ಸಿಂಗರಿಸುವಂಗನಾವಿಭ್ರಮಂ
ನೆರೆದ ಜನವಿಡಿದ ಪುರವೀಧಿಯೊತ್ತೊತ್ತೆಯಿಂ
ಪುರದ ಕೇರಿಯ ಪುಣ್ಯಜನದ ಸಂಪತ್ತಿಯಿಂ
ಎಡೆಗೊಡದೆ ಕೌಶಿಕನ ಮನವನಪ್ಪುತ್ತಮಿರೆ
ಉಡುತಡಿಯ ಪುರವೊಲಿದು ಕೈಗೆಯ್ವುತಿರುತಮಿರೆ ೨೫೦-೪೨೪

## ಸ್ಥಲ ೪

ಮನೆಮನೆಗೆಲ್ಲ ಬೇರೆ ಗುಡಿ ಬೇರೆ ಮಹೋನ್ನತಿ ಬೇರೆ ಸೊಂಪು ಬೇ
ರನುಮತಿ ಬೇರೆ ವಿಭ್ರಮತೆ ಬೇರೆ ನವಾಕೃತಿ ಬೇರೆ ಹೆಂಪು ಬೇ
ರಿನಿದಿನ ಮಾತು ಬೇರೆ ಪರಿ ಬೇರೆ ಚಮತ್ಕೃತಿ ಬೇರೆ ಚೆಲ್ವು ಬೇ
ರನುನಯವೊಪ್ಪಿ ತೋರಿದುದು ಕೌಶಿಕರಾಜನ ರಾಜಧಾನಿಯೊಳ್ ॥

ಇಂತು ಕೌಶಿಕರಾಜನ ಪುರದೊಳು ಪುಣ್ಯವಿವಾಹೋದ್ಯೋಗ ಸಂಭ್ರಮ ಪ್ರಾರಂಭ ಸೌರಭ ಜನಜನಿತ, ಹರುಷ ಪುಲಕಪ್ರಕರ ಭರಿತ, ವಾರನಾರೀ ಕುಲಾನಂದ ಸಾಂದ್ರ ಸೌಂದರ್ಯವಿಲಸಿತ, ಸುವರ್ಣ ಕಳಶ ದರ್ಪಣ ರತ್ನಾಭರಣ ಸ್ವೀಕೃತ, ಸುವಾಸಿನೀ ನಿಕರವಿಡಿದ ಪುರವೀಥಿಪ್ರಾಂತದೊಳು ನೂತನ ಗೀತವಾದ್ಯ ನೃತ್ಯಂಗಳ ಕೋಳಾಹಳದಿಂ ಸರ್ವಸಂಭ್ರಮಂ ನೆಗಳೆ,

ಇತ್ತ ಮಹದೇವಿಯರ ಮಹಮನೆಯ ಪ್ರಾಂಗಣದೊಳು ಪುರದಗಲಕ್ಕೆ ವಿಸ್ತರಿಸಿದ ವಿವಾಹಮಂಟಪದ ವಿಶಾಲ ಸ್ತಂಭಕೋಟಿಗಳ ನಡುವೆ ಕಟ್ಟಿದ ಮೇಘವಣ್ಣಿಗೆಯ ಮೇಲುಕಟ್ಟಿನ ಪುಲ್ಲಿಯ ಚವುಕವಿಳಸದ ಕಥಾಯಿಯ ಕಡೆಗಟ್ಟಿನ ಸುಯ್ಯಾಣದ ತೆರೆಯ ಪಂಚರಂಗದ ಚೂಳಿಕೆಯ ಬಿಳಿಯ ಪಟ್ಟೆಯ ಬಾಸಣದ ಸರ್ವತೋಭದ್ರದ ಸೀಮೆಯ ಸತೇಜ ಬಂಧದೋಜೆಯ ಲತಾವಳಿಯ ನಳನಳಿಕೆಯ ಹಸರಿಸಿದ ಹಂಸಾವಳಿಯ ಸೂತ್ರಿಸಿದ ಶುಕಾವಳಿಯ ನೆಗಪಿದ ನೇತ್ರಾವಳಿಯ ಕೀಲಿಸಿದ ರತ್ನಾವಳಿಯ ಜಂತ್ರದ ಹಂಸ ಮಯೂರ ಕೀರ ಪಾರಾವತದಿಂದೋರಣವೆತ್ತ ತೋರಣಸ್ತಂಭದ ವಿಲಾಸದಿಂ ವಿವಿಧ ಸಂಪತ್ತು ಸೌಂದರ್ಯಮನೊಳಕೊಂಡ ನವೀನ ಮಂಟಪದ ನಡುವೆ ಸಂದಣಿಪ ಬಂಧುಗಳ ಹರುಷದೊಳಿಪ್ಪ ಕರಣಿಕರ ಘಳಿಗೆವಟ್ಟಲ ಕೆಲದ ಮಹೂರ್ತಿಕರ ನೆರೆದ ಪರಿಜನದ ಪುರಜನದೊತ್ತೊತ್ತೆಯಿಂ ರಮ್ಯಂಬಡೆದ ಮಣಿ ಮಂಟಪವನುಡುತಡಿಯ ಮಹಾದೇವಿಯರ್ಕಂಡು ಕಂಡು ನೊಂದು ನೊಂದೊಳಗೊಳಗೆ ಬೆಂದು ಬಂದು ಹರಿದ್ರಾಪರಿಮಳರಸಮಂ ಮಿಂದು ಹೊರಗಣ ಸಿಂಗರಕ್ಕೆ ಸಂದು ಹೊಸ ದುಕೂಲಮನುಟ್ಟು ವಿಭೂತಿಯ ತಿಲಕಮನಿಟ್ಟು ನವ್ಯಾಭರಣಂ ತೊಟ್ಟು ಹೊನ್ನ ರತ್ನದ ದಂಡೆ ತೊಂಡಿಲುಗಳಂ ಮುಡಿದು ನಿಂದಿರ್ದು, ಈ ಮದುವೆಗಿನಿತು ವಿಸ್ತಾರವಿಭ್ರಮವೇವುದೆಂಬಂತೆ ಮಂಟಪವನುದಾಸೀನದಿಂ ನೋಡುತಂ, ಎಮ್ಮೊಳಗನರಿಯ ದಲಂಕರಿಸಲೇಕೆಂದು ಸಿಂಗರಿಪ ಸತಿಯರಂ ಪರಿಹಾಸದಿಂ ನೋಡುತಂ, ಮಂಟಪದೊಳಗೆ ಭವಿಗಳೇಕೆ

ಬಂದರೆಂಬಂತೆ ಉಂಗುರುಡಿಕೆಗೆ ಬಂದ ನಿಬ್ಬಣಿಗರಂ ಕೋಪದಿಂ ನೋಡುತ್ತಂ, ನೀವು ಕಾರಣದಿನೀ ವಿಧಿಗೆ ಬಂದೆನೆಂಬಂತೆ ತಾಯಿ ತಂದೆಗಳ ಮೊಗಮಂ ನಿರ್ವೇದದಿಂ ನೋಡುತ್ತಂ, ಅಯ್ಯೋ ಭವಿಯೊಡತಣ ಮದುವೆಯಂ ಮಾಣಿಸುವರಿಲ್ಲಾ ಎಂದು ಬೆರಲಂ ಕಚ್ಚಿ ಬೇಡಿಕೊಂಬಂತೆ ಶರಣರನ್ನೆದೆ ದೈನ್ಯದಿಂ ನೋಡುತಂ, ಅರ್ಧನಾರೀಶ್ವರನೊಪ್ಪಿಸಿ ಕೊಟ್ಟ ಬಳಿಕ್ಕಿವರೆಲ್ಲರಿಂದೇನಾದಪುದೆಂಬಂತೆ ನಿಂದಸಭೆಯಂ ನಿರಾಸೆಯಿಂ ನೋಡುತ್ತಮಿಂತೆ ಬಿಸಿ ನೀರನುಂಡ ಲತೆಯಂತೆ ಕೊರಗಿ, ಮುಗಿಲ ದನಿಗೇಳ್ದ ಹಂಸೆಯಂತೆ ಕರಗಿ, ಬಿಸಿಲೊಳಗಿರ್ದ ಚಕೋರಿಯಂತೆ ಬೆಂಬಿಳ್ದು, ಹೂಮಿಡಿಯ ಕರ್ದುಂಕಿದ ಪೆಣ್ದುಂಬಿಯಂತೆ ರಾಗವಳಿದು, ರಾಹುವಂ ನೆನೆದ ಚಂದ್ರಕಳೆಯಂತೆ ಕಂದಿ, ಕಾರಮಳೆಯಂ ಪಡೆಯದ ಜಾದಗೆಯಂತೆ ಕುಂದಿ, ಬಿಸುಸುಯ್ಯ ಬೆಂಕಿಯಿಂ ತೊಟ್ಟ ತೊಡಿಗೆಗಳ ನುಣ್ಪೆಳಗು ಕಂದಿ ಕೊರಗುತ್ತಿರೆ ಮಂಟಪದೊಳಗಣ ಸುವಾಸಿನಿಯರ ನಡುವೆ ಮಹಾದೇವಿ ನಿಂದಿರ್ಪ ಸಮಯಯೊಳು,

ಇತ್ತಲ್ ಮುಂದಣ ವೀರವೃಂದದ ಹಿಂದಣ ಕೊರಲಕೊಂತದ ಕೆಲಬಲದ ಬಿಲ್ಲ ಬಲ್ಲೆಯದ ಪುಲ್ಜನದ ನಡುವೆ ಮಸಗಿ ಮೊಳಗುವೊಸಗೆವರೆಯೊತ್ತೊತ್ತೆವಿಡಿದು ಮೆಲ್ಲ ಮೆಲ್ಲನಡಿಯಿಡುವ ಕನ್ನಡಿಗಳಸದ ತಳಿರ್ಗಳಸದ ಮಂಗಳಗಳಸದ ಸುವಾಸಿನಿಯರ ಮುಗ್ಧೆಯರ ಮಧ್ಯಮನಾಯಕಿಯರ ವಿದಗ್ಧೆಯರ ವಾರನಾರಿಯರುಭಯ ಪಕ್ಕದೊಳಾನೆಯ ಮೇಲೆ ನೀಳ್ದಗಳೆಯೊಳ್ಕಯ್ಗೊಳಿಸಿ ಪಿಡಿದ ಮಂಗಳ ಜವಳಿಯ ಪಟ್ಟ ಕರ್ಮಸೂತ್ರಂಗಳ ನಾಣಿಯ ವರ್ಗದ ರತ್ನಪೆಟ್ಟಿಗೆಗಳ ಸಾದಿನ ಭರಣಿಯ ಮೃಗಮದದ ಕರಂಡಗೆಯ ಕರ್ಪುರಾದ್ಯನುಲೇಪನದ ಭರಣಿಗಳ ಬಾಳೆಯೀಳೆನಾರಿಕೇಳನಾರಂಗ ಮಾವು ಪನಸು ನಿಂಬೆ ಮಾತುಳಂಗಾದಿ ನಾನಾವಿಧದ ಪಂತಿಗಳ ಬಿಳಿಯ ಕಬ್ಬುವಿಡಿದು ನಡೆವ ಜನದ ನಡುವೆ, ಸಮಸ್ತ ವಸ್ತುಕಾರದ ಪರಭಾಗದೊಳು ತುರಂಗಮಾಲೆಯ ಗಜ ಘಟಾಪಟಳದ ಭೇರಿಯ ತಂಬಟದ ನಿಸ್ಸಾಳದ ಬಹಳಧ್ವನಿಯ ಕೋಳಾಹಳದ ನಡುವೆ, ಪಟ್ಟದಾನೆಯ ಮೇಲೆ ಎತ್ತಿದ ಬೆಳುಗೊಡೆಯ ಮುತ್ತಿದ ಸಿಂಗರದ ಸುತ್ತಿ ನಡೆವ ಸಚಿವರ ಬೀಸುವ ಚಾಮರದ ಸೂಸುವ ಸೀಗುರಿಯ ಕೈವಾರಿಸುವ ಕವಿಗಳ ಪರಸುವ ಧರಾಮರರ ಪೊಗಳುವ ಮಂಗಳಪಾಠಕರ ಸಂದಣಿಗೊಳುವ ವಂದಿಗಳ ವಿವಿಧ ವಿಲಾಸದಿಂ ದೇಸೆವಡೆದು ಗಜಮಸ್ತಕದ ವಿಜಯಂ ಸೇಸೆ ದುರುಂಬಿನ ಭಾಸುರಂ ಬಾಸಿಗದ ಭಾಗ್ಯನಿಧಿ ತಿಲಕದ ಸುಲಲಿತಂ ಕರ್ಣಾವತಂಸದ ಪೂರ್ಣಮನೋಹರಂ ಸಿರಿಮೊಗದರಸಂ ಸುಲಿಪಲ್ಲಸುಲಭಂ ಪದಕದ ಸದಮಳಂ ತೋರಹಾರದ ಹರುಷಮಯಂ ಬಾಹುಪೂರಯದ ಭಾವಕಂ ಕಂಕಣದ ಕಮನೀಯಂ ಮುದ್ರಿಕೆಯ ಭದ್ರಗುಣಂ ಮಾದುಫಲದ ಮನೋಹರಂ ಉಡಿಗೆಯ ಬೆಡಂಗನೆನಿಪ ಕೌಶಿಕರಾಜನತ್ಯಾನಂದದಿಂ ನಡೆತಂದು, ತನ್ನನಿದಿರ್ಗೊಳಲು ಬಂದ ಸುವಾಸಿನಿಯರು ತಳಿವ ಮುತ್ತಿನ ಸೇಸೆಗಳಂ ಕೈಕೊಳುತಂ ಗಜಮಸ್ತಕದಿಂದವನೀತಳಕ್ಕವತರಿಸಿ, ಜಯ ಜಯ ಪ್ರಣಾದಂ ಬೆರಸು ಮಂಟಪದೊಳಗಂ ಮುದದಿಂ ಪೊಕ್ಕು, ಸರ್ವಸಂಭ್ರಮಮಂ ಸಂತಸದಿಂ ನೋಡುತ್ತಂ ವಿವಾಹ ಗೇಹದೊಳಗಿಂಗೆ ಬಂದು ಕಟ್ಟಿದಿರೊಳು ದಟ್ಟಯಿಸಿದ ಮುತ್ತೈದೆಯರಿಟ್ಟಣಮನೊತ್ತರಿಸಿ ಪೊಕ್ಕು ಮೆಟ್ಟಕ್ಕಿಯ ಮೆಟ್ಟನಿಂದಿರ್ಪಲ್ಲಿ,

ಕೌಶಿಕರಾಜಂ ಪೊಣ್ಮುವಾನಂದದಿಂದುಣ್ಮುವ ಸುಖಾಶ್ರುಗಳಿಂ ಕೆತ್ತುವ ಮೆಯ್ಯಿಂ ತಳ್ತುವ ಪುಳಕದಿಂ ಸುತ್ತುವ ಸ್ನೇಹದಿಂ ಗದ್ಗದಿಸುವ ಲಲ್ಲೆಯಿಂ ಲವಲವಿಸುವ ಚಿತ್ತದಿಂ ಮುಂದುವರಿ ವಿಂದ್ರಿಯಂಗಳಿಂ ತಲ್ಲಣಿಸುವ ತವಕದಿಂ ತಳಿರ್ತು ಮನಂ ನನೆಕೊನೆಯೋಗಿ ನಿಲಲಾರದೆ ಮುಂದೆ ಪಿಡಿದ ಜವನಿಕೆಗೆ ನೆರೆ ಮುಳಿದು ತೆರೆ ಸರಿವುದಂ ಪರಸಿಕೊಳುತಿರಲಿತ್ತಲು,

ಮಹದೇವಿಯರೊಳಗೊಳಗೆ ಕಳಲ್ದು ದುಮ್ಮಾನದೊಳಳಲ್ದು ಬಾಳ್ಕೆಗೆ ಬಳಲ್ದು ಹರನೊಳು ತೊಳಲ್ದು ಬಿಸಿಲ್ಪತ್ತಿದ ಪೂವಿನಂತೆ ಮಂಜುಪತ್ತಿದ ಮಹೋತ್ಪಲದಂತೆ ಮಸಿಪತ್ತಿದ ಲೆಪ್ಪದ ಪುತ್ತಳಿಯಂತೆ ಕರಗಿ ಕೊರಗಿ ಕೋಡಿಬಾಡಿ ಬಳುಕಿ ಬಲ್ಪಿಳಿದು ಮೆಲ್ಪುಳಿದು ದೈನ್ಯಂ ದಟ್ಟಯಿಸಿ ಕಾರ್ಪಣ್ಯಂ ಮನದೊಳುಣ್ಮಿ ಕೈಮಿಕ್ಕು ದೇಸಿಗತನಂ ದಳವೇರಿ ಶಿವನೇ ಭವನೇ ಶಂಕರಾ ಶಶಿಧರಾ ಭವಿಗೊಪ್ಪಿಸಿ ಕೊಟ್ಟಡೇನಪ್ಪೆನೆಂತಪ್ಪೆನೆತ್ತಸಾರ್ವೆನಾರುಂಟಯ್ಯೋ ಶಿವಧೋ ಶಿವಧೋ ಎಂದು ಮನದೊಳು ಮಹೇಶ್ವರಂಗೆ ಮೊರೆಯಿಟ್ಟು ಭವಿಗಳೊಳಸೋರ್ಗೆ ಭಕ್ತರೆನ್ನತ್ತಂ ಸಾರ್ಗೆ ಲಗ್ನಂ ದೂರವಕ್ಕೆ ಪಿಡಿದ ತೆರೆ ನೆಲಸಿ ನಿಲ್ಕೆಂದು ಬೇಡಿಕೊಳುತ್ತಿರೆ,

ಮುಹೂರ್ತಿಕಂ ಕೊಟ್ಟ ಚರಲಗ್ನದೊಳಂ ಪುಣ್ಯಾಹವವೆಂಬ ನುಡಿಯೊಡನೆ ತೆರೆ ಸರಿಯೆ, ಸಮ್ಮುಖಮಂ ಸೈರಿಸದೆ ಮುಳಿದಿಡುವಂತೆ ಚೆಲ್ಲಿದ ಜೀರಿಗೆ ಬೆಲ್ಲಂ ಹೋರಟೆಗುಟ್ಟಿ ಕೆಲಕೆ ಸೂಸೆ ಮಂಗಳ ಮೃದಂಗ ಪಟಹಭೇರಿನಾದಂ ಪೊಣ್ಮೆ ಮುಂದೆ ನಿಂದಿರ್ದ ಮುತ್ತೈದೆಯರು ನೆರೆದು ಪರಸೆ ಪುರದೊಳ್ಗುಡಿಗಟ್ಟೆ ಪುರಜನಂ ಹರುಷವನೆಯ್ದೆ ಪರಿಜನಂ ಪುಳಕಿಸೆ ಅತ್ಯಾನಂದದಿಂ ವಿವಾಹಮಾಗಿ ತಂದೆತಾಯ್ಗಳಿಗುಡಲಿತ್ತು ಮನೆತೀವಿ ಹೊನ್ನಂ ಹೊಯ್ದು ಮನಂ ತೀವಿ ಪರಿಣಾಮವನಿತ್ತು ಚತುರ್ಥಿಯಂ ಕಳಿದು ಮಹಮನೆಯಿಂದರಮನೆಗೆ ನಡೆತಂದು ಉಡುತಡಿಯ ಮಹಾದೇವಿಯುಂ ಕೌಶಿಕ ರಾಜನುಂ ವಿಷಮಸುಖಸಂಪತ್ಪಯಃಶರಧಿಯೊಳಾಡುತಿರ್ಪಲ್ಲಿ ಸಾತ್ವಿಕ ಶಿವಭಕ್ತಿರಸಭರಿತ ಸಂಪೂರ್ಣ ಯೌವನವಿಲಸಿತ ಸಮ್ಮೋಹನ ಸರ್ವಾಂಗ ಸೌಂದರ್ಯನಿಧಿಯೆನಿಪ್ಪುಡುತಡಿಯ ಮಹಾದೇವಿಯರ ಶಿವಲಿಂಗಾರ್ಚನಾವಿಳಾಸ ವಿಭ್ರಮವತ್ಯನುಪಮವತಿ ಕೌತುಕವತ್ಯಾಶ್ಚರ್ಯವೆನ್ನಳವಲ್ಲದಡಂ ಭಕ್ತಿಯಿಂ ಬಲ್ಲನಿತಂ ಬಣ್ಣಿಪೆನದೆಂತೆಂದಡೆ,

ಚಂದನರಸದ ಸೊದೆಯ ಕತ್ತುರಿಯ ಸಾರಣೆಯ ಕುಂಕುಮದ ಕಾರಣೆಯ ಪನ್ನೀರ ಹದದ ಪರಾಗದ ಚಳೆಯದ ಮುತ್ತಿನ ರಂಗವಲ್ಲಿಯ ಪಳುಕಿನ ಕುಂಭಂಗಳೊಳು ಕಟ್ಟಿದ ಮುತ್ತಿನ ಜೋಳಿಕೆಯ ತೋರಣದೋರಣದಿದೊ[ಯ್ಯಾ]ರಂಬಡೆದ ದೇವಾರ್ಚನಾನಿಳಯಮಧ್ಯದೊಳು ಮಹದೇವಿಯರ ಶಿವಲಿಂಗಾರ್ಚನೆಗೆಂದು ರೋಹಿಣೀದೇವಿ ತಾರಾವಳಿಯಿಂ ತರಂಗೊಳಿಸಿ ಬೆಳುದಿಂಗಳಿಂ ಸಮೆದು ಚಂದ್ರಲೋಕದಿಂದಿಳಿಪಿ ತಂದೊಳಗಿರಿಸಿದಳೆಂಬಂತೆ ತಳತಳಿಸಿ ಹೊಳೆವ ನಕ್ಷತ್ರಮಾಲೆಗಳ ತೊಳಗುವ ಧವಳಾರದ, ಮುಂದದ ದಿವ್ಯನಾದದೊಬ್ಬುಳಿಗಳೆಂಬಂತೆ ತರತರಂ ಗೊಂಡಿರಿಸಿದ ಘಂಟೆಗಳ, ತಮ್ಮ ಕಂಪಿಂದಾರತಿಯ ಬೆಳಗಂ ಪೊರೆವ ಧೂಪಪಾತ್ರೆಗಳ, ಕೊಂಕಿ ಬೆಳೆದ ಮೃಣಾಳನಾಳದ ತುದಿಯೊಳರಲ್ದು ನಿಂದ ಬಿಳಿಯ ತಾವರೆಯಂತಿರ್ದಾರತಿಗಳ, ಬೆಳಗಿನ ಬಿಂಬಮನಿಳಿಪಿದಂತಿರ್ದ ಕೌಸಾಳಂಗಳ, ಎಳೆವಿಸಿಲ ತಿರುಳ ಕರಣೆಗಳುರುಳಿಗಳನೆರಡು ಭಾಗಂ ಮಾಡಿ ತರುಣ ತರಣಿ ತಂದಿಟ್ಟನೆಂಬಂತೆ ತರತರದೊಳಿಟ್ಟ ಹೊನ್ನ ಗಿಣ್ಣಿಲುಗಳ, ಅಮೃತಕರಬಿಂಬ ಕದಂಬಗಳನಿಳಿಪಿದಂತಿರ್ದ ಪರಿಯಾಣಂಗಳ, ಬಾಸಣಿಸಿದ ಸೌರಭ್ಯ ಶೀತಳ ನಿರ್ಮಲ ಸಲಿಲಪೂರ್ಣಕುಂಭಸಂಕೀರ್ಣಂಗಳ, ಪರಿಮಳರಸಂ ತೀವಿದ ಮುತ್ತಿನ ಚಿಪ್ಪಿನೊಪ್ಪಂಗಳ, ನೆರೆದ ನವಕುಸುಮ ಕರಂಡಕಾವೀಥಿಯ, ನಿಲಿಸಿದ ಹೊಂಬಾಳೆಯ ಚಾಮರದ, ಕೆಲದೊಳಿರಿಸಿದ ಮುಡಿವಾಳದ ಸೀಗುರಿಯ, ಮರುಗದ ಮೇಲ್ಕಟ್ಟಿನ ನಡುವೆ ಮೆರೆವ ಕಮಳದ ಘಂಟೆಯ, ಶಶಿಕಾಂತದ ದೀಪ್ತಿಕಾಸ್ತಂಭಗಳ ಮೇಲೆ ನೆಲೆಸಿ ನಿಂದ ಮಾಣಿಕ್ಯಜ್ಯೋತಿಗಳ, ದವನದ ದಾರವಂದದ, ಲಾಮಂಚದ ಭಿತ್ತಿಯ

ಹೊರಸುತ್ತಿನೊಳು ಕೆದರಿದ ಹೂವಿಂಗೆ ಸಮಬೆರಕೆಯಾಗಿ ಚೆಲ್ಲಿದ ಕಸ್ತೂರಿಯ ಮಲಯಜಪರಿಮಳಕೆರಗಿ ಪರಿದಾಡುವ ಮರಿದುಂಬಿಯ ಬಂಬಂಲಂ ಸೋವುವ ಪರಿಚಾರಕಿಯರ, ಮತ್ತಂ ಧವಲ ಶಂಖಂಗಳಂ ತವತವಗೆ ಪಿಡಿದು ನಿಂದಿರ್ಪ ಜಂತ್ರದ ಪುತ್ಥಳಿಗಳ, ಶಿವಮಂಟಪದ ಪರಿಮಳಂ ಹೊರಸೂಸದಂತೆ ದೇವರ್ಚನಾ ನಿಳಯದ ಮುಚ್ಚುಳನಿಕ್ಕುವ ಪಡಿಯರತಿಯರ ತೆರಳ್ಕೆಯಿಂ ತಳೆದ ಸಾತ್ವಿಕರಸವನೊಳಕೊಂಡು ಶೈವೋಪಕರಣಂಗಳ್ ಮಹಾದೇವಿಯರ್ಬಪ್ಪನ್ನೆಗಂ ಚೆನ್ನಮಲ್ಲಿಕಾರ್ಜುನನಲಸುತ್ತಿರ ಲಾಗದೆಂದು ತಂತಮ್ಮಂಗ ಸೌಷ್ಟವಂಗಳಿಂದರ್ಚಿಸುವಂತಿರ್ದುತ್ತಮ ಸುಕುಮಾರ ಸಮಸ್ತ ವಸ್ತು ವಿಸ್ತರಂಗಳಂ ಕಂಡು ಶಿವಂ ಸೈರಿಸಲಾರದೆ ತನಗೆ ತಾನರ್ಚಿಸಿಕೊಳುತಿರ್ದಪನೆಂಬಂತೆ, ಮೆರೆವ ಶಿವಪೂಜಾಸೌರಭ್ಯಮಂಟಪಂ ವಸಂತನೇಕಾಂತನಿಳಯದಂತೆ, ವನಲಕ್ಷ್ಮಿಯ ಸುಕೃತಸರ್ವಸ್ವದ ಗವಸಣಿಗೆಯಂತೆ, ಸಕಲ ಶಿವಭಕ್ತರ ಪುಣ್ಯಸಾಲೆಯಂತೆ, ಕೈಲಾಸದೊಳಗಣ ಶಿವನ ಸೆಜ್ಜೆಯಂತೆ, ಸದ್ಭಕ್ತರ ಹೃತ್ಕಮಲಕುಹರದಂತೆ, ಭಕ್ತಿಯ ಬಣ್ಣದೊಬ್ಬುಳಿಯಂತೆ, ಸತ್ಯದಚ್ಚಿನಂತೆ, ನಿತ್ಯದ ಮಚ್ಚಿನಂತೆ, ಮುಕ್ತಿಯ ಮುಚ್ಚುಳಂತೆ, ಶಿವಪೂಜಾ ಮಂಟಪಂ ಮಹದೇವಿಯರ ಬರವಂ ಬಯಸುತಿರ್ದುದಂತುಮಲ್ಲದೆಯುಂ,

## ಸ್ಥಲ ೫

ಶೈವಮದೊಬ್ಬುಳಿಗೊಂಡುದೊ
ಶೈವಂ ಸಾಕಾರಮಾಯ್ತೊ ನಿಲಯದೊಳೆನೆ ತಾ
ನೈವಡಿ ಸಿಂಗರಿಸುತ್ತಂ
ಶೈವವಧೂನಿಕರವೆಯ್ದೆ ಬಂದುದು ಭರದಿಂ ॥

ಪರಮ ಶೈವಾಂಬುರಾಸಿಗೆ
ಉರುತರ ಮಹದೇವಯರ್ಗೆ ಪರಿಚಾರಕಿಯರ್
ತರತರದೆ ಪರಿದುಬಂದಾ
ದರದಿಂ ದೇವಾರ್ಚನಕ್ಕೆ ಬಿನ್ನೈಸಲೊಡಂ ॥

ಕೇಳಿ ಬಾಲೆ ತಿಳಿದು ತಳಿತು ಪುಳಕದೊಡನೆ ಬೆರಸಿ ಬೆಳೆದು
ಕೇಳಿ ಶೂಲಿಯಚಲಭಕ್ತಿ ಭಾವಮಂ ಜಿಗಿಲ್ತು ಪಿಡಿದು
ಬಂದ ಕೆಳದಿಯರ್ಕಳಂದಮಂ ಮಗುಳ್ದು ಮಾಣದಪ್ಪಿ
ಇಂದುಧರನ ಹರನ ವರನ ಪರಮಭಕ್ತಿಸುಖದೊಳೊಪ್ಪಿ
ಪರಿಮಳಂಗಳೊಸರ್ವ ವಿಮಳ ಜಲದೊಳಕ್ಕರಿಂದೆ ಮಿಂದು
ಸರಸ ಧೂಪ ಧೂಮಗಂಧದಿಂದೆ ಪೊರೆದು ನೆಗೆದು ತಳೆದು
ಸುರಭಿಗಂಧದರಳ ತೆಕ್ಕೆಯೆನಿಸಿದಿರವತಿಗಳನಾಂತು
ಪರಿಮಳಂಗಳೆಸೆವ ಸೇವತಿಗೆಯ ಕುಸುಮಕುಲವನಾಂತು
ಇಂಪನುಗುಳ್ವ ಸಂಪಗೆಗಳ ಕಂಪಿನೆಸಳ ನೆರೆ ತುರುಂಬಿ

ಕಂಪು ಸುರಿದ ಕನಕ ಕೇತಕಿದಳಂಗಳಂ ತುರುಂಬಿ
ಮುತ್ತಿನೋಲೆ ಕಿವಿಯ ಹಾಲೆಗೆಡ್ಡಮಾಗಿರಲ್ಕಮರ್ಚಿ
ಮುತ್ತು ಮಾಣಿಕಂಗಳಿಂಡೆಗೊಂಡ ತೊಡವನೊಪ್ಪಿ ಸಾರ್ಚಿ
ಒಟ್ಟಿಕೊಂಡ ಮೃಗಮದಂ ಕಪೋಳತಳದೊಳೊಸರ್ದು ಪರಿಯೆ
ಇಟ್ಟ ತಿಳಕವಳಿಕುಳಕ್ಕೆ ಕಂಪ ನಲಿವುತಿತ್ತು ನೆರೆಯೆ
ನಯನಕಾಂತಿ ಮುಖದ ಮೌಕ್ತಿಕಕ್ಕೆ ಪುರುಡಿಸುತ್ತೆ ಬೆಳಗೆ
ನಯದ ನಳನಳಿಕ್ಕೆಯಿಂ ಕಪೋಳಫಳಕವಲ್ಲಿ ತೊಳಗೆ
ಅಯ್ದೆದಾಳಿ ಮುತ್ತಿನೊತ್ತರಕ್ಕೆ ಬೆಳಗನೀಯದೀಯೆ
ಎಯ್ದೆ ಹಾರಕಾಂತಿ ಕುಚಮನ[ಪ್ಪಿ] ಮುಸುಗಿ ಮೇಲುದೀಯೆ
ಮೇಲುದೆಂಬುದಾಗಮಕ್ಕೆ ನಿಂದು ನಿಲ್ಲದಂತೆ ಬಳಲೆ
ಮೇಲು ತೀವಿ ಬೆಳೆದುರೋಜವಲ್ಲಿ ಮೇಲುದಿಂಗೆ ತೆರಳೆ
ವಕ್ಷದೇಶದೊಳಗೆ ತಳೆದ ಚಂದನಾನುಲೇಪವೊಪ್ಪೆ
ಕಕ್ಷದೊಳಗೆ ಮೆರೆವ ಸಾದಿನಚ್ಚಗಂಪು ಕುಚಮನಪ್ಪೆ
ಬಾಹುಪೂರಯಂಗಳೊಪ್ಪೆ ಹಸ್ತಕಟಕನಿಕರಮೆಸೆಯೆ
ಆಹ ಬೆರಲ ರತ್ನಮುದ್ರಿಕಾಮಯೂಖ ವೀಥಿವಡೆಯೆ
ಉಟ್ಟ ಬಿಳಿಯ ಪಟ್ಟವಳಿಯ ಬೆಳಪು ಇಂದುರುಚಿಗೆ ಸೆಣಸೆ
ಇಟ್ಟ ನೇವುರಂಗಳುಲಿಪು ಹಂಸಕುಲಮನೆಯ್ದೆ ಬಳಸೆ
ಪಾದನಖದ ಬೆಳಗು ಸೂಸಿ ಕುಸುಮಕುಲಮನಲ್ಲಿ ತೋರೆ
ಬೀದಿವರಿವ ಮುದ್ರಿಕಾರಣತ್ಕರಂಗಳಿಂದೆ ಮೀರೆ
ಹೊನ್ನ ಪಾದುಕೆಗಳನಾಂತು ಮೆಲ್ಲ ಮೆಲ್ಲನಡಿಯನಿಟ್ಟು
ಚೆನ್ನಮಲ್ಲಿನಾಥನಲ್ಲಿಗಚಲಸುಖಮನಾಂಕೆಗೊಟ್ಟು

ಬರುತಮಿರ್ದಳಿಂದುಧರನ ಪೂಜೆಗೆಮ್ಮ ಮಹಾದೇವಿ
ಪರಮಭಕ್ತೆ ಶಾಂತಿಯುಕ್ತೆ ಯತಿವಿರಕ್ತೆ ಮಹಾದೇವಿ
ಮುಡಿದ ಕುಸುಮಕುಲಕೆ ಮುಸುರುವಳಿಯ ತಳೆಯ ನೆಳಲನಡುವೆ
ಎಡಬಲಂಗಳೊಳಗೆ ಕುಣಿವ ಚಮರ ಸೀಗುರಿಗಳ ನಡುವೆ
ಮುಂದೆ ನೆಲನುಗ್ಘಡಿಪ್ಪ ಚಂದ್ರಮುಖಿಯರಿಕ್ಕೆಯೊಳಗೆ
ಹಿಂದೆ ನಾಗವಲ್ಲಿಗಳನು ಘಳಿಸಿಕೊಡುವ ಸತಿಯರೊಳಗೆ
ಪಚ್ಚೆಗರ್ಪುರವನು ನೀಡುತಿರ್ಪ ಲಲನೆಯರ್ಕಳೊಳಗೆ
ಇಚ್ಚೆಯರಿದು ಹಚ್ಚಿಕೊಡುವ ಸಚ್ಚರಿತ್ರವಧುಗಳೊಳಗೆ
ಮೊಗದ ಮುಡಿಯ ಪರಿಮಳಕ್ಕೆ ಸೊಗಯಿಪಳಿಗಳಿಕ್ಕೆಗಟ್ಟೆ
ನಗೆಯ ಬೆಳಗಿನೊಳಗೆ ಶಶಿಯ ಬೆಳಗು ಬೆಳಗನೆತ್ತಿಕಟ್ಟೆ

ಮಲ್ಲಿನಾಥನಚಲಭಕ್ತಿ ನಡೆದು ಬಪ್ಪ ತೆರದೆ ಬಂದು
ಎಲ್ಲ ತೆರದಿ ಸಿಂಗರಂಗಳೊಪ್ಪಿ ಬಪ್ಪ ತೆರದೆ ಬಂದು
ಶಿವನ ಮುಖದ ಮುಖದ ಕಣ್ಣ ಬೆಳಗು ಬೆಳೆದು ನಡೆವ ತೆರದೆ
ಭವನ ಪೂಜೆ ಬಲಿದು ರೂಪುವಡೆದು ನಡೆದುಬಪ್ಪ ತೆರದೆ
ಏಕನಿಷ್ಠೆ ನೇಮದಿಂ ಪಿನಾಕಿಯಲ್ಲಿಗೆಯ್ದುವಂತೆ
ಲೌಕಿಕಕ್ಕೆ ಸೆಡೆದು ವೈದಿಕಾಗಮಂಗಳೆಯ್ದುವಂತೆ

ಬಂದಳಲ್ಲಿ ಚೆನ್ನಮಲ್ಲಿನಾಥನೊಲಿದು ಬರವನೆಳಸೆ
ಮುಂದೆ ಪರಿಮಳಂಗಳೀಶನೊಳಗೆ ಬಂದು ಬೆರಸಿ ನೆಲಸೆ
ನಿರ್ಮಳೋಪಕರಣ ಕಿರಣದೊಳಗೆ ತನ್ನ ರೂಪು ಹೊಳೆಯೆ
ಕೂರ್ಮೆಯಿಂದೆ ಶಿವನ ತನುವಿನೊಳಗೆ ಪುಳಕ ಬೆರಸಿ ಬೆಳೆಯೆ
ರೂಪು ಯೌವನಕ್ಕೆ ಯೌವನಂ ವಿಳಾಸದೊಡನೆ ಸೆಣಸೆ
ಭಾಪು ಭಕ್ತಿಯೊಡನೆಯೇಕನಿಷ್ಠೆಯರಿವಿನೊಡನೆ ಸೆಣಸೆ
ಹರನ ಚಿತ್ತವಡರ್ದು ಭಕ್ತೆಯತ್ತಲೊಯ್ಯನೊಯ್ಯನೊಲೆಯೆ
ಗಿರಿಜೆ ಕಂಡು ಪೊಸತೆನುತ್ತಲರ್ಧನಾರಿಯಾಗಿ ಪಿಡಿಯೆ
ನಿಂದಳೆಂಬ ತೆರದೆ ರೂಪು ಯೌವನಂ ವಿಚಿತ್ರಮಾಗೆ
ಬಂದು ನಿತ್ಯನೇಮದಲ್ಲಿ ಕುಳ್ಳಿದಳು ವಿಳಾಸಮಾಗೆ
ಕುಳ್ಳಿರುತ್ತೆ ಚೆನ್ನಮಲ್ಲಿನಾಥನಂ ಜಿಗಿಲ್ತು ನೋಡಿ
ಬಳ್ಳಿವರಿದ ನೇಹದುಸುರ ಧೂಪ ಧೂಮವೆಸೆಯೆ ನೀಡಿ
ನಯನಕಾಂತಿ ರತ್ನರೋಚಿಯಿಂದವಾರತಿಗಳನೆತ್ತಿ
ಭಯದ ಭಕ್ತಿಯೋಗರಂಗಳಿತ್ತು ಮನದೊಳೆಯ್ದೆ ಮುತ್ತಿ
ಅರ್ಚಿಸುವುದರಿಂದೆ ಮುನ್ನವರ್ಚನಾ ವಿಳಾಸಮಾಗೆ
ಸಾರ್ಚಿ ಕರೆವುತಿರ್ದಳಮಮ ಶಿವನನಾಗಳಧಿಕಮಾಗೆ
ದೇವ ಎನ್ನ ಹೃದಯಕಮಳದೊಳಗೆ ಪ್ರಜ್ವಳಿಪ್ಪ ಬೆಳಗೆ
ದೇವ ಎನ್ನ ಮನದ ಮೊನೆಯೊಳೊಪ್ಪುತಿಪ್ಪ ಬೆಳಗಿನೊಳಗೆ
ಬಾರ ಗುರುವೆ ಬಾರ ಪರವೆ ಬಾರ ವರವೆ ಮಲ್ಲಿನಾಥ
ಬಾರ ಧವನೆ ಬಾರ ಸುಕೃತಸಾರ ಬಾರ ಮಲ್ಲಿನಾಥ
ವೀರಭದ್ರ ರುದ್ರ ದುರಿತದೂರ ವಿಶ್ವರೂಪ ಬಾರ
ಮಾರಮಥನ ಪುಣ್ಯಕಥನ ಸಹಜಮಿಥುನ ರೂಪ ಬಾರ
ತಾರಗಿರಿಯ ಪಿರಿಯ ಸಿರಿ[ಯೆ] ಸತ್ಯಶರಣಭರಣ ಬಾರ
ಬಾರ ಫಳವೆ ಫಳದರಸವೆ ರಸದ ಸವಿಯ ಸುಖವೆ ಬಾರ
ಬಾರ ಗುಣವೆ ಗುಣದ ಮಣಿಯೆ ಕಣಿಯೆ ಪಿರಿಯ ಸಿರಿಯೆ ಬಾರ

... ... ... ... ... ... ... ... ... ... ... ... ...
ಬಾರ ಸಿದ್ಧ ಭವವಿರುದ್ಧ ಸುಪ್ರಸಿದ್ಧ ಮಲ್ಲಿನಾಥ
ಬಾರ ಮುಡುಹು ಮುಂದಲೆಗಳ ಕುರುಳನೀವೆ ಮಲ್ಲಿನಾಥ
ಬಾರೆನುತ್ತೆ ಪೂವನಿತ್ತು ಪೊಡಮಡುತ್ತೆ ಮತ್ತೆ ಕರೆಯೆ
ಬಾರ ನಿನ್ನ ತೊತ್ತು ಭೃತ್ಯಳಾನೆನುತ್ತೆ ಮತ್ತೆ ಕರೆಯೆ
ಕರತಳಕ್ಕೆ ಬಂದ ಮಲ್ಲಿನಾಥನಂ ಸಮರ್ಥೆ ನೋಡಿ
ಹರುಷದಿಂದೆ ಉರದೊಳೊತ್ತಿ ಕಣ್ಣೊಳೊತ್ತಿ ಮತ್ತೆ ನೋಡಿ
ಮುದ್ದನಿತ್ತು ನಲ್ಲಸುಖಕೆ ಬಲ್ಲದೊಂದು ಸೊಲ್ಲಹಾಡಿ
ಮುದ್ದೆ ನುಡಿವುದೇನು ಈಗ ಚೆನ್ನಮಲ್ಲಿನಾಥ ನೋಡಿ

ಎಂದು ಪರಿಮಳೋದಂಕಗಳಿಂದೆ ಮಜ್ಜನಕ್ಕೆ ಕೊಟ್ಟು
ಸಂದು ನೋಡಿ ನೋಡಿ ನೋಟವಗಲದಂತೆ ಬೆರಸಿಬಿಟ್ಟು
ಬೆರಸಲಮ್ಮದೋಜೆಯಿಂದೆ ಪೂಜೆಯೊಳಗೆ ಪೊಕ್ಕು ಸಿಕ್ಕಿ
ಎರಚಿಸುತ್ತಲಿರ್ದಳಭವನಚ್ಚಸುಖಕೆ ಮಚ್ಚು ಸಿಕ್ಕಿ
ಶಂಭುವಿಂಗೆ ಪೂಜೆಗೈಯುತಿರ್ದಳಾಗಮಧಿಕಮಾಗೆ
ಇಂಬಿನಿಂದೆ ಪತ್ರಜಾಲ ಕುಸುಮಕುಲಮನೆಯ್ದೆ ತುರುಗಿ
ಚಂದ್ರಕಳೆಯನೊಲಿದು ಪೊರೆವ ಚಂಪಕಾಪ್ರಸೂನವಿತ್ತು
ಇಂದ್ರನಡಿಯನೊಪ್ಪವಿಡುವ ಸೇವತಿಗೆಯ ಪೂವನಿತ್ತು
ಆರತಿಗಳನೆತ್ತಿ ನೋಡಿ ಅಂತೆ ಸಿಂಗರಕ್ಕೆ ಸಂದು
ಸೇರಿಸಿರ್ದ ಪುಷ್ಪಚಯಮನಡರಿ ನೋಡಿ ಭಾರಮೆಂದು
ಪೂವನಲ್ಲಿ ಕೆಲದೊಳಿರಿಸಿ ಪರಿಮಳಂಗಳಂ ತುರುಂಬಿ
ಪೂವಿನೆಸಳನೊತ್ತನನಿಕ್ಕಿ ವಿಮಳ ಪರಿಮಳಂದುರುಂಬಿ
ಹೊರಗೆ ಕುಸುಮದ ಪ್ರಭಾಳೆ ಒಳಗೆ ಪರಿಮಳ ಪ್ರಭಾಳೆ
ಮೆರೆದು ಬೆಳಗುತಿರ್ದುದಲ್ಲಿ ರತ್ನರಂಜಿತ ಪ್ರಭಾಳೆ
ಅಲ್ಲಿ ಮುತ್ತು ಮಾಣಿಕಂಗಳಿಂಡೆಗೊಂಡು ಬೆಳಗು ಮೀರೆ
ಅಲ್ಲಿ ರತ್ನಕರ್ಣಿಕಾ ಸುವರ್ಣ ಪುಷ್ಪವೀಥಿದೋರೆ
ತನ್ನ ಬೆಳಗು ಕಣ್ಣ ಬೆಳಗು ರನ್ನವೆಳಗು ಅಚ್ಚವೆಳಗು
ತನ್ನ ತನುವಿನ ಪ್ರಭಾವ ವದನಶಶಿಯ ಜೊನ್ನವೆಳಗು
ಹೊತ್ತಿ ಸುತ್ತಮಿರ್ದು ಬಹಳ ದೀಪ್ತಿಕಾ ಪ್ರಭಾವ ಬೆಳಗು
ಬಿತ್ತರಿಪ್ಪ ನಿರ್ಮಳೋಪಕರಣ ಕಿರಣತತಿಯ ಬೆಳಗು
ದೇವನಂ ಮುಸುಂಕೆ ತನ್ನನುಂ ಮುಸುಂಕಲರ್ಚಿಸುತ್ತೆ
ಭಾವದೊಳಗೆ ನಿಂದ ಮೂರ್ತಿಯಂ ಮುಸುಂಕಲರ್ಚಿಸುತ್ತೆ
ತನ್ನ ರೂಪು ಲಿಂಗದೊಳಗೆ ಲಿಂಗರೂಪು ಹೃದಯದೊಳಗೆ

ಭಿನ್ನವಿಲ್ಲದುಭಯದೊಳಗೆ ತೋರಲರ್ಚಿಸುತ್ತಲೊಳಗೆ
ಮೆಯ್ಯ ಕಂಪು ಕೆಯ್ಯ ಕಂಪು ಕುಸುಮಗಂಪು ಕೂಡೆ ತೀಡೆ
ಸುಯ್ಯ ಕಂಪು ಮುಡಿಯ ಕಂಪು ನೀಳ್ಕೆಗೆಯ್ವುತಲ್ಲಿ ತೀಡೆ
ತೀಡುತಿರಲು ಅರ್ಚನಾ ಪ್ರಭಾವದೊಳಗೆ ಶಂಭುವೊಪ್ಪೆ
ಕೂಡೆ ತೇಜದೊಬ್ಬುಳಿಗಳ ಪರ್ಬಿನೊಳಗೆ ಶರ್ವನೊಪ್ಪೆ
ಅಪ್ಪುವಂತೆ ಚುಂಬಿಪಂತೆ ಬೆರಸಿಯುರದೊಳೊತ್ತಿಯಪ್ಪಿ
ಒಪ್ಪಿಸುತ್ತಲಂಗಲಿಂಗ ಸಂಗಸುಖವನಗಲದಪ್ಪಿ
ನೋಡಲಡ್ಡವಾದ ನಯನ ಸುಖಜಲಕ್ಕೆ ಮುಳಿದು ನೋಡಿ
ಕೂಡೆ ಹರುಷದಲ್ಲಿ ತೊಡರ್ದ ಗದ್ಗದಂಗಳುರ್ವಿ ಮೂಡಿ
ಉರ್ವಿ ನೆಗೆವ ಪುಳಕತತಿಗೆ ಹರುಷದಿಂದೆ ಶಾಂತವೆಯ್ದಿ
ಪರ್ವುತಿಪ್ಪ ನೇಹದೊಳಗೆ ಲಲ್ಲೆಯಿಂದೆ ಮೋಹವೆಯ್ದೆ
ನೋಡಿ ನೋಡಿ ನಲಿದು ನಲಿದು ಬೇಡಿ ಬೇಡಿ ಮತ್ತೆಯೊಲಿಸಿ
ಹಾಡಿ ಹರಸಿ ಧೂಪದಚ್ಚ ಕಂಪಿನೊಳಗೆ ಕಂಪುವೆರಸಿ
ಧೂಪದೊಡನೆ ಹೃದಯಕಮಳ ಸುರಭಿಗಂಧವಡರ್ದು ಬೆರಸಿ
ದೀಪದೊಡನೆ ಮುಖದ ಕಾಂತಿಯಾರತಿಗಳನೆತ್ತಲೊಲಿಸಿ
ಹೊನ್ನ ಪಾತ್ರೆಯೊಳಗೆ ಪುಣ್ಯರಾಸಿಯೆಸೆಯಲೊಪ್ಪುವಡೆದು
ಚೆನ್ನ ಕಳವೆಯೋಗರಂ ವಿರಾಜಿಸಿತ್ತು ಒಪ್ಪವಡೆದು
ಹಾಲಲುಂಡೆ ಹಾಲಲವುಗು ಹಾಲಲಣ್ಣೆವಾಲು ಮೆರೆಯೆ
ಮೇಲೆ ಸುಧೆಯ ಮಧುರವೆನಿಪ ಶಾಕಪಾಕತತಿಯು ಮೆರೆಯೆ

ಅರ್ಪಿಸುತ್ತಲಿರ್ದಳಮಮ ಚೆನ್ನಮಲ್ಲಿಕಾರ್ಜುನಂಗೆ
ಸರ್ಪಭೂಷಣಂಗೆ ವಿಶ್ವಪಾಲಕಂಗೆ ಶಶಿಧರಂಗೆ
ಸುರನದೀಶ್ವರಂಗೆ ಪಾರ್ವತೀವರಂಗೆ ವಿಷಧರಂಗೆ
ದುರಿತ ಶೋಷಣಂಗೆ ಅಮೃತಪೂರಿತಂಗೆ ಶುಭಕರಂಗೆ
ತುಪ್ಪದೊಳಗೆ ಚೆನ್ನ ಕಳವೆಯೋಗರಮುಮನೊಮ್ಮೆಗೊಮ್ಮೆ
ಒಪ್ಪುತಿಪ್ಪ ಸವಿಯ ಶಾಕಪಾಕತತಿಯನೊಮ್ಮೆಗೊಮ್ಮೆ
ದೇವ ಎನ್ನ ಚೆನ್ನಮಲ್ಲಿನಾಥ ಗುರುವೆ ಪಸಿದೆ ಎಂದು
ದೇವ ಒಂದು ತುತ್ತ ಸವಿದು ಬದುಕಿಸೆನ್ನನೆನ್ನನೆಂದು
ಅಲ್ಲಿ ಮೃದು ಮೃದಂಗನಾದ ಕಹಳೆ ಭೇರಿ ರವಮುಮೆಸೆಯೆ
ಅಲ್ಲಿ ಪೂರಿಸುತ್ತಮಿಪ್ಪ ಶಂಖ ಪಟಹ ತಾಳಮೆಸೆಯೆ
ಶರಣವದನದಿಂದೆ ಬೆಳೆವ ಜಯ ಜಯ ಪ್ರಣಾದದೊಳಗೆ
ಪರಮಭಕ್ತರೊಲಿದು ಪಾಡುತಿರ್ಪ ಮಂಗಳಂಗಳೊಳಗೆ

ಅರ್ಪಿಸುತ್ತೆ ತಣಿಯಿಸುತ್ತೆ ತೇಗಿ ತೂಗಿ ಪುಳಕಿಸುತ್ತು
ಅರ್ಪಿಸುತ್ತೆ ತನ್ನ ಶಿವನ ಮನದ ವಿನುತ ಸವಿಯನಿತ್ತು
ಸೊಗಸನಿತ್ತು ಸೊಂಪನಿತ್ತು ವಿವಿಧ ವಸ್ತುಕುಲಮನಿತ್ತು
ಬಗೆಯದಪ್ಪಿ ಭಕ್ತಿಯಿಂದೆ ಸುಖಮನಿತ್ತು ಮನಮನಿತ್ತು
ಕಂಪಿನಗ್ಘವಣಿಯನಿತ್ತು ಪಚ್ಚೆಗರ್ಪುರವನೆ ಸಾರ್ಚಿ
ಇಂಪು ಸುರಿವ ವೀಳಯಂಗಳಂ ಶಿವಂಗೆ ಹತ್ತೆಸಾರ್ಚಿ
ಮಂಗಳಾರತಿಗಳೆನೆತ್ತಿ ರತ್ನದಾರತಿಗಳನೆತ್ತಿ
ಹಿಂಗದಭವನಂಗಮಂ ನಿರೀಕ್ಷಿಸುತ್ತೆ ಸುತ್ತಿಮುತ್ತಿ
ಕಂಪಿನಾಲವಟ್ಟಮಂ ಬಳಲ್ದನಾಗವೆನುತಮಿಕ್ಕಿ
ಸೊಂಪಿನಿಂದ ಛತ್ರವಿಡಿದು ಚಮರ ಸೀಗುರಿಗಳನಿಕ್ಕಿ
ಶರಣವದನದರ್ಪಣಂಗೆ ಮುಕುರಮಂ ಸಮಂತು ತೋರಿ
ಪರಿಮಳಂಗಳೆಸೆವ ತನ್ನ ವದನಮುಕುರವೆಸೆಯೆ ತೋರಿ
ಗೀತದೊಳಗೆ ನೂತ್ನಭಕ್ತಿ ಜಾತವಾಗಲೋತು ಪಾಡಿ
ಗೀತದೊಳಗೆ ಶರ್ವನರಿವು ತೆರಹುಗುಡದೆ ತೀವಿ ಪಾಡಿ
ಭಕ್ತಿರಸದ ನದಿಯ ನಡುವೆ ಗೀತರತ್ನವುಣ್ಮಿ ಪಾಡಿ
ಭಕ್ತಿಯೊಳು ವಿರಕ್ತಿ ನೆಲಸಿ ಮುಕ್ತಿ ಮುಂದುದೋರಿ ಪಾಡಿ
ಒಲಿದು ಪಾಡಿ ಉಲಿದು ಪಾಡಿ ಮಲೆದು ಪಾಡಿ ಬಲಿದು ಪಾಡಿ
ಸಲುಗೆಯಿಂದೆ ಗೆಲಿದು ಪಾಡಿ ಪುಳಕವಡರೆ ನೋಡಿ ಪಾಡಿ
ದೇವ ಶಿವನ ಭವಿಯ ಸಂಗವೆಂದು ಮಾಣ್ಬುದೆನ್ನ ತಂದೆ
ದೇವ ಬೆರಕೆಯಿಲ್ಲದಚ್ಚ ಭಕ್ತಿಸುಖವದೆಂದು ತಂದೆ
ಪೂಜೆಯೊಳಗೆ ಮಚ್ಚಿ ಬೆಚ್ಚ ಮನವನೆಂತು ತೆಗೆವೆನಯ್ಯ
ಪೂಜೆಯೊಳಗೆ ನಟ್ಟ ದಿಟ್ಟಿಗಳನದೆಂತು ಕೀಳ್ವೆನಯ್ಯ
ಎನುತವರ್ಚಿಸುತ್ತವಲ್ಲಿ ಅಗಲಲಾರದಾಲಿಸುತ್ತೆ
ಮನವನೀಶನಂಘ್ರಿಯುಗಳದಲ್ಲಿ ತಂದು ಸೇರಿಸುತ್ತೆ
ಪೂಜೆಯೊಳಗೆ ಬರೆದ ತೆರದಿ ಪೂಜೆಯೊಳಗೆ ಪೊಲಿದ ತೆರದಿ
ಪೂಜೆಯೊಳಗೆ ನಟ್ಟ ತೆರದಿ ಪೂಜೆಯೊಳಗೆ ಪೂಣ್ದ ತೆರದಿ
ಒಪ್ಪುತಿರ್ದಳಮಮ ಹರನ ಪೂಜೆಯೊಳಗೆ ಮಹಾದೇವಿ
ಸರ್ಪಭೂಷನಾಸೆಗೆಯ್ವ ಪರಮಭಕ್ತಿಯೋಗ ತೀವಿ ೧೬೨-೫೪೬

## ಸ್ಥಲ ೬

ಹರಪೂಜಾ ಸ್ತೋಮಮೋ ಧೂರ್ಜಟಿಯ ಪರಮಭಕ್ತ್ಯಂಗವಾ ಮೂರ್ತಿಯೋ ಶಂ
ಕರಸಮ್ಯಜ್ಞಾನವಲ್ಲೀ ಕುಸುಮವಿಸರಮೋ ಸರ್ವಸೌಂದರ್ಯರೂಪೋ

ವರವೈರಾಗ್ಯಪ್ರದೀಪಾಂಕುರಮೋ ಬಗೆಯೆನಲ್ಪೂಜೆಯಾನಂದದಿಂ ಸಾ
ದರದಿಂದೊಪ್ಪಿರ್ದಳಾಹಾ ಉಡುತಡಿಯ ಮಹಾದೇವಿಯಾಶ್ಚರ್ಯದಿಂದಂ॥

ಇಂತು ಚೆನ್ನಮಲ್ಲಿಕಾರ್ಜುನನ ಪೂಜಾರಸಪಯೋಧಿಯೊಳುದ್ಭವಿಸಿ ಬೆಳೆವ ಚಂದ್ರಕಳೆಯಂತೆ ಮೆರೆವುತಿಪ್ಪುಡುತಡಿಯ ಮಹಾದೇವಿಯರು ಗುರುಕರುಣಸ್ಮರಣೆ ಸಹಿತ ಇಂದುಧರಂಗೆ ವಂದನಂಗೆಯ್ದು, ಸಾತ್ವಿಕರಸಂ ಸರ್ವಾಂಗದೊಳ್ತೀವಿ ನಿಂದಿರ್ದು, ಕೈಮುಗಿದತ್ಯಧಿಕನಿತ್ಯನೇಮಸಂಪನ್ನೆಯಾಗಿ, ಸತ್ಯಪ್ರಸಾದ ಸ್ವೀಕಾರ ನಿಮಿತ್ತಂ ಬಿನ್ನೈಸಿ ಬೀಳ್ಕೊಂಡು ತಿರುಗಿ ಬಪ್ಪಾಗಳು,

ಕಟ್ಟಿದಿರ ರಾಜಾಂಗಣದೊಳು ರುದ್ರಾಕ್ಷಿಯ ಬನಂ ಬಳಸಿನಿಂದಂತೆ, ಚಂದ್ರಮಂಡಲದ ಬೀಡುಬಿಟ್ಟಂತೆ, ಬೆಳಗಿನ ಬಳಗವೊಬ್ಬುಳಿಸಿದಂತೆ, ಪುಣ್ಯದ ಮೊತ್ತಮೊತ್ತರಿಸಿದಂತೆ, ಭಾಗ್ಯದ ಬೆಳೆ ಫಲವಾದಂತೆ, ಸಾಮರ್ಥ್ಯಂ ಸಂದಣಿಸಿದಂತೆ, ಮುಕ್ತಿಯ ಬಲಂ ನೆಲಸಿದಂತೆ ತನ್ನ ಬರವಂ ಬಯಸಿ ಮೂರ್ತಿಗೊಂಡ ಮಹಾಮಹೇಶ್ವರರ ತಿಂತಿಣಿಯಂ ಕಂಡು ಸಂತೈಸಲರಿದೆನಿಪ ಹರುಷದಿಂ ಹಾರಯಿಸಿ ಪುಳಕದಿಂ ಪೂರಯಿಸಿ ಉರ್ಬಿ ಬಿಬ್ಬನೆ ಬಿರಿದು ಶರ್ವನ ಕರುಣಮಂ ಪಡೆದು ಸರ್ವಾಂಗಪ್ರಣತೆಯಾಗಿ, ಮೃಡಭಕ್ತರ್ಗೆ ಕುಡಿತೆವೊಂಗಳಿನಾರಾಧಿಸಿ ತಣಿವನಿತ್ತು ಕರುಣಮಂ ಪೊತ್ತು ಕಿಂಕರತೆಯಿಂದವರಾಜ್ಞೆಯಂ ಪೊತ್ತಾರೋಗಣೆಗೆ ನಡೆತಂದೆಡೆಮಾಡಿದೆಡೆಯೊಳಿಕ್ಕಿದ ಪಟ್ಟಗದ್ದುಗೆಯನಳ್ಕರಿಂದವಷ್ಟಂಭಿಸಲೊಡಂ, ಬಾಸಣಿಸಿ ಬಂದ ಮಲ್ಲಿಕಾರ್ಜುನನ ಪ್ರಸಾದಾಮೃತಕ್ಕೆ ಪೊಡಮಟ್ಟು, ಸವಿಗಳಂ ಸಾಗಿಸದೆ, ಷಡುರಸಾಯನಮಂ ಬಡಿಸದೆ, ಇನಿದು ಮೃದುವಂ ಬಯಸಿ ಸೋಂಕದೆ, ಚೆಲುವಂ ಚಮತ್ಕರಿಸದೆ, ಕಂಪನಿಂಪುಗೆಯ್ಯದೆ, ಸವಿದನಿಯಾಲಿಸದೆ ಪ್ರಸಾದಮಂ ಪಾತ್ರೆಯೊಳು ಭಂಡಾರಿಸುವಂತೆ ಏಕನಿಷ್ಠೆಯಿಂ ಭಯಭಕ್ತಿಯಿಂ ಕೈಕೊಂಡು ಹಸ್ತಪ್ರಕ್ಷಾಲಂಗೆಯ್ದು ಕೈಘಟ್ಟಿಯನಾಧರಿಸಿ ತಾಂಬೂಲಮನಾಂತು ಸತ್ಯಶರಣರ ಮೊತ್ತದ ನಡುವೆ ಬಿತ್ತರಂಬಡೆಯೆ ಕುಳ್ಳಿರ್ದು, ಬಳ್ಳಿವರಿವ ಗೋಷ್ಠಿಗಡರ್ಪಾಗಿ, ಭಕ್ತಿಯ ಬೀಜಂಗಳಂತಿರ್ದ ಪುರಾತನರ ಗೀತಂಗಳಂ ಚಿತ್ತಭೂಮಿಯೊಳ್ಬಿತ್ತಿ ಆನಂದಾಶ್ರುಗಳನೆರೆದು ಪುಳಕದ ಗೊಬ್ಬರಮನಿಕ್ಕಿ ಭಕ್ತಿ ಜ್ಞಾನವೆಂಬ ಶಶಿರವಿಗಳಿಂ ಬಳೆಯಿಸಿ ಪ್ರಸಂಗಕುಸುಮಮನಲರ್ಚಿಸಿ ಪರಿಣಾಮಫಲಮನೆಯ್ದಿ ಗೀತ[ಕಲ್ಪ]ವೃಕ್ಷಫಳರಸಮಂ ಸವಿಸವಿದಾಗಳಾಗಳಿನ ಶಿವಾನುಭಾವಕ್ಕೆ ನವಗೀತಮಂ ಪಾಡಿ, ಶರಣರಂ ನೋಡಿ ತುಷ್ಟಿಯಂ ನೀಡಿ ನಿಷ್ಠೆಯಂ ಕೂಡಿ ಸಂತೋಷಮಂ ಮಾಡಿ ಭಕ್ತಿಯಂ ಬೇಡಿ ಸುಖರಸದೊಳ್ಮೂಡಿ ಲೀಲೆಮಿಕ್ಕಾಡಿ ಭಕ್ತಿರಸದೊಳದ್ದು ಶಿವಜ್ಞಾನದೊಳೆಳ್ದು ವೈರಾಗ್ಯಮಂ ತಾಳ್ದು ಮಾಯೆಯಂ ತೂಳ್ದು ಪಾಪಮಂ ಪೋಳ್ದು ಜನನಮಂ ಸೀಳ್ದು ದುರಾಸೆಯಂ ಪೂಳ್ದು ನಿತ್ಯಸುಖದೊಳ್ಬಾಳ್ದು ನಿಶ್ಚಿಂತ ನಿವಾಸ ನಿರತಿಶಯ ಪರಮಗೋಷ್ಠಿಸಂತುಷ್ಟಚಿತ್ತೆಯಾಗಿ ಮಹದೇವಿಯಕ್ಕನಿಪ್ಪಲ್ಲಿ,

ಶೈವಸುಖಪ್ರಸಂಗಕ್ಕೆ ಕಂಟಕಂ ಬಪ್ಪಂತೆ ಕೌಶಿಕರಾಜನ ವಿಳಾಸಿನಿಯರ್ ಬರೆ, ಮಹದೇವಿಯರ ಮನದನುರಾಗವಿಳಿವಂತೆ ಪ್ರಭಾಕರಂ ಪಶ್ಚಿಮವಾರ್ಧಿಯೊಳಿಳಿಯೆ, ಮನದುಮ್ಮಳಂ ಕವಿವಂತೆ ತಮಂ ಕವಿಯೆ, ಶರಣರಂ ಪಿಂಗಲಾರದಂಗಲಾಚಿ ಸಂಸಾರಕ್ಕೆ ಸುರುಳ್ದು ಕಾಮಕ್ಕೆ ಕೆರಳ್ದು ಅಲ್ಪಸುಖಕ್ಕೆ ತೆರಳ್ದು ಮನವಲ್ಲದ ಮನದೊಳೆಂತಕ್ಕೆ ಮಹೇಶ್ವರರಂ ಮಹಮನೆಗೆ ಬಿಜಯಂಗೆಯ್ಯವೇಳ್ದು, ಬಿನ್ನಪಂಗೆಯ್ದು, ಕರ್ರನೆ ಕಂದಿ ಸುರ್ರನೆ ಸುಯ್ದು ಸುಮ್ಮಾನವುಡುಗಿ ನಡೆವುತ್ತಯ್ಯೋ ಶಿವನೆ ಉಳಿವ ಕರೆವ ನೇಹವುಂಟೆ? ಸಂಸಾರಕ್ಕಂ ನಿಮ್ಮಲ್ಲಿಗೆಡೆಯಾಡುವ ಭಕ್ತಿಯುಂಟೆ ಏನಯ್ಯ ಶಿವನೆ, ಏನಂ ಪೇಳ್ವೆನೀ ಲಜ್ಜೆಯ

ಮಾತನೆಂದು ಚೆನ್ನಮಲ್ಲಿಕಾರ್ಜುನಂಗೆ ಮೊರೆಯಿಟ್ಟು ಮುಳಿದು ಗೀತಮಂ ಪಾಡುತ್ತೆ ಭಂಡಾರದ ಮನೆಯಲ್ಲಿಗೆ ಬಂದಾಭರಣಮಂ ತೆಗೆದು ಬಿಸುಟ್ಟು ಮೈಲಿಗೆಯನುಟ್ಟು ದುಮ್ಮಾನಮಂ ತೊಟ್ಟು ನಿರ್ವೇದಮಂ ಮುಂದಿಟ್ಟು ಸಿಂಗರಕ್ಕೆ ಸಲ್ಲದೆ ತಂಬೂಲಮನೊಲ್ಲದೆ ಪರಿಮಳದೊಳು ನಿಲ್ಲದೆ ಕೈಗೊಟ್ಟು ಬರ್ಪ ಕೆಳದಿಯರ ಮೇಲೆ ಕರಪಲ್ಲವಮನಿಟ್ಟು ಮೆಲ್ಲಮೆಲ್ಲನೆ ನಡೆತಪ್ಪಾಗಳು, ಸೆಜ್ಜೆಯ ಮನೆಯೊಳಾಸೆಗೆಯ್ವುತ್ತಿಪ್ಪ ಕೌಶಿಕರಾಜಂ ಹಾವುಗೆಯ ದನಿಗೆ ಭಾವರಸಂ ದಳವೇರೆ ನೆಲನುಗ್ಘಡಣೆಗೆ ನಲಿವು ಬಲವೇರೆ, ನಡೆತಂದು ಮಹಾದೇವಿಯರು ಸಿರಿಮಂಚದೊಳು ಮೆಯ್ಯನೀಡಾಡೆ ಮಾಸಿದ ರೂಪು ಮನೋಹರಮಾಗೆ ಅವಯವದ ಚೆಲುವಾಭರಣನೇಳಿಸೆ ಕಾಯಮರೀಚಿ ದುಕೂಲಮಂ ಮರೆಯಿಸೆ ಸಹಜಾಮೋದವನುಲೇಪನವನಿಳಿಕೆಯ್ಯೆ ನಿಜಶ್ವಾಸಂ ವೀಳೆಯಮನುಲ್ಲಂಘಿಸೆ ನೂಂಕುವಂಗಸೋಂಕು ಆಲಿಂಗನದ ಸುಖಮಂ ನೂರ್ಮಡಿಸೆ ಸ್ವಭಾವ ಸರಸಾಂಗಂ ಸುರತಾಮೃತಾಬ್ಧಿಯಂ ಸೂಸೆ ಪರುಷದ ಪುತ್ಥಳಿಯ ಮುನಿಸಿನ ಸೋಂಕು ಕರ್ಬೊನ್ನ ಪ್ರತಿಮೆಗೆ ವರ್ಣೋತ್ಕರ್ಷವೆಂಬಂತೆ ಮಹದೇವಿಯರುದಾಸೀನಮೆ ಕೌಶಿಕರಾಜಂಗೆ ಕಾಮಸಾಮ್ರಾಜ್ಯಮಾಗಿರೆ, ಮಹಾಭಕ್ತೆ ಬೆಳಗಪ್ಪುದಂ ಬಯಸುತ್ತಿರೆ ಕೌಶಿಕಂ ಬಯಸದಿರೆ ಅರಸನೊಡತಣ ವಿರೋಧದನುಭವಂ ಕನಸಿನ ಕೂಟದಂತಾಗೆ ಪಾರ್ವತಿದೇವಿಯರ ಶಾಪದನುಭವಮಂ ಶರೀರಕ್ಕಾದ ದುಃಖಮಂ ಸಾಕ್ಷಿಯಾಗಿ ನೋಳ್ಪಂತೆ ವಿಷಮಸಂಯೋಗದೊಳಿಪ್ಪಾಗಳಾ ಮಹಾದೇವಿಯರೆಳ್ದು ನಡೆತಂದು ಮುಖಪ್ರಕ್ಷಾಲನಂ ಮಾಡಿ ಭಸಿತಮನಿಟ್ಟಾಭರಣಮಂ ತೊಟ್ಟು ನಿತ್ಯನೇಮ ಸಂಪನ್ನೆಯಾಗಿ ಶಿವಭಕ್ತರೊಳವಿರಳಗೋಷ್ಠಿಯಿಂ ಪಲಕೆಲವು ದಿನಮೀ ತೆರದೊಳಿಪ್ಪಲ್ಲಿ,

ಒಂದು ದಿನವರಸನೊಡತಣ ಸುರತಶ್ರಾಂತಿಯಿಂ ಮಹದೇವಿಯರ್ಬಳಲ್ದು ಮರೆದೊರಗಿರೆ ಪಲಂಬರ್ಮಾಹೇಶ್ವರರ್ದೂರ ದೇಶಾಂತರದಿಂ ಬಳಲ್ದು ಬಂದು ಪುರಮಂ ಪೊಕ್ಕರಮನೆಯ ಬಾಗಿಲೊಳು ನಿಂದು ಪಡಿಯರಂಗೆ ಸೂಚಿಸಲವಂ ಬಂದರಸಂಗೆ ಬಿನ್ನೈಸೆ, ಭಕ್ತರ್ಭಕ್ತರೆಂದು ಕುಂದದೆ ಹೋದುದೊಂದುಂ ದಿನವಾದಡಂ ದೇವಿಯರು ಸುಖನಿದ್ರೆಯೊಳಿರ್ಕೆ ಪೋಗುಪೋಗು ಸಮಯವಿಲ್ಲ ಸಮಯವಿಲ್ಲೆಂದು ಬಂದ ಪಡಿಯರನಂ ಕೌಶಿಕಂ ಗಜರಿ ಗರ್ಜಿಸಿ ನುಡಿಯೆ, ತೊಟ್ಟನೆ ನಿದ್ರೆಕೆಟ್ಟೆದ್ದು ಕೆಟ್ಟೆಂ ಕೆಟ್ಟೆನಾರನೆಂದಪ್ಪೈ? ಶಿವಭಕ್ತರನೆ? ಬೆಂದೆಂ ಬೆಂದೆಂ ಶಿವಶಿವಾ ಸುಡು ಸುಡು ಕೆಟ್ಟ ಭವಿಯೆ, ಘಡಘಡ ಪಚ್ಚಪಸಿಯ ಪಾತಕನೆ, ನಿನ್ನ ಸಂಗದಿಂ ಭಕ್ತರ ನಿಂದೆಯಂ ಕೇಳ್ವಂತಾದುದಿನ್ನೇವೆ ನಿನ್ನೇವೆನೆನುತ್ತೇಳ್ವುದುಂ, ಮಹದೇವಿಯರ ಚರಣದೊಳ್ಕೌಶಿಕರಾಜಂ ಬೀಳ್ದೀ ಒಂದಪರಾಧಮಂ ಸೈರಿಸುವುದೆಂದು ದೈನ್ಯದಿಂ ನುಡಿಯೆ, ನಿನ್ನ ಮೂರು ತಪ್ಪಿನೊಳೊಂದು ತಪ್ಪು ಸಂದುದೇಳೇಳು ಮುನಿಸಿಲ್ಲೇಳೆನುತ್ತೆ, ವಿಳಾಸಿನಿಯರ ಕೈವಿಡಿದು ಗಳಗಳನೆ ನಡೆತಂದು ಪೊರಗೆ ನಿಂದಿರ್ದ ಮಾಹೇಶ್ವರಕೋಟಿಗೆ ಭಯಭಕ್ತಿಯಿಂ ಮೆಯ್ಯಿಕ್ಕಿ ನಿಂದು, ಕೈಯ್ಯಂ ಮುಗಿದು ಒಡಗೊಂಡು ಬಂದುಚ್ಚಾಸನತೊಳ್ಬಿಜಯಂಗೆಯ್ಸಿ ಪಾದಪ್ರಕ್ಷಾಳನದೊಡನೆ ಪಾದೋದಕ ಸಂಪನ್ನೆಯಾಗಿ ದೇವಾರ್ಚನೆಗೆಡೆಮಾಡಿಸಿ, ಬೇರೆ ಬೇರೆ ಸಿಂಹಾಸನವಗ್ಘವಣಿದೀಪ ಗಂಧಾಕ್ಷತೆ ಹೊಸ ಪುಷ್ಪ ನವಧೂಪಾವಾರತಿ ನೈವೇದ್ಯ ತಾಂಬೂಲ ಮೊದಲಾದ ಶೈವಪರಿಕರಂಗಳಂ ನೀಡಿ, ತಾನೆ ಪರಿಚರಿಯಿಂಗಳಂ ಮಾ[ಡೆ], ಹರಭಕ್ತರ್ ಪರಕೆಗಳಂ ಕೊಟ್ಟು ಹರುಷದಿಂದಿಷ್ಟಲಿಂಗಕ್ಕಾರೋಗಣೆಯನಿತ್ತು, ಪ್ರಸಾದಮಂ ಪೊತ್ತು ಸತ್ಯಸಂತುಷ್ಟರಾಗಿ ಸುಖಮುಖದೊಳಿರೆ, ಕಂಡು ಕಂಡು ಹಿಗ್ಗಿ ಹಿಗ್ಗಿ ಹೊರೆಯೇರಿ

ಭಂಡಾರಿಗಳಂ ಕರೆದು ಮಹೇಶ್ವರಾರಾಧನೆಗೆ ಹತ್ತು ಸಾಸಿರ ಹೊನ್ನಂ ಕೊಡುವುದೆನಲವರ್ ಕೌಶಿಕರಾಜಂ ವೈಹಾಳಿಯೊಳಿರ್ದಪಂ ಬಂದಬಳಿಕ್ಕೆ ಬಿನ್ನಪಂಗೆಯ್ದಲ್ಲದೆ ಕುಡಲಮ್ಮೆವೆಂದು ನುಡಿಯಲಾ ಮಾತಿಂಗೆ ಕಟ್ಟಭಿಮಾನಿ ಕಂದಿ ಕುಂದಿ ಬಿಸುಸುಯ್ದು ತನ್ನ ಮೈಯೊಳಗಿರ್ಪ ವಜ್ರದ ಕಂಕಣಂ ಬಾಹುಪೂರಯಂ ನೀಲದ ಮುತ್ತಿನೋಲೆ ಮೊದಲಾದ ಸರ್ವಾಭರಣಂಗಳಂ ನೆಟ್ಟನೆ ತೆಗೆದು ನಿಷ್ಠೆಯಿಂ ಒಟ್ಟಯಿಸಿ ಮುಟ್ಟಿದ ಮನದ ಕಟ್ಟಕ್ಕರ ಭಕ್ತೆ ಭಕ್ತಕುಲಚಿಂತಾಮಣಿ ಶಿವಜ್ಞಾನಸಂಪನ್ನೆ ವೈರಾಗ್ಯನಿಧಿಯೆನಿಪ್ಪುಡುತಡಿಯ ಮಹಾದೇವಿ ಹೊಸ ಹೊಂಗಳಂ ಕೈಯ ಹಸವೋಡಲಾರಾಧಿಸಿ ಮನಂದಣಿಯೆ ಮನ್ನಿಸಿ ಕಣ್ತೀವಿ ನೋಡಿ ತನು ದಣಿಯಲೆರಗಿ ಹರಭಕ್ತರಂ ಸರಾಗದಿಂ ಕಳುಪಿ ಮರಳ್ದುಬಂದು, ಮಾಡಿತ್ತು ನೆರೆಯದೆ ಆರಾಧನೆಗೆ ಲವಲವಿಪ ಮನದ ಮೊನೆಯ ಮರುಕದನುತಾಪವೆತ್ತಿ ದೇವಾ, ಶಿವಲಾಂಛನವನೇರಿಸಿಕೊಂಡು ಮನೆಗೆ ಬಂದವರಂ ಕಡೆಗಣಿಸಿ ಎಂತು ನೋಡುತಿಪ್ಪೆಂ, ಅವರ್ಗೆ ಸತ್ಕಾರವಂ ಮಾಡಲಿಲ್ಲದಿರ್ದಡೆನ್ನೀ ಧರೆಯ ಮೇಲಿರಿಸುವ ಕಾರಣವೇನಭವಾ, ನಿನ್ನವಳೆಂದೆನ್ನ ಮುದ್ದುತನವಂ ಸಲಿಸುವಡಿರಿಸುವುದಲ್ಲಾ ಕೈಲಾಸಕ್ಕೆ ಕೊಂಡೊಯ್ವುದೆಂದು ಚೆನ್ನಮಲ್ಲಿಕಾರ್ಜುನಂಗೆ ಗೀತಮಂ ಪಾಡುತಿರ್ಪ ಸಮಯದೊಳು, ಕೌಶಿಕರಾಜಂ ವೈಹಾಳಿಯಿಂ ಬಂದಾ ವೃತ್ತಾಂತಮಂ ಕೇಳ್ದು, ಭಂಡಾರಿಗಳಂ ಜರೆದು ಬೀಯಗದ ಕೈಯನೊಪ್ಪಿಸಿಕೊಟ್ಟು ಹೊನ್ನರಾಸಿಗಳಂ ಮುಂದೆ ಸುರಿದು ಮುನ್ನಿನಿಂದಿಮ್ಮಡಿ ತೊಡಿಗೆಗಳನಿತ್ತು ಮುನಿಸಂ ತಿಳುಪಿ ಹೋಗಲೊಡಂ,

ಸತ್ಯಭಕ್ತೆ ಶಾಂತಚಿತ್ತೆಯಾಗಿ ಶಿವಲಿಂಗಾರ್ಚನೆಯಂ ಮಾಡಿ ಪ್ರಸಾದಸಂತುಷ್ಟೆಯಾಗಿ ಮಹದೇವಿಯರಿಂತು ಕೆಲವುದಿನಂ ಸಂತಸುಖದೊಳಿರ್ದೊಂದು ದಿವಸಂ ಶಿವಪೂಜೆಗೆಂದು ಸುಪ್ರಭಾತದೊಳೆಳ್ದು ನಿರ್ಮಳೀಕೃತಸರ್ವಾಂಗೆಯಾಗಿ ನವ್ಯಾಭರಣ ಭೂಷಿತೆಯಾಗಿ ದಿವ್ಯಚಂದನ ಕಸ್ತೂರಿ ಮೃಗಮದನಾನುಲೇಪಭರಿತ ಶರೀರೆಯಾಗಿ ನವೀನ ಕದಂಬಕುಸುಮಸೌರಭ್ಯಾಭರಣ ಸಮ್ಮೋಹನದಿಂ ಮೆಲ್ಲಮೆಲ್ಲನೆ ನಡೆತಂದು ಮಲ್ಲಿಕಾರ್ಜುನನರ್ಚನೆಗೆ ಸಲ್ಲೀಲೆಯಿಂ ಕುಳ್ಳಿರ್ದ ಸಮಯದೊಳು, ಅನಂಗನಂ ಸಾಂಗನಂ ಮಾಡಲೆಂದು ರತಿದೇವಿ ಶಿವನಂ ಪೂಜೆಗೆಯ್ದು ಬೇಡಿಕೊಳಲ್ಬಂದಳೊ, ಧರ್ಮರಾಜನಂ ರೂಪುಗೊಳಿಸಲೆಂದು ಛಾಯಾದೇವಿ ದೇವಾರ್ಚನೆಗೆ ನಿಂದಳೊ, ಫಾಳಲೋಚನದಿಂ ಕಾಮನನುರುಪಿತನರಿದಾತನಂ ಬಿಟ್ಟು ಶಿವನಂ ಪೊರ್ದಿ ಬರ್ದುಂಕುವೆವೆಂದು ಪಂಚಬಾಣಂಗಳ್ಬಂದು ಹೆಣ್ಣಂದಮಂ ಕೈಕೊಂಡು ಲಿಂಗಾರ್ಚನೆಗೆ ನಿಂದವೊ, ವಲ್ಲಭನಪ್ಪ ಶಶಿಯಂ ಬೇಡಿ ರೋಹಿಣೀದೇವಿ ಶಿವನ ಮುಂದೆ ನಿಂದಳೊ ಎಂಬ ಸಂಶಯಮನಿಂಬುಗೊಂಡಿರ್ದ ಮಹದೇವಿಯರರಿವಂ ನೋಳ್ಪೆನೆಂದು ಕೌಶಿಕರಾಜಂ ಬಂದು ಕಳವಿನಿಂ ನಿಂದು ನೋಡಿ ನೋಡಿ ನಿಲಲಾರದೆ ರೂಪಿಂಗೆ ಕೌತುಕಂಗೊಂಡು ಜವ್ವನಕ್ಕೆ ಜಾಣಳಿದು ನೋಟಕ್ಕಳುಕಿ ಸುಕುಮಾರತೆಯೊಳ್ಸಿಲುಕಿ ಸಿಂಗರದೊಳ್ಬೀಳ್ದು ಸೊಬಗಿನೊಳ್ಪೊರಳ್ದು ವಿಲಾಸದೊಳ್ಬಳಸಿ ಆಲಿಂಗನಕ್ಕೆ ಲವಲವಿಸಿ ಮನವುರವಣಿಸಿ ಬುದ್ಧಿಯರತು ಅಹಂಕಾರವುಣ್ಮಿ ಚಿತ್ತಂ ಚಿಗುರ್ತು, ಕೆತ್ತುವಧರದಿಂ ಕಂಪಿಸುವ ಕೈಗಳಿಂ ತವಕಿಸುವ ತೋಳ್ಗಳಿಂ ಲಂಘಿಸುವಂಗದಿಂ ನಟ್ಟ ದಿಟ್ಟಿಯಿಂ ಪರಿತಂದು ತನ್ನ ಪುಣ್ಯದ ಫಲವನಪ್ಪುವಂತಾ ಲಿಂಗಿಸಲೊಡಂ, ಶಿವಭಾವಂ ಜಗುಳ್ದು ಅಚಲಿತವರೆಗೊರತೆಯಾಗಿ ಭಕ್ತಿಯೊಳಸೋರ್ದು ಭರಂ ತಪ್ಪಿ ಮನಂ ಮೊಟ್ಟೆಯಾಗಿ ಸಿಡಿಮಿಡಿಗೊಂಡು ತಿರುಗಿ ನೋಡಿ ಕೌಶಿಕನ ಮೊಗಮಂ ಕಂಡಲಗಿನ ಮೊನೆಯಂ ಕಂಡಂತಳ್ಕಿ ಬಳ್ಕಿ ಕುಕ್ಕುಳಂಗುದಿದೇಳ್ದು ಬೀಸಿ ಬಿದಿರ್ದು, ಎಲೆಲೆ ಭವಿಯೆ, ಶಿವಾರ್ಚನೆಯ ಸಮಯದೊಳು ಮುಟ್ಟುವರೆ, ಚೀಃ ಚೀಃ, ಪೊಲ್ಲದುದನುಗೆಯ್ದೆ, ಶಿವಪೂಜಾಸುಖಮನರಿಯದ

ಮಾನಸಗುರಿಯೆ, ಮಾಣ್ಮಾಣಿಂದಿನೊಳೆರಡುಂ ತಪ್ಪು ಪೋದವದಕ್ಕೇನೆನುತ್ತವಾತನಂ ಕಳುಪಿ, ಕಡು ನೊಂದು ಮತ್ತೊಮ್ಮೆ ಪರಿಮಳೋದಕದಿಂ ಮಿಂದು ನವ್ಯದುಕೂಲಮನುಟ್ಟು ಭಸಿತಮನಲಂಕರಿಸಿ ರುದ್ರಾಕ್ಷಗಳಂ ಸಿಂಗರಿಸಿ ಲಿಂಗಾರ್ಚನೆಯಂ ಮಾಡಿ ದುಮ್ಮಾನದಿಂ ಪ್ರಸಾದಮಂ ಕೈಕೊಂಡು ತಾಂಬೂಲಮನಾದರಿಸಿ ಕೌಶಿಕನಿಚ್ಛೆಗೆ ಜಾರಿ ದೇಹಮಂ ಮಾರಿ ಭವಿಯ ಸಂಗಕ್ಕೆ ತಾರಿ ಚಿತ್ತಮಂ ತೂರಿ ಸಲುಗೆಯಂ ಮೀರಿ ನಿಷ್ಠೆಯನೇರಿ ಮಲ್ಲಿಕಾರ್ಜುನಂಗೆ ದೂರಿ ಕರುಣಮಂ ತೋರಿ ಲಲ್ಲೆಯಂ ಬೀರಿ ಪಲಕಾಲಂ ಸಾರಿ ಲಿಂಗಪೂಜೆಯ ಸುಖಮಂ ಭವಿಯ ಕೂಟದ ದುಃಖವನನುಭವಿಸುತ್ತಿರ್ಪಲ್ಲಿ,

ಮತ್ತೊಂದು ದೇವಸಂ ಕೌಶಿಕರಾಜನುಂ ತಾನುಂ ಕಾಮಾನುರಾಗರಸದೊಳಾಳ್ದು ಸುರತಾಂತ್ಯಸಮಯಶ್ರಾಂತಿಭರಜನಿತ ಸುಖಸ್ವೇದಮಯ ಶರೀರೆಯಾಗಿರಲಲ್ಲಿಗೆ ನೀಳ್ದ ಕೆಂಜೆಡೆಗಳ ತಾಳ್ದ ಕರ್ಣಕುಂಡಲಂಗಳ ಕಕ್ಷದೊಳ್ಮೆರೆದ ಶಿವಲಿಂಗದ ಸರ್ವಾಂಗ ಭಸಿತೋದ್ಧೂಳನದ ಉಟ್ಟ ಧವಳಾಂಬರದ ತೊಟ್ಟ ರುದ್ರಾಕ್ಷೆಯ ಮೆಟ್ಟಿದ ಹಾವುಗೆಯ ಮುಂದಣ ಮಾಹೇಶ್ವರರ ಹಿಂದಣ ಶಿಷ್ಯವರ್ಗದ ವಿಳಾಸಂ ಪುಣ್ಯಮಯ ಲಾವಣ್ಯಮಂ ಪಸರಿಸೆ ಮಹದೇವಿಯರರಾಧ್ಯದೇವರ್ಭೋಂಕನೆ ಬರೆ, ಘಳಿಲನೆ ಕಂಡು ದುಕೂಲಮಂ ಮರೆದು ಭಯರಸಮನುಟ್ಟಿರ್ದಪರಿಯೊಳೇಳ್ದು ಮಂಚದಿಂದುರವಣಿಸುತ್ತಿಳಿದು ಗುರುವಿನ ಶ್ರೀಪಾದಕ್ಕೆ ಹುಟ್ಟಿದ ಮಾರ್ಗದಿಂದಷ್ಟಾಂಗಪ್ರಣತೆಯಾದ ಮಹದೇವಿಯಂ ಕಂಡು ಕಣ್ಮುಚ್ಚಿಕೊಂಡು, ಮಗಳೆ ದುಕೂಲಮಂ ಬಾಸಣಿಸಿಕೊಳೆಂದು ಬೇಗದಿಂ ಶ್ರೀಗುರು ಬೆಸಸೆ, ತಗ್ಗಿ ಕಗ್ಗಿ ಸಿಗ್ಗಾಗಿ ಬಳಿಕ್ಕರಿದು ಸಂವರಿಸಿಕೊಳುತ್ತಂ, ಮಂಚದ ಮೇಲಣ ಸಪುರವಸ್ತ್ರಮಂ ತೆಗೆಯಲೆಂದು ಕೈನೀಡೆ, ಕೌಶಿಕಂ ಕಂಡು ಕಡು ನಾಚಿ, ತೆಗೆ ತೆಗೆ ನಿನಗೇನತ್ಯಂತ ಭಕ್ತಿಗೆ ಮೀರಿದ ವಿರಕ್ತಗೆ ಸೀರೆ ಏಕೆಂದು ಕೈಯ ದುಕೂಲಮಂ ಸೆಳೆಯಲು, ಹಾ ಮೂರುಂ ತಪ್ಪು ತೀರ್ದುದೆನ್ನಿಚ್ಛೆ ಸಾರ್ದುದು, ಭವಿಸಂಗವೊಳಸೋರ್ದುದು, ವಿರಕ್ತಿ ನಿಮಿರ್ದುದು, ಭಕ್ತಿ ಬೆಳೆದುದು, ನಿಷ್ಠೆಯುಳಿದುದು ಬರ್ದುಂಕಿದೆಂ ಬರ್ದುಂಕಿದೆನೆನುತ್ತಾಶಾರಹಿತೆ ಕೇಶಾಂಬರಿಯಾಗಿ ತಿರುಗಿಬಂದು ಧವಳಾರದೊಳಗಿರ್ದ ಚೆನ್ನಮಲ್ಲಿಕಾರ್ಜುನನಂ ಕರಸ್ಥಲದೊಳ್ಬಿಜಯಂಗೆಯ್ಸಿಕೊಂಡು ನಡೆತಂದು ತಂದೆತಾಯಿಗಳ್ಗೆ ಪೇಳ್ದು ಗುರುಚರಣಕ್ಕೆರಗಿ ತದನುಜ್ಞೆಯಿಂ ಪಡೆದು ಬೀಳ್ಕೊಂಡಾಭರಣಮಂ ಕಳೆದಭವಭಕ್ತರ್ಗಿತ್ತು ಅಶನದಾಸೆಯಂ ತೃಷೆಯ ತೃಷ್ಣೆಯಂ ಬೆಸನದ ಬೇಗೆಯಂ ವಿಷಯದ ವಿಹ್ವಳತೆಯಂ ತಾಪತ್ರಯದ ಕಲ್ಪನೆಗಳಂ ಗೆಲಿದೆನಿನ್ನೇನಿನ್ನೇನೆನ್ನಿಚ್ಛೆಯಾದುದು ಚನ್ನಮಲ್ಲಿಕಾರ್ಜುನಾ, ನಿನಗಂಜೆನಂಜೆನೆಂದು ಗೀತಮಂ ಪಾಡಿ ಸಪ್ತಾಂಗರಾಜ್ಯಮಂ ಹಾರಲೊದೆದು ಪರಿಜನಮಂ ಲೆಕ್ಕಿಸದೆ ಪುರಜನಮಂ ಕೈಕೊಳ್ಳದೆ ಭೋಗಮಂ ಸಾಗಿಸದೆ ಆಸೆಯನುಲ್ಲಂಘಿಸಿ ಅಳಿಪನುಳುಪಿ ಭಕ್ತಿ ಜ್ಞಾನ ವೈರಾಗ್ಯ ಶೈವಸಾಮ್ರಾಜ್ಯಭಾರಮನಾಂತು ಸಹಜಭಕ್ತೆ ಸಮ್ಯಜ್ಞಾನಿ ಸತ್ಯಭಾಷಿಣಿ ಪರಮ ವೈರಾಗ್ಯನಿಧಿಯೆನಿಪ್ಪುಡುತಡಿಯ ಮಹಾದೇವಿ ಪುರಮಂ ಪೊರಮಟ್ಟು ಶ್ರೀ ಪರ್ವತಾಭಿಮುಖಿಯಾದಳಂತುಮಲ್ಲದೆಯು,

## ಸ್ಥಲ ೭

ಒದೆದು ಸಮಸ್ತ ರಾಜ್ಯಸುಖಮಂ ಬಿಸುಟೊಲ್ಲದೆಯಲ್ಪ ಭೋಗಸಂ
ಪದವನೆ ನೂಂಕಿ ಸಂಸ್ಕೃತಿಯ ದಂದುಗಮಂ ಬಿದಿರ್ದಾಸೆಯೆಂಬಿವಂ

ವಿದಳಿಸಿ ಕಾಮಮತ್ತಗಜಮಸ್ತಕದುರ್ಮದಮಂ ಸಡಿಲ್ಚಿ ಮಾ
ಣದೆ ಮಹದೇವಿಯಾಹ ಪೊರಮಟ್ಟಳನೂನ ವಿರಕ್ತಿ ಶಕ್ತಿಯಿಂ ॥

ಅನುಪಮ ಮಲ್ಲಿಕಾರ್ಜುನನ ಭಕ್ತಿಯ ಭಾವಕಿ ಚೆನ್ನಮಲ್ಲಿಕಾ
ರ್ಜುನನ ಸದಾ ನಿಧಾನನಿಳಯಂ ಕರುಣಾಕರ ಚೆನ್ನಮಲ್ಲಿಕಾ
ರ್ಜುನನ ಸುಖಂ ಬರುತ್ತವೆಸೆದಳ್ಮಹದೇವಿ ಮನೋನುರಾಗದಿಂ
ದನುನಯದಿಂದೆ ಶ್ರೀಗಿರಿಗೆ ಬಪ್ಪ ಭರಂ ಹಿರಿದಾ ವಿರಕ್ತಿಯಿಂ ॥

ಪೊರಮಟ್ಟಳುಡುತಡಿಯ ಪುರಮಂ ಮಹಾದೇವಿ
ನೆರೆ ಮನದ ಪಾವನದ ಘನ ವಿರಕ್ತಿಯನೋವಿ
ಒಡನೆ ಬರುತಿರ್ಪ ಪುರಜನಮಂ ಪರೀಕ್ಷಿಸದೆ
ನಡೆವ ಪರಿಚಾರಿಕೆಯರಕ್ಕೆಯಂ ಲೆಕ್ಕಿಸದೆ
ಒಟ್ಟೆ ಒರಲುವ ಮಾತೆ ಪಿತರಂ ವಿಚಾರಿಸದೆ
ಬಟ್ಟೆಯೊಳು ಕಾಲ್ಗಡ್ಡಬೀಳ್ದರಂ ಲಾಲಿಸದೆ
ಪುರದ ಪುಣ್ಯಂ ಹೆಣ್ಣುರೂಪಾಗಿ ಪೋಪಂತೆ
ಪುರದ ಹರಭಕ್ತಿ ಪರ್ವತಕೆಯ್ದಿ ನಡೆವಂತೆ
ಬರುತಿರ್ದಳತಿಭಕ್ತೆ ಉಡುತಡಿಯ ಮಹದೇವಿ
ಪರಮ ವೈರಾಗ್ಯರಸವೈದೆ ತನುವಂ ತೀವಿ
ನಿಷ್ಠೆ ಪಾದದ ರಕ್ಷೆಯಾಗುತಿರೆ ನಡೆವುತಂ
ಉಟ್ಟ ಕೇಶಾಂಬರಂ ದಟ್ಟಯಿಸೆ ಮೆರೆವುತಂ
ಎಡೆಗೊಂಡ ವೈರಾಗ್ಯವಲ್ಲಿ ಬೆಳುಗೊಡೆಯಾಗೆ
ನಡೆಯಿಸುವ ಸಂಬಳಂ ಮೃಡಭಕ್ತಿ ತಾನಾಗೆ
ಮಲ್ಲಿನಾಥಂ ಕರಸರೋಜಮಧ್ಯದೊಳೊಪ್ಪೆ
ಅಲ್ಲಿಯಂಗುಲಿಯ ಪಂಚಾವರಣದೊಳಗೊಪ್ಪೆ
ಬಂದು ಪರ್ವತಮೂಲಮಂ ಸಾರುತಿಪ್ಪಲ್ಲಿ
ಸಂದಣಿಪ ನಿಷ್ಠೆಯಿಂ ನಡೆದು ಬರುತಿಪ್ಪಲ್ಲಿ
ತಾಯಿ ಬಳಲ್ದವ್ವಯೆಂದೆನುತೆ ಮುಟ್ಟುವ ತೆರದೆ
ವಾಯು ತೀಡುತ್ತಮಿರೆ ಕಂಪು ತಂಪಿನ ಭರದೆ
ಮಲ್ಲಿನಾಥಂ ಕರುಣಿಪಂ ಬನ್ನಿಮೆಂಬಂತೆ
ಪಲ್ಲವಂಗಳ್ ಪವನನಿಂದವಲುಗಲ್ಕಿಂತೆ
ಬಗೆದುದಂ ಶಿವನೀವನೆಂದು ಕರೆವಂದದಿಂ
ಖಗಸಂಕುಳಂ ಕರೆವುತಿರ್ದವಾನಂದದಿಂ

ಬರೆವರೆ ಶಿವಾಲಯಂಗಳ ವೃಷಭಕೇತನಂ
ಹರಭಕ್ತೆಯತ್ತಲೊಲವರವಾಗೆ ನೂತನಂ
ಪೂಗಿಡು ಮಹಾದೇವಿಯರ ಪೂಜೆಗೆಂದೆಳಸಿ
ರಾಗದಿಂ ಮೊಗವಲರ್ದು ಹಿಗ್ಗಿ ಹೆಚ್ಚಿರೆ ಬಯಸಿ
ಹಳ್ಳದೊಳು ಹೊದರಿನೊಳು ಬೆತ್ತದೊಳು ಬಿದಿರ್ಗಳೊಳು
ಕೊಳ್ಳದೊಳು ಕೊಳಗಳೊಳು ಕೆರೆಗಳೊಳು ತೊರೆಗಳೊಳು
ಬೆಟ್ಟದೊಳು ಘಟ್ಟದೊಳು ಸರುವಿನೊಳು ದರುವಿನೊಳು
ಇಟ್ಟಣಿಪ ಹುಲಿಹುಲ್ಲೆ ಯಿಮ್ಮಾವು ಮರಗಳೊಳು
ಕೂಡೆ ಪೆರ್ಬುಲಿ ಕಡವು ಕರಡಿ ಸಾರಂಗದೊಳು
ಕಾಡಾನೆ ಕಾಳ್ಕೋಣವೆನಿಪ ಮೃಗವೃಂದದೊಳು

ಮಲ್ಲಿನಾಥನನಲ್ಲಿ ನೆನೆವುತಂ ನಡೆವುತಂ
ಮಲ್ಲಿನಾಥನ ನಿಷ್ಠೆಯಿಂದೆ ಸುಖವಡೆವುತಂ
ಬಂದು ಪರ್ವತಮಲ್ಲಿನಾಥನಂ ನೆರೆ ಕಂಡು
ನಿಂದು ಪೊಡಮಟ್ಟು ನಯದಿಂದೆ ನೇಹಂಗೊಂಡು
ಗೀತಮಂ ಪಾಡುತಂ ಪೊರಮಟ್ಟು ನಡೆತಂದು
ನೂತನ ಶ್ರೀಶೈಲದೊಳಗೆ ಚಿತ್ತಂ ಸಂದು
ಎಲ್ಲಿ ಲತೆವನೆಗಳುಂಟಲ್ಲಲ್ಲಿ ಮಹದೇವಿ
ಸಲ್ಲಲಿತ ಪುಷ್ಪವಾಟದೊಳಲ್ಲಿ ಮಹದೇವಿ
ಕಲ್ಲ ಗವಿಗಳ ನಡುವೆ ಮಲ್ಲಿನಾಥನ ಪೂಜೆ
ಎಲ್ಲಿ ತಿಳಿಗೊಳವಲ್ಲಿ ಮಲ್ಲಿನಾಥನ ಪೂಜೆ
ಬಾಲ ಸಹಕಾರದೊಳು ನೀಲಕಂಠನ ಪೂಜೆ
ಲೀಲೆಯಿಂ ಹಿಮಶಿಲಾವಲಿಯ ವಿಲಸಿತ ಪೂಜೆ
ಒದವಿ ಹಂಸಗಳಿಪ್ಪ ನದಿಯ ತಡಿಯೊಳು ಪೂಜೆ
ವಿದಳಿತಾಂಬುಜಯುತ ತಟಾಕ ತೀರದ ಪೂಜೆ
ನಿರ್ಜರ ನಿವಾತ ನಿಃಸಂಗ ನಿರ್ಮಳ ಪೂಜೆ
ನಿರ್ಜಿತಾನಂಗ ಮಂಗಳಮಯ ಮಹಾಪೂಜೆ
ಯಾಗಿ ಪರ್ವತದೊಳಿರೆ ತಂದೆ ತಾಯ್ಗಳು ಬಂದು
ರಾಗವಳಿದಲ್ಲಿ ಮಗಳಂ ಕಂಡು ಮಿಗೆ ನೊಂದು \

ಏನವ್ವ ಮಹದೇವಿ ಇಂತಿಪ್ಪರೇ ಮಗಳೆ
ನಾನಾ ನಿರೋಧದೊಳು ಸಂದಿಪ್ಪರೇ ಮಗಳೆ

ಶಶಿಸೋಂಕೆ ಕಂದುವಂಗಂ ಬಿಸಿಲಿಗಾಂತುದೆ
ಉಸುರನಾನದ ತನುವು ಬಿರುಗಾಳಿಗಾಂತುದೆ
ಮೃದುಪದಂ ಕಲುನೆಲಕೆ ಸೇರಿದ್ದವೇ ಮಗಳೆ
ಒದವಿ ಪಲ ಉಪವಾಸವಳವಟ್ಟವೇ ಮಗಳೆ
ಎಂದ ಮಾತಂ ಕೇಳ್ದು ಮಹದೇವಿ ನಸುನಗುತೆ
ನೊಂದು ನುಡಿದಳು ಪರಮ ವೈರಾಗ್ಯದೊಳು ಮಿಗುತೆ
ಶಿವಭಕ್ತರಾಗಿಯುಂ ನೀವಿಂತು ನುಡಿವರೆ
ಶಿವಪೂಜೆಯೇಕಾಂತಮಂ ಬಿಡಿಸ ಬಗೆವರೆ
ಭವಿಯ ಸಂಗಂ ತಪ್ಪಿ ಭವನಸಂಗವನಪ್ಪಿ
ಶಿವಭಕ್ತಿರಸಭರಿತ ಶರನಿಧಿಯ ನಡುವೊಪ್ಪಿ
ಇರ್ಪುದಂ ಕೆಡಿಸುವರು ಮಾತೆಪಿತರೆನಗಲ್ಲ
ಸರ್ಪಭೂಷಣನ ಭಕ್ತಾಳಿಗಿದು ನುಡಿಯಲ್ಲ
ಎನೆ ಮಾತೆ ಪಿತರಲ್ಲಿ ನೆರೆ ಕೌತುಕಂಬಟ್ಟು
ತನುಜೆಗೆಂದೆರಡುಂ ಸಹಸ್ರಪೊನ್ನಂ ಕೊಟ್ಟು

ಹೋದರತ್ತಲು ತಂದೆ ತಾ[ಯಿಗದಿಳು ಸೋಜಿಗಂ
ಆದುದುಡತಡಿಯಲಿತ್ತಲು ಕಾಮನೂಳಿಗಂ
ಕೌಶಿಕನನಯ್ದುಂ ಶರಂಗಳಿಂದೆಸುತಮಿರೆ
ಆಸೆ ಮಹದೇವಿಯತ್ತಲು ಮಿಕ್ಕು ಪರಿವುತಿರೆ
ಮಹದೇವಿಯೊಲಿವಂದಮಂ ಕೌಶಿಕಂ ನೆನೆದು
ಬಹುವಿಧದ ವೇಷಮಂ ತನುವಿನೊಳು ನೆರೆ ತಳೆದು
ಭಸಿತಮಂ ರುದ್ರಾಕ್ಷೆಯಂ ಜಡೆಯನಳವಡಿಸಿ
ಎಸೆವ ಹೊರವೇಷಮಂ ತನುವಿನೊಳು ಸಿಂಗರಿಸಿ
ತನ್ನಂದದಿಂ ಭಕ್ತರಂ ನಾಲ್ವರಂ ಕೂಡಿ
ಉನ್ನತ ಸ್ಮರತಾಪದಗ್ಧಚಿತ್ತಂ ನೋಡಿ
ನಡೆತಂದನುವಣಿಸಿ ಪರ್ವತದ ದೆಸೆಗಾಗಿ
ಮೃಡವೇಷಮಂ ಹೊರಗೆ ಧರಿಯಿಸುತೆ ಮರುಳಾಗಿ
ಬಂದು ಶಿಖರವನೇರಿ ಮಹದೇವಿಯಂ ಕಂಡು
ಇಂದುಮುಖಿಯಂ ಸುಖದ ಸುಮ್ಮಾನಿಯಂ ಕಂಡು
ಭಕ್ತನಾದೆಂ ಮಹಾದೇವಿ ಕರುಣಿಪುದೆನಗೆ
ಯುಕ್ತಿಯಿಲ್ಲದ ಕಿಂಕರಂಗೆ ಕರುಣಿಪುದೆನಗೆ
ಸುಖದ ಸುಗ್ಗಿಯ ಸದಾವರದೆ ಕರುಣಿಪುದೆನಗೆ

ಮುಖದ ಮುನಿಸಿನ ತಿಳಿವಿನಬಲೆ ಕರುಣಿಪುದೆನಗೆ
ಎಂದು ಕಾಲ್ವಿಡಿದಿರ್ದ ಕೌಶಿಕನನೀಕ್ಷಿಸುತೆ
ನೊಂದು ಕಡು ನೊಂದು ನೆರೆನೊಂದಳಲಿ ನಸುನಗುತೆ
ಬಿಟ್ಟಪ್ಪೆನೆಂದಡಂ ಬಿಡದು ನಿನ್ನಯ ಮಾಯೆ
ಒಟ್ಟಯಿಸಿ ಬಂದಡೊಡವಂದಪ್ಪುದೀ ಮಾಯೆ
ಜೋಗಿಗಂ ಜೋಗಿಣಿಯದಾಯ್ತು ನಿನ್ನಯ ಮಾಯೆ
ರಾಗದಿಂ ಸವಣಂಗೆ ಕಂತಿಯಾಯಿತು ಮಾಯೆ
ಭಗವಂಗೆ ಮಾಸಕ[ಬ್ಬೆ]ಯ ಚೋಹವಾಯ್ತಯ್ಯ
ಬಗೆವರಾರವರವರ್ಗವರಂದವಾಯ್ತಯ್ಯ
ಗಿರಿಯನೇರಿದಡಿರದೆ ಗಿರಿಯನೇರಿತು ಮಾಯೆ
ಪರಿದಡವಿಯಂ ಪೊಕ್ಕಡೊಡನೆ ಪೊಕ್ಕುದು ಮಾಯೆ
ಬೆನ್ನಕೈಯಂ ಬಿಡದು ಭಾಪು ಸಂಸಾರವೆ
ಎನ್ನ ನಂಬಿಸಿತು ಮಝು ಪೂತು ಸಂಸಾರವೆ
ಕರುಣಾಕರಾ ನಿನ್ನ ಮಾಯೆಗಂಜುವೆನಯ್ಯ
ಪರಮೇಶ್ವರಾ ಮಲ್ಲಿನಾಥ ಕರುಣಿಪುದಯ್ಯ
ಇನ್ನೇವೆನಿನ್ನೇವೆನಯ್ಯೋ ಮಹಾದೇವ
ಪನ್ನಗಾಭರಣ ಕರುಣಿಸುವುದೆಲೆ ಮಹದೇವ

ಎಂದು ವೈರಾಗ್ಯದಿಂ ಗೀತವಂ ಪಾಡಿ
ಮುಂದಿರ್ದ ಕಾಮುಕನನತಿ ರೋಷದಿಂ ನೋಡಿ
ಎಲೆಲೆ ಕೌಶಿಕ ಹೋಗು ನೀನೇಕೆ ನಾನೇಕೆ
ನೆಲನರಿಯೆ ನಿನ್ನೊಡನೆ ಪುದುವಾಳ್ವುದೆನಗೇಕೆ
ತಮವೆತ್ತ ಬೆಳಗೆತ್ತ ಶಿಖಿಯೆತ್ತ ತಂಪೆತ್ತ
ಭ್ರಮೆಯೆತ್ತ ತಿಳಿವೆತ್ತ ಬಿಸಿಲೆತ್ತ ಶಶಿಯೆತ್ತ
ನೀನೆತ್ತ ನಾನೆತ್ತ ಪೋಗು ಪೋಗೆಲೆ ಮರುಳೆ
ಏನೆಂದು ಬಂದೆ ಎಲೆ ತರಳ ನಿನಗಾಂ ಪುರುಳೆ
ನಿನ್ನ ವೇಷಂ ನಿನಗೆ ಎನ್ನ ವೇಷವದೆನಗೆ
ನಿನ್ನ ಪವಣೇ ಘನ ಘನಂ ಭಕ್ತರೂರ್ವರೆಗೆ
ನಿನ್ನ ಪುಣ್ಯದ ಬೆಳಸು ನಿನಗಿಲ್ಲ ಕೌಶಿಕನೆ
ಎನ್ನ ಭಾಗ್ಯದ ಫಲವನೀಶ್ವರಂ ತಪ್ಪುವನೆ
ಎನ್ನಂತೆ ಬಾಳ್ವುದೆನಿಗಿಂತಿದೇ ಘನವೆನಗೆ
ಇನ್ನೇಕೆ ನಿನ್ನ ಸಂಗಂ ಬೇಡ ಬೇಡೆನಗೆ

ಎಂದಿಂತು ಬಿಡ ನುಡಿಯೆ ಕೌಶಿಕಂ ಮನನೊಂದು
ಬಂದು ತನ್ನೊಳಗೊಂದನಾಲೊಚಿಸಿದನಂದು
ಶಿವನ ಭಕ್ತರ್ಗೆ ಹೊನ್ನಿತ್ತು ನೋಡುವೆನೆಂದು
ಅವರ ಮಾತಂ ಮೀರಳಿದನೆ ಮಾಡುವೆನೆಂದು
ಕಲುಮತದ ರಾಜಗುರುಗಳಿಗೆ ಹೊನ್ನೀವುತಂ
ಹುಲುಮತದ ಮುಖ್ಯರ್ಗೆ ಲಂಚಮುಮನೀವುತಂ
ಇರ್ದ ಮಾಹೇಶ್ವರರ್ಗೆಯ್ದೆ ಹೊನ್ನೀವುತಂ
ಸಾರ್ದ ಶರಣರ್ಗಿತ್ತು ಕುಟಿಲವಂ ಮಾಡುತಂ
ಒಂದು ದಿನವೆಲ್ಲ ಕೃತಸಂಕೇತರಾಗುತಂ
ಬಂದು ನೆರೆದರ್ಭಕ್ತರೊಂದೆಡೆಯೊಳೊಗ್ಗುತಂ
ಮಕುಟದ ಮಹಾಮಹಿಮರಲ್ಲಿ ಕೆಲಬರು ಬೇರೆ
ವಿಕಸಿತಾನನರಾಗಿ ಮೆರೆವ ಶರಣರು ಬೇರೆ
ಕಕ್ಷದ ಕರಸ್ಥಲ ಶಿರಸ್ಥಲದವರು ಬೇರೆ
ವಕ್ಷಸ್ಥಲಂ ಮುಖಸ್ಥಲದ ಶರಣರು ಬೇರೆ
ಸರ್ವಗಣ ಸಂತಾನವೊಬ್ಬುಳಿಸಿ ಕುಳ್ಳಿರಲು
ಪರ್ವತದ ಮಧ್ಯದೊಳಗುರ್ವಿಸುತೆ ಕುಳ್ಳಿರಲು
ಬಿನ್ನೈಸಿದಂ ಕೌಶಿಕಂ ನಿಂದು ಮೈಯಿಕ್ಕಿ
ತನ್ನ ಲಜ್ಜೆಯನರಿಯದಾತುರಂ ಮೈಯಿಕ್ಕಿ
ದೇವ ಉಡುತಡಿಯಲಿರ್ಪಂ ಪೆಸರ್ಕೌಶಿಕಂ
ದೇವ ಮಹದೇವಿ ಮಮಜೀವಿ ಜೀವಾತ್ಮಕಂ
ಭವಿ ಎಂದು ಬಿಟ್ಟಳಾಂ ಭಕ್ತನಾದೆಂ ದೇವ
ಶಿವಭಕ್ತೆಯಂ ಕೂಡಿಕೊಡುವುದೆನ್ನೊಳು ದೇವ

ಎನೆ ಮಹೇಶ್ವರರೆಲ್ಲೊಡಂಬಟ್ಟು ಕೇಳುತಂ
ತನತನಗೆ ತಪ್ಪಿಲ್ಲ ನಿನ್ನೊಳೆಂದುಬ್ಬುತಂ
ಕರೆ ಮಹಾದೇವಿಯನೆನುತ್ತೊಬ್ಬನಂ ಕಳುಪೆ
ಶರಣರನುಮತಿಗೊಟ್ಟು ಕರೆಯೆಂದು ನೆರೆ ಕಳುಪೆ
ಬರುತಿರ್ದಳಿತ್ತಲತ್ತಲು ನೆನೆದು ಮಹದೇವಿ
ಪರಮ ವೈರಾಗ್ಯನಿಧಿ ಶಿವಭಕ್ತಿ ಸದ್ಭಾವಿ
ಮುನ್ನವೇಯರಿದು ಸಾಹಿತ್ಯ ದಿವ್ಯಜ್ಞಾನಿ
ಉನ್ನತ ಶಿವಾರ್ಚನಾನಿರತೆ ಪರಮಧ್ಯಾನಿ
ಪರ್ವತದ ಮಲ್ಲಿನಾಥನ ಮುಂದೆ ಬಂದೊಂದು

ಶರ್ವಾಣಿಯಾಜ್ಞೆಯಿಂ ಶಕ್ತಿಯಂ ನೆರೆ ತಂದು
ಗಳಗಳನೆ ಮೇಲೊಂದು ನಿಳಯಮುಮನಳವಡಿಸಿ
ಪುಳಕಿಸುತೆ ಶಕ್ತಿಪ್ರತಿಷ್ಠೆಯನಲಂಕರಿಸಿ
ಆ ಪೀಠದೊಳು ನಿತ್ಯನಿಧಿ ಮಲ್ಲಿನಾಥನಂ
ಕಾಪಾಲಿಯಂ ಶೂಲಿಯಂ ಮಲ್ಲಿನಾಥನಂ
ಕಾಮದಹನಂ ವ್ಯೋಮಕೇಶನಂ ಭೀಮನಂ
ಸೋಮಧರನಂ ಸ್ವಾಮಿಯಂ ಸಾರ್ವಭೌಮನಂ
ಮಾಡಿತೆ ಮಹೂರ್ತವೆಂಬಂತೆ ಬಿಜಯಂಗೈಸಿ
ನೋಡಿ ಘನಶಕ್ತಿಯೊಳು ಶಂಭುವಂ ಮೇಳೈಸಿ
ಕುಳ್ಳಿರ್ದಳಚಳೆ ನಿರ್ಮಳ ನಿಷ್ಕಳಾಯುಕ್ತೆ
ಕುಳ್ಳಿರ್ದಳಕಳಂಕ ಚರಿತೆ ಪರಮವಿರಕ್ತೆ
ಇರ್ದಳಾನಂದನಿಧಿ ಸುಖತರ ಸುಧಾವಾಣಿ
ಇರ್ದಳತ್ಯನುಪಮ ಸುಸಂಗಿ ಲಿಂಗಪ್ರಾಣಿ

ಇರೆ ಬಂದ ಭಕ್ತನಾ ಮಹದೇವಿಯಂ ಕಂಡು
ಹರನನಗಲದ ಭಕ್ತಿಭರಿತೆಯಿರವಂ ಕಂಡು
ಕರೆಯಲಮ್ಮದೆ ನೋಡಿ ಕಣ್ಮುಚ್ಚಿ ಪೊಡಮಟ್ಟು
ತಿರುಗಿ ಬಂದಂ ಭಕ್ತರಲ್ಲಿಗಚ್ಚರಿವಟ್ಟು
ಬಂದು ಬೆರಗಾಗಿ ಭರದಿಂದೆ ಬಿನ್ನೈಸಿದಂ
ಇಂದುಮುಖಿಯಿರವಿನಾ ನುಡಿಯ ಮೇಳೈಸಿದಂ
ಏನೆಂಬೆನಾ ಮಹಾದೇವಿಯ ಚರಿತ್ರಮಂ
ಈ ನೆಲದೊಳತ್ಯಧಿಕವೆನಿಸುವ ವಿಚಿತ್ರಮಂ
ಚೆನ್ನಮಲ್ಲಯ್ಯನಂ ಚೆನ್ನಪೀಠದೊಳಿಟ್ಟು
ತನ್ನಸುವನಾ ಲಿಂಗದಂಘ್ರಿಯೊಳಗಿರದಿಟ್ಟು
ಇರ್ದಪಳದಿಂತುವಾರ್ಗಂ ಚಿಂತಿಸಲ್ಕರಿದು
ಸಾರ್ದಳೆರಡಿಲ್ಲದಿರವಂ ಪುಟ್ಟಿಸಲ್ಕರಿದು
ನೋಡಬಾರದು ನುಡಿಯಿಸುವ ಮಾತದೆಲ್ಲಿಯದು
ಆಡಂಬರಂ ಕೊಳ್ಳದತ್ಯಧಿಕವಾದುದಿದು
ಅತಿ ನಿಬಿಡವತಿಸಾಂದ್ರವತಿ ಸುಖಂ ಲಿಂಗದೊಳು
ಅತಿಮಾತ್ರವತಿಸೂಕ್ಷ್ಮವತಿಭರಂ ಲಿಂಗದೊಳು

ಎನೆ ಕೇಳ್ದು ಶರಣರೆಲ್ಲಾ ಹಾಯೆನುತ್ತೇಳ್ದು
ತನತನಗೆ ಪರಿತಂದು ಪರಮಸುಖಮಂ ತಾಳ್ದು
ತೆಗೆದಪ್ಪಿಕೊಂಡು ಮಹದೇವಿಯಂ ಮುಂಡಾಡಿ
ಬಗೆವೆಚ್ಚಿ ಮುದದಿಂದವೆಲ್ಲರುಂ ಕೊಂಡಾಡಿ
ಹೋಗು ಕೌಶಿಕರಾಜ ಹೋಗು ನಿನಗಳವಲ್ಲ
ರಾಗರಹಿತೆಯ ಚಿತ್ತವತಿ ಕೂರಿತಿಂಬಿಲ್ಲ
ಎಂದಾತನಂ ಕಳುಪಿ ಮಹದೇವಿಯಂ ನೋಡಿ
ಬಂದ ಗಣಸಂಕುಳಂ ಪರಕೆಯಂ ನೆರೆ ನೀಡಿ
ನಿನ್ನಂತೆ ಗುರುಕರುಣವಾರ್ಗುಂಟು ಮಹದೇವಿ
ನಿನ್ನಂತೆ ಭಯಭಕ್ತಿಯಿನ್ನುಂಟೆ ಮಹದೇವಿ
ಮಲ್ಲಿನಾಥನ ಪರಮ ಕೀರ್ತಿಲತೆ ನೀನವ್ವ
ಮಲ್ಲಿನಾಥನ ಸಕಳ ಸುಖಮೂರ್ತಿ ನೀನವ್ವ
ಎಲೆ ನಿತ್ಯಮುಕುತೆ ನಿತ್ಯ ಪ್ರಕಾಶಿತೆ ನೀನೆ
ಸಲೆ ಸಂದ ನಿರುಪಮಜ್ಞಾನಸಂಪದೆ ನೀನೆ
ಎಂದು ಕರುಣಿಸುವ ಗಣಸಂಕುಳಕ್ಕೆರಗುತಂ
ಬಂದ ಮಾಹೇಶ್ವರರನಳ್ಕರಿಂ ಕಳುಪುತಂ
ತನ್ನಯ ಪೊಗಳ್ಕೆಗಂತಂತು ಮಿಗೆ ನಾಚುತಂ
ಚೆನ್ನಮಲ್ಲಯ್ಯನತ್ತಲು ನೆನಹ ಸಾರ್ಚುತಂ
ಬಂದ ಕಿನ್ನರಬೊಮ್ಮಿತಂದೆಯಂ ಕಾಣುತಂ
ಅಂದಂದಿನುಚಿತಕ್ಕೆ ಗೀತಮಂ ಪಾಡುತಂ

ಪಲಕೆಲವು ದಿವಸವೀ ತೆರದಿ ಸುಖದಿಂದಿರ್ದು
ಚಲಿಸದಗಲದೆ ಮಿಸುಕದಲಸದೊಲವಿಂದಿರ್ದು
ನರಲೋಕದೊಳಗಿರವು ಬೇಡ ಸಾಲ್ಗಿನ್ನೆಂದು
ಗಿರಿಸುತೆಯ ಶಾಪವಾದುದು ತೀರಿತಿನ್ನೆಂದು
ಕಲುಮಠದ ಪುಲುಮಠದ ಶಿವಮುಖ್ಯರಂ ಕರೆದು
ಒಲುಮೆಯಿಂ ಮಲ್ಲಿನಾಥನ ಮುಂದೆ ಭರವಿಡಿದು
ಚೆನ್ನಮಲ್ಲಯ್ಯಂಗೆ ಮಜ್ಜನಕೆ ಪೂಜನೆಗೆ
ಉನ್ನತಾರೋಗಣೆಗೆ ವನಧೂಪದಾರತಿಗೆ
ಬೇಡಿದನಿತುಂ ಹೊನ್ನನಿತ್ತು ವಿಸ್ತರಿಸುತಂ
ಬೇಡಿಕೊಂಡವರನೋರಂತೆ ಉಪಚರಿಸುತಂ
ಎಂದುವುಂ ಕುಂದದಂತಲ್ಲಿ ಸಮಗಟ್ಟುತಂ

ನಿಂದು ಪರ್ವತ ಮಲ್ಲಿನಾಥಂಗೆಯರಿಪುತಂ
ನಡಯಿಪುದು ಚೆನ್ನಮಲ್ಲಯ್ಯಂಗಿದೆಲ್ಲವಂ
ಮೃಡನಂ ಬಿಡೆಂ ಮಾಳ್ಪುದೀವೊಂದು ಸೊಲ್ಲುಮಂ
ಎನತೆನುತೆ ಚೆನ್ನಮಲ್ಲಯ್ಯನಲ್ಲಿಗೆ ಬಂದು
ಮನವೊಸೆದು ಕೈಮುಗಿದು ಕಾರ್ಪಣ್ಯದೊಳು ನಿಂದು
ದೇವ ಕರುಣಿಪುದು ಕೈಲಾಸಕ್ಕೆ ಬಟ್ಟೆಯಂ
ದೇವ ಗಿರಿಜೆಯ ಚರಣಮಂ ಕಾಣ್ಬ ನಿಷ್ಠೆಯಂ
ಭವಿಯ ಸಂಗದ ತನುವನಿದನೊಲ್ಲೆನಿದನೊಲ್ಲೆ
ಅವಯವಂ ಭೀಭತ್ಸುವಿದನೊಲ್ಲೆನಾಂ ಬಲ್ಲೆ
ಎನಗೆ ನಿರ್ಮಳಕಾಯಮಂ ಕರುಣಿ ಕರುಣಿಪುದು
ಎನಗೆ ದಿವ್ಯಾವಯವಮಂ ದೇವ ಕರುಣಿಪುದು

ಎಂದು ಬಿನ್ನೈಸೆ ಬಂದುದು ವಿಮಾನಂ ಕೂಡೆ
ಇಂದು ಬಿಂಬದ ಬೆಳಗನೇಳಿಸುತ್ತಂ ಕೂಡೆ
ಒಡನೆ ಬಂದುರು ಗಣಾಧ್ಯಕ್ಷರಾನಂದದಿಂ
ನಡುವೆ ನಿಲುತಂ ಪರ್ವತಾಗ್ರದೊಳು ಛಂದದಿಂ
ಬಂದ ಪುಷ್ಪಕದ ನಡುವಣ ದಿವ್ಯದೇಹದೊಳು
ತಂದು ಮಹದೇವಿಯಂ ಪೊಗಿಸಿದರ್ಕಾಯದೊಳು
ಮುಂದಿರ್ದ ಕಾಯವದು ಮಾಯವಾಗುತ್ತಮಿರೆ
ಮುಂದಣ ಗಣೇಶ್ವರರು ನೋಡಿ ಬೆರಗಾಗುತಿರೆ
ಪುಷ್ಪವೃಷ್ಟಿಯ ನಡುವೆ ದೇವಗಣತತಿಯೊಳಗೆ
ಪುಷ್ಪಕಂ ನೆಗೆದುದಾಕಾಶ ದುಂದುಭಿಯೊಳಗೆ
ಪರ್ವತದ ಶಿವಭಕ್ತಕುಲವೊಲಿದು ನೋಡುತಿರೆ
ಪರ್ವಿದುದು ಗಗನತಳವಂ ಜಗಂ ಪೊಗಳುತಿರೆ

ಬಂದು ನಂದೀಶ್ವರನ ಬಾಗಿಲೊಳಗೊಲಿದಿಳಿದು
ಮುಂದೆ ಮೈಯಿಕ್ಕುತಂ ನಡೆತಂದಳುರೆ ನಲಿದು
ಪಾರ್ವತಿಯ ಮುಖಕಮಳವಿಮಳಾರ್ಕ ತೇಜಂಗೆ
ಪಾರ್ವತಿಯ ಭುಜಲತಾವೃತಕಲ್ಪಭೂಜಂಗೆ
ಗೌರೀಕಟಾಕ್ಷ ವರಕೌಮುದೀಭೂಷಂಗೆ
ಗೌರೀಕುಚಾಲಿಂಗನಾನಂದವೇಷಂಗೆ
ಗಿರಿಜಾ ಮನೋನಳಿನ ವನರಾಜ ಹಂಸಂಗೆ

ಗಿರಿಜಾವಚೋವರ್ಣಕರ್ಣಾವತಂಸಂಗೆ
ಎರಗಿದಳು ಮಹದೇವಿಯರ್ಧನಾರೀಶಂಗೆ
ತುರುಗಿದ ಶಿರೋಮಾಲೆಗಳ ಮಹಾವೇಷಂಗೆ
ಎರಗೆ ಕಂಡಭವನಾನಂದದಿಂದೇಳೆಂದು
ಕರೆಗೊರಲನತಿ ಕರುಣದಿಂದೆ ನೋಡುತ್ತಂದು
ಗಿರಿಜೆ ಬಲ್ಲಾ ನಮ್ಮ ರುದ್ರಕನ್ನಿಕೆಯೀಕೆ
ವರ ಗುಪ್ತಗಣನಾಥನಿಂದಿಳೆಗೆ ಪೋದಾಕೆ
ಹುಟ್ಟಿ ಶಿವಭಕ್ತರ್ಗೆ ಬೆಸಕೈದ ಕನ್ನೆಯಂ
ನಿಷ್ಠೆ ನೆಲೆಗೊಂಡ ನಿಜಭಕ್ತಿಯೊಳಭಿನ್ನೆಯಂ
ನಿನ್ನನುಜ್ಞೆಯನಿಂ[ತು] ಹೊತ್ತು ನಡೆದವರುಂಟೆ
ನಿನ್ನ ಶಾಪವನಿಳೆಯೊಳೊನುಭವಿಸಿದವರುಂಟೆ
ಪದವಿಯಂ ರಾಜ್ಯಮಂ ಬಿಸುಟು ಹೋದವರುಂಟೆ
ಅದಿರದೇ ಶ್ರೀಶೈಲದೊಳಗೆ ಪೊಕ್ಕವರುಂಟೆ
ಭವಿಯ ಸಂಗದ ಶರೀರವನೊಲ್ಲದವರುಂಟೆ
ನವ ದಿವ್ಯ ದೇಹದಿಂದೈತಂದರಿಂತುಂಟೆ
ಎಂದು ಕೊಂಡಾಡುತಂ ಮುನ್ನಿನಂದದೊಳಿರಿಸಿ
ಇಂದುಮುಖಿ ಮಹದೇವಿಯಂ ಕರುಣದಿಂದಿರಿಸಿ
ರುದ್ರಕನ್ನಿಕೆಯರೊಳು ಸಲಿಸಿ ಕರುಣಾಕರಂ
ಭದ್ರಗುಣಗಣಯುಕ್ತ ಶಶಿಕಳಾಶೇಖರಂ
ಶ್ರೀ ಮಹಾದೇವನಪ್ರತಿಮ ಗುರುವೊಪ್ಪಿದಂ
ಶ್ರೀ ಮಹಾಮಹಿಮನಾನಂದಮಯನೊಪ್ಪಿದಂ
ಆಕಾಶಗಂಗಾಂತರಾಕೇಶನೊಪ್ಪಿದಂ
ಲೋಕೈಕ ವಿಭವ ವಿಭುವಭವನಿಂತೊಪ್ಪಿದಂ
ಮೃಗಧರ ತರಣಿ ಪವನಸಖ ನಯನನೊಪ್ಪಿದಂ
ಅಗಜೇಶ ದೇವರಾದಿತ್ಯನಿಂತೊಪ್ಪಿದಂ
ಕಮಳಜ ಶಿರೋಧ್ಭಿನ್ನನುತ ಪರಶುವೊಪ್ಪಿದಂ
ವಿಮಳತರ ವಿಷ್ಣುವಂದಿತ ಪಾದನೊಪ್ಪಿದಂ
ವಿಷಗಳಂ ವಿಷಧರರದ ಶಾಂತನಿಂತೊಪ್ಪಿದಂ
ವಿಷಮತರ ಪುರದಹನದಾವಾಗ್ನಿಯೊಪ್ಪಿದಂ
ಪಂಪಾಪುರಾಂಭೋಜ ಗಗನಮಣಿಯೊಪ್ಪಿದಂ
ಹಂಪೆಯ ವಿರೂಪಾಕ್ಷನನವರತಮೊಪ್ಪಿದಂ ೨೬೮-೮೫೦

ಮೃಡನಪ್ರತಿಮಂ ಶರ್ವಂ
ಕೊಡುಗೆಮಗನವಧಿ ವಿರಕ್ತಿಯಂ ಭಕ್ತಿಯನಾ ।
ಉಡುತಡಿಯ ಮಹಾದೇವಿಯ
ಕಡುಸಲುಗೆಯ ಕಂದನೆಂದು ಹಂಪೆಯರಾಯಂ ॥

❖❖

# ಸಂಕೀರ್ಣ ರಗಳೆಗಳು

# ೧. ದಕ್ಷಾಧ್ವರ ರಗಳೆ

ಪಿರಿದುಂ ಬಗೆಯದೆ ದಕ್ಷಾ
ಧ್ವರಮಂ ನಿರ್ಧೂಮಧಾಮಮಂ ಮಾಡಿ ಸುಧಾ
ಕರಧರನ ವಿರೂಪಾಕ್ಷನ
ಚರಣಮನ್ನೈತಂದು ವೀರಭದ್ರಂ ಕಂಡಂ ॥

ಶ್ರೀ ರಜತಗಿರಿಯೊಳೊಪ್ಪುವ ಸಭಾನಿಳಯದೊಳು
ಮಾರಾರಿ ಹಂಪೆಯ ವಿರೂಪಾಕ್ಷನೊಪ್ಪದೊಳು
ಭೂತೇಶನಪ್ರತಿಮರೂಪನೊಪ್ಪುತ್ತಿರ್ದ
ಆತನೊಡ್ಡೋಲಗವನೇನೆಂಬೆನೆಸೆದಿರ್ದ
ಲಕುಮಿ ಸರಸತಿಯರಂದೊಸೆದು ಚಾಮರವಿಕ್ಕೆ
ಸುಕರದಿಂದಿಂದ್ರಾಣಿ ನಲಿದು ಸೀಗುರಿಯಿಕ್ಕೆ
ರಂಭೆಯೂರ್ವಶಿ ತಿಲೋತ್ತಮೆ ಮಂಜುಘೋಷೆಯರು
ಶಂಭುವಿನ ಕೆಲಬಲದೊಳೊಪ್ಪುವತಿ ನೀರೆಯರು
ತರದಿಂದೆ ವರವನಿತೆಯರ್ಕೆಲರ್ ಕುಳ್ಳಿರಲು
ಸುರನಾರಿಯರ್ ಸಮುಚಿತಾಸನದೊಳೊಪ್ಪಿರಲು
ಪರಶುಧರನುಂ ತಾರಕಾರಿಯುಂ ಬಂದಿರಲು
ಸರಸಿಜಭವಂ ಸರಸಿಜೋದರಂ ಕುಳ್ಳಿರಲು
ಕೆಲಬಲದೊಳೊಪ್ಪಿರ್ದರಮಮ ಗಣನಾಯಕರು
ಛಲಿಗಳಪ್ರತಿಮರತಿರಥರುಗ್ರನಾಯಕರು
ಸಚರಾಚರವನಳಿವ ಮಾಡುವಾಟದರವರು
ಅಚಲರಭವರ್ ತಮತಮಗೆ ಮುಖ್ಯರತಿಶಯರು
ಕಂತುಹರನಾತ್ಮಪರಿವಾರವಿಂತೆಸೆದಿರಲ್
ಸಂತತಂ ಪರಮಂಗೆ ಪರಮಬಂಧುಗಳೆನಲ್

ನೆನೆವ ಮನವೀವ ಕೈಪಿಡಿವ ಕೈದುಗಳೆನಿಪ
ತನಿನೇಹದೊಳ್ ನೆರೆವ ಕಡು ಬಾಕುಳಿಗಳೆನಿಪ
ಪರಮಂ ಕ್ಷಣಾರ್ಧದಿಂ ಸುಟ್ಟ ಶರಣರ್ ಕೆಲರು
ಶರಭರೂಪಿಂದೆ ತಲೆದಂಡ ಶರಣರ್ ಕೆಲರು
ಲೀಲೆಯಿಂ ಮನಸಿಜನನುರುಪಿದರ್ ಕೆಲರಲ್ಲಿ
ಕಾಲನಂ ಕೋಪದಿಂ ಸುಟ್ಟವರ್ಪಲರಲ್ಲಿ
ಸಿಡಿಲ ಬಳಗವನೊಂದುಮಾಡಿ ಗಡಣಿಸಿದಂತೆ
ಮೃಡನತಿಬಳಂ ಬೇರೆ ಬೇರೆ ರೂಪಾದಂತೆ
ಕೆಲರು ಸಾಲೋಕ್ಯದರ್ ಕೆಲರು ಸಾಮೀಪ್ಯದರು
ಕೆಲರು ಸಾರೂಪ್ಯದರ್ ಕೆಲರು ಸಾಯುಜ್ಯದರು
ಹೊಗಳಲಳವೇ ವಿರೂಪಾಕ್ಷ ನಿನ್ನಣುಗರಂ
ಬಗೆಗಗೋಚರವೆನಿಪ ಶಿವಲಿಂಗ ಸೊಬಗರಂ

ಇಂತೆಸೆವ ನಂದೀಶ್ವರಾದಿ ಗಣತತಿ ಬಂದು
ಕಂತುಹರನಿರ್ಕೆಲದೊಳೆಸೆಯೆ ನಲವಿಂದಂದು
ಸೊಗಯಿಪ ದಧೀಚಿ ದೂರ್ವಾಸ ಕಸ್ಯಪರೆಂಬ
ಭೃಗು ಭಗೀರಥ ಜಹ್ನು ಜಮದಗ್ನಿ ಶುಕನೆಂಬ
ಜೈಮಿನಿ ವಸಿಷ್ಠ ಮಾರ್ಕಂಡ ಕಪಿಲರುಮೆಂಬ
ರೋಮಋಷಿ ಜಾಬಾಲಿ ಗಾರ್ಗ್ಯ ಗೌತಮರೆಂಬ
ತರದೊಳೊಪ್ಪುವ ರಾಜಋಷಿ ದೇವಋಷಿಗಳುಂ
ಪರಮ ಕಾರಣಿಕರೆನಿಪ ಬ್ರಹ್ಮಋಷಿಗಳುಂ
ಇಂದ್ರಾಗ್ನಿ ಯಮ ನಿರುತಿ ವರುಣ ವಾಯ್ವಾದ್ಯರುಂ
ಕ್ಷೇಂದ್ರನೀಶಾನ್ಯನೆಂಬರ್ ಸಭೆಗೆ ಸೇವ್ಯರುಂ
ಎಸೆವ ಕಿನ್ನರರ ಸಿದ್ಧರ ಮೊತ್ತವವು ಬೇರೆ
ಹೆಸರ ಗರುಡರ ಖೇಚರರ ಮೊತ್ತವವು ಬೇರೆ
ಇರೆ ಸುರಾಸುರರ ವಿದ್ಯಾಧರರ ವೀಥಿಗಳು
ನೆರೆದ ಗಂಧರ್ವರ ಫಣೀಶ್ವರರ ಪಜ್ತೆಗಳು
ಮೆರೆಯಲಜಕೋಟಿ ಪಂಕಜನಾಭಕೋಟಿಗಳು
ತುರುಗೆ ಶಶಿಕೋಟಿ ರವಿಕೋಟಿ ಶಿಖಿಕೋಟಿಗಳು
ಎಸೆವುತಿರೆ ಸಾಲಿಟ್ಟ ಮಕುಟಂಗಳೊಂದೆಸೆಯ
ಒಸೆದು ಕೈಮುಗಿವ ಯಕ್ಷರ ತತಿಗಳೊಂದೆಸೆಯ
ಕಿವಿಗುಡುವುದೆಮಗೆಂಬ ನಾದಂಗಳೊಂದೆಸೆಯ
ತವಕದಿಂ ತುತಿಯಿಸುವ ವೇದಂಗಳೊಂದೆಸೆಯ

ಧರೆ ಜಲಂ ಸಪ್ತಾರ್ಚಿ ವಾಯುವಾಕಾಶದಿಂ
ಪರಮಶಾಂತಿಯೊಳೊಪ್ಪುವಾತ್ಮಸಂತಾನದಿಂ
ಬೆಸವೇಳ್ಪುದಂ ಬಯಸುವಣಿಮಾದಿ ನಿಕರದಿಂ
ಬೆಸಸು ಬೆಸಸೆನ್ನನೆಂದೆಂಬ ಸಾಮರ್ಥ್ಯದಿಂ
ಪವಣಿಸುವೊಡರಿದೆಂಬ ಶಾಸ್ತ್ರನಿಕರಂಗಳಿಂ
ತವತವಗೆ ಪೊಗಳುತೊಪ್ಪುವ ಪುರಾಣಂಗಳಿಂ
ಮೋನದಿಂ ನಿಂದಿರ್ಪ ತರ್ಕಸಂದೋಹದಿಂ
ಧ್ಯಾನಿಸುತ್ತಿರ್ಪ ನಾನಾಗಮವ್ಯೂಹದಿಂ
ಹತ್ತೆಸಾರ್ದೋಲೈಪ ಚೆಲ್ವುಗಳ ಮೊತ್ತದಿಂ
ಮುತ್ತಿ ಬಂದೋಲಯಿಪ ಸಂಪದ ನಿಕಾಯದಿಂ
ತರತರಂಗೊಂಡಿರ್ಪ ಪುಣ್ಯಸಂತಾನದಿಂ
ನೆರೆದು ಬಯಸುತ್ತಿಪ್ಪ ಬಯಕೆಗಳ ಮೊತ್ತದಿಂ
ನಲಿದು ಬಂದೋಲೈಪ ಸಕಲಸುಖನಿಕರದಿಂ
ಸಲೆ ಕೈಗಳಿಂ ಮುಗಿವ ವೀರಗಣನಿಕರದಿಂ
ಕಡೆಗಡೆಯೊಳೋಲೈಸುತಿರ್ಪ ಜಸವೆಣ್ಗಳಿಂ
ಬಿಡದೆ ತೋಳ್ಗಳನೋಲಗಿಪ್ಪ ಜಯತತಿಗಳಿಂ
ಚರಣಮಂ ಪಿಡಿದಿರ್ಪ ಮಂಗಳದ ಪಜ್ಜೆಯಿಂ
ಹರವರಿಯಲುರಿವರಿವ ತೇಜಂಗಳಿಕ್ಕೆಯಿಂ
ಕಡೆಗಣ್ಗಳಂ ಬಯಸುತಿರ್ಪ ಕಾರುಣ್ಯದಿಂ
ಮೃಡನ ವರವಂ ಪಾರ್ದು ನಿಂದಿರ್ಪ ಭಾಗ್ಯದಿಂ
ಎನಗೆ ತನಗೆನುತಿರ್ಪ ಭೋಗಂಗಳುರ್ವಿನಿಂ
ತನತನಗೆ ನಲಿವ ಗಣಪದವಿಗಳಗುರ್ವಿನಿಂ
ನಿರ್ವಿಕಾರದೊಳಿರ್ಪ ಶಾಂತಿಗಳ ಪಜ್ಜೆಯಿಂ
ಶರ್ವನಂ ಬಯಸಿರ್ಪ ಜಯಜಯದ ಪಜ್ಜೆಯಿಂ
ಬೆಳಗನುಗುಳುತ್ತಿರ್ಪ ಕಾಂತಿಗಳ ಬಳಗದಿಂ
ತಿಳಿಯಲೆಂದಿರ್ದಖಿಳ ವಿದ್ಯಾಸಮೂಹದಿಂ
ಸಾರೆ ಬಂದೋಲಗಿಸಿ ನಿಂದಿರ್ದ ನಿತ್ಯದಿಂ
ಕಾರುಣ್ಯಮಂ ಬಯಸಿ ಬಂದಿರ್ಪ ಸತ್ಯದಿಂ
ಹರುಷದಿಂ ಸೊಗಯಿಸುತ್ತಿರ್ಪ ಷಡುವರ್ಣದಿಂ
... ... ... ... ... ...

ಇಂತು ಸಕಳಾಶ್ಚರ್ಯದುನ್ನತಿಯನೊಳಕೊಂಡ
ನಂತಂಗೆ ಪೊಗಳಲಾರದ ಘನವನೊಳಕೊಂಡ

ದೆಂತೆಂತದುಪಮೆಗಗ್ಗಳಮಾದುದಾಸ್ಥಾನ
ವಂತಂತೆ ಮೆರೆದುದು ವಿರೂಪಾಕ್ಷನಾಸ್ಥಾನ
ಆ ಸಮಯದೊಳ್ ವೇತ್ರಧರರೆಂಬರಲ್ಲಲ್ಲಿ
ವಾಸವನೆ ನುಡಿಬೇಡ ಸಂತಮಿರು ನೀನಲ್ಲಿ
ಕಾಪನುಡುಗಗ್ನಿ ಹೆರಸಾರ್ ಕಾಲ ಕೌಣಪನೆ
ಸೈಪನಿರು ಜಲಧಿಪನೆ ಸುಳಿಯದಿರು ಮಾರುತನೆ
ತೆರಪುಗುಡು ಗಂಧರ್ವರಾಜ ಕಿನ್ನರಪತಿಗೆ
ಬರಿದೆ ಗಳಹಲ್ವೇಡ ಬೊಮ್ಮ ನಿನ್ನುನ್ನತಿಗೆ
ಬಿನ್ನೈಸು ಮನ್ನಣೆಯ ವನಜಾಕ್ಷ ಕೈಮುಗಿದು
ನಿನ್ನ ಹೆಡೆಗಳನುಡುಗಿ ನಿಲ್ಲಹಿಪ ಹೆರತೆಗೆದು
ಕಳಕಳವಿದೇಕೆ ಮಾಣ್ಮಾಣು ಹೋಹೋಯೆನುತೆ
ಅಳವಲ್ಲ ಸಂತೈಸಬಾರದಾಹಾಯೆನುತೆ
ಇವನಾವ ಬೊಮ್ಮಾಂಡದಬ್ಜಜಂ ಹೇಳೆಂದು
ಇವನಾವ ಬೊಮ್ಮಾಂಡದಂಬುಜೋದರನೆಂದು
ಆವಾವ ಸಗ್ಗದವರಿಂದ್ರರ್ಕಳಿವರೆಂದು
ಆವಾವ ಲೋಕದವರೀ ಮಹಾನೃಪರೆಂದು

ಇಂತು ತಮ್ಮೊಳು ಪಡಿಯರರ್ ನುಡಿವ ಸಮಯದೊಳು
ಮುಂತೆ ತುಂಬುರ ನಾರದರ್ ಮಧ್ಯರಂಗದೊಳು
ನವವೀಣೆಯಿಂದೆ ಬಹು ಸುಗತಿ ಸುಸರಂಬಡೆಯೆ
ವಿವಿಧ ರಾಗಂಗಳನ್ಯಾಸಕ್ತಿಯಂ ಪಡೆಯೆ
ಕಯ್ಯದೇ ಮನವಾದ ತೆರದಿ ಬಾಜಿಸುತಮಿರೆ
ಸುಯ್ಗಳಂ ಮರೆದೋಲಗಂ ನಾಡೆ ಕೇಳುತಿರೆ
ಇಂತು ತುಂಬುರನಾರದರ್ ವಿರೂಪಾಕ್ಷನಂ
ಸಂತಸದೊಳೋಲಾಡಿಸುತ್ತೆ ವಿಷಮಾಕ್ಷನಂ
ಕೇಳಿಸಿದನಂತರಂ ಕಿನ್ನರಸಮಿತಿಗೂಡಿ
ಮೇಳೈಸೆ ತಾರೈಸೆ ಸಭೆ ಹರುಷಮಂ ಕೂಡಿ
ಮನದೊಳಂ ಕಾಂತಿಯ[ವ]ಸರವಡಗದಂದದಿಂ
ಕೊನೆಮಿಂಚಿನೊಳ್ ಕಾಂತಿಲತೆ ಹುಟ್ಟಿದಂದದಿಂ
ಬೋಳೈಸಿ ರಾಗಂಗಳಂ ಕರೆವ ಮಾಳ್ಕೆಯಿಂ
ಮೇಳೈಸಿ ನೆರೆದ ಸಭೆ ಕರುವಿಟ್ಟ ಮಾಳ್ಕೆಯಿಂ
ಕಿವಿಯೊಡ್ಡಿ ಕೇಳುತಿರೆ ಚಿತ್ತಮಂ ಮಿಗೆ ಸಲಿಸಿ
ಕಿವಿಯ ಬಳಿಸಂದವಿಂದ್ರಿಯಚಯಂ ಸಂದಣಿಸಿ

ಸಭೆಯೊಂದೆ ಮನವಾದ ಮಾಳ್ಕೆಯಿಂ ಕೇಳುತಿರೆ
ಅಭವನಂ ಸುಖದ ಮರಹಲ್ಲಲ್ಲಿ ನೆರೆವುತಿರೆ

ಇಂತು ಮುನ್ನಿನ ತೆರದೊಳಿರ್ದುದಾ ದೇವಸಭೆ
ಅಂತಿರ್ದುದಾಗಳೆಲೆ ಮಿಡುಕದಾ ದೇವಸಭೆ
ಇಂತು ಸಭೆಯಂ ಸುಖದ ಸೈವೆರಗಿನೊಳ್ ನಿಲಿಸಿ
ಸಂತೋಷದಿಂ ರಾಗರಸದೆ ಚಿತ್ತವ ನಿಲಿಸಿ
ರಾಗದಿಂ ಕಿನ್ನರರ್ ಪಾಡಿ ತಮ್ಮೊಳ್ ಮೆರೆಯೆ
ರಾಗಂಗಳಂದಮೃತ ನಾದಂಗಳಂ ಕರೆಯೆ
ತನತನಗೆಸೆಯೆ ಮಧ್ಯಮಾಳಿ ಭೂಪಾಳಂಗ
ಳನುರಾಗದಿಂದೆ ದೇಶಾಕ್ಷಿ ಫಳಮಂಜರಿಗೆ
ಳಾದಿಯಾಗಿರ್ದ ಬಹುರಾಗಂಗಳಲ್ಲಲ್ಲಿ
ವಾದಿನಿಂ ಕೇಳಿಸೆ ಹರಂ ಸುಖದೊಳಿರಲಲ್ಲಿ
ನಾದದುನ್ಮತ್ತವಾದುದು ದೇವಸಭೆಯೆಲ್ಲ
ನಾದಮೂರುತಿಯಾದನೆಮ್ಮ ಗಿರಿಜೆಯನಲ್ಲ
ಏನೆಂಬೆನೋಲಗಂ ಜೊನ್ನದೊಳಗಲ್ದಂತೆ
ಜೇನೆಯ್ಯ ಸರಿಯೊಳಗೆ ನಾಡೆ ನಾಂದಿರ್ದಂತೆ
ಸುರುಚಿರ ಸುಧಾರಸದ ಮಡುವಿನೊಳಗಿರ್ದಂತೆ
ಹರುಷದಿಂ ಪಾಲ್ಗಡಲ ನಡುವೆ ಕುಳ್ಳಿರ್ದಂತೆ
ರಾಗರಸದೊಳಗೆ ಮುಳುಗಿರ್ದುದೊಡ್ಡೋಲಗಂ
ರಾಗರೂಪಾಗಿರ್ದನಭವ ಸುಖಮೂಲಿಗಂ

ಇರಲಿತ್ತ ಹಂಸೆಗಳ್ ಚಕ್ರವಾಕಗಳಿರ್ಪ
ಸರಸಿಗೆ ಬಕಂ ನೋಡಲೆಂದು ಮೆಲ್ಲನೆ ಬರ್ಪ
ತೆರದಿಂದೆ ಬಂದು ದಕ್ಷಂ ಸಭೆಯ ಮುಂದೆ ನಿಲೆ
ಕರೆಗೊರಲವನನೀಕ್ಷಿಸದೆ ಸುಖದಿಂದೆ ಸಲೆ
ಮರೆದು ಕೇಳುತ್ತಿರಲ್ ಮನ್ನಿಸನಳಿಯನೆಂದು
ಪೊರಮಟ್ಟನಭವನಂ ಮುಳಿದು ನಿಂದಿಸುತಂದು
ಪರಮಾಣು ಮೇರುವಿನ ಪೆಂಪಿಂಗ ಮುಳಿವಂತೆ
ಸರಸಿ ಸಾಗರದ ಗಂಭೀರತೆಗೆ ಮುಳಿವಂತೆ
ತರಗೆಲೆ ದವಾನಳನ ಕಾಯ್ದಿಂಗೆ ಮುಳಿವಂತೆ
ಕರಿಕೆ ಕಲ್ಪದ್ರುಮದ ಸಂಪದಕೆ ಮುಳಿವಂತೆ
ಇರದೆ ಮಿಂಚುಂಬುಳು ದಿನೇಶಂಗೆ ಮುಳಿವಂತೆ

ಪುರಹರಂಗಕಟಕಟ ದಕ್ಷಂ ಮುಳಿವುತಿಂತೆ
ಬರುತೆನ್ನನೆನ್ನನವಮಾನವಂ ಮಾಡಿದನ
ನಿರದೆ ಭಂಗಿಸುವೆ ನಾನೆಯ್ದೆ ಹೆರೆಸೂಡಿದನ
ಎಂದು ಗಳಗಳನೆ ತನ್ನಾಶ್ರಮಕೆ ನಡೆತಂದು
ನೊಂದು ನುಡಿದಂ ವಿಶ್ವಕರ್ಮಂಗೆ ನೀನೊಂದು
ಯಾಗಮಂಟಪವನೆತ್ತೆಂದು ಪೇಳ್ದನಿತಕ್ಕೆ
ಬೇಗದಿಂ ನೆಗೆದವಾಗಳೆ ಧರಣಿಯಗಲಕ್ಕೆ
ಭೋಮಿಗೆ ವಿಚಿತ್ರವಾದುದು ಮಂಟಪಂ ನೋಡೆ
ಹೋಮಕುಂಡಂ ಸುಡುವ ಮುಳ್ಳೆಳ್ಳುಗಳ್ಗೊಡೆ
ನಡುವೆ ಯೂಪದ ಕಂಬವಿಂಬಿನಿಂ ಮೆರೆವುತಿರೆ
ಕೊಡದಿಂದೆ ತಮತಮಗೆ ನವಘೃತವನಡಕುತಿರೆ
ಕರೆಸಿದಂ ಪೆಣ್ಮಕ್ಕಳಳಿಯಂದಿರಂ ಕೂಡೆ
ಬರಿಸಿದಂ ಹರಿಯಜ ಪುರಂದರರುಮಂ ನಾಡೆ
ದಿಗಧೀಶರಂ ತ್ರಿದಶರಂ ದಿವ್ಯಮುನಿಗಳಂ
ಜಗದೊಳುಳ್ಳರಸುಮಕ್ಕಳನೆಸೆವ ಮನುಗಳಂ
ದ್ವಿಜಮುಖ್ಯರಂ ಕರೆಸಿ ನಿಜವರ್ಗವಂ ಬರಿಸಿ
ತ್ರಿಜಗಮಧ್ಯದ ಸಿದ್ಧ ಮಂತ್ರಜ್ಞರಂ ಕರೆಸಿ
ಪುರಹರಂ ಗಿರಿಜೆ ಗಣನಾಯಕರ್ ಪೊಗಾಗೆ
ನೆರಸಿದಂ ಪಾತಕ ಜನವನವನಿ ಬೆರಗಾಗೆ
ಹೊರಗೆ ಕಾಪಿಟ್ಟ ಶಕ್ರಾದಿ ದಿಕ್ಪಾಲರಂ
ನೆರೆ ಪೇಳ್ದ ತಾನಲ್ಲಿ ಕೂಡೆ ಭೂಪಾಲರಂ

ಬಂದು ದಕ್ಷಂ ಬ್ರಹ್ಮಸಭೆಗೆ ಕೈಮುಗಿದೆನಗೆ
ಒಂದು ಯಾಗವನೊಡರ್ಚುವುದಕ್ಕೆ ನೀವೆನಗೆ
ಕರುಣಿಪುದನುಜ್ಞೆಯಂ ಕೊಡುವುದೆಂದೆನುತಿರಲು
ವರಮುನಿ ದಧೀಚಿ ನುಡಿದಂ ಸಭೆ ಭಯಂಗೊಳಲು
ಉಸುರಿಲ್ಲದೊಡಲಂತೆ ಶಶಿಯಿಲ್ಲದಿರುಳಂತೆ
ರವಿ ಪುಗದ ನಭದಂತೆ ಹವಿ ಪುಗದ ಮುಖದಂತೆ
ಹರನಿಲ್ಲದೊಪ್ಪದೀ ಯಾಗವನುರಾಗದಿಂ
ಕರೆದು ಬಿಜಯಂಗೈಸಿತಪ್ಪುದತಿ ಬೇಗದಿಂ
ಎನೆ ದಕ್ಷನುರಿಯೊಳಗೆ ತುಪ್ಪವಂ ಹೊಯ್ದಂತೆ
ಮುನಿದು ಭುಗಿಲೆನುತೆ ನುಡಿದಂ ಮುನಿಯನಿದ್ದಂತೆ
ಹರನೀ ಸಭೆಯ ನಡುವೆ ಕುಳ್ಳಿರಲು ಯೋಗ್ಯನೆ

ಗೊರವನಂ ಪೆಸರ್ಗೊಂಬಡಿನಿತಕ್ಕೆ ಭಾಗ್ಯನೆ
ಸುರರಸ್ಥಿಮಾಲೆಯಂ ಕೊರಲೊಳಿಕ್ಕಿರ್ಪನಂ
ಕರೆವರೇ ಚೀ ಪುಲಿಯ ತೊಗಲನುಟ್ಟಿರ್ಪನಂ
ಮರೆದು ಮಗಳಂ ಕೊಟ್ಟಡನಿತರೊಳ್ ನಿಮ್ಮಾತ
ನುರಿವನಪ್ಪನೆ ಸಿತಗನಿನ್ನೆಮಗೆ ಬೇಡಾತ
ಉಡುಗೊರೆಯನೀಯೆ ನಿನಗೀಯೊಂದು ಮಾತೆಂದು
ನುಡಿಯಲ್ ದಧೀಚಿಗಂಕುರಿಸಿತ್ತು ಕಿನಿಸಂದು
ನಿಟ್ಟೊರಸಿ ಕಳೆಯಲ್ಬಗೆದನವನ ಜನ್ಮಮಂ
ನಟ್ಟು ಹರಗಲ್ ಬಗೆದನವನ ಕುಲವೆಲ್ಲವಂ
ನೋಡಿದನನಾಗತಜ್ಞಾನದಿಂದಂ ನಿಂದು
ಮಾಡುವವನೊರ್ಬನುಂಟೆಂದು ಸೈರಿಸಿ ನಿಂದು

ಕೇಳೆಲವೊ ದಕ್ಷ ನೀನಂಜದೆನ್ನಯ ಮುಂದೆ
ಭಾಳಾಕ್ಷನಂ ಸ್ವಾಮಿಯಂ ದೇವನಂ ನಿಂದೆ
ನುಡಿಯದಕ್ಕೇನದಕ್ಕೇನೆಲವೊ ಕುಳ್ಳಿರ್ದ
ಉಡುಕುಳಿಗಳಂ ದಿಟಂ ಗಡ ದೇವರೆಂದಿರ್ದ
ಕುನ್ನಿಗಳ ನಚ್ಚಿ ನೀ ಜನ್ನವಂ ತೊಡಗಿದಾ
ಇನ್ನೇನು ಹಸನಾಯ್ತು ಹರಣವಂ ನೀಗಿದಾ
ಇವನ ಮಾತಂ ಕೇಳಿ ಮರುಮಾತುಗುಡದವರ್ಗೆ
ಶಿವಭಕ್ತಿಯಾಗದಿರ್ಕೆಂದುಮಿನ್ನೀ ದ್ವಿಜರ್ಗೆ
ಈ ಪಾತಕನ ಮುಖಂ ಕಡೆಮುಟ್ಟದಿರ್ಕೆಂದು
ಶಾಪಮಂ ಕುಡುತೇಳ್ದನಿಲ್ಲಿನವಗೇನೆಂದು
ಆಗಳಾ ಮುನಿವರ ದಧೀಚಿಯೊಡನೇಳ್ದವರು
ರಾಗದಿಂದರಿವರುಂ ಶಾಪವರ್ಜಿತರವರು
ಉಪಮನ್ಯು ದೇವಲನಗಸ್ತ್ಯಮುನಿಯೆಂಬವರು
ಕುಪಿತದಿಂದಂ ಬರೆ ವಸಿಷ್ಠ ಭೃಗುಗೌತಮರು
ನಡೆದಂ ದಧೀಚಿಮುನಿ ತನ್ನಾಶ್ರಮಕ್ಕಂದು
ಮೃಡನರಸಿಗರಿಪಲಿತ್ತಲ್ ನಾರದಂ ಬಂದು
ತಂದೆ ಮಾಡುವ ಯಾಗಮಂ ನೋಡಲೆಂದಗಜೆ
ಇಂದುಮೌಳಿಗೆ ಬಿನ್ನಹಂ ಮಾಡಲಾ ಗಿರಿಜೆ
ಬೇಡವಂ ಬಗೆವನಲ್ಲೆಲೆ ಗಿರಿಜೆ ಹೋಗದಿರು
ನಾಡೆ ಮೂರ್ಖಂ ಜರೆವನೆಲೆ ಭಕ್ತೆ ಹೋಗದಿರು
ಬೇಡೆಂದು ಬೆಸಸುತಿರೆ ಕೇಳದೆ ಮಹಾದೇವಿ

ಕೂಡೆ ಕರಸಿದಳಮೃತಕರಮುಖಿಯರಂ ದೇವಿ
ಕರಸಲ್ಕೆ ಬಂದರ್ವಿದಗ್ಧೆ ಯರ್ಮುಗ್ಧೆಯರು
ಹರನರಸಿಯೊಡನೈದೆ ಬಂದರತಿನೀರೆಯರು
ನಲಿದು ಬಂದರು ಒಲಿದು ಕನ್ನೆಯರು ಚನ್ನೆಯರು
ಸಲೆ ಹರುಷದಿಂದೊಲಿದು ಬಂದರತಿ ಚಪಳೆಯರು
ಕಳಹಂಸಯಾನದಿಂದೊಪ್ಪೆ ಬಂದರ್ ಸತಿಯ
ರಳಿಕುಂತಳೆಯರಲ್ಲಿ ರತಿಯ ರೂಪಾನ್ವಿತೆಯ
ಪ್ರತಿರಹಿತನರಸಿಯೊಡನೈತಂದರೊಪ್ಪದಿಂ
ಅತಿಶಯದಿ ಮಿಗೆ ಶೃಂಗರಂ ಮಾಡಿ ಬೇಗದಿಂ
ಅಸಮಾಕ್ಷನರಸಿ ಬಂದಳು ಬೇಗ ಹರುಷದಿಂ
ಒಸೆದು ಬಿಜಯಂಗೆಯ್ಸೆ ದೇವಿಯನುರಾಗದಿಂ
ನಂದಿಕೇಶ್ವರನ ಬೆನ್ನೊಳು ಸುಖಾಸನವಿತ್ತು
ಇಂದುಮುಖಿ ಕೆಲಬಲದ ಸತಿಯರ್ಗೆ ಮೊಗವಿತ್ತು
ನಡೆವಾಗಳಬಲೆಯರುಘೆ ಚಾಂಗು ಬೊಲ್ಲೆಂಬ
ನಡುವೆ ಸಂದಣಿ ರಂಭೆ ಹೆರಸಾರ್ದು ಬಾರೆಂಬ
ಕೆಲಬಲದಿ ನಡಯಿ ಶಚಿ ಊರ್ವಶಿಯರೆಂದೆಂಬ
ಎಲೆಲೆ ಖೇಚರಿದೇವಿಯಲೆಲೆಯವಧಾರೆಂಬ
ಚಮರಮಂ ಸೈತಿಕ್ಕು ಲಕುಮಿ ಸರಸತಿಯೆಂಬ
ಅಮರ್ದು ಶಚಿ ನೀನೊಲಿದು ಸೀಗುರಿಯನಿಕ್ಕೆಂಬ
ಸಸಿನೆತ್ತಿ ಬೆಳ್ಗೊಡೆಯ ಚಂದ್ರಸತಿ ಪಿಡಿಯೆಂಬ
ಒಸೆದು ಬರುತಿಪ್ಪ ಕಿನ್ನರಿಯರಂ ಪಾಡೆಂಬ
ಕಳಕಳದ ನಾದಂಗಳೊಪ್ಪೆ ಸತಿಯರ ನಡುವೆ
ಸುಳಿವ ಗಂಧರ್ವ ಲಲನಾಕೋಟಿಗಳ ನಡುವೆ
ನಡೆತಂದಳಿಂದುವಿನ ಬೀಡು ನಡೆತಪ್ಪಂತೆ
ನಡೆತಂದಳೆಳೆಲತೆಯ ಬನವೊಲಿದು ನಡೆವಂತೆ
ಸಕಳದೇವತೆಯರಧಿದೇವತೆ ಬರುತ್ತಿರ್ದ
ಳಕಳಂಕಚಂದ್ರಧರನರ್ಧಾಂಗಿ ಬರುತಿರ್ದ
ಳಿಂತು ಬರೆ ಬರೆ ಕಾಣಲಾಯ್ತು ದಕ್ಷನ ನಾಡು
ಮುಂತೆ ಬರೆವರೆ ಮುಂದೆ ನಿಂದುದಾತನಬೀಡು

ಬಂದು ಪಟ್ಟಣಮಂ ವಿಲಾಸದಿಂ ಪೊಗುತಿರಲು
ಮುಂದಿದಿರ್ಗೊಂಬರಿದೇನಿದೇನೆನುತಿರಲು
ಒಡನೆಯ್ದಿ ಬರ್ಪ ಸಂಗಡದ ಸತಿಯರ್ವೆರಸಿ

ನಡೆತಂದು ನಂದಿಯಿಂದಿಳಿದು ಪುರಹರನರಸಿ
ರಾಹುವಿನ ಮುಂದೆ ಶಶಿಕಳೆಬಂದು ನಿಂದಂತೆ
ಲೋಹಿತಾಶ್ವನ ಮುಂದೆ ದಾರುವನ ನಿಂದಂತೆ
ತಂದೆ ದಕ್ಷನ ಮುಂದೆ ರುದ್ರಾಣಿ ನಿಂದಿರಲು
ಮುಂದುಗಾಣದ ಕೋಪಿ ನೋಡದೆ ತಿರುಗುತಿರಲು
ಎತ್ತೆತ್ತ ದೇವಿಬರಲತ್ತತ್ತ ನೋಡದಿರೆ
ಸುತ್ತಿ ಬರೆ ದಕ್ಷನತಿ ವಿಮುಖನಾಗುತ್ತಮಿರೆ
ಮಗಳೆಂಬ ಸಲುಗೆಯಿಂದ ಮುಂದೆ ನಿಂದಿರಲು
ಬಗೆಯದಗಜೆಯನವಂ ಸಭೆ ನಡನಡಗುತಿರಲು
ಹೇಳಬಾರದು ನರಕಿ ನುಡಿದ ಸುಡುನುಡಿಗಳಿಂ
ಭಾಳಾಕ್ಷನಂ ನಿಂದಿಸಿದನೊಲಿದ ಪರಿಗಳಿಂ
ತನ್ನನೇನೆಂದಡಂ ತಾನದಕೆ ಸೈರಿಸಿದ
ಳಿನ್ನದೇಂ ಶಿವನನೆಂದಡೆ ದೇವಿ ಕೋಪಿಸಿದ
ಳೊಳಗೊಳಗಳಲ್ದಳ್ ಬಳಲ್ದಳ್ ಮಹಾದೇವಿ
ಹಳವಳಿಸಿ ಕಂಗೆಟ್ಟು ಕೊರಗುತಿರ್ದಳ್ ದೇವಿ
ಸುಯ್ಯೊಡನೆ ಕಿಡಿ ಪೊರಮಡುತ್ತಿರಲು ಸುಯ್ವುತಂ
ಕೆಯ್ಯಂ ಮೊಗದೊಳಿಟ್ಟು ತಲೆದೂಗಿ ಸುಯ್ವುತಂ
ಮೆಲ್ಲನೆರ್ಚತ್ತು ಚಿಂತಿಸಿ ಕುಪಿತೆ ನೋಡಿದಳು
ಸಲ್ಲಲಿತೆ ತನ್ನ ಮನದೊಳಗೆ ಮಾತಾಡಿದಳು
ಸೈರಿಪೆನೆ ಹರಣದೊಡೆಯನ ನಿಂದೆಗೇಳಿದೆನೆ
ಧಾರುಣಿಗೆಯಪಕೀರ್ತಿ ಪಿತವಧೆಗೆ ಸಿಕ್ಕಿದೆನೆ
ಹರನಿಂದೆಗೆಯ್ದನಂ ಕೊಲ್ವುದಿಲ್ಲಾ ಸಾವು
ದರವರಿಸಲಾಗದಿಂದನುಮಾನವಿನ್ನೇವು
ದೆನುತಿರಲ್ ಕೋಪವುಬ್ಬರಿಸಿ ತನುವಂ ಮೀರಿ
ವನಿತೆ ಕಣ್ಣಂ ಮುಚ್ಚಿ ನೆನೆದು ಶಿವನಂ ಮೀರಿ
ಒಳಗಣಾತ್ಮಜ್ಯೋತಿಯಿಂದೆ ತನುವಂ ಮುಸುಕಿ
ಬೆಳಗಾದಳಾ ಸಭೆಯ ಕಣ್ಗೆ ತಮವಂ ಮುಸುಕಿ
ಆಗಳಾ ಸಭೆ ನಡುಗೆ ಕೌತುಕಂಬಡುತಿರಲು
ಮೇಗರಿವವರ್ಕೆಲರು ಪೊಲ್ಲವೆಂದೆನುತಿರಲು
ಹೂಗಿಡುವಿನಲ್ಲಿ ಬೇಗೆಯನಿಕ್ಕಿದಂತಾಗೆ
ಪೂಗಣೆಯನಡಸಿದಳ್ಳುರಿ ಮಸಗಿದಂತಾಗೆ
ಮಲ್ಲಿಗೆಯ ಬಿರಿಮುಗುಳ ಚೆಲ್ಲಬಡಿದಂತಾಗೆ
ಅಲ್ಲಲ್ಲಿ ಪರಿಜನಂ ಬಿಸುಸುಯ್ದು ಬೆರಗಾಗೆ

ಒಡವಂದ ಕೆಳದಿಯರ್ ಧರೆಯೊಳಸುವಂ ಹೊಸೆದು
ಮೃಡನರಸಿಯಂ ಕಾಣದಡಿಗಡಿಗೆ ಬಸವಳಿದು
ಬಳಿಸಂದವರ್ ಕೆಲರು ಬಳಲುತಿರ್ಪರ್ ಕೆಲರು
ಅಳಲುತಿರ್ಪರ್ ಕೆಲರ್ ಕೊರಗುತಿರ್ಪರ್ ಕೆಲರು
ಕೆಲರೇನುವರಿಯದಂತಲ್ಲಿ ಬರೆದಂತಿರಲು
ಕೆಲರೊಲಿದ ಪರಿಗಳಿಂದೊದರಿ ಕಳವಳಿಸಿರಲು
ತನಗೆಂತು ಜೀವಿಸುವ ಪರಿಯೆನುತ್ತಂ ಕಂತು
ನೆನೆನೆನೆದಳಲ್ದು ಬಿಸುಸುಯ್ವುತಿರಲಂತಂತು

ಇತ್ತಲಂಬಿಕೆ ತನ್ನ ಕೋಪದೊಳೆ ತಾನೆ ಸಲೆ
ಅತ್ತಲಭವನ ಮನಂ ಮರುಗಿ ದುಗುಡದೊಳು ನಿಲೆ
ಆ ಸಭೆ ಸಭಾಕಂಪನದೊಳೆ ಮಱುಗುತ್ತಿರ್ದು
ಈಶನುಮ್ಮಳಿಸಿ ದುಮ್ಮಾನದಿಂದಿರುತಿರ್ದು
ತಾನು ಕೈಲಾಸಸುಖವೆಲ್ಲವಂ ಮರೆದಿರ್ದ
ಏನನುಮ್ಮಳಿಸಿ ದುಮ್ಮಾನದಿಂದಿರುತಿರ್ದ
ನಂದೀಶನಂ ಕರೆದಿದೇನು ಸೋಜಿಗವಯ್ಯ
ಇಂದುಮುಖಿ ಬೇಡೆನಲು ಹೋದ ಫಲದಿಂದಯ್ಯ
ಸೊಗಯಿಸದು ಕಿನ್ನರರ ಗೀತವಿಂದೆನಗಯ್ಯ
ಬಗೆವುಗದು ನೀವಿಲ್ಲಿ ನುಡಿವ ಮಾತೆನಗಯ್ಯ
ಅನಿಮಿತ್ತವಿಂತಿದೇಕಾಗುತಿರ್ದಪುದಯ್ಯ
ವನಿತೆ ಬೇಡನೆ ಹೋದಳೇನಪ್ಪುದೆಂತಯ್ಯ
ಎನುತಿರಲ್ ನಂದಿಕೇಶ್ವರನಲ್ಲಿ ಬರುತಿರ್ದ
ಅನುಮಿಸುತೆ ಮುನ್ನಿನಂತಲ್ಲದೆಯ್ತರುತಿರ್ದ
ಎಳಲ್ವ ಕಿವಿ ಬರುಮೊಗಂ ಬಳಲ್ದ ತನು ದುಮ್ಮಾನ
ಅಳಲ್ವ ಮನದುತ್ಸವಂ ಕಳಲ್ದಂಗದಿಂ ಧ್ಯಾನ
ಈಶನಂ ಮುಟ್ಟಿ ನೇಹವೆ ಜೀವವಾಗುತಿರೆ
ಭಾಸುರ ವಿಲಾಸವೆಲ್ಲವನೊಕ್ಕು ತಾನೆ ಬರೆ
ದೇವಿಯಿಲ್ಲಾರುವಿಲ್ಲೇನ್ಯೆ ಇದೇನೆನಲು
ದೇವ ಬಿನ್ನಪವೆಂದಡಭವನಾಲಿಸುತಿರಲು
ತಂದೆಯೆಂದಗಜೆ ದಕ್ಷನ ಮುಂದೆ ಹೋಗಿ ನಿಲೆ
ನಿಂದಿಸಿದನೀಶ ನಿಮ್ಮಂ ದಕ್ಷನದನಬಲೆ
ಕೇಳಲಾರದೆ ತನಗೆ ತಾನೆ ಕಿನಿಸಿದಳೆಂಬ
ಭಾಳಲೋಚನ ನಿಮ್ಮ ನಿಜಕೆ ಸಂದಳದೆಂಬ

ನುಡಿಯೊಡನೆ ಘುಡುಘುಡಿಸಿ ಮಸಗುತಿರ್ದುದು ಕೋಪ
ಎಡೆಗೊಂಡುದಿಂದುಧರನೊಳಗೆಲ್ಲವನುತಾಪ
ಆಗಳಾ ನಂದೀಶನಂ ಪತ್ತಿದುದು ಮೌನ
ಆಗಳ್ಗಣಂಗಳಂ ಮುತ್ತಿತ್ತು ದುಮ್ಮಾನ
ಅಲ್ಲಿ ಭಿತ್ತಿಯ ಚಿತ್ರದತಿಕಾಂತಿ ಕುಂದಿರ್ದ
ವಲ್ಲಿ ಪುತ್ಥಳಿಗಳೆಲ್ಲಂ ಸೊಂಪುಗೆಟ್ಟಿರ್ದ
ವಲ್ಲಿ ಓದುವ ಶುಕಾವಳಿ ಮೂಗುವಟ್ಟಿರ್ದ
ವಲ್ಲಿ ಸಲಹಿದ ಹಂಸಮಾಲೆ ನಡೆಗೆಟ್ಟಿರ್ದ
ವಲ್ಲಿ ಬೆಳಸಿದ ಲತಾಸಂಕುಳಂ ಕೊರಗುತಿರೆ
ಅಲ್ಲಿ ಓವಿದವನಂ ಜವ್ವಂಗೆಡುತಮಿರೆ
ಭೋಗಂಗಳೊಂದೆಸೆಯ
ಚಾಗಂಗಳೊಂದೆಸೆಯ
ಸಂಪದಗಳೊಂದೆಸೆಯ
ಸೊಂಪುಗಳದೊಂದೆಸೆಯ
ಲಾವಣ್ಯವೊಂದೆಸೆಯ
ಭೂವನಿತೆಯೊಂದೆಸೆಯ
ತವತವಗೆ ಸುಯ್ವುತಂ ಮರುಗಿ ಮೊರೆಯಿಡುತಿರಲು
ಭವನಂತರಂಗವಂ ಕೋಪವಡರುತ್ತಿರಲು
ನಂದೀಶನರಿದು ಭಯದಿಂದೆ ಹಿಮ್ಮೆಟ್ಟುತಿರೆ
ನಿಂದ ಗಣಸಂಕುಳಂ ಹೆರಸಾರ್ದು ನಡುಗುತಿರೆ
ಕುಪಿತನಾದಂ ದೇವನಿನ್ನಾರು ಜೀವಿಪರು
ವಿಪರೀತವೇನಪ್ಪುದದನಾರು ಭಾವಿಪರು
ಮುಳಿದಡೆ ಮಹಾಪ್ರಳಯ ಉಳಿವರಾರೂ ಇಲ್ಲ
ತಿಳಿವಡರಿದುಗ್ರನಿರ್ದಿರವ ತಾನೇ ಬಲ್ಲ

ಎನುತೆಲ್ಲರಂಜಿ ಕಣ್ಮುಚ್ಚೆ ಪರಮೇಶ್ವರಂ
ನೆನೆಯಲರಿದೆನಿಪ ರೂಪಿನೊಳಿರ್ದನೀಶ್ವರಂ
ಇರೆ ದೇಹದೊಳು ಸುತ್ತಿ ಹೊತ್ತಿಹೊಗೆದುದು ಕೋಪ
ಉರವಣಿಸುತೊಡಲೊಳಗೆ ಕುಂಬಿಟ್ಟುದನುತಾಪ
ಅಡಸಿ ನೆಗೆದುದು ಭಾಳಲೋಚನದ ಕೆಲದಿಂದೆ
ಘುಡು ಘುಡಸಿದುದು ಮಸಗಿದುದು ಬೆಮರನೆವದಿಂದೆ
ಕೋಪವೆಲ್ಲಂ ನೆರೆದು ಬಂದೊಂದೆಡೆಗೆ ಬಿಂದು
ರೂಪಾಗಲನುಗೆಯ್ಯಲದರ ಮಧ್ಯದೊಳೊಂದು
ನೋಡಬಾರದ ಥಳಥಳಿಪ್ಪ ತೇಜೋಮೂರ್ತಿ

ಕೂಡೆ ಪುಟ್ಟುತ್ತಿರ್ದನಭವನಘಟಿನ ಮೂರ್ತಿ
ಭುಗುಭುಗಿಲ್ಭುರ್ಭುಗಿಲ್ಛಿಳಿಛಿಳಿಲ್ಛಿಟಿಲೆಂಬ
ಧಗಧಗ ಧಗಿಲ್ಧಗಿಲ್ದಂಧಗಿಲ್ಧಗಿಲೆಂಬ
ಧಗಿಲೆಂಬ ಧನಿಗೆ ಧರಣೀತಳಂ ಬಿರಿವುತಿರೆ
ಭುಗಿಲೆಂಬ ರಭಸಕಂಬರತಳಂ ಸಿಡಿವುತಿರೆ
ಹರಿಬೊಮ್ಮರೆರ್ದೆಬಿರಿಯೆ
ಪರಸಮಯಿಗಳ್ಜರಿಯೆ
ಕುಲನಗಂಗುಳ್ಕುಸಿಯೆ
ಜಲಧಿ ಕುಕ್ಕುಳ್ಗುದಿಯೆ
ರವಿರಥಂ ದೆಸೆಗಿಡಲ್
ಭುವನಂ ಕಿವುಡುಗೊಳಲ್
ಗಣನಾಯಕರ್ಕೆದರಿ
ಗಣಪತಿ ಗುಹರ್ಬೆದರಿ
ಗಗನದೊಳ್ಬರಸಿಡಿಲು ಮೂರ್ತಿಗೊಂಡೊಗೆವಂತೆ
ಮಿಗೆ ಭಾಳಲೋಚನಂ ರೂಪುಗೊಂಡೊಗೆವಂತೆ
ಕಾಳಕೂಟದ ನಗದೊಳೊಗೆವ ಕೇಸುರಿಯಂತೆ
ಕಾಲಾಗ್ನಿಯಿಂದೆ ದಳ್ಳುರಿಭುಗಿಲನೊಗೆವಂತೆ
ಬೆಳಗು ಮೂಲೋಕದೊಳ್ತೊಳತೊಳಗಿ ಕಡುಪಿಂದೆ
ಘಳಿಲನೊಗೆದಂ ವೀರಭದ್ರಂ ನಿಟಿಲದಿಂದೆ
ಏಕಜಡೆಲಿಂಗಂ ಶಿರೋಮಾಲೆಗಳ್ತೊಳಗೆ
ಭೀಕರವೆನಿಪ್ಪ ಕೆಂಗಣ್ಮೀಸೆಗಳ್ಬೆಳಗೆ
ಕುಂಡಲಂ ಕೋರೆದಾಡೆಗಳೊಪ್ಪಿ ತೋರುತಿರೆ
ಚಂಡಾಂಶು ವೀರಘಳಕಂ ತೊಡರ್ಮೆರೆವುತಿರೆ
ನಿಂದ ನೀಲದ ಗಿರಿಗೆ ಕೈಕಾಲ್ಗಳೊಗೆದಂತೆ
ಮಂದರಂ ಮಸಗಿ ಕೋಪದ ರೂಪುಗೊಂಡಂತೆ
ನೋಡಿರೇ ಬಾಳನಯನಂ ಹೆತ್ತ ಶಿಶುವಿಂಗೆ
ಮಾಡಿದುದು ಜಾತಕರ್ಮಂ ವೀರದಾತಂಗೆ
ನಾಮಕರಣಂ ವೀರಭದ್ರನೆಂಬುದು ತನಗೆ
ನೇಮಿಸಿದ ಬಾಯ್ವೆಣ್ಣೆ ಬೊಮ್ಮಾಂಡವದು ತನಗೆ
ತೊಟ್ಟಿಲುಂ ತುಂಬಿದಾಕಾಶವಾದುದು ನೋಡ
ಕಟ್ಟಿದ ಗುಣಾಳಿಪ್ರತಾಪತತಿಗಳು ನೋಡ
ತೂಗುವರ್ ಪ್ರಳಯಕೋಳಾಹಳ ಗಣಾದಿಗಳ್

ಜೋಗುಳಂಬಾಡುವರ್ ವೀರ ಸಿರಿಮಾರಿಗಳ್
ಬಾಲದೊಡಿಗೆಗಳು ಬೊಬ್ಬಿಡುವ ತಲೆಗಳ ಮಾಲೆ
ಬಾಲತನದಾಟವದು ಮಖವನುರುಪುವಲೀಲೆ

ಎಂದಡಿನ್ನೆಂತು ಬಣ್ಣಿಪೆನವನ ವೀರಮಂ
ಇಂದುಮೌಳಿಯ ಸಕಲಸಾಮರ್ಥ್ಯಸಾರಮಂ
ನೋಡನೋಡಲ್ಬೆಳೆದನಾಕಾಶಮಂ ಮೀರಿ
ನೋಡನೋಡಲ್ಬೆಳೆದ ಬೊಮ್ಮಾಂಡಮಂ ಮೀರಿ
ಒಮ್ಮೆ ನೋಡಿದಡೆ ಮತ್ತಾ ಪರಿಗಳಂ ಕಳಿದ
ನೊಮ್ಮಿಗೊಮ್ಮಿಗೆ ಶಂಭು ತಲೆದೂಗುತಿರೆ ಬೆಳೆದ
ನುಳ್ಳ ಕೋಪಂ ವೀರಭದ್ರನೊಳ್ ನೆಲೆಗೊಂಡು
ದೊಳ್ಳಿತುಳಿದುದು ಶಾಂತಿ ಶಂಕರನನೆಡೆಗೊಂಡು
ತನಗೆ ಶಿಶು ದಕ್ಷಯಾಗಕ್ಕೆ ಪುಟ್ಟಿದ ಮಾರಿ
ತನಗೆ ಚಿಣ್ಣಂ ಕಾಲನೆಂಬವಂಗುರಿಮಾರಿ
ಇಂತೆಸೆವ ತೀವ್ರದ ಮಹಾವೀರನಂ ಕಂಡು
ಚಿಂತಿಸಿದನೀಶ್ವರಂ ತನ್ನೊಳಗೆ ಭಯಗೊಂಡು
ಏಕೆ ಕೋಪಿಸಿದೆನಿವನೇಕೆ ಪುಟ್ಟಿದನೆಂದು
ಲೋಕೇಶ್ವರಂ ನಾಡೆ ಕೌತುಕವ ತಾಳ್ದಂದು
ತಲೆದೂಗಿದಂ ವೀರಭದ್ರನ ಮೊಗಂ ನೋಡಿ
ನಲಿದು ಮನದೊಳಗೆ ತೂಪಿರಿದನೊಲವಿಂ ಕೂಡಿ
ಕರೆದು ಬೆಸಸಿದನಭವನಾ ವೀರಭದ್ರಂಗೆ
ಪರಸಮಯಸಂತಾನ ತಿಮಿರದಿವಸೇಂದ್ರಂಗೆ
ಕುರಿ ದಕ್ಷನಂ ಪಿಡಿದು ಜನ್ನಮಂ ಸುಟ್ಟುರುಪು
ತರಿದಿಕ್ಕಿ ಮಾರಾಂತರಂ ಕಾಲನೊಳ್ನೆರಪು

ಎಂದು ಬೆಸಸಲು ಭದ್ರಕಾಳಿಸಹಿತಂ ಬಂದ
ನಂದು ಕೋಟಾಕೋಟಿ ರೋಮಜರ್ ನಡೆತಂದ
ರುರದ ಬಾಯವರಲ್ಲಿ
ಶಿರದ ಕಾಲವರಲ್ಲಿ
ಚರಣದಾನನರಲ್ಲಿ
ಕರದಕಣ್ಣವರಲ್ಲಿ
ಬೆನ್ನ ಬಾಯರ್ಕೆಲರು
ಕೆನ್ನೆಯಧರರ್ಕೆಲರು

ಕುಡಿದಾಡೆಯರ್ಕೆಲರು
ಕಡುನಿಡಿಯವರ್ಕೆಲರು
ಗಗನದೊಳ್ನಡೆವುತಂ
ದಿಗಿಭಮಂ ಕೆಡಪುತಂ
ಕಡಲಂ ಕಲಂಕುತಂ
ಪೊಡವಿಯಂ ಹಿಳಿವುತಂ
ರವಿರಥಮನೆಡಹುತಂ
ಪವನನಂ ಹಿಡಿವುತಂ
ಕುಲನಗವನೆತ್ತುತಂ
ಮಲೆತು ತಲೆಯೊತ್ತುತಂ
ಪೊರಮಟ್ಟಿತಮ್ಮಮ್ಮ ಭೂಮಿ ಬೆಸಲಾದಂತೆ
ಪೊರಮಟ್ಟುದುಗ್ರಗಣಪತಿ ಗಗನವೀದಂತೆ
ದುಂದುಭಿಗಳಲ್ಲಲ್ಲಿ ಬೆಳ್ಗೊಡೆಗಳೆತ್ತಿಬರೆ
ಸಂದಣಿಸಿ ಕೈದುಗಳ್ ಬೆಳಗನುಗುಳುತ್ತಮಿರೆ
ಈ ಬಂದನೆಲೆಲೆ ಭಾಳೇಕ್ಷಣನ ಸುತನೆಂದು
ಈ ಬಂದನಪ್ರತಿಮನುಗ್ರನತಿಬಳನೆಂದು
ಹರವರಿಯ ಕಹಳಾರವಂ ದೆಸೆಗೆ ಪರಿವುತಿರೆ
ತುರುಗಿದನಲಧ್ವಜಂ ಗಗನದೊಳ್ಕುಣಿವುತಿರೆ
ಮಸಗಿ ಕಾಲಾಸಲನ ಹೊರಬೀಡು ಬಿಟ್ಟಂತೆ
ವಸುಧೆಗುಬ್ಬಸದ ನಂಜಿನ ಬನಂ ನಡೆವಂತೆ
ಅಚ್ಚರಿಯ ವೀರಭದ್ರನ ಬೀಡು ನಡೆವುತಿರೆ
ಮಚ್ಚರಿಯ ಪುವಲ್ಲಿಗಾಗಿ ನಸುದೋರುತಿರೆ
ಕಂಡು ಕೈವೀಸಿದಂ ವೀರಭದ್ರಂ ಹಾದಿ
ಗೊಂಡು ಹರಿದುದು ಬೊಬ್ಬಿಡುತೆ ಸಕಳ ಭೂತಾದಿ
ಗಣನಿಕರವೆಲ್ಲವುಲಿದುದು ಕೋಂಟೆಯಂ ನೆರೆ ಮುತ್ತಿ
ಸೆಣಸೆ ಬಿಡದಾರ್ದು ಮಲೆದುರಿಯ ಹಳವಿಗೆಯೆತ್ತಿ
ಬೊಬ್ಬಿಡಲು ಯಾಗಮಂಟಪವದಿರ್ದುಸಭೆ ಕೆದರೆ
ಬೆಬ್ಬಳಿಸಿ ದಕ್ಷನಬ್ಬರವಿದೇನೆನುತೊದರೆ
ಹೋಗಿಂದ್ರ ಹೋಗಗ್ನಿ ಹೋಗಿ ದಿಕ್ಪಾಲರಿರ
ಹೋಗು ಮುರಹರ ನೂಂಕಿ ನಡೆಯಿ ಭೂಪಾಲರಿರ

ಎಂದು ಚತುರಂಗಬಲವಂ ಪೇಳ್ದನಾ ದಕ್ಷ
ನಂದು ಘುಳುಘುಳಿಸಿ ಬರುತಿರ್ದಂ ಸರೋಜಾಕ್ಷ

ನಾದಿಯಾಗಿರ್ದಮರರೊಂದೆಸೆಯಲೊಡ್ಡಿರಲು
ವಾದಿನಿಂ ದಿಕ್ಪಾಲರೊಂದೆಡೆಯೊಳೊಡ್ಡಿರಲು
ತೊಡಗಿತ್ತು ಚೂಣಿಗಾಳೆಗವಲ್ಲಿ ತನತನಗೆ
ಬಿಡದೆ ಮೂದಲಿಸಿ ನೂಂಕಿತ್ತಲ್ಲಿ ತನತನಗೆ
ಬೆರಸಿ ಮೀರಿತ್ತು ಶಿವದ್ರೋಹಿ ದಕ್ಷನ ಬಲಂ
ಹರಿಯಜ ಸುರಾಧಿಪರ್ ನೂಕಿತಾಗಳೆ ಬಲಂ
ಕವಿದಿಕ್ಕಿದಂತಾಗೆ ವೀರಭದ್ರಂ ಬಂದು
ಸವಿಯಿಸುವೆನಿವರಸುಗಳಂ ಬಾಳ ಬಾಯ್ಗೆಂದು
ಬರಸಿಡಿಲ ಬಳಗದಂತಿರ್ದ ಗಣತತಿ ಸಹಿತ
ಎರಗಿದಂ ಭೂಮಿತಳವದಿರ್ದು ಬಿರಿಯಲ್ಕಹಿತ
ಬಲವಳಿಯಲೆಯ್ತಂದು ದಿಕ್ಕರಿಗಳಂ ಪೋಳ್ದು
ಬಳಸಿ ದೂವಾಳಿಸುವ ತುರಗಬಲಮಂ ಸೀಳ್ದು
ನೆರೆದ ರಥನಿಕರಮಂ ನುಚ್ಚುನೂರಂ ಮಾಡಿ
ಪರಿತಹ ಪದಾತಿಗಳನರೆದು ಸಣ್ಣಂ ಮಾಡಿ
ಸಂಗರದೊಳಂದಮಮ ಹೊಕ್ಕೊಕ್ಕಿಲಿಕ್ಕುತಿರೆ
ಹೊಂಗೇರಿ ನಾರಂದಮುನಿಯಲ್ಲಿ ಪೆರ್ಚುತಿರೆ
ರಣದೊಳಗೆ ಮಾರಿಗೆಯರೋಚಕಮದಾಗುತಿರೆ
ತಣಿಯುಂಡು ಕಾಲಂಗೆ ಕೊಕ್ಕರಿಕೆ ಹುಟ್ಟುತಿರೆ

ಇಂತಿಂತು ವೀರಭದ್ರಂ ತವಿಸುತಿರಲಂದು
ಮುಂತೆ ಪುಯ್ಯಲ್ಗೊಂಡವಂತೊರ್ವನೆಯ್ತಂದು
ಎಲೆ ದಕ್ಷ ನೀನೇಕೆ ಜನ್ನವೇಕೆಲೆ ಪಾಪಿ
ನಿಲಲರಿದು ಕೇಳೆಲವೊ ಮುಂದುಗಾಣದ ಕೋಪಿ
ದೇವಿಯೂಳಿಗವಿಂದುಧರನ ಕಿವಿದಾಗಿತ್ತು
ದೇವಿಯಣುಗಂ ಬಂದನಮರಾಳಿ ತಿರುಗಿತ್ತು
ಇಂದ್ರನೋಡಿದನಜಂ ಮೈಗರೆದನಂತಲ್ಲಿ
ನೊಂದು ಹರಿ ಹರಿಣನಾಗಿಯೆ ಬಿಳ್ದನಂತಲ್ಲಿ
ಹಿಡಿವಡೆದವರ್ಕೆಲರು
ಮಡಿದರಥಟರ್ಕೆಲರು
ಹುತ್ತೇರಿದರ್ಕೆಲರು
ಬತ್ತಲಿರ್ಪರ್ಕೆಲರು
ಪಲ್ಗಿರಿದವರ್ಕೆಲರ್
ಪುಲ್ಗಚ್ಚಿದರ್ಕೆಲರ್

ಬಂದುದಭವನದಾಳಿ
ಕೊಂದುದಿನ್ನೆಲೆ ಏಳಿ
ಎನುತಿರಲ್ಪುರದ ಬಾಗಿಲ್ವಾಡಮಂ ಸುಡುತೆ
ತನತನಗೆ ಕೇರಿಗೇರಿಗಳೊಳಗೆ ಕಿಚ್ಚಿಡುತೆ
ನೆರೆ ಬೀದಿವರಿವುತಂ
ಮರೆವೊಗಲ್ಕಾವುತಂ
ಒರೆದೊತ್ತಿ ಕೆಡಪುತಂ
ಕರುಳ್ಗಳಂ ಕೀಳುತಂ
ಕುತ್ತಿ ಬರಸೆಳೆವುತಂ
ನೆತ್ತರಂ ಸೂಸುತಂ
ತಲೆಯಿಂಡೆಯಾಡುತಂ
ಎಲುವೊಟ್ಟಲಿಕ್ಕುತಂ
ಉರಿವರಿವುತಂ ಬಂದು
ಪಿರಿದು ಗಣವೆಯ್ತಂದು
ಮುತ್ತಿದರ್ಪಾತಕಂ ಸಮೆದ ಮುಖಶಾಲೆಯಂ
ಸುತ್ತಿದರದೇನೆಂಬೆನವರೊಂದು ಲೀಲೆಯಂ
ಮಂಟಪವನೆತ್ತುವರ್
ಕಂಟಿಸದೆ ಪತ್ತುವರ್
ದ್ವಿಜಸಭೆಯನೇಡಿಪರ್
ಗಜಬಜವ ಮಾಡುವರ್
ಕಂಬಮಂ ತರಿವುತಂ
ಇಂಬಿನಿಂದಿರಿವುತಂ
ಗಗನಮಂ ಬಗಿವುತಂ
ಮಿಗೆ ಪುಟಂ ನೆಗೆವುತಂ
ಕೊಂಡದೊಳಗುಲಿವುತಂ
ಕೆಂಡಮಂ ಕೆದರುತಂ
ನಿಂದಿರಿಗಿ ನೋಡುತಂ
ಮುಂದೆ ಬಂದಾಡುತಂ
ತೊನೆದು ಕೈಪರೆಗುಟ್ಟೆ
ಮುನಿಗಳಂ ಹುರಿಗುಟ್ಟಿ
ಎಳ್ಳರಾಸಿಗಳನೆಲ್ಲರಮೇಲೆ ಚಲ್ಲುತಂ
ಮುಳ್ಳೆಲ್ಲವಂ ಸುರರ ಮೋರೆಗಳಲೆಳೆವುತಂ

ಇಂತು ಮುಂಗುಡಿಯ ಭೂತಂ ಮಸಗುತಿರಲಂದು
ಪಿಂತೈದೆ ಕಲಿವೀರಭದ್ರಂ ಮುಳಿದು ಬಂದು
ಉರಿಯ ನಾಲಗೆಗಳಂ ಕಿಳ್ತಿತ್ತಿ ಬಿಸುಡುತಂ
ತಿರುಗಿ ಪೂಷನ ಪಲ್ಗಳುದುರೆ ಮುಳಿದೊದೆವುತಂ
ವಾಣಿಯಭಿಮಾನಮಂ ಕೊಂಡು ದೊರೆಗೆಡಿಸುತಂ
ಮಾಣದಿದಿರಾದವರನಲ್ಲಿಯೇ ಒರಸುತಂ
ಬರೆ ಕಂಡು ಸುರಸಮಿತಿ ಮರುಗಿ ಮುಮ್ಮುಳಿಗೊಂಡು
ನೆರೆದು ಗಗನದೊಳೆಲ್ಲರುಂ ವಿಸ್ಮಯಂಗೊಂಡು
ಏಕೆ ತೊಡಗಿದವನಿವಂ ಯಾಗಮಂ ಮರುಳಾಗಿ
ಏಕೆ ಬಂದಳ್ಗಿರಿಜೆ ದಕ್ಷಂಗೆ ಹಗೆಯಾಗಿ
ಬೆಟ್ಟೇರಿ ಮೃತ್ಯುವಂ ಕರೆದುಕೊಂಡಂ ಪಾಪಿ
ಇಟ್ಟಣಿಸಿದುದು ತನಗೆ ಸಾವುಗೆಟ್ಟಂ ಪಾಪಿ
ಮುನ್ನವೆ ದಧೀಚಿಮುನಿ ಮುನಿದು ಶಾಪಂಗೊಟ್ಟ
ನಿನ್ನೇನು ಅಕಟಕಟ ಪಾಪಿ ದಕ್ಷಂ ಕೆಟ್ಟ
ಎನುತಮರರಳಲುತಿರೆ ಘುಡುಘುಡಿಸುತಂ ಮಸಗಿ
ಮುನಿದುಬಂದುರವಣಿಸಿ ಸಿಡಿಲೆರಗುವಂತೆರಗಿ
ಕಡೆಕಡೆ ಶಿವದ್ರೋಹಿಯೆನುತೆ ಶಿರವಂ ಹೊಡೆದು
ಉಡುಗುಡುಗು ಗರ್ವವನೆನುತ್ತೆ ತಲೆಯಂ ಕಡಿದು
ಒದೆದು ತಂದಾ ತಲೆಯನುರಿವ ಕುಂಡದೊಳಿಕ್ಕಿ
ಇದಕೊಳ್ಳು ನೀನಾಹುತಿಯನಗ್ನಿಯೆನುತಿಕ್ಕಿ
ನುಡಿವುತಂ ಹಿಡಿಹಿಡಿ ಸುರುವಳಿಯನೆನುತಮಿರೆ
ಮೃಡನಿತ್ತ ಬೆಸನಂ ಮನಕ್ಕೆ ತೋರುತ್ತಮಿರೆ
ನಡನಡುಗಿ ಕಟ್ಟಿರ್ದ ಕುರಿಯ ತಲೆಯಂ ತಂದು
ಒಡಲಮೇಲಿಟ್ಟು ಜೀವಂಗೊಟ್ಟು ಕಲಿ ನಿಂದು
ದಕ್ಷನಂ ಹಿಡಿದು ಕೋಡಗಗಟ್ಟ ಕಟ್ಟುತಂ
ತ್ರ್ಯಕ್ಷನಣುಗಂ ಸುರರ ಮುನ್ನ ನೆರೆ ಕಟ್ಟುತಂ
ತಿರುಗಿದಂ ಭೂತಗಣವಲ್ಲಲ್ಲಿ ಕುಣಿದಾಡೆ
ಹರಭಕ್ತರೆಲ್ಲರುಂ ಹರುಷದಿಂ ನಲಿದಾಡೆ
ಬರುತಿರಲ್ಮುಂದೆ ರಣರಂಗ ರಣರಣಕದೊಳು
ಮರುಳಪಡೆಯಿರ್ದುದೇನೆಂಬೆನೊಂದಣಕದೊಳು
ಮರುಳಪಡೆಯಿರ್ದುದೇನೆಂಬೆನೊಂದಣಕದೊಳು
ಮೂಳೆಗಳ ತುಪ್ಪಮಂ ತಲೆಯೋಡಿನೊಳ್ಪೊಯ್ದು
ಕಾಳಿಜದ ಖಂಡಮಂ ಮೆಲ್ಲಿತಪ್ಪವನಾಯ್ದು

ಮಿದುಳ್ಗಳಂ ತೆಗೆತೆಗೆದು ರಾಸಿಗೂಳಂ ಸುರಿದು
ಮುದದಿಂದೆ ತಮತಮಗೆ ಮರುಳ್ಗಳೆಲ್ಲಂ ನೆರೆದು
ಬೊಟ್ಟಿಟ್ಟು ನೆತ್ತರಂ ಕರುಳಮಾಲೆಯನಿಕ್ಕಿ
ಅಟ್ಟೆಗಳನೇರಿಕೊಂಡಲ್ಲಲ್ಲಿ ಮೆಯ್ಯಿಕ್ಕಿ
ಮಾಮಾರಿ ಮಾಕಾಳಿಗಳ್ತಿಯಿಂ ಪೊಡಮಟ್ಟು
ಕಾಮಾಕ್ಷಿ ಚಾಮುಂಡಿಗಳ್ಕರಿಂ ಪೊಡಮಟ್ಟು
ಮೂಳೆಗಳ ತುಪ್ಪಮಂ ತವಕದಿಂ ಕುಡಿಕುಡಿದು
ಕಾಳಿಜವನಡಿಗಡಿಗೆ ಸ[ವಿ]ಸವಿದು ಚಪ್ಪರಿದು
ತೇಗಿ ಬಾಳೆಮ್ಮಯ್ಯ ವೀರಭದ್ರನೆ ಎನುತೆ
ತೂಗಾಡಿ ಪರಮಾಯು ವೀರಭದ್ರನೆ ಎನುತೆ
ಹೊದ್ದಿ ಕುಳ್ಳಿರ್ದು ಮಿಗೆ ಸ[ವಿ]ಸವಿದು ನೋಡುತಂ
ಬಿದ್ದನಿಕ್ಕಿದನೆಮಗೆ ಇಂದು ಶೂಲಿಯಸುತಂ
ಅವನಾಯು ತಿರಮದಕ್ಕವನಾರ್ಪು ಪಿರಿದಕ್ಕೆ
ಅವನೆಲ್ಲರಂ ಸಂತತಂ ಮರ್ದಿಸುತ್ತಿರ್ಕೆ

ಎಂದು ನಲಿದಾಡುತಂ ಮರುಳಪಡೆ ಹರಸುತಿರೆ
ನಿಂದದಂ ವೀರಭದ್ರಂ ನೋಡಿ ನಗುತಮಿರೆ
ದಕ್ಷಮಖವಿಪಿನಕುಳದಾವಪಾವಕನೆಂದು
ದಕ್ಷಮಖಜೀಮೂತಕುಳಮಹಾಬಳನೆಂದು
ಬಿರುದೆತ್ತಿಕರೆವ ಕಹಳೆಗಳ ಘನರವದೊಳಗೆ
ಉರವಣಿಸಿ ಪೊಯ್ವ ಭೇರಿಯ ಘನಧ್ವನಿಯೊಳಗೆ
ನಡೆತಂದನಪ್ರತಿಮ ವೀರಭದ್ರಂ ಮುಂದೆ
ಗುಡಿಗಟ್ಟುತಲ್ಲಿ ಕೈಲಾಸದೊಳ್ನಲವಿಂದೆ
ಇದಿರ್ವಂದು ಹರನ ಗಣನಾಯಕರಿದಿರ್ಗೊಂಡು
ಅಧಟನಂ ಶೂಲಿಯ ಕುಮಾರಕನನಿದಿರ್ಗೊಂಡು
ಒಡಗೊಂಡು ಕೈಲಾಸಪುರದೊಳಗೆ ಬರುತಿರಲು
ಕಡುನೀರೆಯರ್ನೆರೆದು ನಿಂದು ಕರುಮಾಡದೊಳು
ನಡೆತಪ್ಪ ವೀರೇಶಗೆಲ್ಲರುಂ ಕೈಮುಗಿದು
ಬಿಡದೆ ಗಣತಿಂತಿಣಿಗೆರಗಿ ಸಂತಸದೊಳೊಗೆದು
ಹಿಂದೆ ಬಪ್ಪವನಾರವಂ ದಕ್ಷನೆಂಬವನೆ
ಇಂದುಧರನಂ ದೇವಿಯಂ ನಿಂದೆಗೆಯ್ದವನೆ
ತಲೆಯೊಂದುಪರಿ ದೇಹವೊಂದು ಪರಿಯೆಲಗವ್ವ
ಛಲವೇಕೆ ತಾನೇಕೆ ಲಜ್ಜೆಯಿಲ್ಲದನವ್ವ

ಬೇಕುಬೇಕೀ ಮೊಗಕೆ ಯಾಗವಂ ಮಾಡಿಸಲು
ಬೇಕುಬೇಕೀ ಮೊಗಕೆ ದೇವನಂ ನಿಂದಿಸಲು
ನಡೆತಪ್ಪರಮರರೇ ತಮಗೇಕೆ ಖಳನಾಟ
ಒಡಸಿಕ್ಕಿದರನಿಂತು ಮಾಡಿತ್ತವನ ಕೂಟ
ಎಂದು ಪುರನಾರಿಯರ್ಕೈವೊಯ್ದು ನುಡಿವುತಿರೆ
ನಿಂದು ನೆಲೆನೆಲೆಗಳೊಳ್ನೋಟಮಂ ಬೀಱುತಿರೆ
ನಡೆತಂದು ಗಿರಿಶನರಮನೆಯನೊಲವಿಂ ಪೊಕ್ಕು
ಬಿಡದೆ ಮೈವೆಚ್ಚುತಂ ಸಂತಸಂ ಕೈಮಿಕ್ಕು
ವೀರಭದ್ರಂ ಬಂದು
ದೂರದಿಂದಂ ನಿಂದು
ಮಾರಮದಮಥನಂಗೆ
ಕಾರುಣ್ಯವಾರಿಧಿಗೆ
ನೆನೆವರ ನಿಧಾನಕ್ಕೆ
ಮುನಿಗಳ ಧ್ಯಾನಕ್ಕೆ
ಭಕ್ತಜನ ಸುರತರುಗೆ
ಭಕ್ತಜನ ನವನಿಧಿಗೆ
ಭಕ್ತಜನ [ಚೈ]ತ್ರಂಗೆ
ಭಕ್ತಜನ ಗೋತ್ರಂಗೆ
ಶರಣಾಬ್ಧಿ ಚಂದ್ರಂಗೆ
ಶರಣಜನ ಜನಕಂಗೆ
ವೇದಂಗಳರ್ಥಂಗೆ
ವಾದಿಂಗತರ್ಕ್ಯಂಗೆ
ಬಾಲೇಂದು ಚೂಡಂಗೆ
ಬಾಲಾರ್ಧದೇಹಂಗೆ
ಮೈಯಿಕ್ಕಿನಿಂದಂ ವಿರೂಪಾಕ್ಷಲಿಂಗಂಗೆ
ಕೈಯೆತ್ತಿ ಪೊಡಮಡುತ್ತೆಮ್ಮ ಶಿವಲಿಂಗಂಗೆ
ಇದೆ ದೇವ ಬಿನ್ನಪಂ ಖಳದಕ್ಷಸಂತಾನ
ಇದೆ ದೇವ ಬಿನ್ನಪಂ ಕೋಟಿ ಸುರಸಂತಾನ
ಇದೆ ಚಕ್ರವಿದೆ ಕುಲಿಶವಿದೆ ಕಾಲದಂಡವಿದೆ
ಇದೆ ಬೊಮ್ಮಹಾಸವಿದೆ ಸಕಲ ಋಷಿವೃಂದವಿದೆ

ಇಂತೆಂದು ವೀರಭದ್ರಂ ಬಿನ್ನವಿಸಲಂದು
ಪಿಂತೆ ಮೈಯಿಕ್ಕಿ ಕೈಮುಗಿದು ದಕ್ಷಂ ನಿಂದು

ದೇವ ಸರ್ವಾಪರಾಧಿಯನೆನ್ನನೀಕ್ಷಿಪುದು
ದೇವ ಮುಂದರಿಯದಜ್ಞಂಗೆನಗೆ ಕರುಣಿಪುದು
ಶಿಶು ತಪ್ಪಮಾಡಿದಡೆ ಕೊಂದರುಂಟೇ ದೇವ
ಪಶು ತಪ್ಪಮಾಡಿದಡೆ ಕೊಂದರುಂಟೇ ದೇವ
ಶಿಶುವಾನು ಪಶುವಾನು ತಂದೆ ಪಶುಪತಿ ನೋಡ
ಶಶಿಧರನೆ ವಿಷಧರನೆ ಕರುಣದಿಂದಂ ನೋಡ
ಎಸೆವ ಲೋಕಾರಾಧ್ಯ ಕರುಣದಿಂದಂ ನೋಡ
ಅಸಮ ಗಣನಾಥ ಧೂರ್ಜಟಿ ಕರುಣದಿಂ ನೋಡ
ಎಲೆ ದೇವ ಗರ್ವದಿಂ ನೊಂದಂಗೆ ಕರುಣಿಪುದು
ಎಲೆ ದೇವ ನಿಂದೆಯಿಂ ಬೆಂದಂಗೆ ಕರುಣಿಪುದು
ಎಂದು ದಕ್ಷಂ ಕೃಪಾಭಾವದಿಂದೊರಲುತಿರೆ
ಇಂದುಧರನಭಯವಿತ್ತಂ ಸುರರ್ಪೊಗಳುತಿರೆ
ಶತಯಜ್ಞದೊಂದು ಫಲವಂ ವೀರಭದ್ರನಿಂ
ನತನಾದ ದಕ್ಷಂಗೆ ಕೊಡಿಸಿದಂ ಭದ್ರನಿಂ
ಏನೆಂಬೆನುಬ್ಬಟೆಯ ಕರುಣಿ ಸುರರಂ ನೋಡಿ
ತಾನೆಂದನಂತವರ್ಗಭಯಕರಮಂ ನೀಡಿ
ಎನ್ನವರ್ಗಳಿಲ್ಲದಲ್ಲಿಗೆ ಪೋಗದಿರಿಯೆಂದು
ಎನ್ನವರನರಿದಡ್ಡಮೊಗವಾಗದಿರಿಯೆಂದು
ಮರೆದು ದಂಬಕರೆಂಬರಂ ಕೂಡದಿರಿಯೆಂದು
ಮರಹಿಲ್ಲದೆನ್ನ ಸಂತತ ನೆನೆವುತಿಹುದೆಂದು

ಎಂದಮರಸಂತತಿಗೆ ಕಾರುಣ್ಯಮಂ ಮಾಡಿ
ಮುಂದಿರ್ದ ವೀರಭದ್ರನನಕ್ಕರಿಂ ನೋಡಿ
ತೆಗೆದು ತರ್ಕೈಸುತಂ ಬಾಯ ತಂಬುಲವಿತ್ತು
ಸೊಗಯಿಪ ಕುಮಾರಂಗೆ ಬೀಳುಡೆಯನೊಲಿದಿತ್ತು
ಕೊಂಡಾಡಿ ವೀರಭದ್ರನನೆಲ್ಲರುಂ ನೋಡೆ
ಮುಂಡಾಡಿದಂ ಭಕ್ತತತಿ ಹರುಷದಿಂ ನೋಡೆ
ದಕ್ಷಾದಿಸುರರನಂತವರವರ ಲೋಕಕ್ಕೆ
ಅಕ್ಷಯಂ ತಾನೆ ಕಳುಪಿದನವರ ಲೋಕಕ್ಕೆ
ಮಂದಿರದೊಳೆಸೆವ ಗಣನಾಯಕರೊಳೊಪ್ಪಿದಂ
ಇಂದುಧರನತುಳಬಳನಪ್ರತಿಮನೊಪ್ಪಿದಂ
ಅತನುಹರನನಿಮಿತ್ತ ಬಂಧು ಶಿವನೊಪ್ಪಿದಂ

ಅತಿದಾನಿಯತಿಕರುಣಿಯತಿಶಯದೊಳೊಪ್ಪಿದಂ
ಹೆಂಪೆಸೆವಲಂಪಿನಿಂ ಪ್ರಥಮ ನಿಧಿಯೊಪ್ಪಿದಂ
ಹಂಪೆಯ ವಿರೂಪಾಕ್ಷನನವರತವೊಪ್ಪಿದಂ ೬೨೮

ನಂದೀಶಾದಿ ಗಣೇಶರೊ
ಳಂದಧಟಂ ಮೆರೆದ ವೀರಭದ್ರನ ಶಿಶುವಾ ।
ನೆಂದುಂ ಕರುಣಿಸುತಿರ್ಕೆನ
ಗೆಂದುಂ ಶಶಿಮೌಳಿ ಹಂಪೆಯ ವಿರೂಪಾಕ್ಷಂ ॥

❖❖

## ೨. ಭೃಂಗೀಶ್ವರ ರಗಳೆ

ಶೃಂಗಾರಾದಿ ಸಮಸ್ತರ
ಸಂಗಳನಭಿನಯಿಸಿತೋರಿ ಮಿಗೆ ಮೆಚ್ಚುತ್ತಾ ।
ಲಿಂಗಿಸುತೆ ತನ್ನನಿತ್ತಂ
ಭೃಂಗೀಶಂಗೆಮ್ಮ ಹಂಪೆಯ ವಿರೂಪಾಕ್ಷಂ ॥

ಶ್ರೀ ಕೈಲಾಸಸಭಾಮಂದಿರದೊಳು
ಲೋಕೇಶ್ವರನಿರೆ ಭದ್ರಾಸನದೊಳು
ಕೆಲಬಲದೊಳ್ ದೇವಗಣಂ ಬಂದಿರೆ
ಜಲಜಭವಂ ಜಲಶಯನಂ ಬಂದಿರೆ
ಸುರರುಂ ಕಿನ್ನರರುಂ ಸಂಗಡದೊಳು
ಗರುಡರು ಗಂಧರ್ವರು ವಂಗಡದೊಳು
ಮುನಿಗಳ್ ಸಿದ್ಧರ್ ವಿದ್ಯಾಧರರುಂ
ಮನುಗಳ್ ಕಿಂಪುರುಷರು ಖೇಚರರುಂ
ವೇದಂ ತರ್ಕಂ ತಾವೊಂದೆಸೆಯೊಳು
ನಾದಂ ರಾಗಂ ಬೇರೊಂದೆಸೆಯೊಳು
ರವಿಶಶಿಕೋಟಿಗಳಿಂತೊಂದೆಸೆಯೊಳ್
ಭುವನಾಧಿಕ್ಯಪತಿಗಳೊಂದೆಸೆಯೊಳ್
ಮಕುಟಂಗಳ ಪಜ್ತೆಗಳೊಂದೆಸೆಯೊಳ್
ಸಕಳಾನರ್ಘ್ಯಮಣಿಗಳೊಂದೆಸೆಯೊಳ್
ತರದಿಂ ಸುರನಾರಿಯರೊಂದೆಸೆಯೊಳ್
ನೆರೆದಿರೆ ಕಿನ್ನರಿಯರದೊಂದೆಸೆಯೊಳ್
ಸುರಪನನಲನಂತಕ ನೈರುತಿಗಳ್
ವರುಣನನಿಲವಿತ್ತಪ ದಿಕ್ಪತಿಗಳ್

ಬಂದಿರೆ ಚಂದ್ರಾಭರಣನ ಸಭೆಯೊಳ್
ಹಿಂಗದ ಕಾಂತಿ ನೆಗೆದವೆಣ್ದೆಸೆಯೊಳ್
ಮೊಳೆತವು ಸುರಸತಿಯರ ತನುವಿಂದಂ
ಬೆಳೆದವು ರನ್ನದ ತೊಡಿಗೆಗಳಿಂದಂ
ದಳವೇರಿದವು ಸಿತಾಂಬರದಿಂದಂ
ತಳಿತವವರ್ಗಳ ಮುಖರಸದಿಂದಂ
ಕವಲ್ವರಿದವು ಕಣ್ಗಳ ಕಡೆಯಿಂದಂ
ತವೆ ಕುಸುಮಿತವಾದವು ನಗೆಯಿಂದಂ
ಶಿವಪದಸಂಗದ ಫಲಮಂ ಪಡೆದವು
ಸವೆಯದ ಸವಿಯಿಂ ಸಭೆಯಂ ತೋದವು

ಇಂತೆಸೆವಾ ನವರತ್ನಪ್ರಭೆಯೊಳು
ಸಂತತವೊಪ್ಪುವ ಶರ್ವನ ಸಭೆಯೊಳು
ಗಡಣದ ಕಿನ್ನರಿಯರ್ ತಾರೈಸಲು
ಮೃಡನ ಮನಂ ಸುಖದಿಂ ಹಾರೈಸಲು
ರಾಗದ ರಸದೊಳು ಸಭೆ ಈಸಾಡಲು
ಲಾಗಿನ ಲಹರಿಯೊಳಗೆ ಮುಳುಗಾಡಲು
ವಹಣಿಯ ತೆರೆಯೊಳ್ತೇಂಕಾಡುತ್ತಿರೆ
ಬಹು ಸುಗತಿಗಳೊಳಗೋಲಾಡುತ್ತಿರೆ
ತಿರುಪಿನ ಸುಳಿಗಳೊಳಗೆ ಸುಳಿವುತ್ತಿರೆ
ತರದಿಂ ವಹಣಿಗಳೊಳೆ ಮಣಿವುತ್ತಿರೆ
ಕಂಪನದೊಳ್ಪೊಂಪುಳಿಯೋಗುತ್ತಿರೆ
ಇಂಪಿನ ಸೊಂಪಿನೊಳಗೆ ಕರಗುತ್ತಿರೆ
ಕಿನ್ನರಿಯರು ಶಿವನಂ ಕೇಳಿಸುತಿರೆ
ಪನ್ನಗಭೂಷಂ ತಲೆದೂಗುತ್ತಿರೆ
ಇರಲೊಂದಣಕದ ಜವನಿಕೆ ಮೂಡಲು
ಸುರಸಭೆ ಕೌತುಕದಿಂದಂ ನೋಡಲು
ಭೃಂಗೀಶಂ ತಾನಾಗದೆ ಮಾಣಂ
ಹಿಂಗಿಸು ಸಭೆಯಂ ಬಂದಂ ಜಾಣಂ
ತೆರಹಂ ಕುಡು ಚಕ್ರಿಗೆ ಕಿನ್ನರಪತಿ
ಹೆರಸಾರಿಂದ್ರ ತೊಲಗು ವಾಣೀಪತಿ
ಹೋಹೋ ಕಳಕಳವೇಕೆಂದೆನುತಂ
ಆಹಾ ಹೊಸಪರಿ ಚಿತ್ರೈಸೆನುತಂ

ನಂದೀಶಂ ನುಡಿವುತೆ ಹೆರಸಾರಲು
ಛಂದದ ರಸವಾದ್ಯಂಗಳ್ ಸೇರಲು
ಸಂಗೀತರಸಂ ರಂಗಂಬೊಕ್ಕುದು
ಸಂಗಡಿಸಿದ ಕಡುಸೊಗಸಂ ಮಿಕ್ಕದು
ಆಡದ ಮುನ್ನಡ್ಡಯ್ಸಲ್ ತೊಡಗಿತು
ನೋಡದ ಮುನ್ನವೆ ಸೊಗಯಿಸತೊಡಗಿತು
ನೋಡುವವರ ಮನಮುಂ ಜವನಿಕೆಯೊಳು
ನಾಡೆ ಜಗಳವಾಡುತ್ತಿರೆ ಸಭೆಯೊಳು
ದಿಧಿಕರವನುಗುಳಲು ಮದ್ದಳೆಗಳು
ಸುಧೆಯಂ ಸೂಸುತ್ತಿರಲಾವುಜಗಳು
ಸುಗತಿಯನುಗುಳುತ್ತಿರೆ ಕಹಳೆಗಳುಂ
ಸೊಗಸಂ ಸೊಂಪಿಸುತಿರೆ ಕರಡೆಗಳುಂ
ಕೈಸಾಳಂ ಸನ್ನೆಯೊಳೊತ್ತುತ್ತಿರೆ
ದೇಸಾಳಂ ನುಡಿಯೊಳು ಬೆಳೆವುತ್ತಿರೆ
ತಾಳಂ ನರ್ತನಮಂ ಕರೆವುತ್ತಿರೆ
ಮೇಳವಣಿಗೆ ಶಬ್ದಂ ಕೂಡುತ್ತಿರೆ
ಬಿಂಕದ ಕಾಳಾಸಂ ತುಳ್ಕಾಡಲು
ಭೋಂಕನೆ ಮುಂದಣ ಜವನಿಕೆಯೋಡಲು
ಹೊಗೆ ತಗ್ಗಿದ ಹುತವಹನಂತಿರ್ದಂ
ಮುಗಿಲೋಸರಿಸಿದ ರವಿಯಂತಿರ್ದಂ
ಛಾಯವಡಂಗಿದ ಜ್ಯೋತಿಯೊಲಿರ್ದಂ
ಮಾಯವಡಂಗಿದ ಹರನಂತಿರ್ದಂ

ಇರಲೊಪ್ಪಿತು ಭೃಂಗಿಯ ಶೃಂಗಾರಂ
ಶಿರಮಧ್ಯದ ಲಿಂಗದ ವಿಸ್ತಾರಂ
ಭಾಳಂ ತೀವಿದ ಭಸಿತದ ತಿಳಿಕಂ
ತಾಳಕ್ಕೊಲೆದಾಡುವ ಕೈಚಳಕಂ
ಫಣಿಕುಂಡಲ ಮುತ್ತಿನಹಾರಂಗಳು
ಮಣಿ ಖಚಿತದ ರತ್ನದ ಮುದ್ರಿಕೆಗಳು
ಕೇಯೂರಂ ಹೊಸ ವಜ್ರದ ಕಂಕಣ
ಒಯ್ಯಾರಂ ಮಿಗೆ ಗೆಜ್ಜೆಯ ಚಲ್ಲಣ
ಎಸೆಯಲ್ ಸರ್ವಾಂಗದ ಹೊಸ ಭಸಿತಂ
ಮಸಗಲ್ ಕಾಲ ತೊಡರು ಝಣಝಣಿತಂ

ಕೈಯೊಳಗೊಪ್ಪಲು ನರ್ತನದಂಡಂ
ಮೈಯ್ಯೊಳು ಹೊಳೆಯಲ್ ಗತಿಗಳ ತಂಡಂ
ಮೊಳೆಯಲ್ ಸರ್ವಾಂಗದೊಳೆ ಸುಗತಿಗಳು
ಬೆಳೆಯಲ್ ತ್ರಿಭಂಗಿಗೊಂಡಾಕೃತಿಗಳು
ಮುಂದುವರಿಯೆ ಮೆಚ್ಚುಗಳೋಲಗದೊಳು
ಸಂದಣಿಸಲ್ ಕಾಹಂಗಳು ಮುಖದೊಳು
ಕಡೆಗಣ್ಗಳ ಕೊನೆಯೊಳ್ಮೇಳೈಸಲು
ನಿಡುವುರ್ವಿನ ತುದಿಯೊಳ್ಮೇಳೈಸಲು
ಕರತಳದಿಂ ಬಹುಗತಿಗಳ ಸೂಸಲು
ಚರಣತಳದೆ ಹೊಸ ತಾಳಂಗುಟ್ಟಲು
ತಡವಿ ತಡವನಾಡುತೆ ಹಿಮ್ಮೆಟ್ಟುತೆ
ಕಡುಸೊಗಸಂ ಕಾಳಾಸದಿ ತೋರುತೆ
ತಡೆದು ತಡೆದು ಲಾಗಿನಲೋಲಾಡುತೆ
ನಡೆದು ನಡೆದು ತೂಗುತೆ ಲೋಲಾಡುತೆ
ಪಿರಿದುಂ ನೆಗೆದಾಕಾಶದೆ ನಿಲುತಂ
ತರಹರಿಸುತೆ ಪಂಜರದೊಳ್ಸಲುತಂ
ಢಾಳದೊಳುಣ್ಮುತ್ತಂ ಬಳುಕುತ್ತಂ
ತಾಳವನವಯವದೊಳ್ಪಿಡಿವುತ್ತಂ
ಆಡಿತೆ ಗತಿ ನಿಂದುದೆ ಕಾಳಾಸಂ
ನೋಡಿತೆ ಸೊಗಸಿರ್ದುದುವೆ ವಿಳಾಸಂ
ತಾನಾಗಿರೆ ರಸಮಯನಾಗಾಡುತೆ
ನಾನಾವಿಧ ಬಹುಗತಿಗಳ ತೋರುತೆ
ಭಾಪಾವುಜ ಮದ್ದಳಿರೇ ಎನುತಂ
ಭಾಪುರೆ ಕಹಳೆ ಸುದೇಸಿಯೆನುತ್ತಂ
ದೇವುರೆ ಹೊಸತುಘಡಣೆಯೆನುತ್ತಂ
ರಾವುರೆ ತಾಳದ ಗತಿಯೆಂದೆನುತಂ
ಅವಧಾರುರೆ ಮೇಳವಣಿಯೆನುತ್ತಂ
ಅವಧಾರಭವನೆ ಕರುಣವೆನುತ್ತಂ
ನೆಗೆದು ತಿರುಗಿ ಕೈಯೂರಿ ನಿಲುತ್ತಂ
ಬಗೆಯದೆ ತಲೆಯಿಂ ನಡೆದಾಡುತ್ತಂ
ಬರಿಯಿಂದಂ ಹರಿದಾಡಿ ನಿಲುತ್ತಂ
ಬೆರಲೂರಿಯೆ ತಿರ್ರನೆ ತಿರುಗುತ್ತಂ

ಕೈಯೊಳ್ಕಾಲೊಗೆದಂತಾಡುತ್ತಂ
ಮೈಯೆಲ್ಲಂ ಮುಖವಾದಂತಿರುತಂ
ಕೆಲದೊಳ್ ಬಲದೊಳ್ ಸುತ್ತೆಣ್ದೆಸೆಯೊಳ್
ನೆಲದೊಳ್ ಮುಗಿಲೊಳಗಂಬರದೆಡೆಯೊಳ್
ಹೊಸ ಕರಣಂಗಳನೀಡಾಡುತ್ತಿರೆ
ಶಶಿಧರನೊಲವಿಂ ತಲೆದೂಗುತ್ತಿರೆ
ಹೆಸರಿಡಬಾರದ ಗತಿಗಳನಾಡುತೆ
ಹೊಸ ಹೊಸ ಪರಿಗಳ ರೀತಿಯನಾಡುತೆ
ಮನದೊಳೆ ದೇಹವನಡಗಿಸಿಯಾರುತೆ
ಮನವೇ ತನುವಾದಂತಿರಲಾಡುತೆ
ಗತಿಗೆ ಮನಂ ಹೊಸ ತನುವಾದಂತಿರೆ
ಗತಿಗೆ ತನುವಿನವಯವವಾದಂತಿರೆ
ಸಮವಿಷಮಂಗಳನರಿದೆನಲಾಡುತೆ
ಕ್ರಮದಿಂ ನವರಸ ಗತಿಗಳನಾಡುತೆ
ಧಾರುಣಿಯಂದದೆ ತಿರದಿಂದಾಡುತೆ
ವಾರಿಯವೋಲ್ ನಿರ್ಮಳನಾಗಾಡುತೆ
ಅನಲನವೋಲುಜ್ವಲನಾಗಾಡುತೆ
ಅನಿಲನವೋಲ್ಸುತ್ತಂ ಸುಳಿದಾಡುತೆ
ಗಗನದವೋಲ್ತನ್ಮಯನಾಗಾಡುತೆ
ಮೃಗಧರನಂತಿರೆ ಹೊಸಕಳೆಯೇರುತೆ
ದಿನಕರನಂತಿರೆ ದೆಸೆಯಂ ಬೆಳಗುತೆ
ಎನಸುಂ ಜೀವನದೋಲ್ಚೇತರಿಸುತೆ
ಎಳೆವಿಸಿಲಮತಿರೆ ಬಣ್ಣಂದೋರುತೆ
ಬೆಳುದಿಂಗಳವೋಲ್ತಂಪಂ ಬೀರುತೆ
ಕೋಗಿಲೆಯಂತಿರೆ ಸರಗೈದಾಡುತೆ
ರಾಗದಿ ಗಿಳಿಯಂತಿರೆ ನುಡಿದಾಡುತೆ
ಅಳಿಯಂತಿರೆ ಝೇಂಕಾರದಲಾಡುತೆ
ಕಳಹಗಂಸೆಯವೋಲ್ಮೆಲ್ಲನೆ ನಡೆವುತೆ
ಎಳೆಲತೆಯಂತಿರೆ ತೂಗಾಡುತ್ತಂ
ಎಳೆಮಿಂಚಿನವೋಲ್ ಹೊಳೆದಾಡುತ್ತಂ
ಮುಗಿಲಂತಿರೆ ಮೊಳಗುತೆ ಬಂದಾಡುತೆ
ಮಿಗೆ ಚಾದಗೆಯಂತಿರೆ ನಲಿದಾಡುತೆ
ನವಿಲಂತಿರೆ ಸವಿ ದನಿಗೊಟ್ಟಾಡುತೆ

ನವ ಪ್ರೇರಣೆಯಂ ದೇವಂ ನೋಡುತೆ
ನಲವಿಂ ಕಾಲೊಳ್ಕಟ್ಟಿದ ಗೆಜ್ಜೆಗ
ಳುಲಿಯಲ್ಗತಿಗಳನುಗುಳುವ ಹಜ್ಜೆಗ
ಳಳವಡೆ ಪಯಗತಿಯಂ ಬಾರಿಸುತಂ
ಸೆಳೆವುತೆ ಹಿಮ್ಮೆಟ್ಟುತೆ ನಿಂದಿರುತಂ
ಪದತಳದೊಳೆ ತಟಗಿಸ್ರೆಂದೆನುತಂ

ಮೃದುಗತಿಯೊಳ್ಫಲಫಲಕೆಂದೆನುತಂ
ಚರಣತಳದೊಳುಗ್ಘಡಿಸುವ ತೆರದಿಂ
ನೆರೆದ ಸುಗತಿ ಕಾಲ್ಗೆರಗಿದ ತೆರದಿಂ
ಗತಿಪುಳಕಿತನಾಗಿರೆ ಹಜ್ಜೆಗಳಿಂ
ದತಿ ಚೆಲ್ವಿನ ಶಬ್ದದ ಹಜ್ಜೆಗಳಿಂ
ಬಾರಿಸುತಂ ಕಿವಿಗಿನಿದಂ ತೋರುತೆ
ಹಾರೈಸಲ್ಬಹುರೂಪಂ ತೋರುತೆ
ದಕ್ಷನ ಮುಖಮಂ ಕೆಡಿಸಿದ ಪರಿಯಂ
ತ್ರ್ಯಕ್ಷಂ ತ್ರಿಪುರವನುರುಪಿದ ಪರಿಯಂ
ಕಾಮನನಭವಂ ನೋಡಿದ ಪರಿಯಂ
ಪ್ರೇಮದಿ ರತಿಮಿಗೆ ಶೋಕಿಪ ಪರಿಯಂ
ಗಿರಿಜೆ ತಪಸ್ಸಿನೊಳಿರ್ದಪರಿಗಳಂ
ಕರುಣದೊಳೀಶಂ ಬಂದಪರಿಗಳಂ
ಪ್ರೇತಪತಿಯನಂದುರುಪಿದ ಪರಿಯಂ
ಶ್ವೇತಂಗೊದವಿದ ಕರುಣದ ಪರಿಯಂ
ಉಪಮನ್ಯು ತಪಂಬಟ್ಟ ಪರಿಗಳಂ
ಕಪರ್ದಿ ಪಾಲ್ಗಡಲಿತ್ತ ಪರಿಗಳಂ
ಪುಲಿಯ ತೊವಲನುಗಿದುಟ್ಟ ಪರಿಗಳಂ
ಕಲಿಗಜಚರ್ಮವ ತೊಟ್ಟ ಪರಿಗಳಂ
ತಡೆಯದೆ ಕಡಲಂ ಕಡೆದ ಪರಿಗಳಂ
ಕಡೆಯಲ್ ಹೊಸ ವಿಷವುಗುಳ್ದ ಪರಿಗಳಂ
ಸುರಸಂತತಿ ಬಿಗುರ್ತೋಡಿದ ಪರಿಯಂ
ಕೊರಲೊಳ್ಗರಳವ ಧರಿಸಿದ ಪರಿಯಂ
ಭಾವರಸದ ಲಹರಿಯನಾಡುತ್ತಿರೆ
ದೇವಂ ಮನದೊಳ್ಮಿಗೆ ಹಿಗ್ಗುತ್ತಿರೆ
ನಂಬಿಗೆ ಕುಂಟಣಿಯೋದ ಪರಿಗಳಂ

ನಿಂಬಿಗೆ ಸೂರೆಯನಿತ್ತ ಪರಿಗಳಂ
ಭೋಗಣ್ಣನೊಡನೆ ಹೋದ ಪರಿಗಳಂ
ರಾಗದಿ ಪುರದೊಳ್ನಿಂದ ಪರಿಗಳಂ
ಕಣ್ಣಪ್ಪಂ ಕಣ್ಣಿತ್ತ ಪರಿಗಳಂ
ಬಣ್ಣಿಸಿ ಶರ್ವಂ ಮೆರೆದ ಪರಿಗಳಂ
ಕಲ್ಲಂ ಕೊಂಡವನಿಟ್ಟ ಪರಿಗಳಂ
ನಿಲ್ಲದೆ ವರವಂ ಕೊಟ್ಟ ಪರಿಗಳಂ
ಬೇಡಂ ಬೇಂಟೆಯನಾಡಿದ ಪರಿಯಂ
ರೂಢೀಶಂ ದಿಟ ಮಾಡಿದ ಪರಿಯಂ
ಓಹಿಲನಂ ಕೊಂಡೊಯ್ವಾ ಪರಿಯಂ
ನೇಹದೊಳುದ್ಭಟನೆಯ್ದಿದ ಪರಿಯಂ
ಅಲ್ಲಯ್ಯನ ಕೈಯೊಕ್ಕ ಪರಿಗಳಂ
ಬಲ್ಲಾಳನ ಮನವರಿದ ಪರಿಗಳಂ
ಏಕಾಂತದ ರಾಮಯ್ಯನ ಪರಿಯಂ
ಲೋಕಾಂತವದಂ ಮಾಡಿದ ಪರಿಯಂ
ಬಸವಣ್ಣಂ ವಿಷವುಂಡ ಪರಿಗಳಂ
ವಿಷವುಂ ಪ್ರಸಾದವಾದ ಪರಿಗಳಂ
ಕನ್ನೆಯಳುತೆ ಹಾಲೆರೆದ ಪರಿಗಳಂ
ಬಿನ್ನಣದಿಂ ತಾನುಂಡ ಪರಿಗಳಂ
ಚೆನ್ನನ ಮನೆಯೊಳಗುಂಡ ಪರಿಗಳಂ
ಮನ್ನಿಸಿ ಚೋಳಂಗೊಲಿದ ಪರಿಗಳಂ
ಚೀಲಾಳನನರಿದಿತ್ತ ಪರಿಗಳಂ
ಸೋಲದೆ ಮಗನಂ ಕರೆದ ಪರಿಗಳಂ
ಕಕ್ಕನ ಕಂಕರಿಗಾಡಿದ ಪರಿಯಂ
ಚಿಕ್ಕನ ಮನವಂ ನೋಡಿದ ಪರಿಯಂ
ದಾಸನ ವಸ್ತ್ರವ ಸೀಳಿದ ಪರಿಯಂ
ಕೇಶವರಾಜಂಗಂಜಿದ ಪರಿಯಂ
ಗುಂಡಯ್ಯನ ಮುಂದಾಡಿದ ಪರಿಯಂ
ತಂಡೇಶ್ವರನುಮ್ಮಾಡಿದ ಪರಿಯಂ
ಬಿಬ್ಬ ಬಾಚನ ಪ್ರಸಾದದ ಪರಿಯಂ
ಗೊಬ್ಬೂರವರಂ ಸುಟ್ಟಾ ಪರಿಯಂ
ಚೇರಮ ದಾಳಿಯನಿಟ್ಟ ಪರಿಗಳಂ
ಮಾರಾರಿಯ ಶರಣರ ಮಹಿಮೆಗಳಂ

ಹಂಪೆಯೊಳಗೆ ಸಲೆ ನೆಲಸಿದ ಪರಿಯಂ
ಹಂಪೆಯ ಹರಿಗಂಗೊಲಿದಾ ಪರಿಯಂ
ಇವು ಮೊದಲಾಗಿರೆ ಶಂಕರನೊಲವಿಂ
ಸವಿದಾಡಿದ ಸುಖಲೀಲೆಯೊಳೊಲವಿಂ
ಬಹುರೂಪಗಳಿಂ ಬಂದಾಡುತ್ತಂ
ಬಹಳ ರಸಂಗಳೊಳೋಲಾಡುತ್ತಂ
ಆಡುತ್ತಾಡುತ್ತೇಡಿಸಿ ನಿಲುತಿರೆ
ನೋಡುವ ಸಭೆ ಮಿಗೆ ಘೊಳ್ಳೆನೆ ನಗುತಿರೆ
ಸಭೆಯ ಮೈಯ ಜೊಮ್ಮೆಲ್ಲಂ ಹಾರಲು
ಅಭವನ ಮುಖದೊಳು ನಸುನಗೆದೋರಲು
ಪ್ರಹಸನ ರಸಮಂ ತೊಡಗಿದನಾಗಳು
ಸಹಜದ ನಗೆಗಳ್ಮೂಡಲು ಮೊಗದೊಳು
ಕೋಡಗಿಯಾಟವನೇರಿಸಿಕೊಂಡಂ
ನೋಡಿ ನಗುತ್ತಿರೆ ದೇವರ ತಂಡಂ
ತಲೆಯೊಳ್ಸುತ್ತಿದ ಕವಡಿಕೆ ದಂಡೆಗ
ಳೊಲವಿಂ ಪಲ್ಲಳವಡಿಸಿದ ಕವಡೆಗ
ಳ್ಕಣ್ಣೊಂದರೊಳಿಕ್ಕಿದ ಬೆಳ್ಗವಡಿಕೆ
ಕಣ್ಣಂ ಮೆಳ್ಳಿಸಿ ನೆತ್ತಿಯ ಚಂಡಿಕೆ
ಹಲುಗಿರಿಯುತೆ ಪುರ್ಬಂ ಕೆತ್ತುತ್ತಂ
ಬಲುಗಿವಿಯಂ ಮಂಡಿಸಿ ಮಣಿವುತ್ತಂ
ಬಾಯಂ ತೆರೆವುತೆ ಬರಿದೆ ನಗುತ್ತಂ
ಆಯೆಂದೀಶನನೇಡಿಸಿ ನಿಲುತಂ
ಕೊಂಕಿ ನಡೆದು ಕೈಯ್ಯಂ ಮುರುಕಿಸುತಂ
ಟೊಂಕಮನುರುಗಿಸಿ ನಿಂದೇಡಿಸುತಂ
ಮೊಳಕೈ ಮುಂಗೈಗಳನಾಡಿಸುತಂ
ಮೊಳಕಾಲಿಕ್ಕುತ್ತೆರಗುತೆ ನಿಲುತಂ
ಅಂಗೈ ಮೇಗೈಗಳನಾಡಿಸುತಂ
ಹೊಂಗಿ ನಿಂದು ಮೆಲ್ಲನೆ ನಡೆತರುತಂ
ಕಾಲುಂ ಕೈಯುಂ ಚೆಂಗೊಂಡಾಗಿರೆ
ಮೇಲುಂ ತಳವುಂ ಕೆಲವುಂ ಡೊಂಕಿರೆ
ಕುಳ್ಳಿರ್ದೇಳುತ್ತಂ ಬೀಳುತ್ತಂ
ಅಳ್ಳೆಯನೆರಡುಕರದಿ ಬೆರಟುತ್ತಂ
ಮೆಳ್ಳಿಸಿ ನೋಡುತೆ ಪುರ್ಬಂ ಕೆತ್ತುತೆ

ಗೊಳ್ಳೆನೆ ಸಭೆ ನಗೆ ಪಲ್ಲಂ ಕಿರಿವುತೆ
ಅಡ್ಡಂ ತಿಗಟಂ ವಿಸಟಂ ಬರಿವುತೆ
ಗುಡ್ಡಿಸಿ ಮುಗಿಲುದ್ದಕ್ಕೆ ನೆಗೆವುತೆ
ಅಣಕಂದೋರಿಸುತೆವೆಯಿಕ್ಕುತ್ತಂ
ತ್ರಿಣಯನ ನೋಡುತೆ ಗಹಗಹಿಸುತ್ತಂ
ಮೂಗಿನ ತುದಿಯಂ ಮೆಳ್ಳಿಸಿ ನೋಡುತೆ
ತೂಗಿ ತೊನೆದು ಕೈ ಚಪ್ಪಳೆಗುಟ್ಟುತೆ
ತುದಿಕಾಲೊಳು ನಿಲುತಂದೊಲೆದಾಡುತೆ
ಬೆದರಿದರಂತಿರೆ ಬೆಚ್ಚುತ್ತೋಡುತೆ
ನಿಂದಿರುತೊಂದೇ ಮುಡುಹಾಡಿಸುತಂ
ಮಂದಿಯನೇಡಿಸುತವ್ವಳಿಸುತ್ತಂ
ಮುಡುಹುಗಳಂ ಕೊರಲೊಳೆ ಪತ್ತಿಸುತಂ
ಕಡವಾಯೊಳೆ ತುಟಿಯಂ ಜೋಲಿಸುತಂ
ಬರಿದೇ ಧ್ಯಾನಿಸಿ ಬೆರಗಾಗುತ್ತಂ
ಮರೆದಂತೇನಕ್ಕೆಯನರಸುತ್ತಂ
ಹೊಟ್ಟೆಯನಾಡಿಸುತಂ ಹೊಂಗಿಸುತಂ
ನಿಟ್ಟೊಡಲಾಗುತ್ತಂ ನಿಂದಿರುತಂ
ಕೊಂಕಿದ ದೇಹವ ಮುರುಕಿಸಿ ನಡೆವುತೆ
ಬಂಕಿದ ಮುಖದೊಳ್ಬಾಯ್ದೆರೆದುಲಿವುತೆ
ತೋಳಂ ಬೀಸುತೆ ತೂಗಾಡಿಸುತಂ
ನೀಳಂ ಮಾಡಿಯೆ ಮೊಗದಿರುಹುತ್ತಂ
ದಿಟ್ಟಿಸಿ ನೋಡುತ್ತಂ ಜಿಗಿವುತ್ತಂ
ನೆಟ್ಟಂದದೆ ನಿಂದಿರ್ದು ನಗುತ್ತಂ
ತುಟಿಮಿಡುಕುತ್ತಿರೆ ಹಲುಹರೆಗುಟ್ಟುತೆ
ಕಟಿಯಲುಗುತ್ತಿರೆಯಡ್ಡಂ ಮೆಟ್ಟುತೆ
ಕುಂಟನವೋಲ್ ಕೊಂಕಡಿಗಳನಿಡುತಂ
ತುಂಟನವೋಲ್ ಬೆಚ್ಚಡಿಗಳನಿಡುತಂ
ಹೆಳವನವೋಲ್ ಮೊಳಕಾಲಿಕ್ಕುತ್ತಂ
ಗಳೆಯಂದದೆ ಸ್ವೈರಗಾಗುತ್ತಂ
ಎದ್ದೆದ್ದೇತದವೋಲ್ನಿಲ್ಲುತ್ತಂ
ಬಿದ್ದುಂ ಬಿಲ್ಲಂದದೆ ಬೆರೆವುತ್ತಂ
ಮೂಗಂ ಪತ್ತಿಸಿ ಕೊಡಕೆಯನಾಡಿಸಿ
ಮೇಗಂ ಮೆಳ್ಳಿಸಿ ಕೊರಲಂ ತೂಗಿಸಿ

ಮೂರುಂ ಕಾಲುಂ ಮುದುಡಿನಿಲುತ್ತಂ
ಮೋರೆಯನೊರಗಿಸಿ ಮೆಲುಕಿರುವುತ್ತಂ
… … … ಡುವಂದಿದಿ ಗೆಯ್ವುತೆ
ನುಡಿವಂದದಿ ನಡೆವಂದದಿ ಗೆಯ್ವುತೆ
ಬಳಲಿದ ತೆರದಿಂ ಕಿವಿಯಂ ಜೋಲುತೆ
… … … … … …
… … … … ರೆ ಗಚ್ಚುತ್ತಂ
ಕಾಲಂ ನೆಗಪಿಯೆ ಕುಣಿದಾಡುತ್ತಂ
ಹುಬ್ಬಂ ಗಂಟಿಕ್ಕುತ್ತೇಡಿಸುತಂ
ಉಬ್ಬಿ ನೆಗೆದು ಬ…ಲಂ ಹರಡುತ್ತಂ
ಬಸುರುಕ್ಕುಳಿಸುತೆ ಬಾಯಂ ತೆರೆವುತೆ
ಮುಸುಡಂ ತಿರುಹುತೆ ಅವುಡಂ ಕಚ್ಚುತೆ
ಬೆನ್ನಂ ಬಾಗಿಸಿ ಬರಿದೋಳಾಡಿಸಿ
ಕೆನ್ನೆಯನೊರಗಿಸಿ ಕೆಲನಂ ರೋಡಿಸಿ
ಮೂಗಂ ಪತ್ತಿಸಿ ಕೊಡಕೆಯನಾಡಿಸಿ
ಮೇಗಂ ಮೆಳ್ಳಿಸಿ ಕೊರಲಂ ತೂಗಿಸಿ
ತಲೆಯ ನಿವಾಳಿಸಿ ತಳವಂ ಬಾರಿಸಿ
ನಿಲವಂ ಕೊಂಕಿಸಿ ಬೆರಲಂ ಬಂಕಿಸಿ
ಸುರಪನನೇಡಿಸುತಂ ರೋಡಿಸುತಂ
ಶರಣರ ಚರಣವ ಪಿಡಿದಾಡುತ್ತಂ
ದೇವನನರುಗಿಸಿ ನೋಡಿ ನಗುತ್ತಂ
ದೇವಸಭೆಯನೊಲಿದಲ್ಲಾಡಿಸುತಂ
ಸರ್ವಾಂಗಮ ನೆರೆಯೂಡಿಸಿ ತೋರುತೆ
ಸರ್ವಾಂಗಮುಮಂ ಡೊಂಕಿಸಿ ತೋರುತೆ
ಮೈಯೆಲ್ಲಂ ನಡೆವಂತಿರಲಾಡುತೆ
ಮೈಯೆಲ್ಲಂ ಗತಿಯಾಗಿರಲಾಡುತೆ
ನಗೆಗಳನೆಲ್ಲರ ಮೊಗದೊಳ್ಚಲ್ಲುತೆ
ಬಗೆಗಳ ನಗೆಯಂ ಹೊರೆವಂತಾಡುತೆ
ನೋಡುವವರ ನಗೆಗೂಡಾಗಿಸುತಂ
ನೋಡುವರವಯವವಂ ನಗಿಸುತ್ತಂ

ಬಂದಾಡುತ್ತಿರೆ ಹರನೋಲಗದೊಳು
ಹೆಂದದ ನಗೆಗಳ್ ಮಸಗಲ್ಕಾಗಳು

ಪರಿಹಾಸರಸಂ ತನುವಂ ಮೀರಿತು
ಹರಸಾತ್ವಿಕ ಭಕ್ತಿರಸಂ ತೋರಿತು
ಹೊಸಭಕ್ತಿಯ ಕರುವಿನವೊಲೆವಂತಿರೆ
ಶಶಿಧರನಚ್ಚರಿಯೊಳ್ಮೆರೆವುತ್ತಿರೆ
ತಾಳವನರಿಯದೆ ತಲೆದೂಗುತ್ತಿರೆ
ಮೇಳವನರಿಯದೆ ಮೆಯ್ಮರೆವುತ್ತಿರೆ
ಬೆಮರುಣ್ಮೆಸಿ ಕಣ್ಣಂ ತೆರೆವುತ್ತಂ
ಕ್ರಮವಡಿಗಿಡೆ ನುಡಿಯಂ ತೊದಳಿಸುತಂ
ಮನಮೊಸರಲು ಪುಳಕವನೆಬ್ಬಿಸುತಂ
ತನುವದಿರಲು ಕಂಪನವೇರಿಸುತಂ
ಬರೆ ಸಾತ್ವಿಕರಸವಂ ತನ್ನಂಗಂ
ಹರುಷದೊಳಿದಿರ್ಗೊಳುತಿರಲೀಶಂಗಂ
ಕೌತುಕವಾಗಿರೆ ತೂಗಾಡುತ್ತಂ
ಸೈತಿರಲರಿಯದೆ ಸಲೆ ಕರಗುತ್ತಂ
ಹರಕೀರ್ತಿಯನೇ ಕೊಂಡಾಡುತ್ತಿರೆ
ವರಮೂರ್ತಿಯನೇ ಕಣ್ಣೊಳಗಿಟ್ಟಿರೆ
ಮೈಸೋಂಕಂ ತನ್ನೊಳು ತೆಗೆವುತ್ತಿರೆ
ಕೈ ಶಿವಪೂಜೆಗೆ ಲವಲವಿಸುತ್ತಿರೆ
ತನ್ನಂ ಮರೆವುತೆ ಪರವಶನಾಗಲು
ಭಿನ್ನಂದೋರದ ಸಮಸುಖಿಯಾಗಲು
ಹರ ಸಾತ್ವಿಕಭಕ್ತಿಯ ರಸದೋರಲು
ಕರುಣರಸಂ ಹರನೊಳು ಕೈಮೀರಲು
ಹಿಡಿದೆತ್ತಿದ ಭೃಂಗೀಶನನೀಶಂ
ಅಡಿಗಡಿಗಪ್ಪಿದನಾ ಗಿರಿಜೇಶಂ
ಆಲಿಂಗಿಸಿ ಮೈಯಂ ತಡಹುತ್ತಂ
ಸಾಲದಿದೆನ್ನಂ ಕೊಟ್ಟೆನೆನುತ್ತಂ
ಹಂಪೆಯ ವಿರುಪಂ ಕರುಣಂ ಮಾಡಲು
ಹೆಂಪಿಂ ಹೊಗಳಲು ಸುರಸಭೆ ನೋಡಲು
ದೇವ ಶರಣಸಂಕುಳ ಪರಿಪಾಲಕ
ದೇವಶರಣಮುಗ್ಧಾಜನಲೋಲಕ
ದೇವ ಸಕಲ ವರವಿದ್ಯಾವಲ್ಲಭ
ದೇವಾನೇಕ ಶ್ರುತಿತತಿ ದುರ್ಲಭ
ದೇವಸಮಸ್ತ ಪ್ರಮಥಾವಂದಿತ

ದೇವಜನಾರ್ದನ ಕಮಲಜವಂದಿತ
ದೇವಸುಧಾಕರ ಸೇವಿತ ಕುಂತಳ
ದೇವಕಿರೀಟಾಲಂಕೃತ ಪದತಳ
ದೇವ ನತಾಖಂಡಲ ಸುರಮಂಡಲ
ದೇವ ವಿರಾಜಿತ ಫಣಿಪತಿಕುಂಡಲ

ಎಂದು ಹೊಗಳುತಿರೆ ಸಂತಸದಿಂದಂ
ಇಂದುಧರಂ ಹಿಗ್ಗುತೆ ನಲವಿಂದಂ
ವರವಂ ಕುಡಲೆಂದನುಗೆಯ್ವುತ್ತಂ
ಸುರಸಂತತಿಗಭಯವನೀವುತ್ತಂ
ಪರಿಪರಿಯಳ್ಕರೊಳೋಲಾಡುತ್ತಂ
ಶರಣತತಿಗೆ ಭಕ್ತಿಯನೀವುತ್ತಂ
ಭೃಂಗೀಶನನಡಿಗಡಿಗಪ್ಪುತ್ತಂ
ಹಿಂಗದ ನೇಹದೆ ಸಲೆ ಮೆಚ್ಚುತ್ತಂ
ಹರಿಬೊಮ್ಮರವರಗುರುವೊಪ್ಪಿರ್ದಂ
ಶರಣಜನದ ಸುರತರುವೊಪ್ಪಿರ್ದಂ
ಭಕ್ತರ ಪರುಸದ ಕಣಿಯೊಪ್ಪಿರ್ದಂ
ಭಕ್ತರ ಚಿಂತಾಮಣಿಯೊಪ್ಪಿರ್ದಂ
ಭಕ್ತರ ಮತಿಯುನ್ನತಿಯೊಪ್ಪಿರ್ದಂ
ಭಕ್ತರ ಕಣ್ಣುಂ ಗತಿಯೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

ಪರಮೋತ್ಸವದಿಂ ಭೃಂಗೀ
ಶ್ವರನಂ ಕೊಂಡಾಡಿ ನೋಡಿ ನಲವೇರುವ ಶಂ ।
ಕರನೊಲ್ದು ಭಕ್ತಿಸುಖಮಂ
ಕರುಣಿಸುತಿರ್ಕೆಮಗೆ ಹಂಪೆಯ ವಿರೂಪಾಕ್ಷಂ ॥

❖❖

# ೩. ಓಹಿಲಯ್ಯನ ರಗಳೆ

## ಸ್ಥಲ ೧

ಎಲೆಲೆಲೆ ಶಿವ ಶಿವ ಮೆರೆದಂ
ನಲಿನಲಿದು ಧರಾತಳಾಗ್ರದೊಳು ಘನತೇಜೋ ।
ಜ್ವಳದಿಂ ಕರುಣಂ ಕವಿದೋ
ಹಿಲದೇವನನೆಮ್ಮ ಹಂಪೆಯ ವಿರೂಪಾಕ್ಷಂ ॥

ಶ್ರೀಗೆ ನೆಲೆಯೆನಿಸುವುತ್ತರ ದಿಶಾಭಾಗದೊಳು
ಭೂಗೆ ಮಂಗಳವೆನಿಪ ಪುರವಿಪ್ಪುದೊಪ್ಪದೊಳು
ಧರಣಿಗೆ ವಿಳಾಸವತಿಯೆಂಬ ಪೆರ್ಮೆಯ ಪುರಂ
ನರಲೋಕದೊಳಗದರ ಮಹಿಮೆಯತಿವಿಸ್ತರಂ
ಆ ಪಟ್ಟಣಕ್ಕಧಿಕನೆನಿಸಿಕೊಂಡೊಪ್ಪುವಂ
ಭೂಪರೊಳು ನಿಃಕುಂಭರಾಜನೆನಲೊಪ್ಪುವಂ
ಕರಿ ತುರಗ ರಥ ಪದಾತಿ ಪ್ರಬಳಸಂಪದಂ
ನರಪಕುಲಮಣಿ ಮಕುಟನಿಕರಸೇವಿತಪದಂ
ಪಲಕೆಲವು ವತ್ಸರಂ ರಾಜ್ಯಸುಖದೊಳಗಿರ್ದು
ನೆಲದೊಳಗೆ ಮಾರ್ಮಲೆವರಿಲ್ಲದರಸಾಗಿರ್ದು
ಮಕ್ಕಳಿಲ್ಲದೆ ಮನದೊಳುಮ್ಮಳಂ ಪಿರಿದಾಗಿ
ತಕ್ಕರಂ ಪಿರಿಯರಂ ನೆರಪಿಕೊಂಡೊಂದಾಗಿ
ದೇವತೋಪಾಸ್ತೆಯಂ ಮಾಡಲ್ಕನಂದಂದು
ದೇವಾಲಯಕೆ ಶುಚಿರ್ಭೂತನಾಗುತೆ ಬಂದು
ಶಿವಲಿಂಗಮಂ ಸಕಳ ಮುಖದೊಳರ್ಚಿಸುತಮಿರೆ
ಸವೆಯದಭಿಷೇಕಂಗಳಿಂದಲರ್ಚಿಸುತಮಿರೆ

ಕರುಣದಿಂದೀಶ್ವರಂ ಪ್ರತ್ಯಕ್ಷನಾಗುತಂ
ಹರುಷಂ ಮನಂ ಮಿಕ್ಕು ಸಂತುಷ್ಟನಾಗುತಂ

ಜ್ಞಾನತನುಮಯನಪ್ಪ ನಿರುಪಮಾನಂದನಂ
ಸ್ವಾನುಭವವೊಡಲಾದ ಪರಮ ಸುಖವೃಂದನಂ
ಮಾಯಾವಿಕಾರಮಂ ಸಾರದ ಸಮರ್ಥನಂ
ಕ್ರೀಯಳಿದು ಸುಖವುಳಿದ ಪರಮ ಪರಮಾರ್ಥನಂ
ತಾಪತ್ರಯಂಗಳಿಲ್ಲದ ಸಚ್ಚರಿತ್ರನಂ
ಭೂಪತಿಗೆ ಕೊಟ್ಟನಚ್ಚರಿಮಿಗಲು ಪುತ್ರನಂ
ಕೊಟ್ಟು ಶಿವಲಿಂಗದೊಳು ಪುಗೆ ಸದಾಶಿವನಂದು
ಮುಟ್ಟಿದೊಲವಿಂದರಸನರಮನೆಗೆ ನಡೆತಂದು
ಕೃತಕೃತ್ಯಮನನಾಗಿ ಪರಿಣಾಮವೆಡೆಗೊಂಡು
ಅತಿಶಯದ ಸುಖಗಳಂ ಚಿತ್ತದಲು ಕೆಳೆಗೊಂಡು
ಸುಲಲಿತ ರಸಾನಂದಗೇಯಮಂ ಕೇಳುತಂ
ಕೆಲವುಂ ದಿನಂಗಳಂ ಸುಖದಿಂದ ಕಳಿವುತಂ
ಇರೆ ಪಟ್ಟದರಸಿ ಗರ್ಭಿಣಿಯಾದಳೊಪ್ಪದಿಂ
ಬರವರಲು ನವಮಾಸವಾಗಲಾನಂದದಿಂ
ಸುಮುಹೂರ್ತದಿಂ ಪಡೆದಳಾನಂದಕಂದನಂ
ಅಮೃತಕರ ನಿಭಭರಿತ ವಿಮಳಗುಣವೃಂದನಂ
ಪಡೆಯೆ ನಿಃಕುಂಭರಾಯಂ ಮನದಿ ಗುಡಿಗಟ್ಟಿ
ಕಡು ಸಂತಸಂಬಟ್ಟು ಸುಖರಸಂ ಮಡುಗಟ್ಟಿ
ಪ್ರೇಮದಿಂ ಜಾತಕರ್ಮಂ ಮಾಡಿ ಮುಂದಿಟ್ಟು
ನಾಮವಾತಂಗೋಹಿಲಯ್ಯನೆಂಬುದನಿಟ್ಟು

ಇರೆ ಬೆಳೆವುತಿರ್ದಂ ವಿರಕ್ತಿ ಬೆಳೆವಂದದಿಂ
ಹರಭಕ್ತಿಯವಯವಂಬೆತ್ತು ಬೆಳವಂದದಿಂ
ಬೆಳೆದನೊಂದುವನರಿಯದೀ ಮಾಯೆಯಂದವಂ
ಘುಳುಘುಳಿಪ ಸಂಸಾರದಿಪ್ಪೊಂದು ಛಂದಮಂ
ನುಡಿದುದೆಂದರಿಯನುಂಬುದು ಎಂದು ತಾನರಿಯ
ನೆಡಬಲಂ ಹಿಂದುಮುಂದಾವುದೆಂದೇನರಿಯ
ಇಂತಿವರ್ತಾಯ್ತಂದೆ ಬಂಧುಕುಲವೆಂದರಿಯ
ನಿಂತಿರ್ದು ಸುಖದುಃಖವೆಂದು ಮೊದಲಿಂಗರಿಯ
ಈಶ್ವರಂ ಕರುಣಿಸಿದ ವೈರಾಗ್ಯವೆಡೆಗೊಂಡು
ಶಾಶ್ವತಂ ಶಂಕರನ ಭಾವಮಂ ಕೆಳೆಗೊಂಡು
ಮುನ್ನೆಂದುವರಿಯದೀ ಸಂಸಾರಮಂ ಕಂಡು
ತನ್ನಮನದೊಳು ಸೇರದಿರುತಿರೆ ಭಯಂಗೊಂಡು

ಮೃಗಶಿಶುವನೂರೊಳಗೆ ಬಿಟ್ಟಂತೆ ಬೆಚ್ಚುತಂ
ಪಗಲಿರುಳು ಬೈಗುದಯವೆಂದರಿಯದೊಪ್ಪುತಂ
ದೇವ ಬಿಜಯಂಗೆಯ್ವುದೆನೆ ಸುಮ್ಮನಿರುತಿರ್ಪ
ಆವುದುಂ ಸಂಜ್ಞೆಯರಿಯದೆ ಮೌನದಿಂದಿರ್ಪ
ಅರಿಯದಂತರಿಯದಂತಿರುತಿರ್ಪನೊಮ್ಮೆಯುಂ
ಮರೆದಂತೆ ನೆನೆದಂತಿರುತ್ತಿರ್ಪನೊಮ್ಮೆಯುಂ
ತಾನಾಗಿ ಹಸಿದೆನೆಂಬಾ ಮಾತು ತನಗಿಲ್ಲ
ತಾನಾಗಿ ಬೇಕು ಬೇಡೆಂಬುದೊಂದೂ ಇಲ್ಲ
ಜನನಿಯೂಡಿದಡುಂಡು ದಾದಿಯೂಡಿದಡುಂಡು
ಮನದೊಳಗೆ ಹುಸಿಯ ಪಸರಕ್ಕೆ ಬೆಬ್ಬಳೆಗೊಂಡು
ಇಂತಿರಲು ಪರಿಜನಂ ಮುಗುದನೆಂದೇ ಬಗೆದು
ಸಂತತಂ ಕೊಂಡಾಡುತಿಪ್ಪರುತ್ಸವವೊಗೆದು
ಜ್ಞಾನತನುಮಯನೆಂದು ತಾವರಿಯದಂತಲ್ಲಿ
ಭೂನಾಥನಂ ಮುಗುದರೆಂದಿರ್ಪರಂತಲ್ಲಿ

ಇರೆ ಕುಮಾರಂಗೆ ಪದಿನಾರು ವತ್ಸರವಾಗೆ
ಪುರಜನದ ಚಿತ್ತಕ್ಕೆ ಪಿರಿದು ಸಂತಸವಾಗೆ
ಅರಸ ನಿಃಕುಂಭರಾಜಂ ರುಜೆಯ ನೆವದಿಂದೆ
ಪರಲೋಕವಂ ನೋಡಲೆಯ್ದಿದಂ ನಲವಿಂದೆ
ಎಯ್ದೆ ಜನವೆಯ್ದೆ ಚೇತನಗೆಟ್ಟು ಬಾಯ್ಬಿಟ್ಟು
ಮೆಯ್ದೆಗೆದು ಶೋಕದಿ ಪಲುಂಬಿ ಹರಣಂಗೆಟ್ಟು
ಘೋಳೆಂದು ಪುರಜನಂ ಮೆದೆಗೆಡೆದು ಹಳವಿಸುತೆ
ಆಳಿನಟ್ಟಳಲಿಂದೆ ಮೊರೆಯಿಡುತೆ ಕೂಗಿಡುತೆ
ಹಡಪಕ್ಕೆ ಚಾಮರಕೆ ಸಿಗುರಿಗೆ ಪೇಳುತಂ
ಕಡುನೀರೆಯರು ಮಲಗು ಗದ್ದುಗೆಗೆ ಪೇಳುತಂ
ದೀಹದರಗಿಳಿ ಹಂಸೆ ಕೋಗಿಲೆಗೆ ಪೇಳುತಂ
ಓಹಿ ಬೆಳೆಸಿದ ಮಲ್ಲಿಕಾಲತೆಗೆ ಪೇಳುತಂ
ಪೂಗೊಳನೆ ಹದುಳವಿರಿ ಹೋಗಿ ಬಂದಪೆವೆಂದು
ನಾಗಲತೆ ಕೊರಗದಿರಿ ಹೋಗಿ ಬಂದಪೆವೆಂದು
ಕಡುಶೋಕದಿಂದೊಟ್ಟಿಯೊರಲಿ ಬಿದ್ದುದು ಜನಂ
ಎಡೆಗೊಂಡ ದುಃಖದಿಂ ಕೆಡೆದು ಬಿದ್ದುದು ಜನಂ
ಭೂಮಿ ಕಣ್ಣೀರಿಂದೆ ಕೆಸರಪ್ಪ ಮಾಳ್ಕೆಯಿಂ
ವ್ಯೋಮ ವಾಕ್ರಂದನದಲಂದೊಡೆವ ಮಾಳ್ಕೆಯಿಂ

ಪುರಜನಂ ನೆರೆದುನಿಂದಳುತಂ ಪಲುಂಬುತಿರೆ
ಪರಿಜನಂ ಬಾಯ್ಬಿಟ್ಟು ಕೆಟ್ಟೆವೆಂದೆನುತಮಿರೆ
ಮಂತ್ರಿಗಳು ಸಾವಂತರೆದೆಯೊಡೆದು ಬೀಳುತಿರೆ
ತಂತ್ರಿಗಳ್ ರಾಜಪುತ್ರರು ಮರುಗಿ ಮಗ್ಗುತಿರೆ
ಇಷ್ಟರುಂ ಬಂಧುಗಳು ಮೂರ್ಛೆಯೊಳು ಸಂದಿರಲು
ಶಿಷ್ಟರುಂ ಸೇವ್ಯರುಂ ಕಂಗೆಟ್ಟು ನಿಂದಿರಲು
ನಡೆಮಾಡವೆತ್ತಿತ್ತು ಘೋಳಿಡುತ್ತಿರಲಂದು
ನುಡಿದರೈತಂದೋಹಿಲಯ್ಯನಲ್ಲಿಗೆ ಬಂದು
ನಿನ್ನ ಜನಕಂ ದೇವಲೋಕಕ್ಕೆ ಹೋದನೆನೆ
ನಿನ್ನಯ ಪಿತಂ ಸತ್ತನೇಳೆಲೆ ಕುಮಾರಯೆನೆ
ಸತ್ತನೆಂದೇನೆಂಬ ಪರಿಯೆಂದು ಬೆಸಗೊಳಲು
ಉತ್ತಮನ ಮುಗ್ಧತೆಗೆ ಮಂತ್ರಿಗಳು ಮತ್ತಳಲು
ತೊಡೆವುತ್ತವೋಹಿಲಯ್ಯನ ನೋಡುತಳುತಲ್ಲಿ
ಒಡನಳುತ ಬರೆ ಸಕಳ ಪರಿವಾರವಂತಲ್ಲಿ
ಬಾಳೆಯ ಬನಂ ನಡೆದು ಬಪ್ಪಂತೆ ನಡೆವುತಿರೆ
ಬಾಲೆಯರು ಕೈಯೆತ್ತಿ ಬಡಿದುಕೊಳುತೈದಿಬರೆ
ಲೆಂಕರೊಂದೆಸೆಗೆ ಭಾಷೆಯ ಸತಿಯರೊಂದೆಸೆಗೆ
ಬಿಂಕದಿಂದಾಳ್ಕುದರೆ ಗಜಘಟೆಗಳೊಂದೆಸೆಗೆ
ಎಣ್ಣೆತುಪ್ಪದ ಕೊಡಂಗಳ ಸಾಲ್ಗಳೊಂದೆಸೆಗೆ
ತಿಣ್ಣವೆನಿಸುವ ಪಳಿಯ ದಿಂಡುಗಳವೊಂದೆಸೆಗೆ
ಮರುಗಿ ಬರುತಿರೆ ಬಂದು ರುದ್ರಭೂವಳಯದೊಳು
ತೆರನರಿದು ರೋಧಿಸಿದ ನಿರ್ಮಳಸ್ಥಾನದೊಳು
ಚಂದನದ ಬಿತ್ತಳಿಗಳಂ ಪಾ[ಸಿ] ಪರಿಕಲಿಸಿ
ತಂದಗಿಲ ದಿಂಡುಗಳನೆಡೆಗೆಡೆಗೆ ಕೈಗೊಳಿಸಿ
ಮಾಡಿರ್ದ ಚಿತೆಯಮೇಲರಸನಂ ಪಟ್ಟಿರಿಸಿ
ಕೂಡುತಿಂಧನವನೊಟ್ಟುತ ಶಿಖಿಯನಂಕುರಿಸಿ
ವರ ಕುಮಾರಕನಿಂದೆ ತಲೆಗೊಳ್ಳಿಯಂ ಕೊಡಿಸಿ
ಚರಿತದಿಂ ತಂದೊಂದು ನೆಳಲೊಳಗೆ ಕುಳ್ಳಿರಿಸಿ
ಕೂಡೆ ನೆರೆದೋಹಿಲಯ್ಯನ ಸಮೀಪದೊಳಿರಲು
ನೋಡೆ ಶವವಂ ಪೆರ್ಚಿ ಕಿಚ್ಚು ಹತ್ತುತ್ತಿರಲು
ಭರದಿಂ ಕಪಾಲಮೋಕ್ಷವನಾಲಿಸುತ್ತವಿರೆ
ನೆರೆನೆರೆದು ತನತನಗೆ ನಿಂದು ಶೋಭಿಸುತಮಿರೆ
ಆಗಳಾ ಪರಮ ವೈರಾಗ್ಯನಿಧಿಯೆಂದೆನಿಪ

ನಾಗಭೂಷಣನ ಪರಮಧ್ಯಾನಿಯೆಂದೆನಿಪಿ
ಓಹಿಲಯ್ಯಂ ನುಡಿದನೊಂದು ಮಾತಂ ನೋಡ
ಆಹಾ ಶಿವಜ್ಞಾನಿ ತಿಳಿದು ನುಡಿದಂ ನೋಡ
ಎಂದು ಬರ್ಪಂ ತಮ್ಮ ತಂದೆಯೆಂದೆನುತವಿರೆ
ಮುಂದುಗೆಟ್ಟೆಲ್ಲರುಂ ಮುಗ್ಧತೆಗೆ ನೋವುತಿರೆ
ಅಲ್ಲಲ್ಲ ಪೇಳಿರೇ ಕೇಳ್ದಪೆನಿದೊಂದುವಂ
ತಲ್ಲಣಿಸಬೇಡ ತಿಳಿಪಿರೆ ಮಾತಿದೊಂದುವಂ
ಎನುತವಿನ್ನೇನಪ್ಪನೆಂದು ಬಪ್ಪಂ ಪಿತಂ
ಎನಗೆ ನೀವರಿಪಿರೇ ಕಂಡಿರಿಯೆನಶ್ರುತಂ
ಎನಲಲ್ಲಿ ಪಿರಿಯರಿರ್ದೆಲೆ ಕುಮಾರಕ ಕೇಳ
ಮನದೊಳೆರಡಿಲ್ಲದ ಸ್ನಿಗ್ಧ ಮುಗ್ಧನೆ ಕೇಳ
ನಿಮ್ಮಯ್ಯನಿನ್ನೆಂದುವುಂ ಬಾರನೆಲೆ ಕಂದ
ನಮ್ಮರಸನುರಿದುಹೋದಂ ಬಾರನೆಲೆ ಕಂದ
ಸತ್ತನುರಿದಂ ಭಸ್ಮವಾಗಿ ಹೋದಂ ಬಾರ
ಉತ್ತಮಗುಣಾಭರಣನಿನ್ನೆಂದುವುಂ ಬಾರ
ಎನೆ ಕುಮಾರಕನಲ್ಲಿ ನೆರೆ ಕೌತುಕಂಗೊಂಡು
ಮನದೊಳು ಮಹಾವಿರಕ್ತಿಯನೊಚ್ಚತಂಗೊಂಡು
ಮುಂದಿರ್ದ ಪಡಿಯರಂಗೆಂತೆನಲವಂಗಿಂತೆ
ಪಿಂದಿರ್ದ ಹಡಪಿಗಂಗೆಂತೆನಲವಂಗಿಂತೆ
ಕೆಲದವರ್ಗೆಂತೆನಲವರ್ಗೆಯಿಂತೀ ತೆರಂ
ಬಲದವರ್ಗೆಂತೆನಲವರ್ಗೆಯಿಂತೀ ತೆರಂ
ಎಲ್ಲರಂ ಕೇಳಲೆಲ್ಲರಿಗೆ ಇಂತೀ ಪರಿಯೆ
ಬಲ್ಲರಂ ಕೇಳೆಲ್ಲರಿಗೆ ಇಂತೀ ಪರಿಯೆ

ಎಂದು ಕೇಳ್ವಾಗಳೊರ್ವಂ ಭಕ್ತನರಿದಲ್ಲಿ
ಎಂದುವುಂ ಕಂಡರಿಯೆನಿಂತು ಕೇಳ್ವರನಲ್ಲಿ
ಅತಿವಿರಕ್ತಂ ಶಿವಸ್ನೇಹಿ ನಿಷ್ಠಾಪರಂ
ಅತಿಶಯ ಶಿವೈಕ ಸಮ್ಯಜ್ಞಾನಿತತ್ಪರಂ
ಧರೆಗೆ ಹೊಸತೀ ಕುಮಾರಂ ಕೇಳ್ವ ಪರಿಯೆನಗೆ
ಅರಸುಮಕ್ಕಳ ನುಡಿಯಿದಲ್ಲ ಕೌತುಕವೆನಗೆ
ಇಲ್ಲಿ ಸತ್ಯವನೆ ನುಡಿದಪೆನಾದುದಕ್ಕೆಂದು
ಅಲ್ಲಿ ಮನದೊಳಗೆ ಭಕ್ತಂ ನೆನೆವುತಿರಲಂದು
ತನಗೆಂತೆನುತ್ತಾ ಕುಮಾರಕಂ ಕೇಳುತಿರೆ

ನಿನಗೆ ಈ ವಿಧಿಯೆಂದು ಭಕ್ತನುಳ್ಳದನುಸುರೆ
ಈ ಸಾವುದಂ ಮಾಣಿಸಲ್ಕೆ ಬಲ್ಲವರುಂಟೆ
ಈ ಸಮರ್ಥಿಕೆಯುಳ್ಳ ನಿತ್ಯಸಂಪದರುಂಟೆ
ಎನೆ ಭಕ್ತನೆಂದನುಂಟೆಂಬ ಮಾತಿನ ಮಾತು
ನಿನಗೆ ಪೇಳ್ವೆಂ ನಂಬು ಎನ್ನ ಮಾತೇ ಮಾತು
ಸಕಳ ವೇದಂ ಹೊಗಳ್ವ ಶಂಭುಶಂಕರನುಂಟು
ಸಕಳ ಸುರನಿಕರವರಿಯದ ಚಂದ್ರಧರನುಂಟು
ಕುಪಿತದಿಂ ಕಾಮನಂ ಭರದಿನುರುಹಿದನುಂಟು
ಕಾಲನಂ ಸುಟ್ಟು ಬೊಟ್ಟಿಟ್ಟ ವಿಷಧರನುಂಟು
ಲೀಲೆಯಿಂ ಪುಲಿದೊವಲನುಟ್ಟ ಪಶುಪತಿಯುಂಟು
ಭಕ್ತ ಸಂಕುಳವನಗಲದ ಕೃಪಾಕರನುಂಟು
ಭಕ್ತರೊಡನೊಡನೆ ತಿರುಗುವ ದಯಾಪರನುಂಟು
ಸತ್ಯನುಂಟಭವನುಂಟಾನಂದಮಯನುಂಟು
ನಿತ್ಯನುಂಟುಗ್ರನುಂಟಪ್ರತಿಮ ಶಿವನುಂಟು
ಗೌರೀವರಂ ಗುಣಾತೀತನಹಿಧರನುಂಟು
ಸೌರಾಷ್ಟ್ರಪತಿ ಸೋಮನಾಥನುಂಟೈಯುಂಟು
ಇಲ್ಲಿಗಿಪ್ಪತ್ತು ಯೋಜನದೊಳಿರ್ದಪನೆಂದು
ಸಲ್ಲೀಲೆಯಿಂದೆ ಭಕ್ತಂ ಪೇಳುತಿರಲಂದು
ಪೇಳ್ದವರ ಹಸ್ತಮಂ ತನ್ನ ಶಿರದೊಳಗಿಟ್ಟು
ತಾಳ್ದವರ ವಚನಮಂ ಚಿತ್ತದೊಳಗಿಂಬಿಟ್ಟು
ಅವರೆ ಗುರುವಾಗಿ ಕೈಕೊಂಡನೋಹಿಲದೇವ
ಅವರ ನುಡಿಯಿಂ ಧನ್ಯನಾದನೋಹಿಲದೇವ

ಉಟ್ಟ ಸಮುರವನಲ್ಲಿ ಸೀಳ್ದನೆಲ್ಲಂ ನೋಡ
ಬಿಟ್ಟನಾ ರಾಜ್ಯಮಂ ಹಾರಲೊದೆದಂ ನೋಡ
ನಿಂದು ಕೌಪೀನನಾದಂ ಪುರಜನಂ ನೋಡೆ
ಬಂದ ಪರಿಜನವಲ್ಲಿಯಳಲುತ್ತಮಿರೆ ಕೂಡೆ
ಭಸಿತಮಂ ಕಾಯದೊಳಗುದ್ಧೂಳನಂ ಮಾಡಿ
ಶಶಿಧರನ ಸೋಮನಾಥನ ರೂಪನೊಡಗೂಡಿ
ಮನದೊಳಚ್ಚೊತ್ತಿ ಬುದ್ಧಿಯೊಳಗಲದಂತಿರಿಸಿ
ನೆನಹಿಂದೆ ನೆಮ್ಮಿ ಚಿತ್ತದೊಳಪ್ಪಿ ನೆರೆ ಬೆರಸಿ
ಪೊರಮಟ್ಟನಮ್ಮಮ್ಮ ಮಾಯಾವಿಮರ್ದನಂ
ಮರಹಳಿದು ನಿಜವುಳಿದ ವೈರಾಗ್ಯವರ್ಧನಂ

ಕಾಲೊಳು ಪೊರಳ್ವ ಮಂತ್ರಗಳನುಲ್ಲಂಘಿಸುತೆ
ಲೀಲೆಗೆಟ್ಟೊರಲುವಬಲೆಯರನೀಕ್ಷಿಸಿ ನಗುತೆ
ಪಳವಿಸಿ ಪಲುಂಬುವಾ ದಾದಿಯರ ಮನ್ನಿಸದೆ
ತಿಳಿವಳಿದು ಕಳವಳಿಪ ಸಚಿವರಂ ಸಾಗಿಸದೆ
ನಡೆತಂದನುತ್ತಮ ವಿರಕ್ತನತಿ ನಿಷ್ಠೆಯಿಂ
ನಡೆತಂದನಲ್ಲಿ ಸುಖಮುಖ ಶೈವಬಟ್ಟೆಯಿಂ
ಕಾಲ್ಗಳೊಳು ಹರಳೊತ್ತಿ ಬೊಕ್ಕೆಗಳು ತಾನೆಗೆಯೆ
ಸಾಲ್ಗೊಂಡ ಕಾಲ ಬೆರಳಿಂ ನೆತ್ತರಂದೊಗೆಯೆ
ಬಿಸಿಲೊಳಂ ನೆಳಲೊಳಂ ಮಳೆಯೊಳಂ ಛಳಿಯೊಳಂ
ಪಸಿವಿನೊಳು ತೃಷ್ಣೆಯೊಳು ಗಾಳಿಯೊಳು ಧೂಳಿಯೊಳು
ಶಿವನ ರೂಪಂ ಮನದೊಳಿಟ್ಟು ನೋವಂ ಮರೆದು
ಭವನ ಮೂರ್ತಿಯನೊಳಗೆ ನಿಲಿಸಿ ತನ್ನಂ ಮರೆದು
ಬರುತಿರ್ದನೋಹಿಲಯ್ಯಂ ಶಿವಮಹೋತ್ಸಾಹಿ
ಬರುತಿರ್ದನೇಕನಿಷ್ಠಂ ಶಂಕರಸ್ನೇಹಿ

ಬರುತಲ್ಲಿ ಸೋಮನಾಥನ ಕಳಸವಂ ಕಂಡು
ಧರೆಯೊಳಗನಾಥನಾಥನ ಕಳಸವಂ ಕಂಡು
ಮೈಯಿಕ್ಕಿ ಮೈಯಿಕ್ಕಿ ಪುಳಕಮಂ ಹೇರುತಂ
ಕೈಯೆತ್ತಿ ಕೈಯೆತ್ತಿ ಕರುಣಮಂ ತೋರುತಂ
ಕೃತಕೃತ್ಯನಾಗುತಂ ಬಂದು ಪುರಮಂ ಪೊಕ್ಕು
ಅತಿಚೆಲುವ ವೀಥಿಯಂ ನೋಡುತೆ ಮನಂ ಮಿಕ್ಕು
ಬಂದು ಶಿವನಿಳಯಮಂ ಪೊಗತುತಂದು ನಲವಿಂದೆ
ಸಂದಣಿಪ ನೇಹದಿಂ ಪರಿತಂದು ಭರದಿಂದೆ
ದೇವಪತಿಯಂ ದೇವಕುಲಚಕ್ರವರ್ತಿಯಂ
ದೇವಗುರುವಂ ಭಕ್ತಜನಮನೋಮೂರ್ತಿಯಂ
ಏಕನಂ ಸಾಕಾರನಂ ಲೋಕನಾಥನಂ
ಶ್ರೀಕಂಠನುನ್ನತಾನೇಕಪರರೂಪನಂ
ಶೂಲಿಯಂ ಕಾಪಾಲಿಯಂ ಶಿರೋಮಾಲಿಯಂ
ಭಾಳಾಕ್ಷನಂ ತ್ರ್ಯಕ್ಷನಂ ಚಂದ್ರಮೌಳಿಯಂ
ಕಾಮಹರನಂ ವ್ಯೋಮಕೇಶನಂ ಭೀಮನಂ
ಪ್ರೇಮಜನಕಾಮಿತ್ತಸ್ತೋಮನಂ ಸೋಮನಂ
ಮಮನಾಥನಂ ಖ್ಯಾತನಂ ಶರಣಯೂಥನಂ
ಅಮಮ ಸೌರಾಷ್ಟ್ರಪತಿಯಂ ಸೋಮನಾಥನಂ

ಕಂಡು ನಡೆಗೊಂಡು ನೆಲೆಗೊಂಡ ನೇಹದೊಳಪ್ಪಿ
ತಂಡತಂಡದ ಪುಳಕ ದಿಂಡೆಗೊಳುತಿರಲಪ್ಪಿ
ಬಿಗಿಯಪ್ಪಿಕೊಂಡಪ್ಪಿಕೊಂಡಪ್ಪಿಕೊಂಡಿರ್ದು
ತೆಗೆದಪ್ಪಿ ಮುಂಡಾಡಿ ಮುದ್ದಾಡಿಸುತ್ತಿರ್ದು
ನೀನೊಡೆಯನೆನಗೆ ನಿನಗಾನಾಳು ಶಂಕರಾ
ಏನೆಂಬೆನೆನ್ನ ಪುಣ್ಯವನೆಲೆಲೆ ಶಶಿಧರಾ
ಸಾವಿಂಗೆ ಭೀತಿಗೊಂಡ್ಯೆತಂದೆನೆಲೆ ತಂದೆ
ಸಾವರಂ ಕಂಡಂಜಿ ಬಂದೆ ನಾನೆಲೆ ತಂದೆ
ನಂಬಿ ನಿನ್ನಂಘ್ರಿಯಂ ಮರೆಹೊಕ್ಕೆನೆಲೆ ದೇವ
ನಂಬಿದೆಂ ನಂಬಿದೆಂ ತೊತ್ತಾದೆನೆಲೆ ದೇವ
ಸಾಯಲೀಯದೆ ಸಲಹು ಸತ್ಯನೇ ನಿತ್ಯನೇ
ಸಾಯಲಾರೆಂ ಕರುಣಿ ಸತ್ಯಾಧಿಪತ್ಯನೇ
ಎಂದು ಕಡುಭೀತಿಯಿಂ ನೊಂದು ಬಿನ್ನಯಿಸುತಿರೆ
ಮುಂದೆ ಕುಳ್ಳಿರ್ದೋಹಿಲಯ್ಯನೊಪ್ಪುತ್ತಮಿರೆ

## ಸ್ಥಲ ೨

ನೋಡದೆ ರಾಜ್ಯಮಂ ಸಕಳಸಂಪದಮಂ ಬಿಸುಟೆನ್ನ ಚಿಂತೆಯಿಂ
ಕೂಡಿದ ಚಿತ್ತದಿಂ ನಡೆದುಬಂದನಿವಂ ಭಲಿಯೆಂದು ಸಂತಸಂ
ಮಾಡುತೆ ತನ್ನ ಮುಂದಣೆಸೆವೋಹಿಲದೇವನ ಮುಗ್ಧಭಾವಮಂ
ನೋಡುತೆ ಸೋಮನಾಥನೆಸೆದಂ ನಿಜಭಕ್ತಮನೋರಥಪ್ರದಂ ॥

ಇಂತು ಸೋಮನಾಥನ ಮುಂದೆ ಕುಳ್ಳಿರ್ದೋಹಿಲಯ್ಯಂ ತಂದೆಗೆ ಮುದ್ದಿಸುವ ಕಂದನಂತೆ ದೇವದೇವಾ, ಜನನಮರಣಕ್ಕಂಜಿದೆಂ, ಮಾಯೆಗೆ ಮಲ್ಲಳಿಗೊಂಡೆಂ, ತಾಪತ್ರಯಕ್ಕೆ ತಲ್ಲಣಿಸಿದೆಂ, ನೋವಿಂಗೆ ನಾಚಿದೆಂ, ಸಾವಿಂಗೆ ಸೆಡೆದೆಂ; ಅಜಾತ ನಿರ್ಮಾಯ ನಿರ್ಗುಣ ನಿರ್ಮಳ ನಿತ್ಯ ಶಿವಶಿವಾ ಕರುಣಿ ಸಾಯಲೀಯದೆ ಸಲಹೆನ್ನ ಸಲಹೆಂದು ಜಿನುಜಿನುಗಿ ಅತ್ತತ್ತು ಬಿಕ್ಕಿಬಿಕ್ಕಿ ಲಲ್ಲೆಗರೆವ ಪರಮಭಕ್ತನ ಮುದ್ದು ವಚನಮಂ ಕೇಳುತ್ತಿರಲಿರುಳಾಗೆ, ಶಿವಪರಿಚರಿಯ ನಿಯೋಗ ಮುಖ್ಯಂ ಕೈದೀವಿಗೆವೆರಸಿ ಶಿವಾಂಗಣ ರಂಗಮಂಟಪ ಶುಕನಾಸಮಂ ಶೋಧಿಸುತ್ತಂ ಗರ್ಭಗೃಹಕ್ಕೆ ಬಂದು, ಶಿವಲಿಂಗದ ಕಲಬಲನಂ ನೋಡುತ್ತ ಬಪ್ಪಾಗಳು, ಓಹಿಲಯ್ಯಂ ಬಾಡಿದ ಲತೆಯಂತೆ ಬಿದಿಗೆಯ ಚಂದ್ರನಂತೆ ಬಳಲ್ದ ಚಕೋರಿಯಂತೆ ಕಳಲ್ದ ಭಕ್ತಿಯಂತೆ ಚಂದ್ರಧರನ ಮುಂದೆ ಕುಳ್ಳಿರ್ದಿರೆ ನೆರೆಕಂಡು. ನೀನಾರೇಳಿಲ್ಲಿಯೇಕಿರ್ದಪೆಯೆಂದು ಕೈವಿಡಿದೆತ್ತೆ ಶಿವಲಿಂಗವಂ ಬಿಡದೆ ಬಿಗಿಯಪ್ಪಿ ಒಡೆಯನಂ ಬಿಡೆಂ ಬಿಡೆಂ ಅಗಲಲಾರೆನಾರೆನೆನೆ. ಮೆಲ್ಲಂ ಬಿಡಿಸಿ ಬಲ್ಪಿಂದೆಳೆತರ್ಪಾಗಳಭವಾ, ಶಂಕರಾ, ಶಿವನೇ ಭವನೇ, ಗುರುವೇ, ತಾಯಿತಂದೆಯೇ, ತವರೇ, ಪುಣ್ಯವೇ, ಕಣ್ಣೇ, ಗತಿಯೇ

ಶಿವಧೋ, ಪೊರೆಯೋ ಎಂದಳಲುತ್ತಂ ಬಳಲುತ್ತಂ ಬಾಯ್ವಿಡುತ್ತಿರಲದಂ ನೋಡದೆ ಶಿವಾಜ್ಞಾಸೂತ್ರಮಂ ತಪ್ಪದೆ ಪೊರಮಡಿಸಿ ಕವಾಟಂಗಳಂ ಮುಚ್ಚಿ ಮುದ್ರಿಸಿ ಪೂಜಾರಿಗಳ್ಪೋಗಲ್, ಇತ್ತೋಹಿಲದೇವಂ ಪೊರಗಿರ್ದೆಲೆಯಯ್ಯಾ, ಎಲೆ ತಂದೆ, ಎಲೆ ದೇವಾ, ನಿನ್ನ ನೋಡದೆಂತು ನಿಲಲಾರ್ಪೆಂ; ನಿನ್ನಂ ನುಡಿಸದೆಂತು ಬರ್ದುಕುವೆಂ; ನಿನ್ನಂ ಸೋಂಕದೆಂತು ಸೈರಿಸುವೆಂ; ನಂಬಿಬಂದವನಲ್ಲುವರೆ ? ನಚ್ಚಿದವನಂ ಬೆಚ್ಚಿಸುವರೆ ? ಕಾಲ್ವಿಡಿದವನಂ ಕಾಣದಂತಿಪ್ಪರೆ ? ಪೊರ್ದಿದನಂ ಪೊರಮಡಿಸುವರೆ ? ಕೂಡಿದನಂ ಕೊಲುವರೆ ? ಎನುತೆ ಬಾಗಿಲಂ ನೆಮ್ಮಿ ಪೊಸತಿಲೊಳು ತಲೆಯಿಟ್ಟು, ಕರುಣಮಂ ಪತ್ತಿ, ವಿರಹಾಗ್ನಿ ಎತ್ತಿ ಹರಣಂ ಹೊತ್ತಿ, ಕರಣಂ ಕುದಿದು ಮನವುಕ್ಕಿ, ತನು ಬೆಂದಗಲ್ದಳಲವತರಿಸಿ, ಕಾಣದ ಖಾತಿ ಕಮಗೆಡಿಸಿ ಮಾಣದಳ್ಕೆ ಮುಂದುಗೆಡಿಸಲೊದರುತ್ತಿರ್ಪ ನಿಜಭಕ್ತನ ಕಿಂಕುರ್ವಾಣಂ ಮಿಕ್ಕು ಪತ್ತೆ ಶೋಕಮಂ ಕೇಳಲಾರದೆ ಭಕ್ತಜನಬಾಂಧವಂ, ಕರುಣಿಗಳರಸಂ, ಕೂಡಿದರ ಕಾಮಧೇನು, ನೋಡಿದರ ಕಣ್ಣಪುಣ್ಯಂ, ಬೇಡಿದರ ಕಲ್ಪಭೂಜಂ, ಸಾರ್ದರ ಸಿದ್ಧರಸಂ, ಪಾರ್ದರ ಪರಮಗುರು, ನೆನೆವರ ನಿಧಾನಂ, ಅರ್ಚಿಸುವರಾಯುಃ ಶ್ರೀಯೆನಿಪ ಸೌರಾಷ್ಟ್ರ ಸೋಮನಾಥಂ ಕದವಂ ತೆರೆಯಲನುಮಾನಿಸುತ್ತೊಲ್ಲದೆ ತಾ ಮಾಡಿದ ಶಿವಾಜ್ಞೆ ತಪ್ಪಲಾಗದೆಂದೆನ್ನ ಭಕ್ತನನೆಲ್ಲರ್ಗರುಪುವೆನೆಂದು ನಡೆತಂದು ನಟ್ಟಿರುಳ್ಪಟ್ಟಿರ್ದ ಶಿವನೊಯೋಗಕ್ಕೆ ಮುಖ್ಯನಪ್ಪ ರಾಜಮುದ್ರಾಹಸ್ತನ ಗಂಟಲಂ ತ್ರಿಶೂಲದೊಳೊತ್ತಿ ಎನ್ನ ಮಗನೆನ್ನಣುಗನೆನ್ನ ಭಕ್ತನೋಹಿಲದೇವನಂ ಪೊರಗಿರಿಸಿ ಕದವಂ ಚಾಚಲಾಗದು, ಬೇಗ ತಂದೊಳಪೊಗಿಸೆಂದು ಕನಸಿನೊಳು ಬೆಸಸಿ ಪೋಗೆ,

ಪೂಜಾರಿ ಓಜೆಗಟ್ಟೆಚ್ಚತ್ತು ಮೂರ್ಛೆಯೋಗಿ ಬೆಚ್ಚಿ ಬೆದರಿ ಅಂತಂತು ನಡುಗಿಯೆಂತಕ್ಕೆ ನಿಂದು ಹರಣಮಂ ಪಸರಿಸಿ ಕೊಳುತ್ತಾಗಳೆ ಪೊರಮಟ್ಟು ಒಡನೆಯೆ ಪರಿಚಾರಕರ್ಗರುಪುತ್ತಂ ಕೂಡಿಕೊಂಡು ಮಧ್ಯರಾತ್ರಿಯೊಳು ಚೋದ್ಯಂಬಡುತೆ ಶಿವನಿಳಯಕ್ಕೆ ಬಂದು, ಮುದ್ರೆಯನೊಡೆದು ಕದವಂ ತೆರೆದು ಓಹಿಲಯ್ಯನಂ ನೋಡಿ, ಸಾಮರ್ಥ್ಯದ ಸಸಿಯೆ, ಭಕ್ತಿಭರಿತನೆ, ಮುಕ್ತಿಚರಿತನೆ, ಪೋಗ್ಯೆ ಒಳಯಿಂಕೆ ಪೋಗೆಂದೊಳಪೊಗಿಸಿ, ಮತ್ತೆ ಕದವಿಕ್ಕಿ ಬೀಯಗಂಗೊಳಿಸಿ ಮುದ್ರೆಯಿಟ್ಟಂತಪ್ಪ ಕಾರಣಿಕಂ ಕಂತುಹರನ ಕೂಡೆಂತಿಪ್ಪನೋ ಎಂದು ತಮತಮಗೆ ಗವಾಕ್ಷದೊಳೆಲ್ಲಂ ಕಣ್ನೊಡನೆ ಮನವಿಟ್ಟು ನೋಡುತ್ತಿರಲೊಳಪೊಕ್ಕೋಹಿಲದೇವಂ ಜೀವಂ ಬಂದಂತೆ, ಕಣ್ಬಡೆದಂತೆ ಪರಿತಂದು, ಸೋಮನಾಥನಂ ತೆಗೆದಪ್ಪಿ, ಅಮರ್ದಪ್ಪಿ, ಮೈಯೊಳಪ್ಪಿ, ಕಣ್ಣೊಳಪ್ಪಿ, ಮನದೊಳಪ್ಪಿ, ಚಿತ್ತದೊಳಪ್ಪಿ ತಣಿವಿಡಿದು, ಸುಖಂ ಬಡೆದು ಕಂಡು ಕಂಡು ಶಿವಮರುಳ್ಗೊಂಡಾಲಿಂಗನಮಂ ಸಡಿಲ್ಚಿ ಪುಟಂ ನೆಗೆದಡ್ಡಂಗೆಡೆದು, ಹೊಮ್ಮಿ ಹೊರಳ್ದು, ಝುಮ್ಮನೆ ಬೆಮರ್ತು, ಜೋಮ್ಮಿಟ್ಟು ಜೋಲ್ದು, ಕೊರ್ಬಿ ಕೊನರ್ದು, ಉರುಳ್ದಬ್ಬರಿಸುತ್ತಿರ್ಪ ನಿಜಭಕ್ತನಪ್ಪೋಹಿಲಯ್ಯನಂ ಶ್ರೀಹಸ್ತದಿಂ ಸೋಮನಾಥಂ ಬರತೆಗೆದು ಮುಂದಿರಿಸಿಕೊಂಡು ಸವಿನುಡಿಗಳಿಂ ಸಂತವಿಡುತ್ತಿರೆ ಪೂಜಾರಿಗಳು ಕಂಡು ಸೋಜಿಗಂಬಡುತ್ತೆ ಬೆರಗಾಗಿ ನೋಡಲಮ್ಮದೆ ಪೊಮಡುತ್ತಿರಲಾದಿತ್ಯೋದಯವಾಗಲ್,

ಎಂದಿನಂದದೆ ಸುಪ್ರಭಾತ ಸಮಯ ಸಮುದ್ಭೂತ ಮೃದು ಮೃದಂಗ ಭೇರೀ ಘನಧ್ವನಿಗಳುಂ ಪಟಹ ಶಂಕ ಕಹಳಾ ನಾದಂಗಳುಂ ಸಮಸ್ತ ಭಕ್ತಜನ ಭಜಿತ ಶುದ್ಧ ಸಂಕೀರ್ಣಂಗಳಂಗಾಭಿಧಾನ ಪುರಾತನರ ಗೀತರವಂಗಳುಂ ಕವಿನಿಕರವದನೋದ್ಗತ ಮೃದುತರ ಗದ್ಯ ಪದ್ಯ ಸೇವ್ಯ ಕಾವ್ಯ ನಾಟಕ ಪ್ರಸಂಗಂಗಳುಂ, ಶುದ್ಧರಸಭರಿತ ಶಿವಧರ್ಮ ಶಿವಧರ್ಮೋತ್ತರಾದಿ ಮಹಾಪುರಾಣಂಗಳುಂ,

ವಿವಿಧ ಋಷಭ ಮುಖ್ಯಚರಿತ ಋಗ್ಯಜುಸ್ಸಾಮಾದಿ ವೇದಘೋಷಂಗಳುಂ, ಪುಣ್ಯಪಾತಕಪ್ರಕರಸುಕರ ನಾನಾಸ್ತೋತ್ರಸಾಲಾಪಂಗಳುಂ, ನವರಸಪ್ರಜ್ವಲಿತ ಸಂಜನಿತ ತೂರ್ಯತ್ರಯಾರಂಭ ನರ್ತಕ ನರ್ತಕೀ ಲಾಸ್ಯಂಗಳುಂ, ಸೌರಾಷ್ಟ್ರಪತಿ ಸೋಮನಾಥನ ಶಿವಾಲಯದೊಳು ಭೋರೆಂದೋರಂತೆ ನೆಗಳೆ ಶಿವಂಗೆ ಸುಖಮಜ್ಜನಮಂ ಮಾಡಿಸಿ, ಸಕಳ ಸುಕುಮಾರತರ ಕುಸುಮಪ್ರಕರದಿಂ ಶೃಂಗಾರಂ ಮಾಡಿ, ಧೂಪದ ಸವಿಯನಿತ್ತಾರತಿಯ ಬೆಳಗನೆತ್ತಿ, ಅಮೃತಾನ್ನವನಾರೋಗಿಸಲಿತ್ತು, ರಸವೊಸರ್ವ ತಾಂಬೂಲಮಂ ಕೊಟ್ಟು ಲೋಕೋನ್ನತಾಧಿಕಾರಿ ಮುಖ್ಯರೆಲ್ಲಂ ರಂಗಮಂಟಪದೊಳು ನೆರೆದಿರೆ, ಓಹಿಲಯ್ಯಂ, ದೇವಾ, ಮಾಯೆಗಂಜಿ ಬಾಯಳಿವನಂ ಸಾವಿಗಂಜಿ ಶರಣ್ಬೊಕ್ಕನಂ ಕಾರುಣ್ಯ ಕಟಾಕ್ಷದಿಂ ನೋಡಿ ರಕ್ಷಿಸೆನ್ನನೆಂಬ ಮಗನ ಬಿನ್ನಪಮಂ ಸೋಮನಾಥಂ ಕೇಳ್ದೆಲೆ ಕಂದ, ನಿನ್ನ ಮನವಾರೆ ಪನ್ನೆರಡು ವರುಷಂ ಹೋಗಿ ಹೊರೆಯೇರಿದ ಗುಗ್ಗುಳಮಂ ತಂದೆಮಗಿಕ್ಕೆ ಸಗ್ಗದವರುಂ ಬೆರರಗಾಗೆ ಶರೀರಂ ಬೆರಸಿಕೊಂಡೊಯ್ದು ಪೋದಪೆನೆ ಹೊಂಗಿ ಹೊರೆಯೇರಿ ನೋಡಿ ನಲವೇರಿ ಹಿಗ್ಗಿ ಹರುಷಂದಳೆದೋಹಿಲಯ್ಯಂ ಸಾಹಸನಿಧಿ ಸೋಮನಾಥನಂ ಬೀಳ್ಕೊಂಡು,

ಧೂಪನಿಮಿತ್ತಂ ದ್ವೀಪಾಂತಕ್ಕೆ ಪೊರಮಡುವಾಗಳಲ್ಲಿ ಶಿಷ್ಟರುಂ ಸೇವ್ಯರುಂ ಬಲ್ಲಿದರುಂ ಪಸಾಯಿತರುಂ ಸಚಿವರುಂ ವಡ್ಡವ್ಯವಹಾರಿಗಳುಂ ಭೂಪತಿಗಳುಂ ತಂದಾರಾಧಿಸಿದ ದಂಡಿಗೆಯ ಧವಳಛತ್ರದ ಸೀಗುರಿಯ ಚಾಮರದ ಕಮನೀಯ ಕಮಂಡಲದ ಹಡಪಿಗರ ಬಾಣಸಿಗರ ಬಾಹತ್ತರನಿಯೋಗಿಗಳ ಗುಗ್ಗಳದ ಕಂಬಿಕಾರರ ಮಾಹೇಶ್ವರರ ಹೊಗಳ್ವ ಜನಂಗಳಂ ವಂದಿಗೊಡುತಂ, ತನ್ನ ಮುನ್ನಿನ ಪದವಿಯಂ ಬೇರೊಂದು ಶೈವಸಾಮ್ರಾಜ್ಯ ನೂರ್ಮಡಿಸಿ ಪುರಮಂ ಪೊರಮಟ್ಟು ಊರೂರ್ಗಳಂ ಕಳಿದು, ನಾಡಂ ಪಾಯ್ದು, ನದಿಗಳಂ ಮೀರಿ ಬೆಟ್ಟಂಗಳನೇರಿ, ಘಟ್ಟದೊಳು ನಡೆದು ಪಟ್ಟಣಂಗಳಂ ಬಿಟ್ಟು ಶಿವಕ್ಷೇತ್ರಂಗಳಂ ಕಂಡು ಪ್ರಸಾದಂಗಳಂ ಕೊಂಡು, ವಿಂಧ್ಯಂಗಳಂ ಪೊಕ್ಕು, ವ್ಯಾಳಮೃಗಂಗಳಂ ಮಿಕ್ಕು, ದೇಶಂಗಳನುತ್ತರಿಸಿ ಸಮುದ್ರಂಗಳನೊತ್ತರಿಸಿ ದ್ವೀಪಗಳಂ ಕಂಡು ರಸವೊಸರ್ವ ಧೂಪಕ್ಕೆ ಪೊಂಗಳಂ ಕೊಟ್ಟು, ಸಹಸ್ರಕಂಬಿಗಳಂ ತುಂಬಿ, ಕಾಶೆಗಳಿಂ ಬಾಸಣಿಸಿ, ಭಸಿತದಿಂ ಕಾಪಿಟ್ಟು, ನಂದಿಯುಂಡಿಗೆಯಂ ಮುದ್ರಿಸಿ, ಮರಳ್ದು ಬರುತ ಬಿಟ್ಟ ಬಿಟ್ಟೆಡೆಗಳೊಳು ಧೂಪಕ್ಕೆ ಧೂಪಾರತಿಗಂ ಕೊಟ್ಟರಡಿಗಡಿಗೆ ಮೈಯಿಕ್ಕುತಂ ತೂಗಾಡುತ್ತಂ ಕೇಳುತ್ತಂ ಬಾಳುತ್ತಂ ಬದುಕುತ್ತಂ ಪಲವೆಡೆಗೆಯ್ದು ಧೂಪದ ಬಲಂ ಭೋರೆಂದು ಬರೆ, ಸೌರಾಷ್ಟ್ರಪುರಜನಂ ಬೆರಸಲ್ಲಿಯರಸನಿದಿರ್ಗೊಳುತ್ತಮಿರೆ ಭಕ್ತರ್ ಗುಡಿಗಟ್ಟೆ ಬೌದ್ಧರ್ ಬಾಯಾರೆ ಜೈನರ್ ಜವಂಗುಂದೆ ಚಾರ್ವಾಕರ್ ಚೆಲ್ಲಿಪೋಗೆ ಪರಮಹರುಷದಿಂ ಪುರಮಂ ಪೊಕ್ಕು ಶಿವನಿಳಯಕ್ಕೆ ಬಂದು, ಶಾಶ್ವತನಂ ಸಮಸ್ತ ದೇವಕುಲಗುರುವಂ ನಿರುಪಾಧಿಕಜ್ಯೋತಿಯಂ ಪರಿಮಳರೂಪನಂ ಭುವನಪ್ರದೀಪನಂ ದಿವ್ಯರೂಪನಂ ಶುದ್ಧಜನಸಮೀಪನಂ ವ್ಯೋಮಕೇಶನಂ ಕಾಮಹರನಂ ಸೋಮನಾಥನಂ ಕಂಡು ಮೆಯ್ಯಿಕ್ಕಿ ನಿಂದು, ತಂದ ಧೂಪಮಂ ಮುದ್ರೆಸಹಿತ ಸರ್ಪಾಭರಣಂಗೊಪ್ಪಿಸಿ ಭಂಡಾರದ ಮನೆಗೆ ತೆಗೆಯವೇಳ್ದು ಮುಂದಿರ್ದ ಸಜ್ಜುಕವೆರಸಿದ ಗುಗ್ಗುಳದೊಳು ರಸಮಯವೆನಿಪ ಕೆನೆದಿರುಳ ಧೂಪಮಂ ಕೊಂಡು, ಸಕ್ಕರೆಯೊಳಂ ಜೇನುತುಪ್ಪದೊಳಂ ನವಘೃತದೊಳಂ ತೊಯ್ದು, ಸೋಮನಾಥಂಗೆ ಕುಡೆ, ಶಿವಲಿಂಗದಿಂ ಶ್ರೀಹಸ್ತಂ ಪೊರಮಟ್ಟು ಕಳೆದುಕೊಳುತಿರಲಿತ್ತಲು,

ಶಿವನಿಳಯದ ಸಕಳ ದ್ವಾರಂಗಳಂ ಮುಚ್ಚಿ ತಾ[ನು]ಂ ಸೋಮನಾಥ[ನುಂ] ಧೂಪಮುಮಲ್ಲದೊರ್ವರುಮಿಲ್ಲದಿರೆ ಪಾತ್ರೆಯಂ ತಂದು ಸಿಡಿಲಕಿಡಿಗಳಂತಿಪ್ಪ ಕೆಂಡಂಗಳಂ ಕುಪ್ಪಳಿಸಿ

ಗುಗ್ಗುಳಮಂ ಮೇಲೆ ತಂದು ಸುರಿಯೆ, ಗಳಗಳನರಳ್ದು ಛಿಮಿಛಿಮಿಸಿ ಕಾಯ್ದ ಧೂಪಂ ಸವಿಯ ಹೊಗೆಯನುಗುಳೆ ಬೀಸುವಾಗಳು ಅಮೃತರಸದ ತುಂತುರು ತೆರಳುವಂತೆ ಧೂಪವೆತ್ತೆ, ಕಂಪು ತೆರೆಮಸಗಿ ತೀಡುವಂತೆ ಪರಿಮಳದ ಮಂಜುಕವಿವಂತೆ ಶಿವನ ಮೇಲೆ ಸವಿಯ ತುಷಾರಮನೆತ್ತುವಂತೆ ಬೀಸೆ, ಧೂಪದ ಸವಿ ಸರ್ವಾಂಗಮಂ ಪುಗೆ, ಶಿವನ ಮೆಯ್ಯೆಲ್ಲಂ ಮುಖವಾಗೆ, ನಾಸಿಕಕ್ಕೆ ನಾಲಗೆ ಬಂದಂತಾಘ್ರಾಣಿಸುತ್ತಂ ಸವಿವುತ್ತಂ ಪುಳುಕಿಸುತ್ತಂ ನಚ್ಚುತ್ತಂ ಮೆಚ್ಚುತ್ತಿರಲಿಂತಿಂತು ಪೊಕ್ಕ ದ್ವೀಪಂಗಳಂ ಮರಳಿ ಪೊಗದೆ ಲೇಸಿಂಗೆ ಲೇಸನರಸಿ ತಂದಿಕ್ಕುವ ಧೂಪದ ಸೊಕ್ಕಿನ ಸೊಗಸು ಸವಿಯಂ ಸಾಲಿಡೆ, ಧೂಪಮೋಹಿಲನೆಂಬ ಪೆಸರ ಪುಣ್ಯಕೀರ್ತಿ ಸಕಲಜಗಮಂ ತೀವೆ,

ಪನ್ನಗಧರಂಗೆ ಪನ್ನೆರಡುವರುಷಂ ಗುಗ್ಗುಳಮಂ ಸಲಿಸಿ ಪಾವನಪರಿಮಳವನಿನಿತು ದಿನವಿತ್ತೆನಿನ್ನು ಶರೀರವೆರಸಿ ಪೋಪೆನೆಂಬ ಗರ್ವಬಲಮಂ ಕೂಡಿಕೊಂಡು ಸೋಮನಾಥನಲ್ಲಿಗೆ ಪರಿತಂದು, ಎಲೆ ದೇವಾ, ನಿಮ್ಮಡಿಗಳ್ ಕರುಣಿಸಿದ ಪನ್ನೆರಡುವತ್ಸರಂ ನಿರ್ಮುಕ್ತಮಾದುದಿನ್ನೆನಗೆ ಕರುಣಿಸೆಂದು ಬಿನ್ನಪಂ ಮಾಡಿದೋಹಿಲದೇವಂಗೆ ಸಕಲಜೀವಸೂತ್ರಧಾರನನವರತ ಲೀಲಾಲೋಲ ಚಿತ್ತನಪ್ಪ ಸೋಮನಾಥಂ ತಣಿವಿಲ್ಲದೆ ಭಕ್ತನ ಕೈಯೊಳಿನ್ನುಂ ಧೂಪವನಿಕ್ಕಿಸಿ ಕೊಂಬ ಸ್ನೇಹಪರಿಮಳದ ಸವಿಗೆ ಮನದ ಬಾಯೊರತು ಮುಂದಿರ್ದೋಹಿಲಯ್ಯಂಗಿಂತೆಂದಂ,

ಎಲೆ ಮಗನೆ, ನಿನಗಿನ್ನೆಮ್ಮ ಚಿಂತೆಯೇಕೆ ? ನಿನ್ನ ಮುನ್ನಿನ ರಾಜ್ಯದಿಂ ನೂರ್ಮಡಿ ಸಂಪದವಾಯಿತ್ತು; ಸುಖಿಯಾದೆ; ಸುಕುಮಾರನಾದೆ; ಅರಸಾದೆ, ಸಂತಸದಿಂ ನೀಂ ತರಿಸಿ ಎಮಗಿಕ್ಕಿದ ಧೂಪದ ಫಲಂ ಪೊಂಗೊಟ್ಟರ್ಗೆ ಪರಿದು ಪೋದುದು. ನಿನ್ನಿಂದೆಮಗಾದುದೊಂದುಂ ಇಲ್ಲಂ ಎಂದು ಬಿಟ್ಟ ಬಾಯಿ ತೊಟ್ಟೆನಲು ನುಡಿದು ಸೋಮನಾಥಂ ಸುಮ್ಮನಿರಲೋಹಿಲಯ್ಯಂ ಬಿಲ್ಲ ದನಿಗೇಳ್ಗದ ಹುಲ್ಲೆಯ ಮರಿಯಂತೆ ದೆಸೆಗೆಟ್ಟು ಕಂಗೆಟ್ಟು ಬಾಯ್ಬಿಟ್ಟು ಬೆಬ್ಬಳಿಸಿ ಪನ್ನೆರಡು ವರುಷದುಮ್ಮಳವೊಮ್ಮೆ ಕವಿದು ದುಮ್ಮಾನಂ ಕಾಹೇರಿ ಆಪತ್ತೆಡೆಗೊಂಡು ಮೈತಾರಿ, ಮನಂ ಗುಂದಿ, ಬುದ್ಧಿ ಕಾವುಳಂ ಮಸಗಿ, ಅಹಂಕಾರವರತು, ಚಿತ್ತಂ ಕೊರೆದು, ಜೀವಂ ಬೆಂದು ಹಳಿಲನೆ ಬಿರ್ದು ಕಲುನೆಲದೊಳು ಪೊರಳ್ದು, ಕಂಬಮಂ ಪಾಯ್ದು, ಕೆಯ್ಯೆತ್ತಿ ಮೊರೆಯಿಟ್ಟು ಬಾಯ್ಬತ್ತೆ ಶಿವದಿಟ್ಟು, ದೇವದೇವಾ, ನೀನಿಂತೆಂದಡಾನೆಂತು ಜೀವಿಪೆಂ ? ಎನ್ನಂ ಹುಟ್ಟಿಸುವಲ್ಲಿಯುಂ ರಾಜ್ಯದೊಳಿರಿಸುವಲ್ಲಿಯುಂ ವಿರಕ್ತಿಯುಂ ಕೊಂಡೆದ್ದು ಬರಿಸುವಲ್ಲಿಯುಂ, ಸಕಳ ಸುಖಮನೀವಲ್ಲಿಯುಂ ಭವನುಂ ಮೃಡನುಂ ಪ್ರೇರಕನುಂ ಗಿರಿಶನುಂ ಯಂತ್ರವಾಹಕನುಮಾಗಿ ಮಾಡಿಸಿದಂ ನೀನೆ; ಮತ್ತಿದೆಲ್ಲವನಲ್ಲೆಂಬನುಂ ನೀನೆ. ಎನ್ನ ಮೇಲೆಳ್ಳನಿತು ತಪ್ಪಿಲ ಯಂತ್ರವಪ್ಪುದು ವಾಹಕನಿಚ್ಛೆ, ಎನ್ನೊಳಿರ್ದು ನಡೆಯಿಸುವ ನೀನಿರಲಾನೊಂದು ರೂಹುಂಟೆ ? ದೇವದೇವಾ, ಎನ್ನೊಡನಿನಿತೇಕೆ ? ಒದೆದಡಂ ನೂಂಕಿದಡಂ ಬಿದಿರ್ದಡಂ ಬಡಿದಡಂ ಕೊಂದಡಂ ಸೀಳ್ದಡಂ ಹೋಳ್ದಡಂ ಬಿಡೆಂ ಬಿಡೆಂ ಅಭವಾ ಶಂಭುವೆ ಗುರುವೆ ಗತಿಯೆ ಮತಿಯೆ ಎಂದು ತನುವೊಡೆಯಲೊಟ್ಟಿ ಒರಲ್ದು ತನ್ನ ಕಾಲಂ ಪತ್ತಿ ಕಣ್ಣೊಳ್ ಹರಣಂ ಕೆಯ್ಯೊಳ್ ಕಾಯಮಾಗಿರ್ದೋಹಿಲಯ್ಯನಂ ಪ್ರಾಣನಾಥನಪ್ಪ ಸೋಮನಾಥಂ ಕಾರುಣ್ಯದೃಷ್ಟಿಯಿಂ ಕರುಣಿಸಿ ನೋಡಿ ಕಣ್ಣನೀರಂ ತೊಡೆದು,

ಮನದ ತಾಪವನಾರಿಸುತ್ತಂ ಅಂಜದಿರಂಜದಿರು ಮಗನೆ, ನಿನಗಿನ್ನೊಂದು ಹಿತೋಪದೇಶಮಂ ಕೊಟ್ಟಪೆಂ. ಸಕಳ ಜಗವೆಲ್ಲೆನ್ನ ಸೊಮ್ಮಾದಡಂ ಪರರಂ ಪ್ರೇರಿಸಿದ ಪರಸೊಮ್ಮಂ ಕೊಳ್ಳದಾರ್ಗಂ ವಿರೋಧವಿಲ್ಲದೆನ್ನ ಸೊಮ್ಮನೆನಗಿತ್ತು ಪ್ರಸಾದಮಂ ಕೊಳ್ಳುತಂ ಬಪ್ಪ ಪರಿಯಂ

ಕೇಳ್ಮಗನೆ, ಕಟ್ಟಿಸಿದ ಕೆರೆ, ಇಟ್ಟಾರವೆ, ಬಿತ್ತಿದ ಬೆಳೆ, ಮಾಡಿದ ಮನೆ, ಪರರ ವಸ್ತು, ನೀರಂ ಕುಡಿಯದೆ ನೆಳಲೊಳಿರದೆ ಫಲವನುಣ್ಣದೆ ಮರೆದು ಪಟ್ಟಿರದೆ ಪರಿವ ತೊರೆಯ ನೀರ್ಗುಡಿವುತಂ ಕಾಡ ಮರಗಳೆ ನೆಳಲೊಳಿರ್ದು ಫಲಂಗೊಳುತ್ತಂ ಹೊಡೆಹುಲ್ಲ ಭತ್ತವನುಣುತ್ತಂ ಮೆಳೆ ಗುಹೆಗಳ ತಳದೊಳು ಪಟ್ಟಿರುತಂ ಪೋಗಿ ಎಲ್ಲರ್ಗೆ ಸಮವಪ್ಪ ವಸುಧಾತಳಂಗಳ ಪೊಂಗಳಂ ಕೊಂಡು ದ್ವೀಪಕ್ಕೆ ನಡೆದು ಧೂಪಕ್ಕೆ ಕೊಟ್ಟು ನಾನಾ ವಿಧದಿಂ ಹೊತ್ತು ಹೊತ್ತೀ ತೆರದಿಂದಿನ್ನೊಮ್ಮೆ ಪನ್ನೆರಡು ವತ್ಸರಂ ಹಿಗ್ಗಿ ಹೊರೆಯೇರಿ ಗುಗ್ಗುಳಮನೆಮಗಿಕ್ಕಿ ಬಳಿಕ್ಕಂ ನಿನ್ನ ಮನೋರಥಮಂ ಮಾಳ್ಪೆವೆಂದು ಭಕ್ತಜನವಿನೋದಸಂತುಷ್ಟಂ ಶರಣಕುಲ ಗೀತಾರಸಾವಗಾಹಚಿತ್ತಂ ಭೃತ್ಯಸಂಕುಳಪ್ರೇಮಂ ವಾಕ್ಯಕುಸುಮಕರ್ಣಾವತಂಸಂ ನತನಿಕರಗೋಷ್ಠೀ ಸುಲಭಂ ಶರಣಪರಿ ಸ್ತೋಮಸನ್ನಿಹಿತಂ ದೇವರದೇವಂ ದೇವಕುಲಮೌಳಿನ್ಯಸ್ತ ಪಾದಂ ಸಕಳ ದೇವಸಾರ್ವಭೌಮಂ ಸೋಮನಾಥಂ ಬೆಸಸುತ್ತಮಿರೆಯಿರೆ,

## ಸ್ಥಲ ೩

ಶಿವಭಕ್ತಂ ಭಕ್ತಿರೂಪಂ ಕಲಿಭಲಿಯಚಲಂ ಸ್ನೇಹದಿಂದೋಹಿಲಯ್ಯಂ
ಶಿವನೊಳ್ ನಿರ್ಲೇಪಮಪ್ಪೊಂದನುಪಮಹಿತಮಂ ಬುದ್ಧಿಗಲ್ತೋಜೆಯಿಂದಂ
ಭವನಂ ಭಾಳಾಕ್ಷನಂ ಭರ್ಗನನಘಹರನಂ ಭೀಮನಂ ಭಕ್ತವೃಂದೋ
ತ್ಸವನಂ ಶ್ರೀ ಸೋಮನಾಥ ಪ್ರಭುವನಮಮ ಬೀಳ್ಕೊಂಡನಾನಂದದಿಂದಂ ॥

ಇಂತು ಬೀಳ್ಕೊಂಡು ಬಂದೋಹಿಲಯ್ಯಂ ನಿಂದು
ಕಂತುಮದಹರಣಂಗೆ ಮತ್ತೆ ಪೊಡಮಡುತಂದು
ಭಸಿತಮಂ ಕಾಯದೊಳಗುದ್ಧೂಳನಂ ಮಾಡಿ
ಎಸೆವ ರುದ್ರಾಕ್ಷಿಗಳನವಯವದೊಳೊಡಗೂಡಿ
ಹೊಸ ಸಪುರವಸ್ತ್ರದಿಂ ಕೌಪೀನನಾಗುತಂ
ಮಿಸುಪ ಪಟ್ಟೆಗಳನೆರಡುಟ್ಟು ಪೊದೆದೊಪ್ಪುತಂ
ಕಾವಡಿಯ ಕಂಬಿಯೊಳು ಘನಪಾತ್ರೆಗಳನಿರಿಸಿ
ಕಾವಿಗಳ ಸಪುರವಸ್ತ್ರಂಗಳಿಂ ಬಾಸಣಿಸಿ
ದೇವಲೋಕಕ್ಕಿದೆ ಪರಸ್ಥಾನವೆಂಬಂತೆ
ದೇವಶಿವಭಕ್ತಿಯಂ ಹೆಗಲೊಳಾಂತಪ್ಪಂತೆ
ಎತ್ತಿದಂ ಪರಿಮಳದ ಕಂಬಿಯಂ ನೂತನಂ
ಮುತ್ತಿದಂ ಕರಣಂಗಳಿಂ ಸೋಮನಾಥನಂ
ನಡೆವುತೊಂದಡಿಯನಿಟ್ಟಗಲಲಾರದೆ ತಿರುಗಿ
ಮೃಡನೆ ಎನ್ನಯ್ಯ ಎನ್ನರಸ ಎನುತಂ ಮರುಗಿ
ಕಂಬಿಸಹಿತಂ ಬಂದು ಬಿಗಿಯಪ್ಪಿಕೊಂಡಿರ್ದು
ಶಂಭುವೇ ಶಂಕರನೆ ಶಿವಶಿವಾ ಎನುತೆರ್ದು

  ಬರುತೆ ಪೂಜಾರಿಗಳನೆಂದನೋಹಿಲದೇವ
ಎರಡಿಲ್ಲದೇಕನಿಷ್ಠೆಯ ಶಿವನ ಸದ್ಭಾವ
ಅಭವಂಗೆ ಧೂಪಮಂ ಕೊರತೆಮಾಡಲುವೇಡ
ವಿಭವದಿಂ ಬೇಳ್ಪನಿತನೀವುದಂಜಲುವೇಡ
ಬಡವು ಮಾಡದಿರಿ ಶಿವನಂ ಸೋಮನಾಥನಂ
ಮೃಡನಂ ಮಹೇಶನಂ ಸುರನಾಥ ನಾಥನಂ
ಎಂದೆನುತವೆಲ್ಲರೊಳು ನಂಬುಗೆಗಳಂ ಪಡೆದು
ನಿಂದವರ ಕೈಗಳಂ ಬೇಡಿಕೊಳುತಂ ನಡೆದು
ಅಂದಲ್ಲಿ ಬೀಳ್ಕೊಂಡು ಪೊರಮಟ್ಟು ಬರತಿರಲು
ಹಿಂದೆ ಪರಿ ಜನವೆಲ್ಲ ಮುನ್ನಿನಂದದೆ ಬರಲು
ನೋಡಿ ಬೆರಗಾಗುತಂ ಓಹಿಲಯ್ಯಂ ನಿಂದು
ಬೇಡ ಬೇಡೈ ಜನಂಗಳಿರ ಬೇಡೆನುತಂದು
ಮುನ್ನಿನಂತಲ್ಲ ಜನಮಂ ಶಿವಂ ಸೈರಿಸಂ
ಪನ್ನಗಧರಂ ಪುರುಡಿಗಂ ಬೇರೆ ಹೊದ್ದಿಸಂ
ಮನದೊಳಗೆ ಹೊರೆಯಾದಡೊಳಗಾಗಲೊಲ್ಲನೆನೆ
ಮನುಜರ್ಪಲಂಬರಿರೆ ಸಂದಣಿಯ ಸೈರಿಪನೆ
ಎಂದಲ್ಲಿ ಹೋಗಲೊಲ್ಲದೆ ಮನುಜರಂ ಕಳುಪಿ
ಬಂದನಂದಮ್ಮಮ್ಮ ಭಕ್ತಿಭಾವಕ್ಕಳಿಪಿ

  ಬರೆ ಶಿವಂ ಪ್ರಚ್ಛನ್ನವೇಷದಿಂದೊಡನೊಡನೆ
ಬರುತವಿರ್ದಂ ನೇಹದಿಂ ಪುತ್ರನೊಡನೊಡನೆ
ಇಂತು ಬರೆ ಬಂದನೋಹಿಲದೇವನೊಲುಮೆಯಿಂ
ಸಂತಸದಿ ಧೂಪವಿಕ್ಕುವ ಚಿತ್ತದಳ್ತಿಯಿಂ
ಪಾದಕ್ಕೆ ರಕ್ಷೆ ನಡೆವುದೆ ರಕ್ಷೆಯಾಗುತಿರೆ
ಸಾದರಂ ಮಿಗೆ ಬಂದನಭವನಲ್ಲಾಡುತಿರೆ
ಎಲ್ಲಿಯುಂ ನಿಲ್ಲನಾರೊಡನೆಯುಂ ನುಡಿಯಿಲ್ಲ
ತಲ್ಲಣಿಸನಂಜನೊಂದುಂ ಭಯಂ ತನಗಿಲ್ಲ
ಕಲ್ಲೊಳಂ ಹರಲೊಳಂ ಮುಳ್ಳೊಳಂ ನಡೆನಡೆದು
ಅಲ್ಲಲ್ಲಿ ಊರೂರ್ಗಳಂ ದಾಂಟುತಂ ನಡೆದು
ಬಿಸಿಲನರಿಯದೆ ಗಾಳಿಗೋಸರಿಸದೈತಂದು
ಹಸಿವನರಿಯದೆ ನಿದ್ರೆಯರಿಯದಿಂತೈತಂದು
ಪಗಲೆನ್ನದಿರುಳೆನ್ನದಳ್ಕರಿಂದಂ ನಡೆದು
ಮೃಗವೆನ್ನದಡವಿಯೆನ್ನದೆ ನಿಷ್ಠೆಯಿಂ ನಡೆದು

ದೇಶಂಗಳಂ ಕಳಿಯಲೆರಡುಪಾಸಂ ಪತ್ತಿ
ಅಸುರದ ಹೇರಡವಿಯಂ ಹೊಕ್ಕ ನಲವೆತ್ತಿ
ಬಂದೊಂದು ಕಾಡಮರನಡಿಯಲೊಯ್ಯನೆ ನಿಂದು
ಸಂದ ಕಾವಡಿಯನಿಳಿಪುತ್ತ ಭರದಿಂ ಬಂದು
ಆರ ಹಂಗಿಲ್ಲದೆ ನಡೆಯವೇಳ್ದನುನ್ನತಂ
ಸೀರೆ ಕೌಪುಗಳಿವೇಕೆಂದಲ್ಲಿ ಬಿಸುಡುತಂ
ನಾರಸೀರೆಯನುಟ್ಟು ಹೊದೆದನಾನಂದದಿಂ
ಮಾರಾರಿ ಮೆಚ್ಚಿಯೊಡನೊಡನೆ ಬರೆ ಹರುಷದಿಂ

ಹರಿವ ನದಿಯುದಕಮಂ ಶಂಕರಂಗರ್ಪಿಸುತೆ
ತರು ಫಲಂಗಳನಾಗಳೊಮ್ಮೊಮ್ಮೆಯರ್ಪಿಸುತೆ
ನೆಳಲ ತಂಪಿನೊಳಿರ್ದು ಸೋಮನಾಥಂಗೆನುತೆ
ಸುಳಿವೆಲರನೆಮ್ಮ ಸೋಮಯ್ಯದೇವಂಗೆನುತೆ
ಕಂಪು ತೀಡಿದಡೆ ಸೌರಾಷ್ಟ್ರಪತಿಗೆಂದೆನುತೆ
ಹೆಂಪುಳ್ಳ ಕೊಳನಿರಲು ಸೋಮನಾಥಂಗೆನುತೆ
ಜಳಜಂಗಳಿರೆ ಚೆನ್ನ ಸೊಡ್ಡಳಂಗೆಂದೆನುತೆ
ಫಲವಿರಲು ಸೋಮಯ್ಯತಂದೆಗರ್ಪಿತವೆನುತೆ
ಹೊಡೆಹುಲ್ಲೊಳಾದ ಪ್ರಸಾದಮಂ ಕೈಕೊಂಡು
ತಡಿವಿಡಿದು ನದಿಯ ಲಿಂಗೋದಕವನೊಳಕೊಂಡು
ಹೊಸಪಣ್ಗಳಂ ಶಿವಂಗರ್ಪಿಸುತೆ ಸವಿಸವಿದು
ಹಸಲೆಯೆಳಹುಲ್ಲ ನುಂಪುಗಳನರ್ಪಿಸುತಂದು
ಕಂಬಿಯಂ ಕೊಂಡೆದ್ದು ನಡೆನಡೆದು ಪರಿತಂದು
ಶಂಭು ಶರಣೆನುತಡವಿಯೊಳಗೊರ್ವನೇ ನಡೆದು
ಹರಣನಂ ಆವು ಮರಿಹುಲ್ಲೆಗಳ ನೋಡುತಂ
ಕರಡಿ ಕಾಳ್ಪಂದಿ ಕಾಡಾನೆಯಂ ನೋಡುತಂ
ಪೆರ್ಬಾವುಗಳ್ ಪರ್ಬಿದಡವಿಯಂ ನೋಡುತಂ
ಮರ್ಬುರ್ ಕರ್ಬರಿಸಿ ಕರಿದೆಡೆಗಳಂ ನೋಡುತಂ
ಗಗನಕ್ಕೆ ನೆಗೆವ ಸಿಂಹಂಗಳಂ ನೋಡುತಂ
ಜಗಕೆ ಹೊಸತೆನಿಪ ಭೇರುಂಡನಂ ಕಾಣುತಂ
ಪುರುಷಮೃಗಮಂ ಕಂಡು ಪೊಡವಂಟು ನಡೆವುತಂ
ಶರಭಂಗಳಂ ಕಂಡು ಮೆಯ್ಯಿಕ್ಕಿ ನಡೆವುತಂ
ತರುಗಳಂ ನದಿಗಳಂ ದಾಂಟುತಂ ಬರವರಲು
ಗಿರಿಗಳಂ ಗುಹೆಗಳಂ ಮೀರುತಂ ಬರವರಲು

ಧೂಪದ ದ್ವೀಪವಲ್ಲಿಗೆ ಸಾರೆಯಾಗುತಿರೆ
ಕಾಪಾಲಿ ಕೊಟ್ಟ ನೆನಹೆಚ್ಚರಂ ತೋರುತಿರೆ

ಭೂಮಿ ನೀಂ ಕಳಶ ವಸುಮತಿ ಹೊನ್ನನೀಯವ್ವ
ಸೋಮನಾಥನ ಗುಗ್ಗುಳಕ್ಕೆ ಬೆಸಕೈಯವ್ವ
ಎನೆ ದರುವಿನೊಳಗೊಂದು ಕೊಪ್ಪರಿಗೆ ಹೊನ್ನಿರಲು
ಮನವಾರೆ ಪಾತ್ರೆಯೊಳು ತೀವಿದಂ ಮೆರೆದಿರಲು
ಕೊಂಡುಬಂದಂ ಧೂಪವಿದ್ದೆಡೆಗೆ ಪೊಂಗಳಂ
ತಂಡತಂಡದೆ ಹರುಷದಿಂ ಕೊಟ್ಟು ಹೊಂಗಳಂ
ಪಾತ್ರೆಗಳೊಳಕ್ಕರಿಂ ಧೂಪಮಂ ತೀವುತಂ
ನೇತ್ರತ್ರಯನ ಸುತಂ ಬಾಸಣಿಸಿ ಓವುತಂ
ಕಟ್ಟಿ ಮುದ್ರಿಸಿ ಕಂಬಿಗಿಂಬಿನಿಂ ಪೊಡಮಟ್ಟು
ನಿಟ್ಟೆ ನೆಲೆಗೊಂಡು ಘನಪುಳಕಮಂ ಮುಂತಿಟ್ಟು
ಸರಿಭಾರಮಂ ನೋಡಿ ತೂಗಿ ತೂಕವನರಿದು
ಅರಳ್ದು ಮುಂಗಯ್ಯಾಂತು ಬಾಗಿ ಭಾರವನರಿದು
ಬಾಳ್ಗೆನ್ನ ಸೌರಾಷ್ಟ್ರಪತಿಯೆನುತೆತ್ತಿದಂ
ಬಾಳ್ಗೆನ್ನ ಸೋಮಯ್ಯತಂದೆಯೆನುತೆತ್ತಿದಂ
ಧೂಪಮಂ ಹೊತ್ತು ಜನನದ ಹೊರೆಯನಿಳಿಪುತಂ
ಧೂಪಮಂ ಹೆಗಲನೇರಿಸಿ ಸಾವನಿಳಿಪುತಂ
ನಡೆದು ಬಂದಂ ತಿರುಗಿ ನವಧೂಪಮಂ ಹೊತ್ತು
ಮೃಡನ ಪರಿಮಳದ ಗುಗ್ಗುಳಭಾರಮಂ ಪೊತ್ತು

ಧೂಪದೊಂದೊಂದಡಿಯನಿಳೆ ತಾಳಲಾರದಿರೆ
ಧೂಪಮಂ ಹೊತ್ತಡಿಯನಿಟ್ಟನೊಪ್ಪುತ್ತಮಿರೆ
ಒಂದಡಿಯನಿಡೆ ನಿಜಪದಕ್ಕಿಂದ್ರನಂಜಿದಂ
ಮುಂದಡಿಯನಿಡಲಿಂದ್ರನುಳಿದನಜನಂಜಿದಂ
ಮೂರನೆಯ ಪದದೊಳಜನುಳಿದ ಹರಿಯಂಜಿದಂ
ಮೀರಿ ನಾಲ್ಕರೊಳು ಹರಿಯುಳಿದ ಶಿವನಂಜಿದಂ
ಐದನೆಯ ಪದಕೈದುಮುಖವನಿತು ಮಿಗಿಲಿಲ್ಲ
ಐದೆ ನಡದಡೆ ಕೊಡುವ ಪದವಿಗಳ ಹೆಸರಿಲ್ಲ
ಎಂದೊಡನೆ ಸೋಮನಾಥಂ ಚಿಂತಿಸುತ್ತ ಬರೆ
ಒಂದು ಪದಕೊಂದೊಂದು ಪದವಿಗಳ್ ತೀರುತಿರೆ
ಪದದೊಳಗೆ ಮಗ್ಗಿದ ಪ್ರಾಣಿ ಸಂತತಿ ಕೂಡೆ

ಪದವಿಯಂ ಪಡೆದು ಸ್ವರ್ಗಕ್ಕೆ ನಡೆದವು ಕೂಡೆ
ನೋಡಿದ ಮರಂಗಳುಂ ಸೋಂಕಿದ ಮರಂಗಳುಂ
ಕೂಡೆ ಭವವಂ ನೀಗುವವು ಪರ್ವತಂಗಳುಂ
ಬದುಕುತಿರೆ ನಡೆತಂದನಪ್ರತಿಮನಮ್ಮಮ್ಮ
ಮುದದಿಂದಲೋಹಿಲಯ್ಯಂ ಧೀರನಮ್ಮಮ್ಮ
ಕಂಬಿ ಹೆಗಲೊಳಗಾಳೆ ಕುಸಿದು ಕಾಯಂ ತಗ್ಗೆ
ಸಂಬಳಿಗೆದೆಗೆದು ಹೆಗಲೆಲುವುಗಳ್ ನೆರೆ ನುಗ್ಗೆ
ಪಲವುಪಾಸಂ ಪತ್ತಿ ಕೆಲವು ಪಾರಣೆಯಾಗಿ
ಬಲವಳಿದು ಡೆಂಡಣಿಸಿ ಹಜ್ಜೆ ಹುಣ್ಣಂತಾಗಿ
ಅಂಗಾಲೊಳುಬ್ಬೆದ್ದ ಬೊಕ್ಕೆ ನೆತ್ತರನುಗುಳೆ
ಅಂಗದೊಳಗುಳ್ಳ ಸರ್ವತ್ರಾಣಮಂ ಜಗುಳೆ
ಅನುಗೆಡುತ್ತವಯವಂಗಳ್ ಸಡಿಲವಾದಡಂ
ತನು ಜರ್ಝರಂಬೋಗಿ ಜವವಳಿದು ನಿಂದಡಂ
ಮನವೆ ಕೈಕಾಲಾಗಿ ನಡೆವುತಿರ್ದಂ ನೋಡ
ನೆನಹು ಜೀವವದಾಗಿ ನಡೆವುತಿರ್ದಂ ನೋಡ
ಲೆಕ್ಕಿಸಂ ಕೈಕೊಳ್ಳನಕ್ಕರಿಂದಂ ನಡೆದು
ಮಿಕ್ಕ ನೇಹದ ನೆಳಲ ತಂಪಿಂದೆ ನಡೆನಡೆದು
ಬೆಟ್ಟಂಗಳೊಳು ನಡೆದು ನಡೆಯಲಾರದೆ ನಿಂದು
ಘಟ್ಟಂಗಳೊಳಗೆಡಹಿ ದಡದಡಿಸುತಂ ನಿಂದು
ಬೀಳ ಬೀಳಲು ಶಿವಂ ಕೈಗೊಟ್ಟು ನೆಗಪುತಂ
ಜಾಳಿಸಲು ಕಂಬಿಯಂ ಕೈಗೊಟ್ಟು ನೆಗಪುತಂ
ಕಾಣಬಾರದ ತೆರದಿ ಕೈಗೊಟ್ಟು ನಡೆಯಿಪಂ
ಕೇಣವಿಲ್ಲದೆ ಶರಣನೊಡನೊಡನೆ ಸೊಗಯಿಪಂ
ಕಡು ಬಳಲೆ ಕಂಬಿಯಂ ತಾನೆತ್ತಿ ನಡೆಯಿಪಂ
ನಡೆಯಲಾರದಡೆತ್ತಿಕೊಂಡೊಯ್ದು ನಡೆಯಿಪಂ
ಬಡವಾಗೆ ಬಡವಪ್ಪನೆಡಹೆ ತಾನೆಡಹುವಂ
ದಡದಡಿಸುವಾಗಲೊಡನೊಡನೆ ದಡದಡಿಸುವಂ
ಕೈವಿಟ್ಟು ಬೀಳ್ವುದಂ ನೋಡಿ ನಿಲ್ಲದೆ ಪಿಡಿದು
ಕೈವಿಡಿದು ಕಾನನದೊಳಾನಂದದಿಂ ನಡೆದು

ಇಂತು ನಿಜಭಕ್ತನೆಂತೆಂತಾದನಂತಾಗಿ
ಕಂತುಮದಮರ್ದನಂ ಬರುತಮಿರೆ ಸೈತಾಗಿ
ಬಂದನೋಹಿಲದೇವ ನಟ್ಟಡವಿಯಂ ಕಳಿದು

ನಿಂದ ದೇಶಂ ಮಹಾವಿಂಧ್ಯಂಗಳಂ ಕಳಿದು
ಬರುಬರಲು ಸೌರಾಷ್ಟ್ರವಲ್ಲಿ ಹತ್ತಿರಯಾಗೆ
ಪುರಜನಂ ದೂರದಿಂ ಕಂಡು ಕೌತುಕವಾಗೆ
ಭೇರಿ ನಿಸ್ಸಾಳ ಮುರಜಂಗಳಿಂದಿದಿರ್ಗೊಂಡು
ರನ್ನಗನ್ನಡಿ ಸಕಳ ಕಳಸದಿಂದಿರ್ಗೊಂಡು
ರನ್ನಗನ್ನಡಿ ಸಕಳ ಕಳಸದಿಂದಿರ್ಗೊಂಡು
ಉನ್ನತ ಸುವಾಸಿನೀ ಜನದಿಂದಲಿದಿರ್ಗೊಂಡು
ಬರಲಂದು ಪುರವನಾನಂದದಿಂದಂ ಪೊಕ್ಕು
ತರತರದ ಪುಳಕಂಗಳೇಳೆ ಹರುಷಂ ಮಿಕ್ಕು
ನಡೆತಂದು ಶಿವನಿಳಯದೊಳಗೆ ಕಂಬಿಯನಿಳಿಪಿ
ಕಡು ಮೋಹದಿಂದೆ ಸೈಗೆಡೆದು ದುಃಖವನಿಳಿಪಿ
ಎದ್ದು ಬಂದಪ್ಪಿಕೊಂಡೆಯ್ದಿಸದೆ ಮತ್ತಪ್ಪಿ
ಅದ್ದಂತೆ ಲಿಂಗದೊಳು ಪೊಗುವಂತೆ ಬಿಗಿದಪ್ಪಿ
ಏನಯ್ಯ ಸೌರಾಷ್ಟ್ರಪತಿಯೆ ಬಡವಾದಯ್ಯ
ಆನಿಂತು ತಳುವಿರ್ದಡುಮ್ಮಳಿಸುತಿರ್ದಯ್ಯ
ಎನ್ನಯ್ಯ ಎನ್ನರಸ ಎನ್ನ ಸಮಸುಖನಿಧಿಯೆ
ಎನ್ನ ಪರಮಸ್ನೇಹರಸಪೂರಿತಾಂಬುಧಿಯೆ
ಎನುತ ಬಂದಲ್ಲಿ ಕಂಬಿಯ ಮುದ್ರೆಯಂ ತೋರಿ
ಮನಸಿಜಾರಿಯ ಮುಂದೆ ಇಟ್ಟು ಸಂತಸವೇರಿ
ರಸವೊಸರ್ವ ತಿರುಳಧೂಪವನೆತ್ತಿಕೊಂಡಲ್ಲಿ
ಹೊಸಘೃತಂ ಮಧುಮಧುರರಸದಿಂದೆ ತೊಯ್ದಲ್ಲಿ
ಸೋಮನಾಥಂಗಿತ್ತು ತೊನೆದಾಡಿ ತೂಗಾಡಿ
ಕಾಮಾರಿಗಿತ್ತಿತ್ತು ಕುಣಿದಾಡಿ ಮಣಿದಾಡಿ
ಪಾತ್ರೆಯೊಳು ಕೆಂಡಮಂ ಸುರಿದು ಧೂಪವನಿಕ್ಕಿ
ನೇತ್ರದಿಂದಾನಂದಜಲವೊಸರೆ ಮೈಯಿಕ್ಕಿ
ಎಲ್ಲಾ ಕದಂ ಗವಾಕ್ಷಂಗಳಂ ಮುಚ್ಚುತಂ
ಸಲ್ಲೀಲೆಯಿಂ ಧೂಪವಿಕ್ಕಿ ಮೈವೆಚ್ಚುತಂ
ಸುತ್ತಿಬಂದಾಡುತಂ ನವಧೂಪಮಂ ಬೀಸಿ
ಮುತ್ತಿಕೊಂಡೊಪ್ಪುತಂ ನವಧೂಪಮಂ ಬೀಸಿ
ಪಂಚಮುಖದಿಂ ಶಿವಂ ಸವಿವುತ್ತಮಿರೆ ಬೀಸಿ
ಪಂಚಕಂಗಳೊಳಪ್ಪಿ ಮುಂಡಾಡುತಂ ಬೀಸಿ
ಸೋಮಯ್ಯ ತಂದೆ ಕೈಕೊಳ್ಳಯ್ಯ ಕೊಳ್ಳೆನುತೆ
ಸೋಮಯ್ಯದೇವ ಶರಣಾಗು ಶರಣಾಗೆನುತೆ

ಕೂಗಿಡುತ್ತಂ ಬೀಸಿ ಕುಣಿದಾಡುತಂ ಬೀಸಿ
ಬೀಗಿ ಬೆರೆವುತ ಬೀಸಿ ಆಡುತಾಡುತ ಬೀಸಿ
ಮುಟ್ಟಿ ನಾಲ್ದೆಸೆಗೆ ಹೊಗೆ ಮಸಗಿ ಬೀಸುತ್ತಮಿರೆ
ಇಟ್ಟಣಿಸಿ ಸೌರಾಷ್ಟ್ರದೇಶದೊಳು ತೀವುತಿರೆ
ಕೇರಿಕೇರಿಗಳ ನಡುವೆಲ್ಲ ಧೂಪದ ಕಂಪು
ಊರೂರ ಹೊಲಹೊಲದೊಳೆಲ್ಲ ಧೂಪದ ಕಂಪು
ಕೆರೆಯೊಳಗೆ ಕೊಳನೊಳಗೆ ಗುಗ್ಗುಳದ ಸವಿಗಂಪು
ತೊರೆಯೊಳಗೆ ವನದೊಳಗೆ ಮೆರೆವ ಧೂಪದ ಕಂಪು
ತೀವುತಿರೆ ಪನ್ನೆರಡು ವರುಷವೀ ತೆರದಿಂದೆ
ದೇವಂಗೆ ಬೀಸಿದಂ ಧೂಪಮಂ ಮುದದಿಂದೆ
ಮಾಗಿಯೊಳು ಬೇಸಗೆಯೊಳುಬ್ಬರದ ಮಳೆಗಳೊಳು
ರಾಗದಿ ವಸಂತ ಹಿಮವಂತ ಋತುಕಾಲದೊಳು
ತಂದು ತಂದೋಹಿಲಯ್ಯಂ ಧೂಪಮಂ ಬೀಸಿ
ಕುಂದದಳುಕದೆ ಸುಗಿಯದೊಲವಿಂದಲುಂ ಬೀಸಿ
ಹರುಷದಿಂ ಸೋಮನಾಥಂಗೆ ಬಿನ್ನೈಸಿದಂ
ಕರುಣಾಕರಂಗೆ ಪರಮಂಗೆ ಬಿನ್ನೈಸಿದಂ
ದೇವ ನಿಮ್ಮಡಿಗಳೆಂತೆಂತು ಬೆಸಸಿದಿರಂತೆ
ದೇವ ನೀಂ ನಡೆಯಿಸಲು ನಡೆದು ಧೂಪವನಿಂತೆ
ತಂದೆ ನಾ ಪನ್ನೆರಡುವರುಷವಾದುದು ದೇವ
ತಂದೆ ಕರುಣಿಪುದೆನಗೆ ನಿತ್ಯತೆಯನೆಲೆ ದೇವ

ಎನುತಿರ್ದನತ್ತಲಿತ್ತಲು ರಜತಗಿರಿಯೊಳಗೆ
ಮನಸಿಜಹರಂ ನಂದಿಗೆಂದನಿಂದಿಳೆಯೊಳಗೆ
ಒರ್ವ ಭಕ್ತಂ ಧೂಪವಿಕ್ಕಿದಂ ನಮಗೊಲಿದು
ಸರ್ವಮುಖದಿಂ ನಿಷ್ಠೆಯಿಂ ನೇಹದಿಂದೊಲಿದು
ಸೌರಾಷ್ಟ್ರದೊಳಗೋಹಿಲಯ್ಯನೆಂಬಂ ಕೇಳ
ತಾರಾದ್ರಿಗಾತನಂ ಕೊಂಡುಬಪ್ಪುದು ಕೇಳ
ಎನೆ ನಂದಿ ವೀರಭದ್ರಾದಿಗಳು ನಡೆತಂದು
ತನ ತನಗೆ ನಲಿವ ಗಣವೃಂದದಿಂ ನಡೆತಂದು
ಸೌರಾಷ್ಟ್ರಮಂ ಪೊಕ್ಕು ಶಿವನಿಳಯಮಂ ಕಂಡು
ಮಾರಮದಮಥನನರುಹಿದ ಕುರುಹನೆಡೆಗೊಂಡು
ಬರೆ ಶಿವಾಲಯದ ಕದವೆಲ್ಲವಿಕ್ಕಿರೆ ನೋಡಿ
ಹರಭವನಮಂ ಮುಟ್ಟಲಮ್ಮದೆ ಮನಂಗೂಡಿ

ತಿರುಗಿ ಗಣಸಮಿತಿ ಕೈಲಾಸಕ್ಕೆ ನಡೆತಂದು
ಹರನೆಯವಧಾರು ಮತ್ತೊಂದು ಬಿನ್ನಪವೆಂದು
ದೇವಾಲಯದ ಕದವನಿಕ್ಕಿಕೊಂಡಿರ್ದಪಂ
ದೇವ ಸುಖದಿಂದೆ ಧೂಪವನಿಕ್ಕುತಿರ್ದಪಂ
ದೇವ ಕದವಂ ತೆರೆಯೆ ಕೋಪಿಸುವನೆಂದಂಜಿ
ದೇವ ಧೂಪದ ಸುಖಂ ಕೆಡುವುದೆಂದಾವಂಜಿ
ಬಂದೆವೆನೆ ಶಶಿಧರಂ ನಗುತವರ ಬೆಸಸಿದಂ
ಮುಂದುವರಿವಾನಂದಜಲದಿಂದೆ ಬೆಸಸಿದಂ
ರಂಗಮಂಟಪದ ಹೂವಿನ ಕಲ್ಲನೋಸರಿಸಿ
ಲಿಂಗವಂತನನೆತ್ತಿಕೊಂಡು ಬನ್ನಿರೆ ಪರಸಿ
ಎಂದು ಬೆಸಸಿದಡನುಜ್ಞೆಯನಲ್ಲಿ ಕೈಕೊಂಡು
ನಂದೀಶ ವೀರಭದ್ರಾದಿಗಣ ನಡೆಗೊಂಡು
ಇಂದ್ರಲೋಕಕ್ಕೆ ಬೇಗದಿ ತಾನು ಹೊಗೆ ನೆಗೆದು
ಚಂದ್ರಲೋಕಕ್ಕೆ ನಗೆಪುತ್ತಮಿರೆ ಹೊಗೆ ನೆಗೆದು
ಬಂದರೊಳಪೊಕ್ಕರೆತ್ತಿದರೋಹಿಲಯ್ಯನಂ
ಸಂದ ಧೂಪದ ಪಾತ್ರೆವೆರಸು ಸದುಭಕ್ತನಂ
ನೆಗೆದು ಕೈಲಾಸಸೋಪಾನವೇರಲ್ಕಂತೆ
ನೆಗೆದು ತೆರಗೊಂಡು ಧೂಪವನಡರುತಂ ಮುಂತೆ
ಹೂಮಳೆಗಳೆರಗಿ ದುಂದುಭಿರವಂಗಳ್ ಪುಟ್ಟೆ
ಪ್ರೇಮದಿಂ ಸೌರಾಷ್ಟ್ರದೊಳಗೆ ಗುಡಿಗಳ್ ಕಟ್ಟೆ
ನೋಡಿ ಗುರ್ಜರದೇಶವೆಯ್ದೆ ಬೆರಗಾಗುತಿರೆ

ನೀಡಿ ನೆಗೆದುದು ನೆಗೆದು ಗಗನತಳವೊಪ್ಪುತಿರೆ
ಬರೆ ದೇವಲೋಕದೊಳು ಗುಗ್ಗುಳದ ಕಂಪೆಸೆಯೆ
ಸುರಗಿರಿಯ ರಜತಗಿರಿಯೊಳಗೆಲ್ಲ ಕಂಪೆಸೆಯೆ
ದೇವಿ ಕೇಳ್ದಳು ದೇವ ಈ ಕಂಪಿದೆಲ್ಲಿಯದು
ಭಾವಿಪಡೆ ಹೊಸಪರಿಮಳಂ ತಾನಿದೆಲ್ಲಿಯದು
ಕಂಪಾವುದೆನೆ ದೇವಿ ಓಹಿಲಂ ಬಂದಪಂ
ಹೆಂಪುಳ್ಳ ಹೊಸಧೂಪದೋಹಿಲಂ ಬಂದಪಂ
ಎನ್ನಣುಗನೋಹಿಲಯ್ಯಂ ಬಂದಪಂ ಗೌರಿ
ಎನ್ನ ಸುಖನಿಧಿ ಓಹಿಲಂ ಬಂದಪಂ ಗೌರಿ
ಎಂದು ಬೆಸಸುತ್ತಮಿರೆ ಬಂದನೋಹಿಲದೇವ
ಅಂದು ಗಣಕುಲದ ನಡುವೊಪ್ಪಿ ಓಹಿಲದೇವ

ಐತಂದು ಶರ್ವಂಗೆ ಶಂಕರಂಗೀಶಂಗೆ
ಸೈತಾಗಿ ಭರ್ಗಂಗೆ ಶಶಿಧರಂಗಭವಂಗೆ
ದೇವಂಗೆ ದೇವರ ಶಿಖಾಮಣಿಗೆ ಪರಮಂಗೆ
ಭಾವಗಮ್ಯಂಗೆ ನಿಜಭಕ್ತೈಕವೇದ್ಯಂಗೆ
ಮೈಯಿಕ್ಕುತಲ್ಲಿಯುಂ ಧೂಪಮಂ ಬೀಸುತಿರೆ
ಮೈಯ ಪುಳಕಂಗಳಿಮ್ಮಡಿಸಲ್ಕೆ ಬೀಸುತಿರೆ
ಸರ್ಪಾಭರಣನೊಲ್ದು ನೋಡಿ ಸಂತಸವಿಡಿದು
ಒಪ್ಪದಿಂ ತಕ್ಕಯಿಸಿ ಕಡು ನೇಹವಿಡಿದಿಡಿದು
ನೋಡ ನಂದೀಶ ರಾಜ್ಯವನೊದೆದರಿಂತುಂಟೆ
ನೋಡ ಎನ್ನಲ್ಲಿಗೊಬ್ಬನೆ ಬಂದನಿಂತುಂಟೆ
ಮಾಡಿತ್ತನಲ್ಲೆನಲು ಮತ್ತೆ ಮಾಡಿದರುಂಟೆ
ನಾಡೆ ಧೂಪಕ್ಕೆ ದೇಶಗಳ ಕಳೆದವರುಂಟೆ
ನೋವನರಿಯದೆ ಹೊತ್ತು ಹೊತ್ತು ತಂದವರುಂಟೆ
ಭೂವಳಯದೊಳಗೋಹಿಲಯ್ಯಂಗೆ ಪಡಿಯುಂಟೆ
ಎಂದೋಹಿಲಯ್ಯಂಗೆ ಗಣಪದವಿಯಂ ಕೊಟ್ಟು
ಸಂದ ಗಣಕುಲದ ನಡುವೋಹಿಲನ ಮುಂದಿಟ್ಟು
ಸುರ ಶಿರೋಮಾಲಿಯೊಪ್ಪಿದನಚಲನೊಪ್ಪಿದಂ
ಪುರಕಾಲಕಾಮಕಾನನದಾವನೊಪ್ಪಿದಂ
ತಣ್ಪಿಂಗೆ ತಣ್ಪೆನಿಪ ಚಂದ್ರಧರನೊಪ್ಪಿದಂ
ಗುಣ್ಪಿಂಗೆ ಗುಣ್ಪೆನಿಪ ಗಂಭೀರನೊಪ್ಪಿದಂ
ಹೆಂಪುಳ್ಳ ಹೆಚ್ಚುಳ್ಳ ಸುಖನಿತ್ಯನೊಪ್ಪಿದಂ
ಹಂಪೆಯ ವಿರೂಪಾಕ್ಷದೇವನಿಂತೊಪ್ಪಿದಂ ೨೬೨-೪೮೮

ಪರಮ ವಿರಕ್ತಿಯೊಳೈತಂ
ದರವರಿಸದೆ ನಿನಗೆ ಧೂಪಮಂ ತಂದಿತ್ತಾ ।
ದರದಿಂ ಸಂದೋಹಿಲದೇ
ವರ ಸುತನೆನಿಸೆನ್ನ ಹಂಪೆಯ ವಿರೂಪಾಕ್ಷ ॥

❖❖

# ೪. ಉದ್ಭಟಯ್ಯನ ರಗಳೆ

ಪಟುತನದಿಂ ಸತಿ ನುಡಿದುದ
ಘಟಿತಮನೇಘಟಿಯಿಸುವೆನೆನಲ್ಕೊಂಡೊಯ್ದಂ ।
ನಿಟಿಲಾಕ್ಷಂ ಪುರಸಹಿತು
ದ್ಭಟದೇವನನೆಮ್ಮ ಹಂಪೆಯ ವಿರೂಪಾಕ್ಷಂ ॥

ಉರ್ವಿಯೊಳೊಂದು ಪುರಂ ರಂಜಿಸುವುದು
ಶರ್ವನ ಸದ್ಭಕ್ತಿಯನುದ್ಧರಿಪುದು
ಅಲ್ಲಿರ್ಪಂ ಶಿವಭಕ್ತಿ ಸದರ್ಥಂ
ಸಲ್ಲಲಿತಂ ಶಿವನೊಳಗೇಕಾರ್ಥಂ
ಆತನ ಪೆಸರೆಸೆವುದ್ಭಟದೇವಂ
ನೂತನ ಚೇತನ ಪೂಜಾಭಾವಂ
ಬಲವಪ್ಪುದು ಕಾಲೊಳಗಿಡಿದಿಪ್ಪುದು
ನಲಿವಪ್ಪುದು ಮನದೊಳು ನಲಸಿಪ್ಪುದು
ಕರಣಂಗಳು ಶಿವನುಪಕರಣಂಗಳು
ಪರಿಚಾರಕರಿಂದ್ರಿಯವರ್ಗಂಗಳು
ಹೃದಯಸರೋಜಂ ಸೆಜ್ಜೆಯದಾಗಿರೆ
ಸದಮಳ ಮನವೇ ಕುಸುಮವದಾಗಿರೆ
ಹರಣಂ ಶಿವಲಿಮಗವೆ ತಾನಾಗಿರೆ
ಪರಿಣಾಮವೆ ಅಮೃತೋಗರವಾಗಿರೆ
ಆರಾಧಿಪನಿರುಳುಂ ಪಗಲುಂ ಸಲೆ
ಪೂರೈಸುವ ಪೂಜೆಯೊಳೀಶಂ ನಿಲೆ
ಶಿವನೊಳು ನೋಟಂ ಶಿವನೊಳು ಮಾಟಂ
ಶಿವನೊಳು ಬೇಟಂ ಶಿವನೊಳು ಕೂಟಂ
ಮಾಡಿದುದೆಲ್ಲಂ ಪೂಜಾಸೂತ್ರಂ

ಆಡಿದುದೆಲ್ಲಂ ಸಕಲಸ್ತೋತ್ರಂ
ನೆನೆಯಿತ್ತೆಲ್ಲಂ ಪರಮಧ್ಯಾನಂ
ತನುಚೇಷ್ಟೆಗಳೀಶ್ವರನುಪಮಾನಂ
ತಾನಾಗಿರೆ ಭಕ್ತಿಯ ಕರುವಾದಂ
ನಾನಾ ಸಾಮರ್ಥ್ಯದ ನಿಧಿಯಾದಂ
ತ್ರೈಕಾಲಜ್ಞಾನವನೆಡೆಗೊಂಡಂ
ಲೋಕೈಕಪ್ರಭುವಂ ಕೆಳೆಗೊಂಡಂ

ಇಂತುದ್ಭಟದೇವಂ ನೆರೆ ಮೆರೆದಿರೆ
ಶಾಂತಂ ಶಿವನಾನಂದದೊಳೊಪ್ಪಿರೆ
ತನ್ನ ಮನೋವಲ್ಲಭೆಯೆನಿಸಿರ್ಪಳು
ಉನ್ನತ ಶಿವಪೂಜಾಸುಖಿಯಪ್ಪಳು
ಮನಕವಯವವಾದಂತೆಸೆದಿಪ್ಪಳು
ತನುವೆರಡೊಂದೇ ಜೀವವೆನಿಪ್ಪಳು
ಜೀವಕಳೆಗಳಂ ರತಿಯೊಳು ತೋರ್ಪಳು
ಭಾವಜ ಬಯ್ಕೆಯ ಬೆಳಸೆನಿಸಿರ್ಪಳು
ಚುಂಬನದೊಳು ತನುವಂ ಪೆರ್ಚಿಸುವಳು
ಬಿಂಬಾಧರರಸದಿಂ ರತಿಯಿಸುವಳು
ಆಲಿಂಗನದೊಳು ಮಗ್ನತೆಯಪ್ಪಳು
ಸೋಲಮನಾ ರತಿಸುಖದೊಳಗೀವಳು
ತವಕದ ಪರಿಮಿತಮಂ ಘಟಿಯಿಸುವಳು
ನವರಸಸುಖದೊಳಗೋಲಾಡಿಸುವಳು
ತವಿಲರಿಯದ ಕೂಟಮನೊದವಿಸುವಳು
ಎವೆ ಹಳಚದ ಸಮಕಳೆಯಂ ಕೊಡುವಳು
ನೋಟದೊಳಂ ತರಿಯಂ ಹುಟ್ಟಿಸುವಳು
ಕೂಟದೊಳಂ ಬೇರ್ವರಿಯಿಸುತಿರ್ಪಳು
ಘನ ಗಾಢಾಲಿಂಗನದೊಳು ಸಲುವಳು
ಮುನಿಸಿನ ಕೂಟದ ತವಕವನೀವಳು
ಕಾಮಸುಖದ ಸುಗ್ಗಿಯ ಬೆಳೆಯಿಸುವಳು
ಕಾಮಿಸಿತಂ ಪ್ರೇಮದೊಳೊಲಿದೀವಳು

ಇಂತೆನಿಸುವ ವಲ್ಲಭೆಯುಂ ತಾನುಂ
ಸಂತತ ಸುಖದೊಳಗಿರ್ದೆತ್ತಾನುಂ

ನೆತ್ತವ ಭರದಿಂದಾಡುತ್ತಿರೆಯಿರೆ
ಮುತ್ತುವ ದಾಯಕ್ಕುತ್ಸವಿಸುತ್ತಿರೆ
ಇದ್ದಿದ್ದುದ್ಭಟದೇವಂ ನಸುನಗೆ
ಸಾರ್ದ ಶಿವೈಕಜ್ಞಾನಿಕರಂ ನಗೆ
ಸೆಡೆದಳು ಸುಯ್ದಳು ಮನದೊಳು ಮುನಿದಳೆಲು
ಬಡವಾದಳು ಮಾನಿನಿ ಮದವಳಿದಳು
ಹಾಸಂಗಿಯನಿಳಿಪುತೆ ಹೊರೆಯಳಿದಳು
ಲೇಸಾಯ್ತಾಟವೆನುತ್ತಂ ನುಡಿದಳು
ಏಕಾಯ್ತೀಗಳ ಕಾರಣ ಹಾಸ್ಯಂ
ಏಕೆನ್ನಿಂದುಂಟೇ ಅಪಹಾಸ್ಯಂ
ಏತರ ಕುಂದಂ ಕಂಡಿರಿ ನೀವೆನೆ
ಏತಕ್ಕಾದುದು ನಸುನಗೆ ನಿಮಗೆನೆ
ನಿನ್ನಯ ಕಾರಣವಲ್ಲಂಬುಜಮುಖಿ
ಎನ್ನಯ ಶರಣರ ಸರಸಂ ಶಶಿಮುಖಿ
ಸೌರಾಷ್ಟ್ರದೊಳಿರ್ದೋಹಿಲದೇವಂ
ತಾರಾದ್ರಿಗೆ ನಡೆವುತೆ ಶಿವಭಾವಂ
ಶಶಿಧರನೊಲವಿಂ ಸುಖಿಯಾಗಿರ್ದಂ
ಪಶುಪತಿಯೊಲವೊಚ್ಚತವಾಗಿರ್ದಂ
ಒರ್ಬನೆ ಪೋದಂ ದೇಶಿಕರಂದದಿ
ಶರ್ಬನ ಕರುಣಂ ಪಡೆಯದರಂದದಿ
ಘಂಟೆಯ ಮೊಳಗಾಗಿರೆ ನೆರೆ ಬಿರ್ದುದು
ನಂಟರು ನಲ್ಲರು ನೋಡುತ್ತಿರ್ದುದು
ಇದು ಕಾರಣದಿಂ ನಸುನಗುತಿರ್ದೆಂ
ಸದಮಳಭಕ್ತಂಗಾಂ ನಗುತಿರ್ದೆಂ

ಎನೆ ಕಟಕಿಯನಾಡಿದಳಾ ಕಾಮಿನಿ
ಮನದೊಳು ನಸುನಗುತೆಂದಳು ಮಾನಿನಿ
ನಗೆಯೊಪ್ಪುವುದೀ ಪುರಸಹಿತೊಯ್ದಡೆ
ನಗೆ ಸಫಲಂ ನಗುವಂದದೊಳೊಯ್ದಡೆ
ಕುಳ್ಳಿರ್ದೆಲ್ಲರನಾಡಲುಬಹುದೇ
ಒಳ್ಳಿದರಂ ಹೊಲ್ಲೆಹವೆನಬಹುದೇ
ಮಾತರಿದೇ ಮಾತಿನಲೇನಪ್ಪುದು
ಮಾತಿನ ಗುಣಮಂ ತೋರಲುವೇಳ್ವುದು

ಎಂದಡೆ ಮನದೊಳೆ ಘುಡುಘುಡಿಸುತ್ತಂ
ಇಂದುಧರನ ಶರಣಂ ನೋಡುತ್ತಂ
ಪುರಮಂ ಕೊಂಡೊಯ್ದಪೆನರಿದಾವುದು
ಧರೆ ಚಿತ್ರವೆನಲ್ಕೊಯ್ದಪೆನೇವುದು
ನಾಡಿದು ಪೋಪೆಂ ಸೋಮನ ವಾರಂ
ಮಾಡುವುದಂ ಮಾಡೆನುತಂ ಧೀರಂ
ಇರೆ ಮಾನಿನಿಯರಸನನಣಕಿಸುತಿರೆ
ಹರಭಕ್ತಂ ಕೊಂಡೊಯ್ದಪೆನೆನುತಿರೆ
ಕೊಂಡೊಯ್ವಂ ಕೊಂಡೊಯ್ವ ಪುರವಂ
ಕಂಡರಿಯೆವೆ ಕೇಳುದ್ಭಟನಿರವಂ
ಎನುತಂ ದೆಸೆಗೈಗಾವುದರತ್ತಂ
ತನಗುಳ್ಳವರಂ ನೆರೆ ಬರಿಸುತ್ತಂ
ಸಾರಿಸುತಂ ದೆಸೆದೆಸೆಗರಪುತ್ತಂ
ಮೀರಿದ ಮಾತಂ ನೆರೆ ಹರವುತ್ತಂ

ಎನಿತೆನಿತಂ ಸತಿ ಸಂಭ್ರಮಿಸುತ್ತಿರೆ
ಅನಿತನಿತಂ ಭಕ್ತಂ ಮೀರುತ್ತಿರೆ
ಸರ್ವಜನಂ ಶಿವಪುರಮಂ ತೀವಿತು
ನಿರ್ವಾಣಪದಕ್ಕೆಲ್ಲಂ ಬಯಸಿತು
ಪಾಪಿಗಳುಂ ನಿಃಪಾಪಿಗಳೆಲ್ಲಂ
ತಾಪತ್ರಯದಿಂ ಜೀವವರೆಲ್ಲಂ
ತಂಡದೊಳೆಯ್ತಂದೊಲವಿಂ ತೀವಿತು
ಕಂಡವರುಂ ಕೇಳ್ದವರುಂ ತೀವಿತು
ಇಂತು ಪುರಂ ನರರಂ ಕಾಂತತಿರೆ
ಅಂತಾ ಮಾನಿನಿ ನುಡಿದಳ್ತೀವಿರೆ
ಕೊಂಡೊಯ್ದಡೆ ಕೈಲಾಸದೊಳಿರ್ಪೆಂ
ಅಂಡಲೆವಘಕುಲಮಂ ನೀಗಿರ್ಪೆಂ
ಇಲ್ಲಾ ಭಕ್ತನನೇ ಭಂಗಿಸುವೆಂ
ಎಲ್ಲಾ ಪಿರಿಯರೊಳಂ ಪಂಗಿಸುವೆಂ
ಎರಡುಂ ಪರಿಯಿಂದೆನಗೇ ಕಾರ್ಯಂ
ಹರಭಕ್ತಂಗರಿದಘಟಿತ ಶೌರ್ಯಂ

ಎನುತದ್ಭಟನಲ್ಲಿಗೆ ನಡೆತಂದಳು
ಘನಮಹಿಮನ ಸನ್ನಿಧಿಗೈತಂದಳು
ಬಂದುದು ವಾರಂ ನಿಂದುದು ಜನವಿದೆ
ಇಂದೇ ಕೊಂಡೊಯ್ದುದು ತಳುವಿಲ್ಲದೆ
ಎನಲುದ್ಭಟದೇವಂ ನಡೆತಂದಂ
ಮನದೊಳಗೆರಡಿಲ್ಲದನೆಯ್ತಂದಂ
ಬಂದು ಶಿವಾಲಯದೊಳಗಂ ಪೊಗುತಂ
ನಿಂದುದ್ಧೂಳನದಿಂದಂ ಮಿಗುತಂ
ರುದ್ರಾಕ್ಷಿಗಳಂ ಮೇಳೈಸುತ್ತಂ
ರುದ್ರನನೊಳಗಳವಡಿಸುತೆ ಬರುತಂ
ಶಿವಲಿಂಗಕ್ಕಭಿಷೇಕಂ ಮಾಡಿಸಿ
ನವಪರಿಮಳ ಪೂಜೆಗಳಂ ಮಾಡಿಸಿ
ಧೂಪಾರತಿಗಳನೊಲವಿಂದೆತ್ತುತೆ
ಭಾಪುರೆ ಶಿವ ಎಂದಭವನನೋವುತೆ
ಆರೋಗಿಸಲಿತ್ತನುನಯದಿಂದಂ
ಧೀರಂ ತಾಂಬೂಲವನೊಲವಿಂದಂ
ಕುಡುತಂ ಸದಮಳಮತಿ ಕುಳ್ಳಿರ್ದಂ
ಕಡುಸಲುಗೆಯ ಶರಣಂ ಕುಳ್ಳಿರ್ದಂ
ಉದ್ಭಟನದ್ಭುತ ನಿಧಿ ಕುಳ್ಳಿರ್ದಂ
ಸದ್ಭಕ್ತಂ ಯುಕ್ತಂ ಕುಳ್ಳಿರ್ದಂ
ಹರನಂ ಚಿತ್ತದೊಳಿರಿಸುತ್ತಿರ್ದಂ
ಹರಲೀಲೆಯನುದ್ಯೋಗಿಸುತಿರ್ದಂ
ಸ್ವೇದಂ ಗದ್ಗದವುಣ್ಮುತ್ತಿರೆಯಿರೆ
ಸಾದರದಿಂ ಪುಳಕಂ ನೆಗೆವುತ್ತಿರೆ
ಆನಂದಜಲಂ ಕೋಡಿಗೊಳುತ್ತಿರೆ
ನಾನಾ ನೂತನ ರಸವೊಸರುತ್ತಿರೆ
ಮೃಡಮೂರ್ತಿಯ ವರ್ಣನೆಯಂ ತೊಡಗಲು
ಜೆಡೆಮುಡಿಗೊಂದುಂ ಪದ್ಯವನೆಸಗಲು

ಪುರವೆದ್ದುದು ಪುರವೆದ್ದುದು ಶಿವ ಶಿವ
ನರಲೋಕಕ್ಕದ್ಭುತವಿದು ಶಿವ ಶಿವ
ಪದ್ಯಕ್ಕಂ ನೂರುಂ ಯೋಜನವಂ
ಚೋದ್ಯಂ ನೆಗೆವುತ್ತಿರ್ಪುದು ನಭವಂ

ಪುರವಡುರುತ್ತಿರೆ ಪುರಜನವರಿಯದು
ಧರೆಯ ಜನಂ ಬೆರಗಾಗುತ್ತಿರ್ಪುದು
ಪುರವಳಯಂ ಹರುಗೋಲಂತಿರ್ದುದು
ಪುರಜನವೇರಿದ ಜನದಂತಿರ್ದುದು
ಗಗನಂ ಭವವಾರಿಧಿಯಂತಿರ್ದುದು
ಬಗೆ ಮಿಗೆ ಭರದಿಂ ನಡೆವುತ್ತಿರ್ದುದು
ದಾಂಟಿಸುವುದ್ಭಟನಂಬಿಗನಂತಿರೆ
ದಾಂಟಿ ನೆಗೆವುತಿರ್ದುದು ಬಣ್ಣಿಸುತಿರೆ
ಜೆಡೆಯಿಂ ಶ್ರೀ ಚರಣಂಬರ ಬಣ್ಣಿಸೆ
ತಡೆಯದೆ ನೂರುಂ ಪದ್ಯಂ ರಂಜಿಸೆ

ಕಾಮಾರಿಯ ಸದ್ಭಕ್ತನನರಿಯದೆ
ಕಾಮಿನಿ ನುಡಿದಳ್ ಪೋಪುದನರಿಯದೆ
ಆದುದು ಮಧ್ಯಾಹ್ನವಿದೇನುದ್ಭಟ
ಹೋದುದು ನಿನ್ನಯ ಭಾಷೆಯದುತ್ಕಟ
ಎನೆ ನಗುತಂ ಮೇಲಂ ನೋಡೆಂದೆನೆ
ದಿನಕರನೇರಿದ ಹೊತ್ತಂ ನೋಡೆನೆ
ನೋಡಿದಳಂತಾ ಕಾಮಿನಿ ಮೇಲಂ
ನೋಡಲು ರಜತಾಚಳದ ವಿಶಾಲಂ
ಶಶಿರವಿಕೋಟಿಗಳಂ ಭಂಗಿಸುತಿರೆ
ಹೊಸ ಹೊಸ ಬೆಳಗಿಂ ಘುಳುಘುಳಿಸುತ್ತಿರೆ
ನೋಡಲ್ಕಮ್ಮದೆ ಕಣ್ಣಂ ಮುಚ್ಚುತೆ
ನೋಡಿದ ಭಯದಿಂ ಮನದೊಳ್ಬೆಚ್ಚುತೆ
ಉದ್ಭಟದೇವಂಗಂ ಮೈಯಿಕ್ಕುತೆ
ಅದ್ಭುತರಸದೊಳಗಾಳುತ್ತೇಳುತೆ
ಇರೆ ನೆಗೆದುದು ನಡೆದಡರಿತು ನಭವಂ
ಸುರಗಿರಿಯಂ ಮೀರಿದುದಾ ವಿಭವಂ
ಕೈಲಾಸಪುರದ್ವಾರದ ಮುಂದಂ
ಶೈಲಜೆಯರಸನ ನಿಳಯದ ಮುಂದಂ
ನಿಂದಿರಲುದ್ಭಟದೇವಂ ಬಂದಂ
ಇಂದುಧರನ ಕಾಣ್ಕೆಗೆ ನಡೆತಂದಂ

ನಡೆತರುತಂ ಕಾರುಣ್ಯಾಂಬೋಧಿಗೆ
ಕಡು ಮೋಹದ ಶರಣರ ಸಂತೋಷಿಗೆ

ನೆನೆವರ ಮನದಾನಂದ ಪ್ರತತಿಗೆ
ಅನುನಯದಿಂ ಬಣ್ಣಿಸುವರ ಸುಮತಿಗೆ
ಬ್ರಹ್ಮಾಂಡಪ್ರಕರಾವೃತಕೀರ್ತಿಗೆ
ಬ್ರಹ್ಮಂ ಹೆಸರಿಡಬಾರದ ಮೂರ್ತಿಗೆ
ನೆನೆಯದ ಮುನ್ನಂ ಕರುಣಿಪ ದಾನಿಗೆ
ನೆನೆವರನಘದಿಂದೆತ್ತುವ ಮಾನಿಗೆ
ಮೈಯಿಕ್ಕಿದನುದ್ಭಟದೇವಂ ಸಲೆ
ಮೈಯೊಳ್ಪುಳಕಾವಳಿ ಕೀಲಿಸಿ ನಿಲೆ
ಕಂಡಾಗಳು ಶಂಕರನೊಲವಿಂದಂ
ಕಂಡಾ ನಂದೀಶ್ವರ ಧರೆಯಿಂದಂ
ಪುರಸಹಿತಂ ನಡೆತಂದವರುಂಟೆ
ತರುಣಿಯ ನುಡಿಯಂ ಸಲಿಸಿದರುಂಟೆ
ಹರ ಲೀಲೆಯ ನೆಲೆ ಪೇಳ್ದವರುಂಟೆ
ಧರೆ ಚಿತ್ರವೆನಲ್ಬಂದವರಿಂತುಂಟೆ
ಎಂದಂದುದ್ಭಟದೇವನನೆತ್ತುತೆ
ಕುಂದದ ಕೃಪೆಯಿಂದಂ ಬಿಗಿಯಪ್ಪುತೆ
ಗಣಪದವಿಯನಾನಂದದೊಳೀವುತೆ
ಗಣಸಂತತಿಗೊಲಿದಭಯವನೀವುತೆ
ಪುರಜನಕೆಲ್ಲಂ ಕರುಣಮನೀವುತೆ
ಪುರಮಂ ಶಿವಲೋಕದೊಳೊಲ್ದಿರಿಸುತೆ
ಶಶಿ ರವಿ ಶಿಖಿಲೋಚನನೊಪ್ಪಿರ್ದಂ
ಪಶುಪತಿ ಗಿರಿಜಾಪತಿಯೊಪ್ಪಿರ್ದಂ
ಸರ್ವಜ್ಞಂ ಶಂಕರನೊಪ್ಪಿರ್ದಂ
ಸರ್ವೇಶಂ ಧೂರ್ಜಟಿಯೊಪ್ಪಿರ್ದಂ
ಕಾಲಹರಂ ಪುರಹರನೊಪ್ಪಿರ್ದಂ
ನೀಲಗ್ರೀವಂ ಭವನೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

ದೇವರ ದೇವಂ ದೇವರ
ಜೀವಂ ದಯೆಯಿಂದವೆಮಗೆ ಚಂದ್ರಾಭರಣಂ ।
ಭಾವಿಸಿ ಭಕ್ತಿಯನುದ್ಭಟ
ದೇವರ ಮಗನೆಂದು ಕುಡುಗೆ ಹಂಪೆಯ ರಾಯಂ ॥

❖❖

# ೫. ಮಲಯರಾಜದೇವರ ರಗಳೆ

## ಸ್ಥಲ ೧

ಧರೆಯೊಳಗೆ ಮಲಯರಾಜನ
ಮೆರೆದಂ ಕರುಣಾಬ್ಧಿ ಹಂಪೆಯವಿರೂಪಾಕ್ಷಂ ।
ಪುರಮಥನಂ ಸ್ಮರಮಥನಂ
ಕರಿಮಥನಂ ದುರಿತಮಥನನಂತಕಮಥನಂ ॥

ಇಳೆಗೆ ತೊಳಗಿ ಬೆಳಪ ತಿಳಕವೆನಿಪ ಮಲಯದೇಶದಲ್ಲಿ
ಮಲಯವತಿಯೆನಿಪ್ಪ ಪಟ್ಟಣಂ ವಿರಾಜಿಸಿರ್ಪುದಲ್ಲಿ
ದೇವರಾಜನೆಂಬ ಭೂಪನಾ ಪುರಕ್ಕೆ ಕರ್ತನಾಗಿ
ಭೂವಧೂವಿಳಾಸಮಾನ ವರ್ತಮಾನ ರಮಣನಾಗಿ
ಇಪ್ಪ ನೃಪತಿಗರಸಿ ಶಚಿಯೆನಿಪ್ಪ ನಾಮದಿಂದಲೆಸೆಯೆ
ಇಪ್ಪನಲ್ಲಿ ಸಕಳಭೂಪರೆಲ್ಲ ತನಗೆ ಸೆಡೆದು ಕುಸಿಯೆ
ಧರೆಗೆ ದೇವರಾಜನೆಂಬ ಪೆಸರ ಪೆರ್ಮೆ ಜಸವನೀಯೆ
ಧರಣಿಗೆಲ್ ಹಯದ ರಥದ ಜನಪದಕ್ಕೆ ಲೆಕ್ಕವಿಲ್ಲ
ವಿತ್ತಪಂಗೆ ಮಿಗಿಲೆನಿಪ್ಪ ಸಂಪದಕ್ಕೆ ಸಂಖ್ಯೆಯಿಲ್ಲ

ಇಂತು ಮೆರೆವ ಸಕಳಕಾರ್ಯ ಧೌರ್ಯಚರಿತಭರಿತನಾಗಿ
ಕಂತುಹರನ ಪೂಜೆಗೋಜೆಯಿಂದೆ ಬಂದು ಹರುಷನಾಗಿ
ಪರಿಮಳೋದಕಂಗಳಿಂ ಶಿವಂಗೆ ಮಜ್ಜನಕ್ಕೆ ಕೊಟ್ಟು
ನೆರೆದ ನೂತನಪ್ರಸೂನ ನಿಕರದಿಂದೆ ಪೂಜೆಗೊಟ್ಟು
ಕಂಪುವೆತ್ತ ಸರಸ ಧೂಪ ಧೂಮವಿಕ್ಕಿ ಬೆಳಗನೆತ್ತಿ
ಇಂಪು ಪರ್ವಿ ಪಲ್ಲವಿಪ್ಪ ಪುಳಕದಿಂದೆ ಸುತ್ತಿಮುತ್ತಿ
ದೇವರಾಜನಮೃತರಸಮನಕ್ಕರಿಂದೆ ಹಿಂಗದೂಡಿ
ದೇವವೃಂದವಂದಿತಂಗೆ ವೀಳಯಂಗಳಿತ್ತು ನೋಡಿ
ದೇವದೇವ ರಾಜರಾಜ ರಾಜಮೌಳಿ ಕರುಣಿಸೆಂದು

ದೇವ ಗತಿಯೆ ದೇವ ಮತಿಯೆ ದೇವ ಪತಿಯೆ ಕರುಣಿಸೆಂದು
ಸಕಳಸುಖಕೆ ಸುಖವೆ ಮುಖವೆ ನಿಖಿಳನಿಧಿಯೆ ಕರುಣಿಸೆಂದು
ಅಖಿಳವರವೆ ಕಲ್ಪತರುವೆ ಸಕಳಗುರುವೆ ಕರುಣಿಸೆಂದು
ಮುತ್ತು ಮಾಣಿಕಂಗಳಿಂದೆ ಮಕರತೋರಣಂಗಳೊಪ್ಪೆ
ಇತ್ತು ನೋಡಿ ಮತ್ತೆ ನೋಡಿ ಮರಳಿ ನೋಡಿ ನೇಹವೊಪ್ಪೆ
ಭವನನರ್ಚಿಸುತ್ತಮಿರ್ಪನಮಮ ದೇವರಾಜನಿಂತು
ಭುವನಮಂ ಪ್ರತಾಪದಿಂದೆ ಪಾಲಿಸುತ್ತಮಿರ್ಪನಿಂತು

ಒಮ್ಮೆಯುಂ ವಸಂತವೊಮ್ಮೆಯುಂ ಸುವೃಷ್ಟಿ ದೇಶದೊಳಗೆ
ಒಮ್ಮೆಯುಂ ವಿವಾಹಮಂಗಳಂಗಳಲ್ಲಿ ದೇಶದೊಳಗೆ
ಕುಜನರಿಲ್ಲ ಸುಜನರುಂಟು ಬಡವರಿಲ್ಲವೊಡೆಯರುಂಟು
ರುಜೆಗಳಿಲ್ಲ ರುಜುಗಳುಂಟು ದೀನರಿಲ್ಲ ದಾನರುಂಟು
ಖೂಳರಿಲ್ಲ ಜಾಣರುಂಟು ಅಗಲ್ವರಿಲ್ಲವೊಲೆವರುಂಟು
ಢಾಳರಿಲ್ಲ ಶುಚಿಗಳುಂಟು ಪುಸಿಗಳಿಲ್ಲ ಸತ್ಯರುಂಟು
ಪಾಪವಿಲ್ಲ ಪುಣ್ಯವುಂಟು ತಾಪವಿಲ್ಲ ತಣ್ಪುವುಂಟು
ಕೃಪೆಯಿಲ್ಲ ಸವಿಗಳುಂಟು ಕೋಪವಿಲ್ಲ ಸಮತೆಯುಂಟು
ಭವಿಗಳಿಲ್ಲ ಭಕ್ತರುಂಟು ತರ್ಕರಿಲ್ಲ ಪೂಜೆಯುಂಟು
ತವಕವಿಲ್ಲ ಹದುಳವುಂಟು ಬೇಳ್ಪರಿಲ್ಲ ಕೊಡುವರುಂಟು
ಇಂತು ತನ್ನ ದೇಶದೊಳಗೆ ಸಕಳಸುಖದ ಸುಕೃತನಾಗಿ
ಕಂತು ಮೀರಲಮ್ಮದಿರ್ಪ ನಿರ್ವಿಕಾರಚರಿತನಾಗಿ
ಹರುಷದಿಂದನೇಕ ವತ್ಸರಂಗಳೊಳಗೆ ಸುಖದೊಳಿರ್ದು
ಇರುತಲೊಂದು ದೆವಸದೊಳ್ಪುರಾಣಗೋಷ್ಠಿಯಿಂದಮಿರ್ದು
ಪುತ್ರರಿಲ್ಲದಿರ್ದವರ್ಗೆ ಲೋಕವಿಲ್ಲ ತಪ್ಪದೆಂದು
ಪುತ್ರಕಾಮ್ಯವಂ ಕರಂ ಪುರಾಣವಿಪ್ರರೆಲ್ಲರಂದು
ಪೇಳಲರಿದು ಸುತನ ಬಯಕೆ ಭಾವದೊಳಗೆ ಸುಳಿದು ಬೆಳೆದು
ಭಾಳನಯನನಿಂದೆ ಪಡೆವೆನೆಂಬ ಚಿತ್ತವೆಳೆದು ಸೆಳದು
ಶಿವಚತುರ್ದಶೀ ದಿನಂ ಬರಲ್ಕೆ ಶಿವನ ನಿಳಯದಲ್ಲಿ
ತವಕಿಸುತ್ತೆ ದೇವರಾಜನೆಯ್ದೆ ಬಂದು ಭರದೊಳಲ್ಲಿ
ತನ್ನ ಸತಿಯೆನಿಪ್ಪ ಶಚಿಯನಲ್ಲಿ ಬರಿಸಿ ಶುಚಿಗಳಾಗಿ
ಉನ್ನತ ಪ್ರಮೋದ ವಿಮಳ ಭಕ್ತಿಯುಕ್ತಚಿತ್ತರಾಗಿ
ಶಂಕರಂಗೆ ಸಕಳಮಜ್ಜನಾದಿ ಪೂಜೆಯಂ ನಿಮಿರ್ಚಿ
ಬಿಂಕದಿಂದೆ ಕನಕರತ್ನರಾಶಿಗಳನೆ ಹತ್ತೆ ಸಾರ್ಚಿ
ಭೂಮಿಯಂ ಸುವಸ್ತ್ರಮಂ ಸಮಸ್ತ ಶರಣವಿತತಿಗಿತ್ತು

ಹೇಮಮಂ ನವೀನರತ್ನನಿಕರದಿಂದೆ ತಣಿವನಿತ್ತು
ಇರ್ದರೇಕವಿಂಶತಿ ಪ್ರವಾಸರಂ ನಿವಾಸರಾಗಿ
ಇರ್ದರಲ್ಲಿ ಚಂದ್ರಧರನ ಮುಂದೆ ಪುತ್ರಕಾಮ್ಯರಾಗಿ

ಇರೆ ಹರಂ ಪ್ರಸನ್ನನಾಗಿ ಲಿಂಗದೊಳಗೆ ತೋರುತಲ್ಲಿ
ಪರಮಮೂರ್ತಿ ಪಂಚವದನ ದಶಭುಜಂಗಳೊಪ್ಪುತಲ್ಲಿ
ದೇವರಾಜ ಬೇಡಿಕೊಳ್ಳದೇನನೆಳಸಿ ಬಂದು ನಿಂದೆ
ಆವ ಕೊರತೆ ನಿನಗೆ ಎನಗೆ ಪೇಳು ಮಗನೆ ಈವೆನಿಂದೆ
ಎಂದು ಕರುಣಿಸಲ್ಕೆ ಭೋಂಕನೆದ್ದು ಬಂದು ದೇವದೇವ
ಕಂದನೊಬ್ಬನಂ ವಿರಾಜಿಸಲ್ಕೆ ಕರುಣಿಸೆನಗೆ ದೇವ
ಎಂದಡರಸ ಕೇಳ ನಿನಗೆ ಪುತ್ರನಪ್ಪ ಭಾಗ್ಯವಿಲ್ಲ
ಕಂದನೆಂತು ಬಪ್ಪನಯ್ಯ ಮುನ್ನ ಕೊಟ್ಟ ಪುನ್ಯವಿಲ್ಲ
ಎಂದು ಬೆಸಸೆ ದೇವರಾಜನಾಹ ಶಿವನೆ ಲೇಸು ಲೇಸು
ಇಂದು ಬೆಸಸಿತಕ್ಕೆ ಮೆಚ್ಚಿದೆಂ ಪುರಾರಿ ಲೇಸು ಲೇಸು
ನಿಮ್ಮ ಕಂಗಳೆವೆಯ ಕೊನೆಯ ಮೊನೆಯ ಚಲನದಿಂದೆ ಕೋಟಿ
ಬ್ರಹ್ಮವಿಷ್ಣು ಇಂದ್ರ ಚಂದ್ರರಾದಿಯಾದ ದೇವಕೋಟಿ
ಹುಟ್ಟುಗೆಂದಡೆನಗೆ ಮಾನಿಸಂಗೆ ಮಗನನಿಲ್ಲೆನಲ್ಕೆ
ದಿಟ್ಟ ಮೂರರೊಡೆಯ ನೀವೆ ಬಂದು ಪುತ್ರನಿಲ್ಲೆನಲ್ಕೆ
ಸಕಲ ಮುನಿಜನಂಗಳುಂ ಪುರಾಣ ಪುರುಷವಿತತಿ ನಗವೆ
ಸಕಲ ವೇದಶಾಸ್ತ್ರ ವಿಲಸಿತಾಗಮಂಗಳೆಲ್ಲ ನಗವೆ
ದೇವ ದೇವ ತೊತ್ತಿನೊಡನಿದೇಕೆ ಸರಸವಿನಿತುಬೇಡ
ದೇವ ಕರುಣಿಸಯ್ಯ ಕರುಣಿಸಯ್ಯ ಬಾಲಚಂದ್ರಚೂಡ
ಎಂಬ ದಿಟದ ಬಿನ್ನಹಕ್ಕೆ ಶಂಭು ಕರುಣದಿಂದೆ ನೋಡಿ
ನಂಬಿ ದೇವರಾಜನೊಡನೆ ನುಡಿದನಕ್ಕರಿಂದೆ ಕೂಡಿ
ಧರಣಿಯೊಳು ಶತಾಯುವೆನಿಪ ಮೂರ್ಖನಪ್ಪ ಕಂದನೊರ್ವ
ಅರಸ ಕೇಳ ಷೋಡಶಾಯುವೆನಿಪ ಸರ್ವಕುಶಲನೊರ್ವ
ಇರ್ವರೊಳಗಿದಾರನೀವೆನೆಂದು ಬೆಸಸಿ ಕೇಳುತಲ್ಲಿ
ಸರ್ವಗುರುವೆ ಷೋಡಶಾಯುವೆನಿಪ ಮಗನನೀವುದಿಲ್ಲಿ
ಎನೆ ಸದಾಶಿವಂ ಸುಪುತ್ರನಂ ಧರಾಧಿಪಂಗೆ ಕೊಟ್ಟು
ಮನಸಿಜಾರಿ ನಿಜನಿವೇಶನಕ್ಕೆ ಪೋಗಿ ಸಂತವಿಟ್ಟು

ಇತ್ತಲೊಸೆದು ದೇವರಾಜನರಸಿವೆರಸಿ ಪುರಕೆ ಬಂದು
ಚಿತ್ತದೊಳಗೆ ಪುತ್ರನರ್ಥಿ ಒಲುಮೆಯಿಂದೆ ನೆಲಸಿನಿಂದು

ಚಿಂತೆಗೆಟ್ಟು ಸಂತಸಕ್ಕೆ ಮನವನಿತ್ತು ಮಹಿಮೆವೆತ್ತು
ಸಂತತಂ ವರಪ್ರಸಾದ ಸುಖಮನಕ್ಕರಿಂದೆ ಪೊತ್ತು
ಇರಲಿರಲ್ಕೆ ಸಚ್ಚರಿತ್ರ ಶಚಿಗೆ ಗರ್ಭವುದಯಿಸಿತ್ತು
ಹರನ ಕರುಣವೆಯ್ದೆ ತರುಣಿಯುದರದೊಳಗೆ ರಂಜಿಸಿತ್ತು
ಹೊರಗೆ ನಳನಳಿಪ್ಪ ದೇಹದವಯವಂಗಳಲ್ಲಿ ಕೂಡೆ
ಮೆರೆವ ತನುಮರೀಚಿ ಗರ್ಭಸೂಚನೆಗಳನುಂಟು ಮಾಡೆ
ನೀಲಕುಂತಳಂ ನಿಮಿರ್ಚಿ ತೀವಿ ತೆಕ್ಕೆಗೊಂಡು ನೆಗಳೆ
ತೋಳಮೊದಲ ಕಪ್ಪು ಕುಸುಮಶರನ ಬಾಣವೊಗರನುಗುಳೆ
ನಡೆಗಳಿಂ ಬಳಲ್ದು ಬೆಮರಬಿಂದು ಮುಖದೊಳೊತ್ತುಗೊಂಡು
ನುಡಿಗಳೆಲ್ಲ ಮೆಲಪಿನತ್ತ ಹೊದ್ದಿ ಹೊಳೆದು ಹೆಳವುಗೊಂಡು
ನಯನಕಾಂತಿ ನಸುಬಳಲ್ದು ಕರುಣರಸಮನೊಪ್ಪುಗೊಂಡು
ಬಯಕೆ ಫಲಿಸಿ ಮನಮನೊಲಿಸಿ ಚಿತ್ತದೊಳಗನಿಂಬುಗೊಂಡು
ಕನಕ ಕಳಶಮುಖದ ನೀಲದಚ್ಚಮುಚ್ಚುಳೊಪ್ಪುವಂತೆ
ಘನ ಪಯೋಧರಾಗ್ರಚೂಡ ಚೂಚಕಂಗಳೊಪ್ಪಲಿಂತೆ
ಬಾಸೆ ಕಮಳನಾಳದಂಡದಂತೆ ನಡುವೆ ಸೂಸದಡರೆ
ಲೇಸೆನಿಪ್ಪ ಮಧ್ಯವಳಯವೆಸೆಯಲೋವಿ ತೀವಿ ಪೊಡರೆ
ಹೊಳೆವ ನಾಭಿ ಗುಣ್ಪನೊಕ್ಕು ಮಿಕ್ಕಿ ಮೀರದೊಳಗುದೋರೆ
ತೊಳಪ ತ್ರಿವಳಿ ಸೀಮೆಗೆಟ್ಟು ಬಟ್ಟ ನಡುವಿನಿಂದೆ ಹಾರೆ
ಇಟ್ಟ ಮುತ್ತಿನೋಲೆ ಚಂದ್ರಬಿಂಬದಂತೆ ಬಳಸಿ ಹೊಳೆಯೆ
ತೊಟ್ಟ ತೊಡಿಗೆ ತಮ್ಮ ತಮ್ಮ ತಾಣದೊಡನೆ ಬೆರಸಿ ಬೆಳೆಯೆ
ಕೆಂದಳಂಗಳೊಪ್ಪೆ ಘನನಿತಂಬಕಾಂತಿಯುಡುಗೆ ಮೆರೆಯೆ
ಚಂದದೂರುದಂಡರೋಚಿ ಕಂಗೆ ಸವಿಯ ಥಾಳವೀಯೆ
ಹೆಜ್ಜೆಯಿಂದೆ ಹಂಸೆ ಮುಂಚೆ ಮೆಲ್ಲ ಮೆಲ್ಲನಡಿಯನಿಡುತೆ
ಗುಜ್ಜುಗೊಂಡ ಅಡಿಗಳಡಿಗೆ ತೊಡಕೆನಲ್ಕೆ ನಡೆದುನಿಲುತೆ
ಬಪ್ಪರೂಪು ದೇವರಾಜನೃಪನ ಕಂಗೆ ನಯಮನುಗುಳೆ
ಒಪ್ಪುವಬಳೆಯರ್ಕಳಿಂಬುದೊಂಡು ನಡೆವ ಚೆಲುವು ನೆಗಳೆ

ಇಂತು ಶಚಿಗೆ ಸಾನುರಾಗದಿಂದೆ ಗರ್ಭಚಿಹ್ನಮಾಗೆ
ಮುಂತೆ ಬರಬರಲ್ಕೆ ಪಕ್ಷಮುಖದ ನವಮಮಾಸಮಾಗೆ
ಬೀಜದೊಳಗೆ ಕಲ್ಪತರುವಿನಂಕುರಂ ವಿರಾಜಿಪಂತೆ
ಓಜೆಯಿಂದೆ ಮೇಘದೊಳಗೆ ಚಂದ್ರಲೇಖೆ ಬೆಳಗುವಂತೆ
ಚಂದ್ರಕಾಂತಘಟದ ನಡುವೆ ಬೆಳಗುತಿಪ್ಪ ಪರುಷದಂತೆ
ಸಾಂದ್ರಭಕ್ತಿಯುದರದೊಳಗೆ ತೊಳಗುವರಿವಿನುಳುಮೆಯಂತೆ

ಕೊಳನ ಕಮಳದುದರದೊಳಗೆ ಬೆಳೆವ ಬಾಲಹಂಸನಂತೆ
ತಿಳಿದ ಗರ್ಭದೊಳು ಕುಮಾರಸಾರಹೃದಯನೊಪ್ಪುತಿಂತೆ
ಉದಯವಾಗಲೆಂದು ನೆನೆದು ನೋಡಿ ಜನನಿಯುದರದೊಳಗೆ
ಉದಯಿಸುತ್ತವಿರ್ದುದಖಿಳ ಸಂಪದಂ ಧರಿತ್ರಿಯೊಳಗೆ
ಸಕಳ ಶರಣಹೃದಯದಲ್ಲಿ ಭಕ್ತಿವಲ್ಲಿ ಉದಯವಾಗೆ
ಸಕಳ ಬುಧರ ತಿಳಿದ ಚಿತ್ತದೊಳಗೆ ಪುಣ್ಯವಯದಯವಾಗೆ
ಮಲಯದೇಶದೊಳಗೆ ಹಿಂಗದುತ್ಸವಂಗಳುದಯವಾಗೆ
ಇಳೆಗೆ ತಂಪು ಸೊಂಪು ಹೆಂಪು ಕಂಪು ಬಿಣ್ಪು ಉದಯವಾಗೆ
ಉದಯವಾದನಮಮ ವರಕುಮಾರಕಂ ಸುಗರ್ಭದಿಂದೆ
ಉದಯವಾದನರುಣ ತರುಣತರಣಿಯುದಯಿಪಂದದಿಂದೆ

ಆಗಳಲ್ಲಿ ಗುಡಿಯನೆತ್ತಿ ದಾದಿಯರು ನೃಪಂಗೆ ಪೇಳೆ
ರಾಗವುಕ್ಕಿ ಮಿಕ್ಕು ತನುವನುಣ್ಮಿ ಪೊಣ್ಮಿ ಪುಳಕವೇಳೆ
ಆಡಿ ಹಾಡಿ ಮೂಡಿ ಮುಳುಗಿ ಸುಖದ ರಸದ ಹೊನಲ ನಡುವೆ
ನೋಡಿ ಕೂಡಿ ಕುಣಿದು ತಣಿದು ತೇಗಿ ತೂಗಿ ಸಭೆಯ ನಡುವೆ
ದೇವರಾಜನಲ್ಲಿ ಹೊದ್ದುದಂ ತೆರಳಚಿ ಗುಡಿಯನೆತ್ತೆ
ಭಾವಕೀಜನಂಗಳುರ್ವಿ ಕೊರ್ವಿ ಮುಡಿಯ ಗುಡಿಯನೆತ್ತೆ
ಪುರದೊಳೆಲ್ಲ ಗುಡಿಯನೆತ್ತೆ ಪರದೊಳೆಲ್ಲ ಗುಡಿಯನೆತ್ತೆ
ಪುರಕೆ ಪರಕೆ ಸರಿಯೆನಿಪ್ಪ ಬಾಲಕಂಗೆ ಗುಡಿಯನೆತ್ತೆ
ದುಂದುಭಿಸ್ವನಂಗಳೊಳ್ಮೃದಂಗಶಂಖನಾದದೊಳಗೆ
ಬಂದು ನೆರೆದ ವಂದಿಜನದ ಜಯ ಜಯಪ್ರಣಾದದೊಳಗೆ
ಪರಿಜನಂಗಳೊಡನೆ ಹಾಲುತುಪ್ಪದೋಕುಳಿಗಳನಾಡಿ
ಪರಮಭಕ್ತನೆನಿಪ ಶಿಶುಗೆ ಜಾತಕರ್ಮವೆಸೆಯೆ ಮಾಡಿ
ಮಲಯದೇಶದರಸು ಮಲಯರಾಜನೆಂದು ಹೆಸರನಿಟ್ಟು
ಇಳೆಯ ಸಕಲ ಭಕ್ತಜನಕೆ ರಾಗದಿಂದೆ ಪೂಜೆಗೊಟ್ಟು
ತನ್ನ ದೇಶವೆಲ್ಲವಂ ಮನೋರಥಂಗಳಿಂದೆ ತಣಿಪಿ
ತನ್ನ ಪುರದ ಪರಿಜನಂಗಳಂ ವಿಳಾಸದೊಳಗೆ ನೆರಪಿ
ಮಗನ ಪೆಸರ ಕೆರೆಯನಾರವೆಗಳನೊಪ್ಪದಿಂದಮರ್ಚಿ
ಮಿಗಿಲೆನಿಪ್ಪ ಛತ್ರ ಶಿವಪುರಂ ಕೊಳಂಗಳಂ ನಿಮಿರ್ಚಿ
ಊಟ ಮೀಹವೋಲಗಂಗಳೊಳಗೆ ಮಿಗುವ ಮಗನ ಮಾತು
ನೋಟ ಕೂಟ ಮಾಟದೊಳಗೆ ಸೋಗಯಿಸಿರ್ಪ ಮಗನ ಮಾತು
ಎಸೆಯೆ ಜಲಧಿಪರಿವೃತಾವನೀಶಮಕುಟಚರಣನಾಗಿ
ಮಸುಮತೀಳಕ್ಕೆ ತಾನೆ ರಕ್ಷೆ ಶಿಕ್ಷೆಗೊಡೆಯನಾಗಿ

ಪುತ್ರನಾದನೆಂಬ ಸಂತಸಕ್ಕೆ ಮೇರೆಯಿಲ್ಲದಿರ್ದು
ಮಿತ್ರನುದಯದಬುಜದಂತೆ ಚಿತ್ತವಲರೆ ಸುಖದೊಳಿರ್ದು
ತಿಳಿದು ಮನದೊಳೊಲಿದು ಮೀರಿ ಕಳಿದು ಸುಖದೊಳೊಪ್ಪಿಯಿರ್ದು
ಮಳಯದೇಶದೊಳಗೆ ದೇವದೇವರಾಜನೊಪ್ಪಿಯಿರ್ದು ೧೫೦

## ಸ್ಥಲ ೨

ಪಡೆದೆಂ ಶಂಕರನಿಂ ಸುಪುತ್ರನನೆನುತ್ತಂ ಚಿತ್ತದೊಂದಳ್ತಿ ನೂ
ರ್ಮಡಿಸಲ್ಪಾಡಿಸುತಾಡಿಸುತ್ತೆ ಪುಳಕಂಗಳ್ಪೊಣ್ಮೆ ಸಂತೋಷದಿಂ
ಗುಡಿಗಟ್ಟುತ್ತವೆ ರಾಜಪುತ್ರಕುಲಪುತ್ರೋತ್ಸಾಹ ಸಂಪ್ರೀತಿಯಿಂ
ನುಡಿವುತ್ತಂ ಸಲೆ ದೇವರಾಜನೊಲವಿಂದೊಪ್ಪಿರ್ದನಾಸ್ಥಾನದೊಳ್ ॥

ಇಂತೊಪ್ಪೆ ಸಕಲ ರಾಜರಾಜೇಂದ್ರ ಮಕುಟಮಣಿ ವಿರಾಜಮಾನ ಪದಪಯೋಜನಪ್ಪ ದೇವರಾಜಂ ಸಕಲಸಾಮಂತರಾಜ ಪುತ್ರದಂಡನಾಥಯೂಥ ಮಂಡಳಿಕ ಮಂತ್ರಿಮುಖ್ಯರ್ಗೆ ಬೀಳ್ಕೊಟ್ಟೋಲಗಮಂ ಪರಿಯವೇಳ್ದು ಸಭಾಭವನಮಂ ಪೊರಮಟ್ಟು ಅಂತಃಪುರಕೆ ನಡೆತಂದು ಸಾತ್ವಿಕೆಯಪ್ಪ ಶಚಿದೇವಿಯರ ನಗೆಮೊಗಮಂ ದರಹಸಿತವದನದಿಂ ನೋಡುತ್ತೆ ಸಿಂಹಾಸನಾಸೀನನಾಗಿ ಮಲಯರಾಜದೇವರ ಸಮಯವೇನೆಂದು ಬೆಸಗೊಳೆ ಕೇಳಿ,

ಕೆಳದಿಯರು ಕೈಮುಗಿದು ದೇವಾ ಶಿವಪ್ರಸಾದಾಮೃತ ನವನೀತಮಂ ಮೊಲೆವಾಲೊಡನಾರೋಗಿಸಿ ಶಿವಧ್ಯಾನನಿದ್ರಾಮುದ್ರೆಯಿಂ ತಾಯಮಗ್ಗುಲೊಳು ತಣ್ಣನಿರ್ದಪನೆಂದು ಬಿನ್ನವಿಸಿದ ಸವಿನುಡಿಗಳು ಕರ್ಣಕ್ಕಮೃತಮಂ ಚೆಲ್ಲಿದಂತೆ ಕಂಗೆ ಚೆಲುವಂ ಸೂಸಿದಂತೆ ತನುವಿಂಗೆ ತಂಪಂ ನೀಡಿದಂತೆ ಉತ್ತರೋತ್ತರ ಸುಖತರಮನೀಯೆ, ತಾನುಂ ಶಚಿದೇವಿಯುಂ ಪುತ್ರನ ಸ್ನೇಹರಸಂ ತೊರೆದೋರೆ ಗಂಗಳಿಂ ನೋಡಿ ನೋಡಿ ಮುಂಡಾಡಿ ಮುದ್ದಾಡಿ ಮುದ್ದುಗಳ ಬೇಡಿ ಮೆಲ್ಲನೆತ್ತಿ ಉದರದೊಳೊತ್ತಿ ಧರ್ಮಕ್ಕೆ ದಯಾರಸಮನೆರೆದು ಸಲಹುವಂತೆ, ಸತ್ಯಕ್ಕೆ ಶಾಂತಿಯನೂಡಿ ಸಾಗಿಸುವಂತೆ, ಸಾಮರ್ಥ್ಯಕ್ಕೆ ತೇಜವನಿತ್ತೋವುವಂತೆ, ಸುಖಕ್ಕೆ ಸವಿಯಂ ಸಲಿಸಿ ಬೆಳೆಯಿಪಂತೆ, ಭಕ್ತಿಗೆ ಶಿವಜ್ಞಾನವನಿತ್ತು ರಕ್ಷಿಸುವಂತೆ ಸುಕುಮಾರನಪ್ಪ ಕುಮಾರನಂ ಸಲಹುತ್ತಮಿರೆ,

ಸುರತರುವಿನಂಕುರದಂತೆ, ಪುಣ್ಯದ ಕೋರಕದಂತೆ, ಭಕ್ತಿಯ ಕುಸುಮದಂತೆ, ಮುಕ್ತಿಯ ಫಲದಂತೆ, ಬಾಲಚಂದ್ರನಂತೆ, ಕಳಹಂಸನಂತೆ, ಕಾಮಧೇನುವಿನ ವತ್ಸನಂತೆ, ಪರುಷದ ಮರಿಯಂತೆ ನಳನಳಿಸಿ ಬೆಳೆವುತ್ತಿರ್ಪ ಮಲಯರಾಜದೇವಂ ಶಿಶುಲೀಲೆಯಂ ತಳೆದು ಮುಂದೆ ತನಗೆ ಪ್ರತ್ಯಕ್ಷನಪ್ಪ ಶಿವನೇರಿ ಬಪ್ಪ ನಂದಿಯ ನಿಲವಂ ತೋರುವಂತಂಬಳಿಕ್ಕಿ, ಪ್ರದಕ್ಷಿಣಕ್ಕೆ ಪಡಿಸಣವಂ ನೋಡುವಂತೆ ದಟ್ಟಡಿಯಿಟ್ಟು, ಶಿವಸ್ತುತಿಗಳಂ ಶ್ರವಂ ಮಾಡುವಂತೆ ತೊದಳ್ನುಡಿಗಳಂ ನುಡಿದು, ದೇಶಂ ಬೆರಸಿ ಕೈಲಾಸಕ್ಕೀತೆದೊಳೆತ್ತಿ ಕೊಂಡೊಯ್ವೆನೆಂಬುದಂ ಸೂಚಿಸುವಂತೆ ಮುಂದಿರ್ದ ಹಾಲಹೊಂಬಟ್ಟಲ ನೊಯ್ಯನೆತ್ತಿ ನಿಂದಿರುತ್ತಂ, ಜನನ ಮರಣ ಮಾಯೆಗಳನೀತೆರ ದೊಳೊದೆವೆನೆಂಬಂತೆ ಮುಂದಿರ್ದ ಜಲಪಾತ್ರೆಯನೊದೆವುತ್ತಂ ತನಗೆ ಪದಿನಾರುಂ ವರುಷವೆಂದುಮ್ಮಳಿಸುವ ತಾಯ್ತಂದೆಗಳಂ ನಗುವಂತೆ

ಮುಗುಳ್ನಗೆ ನಗುತ್ತಂ, ಶಿವಾರ್ಚನೆಯಂ ಮಾಡವೇಳ್ಪುದೆನ್ನಂ ಬೇಗ ಬೆಳೆಯಿಸೆಂದು ಶಿವಂಗೆ ಮುನಿದೊರಲಿ ಅಳುವಂತಳುತ್ತಂ, ಮುಂದೆ ಚಂದ್ರಧರನಂ ಬಲವಪ್ಪ ಚರಣಂಗಳಂ ಮುದ್ದಾಡಿಸುವಂತೆ ಉಂಗುಟವಂ ಸವಿವುತ್ತಂ ಮೆಲ್ಲಡಿಗಳ ವಲ್ಲಭಂ ಕಿರುದೊಡೆಗಳ ಕೌತುಕಂ ನುಣ್ದೊಡೆಗಳ ನವೀನಂ ಸುಳಿನಾಭಿಯೆಳೆಯಂ ನಳಿತೋಳಿನ ನಲಿವುಂ ತೆಳುಗಲ್ಲದ ತವರುಂ ಮುದ್ದುಮೊಗದ ಮಾಣಿಕಂ ಮೊಲೆವಾಲದಾಯಿಗಂ ಬೆಣ್ಣೆಯ ಬೆಳೆಸಿರಿವಂತಂ ನುಣ್ಗುರುಳಿನ ನೀರಂ ಅರಳೆಲೆಯ ಪರಮಹಂಸಂ ಮಾಗಾಯ್ಗಳ ಮಹಿಮಂ ಭಸಿತದ ರಕ್ಷೆಯಕ್ಷಯಂ ನೀಲಬೊಟ್ಟಿನ ನಿರ್ಭಯಂ ಅಂಜನದ ನಿರಂಜನಂ ಪುಲಿಯುಗುರ ಸುಲಲಿತಂ ನೇವಳದ ಭಾವಕಂ ಕರವಳಯದ ಪರಬೊಮ್ಮಂ ಮುದ್ರಿಕೆಯ ಭದ್ರಗುಣಂ ಉಡೆವಣಿಯ ಚಿಂತಾಮಣಿ ಪೊಂಗೆಜ್ಜೆಗಳ ಪುರುಷಂ ಅಂದುಗೆಯ ಆನಂದನೆನಿಪ ಮಲಯರಾಜದೇವಂ ಬಾಲಲೀಲೆಯನನುಕ್ರಮದಿಂದುಳಿದು ಪಲವುದಿನಂಗಳಂ ಕಳಿದು ಕಳೆದು ಪ್ರಯೋಚಿತ ದಿವ್ಯವಸ್ತ್ರಾಭರಣ ಯಕ್ಷ ಕರ್ದಮಾದಿ ಸಕಳಭೋಗಂಗಳಂ ತಳೆದು ಶಸ್ತ್ರಶಾಸ್ತ್ರ ಸಂಗೀತ ಸಾಹಿತ್ಯ ಕಾವ್ಯ ನಾಟಕ ತುರಂಗ ಮತಂಗಾರೋಹಣಾದಿ ಸಕಳ ವಿದ್ಯಾ ಪರಿಣತನಾಗುತ್ತೆಯ್ದಾರೇಳೆಂಟು ಹತ್ತು ಹದಿನೈದು ವರುಷಂಬರಂ ನೆರೆದು ನಳನಳಿಪ ಸೌಕುಮಾರ್ಯದಿಂ ತೊಳತೊಳಪ ರೂಪಿಂ ತಳತಳಿಪ ತೇಜದಿಂದೊಪ್ಪಿರಲಿರಲು,

ಒಂದು ದೆವಸಂ ವಸಂತಮಾಸದೊಳು ಸಕಲರಾಜೇಂದ್ರನಪ್ಪ ದೇವರಾಜಂ ವೈಹಾಳಿವಿನೋದಕ್ಕೆ ಪೊರಮಟಲೆಂದು ಮಂತ್ರಿಗಳ್ಗೆ ಬೆಸಸುವಲ್ಲಿಂ ಕುಮಾರಕಂಠೀರವಂ ಕುಮಾರಸಾರ್ವಭೌಮಂ ಶಿವಭಕ್ತಿಪೋಷಣಂ ಶಿವಜ್ಞಾನಭೂಷಣನೆನಿಪ ಮಲಯರಾಜದೇವಂ ತಾನುಂ ಬಂದಪೆನೆಂಬ ಬಿನ್ನಪಮಂ ಮಂತ್ರಿಗಳಿಂದರಿಪೆ ದೇವರಾಜಂ ತನಯನಂ ತರ್ಕೈಸಿ ತನಿನೇಹದಿಂ ಹಾರೈಸಿ ಹರುಷಪುಳಕದಿಂ ಪೂರೈಸಿ ನೀನಿಲ್ಲದ ವಿನೋದಂ ತಾನೇವುದಯ್ಯಾ ನಡೆಯಯ್ಯಾ ನಡೆ ಮಗನೆ ಮಲಯರಾಜದೇವ ಬಿಜಯಂಗೆಯ್ವುದೆಂದು ಗಲ್ಲಮಂ ಪಿಡಿದು ತಂಬುಲಮನಿಕ್ಕಿ ಮೂರ್ಧ್ನಿಘ್ರಾಣಮಂ ಮಾಡಿ ಬರವೇಳ್ದು ಬೆಸಸೆ, ನಲಿನಲಿದು ಕುಮಾರಕಂ ಕಠಾರಿಯ ಕೋಲಂ ತಿರುಹುತೊಂದೆರಡು ಜಂಗಳಮಂ ಸಯಗತಿಯಿಂ ಸರಳಿಸಿ ನೋಡುತ್ತಂ, ಶೃಂಗಾರದ ಮನೆಗೆ ನಡೆತಂದಿಕ್ಕಿದ ಪಟ್ಟಗದ್ದುಗೆಯ ಮೇಲೆ ಬಿಜಯಂಗೆಯ್ದು ಕಮನೀಯಕುಮಾರಂಗೆ ಸಚಿವ ರಾಜಪುತ್ರರು ಕತ್ತುತಿಯ ತಿಲಕಮಂ ಲಲಾಟದೊಳ್ಕೈಗೊಳಿಸಿ ಪರಿಮಳವನುಗುಳ್ವಿರವಂತಿ ಸಂಪಗೆಯರಲ್ಗಳಂ ಸಿರಿಮುಡಿಯೊಳ್ತುರುಂಬಿ, ರತ್ನಾವತಂಸಮಂ ಕರ್ಣಯುಗಕ್ಕಳವಡಿಸಿ, ದಿವ್ಯಚಂದನವನುದ್ವರ್ತನಂ ಮಾಡಿ, ತೋರಹಾರಮಂ ಕೊರಲೊಳಿಕ್ಕಿ, ಪದಕಮಂ ಪೇರುರದೊಳಿರಿಸಿ, ಬಾಹುಪೂರಯವನಿಕ್ಕಿ, ಕಂಕಣಮಂ ಕೈಗೊಳಿಸಿ, ಸಪುರವಾದ ಬಿಳಿದಂ ಬಿಗಿದುಡಿಸಿ, ಸುವರ್ಣಪಳಿಯಂ ಪೊದೆಯಿಸಿ, ಕುಮಾರಕುಸುಮಾಯುಧನೆಂಬ ಬಿರುದಿನ ತೊಡರನೆಡಗಾಲೊಳಿಟ್ಟು, ಸಚಿವ ರಾಜಪುತ್ರರ್ಕೈಗೊಟ್ಟುಬರೆ, ಪಡಿಯರರ್ನೆಲನುಗ್ಘಡಿಸೆ ವಿಳಾಸದಿಂ ನಡೆತಂದು ಮುಂದೆ ರಾಜಾಂಗಣದೊಳು ಹೊನ್ನ ಹಲ್ಲಣದಿಂ ರನ್ನದ ಪಕ್ಕರಕ್ಕೆಯಿಂ ನೆಲನ ಚುಂಬಿಸುವ ಚಮರದಿಂ ಮಾಣಿಕ್ಯದ ಮೊಗವಡದಿಂ ಮುತ್ತಿನ ತೋರದಂಡೆಯಿಂ ಹೊಕ್ಕುಳ ಹೊನ್ನಘಂಟೆಯಿಂ [ನೆ]ಟ್ಟ ಕಿವಿಗಳಿಂ ಹಳಹಳಿಪ ಕಂಗಳಿಂ ಉಚ್ಚೈಶ್ರವವನಿಳಿಕೆಯ್ವ ತುರಂಗರಾಜನಂ ಪಟ್ಟಸಹಣಿ ಪಿಡಿತಂದು ಬೋಳೈಸುತಿರಲಲ್ಲಿ ಬಿಜಯಂಗೆಯ್ದಂಕಣಿಯ ಹಂಗಿಲ್ಲದೆ ಭೋಂಕನೇರಿ, ಪುರಜನಂ ಕೈಮುಗಿಯೆ

ಕವಿಗಳ್ ಕೈವಾರಿಸೆ ವಂದಿಗಳ್ ಸಂದಣಿಸಿ ಪೊಗಳೆ ಹರಭಕ್ತರ್ವರಸೆ ಪಲ್ಲವಸತ್ತಿಗೆ ಮೇಲ್ಮಸಗೆ ನಿಸ್ಸಾಳಧ್ವನಿಯಣ್ಮೆ ಕಹಳಾರವಂ ಪೊಣ್ಮೆ ಉದಯಗಿರಿಯನೇರಿದ ಸದಮಳಸೂರ್ಯನಂತೆ ಬೆಳಬೆಳಗುತ್ತಂ ಗಳಗಳನೆ ನಡೆತಂದು ದೇವರಾಜನೇರಿದ ಚೌದಂತನ ಮಗ್ಗುಲೊಳೊಗ್ಗಿ ನಿಂದಿರೆ ಕುಮಾರನಂ ನೋಡಿ ಹರುಷಂ ಮಿಕ್ಕು ಮುಗುಳ್ನಗೆ ನಗುತ್ತಂ ನಡೆಯವೇಳೆನೆ,

ಸಿಂಧುರದ ಸಂದಣಿಯಿಂ ತುರಂಗದೊತ್ತರದಿಂ ವರೂಥದ ವೀಥಿಯಿಂ ಪದಾತಿಬಲದೊತ್ತೊತ್ತೆಯಿಂ ಕ್ಷೀರವಾರಿಧಿ ಮೇರೆದಪ್ಪಿದಂತೆ ಪುರಮಂ ಪೊರಮಟ್ಟು ವೈಹಾಳಿಬಯಲ್ಗೆ ನಡೆತಂದು, ದೇವರಾಜಂ ಮಗನೇರಾಟವ ನೋಡುವಕ್ಕರಿಂ ಕರಿಘಟೆಗಳಂ ಸುತ್ತಂ ನಿಲಿಸಿ ಮುಂದೆ ನಿಂದ ರಾಜಪುತ್ರರ್ಗೆ ಕೈವೀಸಲೊಡಂ, ಸಿಂಗದ ಜಂಗುಳಿ ಶರಭನಂ ಕೆಣಕುವಂತೆ ತನತನಗೆ ಕುಮಾರನಂ ಮೂದಲಿಸಿ ಕಾಳೆಗಂದೆಗೆಯೆ, ಮುಳಿದುನೋಡಿ ಮಲಯರಾಜದೇವಂ ಘುಡುಘುಡಿಸಿ ಪಿಡಿದ ವಾಘೆಯಿಂ ಬೆಚ್ಚಂತಿರ್ದ ರಾಘೆಯಿಂ ಬಲಗೈಯ ಸಬಳದ ಪೊಟ್ಟೆಯಿಂ ಚೆಲುವ ದಿಟ್ಟೆಯಿಂ ಮಾಯೆಯ ಕುದುರೆಯ ರೂಹುಗೊಳಿಸಿದ ವಿದ್ಯಾಧರನಂತೆ ತುಡುಂಕದ ಮುನ್ನಂ ಮನದೊಡನೆ ಮಣಿವ, ತಿರುಪದ ಮುನ್ನಂ ಕೈಯೊಡನೆ ಬಪ್ಪ, ಪುರ್ವಿನ ಜರ್ವಿಂ ಪರ್ವತವನಡರ್ವ ಜಾತಿ ಜಯಂತನಂತೆ ಎಡಬಲಕ್ಕೆ ತಿರುಪಿ ನೂಂಕಿ, ಸರಿಸಬೀದಿಯೊಳು ಬೆನ್ನಟ್ಟಿ ಮುಟ್ಟಿ, ಮಿಂಚನೇರಿದ ಮೇಘವಾಹನನಂತೆ ರಾಯರಾವುತರನಟ್ಟಿ ತಿವಿದು, ರಾಜಪುತ್ರರ ಬೆಂಕೊಂಡು ಸುಳಿದ ಕುದುರೆಯ ರಾವುತರಂ ಸೆಳೆದೀಡಾಡಿ ಮೂದಲಿಸಿ, ಬಂದ ಮೊನೆಯ ರಾವುತರಂ ಬಲ್ಲೆಯುದ ಪಟ್ಟಸದೊಳುಂಡಿಗೆಯೊತ್ತಿ ಬಿಟ್ಟು, ನಿಚ್ಚಟದ ರಾವುತರಂ ಲಚ್ಚಣಂದೆಗೆದು ಮುಂಗುಡಿಯ ರಾವುತರಂ ಭಂಗಿಸಿ ತಿವಿದು ತನಗಿದಿರಂ ಕಾಣದೆ ನಿಂದಿರ್ದು ತನ್ನೇರಾಟಕ್ಕೆ ದೃಷ್ಟಿಯಾದಪುದೆಂದು ಭೂವನಿತೆ ತೊಪಿರಿದಂತೆ ಖುರಸಂಪುಟದಿಂ ನೆಗೆದ ಧೂಳೀಜಾಳಂ ಮುಖದೊಳ್ಮೆರೆಯೆ, ಮಾಸಿದ ಚಂದ್ರನಂತೆ ಬಳಲ್ದ ಬಾಲಾರ್ಕನಂತೆ ತಿರುಗಿಬಂದು ಮಲಯರಾಜಂ ದೇವರಾಜಂಗೆರಗೆ, ಮಗನಂ ನೋಡಿ ಮನದೊಳ್ತೂಪಿರಿದು ಕಣ್ಣೊಳಪ್ಪಿ ಹೊದ್ದ ಪಟ್ಟಾವಳಿಯಂ ನಿವಾಳಿಸಿ ಬಿಸುಟ್ಟು ವೈಹಾಳಿ ವಿನೋದಸುಖಸಮಾಪ್ತಿ ಚಿತ್ತಂ ತಿರುಗಿ ಸರ್ವಸಂಭ್ರಮದಿಂ ಮಲಯವತಿಪುರಮಂ ಪೊಕ್ಕರಮನೆಗೆ ಬಂದು, ಸಕಲ ಸಚಿವ ಸಾವಂತ ರಾಜಪುತ್ರ ದಂಡನಾಥಯೂಥ ಮಂಡಳಿಕ ಮಂತ್ರಮುಖ್ಯರ್ಗೆ ಬೀಳ್ಕೊಟ್ಟು,

ಪಟ್ಟದಾನೆಯಿಂದಿಳಿದು ತಾನುಂ ಕುಮಾರನುಂ ಸಂತೋಷದಿಂದಂತಃಪುರಕ್ಕೆ ನಡೆತಂದಿಕ್ಕಿದ ಪಟ್ಟಗದ್ದುಗೆಯ ಮೇಲೆ ಕುಮಾರನಂ ಬಿಜಯಂಗೆಯ್ಸಿ ಕೋಮಲಾಂಗನೆಯರಿಂ ಮಂಗಳಾರತಿಯನೆತ್ತಿಸಿ, ದೇವರಾಜನುಂ ಶಚಿದೇವಿಯುಂ ಮಗನ ಯೌವನೋದಯಮಂ, ಶೃಂಗಾರದೆಳ್ತರಮಂ, ಸೌಕುಮಾರ್ಯದ ಸಂದಣಿಯಂ ಕಂಡು ಹೊರೆಯೇರಿ, ಶಿವಂ ಕೊಟ್ಟಾಯುಮಂ ನೆನೆದು ಹೊರೆಯಿಳಿದು ಮನವಳಿದು, ಬೆಂಕಿಯೊಳ್ಬಿಸುಟ ಮಲ್ಲಿಕಾಮಾಲೆಯಂತೆ ಕಾಳ್ಗಿಚ್ಚಿನಿಂದರೆಬೆಂದ ಹಂಸಮಿಥುನದಂತೆ ಕರ್ರನೆ ಕಂದಿ ಸುರ್ರನೆ ಸುಯ್ದು ಅಂತಸ್ಥಸಂತಾಪಶಿಖಿಯಿಂ ಕುಕ್ಕುಳಂಗುದಿದು ಶೋಕರಸವುಕ್ಕಿ ಪರಿದಿರ್ವರುಂ ಕಣ್ಣನೀರಿಂ ಮುಂದುಗಾಣದೆ, ಬರೆದಂತೆ ಕರುವಿಟ್ಟಂತೆಯಿರೆ, ಮಲಯರಾಜದೇವಂ ಮನದೊಳ್ನೊಂದು ಕೌತುಕಂಬಟ್ಟು ಕಂಡಿದೇನಿದೇನಮೃತದ ನಡುವೆ ವಿಷಂ, ಬೆಳಗಿನ ನಡುವೆ ಕತ್ತಲೆ ಬೆಳ್ದಿಂಗಳೊಳ್ದಳ್ಳುರಿ, ಶಿವಭಕ್ತನ ನುಡಿಯೊಳ್ಪುಸಿ ಪುಟ್ಟುವಂತೆ ಸಮಸ್ತ ರಾಜ್ಯಸಂಪದದೊಳೆನ್ನಂ ಮುಂದಿಟ್ಟುಕೊಂಡಿರ್ದ ಸುಖಸಮಯದೊಳು ಶೋಕಂ ಪುಟ್ಟುವುದೇಂ

ಕಾರಣಂ, ಅದಂ ಪೇಳ್ದಲ್ಲದಾರೋಗಣೆಯಿಲ್ಲೆಂದು ನುಡಿದ ಮಲಯರಾಜದೇವಂಗೆ ತಾಯಿ ತಂದೆಗಳ್ಮತ್ತೆಮತ್ತೆಯಳುತ್ತಂ ಕಣ್ಣನೀರನೊಗುತ್ತಂ ಕೇಳ್ದೆಲೆ ಕುಮಾರಾ, ನೀಂ ವರಪುತ್ರಂ ನಿನಗೆ ಶಿವ ಕೊಟ್ಟಾಯು ಪದಿನಾರು ವರುಷಮಾದವಿಂದಿಂಗೆ ಪದಿನೈಯ್ದು ವತ್ಸರಂ ತೀವಿದವಿನ್ನೊಂದು ವರುಷಕ್ಕೆ ನಿರ್ವಾಣಪದಂ ನಿನಗೆಂದೊಟ್ಟಿಯೊರಲುವ ಮಾತಾಪಿತರನೆಂತಾನುಂ ಸಂತಯಿಸಿ ಪಿರಿದಪ್ಪ ಕಾರ್ಯಮೆಂದಿರ್ದೆ ನೋಡಾ, ಇದಕ್ಕಿನಿತೇಕೆ, ಕೊಟ್ಟ ಶಿವನಿರ್ದಪಂ, ಪಡೆದರು ನೀವಿರ್ದಪಿರಿ, ಪುಟ್ಟಿದವಂ ನಾನಿರ್ದಪೆನು, ಇನ್ನೊಂದು ವರುಷನಿರ್ದಪುದು, ಶಿವಂ ಕರುಣಿ, ಎನಗೆ ಸಾವಿಲ್ಲೆಂದು ಮತ್ತೆ ಮತ್ತೆ ಸಂತವಿಟ್ಟು, ಧೈರ್ಯನಿಧಿ ಶಿವಜ್ಞಾನಸಂಪನ್ನಂ ಸಾಹಸಾಭರಣಂ ಸುಖಮಜ್ಜನಂ ಮಾಡಿ ತಾಯಿತಂದೆಗಳೊಡನೆ ಅಮೃತಾನ್ನವನಾರೋಗಿಸಿ ತಾಂಬೂಲಮಂ ಕೊಂಡು ಮಲ್ಲ ಮೇಷ ಮಹಿಷ ಕುಕ್ಕುಟಾದಿ ಸಕಳ ಯುದ್ಧಾದಿಗಳಂ ನೋಡುತ್ತಂ ಗೀತ ವಾದ್ಯ ನೃತ್ಯ ತೂರ್ಯತ್ರಯಂಗಳಂ ಕೇಳುತ್ತಂ ದೇವರಾಜನಿಂ ಶೈವೋಪದೇಶಸಂಪನ್ನನಾಗಿ ಕೆಲವು ದಿನಂಗಳಂ ಕಳೆಯೆ

ಮಾತೆ ಪಿತರಿದ್ದೆಲೆ ಮಗನೆ ನಿನಗಿನ್ನರುದಿಂಗಳೆನಲರಿಯದಂತಿರ್ಪಂ ಮೂರು ತಿಂಗಳೆನೆ ಮೋನದೊಳಿರ್ಪಂ ತಿಂಗಳೆನೆ ಹಿಂಗದೆ ಸುಮ್ಮನಿರ್ಪಂ ಏಳುದಿನಮೆನೆ ಕೇಳದಂತಿರ್ಪಂ ನಾಳೆ ಮಗನೆ ತಪ್ಪದು, ನೀ ಮಾಳ್ಪ ಮನೋರಥಂಗಳಂ ಮಾಡೆಂದು ದುಃಖಜಲಭರಿತನಯನಪುಟರಾಗುತ್ತಂ ಪೇಳೆ ಕೇಳ್ದಂದಿನಿರುಳು ಸಕಲ ಶಿವಭಕ್ತರಂ ಬಿಜಯಂಗೆಯ್ಸಿ ತಂದು, ಶಿವರಾತ್ರಿಯಂ ಮಾಡಿ ಮರುದಿನ ಉದಯಸಮಯದೊಳೆದ್ದು ಶುದ್ಧಾಂಗನಾಗಿ ಭಸಿತೋದ್ಧೂಳನಂ ಮಾಡಿ ರುದ್ರಾಕ್ಷಿಗಳಂ ಧರಿಸಿ ಪರಿಚಾರಕರನಳವಡಿಸಿ ಪುರದ ಬಹಿರುದ್ಯಾನದೊಳು ಕೇಳೀವನದ ಸ್ವಯಂಭುಲಿಂಗದ ಸಮೀಪಕ್ಕೆ ಬಂದು ತನ್ನ ಮನದನ್ನರಿರ್ವರಂ ಕಮಳ ಮುಕುಳಷಂಡಂಗಳಂ ತರಲ್ಕೆ ನಿಯಾಮಿಸಿ ನದಿಯಗ್ಘವಣಿಯಂ ಕುಣಿಕುಣಿದು ತಾನೆ ತಂದು ಪಂಚಾಮೃತಸಹಸ್ರಾಭಿಷೇಕಮನೇಕಚಿತ್ತದೊಳ್ಮಾಡಿ ಮಜ್ಜನಕ್ಕೆರೆದು ಕುಂಕುಮ ಚಂದನಾನುಲೇಪನಂಗಳಂ ಸುಖದೊಳಿತ್ತು ಮಘಮಘಿಪ ಪಡ್ಡಳಿ ಸೇವಂತಿಯಿರವಂತಿ ಜಾತಿ ಮರುಗ ಮಲ್ಲಿಗೆ ಪಚ್ಚೆ ದವನದಿಂದಂ ತಣಿವನ್ನಂಬರಂ ಭವಾನೀವಲ್ಲಭಂಗೆ ಅನೇಕ ನವೀನಪೂಜೆಯಂ ಮಾಡಿ ಸುಗಂದಮಪ್ಪ ದಶಾಂಗಧೂಪಮನಿಕ್ಕಿ ಥಳಥಳಿಸುವಾರತಿಗಳಂ ಹಲವು ಪರಿಯಾಣಂಗಳಿಂದೆತ್ತಿ ಭಕ್ತಿಸಹಿತಮೃತಾನ್ನವನಾರೋಗಿಸಲಿತ್ತು ಪಚ್ಚೆಕರ್ಪುರದ ತಾಂಬೂಲಮಂ ಕೊಟ್ಟು ಪ್ರದಕ್ಷಿಣಸಹಿತಂ ಪ್ರಣತನಾಗಿ ಪದ್ಮಾಸನನಾಗುತ್ತಂ ಕೆಲಬಲದೊಳೊಟ್ಟಿರ್ದ ಕಮಲಮುಕುಳಷಂಡಂಗಳೊಳೊಂದೊಂದಂ ಕೊಂಡು ಶಿವನಂ ನೆನೆದು ತನ್ನಂ ತಿಳಿದು ಮನಮಂ ಸೈತಿಟ್ಟು ಬುದ್ಧಿಯಂ ಶುದ್ಧಯಿಸಿ ಚಿತ್ತಮಂ ತಿಳಿಯಿಟ್ಟು ಅಹಂಕಾರಮನಗಲಿಸಿ ಕಾಮಮಂ ಕಡೆಗೊತ್ತಿ ಕೋಪಮಂ ಕೆಲಕೆ ಸಾರ್ಚಿ ಲೋಭಮಂ ಲಾಲಿಸದೆ ಮೋಹಮಂ ಮನ್ನಿಸದೆ ಮದಮಂ ಮುರಿದು ಮತ್ಸರಮಂ ನುಚ್ಚುಗುಟ್ಟಿ ತಾಪತ್ರಯಕ್ಕೆ ತೆಱಹಂ ಕುಡದೆ ಹೃದಯಕಮಲವನೆಡೆಮಾಡಿ ಜ್ಞಾನಕರ್ಣಿಕೆಯ ಗದ್ದುಗೆಯನಿಕ್ಕಿ ಮನದ ಬೆಳಗಂ ಪಚ್ಚಡಿಸಿ ಜ್ಞಾನಜ್ಯೋತಿಯೊಳು ನಿತ್ಯನಂ ನಿರ್ಮಳನಂ ನಿಷ್ಕಳನಂ ಕಾರುಣ್ಯನಿಧಿಯಂ ಶಿವನಂ ಶಂಕರನಂ ಕಣ್ತೀವಿ ನೋಡಿ ಮನಂ ತೀವಿ ನೆನೆದು ಭಾವಂ ತೀವಿ ಬರಿಸಿ ಕುಳ್ಳಿರಿಸಿ ಮೈತೀವಿ ಪುಳಕಮನಾಂತು ನಾಲಗೆ ತೀವಿ ಬಣ್ಣಿಸಲೆಂದು ಮಲಯರಾಜದೇವಂ ವಿರೂಪಾಕ್ಷ ವರಪುತ್ರಂ ಸ್ತೋತ್ರಾಮೃತದಿಂ ಬಣ್ಣಿಸುತ್ತಮಿರೆಯಿರೆ,

## ಸ್ಥಲ ೩

ದೇವ ಸಮಸ್ತಮಸ್ತಕದ ಭೂಷಣ ದೇವಕಿರೀಟಕೋಟಿಸಂ
ಸೇವಿತಪಾದ ದೇವಕುಲದೇಹವಿಮಂಡಿತಕಾಯ ದೇವವಿ
ದ್ರಾವಣದೇವ ಚಂದ್ರಧರದೇವ ಕೃಪಾಕರ ರಕ್ಷಿಸೆಂದು ತಾಂ
ದೇವರ ದೇವನಂ ಮಲಯರಾಜನೃಪಂ ಸ್ತುತಿಗೆಯ್ದನಕ್ಕರಿಂ ॥

ಇಂತು ಮಲಯರಾಜ ದೇವನಭವನಂ ಜಿಗಿಲ್ತಿ ನೋಡಿ
ಕಂತುಹರನ ಚಂದ್ರಧರನ ಪೂಜೆಯೊಳಗೆ ಕಳಿದುಕೂಡಿ
ತ್ರಿಣಯನ ಪ್ರಸಾದದರಕೆವಟ್ಟು ಭಕ್ತಿಯೊಳಗೆ ಸಂದು
ತಣಿದು ತಣಿಯಲಾರದಲ್ಲಿ ಮತ್ತೆ ಮತ್ತೆ ಪೊಗಳಲೆಂದು
ದೇವ ತರುಣತರಣಿಕೋಟಿಗುನ್ನತಪ್ರಭಾವತೇಜ
ದೇವ ಹರಿ ವಿರಿಂಚಿ ಸುರಪ ಮುನಿಗಳರಿಯದಾದಿ ಬೀಜ
ದೇವ ದುರಿತಮಥನ ಕಾಲಮಥನ ಪುಷ್ಪಬಾಣಮಥನ
ದೇವ ನಾಗಮಥನ ಪುಂಡರೀಕಮಥನ ಪುಣ್ಯಕಥನ
ದೇವ ಸಲಿಲಶಯನನಯನಮಂಡಿತಪ್ರಸಿದ್ಧಚರಣ
ದೇವ ಕಮಲಪುತ್ರ ಮಸ್ತಕಪ್ರಯುಕ್ತ ಹಸ್ತಕಿರಣ
ದೇವ ದೇವನಿಕರದೂರ ಪರಮಭಕ್ತಜನಸಮೀಪ
ದೇವ ನಿರ್ಮಳಪ್ರದೀಪ ಸಕಳ ನಿಃಕಲಸ್ವರೂಪ
ದೇವ ಭರ್ಗ ಭೀಮ ಸರ್ವ ಭುವನ ಭವನ ತಿಮಿರಹರಣ
ದೇವ ಘನಪುರಾತಗೀತ ನೂತನ ಪ್ರಸಂಗಕರಣ
ಕರುಣಿಸೆನಗೆ ಪುಣ್ಯಯೂಥ ಇಳೆಯ ಜನದನಾಥನಾಥ
ಕರುಣಿಸೆನಗೆ ಭಾಳನಯನ ಶೈಲಕಾಮನೋವರೂಥ

ಎಂದು ಪೊಗಳ್ವ ಸ್ತುತಿಗಳೊಳಗೆ ಚಂದ್ರಮೌಳಿ ಸಿಲಿಕಿ ನಿಂದು
ಮುಂದೆ ಲಿಂಗದಿಂದೆ ನಿಜದ ರೂಪುವೆತ್ತು ತೋರಿ ಬಂದು
ಜಡೆಯ ನಡುವೆ ಮೆರೆವ ನದಿಯ ತಡಿಯೊಳೊಪ್ಪುತಿರ್ಪ ಶಶಿಯ
ಕಡು ಪೊಡರ್ಪನೊಳಗೆ ತಳೆದು ಘುಳುಘುಳಿಪ್ಪ ಭಾಳಶಿಖಿಯ
ಉರಗ ಕುಂಡಲಂಗಳೊಡನೆ ಸೆಣಸಿ ಹೊಳೆವ ಗಳದ ವಿಷದ
ಸುರಚಿರಪ್ರಕಾಶದಿಂದೆ ತೊಳಪ ಭುಜದ ಪಂಚಮುಖದ
ಕರಿಯನುಗಿದ ಹೊದಕೆಯೊಪ್ಪೆ ಪುಲಿಯ ಚರ್ಮದುಡಿಗೆ ಮೆರೆವ
ಹರಿಯ ನಯನ ನವಮರೀಚಿ ಪದತಳಾಗ್ರದಿಂದೆ ಕರೆವ
ದೇವ ಗಿರಿಜೆಯರಸನಲ್ಲಿ ತನ್ನ ನಿಜವನೊಲಿದು ತೋರಿ
ಭಾವಿಸುತ್ತೆ ಭಕ್ತನಲ್ಲಿಗೆಯ್ದಿನಡೆದು ಬಂದು ಮೀರಿ

ಬೇಡು ಮಲಯರಾಜ ಬೇಡಿಕೊಳ್ಳು ನೆನೆದುದೀವೆನೆನುತೆ
ನೋಡಿ ಮೋಹದಿಂದೆ ಮಗನೆ ಬೇಡು ಬೇಡಿತೀವೆನೆನುತೆ
ಮುಂದೆ ನಿಂದ ಚಂದ್ರಧರನನಂದು ಮಲಯರಾಜನರಿದು
ಮುಂದುಗೆಟ್ಟು ನುಡಿ ಸಡಿಲ್ದು ಸುಖದ ಮೂರ್ಛೆಯೊಳಗೆ ಕಳಿದು
ಮೆಲ್ಲ ಮೆಲ್ಲನೆಚ್ಚರೊಳಗೆ ಸಂದು ತಿಳಿದು ನೋಡಿ ಕಂಡು
ಅಲ್ಲಿ ಬೇಡಿಕೊಂಡನಮಮ ಮಲಯರಾಜನಿಂಬುಗೊಂಡು
ದೇವ ಮಾತೆಪಿತರ ಮನದ ಮಾಯೆಯಂ ಸಡಿಲ್ಚಿಕಳೆದು
ದೇವ ಎನಗೆ ಕರುಣಿಪುದು ಶತಾಯುಮಂ ದಯಾಳು ತಿಳಿದು
ಎಂದಡಾಯುವಿತ್ತೆ ಮತ್ತೆ ಬೇಡು ಮತ್ತೆ ಬೇಡೆನುತ್ತೆ
ಇಂದುಶೇಖರಂ ಪ್ರಮೋದದಿಂದೆ ಬೇಡಿಕೊಳ್ಳೆನುತ್ತೆ

ಇರೆ ಕುಮಾರನಲ್ಲಿ ಬೇಡುತಿರ್ದನಭವನಿಚ್ಚೆಯರಿದು
ಹರನ ಕರುಣವೆಯ್ದೆ ತನ್ನ ಮೇಲುವರಿವ ಭರವನರಿದು
ದೇವ ಮಾತೆ ಪಿತರನಾಥ ಬಂಧುವರ್ಗವೆಲ್ಲ ಸಹಿತೆ
ದೇವ ಬಾಲವೃದ್ಧರೆನ್ನದೆನ್ನ ದೇಶವೆಲ್ಲ ಸಹಿತೆ
ಈಶ ಕರುಣಿಸೆನ್ನ ರಥಪದಾತಿ ಸರ್ವರಾಜ್ಯ ಸಹಿತೆ
ದೇಶದೊಳಗೆ ಬಾಳುತಿಪ್ಪ ಮೃಗಕುಲಂಗಳೆಲ್ಲ ಸಹಿತೆ
ಆನೆ ಕಡೆ ಇರುಂಪೆಮೊದಲೆನಿಪ್ಪ ಜೀವರಾಶಿ ಸಹಿತೆ
ದಾನನಿಧಿಯೆ ಕರುಣಿ ಕರುಣಿಸೆನ್ನ ಚೆನ್ನ ಭಕ್ತಸಹಿತೆ
ಮುಂದೆ ನೂರು ವತ್ಸರಂಗಳೊಳಗೆ ಪೂಜೆಗೆಯ್ದ ಬಳಿಕ
ಇಂದುಮೌಳಿ ನಿನ್ನ ನಿಜದ ಭಕ್ತಿ ಪರ್ವಿ ಬೆಳೆದ ಬಳಿಕ
ಕೊಂಡು ಹೋಹುದಭವ ರಜತಗಿರಿಗೆ ವರವಿದೆಂದು ಬೇಡೆ
ದಂಡಧರ ತಮಾರ್ಕ ಕರುಣಿಸೆಂದು ನಿಷ್ಠೆಯಿಂದೆ ಬೇಡೆ
ಕೊಟ್ಟೆನಯ್ಯ ಕೊಟ್ಟೆನರಸ ಕೊಟ್ಟೆನನ್ನ ಭಕ್ತಿನಿಧಿಯೆ
ಕೊಟ್ಟೆನೆಲೆಲೆ ಮಲಯರಾಜ ಸುಖದೊಳಿರ್ಪುದೆನ್ನ ಸುಧೆಯೆ
ಎಂದು ವರವನಿತ್ತು ಶಂಭು ಮತ್ತೆ ಲಿಂಗದೊಳ್ಪುಗಲ್ಕೆ
ಇಂದುವದನೆ ಶೈಲಸುತೆಯೊಳೊಂದುಗೂಡಿ ಸುಖಮಿರಲ್ಕೆ

ಇತ್ತಲಿರ್ದ ಮಲಯರಾಜನುತ್ಸವಕ್ಕೆ ಹೆಚ್ಚುಗೊಟ್ಟು
ಚಿತ್ತದೊಳ್ಸಮಸ್ತ ಸಂತಸಂಗಳಂ ತೆರಳ್ಕೆಯಿಟ್ಟು
ರಂಗಮಂಟಪಕ್ಕೆ ಬಂದು ಕುಣಿದು ತಣಿದು ತೇಗಿ ತೂಗಿ
ಲಿಂಗವಿತ್ತ ವರಕೆ ಹರುಷವೇರಿ ಮೀರಿ ನಿತ್ಯನಾಗಿ
ದೇವರಾಜನಂಘ್ರಿಯೊಳು ಹೊರಳ್ದು ಹೊಮ್ಮಿ ಭರದೊಳಪ್ಪಿ

ದೇವಿ ಶಚಿಯನಪ್ಪಿ ಮತ್ತೆ ಮತ್ತೆ ತಾಯನಗಲದಪ್ಪಿ
ಭಕ್ತರಂ ಪ್ರಧಾನಿ ಮಂತ್ರಿ ಮುಖ್ಯರಂ ನಿರಂತರಪ್ಪಿ
ಭಕ್ತಿ ಮಿಕ್ಕ ಕಂಡರೆಲ್ಲರಂ ಸರಾಗದಿಂದಲಪ್ಪಿ
ಚಿಪ್ಪುಗಳೆದ ಮುತ್ತಿನಂತೆ ರಂಗವಿಟ್ಟ ರತ್ನದಂತೆ
ಒಪ್ಪವಿಟ್ಟ ನಿಷ್ಠೆಯಂತೆ ಬಣ್ಣವಿಟ್ಟ ಭಕ್ತಿಯಂತೆ
ಎಸೆದ ಪುಣ್ಯದಂತೆ ಭೂಮಿ ತಳದ ಕಲ್ಪತರುವಿನಂತೆ
ಮಿಸುಪ ಸೂರ್ಯನಂತೆ ಹೊಗರನೆತ್ತಿದ ತ್ರಿಶೂಲದಂತೆ
ತೊಳಗಿ ಬೆಳಗಿ ದೇವರಾಜನೊಡನೆ ಮತ್ತೆ ಗಜವನೇರಿ
ತಳೆಯ ನೆಳಲ ತಣ್ಪಿನೊಳಗೆ ಮೆಲ್ಲನಡಿಯನಿಟ್ಟು ಮೀರಿ
ಎಡಬಲಂಗಳೊಳಗೆ ಸಚಿವ ರಾಜಪುತ್ರರಿಡಿದು ನಡೆಯೆ
ಒಡನೆ ಗಜ ತುರಂಗ ರಥ ಪದಾತಿವೃಂದವೆಯ್ದಿ ನಡೆಯೆ
ಮಲಯದೇಶದೊಳಗೆ ಸಂತಸಂಗಳಿಂದೆ ಗುಡಿಯನೆತ್ತೆ
ಮಲಯವತಿಯ ಸತಿಯರೆಲ್ಲ ನೆರೆದು ಮುಡಿಯ ಗುಡಿಯನೆತ್ತೆ
ಹರುಷದಿಂ ವಸಂತನಲ್ಲಿ ಲತೆಯ ಕುಡಿಯ ಗುಡಿಯನೆತ್ತೆ
ಪರಿಮಳಂಗಳೆಲ್ಲ ಪುಷ್ಪಮಂಜರಿಗಳ ಗುಡಿಯನೆತ್ತೆ
ಬಂದು ಮಲಯವತಿಯನತಿ ವಿಳಾಸದಿಂದೆ ನಲಿದು ಪೊಕ್ಕು
ನಿಂದು ಮೆರೆವ ನಿಜನಿವಾಸವಳಯದೊಳಗೆ ಭಕ್ತಿ ಮಿಕ್ಕು
ಆನೆಯಿಂದೆ ಮೆಲ್ಲನಿಳಿದು ಸಿಂಹಪೀಠಕಾಯನಾಗಿ
ಮಾನಿ ಮಲಯರಾಜನಲ್ಲಿ ಸಭೆಯ ನಡುವೆ ಹರುಷನಾಗಿ
ಪುರಜನಕ್ಕೆ ಪರಿಜನಕ್ಕೆ ಭಕ್ತಿಯುಕ್ತರಾಗವೇಳ್ದು
ಪುರಪುರಕ್ಕೆ ದೇಶದೇಶದತ್ತಲರ್ಚಿಸಲ್ಕೇವೇಳ್ದು
ಶಿವ ಪೂಜೆಗೈವುದೆಂದು ತನ್ನ ದೇಶದೊಳಗೆ ಬೀರಿ
ಭವನನರ್ಚಿಸೆಂದು ನವಮಲಕ್ಕ ದೇಶದೊಳಗೆ ಸಾರಿ

ನಿತ್ಯ ನಿಯಮ ಪೂಜೆಗೆಂದು ಮಲಯರಾಜನುರ್ವಿಕೊರ್ವಿ
ಸತ್ಯ ಶರಣನೆಯ್ದೆ ಶಿವನ ನಿಳಯದೊಳಗೆ ತೀವಿ ಪರ್ವಿ
ಪಲ್ಲವಿಪ್ಪ ಪುಳಕದೊಳಗೆ ಬೆಮರಬಿಂದು ಬೀಡುಬಿಟ್ಟು
ಲಲ್ಲೆಯೊಳಗೆ ಗದುಗದಂಗಳಡಸಿ ಮುಂದಣಡಿಯನಿಟ್ಟು
ಸುಖಜಲಂ ವಿಲೋಚನಂಗಳಿರ್ತಡಿಗಳನೊತ್ತಿ ಪರಿದು
ಮುಖದ ಮುನಿಸು ನೇಹ ಜಗಳದೊಡನೆ ಶಿವನನಪ್ಪಿ ನೆರೆದು
ಮಜ್ಜನಕ್ಕೆ ಮೆಲ್ಲ ಮೆಲ್ಲನೆರೆದು ಮರೆದು ಪುಳಕಿಸುತ್ತೆ
ಪಜ್ಜಳಿಪ್ಪ ಶಿವನನೊಲಿದು ಮುಟ್ಟಿ ಮುಟ್ಟಿ ಕಂಪಿಸುತ್ತೆ
ಚಂದನಕ್ಕೆ ಮೃಗಮದಕ್ಕೆ ಹದನವಿತ್ತು ಬಣ್ಣಿಸುತ್ತೆ

ಇಂದುಮೌಳಿಗಿತ್ತು ನೋಡಿ ಮತ್ತೆ ನೋಡಿ ಲಾಲಿಸುತ್ತೆ
ಸೊಂಪು ಮಿಗುವ ಸಂಪಿಗೆಗಳ ಕಂಪಿನೆಸಳನೆತ್ತಿಕೊಂಡು
ಇಂಪನುಗುಳ್ವ ಜೆಡೆಯ ಮುಡಿಗೆ ತುರುಬಿ ಸುಖಮನೊಪ್ಪುಗೊಂಡು
ನವ್ಯ ಕುಸುಮಸಂಕುಳಂಗಳಿಂದಲೊಮ್ಮೆ ಪೂಜೆಗೆಯ್ದು
ವಿಮಳ ವಸ್ತ್ರದಿಂದಲೊಮ್ಮೆ ಪೂಜೆಗೆಯ್ದು ಪೂಜೆಗೆಯ್ದು
ವಿಮಳಧೂಪವಿಕ್ಕಿ ಬೆಳಗನೆತ್ತಿಯೆತ್ತಿ ನೋಡಿ ನಲಿದು
ಅಮೃತರಸವನೂಡಿಯೂಡಿ ವೀಳೆಯಂಗಳಿತ್ತು ಕುಣಿದು
ಸಿಂಗರಕ್ಕೆ ತನುವನಿತ್ತು ಮನವನಿತ್ತು ತನ್ನನಿತ್ತು
ಹಿಂಗದಪ್ಪಿ ಹಿಗ್ಗಿ ಹೆಚ್ಚಿ ಲಿಂಗದತ್ತ ಚಿತ್ತವಿತ್ತು
ಪೂಜೆಯೆಲ್ಲವಂ ಸಡಿಲ್ಚಿ ಮತ್ತೆ ಪೂಜೆಗೆಯ್ದು ನೋಡಿ
ಓಜೆಗೆಟ್ಟು ಸೀಮೆಗೆಟ್ಟು ಮಿಕ್ಕು ನುಡಿದು ಮೀರಿ ನೋಡಿ
ಎನಿತು ಪೂಜೆಮಾಡಿ ನೋಡಿ ಮೆಚ್ಚದಚ್ಚಿಗಂಗೊಳುತ್ತೆ
ನೆನೆದ ಪೂಜೆಯಳವಡಲ್ಕೆ ಹೆಚ್ಚಿ ಹೆಚ್ಚಿ ರಾಗಿಸುತ್ತೆ
ಮರೆದು ಮುಟ್ಟಿಯರಿದು ಮುಟ್ಟಿ ಮತ್ತೆ ಮುಟ್ಟಿ ಮುಟ್ಟಿ ಬಿಡದೆ
ತೊರೆಯಲಾರದೊರಹುಗೆಟ್ಟು ಚಿತ್ತವಿಟ್ಟು ತೆರಹುಗುಡದೆ
ಲಲ್ಲೆಗರೆದು ನಿಲ್ಲದಗಲದಪ್ಪಿಕೊಂಡು ಲಜ್ಜೆಗೆಟ್ಟು
ಗೆಲ್ಲವಳಿದು ಸುಯ್ದು ಸೋತು ಮಾತು ಬೀತು ಧಾತುಗೆಟ್ಟು
ಚಿತ್ತದೊಳಗೆ ಶಿವನನಿರಿಸಿ ನಯನಯುಗಮನರೆಮುಗುಳ್ಚಿ
ಹಸ್ತರಂಗದೊಳಗೆ ಕಂತುಹರನ ಪೂಜೆಯಂ ತೆರಳಚಿ
ಭಾವಪೂಜೆ ಬಲಿದು ದೇಹದೊಳಗೆ ಹೊರಗೆ ನೆಮ್ಮಿ ಹೊಮ್ಮಿ
ಭಾವವಿಡಿದು ತೀವಿ ದೇವನಂತಿರಿಪ್ಪನೊಮ್ಮೆಯೊಮ್ಮೆ
ಅರ್ಚಿಸುತ್ತೆ ತಿರುಗಿನೋಡಿ ಲಿಂಗದೊಳಗೆ ಹುಟ್ಟಿದಂತೆ
ಬೆಚ್ಚಿ ಬೆರಸಿ ಹತ್ತಿ ಕೀಲಿಸುತ್ತೆ ಭೇದವಿಲ್ಲದಂತೆ
ಪಗಲನರಿಯದಿರುಳನರಿಯದಕ್ಕರಿಂದಲರ್ಚಿಸುತ್ತೆ
ಬಗೆಗೆ ಬಂದ ಪೂಜೆ ಕೈಯ್ಗಳೊಳಗೆ ಹೆಚ್ಚಲರ್ಚಿಸುತ್ತೆ
ಪೂಜಿಸುತ್ತೆ ಪುಳಕಿಸುತ್ತೆ ಪೊಡಮಡಲ್ಕೆ ನೆನದು ನೋಡಿ
ಸೋಜಿಗಕ್ಕೆ ಸೊಗಸುತೀವಿಯಗಲಲಾರದಲ್ಲಿ ಕೂಡಿ
ದೇವ ದೇಶದೊಳಗಣರ್ಚನೆಗಳನರಿದು ಬರ್ಪೆನಯ್ಯ
ದೇವಲೋಕವಾದ ಪರಿಯನೊಪ್ಪಿ ನೋಡಿ ಬರ್ಪೆನಯ್ಯ

ಎಂಬ ಬಿನ್ನಪಕ್ಕೆ ಶಂಭು ಕರುಣಿಸಲ್ಕೆ ನಡೆದು ಬಂದು
ನಂಬಿ ಭಕ್ತಿಯಿಂಬು ತನ್ನ ಬೆಂಬಲಕ್ಕೆ ನೆಲಸಿ ನಿಂದು
ನಿಂದ ತುರಗ ಭಾಳದೊಳಗೆ ಭಸಿತವಿಟ್ಟು ಭೋಂಕನೇರಿ

ಬಂದನಮಮ ಮಲಯರಾಜದೇವನಕ್ಕರಿಂದೆ ಮೀರಿ
ಬರಬರಲ್ಕೆ ಕಂಡುದೆಲ್ಲ ನಿಂದುದೆಲ್ಲ ಶಿವನ ಪೂಜೆ
ನೆರೆವುದೆಲ್ಲ ನಡೆವುದೆಲ್ಲ ನುಡಿವುದೆಲ್ಲ ಶಿವನ ಪೂಜೆ
ಮನೆಗಳೊಳಗೆ ಶಿವನ ಪೂಜೆ ಕೇರಿಯೊಳಗೆ ಶಿವನ ಪೂಜೆ
ಘನ ಪುರಂಗಳೊಳಗೆ ನೋಡೆ ಕೂಡೆ ಚಂದ್ರಚೂಡ ಪೂಜೆ
ಪಟ್ಟಣಂಗಳೊಳಗೆ ನಮ್ಮ ದಿಟ್ಟಮೂರರವನ ಪೂಜೆ
ಬಟ್ಟೆಯೂರೊಳೆಯ್ದೆ ಶಿವನ ನಿಷ್ಠೆ ಬಲಿದ ಭಾವಪೂಜೆ
ನಗರಿನಗರಿಯಲ್ಲಿ ನಾಗಕುಂಡಲಪ್ರಸಿದ್ಧ ಪೂಜೆ
ಸೊಗಯಿಪಗ್ರಹಾರದಲ್ಲಿ ಕುಸುಮಶರವಿರುದ್ಧ ಪೂಜೆ
ನಾಡು ನಾಡೊಳೆಲ್ಲ ಚಂದ್ರಧರನ ಪೂಜೆ ಹರನ ಪೂಜೆ
ಬೀಡು ಬೀಡೊಳೆಲ್ಲ ಕೂಡೆ ಶಿವನ ಪೂಜೆ ಭವನ ಪೂಜೆ
ದೇಶ ದೇಶದಲ್ಲಿ ಪಂಚಮುಖನ ಪೂಜೆ ಸುಖದ ಪೂಜೆ
ಭಾಸುರಸ್ಥಲಂಗಳಲ್ಲಿ ಭೀಮಪೂಜೆ ಸೋಮಪೂಜೆ
ತರುಗಳಲ್ಲಿ ಶಂಕರಪ್ರಭಾವಪೂಜೆ ದೇವಪೂಜೆ
ಗಿರಿವನಂಗಳೊಳಗೆ ಕೂಡೆ ಹರುಷಪೂಜೆ ಗಿರಿಶಪೂಜೆ
ನದಿಗಳೊಳ್ ತಟಾಕದೊಳ್ ಕೊಳಂಗಳೊಳಗೆ ಲಿಂಗಪೂಜೆ
ಮುದದೊಳೊಪ್ಪುತಿರ್ಪ ಮಂಗಳಂಗಳೊಳಗೆ ಲಿಂಗಪೂಜೆ
ಆನೆಗೆಲ್ಲ ಜ್ಞಾನಪೂಜೆ ಕುದುರೆಗೆಲ್ಲ ಧ್ಯಾನಪೂಜೆ
ಸೇನೆಗೆಲ್ಲ ಶಿವನ ಪೂಜೆ ಕಂಡುದೆಲ್ಲ ಹರನ ಪೂಜೆ
ಕೇಳ್ವುದೆಲ್ಲ ಶಿವನ ಪೂಜೆ ಮಾಳ್ಪುದೆಲ್ಲ ಶಿವನ ಪೂಜೆ
ಬಾಳ್ವುದೆಲ್ಲ ಶಿವನ ಪೂಜೆ ಬಯಸಿತೆಲ್ಲ ಶಿವನ ಪೂಜೆ
ಸಕಲಜೀವರಾಶಿಗೆಲ್ಲ ಗಣ್ಯಪೂಜೆ ಪುಣ್ಯಪೂಜೆ
ಸಕಲದೇಶದಲ್ಲಿ ಸೊಗಯಿಪಗ್ರಪೂಜೆ ಉಗ್ರಪೂಜೆ
ಜಾವಿಲ್ಲ ಘಳಿಗೆಯಿಲ್ಲ ದಿವಸವಿಲ್ಲ ನಿತ್ಯಪೂಜೆ
ಆವ ನಿಯಮವಿಲ್ಲ ಸಂಶಯಂಗಳಿಲ್ಲ ನಿಜದ ಪೂಜೆ
ತರ್ಕವಿಲ್ಲ ಬೇರ್ಕೆಯಿಲ್ಲ ಬಚ್ಚಬರಿಯ ಶಿವನ ಪೂಜೆ
ಕರ್ಕಶಂಗಳಿಲ್ಲ ಬೋಧೆಯಿಲ್ಲದಭವನಳ್ತಿಪೂಜೆ
ದೇಶ ದೇಶದೊಳಗೆ ಘಂಟೆರವಗಳಲ್ಲದಿಲ್ಲ ಮತ್ತೆ
ದೇಶದೊಳಗೆ ಧೂಪ ಪರಿಮಳಂಗಳಲ್ಲದಿಲ್ಲ ಮತ್ತೆ
ಮರ್ತ್ಯಲೋಕದೊಳಗೆ ರುದ್ರಲೋಕವಿರ್ಪ ತೆರದೊಳಿರ್ದು
ಮರ್ತ್ಯದೊಳಗೆ ದೇವಗಣಸಮೂಹವಿರ್ಪ ತೆರದೊಳಿರ್ದು

ಇಂತು ತನ್ನ ನವಮಲಕ್ಕ ದೇಶದೊಳಗೆ ಪೂಜೆಯೆಸಗೆ
ಕಂತುಹರನ ಶಿವನ ಭವನ ಮಹಿಮೆಯೊಡನೆ ಕೂಡೆ ಮಸಗೆ
ಅಲ್ಲಿಯಲ್ಲಿ ಹೊಕ್ಕು ಹೊಕ್ಕು ನೋಡಿ ನೋಡಿ ನಲಿದು ನಲಿದು
ಒಲ್ಲನುಲಿದು ಮಿಕ್ಕು ಮೀರಿಯಾಡಿ ಹಾಡಿ ಕುಣಿದು ಕುಣಿದು
ಮೆಚ್ಚನಿತ್ತು ಭಕ್ತಜನವನಗಲದಪ್ಪಿಯಪ್ಪಿಕೊಂಡು
ಮಚ್ಚಿ ಮಣಿದು ನಚ್ಚಿ ನಲಿದು ಹೆಚ್ಚಿ ಹಿಗ್ಗಿ ಸುಗ್ಗಿಗೊಂಡು
ಮಲಯವತಿಗೆ ಮರಳಿಬಂದು ಶಿವನ ನಿಳಯದೊಳಗೆ ಪೊಕ್ಕು
ಕುಲವೆ ಛಲವೆ ಬಲವೆ ನಿಲವೆ ಒಲುವೆಯೆಂದು ಸಲುಗೆ ಮಿಕ್ಕು
ಮಳಯರಾಜನಲ್ಲಿ ಪುಷ್ಪರಾಜಿ ತಣಿಯೆ ಪೂಜೆ ಮಾಡಿ
ತಿಳಿದ ಸಲಿಲವೆಯ್ದೆ ತಣಿಯೆ ತಣಿದು ತಣಿಯೆ ಪೂಜೆಮಾಡಿ
ದೆಸೆಗಳೆಲ್ಲ ತಣಿಯೆ ಲೋಕವೆಲ್ಲ ತಣಿಯೆ ಪೂಜೆಮಾಡಿ
ಎಸೆಯಲಷ್ಟಲೋಕಪಾಲರೆಲ್ಲ ತಣಿಯೆ ಪೂಜೆಮಾಡಿ
ರಸೆ ಜಲಾಗ್ನಿವಾಯುಗಗನವೆಲ್ಲ ತಣಿಯೆ ಪೂಜೆಮಾಡಿ
ಶಶಿ ಸಹಸ್ರಕಿರಣನಾತ್ಮರೊಲಿದು ತಣಿಯೆ ಪೂಜೆಮಾಡಿ
ನೂರುವರುಷವೆಂಬುದೊಂದು ವರುಷಮಾಗಿ ಪೂಜೆಗೆಯ್ದು
ತೋರಲಿಲ್ಲ ಬೀರಲಿಲ್ಲದಚ್ಚಸುಖದ ಪೂಜೆಗೆಯ್ದು
ಅಂತರಂಗವಂ ಶಿವಂಗೆ ಮಾರುಗೊಟ್ಟು ಸೂರೆಗೊಟ್ಟು
ಸಂತತಂ ಹರಂಗೆ ತನ್ನನೊಪ್ಪುಗೊಟ್ಟು ತೊತ್ತುಗೊಟ್ಟು

ಇಂತು ನೂರು ವತ್ಸರಂ ವಿಳಾಸದಿಂದೆ ಪೂಜೆಗೆಯ್ದು
ಕಂತುಮರ್ದನಂಗೆ ಚಿತ್ತದಳ್ತಿ ತಣಿಯೆ ಪೂಜೆಗೆಯ್ದು
ದೇವ ಮರ್ತ್ಯದೊಳಗೆ ಸುಖದೊಳಿಪ್ಪುದಿನ್ನು ಸಾಲ್ವುದಯ್ಯ
ದೇವ ರಜತಗಿರಿಗೆ ಹರುಷದಿಂದೆ ಕೊಂಡು ಪೋಪುದಯ್ಯ
ಎಂದ ಬಿನ್ನಪಕ್ಕೆ ಶಂಭು ಲಿಂಗದಿಂದಲೊಲೆಗದುಬಂದು
ಸಂದ ಪಂಚವದನ ದಶಭುಜಂ ತ್ರಿಣೇತ್ರದಿಂದೆ ನಿಂದು
ತನ್ನ ಗಣಸಮೂಹವೆಲ್ಲವಂ ವಿಳಾಸದಿಂದೆ ನಿಂದು
ತನ್ನ ಬಂಧುಬಳಗವಪ್ಪ ಸಕಲಗಣವನೊಲಿದು ನೆನೆಯೆ
ನೆನೆವುದಕ್ಕೆ ಮುನ್ನವೆಯ್ದಿ ಬಂದುದಲ್ಲಿ ದೇವಕೋಟಿ
ಘನ ಪೊಡರ್ಪನೊಪ್ಪಗೆಯ್ದು ಹಾದಿಗೊಂಡು ಮಕುಟಕೋಟಿ
ಬೇರೆ ಬೇರೆ ನೊಸಲಕಣ್ಣನಂದಿವಾಹರಲ್ಲಿ ಕೋಟಿ
ಬೇರೆ ಬೇರೆ ಡಮರುಗ ತ್ರಿಶೂಲಹಸ್ತರಲ್ಲಿ ಕೋಟಿ
ದೆಸೆಯನೊತ್ತಿ ರಸೆಯನೆತ್ತಿ ಜಗವನುಡುಗಿ ಮುತ್ತಿಕೊಳುವ
ಎಸೆವ ದಿಗ್ಗಜಂಗಳಲ್ಲಿ ಮಿಸುಪ ಕೋಡನುಡಿದುಕೊಳುವ

ಉಡುಗಣಂಗಳಂ ಸಮಂತುದುರ್ಚೆ ನೆಲದೊಳಾಯ್ದುಕೊಳುವ
ನಡೆವ ಚಂದ್ರರವಿಗಳಂ ತೆರಳ್ಚಿ ಬೊಟ್ಟುನಿಟ್ಟುಕೊಳುವ
ಗಣಸಮೂಹಮಂ ಪುರಾರಿ ಕಂಡು ಹರುಷಚಿತ್ತನಾಗಿ
ತ್ರಿಣಯನಂ ಪ್ರಮೋದವುಕ್ಕಿ ಕರುಣದಿಂ ಪ್ರಸನ್ನನಾಗಿ
ಮಲಯರಾಜದೇವನಂ ಪ್ರಸಿದ್ಧ ಗಣಕುಲಕ್ಕೆ ತೋರಿ
ಇಳೆಗೆ ಪೊಸತೆನಲ್ಕೆ ದೇಶಸಹಿತವೊಯ್ವೆನೆಂದು ಸಾರಿ
ಬೆಗೆಯವೇಳೆನಲ್ಕೆ ನೆಗೆದವಲ್ಲಿ ನವಮಲಕ್ಕದೇಶ

ಒಗೆದವಲ್ಲಿ ಪುಷ್ಪವೃಷ್ಟಿ ದುಂದುಭಿ ಪ್ರಣಾದಘೋಷ
ವೆಸೆಯೆ ಮೃದು ಮೃದಂಗ ಪಟಹ ದಿವ್ಯಶಂಖನಾದವಲ್ಲಿ
ಎಸೆಯೆ ಬಿರದನೆತ್ತಿ ಕರೆವ ಕಹಳೆಗಳ ಸುನಾದವಲ್ಲಿ
ಗಿರಿಗಳೆದ್ದು ನಾಕಲೋಕದತ್ತ ದಾಳಿಯಿಡುವ ತೆರದೆ
ಧರಣಿ ದೇವಲೋಕಮಂ ಪರೀಕ್ಷಿಸಲ್ಕೆ ನೆಗೆವ ತೆರದೆ
ನೆಗೆದವಲ್ಲಿ ಪಟ್ಟಣಂ ಪುರಂ ತಟಾಕ ನದಿಗಳೆಯ್ದೆ
ನೆಗೆದವಲ್ಲಿ ಹಳ್ಳಿ ಪಳ್ಳಿ ಖೇಡಗ್ರಾಮ ತೀವಲೆಯ್ದೆ
ನೆಗದವಲ್ಲಿಜುಂಪೆಯಾನೆಯಾದಿ ಜೀವರಾಶಿಯೆಯ್ದೆ
ನೆಗದವಲ್ಲಿ ಗಗನವಿಂಬುಗೆಟ್ಟು ಕೂಡೆ ತೀವಲೆಯ್ದೆ
ಗುಳಿದುದಿತ್ತ ಗಣಸಮೂಹವೊಂದು ಕೊಳನನೆತ್ತಿದಂತೆ
ಗುಳಿದುದಲ್ಲಿ ಮಲಯದೇಶ ವಳಯವಿಳೆಯ ಪೊಕ್ಕುಳಂತೆ
ಮೇಲೆ ಮೀರಿ ನೆಗೆದವೇರಿ ನೆಗೆದವಡರ್ದು ನೆಗೆದವತ್ತ
ಮೇಲೆ ಮೇಲೆ ಕಾಣಬಾರದಂತೆ ನೆಗೆದವತ್ತಲತ್ತ
ಅಮರರೆಲ್ಲ ಕಂಡು ಕೌತುಕಂ ಮುಸುಂಕಿ ಕವಿದು ನೋಡಿ
ಅಮರಪತಿಗೆ ಕೌತುಕಕ್ಕೆ ಕೌತುಕಂಗಳಡಸಿ ಮೂಡೆ
ದೇವಲೋಕವೆಯ್ದೆ ಧೂಪಧೂಮದಿಂದೆ ಮುಸುಕಿಹೋಗೆ
ದೇವಲೋಕ ಮರ್ತ್ಯಲೋಕವರಿಯಬಾರದಂದಮಾಗೆ
ನೆಗೆದು ರಜತಗಿರಿಯ ನಂದಿನಾಥನಿಪ್ಪ ಬಾಗಿಲಲ್ಲಿ
ಬಗೆಗೆ ಚಿತ್ರಮಾಗೆ ನವಮಲಕ್ಕದೇಶವೊಪ್ಪಲಲ್ಲಿ
ಭುಜಗಭೂಷನೆಯ್ದಿ ತನ್ನ ನಿಜನಿವಾಸನಾಗುತಲ್ಲಿ
ರಜತಗಿರಿಯ ಸಿಂಹವಿಷ್ಟರ ಪ್ರವಿಷ್ಟನಾಗುತಲ್ಲಿ

ಆರರೆ ನಂದಿನಾಥ ನೋಡು ತಂದೆಮಕ್ಕಳಿಬ್ಬರಿರವ
ಅರರೆ ಭಕ್ತಿಯುಕ್ತಿ ಮುಕ್ತಿವೆರಸಿ ಹರುಷರಾದ ಬರವ
ಎನ್ನ ಭಕ್ತಿನಿಧಿಯೆ ಮಲಯರಾಜ ಬಾರಬಾರೆನುತ್ತೆ

ತನ್ನ ಕೈಯೊಳೆತ್ತಿ ತೆಗೆವುತಪ್ಪಿ ಸಭೆಗೆ ರಂಜಿಸುತ್ತೆ
ತಂದೆಗಂ ಮಗಂಗೆ ಗಣಪದಂಗಳಿತ್ತು ನೋಡಿ ನಲಿದು
ಬಮದ ಮಲಯದೇಶಮಂ ಸುವರ್ಣಗಿರಿಯೊಳಿರಿಸಿ ಮೆರೆದು
ಭಕ್ತಜನಮನೋರಥ ಪ್ರದೋನ್ನತಂ ಪ್ರಿಯಂ ಕಪಾಲಿ
ಭಕ್ತನಿಕರವನಧಿವರ್ಧನೇಂದುಸನ್ನಿಭಂ ತ್ರಿಶೂಲಿ
ಕಾಮವೈರಿ ಪುಣ್ಯಕಾರಿಯರ್ಧನಾರಿ ಚಂದ್ರಧಾರಿ
ಭೀಮನಮಳಧಾಮನತುಳ ಸೀಮನಭವನಂತಕಾರಿ
ದೇವನೊಲಿದಡೀವನೆನಿಪನಾವನರಿಯೆ ಕಾವನಮಮ
ಆವಗಂ ಪುರಾರಿಯಲ್ಲದಾವನುಂಟು ನೋಡಲಮಮ
ಶೂಲಿಯಸ್ಥಿಮಾಲಿಯಜಕಪಾಲಿ ಚಂದ್ರಮೌಲಿಯರರೆ
ಕಾಳಿಯಂಕಪಾಲನುಗ್ರ ಭಾಳನಚಲಶೀಲನರರೆ
ನಾದನಿಳಯನುರಗವಳಯನಿಂದುಕಳೆಯನೆಸೆದನಲ್ಲಿ
ವೇದವರಿಯದಾದಿಯಂತ್ಯಭೇದರಹಿತನೆಸೆದನಲ್ಲಿ
ಇಂದ್ರ ಮಕುಟಕೋಟಿ ಮಣಿವಿರಾಜ ಚರಣನೊಪ್ಪಿದಂ
ಚಂದ್ರಮೌಲಿ ಶೂಲಿ ಹಂಪೆಯರಸ ವಿರುಪನೊಪ್ಪಿದಂ

ಒಂದೂರೋ ಎರಡೂರೋ
ಸಂಧಿಸಿ ನವಲಕ್ಕದೇಶಮಂ ಕೈಲಾಸ ।
ಕ್ಕಂದೊಯ್ದ ಮಲಯರಾಜನ
ಕಂದನೆಯಾಂ ಕರುಣಿಸೆನಗೆ ಹಂಪೆಯರಾಯಾ ॥

❖❖

# ೬. ಬಾಣನ ರಗಳೆ

ಕ್ಷೋಣೀತಳದೊಳ್ ಮೆರೆದಂ
ಬಾಣನ ನವಪದ್ಯಗದ್ಯಕಾವ್ಯಕಳಾಗೀ ।
ರ್ವಾಣನನಬಲಾ ಸುಮನೋ
ಬಾಣನನೊಲವಿಂದೆ ಹಂಪೆಯವಿರೂಪಾಕ್ಷಂ ॥

ಭೂಮಿಯೊಳು ಕಂದಾರವೆಂಬ ಪಟ್ಟಣದಲ್ಲಿ
ಭೂಮಿಪತಿಯೊಪ್ಪುವಂ ನಂದನೆಂಬರಸಲ್ಲಿ
ಆತನಗ್ಗದ ಕವಿಗಳೆನಿಸಿಕೊಂಡೊಪ್ಪುವರು
ನೂತನಕಳಾಲಸಿತ ವಾಕ್ಯಮುಮನಪ್ಪುವರು
ಬಾಣಂ ಮಯೂರನುಂ ಕಾಳಿದಾಸಂ ನೋಡೆ
ಜಾಣರೆನಿಸುವ ಮೂವರುಂ ಪ್ರಸಿದ್ಧರು ನೋಡೆ
ಅವರೊಳಗೆ ಸಜ್ಜನರು ಶಿವಭಕ್ತಿಕಾಮಿಗಳು
ಶಿವಭಕ್ತರುತ್ತಮರು ಶಂಕರಪ್ರೇಮಿಗಳು
ಎನಿಪ ಬಾಣಂ ಕಾಳಿದಾಸನುಂ ಸೈತಾಗಿ
ಮನದೊಳು ಮಯೂರನೊಡತನ ಮತ್ಸರಂ ತಾಗಿ
ನಂದನೋಲಗದೊಳೊಂದೆವಸಮಿರ್ಬರುಮಿರ್ದು
ಸಂದ ಕವಿತೆಯ ಹುರುಡು ಮನದೊಳಗೆ ಮಿಗೆ ಸಾರ್ದು
ಎಂದರಾ ನಂದಂಗೆ ತಾವಿಬ್ಬರುಂ ಕೂಡಿ
ಸಂದಣಿಸಿದೇಕಾಂತದೊಳು ನುಡಿಗಳಂ ನೀಡಿ
ಕವಿ ಮಯೂರನನಿಲ್ಲಿ ಪೊಗಿಸಲಾರದು ದೇವ
ಆವಯವಂ ಸರ್ವದುರ್ವರ್ಣಮಾಗ[ದೆ] ದೇವ

ಎನಲಲ್ಲಿ ನಂದರಾಜಂ ಕೌತುಕಂ ತಾಳ್ದು
ಮನದೊಳಗಿದಂ ಪರೀಕ್ಷಿಪೆನೆಂಬ ಬಗೆ ತಾಳ್ದು
ಅನಿಮಿತ್ತದೋಕುಳಿಯನೊಪ್ಪದಿಂ ಹಣ್ಣಿದಂ

ತನತನಗೆ ಪರಿಜನಕ್ಕೆಲ್ಲ ನೆರೆ ಸಾರಿದಂ
ನಾಳೆ ಓಕುಳಿಯೆಂದು ಪುರಜನಕೆ ಪೇಳುತಿರೆ
ಆಳೆದ್ದು ಜನವೆಲ್ಲ ನೆರೆದು ಸಂಭ್ರಮಿಸುತಿರೆ
ಅರಿದನಾಗಳೆ ಮಯೂರಂ ಜಲಕ್ರೀಡೆಯಂ
ನೆರೆ ಬಾಣ ಕಾಳಿದಾಸರ ಮುನಿಸಿನೋಜೆಯಂ
ಅರಿದು ಚಿಂತಿಸುತಿರಲ್ಕಸ್ತಮಯವಂದಾಯ್ತು
ಮೆರೆವ ಸೂರ್ಯನ ಕಾಂತಿಯಂಬುನಿಧಿಯೊಳಗಾಯ್ತು
ಕೊರಗಿದವು ಚಂಪಕಂ ಕೋಕಂಗಳೊಡನೊಡನೆ
ಅರಳ್ದವಾ ಕೈರವಂ ಜಾರೆಯರ ಮೊಗದೊಡನೆ
ಮೆಲ್ಲ ಮೆಲ್ಲನೆ ತಮಂ ತೀವಿತ್ತು ಗಗನಮಂ
ಅಲ್ಲಲ್ಲಿ ಮುಸುಕಿದುದು ಪಸರಿಸಿತು ಲೋಕಮಂ
ಒತ್ತರಿಪ ಜಾರೆಯರ ಮೊತ್ತ[ವತಿರಾ]ಗದಿಂ
ಬಿತ್ತರಿಸುವವರ ಕಣ್ಗಳ ಮೀನ್ಗಳೊಪ್ಪದಿಂ
ತೊಡಿಗೆಗಳೊಳಲ್ಲಲ್ಲಿ ತೊಳಪ ನವರತ್ನದಿಂ
ಬಿಡದೆಸೆವ ಪುಷ್ಪಚಾಪನ ಮಕರದಂಡದಿಂ
ಕತ್ತಲೆ ಸಮುದ್ರದಿಂದೊಪ್ಪಿರ್ಪ ಸಮಯದೊಳು
ಸುತ್ತಲುಂ ಜಾರೆಯರು ಹಾರೈಪ ತವಕದೊಳು
ಜಾರೆಯರ ಮೇಲೆ ಕಾಮನ ದಾಳಿ ಬರ್ಪಂತೆ
ಮೇರೆಗೆಟ್ಟನುಭವಕೆ ಮಾರಿ ಕವಿತಪ್ಪಂತೆ
ಭೋಂಕನೊಗೆದುದು ಮುಂತೆ ಬೆಳದಿಂಗಳಂತಲ್ಲಿ
ಶಂಕಿಸುತ್ತಂ ಸತಿಸಮೂಹವೋಡಿತ್ತಲ್ಲಿ
ಇಂದ್ರದಿಗ್ವಳಯದಿಂ ಪೊರಮಟ್ಟನೊಪ್ಪದಿಂ
ಚಂದ್ರಮಂ ಲೋಕಮಂ ಧವಳಿಸುತ್ತೊಪ್ಪದಿಂ
ಬರಲಲ್ಲಿ ಶಿವಕೀರ್ತಿ ರಾಯಭಾರಿಯ ತೆರದೆ
ಗಿರಿಸುತೆಯ ದರಹಾಸಮುಂ ರಂಜಿಸುವ ತೆರದೆ
ಬಂದ ಚಂದ್ರಮನಿಂದೆ ರಾತ್ರಿಯೊಪ್ಪುತ್ತಿರಲು
ಇಂದುವಪರಾ[ದ್ರಿ]ಯತ್ತತ್ತ ಸಾರುತ್ತಿರಲು

ನಿದ್ರೆಯಿಲ್ಲದೆ ಮಯೂರಂ ಚಿಂತಿಸುತ್ತಿರ್ದು
ಭದ್ರಗುಣನಿನ್ನೆಂತು ಮಾಡುವೆನೆನುತ್ತಿರ್ದು
ಮನದೊಳಗೆ ನಿಶ್ಚಯಿಸಿದಂ ಭಾನುವಿಂದಿಂದೆ
ತನುವಿನ ವಿವರ್ಣಮಂ ತೀರ್ಚಿಪೆಂ ದಿಟದಿಂದೆ
ಎಂದು ಬೆಳಗಪ್ಪ ಜಾವದೊಳೆದ್ದು ನಡೆತಂದು

ಬಂದುದಕದೊಳಗೆ ಕಂಠಪ್ರಮಾಣಂ ನಿಂದು
ಸೌರಭ್ಯ ಮುಖನಾಗಿ ಕೈಯೆತ್ತಿ ಪೊಡಮಟ್ಟು
ಸೌರಮಂತ್ರಂಗಳಂ ಮನದ ತುದಿಯೊಳಗಿಟ್ಟು
ತ್ರಿಜಗಮಂ ಬೆಳಗುವ ಮಹಾಕಾಂತಿಸಂಪನ್ನ
ಭುಜಗಭೂಪನ ಸರ್ವಕಾರುಣ್ಯಸಂಪನ್ನ
ಲೋಕಕ್ಕೆ ಕಣ್ಣಾಗಿ ಕಾಣಿಸುವ ಮಹಿಮನೇ
ಲೋಕಕ್ಕೆ ಬೆಳಗಾಗಿ ಬಳಸುವಾದಿತ್ಯನೇ
ಜೀವರಾಯುಷ್ಯರಾಶಿಯನಳೆವ ನಿಶ್ಚಳನೆ
ಭಾವಿಸುವರಘಕುಳವನೋಡಿಸುವ ನಿರ್ಮಳನೆ
ಎಂದಲ್ಲಿ ಸೂರ್ಯಶತಕವನೋದೆ ಮೆಚ್ಚುತಂ
ಬಂದು ಮೆಯ್ಯಂ ಕೊಟ್ಟನಾದಿತ್ಯನುನ್ನತಂ
ಪಡೆದು ಬಂದಂ ಮೆಯ್ಯ ಮಯ್ಯೂರನೊಪ್ಪದಿಂ
ಪಡೆದು ಬರೆ ಮೈ ಸುವರ್ಣಚ್ಛಾಯೆಯಂದದಿಂ

ಇರೆ ಮನೆಯೊಳಿರ್ದಂ ಸುಖಾಸ್ವಾದಮನನಾಗಿ
ಪರೆದುದಿತ್ತಲು ತಮಂ ಜನದ ಮನಕನುವಾಗಿ
ಬೆಳಗಾಗಿ ನಂದಭೂಪಂ ನಗರಿಯಂ ಬರಿಸಿ
ತೊಳತೊಳಗುವೋಕುಳಿಯ ಕುಪ್ಪಸಮುಮಂ ತರಿಸಿ
ಎಲ್ಲರ್ಗೆ ಕೊಡುತಂ ಮಯೂರಂಗೆಯುಂ ಕೊಟ್ಟು
ಎಲ್ಲರಂ ಸಿಂಗರಂ ಮಾಡಲ್ಕೆ ಬೀಳ್ಕೊಟ್ಟು
ನಡುವಗಲು ನಂದರಾಜಂ ಸಿಂಗರಂ ಮಾಡಿ
ಕಡುಚೆಲುವೆಯರ ಮೊತ್ತದೊಡನೊಡನೆ ನಡೆಗೂಡಿ
ನನೆಯ ಹರಿಗೆಗಳಿಂದೆ ಹೂವಿನ ಕಠಾರದಿಂ
ಮೊನೆಯ ಮೊಗ್ಗೆಗಳ ಪಿಲ್ಲಣಿಗೆಯೊಯ್ಯಾರದಿಂ
ಕೇದಗೆಯ ಸಣ್ಣೆಸಳ ಕೂರಲಗು ಮೆರೆವುತಿರೆ
ಹಾದರಿಯ ನನೆವಿಡಿದ ಕಂಚುಕಿಗಳೊಪ್ಪುತಿರೆ
ಹೊಳೆವ ಕಬ್ಬಿನ ಬಿಲ್ಲ ನನೆಗೋಲ ಬಾಣದಿಂ
ನಳನಳಿಪ ವಿಟರ ಭಾವವನೆಸುವ ಕೇಣದಿಂ
ಬಿದಿರಂಡೆ ಕೊಂಬು ಹೊಯಿಸಿಪ್ಪು ನಾಳಿಗಳೆಸೆಯೆ
ಪದೆಗೊರಲ ಪದ್ಮವದನೆಯರ ಹರಿಬಂ ಮಸಗೆ
ಮುಂದಿರ್ದ ನಂದಪರಿವಾರಕ್ಕೆ ಕೈವೀಸೆ
ಸಂದಣಿಸಿ ಬೆರಸಿತ್ತು ಪರಿಮಳಜಳಂ ಸೂಸೆ
ತಿರುಗಿಡದೆ ತಿರುಗಿ ನಿಂದನುವಾಗಲನುವಾಗಿ

ಬೆರಸಿದಡೆ ಬೆರಸಿ ಕಟ್ಟಿದಿರಾಗಲಿದಿರಾಗಿ
ಆಡುವವರೊಳು ನಂದನಾ ಮಯೂರನನರಿದು
ನೋಡಿ ಹೊಯಿ ಹೊಯಿ ಬೆನ್ನನೊಡ್ಡೆನುತ್ತಂ ನುಡಿದು
ಹೊಯ್ಯೆ ಬೆನ್ನೊಡ್ಡಿದಂ ನಿಂದು ಹೋಗದೆ ಮತ್ತೆ
ಕಯ್ಯಾರೆ ಹೊಯ್ದಡಂ ಕೆಲಕೆ ಸಾರದೆ ಮತ್ತೆ
ಇರೆ ನೊಂದೆಯೆಂದರಸನಲ್ಲಿ ಬೋಳಯಿಸುತ್ತೆ
ಹರುಷದೆ ಮಯೂರನಂ ನೋಡಿ ಸಂತಯಿಸುತ್ತೆ
ಬಾಸುಳಂ ನೋಳ್ಪ ನೆವದಿಂ ಕುಪ್ಪಸಂ ಗಳೆಯೆ
ಭಾಸುರ ಸುವರ್ಣಮಯವಾಗಿ ದೇಹಂ ಮೆರೆಯೆ

ತಿರುಗಿದಂ ನಂದಭೂಪಂ ತನ್ನ ಅರಮನೆಗೆ
ಕರೆ ಬಾಣ ಕಾಳಿದಾಸರನೆನುತ್ತಂ ತನಗೆ
ಕೋಪವೇರುತ್ತೆ ಹುಸಿಗಲಸಿ ನಂದಂ ನೊಂದು
ತಾಪಿಸುತೆ ಕರೆ ಹೋಗೆನುತ್ತೋಲಗದೊಳಂದು
ಇರೆ ಬಂದನಾ ಬಾಣನಾಸ್ಥಾನದೊಳಗಿಂಗೆ
ಹರುಷದಿಂ ಮಕುಟಕೋಟಿಗಳ ನುಣ್ಬೆಳಗಿಂಗೆ
ಬಂದು ನಿಂದಿರೆ ಕಂಡು ನುಡಿದನರಸಂ ನೊಂದು
ಸಂದಣಿಪ ಕೋಪದಿಂ ನೋಡಿ ನುಡಿವುತ್ತಂದು
ಇಂತು ಪುಸಿಯಂ ಪೇಳ್ವರೇ ಮಯೂರನನರಿದು
ಸಂತತಂ ಹೊಂಬಣ್ಣವೆನಿಪ ದೇಹವನರಿದು

ಎನೆ ಬಾಣನೆಂದನೆಲೆ ನಂದನೆ ವಿಚಾರಿಪುದು
ತನುವಿನೊಳು ದುರ್ವರ್ಣವುಂಟು ಚಿತ್ತೈಸುವುದು
ತರಣಿಯಿಂ ಪೋದಿರುಳು ಪಡೆದನೀ ವರ್ಣಮಂ
ಅರಸ ಕೇಳ್ಪುಸಿ ನುಡಿವುದಿಲ್ಲ ತನುವರ್ಣಮಂ
ಎಂದಡೆ ಮಯೂರನುಂಟೆಂದೊಡಂಬಡುತಮಿರೆ
ಮುಂದೆ ಬಾಣಂ ನಿಂದು ಮೂದಲಿಸಿಕೊಳುತಮಿರೆ
ಅದೊಡೇನಿಂತಿದಂ ಮಾಳ್ಪರಾರೆಂದೆನಲು
ವಾದಕ್ಕೆ ಸೂರ್ಯನಿಂ ಪಡೆವುದರಿದರಿದೆನಲು
ಘುಡುಘುಡಿಸಿದಂ ಬಾಣನಾ ಸಭಾಪತಿಯೊಡನೆ
ಮೃಡನ ಕರುಣವನಲ್ಲಿ ಬಲುವಿಡಿವುತೊಡನೊಡನೆ
ಮುನ್ನುಳ್ಳುದಂ ಪಡೆದನಲ್ಲಿ ತಾಂ ಹೊಸತೇನೊ
ಬಿನ್ನಣವದೇಕೆ ಮಿಗಿಲಂ ಪಡೆವೆನರಿದೇನೊ

ಸಡಿ ಫಡ ಇದೊಂದರಿದೆ ಕಡಿ ಕೈಯನೆಂದಲ್ಲಿ
ತಡೆಯದಾಗಳೆ ಕಡಿಯಿಸಿದನೊಂದನಂತಲ್ಲಿ
ಕಡಿದ ಕೈಯಿರ್ದುದಾ ಒಡ್ಡೋಲಗದ ನಡುವೆ
ಮೃಡನಲ್ಲಿಗೆಯ್ತಂದನೊಲಿದು ಭಕ್ತರ ನಡುವೆ
ಬಂದಲ್ಲಿ ರಂಗಮಂಟಪದೊಳಗೆ ಕುಳ್ಳಿರ್ದು
ಇಂದುಧರನತ್ತ ಮನದೊಳಗೆ ಹತ್ತಿರೆ ಸಾರ್ದು
ಹೃತ್ಕಮಲದೊಳಯಿಂಕೆ ಶಿವಲಿಂಗಮಂ ತಂದು
ಸತ್ಕವೀಶ್ವರನೊಲಿದು ಪೊಗಳತೊಡಗಿದನಂದು

ದೇವ ಓಂ ಜಯ ಜಯ ಮಹಾದೇವ ಕರುಣಿಪುದು
ದೇವ ಕಾಲಾಂತಕ ಮಹಾಕಾಲ ಕರುಣಿಪುದು
ದೇವ ಭೀಕರ ಮಹಾಕಾಳ ಗಳ ಕರುಣಿಪುದು
ದೇವ ಸುರರಾಪದ್ವಿನಾಶಕರ ಕರುಣಿಪುದು
ದೇವ ನಾರಾಯಣಪ್ರಿಯಮೂರ್ತಿ ಕರುಣಿಪುದು
ದೇವ ನಾರದಗೇಯ ಶುಭಚರಿತ ಕರುಣಿಪುದು
ದೇವ ನಾಗಾಜಿನ ಶುಭಾವರಣ ಕರುಣಿಪುದು
ದೇವ ತ್ರಿಜಗದ್ಭವನ ತಿಮಿರಹರ ಕರುಣಿಪುದು
ದೇವ ಶರಣಾಬ್ಜ [ರವಿ]ಸದೃಶಾಕ್ಷ ಕರುಣಿಪುದು
ದೇವ ಘುಳುಘುಳಿಪ ತ್ರಿಶೂಲಧರ ಕರುಣಿಪುದು
ದೇವ ದುಸ್ತರತರ ತ್ರಿಪುರಹರ ಕರುಣಿಪುದು
ದೇವ ಗಂಗಾವೃತಜಟಾಭಾರ ಕರುಣಿಪುದು
ದೇವ ತ್ರಿಲೋಚನ ಮಹಾಗುರುವೆ ಕರುಣಿಪುದು
ದೇವ ಸದ್ಭಕ್ತಜನದಾನಕರ ಕರುಣಿಪುದು

ಎಂದು ಪೊಗಳಲು ಶಂಕರಂ ಸುಮ್ಮನಿರುತಿರಲು
ಒಂದುವಂ ಕರುಣಿಸದೆ ಶಿವಲಿಂಗದೊಳಗಿರಲು
ಅಂಬಿಕಾನೈತಂಬಬಿಂಬಲಂಪಟಹಸ್ತ
ಎಂಬ ನುಡಿಗೇಳ್ದು ನಸುನಗುತಭಯವರಹಸ್ತ
ಹೊಗಳದಿರು ಬಾಣ ಏನುಂ ಪೇಳೆನುತ್ತಮಿರೆ
ನಾಗಭೂಷಣ ಕರುಣಿಸೆನುತೆ ಕೈಮುಗಿವುತಿರೆ
ಕೈಯೊಡನೆ ಕೊಯ್ದು ಕೈ ಪಲ್ಲವಿಸಿತಾತಂಗೆ
ಕೈಯೊಡನೆ ಕಲ್ಪತರು ಕೈಬಂದುದಾತಂಗೆ
ಬಂದ ಕೈ ಒಂದಲ್ಲ ಬೇಡಿದನವಾರಿಯಂ

ಅಂದು ಕೈಯಿಲ್ಲದವರೆಲ್ಲರ್ಗೆ ವಾರಿಯಂ
ನಿಂದು ಬಂದರ್ಗೆಲ್ಲ ಕೈಗಳಂ ಕೂಡಿಸುತಂ
ಬಂದ ಭಕ್ತರ್ಗೆಲ್ಲ ಭಕ್ತಿಯಿಂದೆರಗುತಂ
ಕಹಳೆ ಮದ್ದಳೆ ಶಂಖ ಪಟಹನಾದಂಗಳಿಂ
ಬಹುವಿಧದ ಗಿರುಗಟೆಯ ಬಹಳಸ್ವರಂಗಳಿಂ
ಶರಣರೊಡಗೂಡಿ ಶಿವನಂ ಕೇಳಿಸುತ್ತಮಿರೆ
ಪರಿಪರಿಯ ಸಂತಸದ ಸುಖದೊಳೋಲಾಡುತಿರೆ

ನಂದರಾಜಂ ಕೇಳ್ದು ಕೌತುಕಮನೆಡೆಗೊಂಡು
ಬಂದು ಸೈಗೆಡೆದು ಬಾಣನನಾಗಳಿದಿರ್ಗೊಂಡು
ಗಜಮಸ್ತಕದ ಮೇಲೆ ಪುರದೊಳಗೆ ಮರೆಸುತಂ
ನಿಜರಾಜಧಾನಿಯೊಳು ನೇಹದಿಂ ಮರೆಸುತಂ
ಇರಲಂದುತೊಡಗಿ ಪರಸೇವೆಯಂ ಪಿಂಗಿದಂ
ಹರನ ನಿಷ್ಠೆಯ ಭಾವಭಕ್ತಿಯೊಳು ಹೊಂಗಿದಂ
ನಿಂತು ಪಲವುಂ ಕಾಲವೀಶನಂ ಪೊಗಳುತಿರೆ
ಸಂತತಂ ಶಿವನ ಮೆಲ್ಲಡಿಗೆ ತೊತ್ತಾಗುತಿರೆ
ಬಂದುದೊಂದಗ್ಗದ ವಿಮಾನವಾಕಾಶದಿಂ
ಅಂದು ನೋಳ್ಪರ ಕಣ್ಗೆ ಸೂರ್ಯಪ್ರಕಾಶದಿಂ
ಬರೆ ವಿಮಾನವನೇರಿ ರಜತಗಿರಿಗೆಯ್ತಂದು
ಪುರಹರನ ಚರಣಕ್ಕೆ ಸೈಗೆಡೆವುತಂ ನಿಂದು
ಕಂಡು ಬಾಣಂಗೆ ಗಣಪದವಿಯಂ ನಲಿದಿತ್ತು
ಖಂಡೇಂದುಮೌಳಿ ಪರಮಸ್ನೇಹಮಂ ಪೊತ್ತು
ಭಕ್ತಜನದಿಚ್ಛೆಯಂ ಸಲಿಸುವ ಕೃಪಾಕರಂ
ಭಕ್ತರೇನೆಂದುದಂ ಮಾಡುವ ದಯಾಪರಂ
ಭಕ್ತಗುರು ಭಕ್ತನಿಧಿ ಭಕ್ತರ ಮನೋಹರಂ
ಭಕ್ತಗತಿ ಭಕ್ತಪತಿ ಭಕ್ತಸಂಪತ್ಕರಂ
ಪಂಪಾಪುರಾಂಬುನಿಧಿ ಪೂರ್ಣೇಂದುವೊಪ್ಪಿದಂ
ಹಂಪೆಯ ವಿರೂಪಾಕ್ಷನನವರತಮೊಪ್ಪಿದಂ

ವಾಣೀಪತಿ ಹರಿಯರಿಯದ
ಜಾಣಂ ಕಲ್ಯಾಣಸದನನೆನಗೊಲವಿಂದ ।
ಕ್ಷೂಣತರಪದವನೀವುದು
ಬಾಣನ ಸುತನೆಂದು ಹಂಪೆಯ ವಿರೂಪಾಕ್ಷಾ ॥

❖❖

# ೭. ಹಲಾಯುಧನ ರಗಳೆ

ಶ್ರೀ ವಿಶ್ವೇಶ್ವರನಭವಂ
ದೇವಕುಲಾರ್ಕಂ ಪುರಾರಿ ಮೆರೆದಂ ಶಿವಸ ।
ದ್ಭಾವಿಯೆನಿಪ್ಪ ಹಲಾಯುಧ
ದೇವನನೊಲ್ದೆಮ್ಮ ಹಂಪೆಯ ವಿರೂಪಾಕ್ಷಂ ॥

ಉತ್ತರದಿಶಾಭಾಗದೊಳು ಕೀರ್ತಿಯಂ ಪಡೆದು
ಒತ್ತರಿಪ ಮಾಯೆಯಂ ಸಚ್ಚರಿತದಿಂ ಜಡಿದು
ಇರ್ಪವು ನವಗ್ರಾಮವೆಂಬ ಪುರವಂತಲ್ಲಿ
ಇರ್ಪನೊರ್ವಂ ಶಿವನ ಭಕ್ತನೊಲವಿಂದಲ್ಲಿ
ತನ್ನ ನಾಮಂ ಹಲಾಯುಧನೆಂಬುದಾಗಿರಲು
ತನ್ನ ಕೈಯರ್ಚನೆ ಶಿವಂಗೆ ಸವಿಯಾಗಿರಲು
ನಡೆತಂದು ಶಿವನಿಳಯಮಂ ಪೊಕ್ಕು ಕೈಮುಗಿದು
ಮೃಡಮೂರ್ತಿ ಘನಕೀರ್ತಿ ಕರುಣಿಸೆನುತಂ ಬಿಗಿದು
ತೆಗೆದಪ್ಪಿ ಮುಂಡಾಡಿ ಮುದ್ದಾಡಿ ಮತ್ತಪ್ಪಿ
ನೆಗಳ್ದ ಪುಳಕಂಗಳಿಂದಂಗ ಕೀಲಿಸುತಪ್ಪಿ
ಅಪ್ಪಳಿಯದಲ್ಲಿ ಮಜ್ಜನಕೆರೆವುತಳ್ಕಿರಿದು
ತಪ್ಪಿ ತಡಬಡಿಸುತಂ ಹೊಸಪೂಜೆಯಂ ಮೆರೆದು
ಕುಣಿವುತ್ತೆ ಮಣಿವುತ್ತೆ ಧೂಪಮಂ ನಲಿದಿತ್ತು
ತಣಿವುತ್ತೆ ತೂಗುತ್ತೆ ಆರತಿಗಳಂ ಪೊತ್ತು
ಆರೋಗಣೆಯ ಕೊಟ್ಟು ವೀಳಯಂಗಳನಿತ್ತು
ತಾರಾದ್ರಿಯರಸಂಗೆ ಸಕಳ ಸೌಖ್ಯಮನಿತ್ತು
ಹೊಸ ಕಬ್ಬಮಂ ಗದ್ಯಪದ್ಯಂಗಳಂ ಪೇಳ್ದು
ಅಸಮಾಕ್ಷನೊಳ್ಸಂದ ಕಿಂಕರತೆಯಂ ತಾಳ್ದು
ಇಪ್ಪನೊಪ್ಪುತ್ತಿರೆ ಹಲಾಯುಧಂ ಹರುಷದಿಂ
ಸರ್ಪಭೂಷಣನ ಸದ್ಭಕ್ತಿ ಸಂಸ್ಪುರುಶದಿಂ

ಇರಲಾ ನವಗ್ರಾಮದ ಪ್ರಭುಗಳೆಲ್ಲರುಂ
ಹರುಷದಿಂ ಕೊಂಡಾಡುತಿರ್ಪರೊಲಿದೆಲ್ಲರುಂ
ಆ ನವಗ್ರಾಮಕ್ಕೆ ತಾನೆ ಸಜ್ಜನನಾಗಿ
ಏನೆಂಬೆ ಶಂಕರಾರ್ಚನೆಗೆ ಸಿರಿಕರುವಾಗಿ
ಎಲ್ಲರಂ ಸದ್ಭಕ್ತರಂ ಯುಕ್ತರಂ ಮಾಡಿ
ಎಲ್ಲರಂ ಪರಮ ಪೂಜಾಸಕ್ತಿಯೊಳ್ಕೂಡಿ
ಭಾಳಕ್ಕೆ ಭೂತಿ ನಾಲಗೆಗೆ ಪಂಚಾಕ್ಷರಂ
ತೋಳುರಂ ಹಸ್ತಕ್ಕೆ ರುದ್ರಾಕ್ಷಿ ವಿಸ್ತರಂ
ಕಿವಿಗೆ ಶಿವಕೀರ್ತಿ ಕಂಗಳಿಗಚ್ಚ ಸುಖಜಳಂ
ತವಕಿಸುವ ಭಾವಕ್ಕೆ ಶಿವಮೂರ್ತಿಯುಜ್ವಳಂ
ಕೈಗಳಿಗೆ ಸುಖವೊಸರ್ವ ಸಂಪದದ ಕಂಪನಂ
ಮೈಗೆ ನಳನಳಿಸಿ ಬೆಳಬೆಳವ ಪುಳಕದ ಬನಂ
ತೊಡಿಗೆಯಾಗಿರೆ ಮಾಡಿದಂ ನವಗ್ರಾಮದೊಳು
ಮೃಡನಲ್ಲದರಿಯದ ಹಲಾಯುಧಂ ಪ್ರೇಮದೊಳು

ಇಂತು ಮಾಡುತ್ತಮಾಡುತ್ತ ಹಾಡುತ್ತಮಿರೆ
ಸಂತತಂ ಶಿವಭಕ್ತಿ ಪರ್ವಿ ಸಲ್ಲವಿಸುತಿರೆ
ಒಂದು ದೇವಸಂ ನವಗ್ರಾಮದಾ ಪ್ರಭುಕುಳಂ
ಒಂದೂರ್ಗೆ ಬಂದೆಲ್ಲರುಂ ಭಕ್ತಸಂಕುಳಂ
ಪರಮಭಕ್ತಂ ಹಲಾಯುಧದೇವನಂ ಕೂಡೆ
ನೆರೆದು ಶಿವಗೋಷ್ಠಿಯಿಂದಾನಂದವಕ್ಕಾಡೆ
ಇರೆ ಮಾರು ಮಾತಿಂಗೆ ಗೋಷ್ಠಿ ಮೀರುತ್ತಿರ್ದು
ಹರಭಕ್ತರೊಳಗಧಿಕರ ಪ್ರಸಂಗಂ ಸಾರ್ದು
ಓಹಿಲಯ್ಯಂ ಶರೀರಂವೆರಸಿ ಪೋಗಲ್ಕೆ
ಸಾಹಸದಿ ನಗುನಗುತೆ ಪುರಸಹಿತ ಪೋಗಲ್ಕೆ
ಉದ್ಭಟಂಗಲ್ಲದಿನ್ನುಳಿದರ್ಗೆ ತೀರುವುದೆ
ಅದ್ಭುತರಸಂ ಮಿಕ್ಕ ಭಕ್ತರ್ಗೆ ಸಾರುವುದೆ

ಎನೆ ಹಲಾಯುಧದೇವನುಬ್ಬಸಂಗೊಂಡಲ್ಲಿ
ಮನದೊಳಗೆ ಶರಣನತಿ ಹುರುಡಿಸುತ್ತಂತಲ್ಲಿ
ಶಿವನೊಲಿದಡರಿದೇನು ಪುರವನೊಯ್ವುದು ಪಿರಿದೆ
ಭವನ ಕಾರುಣ್ಯವುಳ್ಳಡೆ ತಾನಿವೆಲ್ಲರಿದೆ
ಎಂದಡೆ ಹಲಾಯುಧಂಗೆಂದರಾ ಗೌಡುಗಳು
ಸಂದಣಿಪ ಕಟಕಿಗಳನಾಡಿದರು ಗೌಡುಗಳು

ಉದ್ಭಟನನಾಳಿಗೊಂಬಾ ಹಲಾಯುಧ ನಿನಗೆ
ಸದ್ಭಕ್ತನಪ್ಪಂಗೆ ಕೊರತೆಯುಂಟೇ ನಿನಗೆ
ಇಂತಾಳಿಗೊಂಬವರು ಘನವಲ್ಲದಿರ್ಪಿರೆ
ಕಂತುಮದಹರನಲ್ಲಿಗೊಬ್ಬರೇ ಪೋಪಿರೆ
ಎಮ್ಮೀ ನವಗ್ರಾಮಮುಮನೊಯ್ಯದಿರ್ಪಿರೆ
ಎಮ್ಮೆಲ್ಲರಂ ಶಿವನ ಮುಂದಿರಿಸದಿರ್ಪಿರೆ
ಎಂದ ಕಟಕಿಗಳಂ ಹಲಾಯುಧಂ ಕೇಳುತಂ
ನಿಂದು ಭಾಷೆಗಳನಿತ್ತಂ ಸಭೆಯೊಳುಬ್ಬುತಂ
ನಿಮ್ಮ ನುಡಿಯೆಲ್ಲಂ ಶಿವಪ್ರೇರಣೆಯೆ ಎನುತೆ
ನೀವೆಂದ ಮಾಳ್ಕೆಯಿಂ ಕೊಂಡು ಪೋದಪೆನೆನುತೆ
ಒಂದು ಪುರಮಂ ಕೊಂಡು ಪೋದನುದ್ಭಟನಲ್ಲಿ
ಸಂಧಿಸಿ ನವಗ್ರಾಮಸಹಿತವೆಯ್ದುವೆನಿಲ್ಲಿ
ಉದ್ಭಟಂಗುಳ್ಳ ಚಂದ್ರಾಭರಣವೆನಗಿಲ್ಲ
ಅದ್ಭುತಂ ಮಾಳ್ಪೆನೀ ಕಟಕಿಗಳೆಮಗೆ ಸಲ್ಲ
ನಾಳೆ ಕೊಂಡೊಯ್ದಪೆಂ ಹೊಯಿ ಡಂಗುರವನೆಂದು
ಶೂಲಿಯಣುಗಂ ಹೊಯಿಸಿದಂ ಧರೆ ನಡುಗಲಂದು
ಸಡಿಫಡ ನರೋರಗರೊಳಡ್ಡಬರ್ಪವನಾವ
ಎಡೆಗೊಂಡ ಭಕ್ತಿಕಳೆಗಿದಿರಪ್ಪನಿನ್ನಾವ
ಎಂದು ಗರ್ಜಿಸಿ ಗಜರಿ ಶಿವರಾತ್ರಿಯಂ ಮಾಡಿ
ಮುಂದೆ ಬೆಳಗಾಗಲೆಸೆದುದ್ಧೂಳನಂ ಮಾಡಿ
ನಡೆವೆಂ ನವಗ್ರಾಮಸಹಿತಾಗಿ ನೋಡೆನುತೆ
ಮೃಡನಾಲಯಕ್ಕೆ ಬಂದಂ ಸಾರು ಸಾರೆನುತೆ

ಬಂದು ಶಿವನಂ ನೋಡಿ ಶಂಕರಾ ಶಶಿಧರಾ
ಇಂದೆನಗೆ ಕರುಣಿಪುದು ಗಿರಿಜಾಮನೋಹರಾ
ದೇವ ನೀಂ ಕರುಣಿಸಿದಡೆನಗೆ ತೀರದುದುಂಟೆ
ದೇವ ನೀಂ ಕೃಪೆಮಾಡಲಾವುದೊಂದರಿದುಂಟೆ
ಕರುಣಿಸಲಿರುಂಪೆಯದು ಬ್ರಹ್ಮವಾಗದೆ ದೇವ
ಕರುಣಿಸಲ್ಮಸಕನುಂ ವಿಷ್ಣುವಾಗದೆ ದೇವ
ಭಕ್ತರಭಿಮಾನವೇ ಭಕ್ತರ ಧ್ಯಾನವೇ
ಭಕ್ತರನುಕೂಲವೇ ಭಕ್ತರ ನಿಧಾನವೇ
ಜಯ ಸುರನದೀತರಂಗಾವೃತಜಟಾಭಾರ
ಜಯ ಸುಧಾಕರ ಕಳಾಧರ ಮಂಗಳಾಕಾರ
ಜಯ ಲೋಚನತ್ರಯ ವಿರಾಜಿತ ಮಹಾವಿಭುವೆ

ಜಯ ಸರ್ಪರಾಜಕುಂಡಲ ಮಂಡಿತ ಪ್ರಭುವೆ
ಜಯ ವಿಮಳ ಪಂಚಮುಖರಂಜಿತ ಸದಾಶಿವನೆ
ಜಯ ನೀಲಕಂಠ ಭವಹರ ಭವಾನೀಧವನೆ
ಜಯ ದಶಭುಜಾದಂಡ ಜಯಗಜಾಜಿನಗಾತ್ರ
ಜಯ ಪುಂಡರೀಕ ಚರ್ಮಾವರಣ ಕಟಿಸೂತ್ರ
ಜಯ ಕಮಲನೇತ್ರ ಪೂಜಿತಪಾದಸರಸಿರುಹ
ಜಯ ಸಕಲಭಕ್ತಕಾಮಿತಕಲ್ಪಭೂಮಿರುಹ
ಜಯ ಸತ್ಯ ಜಯ ನಿತ್ಯ ಜಯ ಭರ್ಗ ಜಯ ಭೀಮ
ಜಯ ರುದ್ರ ಜಯ ಭದ್ರ ಜಯ ನಾಮ ಜಯ ಸೋಮ

ಎಂದು ಪೊಗಳ್ವನಿತಕ್ಕೆ ಪುರವೆದ್ದವಮ್ಮಮ್ಮ
ಛಂದದ ನವಗ್ರಾಮವಾಗಸದೊಳಮ್ಮಮ್ಮ
ನೆಗೆಯೆ ಹೂಮಳೆಗರೆದವೀ ಧರಾತಳದೊಳಗೆ
ಜಗವರಿಯೆ ದುಂದುಭಿಯ ನಾದಂಗಳೊಳಗೊಳಗೆ
ಗಗನದೊಳ್ಪೋಗುತಿರೆ ಲೋಕವೆಲ್ಲಂ ಕಂಡು
ಬಗೆಗಗೋಚರವೆನುತೆ ನೆರೆ ಕೌತುಕಂಗೊಂಡು
ಸುಖಗೋಷ್ಠಿಯೆತ್ತ ಮಾತಿನ ಮಾತು ತಾನೆತ್ತ
ನಿಖಿಳವರಿಯಲು ನವಗ್ರಾಮವೇರುವುದೆತ್ತ
ಒಂದು ಪುರವಂದುದ್ಭಟನ ಕೂಡೆ ನೆರೆಹೋಯ್ತು
ಒಂದೆಂದೊಡೊಂಬತ್ತೆನಿಪ್ಪುದಿವರಿಂದಾಯ್ತು
ಆಹಾ ಹಲಾಯುಧನ ಭಾಷೆ ಬೇಡಿದಗಾಸೆ
ಆಹಾ ಹಲಾಯುಧನ ಭಾಷೆ ಭಕ್ತಿಗೆ ಲೇಸೆ

ಎಂದಿಂತು ಜಗವೆಲ್ಲ ತಲೆದೂಗಿ ಕೊಂಡಾಡೆ
ಬಂದೇರಿದವು ನವಗ್ರಾಮವಮರರು ನೋಡೆ
ಇಂದ್ರಾದಿ ದಿಕ್ಪಾಲಪುರವೃಂದಮಂ ದಾಂಟಿ
ಚಂದ್ರ ಮಾರ್ತಂಡ ತಾರಾಲೋಕಮಂ ದಾಂಟಿ
ಸತ್ಯಲೋಕಕ್ಕೆ ನೆಗೆದವು ನವಗ್ರಾಮವದು
ಸತ್ಯಶರಣನ ಹಲಾಯುಧನ ಸಾಮರ್ಥ್ಯವದು
ದೇವಲೋಕಕ್ಕೆ ಹೊಸತಾಗುತಿರೆ ನಡೆತಂದು
ದೇವ ನಂದೀಶ್ವರನ ಬಾಗಿಲ್ವರಂ ಬಂದು
ನಿಂದಿರಲ್ಪುರದಿಂದವಿಳಿದಂ ಹಲಾಯುಧಂ
ಇಂದುಮೌಳಿಯನೀಕ್ಷಿಸುತ್ತೆ ನಾನಾವಿಧಂ
ಹೊಗಳುತಂ ಹೊಂಗುತಂ ಮೈಯುಕ್ಕಿ ಪಟ್ಟಿರಲು

ಬಗೆ ಸದಾಶಿವನ ಮೆಲ್ಲಡಿಗಳಂ ಮುಟ್ಟಿರಲು
ಕಂಡು ಶಂಕರನಲ್ಲಿ ಗಣಕುಲಕೆ ತೋರುತಂ
ತಂಡ ತಂಡದ ಪುಳಕದಿಂಡೆಗೊಳಲುಬ್ಬುತಂ
ನೋಡಯ್ಯ ನಂದೀಶ ಇಂತಪ್ಪ ಭಕ್ತನಂ
ನೋಡೇಕನಿಷ್ಠೆ ಕೂಡಿದ ಭಕ್ತಿಯುಕ್ತನಂ
ಮಾತು ಮಾತಿಂಗಿಲ್ಲಿಗೆಯ್ದಿ ಬಂದವರುಂಟೆ
ಜಾತಿಸೂತಕವಳಿದು ನೀತಿಗೆಟ್ಟವರುಂಟೆ
ಒಂಬತ್ತು ಪುರಸಹಿತವೆಯ್ದಿ ಬಂದವರುಂಟೆ
ಅಂಬರದ ಬಟ್ಟೆಯೊಳ್ನಂಬಿ ಬಂವರುಂಟೆ
ಎನ್ನ ಭಕ್ತಂಗೆ ಕಟಕಿಯ ಮಾತು ಸೈರಿಪುದೆ
ಎನ್ನ ಭಕ್ತಂಗೆ ಕಪಟಂಗಳೇಂ ಸೊಗಯಿಪುದೆ
ಎನ್ನ ಭಕ್ತಂಗೆ ಹಿಂದೊಂದು ಮುಂದೊಂದುಂಟೆ
ಎನ್ನ ಭಕ್ತಂಗೆ ಹುಸಿಗಳ ಹಸರವೇನುಂಟೆ
ನವವಿಧಂ ನವಪೂಜೆ ನವ ನವ ಪ್ರೇಮವಿದೆ
ನವರಸಂ ನವಭಕ್ತಿ ನವ ನವ ಗ್ರಾಮವಿದೆ

ಎನುತಂ ಹಲಾಯುಧನನೆತ್ತಿ ತರ್ಕೈಸುತಂ
ಮನವಾರೆ ಗಣಪದವನೊಪ್ಪದಿಂದೀವುತಂ
ಆ ನವಗ್ರಾಮಮಂ ರುದ್ರಲೋಕದೊಳಿರಿಸಿ
ನಾನಾ ಸುಖಂಗಳಂ ಚಿತ್ತದೊಳಗಾಧರಿಸಿ
ದುರಿತಹರನಂತಕಹರಂ ಪಂಚಶರಹರಂ
ಪುರಹರಂ ಜನನಹರನಗಜಾಮನೋಹರಂ
ಶಶಿಧರಂ ಫಣಿಧರಂ ಸುರುಚಿರ ಜಟಾಧರಂ
ವಿಷಧರಂ ಗಜಚರ್ಮಧರನತುಳಬಳಧರಂ
ಸುರಶಿರೋಮಾಲಾಧರಂ ದಕ್ಷಮಖಹರಂ
ಸರಸಿಜಾಸನ ಶಿರಃಕಮಳಮಂಡಿತ ಕರಂ
ಸದಮಳಂ ಸುಖಮಯಂ ಸಕಲಗುರುವೊಪ್ಪಿದಂ
ಮದನಾರಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಶ್ರೀ ವಾಣೀಪತಿಗಳ ಗುರು
ದೇವಂ ದಯೆಯಿಂದಲೆನಗೆ ಭಕ್ತಿಯನೊಲವಿಂ ।
ದೀವುತ್ತಿರ್ಕೆ ಹಲಾಯುಧ
ದೇವನ ಶಿಶುವೆಂದು ಹಂಪೆಯ ವಿರೂಪಾಕ್ಷಂ ॥

❖❖

# ೮. ಮಲುಹಣನ ರಗಳೆ

## ಸ್ಥಲ ೧

ಧಾರುಣಿಯೊಳ್ ಮಲುಹಣನಂ
ಕಾರುಣ್ಯಾಕರನುದಾರವಾರಿಧಿ ಮೆರೆದಂ ।
ಗೌರೀಕುಚಕುಂಕುಮಲಸಿ
ತೋರಸ್ಥಲನೆಮ್ಮ ಹಂಪೆಯ ವಿರೂಪಾಕ್ಷಂ ॥

ಶ್ರೀ ಮಸುಮತೀವದನಮುಕುರವೆಂದೆನಿಸಿರ್ಪ
ಪಾವನಂ ಸಕಳದೇಶಕ್ಕೆ ತಾನೆನಿಸಿರ್ಪ
ಶಾರದಾದೇವಿ ಪ್ರಸನ್ನೆಯಾಗಿರುತಿರ್ಪ
ಚಾರುತರ ನೂತನ ಕಳಾವಿಧದೊಳಿರುತಿರ್ಪ
ಊರೂರ್ಗೆ ತೀವಿದ ತಟಾಕನಿಕರಂಗಳಿಂ
ಊರೂರ್ಗೆ ಕಿಕ್ಕಿರಿದು ಕೊಬ್ಬಿದ ಬನಂಗಳಿಂ
ವನದೊಳಗೆ ಸುಳಿವುತಿಹ ಕತ್ತುರಿ ಮಿಗಂಗಳಿಂ
ಬಿನದದಿಂ ಪರಿತಪ್ಪ ಚಮರೀಮೃಗಂಗಳಿಂ
ದೇವಮಾತೃಕ ನದೀಮಾತೃಕದ ಬೆಳೆಗಳಿಂ
ದೇವನದಿಯಂದದಿಂ ಪರಿಪರಿವ ನದಿಗಳಿಂ
ನಗರಿ ನಗರಿಯೊಳೆಸೆವ ದೇವಾಲಯಂಗಳಿಂ
ಮುಗಿಲನಳ್ಳಿರಿವ ಘನ ಮಾಟಕೂಟಂಗಳಿಂ
ಎಸೆವ ಕಾಶ್ಮೀರದೇಶಂ ರಂಜಿಸುವುದಿಳೆಗೆ
ಹೊಸ ಹೊಸ ವನಂ ಪಟ್ಟಣಂಗಳಿಂದುರ್ವರೆಗೆ

ಬಂಧನಂ ಪೂಮಾಲೆಯೊಳಗಲ್ಲದಿಲ್ಲಲ್ಲಿ
ಅಂಧತ್ವವಾ ಕತ್ತಲೆಯೊಳಲ್ಲದಿಲ್ಲಲ್ಲಿ

ಕೊಯ್ವನುಡಿ ಕೆಯ್ಗಳೊಳು ಕಾಮಿನಿಯರಳಕದೊಳು
ಬಯ್ವನುಡಿ ಗಿಳಿಗಳೊಳು ನಲ್ಲರೊಳು ಸರಸದೊಳು
ಬಡತನಂ ಲತೆಗಳೊಳು ಲಲನೆಯರ ನಡುವಿನೊಳು
ಕೆಡಿಸುವುದು ವಂಶಮಂ ಮೇದರೊಳು ವೃಷಭನೊಳು
ಅವನಿಗತಿ ಕಂಟಕಂ ಕೇತಕೀವೃಂದೊಳು
ಭುವನಕಂಟಕವೆಂಬುದಂಬುಜದ ನಾಳದೊಳು
ಕರಪೀಡನಂ ಸುರತಸಂಗದೊಳು ತರುಣಿಯೊಳು
ತಿರುಗಿ ಬಪ್ಪಳಿಯಾಸೆ ನವಪುಷ್ಪಜಾತಿಯೊಳು
ಹೆಚ್ಚು ಕುಂದೆಂಬುದಾ ಚಂದ್ರನೊಳು ತುಂಬಿಯೊಳು
ಇಂತಿವರೊಳಲ್ಲದಾ ನಾಡೊಳಿಲ್ಲೆಲ್ಲಿಯುಂ
ಸಂತತಂ ಸುಖಮಯಂ ದೇಶದೊಳಗೆಲ್ಲಿಯುಂ

ಆದೇಶದೊಳು ರಾಜಧಾನಿಯೆನೆ ರಂಜಿಪುದು
ಭೂದೇವತೆಯ ನೊಸಲ ತಿಲಕವೆನಲೊಪ್ಪುವುದು
ಭಾರತೀಪೀಠನೆಂಬುದು ಪಟ್ಟಣದ ನಾಮ
ಈರೇಳು ಜಗದೊಳಗೆ ಕೀರ್ತಿವಡೆಯಿತು ಗ್ರಾಮ
ಅಲ್ಲಿ ಶುದ್ಧ ಸ್ಫಟಿಕದಿಂದೆಸೆವ ಕೋಂಟೆಯಿಂ
ಅಲ್ಲಿ ಕತ್ತುರಿಯ ಕೆಸರಾಳ್ವೇರಿ ಮಹಿಮೆಯಿಂ
ಅಲ್ಲಿ ಮನೆಮನೆಗಳೊಳು ಕುಂಕುಮದ ಮಡಿಗಳಿಂ
ಎಲ್ಲಿಯುಂ ದ್ರಾಕ್ಷಾಲತಾಮಂಟಪಂಗಳಿಂ
ಬಾಳೆ ಕಿತ್ತೀಳೆ ಹೇರೀಳೆ ದಾಳಿಂಬದಿಂ
ನಾಳಿಕೇರಂ ನವಾಮ್ರಂ ಮಾತುಳಂಗದಿಂ
ತಳಿರೊತ್ತಿ ರಾಜಿಸುವಶೋಕದ್ರುಮಂಗಳಿಂ
ಕಳಹಂಸಮಿಥುನದಿಂ ಬಳಸಿದ ಕೊಳಂಗಳಿಂ
ವೇದಘೋಷಂ ಪುರಾಣಪ್ರಸಂಗಂಗಳಿಂ
ಆದರಿಪ ಶಿವಕಥನ ಶೈವಾಗಮಂಗಳಿಂ
ಅಲ್ಲಲ್ಲಿ ಶಶಿಕಾಂತ ಭವನಿಕೆಗಳಿಂದೆಸೆವ
ಅಲ್ಲಲ್ಲಿ ನೆಲೆಯ ಕರುಮಾಡಂಗಳಿಂದೆಸೆವ
ರಾಜಿಸುವು ಹೊಸ ಸೂರ್ಯಸೋಮವೀಧಿಗಳೆಸೆವ
ರಾಜಭೂಷಣನ ಭವನಾವಳಿಗಳಿಂದೆಸೆವ
ಪಟ್ಟಣವನಾಳ್ವನಪ್ರತಿಮಭೂಪಂ ನೋಡ
ಕಟ್ಟಧಿಕನುತ್ತಮ ಪ್ರವರಸೇನಂ ನೋಡ
ಗಜಘಟಾಶ್ವಾಳಿರಥನಿಕರ ಸಂಪದಕರಂ

ನಿಜಭುಜಾಗ್ರಪ್ರಯುತ ವೀರಲಕ್ಷ್ಮೀವರಂ
ವಿವಿಧ ವಿದ್ಯಾಧರಂ ಸತ್ಕಾವ್ಯಕೋವಿದಂ
ನವ ಗೀತ ವಾದ್ಯ ನೃತ್ಯತ್ರಯಕಳಾವಿದಂ
ನಿತ್ಯ ಸಾರಸ್ವತಂ ನಿತ್ಯ ಸಂಪದಕರಂ
ಸತ್ಯಸಾಹಿತ್ಯ ಗಂಭೀರಗುಣವಿಸ್ತರಂ
ಸತ್ಯಸಾಹಿತ್ಯ ಗಂಭೀರಗುಣವಿಸ್ತರಂ

ಆ ಪ್ರವರಸೇನರಾಜಂಗೆ ಹೊಯ್ಕೈಯೆನಿಸಿ
ವಿಪ್ರನೊಪ್ಪುವನಾ ಪುರಕ್ಕೆ ಧನಪತಿಯೆನಿಸಿ
ತನ್ನ ಪೆಸರೊಪ್ಪುವ ಸುವರ್ಣಭಟ್ಟಂ ನೋಡ
ತನ್ನ ಸಂಪನ್ನತೆ ಕುಬೇರಂಗೆ ಸರಿ ನೋಡ
ಬಂಟರ್ಗೆ ದಾಸರ್ಗೆ ಸಹಸ್ರಸಂಖ್ಯೆಯ ಧನಂ
ನಂಟರ್ಗೆ ನಲ್ಲರ್ಗೆ ಲಕ್ಷಸಂಖ್ಯೆಯ ಧನಂ
ಪೊರ್ದಿದಪೊರ್ರೆದರ್ಗೆ ಕೋಟಿಸಂಖ್ಯೆಯ ಧನಂ
ಸಾರ್ದಶಿಷ್ಯಾವಳಿಗನಂತ ಸಂಖ್ಯೆಯ ಧನಂ
ಹೆಸರ ಛತ್ರಂ ಹೆಸರ ಪುರವರ್ಗವಲ್ಲಲ್ಲಿ
ಹೆಸರ ಕೆರೆಯರವಟಿಗೆಯಾರವೆಗಳಲ್ಲಲ್ಲಿ
ಹೆಸರಗ್ರಹಾರಂ ಶಿವಾಲಯಗಳಲ್ಲಲ್ಲಿ
ಹೆಸರ ಧರ್ಮಪ್ರಕರವೆಣಿಸಲೆನಗರಿದಲ್ಲಿ

ಇಂತೆಸೆವ ವಿಪ್ರಂಗೆ ಸುತನೊರ್ವನೊಪ್ಪುವಂ
ಸಂತತ ಸುವರ್ಣಭಟ್ಟನ ಮನವನಪ್ಪುವಂ
ಆತನ ಪೆಸರ್ಪುರಕೆ ಮೆರೆವ ಮಲುಹಣನೆಂದು
ಆತನ ವಿಳಾಸದೊಳ್ ಪಿತನ ಚಿತ್ತಂ ಸಂದು
ಉಪನಯನ ವೈವಾಹವಂ ವಿಭವದಿಂ ಮಾಡಿ
ವಿಮುಳವೇದಂ ಸಕಳ ಶಾಸ್ತ್ರಜ್ಞರಂ ಕೂಡಿ
ಶೈವೋಪದೇಶಮಂ ಪಿರಿಯರಿಂ ಮಾಡಿಸುತೆ
ದೈವಜ್ಞನೆನಿಪ ಮಗನಂ ನೋಡಿ ಪುಳಕಿಸುತೆ
ದಿವ್ಯ ವಸ್ತ್ರಂ ಗಂಧಕಸ್ತೂರಿ ಪುತ್ರಂಗೆ
ನವ್ಯಭೂಷಣವಿತತಿವಿಸ್ತರಂ ಪುತ್ರಂಗೆ
ಗೀತವಾದ್ಯಂ ನೃತ್ಯಲೀಲೆ ಪುತ್ರನ ಮುಂದೆ
ನೂತನ ವಿರೋದ ಸರಸೋಕ್ತಿ ಪುತ್ರನ ಮುಂದೆ
ನವರಸಂ ನವಫಳಂ ನವವಿಧಂ ಪುತ್ರಂಗೆ
ನವವಾಹನಂ ನೂತ್ನರತ್ನವುಂ ಪುತ್ರಂಗೆ

ಇಂತು ಪುತ್ರನನೋವಿ ಕಣ್ತೀವಿ ನೋಡುತಂ
ಸಂತತಂ ಮಲುಹಣನ ಮೋಹದೊಳು ನಲಿವುತಂ
ಚಿಂತಿಸಿದನಾತಂಗೆ ಸುಖದೊಳಿಪ್ಪಂದಮಂ
ಮುಂತೆ ಮಾನಿಸರ ಹಂಗಿಲ್ಲದೊಂದಂದಮಂ
ನಿಚ್ಚಂ ಸಹಸ್ರಹೊನ್ನಿನ ಲೆಕ್ಕಮಂ ಕೂಡಿ
ಅಚ್ಚರಿ ಮಿಗಲ್ನೂರು ವತ್ಸರಕ್ಕನುಮಾಡಿ
ಒರ್ವಂಗೆ ಪರಮಾಯು ನೂರುವರ್ಷಂ ಎಂದು
ಸರ್ವಧನದೊಳಗೆ ತೆಗೆದಂ ಮಲುಹಣಂಗೆಂದು
ಮೂರುಕೋಟಿಯ ಮೇಲೆ ಲಕ್ಕವರುವತ್ತಾಗೆ
ಬೇರೆ ವಿವರಿಸಿದ ಹೊನ್ನುಂ ಮಲುಹಣಂಗಾಗೆ
ಕಟ್ಟಿ ಮುದ್ರಿಸಿದಂ ಸುವರ್ಣಭಟ್ಟಂ ನೋಡ
ಪಟ್ಟಣಕ್ಕಿಳೆಗೆ ಪೊಸತಾಗಲಾತಂ ನೋಡ

ಈ ತೆರದೊಳರ್ಥಮಂ ಪುತ್ರಂಗೆ ಬೈತಿಟ್ಟು
ನೂತನ ಸುಖಂಗಳಂ ಮನದೊಳಗೆ ಮುಂದಿಟ್ಟು
ಒಂದೆರಡು ವತ್ಸರಂ ಸುಖದೊಳಿರ್ಪನಿತಕ್ಕೆ
ಸಂದಣಿಪ ಹರುಷದಿಂ ಪದುಳವಿರ್ಪನಿತಕ್ಕೆ
ಬಂದುದು ಸುವರ್ಣಭಟ್ಟಂಗೆ ಕಾಲನ ದಾಳಿ
ನಿಂದು ಸೋಂಕಿತ್ತಸುವನೆಯ್ದೆ ರೋಗದ ದಾಳಿ
ಸೋಂಕಲುಗ್ರಜ್ವರದ ತಾಪದಿಂದಳ್ಕಿದಂ
ಭೋಂಕನೆ ಸುವರ್ಣಭಟ್ಟಂ ದಿನಕ್ಕೈದಿದಂ
ತಂದೆ ಸ್ವರ್ಗಕ್ಕೆ ನೆಗೆದುದನರಿದು ಮಲುಹಣಂ
ಮುಂದುಗೆಟ್ಟರಿವುಗೆಟ್ಟೊರಲುತಿರೆ ಮಲುಹಣಂ
ಸರ್ವಸಂಭ್ರಮದಿಂದೆ ತಂದೆಯಂ ಸಂಸ್ಕರಿಸಿ
ಸರ್ವ ಮುಖದಿಂ ಪಿಂಡಪಿತೃಕಾರ್ಯಮಂ ಕೊಡಿಸಿ
ಸಕಳ ಭರಭಾರಕ್ಕೆ ತಾನೆ ವಲ್ಲಭನಾಗಿ
ಸಕಲ ಪರಿಜನಕೆಲ್ಲ ರಕ್ಷಶಿಕ್ಷಕನಾಗಿ
ಉತ್ತಮಂ ವ್ಯವಹಾರಪರಿಣತಂ ತಾನಾಗಿ
ಉತ್ತಮೋತ್ತಮಸಂಪದಕ್ಕೆ ನೆಲೆವನೆಯಾಗಿ

ಇರೆ ಮಲುಹಣನನಪ್ಪಿದುದು ಯೌನೋದಯಂ
ಸ್ಮರನ ಕೈಗೆಯ್ಯಿತ್ತು ಪುಷ್ಪಚಾಪೋದಯಂ
ಸವಿನುಡಿಗಳಂ ಕಿವಗಳಾಲಿಸಲಿತೊಡಗಿದವು

ಅವಯವಂ ಮೃದುವಸನದಿಚ್ಚೆಯನೊಡರ್ಚಿದವು
ನೋಟವೊಪ್ಪುವ ರೂಪನೆಚ್ಚರಿಸಲೆಳಸಿದವು
ತೋಟಿಗಳೆಸಿವ ಪುರ್ವ ಗಂಟಿಕ್ಕತೊಡಗಿದವು
ನವಮಧುರಮಂ ಜಿಹ್ವೆಬಯಸಲನುಗೂಡಿತ್ತು
ನವಗಂಧಮಂ ಘ್ರಾಣವರಿಯಲನುಗೂಡಿತ್ತು
ನುಡಿ ಮೆಲ್ಲಮೆಲ್ಲನಕ್ಷಿಗಳತ್ತ ಹೊದ್ದಿತ್ತು
ನಡೆ ಉರವಣೆಯ ನುಡಿಯ ಗಮಕದೊಳು ಬೆರಸಿತ್ತು
ಕರತಳಂ ತನುರುಚಿಯನೋವಲಂಗೈಸಿದವು
ಕರಣತತಿ ಭೋಗಸಂಪದಮನಿಚ್ಚೈಯಿಸಿದವು
ಇಂತು ಸರ್ವೇಂದ್ರಿಯಂ ಸುಖದ ಸುಗ್ಗಿಗೆ ಸಲಲು
ಕಂತು ಚಿಂತಿಸೆ ಷೋಡಶಪ್ರಾಯದೊಳು ನಿಲಲು
ಅಂಗರುಚಿ ಮುಗ್ದೆಯರ ಕಣ್ಗೆ ಕನ್ನಡಿಯಾಗೆ
ಅಂಗಲತೆ ತರುಣಿಯರ ಸಂಗಸಂಪದವಾಗೆ
ಸುರಕುಜನದ ಚಂನದ ಕರ್ಪುರದ ಸಸಿಯಂತೆ
ಪರಿಮಳದ ಚಂದ್ರಿಕೆಯ ಕಾಂತಿ ಕರುವಿಟ್ಟಂತೆ
ಬೆಳೆವುತಿರ್ದಂ ಸುಖಮನೆಳಸಿ ಮಲುಹಣನಿತ್ತ
ಬೆಳೆವುತಿರ್ದಳು ಸುಖಾಕಾರೆ ಮಲುಹಣಿಯತ್ತ
ಆ ದೇಶದಧಿದೈವನೆನಿಪ ವಿಜಯೇಶ್ವರನ
ವೇದಕ್ಕಗಮ್ಯವೆಂದೆನಿಪ ವಿಜಯೇಶ್ವರನ
ಲೀಲೆಯಿಂ ಪುವನೀಕ್ಷಿಸಿದ ವಿಜಯೇಶ್ವರನ
ಕಾಲನಂ ಕಾಮನಂ ಗೆಲಿದ ವಿಜಯೇಶ್ವರನ
ಪಾತ್ರದ ವಿಳಾಸಿನಿಯೆನಿಪ್ಪ ಪದ್ಮಾವತಿಯ
ಚಿತ್ರತರ ಮಧುರಮಯ ನಾಟಕ ಕಳಾವತಿಯ
ಎಸೆವ ಬಸುರೊಳ್ಬಂದು ಶಿಶುಭಾವಮಂ ತಳೆದು
ಕುಸುಮಬಾಣನ ಕೀರ್ತಿ ಬೆಳೆವಂದದಿಂ ಬೆಳೆದು
ಮಲುಹಣಿಯ ಜವ್ವನವನೇನೆಂದು ಬಣ್ಣಿಪೆಂ
ಮಲುಹಣನ ಸುಖನಿಧಿಯನೇನೆಂದು ಬಣ್ಣಿಪೆಂ
ಮನವನೆಡೆಗೊಂಡನಾ ಮನಸಿಜಂ ಪರಿತಂದು
ತನುವನೆಡೆಗೊಂಡುದಾ ಸೌಭಾಗ್ಯವೆಯ್ತಂದು
ಪ್ರೇಮದಿಂ ಮಧುರೂಪಿನೊಳು ಪುಗಲು ನೂತನಂ
ಪೂಮುಡಿಯನಿಂಬುಗೊಂಡುದು ಮಕರಕೇತನಂ
ಭ್ರೂಲತೆಯನಾಶ್ರೈಸಿತಿಕ್ಷುಚಾಪಂ ಕೂಡೆ
ಆಲೋಕನವನೊತ್ತುಗೊಂಡವಲರ್ಗಣೆನೋಡೆ

ಮಿಗೆ ಸೊಬಗಿನಲಿ ಪೊಕ್ಕಳಲ್ಲಿ ರತಿಯೆಯ್ತಂದು
ಮೊಗವನೋಲೈಸಿದಳು ಸರಸಿಜ ಶ್ರೀ ಬಂದು
ನೆಯ್ದಿಲ ನಯಂ ಬಂದು ಕರ್ಣಪಾಲಿಕೆಯೊಳಿರೆ
ಎಯ್ದೆ ಶಶಿಕಾಂತ ಗಂಡಸ್ಥಲಮನಪ್ಪುತಿರೆ
ಗಂಧವಹನೆಳಸಿ ಮಧುರ ಶ್ವಾಸದೊಳು ಪುಗಲು
ಬಂಧುರ ಮೃಣಾಳರುಚಿ ಭುಜಲತೆಗಳೊಳು ಮಿಗಲು
ಅಮಳ್ವಕ್ಕಿಗಳ ಚೆಲುವು ಘನಕುಚವನಿಚ್ಛೈಸೆ
ಕಮಳಸೂತ್ರದ ಕಾಂತಿ ಬಾಸೆಯಂ ಬಾಸಣಿಸೆ
ಬಾಸೆ ತನ್ನಂ ತೋರಿ ಬಡನಡುಮನುಂಟೆನಿಸೆ
ಮೀಸಲ್ಗೊಳದ ಗುಣ್ಪು ಸುಳಿನಾಭಿಯೊಳ್ನೆಲಸೆ
ಮದನನಿಳಯದ ವೇತ್ರದಂಡದಾಕೃತಿ ಬಂದು
ಸದಮಳ ತ್ರಿವಳಿಯೊಳು ನೆಲಸಿ ನಲವಿಂ ನಿಂದು
ಕೃತಕಾಚಲದ ಸೊಂಪು ತಂಪು ವೃತ್ತಂ ಬೆರಸಿ
ನುತಜಘನಮಮಂ ಮೀರಿ ಪರ್ಬಿ ಪದಪಿಂದೆಳಸಿ
ಕದಳಿಯಾಕೃತಿ ಬಟ್ಟದೊಡೆಗಳಂ ಸಾರುತಿರೆ
ಮದನದೊಣೆಯಾಕಾರ ಕಣಕಾಲ್ಗೆ ಸೇರುತಿರೆ
ಕೆಂದಾವರೆಯ ಕೆಂಪು ಪದತಳಮನೋಲೈಸೆ
ಮಂದಯಾನಕ್ಕೆಳಸಿ ಹಂಸೆಗತಿಯಾವರಿಸೆ

ಇಂತು ಸರ್ವಾಂಗ ಸೌಂದರ್ಯಮಂ ಕೆಳೆಗೊಂಡು
ಕಂತು ಮೊದಲಾಗಿ ಚಲಿಸುವ ರೂಪನೊಳಕೊಂಡು
ಅಳಿತುಡುಂಕದ ಮಘಮಘಿಪ್ಪ ಬಿರಿಮುಗುಳಂತೆ
ಎಳಸುವ ಚಕೋರಿ ಮೊಗವಿಡದ ಚಂದ್ರಿಕೆಯಂತೆ
ಪಿಕಚಂಚುಸಂಚಾರವಿಲ್ಲದೆಳೆದಳಿರಂತೆ
ಶುಕಮುಖದಿನಣ್ಣೆವಳಿಯದ ಮಧುರ ಫಲದಂತೆ
ತೊಳತೊಳಗಿ ಬೆಳೆವುತಿರ್ದಳು ಚಂದ್ರಕಳೆಯಂತೆ
ನಳನಳಿಸಿ ಹೊಳೆವುತಿರ್ದಳು ಕುಸುಮ ಶರದಂತೆ
ಬೆಳೆವ ಮಲುಹಣಿಯ ರೂಪಂ ಜನನಿ ನೆರೆ ನೋಡಿ
ಅಳವಲ್ಲದಕ್ಕರಿಂ ಸುಖರಸದೊಳೋಲಾಡಿ
ನವಯೌವನದ ನೆಲೆಗೆ ಮನದೊಳಗೆ ತೂಪಿರಿದು
ಅವಯವದ ಚೆಲುವಿಂಗೆ ಕಂಗಳೊಳು ತೂಪಿರಿದು
ಕಡುನೇಹದಿಂದೆ ನವಲಾಸ್ಯಮಂ ಮೈಗೊಳಿಸಿ
ಮೃಡನೊಲಿವ ರಸನಾದಮಂ ನೆರೆ ಕೊರಳ್ಗೊಳಿಸಿ

ಮಗಳನೋವುತ್ತೆ ಕಣ್ಣೊಳಗಿಕ್ಕಿ ಮುಚ್ಚುತಿರೆ
ಮಿಗೆ ವಿಳಾಸಿನಿಯರಿಂ ಸಿಂಗರಿಸುತಿರೆಯಿರೆ ೧೭೮

## ಸ್ಥಲ ೨

ಹೊಸನಡೆ ಹೊಸನುಡಿ ಹೊಸಮುಡಿ
ಹೊಸ ಹೊಸ ಸೌಭಾಗ್ಯವೆಸೆವ ಹೊಸಲಾವಣ್ಯಂ ।
ಹೊಸ ನೋಟಂ ಹೊಸ ಹರೆಯಂ
ಹೊಸ ಜವ್ವನದೇಳ್ಗೆ ಮಲುಹಣಿಗೆ ಚಿತ್ರತರಂ ॥

ಇಂತೊಪ್ಪುವ ಚರಣಂ ತೀವಿದ ಮಂದಗತಿಯಿಂ, ಅಪರಭಾಗಂ ತೀವಿದ ನಿತಂಬದಿಂ, ಉರಂ ತೀವಿದ ಪೆರ್ಮೊಲೆಯಿಂ, ಮೊಗಂ ತೀವಿದ ವಿಲೋಚನದಿಂದವಯವಂ ತೀವಿದ ಚೆಲುವಿಂ, ಮೈಯಂ ತೀವಿದ ಜವ್ವನದಿಂ, ಮನಂ ತೀವಿದ ಸುಖದಿಂ, ಮೆರೆದು ಮನಸಿಜಂ ಮುದ್ರಿಸಿದ ನನೆಗಣೆಯಂತಿರ್ದ ಮಲುಹಣಿಗೆ ಪೊಸಹರೆಯದೊಡನೆ ರಸಮಯವೆನಿಪ್ಪ ನವಲಾಸ್ಯಂ ಕೈಗೂಡಿತ್ತೆಂಬುದಂ ಪದ್ಮಾವತಿಯರಿದು, ವಸಂತಮಾಸದೊಳೊಂದು ದೇವಸಂ ವಿಜಯೇಶ್ವರದೇವರಂ ಕೇಳಿಸಲೆಂದು ಕ್ಷಣಮಂ ಕೈಕೊಂಡು ಮಲುಹಣಿಗೆ ಸಿಂಗರಂ ಮಾಡಲು ಸಖೀಜನಕ್ಕೆ ಪೇಳಲು, ಕೆಳದಿಯರು ನಲಿದುಬಂದು, ಮಾಂದಳಿರ ಹಸೆಯ ಮೇಲೆ ಪುಷ್ಪಮಂಜರಿಯಿಪ್ಪಂತಿರ್ದ ಸುಕುಮಾರಾಂಗಿಗೆ ನನೆಯಂಬಂ ಕೈಗೈವ ವಸಂತವಿಳಾಸಿನಿಯರಂತೆ ಪಾದಮುದ್ರಿಕೆಯನಲಂಕರಿಸಿ, ಸೂಡಗವನಮರ್ಚಿಸಿ, ನೇವುರಮನಳವಡಿಸಿ, ಕಂಕಣಮಂ ತಿರುಂಪಿ ನೂಂಕಿ, ರತ್ನಮುದ್ರಿಕೆಗಳಂ ಕೈಗೊಳಿಸಿ, ಬಾಹುಪೂರಯಮನಿಕ್ಕಿ, ಕರ್ಣಾವತಂಸಮಂ ಕೆಳೆಗೊಳಿಸಿ, ಚಕ್ರಮಿಥುನಕ್ಕೆ ಗವಸಣಿಗೆಯಿಕ್ಕುವಂತೆ ಕಂಚುಕೆಯಂ ತೊಡಿಸಿ, ತೋರಮುತ್ತಿನ ಹಾರಮಂ ಹತ್ತೆ ಸಾರ್ಚಿ, ಶಶಿಬಿಂಬಕ್ಕೆ ಶುಕ್ರನಂ ಸೇರಿಸುವಂತೆ ಮುಖಬಿಂಬದೊಳ್ಮೂಕುತಿಯಂ ಮೇಳವಿಸಿ, ಕಾವನಂಬಂ ಕತ್ತುರಿಯ ಸಾಣೆಯಿಕ್ಕುವಂತೆ ಕಜ್ಜಳವನೆಚ್ಚಿ, ಎಳೆಲತೆಯಂ ಬೆಳುದಿಂಗಳಿಂ ಬಾಣಿಸುವಂತೆ ನವ್ಯದುಕೂಲಮಂ ನಿರಿವಿಡಿದುಡಿಸಿ, ನಿರ್ಮಳಶಶಿಬಿಂಬದಂತಿರ್ದ ಮುಖಮಂಡಲಕ್ಕೆ ಚಂದ್ರಮನ ದೃಷ್ಟಿತಾಗದಂತೆ ಕತ್ತುರಿಯ ತಿಲಕಮಂ ನೊಸಲೊಳಿಟ್ಟು, ಕಾಮನ ಮೈವೆಳಗು ಮರೆವೊಕ್ಕಂತೆ ಕತ್ತಲಿಪ ಮುಡಿಯೊಳು ಹೊಸ ಕುಸುಮದೆಸಳಂ ತುರುಂಬಿ, ತೊಡಿಸಿದಾಭರಣಮುಂ ಮುಡಿಸಿದ ಹೊಸ ಹೂವುಂ ನಸುದೋರ್ಪ ಸಪುರದುಕೂಲಮಂ ಮುಸುಂಕಿಟ್ಟು, ಗಿಳಿ ಹಂಸೆ ಕೋಗಿಲೆ ಕುಸುಮಕುಲಂ ಮಧುಕರಂ ಮಂದಾನಿಲಂ ಚಂದ್ರಿಕೆ ಚಕೋರಿ ಚಕ್ರವಾಕಂ ಎಳೆಲತೆಗಳುಂ ನೆರೆದುಬಂದು, ಕಾಮನ ಹೂವಿನಂಬಂ ನಡುವಿಟ್ಟುಕೊಂಡೋಲೈಸುತಂ ಬಪ್ಪಂತೆ, ಪದ್ಮಾವತಿ ಮೊದಲಾದ ಸಕಳ ಸಂಪ್ರದಾಯಮುಂ ಸಖೀಜನಂಗಳುಂ ನೆರೆದು ಸುತ್ತಿ ಮುತ್ತಿ ಬರೆ, ಮಲುಹಣಿಯ ಮರೆಗೊಂಡು ಕಬ್ಬಿನ ಬಿಲ್ಲಂ ಗೊಲೆಗೆತ್ತಿ ಫುಲ್ಲಶರಂ ಮೆಲ್ಲಮೆಲ್ಲನೆ ನಡೆದುಬರೆ, ಪೂಸಿದ ಚಂದನದ ಜವಾದಿ ಯಕ್ಷಕರ್ದನದ ಸೌರಭ್ಯದೊಡನೆ ದೆಸೆದೆಸೆಗೆ ಪಸರಿಸಿ ತೀಡುವ ಹೊಸ ಜವ್ವನದ ಹಸಿಯ ಕಂಪಿನ ಬಳಿವಿಡಿದು ಸುವಿಟರ್ ಕವಿದು ಬರೆ, ತುಂಬಿಗಳ ಕೇಂಕಾರಂ ಕಂಕಣದ ಝಣತ್ಕಾರಂ ನೂಪುರದ ಕ್ರೇಂಕಾರಂ ಪಾದಮುದ್ರಿಕೆಯ ಠಣತ್ಕಾರಂ ಮದನನ ಬಿಲ್ಲ ಟೇಂಕಾರಂ ಬೆರಸಿ ಬರುತೆ ಪುರಜನದ

ಕಿವಿಗೆ ಹೊಸಸವಿಗಳಂ ಸಾಲಿಡೆ, ವಿಳಾಸದಿಂ ವಿಜಯೇಶ್ವರದೇವರ ರಂಗಮಂಟಪಕ್ಕೆ ನಡೆತಂದು ಚಂದ್ರಧರಂಗೆ ವಂದನಂಗೆಯ್ದು ಗಿರಿಜಾವಲ್ಲಭನಂ ಕೇಳಿಸಲೆಂದು ಸಕಲ ಸಂಪ್ರದಾಯಮುಂ ಸುಗತಿ ಸಂವರಣೆಗೊಂಡು ರಂಗಂಬೊಗುತ್ತಿರಲಿತ್ತಲು,

ಮಲುಹಣಂ ವಿಜಯೇಶ್ವರದೇವರ ದಿವ್ಯ ಶ್ರೀಪಾದಪ್ರಣತ ನಿತ್ಯನೇಮಾಸಕ್ತ ಚಿತ್ತನಾಗಿ ನೊಸಲಲಿಟ್ಟ ಭಸಿತದ, ಕೀಲಿಸಿದ ಕರ್ಣಾಭರಣದ, ಕೈಗೊಳಿಸಿದ ತೋರಹಾರದ, ಉಟ್ಟ ಹೊಸ ದೇಸಾಳದುಡಿಗೆಯ, ಹೊದೆದ ಹೊಸ ದುಕೂಲದ, ಕಿವಿಯೊಳಣ್ಯೆಗೊಂಡ ಮೃಗಮದದ, ಕಕ್ಷಪುಟದೊಳು ಮಘಮಘಿಪ ಕತ್ತುರಿಯ ಸಾರದ, ಉದ್ವರ್ತನಂಗೆಯ್ದ ಚಂದನದ, ತುರುಂಬಿದ ಕುಸುಮಾವಳಿಯ ಹೊಸ ಕಂಪುಂ ಸೊಗಯಿಸುವ ಸೊಂಪುಂ ಮೋಹಿಸುವ ಬೆಳಗುಂ ಮುಪ್ಪುರಿಗೊಂಡು ಬಳಸಿ ಬೀದಿವರಿಯೆ, ಏರುಂಜವ್ವನದುರ್ಬು ಕೊರ್ಬು ಪರ್ಬುಗೆವಡೆದು ನಿಜನಿಳಯಮಂ ಪೊರಮಟ್ಟು ಬಪ್ಪಾಗಳು, ವೇದನಾದಾಕ್ಷರದೊಡನಕ್ಷತೆಯಿಡುವ ವಿಪ್ರಕುಲದ, ನವೀನ ಗದ್ಯಪದ್ಯದೊಡನೆ ನಲವರಕೆಯಂ ಕೊಡುವ ಕವಿಗಳ ಕೈವಾರದೊಡನೆ ಸ್ತುತಿಗಳಂ ನೀಡುವ ವಂದಿಗಳ, ತುಂಬಿಗಳ ನುಣ್ಚರದೊಡನೆ ಜೋಳಿಸಿ ಮಾಣದಾಣತಿಗೊಡುವ ಗಾಯಕರ, ಸಮಶೀಲಂ ಸಮಕುಲಂ ಸಮರೂಪು ಸಮಬಲಂ ಸಮಪ್ರಾಯದೊಡನೆ ಮನಂಗೊಡುವ ಮಿತ್ರರೆನಿಪ ವಿಟ ವಿದೂಷಕ ನಾಗರಿಕ ಪೀಠಮರ್ದನರ ನಡುವೆ ಕಾಮನ ಕೈಸೆರೆ ನಡೆದು ಬಪ್ಪಂತೆ ಶಿವಾಲಯಕ್ಕೆ ಬಂದು,

ವಿಜಯೇಶ್ವರದೇವರ ಸ್ಥಾನದೊಳು ತಾನುಂ ಸಖಜನಂಗಳುಂ ಸರಾಗದಿಂ ಸಮುಚಿತಾಭಿಮುಖರಾಗಿ ಪೊಡಮಟ್ಟು, ಮಲುಹಣಿಯ ತನಿ ನೇಹಂ ತನ್ನನೀತೆರದಲಿ ಸುತ್ತುವುದೆಂಬುದಂ ತೋರುವಂತೆ ಪ್ರದಕ್ಷಿಣಂ ಬಂದು ಒಳಪೊಕ್ಕು ಸೋಮಧರನ ವಾಮಭಾಗದೊಳು ಪದ್ಮಾಸನಾಸೀನನಾಗಿ ಕುಳ್ಳಿರ್ದು, ಆಗಮಸ್ಥಾನದೊಳು ಭಸಿತವನಿಟ್ಟು ಪಂಚಬಾಣಕ್ಕೆಡೆ ಮಾಡುವಂತೆ ಶೋಷಣ ದಾಹನ ಪ್ಲವನಂಗಳಿಂ ಹೃದಯಾಧಾರಮಂ ಶುದ್ಧಿಮಾಡಿಕೊಂಡು, ಎಲೆ ದೇವಾ, ಈ ಕನ್ನೆಯಂ ಸೋಂಕಿದ ಬಳಿಕ್ಕೆನ್ನಂಗ ವಿಕಾರವೆಲ್ಲಂ ತನ್ನಂಗದೊಳೆಂಬುದಂ ಮುಟ್ಟಿ ಮುಟ್ಟಿ ತೋರುವಂತೆ ಅಂಗನ್ಯಾಸ ಕರನ್ಯಾಸಮಂ ನಿಮಿರ್ಚಿ, ಎಲೆ ದೇವಾ, ಮಲುಹಣಿಯಂ ಕಂಡ ಬಳಿಕ್ಕಂ ನಿನ್ನ ಕಾಬುದರಿದೆಂಬುದನರಿಪುವಂತೆ ಕಣ್ಗಳಂ ಮುಚ್ಚಿ, ಎಲೆ ದೇವಾ, ಪುಲವುಂ ದಿನಕ್ಕಲ್ಲದೆ ನಿತ್ಯನೇಮಕ್ಕೆ ಬಾರೆನೆಂಬುದನೇಕಾಂತದೊಳು ಬಿನ್ನೈಸುವಂತೆ ಜಪವನೆಣಿಸಿ, ಎಲೆ ದೇವಾ, ನಿನ್ನೋಲಗದ ಕನ್ನೆಯಂ ಬೇಗ ಕರುಣಿಸುವುದೆಂದು ಕಾಲ್ವಿಡಿವಂತೆ ಲಿಂಗದಂಘ್ರಿಲಯೊಳ್ಪರುಶನಂ ಮಾಡಿ, ಮಲುಹಣಿಯಂ ಬೇಡಿ ಸದಾಶಿವನಿಂ ಧಾರೆಯಂ ಪಡೆವಂತೆ ಪಾದೋದಕಮಂ ಕೊಂಡು, ಪೊಡಮಟ್ಟು ಬೀಳ್ಕೊಂಡು ಸೌಂದರ್ಯಸಂಪನ್ನಂ ವಿಲಾಸನಿಧಿ ಸೌಭಾಗ್ಯಸಾರೋದಯಂ ಸೌಕುಮಾರ್ಯ ಸನ್ನಿಭಂ ರಸಭರಿತಚಿತ್ತನಪ್ಪ ಮಲುಹಣದೇವಂ ಲಿಂಗಾರ್ಚನೆಯಂ ಮಾಡಿ ತಿರುಗಿ ಬಪ್ಪಾಗಳು,

ಮುಂದಣ ರಂಗಭೋಗ ಮಂಟಪದ ಮಧ್ಯದೊಳಿತ್ತರಂಗೊಂಡೋಲಗವಿತ್ತು ಕುಳ್ಳಿರ್ದ ಪರಮಭಕ್ತರ ಪುಣ್ಯಶಿವೈಕ್ಯರ ಸಚಿವರ ರಾಜಪುತ್ರರ ವಡ್ಡವ್ಯವಹಾರಿಗಳ ಕವಿ ಗಮಕಿ ವಾದಿ ವಾಗ್ಮಿಗಳ ಕಳಾವಿದರ ಸತ್ಯರ ಸಂಗೀತ ಸಾಹಿತ್ಯಸಂಪನ್ನರ ವಿಳಾಸಿನಿಯರ ಪುರಜನದ ಪರಿಜನದ ನಡುವಣ ರಂಗಮಧ್ಯದೊಳು ನರ್ತನಂಗೊಡುವ ತಾಳದ, ಗತಿಗೊಡುವ ಮದ್ದಳೆಯ, ಲಹಣಿಗೊಡುವಾವುಜದ, ದೆಕ್ಬಾಳಂಗೊಡುವ ಕರಡೆಯ, ಸವಿಗೊಡುವ ಕಹಳೆಯ, ನಯಂಗೊಡುವ

ಕೌಸಾಳದ, ಹೆಲ್ಲಣಂಗೊಡುವ ವಾಸದ, ಲಲ್ಲೆಗೊಡುವ ಜೇವಣಿಗೆಯರ ಸಂಗೀತದ ಸಂದಣಿಯೊಳು ಪುಷ್ಪಾಂಜಲಿಯ ಸಮಯದೊಳು ನವೀನ ಕನ್ಯಾವರಣ ವಿವಾಹದೊಳು ಮದನನ ಮುಹೂರ್ತದ ತೆರೆ ಸರಿವಂತೆ ಜವನಿಕೆಯೋಡೆ ಮಲುಹಣಂ ನೋಡೆ ದೊಣೆಯಗಲ್ದ ಕಾವನಂಬಿನಂತಿರ್ದ ಮಲುಹಣಿಯ ರೂಪಿನೊಳು ನೋಟಂ ಸಿಕ್ಕಿ, ಎವೆ ಬೆರಗಾಗಿ, ಕಂಗಳ ಧಾರೆಯಿಂದೊಳಪೊಕ್ಕ ರೂಪು ಕರಣಮನೊಕ್ಕಲಿಕ್ಕಿ, ಭಾವಮಂ ಬರಿಕೆಯ್ದು, ಚಿತ್ತಮಂ ತೊತ್ತಳದುಳಿಯೆ, ಜೋಲ್ದು ಜೊಂಪಿಸಿ ಮಿತ್ರರ ಮೇಲೆ ಮೆಯ್ಯನೀಡಾಡುವ ಜವ್ವನಿಗನಂ ಮಲುಹಣಿ ಭೋಂಕನೆ ನೋಡಿ ಕಂಡು, ಮನಂ ಬೆದರಿ ಹೃದಯಂ ನಡುಗಿ ತನು ಬೆಮರ್ತುರ್ ಗತಿ ಸ್ತಂಭಿಸಿ ಪಯಂ ಪೈಸರಂಬೋಗಿ ಹಸ್ತಂ ಮಲಂಗಿ ನೋಟವಚ್ಚೊತ್ತಿ ಮೂರ್ಛಿಸುವ ಮಗಳಂ ಪದ್ಮಾವತಿ ನೋಡಿಕಂಡು, ಇದೇನಿದೇನು ರಂಗಮಂಟಪವೆಲ್ಲಂ ವಿರಹರಸತರಂಗ ಮಂಟಪವಾದುದೀಶ್ವರನ ಕೇಳಿಕೆಯೆಲ್ಲಂ ರತೀಶ್ವರನ ಕೇಳಿಕೆಯಾದುದಕ್ಕಕ್ಕು, ಆದಡೇಂ ಸೋಲ್ತ ಮಲುಹಣಂ ಸದರ್ಥನೆಂಬುದನರಿದು ಮನಮಂ ಬಲಿದು, ಇರ್ಬರುಮನೊಡಗೊಂಡು ಬಂದು ಪರ್ಬಿದ ನೇಹಮಂ ನೆಲೆವೆಚ್ಚಲೊಡರ್ಚಿಸಿ ನಿಜನಿಳಯಕ್ಕೆ ತಂದು ಮದನಕೇಳೀ ಸದನವೆನಿಪ ಸೆಜ್ಜೆಯ ಮನೆಯ ಸಿರಿಮಂಚದ ಹಂಸತೂಳ ತಳ್ಪದೊಳಿಬ್ಬರುಮಂ ಜವಳಿಗೊಳಿಸಿ, ತಾನುಂ ಸಖೀಜನಮುಂ ಜಾಣಿಂ ಚಾರಲು, ಅನಂಗಕೇಳಿಗೆ ಮನಂದಂದು ಇಂದ್ರಿಯಂಗಳುರವಣಿಸಿ ತವಕಮನುಗುಳೆ ಲಜ್ಜೆ ಹಜ್ಜೆದೆಗೆದು ಮನಂ ಮುಂದುಗೆಟ್ಟು ಅನುರಾಗವರಳ್ದು ಸವಿನೋಟವೊಳಪೊಕ್ಕು ಭೀತಿಬಿಟ್ಟು ಮೆಂದೆವಾಳಂ ಮೈಸಂದು ಸೋಂಕು ಸವಿಗಂಡು ಆಲಿಂಗನಕ್ಕಾತುರಿಸಿ ರೂಪಂ ಕಣ್ತೀವಿನೋಡಿ ಕುಚವಾರಲಪ್ಪಿ ಮೈಯಾರೆ ಕೂಡಿ ಮನಂ ದಣಿಯದೆ ಅರಲುಗೊಂಡ ಚಕೋರನಂ ಬೆಳುದಿಂಗಳೊಳು ಬಿಸುಟ್ಟಂತೆ ಹಸಿದ ಪಿಕನಂ ಹೊಸವನದೊಳಿರಿಸಿದಂತೆ ಬಳಲ್ದ ಚಕ್ರಮಿಥುನಕ್ಕೆ ಬಿಸಿಲಂ ತಳಿದಂತೆ ಮನದಾರ್ತದೊಡನೆ ತನುವಿನ ಸುಖಂ ತಲೆಗೇರಿ ಬೇರೆ ಬೇರವಯವದ ಕೂಟಕ್ಕೆ ಸರ್ವಾಂಗಮನೊಪ್ಪಿಸಿಕೊಟ್ಟು ಅಪ್ಪಿದಡೆ ಕೂಡಲರಿದು ಅಗಲ್ದಡೆ ಬಾಳಲರಿದೆನಿಪ ಮಲುಹಣಿಯ ತನುವಿನ ಕದಂಬಾನೋದಂ ತೀಡಿ ಮನೋಮೇಘಂ ಮೊರೆಯೆ ಓರೆ ನೋಟದ ಮಿಂಚಡರೆ ಬಳಲ್ಮುಡಿಯೆಂಬ ನವಿಲಾಡೆ ಕೂಡೆ ಪುಟ್ಟುವ ಸವಿದನಿ ಮೊಳಗ ಎಚ್ಚರೆಂಬ ಹಂಸೆ ನೋಡೆ ಮೋಹದ ಮಳೆಗರೆದು ಚಿತ್ತದ ಭೂಮಿ ನೆನೆದು ಅನುರಾಗದ ಬೀಜಂ ಬಿತ್ತಿ ಮುನಿಸಂಕುರಿಸಿ ಪ್ರಣಯಕಲಹಂ ಪಲ್ಲವಿಸಿ ತಿಳಿವಿನ ಮೊನೆ ಮುಗೊಳೊತ್ತಿ ಆಲಿಂಗನಂ ಫಲಿತಮಾದ ಸಮಾನುರಾಗದೊಳು ಅಗಲದಿರೆ ಮತ್ತೆ ಮತ್ತೆ ಬೇಡಿ ಕೊಡುವಲ್ಲಿ ನೋಟವರಿದಳುಪುವ ಸ್ವೈರಣೆಯರಿದವುಂಕುವ ಆಸೆಯರಿದಪ್ಪುವ ಬಯಕೆಯರಿದು ಬೆರಸುವ ಮನವರಿದನುಭವಿಸುವ ತನುವರಿದು ಜೀವಿಸುವ ಇಚ್ಚೆಯರಿದು ಹೆಚ್ಚುವ ಅಗ್ಗಳಿಕೆಯರಿದು ಬೋಳೈಸುವ ಎಚ್ಚರಿಕೆಯ ಸಮರತಿಯೊಳದ್ದು ಹೋಗಿ ಸುಖದ ಸೊಕ್ಕು ಮಿಕ್ಕೇರಿ ನಲಿವು ತಲೆಗೆತ್ತಿ ನಖಮುಖದಿಂ ಸೆಳೆಯಲನುವಾಗಿಪ್ಪಲ್ಲಿಂ ಮುನ್ನ ಮೈಯ ರೋಮಾಂಚದ ಬಾಸುಳೇಳುವ ಸುಕುಮಾರಾಂಗಿಗೆ ನೆರೆವ ಸುಖಸಮಯದೊಳು ಕರಣವೆಲ್ಲಂ ನೋಟ, ನೋಟವೆಲ್ಲಂ ನುಡಿ, ನುಡಿಯೆಲ್ಲಂ ವಿರಹ, ವಿರಹವೆಲ್ಲಂ ದೈನ್ಯ, ದೈನ್ಯವೆಲ್ಲಂ ಸಾತ್ವಿಕ, ಸಾತ್ವಿಕವೆಲ್ಲಂ ರಸ, ರಸವೆಲ್ಲಂ ಮೈ, ಮೈಯೆಲ್ಲಂ ಕೂಟ, ಕೂಟವೆಲ್ಲಂ ಮನ, ಮನವೆಲ್ಲಂ ಮೆಚ್ಚುಮ ಮೆಚ್ಚೆಲ್ಲಂ ಸೋಲು, ಸೋಲವೆಲ್ಲಂ ಸುಖಮಯವಾಗಿ, ದಿನಂಗಳು ನಿಮಿಷಂಗಳಾಗಿ ಮಾಸಂಗಳು ದಿನಂಗಳಾಗಿ ವತ್ಸರಂಗಳು ಮಾಸಂಗಳಾಗಿ ಪದ್ಮಾವತಿ ಸಂಪನ್ನೆಯಾಗಿ ನಿಚ್ಚಂ ಸಹಸ್ರಹೊನ್ನೆಂದು ನೂರುವರುಷಕ್ಕೆ ತಂದೆ

ತೀವಿದ ಧನಂ ಹತ್ತುವರುಷಕ್ಕೆಯ್ದದೆ ಧನಂ ತೀರಿಯುಂ ಮನಂ ತೀರದಿರೆ, ಮುಡಿದ ಹೂವಗಲ್ದೊಡಂ ಹಿಡಿದ ಪರಿಮಳವಗಲದಂತೆ ಮೋಹರಸವಾರದೆ ಸಮಸುಖಸಾರ ಹೃದಯ ಸಂಜಾತಹರುಷರಾಗಿ ಮಲುಹಣಿಯುಂ ಮಲುಹಣನುಂ ಪರಮಾನುರಾಗದೊಳಗಗಲದಿರೆ,

ಮೆಲ್ಲಮೆಲ್ಲನೆ ಪಲವುಂ ದಿನಕ್ಕೆ ಬರ್ಪ ಹೊನ್ನಿನುರವಣೆಯುಡುಗೆ ಇರ್ಪರವು ತೆರಹುಗುಂದದಿರೆ ಉಚಿತವ್ರಯಕ್ಕೆ ಆಪದ್ಧನವಿಲ್ಲದಿರೆ ಪದ್ಮಾವತಿ ಬೆಚ್ಚಿ ಬೆದರಿ ಅಚ್ಚಿಗಂ ಗೊಂಡರ್ಥದ ಸವಿಗೆ ಮನದ ನಾಲಗೆ ಲವಲವಿಸೆ ಮಿಕ್ಕು ಮೀರಿದ ರಕ್ಕಸಗುಂಟಣಿ ಚೂತಮನಪ್ಪಿದ ಮಲ್ಲಿಕಾಲತೆಯನಗುಲ್ಚುವ ಬಿರುಗಾಳಿಯಂತೆ ಭೇರುಂಡವಕ್ಕಿಯ ನಡುವೆ ಸೀಳಹೊಯ್ವ ಲುಬ್ಧಕನಂತೆ ಮಗಳನಗಲ್ಚಲು ಬಗೆದು, ಏಕಾಂತಮುಂಟು, ಮಗಳಂ ಕರೆಯಿಮೆಂದು ವಿಳಾಸಿನಿಯರಂ ಮುಳಿದು ಕಳುಪೆ, ಬಂದ ಸಖಿಯರವರಿಪ್ಪಿರವಂ ಕಂಡು ಕರೆಯಲಾರದೆ ಕಣ್ಣನೀರಂ ತೀವಿ ಪೋಗಲುಮಿರಲು [ಮರಿ]ಯದೆ ಸಿಡಿಮಿಡಿಗೊಳುತ್ತಮಿರೆ, ತಳುವಿತ್ತಂ ಕಂಡು ತಾನೆ ಬಂದುರವಣಿಸಿ ನುಡಿದೆಲ್ಲರಂ ಜಡಿದು ಝುಂಕಿಸಿ ಏಳ್ಮಗಳೆ, ನಿಮ್ಮ ಮಾವಂ ದ್ವೀಪಾಂತರದಿಂದಂ ದಿವ್ಯವಸ್ತ್ರಾಭರಣಂಗಳಂ ಕೊಮಡುಬಂದನವಂ ನೋಡಲ್ಕೇಳ್ಮಗಳೆ ಮಲುಹಣೀಯೆಂಬ ನುಡಿ ಕಿವಿಯೊಳಂಬಂ ಹೊಸೆದಂತಾಗೆ, ಆಲಿಂಗನವನಗಲಲಾರದೆ ಅಂತಃಕರಣದೊಳು ಹೊತ್ತಿಹೊಗೆದ ಕಾಮಗಿಚ್ಚಿನ ವಿರಹದ ತಿದಿಯೊತ್ತೆ ಕಿಡಿಸೂಸಲು ಸುಯ್ದು ಕೋಪಂ ಸೂಸಲುರಿದು ಹರಣಂ ಹಾರಿ ಹಮ್ಮೈಸುತೆಂತಕ್ಕೆ ಎಚ್ಚತ್ತು ತಕ್ಕಯಿಸಿಕೊಳುತ್ತಂ ಸಂತೈಸಿಕೊಳಲಾರದೆ ಈ ರಕ್ಕಸಿಯ ನುಡಿಯೆಂಬೆಡೆಗಿಚ್ಚಂ ನಂದಿಸಿ ಬಪ್ಪೆನಂಜದಿರೆಂಬಂತೆ ಮಲುಹಣನಂ ದಯಾದೃಷ್ಟಿಯಿಂ ನೋಡಿ, ಮೆಲ್ಲಮೆಲ್ಲನಾಲಿಂಗನಮಂ ಬಿಚ್ಚುತ್ತಿಪ್ಪಲ್ಲಿ ಏರುವಡೆದ ಹಂಸೆ ಅಂಬುಗೂಡಾಗಿ ಬೀಳ್ವಂತೆ ಮಂಚದಿಂ ನೆಲಕ್ಕೆ ಬೀಳ್ವ ಮಲುಹಣಿಯಂ ಸಖಿರ್ಕೈಯಾಂತು ಕೊಳಲಂತಂತು ಸಂತಯಿಸಿ ನೊಸಲಕಣ್ಣ ಹೊಗೆಸುತ್ತಿದ ಹೂವಿನಂಬುಲತೆಗಳಂ ನೆಮ್ಮಿಬಲಳ್ದು ಬಪ್ಪಂತೆ ಕೆಳದಿಯರ ಕೆಯ್ಯ ಬಾಯೊಳು ಮೆಯ್ಯನೀಡಾಡಿ ಮೆಲ್ಲಮೆಲ್ಲನೆ ಬಂದು ತಾಯಂ ನೋಡಿ ಕೆಯ್ಯಂ ನೀಡಿ, ಎಲೆ ಪಾಪಿ, ಎಲೆ ಸುಖವೈರಿ, ಕರೆದ ಕಾರಣವೇನೆಂದು ಬೆಸಗೊಳೆ ಎಲೆ ಮರುಳ್ಮಗಳೆ, ಅರ್ಥಂ ತೀರ್ದುದು, ಯೌನಂ ಸೋರ್ದುದು. ಇನ್ನೀ ಮಲುಹಣನಂ ಬಿಡುಬಿಡೆಂದು ನುಡಿಯೆ, ಸಿಡಿಲ್ದನಿಗೇಳ್ದ ಹಂಸೆಯಂತೆ ನಡನಡನೆ ನಡುಗಿ ಎಲೆ ತಾಯೆ, ಕಮಲತಂಡುಲವನಾರೋಗಿಸುವ ಹಂಸೆಗೆ ಹರಳನಿಕ್ಕುವರೆ ? ಕೋರಕಮಂ ಸವಿವ ಕೋಕಿಲೆಗೆ ಕೊರಡನಿಕ್ಕುವರೆ ? ಫಳರಸವ ನೀಂಟುವರಗಿಳಿಗೆ ಕಾದನೀರನೆರೆವರೆ ? ಪರಿಮಳವನುಂಬ ತುಂಬಿಗೆ ಹೊಗೆಯನಿಕ್ಕುವರೆ ? ಬೆಳುದಿಂಗಳನಾಸ್ವಾದಿಪ ಚಕೋರಿಗೆ ಬಿಸಿಲಂ ಮಾಳ್ಪರೆ ? ಮಲುಹಣನ ವಿನಾಭೇದಸುಖದೊಳಿಪ್ಪೆನ್ನೊಡನೀ ಮಾತಂ ನುಡಿವರೆ ? ಎಲೆ, ಲೋಭ ಮುಂತಾಗಿ ಹುಟ್ಟಿದ ಹೀನೆ, ಕ್ರೋಧ ಮುಂತಾಗಿ ಹುಟ್ಟಿದ ನೀರಸೆ, ಸುಖಮಂ ಕೊಯ್ವ ಮಾನಸಗರಗಸವೆ, ಅಯ್ಯೋ, ಏಕೆನ್ನನರಿದರಿದು ಸುಟ್ಟಪ್ಪೆ, ಇರಿದಿರಿದು ಬಿಸುಟಪ್ಪೆ, ದಾಕ್ಷಿಣ್ಯದಹನೆ, ಹೋಗು ಹೋಗೆಂದು ಭೋಂಕನೆ ತಿರುಗಿ ಮೀರಿ ಮುಂಕಣಿಸಿ ಬಂದು ಮಲುಹಣನೊಳು ಸುಖಸುಪ್ತಿಯಿಂದಿಪ್ಪ ಮಗಳ ಮೋಹಕ್ಕೆ ಪದ್ಮಾವತಿ ಬೆರಗಾಗಿ ಕೈಯರ್ಥಮಂ ಸೆಳೆದುಕೊಂಡಂತೆ ಮಲ ಮಲಂ ಮರುಗಿ, ಮಗಳ ದಾಕ್ಷಿಣ್ಯಕ್ಕೆ ಮತ್ತಂ ಕೆಲವುದಿನವಿರಿಸಿ ಸೈರಿಸಲಾರದೆ, ಮಲುಹಣಿಯನಂದದಂದಿಂಗೆ ಕರೆಕರೆದಗಲ್ಕೆಯನಭ್ಯಾಸಂ ಮಾಡಿ, ಮಲುಹಣನಂ ಸಜ್ಜೆಯ ಮನೆಯೊಳು ಮೂದಲಿಸಿ, ಕುಳ್ಳಿರ್ದೆಡೆಯೊಳು ಕುಸುರಿದರಿದು ನಿಂದೆಡೆಯೊಳು ನೀರಂ ಚೆಲ್ಲಿ ಮನೆಯ ಮುಂದೆ ಸುಳಿವ

ಹೊಸ ಹರೆಯದ ಸಂಪನ್ನರಪ್ಪ ರಾಜಪುತ್ರರುಟ್ಟುಡಿಗೆಯಂ ತೊಟ್ಟ ತೊಡಿಗೆಯಂ ಕಂಡು ಅವರಂ ಪೊಗಿಸುವೆನೆಂದು, ಸೈರಿಸಲಾರದೆ ಮನಂ ಬೆದರಿ ಹಲುದಿಂದು ಅವುಡಂ ಕಚ್ಚಿ ವಿಳಾಸಿನಿಯರಂ ನಿಃಕಾರಣಂ ಬಡಿದು ಕಾಳುಜಗಳಮಂ ತೆಗೆದು ಬೇನೆಯಿಲ್ಲದೆ ನೆರಳ್ದು ಸಾವಿಲ್ಲದೆ ಶೋಕಂಗೆಯ್ದು ಬರಿ ಸಾಲಕ್ಕೆ ಹುಸಿದಗಹಂ ಕೊಟ್ಟು ಕಳಿದ ಹೂವಂ ಬಿಸುಡುವಂತೆ ಮಲುಹಣನಂ ಮನೆಯಿಂ ಪೊರಮಡಿಸಿ ನಿಸ್ವರಂ ನೀಕರಿಸಿ ಸಸ್ವರನಿದಿರ್ಗೊಳಲೆಂದು ಪದ್ಮಾವತಿ ಮಲುಹಣಿಯಂ ಮಲುಹಣನ ವಿರಹಸಂತಾಪಚಿತ್ತೆಯಂ ತಿಳುಪಿ ಬೋಧಿಸುತ್ತಮಿರೆಯಿರೆ,

## ಸ್ಥಲ ೩

ಪೊರಮಡಿಸೆ ಮಲುಹಣಂ ನೆರೆ
ಮರುಗಿ ಮನಂಗುಂದಿ ಕಂದಿ ಮನುಮಥಬಾಣಂ ।
ಮರುಮೊನೆಗಂಡಂತೊಡಲೊಳ
ಗೆರಗಿ ಕರಂ ತನುವನುರುಪೆ ಪೊರಳುತ್ತಿರ್ದಂ ॥

ಇಂತು ಮಲುಹಣನಂಗಜಾಗ್ನಿಯೊಳು ಬೇವುತಂ
ಸಂತತಂ ಮಲುಹಣಿಯ ಚಿಂತೆಯೊಳು ನೋವುತಂ
ಪೊರಮಡಿಸೆ ಪೋಗಲಾರದೆ ಮನೆಯ ಮುಂದಿರ್ದು
ಮರುಗಿ ಮನವಿಕ್ಕಿ ತಲೆಗುತ್ತಿ ತಾಪಿಸುತಿರ್ದು
ನಡೆದು ಗಳಗಳನೆ ಪೋಪಂ ಕಾರ್ಯವಿನಿತಿಲ್ಲ
ನುಡಿವನೊಮ್ಮೊಮ್ಮೆ ತನ್ನಂ ನುಡಿಸುವವರಿಲ್ಲ
ಸುಮ್ಮನಿಪ್ಪಂ ಧ್ಯಾನವೆಳ್ಳನಿತ್ತೊಳಗಿಲ್ಲ
ನೆಮ್ಮಿ ಕುಳ್ಳಿರ್ಪನನುಸಂಧಾನವಿನಿತಿಲ್ಲ
ನಿಂದರಂ ಕಮಡು ಮಲುಹಣಿಯೆಂದು ಸೋಂಕುಮಂ
ಬಂದರಂ ಕಂಡು ಮಲುಹಣಿಯೆನುತ್ತಪ್ಪುವಂ
ದಾರಿಯೊಳು ಬೀದಿಯೊಳು ಮಲುಹಣಿಯ ಕಳವಳಂ
ಕೇರಿ ಕೇರಿಗಳೊಳಗೆ ಮಲುಹಣಿಯ ಕಳವಳಂ
ನಿಂದಿರ್ದು ಕುಳ್ಳಿರ್ದು ನಡೆನಡೆದು ಬೆಚ್ಚುವಂ
ಮುಂದಿರ್ದರಂ ಕಂಡು ಬಂದಂತೆ ಹೆಚ್ಚುವಂ
ಭಾವರತಿಯೊಳ್ಕೂಡಿ ಕಣ್ಮುಚ್ಚಿ ಕರಗುವಂ
ಭಾವದಚ್ಚಳಿಯೆ ಕಣ್ದೆರೆದರಸಿ ತಿರುಗುವಂ
ತನುವೆತ್ತಿ ಹೊರವೊಳಲ ಬನದೊಳಗೆ ಪರಿದಲ್ಲಿ
ತನತನಗೆ ತೀವಿರ್ದ ಪೂಗೊಳನ ತಡಿಯಲ್ಲಿ
ಕಮಲಮಂ ಮಲುಹಣಿಯ ಮೊಗವೆಂದು ಮುತ್ತುವಂ
ಕುಮುದಮಂ ಕಣ್ಗಳೆಂದಕ್ಷಿಯೊಳಗೊತ್ತುವಂ

ಮಧುಕರಂಗಳನಳಕವೆಂದು ತಲೆಗೊತ್ತುವಂ
ಅಧರವೆಂದಾ ಬಿಂಬಫಳವನಚ್ಚೊತ್ತುವಂ
ದಾವಾಗ್ನಿಯೆಂದಶೋಕೆಯ ತಳಿರ್ಗೆ ಹೆರಸಾರ್ದು
ಹೂವನಂಗಜ ಬಾಣವೆಂದು ಕಂಡೊಳಸೋರ್ದು
ಬಿಸಿಯ ಬೆಳಗೆಂದು ಬೆಳುದಿಂಗಳಿಗೆ ಹೇಡೈಸಿ
ಪಸಿಯ ಕಿಚ್ಚೆಂದು ಹೊಸ ಪಲ್ಲವಕೆ ತಲ್ಲಣಿಸಿ

ಓಡಿಬಂದೂರೊಳಗೆ ಕಳವಳಿಸುತಂ ಪೊಕ್ಕು
ಬಾಡಿ ಬಸವಳಿದು ಮಲುಹಣಿಯ ವಿರಹಂ ಮಿಕ್ಕು
ಗಳಗಳನೆ ನಾಲ್ಕೈದವಸ್ಥೆ ದೇಹದೊಳೇರೆ
ಒಳಗೊಳಗೆ ಸುಡಲಲ್ಲಿ ಹೊರಗೆಲ್ಲ ಕಾಹೇರೆ
ಮೈಸೋಂಕೆ ಮೆಲುಗಾಳಿ ಘರಿಘರಿಲನುರಿದಪುದು
ಕೈಸೋಂಕೆ ಬೆಳುದಿಂಗಳಿಂಗಳಂಗಾದಪುದು
ಪೊಕ್ಕು ಕೊಳನುಕ್ಕಿ ನೆರೆ ಬತ್ತಿ ಬರೆದಾದಪುದು
ಮಿಕ್ಕು ಮುಟ್ಟಿದ ಪಲ್ಲವಂಗಳುರೆ ಸೀದಪುದು

ಎಂಬ ವಿರಹಾತಪಕ್ಕಿರಲಾರದೈತಂದು
ಇಂಬಿಲ್ಲದಾತುರಂ ತಲೆಗೇರಿ ಪರಿತಂದು
ನಡೆತಂದು ಮಲುಹಣಿಯ ಬಾಗಿಲೊಳು ನಿಂದಿರ್ದು
ಸುಡುವ ವಿರಹಾಗ್ನಿಯಿಂ ಕಳವಳಿಸುತಂತಿರ್ದು
ಉರವಣೆಯ ಕರಣಂಗಳೊಡಗೂಡಿ ತಾಪಿಸುತೆ
ತಿರುಗಿ ಮಲುಹಣಿ ಮಲುಹಣೀಯೆಂದು ಮೂರ್ಛಿಸುತೆ
ತನ್ನಿಂದ ತಾನೆ ಮತ್ತೆಚ್ಚತ್ತು ನೋಡುತಂ
ಉನ್ನತಾನಂಗ ಶಿಖಿಯಿಂದುರಿದು ಬೇವುತಂ
ಮಲುಹಣಿಯ ಮನೆಯ ಮುಂದಲ್ಲಲ್ಲಿ ನಿಂದಿರ್ದು
ಮಲುಹಣಂ ಮತಿಗೆಟ್ಟು ಕಳವಳಿಸುತಂ ಸಾರ್ದು
ದೂರಿಸುತೆ ದಾಹಿಸುತ್ತಾ ಭಿತ್ತಿಯಂ ನೆಮ್ಮಿ
ಹಾರುತಂ ಕಣ್ಮುಚ್ಚಿ ಕೊರಗಿ ವಿರಹಂ ಪೊಣ್ಮಿ
ಮಲುಹಣಿಯನೀಕ್ಷಿಸಿದ ಕಣ್ಗೆ ತಣ್ಪಾಗುತಂ
ಮಲಯಹಣಿಯ ನುಡಿಗೇಳ್ದ ಕಿವಿಗೆ ಮಾರಾಗುತಂ
ಕೆಳದಿಯರು ಪೊರಮಡಲು ಚರಣದೊಳು ಹೊರಳುತಂ
ಅಳವಲ್ಲದುರವಣೆಯ ತಾಪದೊಳು ತೆರಳುತಂ
ಮನದೊಳಗೆ ಕಣ್ಣೊಳಗೆ ಮಲುಹಣಿಯನರಸುತಂ

ನೆನಸಿನೊಳು ನಿದ್ರೆಯೊಳು ಮಲುಹಣಿಯನರಸುತಂ
ಬಂದೆಂಜಿಲ್ಲಂ ಚೆಲ್ಲುವೊಂದು ಹೊಸ ಕುಳಿಯೊಳಗೆ
ನಿಂದು ಮಧ್ಯಮರಾತ್ರಿಪರಿಯಂತವದರೊಳಗೆ
ಇರಲಲ್ಲಿ ಮಲುಹಣೀದೇವಿಯಾರೋಗಿಸಿದ
ಹರಿಯಾಣಮುಮನೊರ್ವ ಹೊಸ ವಿಳಾಸಿನಿ ತೊಳೆದ
ಉದಕಮಂ ಚೆಲ್ಲಲಾತನ ಮೇಲೆ ಪಸರಿಸಲು
ಪದೆದು ಪುಳಕಪ್ರತತಿ ತನ್ನ ಮೈಯೊಳ್ ನಿಲಲು
ಹಾ ಮಲುಹಣೀ ಮಲುಹಣೀ ಎಂದು ಹಾರೈಸಿ
ಆ ಮಾತು ಮಲಯಹಣಿಯ ಕರ್ಣದೊಳು ಪೂರೈಸಿ
ಮಲುಹಣನ ಧ್ವನಿಯೆಂದು ಗಳಗಳನೆ ನಡೆತಂದು
ಮಲುಹಣ ಇದೇಕಿಲ್ಲಿ ನಿಲುವರೇ ನೀನೆಂದು
ಕೆಟ್ಟೆ ನೀನೇಕಿಲ್ಲಿ ನಿಂದಿರ್ದೆ ಹೋಗೆನುತೆ
ಮುಟ್ಟಿ ಕೈಗೊಡಹೆ ಕಡು ವಿರಹಕ್ಕೆ ಕಂಪಿಸುತೆ
ಹೋಗಲುರಿಯೊಳಗೆ ತುಪ್ಪವನೆರೆದ ತೆರನಾಗೆ
ಹೂಗಣೆಗಳಿಟ್ಟಣಿಸಿ ಮುಸುರಿ ಮನಮಂ ತಾಗೆ
ಮತ್ತೆ ವಿರಹಂ ನೆಗೆದು ಕರಣದೊಳು ನೂರ್ಮಡಿಸೆ
ಹೊತ್ತಿ ಹೊಗೆಯಿಲ್ಲದೊಳಗುರಿವರಿದು ನೂರ್ಮಡಿಸೆ
ನಿಂದಿರ್ದನಿರ್ದನಿರ್ದಂ ಮಹಾ ನಿಶೆಯೊಳಗೆ
ಸಂದಣಿಸಿ ಮಂದೈಸಿ ಕವಿವ ಹೊಸ ಹಿಮದೊಳಗೆ

ಇರೆ ಕರೆದುದತಿ ನೂತ್ನ ಶೀತವಾತನ ಮೇಲೆ
ಪರಿ ಪರಿಯ ಹೊಸ ಹಿಮದ ಘಟ್ಟಿಯಾತನ ಮೇಲೆ
ಮುಚ್ಚಿ ಮುಸುಕಲು ನಡುವೆ ಮಲುಹಣಂ ನಿಂದಿರ್ದು
ಅಚ್ಚರಿಯ ವಿರಹದಿಂ ಹಿಮದೊಳಗೆ ಸಂದಿರ್ದು
ಎಳೆಯ ಬೆಳುಮುಗಿಲೊಳಗೆ ಹೊಳೆವ ಪಾವಕನಂತೆ
ಹೊಳೆವಾಲಿಕಲ್ಲ ಮನೆಯೊಳಗಿಪ್ಪ ರವಿಯಂತೆ
ದಿಟ್ಟಿಸಲು ಕಣ್ಮುಚ್ಚಿ ಹೊಯ್ವ ಶೀತದ ನಡುವೆ
ಮುಟ್ಟಿದಡೆ ಕೈಕಡಿದು ಬೀಳ್ವ ತುಹಿನದ ನಡುವೆ
ನೆನೆದಡೆ ಮನಂ ಮುರುಂಟುವ ಶೀತಳದ ನಡುವೆ
ತನು ಕೋಡಿ ಕರಗಿ ಬರಿದಪ್ಪ ಶಿಶಿರದ ನಡುವೆ
ಕೊಲುವ ಹಿಮವಾತಂಗೆ ಶಿಶಿರೋಪಚಾರವದು
ಒಲಿವ ಬೇಗೆಯ ಬೆಂಕಿಗೊಂಡಲೆವ ಶೀತವದು
ತಾನಾಗೆ ಹಿಮದ ಗೂಡಾರದೊಳಗಿರ್ಪಂತೆ

ನಾನಾ ಹಿಮೋಪಚಾರ ಸ್ಥಳದೊಳಿರ್ಪಂತೆ
ಬೆಳಗಪ್ಪಿನಂ ಶೀತಶಾಲೆಯೊಳಗೊಪ್ಪಿರಲು
ಬೆಳಗಾಗೆ ಮಲುಹಣಿಯ ಕಣ್ಗೆ ಹೊಸತಾಗಿರಲು

ಕಂಡು ಮಲುಹಣಿಯಿದೇಂ ಹಿಮದೊಟ್ಟಿಲೇಕಿಲ್ಲಿ
ಕಂಡೆನಿರುಳಿರ್ದನಾ ಮಲುಹಣಂ ತಾನಿಲ್ಲಿ
ಅಕಟಕಟ ಮಲುಹಣಂ ಹಿಮದೊಳ್ಮುರುಂಟಿದಂ
ಅಕಟಕಟ ಪಾಪಿಗೆನಗೊಲಿದು ನೆರೆ ಮಗ್ಗಿದಂ
ಪಾಪಿಯಾದೆಂ ಪಾಪಿಯಾದೆನೆಂದೆನುತಲ್ಲಿ
ತಾಪಿಸುತ್ತಂ ಪರಿಚ್ಛೇದಿಸುತ್ತಂತಲ್ಲಿ
ಅಳವಳಿದು ಕಳೆಗುಂದಿ ಮನನೊಂದು ಮರುಗುತಂ
ಮರವೆ ಬೇರೂರಿ ತನ್ನೊಳು ತನ್ನನರಸುತಂ
ಎಚ್ಚರಿಕೆಯೊತ್ತೊತ್ತಿನೊಳು ಬೆಚ್ಚಿ ಬೆಮರುತಂ
ಅಚ್ಚಸಮಸುಖರತಿಯೊಳೊಳಗೊಳಗೆ ಕರಗುತಂ
ಸತ್ತಡೊಡನೇ ಮರಣ ತಪ್ಪದೆನುತಂ ಬಂದು
ಸುತ್ತಿ ಮುತ್ತಿರ್ದ ಸತಿಯರು ಸಂದಣಿಸಿ ನಿಂದು
ತೆಗೆ ಹಿಮವನೆಂದು ಮರವುಟ್ಟಿಂದೆ ತೆಗೆಯಿಸಲು
ಮೊಗೆದು ಕೆಲಬಲಕಿಕ್ಕಿಸುತ್ತಂ ನಿವಾರಿಸಲು
ಕಪಟವಳಿದನುರಾಗವೊಳಗೊಪ್ಪಿ ಮೆರೆವಂತೆ
ಉಪಚಾರವಳಿದು ಸತ್ಯಸ್ನೇಹವಿಪ್ಪಂತೆ
ಇದ್ದನಾ ಮಲುಹಣಂ ವಿರಹಕ್ಕೆ ತಂಪಾಗಿ
ಇದ್ದನಾ ಮಲುಹಣಂ ತಾಪಕ್ಕೆ ತಂಪಾಗಿ

ಇರೆ ಕಂಡು ಮಲುಹಣಿ ಮನಂ ಮರುಗಿ ಬೆರಗಾಗಿ
ಉರಿವರಿವ ವಿರಹದುರವಣೆಗೆ ಕಲುಮರನಾಗಿ
ಮಲುಹಣನನಕ್ಕರಿಂ ಕರುಣದಿಂದಂ ನೋಡಿ
ಮಲುಹಣಿ ಮನೋದುಃಖದಿಂದೆ ನುಡಿದಳು ಬಾಡಿ
ಎನ್ನ ಮೇಲಿಕ್ಕುವಾ ಚಿತ್ತದಾತುರತೆಯಂ
ಪನ್ನಗಾಭರಣನೊಳು ಮಾಳ್ಪುದೆನ್ನೊಲುಮೆಯಂ
ಎಂದ ಮಾತಂ ಕೇಳ್ದು ಬಳಿಕ ನೀನೆನಗಪ್ಪೆ
ಇಂದುಧರನಂ ಬೇಡು ನಿನ್ನತ್ತ ನಾಂ ಬಪ್ಪೆ
ಎನ್ನ ಹವಣೇ ಕೋಟಿ ಮಲುಹಣಿಯರಾಗರೇ
ಮುನ್ನ ಶಿವನಂ ನೆನೆದು ದುಃಖಮಂ ನೀಗರೇ

ಬೇಡಿಕೊಳ್ಳೀಶ್ವರನೊಳೆನ್ನ ಮಲುಹಣ ಹೋಗು
ನೋಡಬಾರದ ವಿರಹದನುತಾಪವಂ ನೀಗು
ಎನೆ ವಿರಹಮಂ ತೆಗೆದು ಹರನ ಮೇಲಿಕ್ಕಿದಂ
ತನಿನೇಹಮಂ ಶಿವನ ಮೆಲ್ಲಡಿಗೆ ಸಾರ್ಚಿದಂ
ನಡೆತಂದನಾ ಹಿಮವನೋಸರಿಸಿ ಮಲುಹಣಂ
ಮೃಡನಲ್ಲಿಗನುತಾಪವೆಯ್ದುತಿರೆ ಮಲುಹಣಂ
ಬರಲಲ್ಲಿ ವಿಜಯೇಶ್ವರನ ರಂಗಮಂಟಪಕೆ
ಹರನ ಶಶಿಧರನ ಶಂಕರನ ಶಿವಮಂಟಪಕೆ
ಕತ್ತುರಿಯ ಸಆರಣೆಯ ರಂಜಿಸುವ ಭೂಮಿಯಿಂ
ಮುತ್ತು ಮಾಣಿಕದಿಂ ಸವೆದರಂಗವಾಲೆಯಿಂ
ನಡುವೆ ಕೇಳಿಸುವ ತೂರ್ಯತ್ರಯದ ರಹಣಿಯಿಂ
ಪೊಡವಡುವ ಬಲವಪ್ಪ ಕುಣಿವ ಭಕ್ತಾಳಿಯಿಂ
ತನತನಗೆ ಭೋರೆಂಬ ದುಂದುಭಿರವಂಗಳಿಂ
ತನತನಗೆ ಪೂರೈಪ ಶಂಖಸ್ವರಂಗಳಿಂ
ಅಲ್ಲಲ್ಲಿ ಉಚ್ಚರಿಪ ವೇದನಾದಂಗಳಿಂ
ಅಲ್ಲಲ್ಲಿ ಕೀರ್ತಿಸುವ ಶಿವಕೀರ್ತನಂಗಳಿಂ
ತರತರಂಗೊಂಡು ಬಪ್ಪಘ್ಘಣಿಯ ಹಾದಿಯಿಂ
ನೆರೆನೆರೆದು ತರುತಿಪ್ಪ ಪರಿಮಳದ ಪಂತಿಯಿಂ
ಪಂಚಧಾರಾ ಶರ್ಕರಾಭಾಜನಂಗಳಿಂ
ಪಂಚಾಮೃತದ ಹಾಲು ತುಪ್ಪದ ಕೊಡಂಗಳಿಂ
ಸಂದಣಿಪ ಸಂಭ್ರಮವನೆಂತಕ್ಕೆ ಓಸರಿಸಿ
ಇಂದುಧರನಲ್ಲಿಗಾತುರಚಿತ್ತನುರವಣಿಸಿ
ಸಂದಣಿಸಿ ಕುದಿವ ಕರುಣಂಗಳಿಂ ಕಡಗಿದಂ
ಬಂದು ಕುಳ್ಳಿರ್ದು ಶಿವನಂ ಹೊಗಳತೊಡಗಿದಂ

ದೇವ ಶಂಕರಭಕ್ತ ಜನಮನೋರಥರೂಪ
ದೇವ ಶಶಿಧರ ಶರಣಹೃದಯಸದಮಳದೀಪ
ಗೌರೀಕಚಪ್ರಚಯ ಪುಷ್ಪಗಂಧಕ್ಕೆಳಸಿ
ಭೋರೆನುತ್ತೆರಗಿ ಮಧುಕರವ್ರಜವನನುಕರಿಸಿ
ಮೆರೆವ ಗರಳದ ಗರುವ ಕರುಣಿಪುದು ಕರುಣಿಪುದು
ಹೆರೆಯ ಮಧುರಾಂಶುಮಂಡಿತಮಕುಟ ಕರುಣಿಪುದು
ಸುರ ಶಿರೋಮಾಲೆಯ ಮಹಾಮಹಿಮ ಕರುಣಿಪುದು
ಸರಸಿಜಾಸನ ಶಿರಃ ಕಂಜಕರ ಕರುಣಿಪುದು

ಗಜ ಚರ್ಮಧಾರಿ ಪುಲಿದೊವಲರಸ ಕರುಣಿಪುದು
ಭುಜಗಕಂಕಣ ತ್ರಿಜಗಪಾಲಿತನೆ ಕರುಣಿಪುದು
ಗಗನಚರಪುರದಹನ ಘನದಾವ ಕರುಣಿಪುರು
ಸಗುಣ ನಿರ್ಗುಣತತ್ವನಿತ್ಯನಿಧಿ ಕರುಣಿಪುದು
ಸತ್ಯನೆ ಸದಾಶಿವನೆ ಶಾಶ್ವತನೆ ಕರುಣಿಪುದು
ನಿತ್ಯನೆ ನಿರಾಶ್ರಯನೆ ನಿರ್ಭಯನೆ ಕರುಣಿಪುದು
ನಿರ್ಮಲನೆ ನಿರವಯನೆ ನಿರ್ದ್ವಂದ್ವ ಕರುಣಿಪುದು
ಚರ್ಮಧರ ನಿಃಕಳನೆ ನಿರಪೇಕ್ಷ ಕರುಣಿಪುದು
ಕಾರುಣ್ಯವಾರಾಸಿ ಕರುಣಿಪುದು ಕರುಣಿಪುದು
ಮಾರಮದಮಾತಂಗ ವಿಧ್ವಂಸಿ ಕರುಣಿಪುದು
ಕರುಣಿಪುದು ಕರುಣಾಂಬುನಿಧಿ ಶಂಭು ಕರುಣಿಪುದು
ಗಿರಿಜಾಮನೋಹರನೆ ಕರುಣಿಪುದು ಕರುಣಿಪುದು

ಎಂದು ಕುದಿಕುದಿವ ಕರಣಂಗಳೊಳು ಬಣ್ಣಿಸಲು
ಬಂದು ವಿರಹಸ್ತೋತ್ರವೀಶನೊಳು ಸೇರಿಸಲು
ಶಂಕರಂ ಕೇಳ್ದು ಸೈರಿಸಲಾರದೆಯ್ತಂದು
ಭೋಂಕನೆ ಮಹಾಲಿಂಗದಂಗದಿಂ ನಡೆತಂದು
ಸುರಿವ ಹೂಮಳೆಯೊಳಗೆ ಹೊಯ್ವ ದುಂದುಭಿಯೊಳಗೆ
ನೆರೆದ ಗಣಕುಲದೊಳಗೆ ಕರೆವ ಕಹಳೆಗಳೊಳಗೆ
ಕಿರುಜೆಡೆ ಮಹಾಮಕುಟ ಇಂದುಕಳೆ ರಂಜಿಸಲು
ಕರೆಕೊರಲು ಪಂಚಮುಖ ದಶಭುಜಂ ಪಸರಿಸಲು
ಮೆಚ್ಚಿದೆಂ ಬೇಡಿಕೊಳ್ಳೆಲವೊ ಮಲುಹಣ ಎನಲು
ಚೆಚ್ಚರಂ ಮಲುಹಣಿಯನೀವುದೆನಗೆಂದೆನಲು
ಕೊಟ್ಟೆನೆಲೆ ಮಗನೆ ಕೊಟ್ಟೆಂ ಮಗನೆ ಕೊಟ್ಟೆಂ ಮತ್ತೆ ಬೇಡೆನಲು
ನಿಷ್ಠೆ ಪಿರಿದಾಯ್ತು ಮಲುಹಣ ಬೇಡು ಬೇಡೆನಲು
ದೇವ ಮಲುಹಣಿಯೊಡನೆ ನೂರುವರ್ಷಂ ಬರ್ದು
ದೇವಲೋಕಕ್ಕೆ ನಿಮ್ಮಡಿಗಳಲ್ಲಿ ಸಾರ್ದು
ತನುಸಹಿತಲಿರ್ವರುಂ ಬಪ್ಪಂತೆ ಕರುಣಿಪುದು
ಮನವಾರೆ ಸುಖದೊಳಿಪ್ಪಂದಮಂ ಕರುಣಿಪುದು
ಎಂದಡಭವಂ ಕೊಟ್ಟೆನೆಂದು ಕಾರುಣ್ಯದಿಂ
ಮುಂದಿರ್ದು ಲಿಂಗದೊಳು ಪೊಕ್ಕನಾನಂದದಿಂ
ಪೊಗಲತ್ತಲಿತ್ತಲೀಶ್ವರನ ಪ್ರಸಾದದಿಂ

ಬಗೆವೆಚ್ಚಿ ಮೈವೆಚ್ಚಿ ಬರುತಿರ್ದನೊಪ್ಪದಿಂ
ಮಲುಹಣಿಯುಮವರ ತಾಯುಂ ಕೂಡೆ ಮೈಯಿಕ್ಕೆ
ಮಲುಹಣಂ ಮುಂದೆಬಂದಾನಂದ ರಸವುಕ್ಕಿ
ರಂಗಮಂಟಪದೊಳಗೆ ಹರುಷಮಂ ಮುಂದಿಟ್ಟು
ಲಿಂಗದ ಸಮಕ್ಷದೊಳು ಮಗಳನೊಪ್ಪಿಸಿಕೊಟ್ಟು
ಮಗಳುಮಂ ಮಲುಹಣನನೂರೊಳಗೆ ಮರೆಸುತಂ
ಸೊಗಯಿಸುವ ಪ್ರವರಸೇನಂ ಬಂದು ಮೆರೆಸುತಂ
ಪೊಗಳ್ವ ಯಾಚಕಜನಕೆ ಹೊನ್ನಮಳೆಗರೆವುತಂ
ಮಿಗೆ ವಿರಹಿಜನಕೆಯ್ದೆ ಅಖಿಳಸುಖವೀವುತಂ
ಇರ್ವರಿಗೆ ಒಂದೇ ಸುಖಾಸನಚ್ಛತ್ರದಿಂ
ಸರ್ವಮಂಗಳ ಶಿವಾಚಾರಂಗಳೊಪ್ಪದಿಂ
ನೋಟಕಜನಂಗಳಂ ಕಂಗಳಿಂದೊಲಿಸುತಂ
ಪಾತಕರ ಪುಣ್ಯಕರ ನೆರೆಮನಂಗೊಳಿಸುತಂ
ಸಖಿಜನಸುಧಾಂಬುನಿಧಿಚಂದ್ರಮಂ ಮಲುಹಣಂ
ಭಕುತಜನಮುಖಕಮಳಮಾರ್ತಂಡ ಮಲುಹಣಂ
ಬರೆ ನಿಜನಿವಾಸಕ್ಕೆ ಬಂದರಾನಂದದಿಂ
ಪರಮನಿತ್ತಾಜ್ಞೆ ಕೈಗೂಡಿ ಸಮಚಿತ್ತದಿಂ
ಕಾಮಮುಂ ಕ್ರೋಧಮುಂ ಕಾಮಾರಿಗರ್ಪಿತಂ
ನೇಮಮುಂ ಪ್ರೇಮಮುಂ ಶಂಕರಂಗರ್ಪಿತಂ
ನೋಟಮುಂ ಬೇಟಮುಂ ಪುರಹರಂಗರ್ಪಿತಂ
ಕೂಟಮುಂ ತೃಪ್ತಿಯುಂ ತ್ರಿಣಯನಂಗರ್ಪಿತಂ
ಕಂಡುದುಂ ಕೊಡುವುದುಂ ಈಶ್ವರಂಗರ್ಪಿತಂ
ಕೊಂಡುದುಂ ಸವಿದುದುಂ ಶಂಕರಂಗರ್ಪಿತಂ

ಆಗಿ ನೂರುಂ ವರುಷಮಭವನಾಜ್ಞೆಯೊಳಿರ್ದು
ನಾಗಭೂಷಣನಿತ್ತ ಭೋಗನಿಕರದೊಳಿರ್ದು
ಭೂಲೋಕದಿರವು ಸಾಕೆಂದಿರ್ವರುಂ ಬಂದು
ಬಾಲೇಂದುಮೌಳಿಯಲ್ಲಿಗೆ ಭರದೊಳೆಯ್ತಂದು
ದೇವ ಮುನ್ನಿತ್ತ ವರವಂ ಕರುಣಿಪುದು ತಂದೆ
ದೇವ ಇಲ್ಲಿರವೆಮಗೆ ಸಾಲ್ವುದಿನ್ನೆಲೆ ತಂದೆ
ಕಾರುಣ್ಯವಾರ್ಧಿ ವಿಜಯೇಶ್ವರನೆ ಕರುಣಿಪುದು
ಮಾರಾರಿ ದುರಿತಾರಿ ಕಾಲಾರಿ ಕರುಣಿಪುದು
ಭಕ್ತಿಸಂತುಷ್ಟ ಸಂಸ್ಪಷ್ಟನಿಧಿ ಕರುಣಿಪುದು

ಭಕ್ತಪ್ರಶಸ್ತಸಂಯುಕ್ತಧರ ಕರುಣಿಪುದು
ಮುಕ್ತಿಪ್ರದಾಯಕನೆ ನೀನೊಲಿದು ಕರುಣಿಪುದು
ಕರ್ತು ಚಿನ್ಮಯಮೂರ್ತಿ ನಿತ್ಯನಿಧಿ ಕರುಣಿಪುದು
ಗಗನಚರಪುರ ದಹನ ವನವಹ್ನಿ ಕರುಣಿಪುದು
ಸಗುಣ ನಿರ್ಗುಣತತ್ವ ನಿತ್ಯನಿಧಿ ಕರುಣಿಪುದು
ಸತ್ಯನೆ ಸದಾಶಿವನೆ ಶಾಶ್ವತನೆ ಕರುಣಿಪುದು
ನಿತ್ಯನೆ ನಿರಾಶ್ರಯನೆ ನಿರ್ಭಯನೆ ಕರುಣಿಪುದು
ನಿರ್ಮಳನೆ ನಿರುಪಮನೆ ನಿರವರನೆ ಕರುಣಿಪುದು
ನಿರ್ಮಳನೆ ನಿಷ್ಕಳನೆ ಕರುಣಿಪುದು ಕರುಣಿಪುದು
ಗಜಚರ್ಮದಭವ ಪುಲಿದೊವಲರಸ ಕರುಣಿಪುದು
ಭುಜಗಾಭರಣ ನಿರಾವರಣನಿಧಿ ಕರುಣಿಪುದು
ಉಗ್ರ ದೇವೋಗ್ರ ಗರಳಗ್ರೀವ ಕರುಣಿಪುದು
ನಿಗ್ರಹಾನುಗ್ರಹ ಸಮಗ್ರ ಬಲ ಕರುಣಿಪುದು
ಅಪ್ರತಿಮನುಗ್ರನುದ್ದಂಡಧರ ಕರುಣಿಪುದು
ಅಪ್ರತಿಮನುಗ್ರನುದ್ದಂಡಧರ ಕರುಣಿಪುದು
ಸುಪ್ರಸನ್ನಾತ್ಮ ಗಿರಿಜಾರಮಣ ಕರುಣಿಪುದು
ಪಿಡಿದಿರ್ದ ಖಟ್ವಾಂಗದಭಯಕರ ಕರುಣಿಪುದು
ಮುಡಿದ ಗಂಗೆಯ ಜೆಡೆಯ ಗರುವ ಮೃಡ ಕರುಣಿಪುದು

ಎಂದು ಪೊಗಳಲ್ಕೆ ಪುಷ್ಪಕವಾಗಳೈಯ್ತಂದು
ಸಂದಣಿಪ ರುದ್ರಕನ್ನಿಕೆಯರಂದೆಯ್ತಂದು
ಬಂದ ಪುಷ್ಪಕದಿ ಮಲುಹಣ ಮಲುಹಣಿಯರನಿರಿಸಿ
ಚಂದದಿಂದಿರ್ವರಂ ನೋಡುತಂ ಸತ್ಕರಿಸಿ
ಮೇಲೆ ನೆಗೆದುದು ವಿಮಾನಂ ಗಗನವೆಡೆಗೊಳಲು
ಭೂಲೋಕದೊಳು ಪುಷ್ಪವೃಷ್ಟಿ ಸುಖಮಂ ಕೊಡಲು
ನೆರೆದ ಕಾಶ್ಮೀರದೇಶಂ ನೋಡಿ ಬೆರಗಾಗೆ
ಹರಭಕ್ತರೆಲ್ಲರ್ಗೆ ಸಂತಸಂ ಪಿರಿದಾಗೆ
ಮಲುಹಣನ ಮಲುಹಣಿಯ ಜಯಜಯಧ್ವನಿಯೊಳಗೆ
ಲಲನೆಯರ ಅನಿಮಿಷರ ಸೀಗುರಿಯ ನೆಳಲೊಳಗೆ
ಬಂದು ಕೈಲಾಸಮಂ ಪೊಕ್ಕು ಸಂತೋಷದಿಂ
ಇಂದುಧರನಂ ಕಂಡು ಮೈಯಿಕ್ಕಿ ರಾಗದಿಂ
ಬಂದಿರ್ದ ಸುಖಮಿಥುನಮಂ ಶಿವಂ ನೆರೆ ನೋಡಿ

ಇಂದುಮುಖಿಪಾರ್ವತಿಗೆ ತೋರಿ ಹರುಷಂ ಗೂಡಿ
ಕಡುನೇಹದಿಂದೆ ಮಲುಹಣಿಗೊಲಿದರಿಂತುಂಟೆ
ಬಿಡದುರಿವ ವಿರಹಕ್ಕೆ ಮೈದಂದರಿಂತುಂಟೆ
ಹಿಮದೊಳಗೆ ನಿಂದಿರ್ದು ಸೈರಿಸಿದರಿಂತುಂಟೆ
ಹಿಮಗೃಹದೊಳಿಪ್ಪಂತೆ ನಿಂದಿರ್ದರಿಂತುಂಟೆ
ಎನ್ನಲ್ಲಿ ಬೇಡೆನಲು ಬೇಡಿ ಬಂದವರುಂಟೆ
ತನ್ನ ವಿರಹವನೆನ್ನ ಮೇಲಿಟ್ಟರಿಂತುಂಟೆ

ಎಂದು ಕೊಂಡಾಡುತಂ ಗಣಕುಲಕೆ ತೋರುತಂ
ಮುಂದುವರಿವಾನಂದ ಜಲದೊಳೋಲಾಡುತಂ
ಮಲುಹಣಂಗಲ್ಲಿ ನಲವಿಂದೆ ಗಣಪದವಿತ್ತು
ಮಲುಹಣಿಗೆ ರುದ್ರಕನ್ನಿಕೆಯರಿರ್ಪಿರವಿತ್ತು
ಇಂತು ನಿಜಭಕ್ತರಿಚ್ಛೆಗೆ ಸಲುವನೊಪ್ಪಿದಂ
ಸಂತತಂ ಶರಣರೆಂದುದನೀವನೊಪ್ಪಿದಂ
ಸಕಳಗುಣ ನಿಖಿಳ ಗುರು ಅಕಳಂಕನೊಪ್ಪಿದಂ
ಸಕಳ ಸುರಮಕುಟಮಣಿ ನಿಕರಪದನೊಪ್ಪಿದಂ
ಹಸಿತಮುಖ ಭಸಿತವಿಳಸಿತಗಾತ್ರನೊಪ್ಪಿದಂ
ಅಸಿತಗಳ ನಿಶಿತಶರ ಮುಷಿತಪುರನೊಪ್ಪಿದಂ
ನರರ ಕಿನ್ನರರ ಖೇಚರರ ಪತಿಯೊಪ್ಪಿದಂ
ಸುರರ ಮುನಿವರರ ಭಯಕರರ ಪತಿಯೊಪ್ಪಿದಂ
ಗಿರಿಜಾ ಕುಚಾಂಕ ಕುಂಕುಮವಕ್ಷ ನೊಪ್ಪಿದಂ
ಹರಿಯಜನರು ಸುರಮುನಿಗೆ ಗುರುಮೂರ್ತಿಯೊಪ್ಪಿದಂ
ಸುರಚಿರ ಸುಧಾಕರ ಕಳಾಜೂಟನೊಪ್ಪಿದಂ
ಕರುಣಾಬ್ಧಿ ಹಂಪೆಯ ವಿರೂಪಾಕ್ಷನೊಪ್ಪಿದಂ ೨೬೨-೪೪೦

ಕರುಣಂ ಮಿಗೆ ಮಲುಹಣನಂ
ವಿರಹಾನಲದಗ್ಧಚಿತ್ತನಂ ಮಲುಹಣಿಯೊಳ್ ।
ನೆರಪಿ ನೆರೆ ಮೆರೆದ ಪಂಪಾ
ಪುರಪತಿ ಕರುಣಿಸುಗೆ ಭಕ್ತಿ ಸುಖಸಂಪದಮಂ ॥

❖❖

# ೯. ಸಾಮವೇದಿಯ ರಗಳೆ

ಧರಣೀತಳದೊಳ್ಮೆರೆದಂ
ಸರಾಗದಿಂ ಸಾಮವೇದಿಗಳನಹಿಕಟಕಂ ।
ಕರುಣಾಕರನಪ್ರತಿಮಂ
ಪುರಮಥನಂ ದೇವ ಹಂಪೆಯ ವಿರೂಪಾಕ್ಷಂ ॥

ಉತ್ತರದಿಶಾಭಾಗದೊಳಗೆ ಭಾಸುರವೆನಿಸಿ
ಛತ್ತೀಸ ಪುರವಿರ್ಪವೀ ಧರೆಗೆ ತೊಡವೆನಿಸಿ
ಆ ಪುರಂಗಳೊಳೊಂದು ಪುರದೊಳಿರ್ಪಂ ನೋಡ
ಪಾಪರಹಿತಂ ಸಾಮವೇದಿಯೆನಿಪಂ ನೋಡ
ಸಾಮವೇದಮೆ ಒಂದು ರೂಪಾಗಿ ನೆಲಸಿರ್ಪ
ಭೂಮಿಯೊಳಗುಳ್ಳ ಶಾಸ್ತ್ರಂ ಜಿಹ್ವೆಯೊಳಗಿರ್ಪ
ಸಕಲ ಕಾವ್ಯಂ ನಾಟಕಂ ತನ್ನ ಮುಖವಪ್ಪ
ಸಕಲ ವೇದಾಂತ ಸಿದ್ಧಾಂತದಿಂ ದೃಢವಪ್ಪ
ತರ್ಕಿತಂತ್ರಂ ವ್ಯಾಕರಣಕಳಾವಿದನಪ್ಪ
ಮಾರ್ಕೊಳಲ್ಬಾರದ ಮಹಾವಾಗ್ಮಿಯೆನಿಸಿಪ್ಪ
ಸಾಮರ್ಥ್ಯಸಂಪದಂ ತನ್ನ ಮೈಯಾಗಿರ್ಪ
ಈ ಮಹಿಯೊಳಾವನುಂ ಸಮವಲ್ಲದಂತಿರ್ಪ
ಅರಸುಗಳು ಮೈಯಿಕ್ಕಿ ಪಾವುಡವನಟ್ಟುವರು
ಧರಣೀತಳದ ವಿಪ್ರರೆಲ್ಲ ನಲಿದೆರಗುವರು
ಎಂತಪ್ಪ ಪಿರಿಯರುಂ ಬಂದು ಮೈಯಿಕ್ಕುವರು
ಎಂತಪ್ಪ ವಿದ್ವಾಂಸರುಂ ತನಗೆ ತೆಕ್ಕುವರು
ವೇದಮಯವಾಚರಣೆ ನುಡಿಯೆಲ್ಲ ಶಾಸ್ತ್ರಮಯ
ವಾದುದೇನೆಂಬೆನಾತನ ಮನಂ ಸುಮತಿಮಯ
ಎರಗನಾರ್ಗಂ ನೋಡೆ ತನಗೆರಗುವುದು ಜಗಂ

ನೆರೆ ಹೊಗಳ ಹೊಗಳುವುದು ತನ್ನ ಧರೆ ಸೋಜಿಗಂ
ಶಿಷ್ಯರಾ ಮೂರುಸಾವಿರದ ಮೇಲ್ಕೈನೂರು
ಪೋಷ್ಯವರ್ಗಂ ಧರಾಜನವೆಲ್ಲ ಸಲೆ ಮಾರು
ವಾಮಹಸ್ತದೊಳಲ್ಲದಿಕ್ಕನಕ್ಷತೆಗಳಂ
ವಾಮೇತರದೊಳಗ್ನಿ ನೆಲಸಿರ್ಪುದಗ್ಗಳಂ

ಇಂತಪ್ಪ ಪುಣ್ಯಕೀರ್ತಿಯಿನೊಪ್ಪುತಂ ಸಾರ್ದು
ಸಂತತಂ ಛತ್ತೀಸಪುರದೊಳಗೆ ಸುಖಮಿರ್ದು
ಒಂದೆ ದೆವಸಂ ಸಾಮವೇದಿಗಳು ಶಿಷ್ಯರುಂ
ಮುಂದೆ ಜಾವದೊಳೆದ್ದು ಕೂಡಿಕೊಂಡೆಲ್ಲರುಂ
ಅರಣವ ನೋಡಲಾರಣ್ಯಕ್ಕೆ ನಡೆತಂದು
ಭಾರಣೆಯ ವಿದ್ವಾಂಸರೊಡಗೂಡಿ ನಡೆತಂದು
ಅಶ್ವತ್ಥಮೂಲವೇದಿಕೆಯಲ್ಲಿ ಕುಳ್ಳಿರ್ದು
ವಿಶ್ವಜನವಾರುವರಿಯದ ಕಾನನದೊಳಿರ್ದು
ರುಚಿಯರ್ಧರುಚಿ ಯಜ್ಞವಜ್ಞಗಳ ಪೇಳುತಂ
ರುಚಿಯಿಸಲ್ಪಾದವರೆಪಾದಗಳ ಪೇಳುತಂ
ಪದಪಾಳಿ ವರ್ಗಕ್ರಮಂಗಳಂ ತಿಳಿಪುತಂ
ಪದುಳದಿಂದರ್ತ್ಥಮಿದು ಹನಸಿದೆಂದರಿಪುತಂ
ವೆರಳಿಂದುದಾತ್ತಾನುದಾತ್ತಂಗಳಂ ತೋರಿ
ಸ್ವರಿತಪ್ರಚಯಮುಖ ಸ್ವರಭೇದಮಂ ತೋರಿ
ಛಂದ ರುಷಿ ದೇವತೆಗಳಂದಂಗಳಂ ಪೇಳ್ದು
ನಿಂದ ಮಧ್ಯಾಹ್ನಪರಿಯಂತರೋದಂ ಪೇಳ್ದು
ನಡೆತಂದರಾ ಸಾಮವೇದಿಗಳು ನಲವಿಂದೆ
ನಡೆತಂದರಾಕಾಶಗಮನದೊಳಗೊಲವಿಂದೆ
ಕೆಳಗೆ ಶಿಷ್ಯಪ್ರತತಿ ಕೈಮುಗಿದು ಬರುತಮಿರೆ
ಇಳೆಗೆ ಪೊಸತೆನೆ ಮೇಲೆ ಧೋವತಿಗಳಾರುತಿರೆ
ತಳಿರ್ಗಾಸೆ ಬೆಳಬೆಳಗೆ ಸುಲಿಪಲ್ಲು ತೊಳತೊಳಗೆ
ನಳನಳಿಪ ಮೈವೆಳಗು ವನವೆಲ್ಲಮಂ ಬೆಳಗೆ
ನಡೆತಂದರಿಟ್ಟ ಮಟ್ಟಿಗಳಿಂ ಪವಿತ್ರದಿಂ
ನಡೆತಂದರಿಕ್ಕಿರ್ದ ಯಜ್ಞೋಪವೀತದಿಂ
ಬರುತಿರ್ದರಾ ಸಾಮವೇದಿಗಳು ಗಗನದೊಳು
ಬರುತಿರ್ದರಾ ಶಿಷ್ಯರೆಲ್ಲ ಭೂವಳಯದೊಳು

ಇತ್ತಲಾ ಛತ್ತೀಸಪುರದಿಂದೆ ನಡೆತಂದು
ಉತ್ತಮ ಶಿವಾರ್ಚಕರು ಶ್ವಪಚದೇವರು ಬಂದು
ಭವಿಗಳಾರುಂ ಕಾಣಬಾರದಂತಡವಿಯೊಳು
ಶಿವನನರ್ಚಿಸಲೆಂದು ಸರ್ವಸುಖವೃತ್ತಿಯೊಳು
ಕಾಡಮೊಲ್ಲೆಯ ಮಲ್ಲಿಗೆಯ ಹೊದರ ತಳದೊಳಗೆ
ಕೂಡೆ ತಂಪಿನ ಸೋಮಕಾಂತಭೂಮಿಕೆಯೊಳಗೆ
ಕದಳೀದಳಂಗಳಿಂ ಕಮಲಪತ್ರಂಗಳಿಂ
ಮುದದಿಂದಶೋಕೆ ಮಾವುಗಳ ಕೆಂದಳಿರ್ಗಳಿಂ
ನಯವಪ್ಪ ಮೃದುವಪ್ಪ ಸಿಂಹಾಸನಮನಿಕ್ಕಿ
ಭಯಭಕ್ತಿಯಿಂ ಹಿಗ್ಗುತಂ ಸ್ನೇಹ ರಸವುಕ್ಕಿ
ನದಿಯಗ್ಘವಣಿಗಳಂ ಕುಣಿಕುಣಿದು ತಂದಿಳುಪಿ
ಬರ್ದುಕಿದೆಂ ಬರ್ದುಕಿದೆಂ ಬರ್ದುಕಿದೆನೆನುತ್ತಿಳುಪಿ
ಸಂಪಗೆಯ ಮಲ್ಲಿಗೆಯ ಮೊಲ್ಲೆಯಚ್ಚರಳ್ಗಳಂ
ಕಂಪಿಸುವ ಸೊಂಪೆಸೆವ ಹೊಚ್ಚ ಹೊಸಹೂಗಳಂ
ಕೊಂಡು ಬಂದೆನ್ನರಸ ಎನ್ನಯ್ಯ ಬಾಯೆಂದು
ಖಂಡಶಶಿಮೌಳಿ ಫಣಿಕುಂಡಲನೆ ಬಾಯೆಂದು
ಭಕ್ತಜನಬಾಂಧವನೆ ಬಾರಯ್ಯ ಬಾಯೆಂದು
ಮುಕ್ತಿ ಪ್ರದಾಯಕನೆ ಬಾರಯ್ಯ ಬಾಯೆಂದು
ಸೆಜ್ಜೆಯೊಳಗಿರ್ದ ಶಿವಲಿಂಗಮಂ ಬೋಳಯಿಸಿ
ಸಜ್ಜನಸ್ನೇಹಮಂ ಮನದೊಳಗೆ ಮೇಳಯಿಸಿ
ತಳಿರ ಸಿಂಹಾಸನದ ಮೇಲೆ ಬಿಜಯಂಗೆಯ್ಸಿ
ದಳದಳನೆ ಕವಿವಶ್ರುಧಾರೆಯಂ ಸಂತೈಸಿ
ಇರವಂತಿಯೊಂದರಲನುತ್ತಮಾಂಗದೊಳಿರಿಸಿ
ಹರುಷದಿಂ ನೆರೆ ನೋಡಿ ನಡೆ ನೋಡುತಾಧರಿಸಿ
ಮುಂಡಾಡಿ ಮುದ್ದಾಡಿ ಕಣ್ಗಳೊಳಗೊತ್ತುತಂ
ಕೊಂಡಾಡಿ ಕೊನೆದಾಡಿ ಉರದೊಳಚ್ಚೊತ್ತುತಂ
ಮತ್ತೆ ಬಿಜಯಂಗೆಯ್ಸಿ ನೋಡುತಂ ತೂಗಾಡಿ
ಬಿತ್ತರಿಪ ಲೀಲೆಯಿಂ ನೇಹದೊಳಗೋಲಾಡಿ
ಕೈಚಪ್ಪಳಿಕ್ಕುತಂ ಬಿಕ್ಕುತಂ ಬೀಗುತಂ
ಚೈಚಿತ್ರರಸದಿಂದೆ ತೇಗಿ ತೂಗಾಡುತಂ
ಕಂಪಿಸುತೆ ಕಳಲುತೆಂತಕ್ಕೆ ಮಜ್ಜನಕೆರೆದು
ಜೊಂಪಿಸುತೆ ಜೋಲುತ್ತಲೊಮ್ಮೊಮ್ಮೆ ಮೈಮರೆದು

ಕಳವಳಿಸಿ ಶಿವಲಿಂಗ ಲಿಂಗ ಕರುಣಿಪುದೆನುತೆ
ಅಳವಳಿದು ತಿಳಿವುಳಿದು ಲಿಂಗ ಕರುಣಿಪುದೆನುತೆ
ಮೆಲ್ಲನೆಚ್ಚತ್ತು ಪುಳಕಿಸುತೆ ಪೂಜಿಸಲೆಂದು
ತಲ್ಲಣಿಪ ಕೈಗಳಿಂ ಸಂತವಿಡುತಂ ಬಂದು
ಮೊಲ್ಲೆಯಚ್ಚರಳ್ಗಳಿಂ ಸಿರಿಮುಡಿಗೆ ಸಾರ್ಚುತಂ
ಸಲ್ಲಲಿತ ಸಂಪಗೆಯರಳ್ಗಳಂ ತೀವುತಂ
ಎಸಳೊಂದು ಮೆರೆಯಾಗೆ ಕಣ್ಗೆಟ್ಟು ಕಳಲುತಂ
ಎಸಳಂ ನಿವಾರಿಸಲು ಕಣ್ಬಂದು ನಲಿವುತಂ
ಕೈಗೆ ಬಂದಂತೆ ಶಿವಪೂಜೆಯನಲಕಂರಿಸಿ
ಮೈಗೆ ಬಂದಂತೆ ಪೊರಳುತ್ತಂ ನಮಸ್ಕರಿಸಿ
ನಾಲಗೆಗೆ ಬಂದಂತೆ ಪಾಡುತಂ ಪೊಗಳುತಂ
ಲೀಲೆ ಕಾಲಾದಂತೆ ತಿರುಗಿಬಂದಾಡುತಂ
ದುಂಡಿಸಿ ಪುಟಂನೆಗೆದು ಪೆರ್ಚಿ ಪೊರೆಯೇರುತಂ
ತಂಡ ತಂಡದ ಪುಳಕದಿಂಡೆಗೊಳಲಾಡುತಂ

ಇಂತು ಮಧ್ಯಾಹ್ನಪರಿಯಂತವರ್ಚಿಸಿ ಬಳಿಕ
ಸಂತಸದ ಮಳೆಗರೆದು ಕಣ್ತೀವಿದಂ ಬಳಿಕ
ಪರಮನಾರೋಗಣೆಗೆ ಹರುಷದಿಂದಂ ನೋಡಿ
ಸುರುಚಿರಸ್ಥಾನದೊಳು ಮೂರುಕಲ್ಲಂ ಹೂಡಿ
ಮೇಲೊಂದು ಪಾತ್ರೆಯಂ ಪದುಳದಿಂ ತಂದಿರಿಸಿ
ಲೀಲೆಯಿಂ ತಳದೊಳಗ್ನಿಜ್ವಾಲೆಯಂ ಬರಿಸಿ
ಕಪಟರಹಿತಂ ಜಾತಿಧರ್ಮದೋಗರವಿರಲು
ಶ್ವಪಚ ನಾಮಕ್ಕೆ ತಾನನುಕೂಲವಾಗಿರಲು
ಆ ಕಪಾಲದ ನಡುವೆ ಆವೋಗರವನಿಕ್ಕಿ
ಲೋಕಮಂ ಸೋಂಕದ ಸಮರ್ಥ ಮನದೊಳಗುಕ್ಕಿ
ಭಸಿತದಿಂದೆಲ್ಲವಂ ನೆರೆ ಶುದ್ಧಮಾಡುತಂ
ಶಶಿಧರಧ್ಯಾನಮಂ ಮನದೊಲಗೆ ಕೂಡುತಂ
ಪಾಕಮಂ ಮಾಡುತಂ ಶ್ವಪಚಯ್ಯನಿರುತಮಿರೆ
ಆಕಸ್ಮಿಕಂ ಸಾಮವೇದಿಗಳ್ ಬರುತಮಿರೆ
ರಭಸವೆಲ್ಲಿಯದೆನುತ್ತಂ ತಿರುಗಿ ನೋಡುತಂ
ಅಭವಭಕ್ತಂ ಸಾಮವೇದಿಗಳ ಕಾಣುತಂ
ಹರ ಹರ ನಮಃಶಿವಾಯೆಂದೆನುತೆ ಕಂಡಲ್ಲಿ
ಕೆರಹಿಂದೆ ಮುಚ್ಚಿದಂ ಭವಿ ಕಾಣದಂತಲ್ಲಿ

ಮುಚ್ಚುವುದನಲ್ಲಿ ಕಂಡರ್ ಸಾಮವೇದಿಗಳು
ಅಚ್ಚರಿಯಿದೆಂದು ಬೆರಗಾದರಾ ವಾದಿಗಳು
ಇದು ಚಿತ್ರವಿದು ಚಿತ್ರವಿನ್ನೊಂದು ಪೊಸತುಂಟೆ
ಇದರಿಂದೆ ಮತ್ತೊಂದು ಕೌತುಕಂ ಬೇರುಂಟೆ
ನೆಲದೊಳಗೆ ಕಂಡರಿಯೆನೆಂತು ಮಾಡುವೆನಿದಂ
ನೆಲದೊಳಗೆ ಕೇಳ್ದರಿಯೆನೊಲಿದು ನೋಡುವೆನಿದಂ
ಬೆಸಗೊಂಬೆನೀ ಭಕ್ತನಂ ಬಳಿಕ ನೋಡುವೆಂ
ವಶವಲ್ಲದಿರಲದಕೆ ತಕ್ಕುದಂ ಮಾಡುವೆಂ
ಹರಭಕ್ತರೆಂತಿರ್ಪರೆಂದರಿಯಬಾರದಿದು
ಉರವಣಿಸಬಾರದೆನುತಂ ಚಿತ್ತದೊಳ್ತಿಳಿದು
ಮುಂದೆ ಶಿಷ್ಯರನೆಲ್ಲರಂ ಪುರಕೆ ಕಳುಪುತಂ
ಹಿಂದೆ ತಾನೊಬ್ಬನೇ ಗಗನದಿಂದಿಳಿವುತಂ
ಬಂದೆಲೆಲೆ ಭಕ್ತಯ್ಯ ಏಕೆ ಮುಚ್ಚಿದೆಯಿದಂ
ಬಂದವಂ ವಿಪ್ರಕುಲವೆಂದರಿಯದಂತಿದಂ
ಮಾಳ್ಪುದಕೆ ಕಾರಣವ ಪೇಳುವುದು ನೀವೆನಲು
ನೋಳ್ಪಡುಬ್ಬಟೆಯ ಕಟ್ಟಾಚಾರವೇನೆನಲು
ಮರುಮಾತುಗುಡದೆ ತೃಣದನಿತುಮಂ ಲೆಕ್ಕಿಸದೆ
ತೆರಹುಗುಡದಿರ್ದರೆಂದೇನುಮಂ ಲೆಕ್ಕಿಸದೆ
ನುಡಿಯದಿರಲಲ್ಲಿ ಕಿರಿದುಂ ಪೊತ್ತು ಬೆರಗಾಗಿ
ಕಡು ಚಿಂತೆಯಿಂ ಸಾಮವೇದಿಗಳು ಸಿಗ್ಗಾಗಿ
ಹರಭಕ್ತರಿರ್ಪಿರವು ತನ್ನ ಚಿತ್ತಂಗೊಂಡು
ಪುರದತ್ತ ಹೋಗಲುದ್ಯುತನಾಗಿ ನಡೆಗೊಂಡು
ಆ ದಿನಂ ನುಡಿಯದಿರೆ ಮರುದಿನಂ ನುಡಿಯದಿರೆ
ಹೋದವೆರಡುಂ ದಿನಂ ಪಾಪವರೆಯಾಗುತಿರೆ
ಮೂರನೆಯ ದಿನದಿರುಳು ಶಂಕರಂ ನಡೆತಂದು
ತೋರಿದಂ ಸ್ವಪ್ನದೊಳು ವಿಪ್ರನಲ್ಲಿಗೆ ಬಂದು

ಎಲೆ ಸಾಮವೇದಿ ನೀನೇಕೆ ಮರುಳಾದಪ್ಪೆ
ಕುಲದ ಗರ್ವದೊಳಿಂತು ಕೆಟ್ಟು ಹಾಳಾದಪ್ಪೆ
ಆನೆಂದಡಂ ಶ್ವಪಚದೇವರೆನೆ ಬೇರಿಲ್ಲ
ನೀನವರ್ಗಾಳಾಗೆ ನಿನಗೆ ತೀರದುದಿಲ್ಲ
ಎನುತೀಶ್ವರಂ ಶ್ವಪಚದೇವರಲ್ಲಿಗೆ ಬಂದು
ಕನಸಿನೊಳಗಳ್ತಿಯಿಂ ಲೀಲೆಯಿಂದೆಯ್ತಂದು

ನಿನ್ನ ದರುಶನದಿಂದವನ ಭವಿತನಂ ಹೋಯ್ತು
ನಿನ್ನ ಕಾಣ್ಕೆಯೊಳವನ ಕುಲವೆಲ್ಲ ಹಸನಾಯ್ತು
ಮಾಡವಂಗುಪದೇಶವಂ ನೀನೆ ಕರುಣದಿಂ
ಮಾಡಯ್ಯ ಎಲೆ ಭಕ್ತ ವಿಪ್ರಂಗೆ ಹರುಷದಿಂ
ಸಾಮವೇದಿಗಳನೀ ಧರೆಗೆ ಮೆರೆದಪೆನೆಂದು
ಸೋಮಧರನರುಪುತಂ ಲಿಂಗದೊಳು ಪುಗಲಂದು

ಎಚ್ಚತ್ತು ಪುಳಕದಿಂ ಶ್ವಪಚದೇವರು ನೋಡಿ
ನಚ್ಚು ಮಚ್ಚಿನ ಲಿಂಗಮೂರ್ತಿಯೊಳಗೋಲಾಡಿ
ಎಂದಿನಂದದಿ ತೀವಿದಡವಿಯೊಳ್ನಡೆತಂದು
ಎಂದುಧರನಂ ಪೂಜಿಸುತ್ತಿರಲ್ಮನದಂದು
ಮತ್ತೆ ಬಂದರ್ ಸಾಮವೇದಿಗಳು ಬೆಳಗಾಗಿ
ಚಿತ್ತದೊಳ್ಭಕ್ತನಂ ನುಡಿಯಿಸುವ ಭರವಾಗಿ
ತರ್ಕಿಸುವೆನವರೊಡನೆ ಆದುದಕ್ಕಿಂದೆನುತ
ತರ್ಕಿಸುವೆ ನಾ ಸೋಲ್ತಡವರ್ಗಳೇ ಗುರುವೆನುತ
ಮರ್ಕಟಚರಿತ್ರಮಂ ಬಿಡುವೆಂ ಬಳಿಕ್ಕೆನಗೆ
ಮಿಕ್ಕಿನ ಕುತರ್ಕಮಂ ಬಿಡುವಂ ಬಳಿಕ್ಕೆನಗೆ
ಇದಿರುಂಟೆ ನೋಡುವೆನೆನುತ್ತಾಗಳೆಯ್ತಂದು
ಸದಮಳಂ ಶ್ವಪಚದೇವರ ಸಾರ್ಗೆ ನಡೆತಂದು
ಏಕೆ ನುಡಿಯಿರಿ ದೇವ ಎನ್ನ ಕೂಡೆಂದುವುಂ
ಏಕೆ ಬಾಯ್ದೆರೆಯಲೊಲ್ಲಿರಿ ದೇವ ಒಂದುವು
ಎನೆ ವಿಭೂತಿಯನ್ನಿಟ್ಟುಕೋ ನುಡಿವೆವೆಂದೆನಲು
ಮನವಾರೆ ಇಟ್ಟುಕೊಂಡಂ ದ್ವಿಜಂ ಭೋಂಕೆನಲು
ಇಡೆ ಕಾಣುತಂ ಶ್ವಪಚದೇವರರಿದಂತಲ್ಲಿ
ನಡುವೊಂದು ತೃಣವನಿರಿಸುತೆ ನುಡಿದರಂತಲ್ಲಿ
ಎಲೆ ವಿಪ್ರ ಲಿಂಗಾರ್ಚನೆಯೊಳಿರುತ್ತೆಂದುವುಂ
ಎಲೆ ಭವಿಗಳೊಡನೆ ನುಡಿಯಿಲ್ಲ ಕೇಳೊಂದುವುಂ
ಎಂದಡೀ ಗಿಡುವೆಲ್ಲ ಮರನೆಲ್ಲ ಭಕ್ತರೆ
ಸಂದಣಿಸಿ ಬರುತಿರ್ಪ ಮೃಗಕುಲಂ ಭಕ್ತರೆ
ಹಿಂದಟ್ಟಿ ಬರುತಿರ್ಪ ಬೇಡರುಂ ಭಕ್ತರೆ
ಬಂದು ಸುತ್ತಿರ್ಪ ಚಾಂಡಾಲರುಂ ಭಕ್ತರೆ
ಇಂತಿವಂ ನೋಡುತೆನ್ನಂ ನೋಡಲಾಗದೆ
ಇಂತಿದಾವಾಗಮದಲುಂಟುಸುರಲಾಗದೆ

ಎನೆ ಕೇಳುತಂ ಶ್ವಪಚದೇವರೆಂದರ್ ನಗುತೆ
ನಿನಗೆ ಪೇಳ್ದವೆನೆಲೇ ವಿಪ್ರ ಕೇಳೆಂದೆನುತೆ
ಗಿಡಮರದ ಹೂಪತ್ರೆ ಶಂಭುವಿಂಗೇರುವುದು
ನಡೆವೆಣನೆ ನಿನ್ನ ತನು ಹೆಬ್ಬಡಿಕೆ ನಾರುವುದು
ಕಾಮವುಂಟೇ ಮರಕೆ ಕ್ರೋಧವುಂಟೇ ಲತೆಗೆ
ಕಾಮಾದಿ ಷಡ್ವರ್ಗವಿಡಿದು ತೀವಿತು ನಿಗೆ
ಎಳೆವುಲ್ಗಳಂ ಮೇದು ತಿಳಿನೀರ್ಗಳಂ ಕುಡಿದು
ಬೆಳೆವ ಮೃಗವಾರುವಂ ಬಾಧಿಸವು ತರವಿಡಿದು
ನಿನ್ನೂಟವೆಂಬುದತ್ಯಂತ ಕಾಳ್ ಭೋಜನಂ
ಅನ್ನವೆಂಬುದು [ಪೆರ್ವ]ಣದ ಪಿಂಡಭೋಜನಂ
ಸತ್ತವರ ಮನೆಯೊಳೇಕಾನ್ನದ ಕುಭೋಜನಂ
ಮತ್ತೆ ನೀನುಂಬದೆಲ್ಲಂ ಕಾಕಭೋಜನಂ
ಬೇಡರೊಂದುಂ ವೇದಶಾಸ್ತ್ರವರಿಯರು ದಿಟಂ
ಬೇಡರ್ಗೆ ನೀನೊಲಿದು ಪೇಳ್ವುದೆಲ್ಲಟಮಟಂ
ಜಾತಿಧರ್ಮಂ ಬೇಂಟೆಯೆಂದಿರ್ಪರಂತವರು
ಜಾತಿ ಚಾಂಡಾಲರೆಂದೆನಿಸಿರ್ಪರಂತವರು
ಕರ್ಮ ಚಾಂಡಾಲನೆಂದೆನಿಸಿಕೊಂಬಂ ನೀನೆ
ದುರ್ಮುಖಂ ದುರ್ಗುಣ ದುರಾಚಾರಿಯುಂ ನೀನೆ
ಶ್ರುತಿಯೊಳೇಕೋ ರುದ್ರನದ್ವಿತಿಯನೆಂದರಿದು
ಶ್ರುತಿಯೊಳಗೆ ವಿಶ್ವಾಧಿಕೋರುದ್ರನೆಂದರಿದು
ಸರ್ವಮನ್ಯತ್ಪರಿತ್ಯಜ್ಯವೆಂಬುದನರಿದು
ಸರ್ವಮುಂ ಭರ್ಗನಿಚ್ಚೆಯೊಳಿಪ್ಪುದೆಂದರಿದು
ಸಶಿವ ಏಕೋದೇವನೆಂಬ ವಾಕ್ಯವನರಿದು
ಸಶಿವನೇ ಏಕನೆನಿಸಿರ್ಪ ವಾಕ್ಯವನರಿದು
ಹರಿಗುಂ ಹರಂತಿಯೆಂದೆಂಬ ವೇದವನರಿದು
ಹರನೆಲ್ಲವಂ ಹರಿಸಿ ಕಳೆವನೆಂಬುದನರಿದು
ವೇದದೊಳು ನೆರೆಯುಳ್ಳ ಈ ವಿಭೂತಿಯನರಿದು
ವೇದಕ್ಕೆ ತಾಯಪ್ಪ ಪಂಚಾಕ್ಷರಿಯನರಿದು
ಶ್ರುತಿಯೊಳಗೆ ಸಲೆ ಸಂದ ರುದ್ರಾಕ್ಷಿಗಳನರಿದು
ಮತಿವಂತರೆನಿಪ ಶಿವಭಕ್ತಚರಿತಮನರಿದು
ಅರಿದು ಬರುದೊರೆಯೋದ ನೀನಲ್ಲದಿನ್ನುಂಟೆ
ಅರಿದರಿದು ಕುರಿಯಾದ ನಿನ್ನಿಂದೆ ಮರಳುಂಟೆ
ಅರಿದ ವೇದವ್ಯಾಸನೇನಾದನದನರಿಯ

ಅರಿವು ನಿನ್ನಳವೆ ಮುನಿಗಳ ಹವಣೆ ಕೇಳ್ದರಿಯ
ಗಗನದೊಳ್ಬರುತಿರ್ಪನೆಂಬೊಂದು ಗರ್ವವೆ
ಗಗನದೊಳ್ಪಕ್ಕಿ ಹಣ್ಣೆಲೆಗಳೇಂ ಹಾರವೆ
ಪಂಚಮುಖನಂ ಪೂಜಿಸದ ಪಾತಕಂ ನೀನೆ
ಪಂಚಾಕ್ಷರಿಯನರಿಯದಿರ್ಪ ಪತಿತಂ ನೀನೆ
ಪಂಚಾಕ್ಷರಿಯನರಿಯದಿರ್ಪ ಪತಿತಂ ನೀನೆ
ಭಸಿತಮಂ ಭಾವಿಸದ ಭಾಗ್ಯಹೀನಂ ನೀನೆ
ಎಸೆವ ರುದ್ರಾಕ್ಷಿಯರಿಯದ ದುಃಖಿಯುಂ ನೀನೆ
ಕತ್ತೆ ಕರ್ಪುರದ ಹೇರಂ ಹೇರಿ ನಿಂದಂತೆ
ಹೊತ್ತ ವೇದಂಗಳರ್ಥವನರಿಯದಕಟಂತೆ
ಮರದಿಂದೆ ಗಿಡುವಿಂದೆ ಮೃಗದಿಂದೆ ಪುಳವಿಂದೆ
ಬರೆ ಬೇಡರಿಂದೆ ಚಾಂಡಾಲರಿಂ ನಾಯಿಂದೆ
ನೀನೆ ಕಷ್ಟಂ ಸುಡು ಸುಡೆಲೆಲೆ ಭವಿ ಭವಿ ನೀನೆ
ನೀನೆ ಪತಿತಂ ಪಂಚಮಹಪಾತಕಂ ನೀನೆ
ನಿನ್ನನೀಕ್ಷಿಸುವರೇ ಶಿವಭಕ್ತರಪ್ಪವರು ?
ನಿನ್ನೊಡನೆ ನುಡಿವರೇ ಶರಣರೆನಿಸಿರ್ಪವರು ?

ಎಂದುಳ್ಳುದಂ ಶ್ವಪಚದೇವರುರ್ಬಿಂ ನುಡಿಯೆ
ಮುಂದಿರ್ದ ಸಾಮವೇದಿಗಳನೊಲವಿಂ ಜಡಿಯೆ
ನೆರೆ ಸತ್ಯಬೋಧೆ ಸಾತ್ವಿಕನ ಮನದೊಳಪೊಕ್ಕು
ಮರಹಳಿದು ತಿಳಿವುಳಿದು ಭಕ್ತಿಯೊಳ್ಮನ ಮಿಕ್ಕು
ಸಾಮವೇದಿಗಳೆದ್ದು ಮೈಯಿಕ್ಕಿ ಪೊಡಮಟ್ಟು
ಸೋಮಧರಮೂರ್ತಿ ಕರುಣಿಪುದೆಂದು ಮನನಟ್ಟು
ಸರ್ವಾಪರಾಧಿಗಜ್ಞಂಗೆನಗೆ ಕರುಣಿಪುದು
ಸರ್ವ ನಿರ್ಭಾಗ್ಯಂಗೆ ದುರ್ಮತಿಗೆ ಕರುಣಿಪುದು
ಸತ್ಯವಂ ಬಿಟ್ಟಿರ್ಪಸತ್ಯಂಗೆ ಕರುಣಿಪುದು
ನಿತ್ಯವಂ ಬಿಟ್ಟಿರ್ಪನಿತ್ಯಂಗೆ ಕರುಣಿಪುದು
ಎಂದು ಬಿನ್ನವಿಪ ಕಿಂಕುರ್ವಾಣಮಂ ಕೇಳ್ದು
ಇಂದುಧರನರಿಪಿತಂ ಚಿತ್ತದೊಳ್ನೆರೆ ತಾಳ್ದು
ಕರುಣದಿಂ ಶ್ವಪಚದೇವರು ವಿಪ್ರನಂ ನೋಡಿ
ಕರದಲ್ಲಿ ಶಂಕರನ ನಿಜಮೂರ್ತಿಯಂ ಕೂಡಿ
ಕರೆದು ಹತ್ತಿರೆ ಕರೆದು ಪದ್ಮಾಸನದೊಳಿರಿಸಿ
ಹರನ ಶಶಿಧರನ ರೂಪಂ ಚಿತ್ತದೊಳಗಿರಿಸಿ

ಭಸಿತದಿಂ ವಿಪ್ರನ ನೊಸಲ್ಪಟ್ಟಮಂ ಕಟ್ಟಿ
ಪಶುಪತಿಯ ಚರಣಮಂ ಮನದ ಕೈಯೊಳು ಮುಟ್ಟಿ
ಸಾಮವೇದಿಗಳ ಮಸ್ತಕದಲ್ಲಿ ಹಸ್ತಮಂ
ಪ್ರೇಮದಿಂ ಶ್ವಪಚದೇವರು ತಮ್ಮ ಹಸ್ತಮಂ
ತಂದಿಟ್ಟು ಕರ್ಣದೊಳು ಪಂಚಾಕ್ಷರಿಯನರಿಪಿ
ಮುಂದಿರ್ದ ಶಿವಲಿಂಗ ನಿಜಮೂರ್ತಿಯಂ ತಿಳಿಪಿ
ಉಪದೇಶಮಂ ಶ್ವಪಚದೇವರೊಲವಿಂ ಮಾಡೆ
ತಪನನಂತಿರೆ ತೊಳಗಿ ಬೆಳಗುತಿರ್ದಂ ಕೂಡೆ
ಕುಲದ ಕಲ್ಮಷವಳಿದು ನೆಲಸಿತ್ತು ಶಿವಭಕ್ತಿ
ತೊಲಗಿತ್ತು ಭವಿತನಂ ಕಾಸಿ ಬೆಚ್ಚುದು ಯುಕ್ತಿ
ಜ್ಯೋತಿಯಿಂ ಜ್ಯೋತಿಯಂ ಪೊತ್ತಿಸಿದ ತೆರನಾಯ್ತು
ಮಾತೇನು ಗುರುಶಿಷ್ಯರೆಂದರಿಯದಂತಾಯ್ತು
ಒರ್ವರೊಳಗೊರ್ವರಂ ತಂದಿಕ್ಕಿದಂತಾಯ್ತು
ಸರ್ವೇಶ್ವರನ ಭಕ್ತಿ ಭೇರುಂಡನಂತಾಯ್ತು
ಗುರುಚರಣಮಂ ನಂಬಿ ಲಘುವಳಿದು ಗುರುವಾಯ್ತು
ಗುರುನಿರೀಕ್ಷಣೆಯಿಂದೆ ಶಿವತತ್ವಮಯವಾಯ್ತು
ಹರಭಕ್ತ ಸಾಮವೇದಿಯ ಪೆತ್ತ ಕುಲವೆಲ್ಲ
ನರಕದಿಂ ಕೈಲಾಸಪುರಕೆ ನೆಗೆಯಿತ್ತೆಲ್ಲ

ಇಂತು ಕರುಣಂಬಡೆದು ತತ್ಪುರಕೆ ನಡೆತಂದು
ಸಂತಸದೆ ಛತ್ತೀಸಪುರದೊಳಗೆ ಬರಲಿಂದು
ಕಂಡ ಶಿಷ್ಯರಿದೇನಿದೇನೆನುತ್ತಿರಲಲ್ಲಿ
ತಂಡದಿಂ ಛತ್ತೀಸಪುರಜನಂ ಬರಲಲ್ಲಿ
ಎಲ್ಲರ್ಗೆ ವೇದದಿಂ ಶಾಸ್ತ್ರದಿಂದರುಪುತಂ
ಎಲ್ಲರ್ಗೆ ಶೈವಾಗಮೋಕ್ತಿಯಿಂದರುಪುತಂ
ಎಲ್ಲರಂ ತಿಳಿಪಿ ಸದ್ಭಕ್ತರಂ ಮಾಡಿದಂ
ಎಲ್ಲರಂ ಶಿವನ ಸದ್ಭಕ್ತಿಯೊಳ್ಕೂಡಿದಂ
ನೋಡೆ ಛತ್ತೀಸಪುರ ದೊಳಗೆಲ್ಲ ಶಿವಮಯಂ
ಕೂಡೆ ಮನೆಮನೆಗಳೊಳು ಲಿಂಗಾರ್ಚನೆಯ ಮಯಂ
ಎಲ್ಲೆಲ್ಲಿ ಕೇಳ್ವಡಂ ಘಂಟಾರವಂ ಕೂಡೆ
ಎಲ್ಲೆಲ್ಲಿ ಕಾಣ್ಬಡಂ ಭಸಿತಭಾಳಂ ಕೂಡೆ
ಎಲ್ಲೆಲ್ಲಿ ಕೇಳ್ವಡಂ ಶಿವಶಬ್ದಮುಂ ನೋಡೆ
ಎಲ್ಲೆಲ್ಲಿ ಕೇಳ್ವಡಂ ಶಿವಪುರಾಣಂ ನೋಡೆ

ಹೂವಗ್ಘವಣಿಗಳಂ ತರುತಿರ್ಪ ಸಂಭ್ರಮಂ
ಆವಗಂ ಶಂಕರನನರ್ಚಿಸುವ ವಿಭ್ರಮಂ
ಶಿವಭಕ್ತಿಸಂಭ್ರಮಂ ಪುರದೊಳಗೆ ಮಿಗಿಲಾಗೆ
ಶಿವನೇಕನಿಷೇಯಂದಂದಿಂಗೆ ಮಿಗಿಲಾಗೆ

ಇಂತಪ್ಪ ಸಂತೋಷದಿಂ ಸಾಮವೇದಿಗಳು
ಕಂತುಹರಚರಣಕಮಲಾಮೋದವೇದಿಗಳು
ಉದಯದೊಳು ನವಕುಸುಮಸಂಕುಳಂಗಳ ತಿರಿದು
ಮದನಹರಮಜ್ಜನಕೆ ಗೋಕ್ಷೀರವಂ ಕರೆದು
ಚಿಂತೆಯಡಗಿದ ದಂತಧಾವನ ಸ್ನಾನದಿಂ
ಸಂತತಂ ತನುಗುಣವ ತೊಡರರದಿಹ ಮೋನದಿಂ
ಭಸಿತಮಂ ಧರಿಸಿ ರುದ್ರಾಕ್ಷಿಯಳವಡೆ ತೊಟ್ಟು
ಅಸಮ ಗುರುಪದವ ನೆನೆನೆನದು ಮನಮುಂದಿಟ್ಟು
ಚಳೆಯ ಸಾರಣೆ ರಂಗವಾಲೆಯಂ ರಂಜಿಸುತೆ
ಒಳಗೆ ಬೆಳಗುವ ದೀಪಮಾಲೆಯಂ ಪೊತ್ತಿಸುತೆ
ಪಂಚಾಮೃತಂ ಮಾಡಿ ಪಂಚಮುಖನಂ ನೊಡಿ
ಪಂಚಮಹವಾದ್ಯವೆಸೆಯಲು ಸುಖದೊಳೋಲಾಡಿ
ಗಂಗಾಂಬುವಿಂ ಮಜ್ಜನಕ್ಕೆರೆದು ಕುಣಿಕುಣಿದು
ಗಂಗಾಧರಂಗೆ ಸಜ್ಜನದ ಮಜ್ಜನಕೆರೆದು
ಗಂಧಮಂ ಕೈಗೊಳಿಸಿಯಕ್ಷತೆಯನೊಪ್ಪುತಿರೆ
ನಂದಿವಾಹನನ ಮೂರ್ತಿಯ ಮನವನಪ್ಪುತಿರೆ
ಕಮನೀಯವೆನಿಪ ಸಿಂಹಾಸನದೊಳೊಪ್ಪಿರ್ಪ
ರಮಣಂಗೆ ಇಂಡೆದಿಂಡೆಗಳಿಂದಲೆಸೆದಿರ್ಪ
ಸಂಪಗೆ ಮರುಗ ದವನ ಮುಡಿವಾಳವಿರವಂತಿ
ಸೊಂಪುಕಂಪಿನ ಪಡ್ಡವಳಿ ನಗುವ ಸೇವಂತಿ
ಮುದದ ಪರಿಮಳ ಕದಂಬವ ತಂದು ನೆರೆ ತುರುಬಿ
ಇದಿರುಂಟೆ ಎನಗಿನ್ನೆನುತ್ತವರ್ಚಿಸಿ ತುರುಬಿ
ಆಹಾಹ ಇಂದಾನು ಹುಟ್ಟಿತ್ತು ಫಲವಾಯ್ತು
ಆಹಾಹ ಮದ್ಗುರುವ ಮುಟ್ಟಿತ್ತು ಫಲವಾಯ್ತು
ಗುರುವಿಂದೆ ಬರ್ದುಕಿದೆಂ ಬರ್ದುಕಿದೆಂ ಕುಬುಬುಬುಬು
ಗುರುವಿಂದೆ ಶುದ್ಧಾತ್ಮನಾದೆನೆಲೆ ಕುಬುಬುಬುಬು
ಎಂದಿಂತು ಕುಣಿದಾಡಿ ಮಣಿದಾಡಿ ಮೈಮರೆತು
ಸಂದಣಿಸುವಾನಂದವುಕ್ಕಿ ತನುಗುಣವರತು

ಶಿವ ಶಿವ ನಮಃ ಶಿವಾಯೆಂದೆಂದು ತಣಿದರಿಯ
ಭವಹರ ಮಹಾಗುರುವೆಯೆಂದೆಂದು ಮರೆದರಿಯ
ಈಶನೊಳು ನಟ್ಟ ನೋಟಂ ಸಿಲ್ಕಿ ಬೆರಗಾಗೆ
ಈಶನುರುಭಕ್ತಿಯೊಳಗೋಲಾಡುತಂ ಮೇಗೆ
ಧೂಪದಲ್ಲಿ ದಶಾಂಗಧೂಪವೆಸೆಯಲ್ಕೊಡೆ
ಪಾಪಹರ ದುರಿತಾರಿಯವಧಾರೆನಲ್ಕೊಡೆ
ಮಂಗಳ ಮಹಾಮಹಿಮ ಗುರುವಿಂಗೆ ಪರಮಂಗೆ
ಮಂಗಳಾರತಿಯೆತ್ತಿ ಹಿಂಗದೆ ವದಾನ್ಯಂಗೆ
ದಿವ್ಯಾನ್ನವಮೃತಾನ್ನ ದೇವಾನ್ನಮಂ ಬಡಿಸಿ
ನವ್ಯರುಚಿಶಾಕದಿಂ ಸರ್ವಸಾಧನವೆರಸಿ
ದೇವಗಣಕುಲಚಕ್ರವರ್ತಿ ಒಲಿದಾರೈಸು
ದೇವ ದಾಕ್ಷಾಯಣೀರಮಣ ಒಲಿದಾರೈಸು
ಎಂದು ಬಿನ್ನೈಸಿ ಸೀತಾಳವೀಳಯವಿತ್ತು
ಇಂದುಮೌಳಿಗೆ ಅರ್ಘ್ಯಪಾದ್ಯದರ್ಪಣವಿತ್ತು
ದೇವ ಭಕ್ತಿಯನೀವುದೆಂದುಂ ಪ್ರಣತನಾಗಿ
ಆವಗಂ ಶಿವನ ಕಾರುಣ್ಯಸುಖಮುಖನಾಗಿ

ಕರುಣ ಪ್ರಸಾದಮಂ ಹರುಷದಿಂ ಕೈಕೊಂಡು
ಗುರುಪದಧ್ಯಾನಮಂ ಹೃದಯದೊಳಗೆಡೆಗೊಂಡು
ಶಿವಭಕ್ತಿಸಂಭ್ರಮದ ಸಂಪದಂ ಮನೆಯೊಲಗೆ
ಶಿವನೇಕ ನಿಷ್ಠೆಯಂದಂದಿಂಗೆ ಮಿಗಿಲಾಗೆ
ಈ ತೆರದೊಳೊಂದೆರಳ್ಮಾಸವಾಗುತ್ತಮಿರೆ
ಭೂತೇಶ್ವರನ ಭಕ್ತಿ ಪರ್ವಿ ಕುಡಿವರಿವುತಿರೆ
ಸಾಮವೇದಿಗಳ ತಂದೆಯ ದಿನಂ ಬರಲಲ್ಲಿ
ಆ ಮಹಾಭಕ್ತರ್ಗೆ ಪೇಳುತಂ ಬರಲಲ್ಲಿ
ಅಲ್ಲಿ ವಿಧ್ವೇದೇವರಪ್ಪರೊಬ್ಬರುಮಿಲ್ಲ
ಅಲ್ಲಿ ತನ್ನಯ ಮನಕ್ಕೆರಗುವರು ತಾವಿಲ್ಲ
ದಿರೆ ವಿಚಾರಿಸಿ ನೋಡಿ ನಿಶ್ಚಯಿಸುತಂ ಕಂಡು
ಹರುಷದಿಂ ಶ್ವಪಚದೇವರ ಸಾರ್ಗೆ ನಡೆಗೊಂಡು
ಭರದಿಂದೆ ಬಂದರಣ್ಯದೊಳಿರ್ದ ಗುರುವಿಂಗೆ
ಹರನನೊಲಿದಾರಾಧಿಸುವ ಪರಮ ಗುರುವಿಂಗೆ
ನರಕದೊಳ್ಬೀಳ್ವವನನೆತ್ತಿದ ಮಹಾತ್ಮಂಗೆ
ಪರಮನೊಳಗಾತ್ಮನಂ ನೆರಪಿದ ಮಹಾತ್ಮಂಗೆ

ಪೂಜಿಸುತೆ ಪೂಜಿಸುತೆ ಶಿವನಾದ ಮಹಿಮಂಗೆ
ರಾಜಿಸುತೆ ರಾಜಿಸುತೆ ಗುರುವಾದ ಪರಮಂಗೆ
ಮೈಯಿಕ್ಕಿ ದೇವ ನಿನ್ನಪವೆಂದು ಕೈಮುಗಿದು
ಕೈಯೆತ್ತಿ ಪೊಡಮಟ್ಟು ಭಕ್ತಿಯಿಂದೊಳ ಸುಗಿದು
ನಾಳೆಮ್ಮ ತಂದೆಯ ದಿಇನಕ್ಕೆ ಕರುಣಂಗೈದು
ಶೂಲಿ ವಿಶ್ವೇದೇವರಾಗಿ ಬಿಜಯಂಗೈದು
ಕರುಣಿಸುವುದೆನೆ ಶ್ವಪಚದೇವರೆಂದರ್ನಗುತೆ
ಮರುಳೆ ವಿಪ್ರರವೇಷದೊಳು ಬಾರೆವಾವೆನುತೆ
ಮರುಳೆ ಪಿತೃದೆವಸಕ್ಕೆ ಬಾರೆವಾವೆಂದೆನುತೆ
ಹರನಾಗಮಕ್ಕೆ ದೂರಂ ಬಾರೆವಾವೆನುತೆ
ನಿನಗೆ ವಿಶ್ವೇದೇವರೇ ಹೋಗು ಬಂದಪಂ
ಮನಸಿಜಹರಂ ತಾನೆ ಕರುಣದಿಂ ಬಂದಪಂ
ಎನೆ ಶಿವಂ ಬರ್ಪ ಪರಿಯಂ ದೇವ ಬಲ್ಲೆನೆ
ಎನಗೆ ಕರುಣಿಪುದು ಕುರುಪಂ ದೇವ ಬಲ್ಲೆನೆ
ಎನಗೆ ಕರುಣಿಪುದು ಕರುಪಂ ದೇವ ಬಲ್ಲೆನೆ
ಎಂದಡೆಮ್ಮಯ ವೇಷದಿಂದ ಶಿವ ಬಂದಪಂ
ಒಂದು ಕರು ಹೆಗಲ ಸಂಬಳಿಗೋಲ ಬಂದಪಂ

ಎಂದು ಕರುಣಿಸಿದಡೆ ಹಸಾದವೆನುತಂ ತಿರುಗಿ
ಬಂದನಾ ಛತ್ತೀಸಪುರಕೆ ಮನದೊಳ್ಕರಗಿ
ಬಂದು ಮರುದೆವಸದುದಯದೊಳೆ ಪಲ್ಲಂ ಸುಲಿದು
ಮಿಂದು ಭಸಿತವನಿಟ್ಟು ರುದ್ರಾಕ್ಷಿಯಂ ತಳೆದು
ಮನೆಯ ಧವಳಿಸಿ ತೋರಣಂಗಟ್ಟಲಳವಡಿಸಿ
ತನತನಗೆ ಶಾಕಪಾಕಾದಿಗಳನಳವಡಿಸಿ
ಇರೆ ಬಂದು ನೆರೆಯಿತ್ತು ಶಿಷ್ಯವರ್ಗಂ ಕೂಡೆ
ಹರಭಕ್ತರುಂ ಪಿರಿಯರುಂ ಶಾಂತರುಂ ಕೂಡೆ
ನೆರದಿರಲು ಸಆಮವೇದಿಗಳು ಪುಳಕಿಸುತಿರಲು
ಹರುಷದಿಂ ಮಂಡಲಂ ಮಾಡಿ ನೋಡುತ್ತಿರಲು
ಶಿವನ ಬರವಂ ಪಾರ್ದು ನೋಡುತ್ತಮಿರಲಲ್ಲಿ
ಭವನ ಕರುಣಮನೊಲಿದು ಪಾರುತ್ತಮಿರಲಲ್ಲಿ
ಸಾಮವೇದಿಗಳ ಪಿತೃಕುಲವೆಲ್ಲ ಸಹಿತಾಗಿ
ಸೋಮಧರನೆಲ್ಲರಂ ಕೂಡಿಕೊಂಡೊಂದಾಗಿ
ಬರುತಿರ್ದನೀಶ್ವರಂ ಪಿರಿಯ ವೇಷಂಗೊಂಡು

ಬರುತಿರ್ದನಾ ಭಕ್ತವತ್ಸಲಂ ನಡೆಗೊಂಡು
ಹೊತ್ತ ಕರುವಿಡಿದ ಸಂಬಳಿಗೋಲಿನೀಶ್ವರಂ
ಉತ್ತಮೋತ್ತಮ ಶರಣವಾರಿಧಿ ಸುಧಾಕರಂ

ದೂರದಿಂ ಬರುತಮಿರೆ ಕಂಡು ಪುಳಕಿತನಾಗಿ
ಆರುತಂ ಗುಡಿಗಟ್ಟಿ ಕುಣಿದಾಡುತಂ ಬೀಗಿ
ಎನ್ನೊಡೆಯನಾ ಬಂದನಾಹಾ ಮಹಾದೇವ
ಎನ್ನೊಡೆಯನೆಯ್ತಂದನಾಹಾ ಮಹಾದೇವ
ಕರುಣಾಬ್ಧಿ ಮೇರೆದಪ್ಪಿತು ಮೀತಿತಮ್ಮಮ್ಮ
ಪರಬೊಮ್ಮನೆನ್ನತ್ತಲೊಗ್ಗುಡಿಸಿತಮ್ಮಮ್ಮ
ಎಲೆಲೆ ಕುಣಿದಾಡಿರೇ ಹಾಡಿರೇ ಭಕ್ತರಿದ
ಎಲೆಲೆ ಸುಖಮಂ ಸೂರೆಗೊಳ್ಳಿರೇ ಶರಣರಿರ
ಎನಲೆನಲು ಹತ್ತೆ ಸಾರ್ದಂ ಹೆಗಲ ಕರು ಸಹಿತೆ
ತನತನಗೆ ಸಂದಣಿಸಿ ಬರ್ಪ ಪಿತೃಕುಲಸಹಿತೆ
ಬಂದು ಮಂಡಲದಲ್ಲಿ ಪಾದಮಂ ನೀಡುತಿರೆ
ನಿಂದಿರ್ದ ವಿಪ್ರಕುಲವೆಲ್ಲ ಹರಿದೋಡುತಿರೆ
ಸಾಮವೇದಿಗಳಿದ್ದು ಪುಳಕಿಸುತೆ ಪರಿತಂದು
ಸೋಮಧರ ಕಾಮಹರ ಕರುಣಿಸಿದಿರೆನುತಗಿದು
ಪಾದಮಂ ತೊಳೆಯಲೆಂದನುಮಾಡುವನಿತಕ್ಕೆ
ವೇಧಿಸಿದ ಕಡುನೇಹದಿಂದುಕ್ಕುವನಿತಕ್ಕೆ
ಹೊತ್ತ ಕರುವಲ್ಲಿ ವಿಷ್ವಕ್ಸೇನತನುವಾಗೆ
ಬಿತ್ತರಿಸುವೊಂದು ಮುಖದೊಳಗೈದು ಮುಖವಾಗೆ
ಉಟ್ಟ ಹೊದ್ದರಿವೆ ಗಜದಜಿನ ಪುಲಿದೊವಲಾಗೆ
ಕಟ್ಟಿರ್ದ ಕಿವಿವಂಜಿ ನಾಗಕುಂಡಲವಾಗೆ
ಮೈಯ ಕಡುಗಪ್ಪಳಿದು ಕರೆಗೊರಲ ಕಪ್ಪಾಗೆ
ಕೈಯ ಸಂಬಳಿಗೋಲು ಖಟ್ವಾಂಗಮಯವಾಗೆ
ದೆಸೆ ದೆಸೆಗೆ ಮಿಸುಪ ಮೂರುಂ ಕಣ್ಗಳೀಶ್ವರಂ
ಶಶಿರವಿಗಳಂ ಬೆಳಗುತಿರ್ಪ ಕರುಣಾಕರಂ
ತಾನಾಗಿ ನಿಂದಿರಲು ಹೂಮಳೆಗಳೆರಗಿದವು
ನಾನಾ ಮೃದಂಗ ದುಂದುಭಿ ನಾದವುಣ್ಮಿದವು

ಆಗಳಾ ಸಾಮವೇದಿಗಳಭವನಂ ಕಂಡು
ರಾಗವಿರ್ಮಡಿಸಿ ನೂರ್ಮಡಿಸಿ ಹರುಷಂಗೊಂಡು

ಹರನ ಪದಪಂಕಜವನಗಲದಪ್ಪಿರುತಿರಲು
ಪರಮನಂಘ್ರಿಗಳೊಳಗೆ ಪರಮಸುಖದಿಂದಿರಲು
ಪಿಡಿದೆತ್ತಿದಂ ಸಾಮವೇದಿಗಳನೀಶ್ವರಂ
ಕಡುನೇಹದಿಂದೆ ತೆಗೆದಪ್ಪಿ ಕರುಣಾಕರಂ
ನಡೆ ವಿಮಾನವನೇರಿಕೊಳ್ಳಯ್ಯ ಕೊಳ್ಳೆನಲು
ನುಡಿದರಾ ಸಾಮವೇದಿಗಳಲ್ಲಿ ಭೋಂಕೆನಲು
ಎನ್ನ ಗುರುಸಹಿತವಲ್ಲದೆ ಬಾರೆನೆಲೆ ದೇವ
ಚೆನ್ನ ಛತ್ತೀಸಪುರಸಹಿತವಲ್ಲದೆ ದೇವ
ಎನಲೀಶ್ವರಂ ಶ್ವಪಚದೇವರಂ ಕರೆಯಿಸುತೆ
ತನತನಗೆ ಗಣಕುಲಕೆ ಪುರವನೆತ್ತಂದೆನುತೆ
ಛತ್ತೀಸಪುರಸಹಿತೆ ಗುರುಸಹಿತೆ ಗಗನಕ್ಕೆ
ಒತ್ತರಿಸಿ ನೆಗೆಯೆ ನಡೆವುತ್ತ ಕೈಲಾಸಕ್ಕೆ
ಬಂದು ನಂದೀಶ್ವರನ ಬಾಗಿಲೊಳ್ನಿಂದಿರ್ದು
ಇಂದುಧರನೋಲಗದೊಳತುಳಸುಖಮಂ ಸಾರ್ದು
ಕರುಣದಿಂ ಶ್ವಪಚದೇವರನಲ್ಲಿ ಕೊಂಡಾಡಿ
ಪುರ ಹರಂ ಸಾಮವೇದಿಗಳನೊಲವಿಂ ನೋಡಿ
ಗುರುವಿಂಗೆ ಶಿಷ್ಯಂಗೆ ಗಣಪದವಿಯಂ ಕೊಟ್ಟು
ಪರಮಗುರು ಪರಮಾನುರಾಗಮಂ ಮುಂದಿಟ್ಟು
ಛತ್ತೀಸಪುರವನಾ ರುದ್ರಲೋಕದೊಳಿರಿಸಿ
ಮುತ್ತಿರ್ದ ಗಣಕುಲದ ನಡುವೊಪ್ಪೆ ಸಿಂಗರಿಸಿ
ಸಕಲ ಶರಣರ ಮನೋರಥ ರೂಪನೊಪ್ಪಿದಂ
ಸಕಲಲೋಕೈಕ ಶಾಶ್ವತ ಮೂತಿಯೊಪ್ಪಿದಂ
ಶರಣಜನಸಂತಾನ ಸುರಭೂಜನೊಪ್ಪಿದಂ
ಕರುಣಾಬ್ಧಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಧರೆ ಬಣ್ಣಿಸೆ ಸುಖವಿಡಿದಾ
ದರದಿಂದವೆ ಮೆರೆದ ಸಾಮವೇದಿಯ ವರದಿಂ ।
ದುರುತರ ಭಕ್ತಿಯನೀವುದು
ಕರುಣಾಕರ ದೇವ ಹಂಪೆಯ ವಿರೂಪಾಕ್ಷಾ ॥

❖❖

# ೧೦. ಮಾದರ ಚೆನ್ನಯ್ಯನ ರಗಳೆ

ಸನ್ನುತಾಗಮ ನಿಕರ ತಲ್ಲಣಂಗೊಳೆ ತನ್ನ
ಜಿಹ್ವೆಯೊಳ್ ಸವಿದು ಪನ್ನಂಗ । ಧರಗಿತ್ತ
ಚೆನ್ನಯ್ಯನೆನ್ನಯ್ಯನೆಂಬೆ ॥

ವೇದದ ಡಂಗುರಂ ಹೆದರಿ ಸೈವೆರಗಾದುವು ಶಾಸ್ತ್ರಸಂಭ್ರಮಂ
ಹೋದುವು ನಿಚ್ಚಲೋದುವ ಪುರಾಣದ ಮಾಲೆಗಳೆಂಬಿವೆಲ್ಲ ಹಾ
ಳಾದುವು ಜಪ ತಪ ನೇಮ ಸಂಧ್ಯಾ ಸಮಾಧಿಗಳೆಂಬಿವೆಲ್ಲ ನುಚ್ಚುನೂ
ರಾದುವು ಹಂಪೆಯಾಳ್ದ ವರ ಚೆನ್ನನ ಕೂಡೊಲಿದುಂಡ ಕಾರಣಂ ॥

ಶ್ರೀ ಶಿವನ ಸೆಜ್ಜೆಯೆನಿಸಿದ ಚೋಳದೇಶವದು
ಈಶ ಭಕ್ತವ್ರಜಕೆ ನಿಜಸುಖನಿವಾಸವದು
ಆ ದೇಶಮಂ ಪೊಗಳ್ವಡೆನ್ನಳವೆ ಸುರರಳವೆ
ವೇದಮಯವಭವಮಯವಾದುದಕೆ ಪಡಿಯೊಳವೆ
ಶರ್ವಂಗೆ ಶಂಭುವಿಂಗಭವಂಗೆ ವಿಭವಂಗೆ
ಸರ್ವಜ್ಞನಿಧಿಗೆ ಗಣನಾಥಂಗಜಾತಂಗೆ
ತಿಳಕವದು ಪುಳಕವದು ಕಳಸವದು ವಿಳಸವದು
ಲಲಿತವದು ಫಲಿತವದು ಲಾಭವದು ಶೋಭೆಯದು
ಭವನವದು ಶಿವಭವನವೂರೆಲ್ಲ ಶಿವಪುರಂ
ವಿವಿಧ ಜನವೆಲ್ಲ ಶಿವಭಕ್ತರ್ನಿರಂತರಂ
ಬೆಳೆಯಿಲ್ಲದಿಳೆಯಿಲ್ಲ ಬನವಿಲ್ಲದೂರಿಲ್ಲ
ಕೊಳನ ತಂಪಿಲ್ಲದಿಂಪಿಲ್ಲದಾರವೆಯಿಲ್ಲ
ಕಾವೇರಿ ಸೋಂಕಿದರ ಪಾಪಮಂ ಸೋವೇರಿ
ಕಾವೇರಿ ಸಕಲಸಸ್ಯಾದಿಗಳ ಕಾವೇರಿ
ಹರಿದಳಾ ದೇಶದೊಳು ಹರಭಕ್ತಿರಸದಂತೆ
ಧರಣೀತಳಕ್ಕಮೃತ ವಿಮಳ ವಾರಿಧಿಯಂತೆ

ಜಪವಲ್ಲಿ ತಪವಲ್ಲಿ ಚೆಲುವಲ್ಲಿ ಫಲವಲ್ಲಿ
ಜಪದರ್ಥವೆನಿಪ ಶಂಕರನಲ್ಲಿ ಶಿವನಲ್ಲಿ
ತರು ಕಲ್ಪತರು ಧೇನು ಕಾಮಧೇನುಗಳಲ್ಲಿ
ಗಿರಿ ಹೇಮಗಿರಿನಿಕರ ಸರ್ವಸುಖವಂತಲ್ಲಿ

ಇಂತಪ್ಪ ದೇಶಮಂ ಪಾಲಿಸುವ ಭೂಮಿಪಂ
ಸಂತತಂ ಕರಿಕಾಲ ಚೋಳನೆಂಬಾ ನೃಪಂ
ಹರಭಕ್ತ ಗುರುಭಕ್ತನರರೆ ಕರುಣಾಕರಂ
ಪರಮಭಕ್ತಂ ಸತ್ಯಶೀಲನುನ್ನತಕರಂ
ಆ ಚೋಳರಾಯನೊಪ್ಪುವ ರಾಜಧಾನಿಯೊಳು
ವಾಚಾಮಗೋಚರನೆನಿಪ್ಪನಂತವನಿಯೊಳು
ಜಾತಿ ಮಾದರ ಚೆನ್ನನೆಂಬ ನಾಮಂ ತನಗೆ
ಓತಿರ್ಪುದನ್ವರ್ಥವಾಗಿ ಮೆರೆದಿರೆ ಧರೆಗೆ
ಇರ್ದು ಶಂಕರನ ಗುಪ್ತಾರಾಧನೆಗೆ ನಚ್ಚಿ
ಸಾರ್ದು ಶಿವಭಕ್ತಿಯಂ ಬೀರದಿಚ್ಚೆಗೆ ಮೆಚ್ಚಿ
ಭಕ್ತ ಚೋಳನ ತುರಂಗಂ ಬರ್ದುಕಬೇಕೆಂದು
ಯುಕ್ತಿಯಿಂದೀಶಭಕ್ತನ ಸಲಹಬೇಕೆಂದು
ಕಂಪಣದ ಹುಲ್ಲ ಕಾಯಕವನೇ ಮರೆಮಾಡಿ
ಪೆಂಪಿಂದೆ ಶಿವನನರ್ಚಿಸುತಿರ್ಪನೊಡಗೂಡಿ
ಲಿಂಗಾಭಿಮಾನಿ ಲಿಂಗಪ್ರಾಣಿ ಶಾಶ್ವತಂ
ಲಿಂಗಾನುಭಾವಿ ಲಿಂಗೈಕ್ಯನತ್ಯೂರ್ಜಿತಂ
ಗಿರಿಜೇಶನಾಪ್ತನತಿ ಗುಪ್ತಮಾಹೇಶ್ವರಂ
ಪರರರಿಯರೀಶನರಿದಿರ್ಪ ಭಕ್ತ್ಯಾತುರಂ
ಒಳಗೆ ಭಕ್ತಿಯ ಗುಂಪು ಹೊರಗೆ ಜಾತಿಯ ಸೊಂಪು
ಒಳಗೆ ಮುಕ್ತಿಯ ನುಂಪು ಹೊರಗೆ ಜನ್ಮದ ಪೆಂಪು
ತಾನಾಗಿ ಮುಗಿಲಮರೆಯಿಂದುಮಂಡಲದಂತೆ
ಏನೆಂಬೆನುದಕದೊಳಗಣ ಕಮಳದಳದಂತೆ
ತಿಲದ ತೈಲದ ತೆರದೆ ಕಾಷ್ಠದಗ್ನಿಯ ತೆರದೆ
ನೆಲದ ಮರೆಯೊಳಗೆ ತೊಳಗುವ ನಿಧಾನದ ತೆರದೆ
ಪೆರರರಿಯದಂತೊಳಗೆ ಲಿಂಗಾರ್ಚನೆಯೊಳಿರ್ಪ
ನರಿವಂತೆ ಹೊರಗೆ ಕುಲಧರ್ಮಕರ್ಮದೊಳಿರ್ಪ
ಆತನ ಶಿವಾರ್ಚನೆಯನೆಣಿಸಲೆನ್ನಳವಲ್ಲ
ಭೂತೇಶ್ವರಂಗೆ ಕೌತುಕವುಳಿದರಳವಲ್ಲ

ಉದಯ ಸಮಯದೊಳೆದ್ದು ಕಾನನಕೆ ನಡೆತರುತೆ
ಪದಪಿಂದೆ ಶಿವನಿತ್ತ ಕಾಯಕಮನೆಡೆಗೊಳುತೆ
ಕಂಡ ಚೆಲ್ವಕ್ಷಿಮುಖದಿಂದೆ ಲಿಂಗಾರ್ಪಿತಂ
ಕೊಂಡ ಸವಿ ನಾಲಗೆಯ ರುಚಿಯಿಂದಲರ್ಪಿತಂ
ಕೇಳ್ದ ಸವಿನುಡಿ ಕಿವಿಯ ಮುಖದಿಂದಲರ್ಪಿತಂ
ತಾಳ್ದಗಂಧಂ ನಾಸಿಕದ ಮುಖದೊಳರ್ಪಿತಂ
ಸೋಂಕಿದ ಮೃದುದ್ರವ್ಯವಂಗದಿಂದರ್ಪಿತಂ
ಮುಂಕೊಳಿಸಿ ನೆರೆದ ರುಚಿ ಮನದಿಂದವರ್ಪಿತಂ
ಆಗುತಿರೆ ನಡೆತಂದು ಕಾಂಚಾರದೊಳ್ಪೊಕ್ಕು
ರಾಗದಿಂ ನಿರ್ಮಳನದೀತೀರದೊಳ್ಮಿಕ್ಕು
ಮಗಮಗಿಪ ಮಲ್ಲಿಗೆಯ ಮಂಟಪದ ತಳದೊಳಗೆ
ಸೊಗಯಿಸುವ ನುಣ್ಬೆಳಗನುಗುಳ್ವ ತಣ್ಣೆಳಲೊಳಗೆ
ನುಣ್ಮಳಲದಿನ್ನೆಯೊಳ್ತಳಿರ ಹಸೆಯಂ ಹಾಸಿ
ಕಣ್ಮನವನಭವನತ್ತಲ್ನಿಲಿಸಿ ಕೈವೀಸಿ
ಬಾರಯ್ಯ ಬಾರ ಶಿವಭಕ್ತೈಕ ಬಂಧುವೇ
ಬಾರಯ್ಯ ಬಾರರಸ ಕಾರುಣ್ಯ ಸಿಂಧುವೇ
ಗುರುವೆ ವರಗುರುವೆ ಸದ್ಗುರುವೆ ಗುರುಲಿಂಗವೇ
ಭರದಲರ್ಚಿಪ ಜನದ ಮನದ ಸರ್ವಾಂಗವೇ
ಎಂದು ಪುಳಕಪ್ರತತಿ ನೆರೆವುತಿರೆ ಕರೆವುತಂ
ಅಂದು ಬಾಷ್ಪಾಂಬುಗಳು ಸುರಿವುತಿರೆ ಕರೆವುತಂ
ಸೆಜ್ಜೆಯೊಳಗಿರ್ದ ಶಿವಲಿಂಗಮಂ ಸಂಗಮಂ
ಸಜ್ಜನ ಸ್ನೇಹರಸ ಸಂಗಮಂ ಲಿಂಗಮಂ
ತೆಗೆದು ಕರತಳದೆ ತಿಳಿಯಗ್ಘಣಿಯನೀವುತಂ
ಸೊಗಯಿಸುತ್ತಂ ಮತ್ತೆ ಮತ್ತೆ ಕರೆದೋವುತಂ
ತಂದು ಸಿಂಹಾಸನದ ಮೇಲೆ ಬಿಜಯಂಗೆಯ್ಸಿ
ಸಂದಣಿಪ ಪುಳಕದಿಂ ಪೂರೈಸಿ ಹಾರೈಸಿ
ಪರಿಮಳದ ತಿರುಳೆನಿಪ ಮೊಲ್ಲೆ ಮಲ್ಲಿಗೆಗಳಂ
ಹರವರಿಯ ಕಂಪಿಡುವ ಸಂಪಗೆಯರಳ್ಗಳಂ
ಸಂಗಡಿಸಿ ಸಿಂಗರಿಸಿ ಹೊಂಗಿ ಹೊರೆಯೇರುತಂ
ಲಿಂಗಪೂಜೆಗಳೊಳಗೆ ಮನನಟ್ಟು ದಣಿವುತಂ
ಆಡಿ ನಡೆನೋಡಿ ಮಾತಾಡಿ ನಲಿದುಬ್ಬುತಂ
ಹಾಡಿ ತಣಿಯದೆ ಮತ್ತೆ ಹಾಡಿ ಮಿಗೆ ಕೊಬ್ಬುತಂ

ಪುಳಕಿಸುತೆ ಪುಟವೇರಿ ತವಕಿಸುತೆ ಮದವೇರಿ
ಎಳಸುತಂ ದಳವೇರಿ ಬಳಸುತಂ ಬಲವೇರಿ
ನುಡಿವುತಂ ಗದುಗದಿಸಿ ಬೆಮರುತಂ ಸಡಗರಿಸಿ
ನಡೆವುತಂ ಡೆಂಡಣಿಸಿ ಬೀಳುತಂ ತರಹರಿಸಿ
ಮೆಲ್ಲನೆಚ್ಚುತ್ತು ಶಿವಲಿಂಗಮಂ ನಡೆನೋಡಿ
ಲಲ್ಲೆಗರೆವುತ್ತೆ ಪರಮಸ್ನೇಹಮಂ ಮಾಡಿ
ಹಸಿದಯ್ಯ ಎನ್ನ ಜೀವದ ಜೀವವೇ ಎಂದು
ಉಸುರಸಂತೈಸುತೋವುತ್ತೆ ಹತ್ತಿರೆ ಬಂದು
ಜಂಬುಫಳ ಚೂತಫಳಮುಮನೊಲವಿನಿಂ ಕರಂ
ಇಂಬಿನಿಂದಾರೋಗಿಸಲ್ಕೊಟ್ಟನಂತರಂ
ತೂಪಿರಿದು ಕಾಪಿಟ್ಟು ಕಣ್ಗೊಳೊಳಗೊತ್ತುತಂ
ಭಾಪು ಭಾಗ್ಯವೆ ಎಂದು ಮುಂಡಾಡಿ ಪೆರ್ಚುತಂ
ಕರುಣಪ್ರಸಾದಮಂ ಪ್ರೇಮದಿಂ ಕೈಕೊಂಡು
ಹರಣ ಕಾರುಣ್ಯಮಂ ತಾನೊಚ್ಚತಂಗೊಂಡು

ಬಂದು ತೃಣಜಾಳಮಂ ಕೊಯ್ದೆತ್ತಿನೊಳು ಹೇರಿ
ಸಂದಣಿಪ ಪುಳಕಮಂ ತನ್ನ ಮೈಯೊಳು ಹೇರಿ
ನಡೆತಂದು ಚೋಳನ ತುರಂಗನಿಲಯದ ಮುಂದೆ
ಒಡನೆಯವರೋಪಾದಿಯೊಳು ನೂಂಕಿ ಭರದಿಂದೆ
ಬಳಲುತಂ ಬಂದು ನಿಜನಿಳಯದೊಳ್ಕುಳ್ಳಿರ್ದು
ತೊಳತೊಳಪ ಶಿವಲಿಂಗದತ್ತ ಚಿತ್ತಂ ಸಾರ್ದು
ಇರೆ ಬೋನಮಂ ಹಿಡಿದರಲ್ಲಿ ತಮ್ಮರಸಿಯರು
ಹರನಿತ್ತುದಂ ಭಕ್ತಿಯಿಂದ ಕಡುಬಡವೆಯರು
ಹಿಡಿಯಲುಳ್ಳುದುದನಮೃತದ ಸಮಾನಂ ಮಾಡಿ
ತಡೆಯದೆ ಶಿವಂಗೆ ಸುಖದಿಂದರ್ಪಿತಂ ಮಾಡಿ
ಲಿಂಗಪ್ರಸಾದಮಂ ಸಾದರಂ ಕೈಕೊಂಡು
ಜಂಗಮನಿಧಾನನೆನಿಪಂಗೆ ಸುಖವೆಡೆಗೊಂಡು
ಅತಿಭಕ್ತನತಿಗುಪ್ತನತಿಮಾನಿಯತಿ ಮೌನಿ
ಅತಿಯಾಪ್ತನತಿಯುಕ್ತನುರುತರ ಶಿವಧ್ಯಾನಿ
ಆರುವರಿಯರು ಭಕ್ತನೆಂದು ಚೆನ್ನಯ್ಯನಂ
ಮಾರಾರಿಯರಿದಿರ್ಪ ಭಕ್ತಿಸಂಪನ್ನನಂ
ಈ ತೆರದೊಳರುವತ್ತು ವತ್ಸರಂ ನಡೆವುತಿರೆ
ಭೂತಳದೊಳತಿಗುಪ್ತಪೂಜೆಗಳ್ನೆರೆವುತಿರೆ

ಹರನೊಲಿದು ಚೆನ್ನನಂ ಮರೆವೆನಿಳೆಯೊಳಗೆಂದು
ಪುರಹರಂ ಸಂತಸಂಬಡುತಿರುತ್ತಿರಲಂದು
 ಒಂದುದಿನವೆಂದಿನಂದದಲಿ ಹೊಲನಂ ಹೊಕ್ಕು
ಇಂದುಧರ ಪೂಜೆಯಂ ಮಾಡಿ ಹರುಷಂ ಮಿಕ್ಕು
ಆಡಿ ಹಾಡುತ್ತಲ್ಲಿ ಬೈಗುವರಮಿರುತಿರ್ದು
ನೋಡಿ ಭೋಂಕನೆ ಕಾಣುತೆಚ್ಚತ್ತು ಒಳಸಾರ್ದು
ಬೇಗದಿಂ ಪುಲ್ಗೊಯ್ದು ಬಯಿಲನೊಳ್ ಪೊರೆ ಹೇರಿ
ರಾಗದಿಂ ಗಳಗಳನೆ ನಡೆತರುತ್ತಂ ಮೀರಿ
ಕಂಪಣದ ತಾಣದೊಳು ಹುಲ್ಲನೊಲವಿಂ ನೂಂಕಿ
ಸೊಂಪೇರಿ ಚಿತ್ತಜಾರಿಯ ಚಿತ್ತಮಂ ಸೋಂಕಿ
ಮನೆಗೆ ಬಂದನುಮಿಸುತೆ ಕುಳ್ಳಿರ್ದು ನೆನೆವುತಿರೆ
ವನಿತೆ ತಂದಂಬಕಳಮಂ ಮೆಲ್ಲನಿಳಿಪುತಿರೆ
ಉಪ್ಪುಗಾಯಂ ಕೆಲದೊಳೊಪ್ಪಿ ಬಡಿಸುತ್ತುಮಿರೆ
ಕಪ್ಪರದೊಳಗೆ ಶಾಕಪಾಕಂಗಳೊಪ್ಪುತಿರೆ
ಲಿಂಗಾರ್ಪಿತಂ ಮಾಡಿ ಚೆನ್ನಯ್ಯನೊಲವಿಂದೆ
ಅಂಗವಿಸಿ ಲಿಂಗ ಪ್ರಸಾದಕ್ಕೆ ನಲವಿಂದೆ
ಮನಮುಟ್ಟಿ ಕೈಯಿಟ್ಟು ಮೊಗೆದನಾನಂದದಿಂ
ಮನವೊಲಿದು ಭಕ್ತಿರಸಮಂ ಮೊಗೆವ ಚಂದದಿಂ
ಮೊಗೆದು ಕೈಕೊಳುವಲ್ಲಿ ಸವಿ ಜಿಹ್ವೆಯಂ ಮುತ್ತಿ
ಬಗೆಯೊಳಾದರ್ಪಿತವನೊಡನೊಡನೆ ಕೈಯೆತ್ತಿ
ಮಧುರಾಮ್ಲರುಚಿಯಾಹ ಶಿವಲಿಂಗಮಂ ತಾಗೆ
ಸುಧೆಯ ಕಡುಸವಿಯಿಂದೆ ನೂರ್ಮಡಿಸಿ ಸವಿಯಾಗೆ
ಸವಿದು ತಣಿವೆಯ್ದಿಸದೆ ಗುರುಮೂರ್ತಿಯುರವಣಿಸಿ
ಸವಿಸವಿವುತಂಬಕಳವೆಲ್ಲಮಂ ಲವಲವಿಸಿ
ಕೊಂಡ ಹರನೊಡನೊಡನೆ ಚೆನ್ನನೊಡನೊಂದಾಗಿ
ಉಂಡನಭವಂ ಸ್ವರ್ಗಮರ್ತ್ಯಕ್ಕೆ ಪೊಸತಾಗಿ
ಒಂದು ಸುರಿಯೊಳಗೆ ಕೈವಂದುದೇ ಶಿವಪದಂ
ಮುಂದೆ ಸವಿದರ್ಪಿಸುವುದಕ್ಕಿಲ್ಲ ಘನಪದಂ
ಎಂದಂಜಿಕೊಂಡನಾ ಶಿವನಂಬಕಳಮುಮಂ
ಅಂದು ಶಿವನೊಡನುಂಡ ಚೆನ್ನನಂದುತ್ತಮಂ
ಭಾಪು ಭಾಗ್ಯವೆ ಚೆನ್ನನಿಂದಧಿಕರಿನ್ನುಂಟೆ
ಭಾಪು ಭಾಗ್ಯವೆ ಶಿವನ ಕಾರುಣ್ಯವಿನಿತುಂಟೆ

ಇಂತು ಶಿವನುಂ ಚೆನ್ನನುಂ ತಣಿವುತಿರಲಿತ್ತ
ಸಂತಸುಖದಿಂದೆ ಭಾಸ್ಕರನುದಯವಾಗುತ್ತ
ಇರೆ ನಿತ್ಯನೇಮಕ್ಕೆ ಚೋಳರಾಯಂ ಬಂದು
ಹರನಾಲಯಂಬೊಕ್ಕು ಕೈಮುಗಿವುತಂ ನಿಂದು
ಶಶಿಧರನ ವಾಮಭಾಗದೊಳಂದು ಕುಳ್ಳಿರ್ದು
ಪಶುಪತಿಯೆ ಶರಣೆನುತೆ ಸಂತೋಷಮಂ ತಾಳ್ದು
ಆಗಮಸ್ಥಾನಂಗಳೊಳು ವಿಭೂತಿಯನಿಟ್ಟು
ರಾಗದಿಂ ಪಂಚಮುಖನತ್ತ ಚಿತ್ತಂ ನಟ್ಟು
ರುದ್ರಾಕ್ಷಿಯಂ ತಾಳ್ದು ಚೋಳ ಸಂತೋಷದಿಂ
ರುದ್ರನಂ ನೋಡಿ ಹಿಗ್ಗುತ್ತಲಾನಂದದಿಂ
ದರುಶನ ಸ್ಪರುಶನಂಗಳನಕ್ಕರಿಂ ಮಾಡಿ
ಹರುಷದಿಂ ಲಿಂಗಪ್ರಸಾದಮಂ ತವೆ ಸೂಡಿ
ಭರದಿಂ ಪ್ರದಕ್ಷಿಣ ನಮಸ್ಕಾರಮಂ ಮಾಡಿ
ಪುರಹರನನಿಂದುಧರನಂ ನೇಹದಿಂ ನೋಡಿ
ನವವಸ್ತ್ರಮಂ ನೂತ್ನರತ್ನಂಗಳಂ ತರಿಸಿ
ನವ ನವಾಭರಣದಿಂ ಪೂಜೆಯನಲಂಕರಿಸಿ
ಹಾಡುತಂ ಸುಖವೇರಿಯಾಡುತಂ ಮದವೇರಿ
ನೋಡುತಂ ನಲವೇರಿ ಮಾಡುತಂ ದಳವೇರಿ
ಸುಖದೊಳಿರ್ಪನಿತಕ್ಕೆ ಸವೆದು ಬಂದುದು ಬೋನ
ಅಖಿಳ ರುಚಿನಿಚಯವಿಳಸಿತ ಶಾಕಸಂತಾನ
ಒಯ್ಯಾರದಿಂದೆ ಬರೆ ಭಕ್ತಚೋಳಂ ಕಂಡು
ಕಾಯವನು ಪುಳಕ[ಗಳು] ಮುಸುಕೆ ಚಿತ್ತಂಗೊಂಡು
ರನ್ನದಡ್ಡಣಿಗೆಗಳ ಮೇಲೆ ಬೆಳಗಂ ಕರೆವ
ಮುನ್ನೂರು ಹೊನ್ನ ಹರಿವಾಣಂಗಳಿಂ ಮೆರೆವ
ಕೆಲದ ಬಟ್ಟಲನಿರಿಸಿ ನಲಿನಲಿದು ಸಡಗರಿಸಿ
ಒಲವೆ ಎನ್ನಯ ಬಲವೆ ಛಲವೆ ಎಂದುತ್ಸವಿಸಿ
ದೇವಾನ್ನ ದಿವ್ಯಾನ್ನ ಅಮೃತಾನ್ನಮಂ ಬಡಿಸಿ
ಓವಿ ಸವಿ ಸಾಲಿಡುವ ಶಾಕಂಗಳಂ ಬಡಿಸಿ
ಹಪ್ಪಳಂ ಚಿಲುಪಾಲ ಘಟ್ಟಿಗಳನಲ್ಲಲ್ಲಿ
ತುಪ್ಪಮಂ ಕೆನೆಮೊಸರು ಸಕ್ಕರೆಯನಲ್ಲಲ್ಲಿ
ಒಪ್ಪುವಾ ಹಲ ಪತ್ರಶಾಕಂಗಳೊಪ್ಪುತಿರೆ
ಉಪ್ಪುಗಾಯಂ ಕೆಲದೊಳೊಪ್ಪಿ ಬಡಿಸುತ್ತಮಿರೆ
ಬಡಿಸಿ ಹೇರಸಾರುತಂ ಜವನಿಕೆಯನೋಸರಿಸಿ

ಮೃಡನೆಯಾರೋಗಿಸೆಂದೊಲವಿಂ ನಮಸ್ಕರಿಸಿ
ಜವನಿಕೆಗೆ ಕಿವಿಯೊಡ್ಡಿ ನೃಪನಾಲಿಸುತ್ತಮಿರೆ
ಸವಿವ ದನಿಗಳನೆಂದಿನಂತೆ ಹಾರುತ್ತಿರೆ
ಹರನಲ್ಲಿ ಏನುಮಂ ಮುಟ್ಟದಾರೈಸದಿರೆ
ಪರಿಕಿಸದೆ ಲೆಕ್ಕಿಸದೆ ಕಂಪಿಸದೆ ಸುಮ್ಮನಿರೆ
ತೊಟ್ಟನಾ ಜವನಿಕೆಯನೋಸರಿಸಿ ಕಾಣುತಂ
ಕೆಟ್ಟೆ ನಿಂತಾಯ್ತೆಂದೆನುತ್ತಲುರವಣಿಸುತಂ
ಕಿತ್ತಲಗನೆತ್ತಿಕೊಂಡಮಮ ಕೊರಳಿಗೆ ಹೂಡಿ
ಒತ್ತಿ ಹೂಣಿಸುತಿರಲು ಶಂಕರಂ ನಡೆನೋಡಿ
ಓಹೋ ವಿಚಾರವಿಲ್ಲದೆ ಇಂತು ಮಾಳ್ಪರೆ
ಆಹಾಹ ನಿನ್ನರಸುತನವೆನಗೆ ಮಾಳ್ಪರೆ
ಕಂಡಯ್ಯ ಚೋಳ ನಿನಗಿನಿತು ಸೈರಣೆಯಿಲ್ಲ
ಉಂಡೆವಾ ಚೆನ್ನನೊಡನೆಮಗಿಂದು ಹಸಿವಿಲ್ಲ
ಓತು ಮಾದರ ಚೆನ್ನನೊಡನುಂಡೆವೆಲೆ ಚೋಳ
ಕೂತು ಮಾದರ ಚೆನ್ನನೊಡನುಂಡೆವೆಲೆ ಚೋಳ
ಕೇಳಂಬಕಳದ ಸವಿಯದನೇನ ಬಣ್ಣಿಪೆಂ
ಚೋಳಾದಿಗಳ್ಪಡೆಯರದನೇನ ಬಣ್ಣಿಪೆಂ
ಪಾಕದಿಂದಾದ ವಸ್ತುಗಳದಕೆ ಪಡಿಯಿಲ್ಲ
ಲೋಕದೊಳು ನಾ ಕಾಣೆ ಪೇಳುವೊಡೆ ಪ್ರತಿಯಿಲ್ಲ
ದೇವಾನ್ನವಮೃತಾನ್ನವೆಂಬಿವಂ ಏಳಿಪುದು
ಭಾವಿಸುವಡಿನ್ನದಂ ಪೆಸರಿಡಲ್ಕೆನಗರಿದು
ಕ್ಷೀರಮಧುವಿನ ರುಚಿಗಳಂತದಕೆ ಪಡಿಯಲ್ಲ
ಹಾರಯಿಸಿ ಸಿಹಿಯುಳ್ಳ ಸಕ್ಕರೆಯು ಸರಿಯಲ್ಲ
ಚೂತಫಳ ಜಂಬುಫಳ ದ್ರಾಕ್ಷಫಳ ರುಚಿಯಲ್ಲ
ಓತು ಕೇಳುವೊಡುಳಿದ ಫಳದ ರುಚಿ ಸರಿಯಲ್ಲ

ಎಂದು ಶಿವನಾ ಲಿಂಗದೊಳ್ಪೊಗಲ್ಕಾಣುತಂ
ನಿಂದು ಚೋಳಂ ಕೌತುಕಂಬಟ್ಟು ನೋಡುತಂ
ಬೆರಗಾಗಿ ಬೆಂಡಾಗಿ ಚೆನ್ನನಂ ಚಿಂತಿಸುತೆ
ಕರೆಗೊರಲನಿಂತುಂಬನೇಯೆಂದು ಹುರುಡಿಸುತೆ
ಪುರಹರಂಗುಣಲಿತ್ತ ಶರಣನಂ ನೊಡುವೆಂ
ಹರುಷದಿಂ ನಾನವನ ಚರಣಮಂ ಸೂಡುವೆಂ

ನಡೆಯೆನುತ ಪೊರಮಟ್ಟಿನಲ್ಲಿ ಚೋಳಾಧಿಪಂ
ನಡೆತಪ್ಪ ಪರಿಜನಸ್ತೋಮದಿಂ ಭೂಮಿಪಂ
ನಡೆದರಿಯದಚ್ಚಸುಖಿ ಕಾಲ್ನಡೆಯೊಳೆಯ್ತರುತೆ
ಎಡಬಲದ ಮಕುಟವರ್ಧನರೊಳಗೆ ನಡೆತರುತೆ
ಚೆನ್ನನಂ ನೋಡುವಾತುರ ಚಿತ್ತದೊಳ್ಕವಿದು
ತನ್ನ ಮನದೊಳಗೆ ಚೆನ್ನನ ಮೂರ್ತಿಯಿಡಿದಿಡಿದು
ನಿಂದರಂ ನೆರೆದರಂ ಚೆನ್ನನಂ ಕೇಳುತಂ
ಬಂದರಂ ಸಾರ್ದರಂ ಚೆನ್ನನಂ ಕೇಳುತಂ
ಸಕಲಗುಣಜಲಧಿ ಚೆನ್ನಯ್ಯನಂ ಕಂಡಿರೇ
ಅಕಳಂಕಚರಿತ ಚೆನ್ನಯ್ಯನಂ ಕಂಡಿರೇ
ಎನ್ನ ಗತಿಯೆನ್ನಮತಿ ಚೆನ್ನನಂ ಕಂಡಿರೇ
ಎನ್ನ ನಿಧಿಯೆನ್ನ ಸುಧೆ ಚೆನ್ನನಂ ಕಂಡಿರೇ
ಶಿವನಸದ್ಭಕ್ತಿಸಂಪನ್ನನಂ ಚೆನ್ನನಂ
ಶಿವನಂತರಂಗದೊಳಭಿನ್ನಂ ಚೆನ್ನನಂ
ಗುರುಲಿಂಗದೊಡನುಂಡ ಚೆನ್ನನಂ ಕಾಣಿರೆ
ಪುರಹರಂಗುಣಲಿತ್ತ ಚೆನ್ನನಂ ಕಾಣಿರೆ
ನಲಿದು ಹರನೊಡನುಂಡು ರಂಜಿಸುವ ಚೆನ್ನನಂ
ಸಲೆ ದುರಿತಕುಲವ ಭಂಜಿಸುವನಂ ಚೆನ್ನನಂ
ಹರನಂಫ್ರಿಗೆರಗಿರ್ದ ಚೆನ್ನನಂ ಕಂಡಿರೇ
ವರವ ಕುಡಲೆಂದಿರ್ದ ಚೆನ್ನನಂ ಕಂಡಿರೇ
ಹರಿಯಜರ ಪರವಿಗಳನೇಳಿಸುವ ಚೆನ್ನನಂ
ಧರಣಿಯಂ ಶಾಂತಿಯಿಂ ಪಾಲಿಸುವ ಚೆನ್ನನಂ
ತೋರಿರೇ ಚಂದ್ರಮೌಳಿಯ ಭಕ್ತ ಚೆನ್ನನಂ
ತೋರಿರೇ ಷಡ್ವರ್ಣಕರ್ಣನಂ ಚೆನ್ನನಂ
ಚೆನ್ನನಂ ತೋರಿಯೆನ್ನಂ ಕಾಯ್ದುಕೊಳ್ಳಿರೇ
ಚೆನ್ನಯ್ಯನೆನ್ನಯ್ಯನಿರ್ದೆಡೆಯನರುಪಿರೇ
ಅಯ್ಯೋ ಮಹಾದೇವ ಆಪೊತ್ತು ಕಾಣ್ಬೆನೊ
ಅಯ್ಯೋ ಪದದ್ವಯವನೆಂದಪ್ಪಿ ಕೊಂಬೆನೊ
ಎಂದು ಚಿಂತಿಸುತಂ ಸಮೀಪಕ್ಕೆ ಬರುತಮಿರೆ
ನಿಂದಲ್ಲಿ ಚಾರರಂ ದೆಸೆದೆಸೆಗೆ ಕಳುಪುತಿರೆ
ಇರೆ ಮುಂದೆ ಪಡೆಯರರು ಪರಿದರಸುತಂ ಬಂದು
ಹಿರಿಯ ಕೇರಿಯ ಕಾಣುತುರವಣಿಸುತಂ ನಿಂದು

ಚೆನ್ನಯ್ಯನಿರ್ದ ಮನೆಯಾವುದೆಂದರಸುತಿರೆ
ಚೆನ್ನಯ್ಯನಿರ್ಪ ಗುಡಿಸಿಲಿದೆಯೆಂದು ತೋರುತಿರೆ
ಒಳಗೆ ಚೆನ್ನಯ್ಯನುರೆ ಕಂದುತಂ ಕುಂದುತಂ
ಘಳಿವಡರಿದೇನೆಂದು ನೋಡುತಂ ಬಾಡುತಂ
ಅರಮನೆಯ ಚಾರರೇಕಾನೇಕೆ ಶಂಕರಾ
ಅರಸನೇಕೆನ್ನ ಮನೆಯೇಕೆ ಶಶಿಶೇಖರಾ
ಭಕ್ತನೆಂದರಿಯದಿರ್ದಡೆ ಲೇಸು ಬರ್ದುಕುವೆಂ
ಭಕ್ತನೆಂದರಿದ ಬಳಿಕಾನೆಂತು ಬರ್ದುಕುವೆಂ
ಶಿವ ಶಿವ ಮಹಾದೇವ ಭವನೆ ಏನಪ್ಪುದೋ
ಭವನೆ ಬಲ್ಲಂ ವಿಚಾರಿಪ್ಪೊಡೇನಪ್ಪುದೋ
ಅವಿಚಾರದಿಂದಿಂತು ಮಾಳ್ಪರೇ ಶಂಕರಾ
ಭವನೆ ಬಲ್ಲಡೆಯಿಂತು ಮಾಳ್ಪರೇ ಹರಹರಾ

ಎನುತಮಿರೆ ಬಂದು ಗುಡಿಲಂ ಸುತ್ತಿ ಮುತ್ತುತಂ
ತನತನಗೆ ಜಯ ಜೀಯಯೆನುತೆ ಕೈಮುಗಿವುತಂ
ಇರೆ ಚೋಳರಾಜನತಿ ಭಕ್ತಿಯಿಂ ಬರುತಿರ್ದ
ಅರೆರೆ ಸಮ್ಯಜ್ಞಾನಿ ಸತ್ಯನಿಧಿ ಬರುತಿರ್ದ
ಎಡಬಲದಲುಗ್ಘಡಿಪ ರಾಜಪುತ್ರರ ನಡುವೆ
ಗಡಣದಿಂದೆಯ್ತಪ್ಪ ಚೋಳಕುವರರ ನಡುವೆ
ಗಳಗಳನೆ ನಡೆತಂದು ಚೆನ್ನಯ್ಯನಂ ಕಂಡು
ಬಳಸಿ ಗಣಪದವಿ ಬಂದೆಳಸಿರ್ದನಂ ಕಂಡು
ಭಕ್ತಿ ಗುಡಸಿದ ಗುಡಿಸಿಲಲ್ಲಿರ್ದನಂ ಕಂಡು
ಮುಕ್ತಿ ಮೂವಡಿಸಿ ಮುಂದಡಸಿರ್ದನಂ ಕಂಡು
ಪುಳಕಿಸುತ ಪುಟವೇಳುತುರ್ಬುತಂ ಕೊರ್ಬುತಂ
ಇಳಿವಶ್ರುಜಲದಿಂದೆ ಮೂಡುತಂ ಮುಳುಗುತಂ
ಎನ್ನೊಡೆಯನಿದನಿದನೆ ಚೆನ್ನಯ್ಯನೆಂದೆನುತೆ
ಎನ್ನ ಗುರುವಿದನಿದನೆ ಚೆನ್ನಯ್ಯನೆಂದೆನುತೆ
ಎನ್ನ ಸುಧೆಯಿದನಿದನೆ ಚೆನ್ನಯ್ಯನೆಂದೆನುತೆ
ಎನ್ನ ನಿಧಿಯಿದನಿದನೆ ಚೆನ್ನಯ್ಯನೆಂದೆನುತೆ
ಇಳುಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳು
ತೊಳತೊಳಗೆ ಮಣಿಮಕುಟಕಾಂತಿಪದ ಭೂಮಿಯೊಳು
ಪಾದರಜಮಂ ಕಣ್ಗಳೊಳಗೊತ್ತಿ ತೀವುತಿರೆ
ಪಾದಮಂ ಬಲ್ಪಿಂದೆ ಬಿಡೆನೆಂದು ಹೆಣಗುತಿರೆ

ಏನಯ್ಯ ಚೋಳ ನೃಪನೀನಿಂತು ಬರ್ಪರೆ
ಭಾನುಕುಲದರ್ಪಣನೆ ನೀನಿಂತು ಬರ್ಪರೆ
ಎನ್ನ ಕುಲಮಂ ನೋಡದಿಂತು ಬರ್ಪರೆ ಚೋಳ
ಎನ್ನ ಜಾತಿಯನರಿಯದಿಂತು ಮಾಳ್ಪರೆ ಚೋಳ
ರಾಜ್ಯಾಂತರಂ ನರಕವೆಂಬುದಿಲ್ಲದ ಚೋಳ
ಪೂಜ್ಯನಮರಾಳಿಯೊಳಗೆನಿಸಿ ಬರ್ದುಕುವ ಚೋಳ
ಎನುತೆ ಗದುಗದಿಸಿ ಕಂಪಿಸಿ ಕಾಲ ಬಿಡು ಚೋಳ
ನಿನಗೆ ನಿನ್ನಾಣೆ ಯೆನ್ನಾಣೆ ಬಿಡು ಬಿಡು ಚೋಳ
ಎನೆ ದೇವ ದೇವನೊಲಿದವನ ಕುಲ ಸತ್ಕುಲಂ
ಘನಮಹಿಮನೊಲಿದ ಜಾತಿಯೆ ಜಾತಿ ನಿರ್ಮಲಂ
ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ
ಸರ್ವಜ್ಞ ನಿಮ್ಮ ಕೆರ್ಪಿಂಗೆನ್ನ ಶಿರ ಸರಿಯೆ
ಬಿಡೆನಯ್ಯ ನಿಮ್ಮ ಪಾದವ ಬಿಟ್ಟು ಬಾಳ್ವೆನೇ
ಮೃಡಮೂರ್ತಿಯಂ ಬಿಟ್ಟು ಸಂಸೃತಿಯೊಳಾಳ್ವೆನೇ
ಪಲವು ಮಾತೇಕೆ ಶಿವನಲ್ಲಿಗೈತನ್ನಿರೇ
ಕುಲಗೋತ್ರದಿರವನೀಶ್ವರನೊಡನೆ ಪೇಳಿರೇ

ನಡೆಯಿಮೆಂದಲ್ಲಿ ಗಜಮಸ್ತಕವನೇರಿಸುತೆ
ಗುಡಿಗಟ್ಟವೇಳೆಂದು ಪುರದೊಳಗೆ ಸಾರಿಸುತೆ
ಮುಂದೆ ತುರಗಮನೇರಿ ಕೆಲಬಲಕೆ ತೋರುತಂ
ಮಂದ್ಯೆಪ ಪುಳಕದಿಂ ಬೆಳೆದು ದಳವೇರುತಂ
ಚೆನ್ನಯ್ಯನಂ ನೋಡಿ ನೋಡಿ ಕೈಮುಗಿವುತಂ
ಉನ್ನತ ಜ್ಞಾನಿ ಚೋಳಂ ಹೆಚ್ಚಿ ಹಿಗ್ಗುತಂ
ನಡೆತಂದು ಮೃಡನಾಲಯದ ಮುಂದೆ ನಿಂದಿರ್ದು
ಕಡುನೇಹದಿಂ ಗಜದ ಮಗ್ಗುಲತ್ತಂ ಸಾರ್ದು
ಆನೆಯಿಂದಿಳುಹಿ ಮೆಲ್ಲನೆ ಬಂದು ಕೈಗೊಟ್ಟು
ದಾನನಿಧಿ ಚೆನ್ನನಂ ಸಂತಸದೆ ಮುಂತಿಟ್ಟು
ಒಡಗೊಂಡು ಬಂದೊಳಗೆ ಶಿವಲಿಂಗಮಂ ತೋರೆ
ಮೃಡನೊಡನೆ ತಾರ್ಕಣೆಯ ಕೊಡುತೆ ಚೋಳಂ ತೋರೆ
ಭಕ್ತಜನಕಲಹಲೀಲಾಲೋಲನಂ ತೋರೆ
ಭಕ್ತಜನವನಧಿವರ್ಧನಚಂದ್ರನಂ ತೋರೆ
ಕಂಡು ಚೆನ್ನಯ್ಯನಭವಂಗೆ ಕಡು ಮುಳಿವುತಂ
ಕಂಡಯ್ಯ ನೀನಿಂತು ದೂರುವರೆ ಉನ್ನತಂ

ಚೋಳನೀಂ ಪಿಡಿತರಿಸಿದೇಂ ತಪ್ಪ ಮಾಡಿದೆನೆ
ಹೇಳಯ್ಯ ನಿಮ್ಮಲ್ಲಿ ಪದವಿಯಂ ಬೇಡಿದೆನೆ
ಅರಿಯದಂಬಲಿಯನರ್ಪಿಸಿದೊಡಿಂತಿರಿವರೆ
ಹೆರೆಸೂಡಿದನೆ ತೋರಿ ಮಾರಿ ನೆರೆ ದೂರುವರೆ
ಮೇದಿನಿಗೆ ಬೀರಿ ಗರುವಾದುದೆನ್ನಯ್ಯ ಭಕ್ತಿ
ವಾದಕ್ಕೆ ಹರಲೆಯಂ ತಂದಿಕ್ಕಿತೀ ಭಕ್ತಿ
ಇನ್ನಿಳೆಯೊಳಿರೆನೆನುತ್ತತಿಭಾಷೆಯಂ ಮಾಡೆ
ಚೆನ್ನಯ್ಯನಂದಲಗನೆತ್ತಿ ಕೊರಲಿಗೆ ಹೂಡೆ
ಶಿವಲಿಂಗದಿಂದೆ ಶಿವನೈತಂದು ನೆರೆ ಪಿಡಿದು
ಅವಿಚಾರದಿಂದಿಂತು ಮಾಳ್ಪರೇ ನೀನರಿದು
ಓಹೋ ವಿಚಾರವಿಲ್ಲದೆ ಇಂತು ಮಾಳ್ಪರೇ
ಆಹಾಹ ಚೆನ್ನಯ್ಯ ಮೂರ್ಖತನ ಮಾಳ್ಪರೇ
ಮರೆದು ಚೋಳಂಗೆ ಪೇಳ್ದಡೆ ಕೋಪವಿನಿತೇಕೆ
ಅರಿಯದೆಂದೆವು ಚೆನ್ನ ಸೈರಿಸಾಸುರವೇಕೆ
ಎಂದು ಮೃಡಮೂರ್ತಿ ಚೆನ್ನಂಗೆ ನೇಹವ ನುಡಿದು
ನಿಂದು ಚೋಳಂಗೆ ಚೆನ್ನನ ತೋರುತಂ ಬಂದು
ನೋಡಯ್ಯ ಚೋಳ ಗುಪ್ತಾರ್ಚನೆಯ ಮಾನಿಯಂ
ಆಡಂಬರವನುಳಿದ ಭಕ್ತಿಯಭಿಮಾಮನಿಯಂ
ಭಾಪು ಮಾದರ ಚೆನ್ನ ಪೂತು ಮಾದರ ಚೆನ್ನ
ಸೋಪಾಧಿಕಂ ಪುಗದ ಶೈವ ಮಾದರ ಚೆನ್ನ
ಗುಪ್ತಪೂಜೆಯ ಚೆನ್ನ ಗುರುತರಾಜ್ಞೆಯ ಚೆನ್ನ
ಆಪ್ತಗುಣನಿಧಿ ಚೆನ್ನ ಎನ್ನ ಭಕ್ತಿಯ ಚೆನ್ನ

ಎಂದು ಕೊಂಡಾಡುತಿರೆ ಹೂಮಳೆಗಳೆರಗಿದವು
ನಿಂದು ದುಂದುಭಿಕುಳಂ ಗಗನದೊಳ್ಮೊಳಗಿದವು
ನಂದೀಶ್ವರಾದಿ ಗಣಸಂದೋಹದೊಡನೊಡನೆ
ಬಂದುದಾಗಳೆ ಪುಷ್ಪಕಂ ಕಾಂತಿಯೊಡನೊಡನೆ
ಬಂದ ಪುಷ್ಪಕದೊಳಗೆ ಚೆನ್ನನಂ ಕುಳ್ಳಿರಿಸಿ
ಇಂದುಧರನಾನಂದದಿಂದೊಲಿದು ಸಡಗರಿಸಿ
ಚೋಳನಂ ಬೀಳ್ಕೊಟ್ಟು ನೆಗದನಾಕಾಸಕ್ಕೆ
ಶೂಲಧರನಹಿಕಟಕನೆಯ್ದಿದಂ ನಿಮಿಷಕ್ಕೆ
ಕೈಲಾಸಮಂ ಪೊಕ್ಕು ಸಿಂಹಾಸನಮನೇರಿ
ಶೈಲಜೆಗೆ ಚೆನ್ನನಂ ಸಂತೋಷದಿಂ ತೋರಿ

ಚೆನ್ನಂಗೆ ಗಣಪದವಿಯಂ ಕೊಟ್ಟು ರಾಗದಿಂ
ಪನ್ನಗಾಭರಣನೊಪ್ಪಿದನಖಿಳ ಭೋಗದಿಂ
ಗುರುವೊಪ್ಪಿದಂ ಗುರುತರಜ್ಞಾನಿಯೊಪ್ಪಿದಂ
ಪರಮನೊಪ್ಪಿದನತುಳವರ ಹಸ್ತನೊಪ್ಪಿದಂ ೩೪೦
ಕುಲತಿಲಕನೊಪ್ಪಿದಂ ಕುಲಹೀನನೊಪ್ಪಿದಂ
ಉಲಿವ ವೇದಂಗಳ ಶಿಖಾರತ್ನನೊಪ್ಪಿದಂ
ಸಲೆ ಹೊಗಳ್ವ ಶರಣರ ಸುಖಾಂಭೋಧಿಯೊಪ್ಪಿದಂ
ಚೆನ್ನನ ಮಹಾನಿಧಿ ಮಹಾದಾನಿಯೊಪ್ಪಿದಂ
ಚೆನ್ನ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ ೩೪೬

ಚೆನ್ನನ ನಿಧಿ ಚೆನ್ನನ ಸುಧೆ
ಚೆನ್ನನ ಸಕಳಾಯು ಚೆನ್ನನಮೃತಸಮುದ್ರಂ ।
ಚೆನ್ನಂ ರಕ್ಷಿಸುಗೆನ್ನಂ
ಚೆನ್ನನ ಸುತನೆಂದು ಹಂಪೆಯ ವಿರೂಪಾಕ್ಷಂ ॥

❖❖

# ೧೧. ಮನುಚೋಳನ ರಗಳೆ

ಸುಜನಸ್ತುತ ಮನುಚೋಳನ
ಗಜಬಜಿಸದೆ ಧರ್ಮನೀತಿಯಂ ನೆನೆದಾಗಳ್ ।
ನಿಜಸುತನ ಮೇಲೆ ರಥಮಂ
ಪರಿಯಿಸೆ ನೆರೆ ಮೆರೆದನೆಮ್ಮ ಪಂಪಾನಾಥಂ ॥

ಶ್ರೀವಸುಮತೀತಿಲಕಮಾಗಿ ರಂಜಿಸುತಿರ್ಪ
ಭಾವುಕರ ಕಣ್ಗೆ ತಾನಾಶ್ಚರ್ಯಮಾಗಿರ್ಪ
ಕಮಳಾಲಯಾಖ್ಯಪುರವೆಸೆದಿರ್ಪುದದು ನೋಡೆ
ವಿಮಳ ಚೋಳೋರ್ವರೆಯ ಭಾಗ್ಯದಂದದಿ ಕೂಡೆ
ಶೈವಾಗಮಜ್ಞರಿಂ ವೈರಾಗ್ಯಯುಕ್ತರಿಂ
ಆವಾಗಳುಂ ಮೆರೆವುದಭವ ಸದ್ಭಕ್ತರಿಂ
ಏನೆಂಬೆನದರ ಪೆಂಪಂ ಶೂಲಿಯೇ ಬಲ್ಲ
ಮಾನವರ ವಾಙ್ಮನಂಗಳಿಗೆ ಗೋಚರಮಲ್ಲ
ಶೇಷನಾರಂ ಬಣ್ಣಿಸಲ್ಕದರಮಹಿಮೆಯಂ
ದೂಷಣಂಗಳ್ದೂರಮಾದದರ ಪೆರ್ಮೆಯಂ
ಅಂತಪ್ಪ ಪುರವನಾಳ್ವಂ ಧರ್ಮಪಾಲಕಂ
ಸಂತಸಂಗೂಡಿ ಮನವೆಂಬ ಭೂಪಾಲಕಂ
ವೇದೋಕ್ತಮಾರ್ಗದಿಂ ಶಿವನನರ್ಚಿಸುತಿರ್ಪ
ಮೋದದಿಂ ಭಕ್ತರ್ಗೆ ಬೆಸಕೆಯ್ವುತಿರುತಿರ್ಪ
ಆತನುರು ತೇಜಕ್ಕೆ ಸೆಡೆದು ಪರನೃಪರಾಗ
ನೂತನ ಸುವಸ್ತುಗಳನುರೆ ಪಿಡಿದು ತಂದಾಗ
ಬಾಗಿಲೊಳ್ ನಿಂದಿರ್ಪರವಸರವ ನೋಡುತ್ತೆ
ಬೇಗದಿಂ ಕಾಣದೆ ಮನಂ ನೊಂದು ಬೇವುತ್ತೆ
ಇರುತಿರ್ಪ ಕರ್ಣಾಟಲಾಟಾಂಧ್ರ ಭೂಪರಂ

ಕರುಣದಿಂದೀಕ್ಷಿಸುತನಭವ ಸತ್ಕಿಂಕರಂ
ಮೆರೆದಿರ್ದನತ್ಯಧಿಕ ಕೀರ್ತಿಸಂಯುತನಾಗಿ
ಕರೆಕಂಠಸದ್ಭಕ್ತಪರಿಚರ್ಯರತನಾಗಿ

ಇರಲಾ ನೃಪಂಗೆ ಶ್ರೀರತ್ನಮಾಲಾಖ್ಯದಿಂ
ಪಿರಿದೊಪ್ಪುತಿಪ್ಪಬಲೆ ವಧುವಾಗೆ ರಾಗದಿಂ
ಆಕೆಯುದರದೊಳು ಪುಟ್ಟಿದನೊರ್ವ ನಂದನಂ
ಬೇಕಾದ ಬಯಕೆಗಳನೀವ ಹರಿಚಂದನಂ
ಸೋಮಧರಕೃಪೆಯಿಂದೆ ಜನಿಸಿರ್ದ ಬಾಲಂಗೆ
ನಾಮವಾಗಲ್ಕಚಂಚಲನೆಂಬುದಾತಂಗೆ
ಬೆಳೆವುತಿರ್ದಂ ದಿನದಿನಕ್ಕೆ ತಾಂ ಪೊಸತಾಗಿ
ನಳನಳಿಸುವೆಳೆಯ ಶಶಿಯಂದದಿಂ ಸೈತಾಗಿ
ಕರಿತುರಗ ವರರಥಾರೋಹವಿದ್ಯಂಗಳಂ
ಚರಿತದಿಂ ಕಲ್ತು ತಾನಖಿಳ ಸತ್ಕಳೆಗಳಂ
ಯೌವನೋಚಿತವಾದ ಕಾಲವದು ಬರುತಿರಲು
ಯೌವರಾಜ್ಯಾಭಿಷವಕರಸು ಚಿಂತಿಸುತಿರಲು
ಓರಗೆಯ ರಾಜಪುತ್ರರ ಗಡಣದೊಳ್ಕೂಡಿ
ಚಾರುತರ ಭೋಗಸುಖಶರಧಿಯೊಳ್ತೇಂಕಾಡಿ

ಇರುತಿರಲ್ಕೊಂದು ದೆವಸಂ ಪರಮ ಹರುಷದಿಂ
ವರರಾಜಭವನದಿಂ ಪೊರಮಟ್ಟು ಬೇಗದಿಂ
ರಥದ ಮೇಲೇರಿ ಪುರವೀದಿಯೊಳ್ಬರುತಮಿರೆ
ರಥದುಭಯ ಪಕ್ಕದೊಳ್ವಂದಿಗಳ್ಪೊಗಳುತಿರೆ
ಗದ್ಯಪದ್ಯಂಗಳಂ ಮಾಗಧರ್ಪಠಿಸುತಿರೆ
ಹೃದ್ಯ ಬಿರುದಾವಳಿಗಳಂ ಸೂತರೋದುತಿರೆ
ಬರುತಿರ್ಪ ಸೌಂದರಿಯ ಕಂದರ್ಪನಂ ನೋಡಿ
ಪುರಕಾಂತೆಯರ್ತಮ್ಮ ಮರೆದೀಕ್ಷಿಸಲ್ಕೂಡಿ
ಭೋರೆಂದು ಮೊರೆವ ನಾನಾವಾದ್ಯರವವುಣ್ಮೆ
ವಾರಾಂಗನಾ ಲಾಸ್ಯಮಲ್ಲಲ್ಲಿಗದು ಪೊಣ್ಮೆ
ಗುಣಿಯಾದ ತತ್ಕುಮಾರಕನನತಿ ನೇಹದಿಂ
ಮಣಿವೀದಿಧರಿಸಿ ತಾ ಪ್ರತಿಬಿಂಬಲಕ್ಷ್ಯದಿಂ
ಬರುತಿರ್ದನಮಮ ಕುಲವರ್ಧನನಚಂಚಲಂ
ಬರುತಿರ್ದನರರೆ ಮನುವಿನ ಸುತನಚಂಚಲಂ

ಇಂತು ಬರೆವರೆ ಮನುವಿನಾರ್ದ್ರ ಭಾವವನರಿಯ
ಲಂತಂತೆ ಧರ್ಮಮೇ ಗೋರೂಪಮದು ತಳೆಯ
ಲದು ತಾನೆ ಕರುವಿನೊಡಗೂಡಿ ಸುಳಿದಾಡುತಿರೆ
ಮುದದಿಂದೆ ಕರು ಪಾರಿ ಪಾರಿ ಪರಿದಾಡುತಿರೆ
ಕಾಣಬಾರದ ತೆರದೊಳಾ ವೀದಿಯಂ ಪುಗಲ್
ಮಾಣಿಸಲ್ಬಲ್ಲರಾರ್ವಿಧಿಲಿಖಿತವಂತಿರಲ್
ಶಿವ ಶಿವ ಮಹಾದೇವ ನುಡಿಯಲೆಡೆಯಿಲ್ಲೆನಿಸಿ
ತವಕದಿಂ ಕರು ರಥದ ಮಾರ್ಗದೊಳು ಸಂಚಲಿಸಿ
ರಥದ ಗಾಲಿಯ ಕೆಳಗೆ ಬಿರ್ದು ಜೀವಂಗಳೆಯೆ
ಮಥಿಸಿದಂದದಿ ದೇಹಮದು ಚೂರ್ಣಮಾಗಳಿಯೆ
ಕರುವಳಿದ ತಾಣಕ್ಕೆ ಧೇನು ಮೆಲ್ಲನೆ ಬಂದು
ತರಿಸಂದು ಮೂಸಿನೋಡುತೆ ತಿರುಗುತಂ ನಿಂದು
ಒರಳುವುದು ಬಾಯ್ಬಿಡುತೆ ಭೂತಳದೊಳೊರವುದು
ಬರಿದೆ ಗಳಗಳನೆ ಪೋಪುದು ಮತ್ತೆ ತಿರುಗುವುದು
ಕಿಗ್ಗಣ್ಣಿನಿಂ ಕರುವ ನೋಡಿ ಮೊಗವೆತ್ತುತಂ
ಅಗ್ಗದ ಜನಂಗಳಿಗೆ ದೈನ್ಯಮಂ ಕರೆವುತಂ
ಮುಚ್ಚಿದಕ್ಷಿಗಳೆಳಲ್ವ ಕಿವಿಗಳುರೆ ಕುಸಿವ ಸಲೆ
ಅಚ್ಚಿಗಂಗೊಂಡ ಭಾವಂ ಬೀರಲಿಂತು ಸಲೆ
ತರಗೆಲೆಯದಾಗ ಕಿರುಕೆನೆ ಕರುವ ನೋಡುವುದು
ಕರೆಗೊರಲಭಕ್ತರಂ ಕಂಡು ನೆರೆ ಬಾಡುವುದು
ಶೋಕಮೇ ಗೋರೂಪಮಾದುದೋ ಪೇಳೆನಲು
ಮೂಕದೈನ್ಯಕ್ಕೆ ಕೋಡುಗಳು ಪುಟ್ಟಿದವೆನಲು
ಅನುತಾಪಗುಣವದಂಬಾಯೆನಲು ಕಲಿತುದೊ
ಅನುಪಿತಮದಾದಿಗೀರೆರಡು ಪದಮಾದುದೊ

ಇಂತೆಂಬ ಜನದ ಬಗೆಗೆಡೆಯಾಗುತಿರೆ ಧೇನು
ಮುಂತೆ ಶೋಕಾಂಧಕಾರದೊಳು ಮುಳುಗಿರೆ ಧೇನು
ಅಂತದಂ ರಾಜಪುತ್ರಂ ಕಂಡು ಬೆರಗಾಗಿ
ಸಂತಸಂ ಪೆರಪಿಂಗಿ ಹೊಯಿವಡೆದ ತೆರನಾಗಿ
ಮಿಕ್ಕು ಮೀರುವ ದುಃಖ ತಲೆಗೇರಿ ಮೈಮರೆದು
ಬಿಕ್ಕುತಂ ಸೆರೆ ಬಿಗಿಯೆ ನುಡಿಯನಾಗಳೆ ತೊರೆದು
ಕಣ್ಣೆರಡನುರೆ ಮುಚ್ಚಿ ಮೂರ್ಛೆಯೊಳು ನೆರೆ ಸಂದು
ಸಣ್ಣ ಸುಣ್ಣದ ಮಾಳ್ಕೆಯಿಂ ಬೆದ ಬೆದನೆ ಬೆಂದು

ಆವಗೆಯ ಕಿಚ್ಚಿನಂತೊಳಗೆ ಶೋಕಂ ಸುತ್ತಿ
ಭಾವಮಂ ಬರಿಕೈವುತಂ ಚಿತ್ತಮಂ ಮುತ್ತಿ
ಮುಂದಿರ್ದ ಗೋವ ನೋಡುತೆ ತಂದೆಯಂ ನೆನೆವ
ನಂದು ನಾನಾಧರ್ಮಸೂಕ್ಷ್ಮಮಂ ಮಿಗೆ ನೆನೆವ
ಇದಕೆ ಪ್ರಾಯಶ್ಚಿತ್ತವಿಲ್ಲಾದಡಂ ಪೋಗಿ
ಸದಮಳಜ್ಞಾನಿಗಳಿಗಿದನುಸುರಿ ಸೈತಾಗಿ
ಆವರೆಂತು ಪೇಳ್ವರಂತೆ ಗೈವೆನಾನೆಂದು
ಶಿವಪಾದಮಂ ನೆನೆದು ತಳುವಿಲ್ಲದೆಯ್ತಂದು
ಗಜಬಜಿಸುತಂ ತಂದೆಗರುಪದೆ ಮನಂ ಮಿಗಲು
ಗಜಚರ್ಮಧರಭಕ್ತ ಸಭೆಯಲ್ಲಿಗೆಯ್ತರಲು
ಇತ್ತಲಾಧೇನು ಬಿಸುಸುಯ್ವುತಂ ಮಿಗೆ ನೊಂದು
ಸತ್ತಿದ್ದ ಕರುವನೀಕ್ಷಿಸಿ ದುಃಖದೊಳ್ ಸಂದು
ಬೆರಗಾಗಿಪುರಜನಮದೆವೆಯಿಕ್ಕದೀಕ್ಷಿಸಲು
ನೆರೆ ಮತ್ತೆ ಗತಿಯಿಲ್ಲದದ ನೋಡುತಂ ನಿಲಲು
ಮೆಲ್ಲ ಮೆಲ್ಲನೆ ರಾಜಭವನದ ದ್ವಾರಮಂ
ನಿಲ್ಲದೆಯ್ತಂದು ನಿಲುತಂ ತನ್ನ ದುಃಖಮಂ
ಅರಸಂಗೆ ಸೂಚಿಸಲ್ಕಾಜ್ಞಾನ ಸುಘಂಟೆಯಂ
ವರಧೇನು ಶೃಂಗದಿಂ ಬಾಜಿಸುತೆ ಘಂಟೆಯಂ
ಬಾಜಿಸಲ್ಕುಣ್ಮಿತ್ತು ನಾದ ಪರಪ ಸ್ವನಮೊ
ಸೋಜಿಗಂ ಮಿಗೆ ಕುಮಾರನ ಮೃತ್ಯುರಾಗಮೊ
ಕಾಲಮಹಿಷನ ಕಂಠ ಘಂಟಾನಿನಾದಮೊ
ಮೇಲಣಪವಾದದುರು ಭೇರೀವಿರಾವದೊ
ಎಂದೆಂಬ ಬಗೆಗೆ ನೆಲೆಯಾದ ಘಂಟಾನಾದ
ಅಂದು ನೃಪಕರ್ಣವಂ ತೀವಿತಂತಾ ನಾದ

ಏನೆಂಬೆನದ ಕೇಳಿ ಸಿಂಹಾಸನಮನಿಳಿದು
ತಾನೇ ಬರುತ್ತಿರಲು ದ್ವಾರಪಾಲಕರರಿದು
ಕೈಮುಗಿದು ಭೂಪಂಗೆ ನಿಶ್ಚಯವನುಸುರಿದರು
ಸೋಮಧರ ಪಾದ ಭಕ್ತಂಗೆ ನೆರೆ ಪೇಳಿದರು
ದೇವ ಬಿನ್ನಪವೊಂದು ಗೋವಾರ್ತದಿಂ ಬಂದು
ನಾವರಿಯೆವೀ ಘಂಟೆಯಂ ಬಾಜಿಸಿತ್ತೆಂದು
ಇಂತವರ ನುಡಿಯನುರೆ ಕೇಳುತಂ ಪೊರಮಡುತೆ
ಮುಂತಿರ್ದ ಧೇನುಮಂ ಕಾಣುತಚ್ಚರಿವಡುತೆ

ಮಂತ್ರಿಗಳ ನೋಡಿ ಗೋಶೋಕಮೆಂತೆಂದೆನಲು
ಮಂತ್ರಿಗಳೊಳೊರ್ವನಾಗಳ್ ಕೌತುಕಂ ಮಿಗಲು
ಕರಕಮಳಮಂ ಮುಗಿದು ದೇವ ನಿಮ್ಮಯ ಸುತಂ
ಪುರವೀಥಿಯೊಳು ರಥಮನೇರಿ ನೆರೆ ಪರಿಸುತಂ
ಪೋಗೆವೋಗಲ್ಕೊಂದು ಬಾಲವತ್ಸಂ ಬಂದು
ಮೇಗಣ್ಕೆ ಚಿಮ್ಮುತಂ ರಥದ ಗಾಲಿಗೆ ಸಂದು
ಜೀವಮಂ ಕಳೆಯಲೊಡನೀ ಧೇನು ನಡೆತಂದು
ಭಾವದಿಂದಿಂತು ಮಾಡಿತ್ತು ನೆರೆ ತಾನೆಂದು

ಇಂತು ಬಿನ್ನೈಸೆ ತದ್ವಾಕ್ಯಮಂ ಕೇಳುತಂ
ಚಿಂತಿಸುತಲಾ ಗೋವಿನಂತೆ ತಾ ನೋವುತಂ
ವಿಷವಾವರಿಸಿದಂತೆ ಮೂರ್ಛೆಯೊಳ್ ನೆರೆ ಸಂದು
ವೃಷಭವಾಹನಭಕ್ತನುರೆ ಚಿತ್ತದೊಳ್ಬೆಂದು
ಈ ಕರ್ಮವೆನಗೆಂತು ಬಂದಿತೋ ಎಂದಿಂತು
ಶೋಕದಿಂ ನೋವುತಂ ಬೇವುತಂ ತಾನಿಂತು
ಲೇಸು ಲೇಸೆನ್ನ ಧರ್ಮದಿನಖಿಳ ರಾಜ್ಯದೊಳು
ಭಾಸುರಪ್ರಜೆಗಳಂ ಪಾಲಿಸಿದೆ ನೀತಿಯೊಳ್
ಈ ಘೋರಪಾತಕಂ ಎನಗೆಂತು ಪೋದಪುದೊ
ಮೋಘಮಿಲ್ಲದೆ ಶೋಕಮೆಂದಿದಕೆ ಪೋಪುದೊ
ಅಕಟಕಟ ಕೆಟ್ಟೆನಾಂ ಕೆಟ್ಟೆನಾನೆಂದಿಂತು
ವಿಕಳನಾಗುತೆ ಗೋವಿನಂದದಿಂ ತಾನಂದು
ಶೋಕಸಾಗರದೊಳಗೆ ಮುಳುಗಿ ತೇಂಕಾಡುತಿರೆ
ಲೋಕನಿಂದೆಗೆ ಸೆಡೆದು ಚಿಂತಿಸುತೆ ಸುಮ್ಮನಿರೆ
ಇಂತು ದುಃಖದೊಳು ಮುಳುಗಿರ್ದ ಭೂಪಂಗಂದು
ಮುಂತೆ ಮಂತ್ರಿಗಳು ನಮಿಸುತೆ ಪೇಳಿದರು ನಿಂದು
ದೇವ ನಿಮಗೀ ದುಃಖವೇಕಿದಕೆ ಬೇರೊಂದು
ಪಾವನೋಪಾಯಮಂ ದ್ವಿಜಮುಖ್ಯರಿಂ ತಿಳಿದು
ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತಮಂ ಮಾಡಿ
ಭೂಪ ನೀವೆಂದಿಂತು ನುಡಿಯಲೆಲ್ಲರ ನೋಡಿ
ಗಹಗಹಿಸಿ ನಗುತೆ ನುಡಿದಂ ದೈನ್ಯವುಣ್ಮತಿರೆ
ಬಹಳ ದುಃಖದ ಧೇನು ತನ್ನ ನೋಡುತ್ತಮಿರೆ
ಲೇಸಾಗಿ ನುಡಿದಿರೆಲೆ ಮಂತ್ರಿಗಳಿರಾ ನೀವೆ
ಘಾಸಿಯಾದಿದಕೆ ಪ್ರಾಯಶ್ಚಿತ್ತಮೌಷಧವೆ

ಸುತನ ಬೈತಿಟ್ಟು ನೀವೆಂದುದಂ ನಾಂ ಮಾಡೆ
ನುತ ಧರ್ಮವೆಲ್ಲ ಕೆಡುವುದು ಬೇಗದಿಂ ನೋಡೆ
ತನ್ನವರ್ಗಳಿಂ ಪದೆದಳಿಂಚೋದರಿಂತೊಗೆದ
ನುನ್ನತಭಯಂಗಳಂ ತವಿಪ ನೃಪನೀ ಜಗದ
ಹರಣ ಮತ್ತಾತನೇ ಸದ್ಧಾರ್ಮಿಕಂ ತಿ[ಳಿ]ಯ
ಲರಿದೆನಿಪ ಪುತ್ರದುರಿತವನೀಗಳಾಂ ಕಳಿಯ
ಲುದಿತ ಪ್ರಾಯಶ್ಚಿತ್ತಮಂ ಮಾಡುತಿಂತಿರಲು
ಪದೆದನೇನೊರ್ವನೀ ಪರಿಯ ಘೋರದೊಳಿರಲು
ನಿರುತದಿಂದವನ ವಧಿಸುವುದೆ ನಿಮ್ಮಯ ಮತಂ
ಅರರೆ ಎನ್ನಿಂ ಮನುವಿನೊಂದು ನೀತಿಯ ಮತಂ
ತೊಡೆಯಲ್ಕೆಪಟ್ಟುದದು ಲೇಸು ಲೇಸದ್ಭುತಂ
ಪೊಡವಿಯೊಳಗೆಂತು ಜೀವಿಪೆನಿದಂ ಕೇಳುತಂ

ಎಂದಿಂತು ಬಿರುನುಡಿಗಳಂ ನುಡಿಯೆ ಭೂವರಂ
ಮುಂದಿರ್ದ ಮಂತ್ರಿಗಳು ನಡುಗುತೆಲ್ಲರ್ ಕರಂ
ಕರಯುಗ್ಮಮಂ ಮುಗಿದು ಕಾರ್ಯಮಂ ಕಾಣ್ಬವರು
ಚರಿತದಿಂ ಬಿನ್ನವಿಸಿದರು ಬೇಗದಿಂದವರು
ಇಲ್ಲಿಂತು ಪೂರ್ವಕ್ರಮಂಗಳೊಳವೆಲ್ಲಿಯುಂ
ಬಲ್ಲ ಹಿರಿಯರಿನಖಿಳ ವೇದಂಗಳಲ್ಲಿಯುಂ
ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಿರುತಿರಲು
ಕೋಪದಿಂ ಹಿಂಸೆಯಂ ಮಾಡಬಹುದೇ ಎನಲು
ಅಂತದಂ ಕೇಳ್ದು ಹೃದಯಂ ಕದಡುತಿರೆ ನುಡಿದ
ನಿಂತು ಕ್ರಮಂಗಳಂ ಪೇಳಿದಿರಿ ನೀವೆಂದ
ಅಕ್ಕಟಾ ಅಕ್ಕಟಾ ಎಂದಿಂತು ನುಡಿವುತಿರೆ
ಅಕ್ಕಜದ ಶೋಕಾಗ್ನಿಯಿಂ ಮೊಗಂ ಬಾಡುತಿರೆ
ಅನಲನ ಜ್ವಾಲಾಪದವಿದ್ಧ ರಕ್ತಾಂಬುಜದ
ಘನಕಾಂತಿಯಂ ಪೋಲ್ತು ಕಾಣಲಾದತ್ತಾದ
ಏನೆಂಬೆನರಸ ನುಡಿದಂ ಧರ್ಮವಂತಿರಲಿ
ನಾನುಲ್ಲಿ ಕೈಕೊಳ್ಳೆನಿಂತು ಮತಗಳವಿರಲಿ
ಆವಲೋಕದೊಳಾವ ಯುಗದೊಳಚ್ಚರಿವಡೆಯೆ
ಗೋವು ತಿರ್ಯಗ್ಜಾತಿಗಳ ನಡುವೆ ಕರು ಮಡಿಯೆ
ಶಾಸನದ ಘಂಟೆಯಂ ಬಾಜಿಸುತೆ ಒರಲಿತ್ತು
ಘಾಸಿಯಾಗುರೆ ದೈನ್ಯಗುಣವನುರೆ ಪೊತ್ತಿತ್ತು

ಹರಿ ವಿರಿಂಚಿ ಪ್ರಮುಖರಿಂ ನುತಿಸಿಕೊಳುತಿಪ್ಪ
ಪರಮ ಕಮಲಾಲಯೇಶ್ವರನ ಕಿಂಕರರಪ್ಪ
ಭಕ್ತರೀ ನಗರಸೀಮೆಯೊಳಿರ್ದಪರ್ ಕೂಡಿ
ಶಕ್ತಿಯಿಂದವರೊಳಾವನದಾವನಿಂ ಕಾಡಿ
ಕೊಲಿಸಿಕೊಂಬಂ ಬಯಕೆಯಂ ಬಯಕೆಯಿಲ್ಲದಡೆ
ಸಲೆ ಸತ್ಯವವ ತಮ್ಮ ಮಗನಾದಡಂ ನೋಡೆ
ಕೊಲುವರೆನಲನ್ಯರಂ ಬಿಡುವರೇ ತಾವರಿದು
ಬಲುಹು ಕೊಳ್ಳದು ಭೂಪ ಧರ್ಮಮೇನುಂ ಪೊರದು
ಚಲವಿದೆನಗೀ ಧೇನುದುಃಖಮಂ ಮಾಣಿಪೆಂ
ಸಲೆ ಗೋವಿನಂತೆ ನಾನುಂ ದುಃಖಿಯಾದಪೆಂ

ಇಂತು ನುಡಿವುತೆ ಬಹಳ ಯತ್ನದಿಂ ನೃಪನಿರಲು
ಅಂತದಂ ನೋಡಿ ಸಚಿವರ್ಶಂಕೆಯಿಂದಿರಲು
ಸಚಿವರೊಳಗೊರ್ವನಂ ಕರೆದಿಂತು ಬೆಸಸಿದಂ
ಕುಚರಿತ್ರನಾದೆನ್ನ [ಸುತ] ದೇಹಮುಂಟದಂ
ನೀ ಪಿಡಿದು ರಥಪಾದದೊಳ್ನೂಂಕು ಪೋಗೆನಲು
ಭೂಪಶಾಸನಮನಂತಕ್ಕೆಂದು ಕೈಕೊಳಲು
[ಅಂತು ದಾರುಣ] ಕರ್ಮಮಂ ಮಾಡಲಾರದಿರೆ
ಚಿಂತಿಯಿಂ ಪ್ರಾಣಂಗಳಂ ತಾನೆ ಬಿಡುತಮಿರೆ
ಸಚಿವವೃತ್ತಾಂತಮಂ ಕೇಳ್ದಾನೃಪಂ ಪೋಗಿ
ಶುಚಿಯಾಗಿ ಸಾಹಸಂ ಮಿಗೆ ಧರ್ಮಯುತನಾಗಿ
ಕರದಿಂ ಕುಮಾರಕನನುರೆ ಪಿಡಿದು ಧೈರ್ಯದಿಂ
ಪುರವೀದಿಗೆಯ್ತುರುತಲಿರ್ದನತಿ ವೇಗದಿಂ
ಬರುತೆರಡು ಮೂರಡಿಯ ತಂದೆಯಿಕ್ಕದ ಮುನ್ನ
ವರಪುತ್ರನೈದಾರು ಹಜ್ಜೆಯಿಕ್ಕಿದ ತನ್ನ
ತನ್ನೊಳಗದಾವುದಕ್ಕಾವುದುಪಯೋಗ್ಯವದು
ಚೆನ್ನಾಗಿ ಬೇಗದಿಂ ಮಾಡುವುದು ಕಜ್ಜವಿದು
ಅದರಿಂದಲಾ ತಂದೆಯಿಂದಲುಪಯೋಗಿಸಲು
ಪದಪಿನಿಂ ನೆರೆದೆನೆಂದೇ ಬಗೆವುತೈತರಲು
ತವಿಪ ಕ್ಷಣಂಗಳೆಂತಂತೆ ಹತ್ತಿರೆಯಾಗೆ
ತವಕದಿಂದಾತಂಗವಂತಂತೆ ಸುಖಮಾಗೆ
ಎಲ್ಲಿಯದು ಭೋಗಕ್ಕೆ ತಕ್ಕ ಯೌವನಗುಣಂ
ಎಲ್ಲಿಯದು ಕೊಲುವ ತಂದೆಯ ಬುದ್ಧಿಯನುಗುಣಂ

ಆಹ ವಿಧಿಯಾಹ ಧರ್ಮದ ಪೆರ್ಮೆಯಿಂತೆಂಬ
ಸಾಹಸದ ಜನವಾದರೊಬ್ಬನೇ ಮಗನೆಂಬ
ಎಣಿಕೆಯಂ ಬಿಟ್ಟು ಧಾರ್ಮಿಕನಾದ ಭೂವರಂ
ಮಣಿಖಚಿತರಥವನಾರ್ದೇರಿ ಶಿವಕಿಂಕರಂ
ನಿಜಪುತ್ರ ಹೃನ್ಮಾರ್ಗದೊಳು ನೂಂಕಲದ ಕಂಡು
ಪ್ರಜೆಗಳೆಲ್ಲರ್ ಕೌತುಕಂಗೊಂಡು ದೊರೆಕೊಂಡ
ರಾಹ ರಾಜ್ಯದ ದುರಾಚಾರವತಿ ಘನವೆಂದು
ಬೇಹವರ್ ತಮ್ಮೊಳಗೆ ನುಡಿದರದ್ಭುತವೆಂದು
ನೋಡುತಂತಪ್ಪ ಕಾರ್ಯಮನಾಗ ಶೋಕದಿಂ
ಬಾಡುತಂ ಬಾಷ್ಪವರುಷಂಗಳಂ ಬೇಗದಿಂ
ಜನವೆಯ್ದೆ ಸುರಿಯೆ ಸುರರುಂ ಪುಷ್ಪವೃಷ್ಟಿಯಂ
ಮನುವಿನ ಶಿರಾಗ್ರದೊಳ್ ಕರೆದರತಿವೃಷ್ಟಿಯಂ

ಅಂತು ಕರೆಯಲು ಮುಂತೆ ಭಕ್ತಕಲ್ಪದ್ರುಮಂ
ಸಂತತಂ ಸರ್ವ ಶೋಕಾಗ್ನಿಮೇಘಾಗಮಂ
ಶತಸಹಸ್ರಾದಿತ್ಯ ತೇಜೋವಿಶೋಭಿತಂ
ನುತ ವಿಯದ್ಗಂಗೆಯಿಂ ಮೆರೆವ ಮಸ್ತಕಯುತಂ
ಚಂದ್ರಾರ್ಧಶೇಖರಂ ಭಾಳಾಕ್ಷಶೋಭಿತಂ
ಸಾಂದ್ರ ನಯನಾಬ್ಧಿಯಿಂ ಪರಿವ ಕೃಪಾಮೃತಂ
ಕಂಬಳಾಶ್ವತರೋರುಮಣಿಕರ್ಣಕುಂಡಲಂ
ಇಂಬಾದ ಗರಳಕಾವೆಯ ಶೋಭಿತ ಗಳಂ
ಭಸಿತ ಚಂದನ ಚರ್ಚಿತಂ ಭಾಗ್ಯದಾಗರಂ
ಲಸಿತ ಬಿಲ್ವಸುವರ್ಣಮಾಲಾಮನೋಹರಂ
ಲಂಬಿಸುವ ಲೋಕೇಶಮಸ್ತಕರಮಾಲೆಯಿಂ
ಬಿಂಬಿಸುವ ನಿತ್ಯತ್ವಮಂ ಪೇಳುತರ್ತಿಯಿಂ
ಉಡಿಗೆಯಾದಿಭಚರ್ಮ ವೇಷ್ಟಿತ ಕಟೀತಟಂ
ತೊಡರಾದಹೀಂದ್ರಮಣಿಯಿಂ ಮೆರೆವ ಪದತಟಂ
ಪಾದಾದಿ ಕೇಶಾಂತಮಾಗಿ ಶೋಭಿಸುತಿರ್ಪ
ವೇದಾಗಮಂಗಳಿಗೆ ಜನನಿಯಾಗಿರುತಿರ್ಪ
ಗೌರಿಯಿಂ ಮೆರೆವ ವಾಮಾಂಗದ ಮಹೇಶ್ವರಂ
ಚಾರುತರಮಾದ ಮಹಿಮೆಯನುಳ್ಳ ಶಂಕರಂ
ಮುಂದೆ ಜಯ ಜಯವೆನುತ್ತಿಂದ್ರನೊಪ್ಪುತ್ತಿರಲು
ಸಂದ ಪಾರ್ಶ್ವಂಗಳೊಳು ಹರಿವಿರಿಂಚಿಗಳಿರಲು

ಸುತ್ತಲುಂ ದಿಕ್ಪಾಲರುಂ ಪೊಗಳಿ ನಮಿಸುತಿರೆ
ಬಿತ್ತರಿಪ ಗಗನದೊಳು ಭೃಂಗಿಯಾಡುತ್ತಮಿರೆ
ನೋಡುತಂ ಸ್ಮೇರಮುಖನಾಗುತಂ ಹಿಗ್ಗುತಂ
ನಾಡೆ ಸೇವಿಪ ಸಾರ ಪ್ರಮಥನಿಚಯಾರ್ಚಿತಂ

ವೀಧಿವಿಟಕೇಶ್ವರಂ ಕರುಣದಿಂದಂ ಬಂದು
ಯಾಥಾರ್ಥಮಂ ನೃಪಂಗರುವಿದಂ ತಾನಿಂದು
ನಿಲಲೊಡನೆ ಕರು ಸಚಿವ ರಾಜಪುತ್ರರ್ಗೆಯ್ದೆ
ವಿಲಸಿತಪ್ರಾಣಂಗಳಾಗ ಬರೆ ಸುಖವೆಯ್ದೆ
ಬಾಲವಂ ಮೆಳ್ಳಿಸುತೆ ಕರು ಪಾರುತಂ ಬಂದು
ಲೋಲನಾಗುತೆ ತಾಯನೆಯ್ದುತಿರಲದು ನಿಂದು
ಪಾಲನಿತ್ತುದು ನೇಹದಿಂದದಂ ನೆಕ್ಕುತಂ
ಲಾಲಿಸುತೆ ಮೂತ್ರಮಂ ಪೊಯ್ವುತ್ತೆ ಸೆಕ್ಕುತಂ
ಇಂತದಂ ಮನು ತನ್ನ ಭಾಗ್ಯವೆಂದೇ ಬಗೆದು
ಕಂತುಹರನಂ ಕಂಡು ಮೈಯಿಕ್ಕಿ ನಿಲುತಂದು
ಪೊಡಮಡುತ್ತಂ ಮತ್ತೆ ಮತ್ತೆ ನಮಿಸುತ್ತಿರಲು
ಪೊಡವೀಶನಾ ಭಕ್ತಿಯಿಂ ತನ್ನ ಮರೆದಿರಲು
ಶಿವದರುಶನಾನಂದದಿಂ ಮನಂ ಪೆಚ್ಚುತಿರೆ
ಭವನನುರೆ ಪೊಗಳಲ್ಕೆ ತೊಡಗಿದಂ ಮೆಚ್ಚುತಿರೆ
ಶಿವನೆ ಎನ್ನಾಣ್ಮನೆ ವಿಲೋಚನಸುಖಾಂಬುಧಿಯೆ
ಭವನೆ ವೀಧಿವಿಟಕೇಶ್ವರ ಜಗತ್ಪತಿಯೆ
ಶಂಭುವೇ ಶಂಕರನೆ ಸರ್ವಜ್ಞಮೂರ್ತಿಯೆ
ಡಂಭ ವಿರಹಿತ ಭುವನ ಚರಿತ ಸತ್ಕೀರ್ತಿಯೆ
ಸಿದ್ಧರಿಗೆ ಸಿದ್ಧಲಿಂಗಂ ನೀನು ಬೇಡುವಡೆ
ಶುದ್ಧಯೋಗಿಗಳಿಗಾ ಜ್ಯೋತಿರ್ಲಿಂಗಂ ನೋಡೆ
ಭಕ್ತರಿಗೆ ಪ್ರಾಣಲಿಂಗಂ ನೀನೆ ಭವ ಶರಣು
ಯುಕ್ತ ಲೋಕೇಶ ಪರಮೇಶ್ವರನೆ ಹರ ಶರಣು
ಶರಣು ಗೌರೀಪತಿಯೆ ಶರಣು ಪ್ರಮಥೇಶ್ವರನೆ
ಶರಣು ಲೋಕೈಕಬಂಧುವೆ ಭಕ್ತವತ್ಸಳನೆ
ನೀನೆ ಭೂ ಜಲ ವಹ್ನಿ ವಾಯು ಗಗನಂಗಳುಂ
ನೀನೆ ರವಿ ಚಂದ್ರಾತ್ಮಮೂರ್ತಿಭೇದಂಗಳುಂ
ಸರ್ವನಾಗಿರ್ದ ನಿಮ್ಮಡಿಗೆ ಶರಣೆಂಬೆ ನಾಂ
ಪೂವಕ್ಕೆ ಪೂರ್ವನೀಂ ನಿನಗೆ ಶರಣೆಂಬೆ ನಾಂ

ಶರ್ವ ಸರ್ವೇಶ ಭೂತೇಶ ಗೌರೀಶ್ವರನೆ
ಸರ್ವಾತ್ಮ ಭುವನೇಶ ಈಶ್ವರ ಸದಾಶಿವನೆ
ನಿನ್ನ ಮೊರೆಯೊಕ್ಕೆ ನಾಂ ಕಾವುದೆಲೆ ಶಂಕರಾ
ಸನ್ನುತ ಮಹಾಪ್ರಭುವೆ ಕಾವುದೆಲೆ ಶಶಿಧರಾ
ಸರ್ವದೇವತೆಗಳುಂ ಮಿತವಾಂಛಿತಪ್ರದರು
ಶರ್ವ ನೀನಮಿತವಾಂಛಿತವೀವುದೇ ಪೆಸರು
ಅದರಿಂದಹಂ ನಿನ್ನ ಪೊರ್ದಿದೆಂ ಗುಣನಿಧಿಯೆ
ಮುದದಿಂದಲಾನಿನ್ನ ಬದುಕಿದೆಂ ಸುರನಿಧಿಯೆ
ನಾನಾ ತಪಧ್ಯಾನ ದಾನಾಧ್ವರಂಗಳಿಂ
ನೀನಾರಿಗಂ ಸಿಕ್ಕೆ ತತ್ತ್ವಪಂಚಂಗಳಿಂ
ಭಕ್ತಿಯಿಂ ವರಮಪ್ಪೆ ನೀನೆಲೆ ಮಹೇಶ್ವರನೆ
ಮುಕ್ತಿಯಿಂ ಯೋಗಿಗಳಿಗೀವ ಗಂಗಾಧರನೆ
ಪಂಚಾಕ್ಷರಸ್ವರೂಪಂ ನೀನೆ ನೋಡುವಡೆ
ಪಂಚಕೃತ್ಯಸ್ಥಿರಂ ನೀನೆ ನೆರೆ ಬೇಡುವಡೆ
ಪಂಚಭೂತಂಗಳೊಳಗಿಪ್ಪೆ ಕರುಣಾಕರನೆ
ಪಂಚಬ್ರಹ್ಮಾತ್ಮಕಂ ನೀನೆ ಜಯ ಪುರಹರನೆ
ಯುಕ್ತಿವಂತರ್ ತಾರ್ಕಿಕರ್ ಸಿದ್ಧರುಂ ಕೂಡೆ
ಶಕ್ತಿಯಿಂ ಪರಮಪದಮಂ ಕಾಣರುರೆ ನೋಡೆ
ಧನ್ಯನಾದೆಂ ಮಾನ್ಯನಾದೆಂ ಮನುಜರೊಳಗೆ
ಚೆನ್ನಾಗಿ ನಿನ್ನ ರೂಪಂ ಕಂಡೆನಿದರೊಳಗೆ
ಎಂದೆಂಬ ನುಡಿಗೇಳ್ದು ಮೆಚ್ಚುತುಸುರ್ದಂ ಕರಂ
ಮುಂದೆ ಗೌರೀಮೊಗಮನೀಕ್ಷಿಸುತೆ ಶಂಕರಂ
ಎಲೆ ನಿನ್ನ ನುಡಿಯಿಂದವೀ ಕಜ್ಜದಿಂದಲಾಂ
ಸಲೆ ತುಷ್ಟನಾದೆ ಮೆಚ್ಚಿದೆ ಭಕ್ತಿಯಿಂದಲಾಂ
ಅದರಿಂದೆ ನೀಂ ಸಮೃದ್ಧಾರ್ಥನಾಗುತ್ತಲ್ಲಿ
ಮುದದಿಂದೆ ಮೇದಿನಿಯ ಪಾಲಿಸುತೆ ನೀನಿಲ್ಲಿ
ಧರ್ಮಮಂ ನೋಡಲ್ಕೆ ಧರ್ಮದೇವತೆ ಬಂದು
ಪೆರ್ಮೆಯಿಂ ಗೋವಾಗುತಿಂತು ಮಾಡಿತು ನಿಂದು
ಅಂತದಂ ನೀಂ ಗೆಲ್ದೆ ಸದ್ಧರ್ಮಶಕ್ತಿಯಿಂ
ಸಂತತಂ ಸುಜ್ಞಾನಭರಿತ ಸದ್ಭಕ್ತಿಯಿಂ
ಪುತ್ರ ಮಿತ್ರ ಕಳತ್ರಯುತನಾಗಿ ಬೇಗದಿಂ
ಚಿತ್ರಭೋಗಂಗಳಂ ಭೋಗಿಸುತೆ ಧರ್ಮದಿಂ
ಭೂಮಿಯೊಳು ಧರ್ಮಮಂ ಬೀರಿ ಸತ್ಪುತ್ರನಂ

ಪ್ರೇಮದಿಂ ರಾಜ್ಯಕ್ಕೆ ನಿಲಿಸಿ ಬುಧಮಿತ್ರನಂ
ಮತ್ತೆ ದೇವೇಂದ್ರಾದಿಗಳಿಗರುಪಿ ಕೊಡುತಿಪ್ಪ
ಮತ್ತಗಜಚರ್ಮಧರ ಭಕ್ತಿಗೋಚರಮಪ್ಪ
ಮಾಯಾಂತ ತತ್ವಾವಿಮುಕ್ತಮಾಗಿರುತಿಪ್ಪ
ತೋಯಾದಿ ಭೂತಪ್ರಪಂಚಮಂ ಮೀರಿಪ್ಪ
ಎನ್ನ ಸಾರೂಪ್ಯಮಂ ಪೊದ್ದುವೈ ಬೇಗದಿಂ
ಚೆನ್ನಾಗಿ ಸುಖಮಿಪ್ಪೆ ಬಳಿಕ ನೀಂ ರಾಗದಿಂ
ನಿನ್ನ ಕುಲದಲ್ಲಿ ಜನಿಸಿದರೆಲ್ಲರುಂ ಕೂಡೆ
ಮನ್ನಣೆಯ ಮದ್ಭಕ್ತರುಂ ಯುಕ್ತರುಂ ನೋಡೆ
ಮತ್ಪರಾಮರ್ಶರುಂ ಮತ್ಪರಾಯಣರೈದೆ
ಮತ್ಪದಾಶ್ರಯರಪ್ಪರೆಂದು ಪೇಳುತ್ತೈದೆ
ಇಂತು ವರವಂ ಕೊಟ್ಟು ಶಂಕರಂ ಮೆರೆವುತಂ
ಮುಂತೆ ತುಂಬುರ ನಾರದರ್ಪೊಗಳೆ ಕೇಳುತಂ
ರಜತಾದ್ರಿಗೈತಂದು ಬಹಳ ವೈಭವದಿಂದೆ
ಅಜಹರಿಗಳಿಂ ನುತಿಸಿಕೊಳುತೆ ಸಂತಸದಿಂದೆ
ಇಂತೆಮ್ಮ ಹೆಂಪಿನ ವಿರೂಪಾಕ್ಷನೊಪ್ಪಿದಂ
ಸಂತತಂ ಹಂಪೆಯ ವಿರೂಪಾಕ್ಷನೊಪ್ಪಿದಂ ೩೨೪

ವಿನುತಜನಕಲ್ಪವೃಕ್ಷಂ
ಮನುಜೋಳನ ಧರ್ಮನೀತಿಗುರೆ ಮೆಚ್ಚುತ್ತಂ ।
ವಿನುತ ಗಣಪದವನೀವು
ತ್ತನುಪಮ ಗುಣನೆಮ್ಮ ಹಂಪೆಯರಸಂ ಮೆರೆದಂ ॥

❖❖

# ೧೨. ಪೊಯ್ಯಡಿಯರ ರಗಳೆ

ಹರಶಂಕರ ಶಶಿಶೇಖರ
ಗುರು ಹಂಪೆಯ ದೇವ ಪೊಯ್ಯಡಿಮೆಯಿಲ್ಲದ ಪುಲ ।
ವರ ಚರಿತಮನು[ರುತರವಂ]
[ಪರ]ಮಕವಿತ್ವಕೆ ಮೆಚ್ಚಿ [ಯೆ] ಗಣಪದವಿತ್ತಂ ॥

ಶ್ರೀ ವಸುಮತೀತಿಲಕವೆಂದೆನಿಸಿ ಸೊಗಸಾಗಿ
ಭಾವದಿಂ ಚೋಳೋರ್ವಿ ಮೆರೆವುದದು ಸೈತಾಗಿ
ಅಲ್ಲಿ ಪೊಯ್ಯಡಿಮೆಯಿಲ್ಲದ ಪುಲವರೆಂದೆಂಬ
ಸಲ್ಲಲಿತ ಭಕ್ತನೊರ್ವಂ ದಾಸ ನಾನೆಂಬ
ಭಾವದಿಂ ಭರ್ಗಂಗೆ ಪರಿಚರ್ಯವಂ ಮಾಡಿ
ದೇವನಂ ಬಹುವಿಧದೆ ಸ್ತೋತ್ರಂಗಳಂ ಮಾಡಿ
ತುಷ್ಟಿವಡಿಸುತ್ತೆ ಕವಿತಾಮಾರ್ಗಮಂ ಬಲಿದು
ಶಿಷ್ಟಲಕ್ಷಣ ಸುಜಾತ್ಯರ್ಥರಸವಂ ತಿಳಿದು
ಧರೆಯೊಳೀ ದೇಹಕ್ಕಿದೇ ಮಹಾಫಲವೆಂದು
ವರಕವಿತ್ವನಲ್ಲಿ ಮಾಡಲ್ಕೆ ತಾನಂದು
ಶಿವನಲ್ಲದಾರುವಂ ಪೊಗಳೆನೆಂದೇ ನೆನೆದು
ಭವನಲ್ಲದನ್ಯರಂ ತೃಣವೆಂದು ತಾಂ ಬಗೆದು
ಮೂರು ಲೋಕದೊಳಾತನಧಿಕ ಜಸವಂ ಪಡೆದು
ಬೇರಿಲ್ಲದೀಶನಿಂ ವರಭಕ್ತಿಯಂ ಪಡೆದು
ಸಾರಸ್ವತ ಪ್ರವಾಹದ ತರಂಗಂಗಳಿಂ
ಮಾರಹರ ಮೆಚ್ಚುತ್ತೆ ಪರಮಕರುಣಂಗಳಿಂ
ನಿಜಮಹಾಶಕ್ತ್ಯರ್ಥ ಬಹಳ ಭಕ್ತಿಯನಿತ್ತು
ಗಜಚರ್ಮಧರನೊಪ್ಪದಿಂದೆ ಹರುಷವನಿತ್ತು
ಆತನ ಕವಿತ್ವಕ್ಕೆ ಮೆಚ್ಚಿ ಶಿವನೊಲ್ಮೆಯಿಂ
ಖ್ಯಾತಧನಮಂ ನಿಚ್ಚಲುಂ ಕೊಡಲ್ಕೊಲ್ಮೆಯಿಂ

ಆ ಧನದಿನಧಿಕ ಶಿವಭಕ್ತ ಪೂಜೆಯ ಮಾಡಿ
ಬಾಧೆಯಿಲ್ಲದೆ ಶಿವನ ಭೃತ್ಯಪೂಜೆಯ ಮಾಡಿ
ತಣಿಪುತುಂ ನಾಲ್ಕು ವಿಧದಿಂ ಮನಕೆ ಸೊಗಸಾಗಿ
ಗಣಿಸಲರಿದೆನಿಪ ವಾಙ್ಮಯದಿಂದೆ ಕವಿಯಾಗಿ
ಶಿವನ ನುತಿಸಲ್ ಮೆಚ್ಚಿ ಪರಮಾನುರಾಗದೊಳು
ತವೆ ಮುಳುಗಿ ತೇಂಕಾಡುತಿರಲಧಿಕ ಹರ್ಷದೊಳು
ಜಾತಿ ಮೊದಲಾಗಿರ್ದಲಂಕಾರಯೋಗದಿಂ
ಖ್ಯಾತ ನಾನಾರಸದ ವೃತ್ತದ ವಿಭಾಗದಿಂ
ಆಶು ಚಿತ್ರಂ ಮಧುರವೆಂಬಾ ತ್ರಿಭೇದದಿಂ
ದೋಷವಿಲ್ಲದೆ ದೀಪಕಾದಿಗುಣವಿಭವದಿಂ
ತ್ರಿಸಮೆಸೆವ ಗದ್ಯ ಪದ್ಯಂ ಮಿಶ್ರಮೆಂದೆಂಬ
ವಸುಮತೀಚಕ್ರಕ್ಕೆ ಮೂರು ಭೇದವಿದೆಂಬ
ಕಾವ್ಯಂಗಳೊಳ್ ನವರಸಂಗಳಂ ತಾಂ ಬೀರಿ
ಸೇವ್ಯಮಪ್ಪಂತೆ ನಾನಾಭಾವಮಂ ತೋರಿ
ತುರಗ ಗೋಮೂತ್ರಿಕಾ ಮುರಜಬಂಧಂಗಳಂ
ವರ ಶಕಟ ಪದ್ಮಾಭಿಧಾನಬಂಧಂಗಳಂ
ದಶಧೇನು ಮೊದಲಾದ ಧೇನು ಪ್ರಭೇದವಂ
ವಿಶದ ನಾನಾವರ್ಣ ವಿನ್ಯಾಸ ಭೇದವಂ
ಗೌಡ ಪಾಂಚಾಳ ವೈದರ್ಭರೀತಿಗಳನುರೆ
ನೋಡಲುಂ ದ್ರಾಕ್ಷಾದಿಪಾಕಯುಗ್ಮವ ಕೆದರೆ
ಕಾಲಜಾತಿವಯೋರ್ಥದೇಶಾವಿರೋಧವಂ
ಲೀಲೆಯಿಂದಂ ಪೂರ್ವಕವಿತಾವಿರೋಧವಂ
ದಂಡಕೋದಾಹರಣ ಚಕ್ರವಾಳಂಗಳಂ
ಮಂಡಿತಂ ಶೃಂಖಲಾಬಂಧ ಭೇದಂಗಳಂ
ನವ್ಯ ತ್ರಿಭಂಗಿಗಳನಾ ಪ್ರಹೇಳಿಕೆಗಳಂ
ಭವ್ಯ ಬಿರುದಾವಳಿಗಳಂ ಗುಣಾವಳಿಗಳಂ
ಕೂಡೆ ಬಿರುದಾವಳಿ ದಶಾದಿರೂಪಂಗಳಂ
ಮಾಡುತ್ತಲಿಂತಖಿಲ ಕಾವ್ಯಾನುಗುಣಗಳಂ
ಬೀರಲ್ಕೆ ವಾಲ್ಮೀಕಿಮುಖ್ಯ ಕವಿಗಳ್ ನಲಿದು
ಬೇರೊಂದನೊಲ್ಲದೀತನ ಕಾವ್ಯಮಂ ನೆನೆದು
ಕೃತಕೃತ್ಯರಾದೆವೆಂದೆಲ್ಲರುಂ ಕೊಂಡಾಡೆ
ನುತಶಿವಸ್ತುತಿಗಳಿಂ ಪಠಿಸುತಿರೆ ಶಿವ ನೋಡಿ

ಗಿರಿಜೆಗರುಪಿನದನೆನ್ನ ಭಕ್ತ ಕವಿತೆಯನಲ್ಲಿ
ವರಮುನಿಗಳೆಲ್ಲರುಂ ಕೊಂಡಾಡಲಾನಿಲ್ಲಿ
ಗಾತನಂ ತರ್ಪೆನೆಂದೀಶ್ವರಂ ತಾಂ ಬಂದು
ಪೂತ ಪುಷ್ಪಕವನುರೆ ಪತಿಕರಿಸಿ ತಾನಂದು
ಭಕ್ತಕವಿಯಂ ಸುಖದಿನದರೊಳಗೆ ಕುಳ್ಳಿರಿಸಿ
ಭಕ್ತವತ್ಸಲನೊಡನೆ ಕೈಲಾಸಕವತರಿಸಿ
ಭದ್ರಸಿಂಹಾಸನದೊಳೊಪ್ಪುವಂ ತಾನಲ್ಲಿ
ರುದ್ರಗಣದಾನಂದದಿಂ ಪೂಜೆಗೊಳುತಲ್ಲಿ
ಪೊಯ್ಯಡಿಮೆಯಿಲ್ಲದಾ ಪುಲವರ್ಗೆ ತಾನೊಲಿದು
ಮೆಯ್ಯಾನುತಂ ಶಿವಂ ಪರಮಹರುಷಂ ಬಲಿದು
ಗಣಪದವನಿತ್ತು ರಜತಾಚಲದ ಸಭೆಯಲ್ಲಿ
ಗಣಿಸಲರಿದೆನಿಪಧಿಕ ಮಹಿಮೆಯಿಂ ತಾನಲ್ಲಿ
ಮೆರೆದನೆಮ್ಮಯ ವಿರೂಪಾಕ್ಷನಾನಂದದಿಂ
ಮೆರೆದನಾಹಾ ಹಂಪೆಯರಸನತಿಮೋದದಿಂ

ಕವಿತಾಗುಣದಿಂದೀಶನ
ತವೆ ಮೆಚ್ಚಿಸಿ ರುದ್ರಪದವನುರೆ ಪಡೆದಿಳೆಯೊಳ್ ।
ಶಿವನಣುಗನಪ್ಪ ಪೊಯ್ಯಡಿ
ಯವರಾಳಾನಯ್ಯ ಹಂಪೆಯ ವಿರೂಪಾಕ್ಷಾ ॥

❖❖

## ೧೩. ತಿಲ್ಲೆವೇಳಂದರನ ರಗಳೆ*

ಸಲ್ಲೀಲೆಯಿಂದಲೊಪ್ಪುವ
ತಿಲ್ಲೆವೆಳಂದರರ ಭಕ್ತಿಗುರೆ ಮೆಚ್ಚುತ್ತಂ ।
ಘುಲ್ಲಶರವೈರಿ ಹಂಪೆಯ
ಬಲ್ಲಹನೊಲವಿಂದೆ ವರವನಿತ್ತುರೆ ಮೆರೆದಂ ॥

ಶ್ರೀ ಸದಾಶಿವಭಕ್ತಮಹಿಮೆಯಂ ಪೊಗಳ್ದಪೆಂ
ಭಾಸುರದ ಶೈವಭೂಸುರರ ನಾಂ ಬಣ್ಣಿಪೆಂ
ತಿಲ್ಲೆಪುರಮೆಂಬುದೊಪ್ಪುವುದು ಭೂಮಿಗೆ ಕರಂ
ಪಲ್ಲವಿಪ ಸದ್ಭಕ್ತಿಯಿಂ ಧರ್ಮದಾಗರಂ
ಅದರಲ್ಲಿ ನಿತ್ಯಸನ್ನಹಿತರಾಗಿರುತಿರ್ಪ
ಸದಮಲಜ್ಞಾನಗುಣದಿಂದೆ ಮೆರೆದಿರುತಿರ್ಪ
ರಿಂದಾದಿ ಕೇಕರನುತಿಪ್ಪ ನುತ ಸೀಮೆಯೊಳು
ಸಂದ ಶಂಕರನ ಪರಮಾನಂದಸೀಮೆಗಳು
ಪಾಶಮೋಚನ ಗುಪ್ತ ಶಿವಮಾರ್ಗಗಾಮಿಗಳು
ಕ್ಲೇಶವರ್ಜಿತರು ಘನವೈಭವವಿಭೂಷಿಗಳು

ಪರಮಮಂಗಳವ ಮಾಡುವ ಧರ್ಮಪೋಷಕರು
ಹರಭಕ್ತಿಯೊಳ್ಮುಳುಗುತೇಳುತ್ತೆ ಸುಖಿಯಿಪರು
ವೇದಂಗಳಿಂ ಪೇಳ್ವ ಶಿವಸತ್ಕ್ರಿಯಾಪರರು
ಭೇದಮಿಲ್ಲದೆ ಪೂತ ತ್ರೇತಾಗ್ನಿ ವೈಭವರು
ಧರ್ಮಧರರುಂ ಪ್ರಾಜ್ಞರುಂ ತತ್ತ್ವಚಿತ್ತರುಂ
ಪೆರ್ಮೆಯಿಂ ಸುಲಲಿತ ಷಡಂಗಪಾರೀಣರುಂ

---

* ಇದೇ ಶೀರ್ಷಿಕೆಯ "ವಿರೂಪಾಕ್ಷ" ಮುದ್ರಿಕೆಯ ಬೇರೊಂದು ರಗಳೆ ಇದೆ. ನೋಡಿ : ಮಹಾಕವಿ ಹಂಪೆಯ ಹರಿಹರದೇವನ ರಗಳೆಗಳು, ಭಾಗ–೨, ಸಂ. ಬಿ. ಸಿ. ಜವಳಿ, ಮಲ್ಲಾಬಾದಿ ವೀರಭದ್ರಪ್ಪ.

ಸದ್ವಂಶಜಾತರು ಸದಾಚಾರತತ್ಪರರು
ವಿದ್ವಜ್ಜನಾಧಾರ ಹಿಮಕರಸುಶೀತಳರು
ರಾಗದಿಂ ಷಟ್ಕರ್ಮಜಿತಕಲ್ಮಷರ್ ನೋಡೆ
ಬೇಗದಿಂ ಮಾಯಾಪ್ರಪಂಚರಹಿತರು ನೋಡೆ
ಶ್ರೀಭಸ್ಮಸಂಪದವೆ ಬೇಕೆಂದು ತಮ್ಮೊಳಗೆ
ಶೋಭಿಸುವ ಸಂಕಲ್ಪನಿರ್ಜರರು ಜಗದೊಳಗೆ
ಲಾಭವೆಮಗೀಶನಲ್ಲಿಯ ಭಾವವೆಂದಿಂತು
ಶೋಭಿಸುವ ಪೂರ್ಣವೈಭವಯುತರು ತಾವಿಂತು
ಪಂಚಾಕ್ಷರಾಮರ್ಶ ಸಂಪೂರ್ಣಚಿತ್ತರುಂ
ಸಂಚಿತಾಶೇಷಗುಣಮಣಿಗಣ ಕರಂಡರುಂ
ದಾಂತಿಯೊಳು ತತ್ಶಿವಾಚಾರದೊಳು ಬುದ್ಧಿಯೊಳು
ಶಾಂತಿಯೊಳ್ಶಿವನಿರ್ಣಯದೊಳಾಚಾರದೊಳು
ಜ್ಞಾನದೊಳು ಕರ್ಮದೊಳು ವೈರಾಗ್ಯಶಕ್ತಿಯೊಳು
ಧ್ಯಾನದೊಳು ತಪಸಿನೊಳು ಸದ್ಭಕ್ತಿಯುಕ್ತಿಯೊಳು

ಇಂತಿವರೊಳೆಲ್ಲಾಗಳುಂ ನಾಡೆ ಕೂಡಿರ್ಪ
ರಂತದೇ ಸತ್ಕರ್ಮಯುಕ್ತರಾಗಿರುತಿರ್ಪ
ರೇನೆಂಬೆ ನಿರ್ದೋಷಿಗಳು ಭುವನವಂದಿತರು
ಮಾನಸದನೇಕರಪ್ರತಿಮ ಪ್ರಭಾಮಯರು
ಅರ್ಜವಗುಣೋಪೇತ ದಿವ್ಯ ವೈದಿಕರೆಲ್ಲ
ಸ್ಫೂರ್ಜತ್ಕೃಪಾರಸಾಮೃತವಾರಿಧಿಗಳೆಲ್ಲ
ತ್ರಿಸಹಸ್ರನಾಮದಿಂ ರೂಢಿವಡೆದಿರುತಿರ್ಪ
ಅಸಮಶಿವಕರುಣದಿಂ ಧನ್ಯರಾಗಿರುತಿರ್ಪ
ಶಿವನಲ್ಲದೇನುವಂ ಬಯಸದಿಹ ನಿಸ್ಪೃಹರು
ತವೆ ತಮ್ಮ ಮಾಳ್ಕೆಯಿಂದೆಲ್ಲವಂ ಕಾಣ್ಬವರು
ಶಿವತಂತ್ರದೇಕಾಂತಕೆಲಗಳಂ ಬಲ್ಲವರು
ಶಿವಶಾಸನಂಗಳಂ ತಳೆದಲ್ಲಿ ಮೆರೆವವರು
ದ್ವಿಜರಾಜರುಂ ಕಲಾವೇದ್ಯರುಂ ನಿರ್ಮಲರು
ಗಜಬಜಿಸದೆಲ್ಲರುಂ ಸತ್ಪಥದೊಳಿರ್ಪವರು
ಕವಿಗಳುಂ ವಿಭುಧಗುರುಗಳ್ತೇಜಮುಳ್ಳವರು
ಭವದುರ್ಗಮಂ ದಾಂಟಿಪಾ ತಾ[ರ]ಕೇಶ್ವರರು
ಸೌಮ್ಯರ್ ಕ್ಷಮಾಶಕ್ತಿಗಳ್ ಕ್ಷೇತ್ರವಂದನರು
ಕಾಮ್ಯಫಲಗಳನೀವರೆಲ್ಲಂದದಿಂದವರು

ಶ್ರುತಿನಿಪುಣ ದ್ವಿಜರಿ [ರ್ದರಿಂ]ನಾಲ್ಕು ಮಡಿಯಾಗಿ
ಭೂತಿಯಿಂದೆಸೆವುತಿರ್ಪರು ಶುಭೋದಯರಾಗಿ
ಷೋಡಶಕಳಾಯುಕ್ತನಾ ಚಂದ್ರಮ[ಂ] ನೋಡೆ
[ಮೂ]ಡಲ್ ಚತುಷ್ಷಷ್ಠಿ ಕಳೆಗಳಿವರ್ಗಂ ನಾಡೆ
ಹರನಲ್ಲದನ್ಯದೈವಂಗಳಂ ಬಗೆಯದರು
ನಿರುಪಮಿತ ಭಕ್ತಿರಸದೊಳಗೆ ತೇಂಕಾಡುವರು
ಇಂತಿವರ ಮಹಿಮೆಯಂ ವತ್ಸರ ಶತಂಗಳಿಂ
ದೆಂತುಮಾತಿಂ ಪೊಗಳಲರಿದೆನಲ್ನುಡಿಗಳಿಂ
ಆದಡೇಂ ನಾನೆನ್ನ ಬಯಕೆಯಂ ಕೈಕೊಳಲು
ಮೋದದಿಂ ನುಡಿಗೆ [ಯ್ವೆನ] ವವರನೆಂದೆನುತಿರಲು

ಹಂಪೆಯಾಳ್ದಂ ಮೆಚ್ಚಿ ನೋಡಿ ಕೊಂಡಾಡುತಂ
ಹೆಂಪಿಂದೆ ಸೌಂದರಂ ದೇವನಂ ಬೇಡುತಂ
ತಿರುಪಾಡನಲ್ಲಿ ಪಾಡಲ್ಕೇಳುತಂ ಶಿವಂ
ವರವೀವುತಂ ಸಕಲಸಾಮ್ರಾಜ್ಯವಂ ಭವಂ
ಮೆರೆದಿರ್ದನಪ್ರತಿಮತೇಜೋವಿರಾಜಿತಂ
ಮೆರೆದಿರ್ದನರರೆ ಹರಿನೇತ್ರಾಬ್ಜಪೂಜಿತಂ
ಇಂತೆಮ್ಮ ಹಂಪೆಯ ವಿರೂಪಾಕ್ಷನೊಪ್ಪಿದಂ
ಸಂತತಂ ಹಂಪೆಯ ವಿರೂಪಾಕ್ಷನೊಪ್ಪಿದಂ

ತಿಲ್ಲೆವೆಳಂದರರಂ ಮಿಗ
ಲೆಲ್ಲಂದದೊಳೆಮ್ಮ ಹಂಪೆಯಾಳ್ದಂ ಕೃಪೆಯೊಳ್ ।
ಸಲ್ಲಲಿತ ರುದ್ರಪದವಿ
ತ್ತೆಲ್ಲಂದದೊಳೊಪ್ಪುತಿರ್ದನನುಪಮ ವಿಭವಂ ॥

❖❖

# ೧೪. ಬಸವಪವಾಡ ರಗಳೆ

ಶ್ರೀಮದಪ್ರತಿಮ ಬಸವನ
ನಾಮವೆ ಮನ ವಚನ ಕಾಯದೊಳಗನವರತಂ ।
ತಾಮಸವಿಲ್ಲದೆ ನೆನೆವತಿ
ಪ್ರೇಮಿಗ[ಳಂ ಸಲಹು] ಹಂಪೆಯ ವಿರೂಪಾಕ್ಷಾ ॥

ಬಸವಣ್ಣನು ಕಲ್ಯಾಣದೊ
ಳೊಸೆದು ಪವಾಡಗಳ ಮೆರೆದನೆಂಬತ್ತೆಂಟಂ ।
ವಸುಧಾಧಿಪ ಬೆರಗಾಗಲು
ಅಸಮಾಕ್ಷಂ ತಾನೆ ಹಂಪೆಯ ವಿರೂಪಾಕ್ಷಂ ॥

ಶ್ರೀಮದಮಳ ಶಿವನು ರಜತಗಿರಿಯೊಳೊಪ್ಪಿ ಬೆಳಗುತಿರಲು
ಸೋಮಧರನ ಶಾಂತಿಯೆನಿಪ ವೃಷಭನಿದಿರೊಳೊಪ್ಪುತಿರಲು
ಕಾಮಹರನು ಧರ್ಮರೂಪನೊಡನೆ ತನ್ನ ಲೀಲೆ ಮಿಗಲು
ಪ್ರೇಮದಿಂದೆ ಧರೆಯೊಳೆನ್ನ ಭಕ್ತಿಯನ್ನು ತೋರ್ಪುದೆನಲು
ದೇವ ನಿಮ್ಮನಗಲಿ ಮರ್ತ್ಯದೊಳಗೆ ಜನಿಸಲಾರೆನೆನಲು
ಭಾವಭರಿತನಾಗಿ ನಿನ್ನೊಳಿಪ್ಪೆ ನಂಬಿ ಹೋಹುದೆನಲು
ಸಾವಧಾನಿ ಭಕ್ತ ಶಿವನ ಚರಣಕೆರಗಿ ವರವದೆನಲು
ಈವ ದಾನಿ ಶರಣಸಂಗವಾಗಬೇಕು ಕರುಣಿಸೆನಲು
ಏಳುನೂರ ಎಪ್ಪತಮರಗಣಸಮೂಹದೊಳಗೆ ಶಿವನು
ಮೇಳಮಾಡಿ ಕಳುಹೆ ಹರನ ಚರಣಕೆರಗಿ ವೃಷಭರಾಜ
ಬೀಳುಕೊಂಡು ಬಂದು ಮರ್ತ್ಯದಲ್ಲಿ ಬಾಗೆವಾಡಿಯೊಳಗೆ
ಭಾಳನಯನನಂಘ್ರಿವಿಡಿದು ಬಾಳುತಿಪ್ಪ ಮಾದಿರಾಜ
ನರಸಿ ಮಾದಲಾಂಬಿಕೆಯ ಸುಗರ್ಭದಿಂದಲೊಗೆದನಾಗ
ಹರುಷದಿಂದೆ ಶಿವನು ಲಿಂಗದರುಶನವನು ಮಾಡಲಾಗ

ಪರಮ ಪುರುಷಗಿಂತು ಏಳು ವತ್ಸರಂಗಳಾಗುತಿರಲು
ಅವರ ಜನನಿ ಜನಕರುಪನಯನವ ಮಾಳ್ಪೆವೆಂದೆನಲ್ಕೆ
ನೆರೆದು [ಕೂಡೆ] ಜನಸಮೂಹವೆರಸಿ ಮುಂಜಿಗಟ್ಟಲದನು
ಹರಿದು ಹಾಯ್ಕಿ ಕರ್ಮಮತವ ಜರೆದು ತೊರೆದು ಮಾತೆಪಿತರ
ನೆರದ ಗೋತ್ರವೆಲ್ಲ ಬೆರಗನೆಯ್ದೆ ಸಕಲ ವೇದಗಳನು
ಹರುಷದಿಂದಲೋದಿ ಪರಮಪುರುಷ ಬಸವನವರ ಗೆಲಿದು
ಹಿರಿಯ ಕಾರ್ಯದಿಂದೆ ಸಂಗಮೇಶ್ವರಂಗೆ ಬರಲು ಮುಂದೆ
ಪರಿವ ನದಿಯನೆರಡುಭಾಗಮಾಡಿ ನಡೆದು ಮೆರೆದ ಬಸವ
ಹರುಷದಿಂದ ಶರಣ ಹರನ ಪೂಜೆಮಾಡಿ ವಿಪ್ರರೆಯ್ದೆ
ನೆರೆದು ಬೇಡವೆನಲು ಶಿವನ ನುಡಿಸಿ ತೋರಿ ಮೆರೆದ ಬಸವ
ತಂದು ಸಂಗಮೇಶ್ವರಂಗೆ ಬೋನವಿಡಲು ಉಣ್ಣದಿರಲು
ಅಂದು ಮೊದಲು ಜಂಗಮಕ್ಕೆ ನೀಡಿಸಲ್ಕೆ ಮೆರೆದ ಬಸವ
ಚಂದ್ರಧರಗೆ ನಮಿಸಿ ಬಿಜ್ಜಳಂತಪುರಕೆ ಬಂದು ಹರ್ಷ
ದಿಂದ ಜಂಗಮಾರ್ಚನೆಗಳ ಮಾಡಿ ದಣಿ[ಯೆ] ಬಸವನಲ್ಲಿ
ಹರನ ಲೋಕದಿಂದೆ ಲಿಪಿಯನಾವನೋದದಿರಲು ತ್ವರಿತ
ದಿಂದಲೋದಿ ಧನವ ತೆಗೆದು ತೋರಿ ಮೆರೆದ[ನಲ್ಲಿ] ಬಸವ
ಪರಮಭಕ್ತ ಜನಪನೆಡೆಗೆ ಬಂದು ವೃಷಭಮುದ್ರಿಕೆಯನು
ಬೆರಳೊಳಿಟ್ಟು ನಮಿಸೆ ನೃಪಗೆ ಮುಚ್ಚಿ ತೋರಿ ಮೆರೆದ ಬಸವ
ಧರಣಿಪತಿಯು ಮುನಿದು ನಂದಿಮುದ್ರಿಕೆಯನು ತೆಗೆಸಲಾಗ
ಕರವ ಮುಗಿದು ಗದ್ದುಗೆಯನು ಉರುಹಿ ತೋರಿ ಮೆರೆದ ಬಸವ
ಅರಸು ಮೆಚ್ಚಿ ನೀನೆ ನಮಗೆ ದಂಡನಾಥನಾಗಿರೆಂದು
ಕರಸಿ ಪಟ್ಟಗಟ್ಟಲದಕೆ ಹರುಷವೇರಿ ಮೆರೆದ ಬಸವ
ಬರೆದ ಲೆಕ್ಕ ಓಂ ನಮಃ ಶಿವಾಯ ಎನಲು ಬಾಚರಸ
ನರಸು ತಗೆಸೆ ರವಿಯ ಹತ್ತು ದಿವಸ ನಿಲಿಸಿ ಮೆರೆದ ಬಸವ
ಪುರದೊಳೆಡಹಿ ಬೀಳ್ವ ಗೊಲ್ಲಿಯಂದು ಬಸವಯೆನಲು ಕೊಡನ
ಧರಣಿಪತಿಯ ಹತ್ತಿರಿರ್ದು ಪಿಡಿದು ನಿಲಿಸಿ ಮೆರೆದ ಬಸವ
ರಾಜಧನವ ಜಂಗಮಕ್ಕೆ ಬಸವ ಕೊಡಲು ನೃಪನು ಸೆಣಸೆ
ಓಜೆಯಿಂದೆ ಪೆಟ್ಟಿಗೆಗಳ ತುಂಬಿ ತೋರಿ ಮೆರೆದ ಬಸವ
ಓಜರಿಂದ ಮರದ ಜಂಗಮವನು ಮಾಡಿ ನಿಲಿಸಿ ತೋರಿ
ಮೂಜಗಂಗಳರಿಯೆ ನಡೆಸಿ ನೃಪಗೆ ತೋರಿ ಮೆರೆದ ಬಸವ
ಲಿಂಗದಲ್ಲಿ ಕೇಶವುಂಟೆ ಎಂದು ನೃಪನು ಜರೆದು ನುಡಿಯೆ
ಹಿಂಗದಲ್ಲಿ ಶಿವಗೆ ಜೆಡೆಯ ಮುಡಿಯ ತೋರಿ ಮೆರೆದ ಬಸವ
ಸಿಂಗಿ ಪಿಡಿಯೆ ಹೆಸರ ಮಗನು ಸಾಯೆ ಬಸವ ಕೊಂದರೆನಲು

ಮಂಗಳಾಂಗನದಕೆ ಪ್ರಾಣವಿತ್ತು ತೋರಿ ಮೆರೆದ ಬಸವ
ಭಿತ್ತಿಯಲ್ಲಿ ಬರೆದ ತಪಸಿಗಸುವದುಂಟೆಯೆನಲು ನೃಪನು
ಸತ್ಯಶರಣನವರಿಗಸುವನಿತ್ತು ತೋರಿ ಮೆರೆದ ಬಸವ
ಮೃತ್ತಿಕೆಯಲಿ ಮಾಡಿದೆತ್ತ ನಿಮ್ಮದೆಂದು ನೃಪನೆನಲ್ಕೆ
ಅರ್ತಿಯಿಂದಲಾಗಲದನು ನಡೆಸಿ ತೋರಿ ಮೆರೆದ ಬಸವ
ಭಸಿತದಂತೆ ಮೆರೆವ ಕುಂಬಳದ ಫಳವನು ಅರಸು ತೋರೆ
ವಸುಧೆಯರಿಯಲದರ ಬಿ[ತ್ತ] ಶಿವನ ಮಾಡಿ ಮೆರೆದ ಬಸವ
ವಸುಮತೀಶ ಹಗರಣಿಗರ ತೋರೆ ಭಕ್ತರಿದ್ದರೆನಲು
ಒಸೆದು ಕರವ ಮುಗಿದು ತಪಸಿಗಳನು ಮಾಡಿ ಮೆರೆದ ಬಸವ
ಹಮ್ಮಿನೊಳು ಮಿಮಾಂಸಕಂ ನುತರ್ಕ ...........ತೃಣವ ಹಾಯ್ಕೆ
ಕರ್ಮರಹಿತನದನು ನುಡಿಸಿ ನಿಜವ ಮಾಡಿ ಮೆರೆದ ಬಸವ
ಎಮ್ಮ ಧನವ ವೆಚ್ಚಿಸುವನು ಬಸವನೆಂದು ರಾಯ ನುಡಿಯೆ
ಧರ್ಮರೂಪ ಹಾವ ನೇವಳವನು ಮಾಡಿ ಮೆರೆದ ಬಸವ
ಕಟ್ಟಿ ಭಾಂಡದಿಂದೆ ಬಂದ ಚೆಲುಮೆಯಗ್ಘವಣಿಯ ರಾಯ
ಕುಟ್ಟಿಸಲ್ಕೆ ಜಲವ ಘಟ್ಟಿ ಮಾಡಿ ತೋರಿ ಮೆರೆದ ಬಸವ
ಕೆಟ್ಟ ನೃಪನು ನಾಗಮಯ್ಯಗಳನು ಹಿರಿಯ ಭಕ್ತರೆನಲು
ನೆಟ್ಟನವರ ಕರೆದು ಸುಧೆಯ ಕರೆದು ತೋರಿ ಮೆರೆದ ಬಸವ
ಜೆಡೆಯ ಕಟ್ಟಿ ತನ್ನ ಮಡದಿಯರನು ನೃಪನು ತೋರಿಸಲ್ಕೆ
ದೃಢದಿ ಕರವ ಮುಗಿದು ಜಂಗಮವನು ಮಾಡಿ ಮೆರೆದ ಬಸವ
ಮೃಡನ ಶರಣ ಬೊಮ್ಮಿತಂದೆ ಕನ್ನವಿಕ್ಕೆ ನೃಪನು ಕೇಳಿ
ತಡೆಯದಲ್ಲಿ ಮಣ್ಣ ಚಿನ್ನವನ್ನು ಮಾಡಿ ಮೆರೆದ ಬಸವ
ಗುಪ್ತ ಮಂಚಿಯಣ್ಣಗಳನು ನುಡಿಸಿ ಬಸವ ಕೊಂದನೆನಲು
ಸತ್ಯಶರಣನವರಹರಣವನ್ನು ತೋರಿ ಮೆರೆದ ಬಸವ
ಮತ್ತೆ ಬಸವ ಜಂಗಮಕ್ಕೆ ನೃಪನ ವಧುವ ಕೊಡಲು ಕೇಳೆ
ಮರ್ತ್ಯಲೋಕವರಿಯಲವನ ಸತಿಯ ತೋರಿ ಮೆರೆದ ಬಸವ
ಅರಸು ಕೊಟ್ಟ ಕೇತಕಿಯನು ಶಿವಗೆ ಸಲಿಸೆ ಸಲ್ಲದೆನಲು
ಪುರದ ಲಿಂಗಗಳಲಿ ದೃಷ್ಟವಾಗಿ ತೋರಿ ಮೆರೆದ ಬಸವ
ಕರೆದು ಶಿಶುಪ್ರಸಾದ ಬಸವಗಿತ್ತುದನ್ನು ಅರಸು ಕಂಡು
ತರಿಸಿಕೊಟ್ಟ ಹೂರಿಗೆಯಲಿ ಕ್ರಿಮಿಯ ತೋರಿ ಮೆರೆದ ಬಸವ
ಹರಪ್ರಸಾದವೆನುತಲರಸು ನಾಗಯಕ್ಕಗಳನು ತೋರೆ
ಪರಮಪುರುಷ ಶಿಶುವದಾಗಿ ಮೊಲೆಯ ಸವಿದು ಮೆರೆದ ಬಸವ
ಅರಸಿನೊಡನೆ ಪಾಯಿಸೆಟ್ಟಿ ಕಕ್ಕಯಗಳು ಬೈದರೆನಲು
ಬರೆಸಿ ಲೆಕ್ಕಗಳನು ಕಿಚ್ಚೊಳಿಟ್ಟು ಗೆಲಿದು ಮೆರೆದ ಬಸವ

ಕೊಲಲು ನೃಪನು ಮಿಂಡಜಂಗಮವನು ತನ್ನ ಮಡದಿಯೊಡನೆ
ಒಲಿದ ಅವರ ಪ್ರಾಣಗಳನ್ನು ಪಡೆದು ತೋರಿ ಮೆರೆದ ಬಸವ
ವದೊಳಿರ್ದ ಹುಲಿಯ [ನೃಪನು ದ]ಂಡನಾಥನೆಡೆಗೆ ಹೊಡಸೆ
ವಿನಯದಿಂದಲದರ ಗಿಣ್ಣ ಕರೆದು ತೋರಿ ಮೆರೆದ ಬಸವ
ಹನುಮ ನಗವನೆಗಹುತಿಪ್ಪನೆಂದು ನೃಪನು ಜರೆದ ನುಡಿಯೆ
ಘನ ಗಿರಿಯನು ಶಿಷ್ಯನಿಂದಲೆತ್ತಿ ತೋರಿ ಮೆರೆದ ಬಸವ
ಕೊಡೆಯ ಹಿಡಿವವನನು ಭಕ್ತ ಶಂಕೆಮಾಡಿ ನೃಪನು ಕಳುಹೆ
ದೃಢದಿ ನಮಿಸಿ ನಿಜದ ರೂಪ ಮಾಡಿ ತೋರಿ ಮೆರೆದ ಬಸವ
ಮೃಡನ ದೂಷಕರನು ಕಕ್ಕಯಗಳು ಕೊಲಲು ರಾಯ ಸೆಣಸೆ
ಒಡನೆ ಸತ್ಯವಂಗೆ ಚಿತ್ತವಿತ್ತು ತೋರಿ ಮೆರೆದ ಬಸವ
ಸುಣ್ಣ ಕೊಪ್ಪರಿಗೆಯೊಳಿರಲು ನೃಪನು ತುಯ್ಯಲಹುದೆಯೆನಲು
ಅಣ್ಣೆವಾಲಮಾಡಿ ಜನವ ದಣಿಯಲುಣಿಸಿ ಮೆರೆದ ಬಸವ
ಉಣ್ಣದುಡದ ಕಲ್ಲನಂದಿಗಾಗ ಕವಳವೀವುದೆಂಬ ನೃಪಗೆ
ಬಣ್ಣಿಸುತ್ತಲದಕೆ ಕವಣವನ್ನು ಮೆಲಿಸಿ ಮೆರೆದ ಬಸವ
ಬೇಡರು ಪ್ರಸಾದವನ್ನು ಬೇಡೆ ವಿಷವ ತರಿಸಿಕೊಡಲು
ಊಡಲವರು ನಂಜನಮೃತವಾಗಿ ತೋರಿ ಮೆರೆದ ಬಸವ
ನೋಡಿ ನೃಪನು ಸುರೆಯ ಹರವಿಗೇಕೆ ಭಸಿತ ಬಂದುದೆನಲು
ರೂಢಿಯರಿಯೆ ಮಧುವ ಕ್ಷೀರದೊಡನೆ ಮಾಡಿ ಮೆರೆದ ಬಸವ
ವನದ ದೈವವೆಂಬಿರದಕೆ ದೃಷ್ಟವಾವುದೆಂದು ಕೇಳ್ದ
ಜನಪಗಂದು ಕಾನನವನು ನುಡಿಸಿ ತೋರಿ ಮೆರೆದ ಬಸವ
[ಜೈ]ನನೊಬ್ಬ ತನ್ನ ತಟ್ಟಿ ಗಗನಕಿಟ್ಟು ಕರೆಯೆನಲ್ಕೆ
ಘನವೆನುತ್ತೆ ಪಾದುಕೆಯಲಿ ತರಿಸಿ ತೋರಿ ಮೆರೆದ ಬಸವ
ಪಾದತೀರ್ಥ ಪರುಷವೆಂಬರೆನುತೆ ನೃಪನು ಸುರಿಗಯಲ್ಲಿ
ವೇದಿಸಿಯೆ ಸುವರ್ಣದಲಗ ಮಾಡಿ ತೋರಿ ಮೆರೆದ ಬಸವ
ಮೇದಿನೀಶನಾಭರಣವ ಜಂಗಮಕ್ಕೆ ಬಸವ ಕೊಡಲು
ಸಾಧಿಸುವ ನೃಪಂಗೆ ಮೈದೊಡಿಗೆಯ ತೋರಿ ಮೆರೆದ ಬಸವ
ಒಲಿದು ಜಂಗಮಕ್ಕೆ ನೃಪನ ಸತ್ತಿಗೆಯನು ಕೊಡಲು ರಾಯ
ಕೇಳಲಾಗ ಮೆರೆವ ಮೊರದ ಕೊಡೆಯ ತೋರಿ ಮೆರೆದ ಬಸವ
ದೇಶಪತಿಯು ಬಾಚರಸರಲೆಕ್ಕವೀವುದೆಂದು ತಡೆಯ
ಲೀಶಭಕ್ತ ರವಿಯ ನಿಲಿಸಿ ಗೆಲಿಸಿ ತೋರಿಮೆರೆದ ಬಸವ
ದುರುಳ ಮಂಚಿ ಹಾಸ್ಯದಿಂದೆ ವಿಪ್ರನೊಬ್ಬ ಸತ್ತನೆನಲು
ಮರಣವಾಗೆ ನೃಪನ ಮುಂದೆ ಹರಣವಿತ್ತು ಮೆರೆದ ಬಸವ
ನರರ ಭಕ್ತರಂತೆ ಮಾಡಿ ಭಸಿತವಿಡಿಸಿ ನೃಪನು ತೋರೆ

ಶರಣ ಕರವ ಮುಗಿದು ಪುಷ್ಪಗಳನು ಮಾಡಿ ಮೆರೆದ ಬಸವ
ಪರಮ ಭಕ್ತರಂತೆ ಚೋರರುಗಳು ನೃಪನ ತುರುವನೊಯ್ಕೆ
ಅರಸು ಕೇಳಲದಕೆ ಮಿಗಿಲ ಕಲ್ಪಿಸಿತ್ತು ಮೆರೆದ ಬಸವ
ಧರಣಿಪತಿಯ ಗಜವ ಜಂಗಮಕ್ಕೆ ಕೊಡಲು ನೃಪನು ಸೆಣಸೆ
ಮರಳಿಯದರ ತೆರದಿ ಕರಿಯ ಸೃಷ್ಟಿಸಿತ್ತು ಮೆರೆದ ಬಸವ
ಪುರಜ ಜನರು ಮಣ್ಣ ವೃಷಭರೂಪ ಮಾಡಿ ಬೋನವಿಡಲು
ಅರಸು ಹಾಸ್ಯವಾಡಲದನು ಉಣಿಸಿ ತೋರಿಮೆರೆದ ಬಸವ
ಧರಣಿಪತಿಯ ಬೊಕ್ಕಸವನು ಜಂಗಮಕ್ಕೆ ಕೊಡಲು ಕೇಳಿ
ಅರಸು ಮುನಿಯೆ ಭಾವಪರುಷದಿಂದ ತೋರಿ ಮೆರೆದ ಬಸವ
ಮಿಂಡ ನಾಗಮಯನ ದೂರ ನೃಪನು ಕೇಳಿ ಪಿಡಿದು ತರಿಸಿ
ದಂಡಿಸುವೆನೆನಲ್ಕೆಯವರ ಶಿವನ ಮಾಡಿ ಮೆಱೆದ ಬಸವ
ಮಂಡಲೇಶ ಸತ್ತ ಹಾವ ಹರನ ತೊಡಿಗೆಯಿದೆಯೆನಲ್ಕೆ
ಕಂಡದಕ್ಕೆ ಹರಣವಿತ್ತು ನೃಪಗೆ ತೋರಿ ಮೆರೆದ ಬಸವ
ಭಕ್ತರಿಬ್ಬರುಗಳು ತಮ್ಮ ರೂಪ ಪಾದುಕೆಯಲಿ ಮರಸಿ
[ಇ]ತ್ತುದರಿದು ಮಚ್ಚಿಯವರ್ಗೆ ಒಲಿದು ನಮಿಸಿ ಮೆರೆದ ಬಸವ
ಹತ್ತಿರಿದ್ದ ನೃಪನು ಕಂಡಿದೇನು ಕಾರಣೀಕವೆನಲು
ಸತ್ಯಶರಣ ನಭದೊಳಿಟ್ಟು ರೂಪಮಾಡಿ ಮೆರೆದ ಬಸವ
ಧರಣಿಪಾಲ ಹಾಸ್ಯದಿಂದಲೊಬ್ಬ ಮೋಟನಿರಲು ತೋರಿ
ಕರುಣದಿಂದಲವನಿಗಾಗ ಕರವನಿತ್ತು ಮೆರೆದ ಬಸವ
ಅರಸಿನಶ್ವವೊಂದ ಜಂಗಮಕ್ಕೆ ಕೊಡಲು ನೃಪನು ಸೆಣಸೆ
ಎರಳೆಯನ್ನು ತೇಜಿಯಂತೆ ಮಾಡಿ ತೋರಿ ಮೆರೆದ ಬಸವ
ಧರಣಿಪತಿಯು ಹುಲ್ಲುವೆಣನ ಭಕ್ತನೆಂದು ತೋರಲಾಗ
ಕರವ ಮುಗಿವುತದಕೆ ಹರಣವಿತ್ತು ತೋರಿ ಮೆರೆದ ಬಸವ
ಧರಣಿಪತಿಯ ಹತ್ತಿರಿರ್ದು ತಮ್ಮ ಮಠದ ಬೆಕ್ಕ ಸೋಹೆ
ಅರಸು ಹುಸಿಯೆನಲ್ಕೆ ದೃಷ್ಟವಾಗಿ ತೋರಿ ಮೆರೆದ ಬಸವ
ಶರಣ ಲಿಂಗದೊಳಗೆ ಬೆರೆಸಿಯಿಪ್ಪ ಭೇದವೆಂತೆನುತ್ತೆ
ಭರದಿ ನೃಪನು ಕೇಳೆ ಶಿವನಮೊಳಡಗಿ ತೋರಿ ಮೆರೆದ ಬಸವ
ಅರಸು ಸಹಿತ ಪುಗದ ಭಕ್ತರೆಲ್ಲ ಶಿವನ ರಾತ್ರಿಯೆನಲು
ಕರೆಯಲೆಲ್ಲ ಭಕ್ತಗೃಹದೊಳಿರ್ದು ತೋರಿ ಮೆರೆದ ಬಸವ
ಶರಣಪ್ರಭುವು ಸಲಿಸೆ ಜೀವರೆಲ್ಲ ತುಷ್ಟರೆಂದು ಕೇಳ್ದ
ಅರಸಿಗಂದು ಕಪ್ಪೆಯೊಳು ಪ್ರಸಾದದೋರಿ ಮೆರೆದ ಬಸವ
ಇಂತು ತನ್ನ ಪಲ ಪವಾಡವನ್ನು ವೃಷಭ ತೋರಿ ಗೆಲ್ದು
ಸಂತತಂ ಶಿವಾನುಭಾವದಿಂದೆ ತೋರಿ ಮೆರೆದ ಬಸವ

ಅಂಗ ಲಿಂಗ ಸರ್ವಪ್ರಾಣಲಿಂಗವಾದ ಭೇದವನ್ನು
ಹಿಂಗದಲ್ಲಿ ಭಕ್ತಜನಕೆ ತೋರಿ ನಮಿಸಿ ಮೆರೆದ ಬಸವ ೧೫೦
ಪರಮಮೂರ್ತಿ ಪ್ರಭುವು ಬರಲು ತನ್ನ ಹೃದಯಕಮಲದಲ್ಲಿ
ಸುರುಚಿರಪ್ರಕಾಶ ಪೀಠವಿತ್ತು ಒಪ್ಪಿ ಮೆರೆದ ಬಸವ
ಮಂಗಳಾಂಗ ತನ್ನ ಪ್ರಾಣಲಿಂಗಸಂಗಮೇಶನೊಳಗೆ
ಅಂಗವಳಿದು ವಿರೂಪಾಕ್ಷನೊಡನೆ ಬೆರಸಿ ಮೆರೆದ ಬಸವ ೧೫೪
ಜಯ ಜಯಂ ನಮೋಸ್ತು ಬಸವ ಜಯ ಜಯಂ ನಮೋಸ್ತು ಬಸವ

ಪರಮಗುರು ಬಸವರಾಜನು
ಮೆರೆದ ಪವಾಡಗಳನಿಂತು ಕೃಪೆಯಿಂದೆನಗಂ ।
ವರಮತಿಯನಿತ್ತು ರಕ್ಷಿಸಂ
ತೊರೆದೆನು ಸಲಹಯ್ಯ ಹಂಪೆಯ ವಿರೂಪಾಕ್ಷಾ ॥

❖❖

# ೧೫. ಸಂಸಾರವ್ಯಾಮೋಹ ನಿರಸನ ರಗಳೆ

ಶ್ರೀ ವಿರೂಪಾಕ್ಷಲಿಂಗಪ್ರಭುವೆ ನೀನಿಂತು
ಭಾವಿಸುತ ಕಟ್ಟಿದ ಮಹಾ ಕಲ್ಪನೆಯನಾಂತು
ತಿರುಗುತಿರ್ದಪೆನಖಿಳ ಘೋರಸಂಸಾರದೊಳು
ಪುರಹರನೆ ನಿನ್ನನರಿಯದೆ ಜನ್ಮಶರಧಿಯೊಳು
ಎಂತೆಂತು ನೀನೆ ಕಟ್ಟದ ಪಟ್ಟ ಕಲ್ಪನೆಗೆ
ಅಂತಂತೆ ಮೈಯೊಡ್ಡಿಕೊಂಡೆನಾ ಯಾತನೆಗೆ
ಕಲ್ಲಾಗಿ ಮಣ್ಣಾಗಿ ಕುಳಿಯಾಗಿ ತೆವರಾಗಿ
ಹುಲ್ಲಾಗಿ ಲತೆಯಾಗಿ ಗಿಡುವಾಗಿ ಮರವಾಗಿ
ಪುಳುವಾಗಿ ಖಗವಾಗಿ ಕಪಿಯಾಗಿ ಮೃಗವಾಗಿ
ಬಳಸಿ ಬಂದಾವಾವ ಯೋನಿಗಂ ತನುವಾಗಿ
ಬೇಳಾಗಿ ಬೆಂಡಾಗಿ ಹಾಳಾಗಿ ಕಾಳಾಗಿ
ಗೋಳುಂಡೆಗೊಂಡು ಬಂದೆಂತಕ್ಕೆ ಪಶುವಾಗಿ
ಏನೇನನೆಂಬೆನೆಂಭತ್ತುನಾಲ್ಕುಂ ಲಕ್ಷ
ಯೋನಿಯೊಳ್ನೆರೆ ತಿರುಗಿಬರುತಂ ವಿರೂಪಾಕ್ಷ
ಕುರುಡನೆಂತಕ್ಕೆ ಲಾವಗೆ ಪಿಡಿದ ತೆರನಾಗೆ
ಧರೆಯೊಳಗೆ ಕಾತ ಕಾಳಿನ ನ್ಯಾಯದಂತಾಗೆ
ಎಂತಕ್ಕೆ ಮನುಜ ಜನ್ಮಕ್ಕೆ ಬರಲನುವಾಗೆ

ತಾಯಿ ತಂದೆಯ ಶುಕ್ಲ ಶೋಣಿತಂ ನೆ[ವ]ವಾಗೆ
ಆಯುವಿಂದವಯವಂ[ಗಳ್] ಬಲಿವುತೊಂದಾಗೆ
ತಾಯ ಪೊಟ್ಟೆಯ ಕರುಳ್ಸುತ್ತೆ ಮಿಗೆ ಸೆಡೆಯುತಂ
ತಾಯೆತ್ತ ಮಗ್ಗುಲಾದತ್ತತ್ತ ಕಡೆಯುತಂ
ಉದರಗತಶಿಖಿಯ ಸೆಕೆ ತಾಗೆ ಮಿಗೆ ಕುಂದುತಂ

ಪುದಿದ ಮಾಸು ಮುಸುಂಕಲುಬ್ಬಸದೊಳೊಂದುತಂ
ಕ್ರಿಮಿ ಕೀಟಕ ಕ್ಷುದ್ರ ಜಂತುವೋಲ್ಬಳೆವುತಂ
ಶ್ರಮದಿಂದ ತಾಯಿ ಬಳಲೊಡನೊಡನೆ ಬಳಲುತಂ
ಕೀವು ನೆತ್ತರ್ನೆಣಂದೊದಹು ಮಿದುಳಂ ಮುತ್ತೆ
ಆವಾವ ಹೇಯಮುಂಟವರವರೊಳುಂ ಸುತ್ತೆ
ಇಂತು ನರಕದ ಬೇರಮನಿಸಿದುದರದ ನಡುವೆ
ಸಂತವೊಂಬತ್ತು ಮಾಸಂ ಪೇಸಿಕೆಯ ನಡುವೆ
ಕತ್ತಲೆಯ ಕರುಳೊಳಗೆ ಮರುಳಂದದಿಂ ಬೆಳೆದು
ಒರ್ತಲೆಯ ಪುಳುವಿನಂತೆಂತಕ್ಕೆ ಬೆಳೆಬೆಳೆದು
ಅಲ್ಲಿ ಕಣ್ಬಲಿಯದಿರೆ ಕುರುಡನಾಗುತೆ ಬಂದು
ಅಲ್ಲಿ ಕಿವಿ ಬಲಿಯದಿರೆ ಕಿವುಡನಾಗುತೆ ಬಂದು
ಅಲ್ಲಿ ನಾಲಗೆ ಬೀಳೆ ಮೂಗನಾಗುತೆ ಬಂದು
ಅಲ್ಲಿ ಕೈ ಬಲಿಯದಿರೆ ಮುಡುಬನಾಗುತೆ ಬಂದು
ಅಲ್ಲಿ ಕಾಲ್ಬಲಿಯದಿರೆ ಹೆಳವನಾಗುತೆ ಬಂದು
ಅಲ್ಲಿ ತನು ಬಲಿಯದಿರೆ ಮುದುಡೆಯಾಗುತೆ ಬಂದು
ಜೀವಂ ಬಲಿಯದಿರಲ್ಬಸುರಿಳಿವುತಂ ಬಂದು
ಆವಾವ ಕಂಟಕಂಗಳ ನಡುವೆ ಸಲೆ ಬೆಂದು

ಬರುತ ಬರುತಡ್ಡವಾಯ್ದೊಡೆ ನೋವು ನೆರೆ ಮಿಕ್ಕು
ಉರವಣಿಸುತಲ್ಲಿ ಕತ್ತರಿ ಕಾರದೊಳು ಪೊಕ್ಕು
ಸರ್ವಾಂಗಮಂ ಕಡಿಯೆ ಮಿಡುಮಿಡನೆ ಮಿಡುಕುತ್ತೆ
ದುರ್ವಹಾವಸ್ಥೆಯಿಂ ತಾಯ್ ನೊಂದು ಬಳಲುತ್ತೆ
ತಾಯ ದೇಹಕ್ಕಲ್ಲಿ ದುಡುದುಡುಕೆಯಾಗುತಿರೆ
ಬಾಯಳಿವುತೆನ್ನಸುಗೆ ಸಂದೇಹಮಾಗುತಿರೆ
ಇಂತು ನಾನಾವಿಧದ ಕಂಟಕಮುಮಂ ಕಳೆದು
ಮುಂತಿರ್ದ ಮಲಮೂತ್ರ ಹೇಸಿಕಿಂದಲೆಯಿಳಿದು
ಸೂಲಗಿತ್ತಿಯ ಕೆಯ್ಯ ಮೊರದೊಳ್ಮುದುಡಿ ಬಿಳ್ದು
ಮೇಲೆ ಮುಸುಕಿರ್ದ ಮಾಂಸಂ ಸುಲಿಯೆ ಹೊಲಸೇಳ್ದು
ನಡನಡನೆ ನಡುಗಿ ಬೆಚ್ಚಂಬಿಲಮುಮಂ ಪೊಯ್ದು
ಮಿಡಮಿಡನೆ ಮಿಡುಕೆ ಪೊಕ್ಕುಳ ಬಳ್ಳಿಯಂ ಕೊಯ್ದು
ಆರಾರಾರದೇಂ ಮಾಳ್ಪರಂತದಕ್ಕೊಳಗಾಗಿ
ಬಾರದ ಭವಂ ಬರಿಸಲಂತದಕ್ಕೊಳಗಾಗಿ

ಏರಾದವುಣ್ಣೊಡಲ ಮೊಲೆಯ ಕೀವಂ ಪೀರ್ದು
ಮಾರಾಗಿ ಮಾಯೆ ಇಚ್ಛೆಗೆ ಬೆಚ್ಚುತೊಳಸಾರ್ದು
ತೊಟ್ಟಿಲೊಳ್ಮಲ ಮೂತ್ರದೊಂದುಂಡೆಯಾಗುತಂ
ಪಟ್ಟಿರ್ದು ಮೊಲೆಗೆ ನಾಲಗೆಗಿಳ್ತು ನೋವುತಂ
ಅಂಬಳಿಕೆ ಉಚ್ಛಿಷ್ಟವಿಳಿಯೆ ನೆರೆ ಜಾರಿಸುತೆ
ಬೆಂಬಳಿಯೊಳಿಳಿವ ಮೂತ್ರವನಲ್ಲಿ ಜಾರಿಸುತೆ
ಕೆರಕಾಗಿ ಕೆರೆಕೆರೆದು ಕಿವಿಯನೊಳಗೊಂದುತಂ
ಪರಿದೊಗೆವ ಸಿಂಬುಳಂ ಶ್ಲೇಷ್ಮದೊಳ್ಮುಳುಗುತಂ
ಮಲವೆಂದು ತಾನರಿಯದೆಲ್ಲವುಂ ತಿನುತಿರ್ದು
ಪುಳುವೆಂಬುದೇನರಿಯದೆಲ್ಲವುಂ ತಿನುತಿರ್ದು
ನಡುವೆ ಬಾಲಗ್ರಹಂ ಪೊಡೆಯೆ ವಿಕೃತಿಗೊಂಡು
ನಡುವೆ ರೋಗಗಳಾಗೆ ಬೆದಬೆದ[ಬೆದ]ನೆ ಬೆಂದು
ಇಂತು ಬಾಲ್ಯದ ನರಕದೊಳಗಾಳುತಿರ್ಪಲ್ಲಿ
ಸಂತತಂ ಘೋರದೊಳ್ತಿರು[ತಿರು]ಗಿ ಬರುತಿರ್ಪಲ್ಲಿ
ನಿನ್ನನಾವಂದದಿಂ ನೆನೆಯಲುಂಟೇ ದೇವ
ನಿನ್ನನಿಂತೆಂದರಿಯಲುಂಟೇ ಮಹಾದೇವ

ಬಳಿಕ ಯೌವನಮಾಗೆ ತಾಯ್ತಂದೆಗಳ್ಕಂಡು
ತಿಳಿದೊಂದು ಮದುವೆಯಂ ಮಾಡಲ್ಮನಂದಂದು
ಹಾಳೂರ ಕೋಳಮಂ ಕೊರಲೊಳಿಕ್ಕುವ ತೆರದಿ
ಕೇಳ ಹೆಳವಂಗೆ ಸಂಕಲೆಯ ಬಂಧಿಪ ತೆರದಿ
ಪಶುವಿನ ಕೊರಲೊಳೊಂದು ಪಾಶವಂ ಬಿಗಿವಂತೆ
ಮಿಸುಕದಂತಲ್ಲೊಂದು ಎಳೆಮರವ ಬಿಗಿವಂಗೆ
ದೈತೆಯಂ ತಂದೊರ್ಬಳಂ ಮದುವೆಯಂ ಮಾಡಿ
ಸೈತಿಕ್ಕಿ ಬಿಡಬಾರದಂತೆ ನೇಹಂಗೂಡಿ
ಆ ಯೌವನದ ಗರ್ವದಿಂ ಧನದ ಗರ್ವದಿಂ
ತಾಯುಳ್ಳ ಪಿತರುಳ್ಳ ರೂಪುಳ್ಳ ಗರ್ವದಿಂ
ದುರ್ವಿಕಾರಂ ಮನವನೆತ್ತಿಕ್ಕೆ ಪರಿಪರಿದು
ದುರ್ಬೋಧರಂ ಕೂಡಿಕೊಂಡು ಸುತ್ತಂ ಸುಳಿದು
ಮದ್ದುಕುಣಿಕೆಯ ಕಾಯನಾವಗಂ [ಮೆಲಿ]ಯುತ್ತೆ
ಹೆಡ್ಡತನದಿಂ ಪರಿದು ನಾ[ಯ ಹಾಲುಂ]ಬಂತೆ
ಒತ್ತರಿಸಿ ಪಿತ್ಥವದು ತಲೆಗೇರಿತೆಂಬಂತೆ
ಒತ್ತಂಬದಿಂ ಗ್ರಹವಿಕಾರವೆಡೆಗೊಂಡಂತೆ

ಲಲನೆಯರ ಸವಿನುಡಿಯು ಕರ್ಣಕಿನಿದಾಗುತಂ
ತಲೆ ಪುಳಿತ ನಾಯಂತೆ ಇರದೆ ಬೇಳಾಗುತಂ
ಕಿವಿಯ ಒಳಗಿರುತಿರ್ಪ ಗುಗ್ಗೆಯಂ ನೋಡದಲೆ
ಅವರ ಹಲ್ಲಿನೊಳಿರ್ಪ ಕಿನಿಚುಮಂ ನೋಡದಲೆ
ಕಣ್ಗಳೆರಡುಂ ನೀರ ಪೊಟ್ಟಣಗಳೆಂದಿರದೆ
ಕಣ್ಗಳೆರಡುಂ ಮುಖದ ಪುಣ್ಗಳೆಂದರಿದಿರದೆ
ನಾಸಿಕ ಸಿಂಬುಳಿನ ಹರಿನಾಳವೆಂದಿರದೆ
ಪೇಸಿಕೆಯ ಮುಖವು ಬಚ್ಚಲ ನಾಳವೆಂದಿರದೆ
ಬಾಯೆಂಬುದೆಲ್ವಡಸಿದೋವರಿಯಿದೆಂದಿರದೆ
ಕಾಯಕ್ಕೆ ನೆಲೆಯಾದ ಬಗದಳವಿದೆಂದಿರದೆ
ನಳಿತೋಳ್ಗಳಸ್ಥಿಗಳದಂಡಗಳು ಎಂದಿರದೆ
ಲಳಿತ ಕಕ್ಷಂ ಬೆಮರ ಬಿಂದುವೆಂದರಿದಿರದೆ
ಬಟ್ಟ ಮೊಲೆಗಳ್ಮಾಸಂದೊಟ್ಟಿಲ್ಗಳೆಂದಿರದೆ
ಪೊಟ್ಟೆಯೆಂಬುದು ಕರುಳಮೊಟ್ಟೆತಾನೆಂದಿರದೆ
ನಡು ಜಿಗುಪ್ಸಾರಸದ ನಟ್ಟನಡುವೆಂದಿರದೆ
ಎಡಬಲದ ಬರಿಗಳೆಲ್ವಿನ ಕಟ್ಟೆಯೆಂದಿರದೆ
ಪೊರವಾರು ಮಲಮೂತ್ರದೊರತೆ ತಾನೆಂದಿರದೆ
ಎರಗಿದೆಂ ಪ್ರಾಯದೊಳು ಬೀಭತ್ಸವೆಂದಿರದೆ
ಒಂದು ಮೂತ್ರದ ಬಟ್ಟೆಯೊಂದಮೇಧ್ಯದ ಬಟ್ಟೆ
ಒಂದೆರಡರೊಳಗಲ್ಲಿ ಮತ್ತೆ ಕಷ್ಟದ ಬಟ್ಟೆ
ಏನೆಂದಪೆಂ ನೆತ್ತರಿಳಿತಿರ್ಪುದದು ಬಟ್ಟೆ
ನಾನಾ ಜಲಂಗಳುಂ ಪರಿತರ್ಪುದದು ಬಟ್ಟೆ
ಪುಳುಗಳುಂ ರಸಿಕೆಯುಂ ಸುರಿತರ್ಪೊಡದು ಬಟ್ಟೆ
ಕಳೆದಿಂದ್ರಿಯಂ ಕೀವು ಸುರಿತರ್ಪಡದು ಬಟ್ಟೆ
ನರರ ನರಕದ ಬಟ್ಟೆಯೆಂದರಿಯದಾನಿದಂ
ಪರಿಕಿಸದೆ ಕೊಂಡಾಡುತಿರ್ದೆನರೆಮರುಳಿದಂ
ಪುಳಿತ ಪೆಣನಂ ಕಡಿದು ತಿನುತಿರ್ಪ ನಾಯಂತೆ
ಕಳಿತ ಮಾಂಸಕ್ಕೆಳಸಿ ತಿಂಬ ಬಳ್ಳುವಿನಂತೆ
ಉಚ್ಚಿಷ್ಟದೊಳ್ಬಾಳುತಿಹ ಹಂದೆತೆರನಂತೆ
ಅಚ್ಚರಿಯ ಪೇಸಿಕೆಯೊಳಗೆ ಮುಳುಗುತಾನಿಂತೆ

ಸವೆದೆನೆಲೆ ಶಂಕರಾ ಶಶಿಧರಾ ಕರುಣಿಸಾ
ಶಿವನೇ ಸದಾಶಿವನೆ ಮಾರಾರಿ ಕರುಣಿಸಾ

ಇಂತಪ್ಪ ಹೇಯದೊಳ್ನಿನ್ನಂ ನೆನೆಯಲುಂಟೆ
ಇಂತಪ್ಪ ಘೋರದೊಳಗಿರ್ದೆನಗೆ ನೀನುಂಟೆ
ಇಂತು ಸತಿಯರ ಮೋಹದೊಳಗೆ ಸಿಕ್ಕಿರುತಿರಲು
ಸಂತತಂ ಯೌವನದ ನರಕದೊಳು ಮುಳುಗಿರಲು
ಚೆನ್ನುಂ ಚರಿತ್ರಮಂ ಕನ್ಯೆಯರ್ಗಾಳಾಗಿ
ಹೊನ್ನುಂ ವಿಳಾಸಮುಂ ವಿಷಯಕ್ಕೆ ಹಾಳಾಗಿ
ಸಂಗಮುಂ ಪ್ರಾಯಮುಂ ದೇಹಕ್ಕೆ ಬರಿದಾಗಿ
ಅಂಗಂಗಳಧಟೆಲ್ಲವಂಗನೆಗೆ ಮಾರಾಗಿ
ಬಳಿಕ ವನಿತೆಯರಲ್ಲಿ ಕಸವಂ ಬಿಸುಡುವಂತೆ
ಹಳೆದಾದ ಹರಿಣೆಯಂ ಪೇಸಿ ಪೊರಮಡಿಪಂತೆ
ನಡೆವೆಣನೆ ನುಡಿವೆಣನೆ ಬಾಳ್ವೆಣನೆ ಪೋಗೆಂದು
ಬಡಿಯದಿರ್ಬಾಲಮಂ ಸುಡು ನಾಯೆ ಛೀ ಎಂದು
ಇಂತು ಸತಿಯರ್ಬಿಡಲು ಬಡತನವದಡಿಯಿಡಲು
ಸಂತತಂ ಕಳೆಯರ್ಪರಿದು ಪೊಗೆ ಮತಿಗೆಡಲು

ತಂದೆ ತಾಯುಂ ಸತ್ತು ಬಂಧು ಬಳಗಂ ಬಿಟ್ಟು
ಸಂದ ಪುರಜನವಕ್ಕಟಾಯೆನಲ್ ನಾಣ್ಗೆಟ್ಟು
ಮರುಳಂತೆ ಮರನಂತೆ ಬರಿಮನೆಗೆ ನಡೆತಂದು
ಎರವಾದರಂತೆ ಸುಯ್ಯನೆ ಸುಯ್ದು ಮಿಗೆ ನೊಂದು
ಅರುವೆಗಪ್ಪಡವುಟ್ಟು ಪೆಂಡತಿಯಿರಲ್ಕಂಡು
ಮರುಗಿ ಮನವಳಿದು ಮನದಲ್ಲಿ ಧಾವತಿಗೊಂಡು
ಜೀವನೋಪಾಯವಂದಂದಿಂಗೆ ಸಲ್ಲದಿರೆ
ಆವಾವ ತೆರದೊಳುಂ ಮನೆವಾಳ್ತೆಗಿಲ್ಲದಿರೆ
ಓಹೋಹೊ ಇಂತಪ್ಪ ಸಮಯದೊಳ್ ಸುತರಾಗೆ
ಆಹ ಮಾರಿಯ ಮೇಲೆ ಪಸನಾದ ತೆರನಾಗೆ
ತನಗೆಯುಂ ಮಕ್ಕಳ್ಗೆಯುಂ ಚಿಂತಿಸುತ್ತಿರ್ದು
ತನಗೆಯುಂ ತನ್ನ ಸತಿಯರ್ಗೆ ಚಿಂತಿಸುತಿರ್ದು
ಸಾಲದಿಂ ಸಿಗ್ಗಾಗಿ ಪಲವುಪಾಸಂ ಪತ್ತಿ
ಬಾಲಕರ್ಬಾಲೆಯರ್ ಕೊಂಬದು ತಿನುತಿರೆ ಮುತ್ತಿ
ಆರಂಬದೊಳ್ ನೋಡೆಯಲ್ಲಿಯಾಗದೆ ಮರುಗಿ
ದೂರಿಸುತೆ ಬೆವಹಾರದಿಂದೆ ತಿಟ್ಟನೆ ತಿರುಗಿ
ಮೊದಲುಮಂ ಲಾಭಮಂ ಕಾಣದೆ ಬಳಸಿ ಬಂದು
ಅದರಿಂದಲೇನುವಾಗದೆ ಚಿತ್ತದೊಳ್ನಿಂದು

ಸೇವಕಾವೃತ್ತಿಯಂ ಮಾಡಲ್ಮನಂದಂದು
ಆವಾವ ದುಃಸ್ಥಿತಿಗೆ ಲಜ್ಜಿಸದೆ ಮೈಸಂದು
ಪತಿಯಪ್ಪ ನಿನ್ನನರಿಯದೆ ನರರ್ಗಾಳಾಗಿ
ಮತಿಗೆಟ್ಟು ಧೃತಿಗುಂದಿ ಮರ್ತ್ಯರ್ಗೆ ತೊಳ್ತಾಗಿ
ನಡುವಿರುಳ್ವೋಗೆ ನಾಲ್ಕಾಲ್ಗಾಗ್ಗವುದಂ ಪೋಗಿ
ಎಡಹುತಂ ತಾಗುತಂ ಲಘುವಾಗಿ ಮರುಳಾಗಿ
ಅಲ್ಲಿಯುಂ ಪಡೆಯದೆ ಮಱುಂಗಿ ಕೊಕ್ಕುಳ್ಗುದಿದು
ಬಲ್ಲಂತೆ ತಿರಿದು ನೋಡುವೆನೆಂದು ಬಸವಳಿದು
ಎಂಟುಗೇಣುದ್ದಮಂ ಗೇಣುದ್ದದೊಳ್ನಿಲಿಸಿ
ಎಂಟುಮಡಿ ಕಾರ್ಪಣ್ಯಮಂ ಮುಖದೊಳಳವಡಿಸಿ
ನಿಂದವರ್ಗಳಂ ಬೇಡಿ ನೆರೆದವರ್ಗಳಂ ಬೇಡಿ
ಬಂದವರ್ಗಳಂ ಬೇಡಿ ಬಲ್ಲವರ್ಗಳಂ ಬೇಡಿ
ತಾನುಳಿಯಲುಳಿದರೆಲ್ಲರನಾವಗಂ ಬೇಡಿ
ಏನೆಂಬೆನೆಲ್ಲಿಯುಂ ಪಡೆಯದೆ ಮೊಗಂ ಬಾಡಿ
ಕಳವಿನೊಳ್ ಬಳಿಸಂದು ತಿರುಗಿ ತಳವೆಳಗಾಗಿ
ಅಳವಳಿವುತೆಲ್ಲಿಯುಂ ಪಡೆಯದಾತುರನಾಗಿ
ಇಂತು ಮನೆವಾಳ್ತೆಗಂ ಕುದಿವ ಹರೆಯದೆ ದೇವ
ಎಂತುವುಂ ನಿನ್ನತ್ತಲೆಳ್ದೆರಗೆ ನಾಂ ದೇವ
ಎರಗದಂತಿರುತಮಿರೆ ಮುಪ್ಪು ಬಂದಡಸಲ್ಕೆ
ತೆರೆ ಪರಿದು ಕಾಯಮಂ ಪರ್ಬಲನುವಾಗಲ್ಕೆ
ಅದನೇನನೆಂದಪೆಂ ಪೇಸಿಕೆಯ ಪಸರಮಂ
ಅದನೆಂತು ಬಣ್ಣಿಪೆಂ ದುರ್ಭಾವ ವಿಸರಮಂ
ನೆರೆ ನೆಗೆದು ಬೆಳ್ಳಿಸಿಸಿ ತಲೆಗೆ ತಲೆದೋರುತಿರೆ
ಪರಿಕಲಿಸಿ ಪಂಜೆಯಿಂ ಪಂಜಲಿಸಿ ಮೀರುತಿರೆ
ತೆರೆ ನೆಗೆಯೆ ಯಮಪುರದ ಸೋಪಾನವೆಂಬಂತೆ
ನರ ಉಬ್ಬಿ ಮೆಯ್ಯೊಳಗೆ ಬಿಳಲ್ವರಿಯುತಂತಂತೆ
ಬಾಗೆ ಬೆನ್ ಪೋಗೆ ಪಲ್ ತೂಗೆ ತಲೆಯಂತಲ್ಲಿ
ಆಗೆ ನರ ಮೈಗೆ ಕಿವಿ ನೀಗೆ ಕೇಳ್ವುದನಲ್ಲಿ
ತೋಳ ತೊವಲುಗಳೆಳ್ದು ನೀಳದಿಂ ಜೋಲುತಿರೆ
ಜಾಳಿಸುತೆ ಕಾಲುಡಿಗಿ ಕೋಲೂರಿ ನೇಲುತಿರೆ
ಕೆಮ್ಮಿಗುಹೆಗಟ್ಟಿ ಘಲ್ಲಿಸಿ ಕುಸುರಿ ಕುಕ್ಕುರಿಸಿ
ಕುಮ್ಮಿಕುಕ್ಕೆಯೊಳಳ್ದು ನೆರೆ ಮುದುಡಿ ಹೊಡಕರಿಸಿ
ಹೂಕರಿಸಲಿಕ್ಕಲಾರದೆಯಸು[ವು]ವೊರೆಯಾಗಿ

ತೇಕರಿಸಿ ತೆರಸಂದು ನೆರೆ ಹಮ್ಮದಂಬೋಗಿ
ಕಿವಿಯೊಳಂ ಕಣ್ಣೊಳಂ ಬಾಯೊಳಂ ಘ್ರಾಣದೊಳು
ತವೆ ಸುರಿವ ಲೋಳೆಯಿಂ ನಾಂದು ನಿತ್ರಾಣದೊಳು
ನಿಂದಿರಲ್ಕೊಂದಡಿಯನೆತ್ತುತಂ ಬೀಳುತಂ
ಬಂದವರ್ಪೇಸುತಿರೆ ಪೇಸಿಕೆಯೊಳಾಳುತಂ
ಪಜ್ಜೆಪಜ್ಜೆಗೆ ಮುದುಡಿ ಬೀಳ್ದು ಮೂಗೂರುತಂ
ಲಜ್ಜೆ ನಾಚಿಕೆಯೆಂಬುವಂ ಸುಟ್ಟು ಕುರುಕು[ತಂ]
ತನಗೆ ಕೆಲಕಡೆಯೊಳುಮ್ಮಳಿಕೆ ಕೊಕ್ಕರಿಸುತಿರೆ
ಮನೆಮಕ್ಕಳೆಲ್ಲರುಂ ಮಿಕ್ಕು ಧಿಕ್ಕರಿಸುತಿರೆ
ಬೈದಡಂ ಕೇಳದೆಢಿಸಿದಡಂ ಕಾಣದಿರೆ
ಐಯ್ದೆ ಸರ್ವೇಂದ್ರಿಯಂ ಚೇತರಿಸಲಾರದಿರೆ
ಇಂತು ಮುಪ್ಪಿನ ನರಕದೊಳಗೆ ಕೋಟಲೆಗೊಂಡು
ಎಂತುವುಂ ನಿನ್ನನರಿಯದೆ ನೆರೆ ಮರುಳ್ಗೊಂಡು

ಇದ್ದಲ್ಲಿ ನಿಮ್ಮುವಂ ನೆನೆಯ ತೆರಹಿಲ್ಲಲ್ಲಿ
ನಿದ್ರೆಯಿಂದರ್ಧಾಯು ತೀರುತ್ತಮಿರಲಲ್ಲಿ
ಸೋಂಕುವ ಬಳಾರಿ ಯಾತ[ನೆ]ಗಳ್ಗೆ ನಡುಗುತಂ
ಬೆಂಕಿನೀರ್ಕಳ್ಳರಿಂ[ದೆಂತ]ಕ್ಕೆ ಬದುಕುತಂ
ಪಿಡಿವ ಪುಲಿ ಫಣಿಗಳಿಂದೆಂತಕ್ಕೆ ಬದುಕುತಂ
ನಡುವೆ ರೋಗಂಗಳೊದಗಲು ಸತ್ತು ಪುಟ್ಟುತಂ
ಇರ್ಪಲ್ಲಿ ನಿಮ್ಮುವಂ ನೆನೆಯಲುಂಟೇ ದೇವ
ಸರ್ಪಭೂಷಣ ನಿನ್ನನರಿಯಲುಂಟೇ ದೇವ
ನೀನೆತ್ತಲಾನೆತ್ತ ಸಂಸಾರದಿರವೆತ್ತ
ನೀನೆಂದರಿವ ಶಿವಜ್ಞಾನಕ್ಕೆ ತೆರಪೆತ್ತ
ಮಾಯೆಯೊಳಗಿರ್ಪರಾರ್ ನಿನ್ನನರ್ಚಿಸುವರಾರ್
ಕಾಯದಿಚ್ಚೆಗೆ ನಡೆದು ನರಕದೊಳು ಬೀಳ್ವರಾರ್
ಬೇಡದೆತ್ತಣ ಮಾತು ಕರುಣಿಸಾ ಶಂಕರಾ
ನೋಡಿ ಕೈವಿಡಿದು ನಿನ್ನವನೆನಿಸು ಶಶಿಧರಾ
ಆವ ತೆರದಿಂ ನಿನ್ನ ನೆನೆ[ವ] ಪೊಳ್ತಂ ಕಾಣೆ
ಆವುದುಂ ಗತಿಯಿಲ್ಲ ಪೊರ್ದಿದೇಂ ನಿನ್ನಾಣೆ
ಕೇಳಯ್ಯ ಸಂಸಾರದಿರವಿದತಿ ಭೀಕರಂ
ಕೇಳಾ ಮಹಾದೇವ ಮಾಯದೋಷಾಕರಂ

ಇಂತು ಮುಪ್ಪಿನೊಳಿರಲು ಯುಮಕಿಂಕರರ್ ಬರಲು
ಸಂತತಂ ಯಮನವರ ಭಯದಿ ನಡುಗುತ್ತಿರಲು
ಮುಪ್ಪು ಮೀರುತ್ತಾಯು ತೀರುತ್ತಮಿರಲಲ್ಲಿ
ಒಪ್ಪವಳಿಯುತ್ತೆ ಧರಣಿಗೆ ಬೀಳ್ದು ಕೆಡೆವಲ್ಲಿ
ಮೇಲೆ ಪೆರ್ಗೂರಿಕ್ಕಿ ನುಡಿವ ನಾಲಗೆ ಬೀಳೆ
ಮೇಲುಸುರ್ ಸೇದುವಾಗಳ್ ತ್ರಾಣವುರೆಯಾಳೆ
ನೆಲದೊಳಿಕ್ಕಿದ ಬಳಿಕ ನೆಂಟರೆಲ್ಲರ್ ನೆರೆದು
ಕೆಲಬಲದೊಳಿಷ್ಟರುಂ ಬಂಧುವರ್ಗಂ ನೆರೆದು
ಅಕ್ಕಟಾ ಗುಣಿ ಮಾನಿ ಬುದ್ಧಿವಂತಂ ನೋಡ
ಅಕ್ಕಟಾ ಈತಂಗೆ ಸಾವು ಬಂದುದು ನೋಡ
ಎನತಮಿರುತಿರಲಲ್ಲಿ ಮರಣ ಶೂಲೆಗಳೆತ್ತೆ
ತನತನಗೆ ಮರುಗಿ ಕಣ್ಗಳ ನೀರನುಣ್ಮುತ್ತೆ
ಇರೆ ಕಾಲ ಕೈಯ್ಯ ಜೀವಂಗಳುಂ ಪೋಗುತಿರೆ
ಇರೆ ಮೆಲ್ಲ ಮೆಲ್ಲನೆಲ್ಲಂ ತಣ್ಣನಾಗುತಿರೆ
ಮೇಲುಸುರ್ಮಿಕ್ಕೇಳೆ ನುಡಿವ ನಾಲಗೆ ಬೀಳೆ
ಕಾಲನವರನುವಾಗೆ ಬಾಯೊಳ್ ಸುರಿಯೆ ಲೋಳೆ
ಮೊಗವೊರ್ಗುಡಿಸಿ ಗೂರು ಪೆಗೂರಿಡುತ್ತಮಿರೆ
ಬಗೆಗೆಟ್ಟು ಸತಿಪುತ್ರರೊಟ್ಟಿ ಒರಲುತ್ತಮಿರೆ
ಪೋದನಿಲ್ಲಿಲ್ಲ ಕಿರಿದುಸುರಿನ್ನುಮಿರ್ದಪುದು
ಪೋದನೆಳ್ಳರೆಯನಿತು ವ್ಯವಧಾನ[ಮಿ]ರ್ದಪುದು
ಎಲೆಲೆಲೇ ಕರ್ಣಮಂತ್ರದ ಪೊಳ್ತು ತಪ್ಪದಿದು
ಎಲೆಲೆ ಸತ್ತಂ ಸತ್ತಮೆನುತಮಿರೆ ನೆರವಿಯದು
ಅಲ್ಲಿಯುಂ ಕೆಲಬರುತ್ಕ್ರಾಂತಿಯಂ ಕೊಂಬುವರು
ಅಲ್ಲಿ ಬಾಗೆಗೆ ಹೆಣಗಿ ನೆರೆ ಜಗಳವಾಡುವರು
ಏನನೆಂಬೆಂ ಸೋಜಿಗದ ಮಾಯೆಯಂದಮಂ
ನಾನಾ ವಿಧದ ಲಜ್ಜೆಗೆಟ್ಟ ಲಘುವೃಂದಮಂ
ಇಂತಪ್ಪ ಸಮಯದೊಳ್ ಕಣ್ಮೇಲೆ ಮರುಳುತಿರೆ
ಅಂತಲ್ಲಿ ಜೀವಮಂ ಯಮದೂತರೆಳೆವುತಿರೆ
ನಂಟರುಂ ನೋಡುತಿರೆ ನಲ್ಲರುಂ ನೋಡುತಿರೆ
ಬಂಟರುಂ ನೋಡುತಿರೆ ಬಡವರುಂ ನೋಡುತಿರೆ
ಬಲ್ಲಿದರ್ ನೋಡುತಿರೆ ಬಲಯುತರ್ ನೋಡುತಿರೆ
ಎಲ್ಲರುಂ ನೋಡುತಿರೆ ಬಲ್ಲರುಂ ನೋಡುತಿರೆ
ಪುತ್ರರುಂ ಪೆತ್ತರುಂ ಪೆಂಡಿರುಂ ನೋಡುತಿರೆ

ಮಿತ್ರರುಂ ಕೂರ್ತರುಂ ಕೊಟ್ಟರುಂ ನೋಡುತಿರೆ
ಅಸುವತ್ತ ಪೋಯ್ತು ಪೆಣನಿತ್ತ ಬಿದ್ದುದು ಕೆಡೆದು
ಬುಸುಸುಯ್ದು ಮಿಗೆ ನೆರವಿ ಬಿಡದಳಲ್ತೊಡಗಿದುದು

ಇಂತಾದ ಬಳಿಕವಾಂ ಮಾಳ್ಪುದಿನ್ನೊಂದುಂಟೆ
ಇಂತು ಬರುದೊರೆವೋದ ಬಳಿಕವೆಚ್ಚರವುಂಟೆ
ಬಳಿಕೆ ದೇವರ್ಗುಂಟೆ ಬಳಿಕೆ ಪಿರಿಯರ್ಗುಂಟೆ
ಬಳಿಕೆ ಪುಣ್ಯಕ್ಕುಂಟೆ ಬಳಿಕೆ ಧರ್ಮಕ್ಕುಂಟೆ
ಪುಟ್ಟಿದೆಂ ಸತ್ತೆನೆಡೆಯೊಳ್ದುಡಿದುದೇನಾಯ್ತು
ಮುಟ್ಟರೀಕ್ಷಿಸಲೊಲ್ಲರೀ ದೇಹವಿಂತಾಯ್ತು
ನಿಮಿಷವಿರಿಸದೆ ಕೊಂಡು ಪೋಗಿ ಸುಟ್ಟರ್ನೋಡ
ನಿಮಿಷಾರ್ಧದಿಂದಚಿರವೀ ದೇಹಮುಂ ನೋಡ
ಇಂತಪ್ಪ ಭವಮಾಲೆಯೊಳಗೆ ಬಂದೆಂ ದೇವ
ಇಂತಿಂತು ಸತ್ತು ಪುಟ್ಟುತ್ತಮಿರ್ದೆಂ ದೇವ
ಜನಿಯಿಸುವ ಕಷ್ಟವಿದು ಬರ್ದುಕುವ ನಿರೋಧವಿದು
ಅನುಗೆಟ್ಟು ಸಾವ ಸಂಕಟದೊಂದವಸ್ಥೆ ಇದು
ದೇವಾ ಇದಕ್ಕೊಂದು ಸುಖವುಂಟೆ ಲೇಸುಂಟೆ
ದೇವಾ ಇದಕ್ಕೊಂದು ಗತಿಯುಂಟೆ ಮತಿಯುಂಟೆ
ಆನೇಕ ಸಂಸಾರವೇಕೆ ಕೇಳೆಲೆ ತಂದೆ
ನೀನು ಎನಗೊಡ್ಡಿದ ಮಹೇಂದ್ರಜಾಲಂ ತಂದೆ
ರಾಜಶೇಖರ ಶರ್ವ ಭವ ಭವಾನೀಧವ
ಈ ಜನ್ಮದೊಳಗೆನಗೆ ಕರುಣಿಸಭವಾ ಭವಾ
ಎಂಬತ್ತುನಾಲ್ಕುಲಕ್ಷದ ಯೋನಿಯಂ ಕಳೆದು
ಶಂಭುವೇ ಎಂತಕ್ಕೆ ಬಂದೆ ನಾನಿದನರಿದು
ಮತ್ತೆಯುಂ ಕೃಪೆಮಾಳ್ಪುದೆನಗೆ ಕರುಣಾಕರಾ
ಮತ್ತೆಯುಂ ಕೃಪೆಮಾಳ್ಪುದೆನಗೆ ಶಶಿಶೇಖರಾ
ಮುಂದುಗೆಟ್ಟೆಂ ಮೂರ್ಖನಾಗಿರ್ದೆನಿನ್ನೆಗಂ
ಇಂದುಧರ ನಿಮ್ಮನರಿಯದೆ ಕೆಟ್ಟೆನಿನ್ನೆಗಂ
ವ್ಯರ್ಥವಾಗುತ್ತಮಿರುತಿರ್ದೆನಾನೆಲೆ ದೇವ
ಸ್ವಾರ್ಥವಿದು ನಿನ್ನ ನೆನೆಯದೆ ಕೆಟ್ಟೆನೆಲೆ ದೇವ
ನಾಡ ಮಾತಂ ಬಳಸುತಿರೆ ಪೊಳ್ತು ಪೋಗುತಿದೆ
ಕೂಡೆ ತೊಳಲುತ್ತಮಿರೆ ಪೊಳ್ತು ಪೋಗುತ್ತಲಿದೆ
ಅಂಜುತ್ತ ಅಳಲುತ್ತಮಿರೆ ಪೊಳ್ತು ಪೋಗುತಿದೆ

ರಂಜಿಸುತೆ ಬೋಧಿಸುತಮಿರೆ ಪೊಳ್ತು ಪೋಗುತಿದೆ
ಕೋಪಿಸುತೆ ಕಾಮಿಸುತಮಿರೆ ಪೊಳ್ತು ಪೋಗುತಿದೆ
ತಾಪಿಸುತೆ ತಲ್ಲಣಿಸುತಿರೆ ಪೊಳ್ತು ಪೋಗುತಿದೆ

ನಿತ್ಯ ಲಿಂಗಾರ್ಚನದೊಳಿರಿಸೆನ್ನನೆಲೆ ದೇವ
ಸತ್ಯ ಶರಣರ ನಡುವೆ ಸಲಿಸೆನ್ನನೆಲೆ ದೇವ
ಊರ್ಧ್ವರೇತಂ ವಿರೂಪಾಕ್ಷನೆಂಬುದು ನಿನಗೆ
ಸದ್ಧರ್ಮವಯ್ಯ ಕರುಣಿಪುದು ಕರುಣಿಪುದೆನಗೆ
ಪುಣ್ಯಪಾಪಂಗಳಿಲ್ಲದ ನಿರ್ಮಳಂ ನೀನೆ
ಗಣ್ಯ[ಗಣಿ]ತಂ ಸಕಲದೇವಕುಲಗುರು ನೀನೆ
ಸಿರಿ ಬಡತನಂಗಳಿಲ್ಲದ ಸದರ್ಥಂ ನೀನೆ
ಹರಿ ಬೊಮ್ಮರೆಚ್ಚರದನಾದಿಲಿಂಗಂ ನೀನೆ
ಜನನಮರಣಂಗಳಿಲ್ಲದ ನಿತ್ಯನುಂ ನೀನೆ
ಘನಮಹಿಮನಾನಂದ ನಿತ್ಯತೃಪ್ತಂ ನೀನೆ
ನೀನೆ ಕರುಣಿಪುದಯ್ಯ ಕಾಮದಿಂ ನೋವಂಗೆ
ನೀನೆ ಕರುಣಿಪುದಯ್ಯ [ಕೋಪದಿಂ ಬೇ]ವಂಗೆ

ದೇಹವುಳ್ಳಲ್ಲಿ ಕಾಮದೊಳಿರ್ಪುದರಿದಲ್ಲ
ದೇಹವುಳ್ಳಲ್ಲಿ ಕೋಪದೊಳಿರ್ಪುದರಿದಲ್ಲ
ಕಾಯುವುಳ್ಳಲ್ಲಿ ನಿಃಕಾಮಿಯೆನಿಸುವುದರಿದು
ಕಾಯವುಳ್ಳಲ್ಲಿ ನಿರ್ಮಾಯನೆನಿಸುವುದರಿದು
ದೇಹವುಳ್ಳಲ್ಲಿ ಸದ್ಗುರುವಂ ಪಡೆವುದರಿದು
ದೇಹವುಳ್ಳಲ್ಲಿ ನಿನ್ನಡಿಯನರ್ಚಿಪುದರಿದು
ಇಂತಿವೆಲ್ಲಂ ನೀನೆ ಕೊಟ್ಟಲ್ಲದಿಲ್ಲಯ್ಯ
ಎಂತಾದೊಡಂ ನಿನ್ನ ಕೃಪೆ ಇಲ್ಲದಿಲ್ಲಯ್ಯ
ನೆನೆವುತ್ತ ನೋಡುತ್ತ ಅರ್ಚಿಸುತ್ತಿರಿಸಯ್ಯ
ಅನುದಿನಂ ನಿಜಭಕ್ತಿ ವಿಕಳನಾಗಿರಿಸಯ್ಯ
ತನುವಿಂಗೆ ರೋಗವಂ ಮಾಡುವುದನಿಷ್ಟವದು
ತನುಪರಿತ್ಯಾಗದೊಳ್ಮರೆಯಿಸೆ ಕನಿಷ್ಟವದು
ದೇಹವಂ ಬಿಡುವಲ್ಲಿ ನೆನೆಯಿಪುದು ಮಧ್ಯಮಂ
ದೇಹಮಂ ಬೆರಸು ಕೊಂಡುಪೋಪುದತ್ಯುತ್ತಮಂ
ಮಧ್ಯಮೋತ್ತಮಗಳೊಳುತ್ತಮವನೇ ಮಾಡೆನಗೆ
ಸಾಧ್ಯವಲ್ಲದುದಿಲ್ಲ ನೋಡಿ ಕರುಣಿಪುದೆನಗೆ

ದೇಹ ಕರುಣಿಗಳರಸ ದೇವ ದಾನಿಗಳರಸ
ದೇವ ಮಾನಿಗಳರಸ ದೇವ ಬೊಳೆಯರರಸ

ಪಂಪಾಪುರದ ನಿಧಿಯೆ ಪಂಪಾಪುರದ ಸುಧೆಯೆ
ಪಂಪಾಪುರದ ಗತಿಯೆ ಪಂಪಾಪುರದ ಮತಿಯೆ
ಪಂಪಾಪುರಾಂಬುನಿಧಿವರ್ಧನ ವಿಮಳಚಂದ್ರ
ಪಂಪಾಪುರಾಬ್ಜವಿಕಸನ ವಿಮಳ ದಿವಸೇಂದ್ರ
ಕರುಣಿಪುದು ಕರುಣಿಪುದು ಪಂಪಾವಿರೂಪಾಕ್ಷ
ಪ್ರತಿಪಾಲಿಪುದು ಗುರುವೆ ಪಂಪಾವಿರೂಪಾಕ್ಷ
ಶ್ರುತಿಗಗೋಚರನಪ್ಪ ಪಂಪಾವಿರೂಪಾಕ್ಷ
ಜಯ ಜಯ ವಿರೂಪಾಕ್ಷ ಜಯ ಜಯ ನಮೋಸ್ತುತೇ
ಜಯ ಜಯ ನಮೋಸ್ತುತೆ ಜಯ ಜಯ ನಮೋಸ್ತುತೆ

ಊಟಂ ನಿದ್ರೆಯ ಮರುಳ್ತನ
ದಾಟಮದಲ್ಲದೆ ಮನಕ್ಕೆ ಮತ್ತೊಂದಿಲ್ಲೀ ।
ಕೋಟಲೆಯಂ ಮಾಣಿಸಿ ನಿ
ಮ್ಮಾಟದೊಳಿರಿಸಯ್ಯ ಹಂಪೆಯ ವಿರೂಪಾಕ್ಷ ॥

❖❖

# ೧೬. ಗುಣಸ್ತೋತ್ರ ರಗಳೆ

ದೇವ ಹರ ದೇವ ಪುರಹರ
ದೇವ ಸದಾವರದ ದೇವ ಚಂದ್ರಾಭರಣಾ ।
ದೇವಪತಿ ಎನಗೆ ಕರುಣಿಸು
ದೇವ ಕೃಪಾವಾರ್ಧಿ ಹಂಪೆಯ ವಿರೂಪಾಕ್ಷಾ ।

ದೇವ ಶ್ರೀಪಂಪಾಪುರದಧಿಪತಿ
ದೇವ ಸದಾನತಸಂಕುಳಸದ್ಗತಿ
ದೇವ ಭಾಸುರ ಪಿಂಗಜಟಾಧರ
ದೇವ ತರಂಗಲಸದ್ಗಂಗಾಧರ
ದೇವ ಮಹೇಶ ಸುಧಾಕರಶೇಖರ
ದೇವ ಕಿರೀಟಾಲಂಕೃತ ಶುಭಕರ
ದೇವ ಮಧುವ್ರತಸಮನೀಳಾಳಕ
ದೇವ ಭವಾನೀಸಮಸುಖ ಪಾಲಕ
ದೇವ ದಿವಾಕರಶಶಿ ಶಿಖಿಲೋಚನ
ದೇವ ನತವ್ರಜಮಾಯಾಮೋಚನ
ದೇವ ಭುಜಂಗಾರಾಜಿತ ಕುಂಡಲ
ದೇವ ಸಮುನ್ನತಘನ ಭುಜಮಂಡಲ
ದೇವ ಜಗತ್ಪಾವನ ಪಂಚಾನನ
ದೇವ ಹರಿಸ್ತುತ ನತಚತುರಾನನ
ದೇವ ನತಜನ ನಿರ್ಮಳ ನಿಶ್ಚಳ
ದೇವ ವಿಶುದ್ಧವಿಶಾಲೋರಃಸ್ಥಳ
ದೇವ ಗಜಾಜಿನಮಂಡಿತವಿಗ್ರಹ
ದೇವ ಪ್ರಮಥನಿಕಾಯಾನುಗ್ರಹ

ದೇವ ನಿಶಿತಾಯುಧಸಂಚಯಧರ
ದೇವ ಸರೋಜೋದ್ಭವಶಿರಕರಧರ
ದೇವ ಸುರವ್ರಜಮಸ್ತಕ ಭೂಷಣ
ದೇವ ಶರಣಸಂಕುಳದಘಶೋಷಣ
ದೇವ ಫಣಾಧರವಳಯವಿಮಂಡಿತ
ದೇವ ನತಜನಸದ್ಗತಿಸೇವಿತ
ದೇವ ಹರಿಬ್ರಹ್ಮಾರ್ಚಿತಪದತಳ
ದೇವ ಯಶೋಧವಳಿತದಿಕ್ಸಂಕುಳ
ದೇವ ಸಜ್ಜನಭವಭಯಭಂಜನ
ದೇವ ನಿರಂತರ ನಿತ್ಯ ನಿರಂಜನ
ದೇವ ಪುರತ್ರಯ ವನದಾವಾನಳ:
ದೇವ ಜಲಂಧರಮೇಘಮಹಾಬಳ
ದೇವ ರತೀಶಮದಾಂಧದಿವಾಕಜರ
ದೇವ ಕೃತಾಂತಕಳೇವರಸಂಹರ
ದೇವ ಸುಪರ್ಣಧ್ವಜ ಚಕ್ರಪ್ರದ
ದೇವ ಮೃಡಾಣೀ ದೇಹಾರ್ಧಪ್ರದ
ದೇವ ವಿಶಾಲ ವೃಷೇಂದ್ರಸುಖಾಸನ
ದೇವ ದಕ್ಷನ ಯಾಗ ವಿನಾಶನ
ದೇವ ಅನೇಕಶ್ರುತಿತತಿದುರ್ಲಭ
ದೇವ ಪುರಂದರಸಂಕುಳವಲ್ಲಭ
ದೇವ ಮಹಾಸಂಪತ್ಪತಿ [ಸ್ನೇಹಿತ]
ದೇವ ವಿಶೇಷಜ್ಞಾನವಿಭೂಷಿತ
ದೇವ ಮುಕ್ತಿನಿಕಾಯವಿರಾಜಿತ
ದೇವ ಶಕ್ತಿತ್ರಯಸಂಸೇವಿತ
ದೇವ ವಿಶುದ್ಧ ಷಡಧ್ವನಿಕೇತನ
ದೇವ ಸದಾ ಶರ್ವಾಣೀಚೇತನ
ದೇವ ಸಮುಜ್ವಲ ಸಾಮರ್ಥ್ಯವ್ರಜ
ದೇವ ನಗರ್ವಿತನಾ ವೃಷಭಧ್ವಜ
ದೇವ ನಿರುಪಮ ನಿರ್ಮಳ ನಿಷ್ಕಳ
ದೇವ ಸದಾವರಣ ಪ್ರಭು ನಿಶ್ಚಳ
ದೇವ ತುಂಬುರವರನಾದಪ್ರಿಯ
ದೇವ ನಾರದ ವರ ವೀಣೋದಯ

ದೇವ ನಾದಪ್ರಿಯ ಸಂಭಾವನ
ದೇವ ಭಕ್ತಪ್ರಕರಮಹಾಘನ
ದೇವ ವಿಕರ್ತನ ಕೋಟಿ ಸಮಪ್ರಭ
ದೇವ ಕೋಟ್ಯಾನಲತೇಜಃಪ್ರಭ
ದೇವ ಜರಾಮಯ ಪಾಪವಿವರ್ಜಿತ
ದೇವ ಪ್ರಳಯಸಮಯ ಘನಗರ್ಜಿತ
ದೇವ ಸುಹೃಜ್ಜನದಾಧಾರಣಗತಿ
ದೇವ ಧರಿತ್ರೀಧರಹರಿ ಸಂಗತಿ
ದೇವ ಪರಿವೃತ ಸುರಭೂರುಹ ಜಯ
ದೇವಾ ಜನಿರಹಿತ ಜ್ಯೋತಿರ್ಮಯ
ದೇವ ಮಹೇಶ್ವರ ದೇವ ಮದೀಶ್ವರ
ದೇವ ಮಹಾಚಲ ದೇವ ಮಹಾಬಳ
ದೇವ ಮಹಾನಭ ದೇವ ಮಹಾಪ್ರಭ
ದೇವ ಮಹಾಶಶಿ ದೇವ ಮಹಾವಶಿ
ದೇವ ಮಹಾಭವ ದೇವ ಮಹಾಶಿವ
ದೇವ ಮಹಾಗುಣಿ ದೇವ ಮಹಾಮಣಿ
ದೇವ ಮಹಾಜಪ ದೇವ ಮಹಾತಪ
ದೇವ ಪಂಪಾಪತಿ ವಿರುಪಾಕ್ಷಾ

ಶರಣು ಸುರತರುವೆ ಶರಣಾಂ
ಬುರುಹ ದಿವಾಕರನೆ ಶರಣು [ಕರು]ಣಾನಿ[ಧಿಯೆ] ।
ಶರಣಾಂಭೋನಿಧಿ ಜಯ ಜಯ
ಕರುಣಿಸು ನೀನೆನಗೆ ಹಂಪೆಯ ವಿರೂಪಾಕ್ಷ

❖❖

# ೧೭. ವಿಭೂತಿಯ ರಗಳೆ

ನೀತಿಯ ನೀತಿ ಜಗತ್ ಪ್ರ
ಖ್ಯಾತಿಯ ನತನೂಹರತ್ವದಾತಿಯನುದ್ಯತ್
ಜ್ಯೋತಿಯನೆ ಪೊಗಳ್ವೆನೊಲ್ದು ವಿ
ಭೂತಿಯನೆಲೆ ಶಿವನೆ ಹಂಪೆಯ ವಿರೂಪಾಕ್ಷ ॥

ಘನ ಸುಖವೀವುದಾವುದು ವಿಭೂತಿ ಜಗತ್ಪ್ರಭುವಾಗಿ ಬಾಳ್ವ ಪೆಂ
ಪಿನ ಪದವೀವುದಾವುದು ವಿಭೂತಿ ಕರಂ ದುರಿತೌಘದಿಂದೆ ನೊಂ
ದನನುರೆ ಕಾವುದಾವುದು ವಿಭೂತಿ ಸಮಸ್ತ ಜನಾನಕ್ಕೆ ಮಂ
ಡನತೆಯನೀವುದಾವುದು ವಿಭೂತಿಯೆ ಹಂಪೆಯ ದೇವನುನ್ನತಂ ॥

ಪರಮಜ್ಞಾನಂ ತ್ರಿಪುಂಡ್ರಂ ಪರಮಗುರುತರಾಯುಷ್ಯದಂ ಶ್ರೀ ತ್ರಿಪುಂಡ್ರಂ ॥
ಪರಮಾಧಾರಂ ತ್ರಿಪುಂಡ್ರಂ ಪರಕೆ ಪರತರಂ ಶಾಶ್ವತಂ ಶ್ರೀ ತ್ರಿಪುಂಡ್ರಂ
ಪರಮಾನಂದಂ ತ್ರಿಪುಂಡ್ರಂ ಪರಮಸುಖನಿಕಾಯಾಸ್ಪದಂ ಶ್ರೀ ತ್ರಿಪುಂಡ್ರಂ
ಹರುಷಂ ಕೈಮಿಕ್ಕು ಪಂಪಾಪುರದರಸ ವಿರೂಪಾಕ್ಷನೊಲ್ವೀತ್ರಿಪುಂಡ್ರಂ ॥

**ಶ್ರೀಪುದಮರರಾಜ ಹರಿ ವಿರಂಚಿಯರ್ಚಿಸುತ್ತಮಿರ್ಪ**
ಕೋಮಲಾಂಘ್ರಿಕಮಲಯುಗಳದಿಂ ವಿರಾಜಿಸುತ್ತಲಿರ್ಪ
ಹಂಪೆಯರಸನೊಲ್ದು ಕೂಡೆ ಧರಿಸಿಯಿರ್ಪ ವರವಿಭೂತಿ
ಇಂಪು ಸೊಂಪು ತಂಪುವಡೆದ ಸಂಪದಪ್ರದಂ ವಿಭೂತಿ
ಭಾಳನಯನದಿಂದೆ ಪುಟ್ಟಿ ಮುಟ್ಟಿ ನಿಷ್ಠೆವಡೆದ ವಿಭೂತಿ
ಶೂಲಧರನ ಹರನ ವರನ ಪರಮಶಕ್ತಿ ಸಲೆ ವಿಭೂತಿ
ಅಮಮ ರುದ್ರನೀಶ್ವರಂ ಸದಾಶಿವಂ ತ್ರಯಂ ತ್ರಿಪುಂಡ್ರ
ಆಮಮ ಪ್ರಣವದಕ್ಷರಸ್ವರೂಪವಿಡಿದ ಈ ತ್ರಿಪುಂಡ್ರ
ಆಹ ನಿಗಮನಿಕರಜನನ ಜನ್ಮಭೂಮಿಯೀ ತ್ರಿಪುಂಡ್ರ
ಆಹ ಹುತವಹತ್ರಯಪ್ರಭಾವ ಜೀವವೀ ತ್ರಿಪುಂಡ್ರ ೧೦

ಎಲೆಲೆ ಸತ್ವ ರಜದ ತಮದ ಕವಲೆನಿಪ್ಪುದೀ ತ್ರಿಪುಂಡ್ರ
ಒಲಿದ ತತ್ವಮಸಿಯೆನಿಪ್ಪ ವಾಕ್ಯದರ್ಥವೀ ತ್ರಿಪುಂಡ್ರ
ಅಲ್ಲಿ ಮೆರೆವುತಿರ್ಪ ಘನತನುತ್ರಯಾತ್ಮಕಂ ತ್ರಿಪುಂಡ್ರ
ಅಲ್ಲಿ ವಿಶ್ವ ತೇಜ ಪ್ರಾಜ್ಞವೆನಿಪ ಜೀವವೀ ತ್ರಿಪುಂಡ್ರ
ಉದ್ಭವಕ್ಕೆ ಶಕ್ತಿರೂಪವೆನಿಸಿ ಒಪ್ಪುವೀ ತ್ರಿಪುಂಡ್ರ
ಅದ್ಭುತಂ ತ್ರಿಕಾಲವಿಸ್ತರ ಸ್ವರೂಪವೀ ತ್ರಿಪುಂಡ್ರ
ಅರರೆ ಭಾಪು ಘುಳುಘುಳಿಪ್ಪಲೋಚನತ್ರಯ ತ್ರಿಪುಂಡ್ರ
ಅರರೆ ಸುರನರೋರಗತ್ರಿಲೋಕವಂದಿತಂ ತ್ರಿಪುಂಡ್ರ
ಎನ್ನ ಪವಣೆ ಸುರರ ಪವಣೆ ಪರಮನಿಡುವ ಗುರುವಿಭೂತಿ
ಪನ್ನಗಪ್ರಧಾನರಳವೆ ಉನ್ನತೋನ್ನತಂ ವಿಭೂತಿ
ಭಕ್ತ ಕುಲದ ಭಾಳತಳದಿ ಬೆಳಪ ತಿಲಕವೀ ವಿಭೂತಿ
ಮುಕ್ತಿಫಲದ ಚೆಲುವುದಳೆದ ರಸದ ಲಹರಿಯೀ ವಿಭೂತಿ
ಶರಣಜನದ ನಿಜದ ಭುಜದ ವಿಜಯಪಟ್ಟವೀ ವಿಭೂತಿ
ಶರಣತತಿಯ ಗತಿಯ ಮತಿಯ ನುತವಿಳಾಸವೀ ವಿಭೂತಿ
ಒಳಗಣಘವನೊಣಗಿಸಿರ್ಪ ವಾಯುಬೀಜವೀ ವಿಭೂತಿ
ಬೆಳಗುತದನೆ ಸುಟ್ಟು ಕಳೆವ ವಹ್ನಿಬೀಜವೀ ವಿಭೂತಿ
ಅಂತರಂಗ ಮಲವನಳಿದು ತೊಳೆವ ಸಲಿಲವೀ ವಿಭೂತಿ
ಕಂತುಹರನನಲ್ಲಿ ನಿಲಿಸಿ ನೆಲಸುವಮೃತವೀ ವಿಭೂತಿ
ಶಿರದೊಳಿಟ್ಟ ಭಸಿತದೊಳ್ ಸದಾಶಿವಂ ಸರಾಗದಲ್ಲಿ
ಹರುಷದಿಂದಮಿರ್ಪನಾವನಿಟ್ಟನವನ ಭಾಳದಲ್ಲಿ
ನೊಸಲೊಳಿಟ್ಟ ಭಸಿತದೊಳಗೆ ಭಾಳನಯನನಿರ್ಪನೊಲಿದು
ಎಸೆವ ಭುಜದ ಭೂತಿಯೊಳಗೆ ಶೂಲಹಸ್ತನಿರ್ಪನೊಲಿದು
ಕೊರಳೊಳಿಟ್ಟ ಭಸಿತವಸಿತಗಳನನೆಸೆಯೆ ತೋರ್ಪುದಲ್ಲಿ
ಉರದೊಳಿಡಲು ಮಾಮಹೇಶನೊಲ್ದು ನೆಲಸಿ ನಿಲ್ವನಲ್ಲಿ
ಕರದೊಳಿಟ್ಟಡಭಯಕರನನಾಥನಾಥನಿರ್ಪನೊಲಿದು
ವರಗಭೀರನಾಭಿಯಲ್ಲಿ ಗಗನಕೇಶನಿರ್ಪನೊಲಿದು
ಸರ್ವದೇಹದಲ್ಲಿ ಧರಿಸಿಯಿರ್ದ ಭಕ್ತರಳವನಮಮ
ಶರ್ವನೊರ್ವನರಿವನುರ್ವಿಯೊಳಗೆ ಬಲ್ಲನಾವನಮಮ
ಪುಣ್ಯಮಾರ್ಗಮುಚಿತವರ್ಗಮಚಲದುರ್ಗಮೀ ವಿಭೂತಿ
ಗಣ್ಯರಹಿತ ವಿಶ್ವಸಹಿತಮಧಿಕವಿಹಿತವೀ ವಿಭೂತಿ
ಬಾಲಕರ್ಗೆ ಭಯವಿದರ್ಗೆ ಭೂತ[ಪ್ರೇತ] ಸೋಂಕಿದರ್ಗೆ
ಬಾಳತಿಗೆ ರುಜಾಧಿಕರ್ಗೆಯುಗ್ರದೈವ ಪಿಡಿದವರ್ಗೆ

ಸಂಚಿಸಿರ್ದ ಪೂರ್ವಜನ್ಮದುಃಖ [ತಾಪ]ವಡಿಸಿದವರ್ಗೆ
ಪಂಚಪಾತಕಂಗಳೊಳ್ ಪೊರಳ್ವಪಾರ ಪಾತಕರ್ಗೆ
ಇದೆ ಮತಂ ವ್ರತಂ ಹಿತಂಯುತಂ ಶ್ರುತಂ ಮಹಾವಿಭೂತಿ
ಸದಮಲಸ್ಥಲಂ ಕುಲಂ ಚಲಂ ಬಲಂ ಫಲಂ ವಿಭೂತಿ
ಶಿಕ್ಷೆಗಾದಿ ದೀಕ್ಷೆಗಾದಿ ಮೋಕ್ಷಕಾದಿಯೀ ವಿಭೂತಿ
ಅಕ್ಷರಂ ಸುಲಕ್ಷಣಂ ಶಿಖೀಕ್ಷಣಂ ಘನಂ ವಿಭೂತಿ
ಪಟ್ಟಬದ್ಧರೆನಿಪ ನೃಪತಿ ಕುಲಕೆ ತಿಲಕವೀ ವಿಭೂತಿ
ನಿಷ್ಠೆಮಿಗೆ ಪತಿವ್ರತಾಜನಕ್ಕೆ ಮಂಗಳಂ ವಿಭೂತಿ
ದೇವಸಭೆಗೆ ಬ್ರಹ್ಮಸಭೆಗೆ ರಾಜಸಭೆಗೆ ಯೋಗ್ಯಮಿದುವೆ
ದೇವರಾಜ ರಾಜನಮರಭೂಜನೊಲ್ವ ಭಾಗ್ಯಮಿದುವೆ
ಗಜಮುಖಂಗೆ ಷಣ್ಮುಖಂಗೆ ಗಿರಿಜೆ ಭರದೊಳಿಡುವ ರಕ್ಷೆ
ವಿಜಯವೆನಿಪ ಗಣಕುಲಕ್ಕೆ ಭಾಳನಯನನಿಡುವ ರಕ್ಷೆ
ವಿಷವನಂದು ಧರಿಸುವಲ್ಲಿ ಪರಮನಿಟ್ಟುಕೊಂಡ ರಕ್ಷೆ
ಅಸಮಪುರವನುರುಪುವಲ್ಲಿ ಕಾಮವೈರಿ ತಳೆದ ರಕ್ಷೆ
ಮುನಿಗಳಚಲ ಮನುಗಳಷ್ಟತನುಗಳಿಡುವ ಘನ ವಿಭೂತಿ
ಮನದೊಳನುದಿನಂ ಮಖಾರಿ ನೆನೆದು ನಲಿವ ನೆಲೆ ವಿಭೂತಿ
ಮಖಝುವನುರುಪುವಲ್ಲಿ ವೀರಭದ್ರನಿಟ್ಟುಕೊಂಡ ಭೂತಿ
ಅಖಿಳ ಜನದ ಮನವ ಬೆಳಗಿ ತೊಳಗುತಿರ್ಪುದೀ ವಿಭೂತಿ
ಶರಭರೂಪಿನಲ್ಲಿ ವೀರನಿಟ್ಟು ನಿಷ್ಠೆವಡೆದ ಭೂತಿ
ಪರಮನಂದು ಪಂಚಶರನನುರುಪಿ ಕಳೆದು ತಳೆದ ಭೂತಿ
ಇಟ್ಟುಕೊಂಡ ಶರಣ ಜನದ ತನುವನೊಪ್ಪವಿಡುವ ಭೂತಿ
ಇಟ್ಟ ಭಕ್ತಿ ಸುಕೃತಫಲವನೆಯ್ದೆ ಬಣ್ಣವಿಡುವ ಭೂತಿ
ಶಶಿಯ ಬೆಳಗನಾಯ್ದುಕೊಂಡು ರವಿಯ ರುಚಿಯನಾಳಿಗೊಂಡು
ಮಿಸುಪ ಮಿಂಚಿನೊಳಗೆ ಪೊಳೆವ ಬಣ್ಣಮಂ ಬಳಲ್ವಿಕೊಂಡು
ಚಿತ್ರಕಾಶ ರಾಶಿಯೆನಿಪುದಭವನಿಡುವುದೀ ವಿಭೂತಿ
ಸತ್ಪ್ರಬುದ್ಧ ಸತ್ಯಶರಣ ಸತ್ಪಥಪ್ರದಂ ವಿಭೂತಿ
ರಜತಗಿರಿ ಸುಧಾಪಯೋಧಿಗಳ್ಗೆ ಬಣ್ಣವಿಡುವ ಭೂತಿ
ನಿಜದ ಬೆಳಗಿನೊರೆಗೆ ದೊರೆಗೆ ಬರ್ಪಬಣ್ಣವೀ ವಿಭೂತಿ
ಸಿಂಗರಕ್ಕೆ ಸಿಂಗರಂ ಚಿರಂ ಕರಂ ವರಂ ವಿಭೂತಿ
ಮಂಗಳಕ್ಕೆ ಮುಖ್ಯ ಮಂಗಳ ಪ್ರಭೂತವೀ ವಿಭೂತಿ
ನೊಸಲ ಕಣ್ಣ ಹಸೆಯೆನಿಪ್ಪುದಸಮನಯನನಿಡುವ ಭೂತಿ
ಎಸೆವ ಹರನ ಹರಣ ಕಿರಣ ವಿಸರವೆನಿಪುದೀ ವಿಭೂತಿ

ಧರೆ ಜಲಾಗ್ನಿ ವಾಯುಗಗನ ವಿಧ್ವಿನಾತ್ಮ ತತಿ ವಿಭೂತಿ
ಪರಮತತ್ತ್ವಸಾರ ಶೈವ ಸುರಭಿ ನೋಡಿದೀ ವಿಭೂತಿ
ನೋಡೆ ಪಾಪಹರಣವೊಲಿದು ಮುಟ್ಟೆ ಪುಣ್ಯತತಿಯ ಬೆಳಸೆ
ಬೇಡಿ ಹೊಗಳೆ ಭುಕ್ತಿ ಮುಕ್ತಿಯೀವುದೀ ವಿಭೂತಿಗೆಳಸೆ
ಇದು ಜಟಾಭರಂ ತ್ರಿನೇತ್ರಮಿಂದುಕಳೆಯನೀವುದಲ್ಲಿ
ಮೃಡನ ರೂಪನಿತ್ತು ನಿತ್ಯಪದದ ತುದಿಯೊಳಿರಿಪುದಲ್ಲಿ
ಧರ್ಮವರ್ಥ ಕಾಮ ಮೋಕ್ಷ ಸತ್ಪದಪ್ರದಂ ವಿಭೂತಿ
ನಿರ್ಮಲಂ ನಿರಂಜನಂ ನಿರಾಮಯಂ ಜಯಂ ವಿಭೂತಿ
ಪಾಪಹರಣವಮೃತಕಿರಣವಿಂದು ಕಿರಣವೀ ವಿಭೂತಿ
ಭಾಪು ಶರಣರಭವಭರಣವೀವ ಹರಣವೀ ವಿಭೂತಿ
ಸುಖಕರಂ ಚಿರಂ ವರಂ ಕರಂ ನಿರಂತರಂ ವಿಭೂತಿ
ನಿಖಿಲ ಭೋಗವಖಿಲ ಯಾಗವತುಳಯೋಗವೀ ವಿಭೂತಿ
ಸುಕೃತಕಾರಿ ಕಾಮವೈರಿಯರ್ಧನಾರಿಯೀ ವಿಭೂತಿ
ಸಕಲಶಕ್ತಿ ಯುಕ್ತಿ ಮುಕ್ತಿ ಭಕ್ತಿ ಭುಕ್ತಿಯೀ ವಿಭೂತಿ
ಧರಿಯಿಸಿರ್ಪ ವರಮುಖಂ ಸಖಂ ಮುಖಂ ಸುಖಂ ವಿಭೂತಿ
ಶರಣತತಿಗೆ ಯೌವನಂ ಘನಂ ಧನಂ ಮನಂ ವಿಭೂತಿ
ಸಿರಿಗೆ ಸಿರಿಗುಣಕ್ಕೆ ಗುಣವನಾದಿಗಾದಿಯೀ ವಿಭೂತಿ
ಧರೆಗೆ ಧರೆ ಜಲಕ್ಕೆ ಜಲವಿನಂಗಿನಂ ಘನಂ ವಿಭೂತಿ
ಹುತವಹಂಗೆ ಹುತವಹಂ ನಭಕ್ಕೆ ನಭವೆನಿಪ್ಪ ಭೂತಿ
ಅತುಳವಾಯುವಿಂಗೆ ವಾಯುವಿಂದುಗಿಂದು ಸಂದ ಭೂತಿ
ಚೇತನಕ್ಕೆ ಚೇತನಂ ಪುರಾತನಂ ಪ್ರಸಿದ್ಧ ಭೂತಿ
ಭೂತ ಹಿತವಜಾತಮಭಿವನಾಥರತಿ ಹಿತಂ ವಿಭೂತಿ
ನತಜನಕ್ಕೆ ಸತ್ಕುಲಂ ಛಲಂ ನಲಂ ಬಲಂ ವಿಭೂತಿ
ಅತಿಶಯಂ ನಯಂ ಜಯಂ ದಯಂ ಪಯಂ ಪ್ರಿಯಂ ವಿಭೂತಿ
ಸೊಂಪತಂಪನೀವಭೂತಿ ವಿಮಲಫಲವನೀವ ಭೂತಿ
ಹಂಪೆಯರಸನೊಲ್ವ ಭೂತಿ ಅಮರಕುಲದ ಸುಧೆ ವಿಭೂತಿ
ಸತ್ಕಕುಲದ ತುದಿ ವಿಭೂತಿ ನಿತ್ಯಪದದ ನೆಲೆ ವಿಭೂತಿ
[ನಿತ್ಯ]ಮುನಿಗಳನು ವಿಭೂತಿ ನಿತ್ಯಪದದ ನೆಲೆ ವಿಭೂತಿ
ಶಿವನ ಕಾಹು ಭವನ ರೂಹು ವರದ ಲೀಲೆ ಪರಮ ಲೀಲೆ
ಭವದ ಭೀತಿ ಶಿವನ ಜಾತಿ ಶ್ರುತಿ ವಿಭೂತಿ ಮತಿ ವಿಭೂತಿ
ಶರಣನಾಗು ಕರಣನೀಗು ಪೆಚ್ಚಿನಂಬು ನಚ್ಚಿನಂಬು
ಧರಿಯಿಸಣ್ಣ ಹರನ ಬಣ್ಣ ಎಲೆಲ ಸಿದ್ಧರೊಲಿಸುಬುದ್ಧ
ಹಂಪೆಯರಸ ನಿಂಪುಸರಸಪ್ರವಾಹ ಭೂತಿ ದೇಹ ನೀತಿ

ಪತಿ ವಿಭೂತಿ ರತಿ ವಿಭೂತಿ ಸಿರಿ ವಿಭೂತಿ ಗುರು ವಿಭೂತಿ
ಜಯಜಯ ಪ್ರಕಾಶಮಯವೆ ಜಯಜಯಂ ನಮೋಸ್ತುತೇ
ಜಯತು ಜಯತು ಭಸ್ಮನಿಧಿಗೆ ಜಯ ಜಯಂ ನಮೋಸ್ತುತೇ ೧೧೦

ವೇದದೊಳಿಲ್ಲಶಾಸ್ತ್ರದೊಳಗಿಲ್ಲ ಪುರಾಣದೊಳಿಲ್ಲ ಮಟ್ಟಿಮ
ಣ್ಣಾದುದನಿಟ್ಟುಗೆಟ್ಟು ನರಕಂಬುಗಲೆ ದ್ದುರ್ಗ್ಗ ಸಂಸ್ಕೃತಿ
ಚ್ಛೇದನವೀ ವಿಭೂತಿ ಸಲೆ ಮಂಗಳಕಾರಣವೀ ವಿಭೂತಿ ಪು
ಣ್ಯೋದಯವೀ ವಿಭೂತಿ ಧರಿಸಣ್ಣನೆ ಹಂಪೆಯರಾಯನುತ್ಸವಂ ॥

ಚೆಲ್ಲುಮ್ಮ ವಿಭೂತಿ ಶಾಂತತೆ ವಿಭೂತಿ ಸುನೀತಿ ವಿಭೂತಿ ಸರ್ವದೊಳ್
ಸಲುವ ವಿಭೂತಿ ಸೌಖ್ಯತೆ ವಿಭೂತಿ ಶಿವೋನ್ನತ ವೀಧಿಗಗ್ಗಳಂ
ನಿಲುವುದು ಭೂತಿ ಪೆಚ್ಚಿಪುದು ಭೂತಿ ವಿರಕ್ತಿ ವಿಭೂತಿ ಕರ್ಮಮಂ
ಗೆಲುವುದು ಭೂತಿ ಸದ್ಗತಿ ವಿಭೂತಿ ! ನೆಗಳ್ದುದು ಹಂಪೆಯಾಳ್ದನೊಳ್ ॥

ರಾಶಿಗೆ ಲಚ್ಚಣವೆನಿಸಿ
ತ್ತೋಸರಿಸದೆ ಭೂತವಾತ ಪೆಂತರದೈವ ।
ಕ್ಕಾಸೆಗೊಡದಿರ್ಪ ಬಲ್ಲುಹ್ವಂ
ಲೇಸೆನಿಸಿತು ಪ್ರಮಥರೆಸೆವ ನೊಸಲತ್ರಿಪುಂಡ್ರಂ ॥

❖❖

# ೧೮. ರುದ್ರಾಕ್ಷಿಯ ರಗಳೆ

ಪುಣ್ಯಂ ರುದ್ರಾಕ್ಷಿ ಸರ್ಪಾಭರಣನ ಘನಸಂಪತ್ತಿ ರುದ್ರಾಕ್ಷಿ ವೇದಾ
ಗಣ್ಯಂ ರುದ್ರಾಕ್ಷಿ ಶೈವಾಗಮನಿಗಮ ಮುಖಕ್ಕಾಯು ರುದ್ರಾಕ್ಷಿ ಸಲ್ಲಾ
ವಣ್ಯಂ ರುದ್ರಾಕ್ಷಿ ಸರ್ವೇಶನ ನಿಜವದನಶ್ರೇಣಿ ರುದ್ರಾಕ್ಷಿ ತತ್ಕಾ
ರುಣ್ಯಂ ರುದ್ರಾಕ್ಷಿ ಪಂಪಾಪುರದರಸ ವಿರೂಪಾಕ್ಷನಕ್ಷಿಪ್ರಭಾವಂ ॥

ಶ್ರೀ ಸಕಳ ಸುರಮಕುಟಮಂಡಿತಪದದ್ವಯನ
ಭಾಸುರ ವಿಳಾಸಯುತನವಭರಣ ಸನ್ನಿಭನ
ಗೌರೀ ಮುಖಾಂಭೋಜ ವಿಕಸನದಿವಾಕರನ
ನಾರಾಯಣಾದಿ ದೇವವ್ರಜ ಸುಧಾಕರನ
ತರಣಿಕುಳ ಕಿರಣತತಿ ಗುರುಕರವರಪ್ರಭನ
ಶರಣರಂತಃಕರಣ ನಿಖಿಳ ಸುಖಸನ್ನಿಭನ
ಕಮಲಸಖ ಕುಮುದಸಖ ಪವನಸಖ ಲೋಚನನ
ನಮಿತ ಜನಕಾಯ ಮಾಯಾಪಾಶ ಮೋಚನನ
ಹಂಪೆಯರಸನ ಲೋಚನೋದ್ಭವಂ ರುದ್ರಾಕ್ಷಿ
ಹಂಪೆಯರಸನ ಮಿಸುಪ ಕಣ್ಣ ಮಣಿ ರುದ್ರಾಕ್ಷಿ

ಒಂದು ಮುಖವೆಂಬುದೇಕೋರುದ್ರನುರುತರಂ
ಸಂದೆರಡು ಮುಖವಪ್ಪುದರ್ಧನಾರೀಶ್ವರಂ
ಮೂರು ಮುಖ ರುದ್ರಾಕ್ಷಿಯೀಶ್ವರ ಸದಾಶಿವಂ
ಮೀರಿ ನಾಲ್ಕೆಂಬುದೇ ಚತುರಯುಗವುಂ ತವಂ
ಪಂಚಮುಖವಾ ಪಂಚವದನನೇ ಬೇರಿಲ್ಲ
ವಂಚಿಸದೆ ಷಣ್ಮುಖಂ ಷಣ್ಮುಖಂ ಮತ್ತಿಲ್ಲ
ಸಪ್ತಮುಖವಾ ಸಪ್ತಮಾತೃಕೆಯರೇ ದಿಟಂ

ಸಪ್ತಾಧಿಕಾನನವದಷ್ಟಮೂರ್ತಿ ಸ್ಫುಟಂ
ನವಮುಖಂಗಳು ನವಗ್ರಹದ ಜನನಸ್ಥಳಂ
ಪವಣುಂಟೆ ದಶಮುಖಂ ದಶಭುಜಮಹೋಜ್ಜಳಂ
ಹನ್ನೊಂದು ಮುಖಮಾಹ ಹನ್ನೊಂದು ರುದ್ರರೇ
ಹನ್ನೆರಡು ವದನಮುಂ ದ್ವಾದಶಾದಿತ್ಯರೇ
ಹದಿಮೂರು ಮುಖವರರೆ ಕಾಮದಂ ಶಾಶ್ವತಂ
ಹದಿನಾಲ್ಕು ಮುಖವೆಂಬುದಾ ಮನುಗಳೂರ್ಜಿತಂ
ಎಣಿಸಲೆನ್ನಳವೆ ಘನಘನಮುಖಂ ರುದ್ರಾಕ್ಷಿ
ತ್ರಿಣಯನಂ ರಂಜಿಸುವ ಭೂಷಣಂ ರುದ್ರಾಕ್ಷಿ
ಉರು ಶಿಖಾಮಣಿಯೊಳಗೆ ಶಶಿಚೂಡನೊಪ್ಪುವಂ
ವರಶಿರೋಮಾಲಿಗೆ ಶಿರೋಮಾಲೆಯೊಪ್ಪುವಂ
ಅಕ್ಷಮಾಲೆಯೊಳಿಕ್ಷುಚಾಪಹರನೊಪ್ಪುವಂ
ಉಕ್ಷವಾಹನನುರದ ಹಾರಮಣಿಯೊಪ್ಪುವಂ
ಕುಂಡಲಕ್ಕುರಗಕುಂಡಲನೊಲಿದು ಹಿಗ್ಗುವಂ
ತಂಡದಿಂ ಕಂಠಮಾಲೆಗೆ ಗಿರಿಶನೊಪ್ಪುವಂ
ಬಾಹುಬಳೆಯಲ್ಲಿಯಾಹಾ ಶೂಲಿಯೊಪ್ಪುವಂ
ಶ್ರೀ ಹಸ್ತಕಟಕದೊಳಗಭಯಕರನೊಪ್ಪುವಂ
ಸರ್ವಾಂಗದೊಳು ಸರ್ವದೇಹಮಯನೊಪ್ಪುವಂ
ಪರ್ವಿ ಪಲ್ಲವಿಸಿ ತಳಿತಿರ್ದ ಹರನೊಪ್ಪುವಂ
ಅದು ಕಾರಣಂ ಶರೀರದೊಳೆಲ್ಲ ಧರಿಯಿಪುದು
ಸದಮಳನನಹಿಧರನನಭವನಂ ಸ್ಮರಿಯಿಪುದು

ಹರನ ಕಂಗಳ ಕಾಂತಿಯುನ್ನತಂ ರುದ್ರಾಕ್ಷಿ
ಪುರಹರನ ಸರ್ವತೋಮುಖವೆಸೆವ ರುದ್ರಾಕ್ಷಿ
ಕಣ್ಣಿಂದೆ ಬಂದವರ ಸಾಮರ್ಥ್ಯದುತ್ಕಟಂ
ಪುಣ್ಯಪ್ರಕರಸೇವ್ಯ ದುರಿತ ದೂರೋತ್ಕಟಂ
ಬೆಳೆದಿಳಿವ ರುದ್ರನಾನಂದಾಶ್ರು ರುದ್ರಾಕ್ಷಿ
ಕಳೆ ಸುನಾದಂ ಬಿಂದುವಿನ ರೂಪು ರುದ್ರಾಕ್ಷಿ
ಶರ್ವನ ಶಿಖಾಮಣಿ ಶಿರೋಮಾಲೆ ರುದ್ರಾಕ್ಷಿ
ಪಾರ್ವತಿಯ ಹಸ್ತಕಟಕಂ ಮೆರೆವ ರುದ್ರಾಕ್ಷಿ
ಅಮಮ ಶಿವಪದಕದೊಳು ಮುಖ್ಯವೀ ರುದ್ರಾಕ್ಷಿ
ಉಮೆಯೈದೆದಾಳಿಯೊಳು ನಾಯಕಂ ರುದ್ರಾಕ್ಷಿ
ಮಂತ್ರಬೀಜಂ ಮಂತ್ರಫಲಸಮಿತಿ ರುದ್ರಾಕ್ಷಿ

ಮಂತ್ರ ತಂತ್ರಂಗಳಾಭರಣವೀ ರುದ್ರಾಕ್ಷಿ
ಪಂಚವದನನ ನೇತ್ರಫಲಸಮಿತಿ ರುದ್ರಾಕ್ಷಿ
ಪಂಚಾಕ್ಷರೀ ಕಲ್ಪಕುಜ ಫಲಂ ರುದ್ರಾಕ್ಷಿ
ಅರರೆ ಮುಕ್ತಿದ್ವಾರದೊಳಗಾದ ರುದ್ರಾಕ್ಷಿ
ಪರತತ್ತ್ವ ಗುಣದೊಡನೆ ಸೇರಿಸುವ ರುದ್ರಾಕ್ಷಿ
ಶಿವನೇತ್ರಭೂಮಿ ಸ್ವಯಂಭುಗಳು ರುದ್ರಾಕ್ಷಿ
ಶಿವನ ಸರ್ವಾಂಗಕೇಶಾಂಬುಗಳು ರುದ್ರಾಕ್ಷಿ
ಶರಣಸಂಕುಳವಜ್ರಪಂಜರಂ ರುದ್ರಾಕ್ಷಿ
ಧರಣೀತಳಕ್ಕೆ ಪಾವನಕರಂ ರುದ್ರಾಕ್ಷಿ
ವರಮುಖಂ ಸುಖಮುಖಂ ಶ್ರೀಮುಖಂ ರುದ್ರಾಕ್ಷಿ
ಹರಮುಖಂ ಪರಮುಖಂ ಸ್ಥಿರಮುಖಂ ರುದ್ರಾಕ್ಷಿ
ಸಕಲ ಸುಕೃತಾಂಕುರದ ಬಿತ್ತುಗಳು ರುದ್ರಾಕ್ಷಿ
ನಿಖಿಲ ಫಲತತಿಗಳ್ಗೆ ತತ್ತುಗಳು ರುದ್ರಾಕ್ಷಿ
ಪರಮಹಂಸಾನನದ ಕಂಜವೀ ರುದ್ರಾಕ್ಷಿ
ಪರಮಮೂರ್ತ್ಯಾಗಮದ ಪುಂಜವೀ ರುದ್ರಾಕ್ಷಿ
ಎಣಿಯಿಸಲ್ಕಳವಲ್ಲ ಗುಣಿಯಿಸಲ್ಕದು ಮತಂ
ಎಣಿಸಲೆನ್ನಳವೇ ತ್ರಿಣಯನಭೂಷಾಂಕಿತಂ
ದುಷ್ಕರ್ಮವಂ ಕೊರೆವ ಕೇಸರದ ಸಾಸಿಗಳು
ನಿಷ್ಕಾಮಿಗಳು ತಾಳ್ವ ಸತ್ಫಲದ ರಾಸಿಗಳು
ಸುಗತಿಯನುಗುಳ್ವ ಪುಣ್ಯದ ಚಿನ್ನಘಟ್ಟಿಗಳು
ಸೊಗಯಿಸುವ ಪದವಿ ಮುಸುರಿದ ಜೇನಹುಟ್ಟಿಗಳು
ಸತ್ಯದಡಕಿಲು ನಿತ್ಯದುಂಡೆಗಳು ರುದ್ರಾಕ್ಷಿ
ಅತ್ಯನುಪಮಾನದಂದದಿಂಡೆಗಳು ರುದ್ರಾಕ್ಷಿ
ಕಾಲವೈರಿಯ ಜಪದ ಮಾಲೆಗಳು ರುದ್ರಾಕ್ಷಿ
ಭಾಳನೇತ್ರನ ನಯನಲೀಲೆಗಳು ರುದ್ರಾಕ್ಷಿ
ಸಕಲ ಘನ ಸಾಮರ್ಥ್ಯಸಾಲೆಗಳು ರುದ್ರಾಕ್ಷಿ
ಸುಕರವೆನಿಸುವ ಸುಖದ ಮಾಲೆಗಳು ರುದ್ರಾಕ್ಷಿ
ವರಶಕ್ತ ರೇಖಾವಿಳಾಸಗಳು ರುದ್ರಾಕ್ಷಿ
ಹರನ ವೇಷದ ಸತ್ಪತಾಕೆಗಳು ರುದ್ರಾಕ್ಷಿ
ಶಿವನ ಸದ್ಭಕ್ತಿಭೂಷಣಮಣಿಗಳಂತಮಮ
ಭವನ ಸದ್ಭಕ್ತಿಗೆ ಶಿರೋಮಣಿಗಳಂತಮಮ
ನೆನೆದುರದಂ ಕೊಡುವ ಚಿಂತಾಮಣಿಗಳವನಿಯೊಳು
ನೆನೆದಂತೆ ರಕ್ಷರಕ್ಷಾಮಣಿಗಳವನಿಯೊಳು

ಭುವನವಂ ಬೆಳಗುವ ದ್ಯುಮಣಿಗಳು ರುದ್ರಾಕ್ಷಿ
ಶಿವಮನೋಹರ ಮಹಾಮಣಿಗಳೀ ರುದ್ರಾಕ್ಷಿ
ಗಂಗೆ ನರ್ಮದೆ ತುಂಗಭದ್ರೆ ಗೋದಾವರಿಯ
ಹಂಗೇಕೆ ಯಮುನೆಯ ಸರಸ್ವತಿಯ ಮಲಹರಿಯ
ಮುಟ್ಟು ತೊಡು ಕಟ್ಟು ನೋಡೊಲಿದು ರುದ್ರಾಕ್ಷಿಯಂ
ಬಿಟ್ಟು ಕಳೆ ಮಿಕ್ಕಿನಾಭರಣಗಳ ಕಾಂಕ್ಷೆಯಂ
ಹರಭಕ್ತಭೂಷಣಂ [ಪೋ]ಷಣಂ ರುದ್ರಾಕ್ಷಿ
ದುರಿತಕುಳ ಶೋಷಣಂ ಭೀಷಣಂ ರುದ್ರಾಕ್ಷಿ
ಅಭವ[ಗೃಹದೋ]ರಣಂ ತೋರಣಂ ರುದ್ರಾಕ್ಷಿ
ವಿಭವತತಿ ಕಾರಣಂ ಧಾರಣಂ ರುದ್ರಾಕ್ಷಿ
ಜಪದಲ್ಲಿ ತಪದಲ್ಲಿ ಹೊಂದುವತಿ ನೇಮದಲಿ
ವಿಪುಳಯಮನಿಯಮದೊಳು ಶಿವಪೂಜೆಯುಚಿತದಲಿ
ಮಂತ್ರದೊಳು ತಂತ್ರದೊಳು ಧರ್ಮದೊಳು ದಾನದೊಳು
ಯಂತ್ರದೊಳು ಯಾಗದೊಳು ನಿರ್ಮಳಸ್ನಾನದೊಳು
ರಕ್ಷೆಯೊಳು ಶಿಕ್ಷೆಯೊಳು ಸಕಲಕಾರ್ಯಂಗಳೊಳು
ದೀಕ್ಷಾವಿಧಾನದೊಳು ಸರ್ವಕರ್ಮಂಗಳೊಳು
ಧರಿಸುತಂ ಮಾಡಿದಡೆ ಸಫಲಮಲ್ಲದಡಫಲ
ಉರುತರಂ ಗುರುತರಂ ಧರಿಯಿಪುದು ಅಮೃತಫಲ

ಅರರೆ ಪುರಮಥನನ ಮನೋಹರಂ ರುದ್ರಾಕ್ಷಿ
ಹರನಲ್ಲಿಗೈದಿಸುವ ಸತ್ಪಥಂ ರುದ್ರಾಕ್ಷಿ
ವಿಷಭೂಷಣಂ ತೊಡುವ ವಜ್ರಾಂಗಿ ರುದ್ರಾಕ್ಷಿ
ವೃಷಭರಾಜನ ಪಕ್ಕರಕ್ಕೆಯೀ ರುದ್ರಾಕ್ಷಿ
ಗಿರಿಜೆ ತೊಡುವಂಗಿಕೆಯ ಸಂಗಡಂ ರುದ್ರಾಕ್ಷಿ
ಹರನ ಮಣಿಮಯಮಕುಟಮಂಡನಂ ರುದ್ರಾಕ್ಷಿ
ಪರಮನ ಜಟಾಸ್ತೋಮರಾಮವೀ ರುದ್ರಾಕ್ಷಿ
ಪರಮೇಶ್ವರನ ತನುಪ್ರೇಮವೀ ರುದ್ರಾಕ್ಷಿ
ಸಕಳನಿಧಿ ರುದ್ರಾಕ್ಷಿ ಸುಕರ ಸುಧೆ ರುದ್ರಾಕ್ಷಿ
ಘನಮಹಿಮೆ ರುದ್ರಾಕ್ಷಿ ಸುಕರ ಸುಧೆ ರುದ್ರಾಕ್ಷಿ
ಘನಮಹಿಮೆ ರುದ್ರಾಕ್ಷಿ ಅನುಪಮಂ ರುದ್ರಾಕ್ಷಿ
ನಿಗಮತತಿ ರುದ್ರಾಕ್ಷಿ ಸುಗತಿಗತಿ ರುದ್ರಾಕ್ಷಿ
ಸಿರಿಗೆ ಸಿರಿ ರುದ್ರಾಕ್ಷಿ ವರಸಮಿತಿ ರುದ್ರಾಕ್ಷಿ
ಪರಮಗುರು ರುದ್ರಾಕ್ಷಿ ವರಸಮಿತಿ ರುದ್ರಾಕ್ಷಿ

ಸಿಂಗರಂ ರುದ್ರಾಕ್ಷಿ ಜಂಗಮಮಂ ರುದ್ರಾಕ್ಷಿ
ಮಂಗಳಂ ರುದ್ರಾಕ್ಷಿ ಅಂಗತತಿ ರುದ್ರಾಕ್ಷಿ
ಜಯತು ಸರ್ಪಾಭರಣವಿತತಿಗೆ ನಮೋಸ್ತುತೇ
ಜಯತು ಹಂಪೆಯ ವಿರೂಪಾಕ್ಷಾ ನಮೋಸ್ತುತೇ ೧೧೭

ಮೋಕ್ಷಶ್ರೀಸದನಂ ಪ್ರಸಿದ್ಧವದನಂ ರುದ್ರಾಕ್ಷಿ ರುದ್ರಾಕ್ಷಿ ಸ
ರ್ವಾಕ್ಷಿ[ವ್ರಾತಕೆ]ಯುನ್ನತೋನ್ನತತರಂ ರುದ್ರಾಕ್ಷಿ ರುದ್ರಾಕ್ಷಿ ಸಂ
ಸೂಕ್ಷ್ಮಾತ್ ಶಂಕರ ಮೂರ್ತಿ ಕೀರ್ತಿಕಳಶಂ ರುದ್ರಾಕ್ಷಿ ರುದ್ರಾಕ್ಷಿ ಸ
ತ್ಪ್ರೇಕ್ಷಂ ಪ್ರಸ್ಫುರಿತಂ ಪ್ರಮೋದಚರಿತಂ ಪಂಪಾ ವಿರೂಪಾಕ್ಷನಾ ॥

❖❖

# ೧೯. ಪಂಚಾಕ್ಷರಿಯ ರಗಳೆ

ಶ್ರೀಮತ್ ಪಂಚಾಕ್ಷರೀಮಂತ್ರದ ಘನ[ತರ] ಸಾಮರ್ಥ್ಯಮಂ ಬಣ್ಣಿಸಲ್ ಸು
ತ್ರಾಮಾದಿಪ್ರೌಢದೇವಪ್ರತತಿಗರಿದೆನಲ್ ಮರ್ತ್ಯದೊಳ್ ಭಕ್ತಿಮಾತ್ರಂ
ಸಾಮಾನ್ಯಂ ಬಣ್ಣಿಪೆಂ ಬಣ್ಣಿಪೆನೆನೆ ಪರಿಹಾಸಾಸ್ಪದಂ ಪ್ರೀತಿಯಿಂದಂ
ಪ್ರೇಮಂ ಕೈಮಿಕ್ಕು ಬಲ್ಲಂದದೆ ಪೊಗಳ್ದಪೆನ್ನೈ ಶ್ರೀ ವಿರೂಪಾಕ್ಷಲಿಂಗಾ ॥

ಶ್ರೀಗುರು ಶಂಕರದೇವರ ದಯೆಯಿಂ
ರಾಗದಿ ಮಾದರಸರ ಘನಕೃಪೆಯಿಂ
ಗುರು ಹಂಪೆಯ ಮಾದರಸರ ದಯದೊಳ್
ವರಪಂಚಾಕ್ಷರಿಯಂ ಧಾರುಣಿಯೊಳ್
ಬಣ್ಣಿಸಿದಂ ಹಂಪೆಯ ಹರಿದೇವಂ
ಬಣ್ಣಿಸಲಳವಲ್ಲಲ್ಲತಿಭಾವಂ
ಆದಡಮೆನ್ನೊಳದೆಂತುಟು ಮತಿಯೊಳು
ಸಾದರದಿಂ ಬಣ್ಣಿಸುವೆಂ ಕ್ಷಿತಿಯೊಳು

ಶ್ರೀಪಂಪಾಪುರದರಸರ ನಾಮಂ
ಭಾಪುರೆ ಶರಣರ ಪರಮಪ್ರೇಮಂ
ಹರಭ[ಕ್ತಿಯನು]ದ್ಧರಿಪಭಿಮಾನಂ
ಶರಣರನೊಲವಿಂ ಹೊರೆವ ನಿಧಾನಂ
ನೋಡೆ ಅಕಾರ ಉಕಾರ ಮಕಾರಂ
ಕೂಡಲ್ ಬಿಂದು ಸಹಿತಮೋಂಕಾರಂ
ತುದಿಯೊಳ್ ನಮಶ್ಶಿವಾಯೆನುತಿರ್ಪುದು
ಮದನಾರಿಯನೊಲವಿಂ ಪಿಡಿತಪ್ಪುದು
ವೇದದ ಮಾತೆಪಿತಂ ಪಂಚಾಕ್ಷರಿ
ವೇದನಿಧಾನಂ ಶ್ರೀ ಪಂಚಾಕ್ಷರಿ

ಶಾಸ್ತ್ರದ ಸರ್ವಸ್ವಂ ಪಂಚಾಕ್ಷರಿ
ವಿಶ್ರುತವೆಲ್ಲರೊಳಂ ಪಂಚಾಕ್ಷರಿ
ಸಕಲಪುರಾಣದೊಳಂ ಪಂಚಾಕ್ಷರಿ
ಸಕಲ ಶ್ರುತಿಗಳೊಳಂ ಪಂಚಾಕ್ಷರಿ
ಮಂತ್ರದ ತಂತ್ರದ ಗತಿ ಪಂಚಾಕ್ಷರಿ
ಯಂತ್ರದ ಯಾಗದ ಪತಿ ಪಂಚಾಕ್ಷರಿ
ಮುಂಚಂ ಶುದ್ಧಗೆಯೋದುವಡೆಲ್ಲಂ
ಪಂಚಾಕ್ಷರಿಯೋದುವುದಿಳೆಯೆಲ್ಲಂ
ಕಡೆಯೊಳ್ ಪಂಚಾಕ್ಷರಿಯ ವಿಧಾನಂ
ಬಿಡದೆ ಸಮಾಪ್ತಿತೆನಿಪ್ಪುದನೂನಂ
ಅದರಿಂ ಪಂಚಾಕ್ಷರಿಯೇ ಸತ್ಯಂ
ಸದಮಳ ಪಂಚಾಕ್ಷರಿಯೇ ನಿತ್ಯಂ
ಪಂಚಾಕ್ಷರಿ ಪರಮನ ಪರಮಾರ್ಥಂ
ಪಂಚಾಕ್ಷರಿ ಶಿವಭಕ್ತರ ಸಾರ್ಥಂ
ಪಂಚಾಕ್ಷರಿ ಜಿಹ್ವೆಯ ಪುಣ್ಯಾರ್ಥಂ
ಪಂಚಾಕ್ಷರಿ ಕರ್ಣಾಮೃತ ತೀರ್ಥಂ
ಗಿರಿಜಾದೇವಿಯ ಗುರು ಪಂಚಾಕ್ಷರಿ
ಹರಿಬೊಮ್ಮರ ಕುಲಗುರು ಪಂಚಾಕ್ಷರಿ
ಗಣಪತಿ ಗುಹರನುಮತಿ ಪಂಚಾಕ್ಷರಿ
ಗಣ [ಸಂಕುಳದು]ನ್ನತಿ ಪಂಚಾಕ್ಷರಿ
ಮುನಿಗಳ ಮುಕ್ತಿಯ ಬೆಳೆ ಪಂಚಾಕ್ಷರಿ
ಮನುಗಳ ಚಿತ್ತದ ಕಳೆ ಪಂಚಾಕ್ಷರಿ
ಶಿವನ ನಿವಾಸಂ ಶ್ರೀ ಪಂಚಾಕ್ಷರಿ
ಭವನಪರಾನಂದಂ ಪಂಚಾಕ್ಷರಿ
ಶರ್ವನ ಪಂಚಮುಖಂ ಪಂಚಾಕ್ಷರಿ
ಶರ್ವನ ಸಾಮರ್ಥ್ಯಂ ಪಂಚಾಕ್ಷರಿ
ಪರಮನ ಕಣ್ಣುಂ ಗತಿ ಪಂಚಾಕ್ಷರಿ
ಪರಮನ ಮತಿಯುನ್ನತಿ ಪಂಚಾಕ್ಷರಿ
ಈಶ್ವರ ಜಪಮಾಲೆಯು ಪಂಚಾಕ್ಷರಿ
ಶಾಶ್ವತ ಸುಖಲೀಲೆಯು ಪಂಚಾಕ್ಷರಿ
ಶಿವಸರ್ವಾವಯವುಂ ಪಂಚಾಕ್ಷರಿ
ಶಿವನ ಮನೋಹರವೀ ಪಂಚಾಕ್ಷರಿ
ಶಿವ ಕರ್ಣಾಭರಣಂ ಪಂಚಾಕ್ಷರಿ

ಶಿವನಂತಃಕರಣಂ ಪಂಚಾಕ್ಷರಿ
ಪಂಚಬ್ರಹ್ಮದ ಶ್ರೀ ಪಂಚಾಕ್ಷರಿ
ಪಂಚಾವರಣಪ್ರಭು ಪಂಚಾಕ್ಷರಿ
ಸತ್ಯದ ಸಾಕಾರಂ ಪಂಚಾಕ್ಷರಿ
ನಿತ್ಯದ ನಿಳಯಂ ಶ್ರೀ ಪಂಚಾಕ್ಷರಿ
ಶರಣಾಳಿಯ ಸುರತರು ಪಂಚಾಕ್ಷರಿ
ಹರನಂ ತೋರುವ ಗುರು ಪಂಚಾಕ್ಷರಿ
ಜ್ಞಾನಲತೆಯ ಕಂದಂ ಪಂಚಾಕ್ಷರಿ
ನಾನಾ ರುದ್ರಪದಂ ಪಂಚಾಕ್ಷರಿ
ಪರಮ ಜ್ಯೋತಿರ್ಲತೆ ಪಂಚಾಕ್ಷರಿ
ಪರಮ ಪವಿತ್ರಂ ಶ್ರೀ ಪಂಚಾಕ್ಷರಿ
ಪರಮಜ್ಞಾನದ ಕೊನೆ ಪಂಚಾಕ್ಷರಿ
ಪರತತ್ತ್ವ ನೆಲೆವನೆ ಪಂಚಾಕ್ಷರಿ
ಅಘಕುಲವನದಾವಂ ಪಂಚಾಕ್ಷರಿ
ಅಘಹರನತುಭಾವಂ ಪಂಚಾಕ್ಷರಿ
ಅಕ್ಷರ ಕುಲಬೀಜಂ ಪಂಚಾಕ್ಷರಿ
ರಕ್ಷೆಗೆ ರಕ್ಷಾನಿಧಿ ಪಂಚಾಕ್ಷರಿ
ಶಬ್ದಬ್ರಹ್ಮಂ ಶ್ರೀ ಪಂಚಾಕ್ಷರಿ
ಶಬ್ದಾಮೃತರಸವೀ ಪಂಚಾಕ್ಷರಿ
ಪ್ರಣವದ ಚೂಡಾಮಣಿ ಪಂಚಾಕ್ಷರಿ
ಪ್ರಣವಪತಾಕಾವಳಿ ಪಂಚಾಕ್ಷರಿ
ಶಿವವಿಸ್ತಾರಂ ಶ್ರೀ ಪಂಚಾಕ್ಷರಿ
ಶಿವನ ಸುಖಾಕಾರಂ ಪಂಚಾಕ್ಷರಿ
ಸಕಲಾಗಮದೊಳಗಿಂತಿದೆ ಮುಖ್ಯಂ
ಸಕಲಾಧ್ವರದೊಳಗಿಂತಿದೆ ಸೌಖ್ಯಂ
ಎಲ್ಲಿರ್ದಾಡೊಡವೇನುಚ್ಚರಿಪುದು
ಎಲ್ಲಾ ಕಾಲದೊಳೊಲ್ದುಚ್ಚರಿಪುದು
ಸರ್ವಕ್ರಿಯಗಳೊಳುಂ ಜಪಿಯಿಪ್ಪುದು
ಸರ್ವಾರಾಧನೆಯೊಳ್ ಜಪಿಯಿಪ್ಪುದು
. . . . . . . . . . ನಿಸಿತು ಪಂಚಾಕ್ಷರಿ
ಮಧುರತರಂ ಶಾಂತಂ ಪಂಚಾಕ್ಷರಿ
ವಿಧಿಯಿಲ್ಲಿಲ್ಲ ನಿಷೇಧಮದಿಲ್ಲಂ
ವಿಧಿವಶವೆಂಬುದು ತನಗಿಲ್ಲಿಲ್ಲಂ

ಪಂಚಮಹಾಪಾತಕ ದುರಿತಹರಂ
ಸಂಚಿತ ದುಷ್ಕರ್ಮಗಳ ನಿವಾರಂ
ಕುಲಕೋಟಿಯನೊಲವಿಂದುದ್ಧರಿಪುದು
ಸಲೆ ಶಿವಸಾಯುಜ್ಯವಮೊಲಿದೀವುದು
ಸಿದ್ಧಿಗೆ ಸಿದ್ಧಿಕರಂ ಪಂಚಾಕ್ಷರಿ
ಬುದ್ಧಿಗೆ ಭೂಷಣವೀ ಪಂಚಾಕ್ಷರಿ
ಸರ್ವಾಧಿಕ್ಯಂ ಶ್ರೀ ಪಂಚಾಕ್ಷರಿ
ಸರ್ವಸುಲಭವಾಹಾ ಪಂಚಾಕ್ಷರಿ
ಸ್ಥೂಲಂ ಸೂಕ್ಷ್ಮಂ ಶ್ರೀ ಪಂಚಾಕ್ಷರಿ
ನೀಲಗಳನ ನಿಜವೀ ಪಂಚಾಕ್ಷರಿ
ಭುಕ್ತಿಯ ಭಾಗ್ಯದ ಬೆಳೆ ಪಂಚಾಕ್ಷರಿ
ಭಕ್ತರ ಮುಕ್ತಿಯ ಕಳೆ ಪಂಚಾಕ್ಷರಿ
ಶರಣರ ಪರುಷದ ಕಣಿ ಪಂಚಾಕ್ಷರಿ
ಶರಣರ ಚಿಂತಾಮಣಿ ಪಂಚಾಕ್ಷರಿ
ತ್ರೈಲೋಕ್ಯಕ್ಕಧಿಪಂ ಪಂಚಾಕ್ಷರಿ
ಭಾಳಾಕ್ಷನ ಸುಖತತಿ ಪಂಚಾಕ್ಷರಿ
ಗುರುಪದವಶ್ಯಂ ಶ್ರೀಪಂಚಾಕ್ಷರಿ
ದುರಿತಘರಟ್ಟಂ ಘನಪಂಚಾಕ್ಷರಿ
ಮರೆದುಚ್ಚರಿಸಲು ಸುರಪದವೀವುದು
ಅರೆದುಚ್ಚರಿಸಲು ಗಣಪದಮೀವುದು
ಪದಪಿಂ ನೆನೆದಡೆ ಶಿವನಂ ತೋರ್ಪುದು
ಮುದದಿಂ ನೆನೆದಡೆ ಶಿವನಂ ಮಾಳ್ಪುದು
ಸಂಪದವಖಿಳಪದಂ ಪಂಚಾಕ್ಷರಿ
ಇಂಪಂ ಸೂಸುವ ಸುಧೆ ಪಂಚಾಕ್ಷರಿ
ಅಣಿಮಾದ್ಯಷ್ಟಗುಣಂ ಪಂಚಾಕ್ಷರಿ
ತ್ರಿಣಯನ ರಾಜಗೃಹಂ ಪಂಚಾಕ್ಷರಿ
ಗುರುತರ ಪರಮಸುಖಂ ಪಂಚಾಕ್ಷರಿ
ಪರಲಿಂಗಂ ಪರವೀ ಪಂಚಾಕ್ಷರಿ
ಮಂತ್ರದ ಮಂತ್ರಂ ಶೈವದ ಶೈವಂ
ಮಂತ್ರಮುಖಕ್ಕಧಿದೈವದ ದೈವಂ
ಸತ್ಯದ ಸತ್ಯಂ ಶ್ರೀ ಪಂಚಾಕ್ಷರಿ
ನಿತ್ಯದ ನಿತ್ಯಂ ಶ್ರೀ ಪಂಚಾಕ್ಷರಿ
ಅತ್ಯಧಿಕಂ ಸದ್ಗತಿ ಪಂಚಾಕ್ಷರಿ

ಅತ್ಯನುಪಮಮೂರ್ಜಿತ ಪಂಚಾಕ್ಷರಿ
ಜನನ ಮರಣ ರಹಿತಂ ಪಂಚಾಕ್ಷರಿ
ನೆನೆವರ ದುರಿತಹರಂ ಪಂಚಾಕ್ಷರಿ ೧೨೦
ಗುರುಪಂಚಾಕ್ಷರಿ ಸಿರಿಪಂಚಾಕ್ಷರಿ
ಗತಿ ಪಂಚಾಕ್ಷರಿ ಮತಿ ಪಂಚಾಕ್ಷರಿ
ಶ್ರುತಿ ಪಂಚಾಕ್ಷರಿ ಸ್ಮೃತಿ ಪಂಚಾಕ್ಷರಿ
ದಯ ಪಂಚಾಕ್ಷರಿ ಜಯ ಪಂಚಾಕ್ಷರಿ ೧೨೪
ಜಯತು ನಮಸ್ತೇ ನಮಃ ನಮಸ್ತೇ

---

ಹರಿಯಜಸುರನರ ಪನ್ನಗ
ಧರರೊಳ್ ಪಂಪಾಪುರಾಧಿನಾಥನ ಪಂಚಾ ।
ಕ್ಷರಿ ಪಂಚಾಕ್ಷರಿ ಪಂಚಾ
ಕ್ಷರಿಯಲ್ಲದೆ ಬೇರೆ ಮತ್ತೆ ಮಂತ್ರಗಳುಂಟೇ ॥

❖❖

## ೨೦. ನಮಃಶಿವಾಯ ರಗಳೆ

ಶ್ರೀಮತ್ ಪಂಚಾಕ್ಷರಿಯ ಮ
ಹಾಮಹಿಮಾಮೃತವನೀಂಟುತಿರಲನುದಿನಮೀ ।
ನೇಮ ನಿನಗೆಂದು ಸದ್ಗುರು
ಪ್ರೇಮದಿ ವರವಿತ್ತನೆಮ್ಮ ಹಂಪೆಯ ರಾಯಂ ॥

ಶ್ರೀಮದಖಿಳ ಸುರನರೋರಗಾರ್ಚಿತಂ ನಮಃ ಶಿವಾಯ
ಹೈಮವತಿ ಮನಸ್ಸರೋಜಷಟ್ಪದಂ ನಮಃ ಶಿವಾಯ
ಸೀಮೆಯಿಲ್ಲದಖಿಳ ಸುಖಸುಧಾರ್ಣವಂ ನಮಃ ಶಿವಾಯ
ಹೇಮಗಿರಿನಿವಾಸ ರಕ್ಷಿಸೆನ್ನ ನೀಂ ನಮಃ ಶಿವಾಯ
ಸೋಮಕಳೆಕಿರೀಟ ಹೊಳೆವ ಮಸ್ತಕಂ ನಮಃ ಶಿವಾಯ
ವ್ಯೋಮನದಿ ಜಟಾಂಶುಧರ ಮಹಾಮಹಿಮ ನಮಃ ಶಿವಾಯ
ಕೋಮಳಾಳಕಂಗಳಗಿವ ಭಾಳದೃಗು ನಮಃ ಶಿವಾಯ
ಆ ಮಹೋರಗೇಂದ್ರಕರ್ಣಕುಂಡಲಂ ನಮಃ ಶಿವಾಯ
ನೊಸಲತಿಲಕ ಚಂದನಾನುಲೇಪನಂ ನಮಃ ಶಿವಾಯ
ಎಸೆವ ಭೂಯುಗಂಗಳೊಪ್ಪೆ ತ್ರ್ಯಂಬಕಂ ನಮಃ ಶಿವಾಯ
ಒಸೆದು ನೆರೆ ಕೃಪಾಕ್ಷಿಗಳ್ ನಿರೀಕ್ಷಿಪಂ ನಮಃ ಶಿವಾ
ಶಿಶುವೆನುತ್ತಲೆನ್ನ ನೋಡಪಾಂಗದಿಂ ನಮಃ ಶಿವಾಯ
ಪುದಿದ ಸೌರಭಂ ಸುಗಂಧಸೇವಿತಂ ನಮಃ ಶಿವಾಯ
ಕದಪು ಮಿಗೆ ಫಣಾಮಣಿ ಪ್ರಕಾಶದಿಂ ನಮಃ ಶಿವಾಯ
ಉದಯದರುಣಕಾಂತಿಗಧಿಕ ಪೊಳೆವಧರ ನಮಃ ಶಿವಾಯ
ವಿದಿತ ಪಂಚಮುಖವಿರಾಜಿತೋನ್ನತಂ ನಮಃ ಶಿವಾಯ
ಸೊಗಯಿಸಿರ್ಪ ಮುಗುಳುನಗೆಯ ಮೋಹನಂ ನಮಃ ಶಿವಾಯ
ಬಗೆಗೆ ಪೊಳೆವ ದಂತಕಾಂತಿಶೋಭಿತಂ ನಮಃ ಶಿವಾಯ
ನಿಗಮ ನಿಳಯವೆನಿಪ ವಾಣಿಯಮೃತಮಯ ನಮಃ ಶಿವಾಯ

ಅಗಣಿತ ಪ್ರಸನ್ನವದನ ಸದ್ಗುಣಂ ನಮಃ ಶಿವಾಯ
ಗರಳಧರನೆನಿಪ್ಪ ನೀಲಕಂಠಗುರು ನಮಃ ಶಿವಾಯ
ಕೊರಲ ತ್ರಿವಳಿ ಮೆರೆವ ಪೇರುರೋನ್ನತಂ ನಮಃ ಶಿವಾಯ
ವಿರಳವಿಡಿದ ರತ್ನಪದಕರಂಜಿತಂ ನಮಃ ಶಿವಾಯ
ಮರಳಿ ಪೊರಳ್ವ ಉರಗಹಾರಲಂಬಿತಂ ನಮಃ ಶಿವಾಯ
ನೆರೆದ ಭುಜವಳಯದ ನಾಗಕಂಕಣಂ ನಮಃ ಶಿವಾಯ
ಕರತಳಂಗಳಬ್ಜದಳ ಸುರೇಖಿತಂ ನಮಃ ಶಿವಾಯ
ಬೆರಲ್ಗಳಿಡಿದ ರತ್ನಮುದ್ರಿಕಾಪ್ರಭಂ ನಮಃ ಶಿವಾಯ
ಧರಿಸಿದಾಯುಧಂಗಳೆಸೆವ ಹಸ್ತದಶ ನಮಃ ಶಿವಾಯ
ಅಭಯ ಪರಶುಖಡ್ಗವಜ್ರಿಶೂಲಧರ ನಮಃ ಶಿವಾಯ
ರಭಸದಿಂದೆ ಜಡಿವ ನಾಗಪಾಶಧರ ನಮಃ ಶಿವಾಯ
ಶುಭಸುನಾದ ಘಂಟೆಯನಲ ಕರವರದ ನಮಃ ಶಿವಾಯ
ಅಭಯ ವಾಮಹಸ್ತದಂಕುಶಾನ್ವಿತಂ ನಮಃ ಶಿವಾಯ
ದಕ್ಷಿಣದಭಯಂಕರ ಪ್ರದಕ್ಷಿಣಂ ನಮಃ ಶಿವಾಯ
ರಕ್ಷಿಸೆನ್ನನಭವ ವರಕಟಾಕ್ಷದಿ ನಮಃ ಶಿವಾಯ
ಲಕ್ಷಿತಾಯುಧಂಗಳುಭಯ ಪಕ್ಷಧರ ನಮಃ ಶಿವಾಯ
ದಕ್ಷಯಾಗಸಂಹರ ತ್ರಯೇಕ್ಷಣಂ ನಮಃ ಶಿವಾಯ
ಪುದಿದ ಜಠರರೇಖೆಯೆಸೆವ ಕೋಮಳಂ ನಮಃ ಶಿವಾಯ
ಉದರ ಮಧ್ಯವಳಯ ನಾಭಿ ಒಪ್ಪಮಿಗೆ ನಮಃ ಶಿವಾಯ
ವಿದಿತ ದಿವ್ಯ ವಸ್ತ್ರದುಡಿಗೆಯನುಪಮಂ ನಮಃ ಶಿವಾಯ
ಮುದದೊಳಿಕ್ಕಿದುರಗಯಜ್ಞಸೂತ್ರಧರ ನಮಃ ಶಿವಾಯ
ಅಡಿಯ ಗೆಜ್ಜೆಯುಲಿವ ಪುಲಿಯ ಚರ್ಮಧರ ನಮಃ ಶಿವಾಯ
ಬಿಡದೆ ಹೊದೆದಿಹಾನೆದೊಗಲ ಗರುವ ಮೃಡ ನಮಃ ಶಿವಾಯ
ನುಡಿದುಘೇ ಜಯೆಂಬ ರುಂಡಮಾಲೆಧರ ನಮಃ ಶಿವಾಯ
ತೊಡೆದ ಭಸಿತದಂಗಸೌಖ್ಯದಮೃತಮಯ ನಮಃ ಶಿವಾಯ
ಅಡಸಿ ಹೊನ್ನಗೆಜ್ಜೆ ಮೆರೆವ ಚರಣಯುಗ ನಮಃ ಶಿವಾಯ
ತೊಡರು ಸಕಳ ಜನವರಪ್ರದಾಯಕಂ ನಮಃ ಶಿವಾಯ
ಇಡಿದ ರತ್ನದಂದುಗೆಯ ಪದೋನ್ನತಂ ನಮಃ ಶಿವಾಯ
ಅಡಿ ಸರೋಜವೆನ್ನ ಮನದೊಳಗಲದಿಹ ನಮಃ ಶಿವಾಯ
ಎಸೆವ ರತ್ನಪೀಠದೊಳ್ ವಿರಾಜಿತಂ ನಮಃ ಶಿವಾಯ
ಒಸೆದು ಜಗವ ಪೊರೆವ ಕರುಣಭಾವದಿಂ ನಮಃ ಶಿವಾಯ
ಎಡದ ಕಡೆಯ ತೊಡೆಯನಡಿಸಿ ಮಡದಿಧರ ನಮಃ ಶಿವಾಯ

ಬಿಡದೆ ನೋಡಿ ನುಡಿಸಿ ನಗುವಪಾಂಗದಿಂ ನಮಃ ಶಿವಾಯ
ಮೃಡೆಯ ಗುರುಕುಚದ್ವಯಂ ಸಮನ್ವಿತಂ ನಮಃ ಶಿವಾಯ
ತಡೆಯದಪ್ಪಿದಂಗ ಸಂಗಸುಖದ ಸುಧೆ ನಮಃ ಶಿವಾಯ
ವಾಮ ಭಾಗದಂಗವಂಗನಾನ್ವಿತಂ ನಮಃ ಶಿವಾಯ
ಕೋಮಳಾಂಗದವಯವಂಗಳುಡಿಗೆ ಮಿಗೆ ನಮಃ ಶಿವಾಯ
ವ್ಯೋಮರತ್ನ ಖಚಿತ ಸಕಳಭೂಷಣಂ ನಮಃ ಶಿವಾಯ
ಆ ಮಹಾತ್ಮನಗಣಿತ ಪ್ರಭಾವಮಯ ನಮಃ ಶಿವಾಯ
ಒಸೆದು ಜಡೆಗಳೆಡೆಯ ಮಡದಿವಿಡಿದ ಮೃಡ ನಮಃ ಶಿವಾಯ
ಪಸರಿಪುಂನತಿಕೆಯ ಕಳಾಪ್ರಸಿದ್ಧಗುರು ನಮಃ ಶಿವಾಯ
ಮಿಸುನಿಯಾಭರಣ ವಿಭೂಷಿತಾಂಗಮಯ ನಮಃ ಶಿವಾಯ
ಎಸೆವನೇಕದಿನಕರ ಪ್ರಭಾವಮಯ ನಮಃ ಶಿವಾಯ
ಸುಕರತರ ಸುಗಂಧವಂಗಲೇಪನಾ ನಮಃ ಶಿವಾಯ
ಪ್ರಕಟವಾಮ ಶಕ್ತಿಧರ ಮನೋಹರಂ ನಮಃ ಶಿವಾಯ
ಸಕಲಭೋಗ ಸುಖ ಸಮೂಹ ತೇಜನಿಧಿ ನಮಃ ಶಿವಾಯ
ಭಕುತಿ ಮುಕುತಿ ಕಾಮಿತ ಪ್ರದಾಯಕಂ ನಮಃ ಶಿವಾಯ
ಇಂತು ತೋರ್ಪ ಸಗುಣಮಯಸದಾಶಿವಂ ನಮಃ ಶಿವಾಯ
ಸಂತತೆನ್ನ ಬಿಡದೆ ಭವಭವಾಂತರಂ ನಮಃ ಶಿವಾಯ
ಅಂತರಂಗ ನಿಳಯದೊಳು ನಿವಾಸನಿಧಿ ನಮಃ ಶಿವಾಯ
ಇಂತು ಮನದೊಳಿದ್ದು ಪೊರೆವ ಶಾಂತಗುರು ನಮಃ ಶಿವಾಯ
ಎಂತು ಪೊಗಳಲರಿದನಾದಿಗಗಣಿತಂ ನಮಃ ಶಿವಾಯ
ಅಂತುದೋರನಖಿಳನಿಗಮ ರಾಸಿಗಂ ನಮಃ ಶಿವಾಯ
ಭ್ರಾಂತಿ ಹೊದ್ದದಧಿಕನಭವನದ್ವಯಂ ನಮಃ ಶಿವಾಯ
ಕಂತುಹರಪದಾನತರ ಭವಾಂತರಂ ನಮಃ ಶಿವಾಯ
ಸತ್ತ್ವರಜತಮೋಗುಣಂಗಳೊತ್ತುನೆಲೆ ನಮಃ ಶಿವಾಯ
ತತ್ತ್ವ ಮೂವತ್ತಾರ ಮೀರಿ ಬೇರಿಹಂ ನಮಃ ಶಿವಾಯ
ಸತ್ಯ ಸುಲಭ ಶಾಶ್ವತ ಪ್ರದಾಯಕಂ ನಮಃ ಶಿವಾಯ
ನಿತ್ಯ ನಿಷ್ಕಳಂಕನಿರುಜ ನಿರ್ಮಳಂ ನಮಃ ಶಿವಾಯ
ಅಚಲನಜನನೇಕ ಕಲ್ಪವಳಿದಡಂ ನಮಃ ಶಿವಾಯ
ಖಚರ ಭೂಚರಾಚರಮರವಂದಿತಂ ನಮಃ ಶಿವಾಯ
ಸುರಚಿತ ಪ್ರಮೋದ ಶುದ್ಧ ಧವಳಿತಂ ನಮಃ ಶಿವಾಯ
ನಿಚಿತಹಾರಮುಚಿತಸಾರ ಶಂಕರಂ ನಮಃ ಶಿವಾಯ
ನಿಗಮವೈದಲಾರದಿಹ ಪರಾಪರಂ ನಮಃ ಶಿವಾಯ
ಬಗೆಗಗಮ್ಯ ಹರಿ ವಿರಂಚಿ ಮುಖ್ಯರಿಗೆ ನಮಃ ಶಿವಾಯ

ಹೊಗಳಲಾದಿ ಮಧ್ಯವಂತವಿಲ್ಲದಂ ನಮಃ ಶಿವಾಯ
ಒಗೆಯದರಸನೇಕರೂಪ ಚಿನ್ಮಯಂ ನಮಃ ಶಿವಾಯ
ನಿರುತನಬ್ಜಭವಭವಂಗಳಗಣಿತದಿ ನಮಃ ಶಿವಾಯ
ದುರಿತ ಭಯರುಜಾದಿಯಘವಿವರ್ಜಿತಂ ನಮಃ ಶಿವಾಯ
ಭರಿತಜಗಚತುರ್ದಶಾದಿಧರೆನಭದಿ ನಮಃ ಶಿವಾಯ
ಚರಿತಯೋಗಿಜನಮನೋಪದಾಂತರದಿ ನಮಃ ಶಿವಾಯ
ಯಂತ್ರವಾಹನಖಿಳ ಜೀವಜಂತುಧರ ನಮಃ ಶಿವಾಯ
ತಂತ್ರಗುಣ ವಿಶೇಷ ಶುದ್ಧಿಸಂಪ್ರದಂ ನಮಃ ಶಿವಾಯ
ಜಂತ್ರ ಗಾತ್ರ ನಾದಪ್ರಿಯ ಪಿನಾಕಧರ ನಮಃ ಶಿವಾಯ
ಮಂತ್ರಮೂರ್ತಿ ಶುದ್ಧ ಸುಪ್ರಕಾಶ ನಿಧಿ ನಮಃ ಶಿವಾಯ
ಹರಿಸರೋಜಸಂಭವಾದಿ ದೇವಪತಿ ನಮಃ ಶಿವಾಯ
ನೆರೆದಮರಕಿರೀಟರತ್ನ ಪೂಜ್ಯಪದ ನಮಃ ಶಿವಾಯ
ಸುರಕುಜಾನಿರ್ಗೆ ಭಕ್ತಿಪಾಲಕಂ ನಮಃ ಶಿವಾಯ
ಶರಣ ಜನ ಮನೋರಥ ಪ್ರದಾಯಕಂ ನಮಃ ಶಿವಾಯ
ಸುರರುಘೇಜಯೆನಲು ಹಂಪೆಯರಸ ಮೃಡ ನಮಃ ಶಿವಾಯ
ಬರದೊಳಖಿಳ ಜಗದ ಜನವ ಪಾಲಿಪಂ ನಮಃ ಶಿವಾಯ
ಕರುಣದಿಂದೆ ವರದ ಮೂರ್ತಿ ಸದ್ಗುರುವೆ ನಮಃ ಶಿವಾಯ
ವಿರೂಪಾಕ್ಷನೆನ್ನಬಿಡದೆ ಸಲಹುತಿಹ ನಮಃ ಶಿವಾಯ
ತುಂಗಭದ್ರಯೋಗ ನಿಜನಿವಾಸ ನಿಧಿ ನಮಃ ಶಿವಾಯ
ಸಂಗ ಭಾಸ್ಕರಾದಿ ಕ್ಷೇತ್ರದಾಶ್ರಯಂ ನಮಃ ಶಿವಾಯ
ಹಿಂಗದಿಹ ಚತುರ್ವಿಧಾರ್ಥ ಸಿದ್ಧಗುರು ನಮಃ ಶಿವಾಯ
ಮಂಗಳಾಪಕಧಿಕ ಜಪಶತೋನ್ನತಂ ನಮಃ ಶಿವಾಯ
ಜಯತು ಜಯ ನಮಶ್ಶಿವಾಯ ಜಯತು ಜಯ ನಮಶ್ಶಿವಾಯ
ಜಯ ಜಯ ನಮಸ್ತೇ ನಮಸ್ತೇ ನಮಸ್ತೇ

ಕಾಮಿತ ಫಲವಂ ಕೊಡುವುದು
ಪ್ರೇಮದೊಳು ನಮಃ ಶಿವಾಯೆಂಬೈದಕ್ಕರ ।
ವಾ ಮಹಿಮೆಯ ಪೊಗಳಲ್ಕಜ
ಶ್ರೀಮಾಧವರಳವೆ ಹಂಪೆಯ ವಿರೂಪಾಕ್ಷ ॥

❖❖

## ೨೧. ಹಂಪೆಯರಸನ ರಗಳೆ

ನಿತ್ಯ ಶ್ರೀಕಂಠಕಂಠಾಭರಣ ಕಿರಣಸಂಘಾತಸಂಭೂತನೂತ್ನಾ
ದಿತ್ಯವ್ರಾತಾಂಗ ಗಂಗಾಧರ ಪುರಹರ ಭಾಳಾಕ್ಷ ಚಂಚದ್ಭವಾನೀ
ಪ್ರತ್ಯಕ್ಷಸ್ವಾಮಿ ಕಾಮಾಂತಕ ನಿಖಿಳಮಖಾಧಾರವಿಸ್ತೀರ್ಣ ಭಕ್ತ
ರ್ಗತ್ಯಂತಪ್ರೇಮಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ದೇವನದಿಯನಿದಿರದೊಡವಿ ನಿಡಿಯಜಡೆಯ ಮುಡಿಯೊಳಿಟ್ಟು
ದೇವಚಂದ್ರ ಕಳೆಯತಳೆಯ ಸೀಳಿನಲ್ಲಿ ಸಂತವಿಟ್ಟು
ಸಕಲರತ್ನ ನಿಕರಖಚಿತ ಮಕುಟಧರನೆ ಹಂಪೆಯರಸ
ಸುಕರವೆನಿಪನರ್ಘ್ಯಕನಕಪಟಲ ನಿಟಲ ಹಂಪೆಯರಸ
ಪ್ರಕಟ ಮಕುಟ ಜಟಾಜೂಟವೆಸೆವ ಮಹಿಮ ಹಂಪೆಯರಸ
ಸಕಲಲೋಕಭರಿತ ನಿರುತ ಸರ್ವಜೀವಿ ಹಂಪೆಯರಸ
ಮರುತಮಿತ್ರ ತರಣಿಯಮೃತಕಿರಣನಯನ ಹಂಪೆಯರಸ
ನೆರೆದ ನವ ಫಣಾಮಣಿಪ್ರಕಾಶಕರ್ಣ ಹಂಪೆಯರಸ
ಮಂಡಿತಪ್ರಚಂಡಕಿರಣ ಗಂಡಯುಗಳ ಹಂಪೆಯರಸ
ತಂಡದಿಂದೆ ದೆಸೆಗೆ ಮಿಸುಪ ಸುಖದ ಮುಖವೆ ಹಂಪೆಯರಸ
ನೀಲಘನವಿಶಾಲವಿಭವ ಕಾಲಕಂಠ ಹಂಪೆಯರಸ
ತೋಳ ಜಾಳಿವೋಳಿವಡೆದ ಶೂಲಹಸ್ತ ಹಂಪೆಯರಸ
ಅಭಯವರದ ಪರದ ತರದ ಮೆರೆದ ಕರದ ಹಂಪೆಯರಸ
ಶುಭಕರಪ್ರಭಾವಿತಾನ ವಿಭವವಕ್ಷ ಹಂಪೆಯರಸ
ಅಸಿತ ವಿಷಮವಿಸರ ವಿಮಳಮಂಡಿತಾಂಗ ಹಂಪೆಯರಸ
ಎಸೆವ ಕೌಮುದೀಸಮಾನ ಭಸಿತಭೂಷ ಹಂಪೆಯರಸ
ವಿಶ್ವಲೋಕಮಿಡಿದು ಬೆಳೆದ ಕುಕ್ಷಿಯೊಡೆಯ ಹಂಪೆಯರಸ
ಶಾಶ್ವತಪ್ರಭಾಗಭೀರನಾಭಿಕಮಲ ಹಂಪೆಯರಸ
[ನಿತ್ಯ] ಕಾಯವೃತ್ತಿ ಮಿಮಲಕೃತ್ತಿವಸನ ಹಂಪೆಯರಸ
ನೇತ್ರಪೂಜೆಗೋಜೆವೆತ್ತಚರಣ[ಯುಗಳ] ಹಂಪೆಯರಸ

ಆದಿ ಮಧ್ಯ ಅಂತ್ಯರಹಿತವಾದ ಲಿಂಗ ಹಂಪೆಯರಸ
ವೇದದರ್ಥವಾದ ನಿರ್ವಿಕಾರರೂಪ ಹಂಪೆಯರಸ
ಪುರವನುರಹಿ ಧರೆಗೆ ಪರಮ ಹರುಷವಿತ್ತ ಹಂಪೆಯರಸ
ಶರಣಜನದ ಹರಣವಾಗಿ ಕರುಣಿಸಿರ್ಪ ಹಂಪೆಯರಸ
ಕೇಳ್ವುದೆನ್ನ ಚೆನ್ನಬಿನ್ನಪಂಗಳು ಮನುಮಾದಿನಾಥ
ತಾಳ್ವುದಿದಿನು ಮುದ್ದುಮಾಡಿ ಭಾವಭರಿತಭಕ್ತಿಯೂಥ

ಸಕಳಕಾಮನಿಕರದಿಂದೆ ವಿಕಳನಾಗುತಿರ್ದೆನಯ್ಯ
ಸುಕರವೆನಿಪ ಭಕ್ತಿಯರಿಯದಖಿಳವಿಷಯಿಯಾದೆನಯ್ಯ
ಕೋಪಲೇಪತಾಪದಿಂದೆ ತಾಪಿಸುತ್ತಲಿರ್ದೆನಯ್ಯ
ಪಾಪಲಾಭ ಲೋಭದಿಂದೆ ಶೋಷಿಸುತ್ತಲಿರ್ದೆನಯ್ಯ
ಮೋಹ ಮದಸಮೂಹದಿಂದೆ ದಾಹಿಸುತ್ತಲಿರ್ದೆನಯ್ಯ
ದೇಹದಿಚ್ಛೆಹೆಚ್ಚಿ ಮಚ್ಚರಕ್ಕೆ ವೇಳೆಯಾದೆನಯ್ಯ
ನಾದಮೂರ್ತಿ ಪುಣ್ಯಕೀರ್ತಿ ಕಾಯ್ದುಕೊಳ್ಳು ಹಂಪೆಯರಸ
ವೇದರಕ್ಷ ವಿಮಳಪಕ್ಷ ರಕ್ಷಿಸೆನ್ನ ಹಂಪೆಯರಸ
ಆಸೆಯಲಗು ನಚ್ಚಿ ಮಚ್ಚಿ ಮನವ ನುಚ್ಚುಮಾಡಿತಯ್ಯ
ಗಾಸಿಯಾಗಿ ನೊಂದು ಬೆಂದು ಬರಿದೆ ಬಳಲುತಿರ್ದೆನಯ್ಯ
ಮನೆಧನಂ ಸುತರ್ಕುಲಂ ನೆಲಭಲಂ ಬಲಂಗಳೆಲ್ಲ
ಜನನಿ ಜನಕ ಬಾಲ್ಯ ಯೌವನಂ ಶರೀರವೆಂಬಿವೆಲ್ಲ
ಮಿಂಚು ಮಂಜು ಕನಸು ಕರಕವೆಂಬ ತೆರನನರಿದುದಿಲ್ಲ
ಸಂಚಲಂ ಮರೀಚಿಕಾಜಲಂಗಳೆಂದು ಬಗೆದುದಿಲ್ಲ
ಗಗನ ಕುಸುಮವಂಬುಲಿಪಿಯನಿತ್ಯವೆಂದು ಬಗೆದುದಿಲ್ಲ
ಮುಗಿಲನೆಳಲ ಮರ್ತ್ಯಚಾಪವಚಿರವೆಂದು ಬಗೆದುದಿಲ್ಲ
ನಿತ್ಯವೆಂದು ನಿರುತವೆಂದು ಮತ್ತೆ ಸಾರುತಿರ್ದೆನಯ್ಯ
ಸತ್ಯವರಿಯದತ್ತಲಿತ್ತ ಸುತ್ತಿ ಬಳಲುತಿರ್ದೆನಯ್ಯ
ಅರಿಯದರಸಿ ಮರೆದು ಮರುಗಿ ಕರುಹುಗೊಂಡೆನೆನ್ನ ಗುರುವೆ
ತೆರಹುಗಾಣದರುಹುಗುಂದಿ ಮರಹುಗೊಂಡೆನೆನ್ನ ಗುರುವೆ

ಮಾಯೆಯಂ ಸಡಿಲ್ಚಿ ಕಳೆದು ಕಾಯೊ ತಂದೆ ಹಂಪೆಯರಸ
ಜೀಯ ನಿತ್ಯಕಾಯ ದೇವರಾಯ ನೋಡು ಹಂಪೆಯರಸ
ವಿಷಯವೆಂಬ ಕೆಸರೊಳದ್ದ ಪಶುವನೆನ್ನ ರಕ್ಷಿಸಯ್ಯ
ಪಶುಪತಿ ಶಿವ ಭವ ಭವಾನಿಯರಸ [ಒಲಿದು] ಕರುಣಿಸಯ್ಯ
ಶ್ರುತಿಗಳರಸಿ ಮತಿಗಳರಸಿ ಯತಿಗಳರಸಿ ಕಾಣದಭವ

ನತಜನಕ್ಕೆ ಮುಂದೆಬಂದು ನಿಂದು ತೋರ್ಪೆ ಕರುಣಿ ವಿಭವ
ಏಕೆ ತಂದೆ ಎನ್ನನೊಮ್ಮೆ ನೋಡಲೊಲ್ಲೆ ಹಂಪೆಯರಸ
ನಾಕಲೋಕಪತಿಗೆ ಪತಿ ಪಿನಾಕಪಾಣಿ ಹಂಪೆಯರಸ

ತಾಯ ಗರ್ಭದೊಳಗೆ ತಗ್ಗಿ ಕುಗ್ಗಿ ಮಗ್ಗುಲೊಳಗೆ ಮಗ್ಗಿ
ಹೇಯವೆನ್ನದಧಮ ರಸಮನುಂಡು ಕರುಳಬಲೆಯೊಳೊಗ್ಗಿ
ಮಲದ ಮೂತ್ರಕುಲದ ನಡುವೆ ಕಲಸಿ ನೆಲಸಿ ತೊಲಗದಿರ್ದು
ಕೆಲಬಲಂಗಳರಿಯದಧಮ ಕೂಪದಲ್ಲಿ ತಾಪಿಸಿರ್ದು
ಕಂದಿ ಕುಂದಿ ಕರಗಿ ಕೊರಗಿ ನೊಂದು ಬೆಂ[ದು ಮಾ]ಸನುಟ್ಟು
ಮುಂದುಗೆಟ್ಟು ಮೂಗುವಟ್ಟು ಮನವನೊಕ್ಕು ಹುಟ್ಟುಗೆಟ್ಟು
ಸೆಡೆದೆ ನುಡಿದೆನಾರೆನೊಲ್ಲೆನಕ್ಕಿದೆಂ ಸಮರ್ಥ ಗುರುವೆ
ತಡೆಯದೆನ್ನನಚ್ಚಭಕುತಿಸುಖದೊಳಿರಿಸು ಪರಮಗುರುವೆ
ಮೀರಿ [ಭ]ವಕೆ ಮಾರುವೋಗಿ ತಾರಿದೆಂ ಮಹಾಮಹೇಶಂ
ಆರೆನಯ್ಯ ಆರೆನಭವ ಆರೆನೆನ್ನ ಚಿತ್ತ್ರಕಾಶ
ದೇವ ನತವಿತಾನವಿವರ ಜಲಧಿಚಂದ್ರ ಕರುಣಿಸೆನಗೆ
ದೇವ ಭಕ್ತನಿಕರ ವಿಕಸಿತಪ್ರಮೋದ ಕರುಣಿಸೆನಗೆ
ಕಮಳಜಾಂಡಫಲಸಮೂಹ ವಿಮಳವೃಕ್ಷ ಹಂಪೆಯರಸ
ಸಮುದಿತಪ್ರತಾಪಭರಿತ ದಿಕ್ಪ್ರತಾನ ಹಂಪೆಯರಸ
ಸುರಸಮಾಜರಾಜರಾಜ ರಾಜಮೌಳಿ ಹಂಪೆಯರಸ
ಗಿರಿಸುತಾಲತಾವೃತಾವಿಕಲ್ಪಭೂಜ ಹಂಪೆಯರಸ
ದೇವರುದ್ರಗಣಸಮುದ್ರ ವೀರಭದ್ರ ಹಂಪೆಯರಸ
ದೇವರಾಜಸುಕೃತಬೀಜ ಸಕಲತೇಜ ಹಂಪೆಯರಸ
ಗುರುವೆ ವರವೆ ಸುಖವೆ ಮುಖವೆ ಪರಕೆ ಪರವೆ ಹಂಪೆಯರಸ
ಉರುತರಪ್ರಕಾಶರಾಶಿ ನತನಿವಾಸಿ ಹಂಪೆಯರಸ
ಈಶ ವಿಗತದೋಷ ಪುಣ್ಯವೇಷ ಕರುಣಿ ಕರುಣಿಸಯ್ಯ
ಪಾಶರಹಿತ ಭಕ್ತಿಭರಿತ ಮುಕ್ತಿಸಹಿತ ಕರುಣಿಸಯ್ಯ
ಕಳೆದು ಮುಳಿದು ಸುಳಿದು ಹೊಳೆದು ಕಾಡಲೇಕೆ ಹಂಪೆಯರಸ
ತಿಳಿದು ಬೆಳೆದು ಭಕ್ತಿಯಿತ್ತು ಕರುಣಿಸೆನಗೆ ಹಂಪೆಯರಸ
ಬಾಲನೊರಲುತಿರ್ದಡೇಕೆ ಕೇಳಲೊಲ್ಲೆ ಹಂಪೆಯರಸ
ಕಾಲಕಾಲ ವಿಮಲಶೀಲ ಭಕುತಿಲೋಲ ಹಂಪೆಯರಸ
ಕಣ್ಗೆ ಕಣ್ಣೆ ಮನಕೆ ಮನವೆ ಗುಣಕೆ ಗುಣವೆ ಹಂಪೆಯರಸ
ಪಣ್ಗೆ ಪಣ್ಣೆ ರಸಕೆ ರಸವೆ ಸವಿಗೆ ಸವಿಯೆ ಹಂಪೆಯರಸ
ಕುಲಕೆ ಕುಲವೆ ಛಲಕೆ ಛಲವೆ ಬಲಕೆ ಬಲವೆ ಹಂಪೆಯರಸ

ನೆಲಕೆ ನೆಲವೆ ಜಲಕೆ ಜಲವೆ ಶಿಖಿಗೆ ಶಿಖಿಯೆ ಹಂಪೆಯರಸ
ಅಸುವಿಗಸುವೆ ತನುಗೆ ತನುವೆ ಘನಕೆ ಘನವೆ ಹಂಪೆಯರಸ
ಶಶಿಗೆ ಶಶಿಯೆ ರವಿಗೆ ರವಿಯೆ ನಭಕೆ ನಭವೆ ಹಂಪೆಯರಸ
ಕರುಣಿ ಕರುಣವಿಲ್ಲದಂತೆ ಇಪ್ಪರೇ ಉಮಾಮಹೇಶ
ತ[ರಳ]ನೊರಲುತಿರ್ದಡುಸುರದಿರ್ಪರೇ ಮಹಾಮಹೇಶ

ಎನಗೆ ತಂದೆ ತಾಯಿ ಬಂಧು ಬಳಗವಚಲಸಿದ್ಧ ನೀನೆ
ಎನಗೆ ಸುಗತಿ ಸುಮತಿ ಸುಮತಿ ಪೆಂಪು ಸೊಂಪು ತಂಪು ನೀನೆ
ತನುವಿನೊಳಗೆ ತೆರಹುಗುಡದೆ ತೀವಿ ನಿಲ್ಲು ಹಂಪೆಯರಸ
ಮನದ ಕಂಗಳೊಳಗೆ ನಿಂದು ಸುಖವನೀಯೊ ಹಂಪೆಯರಸ
ಎನ್ನ ಚಿತ್ತದೊಳಗೆ ತಿಳಿದು ತೊಳಗಿ ಬೆಳಗು ಹಂಪೆಯರಸ
ಎನ್ನ ಭಾವದೊಳಗೆ ಕರುಣವೆರಸಿ ಬೆರಸು ಹಂಪೆಯರಸ
ನುಡಿಯದಿಂತು ಸುಮ್ಮನಿರ್ದಡೆಂತು ಬದುಕುವೆಂ ತ್ರಿಶೂಲಿ
ನುಡಿದು ನೋಡಿ ರಕ್ಷಿಸೆನ್ನನಕ್ಕರಿಂ ಕಪಾಲ ಮಾಲಿ
ನೋಡಿ ನೋಡದಿರ್ಪರುಂಟೆ ಕೂಡಿ ಕೂಡದಿರ್ಪರುಂಟೆ
ಮಾಡಿ ಮಾಡದಿರ್ಪರುಂಟೆ ಬಯಸಿವೊಲ್ಲದಿರ್ಪರುಂಟೆ
ಭಕುತಿಸುಖವನೀಯದಿಹುದಿದಾವ ಹೆಂಪು ಹಂಪೆಯರಸ
ಯುಕುತಿ ಏಕೆ ಶಿಶಿವಿನೊಡನೆ ಪಶುವಿನೊಡನೆ ಹಂಪೆಯರಸ
ನಿಧಿಯೆ ನಿಲವೆ ನಿಜವೆ ನಿಶ್ಚಲಪ್ರಮೋದಭಕ್ತರೊಲವೆ
ಸುಧೆಯೆ ಸುಖವೆ ಶುಭವೆ ಶುಚಿಯೆ ಸುರುಚಿರಪ್ರಕಾಶಬಲವೆ
ಭವಭವಂಗಳೊಳಗೆ ಬಂದು ಸವೆದೆನಯ್ಯ ಹಂಪೆಯರಸ
ನವನವಾಳಿ ಜನನದಿಂದೆ ನೊಂದೆನಯ್ಯ ಹಂಪೆಯರಸ
ಹುಟ್ಟಿ ಸವೆದು ಸತ್ತು ಮತ್ತೆ ಹುಟ್ಟಿ ಸಾಯಲಾರೆನಯ್ಯ
ಹುಟ್ಟದಂತೆ ಭವವನ್ನೈದೆ ಮುಟ್ಟದಂತೆ ಕರುಣಿಸಯ್ಯ
ಪರಮಪುರುಷ ಸೌಖ್ಯ ವರುಷ ಪುಣ್ಯಪುರುಷ ಹಂಪೆಯರಸ
ಗರಳಧರನೆ ದುರಿತಹರನೆ ಶರಣವರನೆ ಹಂಪೆಯರಸ
ಅಂಧಕಾಸುರ ಪ್ರಮದ ಪ್ರದೀಪರುದ್ರ ಹಂಪೆಯರಸ
ಸಿಂಧುರಾಸುರ ಪ್ರಮರ್ದ ಚರ್ಮಧಾರಿ ಹಂಪೆಯರಸ
ಕಲಿ ಜಲಂಧರಾಸು[ರಾದಿ] ಜೀವಹರಣ ಹಂಪೆಯರಸ
ಕುಲಿಶಧರ ವಿರಿಂಚಿ ವಿಷ್ಣುವಂದ್ಯಪಾದ ಹಂಪೆಯರಸ

ಅಖಿಲ ಗುರುವೆ ಹಂಪೆಯರಸ
ನಿಖಿಳ ಗುರುವೆ ಹಂಪೆಯರಸ

ದಾನನಿಧಿಯೆ ಹಂಪೆಯರಸ
ಮಾನನಿಧಿಯೆ ಹಂಪೆಯರಸ
ಗಿರಿಜೆಯರಸ ಹಂಪೆಯರಸ
ಪರಮಪುರುಷ ಹೆಂಪೆಯರಸ
ವೇದದೂರ ಹಂಪೆಯರಸ
ನಾದಸಾರ ಹಂಪೆಯರಸ

ದೇವರಮ್ಮ ಭಾವಗಮ್ಯ
ಬಹಳ ನಿತ್ಯ ಸಹಜ ಸತ್ಯ
ಭೃತ್ಯ ಸುಲಭ ಸತ್ಯ ಸುಲಭ
ಪರಶುಧರನೆ ಕರುಣಿ ಹರನೆ
ನೋಡು ಶಿವನೆ ನೋಡು ಭವನೆ
ಬಾರ ದೇವ ಸಾರ ಹೃದಯ
ಮಂಗಳಾಬ್ಧಿ ತುಂಗಳಾಬ್ಧಿ
ವಿಷಮನೇತ್ರ ಭಸಿತಗಾತ್ರ
ಜಂಗಮಾರ್ಥಿ ಲಿಂಗಮೂರ್ತಿ
ರಕ್ಷಿಸಯ್ಯ ಈಕ್ಷಿಸಯ್ಯ
ದೇವ ಈಶ ಕಾವು ದೀಶ
ಅಗಳಾಗಳೀಗಳೀಗ
ಅತುಳ ಕಾಯ ನತನಿಕಾಯ
ದೇವ ಗುರುವೆ ದೇವ ತರುವೆ
ದೇವ ಗತಿಯೆ ದೇವ ಪತಿಯೆ
ದೇವ ಹಂಪೆಯರಸ ಜಯತು
ಜಯ ಜಯ ನಮಸ್ತೇ ನಮಸ್ತೇ ನಮಸ್ತೇ ೧೩೬

ಮೃಡ ನಿಮಗೆ ಭವಭವಂಗಳೊ
ಳೆಡೆಯುಡುಗದ ಭೃತ್ಯನೆನ್ನನದುಕಾರಣದಿಂ ।
ಬಿಡದಿರ್ ಬಿಡದಿರ್ ಬಿಡದಿರ್
ಬಿಡದಿರ್ ದಮ್ಮಯ್ಯ ಹಂಪೆಯವಿರೂಪಾಕ್ಷಾ ॥

❖❖

# ೨೨. ಜಯ ರಗಳೆ

ಸುರರಾಜರಾಜ ರಾಜಾ
ಭರಣ ಭವಾನೀಮನಸ್ಸುಧಾಂಭೋಧಿಸುಧಾ
ಕರ ಶರಣಭರಿತ ಪರಮೇ
ಶ್ವರ ಕರುಣಿಪುದೆನಗೆ ಹಂಪೆಯ ವಿರೂಪಾಕ್ಷಾ ॥

ಶ್ರೀಪಂಪಾನಗರೀ ನಿವಾಸ ಜಯ
ತಾಪತ್ರಯಹರ ಸುಕೃತವೇ ಜಯ
ಕೆಂಜೆಡೆಗಳ ಕಮನೀಯರೂಪ ಜಯ
ರಂಜಿಪ ಚಂದ್ರಕಲಾಪದೀಪ ಜಯ
ಗಂಗಾತರಳತರಂಗಜೂಟ ಜಯ
ತುಂಗಮಕುಟಮಣಿ ನಿಕರಜೂಟ ಜಯ
ನರ್ತಿಪ ಲೀಲಾಲಕ ಲಲಾಟ ಜಯ
ಮೂರ್ತಿಪ ಭಾಳೇಕ್ಷಣದ ನೋಟ ಜಯ
ಕರ್ಣದೊಳೊಪ್ಪುವ ಫಣಿಕುಂಡಲ ಜಯ
ವರ್ಣನೆಗನುಪಮ ಮುಖಮಂಡಲ ಜಯ
ಬೆಳಗುವಗಂಡಸ್ಥಲದ ಗರುವ ಜಯ
ತೊಳಗುವಂತಹ ಪ್ರಭೆಗಳರಸ ಜಯ
ಪಂಚಮುಖದ ಪರಮಾನಂದನೆ ಜಯ
ಮಿಂಚುವ ಗರಳದ ಗಂಭೀರನೆ ಜಯ
ನೆರೆದ ಭುಜ[ಗ]ಳ ಕರುಣಾಕರ ಜಯ
ಉರಗ ಕಟಕದತ್ಯುನ್ನತಕರ ಜಯ
ಅನುಪಮಸುಧೆ ಸುರಿವಮೃತವಾಣಿ ಜಯ
ಘನತರವೆನಿಪ ಪಿನಾಕಪಾಣಿ ಜಯ
ನಿಜತನುವಿಳಸಿತ ಗಜಚರ್ಮನೆ ಜಯ

ಭಜಿಯಿಪ ಕಮಲಜ ಮಸ್ತಕಕರ ಜಯ
ಪುಂಡರೀಕವರ ಚರ್ಮವಸನ ಜಯ
ಮಂಡಿತತರ ವಿಮಳೋರುದಂಡ ಜಯ
ಸುರಮಕುಟ ಖಚಿತಪಾದಯುಗಳ ಜಯ
ಸುರಚಿತ ಭಸ್ಮೋದ್ಧೂಳಿತಕರ ಜಯ
ಗಿರಿಜಾಲೋಕನಲೋಲ ಹೃದಯ ಜಯ
ಹರಿಸರಸಿಜಭವಮಧ್ಯೋದ್ಭವ ಜಯ
ಕಮಲಭವಾಂಡಾಭರಣಮೂರ್ತಿ ಜಯ
ವಿಮಳವಿರಾಜಿತ ಪುಣ್ಯಕೀರ್ತಿ ಜಯ
ಅತುಳಕಪಾಳಾಭೀಳಹಸ್ತ ಜಯ
ನತಸಂಕುಳ ವರದಭಯಹಸ್ತ ಜಯ
ಭಕ್ತಾನಂದದ ಕಾಮಧೇನು ಜಯ
ಭಕ್ತ ಮನಸ್ಸರಸಿರುಹಭಾನು ಜಯ
ಗುರುಚರಸಕಳಕಳಾಪದೀಪ ಜಯ
ವರ ಮುನಿಜನ ಹೃದಯಸ್ವರೂಪ ಜಯ
ಘನತರವೇದಸ್ತುತಿಗತರ್ಕ್ಯ ಜಯ
ಮನಸಿಜ ಪಂಚಶರಕ್ಕಶಕ್ಯ ಜಯ
ಎಸೆವ ಮಹಾನಾಟ್ಯಾಭಿರಂಗ ಜಯ
ಪೆಸರಿಡಬಾರದನಾದಿಲಿಂಗ ಜಯ
ಉತ್ಕಟವೆನ್ನೊಳು ತೊಳಗುವನೇ ಜಯ
ಹೃತ್ಕಮಲದೊಳಂ ಬೆಳಗುವನೇ ಜಯ
ಪುಳಕವನೆಬ್ಬಿಸುತ್ತೈತಪ್ಪನೆ ಜಯ
ತೊಳಗಿ ಬೆಳಗುತೆನ್ನೊಳಗಿಪ್ಪನೆ ಜಯ
ಇದಿರ್ವಂದೊಲವಿಂ ಬೆಮರುಣ್ಮಿಪ ಜಯ
ಪದೆದ ಸುಖಾಸ್ರುಗಳಿಂ ನನೆವನೆ ಜಯ
ಗದುಗದುಕೆಗಳಿಗೆ ಪೊರಳುವನೇ ಜಯ
ಉದಗತ ನಿಷ್ಠೆಗೆ ತೆರಳದವನೆ ಜಯ
ನೋಡಲ್ ನೋಡಲ್ ನುಡಿಗೆಡಿಪನೆ ಜಯ
ಕೂಡುವ ತವಕದಿ ನಡುಗಿಸುವನೆ ಜಯ
ಮನವಂ ಮುಟ್ಟದೆ ಕರಗಿಸುವನೆ ಜಯ
ತನುವಂ ಸೋಂಕದೆ ಕರಗಿಸುವನೆ ಜಯ
ಬಾರದೆ ತೋರುತ್ತಳಲಿಸುವನೆ ಜಯ
ಸಾರದೆ ಸಾರುತ ಬಳಲಿಸುವನೆ ಜಯ

ಎವೆ ಮರೆಯಾದೊಡೆ ಸೈರಿಸದನೆ ಜಯ
ತವಕಂ ಬಾಡಿದಡೋಸರಿಪನೆ ಜಯ
ಲಲ್ಲೆ ಸುರುಳ್ದಡೆ ನಿಲ್ಲದವನೆ ಜಯ
ತಲ್ಲಣವಾರಿದಡೊಲ್ಲದವನೆ ಜಯ
ಬುದ್ಧಿಯ ಬಳಕೆಗೆ ಸಿಲುಕದವನೆ ಜಯ
ಸಿದ್ಧರ ಬಗೆಯೊಳು ನಿಲುಕದವನೆ ಜಯ
ಪುಗಲೀಯದೆ ನೆರೆ ಕಾಡುವನೇ ಜಯ
ಮಿಗೆ ಬೇಡಿದುದಂ ಕೊಡುವವನೇ ಜಯ
ನೆನೆವರ ಮನವಂ ಕವರುವವನೆ ಜಯ
ಮನದ ತನುವೆ ಮರೆಯಾಗಿಪ್ಪನೆ ಜಯ
ಹೃದಯದ ಕತ್ತಲೆಯಂ ಕಳೆವನೆ ಜಯ
ಹೃದಯ ಕಮಲವನ್ನರಳಿಸುವನೆ ಜಯ
ನಿರುಪಮ ಘನತೇಜೋರಾಶಿಯೆ ಜಯ
ನಿರಹಂಕಾರಿ ನಿರಾವರಣನೆ ಜಯ
ನಿತ್ಯ ನಿರಂಜನ ನಿರ್ವಿಕಲ್ಪ ಜಯ
ಸತ್ಯಜ್ಞಾನಾನಂದರೂಪ ಜಯ
ಜನನ ಮರಣರಹಿತಾನಂದನೆ ಜಯ
ಮುನಿಜನ ಹೃದಯಜ್ಞಾನದೀಪ್ತಿ ಜಯ
ಆಧಾರಸ್ಥಾನಾಯತನೇ ಜಯ
ಸ್ವಾಧಿಷ್ಠಾನದ ಸೋಮಮಯನೆ ಜಯ
ಮಣಿಪೂರಕದ ನಿಜಸ್ವರೂಪ ಜಯ
ಎಣಿಪಡನಾಹತ ತತ್ಪುರುಷನೆ ಜಯ
ಮಿಸುಪವಿಶುದ್ಧಿಯ ಬುದ್ಧಿಮಯನೆ ಜಯ
ಎಸೆವಾಜ್ಞೇಯದ ಸದಾಶಿವನೆ ಜಯ
ಇಚ್ಛಾಜ್ಞಾನಕ್ರಿಯಾಪತಿಯೇ ಜಯ
ಸ್ವಚ್ಛಪ್ರದ್ಯೋತಪ್ರಭಾವ ಜಯ
ಪರಮಾನಂದರಸಾಂಬುನಿಧಿಯೆ ಜಯ
ನಿರತಿಶಯ ಜ್ಞಾನಾನಂದನೆ ಜಯ
ಅತ್ಯನುಪಮಗಳ ಕಾಳಕೂಟ ಜಯ
ನಿತ್ಯನಿವಾಸಿತ ಹೇಮಕೂಟ ಜಯ
ಮನು ಮುಖತೀರ್ಥ ಸರೋನಿವಾಸ ಜಯ
ಜನುಮವಿದೂರನಿಜಪ್ರಕಾಶ ಜಯ
ಪಂಪಾನಾಮಪುರಾಧಿನಾಥ ಜಯ

ಸೊಂಪಿನ ಶರಣಮನೋವರೂಥ ಜಯ
ತುಂಗಾ ಭದ್ರಾ ಯೋಗನಿಳಯ ಜಯ
ಮಂಗಳತರ ಸೀತಳದೀಧಿತಿ ಜಯ
ಪರಮೇಶ್ವರ ಜಯ ಕರುಣಾಕರ ಜಯ
ಪರಮಗುರುವೆ ಜಯ ಪರಮಾತ್ಮನೆ ಜಯ ೯೦
ನಿರ್ಲೇಪನೆ ಜಯ ದುರ್ಲಭನೇ ಜಯ
ಭೂತಹಿತನೆ ಜಯ ಮಾತೆ ಪಿತನೆ ಜಯ
ಪುರಹರ ಜಯ ಜಯ ಸ್ಮರಹರ ಜಯ ಜಯ
ನಿರುಪಮ ಜಯ ಜಯ ನಿರವಯ ಜಯ ಜಯ
ಸೊಂಪಿನ ಶರಣರ ಪ್ರತ್ಯಕ್ಷನೆ ಜಯ
ಹಂಪೆಯ ಲಿಂಗ ವಿರೂಪಾಕ್ಷನೆ ಜಯ
ಜಯ ಜಯ ದಿವ್ಯಜ್ಞಾನಿ ನಮಸ್ತೇ
ಜಯ ಜಯ ಭಕ್ತಿಪ್ರೇಮಿ ನಮಸ್ತೇ ೯೮

ಜಯ ಶರ್ವ ಜಯ ಸದಾಶಿವ
ಜಯ ಶೂಲಿ ಭಯೋಗ್ರ ಭರ್ಗ ಚಂದ್ರಾಭರಣಾ ।
ಜಯ ಪುರಹರ ಜಯ ಭವಹರ
ಜಯ ಜಯ ಜಯ ಜಯತು ಹಂಪೆಯವಿರೂಪಾಕ್ಷಾ ॥

# ೨೩. ಪುಷ್ಪ ರಗಳೆ

ಲೀಲೆಯೊಳೀಲ್ಯೆಪೆಂ ವಧು
ರಾಲಾಪದೆ ಪುಷ್ಪರಗಳೆಯೆಂಬಿಃ ಪೊಸಪೂ ।
ಮಾಲೆಯನವಧರಿಸಗಜಾ
ಲೋಲ ಸುಧಾಶೀಲ ಹಂಪೆಯ ವಿರೂಪಾಕ್ಷ ॥

ಶ್ರೀ ಸಕಲ ಸುರಮಕುಟನಿಕರ ರಂಜಿತ ಚರಣ
ಭಾಸುರಾದಿತ್ಯಕೋಟಿಪ್ರಭಾಸಮ ಕಿರಣ
ಹರುಷದಿಂ ಬೇಡುವೆಂ ನಿಮ್ಮನುತ್ಸವದಿಂದೆ
ಕರುಣಿಪುದು ಹಂಪೆಯ ವಿರೂಪಾಕ್ಷ ದಯೆಯಿಂದೆ
ಪೊಚ್ಚ ಪೊಸಪೂಗಳಿಂದರ್ಚಿಸುವುದಂ ದೇವ
ಅಚ್ಚರಿಯೊಳಿತ್ತು ಕರುಣಿಸುವುದಿಂದೆಲೆ ದೇವ

ಎಂತೆನಲು ಹಂಪೆಯೊಳಗಿಂತಿದಂ ಕೊಂಡಾಡಿ
ಮುಂತೆ ಜಾವದೊಳು ಭಸಿತೋದ್ಧೂಳನಂ ಮಾಡಿ
ಪರಿಮಳವೊಸರದಂತೆ ಬಿಗಿದು ನೆಯ್ದೊಪ್ಪಿರ್ದ
ಹರವರಿಯ ಕರಡಗೆಯನಾಂತುಕೊಂಡೆಸೆದಿರ್ದ
ನಿನ್ನ ಗೀತಂಗಳಂ ಹರುಷದಿಂ ಪಾಡುತಂ
ನಿನ್ನ ಪದ್ಯಂಗಳಂ ಪುಳಕಿಸುತ್ತೋದುತಂ
ನಿನ್ನ ವರಕೀರ್ತಿಯಂ ಕೈವಾರಿಸುತೆ ಬರುತೆ
ನಿನ್ನ ವರಮೂರ್ತಿಯಂ ನೆನೆದು ಕರಗುತೆ ಬರುತೆ
ಪರಿಮಳದ ಸುಗ್ಗಿ ಸೌರಭದ ಸಂದಣಿಯೆನಿಪ
ಸುರುಚಿರಾಮೋದದ ರಸಾಂಭೋಧಿಯೆಂದೆನಿಪ
ಉರವಣೆಯ ಕಂಪಿನ ಪರಮ ಸೀಮೆಯೆಂದೆನಿಪ
ಸುರತರು ಸುಗಂಧದ ತವರ್ಮನೆಯಿಂದೆಂದೆನಿಪ
ಪೂದೋಟಮಂ ದೂರದಿಂ ಕಂಡು ಸೊಂಪೇರಿ

ಆದ ಪರಮಾನಂದದಿಂದೊಲಿದು ನಲವೇರಿ
ಪುಟವೇಳುತಡ್ಡಮುಂ ತಿಗುಟಮುಂ ಪರಿದಾಡಿ
ನಟನಂತಿರುಗ್ಗಡಿಸಿ ಕುಣಿಕುಣಿದು ತೂಗಾಡಿ
ಬೆಲ್ಲವತ್ತವನುತ್ತರಣಿಯನುನ್ಮತ್ತಮಂ
ಪಲ್ಲವಿಪ ಕಕ್ಕೆ ಬಿಳಿಯೆಕ್ಕೆಗಳ ಮೊತ್ತಮಂ
ರುದ್ರಜಟಿಯಂ ತುಂಬೆಯಂ ಕಂಚಿವಾಳಮಂ
ಭದ್ರಮುಖಿ ಮೊದಲಾದ ನವಪತ್ರಜಾಲಮಂ
ಕಂಡು ಕಂಡಾ ಪತ್ರಗಳ್ಗೈದೆ ಶರಣೆನುತೆ
ಕಂಡೆಂ ಫಲಂ ಒಂದು ನೀವುಮಿಂತಿರಿಯೆನುತೆ
ಬಗೆಯೆ ಪೂವಂ ಕಂಡು ಮಿಗ್ತೇಶರಣು ನಿಮಗೆನುತೆ
ನಗುತಲ್ಲಿ ದೊಡ್ಡ ಪತ್ರಕೆ ನಮೋನಮೊಯೆನುತೆ

ಬರವರಲ್ಮುಂಗುಡಿಯ ಕಂಪು ಭರದಿಂ ತೀಡೆ
ಹರಹರ ವಿರೂಪಾಕ್ಷ ನಿಮಗೆನುತ್ತಂ ಕೂಡೆ
ಮನದಿಂದೆ ಕೈಕೊಳ್ಳ ಮುನ್ನವೀ ಗಂಧಮಂ
ನಿನಗೆ ಬಳಿಕೀವೆನುತ್ತಮ ಕುಸುಮವೃಂದಮಂ
ಎಂದರ್ಪಿಸುತ್ತೆ ಪೂದೋಂಟಮಂ ಕೈಮಿಕ್ಕು
ಬಂದು ಪುಳಕಿಸುತೆ ಹರಿದೇವನೊಲವಿಂ ಪೊಕ್ಕು
ತೂಗಾಡುತೊಲೆದಾಡುತಾಹಾ ವಿರೂಪಾಕ್ಷ
ಪೊಗಳಂ ನಡೆನೋಡುತಾಹಾ ವಿರೂಪಾಕ್ಷ
ಎಂದೆನುತೆ ಹಿಗ್ಗಿ ಹೊಗಳುತ್ತೊಲ್ದು ನಲಿವುತ್ತೆ
ಚೆಂದಚೆಂದದ ಕುಸುಮವೃಂದಮಂ ನೋಡುತ್ತೆ
ಎನಗಿಂತು ಕರುಣಿಸಿದನೇ ಸದಾಶಿವನ ಎನುತೆ
ಮನದೊಳಗೆ ಹರುಷದಿಂ ನಲಿನಲಿದು ನೋಡುತ್ತೆ
ಅಳಿಯೆರಗದನಿಲನಲುಗದ ರವಿಕರಂ ಪುಗದ
ಬೆಳೆದು ನಳನಳಿಸಿ ಮಗಮಗಿಸುತೆ ಕವಲಿರಿದ
ಇರವಂತಿ ಇರೆ ಕಂಡು ನೋಡಲಮ್ಮದೆ ನಿಂದು
ಪರಮಂಗೆ ನೀನೀ[ಗ] ಪೂವನೀಯೌಯೆಂದು
ನನೆಮುಗುಳ್ ಕೊನೆಮುಗುಳ್ ಬಿರಿಮುಗುಳರಳ್ಗಳಂ
ತನಿಗಂಪು ತೀವಿರ್ದ ಪೊಚ್ಚಪೊಸ ಪೂಗಳಂ
ಕೊಂಡು ಕುಕಿಲಿರಿವುತಂ ಕುಣಿದಾಡುತಂ ಬಂದು
ಕಂಡು ಸಂಪಗೆಯ ಮರನಿರ್ದೆಡೆಗೆ ನಡೆ ತಂದು
ಏನವ್ವ ಸಂಪಗೆಯೆ ಶಿವನ ಸಿರಿಮುಡಿಗಿಂದು

ನೀನೀವ ಪೊಸಕುಸುಮಮಂ ನೀಡು ನೀಡೆಂದು
ಅಳಿಮನದ ಪರಿಯೆಂದು ಬಗೆಯದಿರ್ ನೀನೆನುತೆ
ತಿಳಿದು ಪೊಸಪೂಗಳಂ ನೀಡವ್ವ ನೀಡೆನುತೆ
ಆನಂದದಿಂದ ಶಿವಲಿಂಗಕರ್ಚಿಪೆನೆನುತೆ
ಏನವ್ವ ನೀಡು ಬಿರಿಮುಗುಳ ಸಂಪಗೆ ಎನುತೆ
ಅಂತವಂ ಕೊಂಡು ಸೇವಂತಿಯಲ್ಲಿಗೆ ಬಂದು
ಮುಂತೆ ಕುಂಕುಮದ ತಾರಗೆಗಳಂತಿರೆ ನಿಂದು
ಎಲೆಲೆ ಪರಿಮಳದ ಕಣ್ಣಿಂ ಗತಿಯೆ ಬಾರವ್ವ
ಕುಲಪತಿಯ ಜಡೆಮುಡಿಗೆ ಪೂಗಳಂ ತಾರವ್ವ
ದೇವಂಗೆ ದೇವರ ಶಿಖಾಮಣಿಯ ಜಡೆಮುಡಿಗೆ
ಸೇವಂತಿ ನೀ[ನೀಗ] ಪೂವನೀಯೌ ಎನಗೆ
ಎಂದಲ್ಲಿ ಪನ್ನೀರ ಪರಿಮಳದ ಪೂಗೊಂಡು
ಮುಂದೆ ತೋರುತ್ತಿರ್ಪ ಪೂಗಿಡುಗಳಂ ಕಂಡು
ಇದೆ ಮಲ್ಲಿಕಾಲತೆ ವಿರೂಪಾಕ್ಷ ನಿನಗೆನುತೆ
ಅದೆ ಮಾಧವೀಲತೆ ವಿರೂಪಾಕ್ಷ ನಿನಗೆನುತೆ
ಮಲ್ಲಿಗೆಯ ಮುಂದಕ್ಕೆ ಮಲೆವುತ್ತೆ ನಡೆತಂದು
ಸಲ್ಲೀಲೆ ಪೆರ್ಚೆ ಕಂಪಿನ ನಿಧಿಯಿರಲ್ ನಿಂದು
ಹಸುರಿಡದೆ ಬಿಳುಪಿಡಿದ ನನೆದೋರಿ ಹೊರೆಯೇರಿ
ಹೊಸಪರಿಯ ಬಿರಿಮುಗುಳ್ಗಳಿಂ ಬೀಗಿ ನಲವೇರಿ
ಮಲ್ಲಿಗೆಯರಳ್ಗಳಂ ಮನವಾರೆ ತಿರುವುತಂ
ಮೆಲ್ಲಮೆಲ್ಲನೆ ನೋಡುತಲ್ಲಲ್ಲಿ ಕುಣಿವುತಂ
ಏನವ್ವ ಅದಿರ್ಗಂತಿ ತುಂಬಿ ತು[ಡು]ಕದ ಮುನ್ನ
ಆನಂದನಿಧಿ ಶಿವಂಗಳ್ಕರಿಂದಂ ನಿನ್ನ
ಸುಖದ ಮೀಸಲಸುಗಂಧವ ನೀನು ನೀಡೆನುತೆ
ಮುಖವೈದರಂಗೆ ಸಂದೊಡೆ ಬರ್ದುಂಕುವೆ ಎನುತೆ
ಪೊಸ ಪೂವನಲ್ಲಿ ಕೊಂಡಾಡುತಂ ನಡೆತಂದು
ಎಸೆವ ಜಾತಿಯ ಸಮೀಪಕ್ಕೆ ಮನಮಂ ತಂದು
ಜಾತಿ ನೀನೆಲೆ ಸಕಲ ಪುಷ್ಪಜಾತಿಗೆ ಜಾತಿ
ಭೂತೇಶ್ವರನ ಜಡೆಯ ಮುಡಿಗೆರಗಿದಡೆ ಜಾತಿ
ಎಂದು ಪೊಗಳುತ್ತಲ್ಲಿ ಪೊಸ ಕುಸುಮಮಂ ಕೊಂಡು
ಮುಂದೆ ಮಗಮಗಿಪ ಕೇತಕಿಯಿರೆ ಮನಂಗೊಂಡು
ಹೊರಗೆ ಮುಳ್ಳೊಳಗೆ ಕಂಪಕ್ಕಕ್ಕು ನಿನ್ನ ಪರಿ
ಹೆರೆಸೂಡಿದನ ಗುಪ್ತಭಕ್ತನಂತಿಪ್ಪ ಪರಿ

ಆಹ ದೆಸೆದೆಸೆಗೆ ಬೀರುವ ಸುಗಂಧದ ಸೂರೆ
ಆಹ ಕೇತಕಿ ನಿನ್ನ ಪರಿಮಳದ ಪರಿ ಬೇರೆ
ಪರಿಮಳಂ ಸುಳಿಗೊಂಡು ಬೆಳೆದು ಕವಲಿರಿಯಿತೋ
ಉರವಣಿಸಿ ಬೆಳೆದ ಪರಿಮಳಕೆ ಗರಿ ಮುಡಿತೋ
ಎಂದು ಕುಣಿದಾಡುತಂ ಪೊಸ ಕುಸುಮಮಂ ಕೊಂಡು
ಮುಂದೆ ತೋರುತ್ತಿರ್ಪ ಪಡ್ಡಳಿಯಿರಲ್ ಕಂಡು
ತಾರಗೆಯ ಮೊಳೆಗಳಂತಿರ್ದ ಪಡ್ಡಳಿಗಳಂ
ಹಾರೈಸುತಂ ಕೊಂಡು ಬಿಳಿಯ ಕತ್ತುರಿಗಳಂ
ಹೇರೀಳೆ ಪರಿಮಳಾಸಾರವಂ ನಿನ್ನಲ್ಲಿ
ಮಾರಾರಿಗೀಯೆನುತ್ತಂ ಪೂಗೊಳುತ್ತಲ್ಲಿ
ಮನವೊಲಿದು ನಲಿದು ಕುಕಿಲಿರಿವುತಂ ನಡೆತಂದು
ಕೊನರ್ವ ಪುಳಕಂಗಳಿಂ ಪಲ್ಲವಿಸುತಂ ಬಂದು
ಏನೆನ್ನ ಹೊನ್ನೆ ಸುರಹೊನ್ನೆ ಪರಿಮಳದರಸಿ
ನೀನೆನ್ನ ಹುಲಿಗೆರೆಗೆ ಸೋಮಯ್ಯನಂ ಕರಿಸಿ
ಕೊಂಡ ಸದ್ಭಕ್ತೆ ಬಾ ಪಡಿಯುಂಟೆ ನಿನಗೆನುತೆ
ಕೊಂಡಲ್ಲಿ ದಿವ್ಯಪ್ರಸೂನವಂ ನಡೆತರುತೆ
ಮೊಲ್ಲೆಯಂ ಮುದ್ದಾಡಿಸುತ್ತೆ ಮನ್ನಿಸಿ ನುಡಿದು
ವಲ್ಲಭಂಗಿವು ತಕ್ಕವೆನುತೆ ಪೂವಂ ಪಿಡಿದು
ತಿರುಗಿ ನೋಡಲು ಮರುಗವಾನಿದೇನೆನುತಮಿರೆ
ಹರ ಮರೆವನೇ ಪರಿಮಳದ ಸಸಿಯನೆನುತ ಬರೆ
ತೆಗೆದುಕೊಳುತಲ್ಲಿ ಪರಿಮಳ ಪಲ್ಲವಂಗಳಂ
ಬಗೆಗೆ ಮಿಗೆ ಸಸಿಯ ಸೌರಭದ ಸಂದಣಿಗಳಂ
ಹಾರೈಸುತಂ ಕೊಂಡು ಮುಡಿವಾಳದೊಳ್ನಿಂದು
ಬೇರನರಿವರ್ಗೆ ನೀನೆಲೆದೋರಲೇಕೆಂದು
ಪರಿಮಳದ ಬೇರ್ಗಳಂ ನಲಿದು ಕೊಂಡಾಡುತಂ
ಪರಿಪರಿಯ ಕಂಪಿನೊಳು ಮುಳುಗುತಂ ಮೂಡುತಂ
ದವನವೇ ಶಿವನ ಪರಿಮಳದ ಹಬ್ಬವೆ ಬಾರ
ಭುವನದೊಳು ನಿನಗೆ ಸರಿಯಿಲ್ಲ ಸೌರಭ ಬಾರ
ಎನುತೆ ಕುಣಿವುತೆ ಕೂಗಿ ಕುಕಿಲಿರಿವುತಂ ಬಂದು
ತನಿಗಂಪನುಗುಳ್ವ ಪೊಸ ಪೊಗೊಳಕ್ಕೆಯ್ತಂದು
ಕಮಳವೇ ಹರಿಗೆ ಚಕ್ರವನಿತ್ತ ಶಿವನ ಪದ
ಕಮಳಕ್ಕೆ ಸಾರ್ವುದುಚಿತಂ ನಿನಗೆ ಪರಮಪದ
ಎಂದಲ್ಲಿ ಪೆತ್ತಸಾರ್ದಂಬುಜವನೆತ್ತುತಂ

ಮುಂದೆ ಬಾಡಿದ ಕಮಳಮಂ ಕೆಲಕೆ ಸಾರ್ಚುತಂ
ನೆಯ್ದಿಲೇ ಶಿವನಲ್ಲಿಗೆಯ್ದಲೇಂ ಬಂದಪ್ಪೆ
ಒಯ್ದಡೇನಂ ಲಂಚವಿವೇ ನೀನುಳಿದಪ್ಪೆ
ಚೆಂಗಣಗಿಲೇ ಬಾರ ಲಿಂಗದೊಲವೇ ಎನುತೆ
ಸಿಂಗರಿಸುವೆಂ ಪರಮನಂಘ್ರಿಗಳನೆಂದೆನುತೆ
ಹಿಂಗದ ಕೊಳಂಗಳ ಜಲಂಗಳೊಳು ಹೊಂಗಿರ್ದು
ಮಂಗಳವೆನಿಪ್ಪ ಪೂವಂ ಕೊಂಡು ನಿಂದಿರ್ದು
ಎಸೆಯೆ ಪೊರಮಟ್ಟ ಪರಿಮಳ[ದ ಪೊಸ ಪೂಗಳಂ]
ಪೆಸರರಿಯದಡವೇನು ಕಂಪುಳ್ಳ ಪೂಗಳಂ
ಕಂಡರಿಯದಡವೇನು ಪರಿಮಳಂ ಸಾಲ್ಗೆಂದು
ಕೊಂಡು ಹೊ[ಸ ಕುಸುಮ]ಮಂ ಶಿವನ ಸಿರಿಮುಡಿಗೆಂದು
ಆಹ ಭಾಗ್ಯವೆ ಶಿವನನಿವರೊಳರ್ಚಿಸಪಡೆದೆ
ಆಹ ಪುಣ್ಯವೆ [ಭವನನಿ]ವರೊಳರ್ಚಿಸಪಡೆದೆ

ಎಂದೊಂದು ನಿರ್ಮಳಸ್ಥಾನಮಂ ನಡೆನೋಡಿ
ಇಂದುಧರ ಶರಣೆನುತೆ ಪರಮಸುಖಮಂ ಸೂಡಿ
ನಳನಳಿಸುತಂ ಬೆಳೆದ ಬಾಳಚೂತದ ಕೆಳಗೆ
ಹೊಳೆಹೊಳೆವ ಚಂದ್ರಕಾಂತದ ಶಿಲಾತಳದೊಳಗೆ
ಕದಳೀದಳಂಗಳಂ ಕಮಳಪತ್ರಂಗಳಂ
ಮುದದಿಂದೆ ಬಾಳೆಯೊಳ್ದಿರುಳ ಫಳಸಂಗಳಂ
ಹೊಂಬಾಳೆಗಳ ಸುಳಿಯ ಸಪುರನೇತ್ರಂಗಳಂ
ಇಂಬರಿದು ಪಾಸಿ ಪರಿಮಳಭಾಜನಂಗಳಂ
ಅಲ್ಲಲ್ಲಿ ಮೆಲ್ಲಮೆಲ್ಲನೆ ಪೂಗಳಂ ಸುರಿದು
ಸಲ್ಲಲಿತವೆನಿಪ ಸರಸಿಜಸೂತ್ರಮಂ ಪಿಡಿದು
ಕೈಮುಟ್ಟ ಮುಟ್ಟದೆ ಮನಂ ಮುಟ್ಟಿ ಕಟ್ಟುತ್ತೆ
ಕೈಮರೆದು ಪೂಬೀಳೆ ಮಿಗೆ ಸತ್ತುಮುಟ್ಟುತ್ತೆ
ನೋಡಿದಡೆ ಪೂ ಬಾಡುಗೆಂದು ಕಣ್ಮುಚ್ಚುತ್ತೆ
ನಾಡೆ ನೆನೆದಡೆ ಕಂದುಗೆಂದು ಮನ ಬೆಚ್ಚುತ್ತೆ
ಲಾಲಿಸುತೆ ಕೊಂಡಾಡುತಂ ತೂಗಿ ತೊನೆವುತ್ತೆ
ಸೋಲುತ್ತೆ ಸಾಗಿಸುತ್ತೊಲೆವುತ್ತೆ ನಲಿವುತ್ತೆ
ನನೆಗಳರಳದ ಮುನ್ನ ಮನವರಳ್ದು ಪೊಂಗುತಂ
ನನೆಬಿರುವುದಕ್ಕೆ ಚಿತ್ತಂ ಬೀಗಿ ಬಿರಿವುತಂ
ಮೊಗ್ಗೆಯೊಳು ಶಿವನನಿರಿಸಲುವೇಡಿ ಬಯಸುತಂ
ಹಿಗ್ಗಿದರಳ್ಗಳ ನಡುವೆ ಸಿಂಗರಿಸಲಾಡುತಂ

ಇರಲಳಿಕುಲಂಗಳೆಲ್ಲಂ ತೋಂಟಮಂ ಪೊಕ್ಕು
ಪರಿದೊಕ್ಕಲಿಕ್ಕಿ ಪೂಗಾಣದೆ ಛಲಂ ಮಿಕ್ಕು
ಪರಿಮಳದ ಬಳಿವಿಡಿದು ಝೇಂಕರಿಸುತಂ ಬರಲು
ನೆರೆದು ಹಲುಮೊರೆವುತಂ ಝುಂಕೆಯಿಂದಂ ಬರಲು
ಬೇಡೆಲೆಲೆ ಹಂಪೆಯರಸನ ಕುಮಾರಂ ಸಿತಗ
ನಾಡಂಬರಂಗಳಂ ಕೊಳ್ಳನಾರಡಿಗೆಸಗ
ಅಳಿಯಾಸೆ ಬೇಡ ನಿಮಗಿಲ್ಲಿ ಸೋಲ್ವವರಿಲ್ಲ
ಗಳಗಳನೆ ಬಂದಂತೆ ಮರಳಿ ತುಂಬಿಗಳೆಲ್ಲ
ಎನುತೆ ಒಂದೆರಡು ಸಂಪಗೆಯರಳ್ಗಳಿಂದಿಡಲು
ತನತನಗೆ ಹೊದ್ದಲಮ್ಮದೆ ಹೋದವೊಲಿದಿಡಲು
ಇಂತಲ್ಲಿ [ಮುಸುರ್ವ] ಮಧುಕರಗಳುಮನೆಬ್ಬಟ್ಟಿ
ಮುಂತಲ್ಲಿ ಪೊಸ ಪೂವನೊಲಿದು ಕೆಲವಂ ಕಟ್ಟಿ

ಅಲ್ಲಿಂದೆ ತೆರಳ್ದು ಹರನರಮನೆಗೆ ಮುಂತಾಗೆ
ಮೆಲ್ಲನಲುಗದೆ ಪುಷ್ಪವೊಂದದಿರದಂತಾಗೆ
ಶಿವನರಮನೆಗೆ ಬಂದು ಬಾಗಿಲೊಳು ನಿಂದಿರ್ದು
ಶಿವನಪ್ಪುವಡಿಸುವನ್ನಂಬರಂ ಕಾಯ್ದಿರ್ದು
ಏನೆನ್ನ ಶಿವನೆ ಉಪ್ಪವಡಿಸಿದಿರೇ ಎಂದು
ಏನೆನ್ನ ತಳುವಿರ್ದನೆಂದಿರ್ದಿರೇ ಎಂದು
ಅಳಿಗಳೆರಗದ ಗಂಧವಹನಲುಗದರಳ್ಗಳಂ
ಎಳಸಿ ತಂದೆಂ ತಂದೆ ದೇವ ಹೊಸಹೂಗಳಂ
ಎಂದು ಬಿನ್ನೈಸುತ್ತ ಹತ್ತೆಸಾರ್ದೊಲವಿಂದೆ
ತಂದ ಹೊಸ ಸೇವಂತಿಯರಲ ಪನ್ನೀರಿಂದೆ
ಎಸೆಯೆ ಮುಖಪ್ರಕ್ಷಾಲನಕ್ಕೆರೆದು ಸೋಂಕುತಂ
ಹೊಸ ಪರಾಗದ ವಿಭೂತಿಯ ತಿಲಕವಿಕ್ಕುತಂ
ಮಿಗೆ ನೇಹದಿಂ ನೋಡಿ ಮನದೊಳಗೆ ತೂಪಿರಿದು
ಸೊಗಯಿಸುವ ಕೇತಕಿಯ ನುಣ್ಣೆಸಳ್ಗಳಂ ಪಿಡಿದು
ಸಿರಿಮುಡಿಯನೊಯ್ಯದೆ ಸಡಿಲ್ಚಿ ನಯದಿಂ ಬಿಡಿಸಿ
ಪರಿಪರಿಯ ನೀಳ್ದ ಕೆಂಜೆಡೆಗಳಂ ನೆಲೆಗೊಳಿಸಿ
ಎಳೆಯ ಶಶಿಕಳೆ ನೋಯದಂತೆ ಮೆಲ್ಲನೆ ಪಿಕ್ಕಿ
ಹೊಳೆವ ಸುರನದಿ ತುಳುಕದಂತೆ ನಯದಿಂ ಸಿಕ್ಕಿ
ಪೊಸಪಡ್ಡಳಿಯ ಪರಿಮಳದ ಕತ್ತುರಿಯನಿಕ್ಕಿ
ಸಸಿನಿಳಿವ ಜಡೆಗಳಂ ಕಂಪಿನೊಳಗಂ ಪಿಕ್ಕಿ
ಇರವಂತಿಯಂ ತಂದು ಸಿಡಿಮುಡಿಯೊಳಗೆ ತುರುಬಿ

ಬೆರಸಿಯವರವರೆಡೆಗೆ ಸೇವಂತಿಯಂ ತುರುಬಿ
ಮಲ್ಲಿಗೆಯ ಪರಿಮಳದ ಚಂದನವನಣ್ಪಿಕ್ಕಿ
ಮೊಲ್ಲೆಯ ಮುಗುಳ್ಗಳಿಂ ನಾಗಕುಂಡಲವಿಕ್ಕಿ
ಸಲ್ಲಲಿತ ಇರವಂತಿ ಕಂಠಮಾಲೆಯನಿಕ್ಕಿ
..................................................................
ಜಾಜಿಯ ಸುಗಂಧದಿಂ ಮೃಗಮದವನೊಸೆದಿತ್ತು
ಓಜೆಯಿಂ ದುಂಡುಮಲ್ಲಿಗೆಯ ಪದಕವನಿತ್ತು
ಮರುಗದೊಡ್ಡಣೆಗಳಿಂ ಗಜಚರ್ಮಮಂ ತೊಡಿಸಿ
ನೆರೆದ ಸಂಪಗೆಗಳಿಂ ಹುಲಿದೊವಲನೊಲಿದುಡಿಸಿ
ಸುರಹೊನ್ನೆಯರಳ್ಗಳಿಂದುರಗಕಂಕಣವಿಕ್ಕಿ
ಚರಣದೊಳು ಕಮಲಕರ್ಣಿಕೆಯ ಮು[ಗುಳ್ಗಳನಿಕ್ಕಿ]
[ಕಮ]ಳಂಗಳಂ ಚರಣಕಮಲದೊಳ್ಕೈಗೊಳಿಸಿ
ಕುಮುದಂಗಳಂ ಕೂಡೆ ಕೆಲದೊಳಂ ಸಿಂಗರಿಸಿ
ಲಿಂಗ[ದಂಘ್ರಿಯೊಳು ಕೇದಗೆಗಳಂ ಗ]ರಿಗೆದರಿ
ಸಿಂಗರಿಸಿ ಪೂರೈಸಿ ಕರಣಂಗಳಂ ಸವರಿ
ಝೊಂಪಿಸುವ ದವನದಿಂದೊಲಿದು ಚಾಮರವಿಕ್ಕಿ
ಕಂಪಿಸುವ ಮುಡಿವಾಳದಿಂದೆ ಸೀಗುರಿಯಿಕ್ಕಿ
ರಸಧೂಪಧೂಮದೊಡನೊಸೆದು ಆರತಿಯೆತ್ತಿ
ಹೊಸಪರಿಯ ಕಾಂತಿ ಬೆಳಗಲು ಮನದೊಳಗೆ ಸುತ್ತಿ
ಸಮೆದ ದೇವಾನ್ನಮಂ ದಿವ್ಯಾನ್ನತತಿಗಳಂ
ಕ್ರಮದಿಂದವಿತ್ತು ಕಡು ಸವಿಯ ಸಂತತಿಗಳಂ

ಇಂತು ನಲಿದಾರೈಸಲಿತ್ತು ತಾಂಬೂಲಮಂ
ಸಂತತಂ ಮಿಗೆ ಕೊಟ್ಟು ಮುಖದ [ಸು]ಖಜಾಳಮಂ
ಹೆರಸಾರ್ದು ಕರುಣಪ್ರಸಾದಮಂ ಕೈಕೊಂಡು
ತೆರಹಿಲ್ಲದುಕ್ಕಡಂ ನಿಜ ಮನವನೊಳಕೊಂಡು
ನೇಹದಿಂ ನೋಡುತಂ ಲಲ್ಲೆಗಳ ನೀಡುತಂ
ಮೋಹದಿಂ ಬೇಡುತಂ ಎಯ್ದಿಸದೆ ಬಾಡುತಂ
ದೇವ ಸುಕುಮಾರ ಶಶಿಶೇಖರ ವಿರೂಪಾಕ್ಷ
ದೇವ ಪರಿಮಳವೃಂದಸೇವಿತ ವಿರೂಪಾಕ್ಷ
ದೇವ ಎನ್ನಯ್ಯ ಎನ್ನರಸನೆ ವಿರೂಪಾಕ್ಷ
ದೇವ ಎನ್ನಾಳ್ದ ಸುಖಮೂರ್ತಿಯೆ ವಿರೂಪಾಕ್ಷ
ಎಂದು ಹೊಗಳುತ್ತಲಾಡುತೆ ಹಿಗ್ಗಿ ಹೆಚ್ಚುತಂ

ನಿಂದು ನಲಿದಾಡಿ ಮಲೆದಾಡಿ ಮೆಯ್ವೆಚ್ಚುತಂ
ಪೂಜೆಯಂ ನೋಡುತಂ ಪುಟವೇಳುತಾಡುತಂ
ಓಜೆಯಂ ಮೀರುತಂ ಒಲುಮೆಯಂ ತೋರುತಂ
ಕಂಪಿಸುತೆ ಪುಳಕಿಸುತೆ ಕಣ್ಮುಚ್ಚಿ ಕರಗುತ್ತೆ
ಝೊಂಪಿಸುತೆ ಜೋಲಿಸುತೆ ಅಮರುತ್ತೆ ಬೆಮರುತ್ತೆ
ಕೊನರುತ್ತೆ ಕೋರುತ್ತೆ ಉರ್ಬುತ್ತೆ ಪರ್ಬುತ್ತೆ
ತೊನೆವುತ್ತೆ ತೂಗುತ್ತೆ ಆಡುತ್ತೆ ಪಾಡುತ್ತೆ
[ಕೊರ್ಬುತ್ತೆ ಹ]ಲಬಿಸುತೆ ಕೆಲಬಲನನೇಡಿಸುತೆ
ಪರ್ಬಿ ಪಲ್ಲವಿಪ ಭಕ್ತಿಗೆ ಮನವನೆಡೆಗೊಡುತೆ
ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ
ಮುಕ್ತಿಪದದಿಂದಧಿಕವಿದಕೆ ಪಡಿಯಿಲ್ಲೆನಿಸಿ
ಪರುಷಮಂ ಬಿಸುಡೆಂಬ ಸುರಭಿಯಂ ತೆಗೆಯೆಂಬ
ಸುರತರುವನೊಲ್ಲೆಂಬ ಅಮೃತಮಂ ಚೆಲ್ಲೆಂಬ
ನಿಧಿಗಳಂ ನೂಂಕು ಚಿಂತಾಮಣಿಯನಿಡು ಎಂಬ
ಮಧುಗಿದುಗಳೆಲ್ಲಿಯವವೇತರವವೇಕೆಂಬ
ಉರವಣಿಪ ಪರಮಭಕ್ತಿಯ ಸುಖದ ಸೊಕ್ಕೇರಿ
ಹರ ನಿನ್ನ ಮೂರ್ತಿಕರಣಂಗಳೊಳ್ ಕಾಲೂರಿ
ಹರ ಹರ ನಮಃ ಶಿವಾ ಎಂಬ ಕಳವಳವೇರಿ
ಪರಮಪದದಾನಂದಸುಧೆಯ ಸವಿ ತಲೆಗೇರಿ
ತೀವಿ ಗದಗದಮುಣ್ಮಿ ಪೊಣ್ಮಿ ಕರಗುತಮಂದು
ವೀವಿವೀರೂರೂರು ಪಾಪಾಕ್ಷಕ್ಷಾ ಎಂದು
ಪೆಸರ್ಗೊಳುತೆ ಮೊದಲಕ್ಕರದೊಳು ಹರುಷಂ ಮೂಡಿ
ಮಿಸುಗುವೆರಡನೆಯಕ್ಕರದೊಳು ಸುಖ ಒಕ್ಕಾಡಿ
ಮೂರನೆಯ ವರ್ಣದೊಳು ಮರೆದು ಪುಳಕಂ ನೆಗೆದು
ಮೀರಿ ನಾಲ್ಕನೆಯಕ್ಕರದೊಳು ಮುನ್ನೆನಪಳಿದು
ಏನೆಂಬೆನಚ್ಚ ಶಿವಭಕ್ತಿ ಪೆಚ್ಚಿರೆ ಕರಂ
ಆನಂದರಸದಿಂದೆ ತೋದು ಪಂಚಾಕ್ಷರಂ
ನಾಲಗೆಯ ಮೇಲೆ ಹೊರಳುತ್ತೆ ಸರಿವುತ್ತಮಿರೆ
ಲೀಲೆಯಿಂದಶ್ರು ನಯನದೊಳು ತೆರೆಮಸಗುತಿರೆ
ಮುತ್ತಿದರಿಷಡುವರ್ಗವತ್ತಿತ್ತ ಸಾರುತಿರೆ
ಹತ್ತಿರ್ದ ತಾಪತ್ರಯಂ ತಣ್ಣನಾಗುತಿರೆ
ಮನವು ನಿಮ್ಮಡಿಗೆರಗಿ ಬುದ್ಧಿ ನೆರೆ ನಿಶ್ಚಯಿಸಿ
ನೆನಹು ನಿನ್ನೊಳು ಪೊಗಲು ಚಿತ್ತವೆರಡಿಲ್ಲೆನಿಸಿ

ನಿನ್ನ ಜಪವೆನ್ನ ಕರ್ಣವನಿಂಬುಗೊಂಡಿರಲು
ನಿನ್ನ ನೆನಹೆನ್ನೆದೆಯೊಳೊಚ್ಚತಂಗೊಂಡಿರಲು
ನಿನ್ನ ನಿಜವೆನ್ನ ಜೀವವನಿಂಬುಗೊಂಡಿರಲು
ನಿನ್ನ ನುತಿ ಎನ್ನ ಜಿಹ್ವೆಯನಿಂಬುಗೊಂಡಿರಲು
ನಿನ್ನ ರೂಪೆನ್ನ ಕಂಗಳನಿಂಬುಗೊಂಡಿರಲು
ನಿನ್ನಂಗವೆನ್ನ ಸರ್ವಾಂಗಮಂ ತೀವಿರಲು
ಇಂತು ನೀನೆನ್ನನೊಚ್ಚತವಾಗಿ ಕೈಕೊಂಡು
ಸಂತಸದೊಳಂ ನಿನ್ನನಗಲದೆ ಮನಂಗೊಂಡು
ಅರ್ಚಿಸುತ್ತಿರ್ಪುದಂ ಕರುಣಿಸುವುದೆಲೆ ದೇವ
ನಚ್ಚಿ ನಲಿದಿರ್ಪುದಂ ಕರುಣಿಸುವುದೆಲೆ ದೇವ
ಮಚ್ಚಿ ಮರೆದಿರ್ಪುದಂ ಕರುಣಿಸುವುದೆಲೆ ದೇವ
ಹೆಚ್ಚಿ ಹಿಗ್ಗಿರ್ಪುದಂ ಕರುಣಿಸುವುದೆಲೆ ದೇವ
ದೇವ ಕರುಣಿಗಳರಸ ದೇವ ದಾನಿಗಳರಸ
ದೇವ ಮಾನಿಗಳರಸ ದೇವ ಬೋಳೆಯರರಸ
ಹೆಂಪಿಡಿದಮರವೃಕ್ಷ
ಹಂಪೆಯ ವಿರೂಪಾಕ್ಷ
ಮಾಡುವುದಿದಂ ದೇವ
ಬೇಡುವೆನಿದಂ ದೇವ
ಶಿಶುವೆಂದು ನೋಡುವುದು
ಪಶುವೆಂದು ಕೂಡುವುದು
ವಿಷಯದಿಂ ನೊಂದಪೆಂ
ಪಸಿವಿಂದೆ ಬೆಂದಪೆಂ
ಕಾಮದೊಳ್ ಕಂದಿದೆಂ
ತಾಮಸದೊಳೊಂದಿದೆಂ
ಮೋಹದಿಂ ಮಗ್ಗಿದೆಂ
ದೇಹದಿಂ ತಗ್ಗಿದೆಂ
ಏವೆನು ಮಹಾದೇವ
ಕಾವುದು ಮಹಾದೇವ
ಆರು ಉಂಟೆಲೆ ದೇವ
ಅರ ನಚ್ಚುವೆ ದೇವ
ಎನಗೆ ಹೊನ್ನುಂ ನೀನೆ
ಎನಗೆ ಚೆನ್ನುಂ ನೀನೆ
ಎನಗೆ ಕುಲವುಂ ನೀನೆ

ಎನಗೆ ಛಲವುಂ ನೀನೆ
ಎನಗೆ ಬಲುಹುಂ ನೀನೆ
ಎನಗೆ ಮೆಲುಹುಂ ನೀನೆ
ಎನಗೆ ಗರ್ವಂ ನೀನೆ
ಎನಗೆ ಸರ್ವಂ ನೀನೆ
ಎನಗೆ ಮಾತೆಯು ನೀನೆ
ಎನಗೆ ಪಿತನುಂ ನೀನೆ
ನಿನ್ನನರ್ಚಿಸಲಿತ್ತು
ಚೆನ್ನ ಭಕ್ತಿಯನಿತ್ತು
ಕರುಣಿಸು ವಿರೂಪಾಕ್ಷ
ಪರಿಕಿಸು ವಿರೂಪಾಕ್ಷ
ರಕ್ಷಿಸು ವಿರೂಪಾಕ್ಷ
ಶಿಕ್ಷಿಸು ವಿರೂಪಾಕ್ಷ
ದಯೆಗೆಯ್ ವಿರೂಪಾಕ್ಷ
ಜಯ ಜಯ ವಿರೂಪಾಕ್ಷ
ಜಯ ಜಯ ನಮಸ್ತೇ
ನಮಸ್ತೇ ನಮಸ್ತೇ

ಅಕ್ಷ[ಯ]ನಳಿಪಂ ಮಾಯಾ
ಪಕ್ಷನು ನಾಂ ನಿನ್ನನೊಲಿದು ಹೊದ್ದಿದೆನಭವಾ ।
ರಕ್ಷಿಸು ರಕ್ಷಿಸು ರಕ್ಷಿಸು
ರಕ್ಷಿಸು ಹೇ ದೇವ ಹಂಪೆಯ ವಿರೂಪಾಕ್ಷಾ ॥

ಇದೆ ಮಲ್ಲೀಲತೆ ಸೌರಭಾಕರವಿದೆಮ್ಮಾಳ್ದಂಗೆ ಬಲ್ಮೊಗ್ಗೆಗೊಂ
ಡಿದೆ ಸೇವಂತಿಯ ದಿವ್ಯಗಂಧಮು ವಿರೂಪಾಕ್ಷಂಗೆ ಹೂಗೊಂಚಲಿಂ
ಮುದದಿಂದೊಪ್ಪಿವೆ ಜಾಜಿ ಹಂಪೆಯರಸಂಗೆಂದೆಂದು ಕೊಂಡಾಡುತಂ
ಮುದದಿಂ ನೋಳ್ಪನದೊಂದೆ ಹಂಪೆಯ ವಿರೂಪಾಕ್ಷಂ ಸದಾ ಹಂಪೆಯೊಳ್ ॥

ಕಂಪೆಸೆವಚ್ಚ ಬಚ್ಚಬರಿ ಮಲ್ಲಿಗೆ ಸಂಪಗೆ ಜಾಜಿ ಪಂಕಜಂ
ಹಂಪೆಯೊಳಲ್ಲದಿಲ್ಲ ಮಿಗೆ ಹೆಂಪೆಸೆದೊಪ್ಪುವ ನಿರ್ಮಳಾಂಬುಗಳ್
ಹಂಪೆಯೊಳಲ್ಲದಿಲ್ಲ ಕಳಮಾದಿ ನವಾಮ್ರಫಳಂ ಸುಖಸ್ಥಳಂ
ಹಂಪೆಯೊಳಲ್ಲದಿಲ್ಲ ಪದೆದಲ್ಲಿರಿಸೆನ್ನುವ ಹಂಪೆಯಾಳ್ದನೇ ॥

❖❖

# ೨೪. ಲಿಂಗಾರ್ಚನೆಯ ರಗಳೆ

ಇಂಧುಧರ ನಿಮ್ಮ ಚರಣ
ದ್ವಂದ್ವಮನನವರತವರ್ಚಿ[ಸುತ್ತಿಹ ಸುಖಮಂ]
ತಂದೆ, ಭವಭವದೊಳೀವುದು
ಕಂದರ್ಪಮದಾಪಹಾರಿ, ಹಂಪೆಯ ದೇವಾ ॥

ಶ್ರೀ ವಿರುಪಾಕ್ಷ [ನ ದೇವರ
ದೇವನ ಮ]ನ ವಚನಕಾಯತ್ರಿಕರಣದಿಂದಂ ।
ಭಾವಿಸುತಿಪ್ಪೆನಗೊಲವಿಂ
ನೀವೇ ಶರಣಯ್ಯ ಹಂಪೆಯ ವಿರೂಪಾಕ್ಷಾ ॥

ಶ್ರೀಗುರುವೆ ಹಂಪೆಯ ವಿರೂಪಾಕ್ಷ ಕೇಳಯ್ಯ
ನಾಗಭೂಷಣ ನಿನಗೆ ವೇಳೆಯಾಳಾನಯ್ಯ
ಸಲುಗೆಯಿಂ ಬಿನ್ನಪಂಗೆಯ್ವೆನೊಂದಂ ದೇವ
ಒಲವಿಂದೆ ಕರುಣಿಸುವುದೆನ್ನೊಳಿನಿತಂ ದೇವ
ಧರೆಯೊಳಗೆ ನಿನ್ನ ತೊತ್ತೆಂದು ಸಲಹುವುದಯ್ಯ
ಪರಮಭಕ್ತರ ಪದಕ್ಕೆನ್ನ ಸಲಿಸುವುದಯ್ಯ
ಅಗಲದೆ ನಿರಂತರಂ ನಿನ್ನನರ್ಚಿಸುವುದಂ
ಬಗೆವೆಚ್ಚಿ ಕೂಡುವುದನೋ [ವಿ] ಯರ್ಚಿಸುವುದಂ
ತುಂಗಭದ್ರಾನದಿಯ ಸಲಿಲಮಂ ಮೊಗೆತಂದು
ಲಿಂಗ ನಿನಗೆನ್ನ ಮನವಾರೆ ಮಜ್ಜನಕರೆದು
ಮಗಮಗಿಪ ಚಂದನದೊಳುದ್ವರ್ತನಂ ಮಾಡಿ
ಅಗಿಲುಕಸ್ತೂರಿಯನಮರ್ಚೆ ಮೈಯೊಳ್ತೀಡಿ
ಅರೆವಿರಿದ ಸುರಗಿ ಸುರಹೊನ್ನೆ ಸೇವಂತಿಯಂ
ಪರಿಮಳವನೆಣ್ದೆಸೆಗೆ ಬೀರುವಿರವಂತಿಯಂ
ತನಿಗಂಪನೀವ ಮಲ್ಲಿಗೆ ಮೊಲ್ಲೆ ಜಾದಿಯಂ

ಮನಮೊಸೆದು ಕೊಯ್ತಂದು ಪರಿಮಳದ ಪಾದ್ರಿಯಂ
ಪರಿಪರಿಯ ನವ[ರುಚಿರ] ಪುಷ್ಪಸರಮಂ ಕಟ್ಟಿ
ಹರಹರ ಕರುಣಿಸೆಂದು ಭಕ್ತಿ ಬಗೆಯೊಳ್ಪುಟ್ಟಿ
ಕಂಪಿಸುವ ಕೈಗಳಿಂ ಪುಷ್ಪಮಾಲೆಯನೆತ್ತಿ
ಸೊಂಪೆಸೆಯೆ ಶಿವ ನಿನ್ನ ಸಿರಿಮಕುಟದೊಳ್ಸುತ್ತಿ
ಕಮನೀಯವೆನಿಪ ಗುಗ್ಗಳಧೂಪಮುಮನಿತ್ತು
ರಮಣೀಯವೆನೆ ತೊಳಗುವಾರತಿಗಳಂ ಪೊತ್ತು

ಮುಂತಿರಿಸಿ ನಲವಿಂದೆ ಬೆಳಗಿದಡ್ಡಣಿಗೆಯುಮ
ಸಂತಸದೊಳಿರಿಸಿ ಮಾಣಿಕದ ಪರಿಯಾಣಮುಮ
ಚಂದ್ರಿಕೆಗಳಂ ಕಡೆದು ಕಂಡರಿಸಿದಂತಿಪ್ಪ
ಸಾಂದ್ರ ಧವಳಿತಮೆನಿಪ್ಪೋಗರವನಿಂಬಪ್ಪ
ದಿವ್ಯಾನ್ನವಮೃತಾನ್ನ ದೇವಾನ್ನಮಂ ಬಡಿಸಿ
ನವ್ಯ ಗಂಧಾಮೃಥವೆನಿಪ್ಪ ಶಾಕವನಿರಿಸ
ಹರುಷದಿಂ ಮೆಯ್ವೆರ್ಚಿ ಕರಗಳಂ ಮುಗಿಮುಗಿದು
ಹರನೆ ಕೈಕೊಳ್ಳೆಂದು ಭಕ್ತಿಯಿಂದಗಿದಗಿದು
ಚೆನ್ನಯ್ಯನಿಕ್ಕಿದಂಬಲಿಯಿದಾರ್ಯೆಸಯ್ಯ
ಕನ್ನೆ ನಿನಗೆರೆದ ಹಾಲೆಂದು ಹಾರೈಸಯ್ಯ
ಚೋಳಿಯಕ್ಕನ ಬಾಯಿ ತುತ್ತೆಂದು ಬಗೆಯಯ್ಯ
ಚೋಳ ನಿನಗಿತ್ತನ್ನವೆಂದು ಕೈಕೊಳ್ಳಯ್ಯ
ಕಣ್ಣಪ್ಪನಣುಗನೆಂದೆನಗೆ ಕರುಣಿಪುದಯ್ಯ
ಉಣ್ಣದಿರಬಾರದೆಂಬುದನರಿದೆನುಣ್ಣಯ್ಯ
ಇಳೆಯಾಂಡಗುಡಿಮಾರನ ವರಸುತ ನಾನಯ್ಯ
ಛಳಿಸಿ ದೇವಾನ್ನವಿಕ್ಕಿದರಣುಗ ನಾನಯ್ಯ
ಒಕ್ಕಲಿಗ ಮುದ್ದಯ್ಯನಕ್ಕರಿನ ಮಗನಯ್ಯ
ಚಕ್ಕನುಣ್ಣದಡೆ ನಿನ್ನಣುಗ ಸುತ[ನೇ]ನಯ್ಯ
ಎಂದು ಭಕ್ತರ ಬಲದೊಳಾನು ನಿನಗುಣಲಿತ್ತು
ಸಂದ ಶರಣರ ವರನಿಧಾನ ನಿನಗುಣಲಿತ್ತು
ಪನ್ನೀರಿನಗ್ಘಣಿಯನೊಲಿದು ಹಸ್ತಕ್ಕೆರೆದು
ಪನ್ನಗಧರಂಗೆ ಕೈಘಟ್ಟಿಯಂ ಕೊಟ್ಟಿರ್ದು
ಕರ್ಪುರದ ವೀಳೆಯವನಾದರಂ ಮಿಗೆ ಕೊಟ್ಟು
ಸರ್ಪಭೂಷಣ ನಿನ್ನ ಚರಣಕ್ಕೆ ಪೊಡಮಟ್ಟು
ಹೆರೆಸಾರ್ದು ನಿಂದು ಪೂಜೆಯನಕ್ಕರಿಂ ನೋಡಿ

ಕರೆಕಂಠ ಶರಣೆಂದು ಸದ್ಭಕ್ತಿಯಂ ಬೇಡಿ
ಮನವುಕ್ಕಿ ಪೊಗಳಲುದ್ಯತನಾಗಿ ಬಂದಿರ್ದು
ತನಿನೇಹವೊತ್ತರಿಸಿ ನಿನ್ನ ಹತ್ತಿರ ಸಾರ್ದು
ದೇವ ಮಮ ಹೃತ್ಕಮಲವಿಕಸನ ವಿರೂಪಾಕ್ಷ
ದೇವ ಮಮ ಚಿತ್ತಮಂಡನಕರ ವಿರೂಪಾಕ್ಷ
ದೇವೇಂದ್ರ ವಂದಿತಪದ[ದ್ವಯ] ವಿರೂಪಾಕ್ಷ
ದೇವ ಕೋಟ್ಯರ್ಕತೇಜೋಮಯ ವಿರೂಪಾಕ್ಷ
ದೇವ ಶಿರಕೋಟಿಮಾಲಾಧರ ವಿರೂಪಾಕ್ಷ
ದೇವ ಕಂದರ್ಪಮದಮರ್ದನ ವಿರೂಪಾಕ್ಷ
ದೇವ ಪ್ರಮಥನಿಚಯಪರಿವೃತ ವಿರೂಪಾಕ್ಷ
ದೇವ ಹರಿನಯನ ಪೂಜಿತಪದ ವಿರೂಪಾಕ್ಷ
ದೇವ ದೇವೇಂದ್ರ ವಂದಿತಪದ ವಿರೂಪಾಕ್ಷ
ದೇವ ಭೃಂಗೀಶನಾಟ್ಯಪ್ರಿಯ ವಿರೂಪಾಕ್ಷ

ದೇವ ಹರಹರ ಮನ್ಮನೋಹರ ವಿರೂಪಾಕ್ಷ
ದೇವ ಶಿವಶಿವ ಸದಾಶಿವ ಶಿವ ವಿರೂಪಾಕ್ಷ
ಎಂದು ಪೊಗಳುತ್ತೆ ತಣಿವೆಯ್ದಿಸದೆ ಬಾಯ್ವಿಟ್ಟು
ನಿಂದೊಮ್ಮೆ ಹಾಡಿ ನೋಡುವೆನೆಂದು ಮೆಯ್ವಿಟ್ಟು
ಲಲಿತೆ ಬಂಗಾಳದಿಂ ನಲಿದು ನಿನ್ನಂ ಪಾಡಿ
ಮಲಹರಿ ವರಾಳಿಯಿಂದೊಲಿದು ನಿನ್ನಂ ಪಾಡಿ
ದೇಶಿ ಗುಜ್ಜರಿಗಳಿಂದೀಶ ನಿನ್ನಂ ಪಾಡಿ
ದೇಶಾಖಿಗೌಳದೆ ಮಹೇಶ ನಿನ್ನಂ ಹಾಡಿ
ಬತ್ತೀಸರಾಗದಿಂ ಕರ್ತ ನಿನ್ನಂ ಪಾಡಿ
ಚಿತ್ತದೊಡೆಯನೆ ಮತ್ತೆ ಮತ್ತೆ ನಿನ್ನಂ ಪಾಡಿ
ಚೆನ್ನಯ್ಯನಂ ಪಾಡಿ ಹೊನ್ನಯ್ಯನಂ ಪಾಡಿ
ಬೊಮ್ಮಯ್ಯನಂ ಪಾಡಿ ಜೊಮ್ಮಯ್ಯನಂ ಪಾಡಿ
ಕಕ್ಕಯ್ಯನಂ ಪಾಡಿ ಚಿಕ್ಕಯ್ಯನಂ ಪಾಡಿ
ಅಕ್ಕರಿಂ ನಿಜಲಿಂಗ ಚಿಕ್ಕಯ್ಯನಂ ಪಾಡಿ
ಬಸವರಾಜನನು ಸೊಡ್ಡಳಬಾಚಿರಾಜನಂ
ಮುಸುಟೆಯಚವು[ಂ]ಡರಾಜನನೋಹಿಲಯ್ಯನಂ
ಕೇಶಿರಾಜನ ಮಲುಹಣನ ಕಾಳಿದಾಸನಂ
ದಾಸಿಮಯ್ಯನ ಬಿಬ್ಬಬಾಚ ತೆಲುಗೇಶನಂ
ಕೊಂಡಗೂಳಿ[ಯ] ಕೇಶಿರಾಜ ಸಿರಿಯಾಳನಂ

ಪಂಡಿತಾರಾಧ್ಯರಿಂಡೆಯ ಶಾಂತಿಮಯ್ಯನಂ
ನಂಬಿಯಣ್ಣನ ನಂಬಿಯಕ್ಕಮಹದೇವಿಯಂ
ಜಂಬೂರೊಳೆಸೆವ ಸತ್ಯಕ್ಕನಮ್ಮವ್ವೆಯಂ
ಚೋಳ ಚಾರಮನ ಗೊಲ್ಲಳನುದ್ಭಟಯ್ಯನಂ
ಕೋಳೂರ ಕೊಡಗೂಸು ಸಿದ್ಧರಾಮಯ್ಯನಂ
ನಚ್ಚಿನರುವತ್ತು ಮೂವರನಸಂಖ್ಯಾತರಂ
ಚೆಚ್ಚರದಿ ಪಾಡಿ ಭಕ್ತ್ಯಂಗನೆಯರೆಲ್ಲರಂ
ಭಕ್ತಿಯಿಂ ಮರೆದು ಹಾಡಲು ಸುಗತಿಗಚ್ಚಾಗಿ
ಯುಕ್ತಿಯಂ ಮೀರಿದರಸಂ ನಿನ್ನ ಮಚ್ಚಾಗಿ
ಪೊಸರೀತಿರಾಗದಿಂ ದೆಸೆದೆಸೆಗಳಂ ಬೀರಿ
ಪಸರಿಸುವ ತಾಳದಿಂ ಸುಗತಿನರ್ತನವೇರಿ
ಇಂದುಧರನಾಲೋಕನವ ಕಂಗಳೆಳಸುತಿರೆ
ಮುಂದೆ ಸೋಹಂ ಮಿಕ್ಕು ವಿಷಯಕ್ಕೆಯಳುಕುತಿರೆ
ಭೃಂಗಿಯ ಪದಂಗಳಂ ನೆನೆನೆನೆದು ನೆನೆನೆನೆದು
ಸಂಗದಿಂ ಕೊಡಗಾಟವನಾಡಿ ತೊನೆತೊನೆದು
ಗತಿವಾದ್ಯಗತಿಗಳ್ಗೆ ರಾಗದಿಂ ಕುಣಿಕುಣಿದು
ನತಜನ ಶುಭೋದಯನ ಭಕ್ತಿಯಿಂ ಮನವೊಲಿದು
ನಡೆದಾಡಿ ಹರಿದಾಡಿ ಕಡು ಸೊಕ್ಕಿನಿಂದಾಡಿ
ನುಡಿದು ನಿಮ್ಮೊಳು ತೊಂಡುಗೆಡೆದಾಡಿ ಬಿಡದಾಡಿ
ಅರಿದಾಡಿ ಅರಿದಾಡಿ ಕುರುಮೆಟ್ಟುತಲ್ಲಾಡಿ
ಕರೆಕಂಠ ನಿನ್ನ ಭಕ್ತಿಯ ರಸದೊಳೋಲಾಡಿ

ಹೆಚ್ಚಿ ಮೆಯ್ವೆಚ್ಚುತಂ ಬೊಬ್ಬಿರಿದು ಕೂಗುತಂ
ನಚ್ಚಿ ಮೆಯ್ವೆಚ್ಚಿ ಮನಮಿಕ್ಕು ನೆರೆ ನೋಡುತಂ
ಭಕ್ತರಂ ಹೊಗಳುತಂ ಯುಕ್ತಿಯಂ ಬೇಡುತಂ
ಭವವನೀಡಾಡುತಂ ತವಕಮಂ ನೀಡುತಂ
ಏನುವಂ ತಾನರಿಯದಾನಂದದಿಂ ನಿಂದು
ಮೋನವೇ ನಿನಗೆ ತುತಿಯಾಗಿ ಮಿಗೆ ಸಲೆ ಸಂದು
ರಂಗಮಂಟಪನ[ರ್ತನಕ್ಕೆ ಶಿರ] ತೂಗಾಡಿ
ಲಿಂಗ ಶಿವಲಿಂಗ ಶಿವಲಿಂಗವೆನುತೋಲಾಡಿ
ತುತಿಯಿಸುತೆ ತೊದಳಿಸುತೆ ಝೊಂಪಿಸುತೆ[ಹಂಗಡಿದು]
ಮತಿಯಿಸುತೆ ಮನವಿಡುತೆ ಹಾರೈಸುತಿರಲಂದು
ಹೊಗಳ್ವಕ್ಕರಂ ನಲಿದು ನಾಲಗೆಯ ಮೇಲಿರಲು

ಬಗೆಯ ಭಾವಂ ತನ್ನ ಮನವನೆಡೆಗೊಂಡಿರಲು
ಕೈ ಕಂಪನವ ಬೀರೆ ಮೈ ಪುಳಕಮಂ ಹೇರೆ
ಬಾಯ್ ತೊದಳನುಬ್ಬರಿಸಿ ಸುಯ್ ನಿಮ್ಮೊಳಗ್ಗಳಿಸಿ
ಶಿವ ನಿನ್ನನೆನ್ನಂತರಂಗವೇ ಎಡೆಗೊಂಡು
ಸವಿಸವಿದು ನಿನ್ನ ನೋಡಿದ ಸುಖವನೊಳಕೊಂಡು
ಭೇದವಿಲ್ಲದೆ ಸುಖದಿ ಮರೆದು ಕಿರಿದುಂ ಪೊತ್ತು
ಸೋದಿಸಿದ ಚಿತ್ತಮಂ ನಿನಗೆ ಸೂರೆಯನಿತ್ತು
ಅಲ್ಲಲ್ಲಿ ಭಕ್ತಿ ಕರಣಂಗಳೊಳು ಹಡಹಿತ್ತು
ಮೆಲ್ಲನೆ ಸುಖದ್ರುಮಂಗುರಿಯಾಗಲೆಚ್ಚತ್ತು
ಬೆದರಿಂದತಿಕ್ಕೆಲನನಾಲಿಸುತೆ ತೂಗಾಡಿ
ಸದಮಳನೆ ನಿಲಲಲ್ಲಿ ಭಕ್ತಿಯಿಂ ಮೇಲಾಡಿ
ಮುಂದಿರ್ದರಂ ವಿರೂಪಾಕ್ಷನೆಂದೇ ಕಂಡು
ಬಂದಿರ್ದರಂ ವಿರೂಪಾಕ್ಷನೆಂದೇ ಕಂಡು
ಒಡನೆಯವರಂ ವಿರೂಪಾಕ್ಷನೆಂದೇ ಕಂಡು
ನುಡಿಸಿದವರಂ ವಿರೂಪಾಕ್ಷನೆಂದೇ ಕಂಡು
ಎಲ್ಲೆಡೆಯೊಳುಂ ವಿರೂಪಾಕ್ಷನೆಂದೇ ಕಂಡು
ಅಲ್ಲಲ್ಲಿ ನಿನ್ನ ಕರೆದುರೆ ನೆರೆ ಮರುಳ್ಗೊಂಡು
ಭೀತಿ ಭಯಭಕ್ತಿಯಿಂ ನೋಡಿಯೋವುತೆ ಕರಗಿ
ಓತು ನಿನ್ನಂ ನೋಡಿ ಮತ್ತೆ ನೋಡುತೆ ಕರಗಿ
ಕಂಡು ನಿಲಲರಿಯದೆಯ್ತಂದು ಬಿಗಿ ಬಿಗಿದಪ್ಪಿ
ಕೊಂಡು ತಣಿವಿಲ್ಲದಡಿಗಡಿಗೆ ಪೊಗಳುತಲಪ್ಪಿ
ಏನೆನ್ನ ಶಂಭುವೆ ಸದಾಶಿವ ವಿರೂಪಾಕ್ಷ
ಏನೆನ್ನ ಕಾರುಣ್ಯಸಿಂಧುವೆ ವಿರೂಪಾಕ್ಷ
ಏನೆನ್ನ ನಚ್ಚಿನಧಿದೈವವೆ ವಿರೂಪಾಕ್ಷ
ಏನೆನ್ನ ಮಚ್ಚಿನ ಮಹಾಗುರು ವಿರೂಪಾಕ್ಷ
ಏನೆನ್ನನೊಲಿದು ಪೊರೆವಾಳ್ದನೆ ವಿರೂಪಾಕ್ಷ
ಏನೆನ್ನನೊಲಿವ ಕುಲದೈವವೆ ವಿರೂಪಾಕ್ಷ
ಎಂದೀ ತೆರದಿ ನಿನ್ನ ನಚ್ಚಿ ಸುಖವಡೆವುದಂ
ತಂದೆ ಕರುಣಿಪುದಯ್ಯ ಸದ್ಭಕ್ತನಪ್ಪುದಂ
ಆವ ಜಾತಿಗಳೊಳಗೆ ಪುಟ್ಟಿದಡೆಯೆಲೆ ದೇವ
ನೀವಲ್ಲದರಿಯದಂತಿರಿಸೆನ್ನನೆಲೆ ದೇವ
ಇಳಿಕೆಗೆಯ್ಯದೆ ಭಕ್ತಿಯಂ ಕರುಣಿಸುವುದಯ್ಯ
ಬಳುವಳಿಯ ತೊತ್ತೆಂದು ಬಡಿದು ಕಲಿಸುವುದಯ್ಯ

ಬೇರೊಂದನೊಲಿವನಲ್ಲೆಂಬುದನರಿವುದಯ್ಯ
ಸಾರಿ ಮೊರೆಯಿಟ್ಟೆನೆನ್ನಂ ದಯದೆ ನೋಡಯ್ಯ
ಆವ ತೆರದಿಂದಾದಡಂ ಗುರು ವಿರೂಪಾಕ್ಷ
ದೇವ ನೀಂ ಕರುಣಿಪುದು ಹಂಪೆಯ ವಿರೂಪಾಕ್ಷ
ಮಾಡುವವನುಂ ನೀನೆ ಬೇಡುವವನುಂ ನೀನೆ
ನೋಡುವವನುಂ ನೀನೆ ನುಡಿಸುವವನುಂ ನೀನೆ ೧೫೦
ತೊತ್ತಿಂಗಿದೇನಯ್ಯ ಭೃತ್ಯಂಗಿದೇನಯ್ಯ
ದೀನಂಗಿದೇನಯ್ಯ ಮೋನವೇ ನಿಮಗಯ್ಯ
ರಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರೂಪಾಕ್ಷ
ದಯೆಗೆಯ್ ವಿರೂಪಾಕ್ಷ ಜಯ ಜಯ ವಿರೂಪಾಕ್ಷ
ಜಯ ಜಯ ನಮಸ್ತೇ ನಮಸ್ತೇ ನಮಸ್ತೇ ೧೫೫

ಕೇಳಯ್ಯ ವಿರೂಪಾಕ್ಷ ಕೃ
ಪಾಳುವೆ ನಿನಗೊಲಿದು ತೊತ್ತುವೊಕ್ಕೆಂ ಬಿಡೆ ನೀ ।
ನ್ನಾಳಾಳಾಳಾಳಾಳಾ
ನೇಳೇಳುಂ ಭವದೊಳೆಲೆಲೆ ಹಂಪೆಯ ದೇವಾ ॥

❖❖

# ೨೫. ಪಂಪಾಕ್ಷೇತ್ರದ ರಗಳೆ

ಶ್ರೀ ಮಚ್ಚಂಕರನಭವಂ
ಕಾಮಹರಂ ಕರುಣಿಸುತ್ತಮಿಕ್ಕೆಮಗೆಂದುಂ ।
ಸೋಮಂ ಭಕ್ತಿಯನೀಗೆ ಕ
ಳಾಮಂಡಿತ ಮೌಳಿ ಹಂಪೆಯ ವಿರೂಪಾಕ್ಷಂ ॥೧॥

ನೇತ್ರತ್ರಯನತ್ಯುತ್ತಮ
ಗಾತ್ರಂ ಪದೆದೆಮಗೆ ಕೊಡುಗೆ ಪಂಪಾನಾಥಂ ।
ಧಾತ್ರೀತಳದೊಳ್ ಪಂಪಾ
ಕ್ಷೇತ್ರಸ್ತೋತ್ರವನೆ ಮಾಳ್ಪ ಮತಿಗುನ್ನತಿಯಂ ॥೨॥

ಪರಮಕ್ಷೇತ್ರಂ ಸುಕೃತಾ
ವರಣಕ್ಷೇತ್ರಂ ದಿವಾಕರ ಕ್ಷೇತ್ರಂ ಸ್ವ ।
ಸ್ಥಿರ ಸುಕ್ಷೇತ್ರಂ ಶಂಕರ
ಭರಿತಕ್ಷೇತ್ರಂ ವಿಶಾಲ ಪಂಪಾಕ್ಷೇತ್ರಂ ॥೩॥

ಆದಿಕ್ಷೇತ್ರಂ ಜಾತು
ರ್ವೇದ ಕ್ಷೇತ್ರಂ ಪರಾಪರೈಕ ಕ್ಷೇತ್ರಂ ।
ನಾದಕ್ಷೇತ್ರಂ ಶಿವನೊಳ
ಭೇದಕ್ಷೇತ್ರಂ ಪ್ರಸನ್ನ ಪಂಪಾಕ್ಷೇತ್ರಂ ॥೪॥

ಎಂತೆನೆ ಸಮುದ್ರಮುದ್ರಿತ ಧರಾಮಧ್ಯದೊಳ್
ಸಂತತಂ ಮೇರುವಿನ ದಕ್ಷಿಣ ವಿಭಾಗದೊಳ್
ಮೆರೆವುದದು ಹೇಮಕೂಟಂ ಪ್ರಾಂತ ಶಿವಪುರಂ
ಹೆರೆಸೂಡಿದಂ ನೆಲಸಿನಿಂದ ಪಂಪಾಪುರಂ
ಹರಿಯಜಸುರ್ಗಸಿನಿಂ ಪೊಗಳ್ವ ಪಂಪಾಪುರಂ
ಶರಣರೊಲವಿಂದೆ ನಲಿದಿರ್ಪ ಪಂಪಾಪುರಂ

ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
ಒಪ್ಪುತಿರೆ ಸುತ್ತ ಯೋಜನಪ್ರಮಾಣಂ ನೋಡೆ
ಅಲ್ಲಿ ಮೂಡಣಬಾಗಿಲೊಳಗಿಪ್ಪನುನ್ನತಂ
ಸಲ್ಲಲಿತ ಗುಣ ಕಿನ್ನರೇಶ್ವರಂ ಶಾಶ್ವತಂ
ಅಲ್ಲಿ ತೆಂಕಣ ಬಾಗಿಲೊಳಗಿಪ್ಪನಚಳಿತಂ
ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ
ಪಶ್ಚಿಮದ್ವಾರದೊಳು ನೆಲಸಿರ್ಪನೊಪ್ಪದಿಂ
ನಿಶ್ಚಯದೆ ಸೋಮನಾಥಯ್ಯನತಿ ಪ್ರೇಮದಿಂ
ಉತ್ತರದ್ವಾರದೊಳು ನೆಲಸಿರ್ಪನೀಶ್ವರಂ
ಉತ್ತಮಗುಣ ಸ್ಥಾಣು ವಾಣಿಭದ್ರೇಶ್ವರಂ
ಇಂತೆನಿಸಿ ಮೆರೆವ ನಾಲ್ಕುಂ ಬಾಗಿಲುಗಳೊಳಗೆ
ತಿಂತಿಣಿಪ ಶಿವಲಿಂಗವಿಪ್ಪವಾ ಪುರದೊಳಗೆ
ಪಂಪಾವಿರೂಪಾಕ್ಷನಲ್ಲಿಂದನಂತರಂ
ಸೊಂಪಿಂದೆ ಹನುಮತೇಶ್ವರನಿಪ್ಪನುರುತರಂ
ರಂಭೇಶ್ವರಂ ನಳೇಶ್ವರರಿಪ್ಪರಂತಲ್ಲಿ
ಶಂಭು ಮುಕ್ತೇಶ್ವರಂ ಮಲ್ಲಿಕಾರ್ಜುನರಲ್ಲಿ
ಮಂಗಳಾಸ್ಪದ ರಾಮಲಕ್ಷ್ಮಣೇಶ್ವರರಲ್ಲಿ
ಹಿಂಗದೆ ಮಹಾಕಾಳದೇವರೊಪ್ಪುವರಲ್ಲಿ
ವರದ ಮಾರ್ಕಂಡೇಶ್ವರಂ ನಿಂದನೊಲವಿಂದೆ
ಸುರರಾಜರಾಜನಪ್ಪಿಂದ್ರೇಶ್ವರಂ ಮುಂದೆ
ಗುರು ಸೋಮನಾಥನಿಪ್ಪಂ ಪುರದೊಳೊಲವಿಂದೆ
ಹಿರಿಯ ಹಂಪಾದೇವಿ ಚಿಕ್ಕ ಹಂಪಾದೇವಿ
ನಲವಿಂದಲೊಪ್ಪುತಿರೆ ನಿಂದನಜ್ಞೇಶ್ವರಂ
ನೆಲಸಿಹಂ ಮುಂದೆ ಪರಮಜ್ಞಾನಿ ಶಂಕರಂ
ತಾನಘೋರೇಶ್ವರಂ ದಾನಿ ನಾಗೇಶ್ವರಂ
ಶ್ರೀನಿಧಿ ಉದಾರ ಕೇದಾರದೇವೇಶ್ವರಂ
ಕರಮೆಸೆವ ಲಿಂಗ ಛಾಯಾಮಲ್ಲಿಕಾರ್ಜುನಂ
ವರುಣೇಶ್ವರಂ ವಾಯುವೇಶ್ವರಂ ಪಾವನಂ
ತರದಿಂ ಕುಬೇರೇಶ್ವರಂ ರಂಜಿಸುವರಲ್ಲಿ
ಕರುಣಾಬ್ಧಿಯೀಶಾನ್ಯದೇವರೊಪ್ಪುವರಲ್ಲಿ
ಬ್ರಹ್ಮೇಶ್ವರಂ ದಯಾಪರನಗಸ್ತ್ಯೇಶ್ವರಂ
ಬ್ರಹ್ಮಂಗಭೇದ್ಯ ಕೋಣೆಯ ಶಂಕರೇಶ್ವರಂ

ಕ್ರಮದಿಂದೆ ಜಡೆಯ ಶಂಕರದೇವರೊಪ್ಪಿರಲು
ವಿಮಳ ಪಾತಾಳಗಂಗೆಯ ಸೋಮನೊಪ್ಪಿರಲು
ಲೋಕಪಾವನದೇವರುಂ ಕೋಟಿಶಂಕರಂ
ಲೋಕಕ್ಕೆ ರಂಜಿಪೇಕಾಂತರಾಮೇಶ್ವರಂ
ಇನ್ನು ನಾನರಿಯದವನೇಕಲಿಂಗಂ ಕೂಡೆ
ಸನ್ನಿಹಿತವಿಪ್ಪವಾ ಪುರದ ಸುತ್ತಂ ನೋಡೆ
ಎಣಿಸಲೆನ್ನಳವೆ ಪಂಪಾಪುರದ ಮಹಿಮೆಯಂ
ತ್ರಿಣಯನುಂ ಲಿಂಗಮಯವಾದ ನಿಸ್ಸೀಮೆಯಂ

ಇನ್ನಿರ್ದ ತೀರ್ಥ ಸಂತಾನಮಂ ಪೊಗಳ್ದಪೆಂ
ಸನ್ನುತದೆ ಶಿವನ ಕಾರುಣ್ಯದಿಂ ಪೊಗಳ್ದಪೆಂ
ಅರರೆ [ಮನ್ಮುಖ] ತೀರ್ಥವಿ[ಪ್ಪುದದು] ರಾಗದಿಂ
ವರ ಸೋಮತೀರ್ಥದಿಂ ಮಹಕಾಳತೀರ್ಥದಿಂ
ಎಸೆವ ತಾರಾತೀರ್ಥದಿಂ ಸೂರ್ಯತೀರ್ಥದಿಂ
ಪೆಸರೆಸೆವ ವತ್ಸತೀರ್ಥದಿ ರೇಭ್ಯತೀರ್ಥದಿಂ
ನಾಗಮಾರ್ಕಂಡೆಯ ಗಜಾಶ್ವತೀರ್ಥಂಗಳಿಂ
ಮೇಗೆ ಕಾದಾಂಬರಿ ಬ್ರಹ್ಮತೀರ್ಥಂಗಳಿಂ
ಇಂತೆನಿಸಿ ಮೆರೆವ ಹನ್ನೊಂದು ತೀರ್ಥಂಗಳವು
ಕಂತು ಮದಹರನಶ್ವದಾನಮೆಂದೆನಿಪವವು
ಮತ್ತಂ ಮಹಾನದೀಶ್ವರೀ ತುಂಗಭದ್ರೆಯೊಳು
ಉತ್ತಮ ವಶಿಷ್ಠರಾಶ್ರಮವಿಪ್ಪುದೊಲುಮೆಯೊಳು
ಅಲ್ಲಿ ಪಾಪವಿನಾಶಿಯೆಂಬ ನಾಮದತೀರ್ಥ
ಅಲ್ಲಿಂ ದಶಾಶ್ವಮೇಧಾವಿಧಾನದ ತೀರ್ಥ
ಅದರೊಳಗೆ ಬದರಿಕಾಶ್ರಮವು ಕೋಟೀ ತೀರ್ಥ
ಅದರೊಳಗೆ ಶಬರಿಕಾಶ್ರಮವು ಕೋಟೀ ತೀರ್ಥ
ಮಿಗೆ ದೇವಖಾತ ಪಂಪಾಸರೋವರ ಮುಂದೆ
ಸೋಗಯಿಸುವ ಕಾಮದಹನದ ಭಸಿತವದು ಮುಂದೆ
ಅಲ್ಲಿಂದೆ ಮಾಲ್ಯವಂತಾಚಳವದೊಪ್ಪುವುದು
ಸಲ್ಲಲಿತ ರಿಣಮೋಚನದ ತೀರ್ಥಮೊಪ್ಪುವುದು
ಉರಿಯಕ್ಷತೀರ್ಥಂ ಗಧಾತೀರ್ಥ ಧನುತೀರ್ಥ
ವರಶಂಖಚಕ್ರತೀರ್ಥಂ ಪದ್ಮದಳತೀರ್ಥ
ಹೇಮಕೂಟದ ಮೇಲೆ ವತ್ಸನಾಭಿಯ ತೀರ್ಥ
ಆ ಮಹಾಕ್ಷೇತ್ರದೊಳಗಗ್ನಿತೀರ್ಥಂ ಸ್ವಾರ್ಥ

ರಾಮತೀರ್ಥಂ ಸಂದ ಪಿತೃತೀರ್ಥವಂತಲ್ಲಿ
ಏಮಾತೊ ಮಾಂಗಲ್ಯತೀರ್ಥವೊಪ್ಪುವುದಲ್ಲಿ
ಶ್ರೀರುದ್ರಪಾದವಿಪ್ಪುದು ಧರಾರಾಜನದು
ನಾರಾಯಣಾದಿ ದೇವರ್ಕಳಿಗಭೇದ್ಯವದು
ಇನ್ನುಳ್ಳ ತೀರ್ಥಮಂ ಪೆಸರ್ಗೊಳ್ಳಲೆನ್ನಳವೆ
ಪನ್ನಗರ್ ಗರುಡಗಂಧರ್ವ ಸಂಕುಳರಳವೆ
ಹರಿಯಲ್ಲಿ ಅವಗಾಹಮಿರ್ದು ಹರಿಪದವಿಯಂ
ಸರಸಿಜಭವಂ ಹರುಷದಿಂದಲಜಪದವಿಯಂ
ಸುರರಾಜನನುರಾಗದಿಂದಿಂದ್ರ ಪದವಿಯಂ
ಪರಮಕಾರಣಿಕರೆಲ್ಲರು ಪರಮಪದವಿಯಂ
ಪಡೆದರೆನೆ ತೀರ್ಥಮಹಿಮೆಯನೇನನೆಂದಪೆಂ
ಮೃಡನ ಘನತರ ಸಕಳಸಾಮರ್ಥ್ಯವೆಂದಪೆಂ

ಇಂತಪ್ಪ ಲಿಂಗತೀರ್ಥಂಗಳಿಂದಂ ತೀವಿ
ಸಂತತಂ ಶಿವಭಕ್ತಕುಲವನೊಲವಿಂದೋವಿ
ಇಪ್ಪುದೀ ಧರೆಗೆ ತೊಡವೆನಿಸಿ ಪಂಪಾಪುರಂ
ಸರ್ಪಭೂಷಣಭಾವಭರಿತ ಪಂಪಾಪುರಂ
ಪೆಸರ್ಗೊಂಡರಘವನೊಣಗಿಸುವ ಪಂಪಾಪುರಂ
ಅಸಮಾಕ್ಷನಲ್ಲಿ ಕೂಡಿಸುವ ಪಂಪಾಪುರಂ
ಬಂದು ಮರೆಯೊಕ್ಕರಂ ಕಾಯ್ವ ಪಂಪಾಪುರಂ
ಸಂದಣಿಸಿ ಬೇಡಿದುದನೀವ ಪಂಪಾಪುರಂ
ವಾರಣಾಸಿಗೆಯು ಮಿಗಿಲಾದ ಪಂಪಾಪುರಂ
ಮಾರಾರಿಗಂದು ಪುಗಲಾದ ಪಂಪಾಪುರಂ
ಭವದ ಭಯಮಂ ನಿವಾರಿಸುವ ಪಂಪಾಪುರಂ
ತವೆ ದುರಿತಮಂ ವಿದಾರಿಸುವ ಪಂಪಾಪುರಂ
ಶಿವಪುರಂಗಳೊಳು ಮಿಗಿಲಾದ ಪಂಪಾಪುರಂ
ಶಿವನ ಮನದೊಳಗೆ ಸವೆ ನಲಿವ ಪಂಪಾಪುರಂ
ಸಕಳಪುಣ್ಯಂಗಳೋಲೈಪ ಪಂಪಾಪುರಂ
ಸಕಳ ಮುಕ್ತಿಗಳಲಂಕರಿಪ ಪಂಪಾಪುರಂ
ಅಣಿಮಾದಿ ಗುಣವಗಲದಿಪ್ಪ ಪಂಪಾಪುರಂ
ತ್ರಿಣಯನಂಗಕ್ಕರಂ ತಪ್ಪ ಪಂಪಾಪುರಂ
ಪುರಹರಂ ಕಾಮನಂ ಸುಟ್ಟ ಪಂಪಾಪುರಂ
ಗಿರಿಜೆ ರತಿಗಭಯಮಂ ಕೊಟ್ಟ ಪಂಪಾಪುರಂ

ಆ ಪುರದೊಳೊಪ್ಪುವಂ ಶಶಿಧರಂ ವಿಷಧರಂ
ಕಾಪಾಲಿ ದಕ್ಷನಧ್ವರಹರಂ ಪುರಹರಂ
ದುರಿತ ತಿಮಿರವ್ರಜ ದಿವಾಕರಂ ಭೀಕರಂ
ವರವೀವ ವಿತತ ಕರುಣಾಕರಂ ಶಂಕರಂ
ಸಕಳಚೈತನ್ಯ ವಿಸ್ತಾರಕಂ ಪ್ರೇರಕಂ
ಸುಕೃತ ಸುಕರೈಕನಿಸ್ತಾರಕಂ ಪ್ರೇರಕಂ
ಕಾಲ ಮನ್ಮಥ ಗರ್ವಶೋಷಣಂ ಭೀಷಣಂ
ಬಾಲಚಂದ್ರಮಕಳಾಪೋಷಣಂ ಭೂಷಣಂ
ಹರಿಸುರಪ ಕಮಲಜರ ಜೀವಿತಂ ಭಾವಿತಂ
ಶರಣನಿಕರಸ್ತೋತ್ರಪೂಜಿತಂ ಯೋಜಿತಂ
ಅಖಿಲ ಲೋಕಾಗಮಾಖಂಡಿತಂ ಮಂಡಿತಂ
ನಿಖಿಳಶಾಶ್ವತ [ಶಿವ] ಮಹೋನ್ನತಂ ಸನ್ನುತಂ
ನೆಲಸಿಪ್ಪನಖಿಲಗುರು ಪಂಪಾವಿರೂಪಾಕ್ಷ
ಒಲವಿಂದೆ ಶಾಂತಗುರು ಪಂಪಾವಿರೂಪಾಕ್ಷ
ಅಸಮಗುರು ವಿಷಮಗುರು ಪಂಪಾವಿರೂಪಾಕ್ಷ
ಎಸೆವ ಗುರು ವಿಶ್ವಗುರು ಪಂಪಾವಿರೂಪಾಕ್ಷ
ಎನ್ನ ಗುರು ಚೆನ್ನಗುರು ಪಂಪಾವಿರೂಪಾಕ್ಷ
ಉನ್ನತ ಸದೈಕಗುರು ಪಂಪಾವಿರೂಪಾಕ್ಷ
ಇಂತು ಪಂಪಾವಿರೂಪಾಕ್ಷನಂ ಕೆಳೆಗೊಂಡು
ಸಂತತಂ ಶಿವಭಕ್ತಿ ನವರಸದ ಸವಿಗಂಡು
ಉರುತರಾವಳಿಯೊಳೊಪ್ಪಿತ್ತು ಪಂಪಾಪುರಂ
ಪರಮೇಶ್ವರನ ಸಜ್ಜೆಯೆನಿಪ ಪಂಪಾಪುರಂ

ಪಂಪಾಕ್ಷೇತ್ರದ ಮಹಿಮೆಯ
ನಿಂಪಿಂದಂ ಪೇಳ್ವೆ ಕೇಳ್ವ ಭಕ್ತರ್ಗೆಲ್ಲಂ ।
ಸೊಂಪಿಂದೆ ಪರಮಸುಖವನ
ಲಂಪಿಂದಂ ಕೊಡುಗೆ ಹಂಪೆಯ ವಿರೂಪಾಕ್ಷಂ ॥

❖❖

# ೨೬. ಮಹಿಮಾ ರಗಳೆ

ವೇದದೊಳುಂ ಪುರಾಣನಿಕರಂಗಳೊಳುಂ ಘನಶಾಸ್ತ್ರವೃಂದದೊಳ್
ವಾದಿನೊಳುಂ ಸ್ಮೃತಿಪ್ರಕರದೊಳ್ ಸಕಲಾಗಮ ಮಂತ್ರತಂತ್ರದೊಳ್
ಮೇದಿನಿಯೊಳ್ ಪುರಾತನಕುಲಂ ನೆರೆ ತೋರಿದನೇಕ ದೃಷ್ಟದೊಳ್
ನಾದಮಯಂ ಮಹೇಶನೆ ಘನಂ ಘನವೆಮ್ಮಯ ಹಂಪೆಯೀಶ್ವರಂ ॥

ಜಲಜಾಕ್ಷಾಕ್ಷಿವಿಲಾಸಪಾದನೆ ಘನಂ ಚಂಡಾಂಶುರಾತ್ರೀಶ್ವರ
ಜ್ವಲನಾಕ್ಷಿತ್ರಯನಕ್ಷಯಂ ಸುರಶಿರೋಮಾಲಾವಿಲಾಸಂ ಘನಂ
ಗಲದೊಳ್ ಕ್ಷ್ವೇಡಮನಿಟ್ಟ ಶಂಭುವೆ ಘನಂ ಕೇಳತ್ಯತಿಷ್ಠದ್ದಶಾಂ
ಗುಲನೆಮ್ಮ ಪ್ರಭು ಹಂಪೆಯಾಳ್ದನೆ ಘನಂ ಬ್ರಹ್ಮಾಂಡಸಂತಾನದೊಳ್ ॥

ಶ್ರೀ ಪರಮಗುರು ಶಂಕರಪ್ರಭುವಿನಂಘ್ರಿಯೊಳು
ಭಾಪುರೆ ನೆಗಳ್ದನಾ ಮಾದಿರಾಜಾಂಘ್ರಿಯೊಳು
ಶ್ರೀಗುರು ಮಹಾದೇವರಾಜ್ಞೆಯಂ ಕೈಕೊಂಡು
ಬಾಗಿ ಹಂಪೆಯ ವಿರೂಪಾಕ್ಷನ ವರಂಗೊಂಡು
ಪೇಳಲುದ್ಯೋಗಿಸಿದೆನೀಶ್ವರನ ಮಹಿಮೆಯಂ
ಪೇಳಲ್ಕಗೋಚರವೆನಿಪ್ಪ ಶಿವಮಹಿಮೆಯಂ
ಆದಡೆನ್ನಕ್ಕರಿಂ ಬಲ್ಲಂತೆ ಬಣ್ಣಿಪೆಂ
ಆದಿಯ ಪುರಾತನರು ಒಲಿಸಿದುದನೆಂದಪೆಂ
ಸಕಲವೇದಂಗಳುಂ ಬೊಬ್ಬಿಟ್ಟುದುಂಟಾಗಿ
ಸಕಳ ಮುಖದಿಂ ಬಣ್ಣಿಸುತ್ತಿರ್ಪುದುಂಟಾಗಿ
ಅದು ಕಾರಣಂ ಗುರುವಿರೂಪಾಕ್ಷನೇ ಘನಂ
ಸದಮಳಂ ಪಂಪಾವಿರೂಪಾಕ್ಷನೇ ಘನಂ
ಅಪ್ರತಿಮನತುಳಬಲನಹಿಕಂಕಣನೆ ಘನಂ
ಅಪ್ರತಿಹತಪ್ರತಾಪ ಪ್ರಕರನೇ ಘನಂ
ದೇವ ಪಂಪಾವತಿ ವಿರೂಪಾಕ್ಷನೇ ಘನಂ
ಆವರ್ತದಿಂ ಗುರುವಿರೂಪಾಕ್ಷನೇ ಘನಂ

ಪಂಚಮುಖ ದಶಭು[ಜ ವಿಷಮ]ನೇತ್ರನೇ ಘನಂ
ಪಂಚಾಕ್ಷರೀಪ್ರಿಯಂ ಪಂಚವರ್ಣನೆ ಘನಂ

ಅತ್ಯತಿಷ್ಠದ್ದಶಾಂಗುಲನಪ್ರತಿಮನೆಂದು
ನಿತ್ಯನೇಕೋ ರುದ್ರನದ್ವಿತಿಯ ನೀನೆಂದು
ಪರಮನ ನಮಸ್ಕಾರ ಮಾಲೆಗೆ ನಮೋ ಎಂದು
ಹರನ ಚರಣಕ್ಕೆ ಕರುಣಕ್ಕಂ ನಮೋ ಎಂದು
ಹರಿಗುಂ ಹರಂತಿಯೆಂದೆಂಬ ವೇದವನದು
ಹರನೆಲ್ಲವಂ ತೀರ್ಚಿ ಕಳೆವನೆಂಬುದನರಿದು
ಭರದಿಂದಮನ್ಯತ್ಪರಿತ್ಯಜ್ಯನೇ ಎಂದು
ಹರನೆ ಗುರು ಧರೆಗೆ ಭರ್ಗೋದೇವನೇ ಎಂದು

ಇನ್ನುಂ ಪುರಾಣದೊಳು ಮಹಿಮೆಯಂ ಬಣ್ಣಿಪೆಂ
ಪನ್ನಗಾಭರಣನಾಧಿಕ್ಯಮಂ ಪೇಳ್ದಪೆಂ
ಹರಿಯಜರ ನಡುವೆ ಹರನುರಿಲಿಂಗವಾದುದಂ
ಹರಿಬ್ರಹ್ಮರರಸಿ ಕಾಣದೆ ನಿಂದರೆಂಬುದಂ
ಅಂದಲ್ಲಿ ಹರಿಯೊಡನೆ ಹುಸಿ ನುಡಿದ ಬ್ರಹ್ಮಂಗೆ
ಒಂದೆಡೆಯೊಳುಂ ಸ್ಥಾನವಿಲ್ಲ ನೋಡಾತಂಗೆ
ಮರೆದಹಂ ಬ್ರಹ್ಮಾಸ್ಮಿಯೆಂದ ಬ್ರಹ್ಮನ ಶಿರಂ
ಹರಿದುಹೋಯಿತು ರುದ್ರನಿಂದಲಂತದು ಕರಂ
ಹೋಗೆ ಸೋಮಾಷ್ಟಕಮನಲ್ಲಿ ಬಿನ್ನೈಸುತಂ
ವಾಗೀಶನತಿದೈನ್ಯದಿಂದೆ ಮಿಗೆ ಪೊಗಳುತಂ
ಇರಲಾತನಿಚ್ಛೆಯಂ ಸಲಿಸಿ ಶಿರಮಂ ಪಿಡಿದು
ಅರರೆ ಕಾಪಾಲಿ ಲೀಲಾಮಾತ್ರದಿಂ ನಡೆದು
ಭಿಕ್ಷುವೇಷವನಲ್ಲಿ [ನಟಿಸುತ್ತೆ] ನಡೆತರಲು
ಮೋಕ್ಷದಿಂ ದ್ವಾರಾವತಿಗೆ ನಡೆದು ಬರುತಿರಲು
ಭರದೆ ವಿಷ್ವಕ್ಸೇನನಡ್ಡವರೆ ಕಾಣುತಂ
ಹರನು ತ್ರಿಶೂಲದಿಂದಿರಿದೆತ್ತಿ ನೆಗಪುತಂ
ಒಳಪೊಕ್ಕು ಬರುತಿರಲು ನಾರಾಯಣಂ ಕಂಡು
ಇಳುಪುವೆಂ ಪಾತ್ರೆಯನೆನುತ್ತಂ ಮನಂಗೊಂಡು
ತನ್ನ ಶಿರದರುಣ ಜಲಮಂ ಪಾತ್ರೆಯೊಳ್ ಕರೆಯೆ
ಮುನ್ನಿಂದೆ ನೂರ್ಮಡಿಸಿ ಕರಪಾತ್ರೆ ಮಿಗೆ ಬೆಳೆಯೆ
ಅಂಗದೊಳ್ ಸಾರವರತಡಿಗೆರಗಿ ನೋಡುತಂ
ಅಂಗಜಹರಂ ಕರುಣದಿಂದೆ ಪಿಡಿದೆತ್ತುತಂ

ನಡೆದನೆಂದೀ ಪುರಾಣಂ ನೆರೆದು ಸಾರುತಿರೆ
ಒಡೆಯನೀಶ್ವರನೆಂದು ಸೊಡರ್ವಿಡಿದು ತೋರುತಿರೆ
ಅದರಿಂದೆ ಪಂಪಾವಿರೂಪಾಕ್ಷನೇ ಘನಂ
ಸದಮಳಂ ಪಂಪಾವಿರೂಪಾಕ್ಷನೇ ಘನಂ

ಮತ್ತಂ ವಿಚಾರಿಪಡೆ ಹರಿ ಸಹಸ್ರಾಬ್ಜದಿಂ
ಅತ್ತಿತ್ತ ಚಲಿಸದರ್ಚಿಸುತಿರಲು ಸತ್ಯದಿಂ
ಒಂದು ಹೂ ಕುಂದಿದಡೆ ತನ್ನ ನಯನಾಬ್ಜಮಂ
ತಂದಿಕ್ಕಿ ಹೋದ ಹೂವಿಂಗೆ ಹೊಸ ಕಮಲಮಂ
ಚಕ್ರಮಂ ಹರನಿತ್ತನಂದಿಂದೆ ಮೊದಲಾಗಿ
ಚಕ್ರಧರನಾದನೀ ಭೂತಳಕೆ ಪೆಸರಾಗಿ
ಅಂತಲ್ಲದೆಯು ಮತ್ತೆ ವೀರಭದ್ರಂ ಬಂದು
ಸಂತಸದೆ ದಕ್ಷಯಾಗದೊಳು ಹರಿಯಿರಲಂದು
ಯಜ್ಞಪುರುಷನ ಶಿರಶ್ಛೇದನಂ ಮಾಡಿದಂ
ಅಜ್ಞಾನದಿಂದಿರ್ದ ಸುರರುಮಂ ತೆರಳ್ಚಿದಂ
ಕಪಟವೇಷದಲಿ ಹರಿ ಭಿಕ್ಷಮಂ ಬೇಡುತಿರೆ
ತಪಸಿವಲ್ಲಭೆ ತಂದು ಭಿಕ್ಷಮಂ ನೀಡುತಿರೆ
ಕಾಮಭಿಕ್ಷವ ನೀಡು ಇದನೊಲ್ಲೆನಾನೆನಲು
ಕಾಮಪಿತಗಂದು ಶಾಪವನು ಸತಿ ಕೊಡುತಿರಲು
ಚಕ್ರದಿಂ ಸತಿಯನಿರ್ತುಂಡಾಗಿ ಮಾಡಿದಂ
ಆಕ್ರಮಿಸಿ ರುಕ್ಮಿಣಿಯ ಸುಖದಿಂದೆ ಕೂಡಿದಂ
ತಪಸಿನಿಂದವೆ ಋಷಿಯು ಮನೆಗೆ ಬರುತವೆ ಕಂಡು
ವಿಪರೀತ ಮರಣವೇಕಾಯ್ತೆಂದು ಕೇಳುತಿರೆ
ಸ್ಮರಪಿತನು ಚಕ್ರದಿಂದಟ್ಟನೆಂದೆನುತಮಿರೆ
ವರಮುನಿಪ ಕೋಪದಿಂ ದ್ವಾರಾವತಿಗೆ ಬಂದು
ಕರವೆತ್ತಿ ಶಾಪವಂ ಹಿಡಿಯೆಲವೊ ನೀನೆಂದು
ಭೃಗುಮುನೀಶ್ವರನೊದೆಯೆ ಶೌರಿಯೆದೆಯುಂ ನೊಂದು
ಭೃಗುಪಾದವಂ ಧರಿಸಿ ವೈಷ್ಣವರು ನೀವೆಂದು
ಮೃದುಪದವು ನೊಂದವೆಂದಂಗಿಕರದೊಳು ನಿಂದು
ಹೃದಯದೊಳು ದ್ವಾದಶಸ್ಥಾನದಿಂದವುಕಿದಂ
ಮತ್ತೆ ಭೃಗುಶಾಪದಿಂದಂ ಮುಕುಂದಂ ನೊಂದು
ಚಿತ್ತವಳಿವುತ್ತೆ ಕೈಲಾಸದಲ್ಲಿಗೆ ಬಂದು
ದೇವಂಗೆ ಬಿನ್ನೈಸುತೇಕಾದಶೀವ್ರತವ
ಆವಗಂ ಕೈಕೊಂಡು ಮಾಡು ಶಂಕರವ್ರತವ

ಅಭವಂಗೆ ಬಿನ್ನಯಿಸಿ ಮತ್ತೆ ಬೀಳ್ಕೊಂಬಲ್ಲಿ
ವಿಭುವೆ ಎನ್ನ ಜ್ಞಾನಕಾಯಮುವ ನೀವಿಲ್ಲಿ
ಆವಗಂ ಮತ್ತೆ ಧರಿಯಿಪ ವರವ ಬೇಡುವೆಂ
ಭೂವಳಯದೊಳು ಹತ್ತು ಬಾರಿಯಾಂ ಪುಟ್ಟುವೆಂ
ಕರುಣಿಪುದೆನುತ್ತಲ್ಲಿ ಬೆಸಸೆ ತಾಂ ಬೀಳ್ಕೊಂಡು
ಹರಿ ಬಂದು ಹುಟ್ಟಿದಂ ಮತ್ಸ್ಯವೇಷಂಗೊಂಡು
ಬಳಿಕವಾ ಮತ್ಸ್ಯನಂ ಶೂಲಿ ಶಿರದೊಳ್ ಸುತ್ತಿ
ಬಳಿಕವಾ ಕೂರ್ಮನಂ ಹಾರದೊಳು ಸೈಸೊತ್ತಿ
ಬಳಿಕಂ ವರಾಹನಂ ಸ್ವಾಮಿಯಿಂದಂ ತೀರ್ಚಿ
ಬಳಿಕ ನರಸಿಂಹನಂ ಶರಭನಿಂದಂ ತೀರ್ಚಿ
ಬೆಳೆದ ತ್ರಿವಿಕ್ರಮನ ಖಟ್ವಾಂಗಮಂ ಪಿಡಿದು
ಘಳುಘುಳಿಸಿ ಥಳಥಳಿಸಿ ಮೆರೆದನಂತಳ್ಳಿರಿದು

ಇಂತೊಪ್ಪುವವತಾರಮಂ ಹರಂ ಧರಿಸಿದಂ
ಸಂತತಂ ತನ್ನವಯವಂಗಳೊಳಗಿರಿಸಿದಂ
ಅವತಾರದೊಳು ವಿಷ್ಣು ಲಿಂಗಪ್ರತಿಷ್ಠೆಯಂ
ಅವನಿಯೊಳು ಭರದಿಂದೆ ಮಾಡಿದಂ ನಿಷ್ಠೆಯಂ
ಪುರ ಕಾಲ ಕಾಮರನುರುಪಿದನೆಂದೆಂಬುದಂ
ಬರೆ ಗಜಾಸುರನ ಚರ್ಮವ ಬಿಚ್ಚಿ ಹೊದ್ದುದಂ
ವ್ಯಾಘ್ರಾಸುರನ ಸುಲಿದು ಪುಲಿದೊವಲನಟ್ಟುದಂ
ಶೀಘ್ರದಿಂ ಸರ್ಪನಾಭರಣಮಂ ತೊಟ್ಟುದಂ
ತಿಸುಳ ಡಮರುಗ ಪಿನಾಕಂ ಮೆರೆವ ತೋಳ್ಗಳಂ
ಆಸಮಾಕ್ಷ ಋಷಿಗಳಿಗೆ ಕರುಣಿಸಿದ ವರಗಳಂ
ನಡೆದಂಧಕಾಸುರನನಾರ್ದಿರಿದು ಕೆಡಪುತಂ
ಕಡುಪಿಂದಲಾಳಾಸುರನನಲ್ಲಿ ತೀರ್ಚುತಂ
ಹರ ಯಕ್ಷರೂಪಿನಿಂ ತೃಣವನಿಕ್ಕಿರ್ದುದಂ
ಹರಿಯಜಸುರಾಳಿ ತೃಣದಿಂದೆ ಲಘುವಾದುದಂ
ವಿಷದ ಹೊಗೆ ಸುತ್ತಿ ಸುರರೆಲ್ಲ ಮೊರೆವೊಕ್ಕುದಂ
ಶಶಿಧರಂ ಗರಳಮಂ ತಾಳ್ದು ನೆರೆ ಕಾಯ್ದುದಂ
ವ್ಯಾಸನಜ್ಞಾನದಿಂ ಕಾಶಿಯೊಳು ಕೈಯೆತ್ತೆ
ಗಾಸಿಮಾಡುತ್ತೆ ಗಗನಂ ಕೈಯ ನೆರೆಸುತ್ತೆ
ದೇವ ಕೃಷ್ಣನೆ ತ್ರಾಹಿ ಮೆದು ಹರಿಯಂ ಕರೆಯೆ
ಧಾವತಿಗೊಳುತ್ತೆ ಹರಿ ಬಂದಾತನಂ ಜರೆಯೆ
ಕೇಳ್ದಿದೈ ವ್ಯಾಸ ಶಂಕರ ಕರ್ತ ನಿನಗೆನಲು

ಆಳ್ವನೆನಗಾತ ನಿನಗೀಶ್ವರನೆ ಗತಿಯೆನಲು
ಜಡಿದ ಕೈಯ್ಯಂ ಪಿಡಿದು ಒಡನೊಡನೆ ನೇಲುತಿರೆ
ಮೃಡನಲ್ಲದನ್ಯತ್ರವಿಲ್ಲೆಂದು ಪೇಳುತಿರೆ
ಬಳಿಕ ಹರನಂ ಸ್ತುತಿಯಿಸಲ್ಕೆ ಕೈ ಬಿಟ್ಟುದಂ
ತಿಳಿದು ಹರಿಯಂ ಬಿಟ್ಟು ಹರನಣುಗನಾದುದಂ
ಉಪಮನ್ಯುವಿಂಗೆ ಕೃಷ್ಣಂ ಶಿಷ್ಯನಾದುದಂ
ಉಪದೇಶಮಂ ಪಡೆದು ಕೃತಕೃತ್ಯನಾದುದಂ
ಹರಿ ದಿಧೀಚಿಯ ಕೂಡೆ ಯುದ್ಧವಂ ಮಾಡಿದಂ
ವರಮುನಿ ದಧೀಚಿ ಚಕ್ರವನುರುಹಿ ಸುಟ್ಟುದಂ
ವಿಶ್ವರೂಪಂ ಬೆರಳಕೊನೆಯಿಂದೆ ತೋರುತಂ
ವಿಶ್ವಮುಂ ಭಕ್ತರೊಳಗೆಂದು ನೆರೆ ಸಾರುತಂ
ಎಂದುಂ ಶನಿಪ್ರದೋಷದೊಳು.... ದಮಂ
ನಿಂದು ನೋಡಲ್ಕಾಗದೆಂದೆಂಬ ಛಂದಮಂ
ಜಲಶಯನ ಜಲಜಸುತ ಇಂದ್ರಯಮರಾದಿಗಳು
ತಿಳಿದಪ್ಪ ಷ್ಠಿ......................ಮೂರ್ತಿಗಳು
ಹರಿಯ ಸತಿಯಜನ ಸತಿ ಸಪ್ತಮಾತೃಕೆಯರುಂ
ಚರಿತದಿಂ ಸಾವಿತ್ರಿಗಾಯತ್ರಿಯೆಂ[ಬರುಂ]
[ಪನ್ನಗ]ರ್ಗರುಡ ಗಂಧರ್ವಸಿದ್ಧಾಳಿಯುಂ
ಕಿನ್ನರರ್ ಕಿಂಪುರುಷ ವಿದ್ಯಾಧರಾಳಿಯುಂ
ಲಿಂಗಾರ್ಚನಾ ತತ್ಪರಾಯುಕ್ತರೆಂಬುದಂ
[ಲಿಂಗವ]ಲ್ಲದೆ ಮತ್ತೆ ದೈವವಿಲ್ಲೆಂಬುದಂ
ಇನ್ನು ನಾನರಿಯದವನೇಕೆ ಶಿವಮಹಿಮೆಯಂ
ಉನ್ನತೋನ್ನತವೆನಿಪ ಮೃಡನ ಘನಮಹಿಮೆಯಂ
ವೇದಂಗಳೂರ್ಧ್ವಮುಖವಾಗಿ ಪೊಗಳುತ್ತಮಿರೆ
ಆಗಮಾದಿಗಳೆಲ್ಲಗಮ್ಯನಂ ಪೊಗಳುತಿರೆ
ವೇದಿಸಿದ ಶಾಸ್ತ್ರಂಗಳೊಲ್ದು ಬಣ್ಣಿಸುತಮಿರೆ
ರಾಗದಿಂ ಶ್ರುತಿವಿತತಿ ಕೈಯೆತ್ತಿ ಸಾರುತಿರೆ
ಘನಪುರಾಣಂ ಬೊಬ್ಬೆಗೊಟ್ಟು ಪೇಳುತ್ತಮಿರೆ
ಅನುಪಮ ಮುನೀಂದ್ರ ಮನುಗಳ ನೀತಿ ಪೇಳುತಿರೆ
ಇಂತೆಂದು ಪಂಪಾವಿರೂಪಾಕ್ಷನೇ ಘನಂ
ಸಂತತಂ ಶ್ರೀವಿರೂಪಾಕ್ಷಲಿಂಗವೆ ಘನಂ

ಅಂತ್ಯವಾದಡೆ ರುದ್ರಭೂಮಿಂಗಂತೊಯ್ಯೆಂಬೆ
ಭ್ರಾಂತೆ ಕೇಳಾ ರುದ್ರಗಣಕಿಕ್ಕು ಮುನ್ನೆಂಬೆ

ವೃಷಭ ಹೋಮಂ ಬೇಳದಲ್ಲದಿದು ಸಲ್ಲೆಂಬೆ
ವೃಷಭನಂ ಬಿಟ್ಟಲ್ಲದಿಲ್ಲ ಸ್ವರ್ಗವಿದೆಂಬೆ
ಪಿತೃಕೃತ್ಯರೆಲ್ಲ ವಿಶ್ವೇದೇವ ಬಲವೆಂಬೆ
ಪಿತೃದತ್ತ ರುದ್ರಪಾದೇ ದತ್ತ ನಮೊ ಎಂಬೆ
ಉಪನಯನ ವೈವಾಹಕಂ ನಂದಿಮುಖವೆಂಬೆ
ಸುಪದವಲೆ ಸರ್ವಕ್ಕೆ ಶಾಶ್ವತಂ ಶಿವನೆಂಬೆ
ಯಜ್ಞ ಕಾರ್ಯದಲಿ ವೇದಾ ಭೂಯಾ ಎಂಬೆ
ಯಜ್ಞಹೋಮಂಗಳಲಿ ಸರ್ವವುಂ ಶಿವನೆಂಬೆ
ಇದು ವೇದಶಾಸ್ತ್ರವಾಗ[ಮ] ಪುರಾಣದ ಯುಕ್ತಿ
ಇದರಿಂದೆ ಮುಂದೆ ಪೇಳ್ವುದು ದೃಷ್ಟವತಿಭಕ್ತಿ

ವೀರಶಂಕರದಾಸನುರಿಗಣ್ಣ ಕಿಚ್ಚಿನಿಂ
ನಾರಾಯಣಪ್ರತಿಮೆಗಳನುರುಪಿ ಪೆರ್ಚಿನಿಂ
ಕೃತಕದಿಂ ಕಾಳ್ ಪುರಾಣವನುಸುರ್ದ ವಿಪ್ರನಂ
ಅತಿಪಾಪದಿಂದೆ ಶಿವನಂ ನಿಂದೆ ಗೆಯ್ದನಂ
ಅಲಗಿನಿಂದಿರಿದು ಪುಳುವಿನ ರಾಶಿ ಮಾಡಿದಂ
ನಲವಿಂದೆ ತೆಲುಗ ಜೊಮ್ಮಣ್ಣನಿಳೆಗೊಪ್ಪಿದಂ
ಮುದನೂರ ವಿಪ್ರರೆಲ್ಲರು ನೆರೆದು ದಾಸನಂ
ಸದಮಳ ಶಿವಾನಂದಮಯಪುಣ್ಯವೇ ಘನಂ
ಪುರದಿಂದೆ ಪೊರಮಡಿಸಿ ಶಿವನ ಕದವಿಕ್ಕಲ್ಕೆ
ಪುರದ ಪಾರ್ವರು ಮರುಗಿ ಮಣಿದು ಮೈಯಿಕ್ಕಲ್ಕೆ
ಬಂದು ನೆರೆದಿರ್ದ ಪರಸಮಯಿಗಳು ನೋಡುತಿರೆ
ನಿಂದು ಪೊರಮಡಿಸಿದಜ್ಞಾನಿಗಳು ನೋಡುತಿರೆ
ದಾಸಿಮಯ್ಯಂ ಕದವ ತೆರಯಿಸಿದನಂತಲ್ಲಿ
ದೇಶವರಿಯಲು ಮೆರೆದನರರೆ ಮುದನೂರಲ್ಲಿ
ಎಸೆವಣಂಪುರದೊಳಗೆ ಷೋಡಶರ್ವೀರದಿಂ
ಮಿಸುಪ ವಿಷ್ಣುಪ್ರತಿಮೆಗಳ ತೆಗೆದು ಬೇಗದಿಂ
ಬಂದ ವೈಷ್ಣವರೆಲ್ಲರಂ ಕೂಡೆ ಸಂಹರಿಸಿ
ನಿಂದ ಪರಸಮಯಿಗಳ ಬಲಮಂ ಪಡಲ್ವಡಿಸಿ
ಬೈತಿಟ್ಟು ತಮ್ಮ ಶಿರಮಂ ಪೀಠದೊಳಗಿನಿಂ
ಸೈತಿಟ್ಟು ಅಮಮ ವೀರಬ್ರಹ್ಮನಾಥನಿಂ
ಮೆರೆದರವನಿಗೆ ಷೋಡಶರ್ವೀರ ಕಳೆಯಿಂದೆ
ಹೆರೆಸೂಡಿದನ ಮನಕೆ ಸಂದರುತ್ಸವದಿಂದೆ

ಚೋಳದೇಶದ ಚೊಕ್ಕನೈನಾರು ಛಲದಿಂದ
ಹೇಳ ಹೆಸರಿಲ್ಲದಂತುರ್ವಿಯೊಳು ಭರದಿಂದೆ
ಎತ್ತಿ ಬಿಸುಟರು ಹರಿಯ ರೂಹುಗಳನಂತಲ್ಲಿ
ಇತ್ತಲಭವನ ಮನಕೆ ಸಲೆ ಸಂದರಂತಲ್ಲಿ

ಇನ್ನು ಮಾಹೇಶ್ವರರು ಮಾಡಿದವನಂತಮಂ
ಎನ್ನಳವೆ ಪೇಳಲ್ಕನೇಕ ದೃಷ್ಟಾಂತಮಂ
ಜ್ಞಾನಸಂಬಂಧದೇವರು ದೃಷ್ಟಮಂ ತೋರಿ
ನಾನಾ ಜಿನಪ್ರತಿಮೆಗಳನೆತ್ತಿದರು ಮೀರಿ
ಶಿವನಲ್ಲಿ ಕಣ್ಬಡೆವ ನಾಟ್ಯನಮಿತಂಡಿಗಳು
ಸವಣರಂ ಕೊಂಡು ತೀರ್ಚಿಸಿದರಾ ವಾದಿಗಳು
ಸವಣಿಕೆಯನೊಲ್ಲದಾ ಸಾಂಖ್ಯನಾರ್ ನೇಮದಿಂ
ಶಿವನಲ್ಲಿ ಮನವಿಟ್ಟು ಬದುಕಿದರು ಪ್ರೇಮದಿಂ
ಸವಣರಂ ವಾಗೀಶದೇವರೆಲ್ಲಂದದಿಂ
ಅವನಿಯೊಳು ಪ್ರತ್ಯಕ್ಷದಿಂ ಗೆಲಿದರೊಪ್ಪದಿಂ
ಅರುಹನಂ ಬಿಟ್ಟು ಗುಮ್ಮಟನೆಂಬವಂ ಸಾರ್ದು
ಹರನ ಸೌರಾಷ್ಟ್ರ ಸೋಮಯ್ಯನಂ ನೆರೆ ಸಾರ್ದು
ಕೆಟ್ಟ ಮೈಯಂ ಪಡೆದನೆಂದುಂ ಪ್ರಸಿದ್ಧವಿದು
ಕೆಟ್ಟುಹೋಗದೆ ನಂಬಿರೇ ಧರೆಗೆ ಸತ್ಯವದು
ಮಾರುಡಿಗೆಯೊಳು ನಾಚಿತಂದೆ ದೃಷ್ಟಾಂತಮಂ
ತೋರಿಯರುಹನ ಪ್ರತಿಮೆಗಳನೊಡೆದರೆಲ್ಲಮಂ
ಆದಯ್ಯನೆಂದ ಮಾತಂ ಪಾಲಿಸುವೆನೆಂದು
ಸಾದರಂ ಸೌರಾಷ್ಟ್ರ ಸೋಮನಾಥಂ ಬಂದು
ಸುರಹೊನ್ನೆಯರುಹನ ಎರಡುಭಾಗಂ ಮಾಡೆ
ಧರೆ ಹೊಗಳೆ ನೆಲಸಿದಂ ಹುಲಿಗೆರೆಯೊಳಗೆ ಕೂಡೆ
ಪರಿವಳಿಗೆಯೊಳು ವೈಜಕವ್ವೆ ಇಚ್ಛೆಗೆ ಬಂದು
ಅರುಹನ ಶಿರವನೊಡೆದು ಶಂಭು ಮೂಡಿದನಂದು
ಕೋವೂರ ಬೊಮ್ಮಯ್ಯನಾ ಜೈನರಂ ಗೆಲಿದು
ಭೂವಳಯದೊಳು ಶಿವನನೊಲಿಸಿದಂ ತಾನಂದು
ಏಕಾಂತರಾಮಯ್ಯನಬ್ಬಲೂರೊಳು ನಿಂದು
ಲೋಕವರಿಯಲು ಸವಣರಂ ಭಂಗಿಸಿದನಂದು
ಇಂತು ನಾವರಿದಿರ್ದುವರಿಯದುವು ಘನಘನಂ
ಕಂತುಮದಮರ್ದನಂ ತೋರಿದುವು ಘನಘನಂ

ಇಂತು ಸರ್ವೋರ್ವಿಯೊಳು ಶಿವಸಮಯವೇ ಘನಂ
ಇಂತು ತ್ರಿಪುರಾಂತಕನ ಸಾಮರ್ಥ್ಯವೇ ಘನಂ

ದೇವಾಲಯದೊಳು ಹರಿ ಪರಿವಾರವಾಗಿಪ್ಪ
ಆವರ್ತದಿಂ ಶಿವನ ಕಿಂಕರಂ ತಾನಪ್ಪ
ಅವನಿಯೊಳು ದಳದಿವ್ಯವುಳಿದ ದೈವದೊಳಿಲ್ಲ
ಶಿವನಿಳಯರೇ ಶರಣು ಪರಸಮಯಿಗಳಿಗೆಲ್ಲ
ಮುಂಜಾವನಾದಡಂ ಶುದ್ಧಗೆಯನೋದುವಡೆ
ಪಂಚಾಕ್ಷರಿಯನೋದವೇಳ್ಕುಂ ವಿಚಾರಿಪಡೆ
ವಂಚಿಸದೆ ಪೇಳು ಶುದ್ಧಂಗೆ ಕಡೆಯೊಳು ತಾನೆ
ಪಂಚಾಕ್ಷರಿಯ ವಿಧಾನಂ ಸಮಾಪ್ತಂ ತಾನೆ
ಎಂದಿಪ್ಪುದಾಗಿ ನಾಗಾಭರಣನೇ ಘನಂ
ಇಂದುಧರನಪ್ರತಿಮನತುಳಬಳವೇ ಘನಂ
ಎಲ್ಲ ದೇವರ್ಗೆ ತಂತಮ್ಮ ಶಿರದೊಳು ಪೂಜೆ
ಇಲ್ಲಿ ಮದನಾರಿಗರರೇ ಚರಣದೊಳು ಪೂಜೆ
ಇಂತುಂ ವಿರೂಪಾಕ್ಷನೇ ದೇವರೊಳು ಘನಂ
ಎಂತುಂ ಮಹಾದೇವನೇ ದೇವರೊಳು ಘನಂ
ಆಗಮಪುರಾಣದೊಳು ನಾಗಕಟಕನೆ ಘನಂ
ಭೋಗದೊಳು ಭಕ್ತಿಯೊಳು ಚಂದ್ರಧರನೇ ಘನಂ
ಮಾತೆ ಪಾರ್ವತಿ ಪಿತಂ ಶಿವನಲ್ಲದಿಲ್ಲೆಂದು
ಏತಕ್ಕೆ ಬರಿದೆ ಗಳಹುವಿರಿ ಬೇರುಂಟೆಂದು
ಅದಕೆ ಕುರುಹೆಲ್ಲರ್ಗೆ ಲಿಂಗಾಂಕಿತಂ ನೋಡ
ಅದಕೆ ಕುರುಹೆಲ್ಲರ್ಗೆ ಶಕ್ತ್ಯಂಕಿತಂ ನೋಡ
ಮೆಯಿ ಕೆಟ್ಟು ಸೋಮನಾಥನನೆ ಪಾಡೆಂಬಂತೆ
ಅಯಿ ಕಷ್ಟರಿದನರಿದು ಬೇರೆ ಪೇಳುವಿರಿಂತೆ
ವಿಸ್ಮಯದೊಳುಂ ಮಹಾದೇವ ಎಂಬುದು ಜಗಂ
ವಿಸ್ಮಯಕೆ ಶಿವಶಿವಾ ಎಂದೆಂಬುದೀ ಜಗಂ
ಹಲವು ಮಾತೇಕೆ ವಶವಹುದೆ ಶಿವನುನ್ನತಂ
ಎಲೆಲೆ ವೇದಾಗಮಪ್ರತತಿಗತ್ಯುನ್ನತಂ
ವೇದದೊಳು ಶಾಸ್ತ್ರದೊಳು ನಾದಮಯನೇ ಘನಂ
ವಾದದೊಳು ವಚನದೊಳು ವೇದಮಯನೇ ಘನಂ
ದೇವರೊಳು ಪಂಪಾವಿರೂಪಾಕ್ಷನೇ ಘನಂ
ಭಾವಿಸಲು ಪಂಪಾವಿರೂಪಾಕ್ಷನೇ ಘನಂ


ಅಂತೀತುವೆಂತುಂ ವಿರೂಪಾಕ್ಷನೇ ಘನಂ
ಕಂತುಹರ ಹಂಪೆಯ ವಿರೂಪಾಕ್ಷನೇ ಘನಂ

ಎಂದಿಂತು ಪೇಳ್ದಪೆಂ ಮಹಿಮಾವಲಂಬಮಂ
ಇಂದುಧರ ನಿಮ್ಮ ಸಾಮರ್ಥ್ಯಸಂದೋಹಮಂ
ಹರಿಬ್ರಹ್ಮರರಿಯರೆಂದಡೆ ದೇವ ಎನ್ನಳವೆ
ನೆರೆದ ವೇದಪ್ರಕರವರಿಯವೆನಲೆನ್ನಳವೆ
ಕೋಟಿಕೋಟ್ಯಾಯುಷಂಗಳು ಕೋಟಿಯಾದಡಂ
ಕೋಟಿ ಜಿಹ್ವೆಗಳಿಂದೆ ಸಲೆ ಪೊಗಳುತಿರ್ದಡಂ
ನಿಮ್ಮ ಮಹಿಮಾಬ್ಧಿಯೊಳಗಣುವರಂ ಬಪ್ಪುದೆ

ತಡಿವರಂ ಬಪ್ಪುದೆ..................
ತುತಿಯಿಸುವ ನೆವದಿಂದೆ ನಿಂದಿಸಿದನೆನಬೇಡ
ಮತಿಯ ಪವಣಿಂಗೆಯಾಂ ಮಹಿಮನೆಂದೆನ ಬೇಡ
ಆದಡಿಂತೀ ತಪ್ಪನೊಪ್ಪವಿಡುವುದು ತಂದೆ
ಆದಿಯ ಪುರಾತನರ ತೊತ್ತೆಂಬುದೆಲೆ ತಂದೆ
ದೇವ ದೇವರ ಗ[ತಿಯ
ದೇವ] ದೇವರ ಮತಿಯೆ
ದೇವ ರವಿಶಶಿಕಿರಣ
ದೇವ ಶಾಶ್ವತಕಥನ
ಶಿಕ್ಷಿಸು ವಿರೂಪಾಕ್ಷ
ರಕ್ಷಿಸು ವಿರೂಪಾಕ್ಷ
ಜಯ ಜಯ ವಿರೂಪಾಕ್ಷ
ಶಿವ ಶಿವ ವಿರೂಪಾಕ್ಷ
ಜಯ ಜಯ ನಮಸ್ತೇ
ನಮಸ್ತೇ ನಮಸ್ತೇ

ಅರೆರೆ ವಿರೂಪಾಕ್ಷನ ನಿಜ
ಚರಣದೊಳದೆ ಕಣ್ ತ್ರಿಶೂಲದಲ್ಲದೆ ಹೇಳಾ ।
ಹರಿ ಕುರಿ ಸರಿಗಿರಿಯೆಂದಡೆ
ಸುರಿಯವೆ ಬುಳುಬುಳನೆ ಬಾಲವುಳುಗಳ್ ಬಾಯೊಳ್ ॥

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

**ಡಾ. ಎಂ.ಬಿ.ಪಾಟೀಲ**

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ


**ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ: 97390 67359